ತೆರಿಗೆಗಳ ಈಗ ಹೆಚ್ಚೇ ಇವೆ ಇವು ಇನ್ನೂ ಹೆಚ್ಚುವುವು ಜನರ ಆಯವು ಕಡಿಮೆಯಾಗುತ್ತ ಬರುವುದು ತೆರಿಗೆಯನ್ನು ಹೇಗೆ ಏರಿಸುವರೋ ತಿಳಿಯದು ೧೯೩೯—೪೦ರಲ್ಲಿ ಖಂಡಿತವಾಗಿಯೂ ಸರಕಾರಕ್ಕೆ ಹಣದ ಕುಟ್ಟಿಯುಂಟಾಗುವುದು. ಎಷ್ಟೊ ತಡೆದರೂ, ಈ ಬಿಕ್ಕಟ್ಟು ಉಂಟಾಗಿಯೇ ಆಗುವುದು

ಅಮೇರಿಕವೂ ಬ್ರಿಟನ್ನೂ ಕೆಲ ಯುರೋಪಿಯ ರಾಷ್ಟ್ರಗಳೂ ಮೈತ್ರಿಯಿಂದ ಕೂಡುವುವು ಸಾಮ್ರಾಜ್ಯವು ಇದರಿಂದ ಎಚ್ಚರಪಡುವುದು. ಡಿಕ್ಟೇಟರುಗಳು ಗೌರವ ಉಳಿಸಿಕೊಳ್ಳುವುದು ಕಷ್ಟವಾದೀತು

ವಿಮಾನಗಳ ಮೇಲೆ ಭರವಸೆಯಿಟ್ಟಿರುವ ನಮ್ಮ ರಾಜ್ಯಗಳು ಖಂಡಿತವಾಗಿಯೂ ನೌಕಾಬಲವೇ ಮುಖ್ಯವೆಂದು ಸಾರುವ ಇಂಗ್ಲೆಂಡರು ಅಮೇರಿಕ ಮತ್ತು ರಷ್ಯ ಮಾತ್ರ ವಿಮಾನಗಳನ್ನೇ ಹೆಚ್ಚು ಬಾಳಬಹುದೆಂದು ಗಹಗತಿಯು ತಿಳಿಸುವುದು, ಯುರೋಪಿನ ದೃಷ್ಟಿಯಿಂದ ಮಾತ್ರ, ವಿಮಾನಗಳ ಕಡೆಗೆ ಜನರು ಒಲಿದಿರುವರು, ಆದರೆ ನೌಕಾಬಲವೇ ಮುಖ್ಯವೆಂದು ರುಜುವಾಗದೆ ಇರದ

ಜರ್ಮನಿ - ಇಟಲಿ

ಇವೆರಡೂ ಇನ್ನು ಒಂದಾಗಿ ನಡೆವುವು ಆದರೆ, ಮುಸ್ಸೊಲಿನಿಯು ಇನ್ನು ಮುಂದೆ ಬ್ರಿಟನ ಕಡೆಗೆ ಒಲಿಯುವನು ಜರ್ಮನಿಯಿಂದ ಕೊಂಚ ದೂರವಾದಾನು. ಹಿಟ್ಲರ ವಶವಾಗಿ ನಾಝಿ ಜರ್ಮನಿ ಉಳಿದರೂ, ಅವನ ಆರೋಗ್ಯ ಕೆಡುವುದು. ಹತಿರವೇ ಇರುವ ಸುತ್ತಲ ಪ್ರಕೃತಿದ ಸೈನಿಕರು ಅವನನ್ನು ಪೀಡಿಸುವರು. ಅರಬರಾಜ್ಯಗಳಲ್ಲಿ ಬಹಳಗೊಂದಲವಿದ್ದೀತು. ಜರ್ಮನಿಗೆ ಯುದ್ಧದ ಮೊದಲು ಇದ್ದ ಕೆಲವಂಶ ಪುನಃ ಸಿಗುವಂತಿದೆ. ಆದರೆ ಇದಕ್ಕೆ ಮೊದಲು ಮೊದಲು ಯುದ್ಧವಾದೀತೇನೋ ಎಂದು ಹೇಳುವಷ್ಟು ಚಿಹ್ನೆಗಳು ಕಾಣುತ್ತವೆ

ಜಪಾನು

ಜಪಾನು ಇನ್ನೂ ಚೀನದಲ್ಲಿ ನಗಿ ತನ್ನ ರಕ್ತ ಮತ್ತು ಹತ್ಯಾಕಾಂಡಗಳಿಂದ ಆ ದೇಶದಲ್ಲಿ ಗೋರಿಕಟ್ಟಿಕೊಳ್ಳುವುದು. ದಚ್ಚರ ವಸಾಹತುಗಳು, ಬ್ರಿಟಿಷ ಮತ್ತು ಉತ್ತರ ಅಮೇರಿಕದ ದ್ವೀಪಸಮೂದಾಯಗಳ ಕಡೆಗೆ ಜಗತ್ತಿನ ದೃಷ್ಟಿ ತಿರುಗಬೇಕಾದೀತು

ಪ್ರೆಸಿಡೆಂಟ ರೂಸವೆಲ್ಟನೇ ಮುಂದಣ ಪ್ರಧಾನಿಯಾದಾನು. ೧೯೪೦ರಲ್ಲಿ ಅವನ ಚುನಾವಣೆಯಾದೀತು. ಬ್ರಿಟನ್ನು—ಫ್ರಾನ್ಸುಗಳೊಳಗಣ ಮೈತ್ರಿ ಕುಂದೀತು ನಿರುದ್ಯೋಗತೆ ಹೆಚ್ಚೀತು ಯೆಹೂದ್ಯರಿಗೆ ಹಿಂಸೆ ಬಹಳವಿದೆ ಚಿನ್ನದ ಬೆಲೆ ಈ ವರ್ಷದೊಳಗೆ ಇಳಿದೇ ಹೋಗುವಂತಿದೆ

ಡಿಕ್ಟೇಟರುಗಳ ಮತ್ತು ಪ್ರಜಾಸತ್ತೆಗಳೊಳಗೆ ವೈಷಮ್ಯ ಹೆಚ್ಚುವುದು ಇನ್ನೆರಡು ವರ್ಷಗಳಲ್ಲಿ ಈ ಜಗಳ ಬೆಳೆದೀತು. ಕೊನೆಗೆ ಡಿಕ್ಟೇಟರುಗಳು ಕುಂದುವರು. ಬ್ರಿಟನ್ನಿನಲ್ಲಿ ಕೈಗಾರಿಕೆ ಕೂಲಿಗಳ ಮುಷ್ಕರಾದಿಗಳು ಪ್ರಬಲವಾದಾವು. ಶನಿಯು ಮೇಷರಾಶಿದಾಟುವ ತನಕ ಬ್ರಿಟನ್ನು ಪುನ ಬ್ರಿಟನ್ನು ಎನಿಸದಂತಾದೀತು!

ಅಸಹ್ಯವಾದ ಶೀತದಿಂದ ಯಾಕೆ ನರಳುತ್ತಿರುವರು?

ನಾವು ಶೀತದಿಂದ ನರಳುತ್ತಿರುವಾಗ, ಎಲ್ಲರೂ ಸನಿಹಮಾನರಾಗಿರುತ್ತೇವೆ. ಆದರೆ ಅಸಹ್ಯವಾದ ನೀರಿನಿಂದ ತುಂಬಿದ ಕಣ್ಣುಗಳು, ಗಂಟಲು ಬೇನೆ, ಮೇಲೆ ಮೇಲೆ ಬರುತ್ತಿರುವ ಸೀನು ಮುಂತಾದವನ್ನು ಶ್ವಾಸನೀಯ ಗುಳಿಗೆಗಳಾದ ಪೆಪ್ಸನ್ನು ಉಪಯೋಗಿಸಿ ಹೋಗಲಾಡಿಸಿರಿ

ಪೆಪ್ಸು ನಿಮ್ಮ ಬಾಯಲ್ಲಿ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನಿಮ್ಮ ಶ್ವಾಸಕೋಶಗಳನ್ನು ಪ್ರವೇಶಿಸುತ್ತದೆ ಇದರಿಂದಾಗಿ ಪೆಪ್ಸು ಶ್ವಾಸನಾಳಗಳನ್ನು ಬಲಪಡಿಸಿ ಶೀತವನ್ನು ಮಾಡಿ ಅದರ ಕ್ರಿಮಿಗಳನ್ನು ನಾಶ ಮಾಡುತ್ತದೆ ಗಂಟಲು ನೋವನ್ನು ಗುಣಪಡಿಸುತ್ತದೆ ಮತ್ತು ಎದೆಯನ್ನೂ ಶ್ವಾಸಕೋಶಗಳನ್ನು ಬಲಪಡಿಸುತ್ತದೆ

ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ಒಂದು ರೂಪಾಯಿಯಂತೆ ಮಾರುತ್ತಾರೆ.

ಏಜೆಂಟ್ಸ್

ಮೆಸರ್ಸ ದಾಧಾ ಮತ್ತು ಕಂಪೆನಿ, ಪಾರ್ಕಟೌನ್ ಮದ್ರಾಸು.

ಯಾವಾಗಲೂ ಪೆಪ್ಸನ್ನೇ ಉಪಯೋಗಿಸಿರಿ

PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು

ಕೆ ಎಮ್ ಪ್ರಭು ವಿರಚಿತ

ವಿಚಿತ್ರ ಸಂಸಾರ

ಕೆ ಎಮ್ ಪ್ರಭುವಿನ ಚಿಕ್ಕ ಕಥಾಸಂಗ್ರಹ

ಹಾಸ್ಯಭರಿತ ಕಥೆಗಳು— —ಸುಲಭ ಶೈಲಿ— ದರ ಒಂದಾಣೆ ಮಾತ್ರ

ಏಜಂಟರಿಗೂ ಪುಸ್ತಕ ವ್ಯಾಪಾರಿಗಳಿಗೂ ಶೇಕಡಾ 25 ಕಮಿಶನ್ ಕೊಡಲಾಗುವುದು

ಪ್ರತಿಗಳಿಗೆ ಕೂಡಲೇ ಬರೆಯಿರಿ

ಮೆನೇಜರ್

ಶಾರದಾ ಛಾಪಖಾನೆ ರಥಬೀದಿ ಮಂಗಳೂರು.

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ ಜಮ್ಮಿ ವೆಂಕಟ್ರಮಣಯ್ಯ

ವಿಶೇಷ ಮಾಹಿತಿಗೆ ಬರೆಯಿರಿ ಲಿವರ್ ಮತ್ತು ಸ್ಪ್ಲೀನ್ ಸ್ಪೆಷಿಯಲಿಸ್ಟು,

ಮೈಲಾಪುರ, ಮದ್ರಾಸು

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ ವಿ ಪಂಡಿತರ

ಜೀವನಿ

ಸ್ತ್ರೀಯರ ಸಕಲ ಸ್ವಾಸ್ಥ್ಯ ಗರ್ಭಕೋಶ ರೋಗಗಳಿಗೂ ಸಂಜೀವನ.

ಬೆಲೆ: ರೂ 1-0-0

ಸುಬಲಾ

ಶರೀರದ ಪಿತ್ತ ಉಷ್ಣವನ್ನು ಕಡಿಮೆಗೊಳಿಸಿ, ರಕ್ತಶುದ್ಧಿ ಪಡಿಸಿ ರಕ್ತವನ್ನು ಹೆಚ್ಚುಮಾಡಿ, ಶರೀರಕ್ಕೆ ಶಕ್ತಿಯನ್ನುಂಟುಮಾಡುವಂತೆ ಅಪೂರ್ವ ವನೌಷಧಿಗಳಿಂದ ತಯಾರಿಸಿದ ರುಚಿಕರವಾದ ಪಾನಕ

ಬೆಲೆ: ರೂ. 1-0-0

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ ಮಂಗಳೂರು

ಬನ್ನಿರಿ 'ಪರೀಕ್ಷಿಸಿರಿ'

ನಮ್ಮಲ್ಲಿ

ಎಲ್ಲಾ ತರದ ಪುಸ್ತಕಗಳನ್ನು, ಲಗ್ನಪತ್ರಿಕೆ ಮುಂತಾದವುಗಳನ್ನು ಕಡಿಮೆ ದರದಲ್ಲಿ ಮಾಡಿಕೊಡುತ್ತೇವೆ

ಶಾರದಾ ಛಾಪಖಾನೆ.

ರಥಬೀದಿ, ಮಂಗಳೂರು

ಈ ವಾರದಲ್ಲಿ

ದೇಶೀಯ ರಾಜ್ಯಗಳ ಸ್ಥಿತಿ

ಹೊಸ ವರ್ಷದಲ್ಲಿ ಸಂತೃಪ್ತಿಕರವಾದ ವಾರ್ತೆಗಳಿಗೆ ಪ್ರಾರಂಭವಾಯಿತು. ದೇಶೀಯ ರಾಜ್ಯಗಳಲ್ಲಿ ಶಾಂತಿ ಸುಧಾರಣಾದಿಗಳಿಗೆ ಸರ್ವರೂ ಮನಗೊಡುವರೆಂದೇ ತಿಳಿದುಬರುವಂತಾಯಿತು. ಇದರಿಂದ ಅಲ್ಲಲ್ಲಿನ ಚಳವಳಗಳು ಕೊನೆಗೊಳ್ಳುವುವೆಂದೂ ನಂಬಲು ಅಸ್ಪದವುಂಟಾಯಿತು. ಮಹಾತ್ಮಾಜಿಯವರು ಸೂಚಿಸಿದಂತೆ ರಾಜ್ಯಗಳೊಳಗಣ ಪ್ರಜೆಗಳು ನಡೆದಲ್ಲಿ ಸರ್ವಕ್ಕೂ ಸುಗಮವಾಗುವುದಾಗಿ ನಂಬಲು ಕಾರಣವಾಯಿತು ರಾಜರುಗಳೂ ಈ ವಿಷಯದಲ್ಲಿ ಮಹಾತ್ಮಾಜಿಯವರ ಸೂಚನೆಗಳನ್ನು ಸರಿಯಾಗಿ ಗ್ರಹಿಸಿ ನಡೆಯಲು ಹವಣಿಸುವಲ್ಲಿ ಮುಂದೆ ಎಲ್ಲೆಲ್ಲಿಯೂ ತೃಪ್ತಿಯೇ ಉಂಟಾಗುವುದು.

ರಾಜಕೋಟೆ

ಇಲ್ಲಿ ಪ್ರಜೆಗಳ ಪ್ರತಿನಿಧಿಗಳೊಳಗೂ ರಾಜ ಸರ್ಕಾರಿಗೂ ನಡೆದ ಸಂಧಾನವು ಅತಿ ಶ್ಲಾಘ್ಯವಾಗಿದೆ. ಇದೇ ಅಷ್ಟರ ಮಟ್ಟಿಗೆ ಮಾದರಿಯಾಗಿದೆ ಮಹಾತ್ಮಾಜಿಯವರು ರಾಜಕಾರಣ ಬಲ್ಲವರು ಎನ್ನುವುದಕ್ಕೆ ಇಲ್ಲಿ ನಡೆದ ತೀರ್ಮಾನವೊಂದೇ ಸಾಕಾಗಿದೆ ಇಂದಿನಿಂದ ರಾಜಕೋಟೆದಲ್ಲಿ ಯಾವ ಬಗೆಯ ಅಂತಃಕಲಹಗಳಿಗೂ ಆಸ್ಪದವಿಲ್ಲ ರಾಜಕೀಯ ಕೈದಿಗಳು ಮಾಫಿಯಾದರು, ಅವರ ಮೇಲೆ ಹೊರಿಸಿದ ಜುಲ್ಮಾನೆಯೂ ರದ್ದಾಯಿತು. ಸುಧಾರಣೆಗಳು ಎಂತಹವಾಗಬೇಕೆಂದು ಸೂಚಿಸಲು ಒಂದು ಬಿನ್ ಸರಕಾರೀ ಮೆಂಬರರೇ ಹೆಚ್ಚಾಗಿರುವ ಕಮಿಟಿ ನೇಮಕಗೊಂಡಿದೆ ಪ್ರಜೆಗಳ ಮನಸ್ಸಿಗೆ ತೃಪ್ತಿಯಾಗಿದೆ. ಸಿನ್ನೆ ಚಳವಳದ ಗೊಂದಲದಲ್ಲಿದ್ದ ಈ ರಾಜ್ಯವು ಈಗ ಶಾಂತಿಯಿಂದ ತಲೆ ಕಾಡುತ್ತದೆ ಪ್ರಜೆಗಳು ಚಳವಳ ಕಾಲದಲ್ಲಿ ಸಹಿಸಿದ್ದುದೆಲ್ಲ ವ್ಯರ್ಥವಾಗಲಿಲ್ಲ!

ತ್ರಿವಾಂಕೂರು

ಇಲ್ಲಿ ರಾಜಕೀಯದಲ್ಲಿ ವೈಯಕ್ತಿಕ ವಿಚಾರಗಳೆ ತಲೆಹಾಕಿ, ಅತಿ ಕಠಿಣ ದ್ವೇಷಾಸೂಯೆಗಳ ಸ್ಫೋಟನವೇ ತೋರ [illegible] ಪ್ರಬಲವಾಗುತ್ತ ಬರುತ್ತಲಿದೆ! ಕೊಂಗ್ರೆಸಿನವರು ಮಹಾತ್ಮಾಜಿಯವರಿಂದ ನಲಿಸಾ ಬೋಧನೆ ಕೇಳದೆ ಕಾಲು ಮುಂದಿಡದಿದ್ದಾಗ, ಅವರು ಹೇಳಿದಂತೆ, ಹಿಂದಣ ನಡತೆಯೆಲ್ಲಕ್ಕೂ ಪಶ್ಚಾತ್ತಾಪಗೊಂಡು ಕೊಂಗ್ರೆಸು ತನ್ನ ಧೂರನ್ನು ಹಿಂದೆಗೆದಿದೆ. ಇಷ್ಟು ವಿವೇಕವು ಈ ಕೊಂಗ್ರೆಸಿಗೆ, ಪ್ರಥಮದಲ್ಲೇ ಉಂಟಾಗಿದ್ದಿದ್ದರೆ, ಎಷ್ಟೋ ತಂಟೆ ತಕರಾರುಗಳಿಗೆ ಎಡೆಯೇ ಇರುತ್ತಿರಲಿಲ್ಲ ಸುಲಭವಾಗಿ ಸುಧಾರಣೆಗಳ ಸಲುವಾಗಿ ಸಾಧನೆ ಮಾಡಿ ವಿಜಯಗೊಂಡಬಹುದಾಗಿತ್ತು ವ್ಯಕ್ತಿ ವಿಚಾರಗಳೂ ಪ್ರಾಂತಿಕ ವಿಚಾರಗಳೂ ಪ್ರತ್ಯೇಕವಾಗದೆ ಸಾಧ್ಯವಾಗತಕ್ಕದ್ದೇನೂ ಇಲ್ಲವೆಂದು ಮಹಾತ್ಮರೆಂದೊಡನೆಯೆ, ತಕ್ಷ ಬೇರೆ ವ್ಯಕ್ತಿ ಬೇರೆ ಎಂದು ಚಳವಳಗಾರರೂ ತಿಳಿದೊಡನೆಯೆ ಎಲ್ಲ ಚಳವಳಗಳೂ ಮುಗಿಯುವುವು ಭಾರತ ವರ್ಷದ ಪ್ರಾಂತ್ಯಗಳ ಚಳವಳದಲ್ಲಾದರೂ ನೆಹರುಗಳಾಗಲಿ ಯಾವ ಕೊಂಗ್ರೆಸು ಮುಖಂಡರೇ ಆಗಲಿ ವ್ಯಕ್ತಿ ವಿಚಾರವನ್ನು ದೂರವಿಡುವರು. ಸ್ಟೇಟ್ ಕೊಂಗ್ರೆಸೂ ಹೀಗೆ ಮಾಡಿಯೇ ಹಿತಚಿಂತಕರ ಸಹಕಾರ ಪಡೆವುದಾಗಿದೆ

ಹೈದ್ರಾಬಾದು

ಹೈದ್ರಾಬಾದಿನಲ್ಲಿ ಮೊನ್ನೆತಾನೆ ಹಿಂದೆಗೆಯಲಾಗಿದ್ದ ಚಳವಳವು ತೀರ ಅಹಿಂಸಾ ತತ್ವಕ್ಕೆ ಅನುಸಾರವಾಗಿಯೆ ನಡೆದುದಾಗಿದೆ. ಆದರೆ, ಚಳವಳಗಾರರು ರಾಜ್ಯದ ಹೊರಗಣಿಂದಲೇ ಹೆಚ್ಚಾಗಿ ಅತ್ತ ಹೋದವರು. ಸರಕಾರವೂ ಬಲು ಎಚ್ಚರದಿಂದ ಜಾಗರೂಕತೆಯಿಂದ ಕೈಮೀರದೆ ನಡೆದಿದೆ. ಒಂದು ಹಾಡು ಹಾಡಿದರೆಂದು ವಿದ್ಯಾರ್ಥಿಗಳನ್ನು ಹೊರತಳ್ಳಿದುದು ಮಾತ್ರ ಅನರ್ಥಗಳಿಗೆ ಕಾರಣವಾಗಿದೆ. ಭಾವ [illegible] ಬರುವುದಿಲ್ಲ ಎಂದೋ ಒಂದು ಕಾಲದಲ್ಲಿ ಹೇಗೋ ಹಾಗೆ ಅರ್ಥಮಾಡಿಕೊಳ್ಳಬಹುದಾದ ಗೀತಕ್ಕೆ ಇನ್ನೂ ಅದೇ ಅರ್ಥಮಾಡಿಕೊಳ್ಳುವ ಅಗತ್ಯವೇ ಇಲ್ಲ ಈ ಪದ್ಯ ಹಾಡಿದರೇ ಜೈಲು ಎಂದಿತ್ತು, ಬ್ರಿಟಿಷ ಸರಕಾರವೇ ಎಷ್ಟೋ ಮಂದಿಯನ್ನು ದಂಡಿಸಿಯದೆ ತಾಯ್ನಾಡಿಗೆ ವಂದನೆಮಾಡಿದರೆ ಜೈಲೇ? ಇದನ್ನು ಈಗ ಬ್ರಿಟಿಷ ಸರಕಾರವು ತಿಳಿದುಕೊಂಡು ಹೇಗೆ ತಿದ್ದಿ ನಡೆವುದೋ ಹಾಗೆಯೆ ಹೈದ್ರಾಬಾದು ಸರಕಾರವೂ ತಿಳಿದು ನಡೆಯಬಾರದೆಂದಿಲ್ಲ ಹೈದ್ರಾಬಾದಿನಲ್ಲಿ ಸುಮಾರು ೪೦೦ ಮಂದಿ ರಾಜಕೀಯ ಕೈದಿಗಳು ಇಲ್ಲಿ ಜೈಲುಪಾಲಾಗಿರುವರಾದರೂ, ಮಹಾತ್ಮಾಜಿಯವರ ಸೂಚನೆಯಂತೆ ಸತ್ಯಾಗ್ರಹವು ಮುಗಿದಿದೆ ಕೈದಿಗಳು ಬಿಡುಗಡೆ ಹೊಂದಿಲ್ಲ ಆದರೆ, ಸ್ಟೇಟ್ ಕೊಂಗ್ರೆಸಿನ ಹೇಳಿಕೆ ವಿಚಾರಿಸಿ ನೋಡಬೇಕೆಂಬ ಕುತೂಹಲವು ಸರಕಾರಕ್ಕಿದೆ ಇದರಿಂದ ಉತ್ತಮ ಸುಧಾರಣೆಗಳು ಉಂಟಾಗಬಹುದೆಂದು ನಂಬಬಹುದಲ್ಲವೆ? ಕೊಂಗ್ರೆಸು ತನ್ನ ಸಂಕಲ್ಪ ಪೂರೈಸಿರುವಂತೆ ಸರಕಾರವೂ ತನ್ನ ಕರ್ತವ್ಯ ಮಗಿಸಬೇಕಾಗಿದೆ ನೈಜಾಮರು ಈ ಕೊಂಗ್ರೆಸ್ ಚಳವಳದ ಉದ್ದೇಶವನ್ನು ಇನ್ನು ತಿಳಿದುಕೊಳ್ಳಲು ಕಷ್ಟಪಡಬೇಕೆ, ಎಷ್ಟು ಸುಧಾರಣೆ ಕೊಡಬಹುದೋ ನೋಡಬೇಕು ಪರಾಮರ್ಶೆಗೆ ತೊಡಗಿದೆ, ಮಹಾತ್ಮಾಜಿಯವರೂ ಈ ರೀತಿಯ ಪರಾಮರ್ಶೆಯಿಂದ ಎಲ್ಲವೂ ಸರಿಯಾದೀತೆಂದು ಹರಸಿರುವರು.

ಈ ಮಧ್ಯೆ, ಶ್ರೀ ಅಣೆಯವರಂತಹ ಮುಖಂಡರು ಎಲ್ಲ ದೇಶೀಯ ರಾಜ್ಯಗಳನ್ನೂ ದೂರಮಾತಾಡಿದುದು ವಿಚಿತ್ರವೆನಿಸುತ್ತದೆ ಜಾತಿ ಪಕ್ಷವೂ ತನಗಿಲ್ಲ, ನೈಜಾಮ ವಿರುದ್ಧನೂ ನಾನಲ್ಲವೆಂದ ಅವರು ಎಂದಿದ್ದಾರೆ ನಿಜ, ಆದರೆ, ಹಿಂದೀ ರಾಜ್ಯಗಳೆಲ್ಲ ಪ್ರಾಚೀನ ಜಮೀನ್ದಾರಿಗಳಂತಿವೆ ಎಂದು ಇವರೆಂದರು. ಸ್ಥಿತಿ ನಿಜವಾಗಿಯೂ ಹೀಗಿದ್ದರೆ, ಈ ಚಳವಳಕ್ಕೆ ಅವಕಾಶ ಸಿಗುತ್ತಿತ್ತೇ?

ಇಂಡೋರು

ಈ ರಾಜ್ಯದಲ್ಲಿ ಇದುವರೆಗೆ ಸಭಾನಿರ್ಬಂಧವಿತ್ತು, ಈಗ ಅದನ್ನು ರದ್ದುಮಾಡಿರುವರು. ಪ್ರಜಾಮಂಡಲಿವು ಇದಕ್ಕಾಗಿ ತುಂಬ ಕೃತಜ್ಞತೆ ಅರ್ಪಿಸಿಯದೆ

ಸಾಂಗಲಿ

ಹೊಸ ರಾಜ್ಯಭಾರ ಕ್ರಮವು ಬೇಗನೆ ಜಾರಿಗೆ ಬರಬೇಕಾಗಿ ಈ ರಾಜ್ಯದ ಆಸೆಯಾಗಿದೆ. ಪ್ರಜಾಪಕ್ಷದ ಮಂತ್ರಿಯೊಬ್ಬನ ನೇಮಕವಾಗಿದ್ದು, ಇದನ್ನು ಶ್ರೀ ಶಂಕರರಾವ್ ದೇವರೇ ಸಮರ್ಥಿಸಿರುವರು ಈ ರಾಜ್ಯದಲ್ಲಿ ದ್ವಿದಳ ರಾಜ್ಯಭಾರ ಕ್ರಮವಿಲ್ಲದಿರುವುದನ್ನು ಕೊಂಡಾಡಬೇಕು ವರ್ಷಕ್ಕೆ ಅರ್ಧಲಕ್ಷ ರೂಪಾಯಿಗಳನ್ನು ರಾಜರೇ ಸ್ವಂತ ಖಾಸಗಿ ಖಜಾನೆಯಿಂದ ಪ್ರಜೆಗಳಿಗಾಗಿ ವ್ಯಯಿಸಲೊಪ್ಪಿರುವರು ಅಣ್ಣಾರು. ಖಾಸಗಿ ಹಣ ಪ್ರಜೆಗಳಿಗೆ ಒಪ್ಪಿಸಿಕೊಡುವ ದೃಷ್ಟಾಂತ ಇದೊಂದೇ ದೊರೆತಿದೆ

ಕೊಲ್ಹಾಪುರ

ಇಲ್ಲಿನ ದಿವಾನರು ಈ ರಾಜ್ಯದಲ್ಲಿ ಪ್ರಜಾಪ್ರತಿನಿಧಿಗಳ ಸಭೆ ಹೂಡಿಸಲು ತೊಡಗಿರುವರು.

ಧೇಂಕನಾಲ

ಈ ವರ್ಷದಲ್ಲೇನೋ ಪ್ರತಿನಿಧಿ ಸಭೆಯಾಗಬಹುದೆಂದು ರಾಜರು ತಿಳಿಸಿದರು ಸಿತಾಮೋ, ಕರುಂದವಾಡ, ಸೋಹಾವಲ ರಾಜರೂ ಹೀಗೆಯೆ ಸುಧಾರಣೆ ಮಾಡಲು ಒಪ್ಪಿರುವರು.

ಬೆನಾರಿಸ್

ಮಹಾರಾಜರು ಪ್ರತಿನಿಧಿ ಸಭೆ ನೇಮಿಸುವರು. ಬಿನ್ ಸರಕಾರಿ ಮೆಂಬರರೇ ಹೆಚ್ಚು. ಹೊಸ ರಾಜ್ಯಾಂಗ ರಚನೆ ಸೂಚಿಸಲು ಕಮಿಟಿಯು ನಿರ್ಮಾಣವಾಗಿದೆ!

ಹಿಂದೀ ಕ್ರೈಸ್ತರಿಗೆ

ಅವರ ಪ್ರತಿನಿಧಿಗಳ ಬೋಧನೆ

ಕೊಂಗ್ರೆಸಿನ ಮೆಂಬರರಾಗಿರಿ

ಮದ್ರಾಸಿನಲ್ಲಿ ತಾ. ೭ರಲ್ಲಿ ಹಿಂದೀಕ್ರೈಸ್ತರ ಸಭೆ ಸೇರಿದಾಗ, ಅಖಿಲಭಾರತದ ಕ್ರೈಸ್ತ ಸಭಾಧ್ಯಕ್ಷರಾಗಿದ್ದ ಡಾ। ಮುಖರ್ಜಿಯವರು ಒಂದು ಭಾಷಣಮಾಡಿದರು. ಜಾತಿಗಳಪಕ್ಷ ಹಿಡಿಯದಿರುವ ಒಂದೇ ಒಂದು ಸಂಸ್ಥೆಯೆಂದರೆ ಕೊಂಗ್ರೆಸು, ಆದುದರಿಂದ ಅದನ್ನೇ ಸೇರಿರಿ ಎಂದು ಅವರು ಬೋಧಿಸಿದರು ಶ್ರೀ। ವಾರ್ಕಿಯವರು ಅಧ್ಯಕ್ಷರಾಗಿದ್ದರು.

ಕ್ರೈಸ್ತರಲ್ಲಿ, ರಾಷ್ಟ್ರೀಯ ಯುವತರುಣ ಇತರರು ಇವರೊಳಗೆ ಶ್ರೀ। ವಾರ್ಕಿಯವರು ಒಂದು ಸೇತುವೆಯಂತಿರುವರು. ಕ್ರೈಸ್ತರಿಗೆ ಕೊಂಗ್ರೆಸು ವಿರುದ್ಧವಾಗಿಲ್ಲದಿದ್ದರೂ, ಸಹಾನುಭೂತಿಯುಳ್ಳದ್ದಲ್ಲವೆಂದು ಎಷ್ಟೋ ಸಲ ಹೇಳಿದವರು. ಅವರು ಸರಕಾರವು ಕ್ರೈಸ್ತರಿಗೆ ದೊಡ್ಡ ಹುದ್ದೆಗಳನ್ನು ಕೊಟ್ಟಿಲ್ಲವೆಂದೂ ಹೇಳಿದವರು. ಅವರು ಇದೆಲ್ಲ ಹಿಂದಣ ದಿನಗಳಲ್ಲಾಯಿತು. ಇಂಡಿಯನ್ ಕ್ರಿಶ್ಚಿಯನ್ ಎಂದು ಹೇಳಿಕೊಳ್ಳುವ ನಾವು ಇಂಡಿಯನ್ ಎಂಬುದಕ್ಕಾದರೂ ಕೊಂಗ್ರೆಸನ್ನು ಸೇರದೆ ಇರಲಾಗುವುದೆ? ನಾನು ಬಂಗಾಳ ಕೌನ್ಸಿಲಿಗೆ ಚುನಾವಣೆ ಹೊಂದಿದಾಗ ಸ್ವತಂತ್ರನಾಗಿ ಸೇರಿದಕಾರಣ, ನನ್ನ ವೋಟರರ ಅನುಮತಿ ಪಡೆಯದೆ ಕೊಂಗ್ರೆಸಿಗೆ ಸೇರಲಾರದೆ ಇದ್ದೇನೆ ಆದರೆ, ಈಗ, ನನ್ನ ವೋಟರರಿಗೆ ಕೊಂಗ್ರೆಸ್ಸಿನಲ್ಲಿ ವಿಶ್ವಾಸವು ಹೆಚ್ಚುತ್ತಿದೆ, ನಾನು ಇನ್ನು ಕೆಲವು ದಿನದಲ್ಲೇ ಕೊಂಗ್ರೆಸನ್ನು ಸೇರಲಿರುವೆನು. [illegible] ಕೊಂಗ್ರೆಸು [illegible] ಅಲ್ಪಸಂಖ್ಯಾತರಿಗೂ ಸರ್ವಮತೀಯರಿಗೂ ಸಂಪೂರ್ಣ ಅವಕಾಶ ಕೊಡುವುದಾಗಿದೆ ಆದದರಿಂದ ಕೊಂಗ್ರೆಸು ಸರ್ವಾಧಿಕಾರಿಯಾದ [illegible] ರಾಷ್ಟ್ರೀಯ ಸಂಸ್ಥೆ, ಅದನ್ನು ಸೇರಿರಿ ಮುಸ್ಲಿಮರು ಅಲ್ಪಸಂಖ್ಯಾತರೊಳಗೆ ಬಹುಸಂಖ್ಯಾಕರು ಅವರು ಸೇರಿಕೊಂಡರೆ, ಕೊಂಗ್ರೆಸಿನಲ್ಲಿ ತಂಪು [illegible] ಆದೀತೆಂದು ಹೇಳುತ್ತಿರುವರು. ಆದರೆ ಮುಸ್ಲಿಮರಲ್ಲಿ ಒಂದು ಪಕ್ಷವು ಮಾತ್ರ ಕೊಂಗ್ರೆಸಿನಲ್ಲಿ ದೋಷಾರೋಪಣೆ ಮಾಡುತ್ತಿರುವುದು. ಹೊರತು, ಉಳಿದ ಮುಸ್ಲಿಮರು ಯಾವ ದೋಷವನ್ನೂ ಕಾಣುತ್ತಿಲ್ಲ ಈ ರೀತಿಯಲ್ಲಿ ಅತಿ ದೊಡ್ಡ ವೈಮನಸ್ಯಗಳು ರಾಷ್ಟ್ರೀಯಭಾವಕ್ಕೆ ಅಡ್ಡಬಂದಿರುವುದು ತೋರಿಸಿಯುವಾಗ, ಭಾರತವರ್ಷವು ಒಂದಾಗದಂತೆ ತಡೆದಂತಾಗಿದೆ. ಹಿಂದೀಕ್ರೈಸ್ತರು ಇದವರೆಗೆ ಯಾವ ತ್ಯಾಗ ಮಾಡಿರುವರು? ಯಾವ ಕಾರಣದಿಂದ ತನ್ನನ್ನು ಇತರರಿಗಿಂತ ಮೇಲಾಗಿ ಎಣಿಸಬೇಕೆನ್ನಬಹುದು? ಕೊಂಗ್ರೆಸಿನಿಂದ ದೂರವಿರುವ ತನಕ ಅಲ್ಲಲ್ಲಿ ಅನ್ಯಾಯಗಳು ಉಂಟಾಗದೆ ಇರಲಾರವು ಈಗ ಬಹುಸಂಖ್ಯಾಕರಾಗಿ ಕೊಂಗ್ರೆಸನ್ನು ಸೇರಿದರೆ, ಮುಂದೆ ಕೊಂಗ್ರೆಸಿನ ನಿರ್ಣಯಗಳನ್ನು ತಮ್ಮಭಿಮತದಂತೆ ಮಾಡಬಹುದೀತು ಎಂದು ಡಾ। ಮುಖರ್ಜಿಯವರೆಂದರು.

ಶ್ರೀ। ವಾರ್ಕಿಯವರು

ಕೊಂಗ್ರೆಸಿಗೆ ಸೇರಲಾರದವರು ಮೂರು ಕಾರಣ ಕೊಡುವರು ಇದ ಸಮತಾವಾದಿಗಳ ಪಕ್ಷವೆನ್ನುವರು ಈಗಲೀ ತಿ ಗಳಿಂದ ಕೊಂಗ್ರೆಸು ಅಧಿಕಾರ ವಹಿಸಿದೆಯಾದರೂ ಸಮತಾವಾದವು ಕಾಣುಬರುತ್ತಿಲ್ಲವಲ್ಲ! ಕೊಂಗ್ರೆಸಿನಲ್ಲಿರುವ ಸಮಾಜವಾದಿಗಳು ಸಹ ಪ್ರಬಲಪಕ್ಷದವರಾಗಿಲ್ಲ

ಕೊಂಗ್ರೆಸು ಬ್ರಿಟಿಷಧಿಕಾರಿಗಳು ಭೆಸಿಸ್ಕರಿಸುವರು ಎಂದು ಇನ್ನೊಂದು ಆಕ್ಷೇಪವಿದೆ ಈ ದೇಶದಲ್ಲಿ ಒಂದೇ ಸರಕಾರವಿಲ್ಲ, ಎಂಟು ಪ್ರಾಂತ್ಯಗಳಲ್ಲಿ ಎಂಟು ಸರಕಾರಗಳಿವೆ ಇವು ಒಂದೇ ಪಕ್ಷವಾಗಿವೆ ಆದುದರಿಂದ ಇವಲ್ಲವೂ ಒಂದೇ ಶಿಸ್ತಿಗೆ ಒಳಪಡುವಂತೆ [illegible] ಮಾಡಲೇ [illegible]

[illegible]

ಪ್ರಕಟಣಾ

[illegible] ತಿಳಿಸುವುದೇನೆಂದರೆ [illegible] ಇದರಿಂದ [illegible] ಪ್ರತಿಫಲ ಪಡೆದು [illegible] ನೋಟು [illegible] ಸಂಭವವಿರುವುದರಿಂದಲೂ ಯಾರೂ ಅತನಿಂದ ನೋಟು ವಗೈರೆ ಒರಕೊಳ್ಳಕೂಡದೆಂತಲೂ ಹಾಗೆ ಒರಕೊಂಡರೆ ಅತನಿಗೆ [illegible] ಅತನ ವ್ಯಾಪಾರ ಮುಗಸಿಗೆ ಅದು. ಸಿಂಧುವಾಗಲಿಕ್ಕಿಲ್ಲವೆಂತಲೂ ಅತನಿಗೆ ಸಲುವ ಐವೇಜುಗಳನ್ನು ಅತನ ಹೊಡತಿ ವ ನನ್ನ [illegible] ಯಾ ನನ್ನ ಸಮಕ್ಷದ [illegible] ಸಾಕ್ಷಿಯರಶೀದಿ ಪಡಕೊಂಡರೆ ಮಾತ್ರ ಅಂದಾ ರಶೀದಿಯು ಸಿಂಧುವೆಂತಲೂ ಈ ಮೂಲಕ ಎಲ್ಲರಿಗೂ ತಿಳಿಸಲಾಗಿರುವುದೆ

ಮಂಗಳೂರು
4—1—39 } ನರಸಿಂಹ ಪ್ರಭು ರಾಜು

ವಿಶೇಷ

ಗ್ವಾಲಿಯರದ ರಾಣಿ ರಾಜಮಾತೆಯವರು ಭಾರತ ಮಹಿಳಾ ಪರಿಷತ್ತಿನಲ್ಲಿ–ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ರಾಜ್ಯವೊಂದರ ದಿವಾನರು, ಇನ್ನು ಸ್ತ್ರೀಯರು ರಾಜಕೀಯ ವಿಚಾರಗಳಲ್ಲಿ ಚಳವಳ ಮಾಡುವುದಕ್ಕೆಂದೇ ಸಂಘಗಳನ್ನು ಸ್ಥಾಪಿಸಿದರೆ ಸರಕಾರಗಳು ಆಕ್ಷೇಪವೆತ್ತುವಂತಿಲ್ಲ ಎಂದು ಅವರಿಗೆ ತಿಳಿಸಿರುವುದಾಗಿ ಸರ್ವರಿಗೂ ತಿಳಿಸಿರುವರು.

ಜಯಪುರ

ಸೇಠ ಜಮ್ನಾಲಾಲ ಬಜಾಜರು ಮಾತ್ರ ಈ ರಾಜ್ಯದೊಳಗೆ ಪ್ರವೇಶಿಸಬಾರದೆಂದು ಸರಕಾರ ನ್ಯಾಯಿದಿದೆ. ಈ ಅಪ್ಪಣೆಯನ್ನು ಹಿಂದೆಗೆಯದಿರುವಲ್ಲಿ ಸೇಠರು ತಮ್ಮ ಕರ್ತವ್ಯವನ್ನು ತಾವು ನೆರವೇರಿಸುವರಾಗಿಯೂ ತಿಳಿಸಿದ್ದಾರೆ ಇಲ್ಲಿದೆ ಹೊಸತ ಚಳವಳವೆಂಬ.

Canara High School,
MANGALORE

The preliminary list of voters for election of a representative of Old Boys to the Canara High School Council has been put up on the Canara High School Notice Board on 26 12 38 Objections are invited till 31-1-1939 after which a final list will be prepared

M Madhava Rao.
Manager

ಪರರಾಷ್ಟ್ರಗಳ ಪತ್ರಿಕೆಗಳಿಂದ

ಡೈಲಿ ಎಕ್ಸ್‌ಪ್ರೆಸ್, ಲಂಡನ್

ಆಫ್ರಿಕದ ವಿಷಯವಾಗಿ ಯುರೋಪಿನಲ್ಲಿ ಗೊಂದಲವೆದ್ದಿದೆ ಬಿಳೀ ಜನಾಂಗಗಳು ಇರುವ ದೇಶಗಳಲ್ಲಿ ಕರೀ ಜನಾಂಗಗಳು ಇರುವ ದೇಶಗಳನ್ನು ಕುರಿತಾಗಿ ಲಾಲಸೆ ಹೆಚ್ಚಿದೆ ನಮ್ಮ ಮಂತ್ರಿ ಮೆಕ್‌ಡೊನಾಲ್ಡರು ವಸಾಹತುಗಳನ್ನು ಹಿಂದೆ ಕೊಡುವ ಆಲೋಚನೆಯಿಲ್ಲವೆಂದ ಕೂಡಲೆ ಜರ್ಮನಿ ಸಿಟ್ಟಿಗೆದ್ದಿತು ಈ ವಸಾಹತುಗಳಿರುವುದು ಆಫ್ರಿಕದಲ್ಲೇ ಹೆಚ್ಚು ಇಟಲಿಗೆ ಈಗ ಟ್ಯೂನಿಸಿಯಾ ಬೇಕಾಗಿದೆ ಈಗ ಫ್ರೆಂಚರು ಈ ಆಸ್ತಿಗೆ ಯಜಮಾನರಾಗಿದ್ದು ಇಟಲಿಯನ್ನು ಎದುರಿಸುತ್ತಾರೆ!

ಲೂವ್ರ, ಪ್ಯಾರಿಸ

ಕಳೆದ ತಾ 5ರಲ್ಲಿ ಮೂರುವರೆ ಮಿಲ್ಲಿಯ ಜರ್ಮನರು ಫ್ರಾನ್ಸಿನಲ್ಲಿ ಮಹಾ ಸಂಕಟಗೊಂಡಿರುವರೆಂದು ಇಟಲಿಯ ವಾರಪತ್ರಿಕೆಯಲ್ಲಿ ಗಾಯಡಾ ಬರೆದರು ಇದರಿಂದ ಫ್ರೆಂಚರೊಡನೆ ವ್ಯಾಪಾರೀ ಕರಾರಿಗಾಗಿ ಹೋಗುತಿದ್ದ ಜರ್ಮನ್ ರಾಯಭಾರಿಗೆ ಮನಸ್ಸಿಗೆ ಅಸಮಾಧಾನ ಉಂಟಾಗಿದೆ ರೋಮ್ ಮತ್ತು ಬರ್ಲಿನುಗಳೊಳಗೆ ಈಗ ನಡೆಯುತ್ತಿರುವ ಪತ್ರವ್ಯವಹಾರದವಾರ್ತೆ ನಿಜವಾದಲ್ಲಿ, ರಾಯಭಾರಿಯು ಕಠಿನವಾದ ನಿಷೇಧಸೂಚಕ ವಾರ್ತೆಯನ್ನು ರೋಮಿಗೆ ತಿಳಿಸಬೇಕಾಗಿ ಹಿಟ್ಲರು ಎಂದನಂತೆ ಇಟಲಿಗೆ ಜರ್ಮನಿಯು ಮಿತ್ರರಾಷ್ಟ್ರವಾಗಿಯೇ ಇದೆ ನಿಜವಾದರೂ ಫ್ರೆಂಚ ರಾಜ್ಯದಲ್ಲಿನ ಜರ್ಮನರುಗಳ ವಿಷಯ ಮಾತಾಡಲು ಇಟಲಿಗೆ ಅಧಿಕಾರವಿಲ್ಲೆಂದು ಸೂಚಿಸಲಾಗಿದೆ

ಲ್ ಜರ್ನಲ್ ಪ್ಯಾರಿಸ್

ಫ್ರಾನ್ಸು ಮತ್ತು ಇಂಗ್ಲೆಂಡು ಈಗ ಇಂಡೋಚೀನಾ ಪ್ರದೇಶದ ರಕ್ಷಣೆಗಾಗಿ ಪರಸ್ಪರ ಸಹಾಯ ಮಾಡಲು ಒಂದು ಕರಾರನ್ನು ಮಾಡಿಕೊಂಡಿವೆ ಎಂದು ತಿಳಿಯಬರುತ್ತದೆ ಈ ಕರಾರಿನಂತೆ ಇವೆರಡು ರಾಷ್ಟ್ರಗಳಿಗೆ ಪೆಸಿಫಿಕ್ ಸಾಗರದ ಪ್ರದೇಶದಲ್ಲಿರುವ ಹಕ್ಕುಗಳು ಕುಂದುವಂತೆ ಯಾವ ರೀತಿಯ ಜಪಾನಿನ ಆಕ್ರಮಣ ನಡೆದಲ್ಲಿ ಈ ರಾಷ್ಟ್ರಗಳು ಅದನ್ನು ವಿರೋಧಿಸಿ ತಡೆಯುವುವು ಚೀನಕ್ಕೆ ಯುದ್ಧಸಾಮಗ್ರಿಗಳನ್ನು ಬರ್ಮದ ರೈಲ್ವೆಗಳ ಮೂಲಕ ಒಯ್ಯಬಾರದೆಂದು ಜಪಾನು ಎಚ್ಚರಿಸಲು ಬರ್ಮಾ ಸರಕಾರವು ಕೂಡಲೆ ಕಠಿನ ಉತ್ತರ ಕಳುಹಿತ ಈ ಉತ್ತರವು ಕಠಿನವಾಗಿರುವುದಕ್ಕೆ ಒಂದು ಈ ಕರಾರಿನದೇ ಆಗಿದೆ ಇನ್ನು ಫ್ರೆಂಚ ಇಂಡೋಚೀನಾ ಭಾಗವೂ ಗಡಿನಿಂದಿನ ಮೂಲಕ ಚೀನಕ್ಕೆ ಯುದ್ಧಸಾಮಗ್ರಿ ಕಳುಹುವುದ

ಆಜ್ ಎಸ್ತ್, ಬುಡಾಪೆಸ್ಟ್

ರಷ್ಯ-ಫ್ರಾನ್ಸು, ರಷ್ಯ-ಪೋಲೆಂಡುಗಳೊಳಗಾದ ಹಳೆಯ ಕರಾರುಗಳನ್ನು ಪುನರ್ವಿಮರ್ಶಿಸಿ ಹೊಸ ಕರಾರುಗಳಾಗುವುದು. ಉತ್ತರದಿಂದ ರಷ್ಯದ ಮಂತ್ರಿ ಲಿಟ್ವಿನೋಫರು ಸೂಚಿಸಿರುವರ ಇವು ಮೂರೂ ರಾಜ್ಯಗಳು ಪರಸ್ಪರವಾಗಿ ಕರಾರು ಮಾಡಿಕೊಂಡಲ್ಲದೆ ರೋಮ್-ಬರ್ಲಿನ್ ಮೈತ್ರಿಯ ವಿರೋಧವನ್ನು ಕಡೆಯಬರುವಂತಿಲ್ಲ

ಲಿವರ್‌ಪೂಲ್ ಪೋಸ್ಟ್

ಚೆಂಬರ್ಲೇನರ ರೋಮಿಗೆ ಹೋಗುತ್ತಾ ಜರ್ಮನ್ ಮತ್ತು ಫ್ರೆಂಚ ಮಂತ್ರಿಗಳೊಡನೆಯೆ ಮಾತುಕತೆ ಬೆಳೆಸಿದರೆ ಉತ್ತಮ ವೆಂದೂ, ಅಥವಾ ಮತ್ತೊಮ್ಮೆ ಮ್ಯುನಿಚಿನಲ್ಲಾದಂತೆ ನಾಲ್ಕು ರಾಜ್ಯಗಳ ಮಹಾಮಂತ್ರಿಗಳ ಕೂಟವೊಂದು ಕೂಡುವುದುತ್ತಮವೆಂದೂ ಜರ್ಮನಿಯ ಮಂತ್ರಿ ರಿಬ್ಬೆನ್‌ಟ್ರಾಪರು ಫ್ರೆಂಚ ಮುಖ್ಯಮಂತ್ರಿಯರಿಗೆ ತಿಳಿಸಿರುವರಾಗಿ ಪ್ರಕಟವಾಗಿದೆ ಇದು ನಿಜವಾರ್ತೆಯಾಗಿರುವಲ್ಲಿ, ಇದನ್ನು ಮೂಲತ ಸೂಚಿಸಿದವರು ರೋಮಿನವರೇ ಇಟಲಿಯ ಸಾಮ್ರಾಜ್ಯ ಬಡಾವಣೆಗೆ ಸೌಕರ್ಯಗಳನ್ನು ಹುಡುಕಿ ತೆಗೆವುದೇ ಈ ಹೊಸ ಪ್ರಯತ್ನದ ಉದ್ದೇಶವಾಗಿರಬಹುದು

ನ್ಯೂಯೋರ್ಕ್ ಟೈಮ್ಸ್

ಫ್ರಾನ್ಸು ಕಳೆದ ಮಹಾಯುದ್ಧದ ನಂತರ ಯುನೈಟೆಡ್ ಸ್ಟೇಟ್ಸ್ ಸರಕಾರಕ್ಕೆ ತೆರಬೇಕಾಗಿರುವ 546 ಮಿಲ್ಲಿಯ ಡೊಲ್ಲರು ಸಾಲವನ್ನು ಹೇಗೆ ಪಾವತಿಮಾಡಿ ಇತ್ಯರ್ಥಿಸಬಹುದೆಂಬ ಪ್ರಶ್ನೆಯು ಪುನಃ ಪ್ಯಾರಿಸಿನ ಪಾರ್ಲಿಮೆಂಟಿನ ಮುಂದೆ ಬರಲಿರುವುದು ಈ ಪ್ರಶ್ನೆಯೊಂದು ಸರಿಯಾಗಿ ಇತ್ಯರ್ಥವಾದರೆ, ಅವೆರಡು ರಾಜ್ಯಗಳೊಳಗಣ ವ್ಯವಹಾರಗಳು ಉತ್ತೇಜನ ಹೊಂದಿ ನಡೆವಂತಾದೀತು ಬ್ರಿಟನ್ನು, ಫ್ರಾನ್ಸು, ಯುನೈಟೆಡ್ ಸ್ಟೇಟ್ಸ್ ಇವೇ ಮೂರ ಮುಖ್ಯ ಪ್ರಜಾಪ್ರಭುತ್ವಗಳೊಳಗೆ ಇದೊಂದು ಮೈತ್ರಿಯು ಅತ್ಯಾವಶ್ಯಕವಾಗಿರುವುದಲ್ಲವೆ?

ಟೈಮ್ಸ್, ಲಂಡನ್

ಪ್ರೇಗಿನಿಂದ ಪ್ರಕಟವಾದ ಲೆಕ್ಕಪರಿಶೋಧಕರ ಪತ್ರದಲ್ಲಿ— ಝೆಕ್ಕ ರಾಜ್ಯದ ಗಡಿಗಳನ್ನು ಪುನಃ ಗುರುತಿಸಿರುವ ಕಾರಣವಾಗಿ—ಜರ್ಮನಿ ಫ್ರಾನ್ಸ್ ಪೋಲೆಂಡುಗಳಿಗೆ 4922440 ಜನರನ್ನು ಝೆಕ್ಕ ರಾಜ್ಯವು ಒಪ್ಪಿಸಿಕೊಟ್ಟ ತಾಗಿದೆ, ಎಂದರೆ, ಒಟ್ಟು ಜನಸಂಖ್ಯೆಯ ಮೂರರಲ್ಲೊಂದಂಶವು ಹೊರಗೆಹೋದಂತಾಯಿತು

ಈಗ ಝೆಕ್ಕರಾಜ್ಯದಲ್ಲಿ ಯಾರಿರುವರು? ಎಂಟುವರೆ ಮಿಲ್ಲಿಯ ಝೆಕ್ಕರು ಸ್ಲೊವಾಕರು ಅರ್ಧ ಮಿಲ್ಲಿಯ ರುಥೇನಿಯನರು ಮೂರು ಲಕ್ಷ ಜರ್ಮನರು, ಒಂದ ಲಕ್ಷ ಹಂಗೇರಿಯನರ ನಾಲ್ಕು ಸಾವಿರ ಪೋಲರು; ಒಂದೂ ಕಾಲು ಲಕ್ಷ ಯೆಹೂದ್ಯರು

ಝೆಕ್ಕ ರಾಜ್ಯವು 41596 ಕಿಲೋಮೀಟರ್ (19000 ಚದರ ಮೈಲು) ಸ್ಥಳವನ್ನು ಕಳೆದುಕೊಂಡಿದೆ ಈಗ ಉಳಿದದು 40000 ಚದರ ಮೈಲುಗಳಷ್ಟಾಗಿದೆ ಈಗಿನ ಜನಸಂಖ್ಯೆಯಲ್ಲಿ ಶೇಕಡಾ 37ರಷ್ಟು ಕಾಮತ್ತನ್ನಗಳ ಮೇಲೆ ಅಧಾರಿಸಿರುವರು ತೆವಿರಷ್ಟು ಕೈಗಾರಿಕೆಗಳಲ್ಲಿ ರುವರ ವ್ಯಾಪಾರದಲ್ಲ ಬರೀ 7 ಮಂದಿ ಮಾತ್ರ

ಪೆಲೆಸ್ಟೀನದಲ್ಲಿ ಹಿಟ್ಲರನ ಕೈ

ಪೆಲೆಸ್ಟೀನದ ಗಲಭೆಯು ಈಗಿನ ರೂಪವನ್ನು ತಾಳುವಂತೆ ಉದ್ರೇಕಗೊಳಿಸಿದವರಾರು? ದಂಗೆಖೋರರಿಗೆ ಯುದ್ಧಶಸ್ತ್ರ ಇತ್ಯಾದಿಗಳು ಎಲ್ಲಿಂದ ದೊರಕುತ್ತವೆ? ಈ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಒಂದು ಲೇಖವು ಕಲ್ಕತ್ತೆಯ ಅಮೃತಬಜಾರ್ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ

ಬ್ರಿಟನಿನ ಕುರಿತು ವಿರೋಧ ಪ್ರಚಾರ ಮಾಡುವುದೆ ಹಿಟ್ಲರನ ಜರ್ಮನಿಯು ಈಗಿನ ಕಾರ್ಯಕ್ರಮದಲ್ಲಿ ಒಂದಾಗಿರುತ್ತದೆ ಬ್ರಿಟಿಷರು ಕನ್ನಂತೆ ಹಿಂಸಾವಾದಿಗಳು ಪೆಲೆಸ್ಟೀನ ಇತ್ಯಾದಿ ಕಡೆಗಳಲ್ಲಿ ಕ್ರೂರ ತರದ ಅತ್ಯಾಚಾರಗಳನ್ನು ನಡೆಯಿಸುವರು, ಎಂಬುದಾಗಿ ಚಿತ್ರಪಟಗಳ ಮೂಲಕ ಜರ್ಮನ್ ಕೈಗಾರ, ಹಳ್ಳಿಪ್ರದೇಶಗಳಲ್ಲಿ ಬಿರುಸಾದ ಪ್ರಚಾರವು ನಡೆಯುತ್ತಿದೆ ಈ ದೃಷ್ಟಿಯಿಂದಲೆ ಜರ್ಮನಿಯ ಪ್ರಚಾರ ಶಾಖಾ ಮಂತ್ರಿಗಳಾದ ಡಾ| ಗೂಬೆಲ್ಸರು ಪೆಲೆಸ್ಟೀನದಲ್ಲಿ ಬ್ರಿಟಿಷರಿಗೆ ಇನ್ನಷ್ಟು ತೊಂದರೆಗಳನ್ನು ಹೆಚ್ಚಿಸುವರೆ ಪೆಲೆಸ್ಟೀನದಲ್ಲೂ ಪ್ರಚಾರವಾಗುವಂತೆ ಒಂದು ಪ್ರತ್ಯೇಕ ಇಲಾಖೆಯ ಏರ್ಪಾಡನ್ನು ಮಾಡಿರುವರು.

ಪೆಲೆಸ್ಟೀನದ ದಂಗೆ ನಾಯಕರಾದ ಅನೇಕ ಮಂದಿ ಅರಬರಿಗೆ ಹಿಟ್ಲರನು ಭೇಟಿಕೊಟ್ಟಿರುವನು ನೂರೆಂಬರ್ಗಿನಲ್ಲಿ ನಡೆದ ನಾಜಿ ಮೇಳದಲ್ಲಿ ನೂರಾರು ಮಂದಿ ಅರಬರು ಜರ್ಮನ ಖರ್ಚಿನಲ್ಲೆ ಪ್ರತಿನಿಧಿಗಳಾಗಿ ನೆರೆದಿದ್ದರ ಈ ಅರಬ ನಾಯಕರಿಗೂ ಜರ್ಮನ್ ಸರಕಾರಕ್ಕೂ ಮಹತ್ವದ ಮಾತ ಕತೆಗಳು ನಡೆದುವೆಯಾಗಿ ತಿಳಿದುಬರುತ್ತದೆ

ಬ್ರಿಟಿಷ ಅಧಿಕಾರಿಗಳಿಂದ ತಲೆತಪ್ಪಿಸಿಕೊಂಡವರೆ, ಈ ಅರಬ ನಾಯಕರು ಜರ್ಮನರ ಬೆಂಬಲದಿಂದ ಬ್ರಿಟಿಷರಿಂದ ತಪ್ಪಿಸಿಕೊಂಡು ಬ್ರಿಟಿಷ ವಿರುದ್ಧ ಪ್ರಚಾರ ರೀತಿಯಲ್ಲಿ ಕಾರ್ಯಗಳನ್ನು ನಡೆಯಿಸುತ್ತಿರುವರ

ಜರ್ಮನಿಯ ಆಕಾಶವಾಣಿ ನಿಲಯಗಳಿಂದೆಲ್ಲಾ ಈಗ ಬ್ರಿಟಿಷರು ಅವರ ಸಾಮ್ರಾಜ್ಯದ ಮುಖ್ಯವಾಗಿ ಪೆಲೆಸ್ಟೀನದಲ್ಲಿ ಅತ್ಯಂತ ಕ್ರೂರ ತರದ ಅತ್ಯಾಚಾರಗಳನ್ನು ನಡೆಯಿಸುತ್ತಿರುವರಾಗಿ, ಆ ಅತ್ಯಾಚಾರಗಳನ್ನು ತಮ್ಮದೆ ರೀತಿಯಿಂದ ಬಣ್ಣಿಸುತ್ತಾ ಬ್ರಿಟಿಷರಿಗೆ ವಿರೋಧವಾಗಿ ಅಪಪ್ರಚಾರವನ್ನು ಮಾಡುತ್ತಿರುವರು

ಮ್ಯುನಿಚ್ ಕರಾರಿನ ತರುವಾಯ ಈ ತರದ ಅಪಪ್ರಚಾರವು ನಿಲ್ಲಿಸಲಾಗಿತ್ತು ಆದರೆ ಬ್ರಿಟನು ಶಸ್ತ್ರತ್ಯಾಗ ಧೋರಣೆಯನ್ನನುಸರಿಸುವ ಬದಲು, ಶಸ್ತ್ರಧಾರಿಯಾಗುವ ಕುರಿತ ವ್ಯವಸ್ಥೆ ಮಾಡಿದುದರಿಂದ ಜರ್ಮನಿಯ ಪ್ರಚಾರ ಮಂತ್ರಿಯರು, ಅವರ ವಿರೋಧವಾಗಿ ಈಗ ಮತ್ತೊಮ್ಮೆ ಅಪಪ್ರಚಾರವನ್ನು ಪ್ರಾರಂಭಮಾಡಿರುವರು

"ಬ್ರಿಟಿಷ ಸೈನಿಕರು ನಿರಪರಾಧಿ ಅರಬಿ ಸ್ತ್ರೀಪುರುಷರ ಕೊಲೆ ಮಾಡುತ್ತಿರುವರು ಅವರಿಂದ ಬೇರೆ ಯಾವತ್ತೂ ಕಾರ್ಯವು ಆಗದು ' ಎಂಬುದೆ ಮೊದಲಾಗಿ, ವಾರ್ತೆಗಳು ಪೆಲೆಸ್ಟೀನದಲ್ಲೆಲ್ಲಾ ಹರಡುತ್ತಿವೆ ಬ್ರಿಟಿಷ ಸೈನ್ಯ ಬಲದಲ್ಲಿ ಏನೂ ತತ್ವವಿಲ್ಲವೆಂದ ಗೂಬೆಲ್ಸರ ಪ್ರಚಾರವು ನಡೆಯುತ್ತಿದೆ

ಇನ್ನೊಂದು ಮಹಾಯುದ್ಧಕ್ಕೆ ಕಾರಣಗಳು ಇನ್ನೂ ಹೆಚ್ಚುತ್ತಾ ಇವೆ ಎಂಬುದಕ್ಕೆ ಇದೊಂದು ನಿದರ್ಶನ

---

92 ವರ್ಷ ಪ್ರಾಯದವನು ಬಹು ದೃಢಕಾಯನಾಗಿದ್ದಾನ

ಉಪ್ಪರಿಗೆಯನ್ನು ಸುಲಭವಾಗಿ ಹತ್ತಿ ಇಳಿಯಬಲ್ಲನು!

ಕ್ರುಶನ್ ಲವಣವನ್ನು ಪ್ರತಿನಿತ್ಯವೂ ಬೆಳಿಗ್ಗೆ ಸೇವಿಸುವನು

ಮಿಸೆಸ್ ಎ ಜೆ ಡಬ್ಲ್ಯು ಎಂಬಾಕೆಯು ಹೀಗೆಂದು ಬರೆಯುತ್ತಾಳೆ ನನ್ನ ತಂದೆಗೆ ಕ್ರುಶನ್ ಲವಣದ ದೊರೆತ ಆಶ್ಚರ್ಯಕರವಾದ ಗುಣಾಂಶದ ಕುರಿತು ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುವುದ ನನ್ನ ಕರ್ತವ್ಯವೆಂದು ತಿಳಿಯುತ್ತೇನೆ ಇದರ ಫಲಿತಾಂಶಗಳು ವಿಚಿತ್ರ ಘಟನೆಗಳೆಂದು ಹೇಳಬಹುದ ಆತನ 92 ವರ್ಷ ಪ್ರಾಯದವನಾದರೂ ಪೂರ್ಣ ಗಟ್ಟಿಗನಾಗಿದ್ದಾನೆ ಆತನು ಚುರುಕಾಗಿ ಚಲಿಸಬಲ್ಲನು ಮಾತ್ರವಲ್ಲದೆ, ಉಪ್ಪರಿಗೆಯನ್ನು ಸುಲಭವಾಗಿ ಏರಿ ಇಳಿಯುತ್ತಾನೆ ಅವನ ಸ್ನೇಹಿತರು ಅವನ ಚುರುಕುತನವನ್ನು ನೋಡಿ ಬಹಳ ದಿಗಿಲುಪಡುತ್ತಾರೆ ತನ್ನ ಪ್ರಾತಃಕಾಲದ ಕ್ರುಶನ್ ಲವಣ ಮಿಶ್ರಿತ ಚಹಾ ಸೇವನೆಯೇ ಇದಕ್ಕೆ ಕಾರಣವೆಂದು ತಿಳಿಸುತ್ತಾನೆ ನನ್ನ ಮಿತ್ರಮಂಡಳಿಗೆಲ್ಲಾ ನಾವು ಕ್ರುಶನ್ ಲವಣವನ್ನು ಶಿಫಾರಸು ಮಾಡುತ್ತೇವೆ. ಪ್ರತಿಯೊಂದು ಕುಟುಂಬದಲ್ಲಿ ಕ್ರುಶನ್ ಲವಣವು ಅಗತ್ಯವಿರತಕ್ಕದ್ದು ಎಂಬದಾಗಿ ನನಗೆ ತೋರುತ್ತದೆ

ಆರೋಗ್ಯಕ್ಕೆ ಮುಖ್ಯ ಸಾಧನವಾದ ಒಳಗಿನ ಅಂಗಗಳನ್ನು ಕಶ್ಮಲರಹಿತವಾಗಿ ಇರಿಸದೆ ಇರುವುದರಿಂದಲೇ ಹೆಚ್ಚಿನವರು ಆವರ ಪ್ರಾಯದ ಮುಂಚಿತವಾಗಿಯೇ ಮುದುಕರಾಗಿ ಕಾಣುವರು

ಕ್ರಮೇಣವಾಗಿ ಅವರು ಕ್ರುಶನ್ ಲವಣವನ್ನು ಸೇವನೆಯನ್ನೂ ಅಭ್ಯಾಸಿಸುವರು ಅನಂತರ ಅವರ ಜೀವಮಾನದಲ್ಲಿ ಮೊದಲನೇ ಬಾರಿಯಾಗಿ ಅವರ ಶರೀರದೊಳಗಿರುವ ಕಶ್ಮಲ ಪದಾರ್ಥವನ್ನು ಹೊರಗೆಡಿಸಿದಂತಾಗುವುದು. ಹೀಗಾಗಿ ಕರುಳೊಳಗೆ ದಾಸ್ತಾನಾಗಿ ಕೊಳೆತು ಹೋದಂತಿರುವ ಪದಾರ್ಥವು ಪೂರ್ತಿಯಾಗಿ ಹೊರಗೆಹೋಗಿ ನಿರ್ಮಲವಾಗುವುದು ಲಿವರ್ ಮತ್ತು ಮೂತ್ರಕೋಶವು ಇದರಿಂದಾಗಿ ಕ್ರಮವಾಗಿ ಅವುಗಳ ಕೆಲಸಗಳನ್ನು ಚುರುಕಿನಿಂದ ಮಾಡಲು ತೊಡಗುವುವು ಇದರ ಪರಿಣಾಮವಾಗಿ ನಮ್ಮ ದೇಹದ ಎಲ್ಲಾ ನರನಾಡಿಗಳಲ್ಲಿ ಶುದ್ಧ ರಕ್ತ ಚಲನೆಯು ಸರಾಗವಾಗಿ ನಡೆದು ನಮ್ಮ ಪ್ರತಿಯೊಂದ ಅವಯವಗಳಿಗೆ ಆರೋಗ್ಯ ಬಲ ಮತ್ತು ಹೊಸ ಹುರುಪನ್ನುಂಟು ಮಾಡುತ್ತದೆ

ಕ್ರುಶನ್ ಲವಣವು ಎಲ್ಲಾ ಕೆಮಿಸ್ಟರಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ.

ಹೆಚ್ಚಿನವಗದು ಬಹುಮಾನವನ್ನು ಪಡೆಯಲು ತ್ವರೆಮಾಡಿರಿ !

ಒಟ್ಟು 10,000 ರೂಪಾಯಿಗಳು ಲಕ್ಸ್ ಟಾಯಿಲೆಟ್ ಸಾಬೂನನ್ನು ಉಪಯೋಗಿಸುವವರಿಗೆ ಬಹುಮಾನವಾಗಿ ಕೊಡಲ್ಪಡುತ್ತ

ಪ್ರತಿವಾರವೂ 100 ರೂಪಾಯಿನ 4 ಬಹುಮಾನಗಳನ್ನು ಜನವರಿ 28 ರ ವರೆಗೆ ಮಾತ್ರ ಕೊಡಲಾಗುತ್ತ

ನಂಬರಿನ ರ್‍ಯಾಪರುಗಳನ್ನು ಶೇಖರಿಸಿರಿ

★ ಬರೆಯುವಕ್ರಮ

ನಂಬರುಗಳು ದೊಡ್ಡ ಲಕ್ಸ್ ಟಾಯಿಲೆಟ್ ಸಾಬೂನಿನ ರ್‍ಯಾಪರೊಳಗೆ ಪ್ರಿಂಟುಮಾಡಲ್ಪಟ್ಟಿದೆ ಪ್ರತಿವಾರವೂ ಪ್ರತಿನಾಲ್ಕು ಸ್ಥಳಗಳಲ್ಲಿಯ ಯಾರ ನಾಲ್ಕು ರ್‍ಯಾಪರುಗಳ ಒಟ್ಟು ಸಂಖ್ಯೆಯು ಎಲ್ಲರದಕ್ಕಿಂತಲೂ ಹೆಚ್ಚಾಗಿರುತ್ತದೋ ಅಂತಹವರಿಗೆ 100 ರೂಪಾಯಿ ನಗದು ಬಹುಮಾನವನ್ನು ಕೊಡಲಾಗುತ್ತ

10,000 ರೂಪಾಯಿಗಳನ್ನು ಪ್ರತಿವಾರವೂ 1939ನೇ ಜನವರಿ ವರೆಗೂ ಬಹುಮಾನವಾಗಿ ಹಂಚಲ್ಪಡುತ್ತ ಇಂದಿನಿಂದಲೇ ನಿಮ್ಮ ರ್‍ಯಾಪರುಗಳನ್ನು ಶೇಖರಿಸುವುದಕ್ಕೆ ಪ್ರಾರಂಭಿಸಿ

ಕಳೆದವಾರ ಬಹುಮಾನ ಪಡೆದವರು

ಬೊಂಬಾಯಿ — ಕಲ್ಕತ್ತ

ಸೋಹನಲಾಲ್ ದುರ್ಗಾ ಪ್ರಸಾದ ಬರಾಕಪೂರ — ಮಿಸೆಸ್ ಬೂತ್, ಕಲ್ಕತ್ತಾ

ಕರಾಚಿ — ಮದ್ರಾಸು

ಮಿಸ್ ಕನ್ನಿಜ ಫಾತಾಮ್ ಜುನಾಘಡ — ಮಿ ಎಸ್ ಎಫ್ ಡಿ ಸೋಜಾ ಮೊಹಾದ್

ಲಕ್ಸ್ ಟಾಯಿಲೆಟ್ ಸಾಬೂನು

ಇಂಡಿಯಾದಲ್ಲಿ ನಕ್ಷಗಳ ಶೋಧಿಸಿದ ಎಣ್ಣೆಯಿಂದಲೇ ತಯಾರಿಸಲ್ಪಟ್ಟು.

X LTS 348 35 — LEVER BROTHERS (INDIA) LIMITED — KANARESE

ಮದ್ರಾಸು ಪ್ರಾಂತ್ಯದ ವಿದ್ಯಾರ್ಥಿಗಳು ಪರಿಷತ್ತಿನಲ್ಲಿ ನಿರ್ಣಯಿಸಿದುದೇನೆಂದು?

ಜನ್ವರಿ ತಾ. ೨೬ನ್ನು ಸ್ವಾತಂತ್ರ್ಯ ದಿನವೆಂದು ಕೊಂಗ್ರೆಸು ಮಂತ್ರಿಗಳು ನಿರ್ಧರಿಸಬೇಕಾಗಿಯೂ ವಿದ್ಯಾರ್ಥಿಗಳು ಆ ದಿನದ ಕಾರ್ಯಕ್ರಮಗಳನ್ನು ಗೊತ್ತುಮಾಡಬೇಕಾಗಿ ನಿರ್ಣಯವಾಗಿದೆ.

ಫೆಡರೇಶನನ್ನು ಸರ್ವಪ್ರಕಾರದಿಂದಲೂ ಎದುರಿಸಬೇಕಾಗಿ ಶ್ರೀ ಸುಭಾಷರು ಸೂಚಿಸಿದುದನ್ನು ಈ ಪರಿಷತ್ತು ಒಪ್ಪಿದೆ

ಶ್ರೀ। ಸತ್ಯಮೂರ್ತಿಯವರು—ವಿದ್ಯಾರ್ಥಿಗಳು ಈ ರೀತಿ ಬಹಳ ಆತುರದಿಂದ ದೇಶಸೇವೆಗೆ ಸಿದ್ಧರಾಗುತ್ತಿರುವುದು ಬಹಳ ಶ್ಲಾಘನೀಯ. ಆದರೆ, ವಿದ್ಯಾರ್ಥಿಗಳು ಮೂಲತಃ ವಿದ್ಯಾರ್ಥಿಗಳು ಎಂದರೆ ವಿದ್ಯಾಭ್ಯಾಸ ನಿರತರಾಗಿರ ತಕ್ಕುದೇ ಅವರ ಆದ್ಯ ಕರ್ತವ್ಯ ಆಗುವನ್ನು ಚೆನ್ನಾಗಿ ಅವರು ವಿದ್ಯಾಸಂಪಾದನೆಯಲ್ಲೇ ತಮ್ಮ ಎಲ್ಲ ಕಾಲವನ್ನು ಕಳೆಯಬೇಕು. ಮುಂದೆ, ವಯಸ್ಸಾದ ಬಳಿಕ ವಿದ್ಯಾಸಂಪಾದನೆಗೆ ಅವಕಾಶ ಸಿಗುವುದು ಕಡಮೆ. ಆದುದರಿಂದ ಉತ್ತಮೋತ್ತಮ ಸಾಹಿತ್ಯವನ್ನು ಅವರು ಅಭ್ಯಸಿಸುವುದು ಅಗತ್ಯ.—ವಿದ್ಯಾರ್ಥಿದಶೆಯಲ್ಲಿರುವಾಗಲೇ! ಭೂಗೋಲಶಾಸ್ತ್ರವನ್ನು ಅವರು ಚೆನ್ನಾಗಿ ತಿಳಿಯುವುದುತ್ತಮ. ನ್ಯೂಜಿ ಮೆಡಿಟರೇನಿಯನ್ ಸಮುದ್ರತೀರದ ನಮ್ಮ ಹಿಂದೀ ಸಾಗರವೇ ಮುಖ್ಯತ್ವ ಹೊಂದಿರುತ್ತಿದೆ. ಆ ಸಮುದ್ರವು ಫ್ರೆಂಚ್ ಪೋರ್ಚುಗೀಸರುಗಳ [illegible] ಯಿಂದ ಇನ್ನು ಅಷ್ಟು ಚೆನ್ನಾಗಿ [illegible] ಹೊಂದುತ್ತಾರದು. ಎಲ್ಲ ಸಂಸ್ಕೃತಿ ಹಿಂದೀ ಸಾಗರದ ಸುತ್ತಲ ರಾಜ್ಯಗಳಲ್ಲಿ. ಹರಡುವ ದಿನಗಳು ಬರುವುವು. ವಿದ್ಯಾರ್ಥಿದಶೆಯಲ್ಲಿರುವಾಗ ಬ್ರಹ್ಮಚರ್ಯೆಯ ವ್ರತಪಾಲಿಸಿಕೊಂಡು ಬರುವುದು ಅಗತ್ಯ. ಹಿಂದೀ ವಿದ್ಯಾರ್ಥಿಗಳು. ಹಿಂದೀ ವಿದ್ಯಾರ್ಥಿಗಳೆನಿಸಿಯೇ ಬಾಳಬೇಕು ಹಾಗೆಂದು ಪುರಾತನಕಾಲದಿಂದಿರುವ ನಮ್ಮ ನಾಡಿನ ಭಾಷಾಸಾಹಿತ್ಯಗಳ ಸಂಸ್ಕೃತ ಮೊದಲಾದುವನ್ನು [illegible] ಭಾರತವರ್ಷದ ಅಪೂರ್ವ ಗುಣಾದಿಗಳನ್ನು ಅವರು ಗೌರವಿಸಬೇಕಾಗಿದೆ. ಸರ್ವರೂ ಏಕಪ್ರಕಾರವಾದ ಉಡುಪನ್ನೂ, ಆಹಾರವನ್ನೂ, ಭಾಷೆಯನ್ನೂ ಅನುಸರಿಸುವುದು ಉತ್ತಮವಾದೀತು. ಖಾದಿಯನ್ನು ಬಳಸಿದರುತ್ತಮ. ಸಾಮಾನ್ಯ ಭಾಷೆಯ ವಿಚಾರ ದ್ರಾವಿಡ—ಆರ್ಯ ಎಂಬ ಭೇದಭಾವಗಳನ್ನು ಬಿಟ್ಟುಬಿಡಬೇಕು, ನಮ್ಮಲ್ಲಿಯೂ ಕೆಲ [illegible] ವಾಸಿ ಹುಟ್ಟಿರುವರು; ಇವರಿಗೆ ಹಾಳು ಹರಟೆಗಳನ್ನು ಹರಡುವ ದುಷ್ಪ್ರವೃತ್ತಿಯೊಂದಿದೆ. ಜಾತಿಗಳೊಳಗೆ ಹಗೆತನ ಬಿತ್ತಿ. ಇದೊಂದು ಕೃತ್ರಿಮೋಪಾಯವನ್ನು ರಾಜಕೀಯ ಉಪಾಯವಾಗಿ ಕೆಲವರು ಕೈಗೂಡಿಸಿರುವರು. ವಿದ್ಯಾರ್ಥಿಗಳು ನ[illegible] ಕೈಗೊಳ್ಳುವುದನ್ನು ಖಂಡಿಸಬೇಕಾಗಿದೆ. ಪೂರ್ಣ ಸ್ವಾತಂತ್ರ್ಯವು ತಾನಾಗಿ ಇನ್ನು [illegible] ವರ್ಷಗಳಲ್ಲಿ ಬರುವುದು ಖಂಡಿತ, ಇದು ಮೊದಲಾಗ ಜಾತಿಯೇ ಮೊದಲಾದ [illegible] ಒಂದೇ [illegible]

ಆದರೆ

ನ[illegible] ದೀರ್ಘಗಳಲ್ಲಿ [illegible] ಇತರ [illegible] ಗಳಲ್ಲಿ [illegible] ಎಲ್ಲ [illegible] ಗಳನ್ನು ಪ್ರಯತ್ನಿಸಿ ಕೊಂಡು [illegible] ಒಂದು [illegible] ಬಹುದೆಂದು ನಂಬಿದ್ದ [illegible] ಇಂಗ್ಲಿಷು [illegible] ಬೇಕು. [illegible] ವಿದ್ಯಾರ್ಥಿ[illegible] ದ್ವಾನಗಿ [illegible] ಕೊಡಬೇಕು. [illegible] ಸೂಚಿಸಿದರು. ಇದರಿ ನಲ್ಲ ವಿದ್ಯಾರ್ಥಿ[illegible] [illegible] ಸಭಾಂಗಣವನ್ನು ಸನ್ಮರ್ಥಿಸಿದ

ಜನ್ನಾರವರ ದೂರುಗಳು : : : : : : : : : : ನೆಹರುರವರ ಉತ್ತರ

ಕೊಂಗ್ರೆಸಿಗಾಗಲಿ, ಲೀಗಿಗಾಗಲಿ ಸೇರದಿರುವ ಸ್ವತಂತ್ರಾಭಿಪ್ರಾಯ ಕೊಡಬಲ್ಲ ಪ್ರವೀಣರು,—ಜನ್ನಾರವರು ಕೊಂಗ್ರೆಸು ಸರಕಾರಗಳ ಆಡಳಿತದ ವಿಷಯ ಹೇಳಿದ ದೂರುಗಳನ್ನು ವಿಚಾರಿಸಿ ಇತ್ಯರ್ಥಿಸ ಬೇಕಾಗಲಿ ಎಂದು ಜವಾಹರಲಾಲರು ತಿಳಿಸಿರುವರು.

ಕೊಂಗ್ರೆಸು ಸರಕಾರಗಳು ಅತ್ಯಾಚಾರ ನಡೆಸಿವೆ ಎಂದು ಲೀಗ್ [illegible] ಜನ್ನಾರವರು ಹೇಳಿದ ನರ [illegible] ಇದು ನಿಜವಾಗಿಯೂ ಮಹಾ ಅಪರಾಧವನ್ನು, ಕೊಂಗ್ರೆಸಿನ ನೀತಿ ಮೊಟಕಿಸಿದುತ್ತಾಗಿದೆ ಅತ್ತ ಬಂಗಾಳದ [illegible] ಮಂತ್ರಿ ಹಕ್ಕರೂ ಸದೇಶದ [illegible] ಗಳನ್ನು ಉಪಯೋಗಿಸಿರುವರ [illegible] ವಿವರ ತಿಳಿಸಿದರೆ [illegible] ತಿಳಿಸಿ!

[illegible] ಸರ್ಕಾರ [illegible] ಗಳನ್ನು [illegible] ನೆಹರು [illegible]

ನೆಹರು [illegible] ಜನ್ನಾರೆಂದರು. ಸರಕಾರವು ಅತ್ಯಾಚಾರ ನಡೆಸಿದ [illegible]

[illegible]

ಸತ್ಯವನ್ನು ಕಂಡುಹಿಡಿಯಲು ಒಂದು ನ್ಯಾಯವಾದ ಸಮಿತಿ ನೇಮಕ ಹೊಂದಿದರೆ ನಷ್ಟವೇನು? ನಿಷ್ಪಕ್ಷವಾದ ವಿಚಾರಣೆ ನಡೆದು ಸತ್ಯಸ್ಥಿತಿ ತಿಳಿದು ಬಂದರೆ, ಮುಂದೆ ಮಾಡತಕ್ಕುದೇನೆಂಬುದನ್ನು ನಿರ್ಧರಿಸ ಬರುವುದು. ಜಿನ್ನಾರವರ ಇಬ್ಬರ ಮುಖವರು ನ್ಯಾಯಾಧೀಶರನ್ನು ನಿರ್ಣಯಿಸಲಿ ಇವರಿಗೆ ಬೇಕಾಗಿರುವ ಸಾಕ್ಷಿ [illegible] ಪ್ರಾಂತ್ಯದ ಸರಕಾರವು [illegible] ಒದಗಿಸದಿರದು

[illegible] ಅತ್ಯಾಚಾರಗಳನ್ನು ಆ ನ್ಯಾಯಾಧೀಶರು ವಿಚಾರಿಸಲಿ [illegible] ಅನ್ಯಾಯ ಮಾಡಿತು ಎಂಬುದನ್ನು ತಿಳಿಯೋಣ. ಬೇಕಾದಷ್ಟು ವಿವರವಾಗಿ ಸೂಕ್ಷ್ಮ ವಿಚಾರಣೆ ನಡೆಯಲಿ ಇದಾದ ಬಳಿಕ, ಇನ್ನಿತರ ಅತ್ಯಾಚಾರಗಳನ್ನು ವಿಚಾರಿಸಿಕೊಳ್ಳೋಣ,

ಸಾರ್ವಜನಿಕವಾಗಿ ಅತ್ಯಾಚಾರಗಳ ಹೆಸರೆತ್ತಿ [illegible] ಉದಾಹರಣೆಗಳ [illegible] ವಾಗಿ [illegible] ಬರಲಿ

ಇನ್ನು ಏಳುಬೇಕೆ? ಈ ಸೂಚನೆಯನ್ನು ಪ್ರಾಂತಿಕ ಮಂತ್ರಿಮಂಡಲವು [illegible] ಬೆಂಬಲಿಸಬೇಕು,

ಪಲೆಸ್ತೀನ ಕಾಂಡ

[illegible]

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತವೆ

ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತವೆ

Allamgir Leather Store,
28 Meachua Bazar St CALCUTTA

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರೇ, ನಮ್ಮ "ಸಾರಥಿ ನಶ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕೆ ನಶ್ಯವು ಮನಸ್ಸನ್ನು ಉತ್ತೇಜನಗೊಳಿಸುತ್ತದೆ ಎಲ್ಲರ ರುಚಿಗೆ ತಕ್ಕುದಾಗಿ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ.

ಸಾರಥಿ ನಶ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ. ೧ ಸಾರಥಿ ನಶ್ಯ 1 ಪೌಂಡಿಗೆ ರೂ 1—2—0 ನಂ. ೨ ಸಾರಥಿ ನಶ್ಯ 1 ಪೌಂಡಿಗೆ ರೂ. [illegible]—0

(ವಿ. ಪಿ ಮತ್ತು ರೈಲ್ವೆ ಚಾರ್ಜು ಪ್ರತ್ಯೇಕ)

ಏಜೆಂಟರು ಬೇಕಾಗಿದ್ದಾರೆ

ವಿಳಾಸ:—

ಎ ಪಿ ಸಾರಥಿ

ಮೆನ್ಯುಫೆಕ್ಚರರ್ಸ್ ಒಫ್ ಬ್ಲೆಂಡ್ಸ್ ಸ್ನಫ್, ಪಿ. ಬಿ ನಂಬ್ರ 47 ಮದ್ರಾಸು

ಬರೇ ರೂ 1—4—0ಕ್ಕೆ 3 ಗಡಿಯಾರಗಳು ಮತ್ತು 1295 ಫ್ರೀ ಬಹುಮಾನಗಳು

ಒಂದೇ ಬಾರಿಗೆ ರೂ 1—4—0ಕ್ಕೆ [illegible] ಮತ್ತು [illegible] 2 ಗೋಲ್ಡ್ [illegible] 1 ಪೌಂಟೆನ್ ಪೆನ್ [illegible] ಒಂದು [illegible] ಒಂದು [illegible] 11 ಕರೆಟ್ ರೋಲ್ಡ್ ಗೋಲ್ಡ್ [illegible] ಒಂದು ಸೆಟ್ [illegible] ಒಂದು ಡಜನ್ [illegible] 300 ಪೀಟ್ [illegible] 10 ವರ್ಷ ಗ್ಯಾರಂಟಿ [illegible] ಒಂದು [illegible] ಪೆಕಿಂಗ್ ಮತ್ತು ಪೋಸ್ಟೇಜು ಖರ್ಚು 0—14—0 ಪ್ರತ್ಯೇಕ



The American Commercial Stores, Post Box No 12213 Calcutta (S. A.)

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

O S No 120 1938

ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ ಇದರ ಕಾಸರಗೋಡು ಬ್ರಾಂಚ ಏಜಂಟ್ ( ) ವಿಟ್ಠಲ್ ಶೆಣೈ — ವಾದಿ

ಮತ್ತು

1 C K ರಾಮನ್ ನಂಬ್ಯಾರ್ B A, T C ರಾಮನ್ ನಂಬ್ಯಾರ ರಾಜರವರ ಮಗ
2 ಕಾಟ್ಯಾನ ಕೃಷ್ಣನ್, ಕಾಟ್ಯಾನ ಕುಂಟು ಎಂಬವನ ಮಗ ನ್ಯಾ[illegible] ನಾರಸ ಕಾಸರಗೋಡು ತಾಲ್ಲೂಕು ನೀಲೇಶ್ವರ ಗ್ರಾಮದಲ್ಲಿರುವವರು — ಪ್ರತಿವಾದಿ

ಇವರೊಳಗೆ ತಾ 3—1—39

ವಾದಿ ಕಡೆಯಿಂದ ನೋಟೀಸು.

ಪ್ರತಿವಾದಿಯು ಯೋಗ್ಯರಾಗಿ ವಾದಿ ಬೇಂಕಿಗೆ ಬರಕೊಟ್ಟ ಪ್ರೋನೋಟಿನ ಬಾಬ್ತು ಬಡ್ಡಿ ಸಹಿತ ರೂಪಾಯಿ 2198—4—0ಕ್ಕೆ ವಾದಿಯು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಸದ್ರಿ ವ್ಯಾಜ್ಯವು ತಾರೀಕು 19-1-1939ಕ್ಕೆ ಮೊದಲು ವಿಚಾರಣೆಗೆ ಇಡಲ್ಪಟ್ಟಿರುವುದರಿಂದ ಪ್ರತಿವಾದಿಯು ಆ ದಿವಸ ಹಾಜರಾಗದಿದ್ದರೆ ಎಕ್ಸಪಾರ್ಟಿ ತೀರ್ಪು ವಿಧಿಸಲ್ಪಡುವದೆಂಬ ಸಂಗ್ರತಿ [illegible] ತಿಳಿಸಲಾಗಿದೆ.

KASARAGOD 3—1—1939 } **K. P. Madhava Rao,** *Advocate for Plaintiff*

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕಣ್ಣಾನೂರು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟು

O S No 35/1937

R E P No 798/1938

ಮೈಕಿಂದ ನಫ [illegible] — ಅರ್ಜಿದಾರರು — ವಾದಿರು ನಾರಿ ನ್ಯಾರರು

ಚಿರಕ್ಕಲ್ ಅಬ್ದುಲ್ಲಕಾದರ್ [illegible] ಸ್ವನ ಮಗ ನೀಲೇಶ್ವರ ಗ್ರಾಮ ದಲ್ಲಿರುವವರ ಇವರೊಳಗೆ, — ಪ್ರತಿವಾದಿ

ರೆಸ್‌ಪೋಂಡೆಂಟರ ಸ್ಥಿರಾಸ್ತಿ [illegible] ಉದ್ದೇಶ [illegible] ಮಂಜೂರು ಮಾಡಬೇಕೆ [illegible] ಅರ್ಜಿದಾರರಿಗೆ [illegible] ಮೇಲ್ಕಂಡ ಅ[illegible] ತಾ 19—1—1939 [illegible] ಆ ಕುರಿತು ರೆಸ್‌ಪೋಂಡೆಂಟಿಗೆ ಆಕ್ಷೇಪ ಇರುವ ಪಕ್ಷದಲ್ಲಿ ಸದ್ರಿ ತಾರೀಕಿನೊಳಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಬೇಕೆಂಬ ಸಂಗತಿ ಈ ನೋಟೀಸು ಮೂಲಕ ತಿಳಿಸಲಾಗಿದೆ

ಕಾಸರಗೋಡು ತಾ 6 1 39 } **C. Rama Rao,** ಅರ್ಜಿದಾರರ ವಕೀಲರು

ಅರಬರಾಜ್ಯಗಳ ಕೂಟವಾದೀತೆ?

('ನ್ಯೂಯೋರ್ಕ ಟೈಮ್ಸ್'ನಿಂದ)

ಸರ್ವ ಅರಬರು ಒಂದಾಗಬೇಕೆಂಬ ಅದೊಂದು ಚಳವಳಿಯುಂಟು. ಅರಬರಿಗೂ ಬ್ರಿಟಿಷರಿಗೂ ಪೆಲೆಸ್ತೀನದಲ್ಲಿ ಆಗುತ್ತಲೇ ಇರುವ ಕಾದಾಟವು ಅದರದೊಂದು ಕುರುಹು. ಇದೂ ನಿಲ್ಲುತ್ತಿಲ್ಲ, ಆ ಚಳವಳವೂ ಬೆಳೆಯುತ್ತಲೇ ಬರುತ್ತದೆ.

ಈ ಅರಬ ಚಳವಳವೆಂಬುದು ಒಂದು ರಾಷ್ಟ್ರೀಯ ಚಳವಳಿ. ಇಂತಹ ಚಳವಳಗಳು ಇಲ್ಲಲ್ಲಿನ ರಾಷ್ಟ್ರಗಳಲ್ಲಿ ತೋರಿಬರುತ್ತ ೧೯೩೭ರಲ್ಲೇ ವಿಮರ್ಶಾಪೂರ್ವಕವಾಗಿ ತಿಳಿದುಕೊಂಡೇ ಇದ್ದು, ಪೆಲೆಸ್ತೀನವನ್ನು ವಿಭಜಿಸುವ ಕ್ರಮ ಸೂಚಿಸುವಾಗ ವಿವರಿಸಿಯದೆ. ಪೆಲಿಸ್ತೀನ ಸಮಸ್ಯೆ ಎಂದರೆ ರಾಷ್ಟ್ರೀಯಭಾವದ ಉತ್ತೇಜನದ ಸಮಸ್ಯೆ ಎಂದು ರಿಪೋರ್ಟ ತಿಳಿಸಿಯದೆ.

ಪೆಲೆಸ್ತೀನದಲ್ಲಿ ಕಂಡು ಬರುವ ಈ ಅರಬ ರಾಷ್ಟ್ರೀಯತೆಯು, ಎಲ್ಲ ಅರಬ ಪ್ರಾಂತ್ಯಗಳಲ್ಲಿನ ರಾಷ್ಟ್ರೀಯತೆಯ ಭಾವನೆಯದ್ಯೋತಕವಾಗಿಯೇ ಇದೆ ಎಂದು ಸಾರಬಹುದು. ಎಲ್ಲ ಅರಬರಾಜ್ಯಗಳು ಒಂದಾಗಬೇಕೆಂದೇ ಈ ರಾಷ್ಟ್ರೀಯತೆಯ ಉದ್ದೇಶವಿರುವುದು.

ಆದರೆ, ಅರಬರೆಲ್ಲರೂ ಒಂದಾಗುವರೇ? ಸಂಶಯವಿದೆ. ಮರುಭೂಮಿಯ ಸಂಚಾರೀ ಅರಬರು, ಪಟ್ಟಣವಾಸಿಯಾದ ಯೂರೋಪೀಯ ಜೀವನಕ್ರಮದ ಅರಬರನ್ನು ಮೆಚ್ಚುತ್ತಿಲ್ಲ. ಕ್ರಿಸ್ತ ಅರಬರು ಸಂಪೂರ್ಣವಾಗಿ ಮುಸ್ಲಿಮ ಅರಬರನ್ನು ನಂಬ ವುದಿಲ್ಲ. ಸೀರಿಯನ್, ಯೆಮೆನ್ ಮತ್ತು ಇರಾಕ್‌ಗಳ ಪ್ರಾಂತಿಕ ಅರಬರು ತಮ್ಮ ಸಂಕುಚಿತ ಪರಂಪರೆಗಳನ್ನು ಇನ್ನೂ ಮರೆತಿಲ್ಲವೆನ್ನಬೇಕು.

ಮತ್ತೊಂದಿದೆ, ಒಂದೇ ರಾಜ್ಯವಾಗುವಂತಾದರೂ, ಅದು ಎಂತಹ ಬಗೆಯ ರಾಜ್ಯಭಾರವುಳ್ಳದಾಗಬೇಕು ಎಂದು ಶಿಸ್ತಿನ ರಾಜಕಾರಣ ಬಲ್ಲ ಅರಬರಲ್ಲೇ ನಿಶ್ಚಿತವಾಗಿಲ್ಲ. ಪ್ರಜಾಪ್ರಭುತ್ವವೇ? ಸಾಮ್ರಾಜ್ಯವೇ? ಡಿಕ್ಟೇಟರು ರಾಜ್ಯವೇ? ಫೆಡರೇಶನೇ? ಅಥವಾ ಪ್ರತ್ಯೇಕ ಪ್ರಾಂತ್ಯಗಳೇ? ಏನೂ ನಿಶ್ಚಿತವಾಗಿಲ್ಲ.

ಈ ಸಮಸ್ಯೆಗಳಲ್ಲದೆ, ಈಗ ತಾನೆ ಅಂತರಾಷ್ಟ್ರೀಯ ಪ್ರಶ್ನೆಗಳಿದ್ದು, ಹೊಸ ಸಮಸ್ಯೆಗಳೂ ಉಂಟಾಗಿವೆ. ಬ್ರಿಟನ್ನಿಗೆ ಇಂಡಿಯಕ್ಕೆ ಹೋಗಲು ಸಮೀಪದ ಮಾರ್ಗಬೇಕೆಂದು ದೃಢ ಆಸೆಯುಂಟು. ಫ್ರಾನ್ಸ್ ಎರಡನೇ ದರ್ಜೆಯ ಸರಕಾರರಿಂದು ವ್ಹಿಶಿ ಸರಕಾರಕ್ಕೆ ಸಂಬಂಧಿಸಿ ಗೆ ಉಂಟಾದುದುಂಟು. ಬರ್ಲಿನಿನಿಂದ ಬಗ್ದಾದ್‌ವರೆಗೆ ಜರ್ಮನಿಗೆ ಮಾರ್ಗವೆಂಬ ಆ ಹಿಂದಿನ ಮಾತಿಗೆ ಈಗ ವಿಸ್ತೃತ ಜರ್ಮನಿಯ ವಿಶೇಷ ಮಹತ್ವವುಂಟು. ಮುಸೊಲಿನಿಯಂತೂ ಪದೇ ಪದೇ ಮುಸ್ಲಿಮ ಮೈತ್ರಿಗಾಗಿ ಸಾಧನೆ ಮಾಡುವುದಂತೂ ಉಂಟು.

ಹೀಗಿರುವಾಗ, ಅರಬರದೊಂದು ಪ್ರಬಲ ರಾಷ್ಟ್ರವಿದ್ದರೆ, ಯೂರೋಪಿನ ರಾಜಕಾರಣವೆಲ್ಲ ಬದಲಾಗಬೇಕಾಗುವುದು. ಅಂತಹ ರಾಜ್ಯವು ಇಟಲಿ ಯಾ ಜರ್ಮನಿಗಳ ಅಧಿಕಾರಕ್ಕೊಳಪಟ್ಟರೆ, ಇಂಗ್ಲೆಂಡಿಗೆ ಹಾನಿಯುಂಟು, ಫ್ರಾನ್ಸಿಗೆ ಸಾಮ್ರಾಜ್ಯ ಕಂಟಕವಾದೀತೆಂಬ ಬೇಸರವುಂಟು. ನಾಝಿಗಳಾಗಲಿ ಇಟಲಿಯಾಗಲಿ, ಈ ಅರಬರಾಜ್ಯಗಳನ್ನು ರಕ್ಷಿಸುವ ಸಮರ್ಥನ ಸೋಗಿಸುವ ಅಥವಾ ಘಟಿಸುವ ಭಾರ ಹೊತ್ತರೆ,— ಅಲ್ಲಿಗೆ ಈ ಸಮಸ್ಯೆಗಳೂ ಇನ್ನೂ ಕಠಿನವಾದಾವು.

ನಾಳಿನ ಭಾರತ

ಪವಾಯ ಯುನಿವರ್ಸಿಟಿಯ ಪ್ರೊಫೆಸರ ಸಿಂಕ್ಲೇರರೆಂಬವರು—ಚೋಂಪಾಯಿಯಲ್ಲಿರುವರು ಭಾರತದಲ್ಲಿ ಅವರು ಮೂರು ತಿಂಗಳು ಸಂಚಾರ ಮಾಡುತ್ತಲಿದ್ದು, ತಮ್ಮ ಅಭಿಪ್ರಾಯ ಮಾಡಿಕೊಂಡಿರುವರು

"ಈ ದೇಶವು ನಿಜವಾಗಿಯೂ ಅತ್ಯುತ್ತಮ ಭವಿಷ್ಯವುಳ್ಳದ್ದಾಗಿದೆ. ಆದರೆ, ಭೂತಕಾಲದ ಕೃತಿಗಳು ಇದನ್ನು ಅದಿಗೊತ್ತಿವೆ. ಆ ಅಪೂರ್ವ ಗೌರವದ ಭೂತಕಾಲಕ್ಕೂ ಮೀರಿ, ಭವಿಷ್ಯವು ಇನ್ನೂ ಅತಿಶಯ ಗೌರವದ್ದಾಗಿ ಮುಂದೆ ತೋರದಿರಲಾರದು. ಈಗಣ ವಿದ್ಯಾರ್ಥಿಗಳು ಬೆಳೆದು ಬರುತ್ತಲೇ ಮುಂದೆ, ಇವರ ದೇಶ ಸೇವೆಯಿಂದ ದೇಶವು ಉದ್ಧಾರ ಹೊಂದದಿರದು."

ಸಿಂಧ ಎಸೆಂಬ್ಲಿಯಲ್ಲಿ ಮುಸ್ಲಿಮಲೀಗಿನವರ ಆಕ್ಷೇಪ

ಮುಸ್ಲಿಮ ಲೀಗಿನ ಮೆಂಬರರೊಬ್ಬರು ಎಸೆಂಬ್ಲಿಯಲ್ಲಿನ ಲೀಗ್ ಮೆಂಬರರನ್ನು ಕುರಿತಾಗಿ ಶ್ರೀ ಜಿನ್ನಾರವರಿಗೆ ಹೀಗೆ ವಾರ್ತೆ ಕಳಿಸಿರುವರು —

"ಇಲ್ಲಿನ ಎಸೆಂಬ್ಲಿ ಪಕ್ಷವು (ಲೀಗಿನ) ತತ್ವಗಳನ್ನು ಮೂಲೆಗೊತ್ತಿ, ಕೇವಲವಾಗಿ ಅಲ್ಲಾಬಕ್ಷರನ್ನು ಸೋಲಿಸುವ ಒಂದೇ ಉದ್ದೇಶದಿಂದ ಕೊಂಗ್ರೆಸು ಮೆಂಬರರೊಡನೆ ಸಹಕರಿಸುತ್ತಲಿದೆ.

ಜನರಿಗೆ ಹೆಚ್ಚಿನ ಅನುಕೂಲತೆಗಳನ್ನು ಕೊಡುವುದನ್ನು ಎದುರಿಸಿ ಸರ್ ಗುಲಾಮ ಹಿದಾಯತುಲ್ಲಾರವರು ಸೂಚಿಸಿದ್ದರೂ, ಅವರ ಮಾತನ್ನು ವಿರೋಧಿಸಿ, ಲೀಗ್ ಮೆಂಬರರೆಲ್ಲರು ಕೊಂಗ್ರೆಸಿನವರೊಡನೆ ಸೇರಿ ವೋಟು ಕೊಟ್ಟರು.

ಇದರಿಂದ ಸರಕಾರದ ಆಯವು ಇಳಿಯಿತು. ಜನಹಿತಕರವಾದ ಯಾವ ಕೃತಿಗಳಿಗೂ ಹಣ ಕಡಮೆಯಾಯಿತು!"

—ಇಂತಹರ ಮನೋವೃತ್ತಿ ವಿಚಿತ್ರವಾಗಿದೆ!

ಮದರಾಸು ಸರಕಾರದ
ಇವೇ ಎಂಟು ತಿಂಗಳ ಆಡಳಿತ

ಮದ್ರಾಸು ಸರಕಾರವು ಇವೆಂಟು ತಿಂಗಳಲ್ಲಿ ನಡೆಸಿದ ಕಾರ್ಯಭಾರದ ವೃತ್ತಾಂತವು ಪ್ರಕಟವಾಗಿದೆ. ಆಯವ್ಯಯವು ಅಷ್ಟು ಧೈರ್ಯ ಕೊಡುವುದಾಗಿಲ್ಲ. ಆದರೆ, ಈ ಅಂಕಸಂಖ್ಯೆಗಳೇ ಮಾತ್ರ ವರ್ಷಾಂತ್ಯದ ವರೆಗೂ ಹೀಗೆಯೆ ಬೆಳೆದಾವು ಎನ್ನುವುದಕ್ಕಿಲ್ಲ. ಪ್ರತಿವರ್ಷವೂ ಕೊನೆಯ ನಾಲ್ಕು ತಿಂಗಳಲ್ಲಿ,— ಅದೇ ವರ್ಷದ ಆದಾಯ ಕಂಡಾಯವು ಕೂಡಿಕೆಯಾಗುವುದೂ, ಅದೇ ವರ್ಷದ ಅರೆವಾಸಿ ವ್ಯಯವೂ ನಡೆಯುವುದೂ ಅನುಭವಸಿದ್ಧವೇ ಆಗಿದೆ. ಹೀಗಾಗಿ, ಡಿಸೆಂಬರು ಮತ್ತು ಮಾರ್ಚ ತಿಂಗಳುಗಳೊಳಗೆ ಬಜೆಟ ಅಂಕಸಂಖ್ಯೆಗಳ ಸ್ಥಿತಿಯೇ ಬೇರೆಯಾಗುವುದಾಗಿದೆ.

ಈ ವರ್ಷ ಎಷ್ಟೋ ಕಡೆ ಮಳೆ ಸುರಿದಿದೆ, ನೆರೆಹೆಚ್ಚಾಗಿದೆ, ಬೆಳೆಕೆಟ್ಟಿದೆ. ಇನ್ನೆರಡು ಜಿಲ್ಲೆಗಳಿಗೆ ಮದ್ಯನಿಷೇಧದಿಂದ ಆಕ್ರಹ ಹೆಚ್ಚಾಗಿತಗ್ಗಲಿದೆ. ಹೀಗಾಗಿ, ಮೊದಲನೆ ಎಂಟು ತಿಂಗಳಲ್ಲಾದ ನಷ್ಟವನ್ನು ಕೊನೆಯ ನಾಲ್ಕು ತಿಂಗಳು ತುಂಬಿಸಿಕೊಡಬಹುದೋ ಹೇಳಲು ಸುಲಭವಾಗಿಲ್ಲ.

ಆಯವು ೨೫ ಲಕ್ಷ ಕಡಮೆಯಾಗಿದೆ, (ಕಳೆದ ವರ್ಷದ ಇವೇ ಎಂಟು ತಿಂಗಳ ಸಂಖ್ಯೆ ಹೋಲಿಸಿದರೆ ತೋರುವುದು) ಅದೇ ಅವಧಿಯಲ್ಲಿ ವ್ಯಯವು ೭೭ ಲಕ್ಷ ಹೆಚ್ಚಾಗಿದೆ. ಚಿಲ್ಲರೆ ಬಂದರುಗಳ ಫಂಡನ್ನು ಇದರ ಭರ್ತಿಗೆ ಕೂಡ ಹಾಕಿದರೂ, ನಷ್ಟವು ವರ್ಷಾಂತ್ಯದಲ್ಲಿ ಕಡಿಮೆ ಬಾರದಿರದು.

ಹೊಸ ತೆರಿಗೆಗಳನ್ನು ವಿಧಿಸಲು ಬರುವ ವರ್ಷಕ್ಕೆ ತುಂಬ ಅವಕಾಶವಿರುವಂತೆ ಕಾಣುತ್ತದೆ. ಇದೆಷ್ಟೋ ಅಗತ್ಯವೆಂದರೂ ಮಂತ್ರಿ ಮಂಡಲವು ಜಲಪ್ರಿಯತೆಯಲ್ಲಿ ಕುಂದಬಹುದಾಗಿದೆ. ಮದ್ಯಪಾನ ನಿವಾರಣೆಯ ಆಕ್ಟನ್ನು ಇನ್ನಷ್ಟು ಜಿಲ್ಲೆಗಳಿಗೆ ಹಚ್ಚಿದರೆ, ವ್ಯಯಾಧಿಕ್ಯವೇ ಕಂಡುಬಾರದಿರದು.

ನಾಳಿನ ಬಜೆಟು ಈ ಮಂತ್ರಿಮಂಡಲದ ಪರೀಕ್ಷಾ ಪತ್ರ. ಮದ್ಯ ನಿವಾರಣೆಯನ್ನು ಪರಿಪೂರ್ಣ ಜ್ಯಾರಿಗೆ ತರುವುದು ಕಷ್ಟವಾಗದಿರದು. ವ್ಯಯವನ್ನು ತೀರ ಇಳಿಸದೆ, ಹೊಸ ಆಯಗಳನ್ನು ಹುಡುಕದೆ ಈ ನಿವಾರಣೆ ಸಾಧ್ಯವೇ ಅಲ್ಲ.

ಸರಕಾರದ ಇಲಾಖಾಧೀಸರರ ಸಂಬಳ ಇಳಿಸಲಾಗಿದೆ. ಆದರೆ, ಜನಹಿತಕಾರ್ಯಗಳ ಸಲುವಾಗಿ ಖರ್ಚು ಹೆಚ್ಚಬೇಕಾಗಿದೆ.

ಸರಕಾರವು ಎತ್ತಿರುವ ಸಾಲಗಳಲ್ಲಿ ಜನರು ವಿಶ್ವಾಸವನ್ನಿಟ್ಟಿರುವರು. ಬಜೇಟು ಮುಂದೆ ಯಾವ ಅಂಕಸಂಖ್ಯೆಗಳನ್ನು ತೋರಿಸಬಹುದೋ, ಅದನ್ನು ನೋಡಿ, ಮುಂದಣ ಸಾಲಗಳಲ್ಲಿ ವಿಶ್ವಾಸವಿಡಬಂದೀತೆಂದು ಎಲ್ಲರ ಊಹೆ.

ವೈಸ್ರಾಯರ ಭಾಷಣ
ಕೊಚ್ಚಿರಾಜ್ಯದಲ್ಲಿ ಸಂಚಾರ ಕಾಲದಲ್ಲಿ.

ಐಕ್ಯವು ನಮ್ಮೆಲ್ಲ ದೇಶಪ್ರಿಯರಿಗೆ ಆಗಬೇಕಾಗಿದೆ. ಫೆಡರೇಶನ್ ಜಾರಿಗೆ ಬಾರದೆ ಈ ಐಕ್ಯಸಾಧನೆ ಮುಂದೆ ಸಾಗದು. ಐಕ್ಯವಾಗಬೇಕೇ ಮಾತ್ರವಲ್ಲದೆ, ಐಕ್ಯವು ಭಂಗವಾಗದಂತೆಯೂ ಎಚ್ಚರವಿರಬೇಕು. ಆಧುನಿಕ ಪ್ರಪಂಚದ ವಿದ್ಯಮಾನಗಳಲ್ಲಿ ಈ ಕರ್ತವ್ಯವೇ ಮೊದಲನೆಯದಾಗಿದೆ.

ಈಗ ಐಕ್ಯಸಾಧನೆಗೆ ಯೋಗ್ಯ ಮುಹೂರ್ತವೊದಗಿದೆ. ರಾಜಕೀಯ ವಿಚಾರಗಳಲ್ಲೂ ಐಕ್ಯವು ಸಾಧ್ಯವಿದೆ. ಭಾರತ ವರ್ಷದ ಎಲ್ಲ ಅಂಗಾಂಗಗಳ ರಕ್ಷಣೋಪಾಯ ಮಾಡೆಯೂ ಇದೇ ದೇಶವನ್ನು ಒಂದಾಗಿಸಲು ಅನುಕೂಲವುಂಟು.

ನೂರು ವರ್ಷ ಮಹಾಯುದ್ಧ
ಜಪಾನಿನ ಹೇಳಿಕೆ

ಜಪಾನಿನ ಸಾಮ್ರಾಜ್ಯವಾದಕ್ಕೆ ಅನುಕೂಲವಾಗಿ, ಜಪಾನು ಇನ್ನೊಂದು ಶತಮಾನದ ತನಕವೂ ಮಹಾಯುದ್ಧವನ್ನು ಕೈಕೊಳ್ಳುವುದೆಂದು ಸೈನಿಕ ಅಧಿಕಾರಿಯೊಬ್ಬರು ಟೋಕಿಯೋದಲ್ಲಿ ಸೂಚಿಸಿರುವರು. ಈ ವಿಷಯವಾಗಿ ಅವರು ಬರೆದ ಲೇಖಗಳಲ್ಲಿ ಮೊದಲನೆಯದು ಈಗ ಪ್ರಕಟವಾಗಿದೆ.

ಪೂರ್ವ ಏಶ್ಯಖಂಡದ ಪುನರ್ನಿರ್ಮಾಣಕ್ಕೆ ಜಪಾನು ಸಾಮ್ರಾಜ್ಯದ ಸೂಚನೆಯಿದ್ದುದರ ಅಭಿಪ್ರಾಯವೆಂದರೆ, ಈಗ ಪ್ರಪಂಚದಲ್ಲಿ ಉಂಟಾಗಿರುವ ಗೊಂದಲವನ್ನು ಹೋಗಲಾಡಿಸಿ, ಹೊಸ ಪ್ರಪಂಚವನ್ನೆ ಜಪಾನು ಸೃಷ್ಟಿಸಬೇಕಾಗಿದೆ ಎಂದರ್ಥ.

ಪೂರ್ವ ಏಶ್ಯದಲ್ಲಿ ಮೊಲ್ದಿನ ವಸಾಹತುಗಳನ್ನು ಸ್ಥಾಪಿಸಿ, ಪಾಶ್ಚಾತ್ಯ ರಾಜ್ಯಗಳು ನಲಿಸಿಂತುವು. ಚೀನದಲ್ಲಿ ಈಗ ನಡೆದ ಸಂಘರ್ಷಗಳ ನಿವಾರಣೆಯಾಗುವುದೆಂದರೆ, ಈ ಭಾಗದಲ್ಲಿ ಹೊಸ ಜಗತ್ತನ್ನೇ ಸೃಷ್ಟಿಸುವ ಕೆಲಸ ಇದೇ ಜಪಾನು ಜನಾಂಗವು ತನ್ನದೆಲ್ಲವನ್ನೂ ಮುಂದೊಡ್ಡಿ, ಈ ಕಾರ್ಯವನ್ನು ಸಾಧಿಸುವುದಾಗಿದೆ.

ಯೂರೋಪಿನ ಸದ್ಯದ ದುಸ್ಥಿತಿಯನ್ನು ನೋಡಿದರೆ, ಇತಿಹಾಸದ ಮತ್ತು ವಾಸ್ತವಿಕ ದೃಷ್ಟಿಯಿಂದಲಾದರೂ, ಇದೇ ಪ್ರಪಂಚವನ್ನು ಉದ್ಧರಿಸಬಲ್ಲ ಜನಾಂಗ ಒಂದೇ ಇದೆ ಎಂದು ಸ್ಪಷ್ಟವಾಗುವುದು. ಅದೇ ಜಪಾನು.

ಇಷ್ಟಿದು ಮೊದಲನೆ ಲೇಖದ ಸಾರಾಂಶ.

ಲೋಧ್ರ
ಗರ್ಭಾಶಯ ರೋಗನಿವಾರಿಣಿ

ಹೆಂಗಸರಿಗೊಂದು ವರದಾನ

ಯೌವನ ಸಮಯದಲ್ಲಿ ಬಹಿಷ್ಟೆಯ ದೋಷ, ಬಹಿಷ್ಟೆಯಾಗುವಾಗ ಉಂಟಾಗುವ ನೋವು, ಸಮಯಕ್ಕೆ ಸರಿಯಾಗಿ ಬಹಿಷ್ಟೆಯಾಗದಿರುವುದು, ಗರ್ಭಹೋಗುವುದು, ಬಂಜೆತನ, ಸೂತಿಕಾವಾಯು, ಮುಂತಾದ ಇತರ ಹೆಂಗಸರ ಎಲ್ಲಾ ರೋಗಗಳು ಈ ಔಷಧಿಯಿಂದ ಗುಣವಾಗುತ್ತದೆ.

ಲೋಧ್ರ

ಎರಡು ಸೈಜಿನ ಬಾಟ್ಲಿಗಳಲ್ಲಿ ದೊರೆಯುತ್ತದೆ
ರೂಪಾಯಿ 3 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ ಮತ್ತು ಡ್ರಗಿಸ್ಟ್ಸ
ರೋಯಪೆಟ್ಟ, ಮದ್ರಾಸು

FANCY SHIRTING

Snow white very soft decent and durable. 9 yds × 54" sufficent for 6 shirts. Price 5—8—0 Post free. money refunded if unapproved Half dozen fancy handkerchiefs 22"×22" will be given to every purchaser

AGENTS WANTED EVERY WHERE ASK FOR FREE PARTICULARS.

NATIONAL TRADING CO.,
LUDHIANA. A. 211.

ಮಂಗಳೂರು ಸಮಾಚಾರ

ದ. ಕ. ಜಿಲ್ಲಾ ಹರಿಜನ ಮುಖಂಡರ ಸಭೆ

ದ ಕನ್ನಡ ಜಿಲ್ಲಾ ಹರಿಜನ ಲೀಗಿನವರು ಒಂದು ಹರಿಜನ ಪರಿಷತ್ತನ್ನು ಜರಗಿಸುವುದಕ್ಕಾಗಿ ಒಂದು ಸುಸ್ವಾಗತ ಕಮಿಟಿಯನ್ನು ರಚಿಸುವ ಬಗ್ಗೆ ಇದೇ ತಿಂಗಳ 14ನೇ ಶನಿವಾರ ಬೆಳಿಗ್ಗೆ ಗಂಟೆ 10ಕ್ಕೆ ಸರಿಯಾಗಿ ಬಿ. ಇ. ಎಮ್. ಶಾಲೆಯಲ್ಲಿ ದ. ಕ. ಜಿಲ್ಲಾ ಹರಿಜನ ಮುಖಂಡರ ಒಂದು ಸಭೆಯು ಜರಗುವುದು

ಸ್ವಾಸ್ಥ್ಯ ಸಂಘ

ಮಂಗಳೂರಿನ ಸ್ವಾಸ್ಥ್ಯ ಸಂಘದವರಿಂದ ಮೂಡಬಿದ್ರೆಯಲ್ಲಿ ಪ್ರಾರಂಭಿಸಲ್ಪಟ್ಟ ತರಬೇತಿಯ ಶಿಬಿರವು ಕಳೆದ ತಾ 1ರಲ್ಲಿ ಕೊನೆಗೊಂಡಿತು. ಶ್ರೀ ಕರಂಜೆ ಶ್ಯಾಮರಾಯರ ಅಧ್ಯಕ್ಷತೆಯಲ್ಲಿ ತರಬೇತಾದವರಿಗೆ ಸರ್ಟಿಫಿಕೇಟನ್ನು ಹಂಚಲಾಯಿತು

ಮುಸ್ಲಿಂ ವೆಲ್ಫೇರ್ ಲೀಗ್

ಮಂಗಳೂರು ವೆಲ್ಫೇರ್ ಲೀಗಿನ ವಾರ್ಷಿಕೋತ್ಸವವು ಕಳೆದ ತಾ 8ರಲ್ಲಿ ದ ಕ ಜಿಲ್ಲಾ ವಿದ್ಯಾ ಅಧಿಕಾರಿಗಳಾದ ಜನಾಬ್ ದಸ್ತಗಿರ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರುಗಿತು

ಮೋಟಾರು ಕೆಲಸಗಾರರ ಸಂಘ

ದಕ್ಷಿಣ ಕನ್ನಡ ಜಿಲ್ಲಾ ಮೋಟರ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆಯು ಕಳೆದ ತಾ 7ರಲ್ಲಿ ಶ್ರೀಮತಿ ಕಮಲಾದೇವಿ [illegible] ವರ ಅಧ್ಯಕ್ಷತೆಯಲ್ಲಿ ಫೆಲಿಕ್ಸ್ ಪೈ ಬಜಾರಿನಲ್ಲಿ ನಡೆಯಿತು.

ಮುನಿಸಿಪಲ್ ಕಮಿಷನರರ ವರ್ಗ

ನಮ್ಮ ಮುನಿಸಿಪಲ್ ಕಮಿಷನರರಾದ ಶ್ರೀ [illegible] ಕುಂಡನಾ [illegible] ಯವರು ಕುಂಬಕೋಣಕ್ಕೆ ವರ್ಗಾಯಿಸಲ್ಪಟ್ಟಿದ್ದಾರೆ. [illegible] ಕಮಿಷನರರಾದ ಶ್ರೀ [illegible] ಎನ್ ಕಣ್ಣಯ್ಯ ವರು ನಮ್ಮ ಮುನಿಸಿಪಾಲಿಟಿಯ [illegible] ರಾಗಿ ನೇಮಕ ಹೊಂದಿದ್ದಾರೆ

ರಾಮಸ್ವಾಮಿ ಮೆನೋನರ ನಿಧನಕ್ಕಾಗಿ ಕೋರ್ಟುಗಳು ಮುಚ್ಚಲ್ಪಟ್ಟವು

ಮದ್ರಾಸು ಸರಕಾರದ ಕಾರ್ಮಿಕ ಮತ್ತು [illegible] ಮಂತ್ರಿಗಳಾದ ಶ್ರೀ ರಾಮಸ್ವಾಮಿ ಮೆನೋನರ ನಿಧನಕ್ಕಾಗಿ ತಾ 6ರ ದಿನ ಸೆಶನ್ ಕೋರ್ಟು, ಜಿಲ್ಲಾ ಕೋರ್ಟು ಮತ್ತು ಮುನ್ಸಿಫ್ ಕೋರ್ಟುಗಳು ಮುಚ್ಚಲ್ಪಟ್ಟವು. ಜಿಲ್ಲಾ ಕೋರ್ಟಿನಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರರಾದ ಶ್ರೀ ಯಂ ಕೆ [illegible] ದಿವಂಗತರ ಗುಣಕಥನವನ್ನು ಮಾಡಲು, ಜಡ್ಜರಾದ ಶ್ರೀ [illegible] ರಾಜಗೋಪಾಲಾಚಾರ್ಯರು ಅನುಮೋದಿಸಿದರು. ಸಬ್ ಕೋರ್ಟಿನಲ್ಲಿ ಶ್ರೀ ಬಿ ವೆಂಕಟರಾಯ ಭಾಳಿಗರು [illegible] ಗುಣಕಥನವನ್ನು ಮಾಡಿದರು.

ಸಾದರ ಸ್ವೀಕಾರ

ಮೆಸರ್ಸ್ ಎಸ್ ನಾರಾಯಣಾಚಾರ್ಯ ಚಾರ್ಟರ್ಡ್ ಕಾಶಿ, ನಂಜನಗೂಡ ಸದ್ವಿದ್ಯಾ ಶಾಲಾ ಬ್ರಾಂಚ್ ಮಂಗಳೂರು, ಎಮ್. ಪದ್ಮನಾಭ ರಘುನಾಥ ಪೈ ಮತ್ತು ಕಂಪನಿ ಮಂಗಳೂರು ಇವರ ಅಂದವಾದ [illegible] ವರ್ಷದ ಕ್ಯಾಲೆಂಡರು ಹಸ್ತಗತವಾಗಿದೆ

ಶ್ರೀ ರಾಮಾಶ್ರಮ ಹಾಯರ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವ

[illegible] ಶ್ರೀ ರಾಮಾಶ್ರಮ ಹಾಯರ್ ಎಲಿಮೆಂಟರಿ ಶಾಲಾ ಮಕ್ಕಳ ಹಬ್ಬವು ತಾ ೧೦—೧—೩೯ನೇ ಮಂಗಳವಾರ ದಿನ ದಕ್ಷಿಣ ಕನ್ನಡ ಜಿಲ್ಲಾ ಎಜ್ಯುಕೇಶನಲ್ ಆಫೀಸರರಾದ ಜನಾಬ್ ಗುಲಾಮ್ ದಸ್ತಗಿರಿ ಸಾಹೇಬರವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು

ಜಿಲ್ಲಾ ವಿದ್ಯಾಧಿಕಾರಿಗಳು ತಮ್ಮ ಸಹಾಯಕ ಆಫೀಸರರಾದ ಶ್ರೀ ಕೆ ಸಂಜೀವರಾಯರೊಡನೆ ಶಾಲೆಯನ್ನು ಸಂದರ್ಶಿಸಿ ಶಾಲಾ ಕೆಲಸವು ಸುವ್ಯವಸ್ಥಿತವಾದ ರೀತಿಯಲ್ಲಿರುವುದನ್ನು ಕಂಡು ತುಂಬಾ ಸಂತೋಷಿಸಿ ಶಾಲಾ ಬಾಲಕರು ತಯಾರಿಸಿದ ವಸ್ತು ಪ್ರದರ್ಶನವು ಮಹಾತ್ಮಾಗಾಂಧಿಯವರ ವಾರ್ಧಾಸ್ಕೀಮಿನ ರೀತಿಯನ್ನು ಅನುಸರಿಸುವುದನ್ನು ನೋಡಿ ಶಾಲಾಬಾಲಕರ ಮನಸ್ಸನ್ನು ಈ ರೀತಿಯಲ್ಲಿ ಅರಳಿಸಿದರೆ ಶಾಲೆಯ ಧ್ಯೇಯವನ್ನು ಪೂರ್ಣಗೊಳಿಸಿದಂತಾಗುವುದೆಂದು ಮನಮುಟ್ಟಿ ಹೇಳಿದರು. ಅನಂತರ ಶಾಲೆಯವರು ಏರ್ಪಡಿಸಿದ ಸತ್ಕಾರ ಕೂಟದಲ್ಲಿ ಭಾಗವಹಿಸಿ ತಳಿರು ತೋರಣಗಳಿಂದ ಅಲಂಕೃತವಾದ ಸಭಾ ಮಂಟಪಕ್ಕೆ ತೆರಳಿದರು

ಶಾಲಾಮೋನೇಜರರಾದ ಡಾ. ಕೆ ಮಾಧವ ಶೆಣೈ ಇವರು ಜನಾಬ್ ಗುಲಾಮ್ ದಸ್ತಗಿರಿ ಸಾಹೇಬರನ್ನು ಅಧ್ಯಕ್ಷಸ್ಥಾನಕ್ಕೆ ಆರಿಸಿದರು. ಅಂತೆಯೇ ಅವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ಪ್ರಾರ್ಥನೆಯೊಂದಿಗೆ ಅವರನ್ನು ಪುಷ್ಪಾಹಾರದಿಂದ ಸತ್ಕರಿಸಲಾಯಿತು. ಅನಂತರ ಅವರ ಬೊಕ್ಕಸವೂ [illegible] ಮಕ್ಕಳ ಹಬ್ಬದ ಧ್ಯೇಯಗಳನ್ನು ವಿವರಿಸಿ ವಿನೋದಾವಳಿಗಳನ್ನು ಪ್ರಾರಂಭಿಸಲು ಹೇಳಿದರು

ವಿವಿಧ ವಿನೋದಾವಳಿಗಳಲ್ಲಿ ಬಾಲಕಿಯರು ನಯನ ಮನೋಹರವಾದ 'ಕೋಲಾಟ ನರ್ತನ' ಅಭಿನಯ ಗೀತಗಳು, ಸಂಗೀತ ತಂಡವು ಏರ್ಪಡಿಸಿದ [illegible] ನಾಟಕ ಪ್ರಹ್ಲಾದ [illegible] ಎಂಬ ಫಾರ್ಸ್ (ಬಾಲಕರಿಂದ) ಕೋಲಾಟ ಡ್ರಿಲ್ (ಬಾಲಕಿಯರಿಂದ) ತುಳು [illegible] ಇವುಗಳೇ ಮುಖ್ಯವಾದುವುಗಳು

[illegible] ಅಧ್ಯಕ್ಷರ [illegible] ಶಾಲೆಯಲ್ಲಿರುವ [illegible] ಕಲಿತ [illegible] ವ್ಯಾಯಾಮ ಪ್ರದರ್ಶನವನ್ನು [illegible] ವ್ಯಾಯಾಮ ಪ್ರದರ್ಶನದಲ್ಲಿ [illegible] ಮಾಡಿದ ಗುಂಪುಗಳ (group [illegible]) [illegible] ಬೆಳ್ಳಿ [illegible] ಸ್ಪರ್ಧೆ [illegible] ಇತ್ಯಾದಿಗಳನ್ನು [illegible]

ಅಧ್ಯಕ್ಷರು ತಮ್ಮ ಸಮಯೋಚಿತ ಭಾಷಣದಲ್ಲಿ [illegible] ಬಾಲಕರ [illegible] ಅಭಿನಂದಿಸಿ [illegible] ಬಾಲಕರಿಗೆ ಯೋಗ್ಯರೀತಿಯಿಂದ ತರಬೇತಿಯು ಈ ಶಾಲೆಯಲ್ಲಿ ಸಿಗುವದರಿಂದ ಇಂತಹ ಶಾಲೆಗಳ ಅಭಿವೃದ್ಧಿಕ್ಕೆ ಕಾರಣ [illegible] ಇದ್ದಾದರೆ ಶಾಲೆಯು ಇವರ ಹಿತವನ್ನು [illegible] ತಮ್ಮ ತನುಮನ ಧನಗಳಿಂದ ಅದನ್ನು ಪ್ರೋತ್ಸಾಹಿಸಬೇಕೆಂದೂ ಹೇಳಿ ತನಗೆ ಅಧ್ಯಕ್ಷಸ್ಥಾನವನ್ನು ವಹಿಸಿಕೊಟ್ಟದ್ದಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು

ಅನಂತರ ಶಾಲಾ ಮೇಲ್ವಿಚಾರಕರಾದ (Superintendent) ರಾದ ಶ್ರೀ ಜಿ ಆರ್ ಶೆಣೈಯವರು ಜಿಲ್ಲಾಧಿಕಾರಿಗಳಿಗೆ ನೆರೆದ ಸಭಿಕರಿಗೂ ಉಚಿತೋಪಚಾರದಿಂದ ಕೃತಜ್ಞತೆಗಳನ್ನು ಸಲ್ಲಿಸಿದ ಬಳಿಕ ಜನಗಣದೊಂದಿಗೆ ಮಕ್ಕಳ ಹಬ್ಬವು ಕೊನೆಗೊಂಡಿತ.

ಕರ್ನಾಟಕ ಯುವಕಪರಿಷತ್ತು ಧಾರವಾಡ

ಕರ್ನಾಟಕ ಯುವಕ ಪರಿಷತ್ತಿನ [illegible] ಅಧಿವೇಶನವು ತಾ. ೧೪ ಮತ್ತು ೧೫ಕ್ಕೆ ಧಾರವಾಡದಲ್ಲಿ ಶ್ರೀ ಕೆ ಟಿ ಭಾಷ್ಯಂರ ಅಧ್ಯಕ್ಷತೆಯಲ್ಲಿ ಜರಗುವುದು. ಇದರ ಉದ್ಘಾಟನ ಸಮಾರಂಭವನ್ನು ರಾಷ್ಟ್ರಸಭೆಯ ವಿದೇಶಿ ಪ್ರಕಟನೆ ಶಾಖೆಯ ಸಂಪಾದಕರಾಗಿ ಕೆಲಸ ಮಾಡಿರುವ ಡಾ. ರಾಮ ಮನೋಹರ ಲೋಹಿಯಾ ಇವರು ನೆರವೇರಿಸುವರು

ತಾಲೂಕು ಸಮಾಚಾರ

ಬಂಟವಾಳ

ಇಲ್ಲಿಯ ಶ್ರೀ ಕೃಷ್ಣಾ ಗಾಯನ ಮಂದಿರದ ವರ್ಧಂತ್ಯುತ್ಸವವು ಕಳೆದ ೫ನೇ ತಾರೀಕಿನ ದಿನ ಗಂಟೆ ೫-೩೦ಕ್ಕೆ ಶ್ರೀ ಕೆ ಅನಂತ [illegible] ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಉಪಹಾರವು ನಡೆದು ಅಧ್ಯಕ್ಷರು ತಮ್ಮ ಪ್ರಾರಂಭ ಭಾಷಣದಲ್ಲಿ ಗಾಯನ ಕಲೆಯ ಮಹತ್ವದ ಕುರಿತು ವಿವರಿಸಿ ಹೇಳಿ, ಸದ್ರಿ ಗಾಯನ ಮಂದಿರದ ಮುಖ್ಯಶಿಕ್ಷಕರಾದ ಶ್ರೀ ಎನ್ ಆರ್ [illegible] ಬಂಟ್ವಾಳಕರರ ವಿದ್ವತ್ತನ್ನು ಕೊಂಡಾಡಿ, ಬಂಟ್ವಾಳ, ಮೂಡಬಿದಿರೆ, ಪಾಣೆಮಂಗಳೂರು ಮತ್ತು ಪ್ರತಿಷ್ಠರಿನಲ್ಲಿ ಅವರು ಗಾಯನದಿಂದ ರಗಳೆಗಳನ್ನು ತರೆದಿರುವುದು ಅವರ ಪ್ರಶಂಸೆಯನ್ನು [illegible] ಹೇಳಿದರು [illegible] ವ ಬಾಳಿಗರು ಗಾಯನದ ಅಭಿವೃದ್ಧಿ [illegible] ವಾತಗಳನ್ನಾಡಿದರು

ಮಂದಿರದ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಗೀತಗಳಾದ ಬಳಿಕ ಮಂಗಳೂರಿನಿಂದ ಚಿತ್ತೈಸಿದ ಶ್ರೀಗಳಾದ ಎಮ್ ವಾಸುದೇವ ಪ್ರಭು ಮತ್ತು ಸಿದ್ದ ಕೃಷ್ಣರಾಯರ [illegible] ಕೊಳಲು ಮತ್ತು [illegible] ವಾದನವು ಸುಮಾರು ಎರಡು ತಾಸುಗಳ ತನಕ ನಡೆಯಿತು. ಶ್ರೀ ಎಸ್ ಆರ್ ಬಂಟ್ವಾಳಕರರ ತಬ್ಲಾ ವಾದನವೂ ಇತ್ತು

[illegible] ಮತ್ತು [illegible] ವಾದನವು ಮುಕ್ತಾಯಗೊಂಡ [illegible] ಬಳಿಕ ಅಧ್ಯಕ್ಷರ ಉಪಸಂಹಾರ ಭಾಷಣವು [illegible] ಧನ್ಯವಾದ [illegible] ವಂದೇ ಮಾತರಂ [illegible] ಮುಕ್ತಾಯವಾಯಿತು

ಕಾರ್ಕಳ

ದಕ್ಷಿಣ ಕನ್ನಡ [illegible] ಸಂಘದ [illegible] ಗಾಗಿ [illegible] ಪುಸ್ತಕಗಳು [illegible] ಮಾಡಿಕೊಳ್ಳಬೇಕಾಗಿ

[illegible] ದಿನ ಇಲ್ಲಿ ನಡೆದ ಶ್ರೀ ಶ್ರೀನಿವಾಸ ಆಶ್ರಮದಲ್ಲಿ [illegible] ಅಧ್ಯಕ್ಷತೆಯಲ್ಲಿ [illegible] ಸಾರ್ವಜನಿಕ ಸಭೆಯಲ್ಲಿ [illegible] ಸ್ವರ್ಧೆಗಳಲ್ಲಿ ಜಯಶೀಲರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಹಂಚಿದರು

ಉಡುಪಿ ಮ್ಯುನಿಸಿಪಾಲಿಟಿ 1938 — '39

[illegible] ಈ ಮ್ಯುನಿಸಿಪಾಲಿಟಿಯ [illegible] ಹಣ ಹೆದ್ದಾರಿಗಳು ತೃಪ್ತಿಕರವಾದ ಸ್ಥಿತಿಯಲ್ಲಿ ಇವೆಯೆಂದೂ, ಕೌನ್ಸಿಲಿನಲ್ಲಿ [illegible] ನ್ನೂ ಆಡಳಿತವು ತೃಪ್ತಿಕರವಾಗಿರುವುದನ್ನೂ ಸರಕಾರವು ಗುರುತು ಮಾಡಿಕೊಂಡಿದೆಯೆಂದೂ, ಸರಕಾರದ ಇಲಾಖಾ ವಿಮರ್ಶೆಯಲ್ಲಿದೆ "

ತಾ [illegible] ಸ್ಥಳೀಯ ಮುನಿಸಿಪಲ್ ಕೌನ್ಸಿಲಿನ ಸಾಧಾರಣ ಸಭೆಯ [illegible] ಅಧ್ಯಕ್ಷರಾದ ಶ್ರೀ ಎ ಲಕ್ಷ್ಮೀನಾರಾಯಣ ರಾಯರ ಸಭಾಧಿಪತ್ಯದಲಿ ಜರಗಿತು. [illegible] ಗಳಾದ ಮೇಲೆ [illegible] ಕಾರ್ಯಕ್ರಮವು ಸರ್ವ ಹಿಸಲ್ಪಟ್ಟಿತು. ಸದ್ಯ ನಮ್ಮಲ್ಲಿಗೆ ಬರಬಹುದೆಂಬುದಾಗಿ ಮದ್ರಾಸು ಸರಕಾರದ ಮುಖ್ಯ ಮಂತ್ರಿಗಳಾದ ಮಾನನೀಯ ಶ್ರೀ ಸಿ ರಾಜಗೋಪಾಲಾಚಾರ್ಯ ಮತ್ತು ಮೈಸೂರಿನ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರವರಿಗೆ ಮುನಿಸಿಪಲ್ ಮಾನಪತ್ರ ಅರ್ಪಿಸುವುದೆಂಬುದಾಯಿತು. [illegible] ಕಮಿಷನರರಾಗಿ [illegible] ಶ್ರೀ ಎಮ್ [illegible] ಶೆಣೈ, ಬಿ. ಎ., ಬಿ. ಎಲ್ ರವರ ಮಂಗಳೂರಿಗೆ ವರ್ಗವಾಗಿರುವ [illegible] ಸದ್ರಿಯವರ ಉತ್ತಮ [illegible] ಮತ್ತು ನಿಸ್ಪೃಹವಾದ ಸೇವೆಯನ್ನು ಮನಿಸಿ ಅಧ್ಯಕ್ಷರು ತಂದ ಠರಾವು ಅಂಗೀಕೃತವಾಯಿತು.

ಉಡುಪಿ ಮುನಿಸಿಪಲ್ ಕಮಿಷನರ ತಮ್ಮ ಹುದ್ದೆಯ ಚಾರ್ಜನ್ನು ತಾ [illegible] ಸಾಯಂಕಾಲ ಮುನಿಸಿಪಲ್ ಅಧ್ಯಕ್ಷರಿಗೆ ಒಪ್ಪಿಸಿರುತ್ತಾರೆ

8—10 ದಿನಗಳಿಂದ ಇವರಿಗೆ ನಾನಾ ಕಡೆಗಳಲ್ಲಿ ವಿದಾಯಸತ್ಕಾರ ಕೂಟ ಭೋಜನಗಳು ತಾ 9ರ ವರೆಗೂ ಜರಗಿಸಲ್ಪಟ್ಟವು. ಪರ್ಯಾಯ ಮಠದ ಶ್ರೀ ಪಲಿಮಾರು ಮಠದ ಸ್ವಾಮಿಯವರೂ ಇವರನ್ನು [illegible] ಮುಕ್ತಾ [illegible] ಗಳನ್ನಿತ್ತು ಹರಸಿ ಕಳುಹಿಸಿದರು

ತಾ [illegible] ಉಡುಪಿ ತಾಲೂಕ ಕೃಷಿಕ ಮತ್ತು ಮಜೂರರ ಸಂಘದ ಆಶ್ರಯದಲ್ಲಿ [illegible] ಶ್ರೀ ಎಸ್ [illegible] ಯವರ ಅಧ್ಯಕ್ಷತೆಯಲ್ಲಿ [illegible] ಸಭೆ [illegible] (ಮದ್ರಾಸ ಸರಕಾರದ ಮಂತ್ರಿ) [illegible] ಇತ್ಯಾದಿಗಳ ವರ್ಣನೆ [illegible] ಭಾಷಣಗಳಾದವು

ತಾ [illegible] ರಿಂದ ಶ್ರೀ ಕೃಷ್ಣ ಸನ್ನಿಧಿಯಲ್ಲಿ ಮಕರಸಂಕ್ರಮಣ ರಥೋತ್ಸವದ ಉತ್ಸವವು ಪ್ರಾರಂಭವಾಗಿದೆ, [illegible] ಮಕರ ಸಂಕ್ರಾಂತಿ ಉತ್ಸವವು [illegible] ಉತ್ಸವವು ಆಗಲಿದೆ [illegible] ಉಪಹಾರದ ವ್ಯವಸ್ಥೆ [illegible] ಗಳ ಹೊರತು ಪಟ್ಟಣದ [illegible] ನಿವಾಸಿಗಳು [illegible] ಯೋಜನೆಯನ್ನು [illegible] ಮಾಡಿರುತ್ತಾರೆ, ಅವ [illegible] ಹರತಾಳದಿಂದ [illegible] ಬಹುದು

ಪುತ್ತೂರು ತಾಲೂಕು ಗ್ರಾಮ ಉದ್ಯೋಗಸ್ಥರ ಸಂಘ

ಈ ಸಂಘವನ್ನು ಸ್ಥಾಪಿಸುವ ಉದ್ದೇಶದಿಂದ [illegible] ಬೋರ್ಡಿನ ಸಾರ್ವಜನಿಕ ವಾಚನಾಲಯದಲ್ಲಿ ಇದೇ ತಾ ೨೨—೧—೩೯ನೇ ಆದಿತ್ಯವಾರ ಅಪರಾಹ್ನ ೨ ಗಂಟೆಗೆ ಗ್ರಾಮ ಉದ್ಯೋಗಸ್ಥರ ಒಂದು ಸಭೆಯನ್ನು ಜರಗಿಸುವುದಾಗಿ ನಿಶ್ಚಯಿಸಿರುವುದರಿಂದ ಪುತ್ತೂರು ತಾಲೂಕಿನ ಎಲ್ಲಾ ಗ್ರಾಮ ಉದ್ಯೋಗಸ್ಥರು (ಪಟೇಲ, ಶ್ಯಾನುಭಾಗ ಮತ್ತು ಉಗ್ರಾಣಿ) ಸದ್ರಿ ಸಭೆಗೆ ದಯಮಾಡಿ ಬರಬೇಕಾಗಿ ವಿನಂತಿ ಎಂದು ಬೆಳ್ಳಾರೆಯ ಮುಖ್ಯ [illegible] ನಾಗಿರುವ ಪಟೇಲರು ತಿಳಿಸುತ್ತಾರೆ

ಚಿತ್ರಾ ಟಾಕೀಸ್ ಮಂಗಳೂರು

ಸ್ಥಳೀಯ ಚಿತ್ರಾ ಟಾಕೀಸಿನಲ್ಲಿ ತಾರೀಕು [illegible] ದಿಂದ ಶಿವಾಜಿ ಮೇತ್ಯು ಇಂಡಿಯಾ [illegible] ಇವರು ಅಭಿನಯಿಸಿದ "ವೀರಬಾಲಕ" ಎಂಬ ಚಿತ್ರವು ಪ್ರದರ್ಶಿಸಲ್ಪಡುತ್ತದೆ.

ಕೆಲವು ಕಾಂಗ್ರೆಸ್ ಟೀಕೆಗಳು — ಧನಬಲಿಯಾಗದಂತೆ ತಡೆ

ಮಧ್ಯ ಯೂರೋಪಿನ ಸದ್ಯಸ್ಥಿತಿ! : : : : : : : ತಿರುವಾಂಕೂರು ರಾಜ್ಯದ್ರೋಹ!

ಫೆಡರೇಶನು ಕಾಂಗ್ರೆಸಿಗೆ ವಿರೋಧದ ಕಾರಣ ಯಾವುದು?

ಕೆಲವು ಕಾಂಗ್ರೆಸ್ ಟೀಕೆಗಳು

(ಶ್ರೀ ಎಸ್. ಎಸ್. ಶ್ರೀ. ಅಯ್ಯಂಗಾರ್ಯರಿಂದ)

ಸದ್ಯದಲ್ಲೇ ನಮ್ಮ ಮೇಲೆ ವಿಧಿಸಲಾಗುವ ಫೆಡರೇಶನನ್ನು ನಾವು ಖಂಡಿತವಾಗಿಯೂ ಎದುರಿಸಬೇಕಾಗಿದೆ. ಬ್ರಿಟಿಷರಿಗೆ ಇದೊಂದು ಸುಧಾರಣೆ ಜ್ಯಾರಿಗೆ ಬಂದರೇ ಸಾಕೆಂದಿದೆ. ಅವರಿಗೆ ಅದರಿಂದ ಸಂರಕ್ಷಣೆ ಸಾಮ್ರಾಜ್ಯ ರಕ್ಷಣೆ ಅಷ್ಟಾಗುವುದು, ನಮಗೆ ಮಾತ್ರ ಪರ ತಂತ್ರವೇ ಮತ್ತೊಂದು ರೂಪವಾಗಿ ಹಿಡಿಯುವುದು.

† † †

ದೇಶೀಯರ ರಾಜ್ಯಗಳ ವಿಷಯವಾಗಿ, ಈ ಗಣ ಕಾಂಗ್ರೆಸ್ ಧೋರಣೆ ಹಿಂದಣದಕ್ಕಿಂತ ಎಷ್ಟೋ ಬೇರೆ. ಕಾಠೇವಾಡದ ರಾಜ್ಯಗಳಲ್ಲಿನ ಅವಸ್ಥೆಯಿಂದ, ಕಾಂಗ್ರೆಸು ಹೀಗೆ ತಕ್ಷ ಬದಲಾಯಿಸಿತು. ಆದರೆ ಹೈದರಾಬಾದು, ತ್ರಿವಾಂಕೂರು ರಾಜ್ಯಗಳು ಮಾತ್ರ ಇನ್ನೂ ಹೃದಯ ಪರಿವರ್ತನೆ ಹೊಂದಿಲ್ಲ!

† † †

ಫೆಡರೇಶನ್ ಎದುರಿಸಲು ಮುಖ್ಯ ಕಾರಣಗಳಲ್ಲಿ,—ಸೇನಾ ವಿಭಾಗವು ಹಿಂದೀಯರ ಕೈಯಲ್ಲಿರದಿರುವುದೇ ಒಂದು. ದೇಶರಕ್ಷಣೆ ನಮ್ಮ ಕೈಯಲ್ಲಿಲ್ಲ ಮಾತ್ರವಲ್ಲ, ಸೈನ್ಯದ ಖರ್ಚು ನಮ್ಮ ಅಧಿಕಾರದೊಳಗಿಲ್ಲ. ಸೈನ್ಯವು ನಮ್ಮದಾಗಿಲ್ಲದೆ ಪೂರ್ಣ ಸ್ವರಾಜ್ಯ ಎಂಬುದಕ್ಕೆ ಅರ್ಥವಿಲ್ಲ.

† † †

ಅಧಿಕಾರ ನಡೆಸಲಿಚ್ಛೆ, ಕೆಲವರು ಮಂತ್ರಿ ಪದವಿ ಹೊಂದಿದ ಕೂಡಲೆ ಸ್ವರಾಜ್ಯ ದೊರೆಯಿತೆಂದು ಅರ್ಥವಾದರೆ ಅಂತಹ ಸ್ವರಾಜ್ಯವು ನಮಗೆ ಎಂದೋ ದೊರೆತೀತೆ ಇದೆಯಲ್ಲವೆ?

† † †

ಪರರಾಷ್ಟ್ರ ವ್ಯವಹಾರವು ವೈಸ್‌ರಾಯರ ಕೈಯಲ್ಲಿರುವುದು. ಸೈನ್ಯವೂ ಪರರಾಷ್ಟ್ರ ವಿಚಾರಗಳೂ ನಮ್ಮ ಕೈಯ ಹೊರಗಾದರೆ, ನಾವು ಮಾಡಲಿಕ್ಕೇನಿದೆ? ಫೆಡರೇಷನು ಹಿಂದೀಯರಿಗೆ ಬಹಳ ಒಳ್ಳೇದೆಂದು ವೈಸ್‌ರಾಯರೆನ್ನುತ್ತಾರೆ. ಕೆಲವರು ಇದು ಸರಿಯೆಂದೂ, ಕೆಲವರು ಅಲ್ಲವೆಂದೂ ಎನ್ನುತ್ತಾರೆ. ಕಾಂಗ್ರೆಸು ಇದುವರೆಗೆ ಫೆಡರೇಶನನ್ನು ಎದುರಿಸಿಯಿದೆ, ನಾಳೆ ತ್ರಿಪುರಿಯಲ್ಲಿ ಏನ ನಿರ್ಣಯ ಮಾಡೀತೋ ಹೇಳಬರುವುದಿಲ್ಲ. ಏಕೆ? ಮುಖಂಡರು ನಿರ್ಣಯದ ಪಕ್ಷಣೆ ಒಪ್ಪಿದರೆ ಸದಸ್ಯರು ವೋಟು ಕೊಡುವರು, ಹೀಗಿದೆಯಷ್ಟೆ!

† † †

ಮದ್ಯಪಾನ ನಿವಾರಣೆ ಕೆಲವು ಜಿಲ್ಲೆಗಳಲ್ಲಿ ಜ್ಯಾರಿಗೆ ಬಂದಿದೆ, ಕೃತಾರ್ಥವಾಗಿದೆ ಎನ್ನುತ್ತಾರೆ. ಹಾಗೆಯೆ ನಂಬೋಣ. ಆದರೆ, ಮದ್ಯನಿವಾರಣೆ ಮಾತ್ರವೇ ಸ್ವರಾಜ್ಯವೆ? ಸ್ವರಾಜ್ಯವೆಂದರೆ, ಇತರರ ಅಂತರಂಗ ಬಹಿರಂಗ ಆತಂಕಗಳಾವುವೂ ಇಲ್ಲದೆ, ಸಂಪೂರ್ಣ ಸ್ವಾತಂತ್ರ್ಯಾಧಿಕಾರವಿರುವುದು ಎಂದರ್ಥವಲ್ಲವೆ? ನಾನು ಹಾಗೆಣಿಸುತ್ತೇನೆ.

† † †

ಫೆಡರೇಶನು ಜ್ಯಾರಿಗೆ ಬರುತ್ತಲೇ, ಸಮಾಜಗಳೊಳಗೆ ವಿದ್ವೇಷವು ಬೇಗನೆ ಬಹಳವಾಗಿ ಹೆಚ್ಚುವುದು ಖಂಡಿತ. ಹಿಂದೂ ಮುಸ್ಲಿಮರೊಳಗೆ ವಿರೋಧವು ಬಹಳವಾದೀತು. ಇದಕ್ಕಾಗಿ ಮಾತ್ರ, ಫೆಡರೇಶನನ್ನು ವಿರೋಧಿಸುವುದಲ್ಲ. ಮುಸ್ಲಿಮರು ಕಾಂಗ್ರೆಸಿನಲ್ಲಿ ವಿಶ್ವಾಸವನ್ನಿಡದಿರುವಲ್ಲಿ, ಪೂರ್ಣ ಸ್ವರಾಜ್ಯವು ದೊರೆಯಲಾರದು. ಕೆಲ ಬದಲಾವಣೆಗಳನ್ನು ಮಾಡಿದರೆ ಒಪ್ಪುವೆವೆಂದು ಕಾಂಗ್ರೆಸು ಹೇಳಬಹುದು, ಬದಲಾವಣೆಗಳೇನೂ ಇಲ್ಲವೆಂದು ಸೆಕ್ರೆಟರಿಗಳ ಮಾತಾಗಿದೆ.

† † †

ದೊಡ್ಡ ಕಾರ್ಖಾನೆಗಳನ್ನು ಸರಕಾರವು ಸ್ಥಾಪಿಸಿ, ತಾನೆ ನಡೆಸಿ ಬರಬೇಕು. ಆಗ ಮಾದರಿಗಾಗಿ ಇತರ ಕಾರ್ಖಾನೆಗಳೂ ನಡೆಸವು ಜನತೆಗೆ ಜೀವನದ ಮಾನವು ತಿಳಿದೀತು. ಕೆಲ ಕಾರ್ಖಾನೆಗಳಲ್ಲಿ ಸರಕಾರವು ಕೆಲವು ಪಾಲುಗಳನ್ನು ಕ್ರಯಕ್ಕೆ ಪಡೆದ ಕೂಡಲೆ, ಸರಕಾರದ ಕರ್ತವ್ಯ ಮುಗಿಯಲಿಲ್ಲ. ಸ್ವರಾಜ್ಯವು ರಾಜಕೀಯ–ಸಾಂಪತ್ತಿಕ ಪ್ರಗತಿಗಳಿಂದ ಒಮ್ಮೆಲೇ ಕೂಡಿರಬೇಕು. ಇವುಗಳೊಳಗೆ ವಾಯಿ ಇಲ್ಲ.

ಮಧ್ಯಯುರೋಪಿನ ಸದ್ಯಸ್ಥಿತಿ

ಲಿಥುವಾನಿಯರಲ್ಲಿ ಜರ್ಮನ್ ಭಾಷೆಗೂ ಲಿಥುವಾನಿಯನ್ ಭಾಷೆಗೂ ಸಮಾನ ಪ್ರಚಾರವಾಗುವಂತೆಯೂ, ಹಿಂದೆ ನಿವೃತ್ತ ಪಡಿಸಲಾದ ಜರ್ಮನರನ್ನು ಪುನಃ ಕೆಲಸಕ್ಕೆ ನೇಮಿಸಿಕೊಳ್ಳುವಂತೆಯೂ. ಈ ಜೈಲಿನಲ್ಲಿ ರಾಜದ್ರೋಹಿಗಳೆಂದು ನರಳುವ ಆರ ಜರ್ಮನರನ್ನು ಕ್ಷಮಿಸಿ ಬಿಡುಗಡೆ ಮಾಡುವಂತೆಯೂ (ಅವರು ಕೇಳಿಕೊಂಡರೆ) ಲಿಥುವಾನಿಯ ಸರಕಾರವು ಅಪ್ಪಣೆ ಹೊರಡಿಸಿರುವುದು.

***

ಮೆಮೆಲ್‌ನಲ್ಲಿನ ಜರ್ಮನ ಮುಖಂಡನು ೨೦,೦೦೦ ಜರ್ಮನರು ಸೈನ್ಯದ ಸಂಗಡವಾಗಬೇಕಾಗಿ ಅಪೇಕ್ಷಿಸಿ, ಈ ಸೈನ್ಯದ ವ್ಯವಸ್ಥೆಗೆ ಕೈ ಹಚ್ಚಿರುವನು.

***

ಚೆಂಬರ್ಲೆನ್ನರು ರೋಮಿಗೆ ಹೋಗುವುದು ಮೆಡಿಟರೇನಿಯನ್ ಸಮುದ್ರದ ಹಕ್ಕು ವಿಮರ್ಶೆಗಾಗಿ ಎಂದರೂ, ಜರ್ಮನ್ ಪತ್ರಿಕೆಗಳು ಇದರಿಂದ ಜರ್ಮನಿ ಇಟಲಿಗಳೊಳಗೆ ವೈತ್ರಿಯು ಕುಂದದಂತೆ ನಾನಾ ಪ್ರಕಾರ ಬಲವಾದ ಲೇಖನಗಳಿಂದ ಉತ್ತೇಜನೆ ಕೊಡುತ್ತಲಿವೆ. ಜರ್ಮನಿಯು ಮೊದಲು ಸ್ಪೇನಿನಲ್ಲಿ ಮಾತ್ರ ತನಗೆ ಹೆಚ್ಚಿನ ಸೌಕರ್ಯದ ಆಸೆ ಯಿಂದಿತ್ತು. ಈಗ ಜರ್ಮನಿಗೆ, ಶಾಂತಿ ಹಾಳಾಗದ ರೀತಿಯಲ್ಲಿ ಬ್ರಿಟಿಷ ಇಟಲಿಯನ್ ಕರಾರುಗಳಾಗಲಿ ಎಂದು ಸೂಚಿಸಿದೆ.

***

ಝೆಕ್ಕ ಸರಕಾರದ ಪ್ರತಿನಿಧಿಗಳು ಪ್ರೇಗ್ ಸರಕಾರದ ಪರವಾಗಿ ಪೂರ್ತಿಯಾದ ೩೦ ಮಿಲ್ಲಿಯ. ಪವನು ಸಾಲ ಕೇಳಲು ಲಂಡನಿಗೆ ಬಂದಿರುವರು. ಇದುವರೆಗೆ ೧೦ ಮಿಲ್ಲಿಯ ಮಾತ್ರ ಸಂದಿದೆ.

***

ಚಿಲಿಯೊಡನೆ ಅದಲುಬದಲು ಸರಕು ವ್ಯಾಪಾರದ ಕರಾರು ಮುಗಿಯದ ಕಾರಣ, ಈ ವರ್ಷ ತಿಂಗಳ ವರೆಗೆ ಜರ್ಮನಿಯಲ್ಲಿ ಇದುವರೆಗೆ ಖರ್ಚಾಗುತ್ತಿದ್ದ ಕಾಫಿಯು ಮುಕ್ಕಾಲಂಶ ಮಾತ್ರ ಖರ್ಚಾಗುವುದು.

***

ಜರ್ಮನಿಯಿಂದ ೭೦೦೦ ಯೆಹೂದ್ಯರು ಈ ವಾರ ಹಾಲೆಂಡನ್ನು ಸೇರುವಂತಾಗುವುದು.

***

ಬಾಸೆಲಿನಲ್ಲಿ ಎಲ್ಲ ದೇಶಗಳ ಪ್ರತಿನಿಧಿಗಳು ಸೇರಿರುವರು. ಪವನಿನ ಬೆಲೆ ಇಳಿಯದಂತೆ, ಫ್ರೆಂಚ ಆರ್ಥಿಕ ಸ್ಥಿತಿ ಸುವ್ಯವಸ್ಥೆಗೊಳ್ಳುವಂತೆ ಪ್ರಯತ್ನಗಳಾಗುತ್ತಿವೆ.

***

ಇಟಲಿಯು ಟ್ಯುನಿಸಿನಲ್ಲಿ ಹಕ್ಕು ಕೇಳಿದ್ದು ಅನ್ಯಾಯವೆಂದು ಟ್ಯುನಿಸಿನಲ್ಲಿನ ಇಟಲಿಯವರೇ ಬರೆದಿರುವರು. ಫ್ರಾನ್ಸಿನ ತೆಂಕುಭಾಗದಲ್ಲಿರುವ ಒಂದು ಮಿಲ್ಲಿಯ ಇಟಲಿಯಾನರ ಪ್ರೋತ್ಸಾಹದಿಂದ ಹೀಗಾಗಿದೆ. ಫೆಸಿಸ್ಟರು ಸ್ಪೇನಿನಿಗೆ ಹೋದುದೂ ಅನ್ಯಾಯವೆಂದು ಇವರ ಹೇಳಿಕೆಯಿದೆ.

***

ಇಟಲಿಯಲ್ಲಿ ವಾರ್ತೆ–ಕಳೆದ ತಿಂಗಳಲ್ಲಿ ಅಬಿಸೀನಿಯದಲ್ಲಿ ೩ ಆಫಿಸರರು, ೧೯ ಸಿಪಾಯರು ಜಗಳದಲ್ಲಿ ಅಬಿಸೀನಿಯದವರಿಂದ ಹತರಾಗಿರುವರು.

***

ಸ್ಪೇನಿನ ಫ್ರಾಂಕೋವಿಗೆ ಜಯವು ಹತ್ತಿರವಿದೆ.

:: ಫೆಡರೇಶನಿಗೆ ::
ಕಾಂಗ್ರೆಸು ವಿರೋಧದ ಕಾರಣ ಯಾವುದು?

ಕಾಂಗ್ರೆಸಿಗೆ ವರಿಷ್ಠ ಸರಕಾರದಲ್ಲಿ ಅಧಿಕ ಮತ ದೊರೆಯಲಾರದೆಂಬ ಭಾವನೆಯಿಂದ ಕಾಂಗ್ರೆಸ್ಸು ಈಗ ಫೆಡರೇಶನಿಗೆ ವಿರುದ್ಧವಾಗಿ ನಿಂತಿದೆ ಎಂದು ಕೆಲವರು ಸುಳ್ಳು ಕಾರಣಕೊಟ್ಟಿರುವರು.

ಎಷ್ಟು ದಿನದ ವರೆಗೆ ಕಾಂಗ್ರೆಸ್ಸು ಯಾವುದೊಂದು ಜಾತಿಯ ಸಂಸ್ಥೆಯಿಲ್ಲವೋ ಅದುವರೆಗೆ ಕಾಂಗ್ರೆಸಿಗೆ ಸಿಜವಾಗಿಯೂ ಅಧಿಕ ಮತ ದೊರೆಯದಿರಲಾರದು. ದರಿದ್ರರ ಪಕ್ಷವಾಗಿ ರಾಷ್ಟ್ರೀಯವಾಗಿರ ವಷ್ಟು ದಿನ ಕಾಂಗ್ರೆಸು ಜಿಂಒಲವು ಎಂದೂ ಕಡಮೆಯಾಗಲಾರದು.

ಇಂದಿನ ಕಾಂಗ್ರೆಸ್ ಚಳವಳವು ಯಾವ ನೆಟ್ಟ ದೇಶೀಯ ರಾಜನ ವಿರುದ್ಧವಾಗಿ ಅಲ್ಲ, ಸಾಮ್ರಾಜ್ಯ ಶಾಹಿಯ ವಿರುದ್ಧವಾಗಿದೆ. ಕಾಂಗ್ರೆಸು ಯಾವುದೊಂದು ರಾಜ್ಯದ ನಾಶಗಾಗಿ ಚಳವಳಿಸ ತ್ತಿಲ್ಲ. ನೂತನ ನಿರ್ಮಾಣಕಾರ್ಯವೇ ಕಾಂಗ್ರೆಸಿನ ಧ್ಯೇಯವು.

ರಾಜರುಗಳೊಡನೆ ಮೈತ್ರಿ ಸಾಧನೆಯೆ ಕಾಂಗ್ರೆಸಿನ ಆದರ್ಶ. ಆದರೆ ರಾಜರುಗಳನ್ನು ತಮ್ಮ ಮುಷ್ಟಿಯಲ್ಲಿ ಹಿಡಿದುಕೊಂಡಿರುವ ಪೊಲಿಟಿಕಲ್ ಇಲಾಖೆಗಳೇ ಈ ಆದರ್ಶವು ಸಾಧ್ಯವಾಗದಂತೆ ಮಾಡಿವೆ.

ರಾಜಕೋಟದಲ್ಲಿ ಆಳುವವನು ರಾಜಸಾಹೇಬನೆ ಅಲ್ಲ, ಗವರ್ನರ ಜನರಲರ ಏಜಂಟ! ಈಗ ಪ್ರಜಾಪ್ರತಿನಿಧಿಗಳಿಗೆ ಕೊಟ್ಟ ಅಧಿಕಾರದಲ್ಲಾದರೂ ಈ ಏಜಂಟಗೆ ತೃಪ್ತಿಯಿಲ್ಲ. ಜನರು ರಾಜನೊಡನೆ ಇರುವರೆಂದು ತಿಳಿದು ಏಜಂಟು ಸುಮ್ಮನಿರುವನು.

ಜನತಾ ಬೆಂಬಲವಿಲ್ಲದೆ ಯಾವ ಪಕ್ಷವೂ ಗೆಲ್ಲದ ಸ್ಥಾನ ತ್ಯಜಿಸೀತು. ಕಾಂಗ್ರೆಸಿಗೆ ಆ ಬೆಂಬಲವಿದೆ.

ಸರದಾರ ಪಟೇಲ —(ತಾ 7 -1—'39)

ಧನಬಲಿಯಾಗದಂತೆ ತಡೆ,
ತಡೆಯಾಗದಂತೆ ವ್ಯಾಜ್ಯ

ಗೋರಖಪುರದಲ್ಲಿ, ಅಮರಸಿಂಗರೆಂಬ ಮೊದಲನೆ ತರಗತಿಯ ಮೆಜಿಸ್ಟ್ರೇಟರು, ಮುಸ್ಲಿಂ ಲೀಗಿನ ಐವರು ಡಿಕ್ಟೇಟರುಗಳನ್ನು (ಇವರಲ್ಲಿಬ್ಬರು ಸಂಯುಕ್ತಪ್ರಾಂತ್ಯದ ಎಸೆಂಬ್ಲಿ ಮೆಂಬರರು) ಆರು ತಿಂಗಳಿಗೆ ಕಠಿನ ಸಜೆಯ ದಂಡನೆ ವಿಧಿಸಿರುವರು.

ಕಳೆದ ಬಕ್ರೀದ್ ಹಬ್ಬದ ಕಾಲದಲ್ಲಿ ಇವರು ಸತ್ಯಾಗ್ರಹದ ನಾಯಕರಾಗಿದ್ದರು. ಇವರು ಅಪ್ಪೀಲು ಮಾಡುವರೆಂದು ಮಾತ್ರ ಇವರನ್ನು ಜ್ಯಾಮೀನಿನ ಮೇಲೆ ಬಿಡಲಾಗಿದೆ.

ಕಲೆಕ್ಟರು ಮಿ॥ ಪೆಡ್ಲಿ ಸಾಹೇಬರು ಇವರ ವರ್ತನದಿಂದ ನೆಮ್ಮದಿಭಂಗವಾದೀತೆಂದು ಧನಬಲಿಯಾಗದಂತೆ ನೋಡಲೇ ಅಪ್ಪಣೆ ಪ್ರಕಟಿಸಿದ್ದರು. ಅಲ್ಲಿನ ಮುಸ್ಲಿಂ ಲೀಗಿನವರು ಕೂಡಲೆ ಸತ್ಯಾಗ್ರಹ ಪ್ರಾರಂಭಿಸಿದರು. ಈ ಅಪ್ಪಣೆ ಮುಸ್ಲಿಮರ ರಾಜಕೀಯ ಹಕ್ಕುಗಳಿಗೆ ವಿರೋಧವಾಗಿದೆಂದರು. ಸ್ವಯಂಸೇವಕರನ್ನು ಸರಕಾರವು ಕೈದುಮಾಡಿ ದಂಡನೆ ವಿಧಿಸಿದೆ. ಇದು ಈ ವ್ಯಾಜ್ಯದ ಮೂಲಕಾರಣ.

ಪಂಡಿತ ಜವಹರಲಾಲರು ದೇಶೀಯ ರಾಜ್ಯಗಳಲ್ಲಿ ಚಳವಳಗಾರರಿಗೆ ಎಚ್ಚರ ಹೇಳುವರು

ರಾನಪುರದಲ್ಲಿ ಜನಗಳ ಹಿಂಡು ಸೇರಿ, ಮೇಜರ್ ಬಜಲ್‌ಗೆಟ್‌ರನ್ನು ಕೊಂದಿಕ್ಕಿದ ಅವಾಂತರವು, ಶೋಚನೀಯವಾಗಿದೆ. ಇದು ಎಂತಹವೇ ವಿದ್ಯಮಾನಗಳಲ್ಲಾದರೂ, ಇಂತಹ ಹಿಂಸಾಮಯ ಕೃತಿಗಳಿಂದ ದೇಶೀಯ ರಾಜ್ಯಗಳ ಪ್ರಜೆಗಳು ಪ್ರಜಾಧಿಕಾರ ಹೊಂದುವ ಹಾಗಿಲ್ಲ. ಶಾಂತ ವರ್ತನೆಯಿಂದಲ್ಲದೆ ಸುಧಾರಣೆಗಳು ಎಂದೂ ಉಂಟಾಗವು.

ಯಾವ ಉದ್ಯೋಗದಿಂದ ರಾಜ್ಯಗಳಲ್ಲಿ ಚಳವಳ ನಡೆಯುತ್ತಿದೆಯೋ ಅದನ್ನು ಹಾಳಾಗಿಸಿ ಇಡೀ ಜನಾಂಗೋದ್ಧಾರ ಕಾರ್ಯಕ್ಕೆ ಅವಮಾನವನ್ನು ತರತಕ್ಕ ಈ ಹಾಳುಕೃತ್ಯಗಳು ಹಚ್ಚಾದವರು ಕೈಗೊಳ್ಳುವ ಮಹಾಪರಾಧಗಳೇ ಆಗಿವೆ ಎನ್ನಬೇಕಾಗಿದೆ.

ಒರಿಸ್ಸಾದ ರಾಜ್ಯಗಳಲ್ಲಿ ಜನರನ್ನು ಅತಿಯಾಗಿ ಪೀಡಿಸಿದ ಪರಿಂಬುದನ್ನು ಎಲ್ಲರೂ ಒಲ್ಲರು. ಈ ಪೀಡೆಗೆ ವಿರುದ್ಧವಾಗಿ ಪ್ರತಿಹಿಂಸೆಯುಂಟಾಗಬಹುದೆಂದೂ ಎಲ್ಲರೂ ಊಹಿಸಬಹುದು. ಆದರೆ ಇದರ ಹಾನಿಯೇ ಹೊರತು ಪ್ರಯೋಜನವುಂಟಾಗದು. ಈ ಶೋಚನೀಯ ಕೃತಿಯಿಂದ ಇತರ ಎಲ್ಲ ರಾಜ್ಯಗಳಲ್ಲಿನ ಪ್ರಜೆಗಳೂ ಎಚ್ಚರಗೊಂಡು ವರ್ತಿಸುವರಾಗಿನ ಬಬೇಕಾಗಿದೆ.

ಸರಕಾರವು ಯಾವ ಬಗೆಯಲ್ಲೂ ಜನರನ್ನು ಹಿಂಸಿಸದು. ಅಪರಾಧಿಗಳನ್ನು ಮಾತ್ರ ದಂಡಿಸಲಾದೀತು ಎಂದು ರೆಸಿಡೆಂಟರು ತಿಳಿಸಿ, ಅಂದ ಕೈದು ಮಾಡಿದ್ದ ೯೩ ಮಂದಿಯನ್ನು ಬಿಡುಗಡೆ ಮಾಡಿರುವರು.

ತ್ರಿವಾಂಕೂರು ರಾಜ್ಯದ್ರೋಹ.

ಸ್ಟೇಟ್ ಕಾಂಗ್ರೆಸಿನವರು ಸರಕಾರಕ್ಕೆ ಬರೆದ ಕೊಂಡ ಮನವಿಯಲ್ಲಿ ದ್ರೋಹವಿತ್ತೆಂದು ಸಹಿಹಾಕಿದವರನ್ನು ಕೈದುಮಾಡಲಾಯಿತು. ಮನವಿ ಹಿಂತೆಗೆಯಲಾಗಿದೆಯೆಂದು ಕೈದುಮಾಡಿದವರ ಬಿಡುಗಡೆಯಾಯಿತು.

ತ್ರಿವಾಂಕೂರು ರಾಜದ್ರೋಹವೆಂದರೆ, ದಿವಾನರ ವಿರೋಧವೂ ರಾಜದ್ರೋಹವಾಗಿ ಎಣಿಸುವಂತೆ ಕಾನೂನು ಇದೆ! ದಿವಾನರನ್ನು ದೂಷಿಸಿದರೆಂದು ತಿಳಿದ ಕೂಡಲೆ ರಾಜ್ಯದ ಎಲ್ಲಾ ಇಲಾಖೆಗಳೂ ಉದ್ರೇಕಗೊಂಡು ನ್ಯಾಯ ಸಲ್ಲಿಸಲು ನುಗ್ಗಿಕೊಂಡು ಬರುವುವು.

ಕೂಡಲೆ ವಿಶೇಷ ನ್ಯಾಯಸ್ಥಾನವುಂಟಾಗುವುದು. ಒಂದು ಜಡ್ಜರ ನೇಮಕವಾಗುವುದು. ಈಗ ಬಿಡುಗಡೆ ಹೊಂದಿದ ಕೈದಿಗಳು ೧೮—೨೪ ದಿನ ಜೈಲುವಾಸ ಅನುಭವಿಸಿದರು. ಈ ನ್ಯಾಯಸ್ಥಾನದ ತೀರ್ಮಾನದ ಮೇಲೆ ಪುನರ್ವಿಮರ್ಶೆಯೇ ಇಲ್ಲ. ಆದರೆ ಈ ಸಲ, ಈ ಕೋರ್ಟು ಸೇರುವ ಮೊದಲೇ ಸರಕಾರವು ಕೈದಿಗಳನ್ನು ಬಿಡುಗಡೆಮಾಡಿದೆ.

ದಿವಾನರ ಮೇಲೆ ವೈಯುಕ್ತಿಕವಾಗಿರಬಹುದಾದ ದೂರುಗಳನ್ನು ಮಾತ್ರ ಹಿಂತೆಗೆಯಲಾಗಿದೆ. ಇಷ್ಟಲ್ಲದೆ ಉಳಿದ ಮನವಿಯ ಮಾತುಗಳು ಹಾಗೆಯೆ ಇವೆ.

† † †

ಪ್ರಜೆಗಳೇ ರಾಷ್ಟ್ರದ ಪ್ರಧಾನಾಧಿಕಾರಿಗಳು

ರಾಜಕೋಟೆಯ ಸತ್ಯಾಗ್ರಹದ ಪಾಠ

ಅರಸರಿಗೂ ಪ್ರಜೆಗಳಿಗೂ ಮಹಾತ್ಮರ ಹಿತೋಕ್ತಿ

ಹಿಂಸಾಮಯವಲ್ಲದ ಅಸಹಕಾರದ ಶಕ್ತಿ — ಅಫ್ಘಾನಿಸ್ಥಾನದಲ್ಲಿ ಪ್ರಗತಿಯ ಆವಶ್ಯಕತೆ — ಸ್ವದೇಶಿ ಕೈಗಾರಿಕೆಗೆ ಪ್ರೋತ್ಸಾಹ

[ಹರಿಜನದಿಂದ]

ರಾಜಕೋಟೆಯ ಹೋರಾಟದ ಕುರಿತು ನಾನು ಈ ತನಕ ಏನೂ ಬರೆದುದಿಲ್ಲ. ಆ ಕುರಿತು ನನಗೆ ಆಸಕ್ತಿಯಿದ್ದಿಲ್ಲವೆಂದು ಮಾತ್ರ ತಿಳಿದುಕೊಳ್ಳಬಾರದು. ಆ ಸಂಸ್ಥಾನವನ್ನು ನಾನು ಚೆನ್ನಾಗಿ ಬಲ್ಲೆನಾದುದರಿಂದ ಅಲ್ಲಿ ನಡೆಯುತ್ತಿರುವ ಹೋರಾಟವನ್ನು ನಾನು ಅಲಕ್ಷಿಸುವುದಾದರೂ ಹೇಗೆ? ಕಾರಣ ನನ್ನ ತಂದೆಯು ಆ ಸಂಸ್ಥಾನದ ದಿವಾನನಾಗಿದ್ದನಲ್ಲದೆ, ಅಲ್ಲಿಯ ಅರಸರಾದ ಥಾಕೋರ ಸಾಹೇಬರು ನನ್ನನ್ನು ಪಿತೃಸಮಾನನೆಂದು ಭಾವಿಸುವರು. ಸರದಾರ ವಲ್ಲಭಾಯಿಯವರು ಅವರ ವಿಳದ ಜೀವಾಳವಾಗಿದ್ದುದರಿಂದ ನಾನು ಈ ತನಕ ಮೌನವಾಗಿದ್ದೆನು. ಕಾರಣ, ಅವರನ್ನು ಹೊಗಳುವುದೆಂದರೆ ಆತ್ಮಶ್ಲಾಘನೆಯನ್ನು ಮಾಡಿಕೊಂಡಂತೆಯೇ ಸರಿ.

ಜನರಿಂದ ಸಾಕಷ್ಟು ಬೆಂಬಲ ದೊರೆತರೆ ಹಿಂಸಾಮಯವಲ್ಲದ ಅಸಹಕಾರದಿಂದ ಏನೆಲ್ಲ ಮಾಡಲಾಗುತ್ತದೆಂದು ಈ ಹೋರಾಟವು ವ್ಯಕ್ತಪಡಿಸಿರುವುದು. ಅಲ್ಲಿಯ ಜನರು ಈ ಬಗೆಯ ಐಕ್ಯ, ಕಷ್ಟ ಸಹಿಷ್ಣುತೆ ಮತ್ತು ತ್ಯಾಗಬುದ್ಧಿಯನ್ನು ತೋರುವರೆಂದು ನಾನು ಸ್ವಪ್ನೇಽಪಿ ಎಣಿಸಲಿಲ್ಲ. ತಮ್ಮ ಅರಸನಿಗಿಂತಲೂ ತಾವು ಹೆಚ್ಚಿನವರೆಂದು ಅವರು ತೋರಿದರಲ್ಲದೆ, ಐಕ್ಯದಿಂದ ಕೆಲಸ ಮಾಡುವ ಅಹಿಂಸಾವಾದಿಗಳೆದುರಲ್ಲಿ, ಆಂಗ್ಲೇಯ ದಿವಾನನೊಬ್ಬನು ಏನೂ ಮಾಡಲೂ ಅಶಕ್ತನೆಂಬುದನ್ನು ವ್ಯಕ್ತಪಡಿಸಿದರು.

ತನ್ನ ದಿವಾನನ ಮಂತ್ರಾಲೋಚನೆಯನ್ನೂ, ರೆಸಿಡೆಂಟರ ಇಚ್ಛೆಯನ್ನೂ ಗಮನಿಸದೆ ರಾಜ್ಯಾಡಳಿತದ ಸೂತ್ರಗಳನ್ನು ಸ್ವತಃ ಕೈಕೊಂಡುದಕ್ಕಾಗಿ ಥಾಕೋರ ಸಾಹೇಬರು ಅಭಿನಂದನೀಯರಿರುವರು.

ಅರಸರಿಗೆ ಹಿತೋಕ್ತಿ

ನನ್ನ ವಶದಲ್ಲಿರುವ ಕಾಗದಪತ್ರಗಳ ಮೇರೆಗೆ, ಸರ್ ಪೆಟ್ರಿಕ್ ಕೆಡೆಲ್ಲರು, ಥಾಕೋರ ಸಾಹೇಬರ ಸೇವಕನಂತೆ ವರ್ತಿಸುವ ಬದಲಾಗಿ ತಾನೇ ಒಡೆಯನೆಂಬ ರೀತಿಯಲ್ಲಿ ವರ್ತಿಸಿರುತ್ತಿರೆನ್ನಬೇಕಾಗುತ್ತದೆ. ತಾನು ರಾಜರುನೇತನದವನೂ ಕೇಂದ್ರ ಸರಕಾರದವರಿಂದ ನೇಮಿಸಲ್ಪಟ್ಟವನೂ ಆದುದರಿಂದ ಮನಬಂದಂತೆ ವರ್ತಿಸಬಹುದೆಂದು ಅವರು ಬಗೆದರು. ಅವರು ತಾನಾಗಿ ನಿವೃತ್ತಿಯನ್ನು ಪಡೆದಿರುವರೋ ಏನೆಂದು ಈ ಲೇಖನವನ್ನು ಬರೆಯುತ್ತಿರುವ ಸಂದರ್ಭದಲ್ಲಿ ನನಗೆ ತಿಳಿದುಬಂದಿಲ್ಲ.

ಆಂಗ್ಲೇಯ ದಿವಾನರನ್ನು ಇಟ್ಟುಕೊಳ್ಳುವುದು ಸರಿಯೇ ಎಂಬುದೊಂದು ಪ್ರಶ್ನೆಯು ಆಳರಸರ ಮುಂದಿರುವುದೆಂದು ನನ್ನೊಡನೆ ಇರುವ ಪತ್ರಗಳಿಂದ ತಿಳಿದುಬರುತ್ತದೆ. ತಮ್ಮ ಪ್ರಕಟಣೆಗಳನ್ನು ನ್ಯಾಯವಾದ ರೀತಿಯಲ್ಲಿ ಜಾರಿಗೆ ತರುವರೋ ಇಲ್ಲವೋ ಎಂಬುದಾಗಿ ಸಂಸ್ಥಾನಗಳಲ್ಲಿರುವ ರೆಸಿಡೆಂಟರ ಮೇಲೆ ಕೇಂದ್ರ ಸರಕಾರದವರು ಕಣ್ಣಿಡಬೇಕಾಗಿರುವುದು.

ತಾವು ನ್ಯಾಯಮಾರ್ಗವನ್ನನುಸರಿಸುತಿದ್ದು ಪ್ರಜೆಗಳ ಬೆಂಬಲವು ತಮಗಿದ್ದರೆ, ರೆಸಿಡೆಂಟರಿಗೆ ಬೆದರಿ ನಡೆಯುತಿದ್ದ ಆಳರಸರು, ಅವರಿಗೆ ಬೆದರಿ ನಡೆಯುವ ಅಗತ್ಯವೇ ಇಲ್ಲವೆಂದು ರಾಜಕೋಟೆಯನ್ನು ನೋಡಿ ತಿಳಿದುಕೊಳ್ಳಲಿ. ರಾಷ್ಟ್ರದ ಪ್ರಧಾನಾಧಿಕಾರವು, ಸಿಮ್ಲಾ ಅಥವಾ ವ್ಹಾಯಿಟ್ ಹೋಲಿನಲ್ಲಿಲ್ಲದೆ, ತಮ್ಮ ಪ್ರಜೆಗಳಲ್ಲಿಯೇ ಇರುವುದೆಂದು ಅವರು ಖಂಡಿತವಾಗಿ ತಿಳಿದುಕೊಳ್ಳತಕ್ಕದ್ದು. ತಮ್ಮ ಅಹಿಂಸಾಶಕ್ತಿಯನ್ನೇ ಆಧರಿಸಿಕೊಂಡಿರುವ ಎಚ್ಚೆತ್ತ ಜನರು, ಶಸ್ತ್ರಧಾರಿಗಳಾದ ಎಷ್ಟು ಮಂದಿಯನ್ನಾದರೂ ಸ್ವತಂತ್ರವಾಗಿ ಇದಿರಾಯಿಸಬಲ್ಲರು. ಮೂರು ತಿಂಗಳುಗಳೊಳಗೆ ರಾಜಕೋಟೆಯು ಸಂಪಾದಿಸಿದುದನ್ನು ಅವರಂತೆಯೇ ಮುನ್ನಡೆದರೆ ಇತರ ಸಂಸ್ಥಾನಕರೂ ಪಡೆಯಬಹುದಾಗಿದೆ.

ಪ್ರಜೆಗಳಿಗೆ ಎಚ್ಚರಿಕೆ

ಸರಿ, ಎಷ್ಟು ಮಂದಿ ಶತ್ರುಗಳಿದ್ದರೂ ಅವರೊಡನೆ ಹೆಣಗಾಡಿ ವಿಜಯಿಯಾಗ ಬಹುದಾದ ಅಪೂರ್ವ ಅಹಿಂಸಾಮಾರ್ಗವನ್ನು ರಾಜಕೋಟೆಯ ಜನರು ಅನುಸರಿಸುತ್ತಿರುವರೆಂದು ನಾನೆನ್ನುವುದಿಲ್ಲ. ಆದರೆ ಸಾಮಾನ್ಯ ರೀತಿಯ ಅಹಿಂಸಾ ಮಾರ್ಗಾನುಸರಣೆಯಿಂದ ಏನೆಲ್ಲ ಮಾಡಲು ಶಕ್ಯವೆಂಬುದನ್ನು ಅವರು ತೋರಿಸಿಕೊಟ್ಟರು.

ರಾಜಕೋಟೆಯ ಪ್ರಜೆಗಳು ಪಡೆದ ಜಯವು ಮಹತ್ವದ್ದಾದರೂ, ಅವರ ನಿಜ ಪರೀಕ್ಷೆಯ ಕಾಲವು ಇನ್ನು ಮುಂದೆ ಬರಲಿದೆ. ಅವರು ಪ್ರಕೃತ ಜಯವನ್ನು ಸಂಪಾದಿಸಿದ ರೀತಿಯಲ್ಲೇ ಇನ್ನು ಮುಂದೆಯೂ ನಡೆಯದಿದ್ದಲ್ಲಿ ಇಂದಿನ ವಿಜಯವೇ ಅವರ ಅಪಜಯಕ್ಕೆ ಕಾರಣವಾಗಬಹುದು. ದೀರ್ಘಕಾಲದ ತರಬೇತಿಯನ್ನು ಪಡೆದ ಕೆಲ ಜನರು ಅಹಿಂಸಾತ್ಮಕ ಹೋರಾಟವನ್ನು ನಡೆಸಿ ತಾವು ಶಕ್ತರೆಂಬುದನ್ನು ವಿಶದಪಡಿಸಿರುವರು. ಆದರೆ ರಚನಾತ್ಮಕ ಅಹಿಂಸಾಮಾರ್ಗ ಹೋರಾಟವು ಅನುಕರಣೆ ತಕ್ಕಲ್ಲದೆಯೆಂದು. ಅವರ ಇನ್ನು ತೋರಲಿದೆ ಅಹಿಂಸಾಪರ ಹೋರಾಟದಲ್ಲಿ ಹಿಂಸೆಯ ತಲೆದೋರಿದರೆ, ತಿಳಿಸಬೇಕಾಗಬಹುದು. ಆದರೆ ರಚನಾತ್ಮಕ ಅಹಿಂಸೆಯು ಬಹಳ ದುಸ್ತರವಾದ ಕೆಲಸ. ಅದರಲ್ಲಿ ಹಿಂಸೆಯನ್ನು ಪತ್ತೆಹಚ್ಚುವುದು ಬಹು ಸುಲಭ. ಹಿಂಸೆಯ ತಲೆದೋರಿದರೆ, ಜಯಲಭಿಸಿದರೂ ಅದೊಂದು ಸೋಲಾಗಿ ಪರಿಣಮಿಸಬಹುದಾಗಿದೆ. ಅಲ್ಲಿಯ ಪ್ರಜೆಗಳು ಮೇಲಿಂದ ನಿಸ್ವಾರ್ಥ ಮತ್ತು ದೃಷ್ಟಿಯ ಬುದ್ಧಿಯನ್ನು ತೋರದ ವರೆಗೆ ತಮ್ಮನ್ನೂ ತಮ್ಮನ್ನು ಹೊಂದಿಕೊಂಡಿದ್ದವರನ್ನೂ ಉನ್ನತಿಗೆ ತರಬೇಕೆ ದಿರುವ ಮಾನವ ಸಹಜವಾದ ಆಕಾಂಕ್ಷೆಯನ್ನವರು ಸಮುಮನಗೊಳಿಸಲಾರರೆ?

ಅಧಿಕಾರಕ್ಕಾಗಿ ಹೋರಾಟವೆಂದೂ ನಡೆಯಕೂಡದು. ಆದರಿಂದ ಅವರಿಗೆ ದೊರೆಯಬೇಕಾದುದೂ ಲಭಿಸಲಿಕ್ಕಿಲ್ಲ. ತತಗೆ ಗಾಗಿ ಕಾರ್ಯ ನಡೆದು ಪಕ್ಷಭೇದವು ಸ್ವಾರ್ಥ ತಿಷ್ಠೆಯನ್ನು ಸಾಧಿಸುವ ಜನರ ದೆಸೆಯಿಂದ ಕೆಡವೇ ಅಲ್ಲದೆ ಇರುವುದು ಇತರ ಅಧಿಕಾರವು ಸಿಗಲಾರದು. ಬಹುಮತ ಒಪ್ಪಿದ ಮಾತೇ ಅಲ್ಲಿನ ಹೋರಾಟ ರಾಜ್ಯವೆಂದರೆ ಸರ್ವತೋಮುಖ ತ್ಯಾಗ ಶಿಸ್ತಿನ ಪರಿಪಾಲನೆ ರಚನಾತ್ಮಕ ಅಹಿಂಸಾಮಾರ್ಗವನ್ನನುಸರಿಸಿದರೆ ರಾಜಕೋಟೆಯು ಒಂದು ಮಾದರಿಸಂಸ್ಥಾನವೆಂದೆನಿಸಿ, ಸುತ್ತುಮುತ್ತಲೂ ತನ್ನ ಪ್ರತಿಭೆಯನ್ನು ಪಸರಿಸಬಹುದು.

ಆದುದರಿಂದ ಇಂದು ಲಭಿಸಿದ ಜಯದಿಂದಾಗಿ ಜನರು ಹಿಗ್ಗಿ ಆನಂದಿಸುವ ಬದಲಾಗಿ, ನಮ್ರತೆಯಿಂದ ತಮ್ಮ ಗುರಿಯನ್ನು ಮುಟ್ಟಲು ಪ್ರಾರ್ಥಿಸುತ್ತಿರಲಿ. ನಾನೂ ಅವರೊಡನೆ ಪ್ರಾರ್ಥಿಸುವೆನು.

ಅಫ್ಘಾನಿಸ್ಥಾನದಲ್ಲಿ ಪ್ರಗತಿಯ ಆವಶ್ಯಕತೆ.

ಅಫ್ಘಾನಿಸ್ಥಾನದ ಅರಸರಾದ ಮಹಮ್ಮದ್ ಜಾಹಿರ್ ಷಾರವರು ಅಫ್ಘಾನ್ ನೆಶನಲ್ ಪಾರ್ಲಿಮೆಂಟನ್ನು ತೆರೆಯುವ ಸಮಾರಂಭ ಕಾಲದಲ್ಲಿ ಹೀಗೆ ಅಪ್ಪಣೆ ಕೊಡಿಸಿದರು:

ನಮಗೆ ಪ್ರಗತಿಯ ಆವಶ್ಯಕತೆಯು ಬಹಳವಾಗಿದೆ. ಇದಕ್ಕಾಗಿ ನಾವು ಇತರ ಪ್ರಗತಿಪರರಾದ ಜನಾಂಗಗಳೊಡನೆ ಸಂಪರ್ಕದಿಂದ ಇರಬೇಕಾದುದು ಅತ್ಯಾವಶ್ಯಕವು. ಈ ವರ್ಷದ ನನ್ನ ಸರಕಾರದ ಪ್ರಾಮುಖ್ಯವಾದ ಕಾರ್ಯಕವೆಂದರೆ ನಮ್ಮಲ್ಲಿರುವ ನಿಜ ಸಂಪತ್ತಿನ ಸದುಪಯೋಗವಾಗಿತೆಕೊಳ್ಳುವುದಾಗಿದೆ.

ಕೆಲಮೊದಲ ಬಾರಿ ನಾವು ಸರಕಾರದ ಬದಲೇ ನಡಿಸಲ್ಪಡುವ ಕೈಗಾರಿಕಾ ಸಂಸ್ಥೆಗಳನ್ನೇ ಸ್ಥಾಪಿಸಿರುವ ಹಲವು ವೇಳೆ ನಮ್ಮ ಸ್ವೇಯಕ ಸಹಿಂಬಾಗಿ ಖಾಸಗಿ ವ್ಯಕ್ತಿಗಳ ಕೈಗಾರಿಕೆಯ ಉದ್ಯಮಗಳಿಗೆ ಪ್ರೋತ್ಸಾಹವಿತ್ತೆವು.

ಇನ್ನು ನಾವು ನಮ್ಮ ಪರದೇಶಗಳೊಡನೆಯ ಯೋಗ್ಯರೀತಿಯಲ್ಲಿ ಸ್ಥಾಪಿಸಿಕೊಳ್ಳಬೇಕು. ನಮ್ಮ ನೆರೆಜನಾಂಗದವರೊಡನೆ ನಾವು ಸ್ನೇಹ ಸಂಬಂಧಗಳಿಂದ ವರ್ತಿಸಬೇಕು. ಇದರಿಂದ ಪರಸ್ಪರ ಸುಖಶಾಂತಿಗಳು ದೇಶದಲಿ ನೆಲಸ ಬಹುದಾಗಿದೆ. ಮಾತವಲ್ಲ, ಸ್ವಧರ್ಮೀಯರಲ್ಲಿ ಸಂಕುಚಿತ ವೃತ್ತಿಗೆ ಇಂಬುಗೊಡದೆ ಭಿನ್ನ ಧರ್ಮೀಯರಾದ ಇತರ ಜನಾಂಗಗಳೊಡನೆಯೂ ಪ್ರೇಮದ ಐಕ್ಯತೆ ಬೆಳೆಯಬೇಕು. ಇದಕ್ಕಾಗಿ ನಾವು ಶಿಕ್ಷಣದ ಪ್ರಸಾರಕ್ಕೂ ಜನಾಂಗದ ಬೆಳವಣಿಗೆಗೂ ನೆರವಾಗಬೇಕು.

ಸ್ವದೇಶಿ ಕೈಗಾರಿಕೆಗೆ ಪ್ರೋತ್ಸಾಹ

ಇಂದೂರಿನ ಸರಕಾರದ ಅರ್ಥಿಕ ಸಚಿವರು ಸ್ಥಳೀಕ ಆಡಳಿತಾ ಸಂಸ್ಥೆಗಳಾದ ಎಲ್ಲ ಡಿಸ್ಟ್ರಿಕ್ಟ್ ಬೋರ್ಡುಗಳೂ ಮ್ಯುನಿಸಿಪಾಲಿಟಿಗಳೂ ಸಾಧ್ಯವಾದಷ್ಟು ಮಟ್ಟಿಗೆ ತಮ್ಮ ನಿತ್ಯ ಉಪಯೋಗಕ್ಕೆ ಬೇಕಾಗುವ ವಸ್ತುಗಳನ್ನು ಕೊಂಡುಕೊಳ್ಳುವಾಗ ಸ್ವದೇಶಿ ವಸ್ತುಗಳನ್ನೇ ಕೊಂಡುಕೊಳ್ಳಬೇಕೆಂದು ಆಜ್ಞಾಪಿಸಿರುವರು. ಹಿಂದೂದೇಶದಲ್ಲಿಂಗಡ ವಸ್ತುಗಳು ದೊರೆಯದಲ್ಲಿ ಮಾತ್ರ ವಿದೇಶಿ ವಸ್ತುಗಳನ್ನು ಉಪಯೋಗಿಸಬಹುದಾಗಿದೆ.

ಕಾಂಗ್ರೆಸ್ಸಿನಿಂದಾಗಿ ಜಿನ್ನರಿಗೆ ಪ್ರಮಾದ ಉಂಟಾಗಬಹುದು

ಇಂಡಿಪೆಂಡೆಂಟ್ ಪತ್ರಿಕೆಯಲ್ಲಿ 'ಸ್ಕ್ರಿಬಾನ್ಸ್' ಎಂಬ ಗುಪ್ತನಾಮಧಾರಿಗಳೊಬ್ಬರು ಹೀಗೆ ಬರೆದಿರುವರು:

'ಕಾಂಗ್ರೆಸ್ಸಿನ ತಪ್ಪುಗಳನ್ನು ಹುಡುಕಿ ಜಿನ್ನರು ಕಾಲಕಳೆಯುವ ಬದಲು ವಿದಮಿಸುವ ಕೆಲಸವೇ ಉಳಿದುದು. ಇದರಿಂದಾಗಿ ಕಾಂಗ್ರೆಸ್ಸಿಗಾಗಲಿ ಮುಸಲ್ಮಾನರಿಗಾಗಲಿ, ಜಿನ್ನರಿಗಾಗಲಿ ಏನೂ ಲಾಭವಾಗದು. ಬದಲಾಗಿ ರಾಜಕೀಯ ವಾತಾವರಣವು ಸ್ವಚ್ಛದರ್ಗಂಧಮಯ ಸಂಶಯ ಮತ್ತು ಸ್ಥಳೀಯ ವಿದ್ಯಮಾನಗಳನ್ನು ನಿರಾಕರಿಸಿ ಕಾಯುತ್ತಿರುವ ನ್ಯಾಯ ಶಾಲಿಗಳಿಗೆ ಸಿಟ್ಟಿಗೆಬ್ಬಿಸಬಹುದು.

ಹೆಚ್ಚಾಗಿ ಇದು ಜಿನ್ನರ ಅಪ್ರತಿಮ ಮೇಧಾಶಕ್ತಿಯನ್ನೇ ಕುಗ್ಗಿಸಿ ಕುಂದಿಸಲಹುದು. ದಿನನಿತ್ಯವೂ ಸಿಟ್ಟಿನಿಂದ ಸಿಡಿಮಿಡಿಗೊಂಡು ಚಡಪಡಿಸುವುದು ಮೆದುಳಿಗೆ ಹಾನಿಯನ್ನುಂಟುಮಾಡುವುದು. ಆದುದರಿಂದ ಯಾರಾದರೂ ವಜ್ರದಂತೆ ಗಟ್ಟಿಯಾಗಿರುವ ಇಸ್ಲಾಂ ಧರ್ಮವು ಕಾಂಗ್ರೆಸ್ಸಿನಿಂದಾಗಿಯಾಗಲಿ, ಮಹಾತ್ಮರಿಂದಾಗಿಯಾಗಲಿ ನಾಶಹೊಂದಲಾರದೆಂಬುದನ್ನು ಜಿನ್ನರಿಗೆ ವಿವರಿಸಿ ಹೇಳಿ ಸಮಾಧಾನ ಪಡಿಸಿದರೆ ಬಹಳ ಉತ್ತಮವಿತ್ತು.

ಪೆನ್ಶನು — ಇನ್ನು ಒಂದೇ ಗಂಟಿನಲ್ಲಿ ಸಿಗಲಾರದು

ಹೀಗೆ ನಮ್ಮ ಸರಕಾರವು ಒಂದು ಸೂತ್ರವನ್ನು ಜ್ಯಾರಿಗೆ ತರುವುದರಲ್ಲಿದೆಯಾಗಿ ಮದ್ರಾಸಿನಲ್ಲಿ ತುಂಬ ವದಂತಿ ಎದ್ದಿದೆ. ಸರಕಾರದ ಎಲ್ಲ ನೌಕರರಿಗೆ ಈ ಸೂತ್ರವು ಅನ್ವಯಿಸುವುದಾಗಿದೆ ಎನ್ನುತ್ತಾರೆ. ಸರಕಾರದ ಇಲಾಖೆಗಳಿಂದ ಈ ವದಂತಿಯು ನಿಜವೆಂದು ಅಲ್ಲವೆಂದು ಇನ್ನು ತಿಳಿದು ಬಂದುದಿಲ್ಲ. ಆದರೆ, ಸದ್ಯದಲ್ಲೇ, ಸರಕಾರದ ಹಿತ ನಿರ್ಣಯವು ಪ್ರಕಟವಾಗುವುದೆಂದು ನಾವು ಕೇಳುತ್ತಲಿದ್ದೇವೆ. ಈ ಪ್ರಕಾರ ಇನ್ನು ಎಷ್ಟೋ ವರ್ಷ ನೌಕರರ ಕಾಯುತ್ತಲಿರುವರು. ಪ್ರಾವಿಡೆಂಟ್ ಫಂಡ್ ಜ್ಯಾರಿಯಲ್ಲಿರುವಾಗ, ಈ ಒಗೆಯಾಗಿ ಪೆನ್ಶನು ಒಂದೇ ಸಲ ಪಡೆಸಬೇಕೆಂಬ ನಿಯಮಾಯತಿಗೆ ಬೆಲೆ ಹೆಚ್ಚಿತ್ತು. ಸರ್ವಿಸು ಮುಗಿದ ಎಷ್ಟೋ ಜನರು ಹೊಸ ಜೀವನಕ್ಕೆ ಪ್ರಾರಂಭಿಸಲು ಇದರಿಂದ ಪ್ರೋತ್ಸಾಹವಿತ್ತು. ಆದರೆ ಸರಕಾರವು ಈ ನಿಯಮವನ್ನು ಹಿಂದೆಗೆಯುವ ಯೋಗ್ಯವೆಂದು ತಿಳಿದಿರುವಾಗಿ ಹಲವು ಬಲ ಎನಿಸಬಹುದು. ಮಾತ್ರವಲ್ಲದೆ ಒಂದುದು ಅದುದರಿಂದ, ಇದು ತೀರ ನೂತನ ಕೌತುಕವಲ್ಲ.

ಪ್ರಾಂತಿಕ ಶಾಸನಸಭೆ ಕೌನ್ಸಿಲುಗಳ ಪ್ರೆಸಿಡೆಂಟರೂ ಡಿಪ್ಯೂಟಿ ಪ್ರೆಸಿಡೆಂಟರೂ ಸೇರಿದ ಡೆಲ್ಲಿ ಸಭೆ

ತಾ. ೯ರಲ್ಲಿ ಈ ಸಭೆ ಸೇರಿತು. ಕೌನ್ಸಿಲ್ ಒಫ್ ಸ್ಟೇಟಿನ ಪ್ರೆಸಿಡೆಂಟ್‌ರವರಾದ ಸರ್ ಮಾಣಿಕ್ಯಜೀ ದಾದಾಭಾಯಿಯವರು ಅಧ್ಯಕ್ಷರಾಗಿದ್ದರು.

ಇಂತಹ ಸಭೆಗಳ ಸೇರಿದ ಕೌನ್ಸಿಲುಗಳ ವ್ಯವಹಾರದಲ್ಲಿ ಒಂದೇ ಬಗೆಯ ಸೂತ್ರಗಳನ್ನು ಅನುಸರಿಸಬಹುದೆಂದು, ಪ್ರಾಂತ್ಯಗಳೊಳಗೆ ಏಕಪ್ರಕಾರ ವ್ಯವಹಾರವಾಗಲು ಅನುಕೂಲವಾಗುವುದೆಂದೂ ಸರ್ ದಾದಾಭಾಯಿಯವರೆಂದರು. ಕೌನ್ಸಿಲುಗಳು ಅನಾವಶ್ಯಕವಾಗಿವೆ ಎಂದು ಇನ್ನೂ ವಿಮರ್ಶೆಗಳಾಗುತ್ತಲೇ ಇವೆ. ಈ ವಿರುದ್ಧಭಾವವು ಇದ್ದೇ ಇರುವುದು, ಇದು ಅಳಿಯದಂತೆ ನೋಡಬೇಕಾಗಿದೆ, ಇನ್ನೂ ಹೊಸ ಸುಧಾರಣೆಗಳು ಉಂಟಾಗಲಿರುವಾಗ, ಎಸೆಂಬ್ಲಿ ಕೌನ್ಸಿಲುಗಳೊಳಗೆ ವ್ಯಕ್ತಿಯೇ ಇರಬೇಕಲ್ಲದೆ ಅನ್ಯಥಾ ಇರಬಾರದೆಂದೇ ಅವರ ಅಭಿಪ್ರಾಯವಾಗಿ, ಎಲ್ಲ ಅಧ್ಯಕ್ಷರು ತಮ್ಮ ಕಾರ್ಯನಿರ್ವಾಹದಲ್ಲಿ ಅತ್ಯಾಸಕ್ತರಾಗಿರುವರೆಂಬುದನ್ನು ಒತ್ತಿ ಹೇಳಿದರು.

ಈ ಸಭೆಯು ಎರಡು ಮೂರು ದಿನ ನಡೆವುದು. ಪತ್ರಿಕಾ ಪ್ರತಿನಿಧಿಗಳಿಗೆ ಇಲ್ಲಿ ಸ್ಥಾನವಿಲ್ಲ. ಈ ಸಭೆಯ ವ್ಯವಹಾರವೆಲ್ಲ ಖಾಸಗಿ— ಗೋಪನ

[ಮದ್ರಾಸು ಕೌನ್ಸಿಲಿನ ಪ್ರೆಸಿಡೆಂಟರೂ ಡಿಪ್ಯೂಟಿ ಪ್ರೆಸಿಡೆಂಟರೂ ಈ ಸಭೆಗೆ ಹೋಗಿಲ್ಲ. ಶುಭವಾಗಲೆಂದು ಹರಸಿ ತಂತೀವಾರ್ತೆ ಕಳುಹಿಸಿರುವರು]

ಸ್ವದೇಶಾಭಿಮಾನಿ

ತಾರೀಖು ೧೩—೧—೧೯೩೯

ಪೆಲೆಸ್ತೀನ ವಿಚಾರ

[ಸರಕಾರದ ನೂತನ ಪತ್ರಕ]

ಸುಳ್ಳು ಸುದ್ದಿಗಳನ್ನು ಅಡಗಿಸಲು, ಬ್ರಿಟಿಷ ಸರಕಾರವು ಪೆಲಿಸ್ತೀನನ್ನು ಕುರಿತು ನೂತನ ವಾದೊಂದು ಪತ್ರಕ ಹೊರಡಿಸಿಯದೆ. ಇತರರ ಹೇಳಿಕೆಯನ್ನು ಅಲ್ಲಗಳೆದರೆ,—ಹಿಂದೆ ನಂಬದವರಿಗೆ ಅದರಿಂದ ಉಪಕಾರವಿಲ್ಲ; ನಂಬಿದವರಿಗೆ ಸಂದೇಹ ಇಳಿಯುವಂತಿಲ್ಲ. ಆದರೆ ಸರಿಯಾದ ಅಂಕೆ ಸಂಖ್ಯೆಗಳ ಮೂಲಕ ಯತಾರ್ಥ ಚರಿತ್ರೆ ಬರೆದರೆ ಸರ್ವರಿಗೂ ಉಪಕಾರವಿದೆ.

'ಸುಮಾರು 1000—1500 ದಂಗೆಖೋರರು ಇನ್ನೂ ಚಟುವಟಿಕೆ ನಡೆಸುತ್ತಿರುವರೆಂದರೆ ಅವರ ಸಂಖ್ಯೆ ಇನ್ನೂ ಸರಿಯಾಗಿ ತಿಳಿದಿಲ್ಲವೆಂದಾಯಿತು. ಅರಬರಲ್ಲಿ ಇತರ ವಿಚಾರವೇನೂ ಇಲ್ಲದೆ, ಹೇಗೂ ಮಾಡಿ ಸುಲಿಗೆ ಸಿಕ್ಕಿದರಾಯಿತು ಎನ್ನುವವರ ಸಂಖ್ಯೆ ಇಷ್ಟಿರಬಹುದೆಂದಿಲ್ಲ. ಆದರೆ, ಇವರೊಡನೆ ಸಹಾನುಭೂತಿಯುಳ್ಳವರ ಸಂಖ್ಯೆ ಧಾರಾಳವಿದೆ! ಪ್ರತಿ ಗ್ರಾಮದಲ್ಲೂ ಈ ಸುಲಿಗೆಗಾರರಿಗೆ ಆಶ್ರಯ ದೊರೆತುದುಂಟು. ಒತ್ತಾಯ ಹೆದರಿಕೆಗಳಿಂದ ಹೀಗೆ ಆಶ್ರಯ ಸಿಕ್ಕಿದ್ದಿರಬಹುದು. ಆದರೆ ಅರಬರು ಅತಿಥಿಸತ್ಕಾರ ಮಾಡುವುದರಲ್ಲಿ ಎಂದೂ ಹಿಂಜರಿಯುವವರಲ್ಲ; ಯಾವನೇ ಆಗಲಿ, ಆಶ್ರಯ ಬೇಡಿದರೆ, ಅವನನ್ನು ಕಾಪಾಡುವುದು ಅವರ ಧರ್ಮವೆಂದೇ ಅವರ ಪುರಾತನದಿಂದಲೂ ನಡೆದುಬಂದ ಪದ್ಧತಿ, ಧರ್ಮ. ಕೆಲವರು ಯಾವ ಪಕ್ಷವನ್ನೂ ಹಿಡಿಯದೆ, ಎರಡರಲ್ಲೂ ಸೇರಿ ನಡೆಯುತ್ತಿದ್ದಾರೆ' ಇದೂ ವರದಿಯಿಂದ ತಿಳಿದು ಬರುತ್ತದೆ.

ವರದಿಯಲ್ಲಿ ಅರಬರೊಳಗಣ ಪಂಗಡ ದ್ವೇಷಗಳ ಮಾತು ಇದೆ. ಭಯೋತ್ಪಾದಕರನ್ನು ಅಡಗಿಸಲು ಇತರ ಭಯೋತ್ಪಾದಕರು ಕಾಯುತ್ತಿರುವರು. ಇದು ಬ್ರಿಟಿಷ ಪ್ರೀತಿಯಿಂದಲ್ಲ, ಕಾನೂನಿನ ರಕ್ಷಣೆಗೂ ಅಲ್ಲ, ಎದುರು ಪಂಗಡವು ಬಹಳ ವಿಜಯ ಹೊಂದದಂತೆ ಮತ್ತೊಂದು ಪಕ್ಷವು ಎದುರು ನಿಂತಿದೆ ಅಷ್ಟೆ. ಅಬ್ದುಲ್ ರಹೀಮುನೆಂಬ ಪಂಗಡದಿಗನನ್ನು ಬ್ರಿಟಿಷ ಸೈನ್ಯದ ಅಧಿಕಾರಿಗಳು ಬಹಳ ಹೊಗಳುತ್ತಿರುವರು. "ಇವನು ಸತ್ಯಶೀಲನು, ಶಿಕ್ಷಿತನು, ದಂಗೆಖೋರರಿಗಿಂತ ಇವನ ದೇಶವತ್ಸಲನು. ತನ್ನ ನಡತೆಯಿಂದ ನ್ಯಾಯವಾಗಿ, ಹೋರಾಡಲು ಸಿದ್ಧನೆಂದೂ, ಇತರರನ್ನು ಹಿಂಸಿಸಿ ಬೆದರಿಸಿ ಶಾಸನ ಕಲ್ಪಿಸಬಾರದೆಂದೂ ತೋರಿಸಿರುವನು" ಇದೇ ರೀತಿ ಬ್ರಿಟಿಷ ಸರಕಾರವು ತನ್ನ ವಾಯುವ್ಯ ಗಡಿಪ್ರಾಂತದಲ್ಲಿ, ಕೆಲ ಪಂಗಡಗಳನ್ನು ಕುರಿತು ಹೊಗಳಿದ್ದುಂಟು. ಹೇಗೂ ಇರಲಿ ದಂಗೆಗಳ ಇನ್ನೂ ಮುಗಿದಿಲ್ಲವಷ್ಟೆ! ಇವು ಮುಗಿದು ಶಾಂತಿಸ್ಥಾಪನೆಯಾಗದ ಪೆಲಿಸ್ತೀನ ಸಮಸ್ಯೆ ಕೊನೆಗಾಣುವುದುಂಟೇ? ವರದಿಯನ್ನು ವಾಸ್ತವವಿದ್ದರೂ ಹೊಗಳಿ ಫಲವೇನಿದೆ? ಈ ದಂಗೆಗಳು ಇನ್ನೂ ಕೆಲವರ್ಷಗಳ ತನಕ ನಡೆಯದಿರಲಾರವು. ಇವನ್ನು ಮುಗಿಸಲು ಬ್ರಿಟಿಷ ಸರಕಾರವು ಏನು ಮಾಡುವುದುಂಟು?

ಯೆಹೂದ್ಯರು ಶಸ್ತ್ರಾಸ್ತ್ರ ಸಜ್ಜಿತರಾಗಿರುವರಾದರೂ, ಈ ದಂಗೆಗಳಲ್ಲಿ ಬಹಳವಾಗಿ ಕೈಯೆತ್ತಲಿಲ್ಲದಿರುವುದಕ್ಕೂ ಯೋಗ್ಯ ಕಾರಣಗಳುಂಟು. ಸರಕಾರವು ಇವರಿಗೆಷ್ಟು ಬೆಂಬಲ ಕೊಟ್ಟಿದೆ?

ದಂಗೆಖೋರರನ್ನು ಈಗ ಒಂದೆಡೆ ಕೂಡಿಸುತ್ತಿರುವರು. ಈ ಕೂಡಿಕೆಯಲ್ಲಿ, ನಿರಪರಾಧಿಗಳಿಗೂ ಶಿಕ್ಷೆ ಹೊಂದಬಹುದು; ಪ್ರಮಾದವಾದೀತು. ಒಂದು ಗ್ರಾಮವನ್ನು ಸೈನಿಕರು ಮುತ್ತಿ, ಅಲ್ಲಿನವರನ್ನು ಸೆರೆಹಿಡಿಯುವಾಗ, ಕೆಲವರು ಆ ಗ್ರಾಮ ಬಿಡಲೆತ್ನಿಸಿ ಗುಂಡಿನೇಟಿಗೆ ಸಿಕ್ಕಿದ್ದುಂಟಲ್ಲ! ಇವರೆಲ್ಲ ಅಪರಾಧಿಗಳೋ? ತಲೆ ತಪ್ಪಿಸಿಕೊಳ್ಳಬೇಕೆಂದೇ ಪಲಾಯನ ಮಾಡಿದುದೋ? ಸೈನಿಕರು ಹಾಗೆ ಎಣಿಸಲು ಖಂಡಿತ ಹಕ್ಕುಳ್ಳವರು, ಆದರೆ, ಅಜ್ಞಾನಿಗಳಾದ ಗ್ರಾಮಸ್ಥರು ಭಯದಿಂದಲೇ ಪಲಾಯನ ಮಾಡುವ ಹಕ್ಕುಳ್ಳವರಲ್ಲವೆ?

ಪೆಲಿಸ್ತೀನಕ್ಕೆ ಅರಬಂಗೆ—ಇನ್ನಿದು ಸಾಕು ಎಂದು ತಿಳಿಸುವ ಗೆಳೆಯರು ಬೇಕು. ಆಗ ಶಾಂತಿಯುಂಟಾದರೆ, ಮುಂದೆ ರಾಜ್ಯಭಾರ ವಿಷಯಕವಾದ ತಾಹಾನಾಮೆ ಮಾಡಿಕೊಳ್ಳುವುದು ಕಷ್ಟವೆನಿಸದು. ಆದರೆ, ಬೆಕ್ಕಿನ ಕೊರಳಿಗೆ ಗಂಟೆಕಟ್ಟುವ ಇಲಿಗಳೂ ಇರಬಹುದೆ?

ಆಂಧ್ರ ಪ್ರಾಂತ್ಯ ವಿಚಾರ

ತಮಿಳು, ತೆಲುಗು, ಮಲಿಯಾಳ, ಕನ್ನಡ ಭಾಷೆಗಳೇ ಹೆಚ್ಚಾಗಿ ಬಳಕೆಯಲ್ಲಿರುವ ಪ್ರದೇಶಗಳಲ್ಲಿ ಭಾಷಾನ್ವಯ ಪ್ರಾಂತ್ಯಗಳನ್ನಾಗಿ ರಚಿಸಿ, ಅವುಗಳಿಗೆ ಸ್ವರಾಜ್ಯ ಕೊಡುವಂತೆ ಕಳೆದ ಮಾರ್ಚತಿಂಗಳಲ್ಲಿ ಮದ್ರಾಸು ನ್ಯಾಯಸಭೆಗಳು ಒಂದು ಸೂಚನೆಯನ್ನು ಮಂಜೂರು ಮಾಡಿದುವಷ್ಟೆ. ಆಂಧ್ರರಿಗೆ ಈ ಸೂಚನೆಯಿಂದ ಶಾಸನ ಪೂರ್ವಕವಾಗಿ ಪ್ರಾಂತ್ಯ ರಚನೆ ಮಾಡಿಕೊಳ್ಳಲು ಆತಂಕವಿನ್ನು ಇಲ್ಲವೆಂದಾಯಿತು. ಪ್ರಾಂತಿಕ ಸರಕಾರವು ತಮ್ಮ ಪ್ರಯತ್ನಗಳಿಗೆ ವಿರುದ್ಧವಾಗಿ ವರ್ತಿಸದೆಂದು ನಂಬಿ ಆಂಧ್ರರು ಸ್ವಪ್ರಾಂತ್ಯ ರಚನೆಯ ಚಳವಳಕ್ಕೆ ಕೈಹಚ್ಚಿದರು. ಆದರೂ ಕೊಂಗ್ರೆಸ್ ಸಂಪೂರ್ಣವಾಗಿಯೂ ಆಂಧ್ರಪ್ರಾಂತ್ಯ ರಚನೆಗೆ ಬೆಂಬಲ ಕೊಡುವುದೇ ಇಲ್ಲವೇ ಎಂದು ತಿಳಿಯಲ್ಲು, ಮುಖಂಡರು ವಾರ್ಧಾಯಾತ್ರೆಯನ್ನು ಕೈಕೊಂಡು ಅಲ್ಲಿಂದಲೂ ಜುಲೈಯಲ್ಲಿ ಸಾಕಷ್ಟು ಭರವಸೆ ಪಡೆದರು. ಮದ್ರಾಸು ನ್ಯಾಯಸಭೆಗಳು ಮಾಡಿದ ನಿರ್ಣಯವನ್ನು ಕೊಂಗ್ರೆಸ್ ಕಾರ್ಯಕಾರೀ ಮಂಡಲವು ಸಂಪೂರ್ಣವಾಗಿ ಸಮರ್ಥಿಸಿತು. ಆದರೆ ಕೊಂಗ್ರೆಸ್ ಇಡೀ ದೇಶದ ಸಂಪೂರ್ಣ ಸ್ವಾತಂತ್ರ್ಯವನ್ನು ಸಿದ್ಧ ಮಾಡಿಕೊಳ್ಳುವುದೇ ಪ್ರಾಮುಖ್ಯ ಕರ್ತವ್ಯವಾಗಿದ್ದುದರಿಂದ, ಕೊಂಗ್ರೆಸಿಗೆ ಅಧಿಕಾರ ಪ್ರಾಪ್ತವಾದ ಕೂಡಲೆ [illegible] ಮಾಡುವಾಗ, ಈ ಭಾಷಾನ್ವಯ [illegible] ಸ್ವರಾಜ್ಯ ದಾನದ ಕರ್ತವ್ಯ ಕೈಕೊಳ್ಳಬೇಕೆಂದು ಕಾರ್ಯಕಾರೀ ಮಂಡಲವು ನಿರ್ಧರಿಸಿದ್ದುದ ಆದಷ್ಟು ಮುಖ್ಯ ಚಳವಳವಾಗಿ ಪ್ರಕಟಿಸಿ, ದೇಶದ ಸ್ವಾತಂತ್ರ್ಯಕ್ಕಾಗಿ ನಡೆವ ಚಳವಳವನ್ನು ಗೌಣವಾಗಿ ಎಣಿಸಬಾರದೆಂದೂ ಸೂಚಿಸಿತು.

ಈ ಎರಡನೇ ಸೂಚನೆಯನ್ನು ಅಂಧರ ಆಷ್ಟು ಮೆಚ್ಚದೆ ಅಂದಿನಿಂದ ಇದುವರೆಗೂ ಸಮಾಸರ್ವ ಚಳವಳ ನಡೆಸುತ್ತಲೇ ಇರುವರು. [illegible] ಇವರ [illegible] ಬೇಗನೆ [illegible] ಆವರು [illegible] ಹಲವು ಪರಿಷತ್ತುಗಳನ್ನು ಜರುಗಿಸುತ್ತಿರುವರು. ಸಂಪೂರ್ಣ ಉತ್ತೇಜನಕರವಾದ ರೀತಿಯಲ್ಲಿ ಶ್ರೀ ರಾಮದಾಸ ಪಂತುಲುರವರ ಅಧ್ಯಕ್ಷತೆಯಲ್ಲಿ ಮೊನ್ನೆ ಅಂತಹದೊಂದು ಪರಿಷತ್ತು ಜರುಗಿತು. ಇವರ ಭಾಷಣದ ವಿಶೇಷವನ್ನೀಯುವಾಗಿದೆ. ಇತರ ಭಾಷಾನ್ವಯ ಪ್ರಾಂತ್ಯ ಬೇಕೆನ್ನುವವರೂ ಈ ವಿಷಯಗಳನ್ನು ಗಮನಿಸಬೇಕಾಗಿದೆ.

ಶ್ರೀ ಸತ್ಯಮೂರ್ತಿಯವರು ಆಂಧ್ರ ಪ್ರಾಂತ್ಯವಾಗಿ ಹೋದರೆ ಜನರು ಸುಮ್ಮನೆ ಅಂಥ ತಮಿಳರೆಂದು ವಿವಾದವಾದ ಭೇದಭಾವದಿಂದ ದೂರವಾದಲೆಂದಿದ್ದರು. ಅದನ್ನು ಎದುರಿಸಿ,— ಆಂಧ್ರಪ್ರಾಂತ್ಯವೂ ತಮಿಳಪ್ರಾಂತ್ಯವೂ ಉಂಟಾಗಲಿವೆ. ಇತ್ತಂಡಗಳೂ ಈ ಪ್ರಾಂತ್ಯಗಳಾದಲ್ಲಿ ಬಲಹೊಂದುವುವು. ಇದು ಇಡೀ ದೇಶಕ್ಕೆ ಹಿತ. ರಾಯಲಸೀಮೆಯವರ ಭಯ ವ್ಯರ್ಥ. ಆಂಧ್ರಪ್ರಾಂತ್ಯವಾದಲ್ಲಿ ರಾಯಲ್ ಸೀಮೆಗೆ ವಿಶೇಷ ಸೌಕರ್ಯಗಳು ಉಂಟಾಗುವುವು. ಬೇಕಾದಷ್ಟು ಚೆನ್ನಾಗಿ ಆ ಪ್ರಾಂತ್ಯದ ಅಭ್ಯುಕ್ತಿ ಮಾಡಬಹುದು ಎಂದರು.

—ಕನ್ನಡಪ್ರಾಂತ್ಯವು ಕರ್ನಾಟಕ—ಕರ್ಣಾಟಕ ಹೆಸರುಗಳಲ್ಲಿ ಯಾವುದು ಸರಿಯೆಂದು ತರ್ಕಿಸಿ ನಿಶ್ಚಯವಾಗಲಿಲ್ಲದ ಕಾರಣ, ಪ್ರಾಂತ್ಯರಚನೆಗೆ ಮನಕೊಡುವುದಕ್ಕೆ ಅವಕಾಶ ಕಂಡಿಲ್ಲ!!!

ಮ್ಯುನಿಸಿಪಲ್ ಕೌನ್ಸಿಲುಗಳು

[ರಾಜಮಹೇಂದ್ರಕ್ಕೆ ಪುನಃ ರಾಜಕೀಯ ರಂಗದಲ್ಲಿ ಪ್ರವೇಶಿಸಲಿರುವ ಶ್ರೀ ಎಸ್. ಎಸ್. ಶ್ರೀನಿವಾಸೈಯಂಗಾರ್ಯರು ತೆರಳಿದಾಗ, ಅಲ್ಲಿ ಅರ್ಪಿಸಿದ ಬಿನ್ನಪತ್ರಕ್ಕೆ ಹೀಗೆ ಉತ್ತರವಿತ್ತರು]

"ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲೂ, ನಿರ್ಮಲವಾದ ಮನೆಗಳು, ಅಗಲವಾದ ಹೆದ್ದಾರಿಗಳು, ಬೇಕಾದಷ್ಟು ಬೆಳಕು, ಶುದ್ಧವಾದ ಹಾಲು, ಯೋಗ್ಯ ಚರಂಡಿಗಳು, ವಾಯುಖಾನೆಗಳು ಮೊದಲಾದುವುಗಳನ್ನು ಒದಗಿಸಿಕೊಡಬೇಕು. ಇವೆಲ್ಲವೂ ಅಗತ್ಯ ಸೌಕರ್ಯಗಳು. ಆದರೆ ಇವನ್ನೆಲ್ಲ ಸುಲಭವಾಗಿ ಒದಗಿಸಿಕೊಡಬರುವಂತಿಲ್ಲ. ಎಲ್ಲ ಕೌನ್ಸಿಲರುಗಳು ಐಕ್ಯದಿಂದ ನಡೆಯದಿರುವಲ್ಲಿ ಇದೊಂದೂ ಸಾಧ್ಯವಾಗಲಾರದು. ಈಗ ಪ್ರತಿಯೊಬ್ಬ ನಾಗರಿಕನೂ ತನ್ನ ಆರೋಗ್ಯವಿಚಾರಗಳಲ್ಲಿ ಹೆಚ್ಚಿನ ಎಚ್ಚರವಿಡುತ್ತಿರುವನು.

ಸ್ವರಾಜ್ಯವು ನಿಜವಾಗಿಯೂ ಸ್ವರಾಜ್ಯವಾಗಿರಲೇಬೇಕು. ಮ್ಯುನಿಸಿಪಲ್ ಕೌನ್ಸಿಲಗಳು ಜಿಲ್ಲಾಬೋರ್ಡುಗಳು ಮೊದಲಾದುವು ಕೆಲಸ ನಡೆಸುತ್ತಿರುವಾಗಲೂ, ಸ್ವರಾಜ್ಯದ ಕಾರ್ಯಕ್ರಮ ಜ್ಯಾರಿಯಲ್ಲಿರಲೇ ಬೇಕು. ಗ್ರಾಮಗಳಲ್ಲಿ ಸ್ವರಾಜ್ಯವಿದ್ದರೇ ಸ್ವರಾಜ್ಯ. ನಿಜವಾದ ಸ್ವರಾಜ್ಯವಿಲ್ಲವೆ, ನಿಜವಾದ ಪ್ರಜಾಪ್ರಭುತ್ವವಿಲ್ಲ. ಇಂತಹ ಸ್ವರಾಜ್ಯವನ್ನು ನಿರ್ವಹಿಸುವವರೂ ನಿರಾಕ್ಷೇಪಕರವಾದ ಗುಣಗಳುಳ್ಳವರಾಗಿರಬೇಕು.

ಕಮಿಶನರರ ನೇಮಕವು ಹಿತ ಅಹಿತವೆಂದು ಹೇಳಲಾರೆ. ಆದರೆ ಅವರ ಕೇವಲ ಎಕ್ಸಿಕ್ಯುಟಿವ ನೌಕರರಾಗಿ ಇರಬೇಕು. ಹೊರತು, ಮ್ಯುನಿಸಿಪಾಲಿಟಿಗಳೂ ಬೋರ್ಡುಗಳೂ ಈ ಕಮಿಶನರುಗಳ ಬೋಧಕ ಅಥವಾ ಸೂಚಕ ಸಭೆಗಳಾಗಿ ಮಾತ್ರ ಮಾರ್ಪಟಬಾರದು.

ಸಮಾಜದೊಳಗೆ ಯಾವ ಮನಸ್ತಾಪಗಳು ಇರದಂತೆ ಕೌನ್ಸಿಲರುಗಳ ಪ್ರಯತ್ನಿಸಬೇಕು. ಬ್ರಾಹ್ಮಣರೇ ಮಾತ್ರವಲ್ಲದೆ ಅಬ್ರಾಹ್ಮಣೇತರರೂ ಹರಿಜನರನ್ನು ಮುಗಲ್ಮಾನರನ್ನೂ ಕ್ರಿಶ್ಚಿಯನ್ನರನ್ನು ಪ್ರೀತಿಸಿ ನಡೆಸಬೇಕು.

"ಏಡೆಡ್ ಶಾಲಾ ಮೆನೆಜರರಿಗೆ ಸ್ವಲ್ಪ ನಿರ್ಬಂಧ ಕಡಮೆಯಿರಲಿ!"

ಶ್ರೀ ಎಸ್ ರಾಮಸ್ವಾಮಿ ಅಯ್ಯರವರು ಕ್ಯಾಲೀಕಟ್ಟಿನ ಅಧ್ಯಕ್ಷ ಏಡೆಡ್ ಶಾಲಾ ಮೆನೆಜರಿಗೆ ಸೂಚಿಸಿದುದು.

"ಈಗಿನ ಎಜ್ಯುಕೇಶನಲ್ ರೂಲ್ಸ್ ಮತ್ತು ಗ್ರೇಂಟ್ ಇನ್ ಏಡ್ ಕೋಡುಗಳು ದುರಸ್ತಿಯಾಗದೆ, ಮೆನೆಜರುಗಳಿಗೆ ಉಳಿಗಾಲವಿಲ್ಲ. ಈ ಸೂಚನೆಗಳಲ್ಲಿ ಒಂದನ್ನು ಅನುಸರಿಸುವುದಾದರೆ, ಟ್ರೈನ್ಡ ತರಬೇತಾದ ಉಪಾಧ್ಯಾಯರು ಇರಬೇಕಾಗುವುದು! ಆದರೆ ಈಗ ಇರುವ ತರಬೇತಾದ ಉಪಾಧ್ಯಾಯರ ಸಂಖ್ಯೆ ಕಡಿಮೆ. ಇವರೊಳಗೆ ಅಂಥವರು ಮುನಿಸಿಪಲ್ ಬೋರ್ಡ ಮ್ಯುನಿಸಿಪಲ್ ಶಾಲೆಗಳಲ್ಲಿರುವರು. ಉಳಿದವರು ಮಾತ್ರ ಏಡಡ್ ಶಾಲೆಗಳಲ್ಲಿರುವರು. ಮಲಬಾರಿನಲ್ಲಿ ಇನ್ನು ೧೫,೦೦೦ ಮಂದಿ ಹೆಚ್ಚಿಗೆ ತರಬೇತಾದ ಉಪಾಧ್ಯಾಯರಿಲ್ಲದೆ ಪ್ರತಿ ಒಬ್ಬ ತರಬೇತಾಗದವನಿಗೆ ಇಬ್ಬರು ತರಬೇತಾದವರು ಎಂಬ ಪ್ರಮಾಣವನ್ನು ಅನುಸರಿಸಬರುವುದಿಲ್ಲ.

ಸರ್ವಿಸು ರಿಜಿಸ್ಟ್ರಿ ಪ್ರಕಾರ, ಮೆನೆಜರನ ಜವಾಬ್ದಾರಿಯು ಕಾನೂನು ಪ್ರಕಾರ ನಿರ್ಧಾರವಾಗಿದೆ, ಸರಕಾರದ ಜವಾಬ್ದಾರಿ ಮಾತ್ರ ಹಾಗಿಲ್ಲ! ಗ್ರೇಂಟಿನ ನೀಕಡಾ ೧೫ನ್ನು ಹೇಗೆ ವ್ಯಯಿಸಿದನೆಂದೂ ಮೆನೆಜರ ಲೆಕ್ಕ ಒಪ್ಪಿಸಬೇಕಾಗಿದೆ. ಮೆನೆಜರನಿಗೆ ಉಂಟಾಗುವ ನಷ್ಟವನ್ನು ಸರಕಾರವು ತುಂಬಿಸಿಕೊಡುವುದೇನು? ತಮ್ಮ ಶಾಲೆಗಳ ಆಡಳಿತ ನೋಡಲು ಸ್ವಾತಂತ್ರ್ಯವಿಲ್ಲದಿರಲು ಮೆನೆಜರರಿಂದ ಯಾವ ಶಾಲೆಗಳನ್ನು ಸರಿಯಾಗಿ ನಡೆಸಬರುವುದೆಂದು ತಿಳಿಯದು."

ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ ಸಮಿತಿ.

ಮೈಸೂರು ಸರಕಾರಕ್ಕೆ ಅಲ್ಟಿಮೇಟಮ್ ಉದಾಶೀನಮಾಡಿದರೆ ಫೆಬ್ರವರಿ ಹಿಂದಿನ ತಾರೀಕಿಗೆ ಸತ್ಯಾಗ್ರಹ ಪ್ರಾರಂಭ

ಮೈಸೂರು ದೊಡ್ಡಪೇಟೆಯಲ್ಲಿ ಹೊಸದಾಗಿ ಕಟ್ಟಿರುವ ಸೆಂಟ್ರಲ್ ಪೋಲಿಸ್ ಸ್ಟೇಶನಿಗೆ 'ಹ್ಯಾಮಿಲ್ಟನ್ ಬಿಲ್ಡಿಂಗ್' ಎಂಬದಾಗಿ ಹೆಸರು ಬರೆಸಿರುವ ವಿಷಯವು ಪುರನಿವಾಸಿಗಳಿಗೂ ಸಂಸ್ಥಾನದ ಪ್ರಜೆಗಳಿಗೂ ಬಹಳ 'ಅಸಮಾಧಾನವನ್ನುಂಟುಮಾಡಿದೆ. ಇದನ್ನು ಖಂಡಿಸುವ ಸಲುವಾಗಿ ರಾಜಧಾನಿಯಲ್ಲಿ ಭಾರಿ ಬಹಿರಂಗ ಸಭೆಯು ನಡೆಯಿತು. ಪತ್ರಿಕೆಗಳಲ್ಲಿ ಲೇಖನಗಳು ಬಂದವು. ಹಸ್ತಪತ್ರಿಕೆಯನ್ನೂ ಹಂಚಲಾಯಿತು. ಹಲವು ಪ್ರಮುಖರುಗಳು ಸರಕಾರದ ಚೀಫ್ ಸೆಕ್ರೆಟರಿಯವರಿಗೆ ಪತ್ರ ಬರೆದು ಹೆಸರನ್ನು ತೆಗೆದುಹಾಕಬೇಕೆಂದು ಅರಿಕೆಮಾಡಿದರು. ಇದುವರೆಗೆ ಸರಕಾರದಿಂದ ಯಾವ ಉತ್ತರವೂ ಬಂದಿರುವುದಿಲ್ಲ. ಮತ್ತು ಈ ಹೆಸರನ್ನು ತೆಗೆದುಹಾಕುವ ಸೂಚನೆಯನ್ನೂ ಅಧಿಕಾರಿಗಳು ಕೊಟ್ಟಿಲ್ಲ.

ಮಿ। ಹ್ಯಾಮಿಲ್ಟನರ ಹೆಸರನ್ನು ಈ ಕಟ್ಟಡಕ್ಕೆ ಇಟ್ಟಿರುವುದು ರಾಜಧಾನಿಗೆ ಅಲ್ಲದೆ ಇಡೀ ಸಂಸ್ಥಾನಕ್ಕೇ ಅಸಮಾಧಾನವನ್ನೂ ಖೇದವನ್ನೂ ಉಂಟುಮಾಡಿದೆ. ಈ ಹೆಸರು ಅವರು ಮಾಡಿದ ದಬ್ಬಾಳಿಕೆಯ ಪ್ರದರ್ಶನದ ಸ್ಮಾರಕವಾಗಿದೆ. ಮದ್ದು ಗುಂಡು ಲಾಠಿ ಪ್ರಯೋಗಗಳ ಜ್ಞಾಪಕವನ್ನು ಸೂಚಿಸುತ್ತದೆ. ಮಹಾಜನರ ಮೇಲೆ ಪ್ರಭುತ್ವದವರ ತಿರಸ್ಕಾರ ಭಾವನೆಯನ್ನು ವ್ಯಕ್ತಪಡಿಸುತ್ತದೆ. ಮಂತ್ರಿ ಮಂಡಳವು ಸಂಸ್ಥಾನದ ಪ್ರಜೆಗಳಿಗೆ ಸವಾಲು ಹಾಕಿದ್ದಾರೆಂದು ವ್ಯಕ್ತವಾಗುತ್ತಿದೆ. ಈ ಸವಾಲು ಯೋಗ್ಯವಾದುದಲ್ಲ. ಮಂತ್ರಿ ಮಂಡಳವು ಶಾಂತರೀತಿಯಿಂದ ಆಲೋಚನೆ ಮಾಡಿ ಈ ಹೆಸರನ್ನು ತೆಗೆದುಹಾಕಲಿ. ಮಿ ಹ್ಯಾಮಿಲ್ಟನ್‌ರವರೆ ನನ್ನ ಹೆಸರೂ ಆ ಕಟ್ಟಡಕ್ಕೆ ಬೇಡ ಸಂಸ್ಥಾನದ ಪ್ರಜೆಗಳ ವಿರೋಧವೂ ಬೇಡ ಎಂಬದಾಗಿ ಹೇಳಲಿ. ಇಲ್ಲದಿದ್ದರೆ ಮದ್ರಾಸಿನ ನೀಲ್‌ರವರ ಪ್ರತಿಮೆಯು ಈ ಹೆಸರಿಗೂ ಪ್ರಾಪ್ತಿಯಾಗುವುದು ಖಂಡಿತ. ಸಂಸ್ಥಾನಕ್ಕೆ ಭೀತಿ ಪ್ರದರ್ಶನವನ್ನುಂಟುಮಾಡುವ ಇಂಥಹ ಸ್ಮಾರಕವನ್ನು ಇಡಲು ಮೈಸೂರು ಸಂಸ್ಥಾನದಲ್ಲಿ ಆತ್ಮಗೌರವವುಳ್ಳ ಯಾವ ಮನುಷ್ಯನೂ ಇಷ್ಟಪಡಲಾರನು. ಈ ವಿಷಯದಲ್ಲಿ ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಸರಕಾರದವರು ಹ್ಯಾಮಿಲ್ಟನ್ ಬಿಲ್ಡಿಂಗ್ ಎಂಬ ಹೆಸರನ್ನು ತೆಗೆಯಬೇಕೆಂದು ಈ ಮೂಲಕ ಅಲ್ಟಿಮೇಟಮ್ ಕಳುಹಿಸಿದ್ದೇವೆ.

ಸರಕಾರದ ಉತ್ತರಕ್ಕಾಗಿ ಫೆಬ್ರವರಿ ಒಂದನೇ ತಾರೀಕಿನ ವರೆಗೆ ನಿರೀಕ್ಷಿಸುತ್ತೇವೆ. ಅಷ್ಟರಲ್ಲಿ ನಮ್ಮ ಕೋರಿಕೆಯನ್ನು ನೆರವೇರಿಸದಿದ್ದರೆ 'ಹ್ಯಾಮಿಲ್ಟನ್ ಬಿಲ್ಡಿಂಗಿನ' ಮುಂದೆ ಸತ್ಯಾಗ್ರಹವನ್ನು ಆಚರಿಸಿ ಪ್ರಜೆಗಳ ಇಷ್ಟಾರ್ಥವನ್ನು ನೆರವೇರಿಸುವುದಕ್ಕಾಗಿ ಈ ಕೆಳಗೆ ರುಜುಮಾಡಿರುವವರಿಂದ ಕೂಡಿದ ಸತ್ಯಾಗ್ರಹ ಕಮಿಟಿಯೊಂದನ್ನು ರಚಿಸಿದ್ದೇವೆ. ಮಹಾಜನರು ಇದಕ್ಕೆ ಸಂಪೂರ್ಣ ಸಹಾಯ ಸಹಾನುಭೂತಿಯನ್ನು ಕೊಡಬೇಕೆಂದು ಕೋರುತ್ತೇವೆ.

ತಗಡೂರು ರಾಮಚಂದ್ರರಾವ್ (ಕನವೀನರ್) ೨ ಎಂ. ಎಸ್. ಜೋಯಿಸ, ೩ ಎಸ್ ಸೂರ್ಯನಾರಾಯಣರಾವ್, ೪ ಬಿ ಸುಬ್ಬಾರಾವ್ ಉಪಾಧ್ಯಕ್ಷ, ೫ ಕೆ. ವಿ ವೀರಪ್ಪ ೬ ಟಿ ರಾಜನ್ (ಸದಸ್ಯರುಗಳು).

ತಗಡೂರು ರಾಮಚಂದ್ರರಾವ್

ಬೇಗನೆ ಬರುತ್ತದೆ.

ಸಬಿತಾದೇವಿ, ಮೋತಿಲಾಲ್, ಬಿಬ್ಬೊ ಇವರುಅಭಿನಯಿಸಿದ

೩೦೦ ದಿನಗಳ ಅನಂತರ

ಎಂಬ ಚಿತ್ರವು ಬೇಗನೆ ಸ್ಥಳೀಯ ನ್ಯೂ ಚಿತ್ರಾ ಟಾಕೀಸಿನಲ್ಲಿ ಪ್ರದರ್ಶಿಸಲ್ಪಡುವುದು.

ಜಾತಿಭೇದವು ನಿರ್ನಾಮವಾಗಬೇಕು

ಜಟ್ ಪಟ್ ತೋಡಕ ಮಂಡಲಿ ಲಾಹೋರ್

ಭಿನ್ನ ಜಾತಿಗಳೊಳಗೆ ಮದುವೆ ನಡೆಯಲು ಯಾವ ಆಕ್ಷೇಪಗಳು ಇಲ್ಲ. ಒಬ್ಬ ಶೂದ್ರನು ಬ್ರಾಹ್ಮಣ ಹುಡುಗಿಯನ್ನು ಮದುವೆಯಾಗಬಹುದು.

—ಮಹಾತ್ಮಾಗಾಂಧಿ

ಹಿಂದಿನಕಾಲದಿಂದಿದ್ದ ಜಾತಿಭೇದವೇ ನಮ್ಮ ಅಭಿವೃದ್ಧಿಗೆ ಒಂದು ತಡೆಯಾಗಿದೆ. ಆದುದರಿಂದ ಈ ಜಾತಿಭೇದವನ್ನೇ ಅಳಿಸಬೇಕು. ಈ ಕಾರ್ಯವನ್ನು ಕೈಕೊಂಡ ಜಟ್‌ಪಟ್ ತೋಡಕಮಂಡಲಿಗೆ ಎಲ್ಲಾ ವಿಧದಲ್ಲಿ ಏಳಿಗೆಯನ್ನು ಕೋರುತ್ತೇನೆ.

—ಜವಾಹರಲಾಲ ನೆಹರು

ಹಿಂದುಗಳು ಮತಿಕಳೊಳಿ [illegible] ಮುಂತಾದ ಹಾನಿಯಿಂದ ಪಾರಾಗಬೇಕಾದರೆ ಜಾತಿಭೇದವನ್ನೇ ತೊರೆಯಬೇಕು.

—ರವೀಂದ್ರನಾಥ ಠಾಕೂರ

ಜಾತಿ ಎಂಬುದು ಹಿಂದುಸ್ಥಾನಕ್ಕೆ ಒಂದು ಶಾಪ. ಈ ಜಾತಿಭೇದವೇ ನಮ್ಮನ್ನು ಗುಲಾಮ ಜನಾಂಗವನ್ನಾಗಿ ಮಾಡಿದೆ. ಈ ಭೇದವು ಕೂಡಲೇ ನಿರ್ನಾಮವಾಗಬೇಕು. ಇದೇ ನಮ್ಮ ಪ್ರತಿಜ್ಞೆಯಾಗಿರಬೇಕು.

—ಡಾಕ್ಟರ್ [illegible]

ಜಾತಿಭೇದವು ಬಹಳ ಹಾನಿಕರವಾದದ್ದು. ಇದರ ವಿರುದ್ಧವಾಗಿ ಈಗಿನ ನವತರುಣರು ಪ್ರಚಾರಕಾರ್ಯವನ್ನು ಕೈಕೊಳ್ಳಬೇಕು.

—ಸರ್ ಎಚ್ ಎಸ್ ಗೌರ್

ಶುದ್ಧಿ, ಸಂಗತನ ಮತ್ತು ಅಸ್ಪೃಶ್ಯತೆಯು ಜಾತಿಯ ಸಂಕಲೆಯನ್ನು ಮುರಿದರೆ ಮಾತ್ರ ಜಯಪ್ರದವಾಗುವುದು. ಜಟ್‌ಪಟ್ ಮಂಡಲಿಯು ಈ ಕಾರ್ಯದಲ್ಲಿ ಜಯಶೀಲವಾಗಲಿ.

—ಬ್ಯಾರಿಸ್ಟರ್ ವಿ. ಡಿ. ಸಾವರಕರ್

ಜಟ್‌ಪಟ್ ತೋಡಕ ಮಂಡಲಿಯು ೧೯೨೨ನೇ ನವಂಬರದಲ್ಲಿ ಲಾಹೋರಿನಲ್ಲಿ ಭಾಯಿ ಪರಮಾನಂದರು ಅಧ್ಯಕ್ಷರಾಗಿಯೂ, ಶ್ರೀ ಸಂತರಾಮರು ಸೆಕ್ರೆಟರಿಯಾಗಿಯೂ ಸ್ಥಾಪಿಸಲ್ಪಟ್ಟಿತು. ಜಾತಿಭೇದಗಳು ತೊಲಗಬೇಕೆಂಬುದೇ ಮಂಡಳಿಯ ಮುಖ್ಯ ಗುರಿಯಾಗಿದ್ದು ಅದನ್ನು ಹಿಂದೂದೇಶದ ಪ್ರತೀ ಕಡೆಗಳಲ್ಲಿಯೂ ಪ್ರಚಾರ ನಡಿಸುತಿದ್ದಾರೆ.

ಈ ರೀತಿಯಲ್ಲಿ ಪ್ರತೀ ಕಡೆಗಳಲ್ಲಿಯೂ ಪ್ರಚಾರ ನಡೆಸಲು ೧೯೩೪ರಲ್ಲಿ 'ಕ್ರಾಂತಿ' ಎಂಬ ಒಂದು ಸಚಿತ್ರವಾದ ಉರ್ದು ಮಾಸಪತ್ರಿಕೆಯನ್ನು ಈ ಮಂಡಳಿಯವರು ಪ್ರಾರಂಭಿಸಿದರು. ಮತ್ತು ಬೇರೆ ಬೇರೆ ಪ್ರಾಂತ್ಯಗಳಲ್ಲಿನ ಇಂಗ್ಲಿಷ್, ಹಿಂದಿ, ಉರ್ದು, ಮರಾಠಿ, ತಮಿಳು ಪತ್ರಿಕೆಗಳು ಪ್ರಚಾರ ಕಾರ್ಯದಲ್ಲಿ ಸಹಾಯ ಮಾಡಿದವು. ಮಂಡಳದ ಪರವಾಗಿ ಅನೇಕ ಪ್ರಮುಖರು ಅಲ್ಲಲ್ಲಿ ಭಾಷಣಗಳನ್ನು ಕೊಟ್ಟು ಕರಪತ್ರಗಳನ್ನು ಹಂಚುತ್ತಿರುವರು. ಮಂಡಳದ ಪರವಾಗಿಯೇ ಅನೇಕ ಮಂದಿ ಭಾಷಣಗಾರರು ಬರಹಗಾರರೂ ಜಾತಿಭೇದದ ವಿರೋಧವಾಗಿ ಭಾಷಣವನ್ನೂ ಲೇಖನಗಳನ್ನೂ ಬರೆದು ಜನರ ಮನಸ್ಸಿನ ಮೇಲೆ ಕ್ರಾಂತಿಯನ್ನುಂಟುಮಾಡುತ್ತಿರುವರು. ಕಳೆದ ನವಂಬರದಲ್ಲಿ ಜರುಗಿಸಿದ ಈ ಮಂಡಳಿಯ ತನ್ನ ೧೩ನೇ ವಾರ್ಷಿಕೋತ್ಸವದ ಸಮಯ ಅನೇಕ ಕಡೆಗಳಲ್ಲಿ ಸಪಂಕ್ತಿ ಭೋಜನಗಳೂ ಸಭೆಗಳೂ ಜರುಗಿದುವು. ಕಳೆದ ವರುಷದಲ್ಲಿ ಮಂಡಳಿಗೆ ಒಟ್ಟು ೧೧,೬೪೪—೪—೬ ಆದಾಯವೂ ೧೧,೮೧೨—೧೧—೩ ವ್ಯಯವೂ ಆಗಿರುತ್ತದೆ.

ಈ ಮಂಡಳಿಯು ಸ್ಥಾಪಿತವಾದಂದಿನಿಂದ ಜಾತಿಭೇದಗಳನ್ನೆಣಿಸದೆ ಅನೇಕ ಮದುವೆಗಳು ನಡೆದಿವೆ. ೧೯೩೧ನೇ ಇಸವಿಯಲ್ಲಿ ನಡೆದ ಖಾನೆಷುಮಾರಿಯಲ್ಲಿ ೧೯ ಲಕ್ಷ ಜನರು ಜಾತಿಯನ್ನೇ ಸೂಚಿಸಲಿಲ್ಲ.

ಮುಂದಿನ ಖಾನೆಷುಮಾರಿಯು ೧೯೪೧ರಲ್ಲಿ ಜರಗುವುದು. ಮಂಡಳದವರು ಎಲ್ಲಾ ಸಭಾ ಸೊಸೈಟಿಗಳನ್ನು ಸಹಾಯಕ್ಕೆ ಕೇಳಿ ಮುಂಬರುವ ಖಾನೆಷುಮಾರಿ ಲೆಕ್ಕದಲ್ಲಿ ಯಾರೊಬ್ಬರೂ ಜಾತಿಯನ್ನು ಸೂಚಿಸಲಿಕ್ಕೆ ಕೂಡದೆಂದು ಪ್ರಚಾರ ನಡೆಸಲು ಅಖಿಲಭಾರತ ಜಟ್‌ಪಟ್ ತೋಡಕ ಸೆನ್ಸಸ್ ಸಂಘವನ್ನು ಸ್ಥಾಪಿಸಲು ಆಲೋಚಿಸಿರುವರು, ದೊಡ್ಡ ದೊಡ್ಡ ವ್ಯಕ್ತಿಗಳು ಕೂಡಾ ಇದಕ್ಕೆ ಸಹಾಯವನ್ನಿತ್ತಿರುವರು.

ಮಂಡಳಿಯವರು ಪ್ರಚಾರ ಕಾರ್ಯವನ್ನು ಹೆಚ್ಚಿಸಲು ಯುಗಾಂತರವೆಂಬ ಒಂದು ಹಿಂದಿ ಪತ್ರಿಕೆಯನ್ನು ಹೊರಡಿಸುವರು. ಮತ್ತು ಅಲ್ಲಲ್ಲಿ ನೋಟೀಸು ಮೊದಲಾದುವುಗಳ ಮೂಲಕ ಪ್ರಚಾರಕಾರ್ಯವನ್ನು ನಡೆಸುವರು. ಈ ಕಾರ್ಯವನ್ನು ಸಾಗಿಸಲು ಮಂಡಳಕ್ಕೆ ಸಾಧಾರಣ ೫೦೦೦೦ ರೂಪಾಯಿಯಾದರೂ ಬೇಕಾಗುವುದು. ಆದುದರಿಂದ ಈ ಪವಿತ್ರ ಕಾರ್ಯದಲ್ಲಿ ಎಲ್ಲರೂ ತಮ್ಮಿಂದಾದಷ್ಟು ಧನಸಹಾಯವನ್ನು ಮಾಡಬೇಕೆಂದು ಮಂಡಳದ ಅಧ್ಯಕ್ಷರಾದ ಶ್ರೀ ಸಂತರಾಮರು ಪ್ರಾರ್ಥಿಸುತ್ತಾರೆ.

★ ಹೈದ್ರಾಬಾದಿನ ★
ನೈಜಾಮುಬಹದೂರರು
ಹಿಂದೂ ಯೂನಿವರ್ಸಿಟಿಯಲ್ಲಿ
(ಕಾಶೀ ವಿದ್ಯಾಪೀಠದಲ್ಲಿ)
ಹಿಂದೂ ಮುಸ್ಲಿಮ ಐಕ್ಯ ಸಾಧನೆಗಾಗಿ
ಸಂಸ್ಕೃತಿ ಬೋಧನೆಗೆಂದು
ಒಂದು ಲಕ್ಷ ರೂ.ಗಳನ್ನು
★ ದಾನಮಾಡಿರುವರು ★
ಬಿಕಾನೇರ ಮಹಾರಾಜರು
ಹಿಂದೂ ಯೂನಿವರ್ಸಿಟಿಯ ಪರವಾಗಿ
ಛಾನ್ಸೆಲರಾಗಿರುವುದರಿಂದ
ಅದನ್ನು ಸ್ವೀಕರಿಸಿರುವರು.

ಅಬಲೆಯರ ಮೇಲೆ ಕನಿಕರಗೊಂಡು ತನ್ನನ್ನು ಹಾಳುಮಾಡಿಕೊಂಡನು.

ಇಂಗ್ಲೆಂಡಿನ ಅನೇಕ ಮಂದಿ ಸ್ತ್ರೀಯರನ್ನು ಮನೋವೇದನೆ ಮತ್ತು ಸಂಕಷ್ಟಗಳಿಂದ ಪಾರುಮಾಡಿದ ವೈದ್ಯಕೀಯವನ್ನು ಕಲಿಯಲು ಇಂಗ್ಲೆಂಡಿಗೆ ತೆರಳಿದ್ದ ಹಿಂದೀ ತರುಣನೊಬ್ಬನ ವಾರ್ತೆಯು ಅಲ್ಲಿನ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ.

ತರುಣನು ಕರಾಚಿಯ ಒಂದು ಪ್ರಸಿದ್ಧ ಕುಲದವನು, ಮಿಡ್‌ವೈಫ್ ಮತ್ತು ಶಿಶುಗಳ ಆರೋಗ್ಯದ ಕುರಿತು ಪ್ರವೀಣತೆಯನ್ನು ಪಡೆಯಲು ಇಂಗ್ಲೆಂಡಿಗೆ ತೆರಳಿದವನು. ೩೩ ಗರ್ಭಹರಣ ಮಾಡಿದ ಅಪಾದನೆಗೂ, ಇನ್ನೂ [illegible] ಗರ್ಭಹರಣಗಳನ್ನು ಮಾಡಲು ಪ್ರಯತ್ನಿಸಿದ ಅಪಾದನೆಯ ಮೇಲೆ ಎಡಿನ್‌ಬರೊ ಕೋರ್ಟಿನಲ್ಲಿ ವಿಚಾರಣೆಗೆ ಒಳಗಾಗಿ ೧೮ ತಿಂಗಳ ಕಾರಾಗೃಹ ಶಿಕ್ಷೆಯನ್ನು ಪಡೆದಿರುವನು. ಪ್ರಸೂತಿ ಶಾಸ್ತ್ರದಲ್ಲಿ ಬಹಳ ಚಾಣಕ್ಷನಾಗಿದ್ದನು. ಆತನು ಗರ್ಭಹರಣ ಅತಿ ಸುಲಭದಲ್ಲಿ [illegible] ಮಾತ್ರದಲ್ಲಿ ಪ್ರವೀಣತೆಯನ್ನು ಪಡೆದನು. ತನ್ನ ಸಂಗಾತಿಗಳ ಒತ್ತಾಯದ ದೆಸೆಯಿಂದ ಮೊದಲು ಕೆಲವು ಗರ್ಭಹರಣ ಕಾರ್ಯದಲ್ಲಿ ಕೈಹಾಕಿದವನಾದನು. ಆತನ ಈ ಬಗೆಯ ಕೀರ್ತಿಯು ಹರಡಲು, ಆತನಿದ್ದಲ್ಲಿಗೆ ಇಂಗ್ಲೆಂಡಿನ ಹಲವು ಕಡೆಗಳಿಂದ ಅವಿವಾಹಿತ ತರುಣಿಯರೂ, ವಿವಾಹಿತ ಹೆಂಗಸರೂ ಇತ್ಯಾದಿಯವರು ಬಂದು ಗರ್ಭಹರಣ ಮಾಡಿಕೊಳ್ಳಲು ಬರುವವರಾದರು. ಅವರ ಮೇಲೆ ಕನಿಕರಪಟ್ಟು ಆತನು ಗರ್ಭಹರಣ ಶಸ್ತ್ರಚಿಕಿತ್ಸೆಯನ್ನು ಅವರ ಮೇಲೆ ನಡೆಸ [illegible]. ಗರ್ಭಹರಣ [illegible] ಸಂಖ್ಯೆಯು ಅತಿ ಅಪಾರವಾಗಿ ಆತನಿಗೆ ತಲೆ ತಪ್ಪಿಸಿಕೊಳ್ಳಲು ಕೂಡ ಸಮಯ ದೊರಕದಾಯಿತು. ಕೊನೆಗೆ ಆತನ ಕೃತ್ಯದ ವಾರ್ತೆಯು ಅಧಿಕಾರಿಗಳಿಗೆ [illegible] ಆತನ ಮೇಲೆ ತಕ್ಷೀರು ನಡೆದು ಆತನು ೧೮ ತಿಂಗಳ ಶಿಕ್ಷೆಯನ್ನು ಅನುಭವಿಸಬೇಕಾಯಿತು. ಅವನನ್ನು ಬಿಡುಗಡೆ ಮಾಡಲು, ಅನೇಕ ಮಂದಿ [illegible] ಪ್ರಯತ್ನಪಟ್ಟಿದ್ದರೂ, ಅವರ ಪ್ರಯತ್ನಗಳು ನಿಷ್ಫಲವಾದವಂತೆ.

ಕಾರಾಗೃಹ ಶಿಕ್ಷೆಯನ್ನನುಭವಿಸಿದ ನಂತರ ಆತನು ಹಿಂದೂದೇಶಕ್ಕೆ ಮರಳಬೇಕೆಂದಾಗಿದೆ.

ಕಾಂಗ್ರೆಸ್ ನಗರದ ರಚನೆ

ಕಾಂಗ್ರೆಸ್ ನಗರದ ರಚನಾಕಾರ್ಯವು ಬಹಳ ಪ್ರಗತಿ ಹೊಂದಿಕೊಂಡಿರುತ್ತದೆ. ಈ ನಗರಕ್ಕೆ ವಿಷ್ಣುದತ್ತ ನಗರವೆಂದು ನಾಮಾಂಕಿತವಾಗಿರುವುದು. ಈಗಲೇ ಕಾಂಗ್ರೆಸ್ ಅಧಿವೇಶನದ ಹಲವು ಆಫೀಸುಗಳ ಸ್ಥಾಪನೆ ಅಲ್ಲಿ ಆಗಿರುತ್ತದೆ.

ನೀರು ಮತ್ತು ಲೈಟ್ ವ್ಯವಸ್ಥೆಯು [illegible] ಕಾಂಗ್ರೆಸ್ ಅಧಿಕಾರಿಗಳಿಗೆ ಒಂದು ಮಹಾಸಮಸ್ಯೆಯಾಗಿ ಬಿಟ್ಟಿದೆ. ಅದನ್ನು ನೀಗಲು ಅವರು ಬಹಳ ಪ್ರಯತ್ನಪಡುತ್ತಿರುವರು.

ಸಾಧಾರಣ ೯೦೦ ಕುಟುಂಬಗಳು ಅಲ್ಲಿ ಉಳಕೊಳ್ಳಬಹುದಾದ ವ್ಯವಸ್ಥೆ ಮಾಡಲಾಗುವುದಂತೆ.

ಜಬಲ್ಪುರದಲ್ಲಿ ೧೨೦೦ ಸ್ವಯಂಸೇವಕರನ್ನು [illegible].

ತ್ರಿಪುರಿ ಕಾಂಗ್ರೆಸ್ಸಿನ ಟಿಕೇಟುಗಳನ್ನು [illegible] ಕಾರ್ಯಾಲಯವು ಸಮಸ್ತ [illegible] ನಡೆಯುತ್ತಿದೆ.

ಪೆಲೆಸ್ಟೈನದ ಗೊಂದಲ ನಿವಾರಣಾ

ಕೆಲವು ಉಪಾಯಗಳು

ಜೆರುಸಲೆಮಿನ ಹೀಬ್ರೂ ವಿಶ್ವವಿದ್ಯಾಲಯದ ಅಧ್ಯಕ್ಷರಾದ ಡಾ॥ ಜುಡಾ ಎಲ್. ಮೆಗ್ನೆಸ್ [illegible], ಪೆಲೆಸ್ಟೈನದ ಗೊಂದಲ [illegible] ಸೂಚನೆಗಳನ್ನು ಮಾಡಿರುವರಾಗಿ ತಿಳಿದುಬರುತ್ತದೆ. [illegible]

ಪೆಲೆಸ್ಟೈನದಲ್ಲಿ ದ್ವಿದಳ ರಾಷ್ಟ್ರೀಯತೆಯನ್ನು ಸ್ಥಾಪಿಸಿ, ಅರಬ್-ಯೆಹೂದಿ ಕಲಹ ನಿವಾರಣೆ ಮಾಡಬೇಕಾಗಿ ಅವರ ಸೂಚನೆ. [illegible]

ಯಹೂದಿಯರ ಇನ್ನು ಇನ್ನೂ ಹೆಚ್ಚಾಗಿ ಪೆಲೆಸ್ಟೈನಕ್ಕೆ [illegible] ಅಧಿಕ ಸಂಖ್ಯಾತರಾಗಿ [illegible] ಯಹೂದಿಯರು ಅಧಿಕ ಸಂಖ್ಯಾತರಾಗದಂತೆ ಒಂದು ಉಪಾಯ [illegible] ಪೆಲೆಸ್ಟೈನದಲ್ಲಿ [illegible] ಅಧಿಕಸಂಖ್ಯಾತರಾಗದಂತೆ [illegible] ಸಲಹೆ.

[illegible] ಬ್ರಿಟಿಷರ ಅಧೀನದಲ್ಲಿ ಪೆಲೆಸ್ಟೈನದ [illegible] ಸ್ವಾತಂತ್ರ್ಯದ [illegible] ಹೋಗಬೇಕು. [illegible] ನೆಲೆ ನಿಂತು, ಮಧ್ಯ [illegible] ಶಾಂತಿಯನ್ನು [illegible] ಪುನರುತ್ಥಾನ [illegible] ಬಹುದು, ಎಂಬ ಮೊದಲಾದವುಗಳು [illegible] ಕೆಲವು ಸೂಚನೆಗಳು.

ಮಾನವಗಿ

ರುಪಹಕ್ಕಿರವ

ಅನೇಕ ಮಂದಿಗಳಿಗೆ ಅವರ ನಿಶಕ್ತಿಯ ಕಾರಣಗಳು ತಿಳಿಯವು, ಇನ್ನನೇಕರಿಗೆ ಅವುಗಳನ್ನು ತಿಳಿದಿದ್ದರೂ ಅದನ್ನು ಡಾಕ್ಟರರೊಡನೆ ತಿಳಿಸಲು ನಾಚಿಕೆಗೊಳ್ಳುವರು. ಇವರಿಗೆ [illegible] ಒಂದು ಮುಖ್ಯ ಪರಿಹಾರವುಂಟು

ಜೀವಾಮೃತ ದಲ್ಲಿ

ಅದು ಅಶಕ್ತತೆಯನ್ನು, ಅದರ ಕಾರಣಗಳು ಯಾವವೆ ಇರಲಿ ಹೋಗಗೊಳಿಸುತ್ತದೆ. ನಿಮ್ಮ ದೇಹಕ್ಕೆ ಸಂಪೂರ್ಣ ಹೊಸ ಹುರುಪನ್ನು ಕೊಡುತ್ತದೆ. ಬಲ, ನವಚೇತನವನ್ನು ಕೊಡುತ್ತದೆ.
ಪರಿಣಾಮಗಳು ಕೇಳುವ ಮೊದಲು, ಇದರ ಪರೀಕ್ಷೆಯನ್ನು ಮಾಡಿರಿ.
ಎಲ್ಲಾ ಔಷಧಶಾಲೆಗಳಲ್ಲಿ ದೊರೆಯುತ್ತದೆ.
ಆಯುರ್ವೇದಾಶ್ರಮಂ, ಟಿ. ಪೆ. ನಂಬ್ರ ~~287~~ ಮದ್ರಾಸು.
ಸ್ಟಾಕಿಸ್ಟರು — ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

ಶಾಲಿವಾಹನ ಶಕ ೧೮೬೧ನೆಯ ಬಹುಧಾನ್ಯ ಸಂವತ್ಸರದ ಪುಷ್ಯ ಬ ೯ ಶನಿವಾರದಿಂದ ಪುಷ್ಯ ಬ ೧೦ ಶುಕ್ರವಾರದ ವರೆಗಿನ ಪಂಚಾಂಗ. (೧೮೩೮ನೇಯ ಮಕರ ಪುಯಾಂಶೆಲ)

ದಿ	ವಾರ	ತಿಥಿ	ಘಟಿ	ನಕ್ಷತ್ರ	ಘಟಿ	ಯೋಗ	
14	ಶನಿ	೨೨	೧೫	ಸ್ವಾತಿ	೨೩	೩೦	ತಾ 14 ಜುಲೈ ಸಂಕ್ರಮಣ
15	ರವಿ	೨೩	೧೫	ವಿಶಾಖಾ	೨೫	೧	
16	ಸೋ.	೨೪	೧೬	ಅನುರಾಧಾ	೨೭	೨	
17	ಕುಜ	೨೫	೧೯	ಜ್ಯೇಷ್ಠಾ	೨೯	೩	
18	ಬುಧ	೨೬	೨೨	ಮೂಲಾ	೩೭	೪	
19	ಗುರು	೨೭	೨೭	ಪೂ.ಷಾಢಾ	೪೩	೫	
20	ಶುಕ್ರ	೨೮	೩೨	ಉ ಷಾಢಾ	೪೯	೬	

THE PIE-MONEY BANK LTD,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars-**K R. GURU**, *Managing Director*

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ ಕೆ ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ ... ಮಕ್ಕಳಾಗುವುದರಿಂದ ... ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದ ಬೇಡವಾಗಿದ್ದರೆ ... ಇದರ ಸೇವನೆಯಿಂದ ... ಸಂಸಾರಸುಖವು ಪೂರ್ಣವಾಗಿದ್ದು ... ಗರ್ಭಧಾರಣ ಬಂದಾಗುವದು ... ಕುರುಹಾಗುವುದಿಲ್ಲ ... ವೈದ್ಯ ಎಲ್ ... ಈ ಚೂರ್ಣದಿಂದ ... ಗರ್ಭಧಾರಣೆ ಆಗುವುದಿಲ್ಲ ... ೪ ೦ ೦

ವಿ. ಪಿ.

... ಔಷಧಾಲಯ ... ಪೋ ಮಿರಜಿ, (S M. ...)

The
Canara Industrial & Banking Syndicate Limited.

(Incorporated in British India)

(Estd: 1925)

HEAD OFFICE 'MUKUND NIVAS' UDIPI - INDIA

Member:

Reserve Bank of India, Bankers' ClearingHouse Bombay

Season Deposits Maturing Between

30th June and 15th July 1939 Are

Accepted @ 3½ p. a

Banking Business of Every Description Transacted on Sound lines.

Particulars on application to any of our 35 Branches

THE

Canara Banking Corporation, Udipi, Ltd.

(INCORPORATED IN BRITISH INDIA)

ESTD 1906

MEMBER –

Reserve Bank of India & Banker's Clearing House, Madras.

Capital Authorised, Issued & Subscribed	Rs. 3,50,000
Paid up Capital	Rs. 3,03,205
Reserves	Rs 3 88,842

Rates of Interest on Deposits.

3 months	2½% p. a.
6 or 9 months	3% p a
12 or 24 months	3½% p a
Short-Term	2% p a

All Kinds of Banking Transaction Undertaken.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿ ... ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ ಶರೀರಶಕ್ತಿಯ ಸ್ಥಂಟ ನೋಡಲು 2 ಡಬ್ಬಿಗಳೇ ಸಾಕು 20 ಗುಳಿಗೆಗಳ ಡಬ್ಬಿ ರೂ 1 4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ ಎ ಅಂಡ್ ಕೋ,

... ಪೆಂಡೆಲು

P O Peridepi (ನೆಲ್ಲೂರು ಡಿ)

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲಂಟಿನ್

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,

ಗೋಲ್ಡನ್ ಬಜಾರ್ ಮಂಗಳೂರು

ಡೂಂಗರೆ

ಇವರ

ಬಾಲಾಮೃತವು

ಮಕ್ಕಳ ಹಲವು ವಿಧ ಅಸಹ್ಯವಾದ ರೋಗಗಳನ್ನು ... ನಿವಾರಿಸಿ ಸಕ್ಕರೆ ಪುಷ್ಟಿಯನ್ನು ಬಲವನ್ನು ಕೊಡುತ್ತದೆ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು		ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ	ಅವ್ವಲ್ ಕೆಂಪು ಗುದ್ದು ಮುಡಿಗೆ	1—10 0	—
,,	ದುಯಂ ,, ,,	1 8—0	1—8—0
,,	ಅವ್ವಲ್ ಸುಗಿ ,,	1—10—0	
,,	ದುಯಂ ,,	1 9—0	
ಅಕ್ಕಿ	ಅವ್ವಲ್ ಗುದ್ದು	4—6 0	4—8—0
,,	ದುಯಂ ,	4—2—0	3 14—0
,,	ಅವ್ವಲ್ ಸುಗಿ	4—4—0	—
	ದುಯಂ ,	4—0 0	4—0 0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ		36—0 0	44 0—0
, ಸಿಪ್ಪೆ ಇದ್ದದು ,		38—0—0	47—0 0
ಕೊಬ್ಬರಿ ... ಖಂಡಿಗೆ		51—0 0	—
... ,		55—0 0	
ತೆಂಗಿನ ಎಣ್ಣೆ ಮಣಕ್ಕೆ		3 6—0	3—6—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ		3—4—0	4—0—0
ಗೇರುಬೀಜ ಮುಡಿಗೆ		3—8 0	3—12—0
ಕಪ್ಪು ಬೆಲ್ಲ ಖಂಡಿಗೆ		35 0 0	40—0—0
ಒಳ್ಳೇಮೆಣಸು ಪಂಡ್ಲೆಟಿಗೆ		15 12—0	16—0—0

ಬ್ರಾಹ್ಮಣ ಸರಕಾರವು ಮಾಡಿದ ನಿರ್ದಿಷ್ಟ ಕುಕರ್ಮಗಳು

['ಸಂಡೇ ಒಬ್ಸರ್ವರ್' ಪತ್ರದಲ್ಲಿ]

ಶ್ರೀಮಾನ್ ಗವರ್ನರರ ಅವಗಾಹನೆಗಾಗಿ ಎಂದು ಸತ್ಯವಾದಿ ಎಂಬೊಬ್ಬನು ಹೀಗೆ ಬರೆದಿರುವನು —

1 ಒಬ್ಬಾನೊಬ್ಬ ಮಂತ್ರಿಯು ಸೋದರಿಯ ಮಗನನ್ನು ಫಾರ್ಮಸಿಸ್ಟನಾಗಿ, ಅವನಿಗಿಂತ ಉತ್ತಮ ಯೋಗ್ಯತೆಯುಳ್ಳ ಬ್ರಾಹ್ಮಣೇತರನ ಬದಲಾಗಿ, ನೇಮಿಸಿದ್ದೇಕೆ?

2. ಆ ಮಂತ್ರಿಯು ಮತ್ತೊಬ್ಬ ಬಂಧುವು ಜನರಲ್ ಆಸ್ಪತ್ರೆಯ ಲೇ–ಸೆಕ್ರೆಟರಿಯಾಗಲು ಅತಿಯೋಗ್ಯನೆಂದು ಎಣಿಕೆಗೆ ಬಂದನೇಕೆ?

3 ವೃದ್ಧ ನಿವೃತ್ತ ಐಯ್ಯಂಗಾರರೊಬ್ಬರನ್ನು ತಿರುಮಲೆ ದೇವಸ್ಥಾನದ ಕಮಿಶನರಾಗಿ ನೇಮಕ ಹೊಂದುದೇಕೆ?

4. ಧರ್ಮಶಾಸನಗಳ ಇನ್ಸಪೆಕ್ಟರುಗಳಾಗಿ ಅಷ್ಟು ಮಂದಿ ಬ್ರಾಹ್ಮಣರೇ ನೇಮಕ ಹೊಂದುತ್ತಿರುವದೇಕೆ?

5 ಲಂಚ ಮೊದಲಾದ ಕಾರಣಗಳಿಂದ (ಸಾವಿರಾರು ರೂಪಾಯಿಯ ವ್ಯವಹಾರ) ಸಸ್ಪೆಂಡಾದ ಇಬ್ಬರು ಹೆಲ್ತ್ ಆಫೀಸರುಗಳನ್ನು ಪುನ ನೇಮಿಸಿದ್ದೇಕೆ? ಅವರನ್ನು ಪುನಃ ನೇಮಿಸಬಹುದಾಗಿ ಪಬ್ಲಿಕ್ ಸರ್ವಿಸ್ ಕಮಿಶನು ಶಿಫಾರಸು ಮಾಡಿತೇ?

6 ಅಪರಾಧಿಗಳನ್ನು ಪುನ ಕೆಲಸಕ್ಕೆ ಸೇರಿಸಿದಾಗ, ಜಿಲ್ಲಾ ಹೆಲ್ತ್ ಆಫೀಸರರಾಗಿ ಶಿಫಾರಸು ಮಾಡಿದ ಡಾ। ಎಧಿರಾಜುಲು ನಾಯುಡರವರನ್ನೇಕೆ ಬಿಡುಗಡೆ ಮಾಡಿಲ್ಲ?

7 ಮದ್ರಾಸಿನ ಪೋರ್ಟ್ ಹೆಲ್ತ್ ಆಫೀಸರರ ವಿಷಯವೂ ನಾನಾ ಅಪವಾದನೆಗಳು ಬಂದಿದ್ದರೂ ಅವನ್ನು ಮಂತ್ರಿಗಳೇಕೆ ವಿಚಾರಕ್ಕೆ ಒಳಪಡಿಸಿಲ್ಲ?

ಜಾತಿ ಪಕ್ಷಪಾತವೇ ಇದಕ್ಕೆಲ್ಲ ಕಾರಣವಲ್ಲವೋ?

★

ಇನ್ನು ಇದೇ ಪತ್ರಿಕೆಯಲ್ಲಿ ನಂಬಿರುವ —

1 ಮದ್ರಾಸಿನದೊಂದು ಕಾರ್ಪೊರೇಶನ್ ಶಾಲೆಯಲ್ಲಿ ಒಬ್ಬ ಡೆಪ್ಯೂಟಿ ಇನ್ಸಪೆಕ್ಟರರಿಗೆ ಬ್ರಾಹ್ಮಣ ಹೆಡ್ಮಾಸ್ತರರು ಟೀಪಾರ್ಟಿ ಕೊಟ್ಟರೋ? ಸಹಾಯಕ ಉಪಾಧ್ಯಾಯರನ್ನು ಕೇಳದೆ, ಅವರ ಸಂಬಳದಿಂದ ಇದಕ್ಕಾಗಿ ಖರ್ಚನ್ನು ಹೆಡ್ಮಾಸ್ತರರು ಕತ್ತರಿಸಿ ತೆಗೆದುಕೊಂಡರೋ, ಇದನ್ನೆಲ್ಲ ಸೂಚಿಸಿ, ಕಮಿಶನರರಿಗೆ ಮನವಿ ತಲುಪಿತೋ? ಕಮಿಶನರು ವಿಚಾರಣೆಯಾಗಲೆಂದು ಅಪ್ಪಣೆಕೊಟ್ಟರೋ? ಹಾಗಾದುದು ನಿಜವೆಂದು ವಿಚಾರಣೆ ನಡೆಸಿದ ಸುಪರ್ವೈಜರರು ತಿಳಿಸಿದರೋ? ಆದರೆ, ಬ್ರಾಹ್ಮಣ ಎಡ್ಯುಕೇಶನಲ್ ಆಫೀಸರರು ಇದು ಇಲ್ಲಿಗೇ ಮುಗಿಯಲೆಂದು ಶಿಫಾರಸು ಮಾಡಿದರೋ?

★

2 ಮೆಡಿಕಲ್ ಕಾಲೇಜಿನ ಒಬ್ಬ ಬ್ರಾಹ್ಮಣ ಪ್ರೊಫೆಸರರು ತನಗಿಂತ ಆರುವರ್ಷ ಕಡಿಮೆ ವಯಸ್ಸಿನವರದೊಂದು ಹೆಸರನ್ನು ತಾವೇ ಧರಿಸಿಕೊಂಡು, ೫೫ ವರ್ಷ ವಯಸ್ಸಾದರೂ ಮುಂದೆ ಸರ್ವಿಸಿನಲ್ಲಿರುವಂತೆ ಹಂಚಿಕೆ ಮಾಡಿದರೋ ಈ ಪ್ರೊಫೆಸರರನ್ನ ಅಧಿಕಾರಿಗಳು (ಬ್ರಾಹ್ಮಣನೆಂದೇ) ಕಾಪಾಡುತ್ತಿರುವರೋ?

★

3. ಒಬ್ಬ ಕಾಂಗ್ರೆಸ್ ಎಮ್.ಎಲ್.ಎ. ಗಳು ತಂಜಾವೂರ ಜಿಲ್ಲೆಯಲ್ಲಿ ಹಲವರೊಡನೆ ಸೇರಿ ಅಕ್ರಮ ಕೂಟ ಕೂಡಿ, ಕ್ರಿಮಿನಲ್ ಮೊಕದ್ದಮೆಯಲ್ಲಿ ಈಗ ವಿಚಾರಣೆಗೆ ಒಳಪಟ್ಟಿರುವರೋ?

★

4 ಶ್ರೀ। ಗಿರಿಧರದಾಸ ನಾರಾಯಣದಾಸರೆಂಬವರೊಬ್ಬರು ಚಿತ್ತೂರು ಜಿಲ್ಲಾ ಬಿಸನಾಥವಿನಲ್ಲಿ ಚಿನ್ನ ಅಗೆಯುವುದಕ್ಕಾಗಿ ಸರಕಾರದಿಂದ ಸಾಲಕೇಳಿರುವರೋ? ಮಂತ್ರಿಗಳನ್ನು ಇವರು ಸತ್ಕಾರಕೂಟದಿಂದ ಉಪಚರಿಸಿರುವರೋ? ಕೆಲಕಾಂಗ್ರೆಸು ಮುಖಂಡರರು ಮತ್ತು ಇವರೊಳಗೆ ಯಾವುವೊ ವಿಲೇವಾರಿಗಳು ನಡೆಯುತ್ತಿರುವುವೋ?

★

5 ಎಂಡೌಮೆಂಟ ಮಂತ್ರಿಗಳ ಸೂಚನೆಯ ಮೇರೆಗೆ ಕಾಂಗ್ರೆಸು ಧ್ವಜವನ್ನು ಶ್ರೀರಂಗದೇವಸ್ಥಾನದ ಮೇಲೆ ಏರಿಸಿದ್ದರೇ? ಇನ್ನೂ ಆ ಧ್ವಜವನ್ನು ಇಳಿಸಿಲ್ಲವೆಂಬುದು ನಿಜವೋ?

★

6. ಈ ಮಂತ್ರಿಗಳ ಸೋದರಿಯ ಅಳಿಯರೊಬ್ಬರು ಶ್ರೀರಂಗದ ಹತ್ತಿರವಿರುವ ಉತ್ತಾರಕೋವಿಲದ ಮನೆಜರರಾಗಿ ನೇಮಕ ಹೊಂದಿರುವರೋ?

ಇತರ ನೇಮಕವಾದುದರಿಂದ ದೇವಸ್ಥಾನದಿಂದ ತೆಂಗಿನಕಾಯಿಗಳನ್ನು ತೆಗೆದು ಹಾಗಿದೆಯೋ?

ಡಾ। ರಾಜನರು ವಡಗಲೈ ಯವರಾಗಿದ್ದು ತಮ್ಮ ಸ್ನಾನಕ್ಕೆ ತೆಂಗಲೈಗಳನ್ನು ಹಿಂಸಿಸಲು ಉಪಯೋಗಿಸುತ್ತಾರೋ?

★

7 ಬ್ರಾಹ್ಮಣ ಏಧ್ಯಸಿವಾರಣಾ ಇನ್ಸಪೆಕ್ಟರರೊಬ್ಬರ ಬ್ರಾಹ್ಮಣೇತರ ತಹಶೀಲ್ದಾರರ ಮೈಹತ್ತಿ ಮಾಡಿ ಅವಮಾನ ಮಾಡಿದರೋ? ಅವರಿಗೆ ಜುಲ್ಮಾನೆ ದಂಡನೆಯೂ ಆಗಲಿಲ್ಲವೆಂಬುದ ನಿಜವೋ?

★

—ಹೀಗೆಲ್ಲ ಪತ್ರಿಕೆ ಪ್ರಶ್ನೆಗಳನ್ನು ಹೊರಡಿಸಿಯದೆ ನಿಜ ಸ್ಥಿತಿಯೆಂದು ತಿಳಿಯಲು ಇನ್ನು ಸಮಯವಿದೆ ಈ ಪತ್ರಿಕೆ ಎಷ್ಟು ಜೋರಾಗಿ ಬ್ರಾಹ್ಮಣರನ್ನು ದೂರ ತ್ತದೆಂದರೆ,— "ಎಲ್ಲ ಸರಕಾರಿ ಆಫೀಸುಗಳನ್ನು ಶ್ರೀ ರಾಘವನ್ ಮೆನೋನರು ಸಿಧನಸಿಯೆಂದು ಮುಚ್ಚಿದ್ದರೂ, ಖಾದಿ ಪ್ರದರ್ಶನವನ್ನು ತೆರೆದಿದ್ದರು ಕಾರಣ, ಎಷ್ಟೆಂದರೂ ಮೆನೊನರು ಬ್ರಾಹ್ಮಣರಾಗಿಲ್ಲ!" ಎಂದು ಬರೆದಿದೆ ಶ್ರೀ ದಿವಂಗತರಿಗೆ ಖಾದೀ ಪ್ರದರ್ಶನ ಮುಚ್ಚದಿದ್ದುದು, ಈ ಪತ್ರಿಕೆಯ ಟೀಕೆಗಿಂತ ಎಷ್ಟೋ ಅತ್ಯಪ್ರಿಯವಾದುದಿರಬೇಕಲ್ಲವೇ? ಖಾದಿಯೇ ತನ್ನ ಉಡುಪೆಂದು ಮಾಡಿದ್ದ ದಿವಂಗತರು ಖಾದಿ ಎಂಬುದು ಬ್ರಾಹ್ಮಣ ಸಾಮ್ರಾಜ್ಯದ ಗುರುತೆನ್ನುವ ಪತ್ರಕರ್ತರನ್ನು ಹೇಗೆನಿಸುವರು?

ರಾಷ್ಟ್ರಸೇವೆ ಹೊಸ ಕಾನೂನಾಗಲು ಸೂಚನೆ

ಶ್ರೀ ಕೆ ಟಿ. ಭಾಷ್ಯಂರವರು ಒಂದು ಹೊಸ ಕಾನೂನು ಉಂಟಾಗಬೇಕಾಗಿ ಸೂಚನೆ ತಂದಿರುವರು ಎಲ್ಲ ಪ್ರಾಂತಿಕ ಸರಕಾರಗಳು ಈ ಕಾನೂನನ್ನು ಮಂಜೂರು ಮಾಡಿ ಕೂಡಲೆ ಜಾರಿಗೆ ತರಬೇಕಾಗಿ ಅವರ ಸೂಚನೆ

ವಿದ್ಯಾಭ್ಯಾಸವನ್ನು ಮುಗಿಸಿದ ತರುಣಾಯ, ಪ್ರತಿ ವಿದ್ಯಾರ್ಥಿಯೂ ಎರಡು ಅಥವಾ ಮೂರು ವರ್ಷಗಳ ವರೆಗೆ ರಾಷ್ಟ್ರೀಯ ಸೇವಾಕಾರ್ಯ ಮಾಡಲು ತರಬೇತು ಹೊಂದುವನಾಗಬೇಕೆಂಬುದೇ ಈ ಮಸೂದೆಯ ತತ್ವವಾಗಿದೆ ಸೈನಿಕ ತರಬೇತನ್ನೂ ಬೇಕಾದರೆ ಈ ತರಬೇತಿನಲ್ಲಿ ಸೇರಿಸಬಹುದಾಗಿದೆ

ಇತರ ದೇಶಗಳ ಅನುಭವ ನೋಡಿದ್ದಲ್ಲಿ,— ರಾಷ್ಟ್ರೀಯ ಸೇವಾಶಿಕ್ಷಣವು ಎಲ್ಲ ಶಿಕ್ಷಣವು ಮುಗಿವ ವರೆಗೆ ಒಂದಿರುವುದುತ್ತಮವಲ್ಲ ಎಂದು ತೋರುವುದು ಸಾಮಾನ್ಯ ವಿದ್ಯಾಭ್ಯಾಸ ನಡೆವಾಗಲೇ ವಿದ್ಯಾರ್ಥಿಗೆ ಈ ಶಿಕ್ಷಣವೂ ಸಿಗುವಂತಾಗಬೇಕಾಗಿದೆ ಜರ್ಮನಿಯಲ್ಲಿ ಈ ಶಿಕ್ಷಣಕ್ಕೆ ಅತಿ ಬೆಲೆಯುಂಟು, ವಿದ್ಯಾರ್ಥಿಗಳ ಈ ಶಿಕ್ಷಣವೆಂದರೆ ಅತಿ ಪ್ರೀತಿಯಿಂದ

> **ಗಡಿನಾಡಿನ ಗಾಂಧಿ**
> ಖಾನ್ ಅಬ್ದುಲ್ ಘಾಫರ್ ಖಾನರು
> ಕಾಂಗ್ರೆಸ್ಸಿನ ಅಧ್ಯಕ್ಷತೆಯನ್ನು
> ನಿರಾಕರಿಸಿರುವರು
> ★
> ವಾಯುವ್ಯ ಪ್ರಾಂತ್ಯದವರು
> **ಮೌಲಾನಾ** ★
> ಅಬುಲ್ ಕಲಮ್ ಆಜಾದರು
> ಅಧ್ಯಕ್ಷರಾಗಲೆಂದು
> ಸೂಚಿಸಿರುವರು

ಶಾಲಾ ತರಗತಿ ಅಲ್ಲಿ ಶಿಲಾಶಿಕ್ಷಣ ಮುಗಿದು ಕಾಲೇಜ ಶಿಕ್ಷಣ ಪ್ರಾರಂಭವಾಗಬೇಕಾದರೆ, ರಾಷ್ಟ್ರೀಯ ಸೇವಾ ಶಿಕ್ಷಣವಾಗುವುದು ಈ ವಯಸ್ಸಿನ ವಿದ್ಯಾರ್ಥಿಗಳಿಗೆ ರಾಷ್ಟ್ರಸೇವೆ ಕಲಿಯಲು ಅತಿ ಯೋಗ್ಯವಾದುದಾಗಿದೆ ಶಾರೀರಿಕ ಶಕ್ತಿ, ಕೆಲಸ ಮಾಡುವ ಕೌಶಲ, ವಿಧೇಯತೆ, ಇತರರಿಗೆ ದಾಕ್ಷಿಣ್ಯ ತೋರಿಸ ಮೊದಲಾದ ಗುಣಗಳನ್ನು ಬೆಳೆಸಲು ಅನುಕೂಲವಾಗಿದೆ

ಹಿಂದೆ ವಿದ್ಯಾರ್ಥಿಗಳು ಈ ಬಗೆಯ ಶಿಕ್ಷಣವನ್ನು ತರಬೇತನ್ನು ಹೊಂದುವುದರಿಂದ ಹೆಚ್ಚಿನ ಪ್ರಯೋಜನ ಹೊಂದುವರೆಂದು ಹಿಂದೆಯೂ ಅಭಿಪ್ರಾಯಪಟ್ಟಿರುವರು ಇದೊಂದು ದೊರೆತರೆ, ವಿದ್ಯಾರ್ಥಿಗಳಿಗೆ ತನ್ನ ಯೋಗ್ಯತೆಯು ತಿಳಿವಳಿಕೆಯೂ ಉಂಟಾಗುವುದು

ವ್ಯರ್ಥವಾದ ಚಳವಳಿಗಳಿಂದ ಅವನು ದೂರವಾಗಿ, ರಾಷ್ಟ್ರಸೇವೆ ಮಾಡಲು ಕಲಿತುಕೊಳ್ಳುವನು ಜರ್ಮನಿಯ ಯುವಕ ಶಿಬಿರಗಳಲ್ಲಾಗುವ ವಿಶೇಷ ಕಾರ್ಯಗಳನ್ನು ಕಂಡರೆ ನಿಜವಾಗಿ ಆಶ್ಚರ್ಯವೆನಿಸುವುದು ಪ್ರಜಾಹಿತಕ್ಕಾಗಿ ಈ ಸೇವೆ ಎಷ್ಟು ಸಾಂಗವಾಗಿ ನಡೆಯಬಹುದೋ ಅದನ್ನು ತಿಳಿದರೆ ಅದನ್ನು ಕೊಂಡಾಡಬೇಕೆನಿಸುತ್ತದೆ

ಜರ್ಮನಿಯಷ್ಟು ಕಠಿನವಾಗಿ ನಮ್ಮ ವಿದ್ಯಾರ್ಥಿಗಳು ತರಬೇತು ಹೊಂದಬೇಕೆಂದೇನೂ ಇಲ್ಲ ಆದರೆ ವಿದ್ಯಮಾನಗಳ ಜ್ಞಾನವುಳ್ಳವರು ಇದನ್ನು ಸರಿಯಾಗಿ ವ್ಯವಸ್ಥೆಗೆ ತಂದಲ್ಲಿ, ಪ್ರಜಾಸತ್ತೆಗೆ ಈ ಶಿಕ್ಷಣವೇ ಸಂರಕ್ಷಣೋಪಾಯವೆನಿಸದಿರದು ಇಲ್ಲಿನ ಶಿಕ್ಷಿತ ನಿರುದ್ಯೋಗಿಗಳು ಈ ಶಿಕ್ಷಣಹೊಂದಿ ದೇಶಸೇವೆ ಮಾಡುವುದರಿಂದ, ಇಂತಹ ಪ್ರಜಾಸತ್ತೆಯುಳ್ಳ ರಾಜ್ಯಗಳಲ್ಲಿರುವ ಇದೇ ನಿರುದ್ಯೋಗಿಗಳ ಸಮಸ್ಯೆಯನ್ನು ತೀರ್ಮಾನಿಸಲೂ ಸಹಾಯವಾದೀತ

ಕೇಂದ್ರ ಸರಕಾರಗಳು ಈ ಸೂಚನೆಯಂತೆ ಕಾನೂನನ್ನು ಜಾರಿಗೆ ತರುವುದು ಅತ್ಯವಶ್ಯಕವಾಗಿದೆ

ಮೂರು ವರ್ಷಕಾಲ ಹೊಟ್ಟೆಯ ಹುಣ್ಣಿನ ಕಷ್ಟಾನುಭವ

"ಆಲೋಚಿಸಿರಿ ಮೂರು ವರ್ಷಕಾಲ ದಿನ ನಿತ್ಯ ಪೀಡೆ ನನ್ನ ನರಳಿಕೆಯು ದೇವರಿಗೆ ಗೊತ್ತು" ಎಂದು ಮಿ. ಎಸ್. ... ಬರೆದ ... ಇದ ಹೊಟ್ಟೆಯ ... ನರಳುವವರಿಗೆ ... ಅವರ ಸಹನೆ ... ಈ ಕೆಳಗೆ ಅವರ ಕಾಗದವಿದೆ

"ನಿಮ್ಮ ಮೆಕ್ಲೀನ್ ಬ್ರಾಂಡ್ ಸ್ಟಮಕ್ ಪೌಡರಿನಿಂದ ಆಶ್ಚರ್ಯಕರವಾದ ಗುಣಹೊಂದಿದನ್ನು ತಿಳಿಸುವುದು ನನ್ನ ಕರ್ತವ್ಯವೆಂದೆಣಿಸುತ್ತೇನೆ ನಾನು ಮೂರು ವರ್ಷಗಳಿಂದ ಹೊಟ್ಟೆಯ ಹುಣ್ಣಿನಿಂದ ನರಳುತಿದ್ದೆ ... ಅದರ ವೇದನೆಯು ದೇವರಿಗೆ ಗೊತ್ತು ... ಸಲ ಎಕ್ಸರೆ ... ನೋಡಿದೆನು, ಮತ್ತು ಇದಿ ಎರಡು ವರ್ಷಗಳಲ್ಲಿ ... ಇದು ಒಂದು ... ಕೆಲಸವನ್ನು ಮಾಡಲಿಲ್ಲವೆಂದೆಣಿಸುತ್ತೇನೆ ... ಮೆಕ್ಲೀನ್ ಬ್ರಾಂಡ್ ಸ್ಟಮಕ್ ಪೌಡರಿನಿಂದಾಗಿ ಅತ್ಯಂತ ಸುಖಿಕರವಾಗಿದ್ದೇನೆ"

ಇದೊಂದು ವಿವಕ್ಷ್ಯದಲ್ಲ ... ಬ್ರಾಂಡ್ ಸ್ಟಮಕ್ ಪೌಡರು ... ಜನಕವೆಂದು ಕಂಡುಬಂದ ಎಷ್ಟೋ ಜನರನ್ನು ಎಲ್ಲಾ ಕಡೆಗಳಲ್ಲಿಯೂ ಗುಣಪಡಿಸಿಯದೆ ಮತ್ತು ಈ ಉತ್ತಮವಾದ ಔಷಧಿಯು ಹೊಟ್ಟೆಯ ಸಂಕಟವನ್ನು ಗುಣಪಡಿಸಿದುದು ನಿಮ್ಮ ಭಯಂಕರವಾದ ಅಜೀರ್ಣ, ಎದೆಯುರಿ, ಹೊಟ್ಟೆಯುಬ್ಬರ ಮುಂತಾದ ಭಯಂಕರ ರೋಗದ ಚಿಹ್ನೆಗಳನ್ನು ಗುಣಪಡಿಸದೆ? ಕೂಡಲೇ ಒಂದು ಬಾಟ್ಲಿಯನ್ನು ಕೊಂಡುಕೊಳ್ಳಿರಿ—ಮುಂದಾಗಿ ಎಲೆಕ್ಸ್ ಸಿ ಮೆಕ್ಲೀನ್" ಎಂದು ದಸ್ಕತನ್ನು ನೋಡಿರಿ

Alex C. Maclean

ಬಾಟ್ಲಿಯ ಮೇಲೆ ಪೆಟ್ಟಿಗೆಯ ಮೇಲೆ ಈ ದಸ್ಕತು ಇದ್ದರೆ ಮಾತ್ರ ಅದು ನಿಜವಾಗಿ ಉತ್ತಮವಾದ ಮೆಕ್ಲೀನ್ ಬ್ರಾಂಡ್ ಸ್ಟಮಕ್ ಪೌಡರು. ಪೆಟ್ಟಿಗೆಯು ... ಸೀಲನ್ನು ನೋಡಿರಿ. ... ಹುಡಿಯಾಗಿಯಾಗಲೀ ... ಬಿಲ್ಲೆಯಾಗಿ ಮಾರಲ್ಪಡುವುದಿಲ್ಲ ... ಎಲ್ಲಾ ... ಸ್ಟೋರುಗಳಲ್ಲಿಯೂ ಮಾರಲ್ಪಡುವುದು —

ವಿಶೇಷ

ಕನ್ನಡ ಪತ್ರಿಕಾ ಪ್ರಪಂಚದಲ್ಲಿ ವಿಶೇಷ ಸಾಹಸ!

ನವಯುಗದ

:: ಮಕರ ಸಂಕ್ರಾಂತಿ ವಿಶೇಷ ಸಂಚಿಕೆ ::

ಮೈಸೂರು ದಿವಾನರ ಸಂದೇಶದೊಡನೆ, ಬಣ್ಣಬಣ್ಣದ ವಿವಿಧ ಚಿತ್ರಗಳೊಡನೆ, ಪ್ರಸಿದ್ಧರ ಲೇಖನ, ಕವನ, ಕತೆಗಳೊಡನೆ,

ಪ್ರಕಟಣೆಯ ತಾರೀಕು. 12-1-'39

ಕಣ್ಸೆಳೆವ ಬಾಹ್ಯಾಂಗ! ಮನಸೆಳೆವ ಅಂತರಂಗ!

ಅಖಿಲ ಕರ್ನಾಟಕಕ್ಕೆ ಭೂಷಣ ಪ್ರಾಯವಾದ ಈ ವಿಶೇಷ ತರದ ವಿಶೇಷ

::: ಸಂಚಿಕೆಯನ್ನು ಪಡಕೊಳ್ಳುವುದು ಕನ್ನಡಿಗರಿಗೊಂದು ಭೂಷಣ :::

ಬೆಲೆ. ನಾಲ್ಕಾಣೆ

ಪ್ರತಿಗಳ್ಳು ನಿಮ್ಮೂರ ಏಜಂಟರಲ್ಲಿ ಸಿಗದಿದ್ದರೆ ಇಂದೇ ನಾಲ್ಕಾಣೆ ಸ್ಟಾಂಪನ್ನು ಕಳುಹಿಸಿರಿ. ಮನೆ ಬಾಗಿಲಿಗೇ ಬಂದು ಬಿಡುತ್ತೆ.

ಮೆನೇಜರ್

ನವಯುಗ ಉಡುಪಿ.

ಹೆರೊಲ್ಡ್ ಐಕ್-ಇವನಾರು?

ಕೆಸಿಸ್ಟ ಜನಾಂಗಗಳ ವಿಷಯದಲ್ಲಿಯೂ, ದುಷ್ಟ ವ್ಯಾಪಾರಿಗಳ ವಿಚಾರದಲ್ಲೂ ಕೆಲವೇ ದಿನಗಳ ಹಿಂದೆ ವಿಶೇಷ ಭಾಷಣ ಮಾಡಿದ ಈತನು, ಯುನೈಟೆಡ್ ಸ್ಟೇಟ್ಸಿನ ಒಳನಾಡಿನ ಸೆಕ್ರೆಟರಿ. ಆ ರಾಷ್ಟ್ರದ ಸಂಪತ್ತು ಸುಧಾರಣಾ ಕಾರ್ಯಗಳನ್ನು ಸಾಗಿಸುವರಲ್ಲಿ ಮೊದಲನೆಯವನು ಅಲ್ಲಿನ ಸರಕಾರದ ಹಣ್ಣು ಮುಳುಗಿಸಲಾಗಿರತಕ್ಕ ಸಕ್ಕರೆಯ ಮಂದಿಗಳಲ್ಲಿ

—ಇವನೊಬ್ಬನು—

ಈತನಿಗೆ ರಾತ್ರಿಯಲ್ಲಿ ನಿದ್ದೆ ಹತ್ತದು, ಅದರ ಫಲವಾಗಿ, ಹಾಳುಗುಡಿಗಳನ್ನು ಅಮೇರಿಕದಿಂದ ಕೆಡಬೀಳಿಸುವ ಯತ್ನಮಾಡುತ್ತಿರುವನು. ಸರಕಾರದ ಇವನಾರತ್ತಿನ ಇಲಾಖೆ ಈತನ ಕೈಕೆಳಗಿದೆ, ಅದು ನಿಧಾನ ಕೆಲಸ ಮಾಡುತ್ತದೆಂದೂ ದೂರು. ಸರಕಾರದ ಬದಲಾಗಿ, ಐವರು ಪ್ರತಿನಿಧಿಗಳ ಮೂಲಕ, ಆ ಇಲಾಖೆ ನಡೆಸಬೇಕಾಗಿ ಒಂದು ಸೂಚನೆ ಹೊರಟಿತ್ತು ಅಲ್ಲಿಂದ ಈತನಿಗೆ ಸಿಟ್ಟೇರಿತು

ಈತನು ತನ್ನನೆ ಪ್ರಕೃತಿಯ ಆಳು ಸಿಟ್ಟನ್ನು ತಡೆದನು ತೋಟದಲ್ಲಿ ಕೆಲಸಮಾಡಕೂತನು. ಉದ್ಯಾನ ವಿಷಯಕ ಪುಸ್ತಕ ಓದಿದನು ರಾತ್ರಿಯಲ್ಲಿ ನಿದ್ದೆಹೋಗುವಾಗ, ಆ ಇಲಾಖಾ ವಿಚಾರ ಓದಿದನು. ಎಷ್ಟೋ ಉಪಾಯ ತಂತ್ರ ಹೂಡಿದರೂ ನಿದ್ದೆ ಹತ್ತದು ಮನಸ್ಸಿಗೆ ನಾಟಿದ ಆ ಸೂಚನೆಯ ಮುಳ್ಳು ನೋಯುತ್ತಿತ್ತು. ಆಗಲೆ ಸಿಟ್ಟೇರಿತು ಇನ್ನೂ ಏರಿತು. ಬೆಳಗಾಗುವಾಗ, ಸಿಟ್ಟು ಉಕ್ಕೇರಿತು, ಗರ್ಜಿಸಿ ತನ್ನಷ್ಟಕ್ಕೇ ಒಂದು ಭಾಷಣಮಾಡಿದನು ಬೆಳಗಾಗುವುದರೊಳಗೆ ಸೆಕ್ರೆಟರಿಯನ್ನು ಎಬ್ಬಿಸಿ, ತನ್ನ ಪಕ್ಷಕ್ಕೆ ಇರಬಹುದಾದ ಪ್ರತಿನಿಧಿಗಳ ಹೆಸರು ಎಣಿಸಿಕೊಂಡನು ಸುಮಾರು ೪೦ ಮಂದಿ ದೊರೆತರು. ಪ್ರತಿ ಒಬ್ಬರನ್ನೂ ಟೆಲಿಫೋನ್ ಮೂಲಕ ಕರೆದಬ್ಬಿಸಿದನು ಅವರಿಗೆ ಹಲವು ಹದಿನೆಂಟು ಯೋಜನೆಗಳನ್ನು ವಿವರಿಸಿದನು ಒಬ್ಬೊಬ್ಬರಿಗೆ ಒಂದೊಂದು ತರ.

ಮರುದಿನ ಪಾರ್ಲಿಮೆಂಟು ಸೇರಿದಾಗ, ಆ ಸೂಚನೆ ಬಿದ್ದೇ ಹೋಯಿತು ಸೆಕ್ರೆಟರಿಗೆದ್ದನು. ಅವನೇ ಮುಖಂಡನಾಗಿ ಆ ಇವಾರತ್ತು ವಿಚಾರ ನೋಡಬೇಕೆಂದಾಯಿತ

ಈತನ ಒಂದು ಲಕ್ಷಣ ಇದು. ಯಾವ ಕೆಲಸಮಾಡುತ್ತಿದ್ದರೂ, ಮಾಡ ಇಲ್ಲದವನಂತೆ, ಬೇರೆ ಉದ್ಯೋಗದಲ್ಲಿರುವನು ರಾಜೀನಾಮೆಕೊಟ್ಟಂತೆ ತೋರುವನು ತತ್ವಜ್ಞಾನವನ್ನೇ ಮಾತಾಡುವನು ತನ್ನವರೊ ಎಂಬ ಹತ್ತೆಂಟು ಮಂದಿಯೊಡನೆ ಇವನು ತೀರ ಸರಳ ಹೃದಯನು ಹುಟ್ಟುಮಾತುಗಳಾಡುವಂತೆ ನಟಿಸುವನು. ಗೆಳೆಯರಿಗೆ ವಿನೋದ ಹೆಚ್ಚುವಂತೆ ಕೂಟ ಕೂಡಿಸುವನು

ಆದರೆ, ಇವನಿಗೆ ಸಿಟ್ಟೇರುವ ಒಂದು ಲಕ್ಷಣವಿದೆ ಯಾವುದೊಂದು ಕಟ್ಟಡ ಕಟ್ಟಿಸಬೇಕಾದರೂ, ಇವನ ಒಪ್ಪಿಗೆ ಅಗತ್ಯ ಆಗ ಇವನಿಗೆ ಸಿಟ್ಟು. ಒಂದು ಸಲ, ಒಬ್ಬ ಮುನಿಸ್ಪಾಲಿಟಿಯ ಆಫೀಸಿಗೆ ಹೋಗಿ, ಅಲ್ಲಿ ಕೆಲಸ ಮಾಡುತ್ತಿದ್ದ ಎಲ್ಲ ಗುಮಾಸ್ತರನ್ನೂ ಡಿಸ್‌ಮಿಸ್ ಮಾಡಿದನು. ಇವನ ಸಿಟ್ಟಿಗೆ ಕಾರಣಗಳೇನೂ ಬೇಕೆಂದಿಲ್ಲ ಶ್ರೀಮಂತ ವ್ಯಾಪಾರಿಗಳನ್ನು ಕಂಡರೇ ಸಿಟ್ಟು.

ಇವರೆಲ್ಲ ಫೆಸಿಸ್ಟರೆಂದು ಅವನ ಅಭಿಪ್ರಾಯ ಜನರ ದುರ್ಗತಿಗೆ ಇವರೇ ಕಾರಣರೆನ್ನುವರು. ಅಮೇರಿಕವೆಲ್ಲ ಹಣದ ಮೋಹದಲ್ಲಿ ಬೀಳಲು ಕಾರಣರು ಇವರು ಜುಗಾರು, ಲಂಚ, ಸ್ಪರ್ಧೆ, ಮದ್ಯಮಾರಾಟ, ಇತರರ ದುಡಿತದ ಪ್ರಯೋಜನದ ಮೋಹ,—ಇಷ್ಟನ್ನೇ ಎಣಿಸಿ ಬಾಳುವವರಿವರು ಎನ್ನುವನು

"ಕೊಮ್ಯೂನಿಸಮ್ ದುಷ್ಟವಾಗಿದೆ ಹಣವೂ ವ್ಯಾಪಾರವೂ ಸೇರಿದ ಕೊಮ್ಯೂನಿಜಮ್ ತಾಜಾ ಕೊಮ್ಯೂನಿಜಮಿಂಗಿಂತ ನೂರುಮಡಿ ದುಷ್ಟ ಸ್ವಾರ್ಥವು, ಹೆಚ್ಚು, ನ್ಯಾಯವಿರದಂತೆ ಮಾಡಿ, ಸ್ವಾತಂತ್ರ್ಯವು ನಿರ್ಮೂಲವಾಗಲು ಯತ್ನಿಸಿ, ಜಗತ್ತಿನಲ್ಲಿ ಬಡತನ ಮತ್ತು ಕಷ್ಟಜೀವನವನ್ನು ಬೆಳೆಸಲು ಈ ಶ್ರೀಮಂತರ ಕೊಮ್ಯೂನಿಜಮ್ ಕಾರಣ" ಎಂದು ಸಾರಿರುವನು. ಇಂತಹ ಸ್ವಸ್ವಾರ್ಥ ಸ್ವಾಯ ಹೇಳುವವನಾದ ಕಾರಣವೇ ಪ್ರೆಸಿಡೆಂಟರಿಗೆ ಈತನು ಬಲಗೈಯಾಗಿರುವನು,

ಇಲಾಖಾ ವಿಷಯದಲ್ಲಿ,—ಅಮೇರಿಕದಲ್ಲೇ ಎಂದರೇನು, ಪ್ರಪಂಚದಲ್ಲಿ ಎಲ್ಲಿಯೂ ಇವಾರತು ಇಲಾಖಾಧಿಗಳಾರೂ ಇವನಿಗೆ ಸರಿಯಾಗರು, 'ದುಡ್ಡಿಗೆ ಮಂಥೇರು' ಆಯಾ ಪಿ.ಡಬ್ಲ್ಯು.ಡಿ. ಕಟ್ಟಡಗಳು ನೂರು ಮಿಲಿಯ ಎಂದರೆ ಇವನ ಸಾಮಾನ್ಯ ವ್ಯಯ ಕಳೆದ ವರ್ಷ ಎಲ್ಲ ರಾಜ್ಯದಲ್ಲಿ ಇವನು ಕಟ್ಟಿಸಿದ ಸರಕಾರೀ ಕಟ್ಟಡಗಳಿಗೆ ವ್ಯಯವಾದುದು ೫,೭೦೮,೪೮೦,೧೬೩ ಡೊಲ್ಲರು! ಇದರಿಂದ ೧೫ ಮಹಾ ಕಾಲುವೆಗಳನ್ನು ಕಟ್ಟಿಸಲಾಗುತ್ತಿತ್ತು!!

ಪ್ರತಿವಾರವೂ ಒಂದೆಂದು ಸಲವಾದರೂ ಪ್ರೆಸಿಡೆಂಟರನ್ನು ಕಾಣದೆ ಇರನಾದ ಕಾರಣ, ಪರರಾಷ್ಟ್ರೀಯ ನೀತಿ ಇವನ ಮಾತಿನಂತೆ ನಡೆವುದು ಪ್ರೆಸಿಡೆಂಟರ ವಿರುದ್ಧ ಪಕ್ಷವೇ ಇವನ ಮಿತ್ರ ಪಕ್ಷ' ಹೀಗಾಗಿ, ಇವನ ಮಾತಿಗೂ ಬೆಲೆಯಿದೆ ಇತರ ಎಷ್ಟೋ ಮಂತ್ರಿ, ಇಲಾಖೆಗಳೇ ಇವನನ್ನು ವಿರೋಧಿಸಿದರೂ, ಇವನು ತನ್ನ ಕ್ರಮ ಬಿಡುವವನಲ್ಲ

ತಾನೀಗ ಕೋಟ್ಯಾಧೀಶನಾಗುತ್ತಿರುವನು ಮೊದಲನೆ ಹೆಂಡತಿ ಸತ್ತಾಗ, ಅವಳ ಆಸ್ತಿ ಇವನಿಗಾಗಿದೆ ಸಿಟ್ಟಿನ ವೇಗದಿಂದ ಹೃದ್ರೋಗವಾದ ಬಳಿಕ, ಈಗ ತತ್ವಜ್ಞಾನಿಯಾಗಿದ್ದಾನೆ ಆ ರೋಗಕಾಲದಲ್ಲಿ ಶುಶ್ರೂಷೆಮಾಡಿದವಳೇ ಈಗಿನ ಹೆಂಡತಿ ಜರ್ಮನಿ ಇಟಲಿಗಳೆಂದರೆ ಇವನಿಗೆ ಆಗದು ಫೆಸಿಸ್ಟರು; ಶ್ರೀಮಂತರ ಹಾಳು ಲಕ್ಷಣವುಳ್ಳವರು ಇವನ ಪ್ರಾಬಲ್ಯ ವಿಶೇಷವಾಗಿದೆ, ಮಾಡುವ ಕೃತಿಗಳೂ ಅದ್ಭುತ. ಪ್ರೆಸಿಡೆಂಟರ ಅಪ್ಪಣೆಯೂ ಕೈಯೂ ಈತನ

ಹೀಗಾಗಿ ಜರ್ಮನಿ ಇಟಲಿಗಳು ಇವನ ಮಾತಿಗೆ ಹೆದರಿವೆ

THE WINGED DEMON

The Singhalese possess a holy chronicle, written in verse, and covering the history of Ceylon for a period of more than twenty-four centuries. It appears from this chronicle that the island, which Buddha visited several times to preach his doctrines in person, has experienced times of great prosperity, and once must have had a population far exceeding the present one. The innumerable ruined temples and artificial lakes also bear witness to this

The causes of this depopulation are clear The "Blessed Isle" was on occasion severely stricken with epidemics As well the natives as the Portuguese, who occupied the island in the sixteenth century, and the Dutch, who drove them out, and also the English, who later took possession of the island suffered seriously from disease Still in 1647 the Dutch published a map of Ceylon on which whole areas were left blank, not however, because they indicated unexplored territory Across these blank areas were written the ominous words depopulated by sickness

Singhalese tradition relates how during the rule of Dahama S Bo in the year 238 of our era the people were so severely afflicted with fever and sickness that the rice fields could not be cultivated and a long period of famine ensued This plague was attributed to the malignity of the winged demon' and they tried to exorcize him with devil-dances According to the legend however the Singhalese cannot become happy unless the "winged demon" is killed

When one reads on how large a scale the authorities in Ceylon are fighting the malaria mosquito then one is inclined to hope that now, eighteen centuries later, the last hour of the reign of the legendary winged demon has struck Also many general hospitals have been established at strategic points, and in recent years, during malaria epidemics, as much as thousands of pounds of quinine were sometimes distributed in six months, either as a prophylactic or as a remedy The recommendation of the Malaria-Commission of the League of Nations to adopt the short quinine treatment namely a daily dose of 15 to 20 grains for 5 to 7 days, is also a powerful weapon in this mobilisation of a nation against the "winged demon" As a prophylactic six grains of quinine per day are recommended during the malaria season

Mal Eng 143

ಗೇಟ್‌ವೇ ಕಂಪೆನಿಯವರ ಅಸಮಾನ್ಯವಾದ ಬಹುಮಾನಗಳು

ನಮ್ಮ ಭರವಸೆಯ ಇನಾಂಗಳು.

ರೂಪ್ಯಾ 42,000ವನ್ನು

ಸರಿಯಾಗಿ ಉತ್ತರ ಕಳುಹಿಸಿದ 20 ಮಂದಿಗಳೊಳಗೆ ಹಂಚಲಾಗುವುದು

ನಂಬ್ರ **5**

ಬೊಂಬಾಯಿಯ ಪ್ರಸಿದ್ಧ ಬ್ಯಾಂಕೊಂದರಲ್ಲಿ ಇಟ್ಟ ಉತ್ತರಕ್ಕೆ ಸರಿಹೋಲುವ ಉತ್ತರಕ್ಕೆ ಕನಿಷ್ಠ ಎಂದರೆ ರೂ 2100 ಸಿಗುವುದೆಂದು ಭರವಸೆಯಿಂದ ಹೇಳುವೆವು.



ಹೆಚ್ಚಾದ ಉತ್ತರವನ್ನು ಕಳುಹಿಸಿದವರಿಗೆ ರೂಪ್ಯಾ 500, 300 ಮತ್ತು 100ರ ಇತರ ಮೂರು ಬಹುಮಾನಗಳನ್ನು ಕೊಡಲಾಗುವುದು.

ನಮ್ಮ ಉತ್ತರಕ್ಕೆ ಸಾಧಾರಣ ರೀತಿಯಲ್ಲಿ ಸರಿಹೋಲುವ ಉತ್ತರಕ್ಕೆ 15 ರೂ ಯ 50 ಕೊನ್ಸೊಲೇಷನ್ ಬಹುಮಾನವು ಕೊಡಲ್ಪಡುವುದು

ಎಡಕಡೆ ಕಾಣುವ ಚೌಕಗಳಲ್ಲಿ ನೀಟವಾಗಿಯೂ, ಅಡ್ಡವಾಗಿಯೂ, ಮೂಲೆಯಿಂದ ಮೂಲೆಗೆ ಕೂಡಿಸಿದರೂ 50 ಬರುವಂತೆ 5ರಿಂದ 20ರ ವರೇಗಿನ ಸಂಖ್ಯೆಗಳನ್ನು ಬರೆಯಿರಿ, ಒಂದು ಬಾರಿ ಉಪಯೋಗಿಸಿದ ಅಂಕೆಗಳನ್ನು ಇನ್ನೊಂದು ಬಾರಿ ಉಪಯೋಗಿಸಬಾರದು ಉತ್ತರಗಳನ್ನು ಕಳುಹಿಸುವ ಕಡೆಯ ತಾರೀಕು 28—1—39 ಫಲಿತಾಂಶ 31—1—39 ಪ್ರವೇಶ ಹಾಸಲು ಒಂದು ಉತ್ತರಕ್ಕೆ 1 ರೂ ಅಥವಾ 3 ಉತ್ತರಗಳಿಗೆ 2 ರೂ 8 ಉತ್ತರಗಳಿಗೆ 5 ರೂ,

ರೂಲ್ಸ್ ಮೇಲೆ ಕಾಣಿಸಿದ ಪ್ರವೇಶಹಾಸಲಿನೊಂದಿಗೆ ಎಷ್ಟು ಉತ್ತರಗಳನ್ನೂ ಬಾಳಿಕಾಗದದ ಮೇಲೆ ಬರೆದು ಕಳುಹಿಸಬಹುದು ಪ್ರವೇಶ ಹಾಸಲನ್ನು ಮನಿಯಾರ್ಡರು ದ್ವಾರಿಯಾಗಲೀ ಇಂಡಿಯನ್ ಪೋಸ್ಟಲ್ ಆರ್ಡರು ಮುಖಾಂತರವಾಗಲೀ ಕಳುಹಿಸಬೇಕು ಮನಿಯಾರ್ಡರಿನ ಕೂಪನ ಮೇಲೆ ನಮ್ಮ ಎಡ್ರೆಸನ್ನು ಬರೆಯಿರಿ ಆ ಮನಿಯಾರ್ಡರಿನ ರಶೀದಿಯನ್ನು ಫಲಿತಾಂಶಕ್ಕಾಗಿ 0- 1-0 ಆಣೆಯ ಅಂಚೆಟಿಕೇಟಿನೊಂದಿಗೆ ನಿಮ್ಮ ಎಡ್ರೆಸ ಕವರನ್ನು ಕಳುಹಿಸಿರಿ ಮೆನೇಜರರ ತೀರ್ಪು ಕಡೇದು ನ್ಯಾಯಬದ್ಧವೂ ಆಗಿರುತ್ತದೆ

ಮೇಲೆ ಕಾಣಿಸಿದ ಬಹುಮಾನದ ವಿನಹ ಮೂರು ಉತ್ತರ ಕಳುಹಿಸಿದವರಿಗೆ ಅಂದವಾದ 1939ರ ಒಂದು ಕೆಲೆಂಡರನ್ನೂ, 8 ಮತ್ತು ಅದಕ್ಕೆ ಮೇಲ್ಪಟ್ಟ ಉತ್ತರ ಕಳುಹಿಸಿದವರಿಗೆ (ಬೇರೆ ಬೇರೆ ಹೆಸರಿನ ಕವರನ್ನು ಕಳುಹಿಸಬಹುದು) ಈ ಕೆಳಗಿನ ಯಾವುದಾದರೂ ಒಂದನ್ನು ಕೊಡುವೆವು.

1 ಎಸ್ಸ್ 1 ಬ್ರ್ಯಾಸ್ (ಮದುರಿಗೆ ಉತ್ತಮವಾದದ್ದು), 2 ಕಣ್ಣಿನ ಮದ್ದು (ಕಣ್ಣುಗಳಿಗೆ ಬಹಳ ಉತ್ತಮವಾದ ಔಷಧ

ಕಳೆದ ಬಾರಿಯ 46ರ ಉತ್ತರ—

ಒಂದನೇ ಸಾಲು	19,	17,	6,	8
2ನೇ ,,	5,	7,	16,	18
3ನೇ ,,	6	12,	11,	15
4ನೇ ,,	14,	10,	13,	9

ಎಲ್ಲಾ ಪ್ರವೇಶ ಹಾಸಲನ್ನೂ ಉತ್ತರವನ್ನೂ ಇವರಿಗೆ ಕಳುಹಿಸಬೇಕು,

ದಿ ಮೆನೇಜರ್,

ದಿ ಗೇಟ್‌ವೇ ಪ್ರೋಡಕ್ಟ್ಸ್

166 C, ಜಾವೇರಿ ಬಜಾರ್, ಬೊಂಬಾಯಿ 2,

7-1-'39

ಶ್ರೀ ಸಿ ಜೆ ವಾರ್ಕಿಯವರು

ವಿದ್ಯಾಇಲಾಖಾ ಮಂತ್ರಿಗಳಾದರು

★

ಎಲ್ಲ ಪ್ರಾಂತ್ಯಗಳ ಎಲ್ಲ ಮಂತ್ರಿಗಳಲ್ಲಿ ಕ್ರೈಸ್ತರಿವರೊಬ್ಬರೇ!

ಪಶ್ಚಿಮ ಕರಾವಳಿಯ ಒಬ್ಬ ಮಂತ್ರಿಗಳ ಬದಲು ಪಶ್ಚಿಮ ಕರಾವಳಿಯಿಂದಲೇ ನೇಮಿಸಿದರು'

★

ಶಿಕ್ಷಕವರ್ಗಕ್ಕೆಲ್ಲ ಇದು ಭೂಷಣವಾದ ಮಾತು

ಡಾ॥ವಿಲ್ಸನರು

ಅಮೇರಿಕದ ಪ್ರೆಸಿಡೆಂಟರಾದರಂತೆ

★

★ ಸ್ವದೇಶಾಭಿಮಾನಿಯು ಶಿಕ್ಷಕರ ಪರವಾಗಿ ವಂದಿಸುತ್ತದೆ

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್ ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಬಿಸೊಂದೊ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ. ಆಗ ತಾನೇ ನಿಮಗೆ ಖಚಿತವಾಗುವುದು.

[illegible]

ಕೆ. ಆರ್. ಕೆ. ಶೇಟ್, ಜುವೆಲ್ಲರ್,

ಮಂಗಳೂರು

ಕೊಂದ ಪಾಪ :: :: ತಿಂದು ಪರಿಹಾರ

ಹೀಗೆಂದು ಕನ್ನಡದಲ್ಲಿ ಒಂದು ಗಾದೆ ಇದೆ ಕೊಂದ ವಸ್ತುವನ್ನು ತಿಂದು ಕೊಂದುದರ ಪಾಪ ಪರಿಹಾರ ಮಾಡಿಕೊಳ್ಳಬೇಕೆಂದು ಕೆಲವರು ಈ ಗಾದೆಯ ಅರ್ಥಮಾಡಿಕೊಳ್ಳುತ್ತಾರೆ ಆದರೆ ಅದರ ನಿಜವಾದ ಅರ್ಥವು ಅದಲ್ಲ. ಜೀವಿಯನ್ನು ಕೊಂದುದರ ಪಾಪಫಲವನ್ನು ತಿಂದು ಅಥವಾ ಅನುಭವಿಸಿಯೇ ಪರಿಹಾರಮಾಡಿಕೊಳ್ಳಬೇಕೆಂದು ಇದರ ವಾಸ್ತವಿಕ ಅರ್ಥವಾಗಿದೆ

ಹೀಗೆ ಕೊಂದ ಪಾಪವನ್ನು ತಿಂದು ಪರಿಹಾರ ಮಾಡಿಕೊಳ್ಳುವ ಒಂದು ಉತ್ತಮ ನಿದರ್ಶನವು ಈಗ ಯೂರೋಪಿನಲ್ಲಿ ನಡೆಯುತ್ತಿರುವ ಘಟನೆಗಳಲ್ಲಿ ದೊರೆಯುತ್ತದೆ

ಇಟಲಿಯು ಅಬಿಸೀನಿಯದ ಮೇಲೆ ಬಿದ್ದಾಗ– ಜರ್ಮನಿಯು ಜೆಕೊಸ್ಲೊವೇಕಿಯದ ಮೇಲೆ ಕತ್ತಿ ಎತ್ತಿದಾಗ– ಇಂಗ್ಲೆಂಡ ಫ್ರಾನ್ಸು ಗಳು ಅವುಗಳ ಸಹಾಯಕ್ಕೆ ಹೋಗಲಿಲ್ಲ ಸಹಾಯಕ್ಕೆ ಬರುತ್ತೇವೆಂದು ಮಾತು ಕೊಟ್ಟು ಕೊಟ್ಟು, ನಂಬಿಸಿ ಆ ರಾಷ್ಟ್ರಗಳನ್ನು ಕೊಂದವು, ಕೊಂದುದರ ಆ ಪಾಪದ ಫಲವನ್ನು ಈಗ ಅನುಭವಿಸಿ ಪರಿಹಾರ ಮಾಡಿಕೊಳ್ಳಬೇಕಾದ ಸಮಯವು ಇಂಗ್ಲೆಂಡು ಫ್ರಾನ್ಸುಗಳಿಗೆ ಒದಗಿ ಬಂದಿದೆ.

ಇಟಲಿಯು ಅಬಿಸೀನಿಯದ ಮೇಲೆ ಅನ್ಯಾಯದ ಯುದ್ಧವನ್ನು ಸಾರಿ ಅದರ ಮೇಲೆ ಅನಾಚಾರ ಅತ್ಯಾಚಾರಗಳನ್ನು ನಡೆಸಿದಾಗ ಇಂಗ್ಲೆಂಡು ಇಟಲಿಯ ಮೇಲೆ ಸ್ಯಾಂಕ್ಷನುಗಳನ್ನು ಜ್ಯಾರಿಮಾಡುವ ವಿಚಾರವನ್ನು ಮುಂದೆ ಮಾಡಿತು ಆಗಲೆ ಪ್ರಕಾರ ಮಾಡಿದ್ದರೆ ಇಟಲಿಯ ಅಹಮ್ಮಿಕೆಯು ಸದಾಕಾಲಕ್ಕಾಗಿ ಇಳಿದು ಹೋಗುತ್ತಿದ್ದಿತು ಆದರೆ ಫ್ರಾನ್ಸು ತನ್ನ ಹಾರ್ದಿಕ ಸಹಕಾರ ಸಹಾಯಗಳನ್ನು ಕೊಡದುದ್ದರಿಂದ ಇಂಗ್ಲೆಂಡಿನ ಆ ವಿಚಾರದಿಂದ ಏನೂ ಫಲ ದೊರೆಯಲಿಲ್ಲ. ಇಟಲಿಯು ಅಬಿಸೀನಿಯದಲ್ಲಿ ತನ್ನ ಅಧಿಕಾರವನ್ನು ಜಮಾಯಿಸಿಯೇ ಬಿಟ್ಟಿತು ಇಂಗ್ಲೆಂಡು ಫ್ರಾನ್ಸುಗಳ ಅಬಿಸೀನಿಯದ ಪ್ರಾಣಹೀರಿದುವು.

ಜೆಕೊಸ್ಲೊವೇಕಿಯದಲ್ಲಿ

ಮತ್ತೆ ಜರ್ಮನಿಯು ಜೆಕೊಸ್ಲೊವೇಕಿಯದ ಮೇಲೆ ಕತ್ತಿ ಹಿಡಿದು ನಿಂತಿತು ಆಪತ್ಕಾಲದಲ್ಲಿ ಸಹಾಯಮಾಡುವೆವೆಂದು, ಇಂಗ್ಲೆಂಡ ಫ್ರಾನ್ಸುಗಳು ಜೆಕೊಸ್ಲೊವೇಕಿಯಕ್ಕೆ ಮಾತು ಕೊಟ್ಟಿದ್ದವು ಪರಿಣಾಮ ಸರಿಯಾದ ವಿಶ್ವಾಸ ಘಾತ ಮಾಡಿ, ಅದರ ಕುತ್ತಿಗೆ ಕಡಿದುವು ಜೆಕೊಸ್ಲೊವೇಕಿಯದಲ್ಲಿ ಜರ್ಮನಿಯ ಧ್ವಜ ಮೇಲಾಡಿತು.

ಅದರ ಫಲ

ಸರ್ವಾಧಿಕಾರಿಗಳ ಸ್ವಾರ್ಥದ ಬೇಳೆಯು ಬೇಯದಂತೆ ಈ ಎರಡು ರಾಷ್ಟ್ರಗಳು ಮೊದಲೇ ಜಾಗ್ರತೆಯನ್ನಿಟ್ಟುಕೊಂಡಿದ್ದರೆ ಈಗ ಯೂರೋಪದಲ್ಲಿ ಇಷ್ಟು ಗೊಂದಲವುಂಟಾಗುತ್ತಿರಲಿಲ್ಲ ಆದರೆ ಹಿಂದಿನ ಘಟನೆಗಳಿಂದಾಗಿ ಇಂಗ್ಲೆಂಡ ಫ್ರಾನ್ಸುಗಳಲ್ಲಿ ಪೌರುಷವೇ ಇರುವುದಿಲ್ಲವೆಂದು ಹಿಟ್ಲರ ಮುಸಲೋನಿಯರು ತಿಳಕೊಂಡಿದ್ದಾರೆ ಆದ್ದರಿಂದ ತೋರಿಕೆಯ ಮಟ್ಟಿಗೆ ಇಂಗ್ಲೆಂಡ ಜರ್ಮನಿ ಫ್ರಾನ್ಸ ಇಟಲಿಗಳು ಸ್ನೇಹದಿಂದಿರುವಂತೆ ಕಾಣುತ್ತವಾದರೂ ನಿಜವಾದ ಸಂಗತಿ ಹಾಗಿರುವುದಿಲ್ಲ ಜರ್ಮನಿಯು ಇಂಗ್ಲೆಂಡಿನ, ಇಟಲಿಯು ಫ್ರಾನ್ಸಿನ ಗೋಣು ಮುರಿಯುವ ಅನುಕೂಲ ಸಮಯವನ್ನು ಕಾದುಕೊಂಡಿವೆ

ಇಂಗ್ಲೆಂಡ ಫ್ರಾನ್ಸುಗಳು ಅಬಿಸೀನಿಯ ಜೆಕೊಸ್ಲೊವೇಕಿಯಗಳನ್ನು ಕೊಂದ ಫಲವನ್ನು ಈಗ ತಿನ್ನಬೇಕಾಗಿ ಬಂದಿದೆ ಕಳೆದ ಮಹಾಯುದ್ಧದ ನಷ್ಟ ಪರಿಹಾರದ ವ್ಯವಸ್ಥೆ ಯುದ್ಧದ ಮೂಲಕ ಕಳಕೊಂಡ ಹಿಂದಿನ ವಸಾಹತುಗಳನ್ನೂ ಜರ್ಮನಿಗೆ ಪುನಃ ಕೊಡಬೇಕೆಂದು ಹಿಟ್ಲರನು ಇಂಗ್ಲೆಂಡನ್ನು ಒತ್ತಾಯಮಾಡುತ್ತಿದ್ದಾನೆ ಇತ್ತ ಅಬಿಸೀನಿಯಕ್ಕೆ ಸಮೀಪದಲ್ಲಿರುವ ಜಬೂಟಿ ಬಂದರವನ್ನು ಮಧ್ಯಸಮುದ್ರಕ್ಕೆ ಒತ್ತಿರುವ ಟ್ಯೂನಿಸ್ ಪ್ರಾಂತ್ಯವನ್ನೂ ತನಗೆ ಕೊಡಬೇಕೆಂದು ಮುಸಲೋನಿಯು ಫ್ರಾನ್ಸನ್ನು ಬಲಾತ್ಕರಿಸುತ್ತಿದ್ದಾನೆ

ಪರಿಸ್ಥಿತಿಯು ಗಂಭೀರವಾಗಿದೆ

ಸರ್ವಾಧಿಕಾರಿಗಳ ಈ ಬೇಡಿಕೆಗಳಿಂದ ಯೂರೋಪಿನ ಪರಿಸ್ಥಿತಿಯು ಬಹಳ ಗಂಭೀರವಾಗಿದೆ ಇನ್ನು ಸ್ವಲ್ಪ ಸಮಯದಲ್ಲಿಯೇ ಇಂಗ್ಲೆಂಡ ಫ್ರಾನ್ಸುಗಳು ಹಿಟ್ಲರ ಮುಸಲೋನಿಯರಿಗೆ ಶರಣಾಗತಿ ಸೋಲನ್ನು ಒಪ್ಪಿಕೊಂಡು ಅವರ ಬೇಡಿಕೆಗಳನ್ನು ಪೂರೈಸುವ ಅಥವಾ ಒಂದು ದೊಡ್ಡ ಯುದ್ಧವೇ ಆರಂಭವಾಗುವ ಸಂದಿಗ್ಧ ಸಮಯವು ಬರುವುದು ಒಬ್ಬರಿಗೊಬ್ಬರು ಮೋಸಮಾಡಿದ್ದು ಎಷ್ಟು ಕಾಲ ತಾನೇ ಸುಖವಾಗಿರಬಹುದು? ಕೊಂದಪಾಪವು ತಿಂದೇ ಪರಿಹಾರವಾಗಬೇಕಲ್ಲವೆ?

ಮಂಗಳೂರು ಮುನಿಸಿಪಾಲಿಟಿ.

ನೋಟಿಸು

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ ಇದೇ 1989ನೇ ಇಸ್ವಿ ಫೆಬ್ರವರಿ ತಿಂಗಳ 15ನೇ ತಾರೀಖಿನ ಮಧ್ಯಾಹ್ನ 4 ಘಂಟೆಯ ವರೆಗೆ ರೂಪಾಯಿ 88,540 ಎಸ್ಟಿಮೇಟಿನ ವೆಬ್‌ಸ್ಟರ್ ಮಾರ್ಕೆಟ್ ಹೊಸತಾಗಿ ಕಟ್ಟುವ ಕಾಮಗಾರಿಯ ಬಗ್ಗೆ ಮೊಹರುಮಾಡಲ್ಪಟ್ಟ ಟೆಂಡರುಗಳನ್ನು ಮುನಿಸಿಪಲ್ ಆಫೀಸಿನಲ್ಲಿ ಪಡಿಯಲಾಗುವುದು. ಟೆಂಡರ್ ಫೋರಮ್, ಪ್ಲೇನ್, ಟೆಂಡರ್ ನೋಟೀಸು ವಗೈರೆ ರೂಪಾಯಿ 15 ಪಾವತಿ ಮಾಡಿದಲ್ಲಿ ಕೊಡಲಾಗುವುದು.

ಮುನ್ಸಿಪಲ್ ಆಫೀಸು ಕೆ. ಕಂಡಸ್ವಾಮಿ
ಮಂಗಳೂರು ಕಮಿಶನರ್,
ತಾ ೬-12-೩೫ ಮಂಗ್ಳೂರು ಮುನ್ಸಿಪಾಲಿಟಿ

ಮಹಾಶಕ್ತಿ ಸಂಪನ್ನ * * * * ಅನಭಿಷಿಕ್ತ ರಾಜ!

ಅತ್ಯಂತ ಶಕ್ತಿಶಾಲಿ ಮುಗಲ್ ಬಾದಶಾಹರಿಗಿಂತಲೂ ಗಾಂಧಿಯ ಶಕ್ತಿಯು ಮಿಗಿಲಾಗಿರುವದು. ಅವರಿಗೆ ಆರೂಢನಾಗಲಿಕ್ಕೆ ಸಿಂಹಾಸನವಿಲ್ಲ; ಧಾರಣಮಾಡಿಕೊಳ್ಳಲಿಕ್ಕೆ ಕಿರೀಟವಿಲ್ಲ; ರಾಜಸ್ಥಾನವಿಲ್ಲ; ರಾಜಪದವಿಯಿಲ್ಲ ಆದರೂ ಅವರು ರಾಜಮಹಾರಾಜರುಗಳಿಗಿಂತಲೂ ಅಧಿಕ ಶಕ್ತಿ ಸಂಪನ್ನರಾಗಿರುವರು.' ಎಂದು ರಿಚಾರ್ಡ ಫ್ರೈಯೆಂಡ್ ಎಂಬ ಬಹು ಪ್ರಸಿದ್ಧ ಯೂರೋಪಿಯನ ಲೇಖಕರು 'ಸ್ಪೆಕ್ಟೇಟರ್' ಎಂಬ ಪತ್ರಿಕೆಯಲ್ಲಿ ಬರೆಯುತ್ತಾರೆ

ಗಾಂಧಿಯನ್ನರಿಯದ ಭಾರತೀಯನಿಲ್ಲ

ಗಾಂಧಿಯವರು ಎಷ್ಟು ಜನಪ್ರಿಯರಾಗಿರುವರು ಎಂಬುದಕ್ಕೆ ಒಂದು ದೃಷ್ಟಾಂತವನ್ನು ಕೊಡುತ್ತ ಲೇಖಕರು ತಮ್ಮ ಲೇಖನದಲ್ಲಿ ಹೀಗೆ ಬರೆದಿದ್ದಾರೆ — ಇಂಗ್ಲೆಂಡಿನ ಒಬ್ಬ ಕ್ರೈಸ್ತ ಮಿಶ್ಯನರಿಯು ಇಂಡಿಯಾಕ್ಕೆ ಒಂದು ಬಹಳ ಕಾಲದ ತನಕ ದೇಶಸಂಚಾರ ಮಾಡಿದನು ಗಾಂಧಿಯ ಹೆಸರನ್ನು ಕೇಳದ ದೇಶೀಯನೊಬ್ಬನು ಇರುವನೇ ಎಂದು ಪ್ರಯತ್ನಪಟ್ಟು ಹುಡುಕಿದನು ಅಂಥ ದೇಶೀಯನು ಆ ಮಿಶ್ಯನರಿಗೆ ಕಾಣಸಿಗಲಿಲ್ಲ

ಕಡೆಗೆ ಆ ಮಿಶ್ಯನರಿಯು ಅಂಥ ಒಬ್ಬನನ್ನು ಹುಡುಕಲಿಕ್ಕೆ ಪಣತೊಟ್ಟು ಹಳ್ಳಿಗಳನ್ನು ಬಿಟ್ಟು ಕಾಡುಗಳ ಮರೆ ಹೊಕ್ಕು ಕಾಡುಗುಡ್ಡಗಳಲ್ಲಿ ಅನಾಗರಿಕರಾದ ಮೂಲನಿವಾಸಿಗಳು ವಾಸವಾಗಿದ್ದಾರೆ ಅಂಥ ಒಬ್ಬ ಮೂಲನಿವಾಸಿಯನ್ನು 'ಮಹಾತ್ಮಾ ಗಾಂಧಿ' ಯಾರ ಎಂದು ಕೇಳಿದ ಗಾಂಧಿ ಎಂದರೆ ಏನೋ ಒಂದ ತಿನ್ನುವ ವಸ್ತು ಎಂದು ಆ ಕಾಡು ಮನುಷ್ಯನು ತಿಳಕೊಂಡಿತ್ತು ಗಾಂಧಿಯ ಹೆಸರು ಭಾರತದ ಹಳ್ಳಿಗಳ ಮಂದಗುಡಿಸಲುಗಳಲ್ಲಿಯೂ ಕೇಳಬರುತ್ತದೆಂಬುದು ಭಾರತದ ಇತಿಹಾಸದಲ್ಲಿ ಒಂದು ಮಹತ್ವದ ಸಂಗತಿಯಾಗಿರುವುದು. ಗಾಂಧಿಯವರಷ್ಟು ಜನಪ್ರಿಯನಾದ ಮತ್ತೊಬ್ಬನು ಭಾರತದಲ್ಲಿ ಹುಟ್ಟಿಯೇ ಇಲ್ಲ

ರಾಜಮಹಾರಾಜರೂ ಗಾಂಧಿಗೆ ಹೆದರುತ್ತಾರೆ!

ಹಿಂದೂದೇಶದ ದೇಶೀಯ ಸಂಸ್ಥಾನಗಳ ರಾಜರ ಮಹಾರಾಜರುಗಳು ತಮ್ಮ ಪ್ರಜೆಗಳ ಜೀವನದಲ್ಲಿ ಗಾಂಧಿಯು ಹೆಸರೆತ್ತುತ್ತಾರೆ, ಈ ರಾಜಮಹಾರಾಜರುಗಳು ಇಂಗ್ಲೆಂಡಿನ ಸಾರ್ವಭೌಮ ಸರಕಾರದೊಂದಿಗೆ ಕಹಿಹವನ್ನಿಟ್ಟಿಸಲಿಕ್ಕಾದರೆ, ಸಾಹಸಮಾಡಿಯಾರು, ಆದರೆ ಗಾಂಧಿಯವರು ತಮ್ಮ ಕುರಿತು ಅಸಮಾಧಾನದಿಂದ ಒಂದು ವಿರೋಧ ಮಾತನ್ನು ಕೇಳಲಿಕ್ಕೆ ಅವರು ಸಿದ್ಧರಾಗಿರುವುದಿಲ್ಲ ಗಾಂಧಿಯೆಂದರೆ ಅವರು ಅಷ್ಟು ಹೆದರುತ್ತಾರೆ!

ಮುಸಲ್ಮಾನರ ಆರಾಧ್ಯ ದೇವರು

ಮುಸಲ್ಮಾನರು ಮೂರ್ತಿ ಪೂಜಕರಲ್ಲ ಅವರು ವ್ಯಕ್ತಿಪೂಜೆಯನ್ನು ಮಾಡುವುದಿಲ್ಲ ಆದರೆ ಅವರ ಆರಾಧ್ಯ ದೇವರು ಒಬ್ಬರು ಇರುವರಾದರೆ, ಆ ವರು ಗಾಂಧಿಯವರೊಬ್ಬರೇ! ಈಗ ತಾನೆ ಗಾಂಧಿಯವರು ಫ್ರಾಂಟಿಯರ್ ಗಡಿನಾಡಿನ ಸಂಚಾರ ಮಾಡಿಕೊಂಡು ಬಂದಿದ್ದಾರೆ. ಗಡಿನಾಡು ಮುಸಲ್ಮಾನರ ಪ್ರಾಂತ್ಯ. ಗಾಂಧಿ ಎಂದರೆ ಒಬ್ಬ ಹಿಂದೂ. ಆದರೆ ಹಿಂದೂ ಗಾಂಧಿಗೆ ಗಡಿನಾಡಿನ ಮುಸಲ್ಮಾನರಿಂದ ದೊರೆತ ಆದರ ಸತ್ಕಾರ ಮಾನ ಮನ್ನಣೆಗಳೇನು! ಅವುಗಳನ್ನು ವಿವರಿಸಲಿಕ್ಕೆ ಶಬ್ದಗಳೇ ದೊರೆಯುವುದಿಲ್ಲ ಗಾಂಧಿಯವರ ಪಾವನ ಮೂರ್ತಿಯ ದರ್ಶನ ತೆಗೆದುಕೊಳ್ಳಲಿಕ್ಕೆ ಪ್ರತಿದಿನವೂ ಸಾವಿರಗಟ್ಟಲೆ ಮುಸಲ್ಮಾನ ಸ್ತ್ರೀ ಪುರುಷ ಮಕ್ಕಳು ಅವರ ಸಂಚಾರದ ಮಾರ್ಗಗಳಲ್ಲಿ ಹಗಲಿರುಳು ಕಾದುಕೊಂಡು ಇರುತ್ತಿದ್ದರು

ಅಷ್ಟು ಮಾತ್ರವೇ ಅಲ್ಲ ಗಡಿನಾಡಿನ ಮುಸಲ್ಮಾನರು ಎಷ್ಟೋ ಶತಮಾನಗಳಿಂದ ಅವರಿಗೆ ಹೊಡೆದಾಟ ಬಡಿದಾಟ, ಕೊಲೆ ಸುಲಿಗೆಗಳೇ ಜೀವನದ ಲೀಲಾ ವಿನೋದಗಳಾಗಿದ್ದವು ಅಂಥವರೇ ಈಗ ಗಾಂಧಿಯ ಅಹಿಂಸಾತತ್ವದ ಅನುಸಂಧಾನ ಮಾಡಲಿಕ್ಕೆ ತೊಡಗಿರುವರು

ಇತಿಹಾಸ ನಿರ್ಮಾತೃ–ಗಾಂಧಿ

ಗಾಂಧಿಯವರು ಒಬ್ಬ ಇತಿಹಾಸ ನಿರ್ಮಾತರೇ ಆಗಿದ್ದಾರೆ ತನ್ನ ತಮ್ಮ ಮನೆಮಕ್ಕಳು, ಜಾತಿಕುಲವನ್ನು ತಮ್ಮ ಸರ್ವಸ್ವವನ್ನಾಗಿ ಮಾಡಿಕೊಂಡಿದ್ದ ಹಳ್ಳಿಗರ—ಇವರೇ ಭಾರತದ ಬಹುಸಂಖ್ಯಾಕರಾಗಿರುವರು—ಈಗ ತಮ್ಮ ಸಂಕುಚಿತವಾದ ಕ್ಷೇತ್ರದಿಂದ ಹೊರಗೆ ವಿಶಾಲ ಪ್ರಪಂಚದಲ್ಲಿ ಕಾಲಿಡತೊಡಗಿದ್ದಾರೆ ಗಾಂಧಿಯವರ ಪ್ರಭಾವ ಅವರ ಅದ್ಭುತವಾದ ಶಕ್ತಿಯಿಂದ ಒಂದು ಹೊಸ ಜನಾಂಗವು ರೂಪುಗೊಳ್ಳುತ್ತಲಿದೆ ಈ ಜನಾಂಗದ ನಾಯಕರು ಗಾಂಧಿಯವರೇ ಆಗಿದ್ದಾರೆ

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬ್ಲಾಕುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊದಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

(ಮ)ಮಂಗಳೂರಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಶರಣು ಬಂದವರಿಗೆ ಶರಣು ಕೊಟ್ಟರೆ ಪ್ರಾಣಕ್ಕೆ ಸಂಚಕಾರವಾದೀತು

ರುಮೇನಿಯದ ದೊರೆಗೆ ಹಿಟ್ಲರನ ಎಚ್ಚರಿಕೆ

'ಹಿಂದಾನೊಂದು ಕಾಲದಲ್ಲಿ ಒಬ್ಬಾನೊಬ್ಬ ಅರಸನಿದ್ದನು. ಅವನಿಗೆ ಯಹೂದಿ ಸುಂದರಿಯೊಬ್ಬಳು ಬಹಳ ಅಚ್ಚು ಮೆಚ್ಚಿನವಳಾಗಿದ್ದಳು. ಅವಳ ಮೋಹ ಪಾಶಕ್ಕೆ ಬಲಿಯಾಗಿ ರಾಜನು ಎಲ್ಲವನ್ನೂ ಕಳೆಕೊಂಡನು. ಮತ್ತೆ ತನ್ನ ಪ್ರಾಣಗಳನ್ನೂ ಕೊಡಬೇಕಾಗಿ ಬಂದಿತು' ಎಂದು ಹಳೆಯ ಕತೆಯೊಂದಿದೆ

ಆ ಯೆಹೂದಿ ಸುಂದರಿಯು ತನ್ನ ರೂಪ ಲಾವಣ್ಯ ಒನಪು ಒಯ್ಯಾರಗಳಿಂದ ಆ ರಾಜನನ್ನು ಹುಚ್ಚನಾಗಿ ಮಾಡಿದ್ದಳು. ಅರಮನೆಯಲ್ಲಿ ಅಲ್ಲಿ, ಇಲ್ಲಿ, ಎಲ್ಲ ಕಡೆಗಳಲ್ಲಿ ಅವಳದೇ ಕಾರುಭಾರು ನಡೆಯುತಿತ್ತು ರಾಜ್ಯದಲ್ಲಿ ರಾಜನ ಪ್ರಜೆಗಳನ್ನು ಕೇಳುವವರೇ ಇಲ್ಲವಾದರು ಎಲ್ಲಿ ಕಂಡರೂ ಯಹೂದಿಯರದೇ ಪ್ರತಾಪವು ತೋರಿ ಬರುತಿತ್ತು ರಾಜ್ಯದ ನೌಕರಿ ಚಾಕರಿ, ಉದ್ಯೋಗ ಧಂಧೆಗಳೆಲ್ಲ ಒಂದೊಂದಾಗಿ ಯಹೂದಿಯರ ಪಾಲಾಗುತ್ತ ಬಂದುವು ಅವರೇ ಆಳುವವರಾದರು

ರಾಜನ ಕೊಲೆಯಾಯಿತು

ಮತ್ತೆ ಆ ಕಾರಣದಿಂದ ಆ ರಾಜ್ಯದಲ್ಲಿ ಒಂದು ದೊಡ್ಡ ಬಂಡಾಯವೆದ್ದಿತು. ರಾಜ್ಯದ ಪ್ರಜೆಗಳಿಗೂ ಅಧಿಕಾರದಲ್ಲಿದ್ದ ಯಹೂದಿಯರಿಗೂ ದೊಡ್ಡ ಕಲಹವೆದ್ದಿತು. ಕೊನೆಗೆ ರಾಜನು ಅವನ ಅಂಗರಕ್ಷಕನಿಂದಲೇ ಕೊಲೆಮಾಡಲ್ಪಟ್ಟನು

ಈ ಕತೆಗೆ ಈಗ ಪುನ ಯುರೋಪಿನ ರಾಜಕಾರಣದಲ್ಲಿ ಬಹಳ ಪ್ರಾಮುಖ್ಯತೆ ಬಂದು ಬಿಟ್ಟಿದೆ ಎಂಗ್ರಿಫ್ ಎಂಬ ಒಂದು ನಾಜೀ ಪತ್ರಿಕೆಯು ಈ ಕತೆಯನ್ನು ಪ್ರಕಟಿಸಿ ಯುರೋಪಿನಲ್ಲಿ ದೊಡ್ಡ ಗೊಂದಲವನ್ನೇ ಉಂಟುಮಾಡಿರುವದು!

ಯಾರ ಮೇಲೆ ಕಟಾಕ್ಷ

ಜೆಕೊಸ್ಲೊವೇಕಿಯಕ್ಕೆ ಸಂಬಂಧದಲ್ಲಿ ತಲೆದೋರಿಯ ಬಿಕ್ಕಟ್ಟಿನಂದಿನಿಂದ ಹಿಡಿದು ರುಮೇನಿಯದ ರಾಜ ಕೆರೋಲ್ ದೊರೆಯು ರಾಜನಾಗಿದ್ದಾನೆ ಲುಪೆಸ್ಕು ಎಂಬ ಯಹೂದಿ ಸುಂದರಿಯು ಅವನ ಅಚ್ಚು ಮೆಚ್ಚಿನ ಗೆಳತಿಯಾಗಿರುವಳು. ಹೀಗಿರುವದರಿಂದ ಸಹಜವಾಗಿ ಕೆರೋಲನ ಸಾಹಸಾನುಭೂತಿಯು ಯಹೂದಿಯರ ಮೇಲೆ ಧಾರಾಳವಾಗಿರುವದು.

ಆದರೆ ಹಿಟ್ಲರನ ನಾಜಿಗಳಿಗೆ ಯಹೂದ್ಯರೆಂದರೆ ಕಿಡಿಮಾಂಚನವಾಗಿದೆ ಅವರನ್ನು ಕಂಡೊಡನೆ ನಾಜಿಗಳು ಹುಬ್ಬುಗಂಟು ಹಾಕಿ ಕತ್ತಿ ಹಿಡಿದು ನಿಲ್ಲುತ್ತಾರೆ ತಮಗೆ ಬೇಡವಾದ ಯಹೂದಿಯರನ್ನು ನೆರೆಯವನಾದ ರುಮೇನಿಯದರಸು ಪ್ರೋತ್ಸಾಹಿಸ ಪದೆಂದರೆ ಅದು ಹೇಗಾಗ ಬೇಕು? ಅದ್ದರಿಂದ ನಾಜಿಗಳ ವಕ್ರದೃಷ್ಟಿ ಈಗ್ಗೆ ಕೆಲವು ಸಮಯದಿಂದ ಕೆರೋಲನ ಮೇಲೆ ಇದ್ದೇ ಇರುವುದು. ಶರಣು ಬಂದ ಯೆಹೂದಿಯರಿಗೆ ಶರಣು ಕೊಟ್ಟರೆ ಪ್ರಾಣಕ್ಕೆ ಸಂಚಕಾರವಾದೀತೆಂದು ಅವರು ಹೇಳಲಾರಂಭಿಸಿದ್ದಾರೆ

ಕೆರೋಲನಿಗೆ ತಿಳಿದಿದೆ

ಈ ಸಂಗತಿ ಕೆರೋಲನಿಗೂ ತಿಳಿದಿರುವುದು. ಆದಕಾರಣವೇ ಅವನು ಇಂಗ್ಲಂಡಿನ ತನ್ನ ಪ್ರಯಾಣವೆಳಸಿ ಅಲ್ಲಿಯ ಮಂತ್ರಿ ಮಂಡಲದೊಡನೆಯೂ, ಸಮ್ರಾಟರೊಡನೆಯೂ ಅವನು ಏನೋ ರಹಸ್ಯದ ಮಾತುಗಳನ್ನು ಆಡಿ ಬಂದಿದ್ದಾನೆ. ಅವರಿಂದ ಸಹಾಯ ಸಹಕಾರಗಳ ಭರವಸೆಯನ್ನು ತೆಗೆದುಕೊಂಡಿರಲೂ ಬಹುದು

ಕೆರೋಲನು ಲುಪೆಸ್ಕೊಳನ್ನು ಗೆಳತಿಯಾಗಿಟ್ಟುಕೊಂಡಿದ್ದಾನೆಂಬುದನ್ನು ನೆವನವಾಡಿಕೊಂಡು ಎಂಗ್ರಿಫ್ ಪತ್ರಿಕೆಯು ಕೆರೋಲನಿಗೆ ಒಂದು ಎಚ್ಚರಿಕೆಯನ್ನು ಕೊಟ್ಟಿರುವದೆಂಬುದರಲ್ಲಿ ಸಂದೇಹವಿಲ್ಲ. ಇತಿಹಾಸದ ಪುನರಾವರ್ತನೆಯಾಗುತ್ತಿರುವದೆಂದೂ ಹಳೆ ಕತೆಯ ಆ ರಾಜನಂಥ ರಾಜರು ಈಗಲೂ ಯುರೋಪದಲ್ಲಿದ್ದಾರೆಂದೂ, ಅವರು ಈಗಲೇ ಜಾಗ್ರತೆ ತೆಗೆದು ಕೊಳ್ಳದಿದ್ದರೆ, ರಾಜ್ಯದಲ್ಲಿ ಅಂತ ಕಲಹವಾಗಿ ಅಂಥ ರಾಜರು ತಮ್ಮ ಅಂಗರಕ್ಷಕರಿಂದಲೇ ಕೊಲ್ಲಲ್ಪಡುವರೆಂದೂ ಆ ಪತ್ರಿಕೆ ಬರೆದಿದೆ

ಮಾತಿನ ಸ್ಪಷ್ಟೀಕರಣ

ಪತ್ರಿಕೆಯು ತನ್ನ ಮಾತಿನ ಸ್ಪಷ್ಟೀಕರಣವನ್ನು ಹೀಗೂ ಮಾಡಿದೆ ಹಳೆಯ ಕತೆಯನ್ನು ಆರಂಭಿಸುವ ಮೊದಲು ಅದು ಲುಪೆಸ್ಕು ಮತ್ತು ಅವಳ ತಂದೆಯ ಭಾವಚಿತ್ರಗಳನ್ನು ಕೊಟ್ಟು ಅವುಗಳ ಕೆಳಗೆ 'ಹೀಗೆ ಯಹೂದಿಯರು' ಎಂದು ಬರೆದಿದೆ ಅದ್ದರಿಂದ ಹಳೆಯ ಕತೆಯು ಲುಪೆಸ್ಕೊ ಮತ್ತು ಕೆರೋಲನನ್ನು ಉದ್ದೇಶವಾಗಿಯೇ ಅದು ಪ್ರಕಟಿಸಿದೆ ಎಂಬುದು ಸ್ಪಷ್ಟವಾಗುತ್ತದೆ.

ಎಂಗ್ರಿಫ್ ಪತ್ರಿಕೆಯು ಈ ಕತೆಯಿಂದಾಗಿ ಸ್ಪೈನಿನಂತೆ ರುಮೇನಿಯದಲ್ಲಿಯೂ ಅಂತಕಲಹದ ಕಿಚ್ಚು ಎದ್ದು ಪ್ರಜ್ವಲಿಸಬಹುದೋ, ಕೆರೋಲನ ಕೊಲೆಯಾಗಬಹುದೋ, ಈ ಘಟನೆಗಳಿಂದಾಗಿ ಮೊದಲೇ ಪ್ರಕ್ಷುಬ್ಧವಾಗಿರುವ ಯುರೋಪಿನ ವಾತಾವರಣವು ಮತ್ತೆಷ್ಟು ಪ್ರಕ್ಷುಬ್ಧವಾಗಬಹುದೋ ಎಂದು ಜನರು ಬಹಳ ಅಂಜಿದರು.

ನಿನ್ನೆ ಬೀದಿಯ ಭಿಕಾರಿಯಾಗಿದ್ದವ ಇವತ್ತು ಲಕ್ಷದ ಅಧಿಕಾರಿ

ತಳ್ಳಣವಗೊಳ್ಳದಿರು ಎಲೆ ಮಾನವಾ!
ಕೊಳ್ಳಕಾಂತಿಯ ದೇವ ರಕ್ಷಿಸುವನಿನ್ನಾ!!

ಎಂದು ಹಾಡುತ್ತ ಬೀದಿ ಬೀದಿ ಅಲೆಯುತ್ತಿದ್ದ—ಹೊಟ್ಟೆಗಿದ್ದರೆ ಬಟ್ಟೆಗಿಲ್ಲ, ಬಟ್ಟೆಗಿದ್ದರೆ ಹೊಟ್ಟೆಗಿಲ್ಲ ಎಂಬಂತಿದ್ದ—ಒಬ್ಬ ಭಿಕ್ಷುಕನು ಮಾತು ಮುಗಿಯುವದರೊಳಗೆ ಎರಡುಮೂರು ಸಾವಿರ ರೂಪಾಯಿಗಳ ಭಾಗ್ಯವಂತನಾದ ನಿತ್ಯ ಜೀವನದ ಸತ್ಯಕತೆ ಇದು!

ಫ್ರೆಂಕಪೋರ್ಟ ಒನ್ ಮೈನ ನಗರದಲ್ಲಿ ಭಿಕ್ಷುಕನೊಬ್ಬನು ಸೇದಲು ಕಾಲಾಣೆಕೊಟ್ಟು ಒಂದು ಸಿಗರೇಟು ಕೊಂಡುಕೊಳ್ಳಲಿಕ್ಕೂ ಗತಿ ಇಲ್ಲದವನಾಗಿ, ಇತರರು ಸೇದಿ ಬಿಸಾಡಿದ ಸಿಗರೇಟು ತುಂಡುಗಳನ್ನು ದುಸ್ತುಬಿನ್ನುಗಳಲ್ಲಿ ಹುಡುಕುತ್ತ ಇದ್ದ ಅಲ್ಲಿಯ ಜನರು ಸೇದಿದ ಸಿಗರೇಟು ತುಂಡು, ಕಸಕಡ್ಡಿ ಮೊದಲಾದವನ್ನು ಸಿಕ್ಕಿದಲ್ಲಿ ಚೆಲ್ಲುವದಿಲ್ಲ ಅದನ್ನು ಅವುಗಳಿಗಾಗಿ ರಸ್ತೆಬದಿಗಳಲ್ಲಿ ಇಡುವ ಡಬ್ಬಿಗಳಲ್ಲಿ ಒಗೆಯುತ್ತಾರೆ ಈ ಡಬ್ಬಿಗಳಿಗೆ ದುಸ್ತುಬಿನ್ನುಗಳೆಂದು ಹೆಸರು.

ದುಸ್ತುಬಿನ್ನಿನಲ್ಲಿ ಭಾಗ್ಯನಿಧಿ

ಭಿಕ್ಷುಕನು ಒಂದಾದ ಮೇಲೆ ಒಂದರಂತೆ ಹಲವು ದುಸ್ತುಬಿನ್ನುಗಳನ್ನು ಹುಡುಕಿದನು. ಹೀಗೆ ಹುಡುಕುತ್ತ ಇರುವಾಗ ಒಂದರಲ್ಲಿ ಅವನಿಗೆ ಸಿಗರೇಟು ತುಂಡು ಬದಲು ಕೆಲವು ಕಾಗದದ ಚೂರುಗಳು ದೊರಕಿದವು ಅವು ಬಣ್ಣಬಣ್ಣದ, ಚಿತ್ರಾಕ್ಷರಗಳಿಂದ ಅಚ್ಚಾಗಿದ್ದುವು ಅವುಗಳ ನಿಜವೇನೆಂದು ಭಿಕ್ಷುಕನು ಆ ಚೂರುಗಳನ್ನು ತೆಗೆದುಕೊಂಡು ಸಮೀಪದಲ್ಲಿ ನಿಂತಿದ್ದ ಪೋಲೀಸನಿಗೆ ಕೊಟ್ಟನು

ಪೋಲೀಸನಿಗೆ ಆಶ್ಚರ್ಯವಾಯಿತು ಅವನು ಆ ಚೂರುಗಳನ್ನು ಪುನ ಜೋಡಿಸಿ ಅಂಟಿಸಿದನು. ಅವು ೧೧೦೦ ಅಮೇರಿಕನ ಡಾಲರುಗಳಷ್ಟು ಬೆಲೆ ಬಾಳುವ ಕರೆನ್ಸಿನೋಟುಗಳಾಗಿದ್ದವು! ೧೧೦೦ ಅಮೇರಿಕನ ಡಾಲರುಗಳೆಂದರೆ ಎರಡು ಮೂರು ಸಾವಿರ ರೂಪಾಯಿ ಅಷ್ಟು ಹಣವು ಭಿಕ್ಷುಕನಿಗೆ ಅಯಾಚಿತವಾಗಿ ಪ್ರಾಪ್ತವಾಯಿತು

ಅಲ್ಲಿ ಹೇಗೆ ಬಂತು?

ಜರ್ಮನಿಯಲ್ಲಿ ವಿದೇಶೀಯ ನೋಟು-ನಾಣ್ಯಗಳನ್ನು ಇಟ್ಟುಕೊಂಡಿರಬಾರದೆಂಬ ಕಾಯಿದೆ ಇದೆ ಯಾವನೋ ಒಬ್ಬ ಯಹೂದಿಯು ಈ ಕಾಯದೆಗೆ ಹೆದರಿ ಈ ನೋಟುಗಳನ್ನು ಹರಿದು ದುಸ್ತುಬಿನ್ನನಲ್ಲಿ ಬಿಸಾಡಿರಬೇಕೆಂದು ನಂಬಲಾಗಿದೆ, ಹೇಗೂ ಇರಲಿ, ಬಡಭಿಕ್ಷುಕನೊಬ್ಬನ ಭಾಗ್ಯೋದಯವಾಯಿತಲ್ಲ! ಇದೇ ಒಂದು ಆಲೋಚನೀಯ ವಿಷಯವಾಗಿದೆ

ಭಾಗ್ಯ ಅದೃಷ್ಟ ಎಂಬುದಿಲ್ಲ, ಪುರುಷಾರ್ಥವಿದ್ದರೆ ಎಲ್ಲವೂ ಆಗುತ್ತದೆಂದು ಕೆಲವರೆನ್ನುತ್ತಾರೆ ಆ ಭಿಕ್ಷುಕನ ನೋಟುಗಳಿಗಾಗಿ ದುಸ್ತುಬಿನ್ನುಗಳನ್ನು ಹುಡುಕಿಕೊಂಡಿರಲಿಲ್ಲ ಅಷ್ಟು ಹಣವು ಅವನು ಅಪೇಕ್ಷಿಸದೆ ಅವನಿಗೆ ಪ್ರಾಪ್ತವಾಯಿತ ಇಂಥ ಘಟನೆಗಳಿಗೆ ಪುರುಷಾರ್ಥವಾದಿಗಳ ಏನೆಂದು ಸಮಾಧಾನ ಹೇಳುವರು

THE
Bank of Mangalore Ltd.,
MANGALORE
ESTD 193
Branch
Panemangalore Mudabidri & Padubidri

Fixed Deposits will be received at the following rate of Interest

For	3 month	3½%
"		4%
12		[illegible]
24	& upwards	5½%

Interest Payable Quarterly

Saving Bank deposit 3½ on daily balances.

All kinds of banking business transacted

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ. ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ,
ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ

ನೋಟಿಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ
ಕ್ರಮ ಸಂಖ್ಯ 54 1938
R. F. R. 86 /1938

[illegible] } ವಾದಿಳು ಅರ್ಜಿದಾರಳು
[illegible] ಕೂಡಾ ಇನ್ನರೊಳಗೆ } ಪ್ರತಿವಾದಿರು ಎದ್ರಿರು

2ನೇ ಎದ್ರಿ ಳು—

ಪಾತಿಮಾಬೀ ... ಎಸ್ಸಾರಿಗಳ ವಿಧವೆ, [illegible] ಕಾರ್ಕಳ ತಾಲೂಕು [illegible] ... ವಾಸ— } [illegible]

ಸದ್ರಿ [illegible] ಮೃತ [illegible] ಯ್ಯಾರಿಗಳ ಪಾಲು ನೀವು ಕೂಡಾ ಎದ್ರಿರ ಸ್ವಾಧೀನ ಇದ್ದ ... ಅಪೇಕ್ಷಿಸುವ ಆಸ್ತಿಗಳ ಕುರಿತು ... ಮತ್ತು ... ಅರ್ಜಿದಾರಳಿಗೆ ಬಿಡ್ ಮಾಡುವರೆ ಪರ್ಮಿಶನ್ ನ ಬಿಡ್‌ಮಾಡಿದ ಐವಜು ... ವಜಾಮಾಡಬೇಕಾಗಿ ಕೇಳಿ, ಅರ್ಜಿ ಸಹಾ ದಾಖಲುಪಡಿಸಿರುವುದರಿಂದ ಸದ್ರಿ ... ಶರ್ತಗಳ ಮತ್ತು ಬಿಡ್ ಪರ್ಮಿಶನ್ ನ ಸೆಟ್‌ಆಫ್ ಕೇಳಿ ಬರಕೊಂಡ ಅರ್ಜಿಯ ಕುರಿತು ನಿಮಗೇನಾದರೂ ಆಕ್ಷೇಪ ಇದ್ದಲ್ಲಿ ನೀವು ಸದ್ರಿ ಕೋರ್ಟಿನ ಮುಂದೆ ಬರುವ ತಾರೀಕು 2–3–1939ನೆ ದಿನ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗಿ ಖುದಹಾಜರು ತಕ್ಕದ್ದು ತಪ್ಪಿದ್ದಲ್ಲಿ ನಿಮ್ಮನ್ನು ಶಿವಾಯಿ ಮಾಡಿ ಸದ್ರಿ ಸಂಗತಿಗಳು ಏಕಪಕ್ಷವಾಗಿ ತೀರ್ಮಾನಿಸಲ್ಪಡುವವು ಎಂದು ಸದ್ರಿ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಲಾಗಿಯದೆ

ಕಾರ್ಕಳ **P. Ramachandra Rao**
ತಾ 9-1-1939 } ಅರ್ಜಿದಾರಳ ವಕೀಲ.

ನಿಮ್ಮ ಜಾಹೀರಾತುಗಳನ್ನು
ಸ್ವದೇಶಾಭಿಮಾನಿಗೆ ಕೊಡಿರಿ

ಆರ್ಯ ಸಮಾಜದ ಖಂಡನಾತ್ಮಕ ಧರ್ಮ ಪ್ರಚಾರದಿಂದ ಇತರ ಧರ್ಮಾನುಯಾಯಿಗಳಿಗೆ ದುಃಖವಾಗುತ್ತಿರುವುದೆಂದೂ, ಸಾಂಪ್ರದಾಯಿಕ ವಿದ್ವೇಷವು ಪ್ರಬಲವಾಗಿ ರಾಜ್ಯದಲ್ಲಿ ಅಶಾಂತಿಯು ಹಬ್ಬುತ್ತಿದೆಯೆಂದೂ ನಿಜಾಮ ಸರಕಾರದ ಕರ್ಮಚಾರಿಗಳು ಹೊರಗಿನವರಿಗೆ ಹೇಳುವ ಪ್ರಯತ್ನವನ್ನು ಮಾಡಿದ್ದಾರೆ. ಆದರೆ ನಿಜಾಮ ರಾಜ್ಯದ ರಾಜನೀತಿ ಮತ್ತು ನೌಕರ ಚಾಕರರ ಕುಟಿಲತೆಯ ಪರಿಚಯವಿದ್ದವರಿಗೆ, ಇದೆಲ್ಲ ಆ ಕರ್ಮಚಾರಿಗಳು ಹರಡಿರುವ ಒಂದು ಮಾಯಾಜಾಲವೆಂಬುದು ತಿಳಿಯದೆ ಇಲ್ಲ. ಆರ್ಯ ಸಮಾಜದ ಧಾರ್ಮಿಕ ಕೃತ್ಯಗಳು ಮತ್ತು ಪ್ರಚಾರದಿಂದ, ಮುಸ್ಲಿಮ್ ಲೀಗಿನ ಪ್ರಭಾವದಿಂದ ಪ್ರಭಾವಿತರಾದ ಮುಸಲ್ಮಾನ ಕರ್ಮಚಾರಿಗಳ ಸ್ವಾರ್ಥಪೂರ್ಣ ರಾಜನೈತಿಕ ಕಾರ್ಯಗಳಿಗೆ ಭಂಗ ಬರುತ್ತದೆಂಬುದರಿಂದಲೇ ಅವರು ಆರ್ಯ ಸಮಾಜಗಳ ಕಾರ್ಯಕಲಾಪಗಳಿಗೆ ಸಾಂಪ್ರದಾಯಿಕ ರೂಪವನ್ನು ಕೊಟ್ಟು ಅವರನ್ನು ರಾಜ್ಯದಿಂದ ಹೊರಗೆ ಓಡಿಸುವ ಮಹಾಸಾಹಸ ಕಾರ್ಯವನ್ನು ಕೈಕೊಂಡಿದ್ದಾರೆ ಎಂದು ಸ್ವಾಮಿ ಸದಾನಂದ ಪರಿವ್ರಾಜಕರು 'ವಿಶ್ವಮಿತ್ರ'ದಲ್ಲಿ ಒಂದು ಲೇಖನವನ್ನು ಬರೆದಿರುವರು.

ಈಗ ರಾಜ ಕರ್ಮಚಾರಿಗಳ ನೀತಿಯ ವಿರುದ್ಧವಾಗಿ ಹೈದರಾಬಾದದಲ್ಲಿ ಆರ್ಯ ರಕ್ಷಾ ಸಮಿತಿಯು ಸ್ಥಾಪನೆಯಾಗಿದೆ. ಅದರ ಮೂಲಕ ಆರ್ಯ ಸಮಾಜವು ಒಂದು ಪ್ರಚಂಡ ಆಂದೋಲನವನ್ನು ಹೂಡಿದೆ. ಅಷ್ಟೇ ಅಲ್ಲದೆ ಹೊರಗಿನ ಯಾರೂ ಈ ವರೆಗೆ ಈ ಆಂದೋಲನದಲ್ಲಿ ಭಾಗವಹಿಸಿದ ಕೊಂಡಿರುವುದಿಲ್ಲ. ರಾಜ ಕರ್ಮಚಾರಿಗಳು ಅಲ್ಲಿ ಆರ್ಯ ಸಮಾಜಗಳ ಮನಸ್ವೀ ಅತ್ಯಾಚಾರಗಳನ್ನು ನಡೆಸುತ್ತಿದ್ದಾರೆ. ಅವರ ದಮನಮಾಡಲಿಕ್ಕೆ ಸಾಧ್ಯಾಸಾಧ್ಯ ಪ್ರಯತ್ನಗಳನ್ನು ಮಾಡಿದ್ದಾರೆ. ಅದರ ಫಲಸ್ವರೂಪ ೪೦೦-೫೦೦ ಮಂದಿ ರಾಜ್ಯದೊಳಗಿನ ಆರ್ಯ ಸಮಾಜಿಗಳು ಈಗ್ಗೆ ಜೈಲುಗಳಲ್ಲಿ ಕೊಳೆಯುತಿದ್ದಾರೆ. ಪಶುಬಲದ ಮೂಲಕ ಆರ್ಯ ಸಮಾಜಿಗಳ ಎಲ್ಲ ಕೆಲಸ ಕಾರ್ಯಗಳನ್ನು ಕಟ್ಟಿದ್ದಾರೆ. ಆದರೂ ಆರ್ಯ ಸಮಾಜಿಗಳು ಅಹಿಂಸೆಯ ಮೂಲಕವೇ ಶಾಂತಿಪೂರ್ಣ ಆಂದೋಲನವನ್ನು ನಡೆಸುತ್ತಿದ್ದಾರೆ. ಹೊರಗಿನವರು ಈ ವಿಷಯದಲ್ಲಿ ಏನು ಮಾಡಬೇಕೆಂಬ ವಿಚಾರದಲ್ಲಿಯೇ ಇದ್ದಾರೆ.

ಯಾಕೆ ಈ ಅತ್ಯಾಚಾರ?

ನಿಜಾಮ ಸರಕಾರದ ಮೂಲಕ ಆರ್ಯಸಮಾಜಗಳ ಮೇಲೆ ಈ ಬಗೆಯ ಅತ್ಯಾಚಾರಗಳಾಗಲಿಕ್ಕೆ ಒಂದು ವಿಶೇಷ ಕಾರಣವಿದೆ. ನಿಜಾಮ ರಾಜ್ಯದಲ್ಲಿ ಸೇಕಡ ೮೯ರಷ್ಟು ಹಿಂದೂಗಳೇ ಇರುವರು. ಮುಸಲ್ಮಾನರ ಸಂಖ್ಯೆ ಕೇವಲ ಸೇಕಡ ೧೦ರಷ್ಟು ಇದೆ. ಹಿಂದೂ ಹೃದಯದಲ್ಲಿ ದೇಶಭಕ್ತಿಯ ಭಾವವು ಶೀಘ್ರದಲ್ಲಿ ಮತ್ತು ಬಹು ಚುರುಕಾಗಿ ಉದಯವಾಗುತ್ತದೆ. ಅವರ ಮಸ್ತಿಷ್ಕದಲ್ಲಿ ರಾಷ್ಟ್ರಪ್ರೇಮವು ಈಶ್ವರಪ್ರೇಮಕ್ಕಿಂತ ಕಡಿಮೆ ಪ್ರಭಾವೋತ್ಪಾದಕವಾಗಿರುವುದಿಲ್ಲ. ಆದರೆ ಮುಸಲ್ಮಾನರ ಮನೋಸ್ಥಿತಿಯು ಇದಕ್ಕೆ ತೀರ ವಿಪರೀತವಾಗಿರುವುದು. ಧರ್ಮಾಂಧತೆಯ ಮೇಲೆ ಅವರ ದೇಶಪ್ರೇಮವೆಂಬುದು, ಕಾದ ಕಬ್ಬಿಣದ ಕಾವಲಿಯ ಮೇಲೆ ಬಿದ್ದ ಎರಡು ಹನಿ ನೀರಿನಂತೆ ಇದೆ! ದೇಶದ ಬೇರೆ ಬೇರೆ ಸಂಸ್ಥಾನಗಳಲ್ಲಿ ಪ್ರಬಲ ಪ್ರಜಾಕೀಯ ಆಂದೋಲನವು ಹುಟ್ಟಿರುವುದನ್ನು ಕಂಡೂ ಹೈದರಾಬಾದಿನ ಕರ್ಮಚಾರಿಗಳು ಬಹಳ ದಿಗಿಲುಗೊಂಡಿದ್ದಾರೆ. ಅಲ್ಲಿಯೂ ಕೂಡ ಅಂಥಹದೊಂದು ಆಂದೋಲನವು ಶೀಘ್ರದಲ್ಲಿ ಪ್ರಾರಂಭವಾಗಲಿದೆ ಎಂಬುದನ್ನು ಅವರಿಗೆ ಮನವರಿಕೆಯಾಗಿದೆ.

ಬಹು ಸಂಖ್ಯಾಕರಾಗಿರುವ ಹಿಂದೂಗಳ ಮಸ್ತಿಷ್ಕದ ಮೇಲೆ ದೇಶದ ರಾಜನೈತಿಕ ಜಾಗೃತಿಯ ಪ್ರಭಾವವು ಬೀಳದೆ ಇರಲಾರದು. ಪರಂತು ಮುಸಲ್ಮಾನ ಜನತೆಯು ಮಾತ್ರ ತಾನು ಹಸಿವು ಬಾಯಾರಿಕೆಗಳಿಂದ ಮರಣೋನ್ಮುಖವಾಗಿದ್ದರೂ, ಶಿಕ್ಷಣವಿಲ್ಲದೆ ದುಃಖದಾಯಿ

ನಿಜಾಮ ಹೈದರಾಬಾದದಲ್ಲಿ ಹಿಂದುಗಳ ಅವನತ ಸ್ಥಿತಿ!

ನಿಜಾಮ ಹೈದರಾಬಾದದಲ್ಲಿ ಹಿಂದುಗಳ ಮೇಲೆ ವಿಶೇಷತ ಆರ್ಯ ಸಮಾಜಿಗಳ ಮೇಲೆ ಸರಕಾರದ ಭಯಂಕರ ಅತ್ಯಾಚಾರವು ನಡೆಯುತ್ತಲಿದೆ. 'ನಿಜಾಮ ಸರಕಾರದ ನೌಕರರ ಚಾಕರರು ಬಹಳವಾಗಿ ಮುಸಲ್ಮಾನರಾಗಿದ್ದಾರೆ; ಅವರು ಆರ್ಯ ಸಮಾಜಗಳ ಖಂಡನಾತ್ಮಕ ಧರ್ಮ ಪ್ರಚಾರದಿಂದ ಅಸಂತುಷ್ಟರಾಗಿ ಆರ್ಯಸಮಾಜಗಳನ್ನು ದಮನಮಾಡುತಿದ್ದಾರೆ. ಅಷ್ಟೇ ಅಲ್ಲ, ರಾಜರ ಹೊರಗಿನ ಜನರು ಕೂಡ ಹೋಗಿ ಅಲ್ಲಿ ತಂಟೆ ತಕರಾರು ಮಾಡುತ್ತಿರಬಹುದು, ಆದ್ದರಿಂದ ಅಲ್ಲಿ ಹಿಂದೂ ಮುಸಲ್ಮಾನ ವೈಮನಸ್ಸು ಉಂಟಾಗುತ್ತಿರಬಹುದು. ಮುಸಲ್ಮಾನ ಅರಸರಿದ್ದು ಮುಸಲ್ಮಾನ ನೌಕರರ ಚಾಕರರಿರುವವರಿಂದ ಅವರು ಮುಸಲ್ಮಾನರ ಪಕ್ಷ ತೆಗೆದುಕೊಂಡು ಆರ್ಯ ಸಮಾಜಗಳ ಮೇಲೆ ಬಿದ್ದಿರಬಹುದು' ಎಂದು ಸಾಮಾನ್ಯ ಜನರು ಊಹಿಸಲವಕಾಶವಿದೆ.

ದಿನಗಳನ್ನು ಕಳೆಯುತ್ತಿದ್ದರೂ ಕೇವಲ ಧರ್ಮದ ಅಂಧಾನುಕರಣ ಮಾಡುವುದರಲ್ಲಿಯೇ ತೃಪ್ತಿಹೊಂದಿದೆ! ಆದ್ದರಿಂದ ರಾಜ್ಯದ ಮುಸಲ್ಮಾನ ಕರ್ಮಚಾರಿಗಳು ರಾಜ್ಯದಲ್ಲಿ ಮುಸಲ್ಮಾನರ ಸಂಖ್ಯೆಯನ್ನು ಬೆಳೆಸುವುದನ್ನು ಅತ್ಯಗತ್ಯವೆಂದು ತಿಳಕೊಂಡಿದ್ದಾರೆ. ಅದಕ್ಕೋಸ್ಕರ ಅವರು ಸಾಧ್ಯವಿದ್ದ ಎಲ್ಲ ಉಪಾಯಗಳನ್ನು ಕೈಕೊಂಡಿದ್ದಾರೆ. ರಾಜ್ಯದಲ್ಲಿ ಜನರು ಅರ್ಧ ಮುಸಲ್ಮಾನ ಅರ್ಧ ಹಿಂದುಗಳಾದಾಗ ಯಾವ ರಾಜನೈತಿಕ ಅಥವಾ ಆರ್ಥಿಕ ಆಂದೋಲನವಾದರೂ ಹಿಂದು ಮುಸಲ್ಮಾನ ಬಣ್ಣವನ್ನು ಕೊಟ್ಟು ಅದನ್ನು ಸುಲಭದಲ್ಲಿ ನಿಂತಿಸಲಿಕ್ಕೆ ಬರುತ್ತದೆ. ಆದ್ದರಿಂದ ಕರ್ಮಚಾರಿಗಳೆಲ್ಲ ಈಗ ಹೈದರಾಬಾದದಲ್ಲಿ ಮುಸಲ್ಮಾನ ಜನಸಂಖ್ಯೆಯನ್ನು ಬೆಳೆಸುವ ಉದ್ಯೋಗವನ್ನು ಕೈಕೊಂಡಿದ್ದಾರೆ.

ಅಲ್ಲಿ ಏನು ಮಾಡುತಿದ್ದಾರೆ?

ಉಡುಪಿ ಶ್ರೀ ಕೃಷ್ಣ ಸನ್ನಿಧಿ ಒಂದಿಷ್ಟು [illegible] ಮೃದಂಗ ಮತ್ತು ಪಿಟೀಲು ವೀಣೆವಾದಕ ಪಿ ಎ. ರಾಜಕೇಶರ [illegible] ಇವರ ವಾದ್ಯಗಳಾದಿ ಮೈಸೂರು ಟಿ ಎನ್ ಕಾಳ್ಳೆಯನವರ ಮೃದಂಗ, [illegible] ನಾರಾಯಣ ಸ್ವಾಮಿಯವರ ಪಿಟೀಲು [illegible] ಕೂಡಿದ ಸಂಗೀತ ಕಚೇರಿಯು ಉಡುಪಿ [illegible] ದಲ್ಲಿ ತಾ. [illegible] ಆದಿತ್ಯವಾರ ರಾತ್ರಿ [illegible] ನಡೆಯಿತು. ಜನಸಮೂಹವು [illegible]

ತಾ. ೧೯ನೇ ಬುಧವಾರ ಸ್ಥಳೀಯ [illegible] ಬೋರ್ಡಿಂಗ್ [illegible] ಲಿಮಿಟೆಡ್ ನ ಸಿಬ್ಬಂದಿಯವರು [illegible] ಮೆನೆಜಿಂಗ್ ಏಜಂಟರಾಗಿದ್ದ [illegible] ಬಂಧುಗಳನ್ನು ಮಹಾಸಭಾ [illegible] ಪಿಡಾಯಿ ಸತ್ಕಾರವನ್ನೇರ್ಪಡಿಸಿದರು. [illegible] ಸಾರವಾಗಿ [illegible] ಸಿದ್ಧತ್ರ [illegible] ಸಂಸ್ಥೆಯನ್ನು ಸ್ಥಾಪಿಸಿ, ತೀವ್ರ ಅಭಿವೃದ್ಧಿ ಸ್ಥಿತಿಗೆ ತಂದು, ಇದಕ್ಕೆ ಅನುಷಂಗಿಯಾಗಿ ಕೆನರಾ ಲೇಂಡ್ ಇನ್ವೆಸ್ಟ್‌ಮೆಂಟ್ಸ್ ಮತ್ತು ಕೆನರಾ ಮ್ಯೂಚುವಲ್ ಬೆನಿಫಿಟ್ [illegible] ಗಳನ್ನು ಸ್ಥಾಪಿಸುವದರಲ್ಲಿ ಮೇಲಾಗಿ ಇವಿ ಕರ್ನಾಟಕದಲ್ಲೇ ವ್ಯಾಪಾರ ಉದ್ಯಮ ವಿಷಯಗಳಲ್ಲಿ ಆದರ್ಶಪ್ರಾಯರಾಗಿರುವ [illegible] ಬಂಧುಗಳನ್ನು ಅಭಿನಂದಿಸಿ, ಭಾಷಣಗಳೂ ಆದವು. ಊರ ಅನೇಕ ಪ್ರಮುಖರಿಗೂ ಆಮಂತ್ರಣವಿದ್ದು ಭೋಜನ ಸತ್ಕಾರ ಕೂಟವೂ ಏರ್ಪಡಿಸಲಾಗಿತ್ತು ಸ್ಥಳೀಯ ಪಿ ಮುನ್ಸೀಫರಾದ ಶ್ರೀ ಆರ್. ಎಂ ಬಿ. ಎನ್. ರಾವ್ [illegible] ಅಧ್ಯಕ್ಷತೆಯ ಸ್ಥಾನವನ್ನು ವಹಿಸಿದ್ದರು. ಸದ್ರಿ ಬೇಂಕಿನ ಶಾಖೆಗಳ ಸುಪರಿಂಟೆಂಡೆಂಟರಾದ ಶ್ರೀ ಎನ್ ಆನಂದರಾಯರು ಇವರ ಮುಂದಾಳುತನ ವೈಶಿಷ್ಟ್ಯ ಬಂಧುಗಳನ್ನು ಸ್ಮರಿಸಿ ಅಭಿವಂದನೆಯನ್ನು ಸಾರ್ವಜನಿಕರ ಪರವಾಗಿ ವ್ಯಕ್ತಗೊಳಿಸಿದರು ಸ್ವತಃ ಈ ಸಂದರ್ಭೋಚಿತವೂ ಆಗಿದೆಯಲ್ಲದೆ, ನಮ್ಮವ ನಿರುದ್ಯೋಗ ಕರ— ಅದರಲ್ಲೂ ಶಿಕ್ಷಿತ ನಿರುದ್ಯೋಗದ ನಮ್ಮ ನಾಡಿನಲ್ಲಿ—ಜಿಲ್ಲೆಯಲ್ಲಾ ಕೂಡ ಇನ್ನೂ ಮುಂದಕ್ಕೂ ಪೈ ಬಂಧುಗಳಲ್ಲಿ ವಿಶೇಷ ರೀತಿಯಿಂದ ನಡಿಸುವ ಮತ್ತು ಅತಿ ಸಮರ್ಥರೂ ವಿಚಕ್ಷಣರೂ ಉದಾತ್ತ ಧ್ಯೇಯ ಮತ್ತು ಅಭಿಮಾನಿಗಳೂ ಆಗಿರುವ ಶ್ರೀ. ಡಾ. ಟಿ. ಮಾಧವ ಪೈ, ಎಮ್ ಬಿ, ಬಿ ಎಸ್ ರವರು ವಿಶೇಷ ರೀತಿಯಿಂದ ಯಶಸ್ವಿಯಾಗಿ ಅಗ್ರಗಾಮಿಯಾಗಿ ದೇಶೋದ್ಧಾರದಯ ಸಾರ್ವಜನಿಕ ಹಿತಕ್ಕೆ ಕಾರಣರಾಗಲೆಂದು ಪರಮಾತ್ಮನಲ್ಲಿ ನಿವೇದನೆಯು ಸಾಗ್ರಹಕರ ಕಡೆಯಿಂದ ಆಶಿಸಲಾಗುತ್ತದೆ

ಶ್ರೀ ಕೃಷ್ಣ ಸನ್ನಿಧಿಯಲ್ಲಿ ವಾಡಿಕೆಯಂತೆ ಮಕರ ಸಂಕ್ರಮಣ ಜಾತ್ರೆಯು ಸಾಂಗವಾಗಿ ನೆರವೇರಿತು. ಸ್ವಲ್ಪ ಮುಂಚಿತವಾಗಿ ಒಂದೆರಡು ದಿವಸದ [illegible] ಗಳು ಸಂಪೂರ್ಣದಿಂದ ಅನುದಾನದಲ್ಲಿ ತೀರದಬಂದೊಡನೆ ಮುನಿಸಿಪಾಲಿಟಿಯವರು ಕೃತ್ತ ನಿವಾರಣೋಪಾಯ ಕೈಕೊಂಡದ್ದರಿಂದ, ಈ ಸೋಂಕು ಹರಡುವ ಸಂಭವ ತಪ್ಪಿರುವುದಿಲ್ಲ, ಈಗ ಸಹ ಈ ಪಟ್ಟಣಕ್ಕೆ ಸುರಕ್ಷಿತವಿದೆ

ಹೊಸಂಗಡಿ: ಗೌಡಸಾರಸ್ವತ ಬ್ರಾಹ್ಮಣ ಸಮಾಜದ ಶ್ರೀ ಸಂಸ್ಥಾನ ಕಾಶೀಮಠ ಸದ್ಗುರುಗಳಾದ ಶ್ರೀಮತ್ಸುಕೃತೀಂದ್ರತೀರ್ಥ ಶ್ರೀಪಾದಂಗಳವರ ಸವಾರಿಯು ನಮ್ಮ ಜಿಲ್ಲೆಗಾಗಿ ಮುಂಬಯಿಯಿಂದ ಹೊರಟು ಹರಿಹರ ಮಾರ್ಗವಾಗಿ ಇದೇ ತಾರೀಕು ೮—೧—೧೯೩೯ನೇ ದಿನ ರಾತ್ರಿ ೭ ಘಂಟೆಗೆ ಸರಿಯಾಗಿ ನಗರಕ್ಕೆ ತಲ್ಪಿ ಅಲ್ಲಿ ಮಹಾಜನರಿಂದ ಪಾದಪೂಜಾದಿ ಸತ್ಕಾರಗಳನ್ನು ಕೈಕೊಂಡು ಮರುದಿವಸ ರಾತ್ರಿ ೧೧ ಘಂಟೆಗೆ ಸರಿಯಾಗಿ ಹೊಸಂಗಡಿಗೆ ಬಂದು ಪೇಟೆ ಮಹಾಜನರ ಬೇಡಿಕೆಯಂತೆ ಶ್ರೀ ನರಸಿಂಹ ಸನ್ನಿಧಿಯಲ್ಲಿ ವಸತಿ ಮಾಡಿದರು. ಮರುದಿನ ಶ್ರೀಪಾದಂಗಳವರಿಗೆ ಭಿಕ್ಷೆ ಸತ್ಕಾರಕ್ಕೆ ಮಹಾಜನರು ಏರ್ಪಡಿಸಿದಲಾಗಿ—ತಿಪ್ಪಸ್ವಾಮಿಗಳು [illegible] ಮಾಡಿ ಶ್ರೀ [illegible] ಸನ್ನಿಧಿಯ ಸಮೀಪ [illegible] ಗಂಟೆಗೆ ಸರಿಯಾಗಿ ಹೊರಟು ಬಸ್ರೂರಿಗೆ ಚಿತ್ತೈಸಿದರು. ಸ್ವಸಮಾಜದ ಮಹಾಜನರು ಅಲ್ಲಲ್ಲಿ ಶ್ರೀಪಾದಂಗಳವರನ್ನು ಯೋಗ್ಯ ವೈಭವ ಮನ್ನಣೆಗಳಿಂದ ಸ್ವಾಗತೀಕರಿಸಿಕೊಂಡು ಸತ್ಕರಿಸಿರುವರು.

ಬಂಟವಾಳ

ಕಳೆದ ತಾ. ೧೪—೧—೩೯ನೆಯ ಸಂಕ್ರಾಂತಿ ದಿನ, ಪೂರ್ವಾಹ್ನ ೧೦ ಗಂಟೆ ಹತ್ತಕ್ಕೆ ಮುನ್ಸಿಪಾಲ್ ಕೊಂಗ್ರೆಸ್ ಕಮಿಟಿಯ ಧ್ವಜಾರೋಹಣ ಜರಗಿತು

ಪ್ರಾರಂಭದಲ್ಲಿ, ಮದರಾಸು ಸರಕಾರದ ಕೋರ್ಟ ಮತ್ತು ಪೈಲು ಇಲಾಖಾ ಮಂತ್ರಿಗಳಾಗಿದ್ದ ದಿವಂಗತ ಸಾಂಬಮೂರ್ತಿ, ಕೆ ರಾಮನ್ ಮೆನನರ ಅಕಾಲ ಮರಣಕ್ಕಾಗಿ ಸಂತಾಪವನ್ನು ಸೂಚಿಸಲಾಯಿತು. ಎಲ್ಲರೂ ಎದ್ದು ನಿಂತು ಮೌನ ಮಾಡಲಾಯಿತು

ಬಳಿಕ ಕಾರ್ಯದರ್ಶಿಯವರು ಗತವರ್ಷದ ವರದಿಯನ್ನು ಓದಿ ಹೇಳಿದರು. ಮತ್ತು ಗತವರ್ಷದ ವಿಶೇಷ ಘಟನೆಗಳ ಉಲ್ಲೇಖನ ಪತ್ರಗಳನ್ನು ಸಭೆಗೆ ಮುಂದಿರಿಸಿದರು. ಕಮಿಟಿಯವರು ಇದರ ಮೇಲೆ ಸಮಾಲೋಚನೆ ಮಾಡಿದರು. ಕಳೆದವರ್ಷ ಇಲ್ಲಿಯ ಕೊಂಗ್ರೆಸ್ ಕಮಿಟಿಗೆ ರೂ ೭೦—೪—೬ ಜಮೆಯೂ, ಅದರಲ್ಲಿ ರೂ. ೬೪—೧೨—೩ ವೆಚ್ಚವೂ ಆಗಲಾಗಿ ರೂ. ೫—೮—೩, ಶಿಲ್ಲಿಕು ಉಳಿದಿರುವುದು ಮೇಲಾ ತಿಳಿದುಬರುತ್ತದೆ.

A Spacious Storeyed House

with portico bath room, cowshed complete will be vacant from 1—2—1939, near the Rifle Range on the Double Hill.

For particulars please apply to

K S Bhandarkar,
Joint Manager,
Combined Booking Agency,
Mangalore
or
William A. Castillano,
Near Bilai Gate, Bunts

ಪರರಾಷ್ಟ್ರಗಳ ಪತ್ರಿಕೆಗಳಿಂದ

ದಿ ಲಿಸ್ನರ್

ಬ್ರಿಟಿಷರಿಗೆ ಮೆಡಿಟರೇನಿಯನ ಸಮುದ್ರದಲ್ಲಿ ಏನು ಬೇಕಾಗಿದೆ? ಮೊದಲಾಗಿ, ಬ್ರಿಟಿಷರು ಯುದ್ಧಸನ್ನಾಹವನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಅನಂತರ, ಇಟಲಿಯೊಡನೆ ಕರಾರಾಗಬೇಕಾಗಿದೆ. ನಮ್ಮ ಯುದ್ಧನಾವೆಗಳಿಗಾಗಿ ಠಾಣ್ಯಗಳನ್ನು ಕಟ್ಟಿಕೊಂಡು, ಹಡಗು ತಲಾವಣೆಯ ದಾರಿಯನ್ನು ಇಲ್ಲಿ ಸುರಕ್ಷಿತವಾಗಿಸಿಕೊಳ್ಳಬೇಕಾಗಿದೆ. ಈ ಭಾಗದಲ್ಲಿ ನಾವು ಇಟಲಿಗೆ ಬೇಕಾದಷ್ಟು ರಿಯಾಯಿತಿ ಅನುಕೂಲತೆಗಳು ಕೊಡಬಹುದು ಇದಾದ ಬಳಿಕವೇ ಪೆಲೆಸ್ತೀನ ಸಮಸ್ಯೆ ಬಿಡಿಸಬೇಕಾಗಿದೆ. ಎಲ್ಲಕ್ಕೂ ಮೇಲಾಗಿ, ಸ್ಪ್ರಾನ್ಸಿನೊಡನೆ ಮೈತ್ರಿಯನ್ನು ಬೆಳಸಬೇಕು. ನಮ್ಮಷ್ಟೆ ಚೆನ್ನಾಗಿ ಫ್ರೆಂಚರಿಗೂ ಮೆಡಿಟರೇನಿಯನಿನಲ್ಲಿ ಅಗತ್ಯ ವ್ಯವಸ್ಥೆ ಸೌಕರ್ಯಗಳಾಗಬೇಕು ಟರ್ಕಿಯೊಡನೆಯೂ ಇಜಿಪ್ತದೊಡನೆಯೂ ಇರುವ ನಮ್ಮ ಮೈತ್ರಿ ಕೆಡಬಾರದು ಹೀಗೆ ಮಾಡದಿರುವಲ್ಲಿ, ಖಂಡಿತವಾಗಿಯೂ ಬ್ರಿಟನ್ನು ಒಂದು ಪ್ರಮುಖದೇಶವೆನಿಸಲಾರದು

× × ×

ಉಸ್ಸಿ ಸ್ವೊಮಿ, ಹೆಲ್ಸಿಂಕಿ

ಮೊಸ್ಕೋವಿನಿಂದ ಅದ್ಭುತ ವಾರ್ತೆ ತಲಪಿದೆ ಓದುವವರು ಚಕಿತರಾಗಿರುವರು ರಷ್ಯದ ಒಳಪ್ರದೇಶದಲ್ಲಿ ಕಾನೂನು ಕ್ರಮದ ಕಮ್ಮಿಶನರು ಲೋರೆನ್ಸ ಬೆರಿಯಾ ಎಂಬ ಅಧಿಕಾರಿಯು, ರೊಸ್ತೊವಿನಲ್ಲಿರುವ ತನ್ನ ಸೋದರನನ್ನು ಕೈದುಮಾಡಲು ಅಪ್ಪಣೆಕೊಟ್ಟಿರುವನಂತೆ ಈತನು ಕೊಟ್ಟ ಅಪ್ಪಣೆಗಳನ್ನು ಸರಿಯಾಗಿ ಪಾಲಿಸಿಲ್ಲ ಎಂಬುದೇ ಅತನ ಅಪರಾಧವಂತೆ ಹಿಂದೆ ಒಳಪ್ರಾಂತ್ಯದ ಕಮಿಶನರು ಯೆಜೋವನ ಸೆಕ್ರಿಟರಿಯಾಗಿದ್ದ ಈ ಸೋದರನು, ಯೆಜೋವನ ಬಹಳ ಸ್ನೇಹಿತನಾಗಿದ್ದನೆಂದೂ ತಿಳಿದುಬಂದಿದೆ. ಅದೇ ಈ ಕೈದಿಗೆ ಕಾರಣವೋ?

ವ್ಯೆನಿಚೆ, ಒಸಾಕಾ

ರಾಜಭಕ್ತರದೊಂದು ಕೂಟವು ಇಲ್ಲಿದೆ, ಇದರ ಹೆಸರು ಕೊಕೂಶಿ ಟೈಶಿಟೋ ಇವರ ಇಡೀ ಜನಾಂಗದ ಪ್ರತಿನಿಧಿಗಳನ್ನು ಕೂಡಿಸಿ, ನಾನಾ ನಿರ್ಣಯಗಳನ್ನು ಮಾಡಿರುವರು. ಯೆಹೂದ್ಯರನ್ನು ತಡೆಗಟ್ಟಿ ಅವರನ್ನು ಪರದೇಶಗಳಿಗೆ ಕಳುಹುವಂತೆ ಅಗತ್ಯ ತೋರುವ ನಾನಾ ಕಾನೂನುಗಳನ್ನು ಸರಕಾರವು ಮಂಜೂರ್‌ಮಾಡಬೇಕೆಂದೂ, ಅಸಾರ್ಯರಿಗೆ ಜಪಾನಿನೊಳಗೆ ಬಾರದಂತೆ ನಿಷೇಧಿಸಬೇಕೆಂದೂ ಸಹ ಇವರು ಸರಕಾರಕ್ಕೆ ಸೂಚಿಸಿಕೊಂಡಿರುವರು. ವಂಶರಕ್ಷಣೆಯ ಕಾನೂನು ಕೂಡಲೆ ಜಾರಿಗೆ ಬರುವಂತೆ, ಮೂರು ತಿಂಗಳ ವರೆಗೆ ದೇಶದಲ್ಲೆಲ್ಲ ಚಳವಳ ನಡೆಸಬೇಕಾಗಿಯೂ, ಬ್ರಿಟನ್ನು ಫ್ರಾನ್ಸು ಯುನೈಟೆಡ್ ಸ್ಟೇಟ್ಸುಗಳನ್ನು ವಿರೋಧಿಸುವ ರಾಜನೀತಿಗಳನ್ನು ಕೈಕೊಳ್ಳಬೇಕಾಗಿಯೂ ಇವರು ನಿರ್ಧಾರಮಾಡಿರುವರು

× × ×

ಮೆಂಚೆಸ್ಟರ ಗಾರ್ಡಿಯನ್

ಕಲಚೇರಿ ಎಂಬ ಹಿಂದೀ ದೇಶೀಯರಾಜ್ಯದಿಂದ (ಸಣ್ಣದು) ೨೦೦೦೦ ಪ್ರಜೆಗಳು, ಸಮೀಪದ ಒರಿಸ್ಸಾಪ್ರಾಂತ್ಯದ ಅಂಗುಲ ಜಿಲ್ಲೆಗೆ ಪಲಾಯನಮಾಡಿರುವರು ಹೀಗೆ ದೇಶತ್ಯಾಗ ಮಾಡಿದವರಲ್ಲಿ ಶ್ರೀಮಂತರೂ ಬಡವರೂ ಇದ್ದಾರೆಯೆಂದೂ, ಅವರು ದೇಶೀಯಸರಕಾರದ ದಬ್ಬಾಳಿಕೆಯನ್ನು ಸಹಿಸಲಾರದೆ ಹೀಗೆ ಮಾಡಿರುವರೆಂದೂ ತಿಳಿದುಬರುತ್ತದೆ ಈ ದಬ್ಬಾಳಿಕೆ ಮುಗಿವುದಾಗಿ ವಾಗ್ದಾನ ಸಿಗದೆ ತಾವು ಪುನಃ ಸ್ವರಾಜ್ಯಕ್ಕೆ ಮರಳುವುದಿಲ್ಲವಾಗಿ ಇವರ ಹೇಳಿಕೆಯಿದೆ. ಅಂಗುಲ ಜಿಲ್ಲೆಯ ಜನರು ಬಡವರು, ಆದರೂ, ಈ ಅಯಾಚಿತ ಅತಿಥಿಗಳಿಗೆ ಸತ್ಕಾರಮಾಡುತ್ತಿರುವರು. ಒರಿಸ್ಸಾ ಸರಕಾರವು ಅನಾಥರದೆಸೆಯಿಂದ ರೋಗಗಳಾವುವೂ ಹುಟ್ಟಿ ಹರಡದಂತೆ, ಬಹಳ ಜಾಗ್ರತೆ ತೆಗೆದುಕೊಂಡಿದೆ (೨೮-೧೨-೩೯)

× × ×

ನೊಟಿಂಗ್ಹೆಮ ಗಾರ್ಡಿಯನ್

ವರ್ಸೆಲ್ಸ್ ಒಪ್ಪಂದದ ಪ್ರಕಾರ, ಬ್ರಿಟನ್ನು ಸರಕಾರಕ್ಕೆ ಜರ್ಮನ ಸರಕಾರವು ಯುದ್ಧನಷ್ಟ ಪರಿಹಾರ ದ್ರವ್ಯವಾದ ೧೨೦,೦೦೦,೦೦೦ ಪವನನ್ನು, ಹಿಟ್ಲರನು ಈಗ ಮರಳಿಕೊಡಬೇಕಾಗಿ ಕೇಳಬಹುದಾಗಿರುವ ಮುಹೂರ್ತ ಬಂದಿದೆ ಫ್ರಾನ್ಸಿನಿಂದ ಇದೇ ಪ್ರಕಾರ ೫೦೦ ಮಿಲ್ಲಿಯ ಪವನನ್ನೂ ಮರಳಿಕೊಡಬೇಕಾಗಿ ಕೇಳಲಿರುವನು. ಆಗಣ ಇತರ ಮಿತ್ರರಾಜ್ಯಗಳೂ ಹೀಗೆಯೆ ಪಡೆದುದನ್ನು ಕೊಡುವ ಹಾಗೆ ಜರ್ಮನಿ ಒತ್ತಾಯಪಡಿಸದಿರದು. ಆದರೆ, ಈ ಕೇಳಿಕೆಯನ್ನು ಈ ರಾಜ್ಯಗಳು ಕೂಡಲೆ ನಿರಾಕರಿಸುವುವು ಡಾ| ಸ್ಕೆಕ್ಟ್ ಮೊನ್ನೆ ಬ್ರಿಟನ್ನಿನಿಂದ ಸಾಲಕೇಳಬಂದಾಗ, ಗೂಢವಾಗಿ ಈ ವಾರ್ತೆಯನ್ನು ತಿಳಿಸಿರುವನು

× × ×

ನ್ಯೂಯೋರ್ಕ್ ಟೈಮ್ಸ್

11-12-39

ರೋಮ್-ಬರ್ಲಿನ್ ಮೈತ್ರಿಯು ಈಗ ಯುರೋಪಿನಲ್ಲಿ, ಇಡೀ ಪ್ರಪಂಚವನ್ನು ಉರುಳಿಸುವ ಒಂದು ಯಂತ್ರವಾಗಿನಿಂತಿದೆ ಅಲ್ಲೇನಾದರೂ ಅಲ್ಪ ಗಡಿಬಿಡಿ ಎದ್ದುದೇ, ಇಡೀ ಜಗತ್ತು ಎಚ್ಚೆತ್ತು ಅತ್ತ ನೋಡುತ್ತಲಿರಬೇಕಾಗಿದೆ ಫ್ಯಾಸ್ಸಿಸ ರಾಜ್ಯಗಳಲ್ಲಿ ಒಂದೊಂದನ್ನೆ ಕೂಡಿಸಿಕೊಳ್ಳಬೇಕಾಗಿ ಸೂಚಿಸುವ ವಾರ್ತೆ ಕೇಳಿ, ಬರ್ಲಿನು ಏನು ಭಾವಿಸುತ್ತಲಿದೆ ಎಂಬುದನ್ನು ಪರ್ಯಾಲೋಚನೆ ಮಾಡುವುದಷ್ಟೆ ಈಗ ಪ್ರಪಂಚದ ಮುಖ್ಯ ಸರಕಾರಗಳ ಕಾರ್ಯ.

ಮುಸ್ಸೊಲಿನಿಗೆ ಹಿಟ್ಲರನ ಬೆಂಬಲವಿಲ್ಲವೆಂದು ಸೂಚಿಸಲು ಯಾರಿಗೂ ಧೈರ್ಯವಿಲ್ಲ ಆದರೆ, ಹಿಟ್ಲರು ಮಾತ್ರ ಈ ವಿಷಯವಾಗಿ ಮುಸ್ಸೊಲಿನಿಗೆ ಭರವಸೆ ಕೊಟ್ಟಿದ್ದಿಲ್ಲ

ಮುಸ್ಸೊಲಿನಿಗೆ ಈ ಭರವಸೆ ಸಿಗಬೇಕಾಗಿದೆ ಹಿಟ್ಲರ ಸಹಾಯವಿಲ್ಲದೆ, ಇಟಲಿಯು ಫ್ರಾನ್ಸನ್ನು ಎದುರಿಸಲಾರದು ಫ್ರಾನ್ಸಿನ ಆಸಿಯನ್ನು ಇಟಲಿಯು ಹಿಡಿದುಕೊಳ್ಳುವಲ್ಲಿ ಯುದ್ಧವು ಖಂಡಿತ

ಫ್ರೆಂಚಸೊತ್ತಿನ ಮೇಲೆ ಆಸೆಮಾಡಿ ನುಗ್ಗುವ ಇಟಲಿಯನ್ನು ಜರ್ಮನಿಯು ಸಹಾಯಮಾಡದೆಂದು ಹಿಟ್ಲರ ಭರವಸೆಯು ಫ್ರೆಂಚ ಸರಕಾರಕ್ಕೆ ಸಿಕ್ಕಿರುವುದು ನಿಜವಾದಲ್ಲಿ,—ಇಟಲಿಯ ಗರ್ಜನೆಯು ಸದ್ಯಕ್ಕೆ ಅಡಗುವುದೆಂಬುದು ಖಂಡಿತವಾಗಿದೆ ಎನ್ನಬಹುದು

ಆದರೆ, ರೋಮಿನಲ್ಲಿ ಮಾತ್ರ, ಹಿಟ್ಲರ-ಮುಸ್ಸೊಲಿನಿಗೆ ಸಹಾಯಮಾಡುವುದು ಖಂಡಿತವೆಂದು ನಂಬಿಕೆಯಿದೆ ಇದು ಸತ್ಯವಾಗಿ ಪರಿಣಮಿಸಿದರೆ, ವಿದ್ಯಮಾನಗಳ ಚಿತ್ರವೇ ಬದಲಾಗುವುದು.

ಡಾ| ಗೆಬೆಲ್ಸ ಬರೆವ ಲೇಖನಗಳನ್ನು ಓದಿದರೆ ಮಾತ್ರ ಹಿಟ್ಲರು ಸುಮ್ಮನಿರುವವನಾದಲ್ಲಿ—ರೋಮ್ ಬರ್ಲಿನ ಮೈತ್ರಿ ಎಷ್ಟು ದಿನ ಬಾಳಬಹುದು? ಟ್ಯುನಿಸಿನಲ್ಲಿ ಫ್ರೆಂಚರು ಇಟಲಿಯನರನ್ನು ಹಿಂಸೆಮಾಡುತ್ತಾರಂತಲ್ಲ! ಅವರೇ ಸ್ವಯಂ ನಿರ್ಧಾರ ಮೂಲಕ ತಾವು ಯಾವ ರಾಜ್ಯಕ್ಕೆ ಸೇರಬಹುದೆಂಬುದನ್ನು ನಿರ್ಣಯಿಸಿಕೊಳ್ಳಬಹುದಂತೆ! ಸುಡೆಟನ್ ರಾಜ್ಯವನ್ನು ಜರ್ಮನಿಗೆ ಸೇರಿಸಿಕೊಳ್ಳುವಾಗ ಹೊರಟುವಾರ್ತೆಗಳೂ ಅಭಿಪ್ರಾಯಗಳೂ ಈಗ ಟ್ಯುನಿಸ್

"ಆಂಧ್ರಪ್ರಾಂತ್ಯದಲ್ಲಿ ರಾಯಲಸೀಮೆ, ಸೇರುವುದು ಬೇಡ"

ರಾಯಲಸೀಮೆ ಬಡಪ್ರದೇಶ, ಪ್ರತಿವರ್ಷ ವೂ ದುರ್ಭಿಕ್ಷವೇ ಅಲ್ಲಿದೆ ಅರೆಹೊಟ್ಟೆಯಿಂದ ಜನರು ಇರುವಷ್ಟು ಸಹಾಯಮಾಡಲೂ ಮದ್ರಾಸು ಸರಕಾರಕ್ಕೂ ಶಕ್ತಿ ಇಲ್ಲವಾಗಿದೆ, ಅಷ್ಟು ಕಠಿನ ಕ್ಷಾಮದಿಂದ ನರಳುವ ಜನರ ಸಂಖ್ಯೆ ಇದೆ. ಹೊಸತಾಗಿ ರಚನೆ ಹೊಂದಬಹುದಾದ ಆಂಧ್ರಪ್ರಾಂತ್ಯವೆಂಬುದು ತನ್ನ ಖರ್ಚನ್ನೆ ತಾನು ನೋಡಿಕೊಳ್ಳಲಿ ಮತ್ತಲ್ಲವೆ ರಾಯಲಸೀಮೆಯ ಸಹಾಯಕ್ಕೆ ಕೈಚಾಚಬಹುದು?

ಆಂಧ್ರಪ್ರಾಂತ್ಯವಾದರೆ, ತುಂಗಭದ್ರಾ ನದಿಯ ನೀರಾವರಿ ಕೆಲಸಗಳೆಲ್ಲ ಬೇಗ ಸಾಗುವುವು ಮುಗಿಯುವುವು ಎಂದು ಮೊದಲಾಗಿ ಅಲ್ಲಲ್ಲಿ ಒಂದೊಂದು ಸರಕಾರವನ್ನು ರಚಿಸಿ ಈ ಚತುರರು ಆಳಬಲ್ಲವು ಎಂದೆನ್ನುವುದು ತಪ್ಪು ಭಾಷಾನ್ವಯ ಪ್ರಾಂತ್ಯಗಳಾಗಲೆಂದು ಕಾಂಗ್ರೆಸು ಹೇಳುವಾಗಲೂ, ಸಾಂಪತ್ತಿಕ ದುರ್ಗತಿಯಾದರೂ ಹೀಗೆ ಪ್ರಾಂತ್ಯಗಳಾಗಲೆಂದು ಕಾಂಗ್ರೆಸು ಹೇಳವಾಗಲೂ, ಸಾಂಪತ್ತಿಕ ದುರ್ಗತಿಯಾದರೂ ಹೀಗೆ ಪ್ರಾಂತ್ಯಗಳಾಗಬಹುದೆಂದು ಸಮರ್ಥಿಸಿಲ್ಲವಷ್ಟೆ

ರಾಯಲಸೀಮೆಯು, ಭಾಷಾನ್ವಯವೆಂದು ಸೃಷ್ಟಿಯಾಗತಕ್ಕ ಆಂಧ್ರಪ್ರಾಂತ್ಯವನ್ನು ಸೇರದಂತೆ, ವಾಸ್ತವವಾಗಿಯೂ ರಾಯಲಸೀಮೆಯವರು ಈಗಿಂದ ವಿರೋಧಿಸಲೇಬೇಕು

ಇದೇನೂ ಆಂಧ್ರರಲ್ಲಿ ಹಗೆತನವನ್ನೆಬ್ಬಿಸುವ ಮಾತಲ್ಲ ಪ್ರತ್ಯೇಕವಾಗಿ ರಾಯಲಸೀಮೆಯವರ ಹೀಗೆ ವಾದಿಸಬೇಕಾಗಿರುವುದು ಸ್ವಾಭಾವಿಕವೇ ಈ ಪ್ರಾಂತ್ಯದ ಬಡತನದ ನಿವಾರಣೆಯು ಖಂಡಿತವಾಗಿ ಆಗುವುದೆಂದ ಭರವಸೆ ಹುಟ್ಟುವ ಮೊದಲು ವ್ಯರ್ಥವಾಗಿ ಆಂಧ್ರಪ್ರಾಂತ್ಯವನ್ನು ಸೇರುವುದು ಅನುಚಿತವಾಗಿದೆ

ಮದ್ರಾಸು ಸರಕಾರವು ಮದ್ಯಪಾನ ನಿವಾರಣೆಮಾಡಿ ಈಗ ಆಯದ ಬಹುಭಾಗವನ್ನು ಕಳೆದುಕೊಂಡಿದೆ ಆಂಧ್ರಪ್ರಾಂತ್ಯವಾಗುವೆನೆಂದವರೆ, ಈ ಮದ್ಯಪಾನ ನಿವಾರಣೆಯು ಜಾರಿಗೆ ಬರುವ ಮೊದಲೇ ಸಾಧಿಸಬೇಕಾಗಿತ್ತು ಹೊಸ ಪ್ರಾಂತ್ಯವೇ ದೊರೆತಿಲ್ಲ, ಬಜೆಟ ಪರಿಪೂರ್ಣವಂತೆ ಎಲ್ಲಿಂದ ಹಣ ದೊರೆಯುವುದೋ? ಮದ್ಯನಿವಾರಣೆಯನ್ನು ಹೇಗೆ ನಿಭಾಯಿಸುವರೋ? ಕ್ಷಾಮದಿಂದ ಪೀಡಿತರಾದವರಿಗೆ ಹಲ ಸಿಕ್ಕಿರೂ ಮಾಡಿ ಗಳನ್ನು ಮದ್ರಾಸ ಸರಕಾರವು ವ್ಯಯಿಸಿತು ಆಂಧ್ರ ಪ್ರಾಂತ್ಯವು ಕೂಡಲೆ ಉಂಟಾದರೆ, ಇಂತಹ ಖರ್ಚಿಗೆ ಹಣವನ್ನು ಎಲ್ಲಿಂದ ತಂದೀತು?

ವಿಷಯವಾಗಿಯೂ ಪತ್ರಿಕೆಗಳಲ್ಲಿ ಬರಲಾರಂಭವಾಗಿದೆ

× ×

ಅಲ್ ಹಜಾರ್, ಕೈರೋ

ಜಪಾನಿನ ಸಮ್ರಾಜ್ಯವು ಚೀನದಲ್ಲಿ ನಡೆವ ಯುದ್ಧವನ್ನು ಕುರಿತು ಆಶಾವಾದಿಗಳಾಗಿಲ್ಲ ಇಡನ್ (ಮಾಜೀ ಮಂತ್ರಿ) ಅಮೇರಿಕಕ್ಕೆ ಹೋದುದರಿಂದ, ಬ್ರಿಟಿಷರಿಗೆ ಅಮೇರಿಕದ ಸಹಾಯವು ದೊರೆವಂತಾಗಿದೆ ಎಂದು ಜಪಾನು ನಂಬಿದೆ. ಪೆಸಿಫಿಕ್ ಸಾಗರದಲ್ಲಿ ಇವೆರಡು ರಾಜ್ಯಗಳ ಯುದ್ಧನಾವೆಗಳು ಒಂದಾಗಿ ಕಲೆತು ಅಂತರಂಗದಲ್ಲಿ ಸಿದ್ಧಾಭಿನಯ ಮಾಡಬಹುದಾಗಿ ಭಯವಾಗಿದೆ. ಇದನ್ನು ಎದುರಿಸುವುದಕ್ಕಾಗಿ ಬಹಳ ಆಲೋಚನೆ ನಡೆಯುತ್ತದೆ. ಚೀನದಲ್ಲಿ ಮುಂದರಿಸುವ ಬದಲಾಗಿ, ಗೆದ್ದುದನ್ನು ದೃಢಮಾಡೋಣವೆಂದು ನೌಕಾಸೇನೆ ಎನ್ನುತ್ತದೆ ಭೂಸೈನ್ಯವು, ಈಗಲೇ ಮುರಿದು ಬಿಡೋಣ ಚೀನವನ್ನು, ಎದುರಿಸೋಣ ಯುರೋಪು ಅಮೇರಿಕಗಳನ್ನು ಎಂದು ನುಡಿದಿದೆ. ಇಂಡಿಯಾ ಇಂಡೋಚೀನದ ಗಡಿಯವರೆಗೂ ಜಾಪಾನು ಧ್ವಜವು ಮುಂದರಿಯಬೇಕಾಗಿ ಇವರ ಆಸೆ ಇದೆ.

ರಾಯಲಸೀಮೆ—ಸರಕಾರಗಳೊಳಗೆ ಪ್ರಾಂತಿಕ ಸಂಬಂಧವುಂಟೆಂದು ಸಾರುವವರಿದ್ದಾರೆ. ರಾಯಲಸೀಮೆಗೆ ಒಂದಾಗಲು ಬರಲು, ಆಂಧ್ರಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷ ಡಾ| ಪಟ್ಟಾಭಿ ಸೀತಾರಾಮಯ್ಯನವರು ಸಹ ಕಾಣಹೋದುದಿಲ್ಲ. ವಂಶವು ಒಂದೇ, ಅಲ್ಲವೇ?

ಹೈದ್ರಾಬಾದು, ಮೈಸೂರು ಸರಕಾರಗಳನ್ನು ತನ್ನ ಗುಣ ವಿನಯಾದಿಗಳಿಂದ ಒಲಿಸಿಕೊಂಡ ಶ್ರೀ| ರಾಜಗೋಪಾಲಾಚಾರ್ಯರು ಹೀಗೂ ಮಾಡಿ ತುಂಗಾಭದ್ರಾ ನೀರಾವರಿ ಯೋಜನೆಯನ್ನು ಮುಗಿಸಿರುವರು ಅಷ್ಟಾದ ಕಡೆಗೆ, ಆಂಧ್ರಪ್ರಾಂತ್ಯದಲ್ಲಿ ರಾಯಲಸೀಮೆ ಸೇರಿಸಬೇಕೆಂದು ಆಂಧ್ರರು ಆತುರ ಪಡುತ್ತಾರೆ ಮದ್ರಾಸು ಮಂತ್ರಿಮಂಡಲದಲ್ಲಿ ವಿಶ್ವಾಸವನ್ನಿಡಬಹುದು ಹೊರತು, ಇನ್ನೆಂದೋ ಆಗಬಹುದಾಗಿರುವ ಆಂಧ್ರಮಂತ್ರಿಕೂಟದಲ್ಲಿ ಅಲ್ಲ ಮದ್ರಾಸು ಮಂತ್ರಿಗಳಲ್ಲಿ ವಿಶ್ವಾಸವಿರುವ ಕಾರ್ಯಕ್ಕೆ ಬೇಕಾದಷ್ಟು ಧನವೂ ಸಾಲವಾಗಿ ದೊರೆತು ತುಂಗಭದ್ರಾ ಕಾಲುವೆ ವಿಚಾರ ಮುನ್ನಡೆಯ ಬರುವ ಹಾಗಾಗಿದೆ

ಆಂಧ್ರಪ್ರಾಂತ್ಯ ಬೇಗದಾಗಬೇಕೆಂದು ಆಂಧ್ರ ಮಹಾಸಭೆ ಎಂಬೊಂದು ಹಲವು ಹದಿನೆಂಟು ಕೂಟ ನಿರ್ಧರಿಸಿಯದೆ ಇದಕ್ಕಾಗಿಯೆ ಆದೊನಿಯಲ್ಲಿ ಪರಿಷತ್ತಾಯಿತು, ರಾಯಲಸೀಮೆಯ ಮಹಾಸಭೆಯನ್ನು ಮಾಡಬೇಕಾಯಿತು

ರಾಯಲಸೀಮೆಯು ಪ್ರಬಲ ಚಳವಳಿ ಹೂಡಿ, ಭಾಷಾನ್ವಯ ಪ್ರಾಂತ್ಯಗಳು ಈಗ ಬೇಡವೆಂದು ಕಾಂಗ್ರೆಸಿಗೆ ತಿಳಿಸುವುದು ಉತ್ತಮ ಸಾಂಪತ್ತಿಕ ಚೆನ್ನಾಗಲಿ, ಆ ಮೇಲೆ ಎಲ್ಲವೂ'

(ಚಿತ್ತೂರು ಮಹಾಸಭೆಯ ಭಾಷಣದಿಂದ ೧೦-೧-೪೦)

ಜಾತಿದ್ವೇಷ!

ಇದರ ಹೆಸರು ಜಸ್ಟೀಸ್ ಪಕ್ಷವೆಂದೊ?

'ಹದಿನೆಂಟು ವರುಷಗಳ ಹಿಂದೆ ಜಸ್ಟಿಸ ಪಕ್ಷವನ್ನು ನಾನು ಸೇರಿದಾಗ, ನನ್ನ ಜೀವನವನ್ನೆಲ್ಲ ದೇಶ ಸೇವೆಗಾಗಿ ಸಮರ್ಪಿಸುವೆನೆಂದ ನಂಬಿದ್ದೆ ಈಗ ಮೊನ್ನೆ ಸೇರಿದ ಈ ಪಕ್ಷದ ಅಧಿವೇಶನದಲ್ಲಾದ ಕೆಲನಿರ್ಣಯಗಳನ್ನು ನನೊಪ್ಪಲಾರೆನಾದುದರಿಂದ ನನ್ನ ನಂಬಗೆಯು ವ್ಯರ್ಥವಾಯಿತು

ಇತಿಹಾಸಕ್ಕೂ ಮನುಷ್ಯವರ್ಗ ಶಾಸ್ತ್ರಕ್ಕೂ ವಿರುದ್ಧವಾಗಿ ಕೆಲವು ನಿರ್ಣಯಗಳಾಗಿವೆ ಇವುಗಳಲ್ಲಿ ಹೇಳಿರುವ ಸಾಮಾಜಿಕ ಮತ್ತು ಧಾರ್ಮಿಕ ಪಂಗಡಿಯ ಕಾರಣಗಳೂ ತಪ್ಪು ತಮಿಳರು ಮತ್ತು ಆರ್ಯರು ಎಂದು ವಿರುದ್ಧವಾಗ ಮಂತ್ರ ಸೂಚಿಸಿರುವವರ ಉದ್ದೇಶವೇನೆಂದು ಸ್ವಲ್ಪ ವಿಚಾರಿಸುವವರಿಗೂ ಗೊತ್ತಾಗದಿರದು ಮುಂದಾಳುಗಳಲ್ಲಿ ಹೆಚ್ಚಿನವರು ಆರ್ಯರು.

ನಾವೇ ಅಧಿಕಾರದಲ್ಲಿದ್ದಾಗ ವಿರುದ್ಧ ರಾಜಕೀಯ ಪಕ್ಷದವರು ಮಾಡುತ್ತಿದ್ದ ಕಾರ್ಯಕ್ರಮಗಳಲ್ಲಿ ನಾವೇ ಆಸಂತೋಷ ತೋರಿದೆವು ನಮಗೆ ಈಗ ನಡೆದ ಈ ನಿರ್ಣಯಗಳು ಎಂದೂ ಒಪ್ಪತಕ್ಕವಲ್ಲ

ಅರ್ಥಪೂರ್ಣವಾದ ರಾಜಕೀಯ ಪಕ್ಷ, ಸಾಮಾಜಿಕವೇ ಮೊದಲಾದ ಪದಗಳನ್ನ ಕೇಳಬೇಕೆನ್ನುವಾಗ ನ್ಯಾಯವಾದ ಕ್ರಮವನ್ನ ಅನುಸರಿಸಬೇಕು ದೇಶಹಿತವಾಗಲೆನ್ನುವವರ ಈ ರೀತಿಯಾಗಿ ಜಾತಿದ್ವೇಷವನ್ನು ಬಿತ್ತಬೇಕಾದಿಲ್ಲವಷ್ಟೆ. ಇದೇ ಮುಖ್ಯ ತತ್ವವಾಗಿರುವ ನಿರ್ಣಯಗಳನ್ನು ನಾವು ಎಂದೂ ಮನ್ನಿಸಲಾರೆವು

ಈಗ ಈ ಪಕ್ಷ ತೋರಿಸುವುದು ದುಃಖಕರವಾದರೂ ಈ ಜಸ್ಟಿಸ್ ಸಂಘದಕ್ಕೆ ಸರಿಯಾದ ನಾಯಕತ್ವ ಸಿಗುವಂತೆ ವಿವೇಕ ಹುಟ್ಟಿಸುವುದಾರನ್ನು ಭಗವಂತನದು

ದೇಶಕ್ಕೆ ನನ್ನಿಂದಾಗಬಹುದಾದ ಸೇವೆಯಾವುದೆಂದು ಭಗವಂತನೇ ನನಗೂ ತಿಳಿಸುವನೆಂದು ನಂಬಿದ್ದೇನೆ. ಹೀಗೆ ವೆಂಕಟಗಿರಿ ರಾಜರು ಪ್ರಕಟಿಸಿರುವರು.

ಪ್ರಪಂಚಕ್ಕೆ ಭಾರತದ ಸಂದೇಶ!—ಮೋಡಿ ಇಲ್ಲವೆ ನಡೆ!

ಮಹಾತ್ಮರ ಎಚ್ಚರಿಕೆ ಮತ್ತು ಬೋಧೆ

ವೈಸರಾಯರಿಗೆ ವ್ಯಾಟ್ ಹೋಲಿನ ಆಜ್ಞೆ

ಪ್ರಪಂಚಕ್ಕೆ ಭಾರತದ ಸಂದೇಶ

ಮಹಾತ್ಮರ ಎಚ್ಚರಿಕೆ ಮತ್ತು ಬೋಧೆ

ಇಂದು ರೂಪುಗೊಳ್ಳುತ್ತಿರುವ ಭಾರತದಲ್ಲಿ ಕ್ರೈಸ್ತ ಮಿಶನರಿಗಳ ಪಾಡೇನು? ಈ ಪ್ರಸಂಗದಲ್ಲಿ ಭಾರತಕ್ಕೆ ಅವರು ಯಾವ ಬಗೆಯಲ್ಲಿ ಸಹಾಯ ಮಾಡಬಹುದು? ಎಂಬುದಾಗಿ ಅಮೇರಿಕದಿಂದ ಮಹಾತ್ಮರನ್ನು ಕಾಣಲು ಬಂದವರೊಬ್ಬರು ಅವರನ್ನು ಪ್ರಶ್ನಿಸಿದರು. ಅದಕ್ಕೆ ಮಹಾತ್ಮರ ಉತ್ತರವಿಷ್ಟೆ!

ಭಾರತವೆಂದರೇನು? ಅದು ಮಾಡುತ್ತಿರುವುದೇನು? ಇದನ್ನರಿತು ಅವರು ನಮಗೆ ಸಲ್ಲಬೇಕಾದ ಮನ್ನಣೆಯನ್ನು ಕೊಡಲಿ. ಈ ತನಕ ಅವರು ಭಾರತದ ಕುರಿತು ಇಲ್ಲಿಯ ಮಾತುಗಳ ಕುರಿತೂ ವಿಲಕ್ಷಣವಾದ ಅಭಿಪ್ರಾಯಗಳನ್ನು ಹೊತ್ತು ಇಲ್ಲಿಗೆ ಶಿಕ್ಷಕರಾಗಿಯೂ ಬೋಧಕರಾಗಿಯೂ ಬಂದಿದ್ದರು. ಈ ತನಕ ನಾವೆಲ್ಲರೂ ಏನೂ ಅರಿಯದ ಅಂಧ ಶ್ರದ್ಧೆಯುಳ್ಳ ಮೂರ್ತಿ ಪೂಜಕರೆಂದೂ ನಾಸ್ತಿಕರೆಂದೂ ನಮ್ಮನ್ನು ವರ್ಣಿಸಲಾಗಿದೆ. ಮುಡೋಕನಾದರೆ ನಮ್ಮನ್ನು ಸೈತಾನನ ಮಕ್ಕಳೆಂದು ಸಂಬೋಧಿಸುತ್ತಿದ್ದನು. ಭಾರತದಲ್ಲಿಯ ಪ್ರತಿಯೊಂದು ವಿಷಯವು ಮನ್ನೋಹರವಾಗಿರುವುದು. ಆದರೆ ಮನುಷ್ಯನು ಮಾತ್ರ ನೀಚನು ಎಂಬುದಾಗಿ ಬಿಶಪ್ ಹೇಬರನೆನ್ನಲಿಲ್ಲವೆ?

ಇದು ಕ್ರೈಸ್ತನ ಬೋಧೆಯ ವ್ಯತಿರಿಕ್ತಾಚರಣೆಯೆಂದು ನನಗೆನ್ನಿಸುತ್ತದೆ. ಭಾರತವು ಪ್ರಪಂಚಕ್ಕೊಂದು ಸಂದೇಶವನ್ನು ಕೊಡಲಿದೆಯೆಂದೂ, ಇಲ್ಲಿಯ ಮಾತುಗಳೂ ಇತರ ಮತಗಳಂತೆ ಪವಿತ್ರವಾದವುಗಳೆಂದೂ [illegible] ನಿರಾದರೆ ಇಲ್ಲಿ ಮಿಶನರಿಗಳಿಗೆ [illegible] ಬಯಸಿ ಬಂದರೆ ನನ್ನ ಅಭಿಪ್ರಾಯದ ತನಿಮಿತ್ತ (ಮಿಶನರಿಗಳಿಗೆ) ಸ್ಥಾನವಿದೆ. [illegible] ಮಾರ್ಗಗಳಲ್ಲಿ ನ್ಯೂನತೆಗಳಿರಬಹುದು. [illegible] ಸಿಂದ ನಿರ್ಮಿಸಲ್ಪಟ್ಟು, ಮಾನವನಿಂದಲೇ ವಿಕಸಿತವಾದ ಹೊಂದಿದ ಯಾವುದಕ್ಕೆ ಹಾನಿ ನ್ಯೂನತೆಯಿಲ್ಲ? ಪರಂತು ಅಂಧಕಾರದಲ್ಲಿ ತೊಳಲುತ್ತಿರುವ ಅಜ್ಞಾನಿಗಳಿಗೆ ಕ್ರೈಸ್ತನ ಸಂದೇಶವನ್ನು ತಿಳುಹಲು ನಾವು ಬೋಧಕರಾಗಿ ಬರುವಿರಾದರೆ ನಿಮ್ಮ ಪಟ್ಟಿಗೆ ನಮಗಿಲ್ಲಿ ಸ್ಥಾನವಿಲ್ಲ. ನೀವು ಬಲಾತ್ಕಾರದಿಂದ ಇಲ್ಲಿ ಬಂದು ನೆಲಸಬಹುದು.

ಮಹಾತ್ಮರ ಈ ಮಾತುಗಳಿಂದಾಗಿ ಸಹಜವಾಗಿ ಈ ಪ್ರಶ್ನೆಯು ಹೊರಟಿತು. ಪ್ರಪಂಚಕ್ಕೆ ಭಾರತದ ಸಂದೇಶವೇನು?

'ಅಹಿಂಸೆ' ಗಾಂಧಿಜಿಯವರು ಉತ್ತರವನ್ನಿತ್ತರು. ಈ ತತ್ವದಿಂದಲೇ ಭಾರತವಿಂದು ತುಂಬಿಕೊಂಡಿದೆ. ಆದರೆ ನಿಮ್ಮನ್ನು ಅಹಿಂಸಾವಾದಿಗಳನ್ನಾಗಿ ಮಾಡುವಷ್ಟು ಕೃತಜ್ಞವನ್ನದು ಗಳಿಸಿಲ್ಲ. ಆದುದರಿಂದ ಊರಿಗೆ ಹೋದೊಡನೆ ಇಲ್ಲಿಯ ಅಹಿಂಸಾತತ್ವವನ್ನು ಜನರಿಗೆ ತಿಳಿಯ ಹೇಳುವಷ್ಟು ಧೈರ್ಯವು ನಿಮ್ಮಲ್ಲಿ ಉಂಟಾಗಲಿಕ್ಕಿಲ್ಲ. ಆದರೆ ಅಹಿಂಸಾ ತತ್ವಪರಿಪಾಲನೆಗಾಗಿ ಭಾರತವಿಂದು ಭಗೀರಥಪ್ರಯತ್ನ ಮಾಡುತ್ತಿದೆಯಾಗಿ ಮಾತ್ರ ನೀವು ಹೇಳಬಲ್ಲಿರಿ. ಈ ಸಂದೇಶವೊಂದನ್ನು ಬಿಟ್ಟರೆ, ಭಾರತವು ಪ್ರಪಂಚಕ್ಕೆ ಬೇರೆಯಾವುದನ್ನು ತಿಳಿಸಲಿಕ್ಕಿಲ್ಲ. ನೀವು ಏನು ಬೇಕಾದರೂ ಹೇಳಿರಿ. ಆದರೆ ಅಹಿಂಸಾಮಾರ್ಗಾನುಸರಣೆಯಿಂದಲ್ಲದೆ ಬೇರೆ ಯಾವ ರೀತಿಯಿಂದಲಾದರೂ ತಮಗೆ ಸ್ವಾತಂತ್ರ್ಯ ಬೇಕಾಗಿಲ್ಲವೆಂದು ನಿರ್ಧರಿಸಿರುವ ದೇಶವೊಂದು ಇಲ್ಲಿದೆ. ಈ ತನಕ ಯಾವ ದೇಶವೂ ಈ ಬಗೆಯ ಪ್ರಯತ್ನವನ್ನು ಮಾಡಿಲ್ಲ.

ಮೋಡಿ ಇಲ್ಲವೆ ನಡೆ

ವೈಸರಾಯರಿಗೆ ವೈಟ್ ಹೋಲಿನ ಆಜ್ಞೆ

'ಮೋಡಿ ಮಾಡು ಇಲ್ಲವೆ ನಡೆ!' ಎಂಬುದಾಗಿ ವೈಸರಾಯರಿಗೆ ವ್ಹೈಟ್ ಹೋಲಿನಿಂದ ಫೆಡರೇಶನಿನ ಕುರಿತು ಆಜ್ಞೆಯು ಬಂದಿರುವುದೆಂದು ವಿಶ್ವಸನೀಯವಾಗಿ ತಿಳಿದುಬರುತ್ತದೆ.

ಫೆಡರೇಶನನ್ನು ಇಂಗ್ಲೆಂಡಿನಲ್ಲಿ ಖಂಡಿತವಾಗಿಯೂ ಜಾರಿಗೆ ತರಲಿರುವರಂತೆ. ಕೋಂಗ್ರೆಸಿನ ಮನಃ ಪ್ರಾಂತಿಕ ಅಧಿಕಾರವನ್ನು ನಿರ್ವಹಿಸುವಂತೆ ಫೆಡರೇಶನನ್ನೂ ಜಾರಿಗೆ ತರಲೊಪ್ಪುವರೆಂಬುದರ ಕುರಿತು ವ್ಯಾಟ್ ಹೋಲು ನಿರಾಶಾಪೂರ್ಣವಾಗಿರುವುದು. ರಾಷ್ಟ್ರಪತಿಗಳಾದ ಸುಭಾಷಬಾಬುಗಳು ಈ ಕುರಿತು ಇತ್ತೀಚೆಗೆ ಆಡಿದ ಮಾತುಗಳು ಆಸನೀಯವೆಂದು ಲಂಡನಿನಲ್ಲಿ ಅಭಿಪ್ರಾಯವಿದೆ.

ಇಂಗ್ಲೆಂಡಿನಲ್ಲಿ ಲೋರ್ಡ ಲಿನ್‌ಲಿತ್ಗೋರವರು ಫೆಡರೇಶನನ್ನು ಜಾರಿಗೆ ತರದಿದ್ದರೆ ಅವರನ್ನು ಕೂಡಲೇ ಸ್ವದೇಶಕ್ಕೆ ಕರೆಯ ಬೇಕೆಂಬ ಭಾವನೆಯು ಲಂಡನಿನಲ್ಲಿ ತುಂಬಾ ಹಬ್ಬಿರುತ್ತದೆ. ಆದುದರಿಂದ ಫೆಡರೇಶನನ್ನು ಜಾರಿಗೆ ತರಲು ಅವರಿಂದಾಗದಿದ್ದರೆ, ಅವರು ತನ್ನ ಪದವಿಗೆ ತಿಲಾಂಜಲಿಯಿತ್ತು ಬರಬೇಕಾಗುವುದೆಂಬ [illegible] ಅಲ್ಲಲ್ಲಿ ಕೇಳಿ ಬರುತ್ತಿದೆ.

ಲೋರ್ಡ ಲಿನ್‌ಲಿತ್ಗೋರವರು ರಾಜೀನಾಮೆಯನ್ನು ಕೊಟ್ಟಲ್ಲಿ ಮೇರಿ ರಾಣಿಯ ತಂದೆ [illegible] ಅನುಜರಾದ ಡ್ಯೂಕ್ ಒಫ್ ಎತ್ಲೋನರನ್ನು ವ್ಹೈಸರಾಯರನ್ನಾಗಿ ನೇಮಿಸುವರಂತೆ. ಇವರು ಹಿಂದೆ ದಕ್ಷಿಣ ಆಫ್ರಿಕದ ಗವರ್ನರ ಜನರಲರಾಗಿದ್ದರು.

ಪ್ರಜಾಪಕ್ಷದ ಸಂಸ್ಥಾನಗಳ [illegible] ಕೋಂಗ್ರೆಸ್ಸಿನೊಳಗೂ ತಲೆದೋರಿದ ವಿವಾದದ [illegible] ಫೆಡರೇಶನನ್ನು ಜಾರಿಗೆ ತರಲಾಗದೆಂಬ ಭಾವನೆಯು ಅಲ್ಲಿಯ ರಾಜಕೀಯ ವಲಯಗಳಲ್ಲಿ [illegible]

ಮಹಾತ್ಮರ ಮೇಲೆ ತಿರುವಾಂಕೂರಿನ ಕ್ರೈಸ್ತರ ಆರೋಪಗಳು

ಅವರಲ್ಲಿ ಜಾತಿ ತಾರತಮ್ಯವಿದೆಯೋ

ತಿರುವಾಂಕೂರಿನ ಕುರಿತು ನನ್ನ ಧೋರಣೆಯ ಸ್ಪಷ್ಟೀಕರಣ

ಮಹಾತ್ಮರ ಕುರಿತು ತಿರುವಾಂಕೂರಿನ ಕ್ರೈಸ್ತ ಸಮಾಜವು ಒಮ್ಮೆ [illegible] ಅವರ ಮೇಲೆ ನಾನಾ ಬಗೆಯ ಆರೋಪಗಳನ್ನು ಹೊರಿಸಿರುವರು. ಅವುಗಳನ್ನು ಸಂಗ್ರಹಿಸಿ ಒಬ್ಬರು ಗಾಂಧಿಜಿಯವರಿಗೆ ಈ ರೀತಿಯಲ್ಲಿ ಬರೆದಿರುವರು.

[illegible] ತಿರುವಾಂಕೂರಿನ 'ಕ್ರೈಸ್ತ ಸಮಾಜದಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿವೆ. ನೀವು ಕ್ರೈಸ್ತ [illegible] ವಿರೋಧಿಗಳೆಂದು ಅನೇಕರು ಇಲ್ಲಿ ಆತಂಕಪಡುತ್ತಿದ್ದಾರೆ. ತಿರುವಾಂಕೂರಿನ ಮಹಾರಾಜರಿಗೆ ಪ್ರಜೆಗಳು ಒಡಕೊಂಡ ಮೆಮೋರಿಯಲನ್ನು ಹಿಂದೆಗೆಯಬೇಕೆಂದು ನೀವು ಪದೇಪದೇ ಒತ್ತಾಯ ಪಡಿಸಿದುದೇ ಇದಕ್ಕೆ ಕಾರಣವೆನ್ನಬಹುದು. ಜನತಾಭಿಪ್ರಾಯದ ಸರಣಿಯು ನಾನು ಕೆಲವು ಸುದ್ದಿ ಮಿತ್ರರಿಂದ ತಿಳಿದುಕೊಂಡಂತೆ ಈ ರೀತಿ ಇರುತ್ತದೆ. ತಿರುವಾಂಕೂರಿನಲ್ಲಿ ನಡೆಯುತ್ತಿರುವ ಆಂದೋಲನವು, ಹಿಂದುಗಳನ್ನು ಮೆಟ್ಟಿ ಮೇಲ್ಮೆ ಹೊಂದಬೇಕೆಂದ ಕ್ರೈಸ್ತರು ನಡೆಸುತ್ತಿರುವ ದಂಗೆಯೆಂಬ ತಪ್ಪು ಅಭಿಪ್ರಾಯವು ನಿಮ್ಮಲ್ಲಿ ಉಂಟಾಗುವಂತೆ ಸರ್ ಸಿ.ಪಿ. ರಾಮಸ್ವಾಮಿ ಅಯ್ಯರರು, ತಿರುವಾಂಕೂರಿನ ಮಹಾರಾಣಿಯವರೂ ಸಾಧಿಸಿರುವರು. ಈ ಅಭಿಪ್ರಾಯವನ್ನಿಟ್ಟುಕೊಂಡು ನೀವಿಂದು ತಿರುವಾಂಕೂರಿನ ಚಳವಳಿಗೆ ವಿರೋಧವಾಗಿ ಕೆಲವನ್ನು ನಡೆಸುತ್ತಿರುವಿರಿ. ಮಾತ್ರವಲ್ಲ, ದೇವಸ್ಥಾನಪ್ರವೇಶ ಶಾಸನವನ್ನು ಜಾರಿಗೆ ತಂದು ದಿವಾನರು ಹಿಂದೂ ಮತಕ್ಕೆ ತುಂಬಾ ಉಪಕಾರವನ್ನು ಮಾಡಿರುವರೆಂಬುದರಿಂದ, ಅವರಿಗೆ ಯಾವ ತರದ ಹಾನಿಯೂ ಉಂಟಾಗದಂತೆ ರಕ್ಷಿಸಲು ನೀವು ಸಾಧಿಸುವಿರಿ. ಇದಕ್ಕಾಗಿ ನೀವು ಸ್ಟೇಟ್ ಕೊಂಗ್ರೆಸ್ಸಿನವರು ಮಹಾರಾಜರಿಗೆ ಮಾಡಿದ ಮೆಮೋರಿಯಲನ್ನು ಹಿಂದೆಗೆಯಬೇಕೆನ್ನುವುದು. ಇಲ್ಲದಿದ್ದಲ್ಲಿ ತಿರುವಾಂಕೂರಿನ ಮತ್ತು ರಾಜಕೋಟೆಯ ವಿಷಯದಲ್ಲಿ ಪರಿಸ್ಥಿತಿಗೆ ಭಿನ್ನವಾದ ನೀತಿಯನ್ನು ನೀವನುಸರಿಸುವುದಾದರು ಏಕೆ?

ರಾಜಕೋಟೆಯ ದಿವಾನರ ಮೇಲೆ ಶ್ರೀ ಪಟೇಲರು ಅನೇಕ ಆರೋಪಗಳನ್ನು ಹೊರಿಸಿರುವರು. ಮಾತ್ರವಲ್ಲ ಅವರನ್ನು ಪದಚ್ಯುತರನ್ನಾಗಿ ಮಾಡಲು ತಾನು ಇನ್ನೊಂದು ಆಂದೋಲನವನ್ನು ಹೂಡಲಿರುವೆನೆಂದು ಘೋಷಿತಾನೆ ಗದರಿಸಿರುವರು. ಇದೆಲ್ಲಕ್ಕೂ ನಿಮ್ಮ ಸಮ್ಮತಿಯಿದೆ. ದೂರದಲ್ಲಿದ್ದ ನಿಮಗೆ ಇಲ್ಲಿಯ ಪರಿಸ್ಥಿತಿಯೇನೆಂಬುದನ್ನು ಸರಿಯಾಗಿ ತಿಳಿದುಕೊಳ್ಳಲು ಅವಕಾಶವಿಲ್ಲದಿದ್ದರೂ ಮೆಮೋರಿಯಲಿನ [illegible] ಕೂಡಲೇ ನೀವು ಆಜ್ಞೆಗಳನ್ನು ಹೊರಡಿಸುವಿರಿ. ಆದರೆ ಸರಕಾರದ ದುಷ್ಕೃತ್ಯಗಳ [illegible] ತಾಳುವಿರಿ. [illegible] ಗಳನ್ನು ನಡೆಯುತ್ತಿವೆ. [illegible] ಮಹಿಳೆಗಳ ಪ್ರತಿಗಳ ಮೇಲೆ [illegible] ಇವೆ. [illegible] ನೀವು [illegible] ಪಕ್ಷಪಾತಿಗಳೆ [illegible]

[illegible]

ಪ್ರಜಾಪಕ್ಷ ಸರಕಾರಕ್ಕಾಗಿ ನಡೆಯುತ್ತಿರುವ ಆಂದೋಲನದಲ್ಲಿ ದಿವಾನರ ಮೇಲಿನ ಆರೋಪಗಳನ್ನು ಸೇರಿಸಿದ್ದು [illegible] ನನ್ನ ಅಭಿಪ್ರಾಯವಾಗಿದೆ. ನನ್ನ [illegible] ಆರೋಪಗಳನ್ನು ಹಿಂದೆಗೆ [illegible] ನಾನು ಸ್ಪಷ್ಟಪಡಿಸಿದ್ದೇನೆ. ಮಾತ್ರವಲ್ಲ [illegible] ಅವರ [illegible] ಆದರೆ ಆರೋಪಗಳನ್ನು ಮುಂದೊತ್ತುವುದು ನ್ಯಾಯ ಒದಗಲಾರದೆಂದು ನಾನವರಿಗೆ ವಿಶದಪಡಿಸಿರುವೆನು. ಪರಂತು ಪ್ರಜಾಪ್ರಭುತ್ವಕ್ಕಾಗಿ ಅವರ ಆಂದೋಲನವೆ ಎಂದರೆ, ದಿವಾನರ ಮೇಲಿನ ಆರೋಪಗಳನ್ನು ಮುಂದೊತ್ತುವುದರಲ್ಲಿ ಅರ್ಥವಾದರೂ ಎಲ್ಲಿದೆ? ಆದರಿಂದಾಗಿ ಜನರ ಲಕ್ಷ್ಯವು ಹೊರಬಂದಪ್ಪಿ, ಅವರ ಸಮಯ ಸಂಪತ್ತುಗಳೆಲ್ಲವೂ ಆ ಆರೋಪಗಳನ್ನು ಸ್ಥಿರಪಡಿಸುವುದಕ್ಕಾಗಿಯೇ ವಿನಿಯೋಗವಾಗಬಹುದು. ಆದರೆ ಪ್ರಜಾಪ್ರಭುತ್ವವನ್ನವರು ಪಡೆದರೆ ಇಂದಿನ ಮುಂದೆ ಬರಲಿರುವ ದಿವಾನರ ಮೇಲೆ ಅಂಕೆಯನ್ನಿಟ್ಟುಕೊಳ್ಳಲು ಅವರಿಗೆ ಅಸಾಧ್ಯವಿಲ್ಲ. ಸತ್ಯ ಮತ್ತು ಅಹಿಂಸೆಯಲ್ಲಿ ಅವರಿಗೆ ಅಚಲವಾದ ವಿಶ್ವಾಸವಿದ್ದರೆ, ಅವರೊಳಗೆ ಐಕ್ಯವಿದ್ದರೆ ಅದನ್ನವರು ಪಡೆಯದಿರುವುದಾದರೂ ಹೇಗೆ? ಆದುದರಿಂದ ನನ್ನ ಬೋಧೆಯು ಸಮಂಜಸವಾದುದೆಂದು [illegible] ದಿಂದಲೇ ದಿವಾನರ ಮೇಲಿನ ಆರೋಪಗಳೆಲ್ಲವೂ ಹಿಂದೆಗೆಯಲ್ಪಟ್ಟಿರುವುವು. ಸಂಸ್ಥಾನಿಕ ಕೊಂಗ್ರೆಸಿನ ತಾತ್ಕಾಲಿಕ ಅಧ್ಯಕ್ಷರ ಹೇಳಿಕೆಯಿಂದಲೂ ಇವೇ ವಿಷಯವು ತಿಳಿದುಬರುತ್ತದೆ.

ತಿರುವಾಂಕೂರಿನೊಡನೆ ರಾಜಕೋಟೆಯನ್ನು ಹೋಲಿಸುವುದು, ಅವರ ಅಜ್ಞಾನವನ್ನು ಸೂಚಿಸುತ್ತದೆ. ಅಲ್ಲಿಯ ಚಳವಳದ ಮಾರ್ಗದರ್ಶಕನು ನಾನಲ್ಲವೇ ಅಲ್ಲ, ಅಲ್ಲಿ ಯಾವರಿಗೆ ಬೋಧೆ ಕೊಡುವ ಆವಶ್ಯಕತೆಯೂ ಎದ್ದಿರಲಿಲ್ಲ. ಶ್ರೀ ಸರದಾರರಿಗೆ ಅದರ ಅಗತ್ಯವೂ ಇದ್ದಿಲ್ಲ. ಅಗತ್ಯವಿದ್ದಲ್ಲಿ ನಾನು ಸಿದ್ಧನೇ ಇದ್ದೆನು. ದಿವಾನರನ್ನು ಪದಚ್ಯುತರನ್ನಾಗಿ ಮಾಡುವ ಪ್ರಶ್ನೆಯಾದರೂ ಅಲ್ಲಿ ಎದ್ದುದಿಲ್ಲ. ಅಲ್ಲಿಯವರು ನಡೆಸುತ್ತಿರುವ ಆಂದೋಲನವು ಪ್ರಜಾಪ್ರಭುತ್ವಕ್ಕೋಸ್ಕರವಾದರೆ, ವ್ಯಕ್ತಿಪರವಾದ ಆರೋಪಗಳಿಗೆ ತಾನು ಕಿವಿಗೊಡೆನೆಂದು ಸರದಾರರು ಮೊದಲೇ ಹೇಳಿದ್ದರು. ಭಿನ್ನಾಭಿಪ್ರಾಯವುಳ್ಳ ಅನೇಕಾನೇಕ ಮಂದಿಯೊಡನೆ ಅವರ [illegible] ಅಧಿಕಾರಿಯೊಬ್ಬರನ್ನು [illegible] ಪ್ರದೇಶ [illegible] ಅಜಗಜಾಂತರವಿದೆ.

[illegible]

ಕೊನೆಯದಾಗಿ, ಈಗಿನ ದಿವಾನರು ತಮ್ಮ ಸ್ಥಾನದಲ್ಲಿರಬೇಕೆಂಬ ಇಚ್ಛೆಯಾದರೂ ನನ್ನಲ್ಲಿಲ್ಲವೆಂದು ನನ್ನ ಟೀಕಾಕಾರರು ತಿಳಿದುಕೊಳ್ಳಲಿ. ಸ್ಥಾನ ದಿವಾನರೊಡನೆ ಪತ್ರವ್ಯವಹಾರವನ್ನು ನಡೆಸುವುದಾದರೆ— ಆದು ಚಳವಳದಲ್ಲಿ ನಾನು [illegible] ಹೊಳೆ [illegible] ಮಹಾರಾಣಿಯವರೊಡನೆ [illegible] ಚಳವಳವು ಪ್ರಾರಂಭವಾದಂದಿನಿಂದ ಈ ತನಕ ನಾನು ಪತ್ರವ್ಯವಹಾರವನ್ನು ನಡೆಸಿದುದಿಲ್ಲ. ನನ್ನಲ್ಲಿ ಪಕ್ಷಪಾತಬುದ್ಧಿ ಇಲ್ಲವೆಂದೂ ಈ ತನಕ ನಾನದನ್ನು ತೋರಿದ್ದಿಲ್ಲವೆಂದೂ ದೃಢವಾಗಿ ಹೇಳಬಲ್ಲೆ. ರಾಜಕೀಯ ವಿಷಯಗಳಲ್ಲಿ ಕ್ರೈಸ್ತ, ಕ್ರೈಸ್ತೇತರರೆಂಬ ಭೇದಬುದ್ಧಿಯನ್ನು ನಾನರಿತಿಲ್ಲ. ಮತವಿಷಯಗಳಲ್ಲಿ ಈ ಭೇದವನ್ನು ನಾನು ಮಾಡುವೆನಾದರೂ, ನನ್ನ ಮತದಷ್ಟೇ ಮನ್ನಣೆಯನ್ನು ನಾನು ಇತರ ಮತಗಳಿಗೂ ಕೊಡುವೆನು.

ಶ್ರೀಮತಿ ರಜೀಯಾ ಖಾಟೂನ್

ಇವರು ಬಂಗಾಳದ ತ್ರಿಪುರಾ ಕೋಂಗ್ರೆಸ್ ಅಧಿವೇಶನಕ್ಕೆ ಚುನಾಯಿತರಾದ ಮೊದಲನೇ ಮುಸ್ಲಿಮ ಮಹಿಳೆ!

ಸ್ವದೇಶಾಭಿಮಾನಿ

ತಾರೀಖು ೨೦—೧—೧೯೩೯

ಸಿಂಧದ ಪಾಠ

ಮುಸ್ಲಿಮ ಲೀಗ್—ಇನ್ನು ಸುಧಾರಣೆಹೊಂದದೆ ಬಾಳಲಾರದು. ಲೀಗಿನಲ್ಲಿರುವ ಧರ್ಮಭ್ರಾಂತರೂ ಸ್ವಾರ್ಥಸಾಧಕರೂ ರಾಷ್ಟ್ರೀಯ ಭಾವರಹಿತರೂ ಸುಧಾರಣೆಹೊಂದದೆ, ಅಥವಾ ಹೊರಗೆ ಹೋಗದೆ ಲೀಗು ಬಾಳಲಾರದು. (ಲೀಗಿಗೆ ಹೇಳುವಷ್ಟೆ ಚೆನ್ನಾಗಿ ಇಷ್ಟನ್ನು ಹಿಂದೂ ಮಹಾಸಭೆಗೂ ಹೇಳಬಹುದು) ಸೆಂಟ್ರಲ್ ಎಸೆಂಬ್ಲಿಯಲ್ಲಿರುವ ಮುಸ್ಲಿಮ ಲೀಗ್ ಪಕ್ಷದವರು ಬಿರುದುಗಳನ್ನು ಪಡೆಯಬಾರದೆಂದು ಜಿನ್ನಾರವರು ಸೂಚಿಸಿರುವಂತೆ ಕೇಳಿಬಂದದೆ ಜಿನ್ನಾರವರು ಈ ವಿಷಯಗಳನ್ನೆಲ್ಲ ಪ್ರಕಟಿಸುವುದಿಲ್ಲವೇಕೆ? ಇಲ್ಲಿಂದ ಮುಂದರಿಯುತ್ತ, ಲೀಗಿನ ಸುಧಾರಣೆಗೆ ತೊಡಗಬಹುದು ಸಿಂಧದ ಮಂತ್ರಿಮಂಡಲವು ಈಗ ಯೋಗ್ಯ ಸೂಚನೆ ಕೊಟ್ಟಿದೆ ಇನ್ನು ಸಿಂಧದ ಎಸೆಂಬ್ಲಿಯಲ್ಲಿ ಮುಸ್ಲಿಮ್ ಲೀಗ್ ಪಕ್ಷವು ಸತ್ತಿದೆ ಎನ್ನಬಹುದಾಗಿದೆ ಏಳೇ ಮಂದಿ ಮಾತ್ರ ಉಳಿದರು! ಸರ್ ಗುಲಾಮು ಹುಸೇನರೂ ಸಹ ಬೇರೆ ಪಕ್ಷ ಮಾಡಿರುವರು ಸಮಸ್ತ ಮುಸ್ಲಿಮರನ್ನೂ ಲೀಗಿಗೆ ಸೇರಿಸುತ್ತೇವೆಂದು ಅಂದು ಹೇಳಿದ ಇವರ ಮಾತೆಲ್ಲಿ ಉಳಿಯಿತು? ಈಗ ಇವರಿಗೆ ಒಂದು ಸ್ಥಾನವು ಮಂತ್ರಿಮಂಡಲದಲ್ಲಿ ಸಿಗಲೂ ಅನುಕೂಲವಿದೆ, ಅವರ ಪಕ್ಷವೇ ಮುಸ್ಲಿಮ ರಾಷ್ಟ್ರೀಯ ಪಕ್ಷವಾಗಿದೆಯಷ್ಟೆ ಇನ್ನು ಮಂತ್ರಿಮಂಡಲದಲ್ಲಿ ಮೂವರ ಬದಲಾಗಿ ಐವರು ಮಂತ್ರಿಗಳಾಗುವರು ಶ್ರೀ ಅಲ್ಲಾಬಕ್ಷರು ಕಾಂಗ್ರೆಸಿನ ಸೂತ್ರದಂತೆ ರೂ ೫೦೦ ಕಲಬಿನ ಮಂತ್ರಿಗಳನ್ನು ಇಟ್ಟುಕೊಳ್ಳಬೇಕೆನ್ನುವಾಗ, ಐವರಿದ್ದರೂ ಸಿಂಧದ ಬಡತನಕ್ಕೆ ಕಷ್ಟವಾಗದು ಐವರು ಐದು ಪಕ್ಷದವರ ಕಾಂಗ್ರೆಸ ಮಂತ್ರಿಗಳಲ್ಲದಿದ್ದರೂ, ಅವರ ಶಕ್ತಿಗೆ ಅನುಕೂಲವಾಗಿ ಮಂತ್ರಿಮಂಡಳವು ನಡೆವುದಾಗಿದೆ ಈ ಸಮಾಚಾರ ಹೇಳಿದಳು, ಏಳು ಮಂದಿ ಮುಸ್ಲಿಮ ಲೀಗಿನವರು ಯಾವ ಗಣನೆಗೂ ಬರುವಂತಿಲ್ಲ ಬಕ್ಷರು—ನನ್ನನ್ನು ಕೊಂದುಹಾಕಿದರೂ ಕೊಲ್ಲಲಿ, ನಾನು ಲೀಗನ್ನು ಸೇರುವುದಿಲ್ಲ ಎನ್ನುವಷ್ಟು ನೊಂದುಕೊಳ್ಳುವಂತೆ, ಎಸೆಂಬ್ಲಿಯ ಲೀಗಿನವರ ವರ್ತನೆಯಾಗಿದೆಯಂತೆ

ಕಾಂಗ್ರೆಸ ತಟಸ್ಥವಾಗಿದೆ ಆದರೆ ಲೀಗ್ ಇನ್ನು ದೂರಲಾರದು. 'ಕಾಂಗ್ರೆಸ್ ಆಗಕ್ಕವೆಂದು [illegible] ತೆರೆಗೆಯ ಪ್ರಸವದ ಕ್ರಿಯೆಂತೂ ಆಗುವುದು ಹೇಗಾಗಿ, ಕಾಂಗ್ರೆಸಿನ ದಲ್ಲದ, ಆದರೂ ಕಾಂಗ್ರೆಸಿಗೊಪ್ಪುವ ಮಂತ್ರಿಕೂಟವೇ ಸಿಂಧದಲ್ಲಿರ ವಂತಾಗಿದೆ. ಹಣಕಡಿಮೆಯಾದುದರಿಂದ ಮಾತ್ರ, ಕಾಂಗ್ರೆಸ್‌ನ ಎಲ್ಲ ಕೇಳಿಕೆಗಳನ್ನು ಬಕ್ಷರು ಈಗಲೆ ನಡೆಸಲಾರರು. ಕಾಂಗ್ರೆಸ್ ಪ್ರಾಂತ್ಯಗಳಲ್ಲೂ ಅಸಾಧ್ಯವಾಗಿರುವ ಕಾರ್ಯಕ್ರಮವೆಲ್ಲ ಹಿಂದೆಯೇ ಉಳಿದಿಲ್ಲವೆ? ಅದರಂತೆ ಇದು ಕಾಂಗ್ರೆಸ ಈ ಕಾರಣದಿಂದ ಸಿಂಧದ ಮಂತ್ರಿಮಂಡಲಕ್ಕೆ ಕುಂಟ ಸಹಾನುಭೂತಿ ತೋರಿಸುತ್ತಲಿದೆ

ಯೂರೋಪೀಯರು ಇಲ್ಲಿ—ಅಸ್ಸಾಮಿನ ಯುರೋಪಿಯರಿಗಿಂತ ನಿಪುಣರಾಗಿ ವರ್ತಿಸಿರುವರು. ಮಂತ್ರಿಮಂಡಲದ ರಚನೆಯಲ್ಲಿ ಯುರೋಪೀಯರ ಪಕ್ಷವು ಬಹಳವಾದ ಪರಿಣಾಮಗಳನ್ನು ಉಂಟುಮಾಡಬಲ್ಲುದು ಅವಿಶ್ವಾಸದ ಠರಾವನ್ನು (ಶ್ರೀ ಬಕ್ಷರ ಮೇಲೆ) ತಂದಾಗ, ಹಾಳು ಜಾತಿ ಪಕ್ಷಗಳಿಗೆ ಗತಿಯಿಲ್ಲವೆಂಬ ಬುದ್ಧಿ ರವಾನೆಯಾಯಿತು ಎಲ್ಲ ಎಸೆಂಬ್ಲಿಗಳ ಇದನ್ನು ತಿಳಿಯಲಿ. ಇದು ಋಜುವಾದ ಕಾರಣವೇ, ಕಾಂಗ್ರೆಸು ಮಾತ್ರ ಸರ್ವ ಪಕ್ಷೀಯ ಸಂಸ್ಥೆ ಎಂದೂ ಪ್ರಕಟವಾಯಿತು. ಸೆಂಟ್ರಲ್ (ಮಧ್ಯ) ಎಸೆಂಬ್ಲಿಯಲ್ಲಿ ಲೀಗ್—ಕಾಂಗ್ರೆಸುಗಳು ಭೇದವಿರದೆ ಒಂದಾಗಿ ನಡೆವಂತೆ, ಅಧಿಕಾರಿಗಳ ವರ್ತನೆಯೇ ಸಹಾಯಕವಾಗಿದೆ ಆದರೂ ಭೂಲಾಭಾಯಿ—ಜಿನ್ನಾ ಒಕ್ಕಟ್ಟು ನಮಗೆಷ್ಟು ಸಲ ತೋರಿಬಂದಿದೆ? ಮುಸ್ಲಿಮ ಲೀಗ್ ಪಕ್ಷದ ಯಾರಿಗೂ ಹೊಸವರ್ಷದ ಬಹುಮಾನ ಬಿರುದುಗಳು ಈ ಎಸೆಂಬ್ಲಿಯ ಮಟ್ಟಿಗೆ ದೊರೆತಿಲ್ಲ ಎಂಬುದನ್ನು ಮರೆಯಬಾರದು.

ಇನ್ಕಂಟ್ಯಾಕ್ಸ್ ಬಿಲ್ಲನ್ನು ವಿರೋಧಿಸುವಾಗ, ದೇಸಾಯಿ—ಜಿನ್ನಾರವರು ಒಂದಾಗಿ ವರ್ತಿಸಿದುದು, ಇನ್ನು ೧೯೪೦ರ ವರೆಗೂ, ಈ ಎಸೆಂಬ್ಲಿಯ ಜೀವಮಾನದಲ್ಲಿ ಇದೇ ಪ್ರಕಾರ ಮುಂದರಿದರೆ, ದೇಶಕ್ಕೆ ಹಿತವುಂಟು.

ಶ್ರೀ ಜಿನ್ನಾರವರು ಈ ಕಾರಣದಿಂದ ಲೀಗನ್ನು ಸುಧಾರಿಸುವರೇ?

ಮುಸ್ಲಿಮರು ಮತ್ತು ಕಾಂಗ್ರೆಸ್ಸು

ಮಂಗಳೂರಿನ ಮುಸ್ಲಿಮ ವೆಲ್‌ಫೇರ್ ಲೀಗ್

ಮೇಲಿನ ಸಂಸ್ಥೆಯ ಎರಡನೆ ವಾರ್ಷಿಕೋತ್ಸವವು ಜಿಲ್ಲಾ ವಿದ್ಯಾಧಿಕಾರಿಗಳಾದ ಗುಲಾಮ್ ದಸ್ತಗಿರಿ ಸಾಹೇಬರ ಅಧ್ಯಕ್ಷತನದಲ್ಲಿ ಜರಗಿ, ಮುಸ್ಲಿಮರು ಕಾಂಗ್ರೆಸಿನೊಡನಿರಬೇಕಾಗಿ, ಶ್ರೀ ರಹಿಮ್ ಅಹಮದ್ ಎಂಬವರು ಸುರಸವಾದ ಭಾಷಣವನ್ನಿತ್ತರು.

ಬರಿ ಕೆಲವು ಮಂದಿ ಬಹಿರ್ ಜನಾಂಗಿಕರು ನಮ್ಮನ್ನು ಆಳುತ್ತಿರುವಾಗ ಹಿಂದೂದೇಶದ ೯ ಕೋಟಿ ಮುಸ್ಲಿಮರನ್ನು ಅಲ್ಪಸಂಖ್ಯಾಕರೆಂದು ಕರೆಯುವುದ ಅವಮಾನಕರ ಜಿನ್ನಾರವರು ಸಾರುತ್ತಿರುವ ತತ್ವವೆಲ್ಲವೂ ತಪ್ಪು ಮುಸ್ಲಿಮರಲ್ಲಿ ವಿಚಿತ್ರ ತರದ ಒಂದು ಮನೋಭಾವವು ಉಂಟಾಗಿರುವುದು ಕಾಂಗ್ರೆಸ್ಸು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವುದು ಅದ ಮುಸ್ಲಿಮರಿಗೂ ಕೂಡ ದೊರಕದೆಯಿರದು. ಮುಸ್ಲಿಮರು [illegible] ತಮ್ಮ ಉದ್ಧಾರದ ಬಗೆ ಕಾರ್ಯಿಸಬೇಕು ಅಫಘಾನಿಸ್ತಾನ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಸೋಲ್ ಏಜೆಂಟರು, ಜಿನ್ನಾರವರು ಸಬ್ ಏಜೆಂಟರು ಆಗಿರುವರು.. ಎಂಬುದಾದ ಅಭಿಪ್ರಾಯಗಳನ್ನು ಸೂಚಿಸುತ್ತ ಮೇಲಿನ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ರಹಿಮ್ ಅಹಮುದ್‌ರವರು, ಕಾಂಗ್ರೆಸ್ಸು ನಡೆಸಿ [illegible] ರಚನಾತ್ಮಕ ಕಾರ್ಯಕ್ರಮದ ಕುರಿತು ವಿಶದವಿತ್ತ ಸುರಸವಾದ ಭಾಷಣವಿತ್ತರು

ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲ್

ಮೇಲಿನ ಕೌನ್ಸಿಲಿನ ಸಭೆಯೊಂದು ಮೊನ್ನೆ ತಾ [illegible]ರಲ್ಲಿ ಶ್ರೀ [illegible] ಅಧ್ಯಕ್ಷತನದಲ್ಲಿ ಜರಗಿತು. [illegible] ಈ ಸಭೆಯಲ್ಲಿ ನಡೆದ ಮುಖ್ಯವಾದ [illegible] [illegible] ದಲ್ಲಿ [illegible] [illegible] [illegible] [illegible] [illegible] ರಿಕಗ್ನಿಶನ್ನು [illegible] ವುದರ ಕುರಿತಾಗಿ [illegible] [illegible] ಪ್ರಶ್ನೆ [illegible] ವಾದಿಸಿದರ ಕಳೆದ [illegible] ತಿಂಗಳಲ್ಲಿ ಈ ಶಾಲೆಯ ಪ್ರಥಮ ತರಗತಿಗೆ ರಿಕಗ್ನಿಶನ್ ಕೊಡಲಾಗಿತ್ತು. ಜಿಲ್ಲಾ ಬೋರ್ಡಿನವರೂ, [illegible] ಪಡೆದ ಶಾಲೆ ಮೇನೇಜರರೂ ಇವರ ಎರಡು ಮೂರು ತರಗತಿಗಳಿಗೆ ರಿಕಗ್ನಿಶನ್ ಕೊಡುವಾಗ ಆಕ್ಷೇಪವೆತ್ತಿದ್ದರು.

ಅಲ್ಲದೆ ಆ ಶಾಲೆಗೆ ಹಿಂದೆ ಕೊಟ್ಟಿದ್ದ ಪರ್ಮನೆಂಟ್ ರಿಕಗ್ನಿಶನನ್ನು ತೆಗೆದು [illegible] [illegible]ರಾಗಿದ್ದರು

ಶಾಲೆಗೆ [illegible] ರಿಕಗ್ನಿಶನ್ ದೊರಕುವ ಸಂಭವವಿರುವುದರಿಂದ ಅದಕ್ಕಾಗಿ ಬಹಳ ವೆಚ್ಚದಿಂದ ಕಟ್ಟಡ [illegible] [illegible] ಶ್ರೀಷರವರ ವಾದಿಸಿದರು.

ಈ ಕುರಿತು ಚರ್ಚೆಯು ನಡೆಯುತ್ತಿದ್ದ ಹಾಗೆ ರೋಮನ್ ಕೆಥೋಲಿಕ್ ಶಾಲೆಗೆ ರಿಕಗ್ನಿಶನನ್ನು ಪಡೆಯಬೇಕಾಗಿ ಉಡುಪಿಯ ಹಿಂದೂ ಮಹಾಸಭೆಯಿಂದಲೂ, ಹಂಗಾಡಿ ಎಲಿಮೆಂಟರಿ ಶಾಲೆಯಿಂದಲೂ ಎರಡು ತಂತಿಗಳು ಬಂದಿದ್ದವು ಮತಭೇದವಿಲ್ಲದಾಗಿ ಶಾಲೆಯ ರಿಕಗ್ನಿಶನ್ ತೆಗೆದುಹಾಕಲಾಯಿತು.

ಕೋಮುಗಳು ಐಕ್ಯವಾಗಬೇಕು

ಸ್ಥಳೀಯ ಟೌನ್ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಮೊನ್ನೆ ತಾ. ೧೨ರಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಅಲಹಾಬಾದಿನಿಂದ ಇಲ್ಲಿಗೆ ಚಿತ್ತೈಸಿದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಆಧೀನದ ರಾಜಕೀಯ ಮತ್ತು ಪರರಾಷ್ಟ್ರ ವ್ಯವಹಾರ ಇಲಾಖೆಯ ಡಾ ರಾಮಮನೋಹರ ಲೋಹಿಯವರು ಕೋಮುಗಳಲ್ಲಿ ಐಕ್ಯ ಉಂಟಾಗಬೇಕೆಂಬುದಾಗಿ ಕೋರಿ ಭಾಷಣವನ್ನಿತ್ತರು.

ಪ್ರಾಂತ್ಯಕೀಯ ಸ್ವಯಂಪ್ರಭುತ್ವದಿಂದ ಅದಷ್ಟು ಒಳ್ಳಿತವು ದೊರಕಿಸಿಕೊಂಡದಾಯಿತು. ರಾಜಕೀಯ ಅಧಿಕಾರವೆಂದರೆ ಮಹತ್ವದೆಂದು ಕಾಂಗ್ರೆಸ್ ಮಂತ್ರಿಗಳು ಪ್ರಜೆಗಳಿಗೆ ಮನಗಾಣಿಸಿರುವರು ಒಡೆಯರನ್ನು ಬದಲಾಯಿಸಿ ಅದನ್ನು ಬದಲಾಯಿಸಿಕೊಳ್ಳಬಹುದೆಂದು ಈಗ ವ್ಯಕ್ತವಾಗಿರುತ್ತದೆ ಕಾಂಗ್ರೆಸ್ಸು ರಾಜಕೀಯ ಅಧಿಕಾರವನ್ನು ವಹಿಸಿದುದರಿಂದ ದೇಶದಲ್ಲಿ ನೂತನ ಸ್ಫೂರ್ತಿಯುಂಟಾಗಿರುತ್ತದೆ ಫೆಡರೇಶನ್ ಬರಲಿ, ಬಾರದಿರಲಿ, ನಾವು ಬ್ರಿಟಿಷರೊಡನೆ ಹೋರಾಡಲೇ ಬೇಕು, ಎಲ್ಲರೂ ಕೋಮುವಾರು ಭೇದಗಳನ್ನು ಮರೆತುಬಿಟ್ಟು, ಸ್ವಾತಂತ್ರ್ಯ ಹೋರಾಟದಲ್ಲಿ ಸೇರಬೇಕು—ಎಂಬುದು ಡಾ ರಾಮಮನೋಹರಲೋಹಿಯರ ಭಾಷಣದ ಸಾರವು

ಉಡುಪಿ ಶಾಲೆಯ ಆಡಳಿತ

ದಕ್ಷಿಣ ಕನ್ನಡಾ ಜಿಲ್ಲಾ ಬೋರ್ಡಿನ ಸಭೆಯೊಂದು ಮೊನ್ನೆ ತಾ ೧೦ರಲ್ಲಿ ಶ್ರೀ ಲಕ್ಷ್ಮೀನಾರಾಯಣರಾವರ ಅಧ್ಯಕ್ಷತೆಯಲ್ಲಿ ಜರಗಿತು ಇವತ್ತು ಒಂದು ವರ್ಷದಿಂದ ಎಷ್ಟೋ ಪ್ರಬಲವಾದ ವಿಷಯ ಒಂದರ ಕುರಿತ ಇತ್ಯರ್ಥ ನಡೆಯಿತು.

ಯಾವತರ ಕರಾರುಗಳಿಲ್ಲದೆ ಉಡುಪಿ ಬೋರ್ಡ್ ಹೈಸ್ಕೂಲನ್ನು ತಮಗೆ ಬಿಟ್ಟುಕೊಡುವುದಾದರೆ ತಾವದರ ಆಡಳಿತವನ್ನು ನಡೆಸಿ, ಅದೊಂದು ಸೆಕೆಂಡ್ ಗ್ರೇಡ್ ಕಾಲೇಜಾಗಿ ಮಾರ್ಪಡಿಸಿ [illegible] [illegible] ಗಳೂರಿನ [illegible] ಹಿಂದೆ ಜಿಲ್ಲಾ ಬೋರ್ಡ್ ಅಧ್ಯಕ್ಷರಿಗೆ ಬರೆದಿದ್ದರು. ೧೯[illegible] ನವೆಂಬರದಲ್ಲಿ ಜರಗಿದ ಜಿಲ್ಲಾ ಬೋರ್ಡ್ ಸಭೆಯು [illegible] [illegible] ಅನುಮತಿಕೊಟ್ಟ [illegible] ಮಂಜೂರಾಗಿತ್ತು. ಆದರೆ ಅಂದು ಒಡೆಯರಿಗೆ ಕೆಲವು ಕರಾರುಗಳು [illegible] ಆ ಕರಾರುಗಳನ್ನು ಒಪ್ಪಲು [illegible] [illegible] [illegible] ದುದರಿಂದ ಶಾಲೆಯನ್ನು ಒಡೆಯರಿಗೆ ಬಿಟ್ಟುಕೊಡುವುದು [illegible] ಗಿ ಮೇಲಿನ ಸಭೆಯು ನಿರ್ಣಯ [illegible]

ಫೆಬ್ರವರಿ ತಾ ೧೮ರಲ್ಲಿ ಮಂಗಳೂರಿಗೆ [illegible] ಸರ್ [illegible] ಇನ್ಸ್ಪೆಕ್ಟರ್ ಒಂದು [illegible] ಅರ್ಪಿಸಬೇಕಾಗಿ ಠರಾವಾಗಿರುತ್ತದೆ

ಶ್ರೀ [illegible] [illegible] ಸಂತಾಪ ಸೂಚಿಸಿ ಠರಾವು ಆಗಿರುತ್ತದೆ

ಶ್ರೀ ವಾರ್ಕಿಯವರು ವಿದ್ಯಾಮಂತ್ರಿಗಳಾದುದ [illegible] ಅವರು ಅಭಿನಂದಿಸಿ ಠರಾವು ಆಗಿರುತ್ತದೆ

ಎರಡು ವರ್ಷಗಳಿಂದ ಟೆಂಪರರಿಯಾಗಿ ಮುಂದೆ ನಡೆಯುತ್ತಿರುವ ಶಾಲಾ ಮಾಸ್ತರರ ಕೆಲಸವನ್ನು ಖಾಯಂ ಮಾಡಬೇಕಾಗಿ ಬಂದ ಜಿಲ್ಲಾ ಬೋರ್ಡ್ ನೌಕರರ ಸಂಘದ ವಿನಂತಿಯು ತಿರಸ್ಕರಿಸಲಾಯಿತು

ಹೆಗ್ಗಡೆ ಕೋಮಿನ ಜನರಿಗೆ ಎಲ್ಲಾ ಶಾಲೆಗಳಲ್ಲಿ ಸಂಬಳ ಮಾಫಿಯಾಗಬೇಕಾಗಿ ಠರಾವಾಗಿರುತ್ತದೆ

ಕೆಲವು ಪೊಲೀಸ್ ಸ್ಟೇಶನ್‌ಗಳ ಬಳಿ ಮೋಟರು ಬಸ್ಸುಗಳನ್ನು ನಿಲ್ಲಿಸಿ ಕಾಲವಿಳಂಬವಾಗುವ ಕುರಿತು ವಿಚಾರವೆತ್ತಲಾಗಿತ್ತು.

ರಂಗೂನಿನಲ್ಲಿ

ಸಾಂಕ್ರಾಮಿಕ ಮುಷ್ಕರ ಭಯ

ಮುಷ್ಕರಗಳು ಇನ್ನೂ ಹೆಚ್ಚಾಗಿ ಬೆಳೆಯುತ್ತಿವೆ. ಶಾಂತವಾಗುವ ಬದಲಾಗಿ, ಇನ್ನೂ ೫೦೦೦ ಕೂಲಿಗಳು ಕೆಲಸಕ್ಕೆ ಬಾರದೆ, ಮುಷ್ಕರಗಾರರನ್ನು ಸೇರಿರುವರು.

ಗೂರ್ಖಾಸ್ವಾರಿಯರು ಸೈನಿಕರು ಊರಲ್ಲೆಲ್ಲ ಗಸ್ತು ತಿರುಗುತ್ತಿರುವರು.

ಪ್ರತಿ ಊರಲ್ಲೂ ಸಭೆಗಳು ಜರುಗಿ ಮಜೂರರೆಲ್ಲರು ಮುಷ್ಕರ ಹಿಡಿಯಬೇಕಾಗಿ ಬೋಧಿಸುವ ಭಾಷಣಗಳಾಗುತ್ತಲೇ ಇವೆ. ಅಲ್ಲಲ್ಲಿ ಕೆಲವು ನೂರು ಮಂದಿ ಕೆಲಸಕ್ಕೆ ಹೋಗದೆ ಹಿಂದುಳಿದಿರುವರು.

ಯುನೆಂಗ್ ಯೋಂಗಿನಲ್ಲಿರುವ ಪೆಟ್ರೋಲಿಯಮ್ ಕಾರ್ಖಾನೆಯಲ್ಲಿ ಮಾತ್ರ ಸೇಕಡಾ ೧೦ರಂತೆ ಕೂಲಿಗಳು ಮುಷ್ಕರ ಹಿಡಿದಿರುವರು

ಪೋಲೀಸ ಕಮಿಶನರು ಬೇಕಾದಷ್ಟು ಬಂದೋಬಸ್ತು ಮಾಡಿದ್ದು, ಹಿಂಸೆಯಾಗದಂತೆ ಜಾಗ್ರತೆ ತಗೆದು ಕೊಂಡಿರುವರು

ಜನವರಿ ತಾ ೧೩ರಲ್ಲಿ ಸರಕಾರೀ ಬಂದರು ಕೂಲಿಗಳು ೫೦೦೦ ಮಂದಿ ಮಾಂದಿ ಮುಷ್ಕರ ಹಿಡಿದರು ಕೂಡಲೆ ಸಹಾನುಭೂತಿಯಿಂದ [illegible] ಕಂಪೆನಿಗಳಲ್ಲಿ ಕೆಲಸಮಾಡುವವರೂ ಮುಷ್ಕರ ಹಿಡಿದರು

ಶಾಂತಿಭಂಗವಾಗುವುದಾಗಿ ಜನರಲ್ಲಿ ಹೆದರಿಕೆ ಹೆಚ್ಚಿದೆ ಎಲ್ಲೆಲ್ಲೂ ಮುಷ್ಕರಗಳಾಗುವುದಾಗಿ ಸರ್ವರೂ ಜಾಗ್ರತರಾಗಿರುವರು ಹಿಂದೀಯರು ಮೊನ್ನೆ ಮುಗಿದ ದಂಗೆಗಳಿಂದಲೆ ನೊಂದವರಾಗಿದ್ದು ಇನ್ನಷ್ಟು ಭಯಗೊಂಡಿರುವರು ಸರಕಾರವು ಬಹು ನಿಧಾನವಾಗಿ ಸ್ಥಿರಿಸುತ್ತಲಿದೆ ಎಂದು ಜನರೆನ್ನುವರು. ಪ್ರಾಣ ಅಥವಾ ಸೊತ್ತು ಹಾನಿಯಾಗದಂತೆ ಎಲ್ಲಿ ಮುಂಜಾಗರ ಮಾಡಿರಿ ಪ್ರವೇದು. ಸರಕಾರದ ಅಧಿಕಾರಿಗಳನ್ನು [illegible] ಶಾಂತಿ ಸಾಧಕರ ಸಭೆಸೇರಿ, ಮುಂದ ಇತ್ಯರ್ಥವನ್ನು ಮಾಡಲಾರಂಭಿಸಿದರು. [illegible] ಒಕ್ಕಲುಗಳು ರಂಗೂನಿಗೆ ನೆರವಿಗೆ ಹೊರಟರು

ವ್ಯವಸ್ಥೆಯತ್ತಕಡೆ ದಾರಿಹಿಡಿದು, ಪೋಲೀಸರು ಗಳನ್ನು [illegible] ವಶಮಾಡಿ, ಆಯುಧಗಳನ್ನು ಜಪ್ತಿಮಾಡಿದ್ದಾರೆ

> "ಮುಸ್ಲಿಮ ಲೀಗನ್ನು ನಾನು ಸೇರುವ ಬದಲಾಗಿ ನನ್ನನ್ನು ಕೊಂದರಾದರೂ ಆಕ್ಷೇಪವಿಲ್ಲ".
>
> —ಸಿಂಧದ ಮುಖ್ಯ ಮಂತ್ರಿಯವರು.

ಹಜಾರಿಬಾಗ್

ರೈಲ್ವೆ ಅಪಘಾತ

ನವಾಫಿಲ್ಲಿಯಲ್ಲಿ ತಾ ೧೬ರಲ್ಲಿ ಸ್ಪೆಂಡಿಂಗ ಪ್ಯಾಸೆಂಜ ಗಾಡಿ ಸೇರಿದಾಗ, ಈ ಅಪಘಾತವು ಅದೇ ಸರಹದ್ದಿನಲ್ಲಿ (ಈಸ್ಟ್ ಇಂಡಿಯನ್ ರೈಲ್ವೆ) ಅದುವುಗಳಲ್ಲಿ ನಡೆಯಿತು, ಜನರು ಹತಾಹತರಾದ ದೂ ಹೆಚ್ಚು, ಈ ವಿಷಯದಲ್ಲಿ ಪೂರ್ಣವಾಗಿ ಶೋಧನೆಯಾಗಲೇಬೇಕೆಂದು ಸರ್ ಅಬ್ದುಲ್ ಹಲೀಮ್ ಘಜ್ನಾವಿಯವರೆಂದರು [ಈ ವಾರಿ ಸತ್ತವರ ಸಂಖ್ಯೆ [illegible] ಇನ್ನೂ ಹೆಣಗಳಿವೆ']

ವಿಶ್ವಕಟ ಟ್ರೈನ್ ಕಂಟ್ರಾಕ್ಟರರು ಬಿಹಾರ ಅಪಘಾತದ ಕಾಲದಲ್ಲಿ ಮಾಡಿದ ಅಪರಾಧವನ್ನು ಕೋರ್ಟಿನವರು ವಿಚಾರಿಸಿ ಬ್ರತೀ ೫೦೦ ರೂಪಾಯಿ ಜುಲ್ಮಾನೆ ವಿಧಿಸಿದ್ದು ಅನ್ಯಾಯವಾಯ್ತೆಂದು, ಸರಕಾರವು ಈ ದಂಡನೆ ಹೆಚ್ಚಿಸಲು ಅಪ್ಪೀಲು ಮಾಡಬೇಕೆಂದೂ ಅವರೆಂದರು ಇದಲ್ಲದೆ, ಈ ದೋಷಿಗಳನ್ನು ಆ ಜುಲ್ಮಾನೆ ಕಡಿಮೆಯಾಗುವಂತೆ ಅಪ್ಪೀಲು ಮಾಡುತ್ತಿರುವಾಗ, ಅವರಿಗೆ ಸಹಾಯ ಮಾಡುತ್ತಿರುವವರಾರೆಂದು ತಿಳಿಸಬೇಕೆಂದೂ ಇವರು ಕೇಳಿರುವರು

ಪತ್ರವ್ಯವಹಾರ

ಮೋಟರ ಬಸ್ಸು ಕಂಪೆನಿಗಳ "ಧಾರಾಳ ನಷ್ಟ!"

ಚಳವಳ ಮಾಡುವ ಕೆಲಸಗಾರರ ಹೇಳಿಕೆಯಲ್ಲಿ ಕಿಂಚಿತ್ತಾದರೂ ಹುರುಳಿಲ್ಲ. ಕೆಲಸಗಾರರಿಗೆ ನಿರೀಕ್ಷಿಸಬಹುದಾದುದಕ್ಕಿಂತ ಹೆಚ್ಚಿನ ಸೌಕರ್ಯ ಮೊದಲೇ ಕೊಟ್ಟಿದೆ ಅಜ್ಞಾನಿಗಳ ತಲೆಗೆಡಿಸಿ, ಚಳವಳಿಸಿ ಫಲವಿಲ್ಲ

ಈ ವಿಷಯವಾಗಿ ಸಿ. ಪಿ. ಸಿ. ಕಂಪೆನಿಯ ಮೆನೆಜರರ ಅಭಿಪ್ರಾಯ ಹೀಗಿದೆ:

"ನಮ್ಮ ಕಂಪೆನಿಯ ವಿರುದ್ಧವಾಗಿ, ಅಸಾಮಾನ್ಯವಾದ ಬೋಧನೆಯಿಂದ ಕೆಲಸಗಾರರು-ಚಳವಳಿಸುವಂತೆ ಮಾಡಿದವರು ಬಹಿರಂಗವಾದ ಸಭೆಯಲ್ಲಿ, ನಾವು ಸೇಕಡಾ ೨೫ರಂತೆ ಡಿವಿಡೆಂಡು ಧ್ವನಿದೆವೆಂಬುದನ್ನು ಬಹಳವಾಗಿ ವರ್ಣಿಸಲಾಗಿದೆ. ಶ್ರೀಮಾನ್ ಕೆ. ಆರ್. ಕಾರಂತರೂ ಮೈದಾನು ಭಾಷಣದಲ್ಲಿ ನಿಜಸ್ಥಿತಿಯನ್ನು ಕಡೆಗಣಿಸಿ, ೨೦-೩೦ರ ಸಲೆ ಡಿವಿಡೆಂಡು ನಾವು ನಿರ್ಧರಿಸುತ್ತೇವೆಂದಿದ್ದಾರೆ! ಈ ಎರಡನೆಯ ಅಂಶ ತಪ್ಪೇ ಆಗಿದೆ. ಸರಿಯಾಗಿ ಮನಗೊಟ್ಟು ನಿಜಸ್ಥಿತಿ ತಿಳಿದುಕೊಳ್ಳದೆ, ಈ ಹೇಳಿಕೆಗಳನ್ನು [illegible]ಲಾಗಿದೆ. ಸೇಕಡಾ ಅಂಶಗಳಿಗಿಂತ, ನಿಜವಾಗಿ ತೆತ್ತ ನೊಬಲಗಿನ ದಾಮಾಶಯು ನೋಡಿದಲ್ಲಿ, ಈ ನಷ್ಟ ಎಷ್ಟೆಂದು ಸ್ಪಷ್ಟವಾಗಿ ತಿಳಿಯಲು ಅನುಕೂಲವಾಗಿದೆ. ಈ ಕಂಪನಿಯು ಈಗ ೧೫೦ ಬಸ್ಸುಗಳನ್ನು ಚಲಾವಣೆಯಲ್ಲಿರಿಸುತ್ತಾ, ದಿನಕ್ಕೆ ೧೧,೦೦೦ ಮೈಲು ಪ್ರಯಾಣಕ್ಕೆ ಅನುಕೂಲ ಮಾಡುತ್ತಲಿದೆ. ತಲಬು ಎಂದು ಎರಡು ಲಕ್ಷ ರೂಪಾಯಿಗಳಿಗಿಂತ ಮೀರಿ ಹಣ ತೆರುತ್ತಿದೆ. ಒಟ್ಟು ವ್ಯಯವು ವರ್ಷಕ್ಕೆ ಎಂಟು ಲಕ್ಷ ರೂಪಾಯಿಗಳಾಗಿವೆ. ಇಷ್ಟೆಲ್ಲ ವಹಿವಾಟಿನ ಪ್ರತಿಫಲವಾಗಿ ಸಿಗುವ ಡಿವಿಡೆಂಡು ಯಾವುದೊಂದು ವರ್ಷದಲ್ಲಿ ೧೮,೫೦೦ ರೂಪಾಯಿಗಳಿಗಿಂತ ಹೆಚ್ಚಾದುದಿಲ್ಲ. ಕಂಪನಿಯು ಇಷ್ಟು ದೊಡ್ಡ ವಹಿವಾಟಿನ ಪ್ರತಿಫಲವಾಗಿ ದುಡಿದ ಲಾಭವು ಇಷ್ಟು ಅಲ್ಪವಾಗಿದೆ. ಇಂತಹುದೇ ಚಿಕ್ಕ ಮೋಟರು ಬಸ್ಸು ಕಂಪನಿಗಳು, ಇನ್ನೆಷ್ಟೋ ಅಲ್ಪ ಭಾಗದವಾಳ ಪಾಲಿ, ಇನ್ನೆಷ್ಟೋ ಧಾರಾಳ ನಷ್ಟ ಹೊಂದಿವೆ. ಒಬ್ಬರು ಧನಿಗಳಾಗಿರುವಲ್ಲಿ, ಇಂತಹ ವ್ಯವಹಾರಗಳಿಂದ ಅತಿರೇಕವಾದ ಲಾಭಹೊಂದಿದೆ, ಸುಮಾರು ಐದು ಲಕ್ಷ ರುಪಾಯಿ ಧಂಡವುಳ್ಳ ಮೇಲೆ ೧೮,೫೦೦ ರೂಪಾಯಿ ನಷ್ಟ ತಲೆ ಸಿಕ್ಕಿತೆಂದರೆ, ಅದು ಸೇಕಡಾ ೪ರಂತಾಯಿತಲ್ಲವೆ, ೨೫-೩೦ರಂತಾಯಿತೆ? ಈ ಕಂಪೆನಿಗೆ ಸೇರಿದವರೂ, ಈ ಅಲ್ಪ ಡಿವಿಡೆಂಡು ನಮ್ಮ ಪಾಲುಗಾರರಿಗೆ ದೊರೆಯಬಹುದಲ್ಲವೆ? ಕಂಪನಿಯ ಆಸ್ತಿ ಕಟ್ಟಡಗಳು ಮೊದಲಾದುವೇ ೧೫೦೦೦ ರೂಪಾಯಿಗೆ ಮೇಲ್ಪಟ್ಟು ಬಾಡಿಗೆ ತರುವುವಾಗಿವೆ; ಬೇಂಕುಗಳಲ್ಲಿ ಇತರ ಶೇರುಗಳಲ್ಲಿ ತೊಡಗಿಸಿಟ್ಟ ನೊಬಲಗುಗಳ ಮೇಲೆ ರೂ. ೬,೦೦೦ಕ್ಕೆ ಮೀರಿ ಬಡ್ಡಿ ಸಿಗುತ್ತದೆ. ವ್ಯಾಪಾರವೂ ಇದೆ. ಹೀಗಾಗಿ ಈ ಬಸ್ಸು ವಹಿವಾಟಿನಿಂದಲೇ ಮಾತ್ರ ದುಡಿಯುವಲ್ಲಿ, ಈ ಅಲ್ಪ ಡಿವಿಡೆಂಡನ್ನು 'ಅತಿರೇಕ'ವೆಂದು ತಿಳಿಯುವುದು ಅಪಹಾಸ್ಯಕರವಾಗಿದೆ; ಅಲ್ಪ ತಿಳುವಳಿಕೆಯ ಗುರುತಾಗಿದೆ; ಅಪೂರ್ಣವೂ ಅಸತ್ಯವೂ ಆಗಿರುವ ಅಭಿಪ್ರಾಯ ಚಮತ್ಕಾರದಾಗಿದೆ; ಏನೂ ಅರಿಯದವರನ್ನು ಉತ್ತೇಜಿಸಿ ಚಳವಳಿಸಿ ಅವರನ್ನು ಕೆಡಿಸುವ ಕುಹಕೋಪಾಯವಲ್ಲವೆ?

"ಕಳೆದ ವರ್ಷ ರೂ. ೧೮,೩೦೫ನ್ನು ಡಿವಿಡೆಂಡಾಗಿ ನಿರ್ಧರಿಸಲಾಗಿದೆ. ಅದೇ ಸಮಯ ರೂ. ೬,೦೦೦ಕ್ಕೆ ಮೇಲ್ಪಟ್ಟು ನೋಕರರಿಗೆಲ್ಲ ಬೋನಸ್ ಹಂಚಲಾಗಿದೆ. ನೋಕರರ ಇತರ ಹಿತವರ್ಧನೆಯ ಏರ್ಪಾಡಿಗಾಗಿ ರೂ ೨೫೦೦ನ್ನು ಪ್ರತ್ಯೇಕಿಸಿಡಲಾಗಿದೆ. ಎಂದರೆ, ಪಾಲುಗಾರರಿಗೆ ತೆತ್ತ ಪ್ರತಿ ರೂಪಾಯಿಯಲ್ಲಿ ಅರ್ಧ ರೂಪಾಯಿಯಷ್ಟು ಕೆಲಸಗಾರರಿಗೆ ಸಂದಿದೆ. ಇನ್ನಾವ ಇತರ ಕಂಪೆನಿಗಳಲ್ಲಿ ಈ ರೀತಿಯ ಔದಾರ್ಯದಿಂದ ಕೆಲಸಗಾರರನ್ನು ನಡೆಸಿ ಬರುತ್ತಾರೆಯೋ ತಿಳಿಯಬೇಕಾಗಿದೆ. ಕಂಪೆನಿಯು ಮಡಿದ ಲಾಭದಲ್ಲಿ ಇಷ್ಟಂಶವು ಕೆಲಸಗಾರರಿಗೆ ಎಲ್ಲಿ ಸಂದದೆ ಎಂದು ವಿಚಾರಿಸಿ ನೋಡಲಿ! ಲಾಭದ ಹಣವೂ ತೆತ್ತುದು, ಕ್ರಮವಾಗಿ ತೆರುತ್ತ ಬರುವ ಸಂಬಳ, ಎಲೌನ್ಸು, ಭಡ್ತಿಗಳಿಗೆ ಹಣ ತೆತ್ತ ಬಳಿಕವೇ. ಇಂತಹ ಹಲವು ಕಂಪೆನಿಗಳಲ್ಲಿನ ವೇತನಾದಿಗಳಿಗಿಂತ ಈ ಕಂಪೆನಿಯು ತೆರುವ ಸಂಬಳ ಮೊದಲಾದುವು ಹೆಚ್ಚಾಗಿವೆ, ಹೋಲಿಸಿ ತಿಳಿಯಲಿ.

"ಶ್ರೀ ಕಾರಂತರು ಮೈದಾನು ಭಾಷಣದಲ್ಲಿ ಹೀಗೆ ಹೇಳಿದರೆಂದು 'ಮದ್ರಾಸ್ ಮೈಲ್' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅವರು ಅಭಿಪ್ರಾಯದಲ್ಲಿ ಡಿವಿಡೆಂಡು ಸೇಕಡಾ ೭-೮ರ ಸಲೆಯಲ್ಲಿ ಕಂಪೆನಿಯ ಮೂಲಧನದ ಮೇಲಣ ಬಡ್ಡಿಯಾಗಿ ದೊರೆತರೆ ನ್ಯಾಯ. ಉಳಿದ ಲಾಭದಿಂದ, ಕೆಲಸಗಾರರಿಗೆ ಬೋನಸ್ಸಾಗಿ ತೆರುವುದಕ್ಕೆ ಒಂದಂಶ ಉಪಯೋಗಿಸಬಹುದು. [illegible] ಸರಕಾರವು ಪ್ರಮುಖವಾಗಿ [illegible] ಆಯುಷ್ಯ ಕಳೆದ ಕೊಂಡು, ಹಣದ ತುಟ್ಟಿಯನ್ನು ಅನುಭವಿಸುತ್ತದೆ, ಇತ್ಯಾದಿ.

"ಶ್ರೀ ಕಾರಂತರು ಈ ಸೂಚನೆಗಳನ್ನು, ಬಸ್ಸು [illegible] ಎಸೋಸಿಯೇಶನ್ ಪರವಾಗಿ [illegible] ಜೊತೆಗೆ [illegible] ಹೋಲಿಸಿಕೊಂಡರೆ [illegible] ನನ್ನ ಹೇಳಿಕೆ ಹೀಗಿದೆ:

"೧ ಇಂತಹ ಬಸ್ [illegible] ಸಾರ್ವಜನಿಕ [illegible] ಯಾಗಿರುವ [illegible] ಸರ್ಕಾರ [illegible] ಅಂತಹಕ್ಕಿಂತ ಹೆಚ್ಚಿನ [illegible] ಬಳಿಸಬಾರದು.

"೨ ಈ ವಹಿವಾಟಿನಲ್ಲಿ ಪಾಲುಗಾರರು [illegible] ಭಾಗ [illegible] ಗಳಲ್ಲಿ ಡಿವಿಡೆಂಡಿನ [illegible] ಅಂತವನ್ನು ನಿರ್ಧರಿಸಬೇಕು.

"೩. ಕೆಲಸಗಾರರಿಗೆ ಸರ್ವಿಸು ಶರ್ತಗಳ ಸಮ ಪ್ರಕಟವಾದ ಯೋಜನೆಯ [illegible] ಅವನ್ನು ಸರಿಯಾಗಿ [illegible] ಬೇಕು.

"೪ ನಿರ್ದಿಷ್ಟವಾದ ಡಿವಿಡೆಂಡನ್ನು ಸ್ಥಿರ [illegible] ಲಾಭದಲ್ಲಿ ನಿರ್ದಿಷ್ಟವಾದೊಂದು ಅಂಶವನ್ನು [illegible] ಸೌಕರ್ಯ [illegible] (ಮೋಟರ್ ವೆಹಿಕಲ್ಸ್ ರೂಲ್ಸಿನಲ್ಲಿರುವುದಕ್ಕಿಂತ ಹೆಚ್ಚಾಗಿ) ವಿನಿಯೋಗಮಾಡಬೇಕು.

"೫ ಚಲಾವಣೆ ಅಧಿಕಾರಿಗಳ ಕೈಯಲ್ಲಿ, ಟಿಕೇಟು ದರದ ನಿರ್ಣಯ, ಸರ್ವಿಸಿನ ಕ್ರಮ ಇರಬೇಕು.

"೬ ವಾರ್ಷಿಕ ಲೆಕ್ಕಪತ್ರದ ಕೂಲಂಕಷ ವಿವರಗಳನ್ನು ಸರಕಾರಕ್ಕೆ ಪ್ರತಿವರ್ಷವೂ ಪರಿಶೋಧನೆಗಾಗಿ ಒಪ್ಪಿಸಬೇಕು.

"ಈ ಮೇಲಣ ನನ್ನ ಸೂಚನೆಗಳು, ಕೆಲಸಗಾರರ ಪರವಾಗಿ ಶ್ರೀ ಕಾರಂತರು ಕೊಟ್ಟ ಸೂಚನೆಗಳಿಗಿಂತ ಹೆಚ್ಚಿನ ಗುಣಕರವಾಗಿವೆಯೋ ಇಲ್ಲವೋ ಎಂಬುದನ್ನು ಸಾರ್ವಜನಿಕ ಸೇವಕರೂ ಬುದ್ಧಿಯುಳ್ಳ ಕೆಲಸಗಾರರು ವಿಚಾರದಿಂದ ತಿಳಿಯಲಿ. (ಉದಾಹರಣೆಗಾಗಿ ೩ನೇ ಸೂಚನೆ) ಶ್ರೀ. ಕಾರಂತರು ಕೆಲಸಗಾರರಿಗೆ ಇಷ್ಟು ಬೋನಸ್ [illegible] ಇದಕ್ಕಿಂತ [illegible] ಕೆಲಸಗಾರರ [illegible] ಸರಕಾರದ ಸರ್ವಿಸು ಶರ್ತಗಳನ್ನು [illegible] ಕೆಲಸಗಾರರಲ್ಲಿ ಹೆಚ್ಚಿನ [illegible] ಲ್ಲವೇ?"

-ಕೆಲವು [illegible] ಜನರು [illegible] ಪರಿಣಾಮ [illegible] ಸ್ವಾಭಾವಿಕವಾಗಿದೆ. [illegible] ಕೆಲಸಗಾರರನ್ನು [illegible] ಅಥವಾ ಸಾಕಷ್ಟು [illegible] ಅಸತ್ಯ ಅಭಿಪ್ರಾಯಗಳ [illegible] ಕೆಲಸಗಾರರು [illegible] ತೃಪ್ತರೇ ಆಗಿರುವವರೂ, [illegible] ಯನ್ನು [illegible] ನಡೆಸುವ [illegible] ಸದ್ಯದ [illegible] ಸಿಕ್ಕಿದುದನ್ನು [illegible] ಕೆಲಸಗಾರರ ಹಿತವು, -ಹಿತವಾಗಿ [illegible] ಯನ್ನು ಉಳಿಸಿಕೊಳ್ಳಬೇಕೆಂದೂ ದುಡಿಯುವ ಕಂಪನಿ ನಷ್ಟಾಕರಕ್ಕೆ ಗುರಿಯಾಗದೆ, ಇದ್ದ ಅವಕಾಶವಾಗಿರಬೇಕೆಂದೂ ಜನರು ಪಾಠಾಗುವುದು ಎಂಬುದನ್ನು ಮೇಲಣ ನೀತಿಗಳಿಂದ ತಿಳಿಯಬಹುದು. ಕಳಕಳಿಮಾಡಿದರೆ, ಹಿಂದಿನ ಕೈಸೇರುವವನೆಂದು. ಕೆಲಸಗಾರರಿಗೆ ಮೋಹಿಸಿ, ಕೊನೆಗೆ ಅವರಿಗೆ ತಿರಿದ ಬರಿಗೈ, ಮೇಲಣ ಆಹಾರ, ಸುಕೆಲ ಉಸಿರು ಮಾತ್ರ ಸಿಗುವಂತೆ ಮಾಡುವ ಚಳವಳ ಪ್ರೇರಕರನ್ನು ಕೆಲಸಗಾರರೇ ಬೆಲೆ ಕಟ್ಟಲಿ.

ಕುಂದಾಪುರ ಶಿವಮೊಗ್ಗಾ ಟಪ್ಪಾಲು

ಅಯ್ಯಾ,

ಕುಂದಾಪುರ-ಶಿವಮೊಗ್ಗಾ ಟಪ್ಪಾಲು ಅವ್ಯವಸ್ಥೆಯ ವಿಚಾರವನ್ನು ಮೇಲಧಿಕಾರಿಗಳ ಗಮನಕ್ಕೆ ತರುವ ಉದ್ದೇಶ್ಯ ಈ ಲೇಖನವನ್ನು ಬರೆಯಲಾಗಿದೆ. ಈ ಟಪ್ಪಾಲು ಕುಂದಾಪುರದಿಂದ ಬೆಳಗ್ಗೆ ೬ ಗಂಟೆಗೆ ರನ್ನರ ಮುಖಾಂತರ ರವಾನೆಯಾಗಿ ಬಾಳೇಬರೆ ಅಂದರೆ ಹೊಸಂಗಡಿ ಗಡಿಯಲ್ಲಿ ಶಿವಮೊಗ್ಗಾ ಲ್ಯಾನಿನ ಟಪ್ಪಾಲು ಬಸ್ಸಿಗೆ ಕೊಡಲಾಗುತ್ತದೆ. ಸದ್ರಿ ಟಪ್ಪಾಲು ಪತದು ಹೊಸಂಗಡಿಯಿಂದ ೧೨ ಗಂಟೆಗೆ ಹೊರಟ ರನ್ನರನು ನಾಲ್ಕೈವರೆ ಮೈಲು ದೂರದ ಗಡಿಗೆ ಹೋಗಿ ೩ ಗಂಟೆಗೆ ಸರಿಯಾಗಿ ಶಿವಮೊಗ್ಗಾದಿಂದ ಅಲ್ಲಿಗೆ ಬರುವ ಟಪ್ಪಾಲು ಬಸ್ಸನ್ನು ಕಾಯಬೇಕಾಗುತ್ತದೆ. ಈ ಗಡಿಯಲ್ಲಿ ಒಂದು ಶರಾಬು ಅಂಗಡಿಯಲ್ಲದೆ ಬೇರೆ ಜನವಸತಿಯಿರುವುದಿಲ್ಲ. ಟಪ್ಪಾಲು ಚೀಲವನ್ನು ಇರಿಸಿಕೊಂಡು ಒಬ್ಬನೇ ರನ್ನರನು ಸುಮಾರು ೨ ಗಂಟೆಗಳ ತನಕ ಕಾದು ಕೂತಿರುವುದು ಬಹಳ ಅಪಾಯಕರವಾಗಿರುತ್ತದೆ.

ಕುಂದಾಪುರದಿಂದ ಶೀವಮೊಗ್ಗಾಕ್ಕೆ ಬರಿಯಾ ೯೦ ಮೈಲಿಯ ದೂರಕ್ಕೆ ಒಂದೇ ದಿನದಲ್ಲಿ ಟಪ್ಪಾಲು ರವಾನೆಯಾಗುವುದು ಸಾಧ್ಯವಿರುತ್ತಾ-ಬೆಳಗ್ಗೆ ೬ ಗಂಟೆಗೆ ಕುಂದಾಪುರದಿಂದ ಹೊರಟ ಟಪ್ಪಾಲು ಆ ದಿನ ಸಾಯಂಕಾಲ ಬರೀ ೩೦ ಮೈಲು ದೂರದ ಹುಲಿಕಲ್ಲಿನಲ್ಲಿ ಉಳಿಯುತ್ತದೆ. ಅಲ್ಲಿಂದ ಮರುದಿನ ೧೦ ಗಂಟೆಗೆ ಬಸ್ಸು ಮೂಲಕ ಹೊರಟು ೧೨ ಗಂಟೆಗೆ ಹೊಸನಗರಕ್ಕೂ-ಮಧ್ಯಾಹ್ನ ೪ ಗಂಟೆಗೆ ಹೊಸನಗರದಿಂದ ಮುಂದರಿದು ರಾತ್ರೆ ೮ ಗಂಟೆಗೆ ಸರಿಯಾಗಿ ಶಿವಮೊಗ್ಗಾಕ್ಕೆ ತಲ್ಪುತ್ತದೆ. ಈ ರೀತಿ ೯೦ ಮೈಲು ದೂರದ ಟಪ್ಪಾಲು ರವಾನೆಗೆ ಸುಮಾರು ೪೦ ಗಂಟೆಗಳ ಸಮಯವೇ ಬೇಕಾಗುತ್ತದಲ್ಲವೇ?

ಅಂತೆಯೇ ಶಿವಮೊಗ್ಗಾದಿಂದ ಬೆಳಗ್ಗೆ ೯ ಗಂಟೆ ಸಮಯ ಬಸ್ಸು ಮೂಲಕ ಹೊರಟ ಟಪ್ಪಾಲು ಸುಮಾರು ಮಧ್ಯಾಹ್ನ ೩ ಗಂಟೆಯ ಸಮಯ ಗಡೀಗೆ ತಲ್ಪಿ ೮ ಗಂಟೆಗೆ ಸರಿಯಾಗಿ ಹೊಸಂಗಡಿಗೆ ಬಂದು ಸಿಲ್ಕುತ್ತದೆ. ಹಾಗೂ ಮರುದಿನ ಬೆಳಗ್ಗೆ ೬ ಗಂಟೆಗೆ ಹೊರಟು ಮಧ್ಯಾಹ್ನ ೧೨ ಗಂಟೆಗೆ ಕುಂದಾಪುರಕ್ಕೆ ಮುಟ್ಟುತ್ತದೆ. ಅಂದರೆ ಇದು ರಾಟೆ ಇಳಿದು ಬರುವ ಕಾರ್ಯದಿಂದ ಒಟ್ಟು ೨೭ ಗಂಟೆಗಳೊಳಗಾಗಿಯೇ ತಲ್ಪುತ್ತದೆಂತ ಹೇಳಬೇಕೇ?

ಕುಂದಾಪುರದಿಂದ ಗಡೀಗೆ ಬಸ್ಸು ಸರ್ವಿಸುಗಳಲ್ಲಿ ಟಪ್ಪಾಲು ರವಾನೆಯ ಯೋಜನೆ ಮಾಡಿದ್ದಲ್ಲಿ-ಈ ಟಪ್ಪಾಲು ಸರಿಯಾಗಿ [illegible] ತಲ್ಪುವಂತಾಗುತ್ತದೆ. ಅದಲ್ಲದೆ [illegible] ಟಪ್ಪಾಲು [illegible] ಸಾಯಂಕಾಲದೊಳಗೆ ಶಿವಮೊಗ್ಗಾಕ್ಕೆ ತಲ್ಪುವ ಹಾಗಿದೆ. ಅಲ್ಲಲ್ಲಿ ವಸತಿ ಮಾಡುತ್ತಾ ಹೋಗುವುದರಿಂದ ಬಹಳ ಕೊಂಪೆಗೆ ಕಾರಣವಾಗುತ್ತದೆ.

ಆದ್ದರಿಂದ ಮಾನ್ಯ ಅಧಿಕಾರಿಗಳು ಆಲೋಚಿಸಿ, ಈ ಅವ್ಯವಸ್ಥೆಯನ್ನು ಹೋಗಲಾಡಿಸಿ ಟಪ್ಪಾಲು ಕಾಲಕ್ಕೆ ಸರಿಯಾಗಿ ಹೋಗುವ ಯೋಜನೆ ಮಾಡಬೇಕಾಗಿ ಅಪೇಕ್ಷಿಸುತ್ತೇವೆ.

ಇತಿ,

ಚಲಾವಣೆಯ ಬಂಧು



Canara Bank Limited, MANGALORE

NOTICE.

Is hereby given that under section 37 of the Indian Companies Act No VII of 1913 the Register of Members of the Bank will be closed from Monday the 30th January 1939 to Saturday the 18th February 1939 (both days inclusive)

ಕೆನರಾ ಬೇಂಕ್, ಲಿಮಿಟೆಡ್, ಮಂಗಳೂರು.

ನೋಟೀಸು.

1913ನೇ ಇಸವಿಯ ನಂಬ್ರ 7ನೇ ಇಂಡಿಯನ್ ಕಂಪೆನೀಸ್ ಆಕ್ಟಿನ 37ನೇ ಸೆಕ್ಷನಿಗೆ ಅನುಗುಣವಾಗಿ ಈ ಬೇಂಕಿನ ಮೆಂಬರರ ರಿಜಿಸ್ಟರು 1939ನೇ ಇಸವಿ ಜನವರಿ ತಾ 30ನೇ ಸೋಮವಾರದಿಂದ 1939ನೇ ಇಸವಿ ಫೆಬ್ರುವರಿ ತಾ 18ನೇ ಶನಿವಾರದ ವರೆಗೆ (ಉಭಯ ದಿವಸಗಳು ಕೂಡಿ) ಮುಚ್ಚಲ್ಪಡುವುದು

By order

Office of the Bank Mangalore 17-1-1939

P. Sarvotham Nayak
General Mangalore

ಮಾರೀಗುಡಿಗಳಲ್ಲಿ ಪ್ರಾಣಿಬಲಿ!

ಈ ವಿಷಯವಾಗಿ ನಮ್ಮ ಸರಕಾರದ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸೇರಿದ ಜೀವದಯಾ ಸಂಘದ ಸಭೆ (ಮದ್ರಾಸಿನಲ್ಲಿ) ಯಲ್ಲಿ ಅವರು ಈ ವಿಷಯವಾಗಿ, ಮದ್ಯನಿವಾರಣೆ ದೇವಳ ಪ್ರವೇಶ ಮೊದಲಾದುವಕ್ಕೆ ಕಾನೂನು ಮಾಡಿದಂತೆಯೆ ಈ ಪ್ರಾಣಿಬಲಿಯ ನಿವಾರಣಾರ್ಥವಾಗಿಯೂ ಕಾನೂನಾಗಬೇಕೆಂದು ಅವರಿಗೆ ಸೂಚಿಸಿಕೊಂಡುದಕ್ಕೆ ಉತ್ತರ ಕೊಟ್ಟರು. ಈ ಸಂದರ್ಭದಲ್ಲಿ ಮಹಾತ್ಮಾಜಿಯವರು "ಕಾಡು ಜನರ ಕ್ರಮಗಳಲ್ಲಿ ಇದೊಂದು ಇನ್ನೂ ಉಳಿದಿದೆ. ಮತದ ಹೆಸರಲ್ಲಿ ಪಶುಬಲಿಕೊಡುವುದು ಬಲಿಯೇ ಅಲ್ಲ" ಎಂದು ಸಂದೇಶ ಕಳಿಸಿದ್ದರು. ಶ್ರೀ. ಜವಾಹರಲಾಲರು—ದೇವಾಲಯವೆಂಬಲ್ಲಿ ಪ್ರಾಣಿಬಲಿ ಕೊಡುವುದನ್ನೂ ಕೇಳಿ ಸಂತಾಪಗೊಳ್ಳಬೇಕಾಗಿದೆ. ಈ ಬಲಿಗಳು ಧರ್ಮದ ಹೆಸರು ಕೆಡಿಸುವುವು, ಮನುಷ್ಯನನ್ನೂ ಹಾಳು ಮಾಡುವುವು, ದೇವಳಗಳ ಅಧಿಕಾರಿಗಳು ಉತ್ತಮರ ಮಾತುಗಳನ್ನು ಮನ್ನಿಸಿ, ಇಂತಹ ಬಲಿಗಳನ್ನು ತ್ಯಜಿಸುವರೆಂದು ನಂಬಿರುವೆನು" ಎಂದೂ ವಾರ್ತೆ ಬರೆದಿದ್ದರು.

ಮಂತ್ರಿ ಮುನಿಸ್ವಾಮಿ ಪಿಳ್ಳೆಯವರು—ಮಹಾ ದೇವಾಲಯಗಳಿಂದ ದೂರವಿರಬೇಕಾದವರು ಗ್ರಾಮದೇವತೆಗಳಿಗೆ ಬಲಿಕೊಡುವರು. ದೇವಳ ಪ್ರವೇಶದ ಕಾನೂನು ಎಲ್ಲ ಜಿಲ್ಲೆಗಳಿಗೂ ಅನ್ವಯಿಸುವಂತಾದರೆ, ಪಶು ಬಲಿಗಳು ನಿರ್ಮೂಲವಾಗುವುವು. ಹೆದ್ದಾರಿಗಳಲ್ಲಿ ಜಾನುವಾರುಗಳು ಉಪವಾಸವಾಗಿ ತಿರುಗುತ್ತಿವೆ. ಎರಡು ಸಾವಿರ ಎಕ್ರೆ ಹುಲ್ಲು ಬಯಲನ್ನು ಸರಕಾರವು ದನಗಳ ತಿರುಗಾಟಕ್ಕಾಗಿ ಪ್ರತ್ಯೇಕಿಸುವುದಾಗಿದೆ. ಮುಂದೆ ಪಶುಗಳು ಇಲ್ಲಿ ಸುಖವಾಗಿ ಜೀವಿಸಿ ಸಂತಾನವೃದ್ಧಿಯಾಗುವುದು. ಆವನ್ನು ಕಡಿಯುವ ಅಗತ್ಯವಿರದು ಎಂದರು.

ಶ್ರೀ ವಲ್ಲಿನಾಥರು—ಜೀವದಯಾಪೂರ್ಣ ತತ್ವಗಳನ್ನು ಜಗತ್ತಿಗೆ ಸಾರಿದ ಧರ್ಮಾಚಾರ್ಯರು ಹುಟ್ಟಿದ ದೇಶವಿದು. ಅಂತಹ ಸಾಮ್ರಾಜ್ಯ ಆಳಿದ ನೆಲವಿದು. ಹೀಗಿದ್ದರೂ ಈ ದುರ್ದಿನಗಳಲ್ಲಿ ಜೀವಿಗಳನ್ನು ಬಲಿಕೊಡುವರು. ಸರಕಾರವು ಈ ವಿಷಯವಾಗಿ ಕಾನೂನು ಜಾರಿಗೆ ತರುವುದು ಯೋಗ್ಯವೆಂದರು.

ಶ್ರೀ ಆಚಾರ್ಯರು

ಬಹುಕಾಲದಿಂದ ಇದೊಂದು ಪದ್ಧತಿ ನಡೆದು ಬಂದಿದೆ. ಇದನ್ನು ಆಕ್ಷೇಪಿಸುವವರೂ ಇರುವರು. ಇಂತಹದು ಜನರಲ್ಲಿ ಉತ್ತಮಾಭಿಪ್ರಾಯವನ್ನು ಅನುಕೂಲವಾಗಿ ಹರಡಿಸಿ ತಮ್ಮ ಮತ್ತು ದೇಶದ ಗೌರವವನ್ನು ಕಾಪಾಡಬೇಕಾಗಿದೆ.

ಪ್ರಾಣಿಗಳನ್ನು ಬಲಿಕೊಡುವ ಕಾರಣ, ತಮ್ಮ ಪಾಪಗಳು ಮಾಫಿಯಾಗುವುವೆಂದು ನಂಬಿದವರಿದ್ದಾರೆ. ಸ್ವಭಾವತಃ ಮನುಷ್ಯನು ಪ್ರಾಣಿಗಳಿಗೆ ಕ್ರೂರನಲ್ಲ. ಪಾಪವನ್ನು ಹೋಗಲಾಡಿಸುವುದು ಹೇಗೆಂದು ಆತನಿಗೆ ಆಗ ಬೋಧಿಸಿದವರಿಲ್ಲ. ಹಿಂದಿನವರು ಏನು ಮಾಡಿದ್ದರೋ ಅದನ್ನೇ ಅವನು ಕೈಕೊಂಡನು. ಒಂದು ಹಳ್ಳಿಯವರಂತೆ ಮತ್ತೊಂದು ಹಳ್ಳಿಯವರು ಮಾಡುತ್ತ ಬಂದರು.

ಸರಕಾರವು ಮಾಡುವ ಕಾನೂನುಗಳಲ್ಲಿ ಕೆಲವನ್ನು ಜನರು ಮೆಚ್ಚುವರು, ಕೆಲವನ್ನು ವಿರೋಧಿಸುವರು. ಇದೊಂದು ಕಾನೂನು ಮಾಡದಿರುವಲ್ಲಿ ಮಂತ್ರಿಪದವಿ ಬಿಡುವುದು ಯುಕ್ತವು ಎಂದು ಸಾರಿದವರೂ ಇದ್ದಾರೆ.

ಪೂಜಾಪದ್ಧತಿಯ ಸರಿಯಾದ ಅರ್ಥವು ಜನರಿಗೆ ತಿಳಿದಿಲ್ಲದ ಕಾರಣ ಹೀಗೆ ಮಾಡುವರು. ಪಶುಬಲಿ ಕೊಡಬಾರದೆಂದು, ಅಂತಹರು ಪಶುಬಲಿ ಕೊಡಲುದ್ಯುಕ್ತರಾದಾಗಲೇ ಬೋಧಿಸಬಾರದು. ಏಕೆಂದರೆ, ತಾವು ವಿಶ್ವಾಸದಿಂದ ಮಾಡುವ ಧರ್ಮ ಕಾರ್ಯವನ್ನು ಬೋಧಿಸುವವರು ಎದುರಿಸುತ್ತಾರೆಂದು ಅವರು ಎಂಬಾರು. ಈ ಬಲಿಯ ದಿನದ ಮೊದಲು ಅಥವಾ ತರುವಾಯ ಮಾತ್ರ ಬಲಿಗಳು ಸರಿಯಲ್ಲವೆಂದು ಸಾರಬೇಕು.

ಹಿಂದೆ ಧರ್ಮಜ್ಞರೂ ಸಾಮ್ರಾಜರೂ ಹೀಗೆಯೆ ಬೋಧಿಸಿರುವರು. ಈಗ ಜನಗಳು ಧರ್ಮಸಂಸ್ಥಾಪಕರಿಗಿಂತಲೂ ಸಾಮ್ರಾಜರಿಗಿಂತಲೂ ತಾವೇ ವಿವೇಕಿಗಳು ಎಂದು ಭಾವಿಸುತ್ತಾರೆ. ಆದರೆ ಇವರಿಗೆ ಅಷ್ಟು ಪ್ರಾಬಲ್ಯವಿಲ್ಲವೆಂದಾದರೂ ಜ್ಞಾನವಿದೆಯೆ? ಬಲಿತೊಡಗಿದವರಿಗೆ ಬೋಧಿಸತೊಡಗಿದರೆ, ಪಶುಬಲಿಯ ಬದಲಾಗಿ ನರಬಲಿಗಳಾಗುವ ಸಂಭವವುಂಟು.

ಸರಕಾರವು ಗಡಂಗುಗಳನ್ನು ಇಡಿಸಿ, ಮದ್ಯಮಾರಾಟದಿಂದ ಹಣ ದುಡಿಯುತ್ತಿತ್ತು. ಅದು ಅನ್ಯಾಯವೆಂದು, ಸರಕಾರವು ಮದ್ಯನಿವಾರಣೆ ಮಾಡಿತು. ಸರಕಾರವು ದೇವಸ್ಥಾನಗಳನ್ನು ಇಟ್ಟು ಪಶುಬಲಿ ಮಾಡಿಸಿ ಹಣ ದುಡಿಯುತ್ತಿಲ್ಲ. ಹೀಗಿರುವಾಗ, ಸರಕಾರವು ಈ ಪಶುಬಲಿಯ ನಿರ್ಮೂಲವನ್ನು ಕೂಡಲೆ ನಿಲ್ಲಿಸಲು ಶಾಸನ ಮಾಡಲಾರದು. ಮುರಾಧಿಪತಿಗಳೂ ದೇವಳಗಳ ಮೊಕ್ತೇಸರರೂ ಈ ಶಾಸನ ಮಾಡಬಹುದು. ಧಾರ್ಮಿಕ ಪದ್ಧತಿಗಳನ್ನು ಸರಕಾರವು ಶಾಸನ ಮಾಡಿ ನಿಲ್ಲಿಸಬಾರದು. ಮತವಿಷಯಗಳಲ್ಲಿ ಸರಕಾರವು ಕೈಹಾಕ್ಕುವುದಕ್ಕಿಲ್ಲ. ಮತದ ಹೆಸರಲ್ಲಿ ಆಗುವ ಬಲಿಗಳನ್ನು ತಡೆಯಲು ಸರಕಾರಕ್ಕೆ ಅಧಿಕಾರವಿಲ್ಲ. ಮೀನುಗಳನ್ನು ಗಾಳಹಾಕಿ ಎತ್ತಿ ಕೊಲ್ಲುವುದೂ ಜೀವದಯಾ ಸಂಘಗಳಿಗೆ ಹಾಳೆಂದು ತೋರದೆ? ಅದನ್ನು ತಡೆಯುವುದಕ್ಕಾಗುವುದೆ? ಅದು ಕುಂಗಳ ಮಾಂಸ ತಿನ್ನಬಾರದೆನ್ನುವುದಕ್ಕುಂಟೆ? ಸರಕಾರವು ಇಂತಹ ಕಸಾಯಿಖಾನೆಗಳನ್ನು ಇಟ್ಟು, ಅದು ಕುರಿಗಳನ್ನು ಮಾರುತ್ತಿದ್ದಾರೆ, ಅದನ್ನು ತಡೆಸಬಹುದಾಗಿತ್ತು. ಸಾರ್ವಜನಿಕ ಸ್ಥಳಗಳಲ್ಲಿ ಪಶುಬಲಿಯಾಗಬಾರದು ಎಂದು ಮೊದಲಾಗಿ ಸರಕಾರವು ಅಪ್ಪಣೆ ಕೊಡಬಹುದು. ಬಲಿಗಳಾಗದಂತೆ ನಡೆವ ಬೋಧನೆಯನ್ನು ತಡೆಯಬಾರದೆಂದೂ ಅಪ್ಪಣೆ ಕೊಡಬಹುದು.

ದೇವಳ ಪ್ರವೇಶ ಮಸೂದೆಯಾದರೂ, ಅಲ್ಲಲ್ಲಿನ ಜನಗಳ ಅಭಿಪ್ರಾಯದಂತೆ, ಪ್ರವೇಶ ಕೊಡುವಂತೆ ನಿರ್ದೇಶಿಸುವ ಮಸೂದೆ. ಪ್ರಜಾಭಿಪ್ರಾಯವು ಅನುಕೂಲವಾಗಿರುವಲ್ಲಿ, ಪಶುಬಲಿಯನ್ನೂ ನಿಲ್ಲಿಸಬಂದೀತು.

ಪಶುಬಲಿ ನಿವಾರಣೆಗಾಗಿ, ಪಶುಬಲಿಯ ಚಿತ್ರಗಳನ್ನು ಪ್ರಕಟಿಸುವುದು ಉತ್ತಮ ಸಹಕಾರಿಯಲ್ಲ. ಆ ಚಿತ್ರಗಳನ್ನು ನೋಡುವುದರಿಂದ, ಜನರಲ್ಲಿ ಪಶುಬಲಿಯ ಭೀಭತ್ಸತೆಯ ಭಾವನೆ ಮಾಯವಾದೀತು. ಆ ಚಿತ್ರಗಳನ್ನು ಪರಕೀಯರು ನೋಡಿ, ನಮ್ಮ ಸಂಸ್ಕೃತಿಯ ಹೆಸರನು ಕೆಡಿಸುವರು.

ಸರಕಾರವು ಮಾಡಿದ ಕಾನೂನುಗಳಿಂದ ಮಳೆ ಬರುವಂತಾಯಿತೆಂದು ಕೆಲವರು ಬರೆದಿರುವರ! ಮಳೆಬರುವಷ್ಟು ಜೋರಾದ ಕಾನೂನು ಮಾಡಲು ನನ್ನಿಂದಾಗುವುದಾದರೆ, ಪಶುಬಲಿ ನಿಲ್ಲಿಸಲೂ ನನ್ನಿಂದಾದೀತು.

ಪಶುಬಲಿ ಮಾಡುವವರಿಗಾಗಿ ಬೇರೇ ದೇವಾಲಯಗಳು ಇರುವುವು. ಪಶುಬಲಿ ಸ್ವೀಕರಿಸದ ದೇವರು ಇರುವ ದೇವಾಲಯಗಳನು ಕಟ್ಟಿಸಿಕೊಡುವುದುತ್ತಮ. ಪಶುಬಲಿ ಕೊಡದೆನ್ನುವವರು ಜಕ್ಕತೋಗಲಿ.

ಜೀವ ದಯಾಸಂಘವು ಕ್ರೂರಾತ್ಮರೆಂಬವರನ್ನು ಕೋರ್ಟಿಗೆ ತರುವುದರ ಮೂಲಕ ಹೆಸರು ಕೆಡಿಸಿಕೊಳ್ಳಬಾರದೆಂದೂ ಸೂಚಿಸುವವರಿದ್ದಾರೆ. ಪಶುಬಲಿ ಮಾಡಬೇಕೆನ್ನುವವರು ತಮ್ಮ ಮನೆಯಲ್ಲೇ ಬಲಿಕೊಟ್ಟರೇನು? ದೇವರು ಸರ್ವತ್ರವೂ ಇರುವನು. ದೇವಸ್ಥಾನಗಳ ಗೌರವವನ್ನು ಇವರೇಕೆ ಕೆಡಿಸಬೇಕು? ಪಶುಬಲಿಗಳಾಗದಂತೆ ಭಾಷಣ ಬೋಧನೆಗಳು ನಡೆಯಲಿ. ಸುಮಾರು ಹತ್ತುವರ್ಷಗಳಲ್ಲಿ ಪಶುಬಲಿಗಳು ನಿರ್ಮೂಲವಾಗುವುವು.

ಮದ್ಯಪಾನ ನಿವಾರಣೆಮಾಡುವಾಗ, ಮದ್ಯದ ಅಂಗಡಿಗಳ ಬದಲಾಗಿ ಕಾಫಿ ಇತ್ಯಾದಿ ಪಾನೀಯ ಸಿಗುವ ಅಂಗಡಿಗಳನ್ನು ತೆರೆದಂತೆ ಪಶುಬಲಿಯ ಬದಲಾಗಿ ಮತ್ತೇನು ಮಾಡಬಹುದೋ ಅದನ್ನು ಸೂಚಿಸಬಹುದಲ್ಲವೇ?

ಜನರ ಮತ ಬದಲಾಯಿಸುವಂತೆ ಮಾಡಲು ಸರಕಾರಕ್ಕೆ ಅಧಿಕಾರವಿಲ್ಲ. ಇದು ಹಿಂದೂ ಸರಕಾರವಲ್ಲ. ನಾನಾ ಮತದ ಪ್ರಜೆಗಳು ಸೇರಿರುವ ರಾಜ್ಯದಲ್ಲಿ ಒತ್ತಾಯದಿಂದ ಮತಪ್ರಚಾರ ನಡೆಯಬಹುದು

ದೇವಳ ಶುದ್ಧಿ

೧೯೩೭ನೇ ಮೇ ತಿಂಗಳಲ್ಲಿ ಕುಂಭಕೋಣದ ಶ್ರೀ ಮಹಾಲಿಂಗಸ್ವಾಮಿ ದೇವರ ಚಿನ್ನಾಭರಣ ಕದ್ದರು. ಅದಕ್ಕಾಗಿ ಈಗ ಅಲ್ಲಿ ಶುದ್ಧೀಕಾರ್ಯಗಳನ್ನು ಮಾಡುವರು

—ಒಂದು ವರ್ಷದ ವರೆಗೆ ಅಪವಿತ್ರವಾದುದೆಂಬ ದೇವಸ್ಥಾನದಲ್ಲಿ ಪೂಜಾರಾಧನೆಗಳು ನಡೆದುವೆ? ದೇವರು ಅಲ್ಲಿದ್ದನೆ? ಭಕ್ತರುಗಳು ಹೇಗೆ ಜೀವಿಸಿದರು

ನೋಟೀಸು

ಮಂಗಳೂರ್ರ ಡಿ। ಮು। ಕೋರ್ಟಿನಲ್ಲಿ

O S No 528/1938.

ಅಡ್ಯಾರ ಅಹಮ್ಮದ್ ಬ್ಯಾರಿ — **ವಾದಿ**

ಹಮ್ಮದ ಬ್ಯಾರಿ—ಹೈದ್ರೋಸ್ ಬ್ಯಾರಿಗಳ ಮಗ, ಮಂಗಳೂರು ತಾಲ್ಲೂಕು ಅಡ್ಯಾರ ಗ್ರಾಮಸ್ಥ } **ಪ್ರತಿವಾದಿ**

ಪ್ರತಿವಾದಿಯು ರೂಪಾಯಿ 100, ಕ್ಕೆ ಬರಕೊಟ್ಟ ಡಿ ಪ್ರೊ ನೋಟಿನ ಅಸಲು ಬಡ್ಡಿ ಖರ್ಚು ವಗೈರೆಯನ್ನು ವಸೂಲು ಮಾಡುವರೆ ವಾದಿಯು ಮಾಡಿದ ಮೇಲಿನ ವ್ಯಾಜ್ಯವು ತಾ 23 1 '39 ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ದಿವಸ ಬೆಳಿಗ್ಗೆ 11 ಗಂಟೆಗೆ ಪ್ರತಿವಾದಿಯು ಖುದ್ದಾಗಿ ವ ವಕೀಲ ಮುಖಾಂತ್ರವಾಗಿ ಮೇಲಿನ ಕೋರ್ಟಿನಲ್ಲಿ ಹಾಜರಾಗತಕ್ಕದ್ದು. ಇದಕ್ಕೆ ತಪ್ಪಿದರೆ ಸದ್ರಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು

A. Moosabba, B A, B L
ವಾದಿಕರ ವಕೀಲ.

ನೋಟೀಸು

ಕಾಸ್ರಗೋಡು ಡಿ। ಮು। ಕೋರ್ಟಿನಲ್ಲಿ

O S No 566/1938

ಮಂಜೇಶ್ವರ ಶ್ರೀಮದನಂತೇಶ್ವರ ದೇವರ ಭಂಡಾರದ ಟ್ರಸ್ಟಿಗಳು **ವಾದಿಗಳು**

ಮತ್ತು

ಅಬ್ಬ ಯಾನೆ ಪರಿಯ್ಯೆ ಬ್ಯಾರಿ—ಪಾತಿ ಹುಸಂಕುಂಞ ಬ್ಯಾರಿಗಳ ಮಗ ಕಾಸ್ರಗೋಡು ತಾಲೂಕು ಬಡಾಜೆ ಗ್ರಾಮದಲ್ಲಿರುವ } **ಪ್ರತಿವಾದಿ**

ಸದ್ರಿ ವ್ಯಾಜ್ಯದ ಪ್ರತಿವಾದಿ ಅಬ್ಬ ಯಾನೆ ಪರಿಯ್ಯೆ ಯವರಿಗೆ ಈ ಕೋರ್ಟು ಹುಕುಂ ಪ್ರಕಾರ ತಿಳಿಸುವದೇನೆಂದರೆ —

ನೀವು ತಾರೀಖು 9–9–1936ರಲ್ಲು ವಾದಿ ಭಂಡಾರಕ್ಕೆ ಬರಕೊಟ್ಟ ಚಾಲಗೇಣಿ ಚೀಟು ಪ್ರಕಾರ ನಿಮ್ಮಿಂದ ಸದ್ರಿ ಭಂಡಾರಕ್ಕೆ ಸಲ್ಲತಕ್ಕ ಗೇಣಿ ಬಾಕಿಗೂ ಆಸ್ತಿ ಸ್ವಾಧೀನಕೆ ಒಗ್ಗೆ ಕೂಡಾ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ 26—1—1939ಕ್ಕೆ ಇಟ್ಟಿರುತ್ತದೆ. ಆ ದಿವಸ ನೀವು ಖುದ್ದು ಯಾ ವಕೀಲರ ಮುಖಾಂತ್ರವಾಗಲೀ ನಿಮ್ಮ ಆಕ್ಷೇಪಗಳನ್ನು ಕೋರ್ಟಿಗೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ ವ್ಯಾಜ್ಯವು ನಿಮ್ಮ ಗೈರ ಹಾಜ್ರಿಯಲ್ಲಿ ತೀರ್ಮಾನವಾಗುವುದು.

Kasaragod 18 I—1939 | K. P. Anantha Rao, Advocate for plaintiff

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ ಪಂಡಿತರ

ಸದ್ವೈದ್ಯಶಾಲಾ ಪನ್ನೀರು

ಶೋಧಿತವಾದ ಗುಲಾಬಿ ಹೂಗಳಿಂದ ಶ್ರೇಷ್ಠವಾದ ರೀತಿಯಲ್ಲಿ ಎರಡು ಸಲ ಭಟ್ಟಿಯಿಳಿಸಿ ತಯಾರಿಸಲ್ಪಟ್ಟಿದೆ. ಮಿಶ್ರಣವು ಹಿಂದಿತವಾಗಿಯೂ ಇಲ್ಲ. ವಿಶೇಷವಾದ ತಲೆನೋವು, ಕಣ್ಣುರಿ ಕಣ್ಣುನೋವು ಇತ್ಯಾದಿ ವಿಕಾರಗಳಲ್ಲಿ ಈ ಪನ್ನೀರನ್ನು ಧೈರ್ಯವಾಗಿ ನೆತ್ತಿಗೂ ಕಣ್ಣಿಗೂ ಉಪಯೋಗಿಸಬಹುದು

ಬೆಲೆ: ನಂ ೧ 0-4-0 ನಂ. ೨ 0-6-0

ಹಿಮತೈಲ

ಶುದ್ಧವಾದ ತಿಲತೈಲಕ್ಕೆ ಅಮೂಲ್ಯ ಮೂಲಿಕೆಗಳನ್ನು ಸೇರಿಸಿ ಶಾಸ್ತ್ರೀಯವಾಗಿ ತಯಾರಿಸಿರುವ ತೈಲ. ಕೂದಲು ಬೆಳವಣಿಗೆಯನ್ನು ಹೆಚ್ಚಿಸಿ, ಕಣ್ಣುರಿ, ತಲೆತಿರುಗು, ಹೆಚ್ಚಿದ ಬಾಗೆಲಾಗೃದ್ಧಿಹೊಂದ ತಲೆನೋವು ಇತ್ಯಾದಿ ಪಿತ್ತವಿಕಾರಗಳನ್ನು ಶಮನಪಡಿಸುತ್ತದೆ

ಬೆಲೆ: ರೂ 1-0-0 ಮತ್ತು 0-6-0

ನಂಜನಗೂಡು ಸದ್ವೈದ್ಯ ಶಾಲಾ.

ಬ್ರಾಂಚ್: ರಥಬೀದಿ ಮಂಗಳೂರು

ಬಾಲ ಭಾಸ್ಕರ

ಅತಿ ಭಯಂಕರವೆನಿಸುವ ಮಕ್ಕಳ ವ್ಯಾಧಿಗಳಾದ, ಲಿವರ್ ಮತ್ತು ಪ್ಲೀಹದ ಬೆಳವಣಿಗೆ ರೋಗವನ್ನು ನಿವಾರಿಸುವ ಮತ್ತು ತಡೆಯುವ ಶಕ್ತಿ ಗುಣಗಳುಳ್ಳ ಔಷಧಿಯು.

ಎರಡು ವಿಧಗಳಲ್ಲಿ, ಎಂಟು ಪರಿಮಾಣಗಳಲ್ಲಿ ಎಲ್ಲಾ ದವಾಖಾನೆಗಳಲ್ಲಿ ಮಾರಾಟವಾಗುತ್ತದೆ

ಆಯುರ್ವೇದಾಶ್ರಮಂ ಮದ್ರಾಸು.

ಪ್ರವರ್ತಕರು:—ಅಮೀರ್‌ಚಂದ್ ಸೊಬಾಚಂದ್, ಮದ್ರಾಸು.

ಸೇಠ ಜಮನ್ನಾಲಾಲ ಬಜಾಜರ ಹೇಳಿಕೆ

ಫೆಬ್ರವರಿ ತಾ. ೧೨ರಲ್ಲಿ ಜಯಪುರವನ್ನು ಪ್ರವೇಶಿಸುವೆನು

ಜಯಪುರ ರಾಜ್ಯದ ಪ್ರಜಾಮಂಡಲದ ಅಧ್ಯಕ್ಷ ಸೇಠ ಜಮನ್ನಾಲಾಲ ಬಜಾಜರು ಈ ರೀತಿ ಹೇಳುವರು—'ನಾನು ಈ ರಾಜ್ಯದೊಳಗೆ ಪ್ರವೇಶಿಸಬಾರದೆಂಬ ನಿಷೇಧಕ ಆಜ್ಞೆಯನ್ನು ಸರಕಾರವು ಹಿಂದೆಗೆವುದಾಗಿ ನಂಬಿದ್ದೆನು ಹಾಗೆ ಮಾಡದೆ ಇದ್ದುದು ಮಾತ್ರವಲ್ಲದೆ, ಪ್ರಜಾಮಂಡಲವೇ ಕಾನೂನುಬಾಹಿರವಾಗಿದೆ ಎಂದು ಸರಕಾರವು ಅಪ್ಪಣೆ ಕೊಟ್ಟಿದೆ. ಪ್ರಜೆಗಳು ಯಾವ ತರದಲ್ಲೂ ಮಹಾರಾಜರ ಕೈ ಕೆಳಗೆ ಪ್ರಾತಿನಿಧ್ಯ ಹೊಂದಿ ರಾಜ್ಯಾಡಳಿತದಲ್ಲಿ ಭಾಗವಹಿಸದಂತೆ ಈಗ ಅವರಿಗೆ ತಿಳಿವಳಿಕೆ ಕೂಡ ಸಿಗದಂತಾಗಿದೆ.

ಪ್ರಜೆಗಳು ಜವಾಬ್ದಾರ ಸರಕಾರ ಹೊಂದುವ ಹಾಗೆ ಪ್ರಯತ್ನಿಸುವುದನ್ನು ಸೂಚಿಸುವುದು ಪ್ರಜೆಗಳಲ್ಲಿ ಯಾರಿಗೂ ಇರದ ಹಕ್ಕು ಎಂದೇ ಈ ಸರಕಾರದ ಆಜ್ಞೆಗಳ ಉದ್ದೇಶವಾಗಿದೆ. ಜನಾಂಗದ ಪ್ರಗತಿಯಲ್ಲಿ ಈ ಸೂತ್ರಕ್ಕೆ ಮನ್ನಣೆ ಸಿಗುವಂತಿಲ್ಲ.

ಸಂಘವು ಕೆಲಸಮಾಡದಂತೆ ಅದನ್ನು ಸರಕಾರವು ತಡೆಯಬಹುದು. [illegible] ಶಕ್ತಿಯನ್ನು ಮಾತ್ರ ಸುಲಭದಲ್ಲಿ ತಡೆಯಬರುವಹಾಗಿಲ್ಲ. ಸತ್ಯಾಗ್ರಹ ತತ್ವವೊಂದು ಇರುವ ಕಾರಣ, ಮಂಡಲವು ತನ್ನ ಚಳವಳವನ್ನು ನಡಿಸಬರುವುದಲ್ಲವೆ?

ಈಗಲಾದರೂ ಮಹಾರಾಜರೂ ಸರಕಾರವೂ ತಮ್ಮ ಅಪ್ಪಣೆಯನ್ನು ಹಿಂದೆಗೆಯಲು ಅನುಕೂಲವಿದೆ. ಹಾಗೆ ಮಾಡಲಾರದಿರುವಲ್ಲಿ ಪ್ರಜೆಗಳೆಲ್ಲರು ಮಂಡಲದ ವ್ಯಕ್ತಿಗಳಿಗೆ ಬೆಂಬಲ ಕೊಡುವರೆಂದೂ, ಜಯಪುರದ ಪ್ರಜೆಗಳೇ ಮಾತ್ರ ಈ ಚಳವಳದಲ್ಲಿ ಭಾಗ ವಹಿಸುವರೆಂದೂ ನಂಬಿರುವೆನು.

ಮಹಾತ್ಮಾಜಿಯವರೊಡನೆ ನನ್ನ ಮಾತುಕತೆಗಳಿಂದ ತಾ. ೧೨ರ ತನಕ ನಾನು, ಸರಕಾರವು ತನ್ನ ಅಪ್ಪಣೆ ರದ್ದುಗೊಳಿಸುವುದಾಗಿ ಕಾಯುತ್ತ, ಅನಂತರ ನಾನು ಅಪ್ಪಣೆಯನ್ನು ಉಲ್ಲಂಘಿಸಿ ನಡೆವೆನೆಂದೂ ತಿಳಿಸಿಯೇ ನಿರ್ಧಾರ ಮಾಡಿರುವೆವು.

ನೊವೆಂಬರದಲ್ಲೇ, ರಾಜ್ಯದ ಕೆಲವೆಡೆ ಉಂಟಾದ ಕ್ಷಾಮ ನಿವಾರಣೆಗಾಗಿ ಪ್ರಜಾಮಂಡಲವು ಕೆಲಸಮಾಡಬಹುದೆಂದೂ ಇತರ ಎಲ್ಲ ಚಟುವಟಿಕೆಯನ್ನೂ ನಿಲ್ಲಿಸುವುದೆಂದೂ ಸರಕಾರಕ್ಕೆ ತಿಳಿದೇ ಇತ್ತು. ಶಾಸನೋಲ್ಲಂಘನೆಯನ್ನು ಪ್ರಜಾಮಂಡಲವು ಮಾಡುವುದಿಲ್ಲವೆಂದೂ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ನಾನು ಯಾವ ಬಗೆಯಲ್ಲೂ ಸತ್ಯವನ್ನು ಮರೆಮಾಚುವವನಲ್ಲವೆಂದು ಸರಕಾರವು ತಿಳಿದೂ, ನನ್ನನ್ನು ವಿಚಾರಿಸದೆ, ಪ್ರಜಾಮಂಡಲವು ಶಾಸನೋಲ್ಲಂಘನೆ ಮಾಡುವುದೆಂದು ನಂಬಿತು! ನಾನು ರಾಜ್ಯದಲ್ಲಿದ್ದರೇ ಹೀಗಾಗುವುದೆಂದೂ ನಂಬಿತು. ನಾನು ಪರಕೀಯನಲ್ಲ, ಜಯಪುರದವನೇ.

ಪ್ರಜಾಮಂಡಲವು ೧೯೩೧ರಲ್ಲಿ ಸ್ಥಾಪನೆ ಹೊಂದಿತು. ೧೯೩೭ ಪುನರ್ಘಟನೆ ಹೊಂದಿದೆ. ಜಯಪುರದ ಪ್ರಮುಖರು ಸದಸ್ಯರಾಗಿರುವರು. ಯಾರೂ ಕಾನೂನು ಉಲ್ಲಂಘಿಸಿ ಇದುವರೆಗೆ ನಡೆದುದಿಲ್ಲ. ನಮಗೆ ಜವಾಬ್ದಾರ ಸರಕಾರ ಬೇಕು, ಜಯಪುರದ ಮಹಾರಾಜರೇ ನಮ್ಮನ್ನಾಳಬೇಕು. ಇಷ್ಟೆ ನಮ್ಮ ಕೋರಿಕೆಯಿದೆ.

ನಮ್ಮ ಕುಂದುಗಳನ್ನು ಹೋಗಲಾಡಿಸಿಕೊಳ್ಳುವುದರಲ್ಲಿ ಸರಕಾರವು ಸಹಾಯಮಾಡಬೇಕಾಗಿದೆ. ನಾವ್ಯಾರೂ ತೆರಿಗೆ ತೆರದೆ ಇರತಕ್ಕವರಲ್ಲ.

ಇಷ್ಟನ್ನು ತಿಳಿದೂ, ತಾ. ೧೨ರೊಳಗೆ ಸರಕಾರವು ಈಗ ಕೊಟ್ಟಿರುವ ಅಪ್ಪಣೆಗಳನ್ನು ರದ್ದುಮಾಡಲಾರದಾದರೆ, ನಾವು ಆತ್ಮಘಾತ ಮಾಡಿಕೊಳ್ಳುವ ಬದಲು, ನಮ್ಮ ಚಳವಳವನ್ನು ಮುಂದರಿಸದೆ ಇರಲಾಗುವುದಿಲ್ಲ.

'DILROZ' Regd

'Dil Roz' is a sure cure for Oriental sores, local sores, all kinds of deep rooted sores, skin eruptions, Pimples, Eczema, Ringworm, Sinus, Fistula, auxillary Abscess.

There is no need of dressing them and no are baths prohibited.

Price Rs. 2 Postage extra

TAHIR DIN

Anarkali LAHORE

· ಹೊಸ ಸಂಪುಟ ·

"ಸ್ವದೇಶಾಭಿಮಾನಿ"

ಈ ತಿಂಗಳಿಂದ ಹೊಸ ಸಂಪುಟದಾರಂಭ

★ ಸಂಪೂರ್ಣ ಹೊಸ ಹುರುಪಿನ ಲೇಖಸಂಗ್ರಹಗಳು ★

ಪ್ರತಿಯೊಂದೂ ಓದತಕ್ಕ ಅಗತ್ಯೆವಿಷಯ

ಚಂದಾದಾರರಾಗಿರಿ!

ರೈಲ್ವೆ ಗಾಡಿಗಳಲ್ಲಿ ಸ್ಥಳಸಂಕೋಚತೆಯ

ದೂರು ಹೇಗೆ ಇತ್ಯರ್ಥವಾದೀತು?

ರೈಲ್ವೆ ಗಾಡಿಗಳಲ್ಲಿ ೨೦ ಮಂದಿ ಕೂತುಕೊಳ್ಳಬಹುದಾದಾಗ, ೪೦ನ್ನು ತುಂಬಿಸುವ ಕ್ರಮವೊಂದು ಆಗಾಗ, ಎಲ್ಲ ಕಡೆಗಳಲ್ಲೂ ತೋರಿಬರುವ ಪ್ರತ್ಯಕ್ಷ ಸುಖ ಪ್ರಯಾಣ ಮಾಡಬೇಕೆನ್ನುವವರಿಗೆ ಬಹಳವಾದ ಹಿಂಸೆ, ಅಡಚಣೆ, ಅನಾನುಕೂಲತೆಗಳು ಉಂಟಾಗುತ್ತವೆ. ಇದನ್ನು ನಿವಾರಿಸುವುದಕ್ಕೆ ಯಾವ ಬಗೆಯಲ್ಲಿ ಸಾಧಿಸಬಹುದು?

ಮೊನ್ನೆ ಜಾನ್ನಿಯಲ್ಲಿ ಜಿ. ಐ. ಪಿ. ರೈಲ್ವೆ ಪ್ರಯಾಣ ಮಾಡುತ್ತ, ರೈಲ್ವೆ ಯೂನಿಯನ್ನಿನ ಸೆಕ್ರೆಟರಿಯವರೇ, ಎಕ್ಸ್‌ಪ್ರೆಸ್ ಟ್ರೈನು ಮುಂದರಿಯದಂತೆ ಗಾಡಿಯನ್ನು ಸರಪಳಿ ಎಳೆದು ನಿಲ್ಲಿಸಿದರು. ಇದರಿಂದ ಎರಡು ಗಂಟೆ ವಿಳಂಬವಾಗಿಯೇ ಗಾಡಿ ಮುಂದರಿಯಬೇಕಾಯಿತು. ಗಾಡಿಯಲ್ಲಿ ಜನಸ್ತೋಮ ಬಹಳವಾಗಿದ್ದ ಪ್ರಯುಕ್ತ ತಾವು ಹೀಗೆ ಮಾಡಿದುದೆಂದು ಅವರು ವಿವರಿಸಿದರು. ಅವರ ಮೇಲೆ ರೈಲ್ವೆಯವರು ಮೊಕದ್ದಮೆ ಹೂಡಿದರು.

ಮೆಜಿಸ್ಟ್ರೇಟರು—ರೈಲ್ವೆ ಟಿಕ್ಕೆಟಿನಲ್ಲಿ ಪ್ರಯಾಣಿಕರಿಗೆ ಸುಖವಾಗಿ ಪ್ರಯಾಣ ಮಾಡಲು ಸೌಕರ್ಯಗಳನ್ನು ಒದಗಿಸುವ ಕಾರಣವು ಇದ್ದ ಕಾರಣವೆ, ಗಾಡಿಗಳಲ್ಲಿ ಇಷ್ಟೇ ಮಂದಿ ಇರಬಹುದೆಂದು ಅವರು [illegible] ಆ ಸಂಖ್ಯೆಯನ್ನು ಮೀರಿ ಜನ ಸೇರಿದಲ್ಲಿ ಸೌಕರ್ಯ ಕೆಡುವುದು. ಅಂತಹ ಸಂದರ್ಭದಲಿ, ಗಾಡಿಯನ್ನು ತಡೆದು ಪ್ರಯಾಣಿಕನಿಗೆ ತನ್ನ ಸೌಖ್ಯಭಂಗ ಹೊಂದದ ರೀತಿಯಲಿ ಪತಿಸಲು ಬಂದ ಉಪಾಯವಾಗಿದೆ. ಆದುದರಿಂದ ಅವನ್ನು ಅಪರಾಧವಿಲ್ಲ. [illegible] ತೀರ್ಮಾನವಾಯಿತು.

—ಈ ತೀರ್ಮಾನವು ಕಾನೂನು ಪ್ರಕಾರವಾಗಿ ಸಹಜವೇ ಎನ್ನಬಹುದು. ಆದರೆ ಎರಡು ತಾಸು ಹಿಂದುಳಿದ ಎಷ್ಟೋ, ಕೆಲಸವನ್ನು ಕುರಿತು ಅವ ಭಾವಿಸಿಯಾದರೂ ಗಾಡಿಗಳಲಿ ಸುಗ್ಗಿ ಮುಂದರಿವ ಪ್ರಯಾಣಿಕರ ಸಂಖ್ಯೆ ಧಾರಾಳವಿರಬಹುದು. ಯಾವನೊಬ್ಬನು ತನ್ನ ಸೌಖ್ಯ ಕೆಡುವುದಾಗಿ ಗಾಡಿ ತಡೆದರೆ, ಬೇಗನೆ ಕೆಲಸಮುಟ್ಟಬೇಕು ತವಕಿಸುವ ಬಹಳವರಿಗೆ ಅನಾನುಕೂಲವಾಗದೆ? ಆಗ, ಈ ಒಬ್ಬ ಪ್ರಯಾಣಿಕನ ಸೌಕರ್ಯವು ಮಹತ್ವದ್ದಾದೀತೆ?

ಕೊನೆಗೆ ಮೊಂಬಾಯಿಯಲ್ಲಿಯೇ ಒಂದು ಗಾಡಿಯನ್ನು ನಾಲ್ಕು ತಾಸು ಹೀಗೆ ಪ್ರಯಾಣಿಕರು ತಡೆದರು. ೮ ಗಾಡಿಗಳ ಬದಲಾಗಿ ೪ ಗಾಡಿಗಳನ್ನು ಮಾತ್ರ ಟ್ರೈನಿಗೆ ಜೋಡಿಸಿದ್ದರಂತೆ. ಪ್ರಯಾಣಿಕರೆಲ್ಲರು ಕೂಡಲೆ ಗಾಡಿಯ ಮುಂದೆಯೂ ಮಲಗಿ, ಗಾಡಿ ಮುಂದರಿಯದಂತೆ ಮಾಡಿದರು. ಆದರೆ, ಈ ಗಾಡಿಯಲ್ಲಿ ಯಾವನೊಬ್ಬ ಮೋದಂಡ ಸ್ಥಿತಿಯ ಪ್ರಯಾಣಿಕನಿದ್ದದ್ದರೆ, ಅವನಿಗೆ ಸೆಂಟರ ಅಥವಾ ವೈದ್ಯರ ಬಳಿಗೆ ಸೇರಲು ಎಷ್ಟು ಅಡಚಣೆಯುಂಟಾಗುತ್ತಿತ್ತು?

ಒಬ್ಬನ ಸ್ವಾರ್ಥಕ್ಕಾಗಿ ಇಡೀ ಗಾಡಿಯನ್ನು ತಡೆಯಬಾರದು. ಸ್ಥಾನಾಭಾವ ದೂರು ಇದ್ದಾಗ ಅದನ್ನು ನಿವಾರಿಸಿಕೊಳ್ಳಬಹುದು.

ಅದೆಂತೂ ಇದ್ದರೂ,—ಪ್ರಯಾಣಿಕರ ಈ ಹಕ್ಕನ್ನು ಕುರಿತು ನಿರ್ದಿಷ್ಟವಾದೊಂದು ನ್ಯಾಯ ಸೂತ್ರವು ಹೊರಡುವುದು ಅತ್ಯಾವಶ್ಯಕವಾಗಿದೆ. ಇಲ್ಲದಿದ್ದರೆ, ಗಾಡಿಗಳನ್ನು ಕಾಲಕ್ಕೆ ಸರಿಯಾಗಿ ಹೊರಡಿಸುವ ಬದಲು, ಅದನ್ನು ತಡಿಸುವವರನ್ನು ಎದುರಿಸುವ ಬಂದು" ಹೊಸ ಅಪತ್ತು ಉಂಟಾಗಬಹುದಲ್ಲವೆ?

ಮುಸ್ಲಿಮ್ ಲೀಗಿನ ಎಂ. ಎಲ್. ಎ. ಶ್ರೀ ಹಬೀಬುಲ್ ಹಮೀದ್ ಖಾನರು ಕೊಂಗ್ರೆಸ್ ವಿಷಯವಾಗಿ ಮುಸ್ಲಿಮರಿಗೆ ಬೋಧಿಸಿದುದೇನು?

★

"೧೯೩೦ರಲ್ಲಿ ಕೊಂಗ್ರೆಸು ಸಮಸ್ತ ಜನರ ಸಹಾಯವಾಯಿತು. ಹಿಂದುಗಳೂ ಮುಸ್ಲಿಮರೂ ಧಾರಾಳ ಸಂಖ್ಯೆಗಳಲ್ಲಿ ಕೊಂಗ್ರೆಸನ್ನು ಸೇರಿದರು. ಜನಾಂಗದ ಹಿತಕ್ಕಾಗಿ ಸರ್ವರೂ ಹೋರಾಡಿದರು. ಸ್ವರಾಜ್ಯ ಯೋಜನೆಯೊಂದು ನೆಹರೂ ರಿಪೋರ್ಟ ಪ್ರಕಟವಾಗುತ್ತಲೇ, ಹಿಂದೂ ಮುಸಲ್ಮಾನರೊಳಗೆ ಭೇದ ಭಾವಗಳು ಮೊಳೆತವು. ಅಷ್ಟು ಬೆಳೆದೇ ಬಂದಿವೆ. ಈ ಭೇದ ಭಾವಗಳು 'ಜವಾಹರ ಮುಸಲ್ಮಾನ' ಶ್ರೀ [illegible] ಜನಾಂಗಿಕ ಸೇವಕರ, ಆದರೂ ಈ ಭೇದಗಳನ್ನು ನಿರ್ಮೂಲಿಸಲು ಅವರಿಂದಾಗಲಿಲ್ಲ.

'ಈ ಸಮಸ್ಯೆಯು ಇನ್ನು ಕಠಿನವಾಗುತ್ತ ಬರುತ್ತಲಿದೆ. ಇದನ್ನು ವ್ಯಾವಹಾರಿಕ ರೀತಿಯಲ್ಲಿ ಇತ್ಯರ್ಥಿಸಲು ಪ್ರಯತ್ನಗಳಾಗಲಿಲ್ಲ. ರಾಷ್ಟ್ರೀಯ ಮುಖಂಡರು ವಿಚಾರದಿಂದಲೂ ವಿವೇಕದಿಂದಲೂ ನಡೆದರೆ ಈ ಭೇದಗಳು ಉಳಿಯಲಾರವು. ಮುಸಲ್ಮಾನರ [illegible] ಕುರಿತಾಗಿ [illegible] ಮುಂತಾದ ಸಾಮಾಜಿಕ ಸ್ಥಿತಿಗಳಿಂದ, ಅವು ರಾಷ್ಟ್ರೀಯ ದೃಷ್ಟಿಯಲ್ಲಿ ಮಹತ್ವದವುಗಳಾಗಿ ತೋರದಿದ್ದರೂ, ಸ್ವಲ್ಪ ವಿವೇಕದಿಂದ ಅವನ್ನು ಆಲೋಚನೆಗೆ ತೆಗೆದುಕೊಳ್ಳುವುದರಲ್ಲಿ ನಷ್ಟವುಂಟೆ?

"ರಾಷ್ಟ್ರೀಯ ಮುಖಂಡರೊಳಗೆ ಸರ್ವರೂ ವಿಶ್ವಾಸದಿಂದ ಕಾಣಬಹುದಾದ ಮುಖಂಡರಾಗಿ ಶ್ರೀ ಜವಾಹರಲಾಲರು ಇರುವರು. ಇವರು ಯಾವ ಸಮಾಜದ ಸ್ವಾರ್ಥಪಕ್ಷಪಾತಿಗಳಲ್ಲ. ಇವರು ಈ ಸಮಸ್ಯೆ ಬಿಡಿಸಲು ಆಸಕ್ತಿ ಹೊಂದಿದರೆ, ನಾಳೆಗೇ ಎಲ್ಲವೂ ಇತ್ಯರ್ಥವಾದೀತು.

"ಈಗ ರಾಜಕೀಯರಂಗದಲ್ಲಿ ನಾನಾ ಧರ್ಮವಿಚಾರಗಳನ್ನು ತುರುಕಿಸಿ ಇಟ್ಟಿರುವರು. ಬೇರೆ ಬೇರೆ ಸಮಾಜಗಳ ಕೆಲ ಮಂದಿಗೆ ಹುದ್ದೆಗಳನ್ನು ಕೊಡುವುದರ ಮೂಲಕ ಇದೆಲ್ಲ ಇತ್ಯರ್ಥವಾಗಲಾರದು. ಈ ಹುದ್ದೆಗಳಿಂದ ಒಳ್ಳೇ ಕೆಲಮಂದಿಗೆ ಮಾತ್ರ ಹೊಟ್ಟೆ ತುಂಬುವುದು. ಇಡೀ ಜನಾಂಗಕ್ಕೆ ಇದರಿಂದೇನು ದೊರೆತೀತು?"

THE

Bank of Mangalore Ltd.,

MANGALORE.

ESTD 1931

Branches-

Panemangalore, Mudabidri & Padubidri.

Fixed Deposits will be received at following rates of interest.

For 3 months	3½%
6	4%
„ 12 „	5%
„ 24 „ & upwards	5½%

Interest Payable Quarterly

Saving Bank deposit 3½% on daily balances.

All kinds of banking business transacted

ಶಾಲಿವಾಹನ ಶಕೆ ೧೮೬೦ ನೇ ಬಹುಧಾನ್ಯ ಸಂವತ್ಸರದ ಮಾಘ ಶು| ೧ ಶನಿವಾರದಿಂದ ಮಾಘ ಶು| ೭ ಶುಕ್ರವಾರದ ವರೇಗಿನ ಪಂಚಾಂಗ. (ಗಣಿತವು ಮಕರ ಪುಯಂತೆಲ

21	ಶನಿ	೨೯	೩೭॥	ಶ್ರವಣಾ	೫೫॥	೭	[illegible]
22	ರವಿ	೩೦	೪೨॥	ಧನಿಷ್ಠಾ	೬೦	೮	
23	ಸೋಮ.	೧	೪೭॥	ಧನಿಷ್ಠಾ	೧॥	೯	
24	ಕುಜ	೨	೫೧	ಶತಭಿಷಾ	೩೧	೧೦	
25	ಬುಧ	೩	೫೨॥	ಪೂ ಭಾದ್ರಾ	೧೧	೧೧	
26	ಗುರು	೪	೫೪॥	ಉ ಭಾದ್ರಾ	೧೫	೧೨	
27	ಶುಕ್ರ	೫	೫೪॥	ರೇವತಿ	೧೭	೧೩	

THE PIE-MONEY BANK LTD,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars—**K R. GURU**, *Managing Director*

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ ಕೆ, ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ಹೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ಬೇಕಾದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದ ಸಂಗಾರಸಿಡುವ ಚೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಕೂಡಲೇ ಪೂರಾ ಪರೀಕ್ಷಿಸಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ದಾ ವೈದ್ಯ ಎಲ್ ಸಿ ಪಿ ಎಸ್, ಕಳುಹಿಸುತ್ತೇವೆ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಕ್ರಯ ರೂ ೪ ೦-೦ ವಿ ಪಿ ಅಂಚೆ

ವಿಳಾಸ ಸಂಜೀವಿನೀ ಔಷಧಾಲಯ ಮು. ಪೋ. ವಿರಾಜಪೇಟೆ, (S M. C.

The Canara Industrial & Banking Syndicate Limited.

(Incorporated in British India)

(Estd: 1925)

HEAD OFFICE. 'MUKUND NIVAS' UDIPI, INDIA

Member:

Reserve Bank of India, Bankers' ClearingHouse Bombay

Season Deposits Maturing Between 30th June and 15th July 1939 Are Accepted @ 3½% p. a

Banking Business of Every Description Transacted on Sound lines.

Particulars on application to any of our 35 Branches

THE

Canara Banking Corporation, Udipi, Ltd.

(INCORPORATED IN BRITISH INDIA)

ESTD 1906

MEMBER:—

Reserve Bank of India & Banker's Clearing House, Madras

Capital (Authorised, Issued & Subscribed	Rs. 3,50,000
Paid up Capital	Rs. 3,03,205
Reserves	Rs 3 88,842

Rates of Interest on Deposits:

3 months	2½% p a
6 or 9 months	3% p a
12 or 24 months	3½% p a
Short-Term	2% p a

All Kinds of Banking Transaction Undertaken.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ

ವೀರ್ಯರೋಗ, ಶರೀರದುರ್ಬಲತೆ ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ ಶರೀರಶಕ್ತಿಯನ್ನುಂಟು ಮಾಡಲು 2 ದಪ್ಪಿಗಳು ಸಾಕು 20 ಕೋಟೆಗಳ ದಪ್ಪಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ. ಎ. ಅಂಡ್ ಕೋ,

ಆಯುರ್ವೇದ ಸಮಾಜ ಪೆರ್ಡೂರು

P O Perdepi (ಪೆರ್ಡೂರು)

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲೆಂಟೈನ್

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,

ಗೋಕರ್ಣಕಟ್ಟೆ ಬಜಾರ್, ಮಂಗಳೂರು

ಡೋಂಗರೆ

ಇವರ

ಬಾಲಾಮೃತವು

ಮಕ್ಕಳ

ಹಲವು ವಿಧ ಅಸಹ್ಯವಾದ ರೋಗ, ಮತ್ತು ಒಳಜ್ವರ ಇವುಗಳನ್ನು ಗುಣಪಡಿಸಿ ಮಕ್ಕಳಿಗೆ ಪುಷ್ಟಿಯನ್ನು ಬಲವನ್ನೂ ಕೊಡುತ್ತದೆ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ರೂಪಾಯಿಗಳು ರಿಂದ	ರೂಪಾಯಿಗಳು ವರೆಗೆ
ಭತ್ತ ಅವ್ವಲ್ ತರದ ಗುಡ್ಡು ಮುಡಿಗೆ	1—10—0	—
,, ದುಯಂ ,, ,,	1—3—0	1—3—0
,, ಅವ್ವಲ್ ಸುಗ್ಗಿ ,,	1—10—0	—
,, ದುಯಂ ,, ,,	1—9—0	—
ಅಕ್ಕಿ ಅವ್ವಲ್ ಗುಡ್ಡು ,,	4—6—0	4—8—0
,, ದುಯಂ ,, ,,	4—2—0	3—14—0
,, ಅವ್ವಲ್ ಸುಗ್ಗಿ ,,	4—4—0	—
,, ದುಯಂ ,, ,,	4—0—0	4—0—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	36—0—0	44—0—0
,, ಸಿಪ್ಪೆ ಇದ್ದದು ,,	38—0—0	47—0—0
ಕೊಬ್ಬರಿ ಆಫೀಸು ಖಂಡಿಗೆ	51—0—0	—
,, ದಿಲ್‌ಪಸಂದ ,,	55—0—0	—
ತೆಂಗಿನ ಎಣ್ಣೆ ಮಣಕ್ಕೆ	8—6—0	8—6—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	3—4—0	4—0—0
ಗೇರುಬೀಜ ಮುಡಿಗೆ	3—8—0	3—12—0
ಕಬ್ಬಿನ ಬೆಲ್ಲ ಖಂಡಿಗೆ	35—0—0	40—0—0
ಒಳ್ಳೆಮೆಣಸು ಹಂಡ್ರಡ್ವೆಟ್ಟಿಗೆ	15—12—0	16—0—0

ಹಳ್ಳಿಯ ಪತ್ರ

ಲೇಖಕ: ಜಿ. ಎಸ್. ಕಲ್ಮಡ್ಕ.

ನಾನೊಂದು ಸಾರಿ ಒಂದು ಹಳ್ಳಿಯಲ್ಲಿ ತಿರುಗಾಡುತ್ತಿದ್ದೆ. ಅಲ್ಲಿ ಒಂದು ಚಿಕ್ಕ ಗುಡಿಸಲಿನಲ್ಲಿ ಒಂದು ಮಗುವಿಗೆ ವಾಂತಿಭೇದಿ ರೋಗವು ಹಿಡಿದಿತ್ತು. ನಾಲ್ಕು ದಿವಸಗಳಿಗೆ ಹಿಂದೆ ಆ ಮನೆಯಲ್ಲಿ ಒಂದು 'ಭೂತದ ಕೋಲ' ವಾಗಿ ಒಂದು ದೊಡ್ಡ ಔತಣ ಸಮಾರಂಭವಾಗಿತ್ತು. ಆದುದರಿಂದ ಮಗುವಿಗೆ ಬಲವಾದ ಅಜೀರ್ಣದಿಂದ ಈ ರೋಗವು ಪ್ರಾಪ್ತವಾಗಿತ್ತು.

ಮನೆಯ ಯಜಮಾನನು ಕೂಡಲೇ ಪಕ್ಕದ ಗ್ರಾಮಕ್ಕೆ ಓಡಿದನು. ಜೋಯಿಸರಿಗೆ ಕೈ ಮುಗಿದು ಬಿನ್ನವಿಸಿದನು. ಅಯ್ಯಾ—ಮೊನ್ನೆ ಆ ಜೋಯಿಸರ ಮಾತಿನಂತೆ ಕ್ರಮವಾಗಿ ಭೂತಗಳಿಗೆ ಹರಿಕೆಯನ್ನು ಸಲ್ಲಿಸಿದೆನು. 'ಕಲ್ಲುರ್ಟಿ' ಭೂತಕ್ಕೆ 'ಕೋಲ' ಕೊಟ್ಟೆನು. ಆದರೇನು ನಿನ್ನೆ ದಿನ ನನ್ನ ನಾಲ್ಕು ವರ್ಷದ ಮಗುವಿಗೆ ಕಠಿಣವಾದ ವಾಂತಿಭೇದಿ ರೋಗವು ಪ್ರಾರಂಭವಾಗಿ ಹಠಾತ್ತಗೆ ಹಿಡಿಯಿತು. ಇನ್ನೇನು ಹೇಳಲಿ ಬುದ್ಧಿ! ನೀವು ಒಂದು ಸರಿಯಾದ ಪಂಚಾಂಗ ತಯಾರಿಸಿ, ಎಂದು ಹೇಳುವಷ್ಟರಲ್ಲಿ ಜೋಯಿಸನು ನಡುವೆ ಬಾಯಿ ಹಾಕಿ, 'ಗೌಡರೇ' ಗಾಬರಿಪಡಬೇಡಿರಿ. ಅದು ಕಲ್ಲುರ್ಟಿ ಭೂತದ ಉಪದ್ರವವಲ್ಲ. ನಿಮ್ಮ ಮನೆಯ ಸಮೀಪ 'ಪಂಜುರ್ಲಿ' ಭೂತಸ್ಥಾನವಿದೆಯೋ?

ಗೌಡ —ಹೌದು.

ಜೋಯಿಸ —ಹಾಗಾದರೆ ನೀವು ಭೂತಸ್ಥಾನದಲ್ಲಿ ಮನಃಪೂರ್ವಕವಾಗಿ ಹರಿಕೆ ಹೇಳಿ ನಿಮ್ಮ ಹರಿಕೆಯಂತೆ ಅದನ್ನು ಸಂತುಷ್ಟಿಪಡಿಸಿದರೆ ಮತ್ತೆ ಯಾವ ಉಪದ್ರವವೂ ಇಲ್ಲ. ಆದರೆ ಗೌಡರೇ, ನೀವು ಮಗುವಿಗೆ ಲಘುವಾದ ಆಹಾರಗಳನ್ನೇ ಕೊಡತಕ್ಕದ್ದು. ನಾಳೆ ಅಗತ್ಯವಾಗಿ ಒಂದು ಸಾರಿ ನಮ್ಮ ಕಿಮ್ಮಣ್ಣಯ್ಯ ವೈದ್ಯರಿಗೆ ತೋರಿಸತಕ್ಕದ್ದು' ಎಂದು ಹೇಳಿ ಪಂಚಾಂಗವನ್ನು ಮುಗಿಸಿದರು. ಗೌಡರು ತೃಪ್ತಿಪಟ್ಟು ಮನೆಗೆ ಬಂದರು. ಪಂಜುರ್ಲಿ ಸ್ಥಾನದಲ್ಲಿ ಹರಿಕೆಯನ್ನು ಸಲ್ಲಿಸಿದನು. ಬೆಳಿಗ್ಗೆ ವೈದ್ಯರಲ್ಲಿಗೂ ಹೋದರು. ಔಷಧಿ ಹಾಗೂ ಆಹಾರದ ವಿಷಯದಲ್ಲಿ ಪಂಚಾಂಗದಲ್ಲಿ ಜೋಯಿಸರೂ, ವೈದ್ಯಕ್ಕೆ ಪಂಡಿತರು ಹೇಳಿದ್ದಕ್ಕೆ ವಿಶೇಷ ಶ್ರದ್ಧೆ ತಪ್ಪದ ಕ್ರಮದಲ್ಲಿ, ಗೌಡರಿಗೆ ಅವರಿಬ್ಬರ ಮಾತನ್ನು ವಿಸರಲು ಕೂಡದಾಯಿತು. ಹಾಗೆಯೇ ಮಾಡಿದರು. ಮಗುವಿಗೆ ದಿನದಿಂದ ದಿನಕ್ಕೆ ರೋಗವು ಕಡಿಮೆಯಾಯಿತು. ಎಂಟು ದಿನಗಳಲ್ಲಿ ಮಗುವು ಸ್ವಸ್ಥವಾಯಿತು.

ಹಳ್ಳಿಗಳಲ್ಲಿ ಈ ರೀತಿಯ ಘಟನೆಗಳು ಪ್ರತಿನಿತ್ಯವೂ ಎಂಬಂತೆ ನಡೆಯುತ್ತವೆ. ಆದುದರಿಂದ ರೋಗಬಾಧೆಗೆ ಆರೋಗ್ಯ ನಿಯಮೋಲ್ಲಂಘನೆಯೇ ಕಾರಣವಲ್ಲದೆ, ಭೂತಪ್ರೇತಗಳ ಬಾಧೆಯಿಂದಲ್ಲವೆಂದು ಖಂಡಿತವಾಗಿ ಹೇಳಬಹುದು.

ಹಳ್ಳಿಯ ಜೋಯಿಸರು ಭೂತಪ್ರೇತಗಳ ಕೋಪೋಪದ್ರವಕ್ಕೆ ಕಾರಣವನ್ನು ಹೇಳುವಾಗ ಆರೋಗ್ಯ ವಿಷಯವನ್ನೂ ಒಟ್ಟಿಗೆ ಉಪಾಯದಿಂದ ಬೋಧಿಸುತ್ತಾ ಬಂದರೆ, ಜನರಲ್ಲಿ ತುಂಬಿರುವ ಅಜ್ಞಾನಾಂಧಕಾರವು ಸ್ವಲ್ಪಸ್ವಲ್ಪವಾಗಿ ದೂರವಾಗಿ ಕೊನೆಗೆ ಸಂಪೂರ್ಣವಾಗಿ ನಾಶವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಆದುದರಿಂದ ಮೂಢ ಜನರಲ್ಲಿ ತುಂಬಿರುವ ಅಜ್ಞಾನಾಂಧಕಾರವನ್ನು ದೂರಮಾಡಲು ನಾಗರಿಕರಾದ (ತಿಳುವಳಿಕೆಯುಳ್ಳ) ಸಮಸ್ತರೂ ಬದ್ಧಕಂಕಣರಾಗತಕ್ಕದ್ದು. ಹೀಗೆ ಮಾಡಿದರೆ ಅನೇಕ ಶಿಶು ಬಾಣಂತಿಯರ ಮರಣಗಳು ಕೂಡಾ ತಪ್ಪುವುವಲ್ಲದೆ, ಆರೋಗ್ಯ ದೃಢಕಾಯರಾಗಿ ಬಾಳುವ ಆರೋಗ್ಯದ ಗುಟ್ಟು ಸಾಮಾನ್ಯ ಜನರಿಗೂ ತಿಳಿದು ಸುಖಸಂತೋಷದಿಂದ ಬಾಳುವಂತಾಗುವುದು. "ಆರೋಗ್ಯವೇ ಭಾಗ್ಯ" ಇದು ಆರೋಗ್ಯ ನಿಯಮ ಪರಿಪಾಲನೆಯಿಂದೊಂದರಿಂದಲೇ ಸಾಧ್ಯ.

FROM THE DIARY OF ANOPHELES

My name is Anopheles. I am neither Greek nor Egyptian, our race is international. We inhabit every continent and are feared everywhere. Anopheles! Our name sounds distinguished and shows the honourable position we occupy among our fellow-beings. And we are entitled to it too for our history extends back into the dim distant past.

There was a time when we were more powerful than kings and generals. Wherever we appeared we were feared like Death itself for our hosts knew how to defeat all enemies. Oh how I should like to have been with the swarms that beat Bonaparte in Italy or with those that chased Moghul Babar from the Punjab. Those were the days! When you could infect a whole army and give history a new unexpected twist. One Anopheles was able to frustrate the grandest of plans. And his strategy remained a secret. An Anopheles acts in twilight darkness, and our poison is invisible.

Nor have we remained idle during the last few centuries. Countless are the undertakings we have wrecked and the nations we have wiped out. In every field we spoil sports. In it Man continues to build and potter and enjoy himself and all at once I, Anopheles, turn up. Softly humming with pleasure I come gliding down, pick out a choice little spot, alight, gently bore an infinitesimal little hole in the fool's skin, ever so daintily, and my task is accomplished. In a second I demolish the work of years. And as I fly away then the fool wakes up and calls me a common name. He is getting mosquito bites. He thinks I am an ordinary mosquito, ha ha. He does not know that it is an Anopheles! But presently when he is trembling with fever he will think of me.

A great menace, however, has arisen for us. A fool can grow wise and succumb to the lure of Quinine, still before I, Anopheles have visited him. And where Quinine rules our supremacy is over. The Malaria Commission of the League of Nations recommends at present for preventing Malaria a daily dose of 6 grains of quinine to be taken during the entire fever season and for treating this malady a dose of 15 to 20 grains of quinine per day for 5 to 7 days. Against this power my poison is impotent.

And then my name will no longer be uttered with fear and trembling by the rich and poor, the young and old of all continents. Disconsolately I look forward to the day on which I shall record my last victim in this diary and I shall no longer be able to exclaim with the pride of our ancient race — My name is Anopheles.

[illegible]



BEARS SPECIALS

ಅಚ್ಚುಮೆಚ್ಚಿನವು

ಇಂದೇ ಉಪಯೋಗಿಸಿರಿ

ಅವು ಉತ್ತಮವಾದದ್ದು

—ಬೇರ್ಸ್ ಉತ್ತಮವಾದದ್ದು—

ಹತ್ತು ಸಿಗರೇಟುಗಳಿರುವ ಒಂದು ಪೆಟ್ಟಿಗೆಗೆ ಆಣೆ ಒಂದು
ಒಂದು ದುಗ್ಗಾಣಿಗೆ ಎರಡು ಸಿಗರೇಟುಗಳು

ಮಂತ್ರಿ ಮುತ್ಸದ್ದಿಗಳನ್ನು ಠಕಾಯಿಸಿದ

ಮಹಾ ಠಕ್ಕ—ಮುಖ್ಯಮಂತ್ರಿಯ ಭಾವನೆಂಟ!

ವಿಲಿಯಮ್ ಹೊರೆಸ್ ಡಿ ವೇರ್ ಕೋಲ್ ಎಂದು ನಾಮಾಂಕಿತನಾದ ಜಗತ್ಪ್ರಸಿದ್ಧ ಠಕ್ಕನು ಫ್ರಾನ್ಸಿನ ದಕ್ಷಿಣ ಭಾಗದ ಒಂದು ಕಡೆ ಮೊನ್ನೆ ತಾನೆ ತೀರಿಕೊಂಡನು. ಇವನು ನಮ್ಮ ಬ್ರಿಟಿಷ ಸಾಮ್ರಾಜ್ಯದ ಮುಖ್ಯ ಮಂತ್ರಿ ನೇವಿಲ್ ಚೆಂಬರಲೇನರ ಭಾವ ನೆಂಟ - ಅಂದರೆ ಹೆಂಡತಿಯ ತಮ್ಮ,

★

ವಿಲಿಯಮ್ ಕೋಲನು ಹಣಕಾಸುಗಳ ಸಂಪಾದನೆಗಾಗಿ ಇತರರನ್ನು ಠಕಾಯಿಸುತ್ತಿದ್ದಿಲ್ಲ. ಅವನಿಗೆ ಹಣಕಾಸುಗಳ ಆಗತ್ಯವಿರಲಿಲ್ಲ. ಅವನು ಕೇಂಬ್ರಿಜ್ ವಿಶ್ವವಿದ್ಯಾಲಯದ ಒಬ್ಬ ವಿದ್ಯಾರ್ಥಿಯಾಗಿಯೂ ಇದ್ದನು ಠಕಾಯಿಸುವುದೆಂದರೆ ಅವನಿಗೆ ಅದೊಂದು ವಿನೋದವಾಗಿದ್ದಿತು ವಿನೋದಕ್ಕಾಗಿಯೇ ಬಹುಮಂದಿ ರಾಜಮಹಾರಾಜರುಗಳನ್ನು ಮಂತ್ರಿ ಮುತ್ಸದ್ದಿಗಳನ್ನೂ, ಭಾರಿ ಭಾರಿ ಸ್ತ್ರೀ ಪುರುಷರನ್ನೂ ಠಕಾಯಿಸಿ ಪ್ರಪಂಚದ ಮಹಾ ಠಕ್ಕನೆಂದು ಹೆಸರು ಪಡೆದನು

ವಿದ್ಯಾರ್ಥಿಯಾಗಿದ್ದಾಗಲೇ ಆರಂಭ

ಕೋಲನು ವಿದ್ಯಾರ್ಥಿಯಾಗಿದ್ದಾಗಲೇ ಠಕಾಯಿಸಿ ವಿನೋದಪಡಲಿಕ್ಕೆ ಆರಂಭಿಸಿದ್ದನು. ೧೯೦೫ನೆ ಇಸವಿಯ ಮಾತು. ಆಗ ಅವನು ಕೇಂಬ್ರಿಜ್ ಯುನಿವರ್ಸಿಟಿಯಲ್ಲಿ ಓದುತ್ತಿದ್ದನು ಜಾಂಜಿಬಾರಿನ ಸುಲ್ತಾನನಂತೆ ವೇಷವನ್ನುಟ್ಟು ಕೊಂಡು ಅವನ ಒಂದು ದಿನ ಕೇಂಬ್ರಿಜಿನ ಪುರಪ್ರವೇಶಮಾಡಿದನು. ನಗರ ಸೆಟ್ಟರೂ ಇತರ ಪ್ರತಿಷ್ಠಿತ ಗೃಹಸ್ಥರೂ ಈ ನಕಲಿ ಸುಲ್ತಾನನನ್ನು ನಿಜ ಸುಲ್ತಾನನೆಂದೇ ತಿಳಿದು ಅವನಿಗೆ ಸಂಭ್ರಮದ ಸ್ವಾಗತವನ್ನು ಕೊಟ್ಟರು. ಅದರ ಸತ್ಕಾರಗಳು ಮುಗಿದ ಮೇಲೆ ಅವನನ್ನು ವಿಶ್ವವಿದ್ಯಾಲಯದ ಸಂದರ್ಶನಕ್ಕೆ ಕೊಂಡು ಹೋದರು. ತಾನು ಓದಿಕೊಂಡಿರುವ ವಿದ್ಯಾಲಯದ ಸಂದರ್ಶನಕ್ಕೆ ತನ್ನನ್ನೇ ಅವರು ಕರೆತರುವುದನ್ನು ನೋಡಿ ಅವನು ಮನಸ್ಸಿನಲ್ಲಿಯೇ ನಗುತ್ತಿದ್ದನು. ಆದರೆ ಪ್ರಕರಣವು ಮುಗಿಯುವ ವರೆಗೂ ಈ ರಹಸ್ಯವು ಒಬ್ಬನಿಗಾದರೂ ತಿಳಿಯಲಿಲ್ಲ

ಮೆಕ್ಡಾನಾಲ್ಡರಿಗೆ ಮೋಸ

ಕೋಲನು ದಿನುಗಳೆ ಎಷ್ಟು ಮೆಕ್ಡಾನಾಲ್ಡರ ಪ್ರತಿರೂಪನಾಗಿದ್ದನು. ಒಂದು ದಿನ ಅವನು ಮೆಕ್ಡಾನಾಲ್ಡರ ಊರಿಗೆ ಹೋಗಿ, ಅಲ್ಲಿ ಅವರ ಎದುರು ನೆರೆದಿದ್ದ ಸಭೆಯಲ್ಲಿ ತಾವೇ ಮೆಕ್ಡಾನಾಲ್ಡನೆಂದು ನಟಿಸಿ ಭಾಷಣ ಕೊಟ್ಟನು ಭಾಷಣ ವಿಷಯವು ಮೆಕ್ಡಾನಾಲ್ಡರ ತತ್ವಸಿದ್ಧಾಂತಗಳಿಗೆ ತೀರಾ ವಿರೋಧವಾಗಿದ್ದುದನ್ನು ಕಂಡು ಸಭಿಕರಿಗೆ ಬಹಳ ಆಶ್ಚರ್ಯವಾಯಿತು. ಕಾಲಾಂತರದ ಮುಂದಿನ ದಿವಸ ಮೆಕ್ಡಾನಾಲ್ಡರು ತಮ್ಮ ಹೆಸರಿನಂತೆ ಭಾಷಣ ಮಾಡಿದುದರಿಂದ ಅವರಿಗೆ ಮೆಕ್ಡಾನಾಲ್ಡರ ಮೇಲಿದ್ದ ಆದರ ಭಕ್ತಿ ವಿಶ್ವಾಸಗಳು ಹೋಗಿಬಿಟ್ಟವು ಕೋಲನು ಹೋದ ಮೇಲೆ ಮೆಕ್ಡಾನಾಲ್ಡರು ಬಂದರು. ಅವರಿಗೆ ಹಿಂದೆ ನಡೆದ ಸಂಗತಿಗಳನ್ನು ಕೇಳಿ ಆಶ್ಚರ್ಯವಾಯಿತು. ಮತ್ತೆ ಕೋಲನ ಮೋಸಗಾರಿಕೆಯು ಪ್ರಕಾಶಕ್ಕೆ ಬಂದಿತು

ಮತ್ತೊಮ್ಮೆ

ಪಿಕಾಡಿಲ್ಲಿ ಎಂಬುದು ಲಂಡನ್ನಿನ ವ್ಯವಹಾರ ಕೇಂದ್ರ ಅಲ್ಲಿದ್ದಷ್ಟು ವಾಹನ ಮತ್ತು ಜನಸಂಚಾರವು ಮತ್ತೆಲ್ಲಿಯೂ ಇರುವುದಿಲ್ಲ. ಒಂದು ಬಾರಿ ಕೋಲನು ರಸ್ತೆ ರಿಪೇರಿಮಾಡುವ ಕೂಲಿಯವನಂತೆ ವೇಷಹಾಕಿಕೊಂಡು ಅಲ್ಲಿಗೆ ಹೋದನು ಹಾರೆ ಪಿಕ್ಕಾಸು ತೆಗೆದುಕೊಂಡು ರಸ್ತೆಯ ಅಡ್ಡಕ್ಕೆ ಒಂದು ದೊಡ್ಡ ಹೊಂಡವಮಾಡಿದನು ಅದರಿಂದ ಅದರ ಎದುರು ಲೆಕ್ಕವಿಲ್ಲದಷ್ಟು ವಾಹನಗಳು ಬಂದು ಅಲ್ಲಿ ನಿಂತುಬಿಟ್ಟವು. ರಸ್ತೆಯನ್ನು ದಾಟಿಹೋಗಲಿಕ್ಕೆ ಇಲ್ಲ. ವಾಹನ ಸಂಚಾರಿಗಳು ಈ ಅನಾನುಕೂಲವನ್ನು ಹೇಗೆ ತಪ್ಪಿಸುವುದೆಂದು ಆಲೋಚಿಸುತ್ತಿರುವಾಗಲೇ ಕೋಲನು ಹಾರೆಪಿಕ್ಕಾಸು ಹೆಗಲ ಮೇಲೆ ಹಾಕಿಕೊಂಡು ಕಿಲಕಿಲ ನಗುತ್ತ ಹೊರಟುಹೋದನು!

ಎಮ್. ಪಿ.ಯೊಡನೆಯೂ ಸಾಹಸ

ಕಮಾಂಡರ್ ಲೋಕರ್ ಲಾಂಪ್ಸನ್ ಎಂಬವರು ಬ್ರಿಟಿಷ ಪಾರ್ಲಿಮೆಂಟಿನ ಸದಸ್ಯರು ಅವರು ಒಂದು ದಿನ ಅವಸರದಿಂದ ನಡೆದು ಹೋಗುತ್ತಿದ್ದರು. ಕೋಲನು 'ಓ, ಕಳ್ಳ, ಕಳ್ಳ, ಹಿಡಿ ಹಿಡಿ' ಎಂದು ಗಟ್ಟಿಯಾಗಿ ಕೂಗುತ್ತ ಓಡಿಬಂದ ಹತ್ತಿರ ಇದ್ದ ಪೋಲೀಸನು ಲಾಂಪ್ಸನ್ನರನ್ನು ಹಿಡಿದುಕೊಂಡನು. ಠಾಣೆಗೆ ಒಯ್ದರು ತಾನು ಕಳ್ಳನಲ್ಲ ಪಾರ್ಲಿಮೆಂಟು ಮೆಂಬರ ಎಂದು ಲಾಂಪ್ಸನ್ನರು ಎಷ್ಟು ಹೇಳಿಕೊಂಡರೂ ಪ್ರಯೋಜನವಾಗಲಿಲ್ಲ ಅವರ ಮೇಲೆ ಕಳ್ಳತನದ ಫಿರ್ಯಾದಿಯೇ ಆಗಲಿಕ್ಕಿತ್ತು ಮತ್ತೆ ಕೋಲನ ಎಂದು ಎಲ್ಲ ಸಂಗತಿಗಳನ್ನು ತಿಳಿಸಿ ಹೇಳಿಕೊಂಡ ಬಳಿಕ ಅವರನ್ನು ಬಿಡುಗಡೆ ಮಾಡಿತು.

ಮುಯ್ಯಿಗೆ ಮುಯ್ಯಿ.

ಎಷ್ಟೋ ದಿವಸಗಳ ನಂತರ ಅವರು ಗಡೆ ಹಿಂದಿನಷ್ಟೆ ಕೃತ್ಯಗಳಿಂದ ಮರುದಿನ ಕೋಲನು ಸತ್ತ ವಾರ್ತೆಯು ಲಂಡನ್ನಿನ ಒಂದು ವಾರ್ತಾ ಪತ್ರಿಕೆಯಲ್ಲಿ ಪ್ರಕಟವಾಯಿತು ಕೋರ್ಟ ಪ್ರದರ್ಶನದ ಕಾಗದಗಳು. ಕೋಲನ ತಲೆಯಲ್ಲಿ ಸುರಿದಗಟ್ಟಲೆಯಿಂದ ಬಂದವು ಮಹಾ ಠಕ್ಕನನ್ನು ಠಕಾಯಿಸಿದ ಠಕ್ಕ ಲಾಂಪ್ಸನ್ನ ಎಂದು ಕೋಲ ನಕ್ಕನು

ಅಬಿಸೀನಿಯದ ಚಕ್ರವರ್ತಿಯಂತೆ

ಇನ್ನೊಂದು ದಿನ ಕೋಲನು ಅಬಿಸೀನಿಯದ ಚಕ್ರವರ್ತಿಯಂತೆ ವೇಷಹಾಕಿಕೊಂಡು ಅವನಿಗೆ ಡ್ರೆಡ್ನಾಟ್ ಎಂಬ ಇಂಗ್ಲಿಷ ಯುದ್ಧ ಹಡಗನ್ನು ನೋಡಬೇಕೆಂಬ ಆಸೆ ಆಗಿದ್ದಿತು. ಚಕ್ರವರ್ತಿಯ ವೇಷದಲ್ಲಿದ್ದ ಕೋಲನು ತನ್ನ ಪರಿವಾರ ಸಮೇತ ಹಡಗನ್ನು ಹತ್ತಿ, ರಾಜಯೋಗ್ಯ ಸನ್ಮಾನ ಪಡೆದು ಹಿಂದಿರುಗಿದನು.

ಐದುವರ್ಷಗಳಿಂದಲೂ ನಿದ್ದೆಯಿಲ್ಲ

ಮೆಸೆಚುಸೆಟ್ಸಿನಲ್ಲಿ ಒಲಿವರ್ ಎಂಬವನು ಸ್ವಾಂತ್ಯದಲ್ಲಿ ಇರುವ ಸಣ್ಣ ಊರಿನ ಒಬ್ಬ ಮುದುಕನಿದ್ದನೆ. ಇಂಗ್ಲೆಂಡಿನ ಇಸವಿಲ್ಲಿ ಯಾವುದೋ ಒಂದು ಮಾಸಪತ್ರಿಕೆಯಲ್ಲಿ ಯಾರೂ ಒಂದು ದಿನಗಳ ವರೆಗೆ ನಿದ್ದೆಯಿಲ್ಲದೆ ಜೀವಿಸುತ್ತಿರಲು ಶಕ್ತರಾಗಿಲ್ಲವೆಂಬುದಾಗಿ ಓದಿದ್ದನು. ಈ ಮಾತನ್ನು ಸುಳ್ಳೆಂದು ತೋರಿಸಬೇಕೆಂದು ಇವನು ಹಟತೊಟ್ಟನು. ದಿನಕ್ಕೆ ಒಂದೇ ಒಂದು ತಾಸಿನ ನಿದ್ದೆಯ ಕ್ರಮವನ್ನು ರೂಢಿಮಾಡಿ ಹಲವು ದಿನಗಳ ವರೆಗೆ ಕೆಲಸಮಾಡಿದನು. ಒಲಿವರ ನಿದ್ರಾದೇವಿಯು ಈ ಹಟಮಾರಿಯನ್ನು ಬಿಟ್ಟು ಹೋಗಿ ಇಂದಿಗೆ ಐದು ವರ್ಷಗಳು ಕಳೆದವು ಈಗ ಈ ಮಹಾಶಯನು ತನ್ನೀ ವೃದ್ಧಾಪ್ಯಕಾಲದಲ್ಲಿ ನಿದ್ರಾದೇವಿಯು ಕೃಪಿಸಿ ಓಡಿಹೋದಳಲ್ಲ ಎಂದು ಅಹೋರಾತ್ರಿ ಚಿಂತಿಸುವುದರಲ್ಲೇ ಕಾಲಕಳೆಯುತ್ತಿರುವನು

ಹಟಮಾರಿತನವು ಘಟಸರ್ಪದ ಕಡಿತದಷ್ಟು ಹಾನಿಕರವೇ?

ಅದು ಭಯಂಕರವಾದ ವ್ರಣವಾಗಿ ಪರಿಣಮಿಸುವುದೆ?

ನಿಮ್ಮ ಚರ್ಮವ್ಯಾಧಿಗಳನ್ನು ಜ್ಯಾಂಬಕನಿಂದ ನಿವಾರಿಸಿರಿ.

ಆ ಸಣ್ಣಸಣ್ಣ ಕಜ್ಜಿಯ ಗುಳ್ಳೆಗಳು ದೊಡ್ಡ ವ್ರಣಗಳಾಗಿ ಪರಿಣಮಿಸಬಹುದಾದ ಭಯಂಕರವಾದ ರೋಗಗಳ ಚಿಹ್ನೆಯಾಗಿರುತ್ತವೆ ಆದುದರಿಂದ ಅವರ ಮೇಲೆ ಜ್ಯಾಂಬಕನ್ನು ಸವರಿ ಚರ್ಮವನ್ನು ಆರೋಗ್ಯವಾಗಿರಿಸಿ. ಜ್ಯಾಂಬಕಿನಲ್ಲಿರುವ ವನಸ್ಪತಿ ತೈಲವು ಕ್ರಿಮಿ ಜಂತುಗಳನ್ನು ಪ್ರವೇಶಿಸಿ ನೋವನ್ನು ಶಮನಗೊಳಿಸುತ್ತದೆ ಉರಿಯನ್ನು ಮತ್ತು ಕೆಂಪಾಗಿ ಪರಿಣಮಿಸಬಹುದನ್ನು ಕಡಿಮೆ ಮಾಡುತ್ತದೆ ಜ್ಯಾಂಬಕ್ ವ್ರಣಗಳಿಂದ ಹೊರಡುವ ಕೆಟ್ಟ ನೀರನ್ನು ಹಿಂಗಿಸುತ್ತದೆ ಮತ್ತು ಒಂದು ಕಲೆಯೂ ಉಳಿಯದಂತೆ ಗುಣಪಡಿಸುತ್ತದೆ ಎಲ್ಲಾ ವ್ಯಾಪಾರಸ್ಥರು ಜ್ಯಾಂಬಕನ್ನು ಡಬ್ಬಾ 1—0—0 ಡಬ್ಬಿ 1—0ರಂತೆ ಮಾರುತ್ತಾರೆ

ಏಜಂಟ್ಸ್: ಮೆಸರ್ಸ್ ದಾದಾ ಮತ್ತು ಕಂಪನಿ, ಪಾರ್ಕ್ ಟೌನ್, ಮದರಾಸು.

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

ಲೋಧ್ರ

ಗರ್ಭಾಶಯ ರೋಗನಿವಾರಿಣಿ

ಹೆಂಗಸರಿಗೊಂದು ವರದಾನ

ಲೋಧ್ರ

1—10—0

ಕೇಸರಿ ಕುಟೀರಂ

ರಾಯಪೇಟ್ಟ, ಮದ್ರಾಸು

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ

ಜಮ್ಮಿ ವೆಂಕಟರಮಣಯ್ಯ

ಲಿವರ್ ಮತ್ತು ಸ್ಪ್ಲೀನ್ ಸ್ಪೆಷಿಯಾಲಿಸ್ಟ್ಸ್

ಮೈಲಾಪುರ, ಮದ್ರಾಸು

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ

ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store,
28 Meachua Bazar St, CALCUTTA

ವಿಶ್ರಾಂತಿ ಮತ್ತು ಸ್ಥಿರತೆಗೋಸ್ಕರ

ನೀವು ಪೂರ್ಣ ವಿಶ್ರಾಂತಿ ಮತ್ತು ಸ್ಥಿರತೆಯನ್ನು ಹೊಂದಲು ಇಚ್ಛಿಸುವ ವಸ್ತುಗಳಲ್ಲಿ ಟೀಯು ಸರ್ವಶ್ರೇಷ್ಠವಾದುದು. ಸ್ನೇಹಜನರ ಗೋಷ್ಠಿಯಲ್ಲಿ ಟೀಯು ಆನಂದೋತ್ಸಾಹಗಳನ್ನು ಕೊಡುವ ಸಾಧನವು ಜೀವನದ ಕೆಲಸಗಳನ್ನು ಅನುಭವಿಸಲು ಟೀಯೇ ಉತ್ತಮಸಾಧನವು. ಟೀಗಿಂತ ಹೆಚ್ಚಾದ ಉತ್ತಮ ಸಾಧನ ವಸ್ತುವು ಮತ್ತೊಂದಿಲ್ಲ. ಟೀ ಕುಡಿದು ಸ್ಥಿರತೆಯನ್ನು ಹೊಂದಿರಿ.

ಟೀ ತಯಾರಿಸುವ ವಿಧಾನ

ಶುದ್ಧವಾದ ನೀರನ್ನು ಕುದಿಸಿರಿ. ಕಾಯಿಸಿದ ... (ಪಿಂಗಾಣಿ) ... ಟೀ ... ತಕ್ಕ ... ಇಂಡಿಯಾದ ಟೀ ಸೊಪ್ಪನ್ನು ... ಐದು ನಿಮಿಷಗಳ ... ಹಾಲು ಸಕ್ಕರೆ ಬೆರಸಿರಿ.

ಇಂಡಿಯದ ಆನಂದ ಮತ್ತು ಹೆಮ್ಮೆಯ ನೆಲೆ ಇಂಡಿಯದ ಟೀ

ಇಂಡಿಯನ್ ಟೀ ಮಾರ್ಕೆಟ್ ಎಕ್ಸ್‌ಪ್ಯಾನ್ಷನ್ ಬೋರ್ಡಿನವರಿಂದ ಪ್ರಕಟಿಸಲ್ಪಟ್ಟದ್ದು IK 109

ಇಟೆಲಿ-ಬ್ರಿಟನ್ನು ಸಂಧಾನ

ಚೇಂಬರ್ಲೇನರು ತಮ್ಮ ಭೇಟಿ ಮುಗಿಸಿ ಲಂಡನಿಗೆ ತೆರಳುವಾಗ, ಮುಸೊಲಿನಿ ಮುಖ್ಯ ಅಧಿಕಾರಿಗಳೊಡಗೂಡಿ ಅವರ ವಿದಾಯ ವಂದನೆ ಮಾಡಿದರು. ಕೊನೆಯ ತನಕವೂ ರೈಲು ಬಿಡುವ ವರೆಗೆ ಇಬ್ಬರು ಮಹನೀಯರು ಸಂಭಾಷಣೆ ಮಾಡುತ್ತಲಿದ್ದರು. ಸ್ವಾಗತವಿದಂದಿನಿಂದಲೂ ಹೆಚ್ಚಿನ ಪ್ರೀತಿ ವಿದಾಯಕಾಲದಲ್ಲಿ ಪ್ರದರ್ಶಿತವಾಯಿತು.

ಯೆಹೂದ್ಯರನ್ನು ಅನಾಥರಾಗಿ ಹೋಗದಂತೆ ಅವರಿಗೆ ಆಶ್ರಯ ಸಿಗುವ ಹಾಗೆ ಮಾಡುವ ಮಾತುಕತೆಗಳು ತೃಪ್ತಿಕರವಾಗಿ ಮುಗಿದಂತೆ ಬ್ರಿಟಿಷ ಮುತ್ಸದಿಗಳು ಅಭಿಪ್ರಾಯಪಟ್ಟಿರುವರು. ಮುಂದೆ ಇಟೆಲಿಯ ರಾಜ್ಯವಿಸ್ತಾರ ಮೊದಲಾದ ವಿಷಯಗಳಾವುವೂ ಸ್ಪಷ್ಟವಾಗಿ ತಿಳಿದಿಲ್ಲವೆಂದೂ ಟ್ಯುನಿಸ್, ಜಿಬೂತಿ, ಅಥವಾ ಸುಯೇಜ್ ವಿಷಯ ಯಾವ ಮಾತೂ ಎತ್ತಿದಿಲ್ಲವೆಂದೂ ಸಹ ತಿಳಿದುಬರುತ್ತದೆ.

ಮುಸೊಲಿನಿಯವರು ಬ್ರಿಟಿಷರೊಡನೆ ಸಂಧಾನವಾದುದನ್ನು ಎಂದೂ ಮುರಿಯುವುದಿಲ್ಲವೆನ್ನುವಷ್ಟು ಚೆನ್ನಾಗಿ ಪದೇಪದೇ ದೃಢಪಡಿಸಿರುವರೆಂದೂ ತಿಳಿದುಬಂದಿದೆ. ಸ್ಪೈನಿನ ವಿಷಯದಲ್ಲೂ ಬ್ರಿಟಿಷರು ಕೈಕೊಂಡಿರುವ ನೀತಿಯನ್ನು ಒಪ್ಪಿ, ಇಟೆಲಿಯು ಪ್ರಗತಿಪರವಾಗಿ ಸಾಧಿಸಿ, ತನ್ನ ಮತ್ತು ಸಹಾಯಕರುಗಳಲ್ಲಿನ ಅಧಿಕಾರವನ್ನು ಸುರಕ್ಷಿತಗೊಳಿಸಬೇಕಾಗಿ ಒಪ್ಪಿರುವರು.

ಹೊಸ ಕರಾರುಗಳೇನೂ ಆದಹಾಗಿಲ್ಲ. ಆದರೆ, ಭೇದಾಭಿಪ್ರಾಯ ಬರುವಹಾಗೆ ಯಾವ ಪ್ರಸ್ತಾಪವೂ ಅಲ್ಲಿ ಉಂಟಾದುದಿಲ್ಲ. ಮಾತ್ರವಲ್ಲ ಮುಸೊಲಿನಿಯವರು ತಾವಾಗಿ ಯಾವ ಪ್ರಶ್ನೆಯನ್ನೂ ಆಲೋಚಿಸದೆ ಎಲ್ಲ ವಿಷಯಗಳನ್ನು ವಿವರಿಸಿದಂತೆ ಪ್ರಕಟವಾಗಿದೆ.

ಅಂತೂ ಎರಡೂ ರಾಜ್ಯಗಳಲ್ಲಿ ವ್ಯಾಪಾರಾದಿ ಅಭಿವೃದ್ಧಿಗೆ ಸಾಧನೆ ಮುಂದೆ ನಡೆಯುವುದೇ ಹೊರತು ಶಾಂತಿಭಂಗವಾಗಿ ನಷ್ಟಹೊಂದುವಾರದೆಂದು ವಿಶೇಷ ಅಭಿಪ್ರಾಯವಾಗಿದೆ.

ಬ್ರಿಟಿಷರು ಫ್ರಾನ್ಸು ಇಟೆಲಿಗಳ ಮಧ್ಯೆ ಸಮಾಧಾನವುಂಟಾಗದಂತೆ ಸಾಧನೆ ನಡೆವುದಕ್ಕೆ ಹವಣಿಸುತ್ತಾರೆ. ಫ್ರಾನ್ಸು ವಿಹಿತವಾಗಿ, ಇಟೆಲಿಯೊಡನೆ ಮೈತ್ರಿಯು ಬ್ರಿಟಿಷರಿಗೆ ಒಪ್ಪುವುದಿಲ್ಲ, ಜರ್ಮನಿ ಇಟೆಲಿಗಳು ಒಂದಾಗುವಾರದೆಂದು ಬ್ರಿಟಿಷರೆನ್ನುತ್ತಿಲ್ಲ. ಫ್ರಾನ್ಸು ಇಂಗ್ಲೆಂಡುಗಳು ಪ್ರತ್ಯೇಕವಾಗಬಾರದೆಂದು ಆಸೆಯಿದೆ.

ಮೆಡಿಟರೇನಿಯನ್ನಿನಲ್ಲಿ ಇವೆರಡು ರಾಜ್ಯಗಳೊಳಗೆ ಇರುವ ಅಧಿಕಾರ ಹಕ್ಕು ಮೊದಲಾದುವನ್ನು ರಕ್ಷಿಸಿಕೊಳ್ಳುವ ಏರ್ಪಾಡು ಆಗುವುದಕ್ಕಾಗಿ ಇಟೆಲಿಗೆ ಬ್ರಿಟನ್ನು ಸಮಾನತೆ ಕೊಟ್ಟಿದೆ ಮಾತ್ರವಲ್ಲದೆ, ರೆಡ್‌ಸೀಯಲ್ಲಿ ಇತರ ಯಾವ ಸರಕಾರಕ್ಕೂ ಹೆಚ್ಚಿನ ಅಧಿಕಾರ ಸಿಗಬಾರದೆಂದೂ ಹೇಳಿಯದೆ.

ಇಟೆಲಿಗೆ ಫ್ರಾನ್ಸು ಕೊಡಬೇಕಾದ ... ಸಂಧಾನದ ಮೊದಲನೇ ಕರಾರು ... ನಡೆದಿದೆ ... ಯುದ್ಧವಾಗಬೇಕೆಂದೇನೂ ಅರ್ಥವಲ್ಲ ... ಕರಾರುಗಳು ಆಗಬೇಕೆಂದು ಇಟೆಲಿಯ ಅಭಿಪ್ರಾಯವಾಗಿದೆಯಂತೆ.

ಫ್ರಾಂಕೊರ ಸ್ಪೈನ್ ಸರಕಾರಕ್ಕೆ ಸಹಾಯ ಮಾಡದಿದ್ದರೆ, ಇತರ ಯಾವತ್ತು ಪ್ರಶ್ನೆಗಳನ್ನು ಸುಲಭವಾಗಿ ತೀರ್ಮಾನಿಸಬಹುದೆಂದೂ ಸೂಚಿಸಿಯದೆ. ಫ್ರೆಂಚರಿಗೆ ಚೇಂಬರ್ಲೇನರು ಸ್ವಲ್ಪ ಬುದ್ಧಿವಾದ ಹೇಳಲೆಂದು ಮುಸೊಲಿನಿಯು ಸೂಚನೆಯಾಗಿದೆಯೆನ್ನುವರು. ಫ್ರೆಂಚರು ಮೊದಲಾದ ಸ್ನೇಹಿತರು ಹಿಂದಿರುಗದಿದ್ದರೆ ಇಟೆಲಿಯೂ ತನ್ನವರನ್ನು ಸ್ಪೈನಿನಿಂದ ಹಿಂದೆ ಕರೆವರೆಂದೂ ಪತ್ರಿಕೆಗಳ ಸಿದ್ಧತೆ.

ಸುಯೇಜ್ ಕಾಲುವೆಯ ವಿಷಯ ಸರಕಾರಗಳು ಮನಬಂದಂತೆ ವರ್ತಿಸಬಾರದು ಎಂದು ಕಾಲುವೆಯ ಅಧಿಕಾರಿಗಳಲ್ಲಿ ಹಲವರು ಹೇಳಿದ್ದಾರೆ.

ಇನ್ನು ಕೆಲದಿನಗಳಲ್ಲಿಯೇ ಪುನಃ ಚೇಂಬರ್ಲೇನರು ಇಟೆಲಿಗೆ ಹೋಗಲಿರುವರೆಂದೂ ತಿಳಿಸಲಾಗಿದೆ.

"ಚಿತ್ರಗುಪ್ತ"

ತೆಲುಗು ಪತ್ರಿಕೆಯಲ್ಲಿ ಪ್ರಕಟ ಚಿತ್ರ

ಹೈದರಾಬಾದಿನ ನಿಜಾಮರ ಸರಕಾರದ ಸಮ್ಮತಿಯನ್ನು ... ಆ ಪತ್ರಿಕೆಯಲ್ಲಿ ಒಂದು ಚಿತ್ರ ಪ್ರಕಟವಾಗಿದೆ. ಮದ್ರಾಸಿನ ಮುಸಲ್ಮಾನ್ ಲೀಗ್ ಮೆಂಬರರು, ಮದ್ರಾಸಿನಲ್ಲಿ ಪ್ರಕಟವಾಗುವ ಈ ಪತ್ರಿಕೆಯ ಈ ವರ್ತನಕ್ಕೆ ಕ್ಷೋಭೆಗೊಂಡಿರುವರು.

ಈ ಚಿತ್ರದಲ್ಲಿ ಮುಸ್ಲಿಮರ ಚಿಹ್ನವಾದ ಅರ್ಧ ಚಂದ್ರನನ್ನು ಹೊಡೆಸಿದಂತೆ ತೋರುವ ಕಾರಣ, ಮುಸ್ಲಿಮ ರಾಜರಾದ ನಿಜಾಮರನ್ನು ಹಿಯಾಳಿಸಿ ಇದೇ ಸಮಾಜವನ್ನೆ ನಿಂದಿಸಿದ ಈ ಪತ್ರಿಕೆಯನ್ನು ಮದ್ರಾಸು ಸರಕಾರವು ದಂಡಿಸಬೇಕೆಂದೂ, ಮುಸ್ಲಿಮರಿಗೂ ಇತರ ಸಮಾಜಗಳಿಗೂ ಅವರ ವ್ಯಕ್ತಿಯು ನಾಶವಾಗದಂತೆ ಪ್ರಯತ್ನಿಸಲು ಪತ್ರಿಕೆಗಳಿಗೆ ವಿಧಿಸಬೇಕೆಂದು ಸರಕಾರವು ಸೂಚಿಸಬೇಕೆಂದೂ ನಿರ್ಣಯಗಳಾಗಿವೆ.

ಇದೇ ಸಂದರ್ಭದಲ್ಲಿ ಮುಸ್ಲಿಮರು ಜನಾಬ ಬಾಲಕರಿಗಾಗಿ ಒಂದು ಚಕ್ರವು ಸ್ಥಾಪಿಸಲು ... ಜಮೀನನ್ನು ಕೊಂಡು ಕೊಳ್ಳಲಾಗಿರುವದು, ಅವರ ಕ್ರಿಯವು ಹುಟ್ಟುವಂತೆ ಸಮಸ್ತರು ಮುಸ್ಲಿಮರು ಸಹಾಯ ಮಾಡಬೇಕೆಂದೂ ನಿರ್ಣಯಿಸಲಾಯಿತು. ... ಇದರಲ್ಲಿ ಕಾಣಿಕೆ ಮಾಡುವ ಹಣ ಕೊಡಬೇಕಾಗಿ ನಿರ್ಧಾರವಾಯಿತು.

ನಿಜಾಮು ಸರಕಾರವೂ ಈ ಭಾಗದಲ್ಲಿ ಧಾರಾಳ ಸಹಾಯ ಮಾಡಬಹುದು.

ಇದು ಭ್ರಾಮಕ ಕಲ್ಪನೆ.

ಪರಂತು ಹೀಗೆ ತಿಳಿಯುವುದು ಕೇವಲ ಭ್ರಮೆಯಾಗಿದೆ. ಇದು ಬ್ರಿಟಿಷರಿಗೂ ತಿಳಿದಿದ್ದು ಅವರು ಈಗ ತಮ್ಮ ಸೈನ್ಯ ಸರಂಜಾಮುಗಳನ್ನು ಬೆಳೆಸಿಕೊಳ್ಳಲಿಕ್ಕೆ ಪೂರ್ಣ ನಿರತರಾಗಿದ್ದಾರೆ. ಬ್ರಿಟಿಷ ಸಾಮ್ರಾಜ್ಯದಲ್ಲಿ ಈಗಲೂ ಅಲ್ಲಲ್ಲಿ—ಅಂದರೆ ಆಯರ್ಲೆಂಡಿನಲ್ಲಿ, ಹಿಂದುಸ್ಥಾನದಲ್ಲಿ, ಚೀನದಲ್ಲಿ, ವಸಾಹತುಗಳಲ್ಲಿ ಪೆಲೆಸ್ತೀನದಲ್ಲ ಜ್ವಾಲಾಮುಖಿಯ ಕೇಂದ್ರಗಳಿವೆ. ಅವು ಈಗ ತೋರಿಕೆಗೆ ಶಾಂತವಾಗಿರಬಹುದು; ಉರಿಕಾರದೆ ಇರಬಹುದು. ಪರಂತು ಈ ಜ್ವಾಲಾಮುಖಿಗಳ ಸ್ಫೋಟನವು ಎಂದು ಆದೀತೆಂದು ಹೇಳಬರುವುದಿಲ್ಲ. ಅನಿರೀಕ್ಷಿತವಾಗಿ, ಅನಪೇಕ್ಷಿತವಾಗಿ ನಾಳೆಗೆ ಉರಿಕಾರಿ, ಅದರಲ್ಲಿ ಬ್ರಿಟಿಷ ಸಾಮ್ರಾಜ್ಯವು ಸುಟ್ಟು ಬೂದಿಯಾಗಿ ಹೋಗಬಹುದು.

ಆಯರ್ಲೆಂಡಿನಲ್ಲಿ

ಆಯರ್ಲೆಂಡಿನಲ್ಲಿ ಎಲ್ಲವೂ ಶಾಂತವಾಗಿದೆ. ಅಲ್ಲಿ ಮೊದಲಿನಂತೆ ಗಲಭೆ ಗಲಾಟೆಗಳಾಗುವದಿಲ್ಲ. ಕೊಲೆ ಮಾರಾಮಾರಿಗಳಾಗುವದಿಲ್ಲ. ದಕ್ಷಿಣ ಆಯರ್ಲೆಂಡಿಗೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯ ದೊರಕಿದೆ. ಅವರು ಅದರಿಂದ ತೃಪ್ತರಾಗಿದ್ದಾರೆ. ಉತ್ತರ ಆಯರ್ಲೆಂಡಿನವರು ಬ್ರಿಟನಿನೊಂದಿಗೆ ಕೂಡಿರಲಿಕ್ಕೇ ಆಶಿಸುತ್ತಾರೆ. ಅವರೂ ತೃಪ್ತರು. ಒಮ್ಮೊಮ್ಮೆ ಡಿವಲೆರಾ—ಆಯರ್ಲೆಂಡಿನ ಏಕೀಕರಣವಾಗಬೇಕು ಎನ್ನುವದಿದೆ. ಆದರೆ ಲೋರ್ಡ ಕ್ರೈಗವಾನರು ಅದು ಸಾಧ್ಯವಲ್ಲವೆನ್ನುವದೂ ಇದೆ. ಪರಂತು ಅವರಿಬ್ಬರೂ ತಮ್ಮ ತಮ್ಮ ಸಾಧನೆಗೆ ಶಕ್ತಿಯುತವಾದ ಹೆಜ್ಜೆಗಳನ್ನು ಎತ್ತುವದಿಲ್ಲ.

ಹಿಂದುಸ್ಥಾನದಲ್ಲಿ

ಇಲ್ಲಿ ಬ್ಯೂ ಹಾಗೆಯೇ! ಕಾಂಗ್ರೆಸ್ಸು ಪ್ರಾಂತಿಕ ಸ್ವರಾಜ್ಯ ಘಟನೆಯನ್ನು ಒಪ್ಪಿಕೊಂಡು, ಬಹುಮತವಿರುವ ಎಂಟು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸೇ ಶಾಸನ ಸೂತ್ರವನ್ನು ತನ್ನ ಕೈಗೆ ತೆಗೆದುಕೊಂಡಿದೆ. ಸ್ವಾತಂತ್ರ್ಯ ಸಂಪಾದನೆಗೆ ಇದು ಒಂದು ಮಾರ್ಗವೆಂದು ಅದು ತಿಳಿದು [illegible] ಕೇಂದ್ರ ಜವಾಬುದಾರಿ ಮತ್ತು ಕೇಂದ್ರ ಸರಕಾರಗಳಲ್ಲಿ ಜನತೆಯ ಅಧಿಕಾರದ ಕುರಿತು ಭಿನ್ನಾಭಿಪ್ರಾಯವು ತೋರಿಬರಬಹುದು. ಕಾಂಗ್ರೆಸ್ಸು ಫೆಡರೇಶನನ್ನು ನಿರೋಧಿಸುತ್ತಿದೆ. ಅದರಲ್ಲಿ [illegible] ದೇಶೀ ರಾಜರುಗಳು ಸೇರುವದೂ, ಸಾಮ್ರಾಜ್ಯವಾದಿಗೆ ವಿಶೇಷಾಧಿಕಾರಗಳಿರುವದೂ ಆಕ್ಷೇಪಕ್ಕೆ ಕಾರಣ. ಪರಂತು ಸಮಯ ಬಂದರೆ, ಕಾಂಗ್ರೆಸ್ಸು ಕೂಡ ಪ್ರಾಂತಿಕ ಘಟನೆಯನ್ನು ಒಪ್ಪಿದಂತೆ, ಫೆಡರೇಶನನ್ನು ಒಪ್ಪಲೂ ಬಹುದು. ಆದ್ದರಿಂದ ಹಿಂದುಸ್ಥಾನದ ಮಟ್ಟಿಗೂ ವಿಶೇಷ ಚಿಂತೆಗೆ ಆಸ್ಪದವಿಲ್ಲ.

ಚೀನದಲ್ಲಿ

ಜಪಾನು ಚೀನವನ್ನು ಆಕ್ರಮಿಸಿದೆ. ಅಲ್ಲಿ ಅದಕ್ಕೆ ಕೆಲವು ಮಟ್ಟಿಗೆ ಸಫಲತೆಯೂ ದೊರಕಿದೆ. ಚೀನದಲ್ಲಿ ಬ್ರಿಟಿಷರ ಹಕ್ಕು ಅಧಿಕಾರಗಳಿವೆ, ಕೆಲವು ವಿಶೇಷ ಸ್ವಾರ್ಥಗಳಿವೆ. ಆದರೆ ಜಪಾನಿನ ಆಕ್ರಮಣದಿಂದ ಬ್ರಿಟಿಷರ ಹಕ್ಕು ಅಧಿಕಾರ ಸ್ವಾರ್ಥಗಳಿಗೆ ವ್ಯತ್ಯಯ ಉಂಟಾಗುವ ಹಾಗಿಲ್ಲ. ಬ್ರಿಟಿಷರು ಹಾಗೆ ಚ್ಯುತಿಬರಬಾರದೆಂದು ಜಪಾನಿಯರಿಗೆ ಮೊದಲೇ ಎಚ್ಚರಿಕೆಯನ್ನು ಕಳುಹಿಸಿಕೊಟ್ಟಿದ್ದಾರೆ. ಅಂಥ ಉದ್ದೇಶವು ತಮಗೆ ಇರುವದಿಲ್ಲವೆಂದು ಜಪಾನಿಯರು ಭರವಸೆಯನ್ನು ಕೊಟ್ಟಿದ್ದಾರೆ. ಅವರು ಸದ್ಯ ಬ್ರಿಟಿಷರ ಸುದ್ದಿಗೆ ಬರುವ ಹಾಗೆ ಇಲ್ಲ.

ವಸಾಹತುಗಳಲ್ಲಿ

ಇನ್ನು ವಸಾಹತುಗಳ ಮಾತು. ಹಿಟ್ಲರನು ಯುದ್ಧ ಪೂರ್ವದಲ್ಲಿ ಜರ್ಮನೀಗೆ ಸೇರಿದ್ದ ಆಫ್ರಿಕದ ವಸಾಹತುಗಳನ್ನು ಪುನ ಜರ್ಮನಿಗೆ ಕೊಡಬೇಕೆಂದು ಕೇಳುವದು ಸಿಜ. ಜರ್ಮನಿಗೆ ವಸಾಹತುಗಳು ಬೇಕೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಕೊಡುವದು ಯಾರು? ಹೇಗೆ ಕೊಡಬೇಕ? ಎಲ್ಲಿಂದ ಕೊಡಬೇಕು? ಇದೇ ಪ್ರಶ್ನೆಗಳಿವೆ. ಹಿಂದಿನ ವಸಾಹತುಗಳನ್ನೇ ತಿರುಗಿ ಕೊಟ್ಟು ಬಿಡೋಣ ವೆಂದರೆ, ಈ ವಸಾಹತುಗಳಲ್ಲಿರುವ ಜನರು ಜರ್ಮನಿಗೆ ಸೇರಲು ವಿರೋಧವಾಗಿದ್ದಾರೆ. ಮಾತ್ರವಲ್ಲ ಅದರಿಂದ ಆಫ್ರಿಕದಲ್ಲಿನ ಬ್ರಿಟಿಷ ಸಾಮ್ರಾಜ್ಯದ ಭಾಗಗಳಿಗೂ ಅಪಾಯ [illegible] ಪರಿಸ್ಥಿತಿ ಹುಟ್ಟುವುದು. ವಸಾಹತುಗಳ ಜನತೆಯ ವಿರೋಧವಾಗಿ [illegible] ಹೇಳಿ ಈ ಪ್ರಶ್ನೆಯನ್ನು [illegible] ತನಕ [illegible] ಪರಿಹಾರಕ್ಕೆ [illegible]

ಪೆಲೆಸ್ತೀನದಲ್ಲಿ

ಪೆಲೆಸ್ತೀನ ಬ್ರಿಟಿಷ ಸಾಮ್ರಾಜ್ಯದ [illegible] ದೊಡ್ಡ ಜ್ವಾಲಾಮುಖಿ [illegible] ಸಾಮ್ರಾಜ್ಯದ [illegible] ಪೆಲೆಸ್ತೀನದ [illegible] ಅಲ್ಲಿ ಅರಬರ [illegible] ಬ್ರಿಟಿಷ [illegible] ಅಲ್ಲಿ ವಿಭಾಗಿಸಿ ಆಳುವ [illegible] ಯಹೂದಿ [illegible] ಜಗಳದಲ್ಲಿ [illegible] ಸೇನೆಯ [illegible] ಪೆಲೆಸ್ತೀನದಲ್ಲಿ [illegible] ಬ್ರಿಟಿಷರ ಸೈನ್ಯ [illegible] ಬ್ರಿಟಿಷರ [illegible]

ಆದರೆ ಮಾತ್ರ

[illegible] ಹಿಂದುಸ್ಥಾನ, ಆಯರ್ಲೆಂಡ, ವಸಾಹತುಗಳು, ಚೀನ, ಪೆಲೆಸ್ತೀನ [illegible] ಬ್ರಿಟಿಷ ಸಾಮ್ರಾಜ್ಯದ [illegible] ಈಗ [illegible] ಬ್ರಿಟಿಷ ಸಾಮ್ರಾಜ್ಯವನ್ನು [illegible] ಹಿಂದುಸ್ಥಾನದ [illegible] ವಸಾಹತುಗಳಲ್ಲಿ [illegible] ಪೆಲೆಸ್ತೀನದಲ್ಲಿ [illegible] ಬ್ರಿಟಿಷ ಸಾಮ್ರಾಜ್ಯವನ್ನು [illegible] ಹಿಂದುಸ್ಥಾನ [illegible] ಸಮಸ್ಯೆಗಳನ್ನು [illegible] ತೃಪ್ತಿಯಾಗುವ ರೀತಿಯಲ್ಲಿ [illegible] ಅವುಗಳಲ್ಲಿ [illegible] ಸಮಾಧಾನ [illegible] ಈಗ ಅವುಗಳಲ್ಲಿ ತೋರುವ [illegible] ಸಮಾಧಾನಗಳು [illegible] ಶಾಂತಿ ಸಮಾಧಾನಗಳು ಅಲ್ಲ.

ಬ್ರಿಟಿಷ ಸಾಮ್ರಾಜ್ಯದಲ್ಲಿ ★ ★ ಸರ್ವತ್ರ ಸುಖ ಶಾಂತಿ

★

ಹಿಂದೂದೇಶದಲ್ಲಿ 35 ಕೋಟಿ ಜನರು ವಾಸವಾಗಿದ್ದಾರೆ. ಆದರೆ ದೇಶದ ರಕ್ಷಣೆಗೆ ಇರುವದು ಬರೇ 60 ಸಾವಿರ ಬ್ರಿಟಿಷ ಸೈನ್ಯ. ಅಂದರೆ ಒಬ್ಬ ಬ್ರಿಟಿಷ ಸೈನಿಕನು 6000 ಭಾರತೀಯರನ್ನು ತನ್ನಾಧೀನ ಇಟ್ಟುಕೊಳ್ಳಲು ಸಮರ್ಥನು! ಪೆಲೆಸ್ತೀನದಲ್ಲಿ ಅರಬ—ಯಹೂದಿಗಳ ದೊಡ್ಡ ಗಲಾಟೆ ಬಿದ್ದಿದೆ. ಆದರೂ ಅಲ್ಲಿ ಗಲಭೆ ಗಲಾಟೆಗಳನ್ನು ನಿಲ್ಲಿಸಲಿಕ್ಕೆ ಬ್ರಿಟನ್ನು ಕಳುಹಿಸಿರುವ ಸೈನ್ಯ ಬರೇ 25 ಸಾವಿರ ಮಾತ್ರ. ಬ್ರಿಟಿಷ ಸಾಮ್ರಾಜ್ಯವು ಯುರೋಪ ಅಮೆರಿಕ ಏಸ್ಯ ಆಫ್ರಿಕ ಆಸ್ಟ್ರೇಲಿಯ ಐದೂ ಖಂಡಗಳಲ್ಲಿ ಹರಡಿದೆ. ಅಷ್ಟು ದೊಡ್ಡ ಸಾಮ್ರಾಜ್ಯ ಬೇರೆಯಾವುದೂ ಇರುವದಿಲ್ಲ. ಬ್ರಿಟಿಷ ಸಾಮ್ರಾಜ್ಯದಲ್ಲಿ ಸೂರ್ಯನು ಮುಳುಗುವುದೇ ಇಲ್ಲ. ಹಾಗಾದರೆ ಬಹು ಸ್ವಲ್ಪ ಸೈನ್ಯವನ್ನಿಟ್ಟುಕೊಂಡು ಅಷ್ಟು ವಿಸ್ತಾರವಾದ ಸಾಮ್ರಾಜ್ಯವನ್ನು ಆಳುವದು ಬ್ರಿಟನಿಗೆ ಹೇಗೆ ಸಾಧ್ಯವಾಗಿದೆ? ಬ್ರಿಟಿಷ ಸಾಮ್ರಾಜ್ಯದಲ್ಲಿ ಸರ್ವತ್ರ ಸುಖಶಾಂತಿ ಸಮಾಧಾನಗಳುಇವೆ. ಜನರು ತಮ್ಮ ಜೀವನದಿಂದ ತೃಪ್ತರಾಗಿದ್ದಾರೆ ಆದ್ದರಿಂದ ಹೆಚ್ಚಿಗೆ ಸೈನ್ಯದ ಅಗತ್ಯ ಬೀಳುವದಿಲ್ಲ ಎನ್ನುತ್ತಾರೆ.

★

ಆದ್ದರಿಂದ ಸೈನ್ಯಸಿದ್ಧತೆ.

ಜನರಿಗೆ ತೃಪ್ತಿಯಾಗುವ ರೀತಿಯಲ್ಲಿ ಈ ಸಮಸ್ಯೆಗಳನ್ನು ಬಿಡಿಸುವ ಮನೋಭಾವವಲ್ಲಿ ಬ್ರಿಟನ್ನು ಇಲ್ಲ. ಅದು ಬಲಾತ್ಕಾರದಿಂದ, ಸೈನ್ಯ ಬಲದಿಂದ ಸಾಮ್ರಾಜ್ಯವನ್ನಾಳಲು ಇಚ್ಛಿಸುತ್ತದೆ. ಅಲ್ಲವಾದರೆ ವಿಭಾಗಿಸಿ ಆಳುವ ನೀತಿಯನ್ನು ಅನುಸರಿಸುತ್ತದೆ. ಇವೆರಡೂ ಅಸಫಲವಾದಾಗ ಮಾತ್ರ ಅದು ಜನಮತಕ್ಕೆ ಮಣಿಯುತ್ತದೆ. ಅದಕ್ಕೋಸ್ಕರ ಈಗ ಬ್ರಿಟನು ಅಪೂರ್ವ ಸೈನ್ಯಸಿದ್ಧತೆಯನ್ನು ಆರಂಭಿಸಿರುವದು. ಆಧುನಿಕ ಕ್ರಮದ ಶಸ್ತ್ರೋಪಕರಣಗಳನ್ನು ಸಂಗ್ರಹಿಸಲಿಕ್ಕೆ ದ್ರವ್ಯವನ್ನು ನೀರಿನಂತೆ ಹರಿಯಬಿಟ್ಟಿದೆ.

[illegible]

ಪುರೋಹಿತ ಶ್ವಾಸಹಾರಿ [illegible]

ಪುರೋಹಿತ ಶ್ವಾಸಹಾರಿ
ದಮ್ಮಿಗೆ ಗುಣಕಾರಿ

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ
ಜಗತ್ಪಸಿದ್ಧ

GONO KILLER

ಗೊನೊಕಿಲರ್ (ರಜಿಸ್ಟರ್ಡ)

ವ್ಯಾಧಿಗೆ ಸಿದ್ಧೌಷಧ

[illegible] ಗೊನೊಕಿಲರ್ [illegible]

[illegible] ಗೊನೊಕಿಲರ್ [illegible] ರೂ. 3—0—0 (ಮೂರು) [illegible]

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ ಎನ್ ಜಸಾನಿ, ವಿಠಲಭಾಯಿ ಪಟೇಲ ರೋಡ, ಮುಂಬಯಿ 4

Sole Manufacturer: Dr. D. N. JASANI, Vithalbhai Patel Road, BOMBAY

ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ವೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಶ್ರೀ ಪಾರ್ಶ್ವನಾಥಸ್ವಾಮಿ

ಪಂಚಕಲ್ಯಾಣ ಪೂಜಾಮಹೋತ್ಸವ

ವೇಣೂರು 1939

ತೋರಣ ಮುಹೂರ್ತ	ಸಹಸ್ರಾಷ್ಟಕ ಕುಂಭಾಭಿಷೇಕ	ತೋರಣ ವಿಸರ್ಜನ
25--1--1939	4—2—1939 ಮಾಘ ಶು ೧೫ಯು ಶನಿವಾರ	6--2--1939

30—1—1939 ಗರ್ಭಾವತರಣ ಕಲ್ಯಾಣ ೧೦೮ ಕುಂಭಾಭಿಷೇಕ ಮಹೋತ್ಸವ
31—1—1939 ಜನ್ಮಾಭಿಷೇಕ ಕಲ್ಯಾಣ ೨೧೬ ಕುಂಭಾಭಿಷೇಕ ಮಹೋತ್ಸವ
1—2 1939 ಪರಿನಿಷ್ಕ್ರಮಣ ಕಲ್ಯಾಣ ೩೨೪ ಕುಂಭಾಭಿಷೇಕ ಮಹೋತ್ಸವ
2—2—1939 ಕೇವಲಜ್ಞಾನ ಕಲ್ಯಾಣ ೪೩೨ ಕುಂಭಾಭಿಷೇಕ ಮಹೋತ್ಸವ
3—2—1939 ನಿರ್ವಾಣ ಕಲ್ಯಾಣ ೫೦೪ ಕುಂಭಾಭಿಷೇಕ ಮಹೋತ್ಸವ

ಶ್ರೀ ಗೋಮಟೇಶ್ವರಸ್ವಾಮಿ ಸನ್ನಿಧಿಯಲ್ಲಿ ೧೦೮ ಕುಂಭಾಭಿಷೇಕ ಮಹೋತ್ಸವ.

ವೇಣೂರು [illegible] 12 [illegible] 36 [illegible] ಉನ್ನತವಾಗಿರ[illegible] ಗೋಮಟೇಶ್ವರಸ್ವಾಮಿ [illegible] ಪ್ರತಿಷ್ಠಿತ [illegible] ಈ ಸಮಾರಂಭದ [illegible]

ಯಾತ್ರಿಕರಿಗೆ ಅನುಕೂಲವಾಗುವಂತೆ ಅಗತ್ಯವಿದ್ದಲ್ಲಿ ಸ್ಪೆಶಲ ಸರ್ವೀಸು ಚಾಲುಮಾಡುವ ಯೋಗ್ಯ ವ್ಯವಸ್ಥೆ ಮಾಡಲಾಗುವುದು

JOINT MANAGERS.

The Combined Booking Agency, MANGALORE.

The Joint Booking Office, KODIALBAIL.

KANTI
Toilet Soap

ಇಂಡಿಯಾದ ಅತ್ಯುತ್ತಮ ಸಾಬೂನು

ನಂಬಿದರೆ ನಂಬಬಹುದು

ಅದರ ಅತ್ಯುತ್ತಮ ಸುಗಂಧಪೂರಿತ

ಸ್ವಚ್ಛಕಾರಿ **ಕಾಂತಿ** ಟೊಯಿಲೆಟ

ಸಾಬೂನನ್ನು ಒಂದು ಸಲ ಉಪಯೋಗಿಸಿದವರು ಎಂದೆಂದಿಗೂ ಇತರ ಯಾ ಸಾಬೂನನ್ನೂ ಉಪಯೋಗಿಸಲು ಇಚ್ಛಿಸಲಾರರು!

'ಕಾಂತಿ [illegible]

ಎಲ್ಲಾ ಕಡೆಗಳಲ್ಲೂ ಮಾರಲ್ಪಡುತ್ತದೆ

ಅತ್ಯುತ್ತಮ ಹೇರ್ ಆಯಿಲ

ಎಲ್ಲಾ ಜನರ ಮನಸ್ಸನ್ನು ಸೆಳೆಯುವುದು!

ದಿಲ್ ಖುಷ್ ಹೇರ್ ಆಯಿಲ್

[illegible]

[illegible] ಬೆಲೆ 0—12 0
,, 12 ,, ,, 1 4 0

ರುಬಿ ಪೇಯಿನ್ ಬಾಮ್

[illegible] ಡಬ್ಬಿಗೆ ಅ 4

ಊರುಗಳಲ್ಲಿ ಏಜಂಟರು ಬೇಕು

ಏಜೆಂಟ —

ಷಾ ಕಂಪೆನಿ, ಮಂಗಳೂರು.

CONSTRUCTIVE BANKING

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore.

And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully

RESOURCES OVER A CRORE.

ESTD. 1906.
CANARA BANK, LIMITED.

ಬಿಡಿಸಂಚಿಕೆ ಒಂದಾಣೆ
ವಾರ್ಷಿಕ ಚಂದಾ ರೂ 2—0—0

ಸ್ವದೇಶಾಭಿಮಾನಿ

ಮುಂಗಡ ಚಂದಾ ...
ರೂ. 2-13-0

Established 1906 Regd. No M 3406

ಸಂಪುಟ ೩೩] ತಾರೀಕು ೨೦—೧—೧೯೩೯ (20—1—1939) [ಸಂಚಿಕೆ ೩

THE
Bombay Life Assurance Company, Ltd.,
(ESTD 1908.)

45-47 Churchgate Street, Fort-BOMBAY.

Evidence of
PROGRESS. SECURITY & STABILITY.

Year	New Business completed	Premium Income	Life Fund	Business in force
[illegible]	[illegible]	[illegible]	[illegible]	[illegible]
1931	[illegible]	[illegible]	[illegible]	[illegible]
1937	1,40,00,000	31,00,000	99,00,000	6,00,00,000

The Company offers all that is best and up-to-date in

LIFE ASSURANCE.

Applications for agencies will be considered from Honest & Respectable LADIES & GENTLEMEN.

For full particulars apply to any of our following Offices —

Kochikar Brothers Limited,
Madras Branch Secretaries
Bombay Life Building, UDIPI (S India)

(1) [illegible] (2) [illegible] Street Mangalore [illegible] Central [illegible] Bombay No 4 (5) P B 37 Mount Road Madras (6) Ottapalam S Malabar [illegible] Trivandrum

MAKE LIFE WORTH-LIVING!

Indigestion – Insomnia – Dry Cough—
Nervousness – Weak Heart &c,
these make you weary of Life!

GONSULT US AND BY
YOUR LIFE'S HAPPINESS!

Oils – that cool the brain and induce sleep
Lehas – that build-up your wasted system
Asavas – that rejuvenate your jaded nerves

All Genuine Ayurvedic Preparations-
from this huge Ayurvedic Concern of a
Century's Standing—

Bhuvanendra Products, Ltd.,
Katapady, S. Kanara.

(BRANCH—KUMTA, N KANARA)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ – ನಿದ್ರಾವಿಹೀನತೆ – ಒಣ ಕೆಮ್ಮು –
ನರಗಳ ಅಬಲತೆ – ದುರ್ಬಲ ಹೃತ್ಕ್ಲೇಶ – ಇವುಗಳು
ಜೀವನದಲ್ಲಿ ನಿರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ – ನಿಮ್ಮ ಜೀವಮಾನದ ಆನಂದ
ವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ರೆಕೊಡುವ — ತೈಲಗಳು
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ — ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ಚೈತ್ರವನ್ನು ಹರಿಸುವ — ಆಸವಗಳು
ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, – ದ ಕನ್ನಡ
(ಬ್ರಾಂಚ್: ಕುಮಟೆ, ಉತ್ತರ ಕನ್ನಡ)

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

Swadeshabhimani. Estd 1906

ತಾ. ೨೭—೧—೧೯೩೯.

Date 27—1—1939

ಗೋವಾ ಬಂದರದ ಒಂದು ದೃಶ್ಯ

(Picture of the outstanding INDIAN ART CALENDER Basel Mission Book Depot, Canarag Ltd., Mangalore (S. K.)

ಸಚಿತ್ರ ವಾರ ಪತ್ರಿಕೆ

ಚಿತ್ರ-ವಿಚಿತ್ರ!

ಕೊಲೆಗಡುಕತನಕ್ಕೆ ವಿಟಮಿನ್ ಅಭಾವವೇ ಕಾರಣ.

ಅಮೇರಿಕದ ಹೆನ್ರಿ ಬೋರ್‌ಸೂಕ್ ಎಂಬ ವೈದ್ಯರೊಬ್ಬರು ಬಹಳ ಪರಿಶ್ರಮಪಟ್ಟು, ಕೊಲೆಗಡುಕತನಕ್ಕೆ ವಿಟಮಿನ್ನಿನ ಅಭಾವವೇ ಕಾರಣವೆಂದು ಕಂಡುಹಿಡಿದಿರುವರು. "ಒಬ್ಬ ಮನುಷ್ಯನು ಕೊಲೆಗಡುಕನಂತೆ ವರ್ತಿಸುತ್ತಾನೆಂದರೆ ಅವನ ಧಮನಿಗಳಲ್ಲಿ ಅತಿರೇಕವಾಗಿ ಪಿರೂವಿಕ್ ಎಸಿಡಿನ ಪ್ರವಾಹವಾಗುತ್ತದೆ. ಅಥವಾ ಅವನ ರಕ್ತದಲ್ಲಿ ಕೂಕಾರ್‌ಬೊಕ್ಸಿ ಲೇಜ್ ನಾಸ್ತಿ ಎನ್ನಬೇಕು" ಎಂದು ಅವರ ವಾದ.

ಹೇಗೂ ಇರಲಿ, ಧನದೇವತೆಯು ಪ್ರಸನ್ನಳಾದರೆ ಇನ್ನು ಮುಂದೆ ಪ್ರತಿ ರಾಷ್ಟ್ರದಲ್ಲೂ ಖೂನಿ ಕಕ್ಷಿದಾರರುಗಳನ್ನೇ ಸನುಕೂಲವಾಗಿ ಕಿತ್ತೊಗೆಯಬಹುದೆಂದು ಭರವಸೆಯುಂಟಾಯಿತಲ್ಲ!

ಲೋರ್ಡ್ ನಫೀಲ್ಡರ ಕೃತಕ ಶ್ವಾಸಕೋಶದಾನದ ನಿಸ್ಸಾರ್ಥಕತೆ

ಈ ವಿಷಯವಾಗಿ ಬ್ರಿಟಿಷ್ ಮೆಡಿಕಲ್ ಜರ್ನಲಿನಲ್ಲಿ ಖಂಡನಾತ್ಮಕವಾದೊಂದು ಲೇಖನವನ್ನು ಬರೆಯುತ್ತಾ ಸರ್ ಫ್ರೆಡರಿಕ್ ಮಾಂಟಿಸ್ ಎಂಬ ಪ್ರಸಿದ್ಧ ವೈದ್ಯರೊಬ್ಬರು ಹೀಗೆ ವಾದಿಸುತ್ತಿರುವರು. "ಕಬ್ಬಿಣದ ಕೃತಕ ಶ್ವಾಸಕೋಶಗಳ ಶೋಧಕರಿಗೆ ನಿಜ ಶ್ವಾಸಕೋಶಗಳ ನಿಜವಾದ ಜ್ಞಾನವೇ ಇಲ್ಲವೆಂದು ತೋರುತ್ತದೆ. ಇವುಗಳು ಇನ್ನೂ ಊರ್ಜಿತವಾಗದೆ ಇವೆ. ಮಾತ್ರವಲ್ಲ ಆಸ್ಪತ್ರೆಗಳ ಗಾತ್ರಪರಿಮಾಣಗಳಲ್ಲಿ ಇನ್ನೂ ಬದಲಾವಣೆಗಳಾಗಲಿವೆ. ಮಾತ್ರವಲ್ಲ ಇವುಗಳು ಬೇಕಾದ ರೋಗಿಗಳಿಗೆ ಬೇಕಾದನ್ನು ಒದಗಿಸಲು ಸಾಧ್ಯವೇ ಇಲ್ಲ. ಮಾತ್ರವಲ್ಲ, ಅನೇಕ ಮಂದಿ ವೈದ್ಯರಿಗೆ ಇವುಗಳ ಸದುಪಯೋಗದ ಅರಿವಿನ ಗಂಧವೇ ಇಲ್ಲ. ಹೀಗಿರುತ್ತಾ ಲೋರ್ಡ್ ನಫೀಲ್ಡರಿಗೆ ಈ ದಾನಕ್ಕೆ ಪ್ರೋತ್ಸಾಹವಿತ್ತವನ ಹುಚ್ಚುತನವಾವುದೋ"

ಉತ್ತರವಿದಕ್ಕೆ ಬಹು ಸುಲಭ ಮತ್ತು ಸರಳ. "ಈ ಕಷ್ಟಗಳ ಪರಿಚಯವಿಲ್ಲದೆ ಪ್ರೋತ್ಸಾಹಿಸಿದ್ದುದಿದ್ದರೆ 'ಅಜ್ಞಾನ' ಕಷ್ಟಗಳ ಪರಿಚಯವಿದ್ದು ಪ್ರೋತ್ಸಾಹಿಸಿದ್ದುದಿದ್ದರೆ "ಹಣವುಳಿಸುವ ಹುಚ್ಚು" ಎಂದರೆ ಅತಿಶಯೋಕ್ತಿಯಾಗಲಾರದು.

ಸಾಯುವಕಾಲದಲ್ಲೂ ಕಣ್ಣು ದಾನವಿತ್ತಾತನು.

ಇದೊಂದು ಸೋಜಿಗವಾದ ಸುದ್ದಿ. ಒಮ್ಮೆ ಕೊಲರಾಡೋ ರಾಷ್ಟ್ರ ಬಂದೀಖಾನೆಯಲ್ಲಿ ಮರಣಸಜೆಗೊಳಗಾದ ನಾಲ್ವರು ಬಂಧಿಸಲ್ಪಟ್ಟಿದ್ದರು. ಒಬ್ಬ ವೈದ್ಯರು ತನ್ನ ರೋಗಿಯ ಕುರುಡು ಕಣ್ಣೊಂದನ್ನು 'ಕೋರ್ನಿಯಾ ಟ್ರಾನ್ಸ್‌ಪ್ಲಾಂಟೇಶನ್' ಕ್ರಮದಲ್ಲಿ ಚಿಕಿತ್ಸೆನಡೆಸಿ ಸ್ವಲ್ಪ ಗುಣವಾಗಿದ್ದರು. ಇನ್ನು ಒಂದೆರಡು ಕಣ್ಣುಗಳಿದ್ದರೆ ತಕ್ಕ ಶಸ್ತ್ರಕ್ರಿಯೆ ನಡೆಸಿ ತನ್ನ ರೋಗಿಯ ಕಣ್ಣನ್ನು ಗುಣಪಡಿಸಬಹುದೆಂದು ನಂಬಿದ ನಮ್ಮ ವೈದ್ಯರು ಮರಣಸಜೆಗೊಳಗಾದ ಆ ಮಹಾಶಯರೊಡನೆ ವಿನಂತಿಸಿದರು. ಸತ್ತರೂ ಕಣ್ಣು ಕೊಡುವೆವೆಂದು ಅಭಯವಾಯಿತು. ವೈದ್ಯರು ಬರಿಗೈಯಿಂದ ಹಿಂದಿರುಗಿದರು.

ಸಾಯುವವನಿಗೂ ಸಾಯುವತನಕ ನೋವನ್ನು ಸಹಿಸಬರುವುದಿಲ್ಲವೆಂದು ವೈದ್ಯರಿಗೂ ತಿಳಿಯದೆ ಹೋಯಿತಲ್ಲ!

ಕಣ್ಣುರೋಗಗಳಿಗೆ ವಾಯೊಲೆಟ್ ಕಿರಣಗಳಿಂದ ಉಪಶಮನ.

ಲಂಡನಿನ ವೆಸ್ಟ್ ಮಿನಿಸ್ಟರ್ ಕಣ್ಣಾಸ್ಪತ್ರೆಯಲ್ಲಿ ವಿವಿಧ ಕಣ್ಣುರೋಗಗಳಿಗೆ ವಾಯಲೆಟ್ ಕಿರಣಗಳಿಂದ ಉಪಶಮನ ನಡೆಯುತ್ತಿದೆ. ಪ್ರಕಾಶದ ಅಲ್ಪ ಕಿರಣ ತರಂಗಗಳು ಕಣ್ಣನ್ನು ಹೊಕ್ಕು ಒಳಗಿರುವ ಬೇನೆಯನ್ನು ಗುಣಪಡಿಸುತ್ತದೆಯಂತೆ.

ಧೂಮ್ರಪಾನದಿಂದ ದೃಷ್ಟಿಮಾಂದ್ಯ

ಲಿನಿಯಾರ್ಡ್ ವಿಲಿಯಮ್ಸ ಎಂಬ ವೈದ್ಯರೊಬ್ಬರು ಧೂಮ್ರಪಾನದಿಂದ ದೃಷ್ಟಿಮಾಂದ್ಯ ಉಂಟಾಗುತ್ತದೆಂದು ಬರೆದಿರುವರು.

ವಿಶೇಷವಾಗಿ ಧೂಮ್ರಪಾನ ಮಾಡುವುದರಿಂದ ಎಂಪ್ಲಿಯೋಪಿಯಾ ಎಂಬ ಒಂದು ರೋಗವುಂಟಾಗಿ ದೃಷ್ಟಿಯು ಮಂದವಾಗುತ್ತದೆಂದು ಇವರ ವಾದ. ಸಹಜವಾಗಿ ನಡುಪ್ರಾಯದಲ್ಲಿ ಸಾಮಾನ್ಯ ದೃಷ್ಟಿಮಾಂದ್ಯವಾಗುವುದಾದರೂ ಧೂಮ್ರಪಾನದಿಂದಾಗಿ ವಿಶೇಷವಾಗಿ ದೃಷ್ಟಿಮಾಂದ್ಯವಾಗುವುದಂತೆ. ಇದಕ್ಕೆ ಯೋಗ್ಯವಾದ ಚಿಕಿತ್ಸೆ ಎಂದರೆ ಧೂಮ್ರಪಾನ ತ್ಯಾಗವಂತೆ. ಕೆಲವು ಜನರ ದೇಹ ಪ್ರಕೃತಿಯ ಆಧಾರದ ಮೇಲೆ ಪೂರ್ಣ ಅಂಧತ್ವವೂ ಉಂಟಾಗಬಹುದು. ಇದಕ್ಕೆವಿರುದ್ಧವಾಗಿ ಕಡಿಮೆ ನೈಸರ್ಗಿಕ ಶಿಕ್ಷೆಯಾಗುವುದಿದ್ದರೆ ದೃಷ್ಟಿಮಾಂದ್ಯ ಹೊಗೆಸೊಪ್ಪು ಸೇದುವ ಕೆಲವರು ಅದನ್ನು ತ್ಯಜಿಸಿದೊಡನೆಯೇ ನಡುಪ್ರಾಯದಲ್ಲೂ ದೃಷ್ಟಿಮಾಂದ್ಯದಿಂದ ಗುಣಮುಖನಾಗುತ್ತಾ ಬರುತ್ತಿರುವರಂತೆ. ಇರಲಿ, ದೃಷ್ಟಿಚಕ್ರವನ್ನು ಧರಿಸಿ ಮರೆಯಬೇಕೆಂದಿರುವವರಿಗೆ ಏನು ಮಾಡಬೇಕೆಂದು ತಿಳಿಯಿತಲ್ಲ!

ಕೈಗಾರಿಕೆಯ ಅಭಿವೃದ್ಧಿಯೇ ಕೆನ್ಸರ್ ಎಂಬ ಹುಣ್ಣಿಗೆ ಕಾರಣ.

ಅಮೇರಿಕದ ಪ್ರಸಿದ್ಧ ವೈದ್ಯರಾದ ಡಾ. ಫಿಲಿಪ್ ಬಿ. ಪೋಚ್ ಎಂಬವರು ಕೈಗಾರಿಕೆಯ ಅಭಿವೃದ್ಧಿಯೇ ಕೆನ್ಸರ್ ಎಂಬ ಹುಣ್ಣಿಗೆ ಕಾರಣವೆಂದು ಕಂಡುಹಿಡಿದಿರುವರು.

ಕೆನ್ಸರ್ ರೋಗಗಳಲ್ಲಿ ನೇಕಡಾ ೮೦ ಮಂದಿಗಳು ಶ್ವಾಸಕೋಶಗಳಿಗೆ ಬಾಧಕರವಾಗಿ ಪರಿಣಮಿಸುವ ಖನಿಜ ಕಾರ್ಖಾನೆಗಳಲ್ಲೂ, ಲೋಹ ಕಾರ್ಖಾನೆಗಳಲ್ಲೂ ಉದ್ಯೋಗವಹಿಸುವವರೆಂದೇ ಇವರ ಲೆಕ್ಕಾಚಾರದಿಂದ ವ್ಯಕ್ತವಾಗುತ್ತದೆ. ಇಂತಹ ಕೆಲಸಗಳಿಂದಾಗಿ ಶ್ವಾಸಕೋಶಗಳ ನೋಲ್ಪರೆಯು ಸವೆದು ಕೆಲ ಕಣಗಳ ಬೆಳವಣಿಗೆಯನ್ನು ತಡೆದು ಒಂದು ವಿಜಾತೀಯ ಕಣವಾಗಿ ಮಾರ್ಪಟ್ಟು ಕೆನ್ಸರ್ ರೋಗಕ್ಕೆ ಕಾರಣವಾಗುವುದಂತೆ. ಅಲ್ಲದೆ ಕೆಲವು ಅಲ್ಪ ವಿಷಕಾರಿ ವಾಯು ದ್ರವಗಳೂ ರಸಾಯನಗಳೂ ಶ್ವಾಸಕೋಶಗಳನ್ನು ಕೆಡಿಸಿ ಈ ಭಯಂಕರ ರೋಗವನ್ನುಂಟುಮಾಡುವವೆಂದು ವಾದಿಸುತ್ತಿರುವರು.

ಅದೇನೂ ಇರಲಿ. ವಿಜ್ಞಾನಿಗಳು ಬಹಳ ಪರಿಶ್ರಮಪಟ್ಟು ಎಂತಹ ಭಯಂಕರವಾದ ರೋಗಕ್ಕೂ ತಕ್ಕ ಔಷಧೋಪಚಾರಗಳನ್ನು ಕಂಡು ಹುಡುಕುವರೆಂಬ ಭರವಸೆಯು ಜನತೆಯಲ್ಲಿರುತ್ತಾ ಯಾವತ್ತು ಭಯಂಕರ ಮತ್ತು ಅಪಾಯಕರವಾದ ಕೈಗಾರಿಕೆಗಳಲ್ಲಿ ಉದ್ಯೋಗವಹಿಸಲಿಕ್ಕೇನು ಭಯ? ಎಂಬೀ ತತ್ವವೇ ಕೈಗಾರಿಕೆಗಳ ಅಭಿವೃದ್ಧಿಗೊಂದು ಚೇತನವೆಂದು ಸುಲಭವಾಗಿ ಊಹಿಸಬಹುದಲ್ಲವೇ?

ಫೆಡರೇಶನ್ ಯೋಜನೆ ::

:: :: ಮೈಸೂರು ಯುವರಾಜರ ಸೂಚನೆ

ನಾನು ಪುನಃ ತಿಳಿಸುವೆನು. ಇದು ಒಂದು ಉತ್ತಮ ಯೋಜನೆ; ಅಂಗೀಕರಿಸಿ ಕಾರ್ಯನಿರ್ವಹಿಸಬಹುದಾದ ಯೋಜನೆ. ಇಂಡಿಯಾದ ಹಿತಕ್ಕಾಗಿರುವ ಯೋಜನೆ; ವಾಸ್ತವಿಕವಾಗಿ ಎಲ್ಲರೂ ಇದನ್ನು ಒಪ್ಪಿಕೊಂಡು ನಿರ್ವಹಿಸಿ ಬರುವಾಗ, ವ್ಯವಹಾರದಲ್ಲಿ ಅಂತರ್ಜನಾಂಗಿಕ ಹಿತಸಾಧನೆಗೂ ಇದು ಇಂಡಿಯಾಕ್ಕೆ ಮಹತ್ವದ ಯೋಜನೆಯಾಗಿದೆಂದು ನಾನು ದೃಢವಾಗಿ ಹೇಳಬಲ್ಲೆನು.

(ಏಶಿಯಾಟಿಕ್ ಕ್ಲಬ್ಬಿನಲ್ಲಿ ಬೊಂಬಾಯಿ, 23-1-39).

ರಕ್ಷೈರ್ನ್ಮಹಾರ್ಹೈಸ್ತುತುರ್ಮನ ದೇವಾ । ನ ಭೇಜಿರೇ ಭೀಮ ವಿಶೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ।

ಸ್ವದೇಶಾಭಿಮಾನಿ
SWADESHABHIMANI

ದೊರೆಯಲುನುಪ್ಪವು ರತ್ನಗಳು ಸಾ । ಗರವ ಮಥಿಸಲು ಸುರರಿ ಗದರಿಂ । ಹರುಷವಾಯಿತೆ! ಮತೆ ವಿಷದ ಸುಡುವ ಬರುತಿರುವ ॥ ಗರಳಕವರಂಜದರೆ ಓಧಿಯನು ಮಥಿತು ಕ್ಷುದ್ರದ ಕೆರದಿ,ಕುಳಿತರೆ । ಕೇಳೆ ಬಿಟ್ಟರೆ ತೊರೆದು ಧೀರರು ನಿಶ್ಚಿತಾರ್ಥವನು ॥

ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ತಾರೀಕು ೨೭—೧—೧೯೩೯ ತಾರೀಕು 27—1—1939

ಸಂಯುಕ್ತ ಪ್ರಾಂತದ ಆದರ್ಶ

ಸಂಯುಕ್ತ ಪ್ರಾಂತದಲ್ಲಿ ನಿರಕ್ಷರ ಕುಕ್ಷಿತ್ವವನ್ನು ನಿರ್ಮೂಲ ಮಾಡುವ ಯೋಜನೆಯು ಭರದಿಂದ ಸಾಗುತ್ತಿದೆ; ಈ ಕಾರ್ಯದ ಚಳುವಳಿಯನ್ನು ಪ್ರಧಾನಮಂತ್ರಿಯಾದ ಶ್ರೀ ಪಂತರೇ ಹಿಡಿದಿರುವರು. ಅಲ್ಲಿಯ ಒಂದು ಮಿಲಿಯ ಜನರು ಪ್ರತಿಯೊಬ್ಬನೂ ಒಂದು ವರ್ಷದೊಳಗಾಗಿ ಒಬ್ಬನಿಗಾದರೂ ವಿದ್ಯಾದಾನವನ್ನು ಮಾಡುವೆನಾಗಿ ಪ್ರತಿಜ್ಞೆಯನ್ನು ಮಾಡಿರುವನು. ಕಳೆದ ಜನವರಿ ೧ನೆಯ ತಾರೀಕಿನ ದಿನ ಅಲ್ಲಿ ವಿದ್ಯಾದಿನವು ಆಚರಿಸಲ್ಪಟ್ಟಿತು. ಅಂದು ನಡೆದ ಸಂಗತಿಗಳನ್ನು ತಿಳಿದುಕೊಂಡರೆ, ನಿರಕ್ಷರ ಕುಕ್ಷಿತ್ವವನ್ನು ನಿರ್ಮೂಲಮಾಡಬೇಕೆಂಬ ಈಗಿನ ಕಾರ್ಯರಂಗದ ಮಹತ್ವವು ಮುಂದಟ್ಟಾದೀತು. ವಾಹನಾದಿಗಳ ವಿವಿಧವಾದ ಚಲಾವಣೆಯಿದ್ದ, ಒಂದು ರಸ್ತೆಯೇ ಅಂದು ಪಾಠಶಾಲೆಯಾಗಿ ಮಾರ್ಪಟ್ಟಿತ್ತು ಸಾವಿರಾರು ಮಂದಿ ಶಿಕ್ಷಣವನ್ನು ಪಡೆಯಲು ಮಾರ್ಗದಲ್ಲಿ ಕುಳಿತಿದ್ದರು. ಶಿಕ್ಷಕರಾದರೂ ಯಾರು? ಮಾನ್ಯ ಶ್ರೀ ಪುರುಷೋತ್ತಮದಾಸ ಟಂಡನ್, ಸರ್ ವಾ[illegible] ಅಹಮ್ಮದ ಖಾನ ಮೊದಲಾದ ಪ್ರಮುಖರು ಈ ಯೋಜನೆಯ ಬಹು ಪ್ರಚಾರಕರಾಗಿದ್ದಾರೆ. ಗವರ್ನರ ದೊರೆಗಳೂ ಪಂಡಿತ ಜವಾಹಿರಲಾಲರೂ ಸಂದೇಶಗಳನ್ನು ಕಳುಹಿಸ್ವರು.

ಈ ರೀತಿ ಶಿಕ್ಷಣವನ್ನು ಪಡೆಯಲು ಸಾವಿರಾರು ಮಂದಿ ಆತುರರಾಗಿ ಕುಳಿತಿದ್ದರೆಂದು ಓದುವಾಗ ಗಾಂಧೀಜಿಯವರ ಸ್ವಾತಂತ್ರ್ಯಕ್ಕಾಗಿ ಜರಗಿದ ಸಾಮುದಾಯಿಕ ಸತ್ಯಾಗ್ರಹ ಚಳವಳಿಯ ನೆನಪಾಗುವುದು. ಭಾರತದಲ್ಲಿರುವ ಅವಿದ್ಯಾವಂತರ ಸಂಖ್ಯೆಯು ಅದೆಷ್ಟಿದೆಯೆಂದರೆ—ಈಗಿನ ವಿದ್ಯಾದಾನಕ್ರಮದಿಂದ ಶತಮಾನ ಶತಮಾನಗಳು ಕಳೆದರೂ ಅದನ್ನು ಸಂಪೂರ್ಣ ಕಿತ್ತೊಗೆಯಲು ಸಾಧ್ಯವಿಲ್ಲ. ವಿದ್ಯೆಯನ್ನು ಪಡೆದವರ ಗತಿಯಾದರೂ ಏನು? ನಿರುದ್ಯೋಗಿಗಳಾದ ವಿದ್ಯಾವಂತರ ಪಂಗಡಗಳೇ ಊರೂರುಗಳನ್ನು ಅಲೆದಾಡುವುದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ.

ಅವಿದ್ಯೆಯನ್ನು ಯಾವ ರೀತಿಯಲ್ಲಿ ಕಿತ್ತೊಗೆಯಬಹುದೆಂದು ಸಂಯುಕ್ತ ಪ್ರಾಂತದವರು ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿರುವರು. ತನ್ನ ಬಂಧುಗಳಲ್ಲಿರುವ ನಿರಕ್ಷರ ಕುಕ್ಷಿತ್ವವನ್ನು ಕಿತ್ತೊಗೆಯುವುದು ತನ್ನ ಕರ್ತವ್ಯವೆಂದು ನಮ್ಮ ಪ್ರಾಂತದ ಪ್ರತಿಯೊಬ್ಬ ಶಿಕ್ಷಿತನು ಮನಗಂಡರೆ, ಪ್ರತಿಯೊಬ್ಬ ಮಂತ್ರಿಯು ಆ ಕುರಿತು ಪ್ರಯತ್ನಿಸಿದರೆ ನಮ್ಮ ಪ್ರಾಂತವೂ ಸಂಯುಕ್ತ ಪ್ರಾಂತವನ್ನು ಬಿಟ್ಟಿಲ್ಲವೆಂಬ ಕೀರ್ತಿಯು ನಮಗೂ ಲಭಿಸೀತು. ಈಗಿನ ರೀತಿಯ ಶಿಕ್ಷಣಕ್ರಮದಲ್ಲಿ ತಿದ್ದುಪಡಿಯಾಗತಕ್ಕದೆಂದು ಪ್ರತಿಯೊಂದು ಪ್ರಾಂತಾಧಿಗಳು ತಿಳಿದಿರುವರು. ಆ ತಿದ್ದುಪಡಿಯನ್ನು ಆದಷ್ಟು ಬೇಗನೆ ಮಾಡುವುದುತ್ತಮವಲ್ಲವೆ?

ಅಣೆ ಪೈಗಳ ಲೆಕ್ಕವೇಕೆ?

ನಮಗೆ ಈಗ ದೊರೆತಿರುವ ಅಧಿಕಾರ, ಸ್ವಾತಂತ್ರ್ಯವೆಷ್ಟೆಂಬುದನ್ನು ಆಣೆ ಪೈಗಳ ಲೆಕ್ಕದಲ್ಲಿ ಹೇಳುವ ಕ್ರಮವನ್ನು ಕೆಲವು ದೃಢದ

ಸ್ಫುಟ ತರಂಗ!

ಪ್ರಮುಖರು ಆರಂಭಿಸಿರುವರು. ಜೋಡಾಯಿಯ ಮುಖ್ಯಮಂತ್ರಿಗಳಾದ ಮಾನ್ಯ ಪಿ. ಜಿ. ಖೇರರು ಮೊನ್ನೆ ತಾನೆ ಸೂರತ್ತಿಗೆ ಹೋದಾಗ, ಪ್ರಾಂತಾಡಳಿತವು ನಮ್ಮ ಕೈಗೆ ದೊರೆತುದರಿಂದ "ಸ್ವರಾಜ್ಯದಲ್ಲಿ ಕಾಲು ಪಾಲು, ಹಿಲ್ಲನೆರಡಾಣೆಯಷ್ಟು ಅಥವಾ ನಮಗೆ ದೊರೆತಿರುವುದೆ"ಂದು ಹೇಳಿರುವರು. ಆದರೆ ಕೇಂದ್ರಾಧಿಕಾರದ ಕುರಿತು ಶ್ರೀ ಖೇರರು ಆಲೋಚಿಸಿದಂತೆ ಕಾಣುವುದಿಲ್ಲ.

ಆದರೆ ಈ ಕುರಿತ ಪ್ರೊಫೆಸರ್ ರಾಧಾಕೃಷ್ಣ ಮುಖರ್ಜಿಯವರು ಲಖನೌದಲ್ಲಿ ೩ ಅಣೆಯಷ್ಟು ಕೇಂದ್ರಾಧಿಕಾರವು ನಮಗೆ ದೊರೆತಿರುವುದೆಂದಿರುವರು. ಇವರಿಬ್ಬರ ಹೇಳಿಕೆಗಳನ್ನನುಸರಿಸಿ ಪ್ರಾಂತ ಮತ್ತು ಕೇಂದ್ರದಲ್ಲಿ ನಮಗೆ ದೊರೆತಿರುವ ಸ್ವಾತಂತ್ರ್ಯವೆಷ್ಟೆಂದು ನೋಡಿದರೆ ರೂಪಾಯಿಯಲ್ಲಿ ೫ ಅಣೆ ಆಗುವುದು. ಆದರೆ, ಇಷ್ಟು ಅಧಿಕಾರವು ನಮಗೆ ದೊರೆತಿರುವುದು ದೊರೆತಿದ್ದರೂ ಅದು ನಾವು ಪಡೆದು ಪಡೆದಿರುವ ವಿಷಯವೆ? ಈಗಿನ ನಮ್ಮ ಅಧಿಕಾರ, ಸ್ವಾತಂತ್ರ್ಯಗಳು ಪರದೇಶದವರಿಗೆ ಮಾರಲ್ಪಟ್ಟ ರದ್ದಾದ ನಾಣ್ಯಗಳು. ಇಂಥ ರದ್ದಾದ ನಾಣ್ಯಗಳನ್ನು ಕಿಸೆಯಲ್ಲಿ ತುಂಬಿಕೊಳ್ಳುವುದಕ್ಕಿಂತ, ಕಿಸೆ ಬರಿದಾಗಿದ್ದರೂ ಲೇಸಲ್ಲವೆ?

ಪರ್ವತವು ಪ್ರಸವಿಸಿ ಇಲಿಯನ್ನು ಹೆತ್ತಿತು

ಮಿ. ಚೇಂಬರ್ಲೇನರು ರೋಮಿಗೆ ಹೋದುದೇಕೆ? ಬಂದುದೇನು? ಹೋಗುವಾಗ ಏನು ಆಡಂಬರ! ಬರುವಾಗ ಏನು [illegible] ಪರ್ವತವು ಪ್ರಸವಿಸಿ ಇಲಿಯನ್ನು ಹೆತ್ತಿತು ಎಂಬಂತಾಯಿತು ಅವರ ಮತ್ತು ಮುಸಲೋನಿಯವರ ಮಾತುಕತೆಗಳ ಪರಿಣಾಮ. ಮಿ. ಚೇಂಬರ್ಲೇನರು ರೋಮಿಗೆ ಹೋದಾಗ ಜನರು ಅವರಿಗೆ ಅಭೂತಪೂರ್ವವಾದ ಸ್ವಾಗತವನ್ನಿತ್ತರೆಂಬುದು ನಿಜ. ಇಟೆಲಿಯು ತಾನು ಇಂಗ್ಲೆಂಡಿನೊಡನೆ ಮಾಡಿದ ಒಪ್ಪಂದವನ್ನು ಮನ್ನಿಸುತ್ತದೆಂಬ ಭರವಸೆಯನ್ನು ಕೊಟ್ಟಿರುವುದು. ಆದರೂ ಅವರ, ಮಾತುಕತೆಗಳು ಫಲಕಾರಿಯಾಗಿಲ್ಲವೆಂದು ಒಪ್ಪಲಾಗಿದೆ.

ಕೆಲವು ಉಪಚಾರದ ಮಾತುಗಳ, ತುಸು ವಿಚಾರ ವಿನಿಮಯವಲ್ಲದೆ, ಈ ರೋಮ್‌ಪ್ರವಾಸದಿಂದ ಏನೂ ಪ್ರಯೋಜನವಾಗಲಿಲ್ಲ. ಸ್ಪೈನಿನ ಕುರಿತು ಪ್ರಜಾಪ್ರಭುತ್ವಗಳೆಲ್ಲವೂ ತಟಸ್ಥಭಾವವನ್ನು ವಹಿಸತಕ್ಕದೆಂದ ಸಿ[illegible] ಮುಸಲೋನಿಯವರು, ಮಿ. ಚೇಂಬರ್ಲೇನರೊಡನೆ ಹೇಳಿದರು. ಫ್ರಾನ್ಸಿಗೂ ಇಟೆಲಿಗೂ ಉಂಟಾದ ವಿವಾದದಲ್ಲಿ ಮಿ. ಚೇಂಬರ್ಲೇನರು ತಲೆಹಾಕದಂತೆ ಮುಸಲೋನಿಯವರು ಪ್ರಯತ್ನಪೂರ್ವಕ ಸಾಧಿಸಿದುದನ್ನು ಕಂಡು ಫ್ರಾನ್ಸ್ ಕ್ಷೋಭೆ ಹೊಂದಿರುವುದು. ಅಂತು ಸಮಗ್ರ ಯುರೋಪ್ ಸರ್ವಾಧಿಕಾರಿಗಳ ಇನ್ನು ಮುಂದಿನ ಚಟುವಟಿಕೆಗಳೇನೆಂಬುದನ್ನು ನಿರೀಕ್ಷಿಸುತ್ತಿದೆ. ಅವರ ಬರವಣಿಗೆಗಳ ಬೆಳವಣಿಗೆ ಪ್ರಪಂಚವೇ ತಿಳಿದಿರುವುದು.

ವಿರುದ್ಧ ಪರಿಣಾಮಗಳು

ಮ್ಯೂನಿಕ್ ಒಪ್ಪಂದದಿಂದಾಗಿ ಮಿ. ಚೇಂಬರ್ಲೇನರು ಜಗತ್ತಿಗೆ ಶಾಂತಿಯನ್ನುಂಟುಮಾಡಿ ಕೊಟ್ಟರೆಂಬುದಾಗಿ ಹೇಳುವವರಿದ್ದಾರೆ. ಹಾಗಾದರೆ ಈ ಯುದ್ಧಸಿದ್ಧತೆಗಳೇಕೆ? ಪ್ರಜಾಪ್ರಭುತ್ವ ರಾಷ್ಟ್ರಗಳೇ ಜರ್ಮನಿಯ ಯುದ್ಧಸಿದ್ಧತೆಗಳನ್ನು ನೋಡುತ್ತಿವೆ. [illegible] ಇನ್ನು ಒಂದೇ ಸಮಯದ ಮಾತ

ಪ್ರೇಗ್ ನಗರದ [illegible] ಮ್ಯೂನಿಕ್ ಒಪ್ಪಂದದ [illegible] ಜೆಕೊಸ್ಲೊವಾಕಿಯಾ [illegible] ಜರ್ಮನಿಗೆ ವಿಶೇಷ ರಿಯಾಯಿತಿಗಳನ್ನು ಮಾಡಲು [illegible] ಯಾವ ಪ್ರಯತ್ನವೂ ಇನ್ನೂ ಫಲಿಸಿಲ್ಲ. [illegible] ಕಾರಣ, ಹಿಟ್ಲರನ ದೃಷ್ಟಿಯು ಈಗ ಪಶ್ಚಿಮ ಯುರೋಪಿನತ್ತ ಹೊರಳಿರುವುದು.

ಬಿಳಿ ಹಳದಿಯ ಘರ್ಷಣವೆ?

ಹಳದಿ ಜನಾಂಗದವರಾದ ಜಪಾನಿನ ಧೀರರೆಂದು ಕುರಿತು ತೀವ್ರವಾದ ಪೀಡನೆಯನ್ನು ಸೂಚಿಸುವಷ್ಟು ಧೈರ್ಯವನ್ನು ತಂದುಕೊಂಡು ಧರಾಗಿ ಬ್ರಿಟನ್ ಅಭಿನಂದನೀಯವಿದೆ. ಜಪಾನಿಯ ರಾಜ್ಯಾಧಿಕಾರಿಗಳಿಂದ ಸೂಚಿಸಲ್ಪಟ್ಟ ವ್ಯತ್ಯಾಸಗಳನ್ನೊಪ್ಪಲು ಬ್ರಿಟನ್ ಸಿದ್ಧವಿಲ್ಲವೆಂಬುದಾಗಿ ಸಾರಲಾಗಿದೆ. ಫ್ರಾನ್ಸ್ ಬ್ರಿಟನ್ನಿನ ಹೆಜ್ಜೆಯಲ್ಲಿಯೇ ಅನುಸರಿಸಬಹುದೆಂದು ಊಹಿಸಲಾಗಿದೆ.

ಜಪಾನನ್ನು ತತ್ಕಾಲಕ್ಕಾದರೂ ಬ್ರಿಟಿಷರ ಖಂಡನೆಯನ್ನು ಉಪೇಕ್ಷಿಸಬಹುದು. ಪ್ರಾಯಶಃ ಜರ್ಮನಿ ಇಟೆಲಿಯ ಜಪಾನಿನ ಬೆನ್ನು ತಟ್ಟಿ, ಪ್ರಜಾಪ್ರಭುತ್ವಗಳ ಇದಿರಾಗಿ ಎದ್ದು

ಪ್ರತಿ ವಾರವೂ

ಜಗತ್ತಿನ ಪ್ರಾವಿನ್ಸ್ ಪ್ರಪಂಚ ವಾರ್ತೆ ಪರಿಶೀಲಿಸುವುದನ್ನು ನೀವು ಬಿಡಬೇಕೆಂದಿದ್ದರೆ,

ಸ್ವದೇಶಾಭಿಮಾನಿ

ಯನ್ನು ಪ್ರತಿ ವಾರವೂ ಓದಬೇಕೆ ನೋಡಿರಿ!

ವಾರ್ತೆ ತಿಳಿಯಲು ಬೇಕಾದ ಅಗತ್ಯ ಇತರ ವಿವರಗಳೂ ಪ್ರಬಂಧಗಳೂ ಬರುತ್ತವೆ.

ನಿಲ್ಲಲೂ ಬಹುದು. ಜಪಾನಿನ ಕುಂತು ಬ್ರಿಟನೂ ಅಮೇರಿಕವೂ ಅನುಸರಿಸುತ್ತಿರುವ ನೀತಿಯು ಸರಿಯಲ್ಲವೆಂಬುದಾಗಿ ಇಟೆಲಿಯ ಹಾಗೂ ಜರ್ಮನಿಯ ಗರ್ಜನೆಯೊಡನೆ ಈ ಎರಡು ರಾಷ್ಟ್ರಗಳ ಖಂಡನಾತ್ಮಕ ಪತ್ರಗಳನ್ನು ಟೀಕಿಸುವುದರಲ್ಲಿ ವಿಲಕ್ಷಣತೆಯನ್ನು ತೋರುತ್ತಿವೆಯೆಂದೂ, ಜಪಾನು ಇತ್ತ ತನ್ನ ಕಾರ್ಯವನ್ನು ಸಾಧಿಸುತ್ತ ಮುಂದರಿಯುತ್ತಿದೆಯೆಂದೂ ಬರ್ಲಿನಿನ ಪತ್ರಿಕೆಗಳು ಅನ್ನುತ್ತಿವೆ.

ಸಂಸ್ಥಾನಗಳಲ್ಲಿ

ಅಖಿಲ ಭಾರತದ ದೃಷ್ಟಿಯು ಈಗ ಜಯಪುರದತ್ತ ಹೊರಳಿರುವುದು. ಜಯಪುರದವರು ತನ್ನ ಮೇಲೆ ಹಾಕಿರುವ ಬಹಿಷ್ಕಾರವನ್ನು ಹಿಂದೆಗೆಯದಿದ್ದರೆ, ಇದೇ ತಿಂಗಳ ಆಖೇರಿನೊಳಗೆ ತಾನು ಅವರ ಆಜ್ಞೆಯನ್ನುಲ್ಲಂಘಿಸಿ ಸಂಸ್ಥಾನದೊಳಗೆ ಪ್ರವೇಶಿಸುವೆನೆಂದು ಶ್ರೀ ಜಮನಾಲಾಲಜಾಜರೆಂದಿರುವರು. ಅದ್ದರಿಂದಾಗಿ ಯಾವ ಸಂಕಷ್ಟಗಳು ಬಂದೊದಗಿದರೂ ತಾನು ಅವುಗಳನ್ನು ಸಂತೋಷದಿಂದ ಅನುಭವಿಸುವೆನೆಂದೂ ಅವರು ಸಾರಿರುವರು. ಶ್ರೀ ಜಮನಾಲಾಲರಿಗೆ ಈ ವಿಷಯದಲ್ಲಿ ಕಾಂಗ್ರೆಸಿನ ನೈತಿಕ ಬೆಂಬಲವೂ, ಮಹಾತ್ಮರ ಆಶೀರ್ವಾದವೂ ಇದೆ. ಸಂಸ್ಥಾನದವರು ಇನ್ನು ಅವರನ್ನು ಅನಪೇಕ್ಷಿತ ವರ್ತಿಸುವುದು ಹಾಸ್ಯಾಸ್ಪದವಾಗಿ ಸರಿ, ಪರಿಣಾಮವೆ ಜಿಂದಗೀವಾಗಿ ಬಂದ ಜಾಗೃತಿ ನಿರ್ಭಂಧಿಸಿದರು.

ತಿರುವಾಂಕೂರಿನ ಪರಿಸ್ಥಿತಿಯಾದರೂ ಇದರೀತಿಯಿರುವುದು. ಸರ್ವಾಧಿಕಾರಿಗಳಾದ ೩ ಮಂದಿ ಜನರು ತನ್ನ ತನ್ನ ವಿರೋಧ ಘೋಷಣೆ, ನ್ಯಾಯದ ಬೇಡಿಕೆ ಸಲ್ಲಿಸಿದ್ದರೆ ತಿರುವಾಂಕೂರಿನವರು ಇನ್ನು ಕಷ್ಟದ ದಿನಗಳನ್ನು ಕಾಣಬೇಕೆಂದು ಸ್ಪಷ್ಟವಾಗಿದೆ. ಕಾರಣ ಜನರು ತಮ್ಮ ಚಳವಳಿಯನ್ನು ಭರದಿಂದ ಸಾಗಿಸುವ ನಿರ್ಣಯವನ್ನು ಮಾಡಿರುವರು.

ರಾಜಕೋಟೆಯಲ್ಲಿ ಪ್ರಜಾ ಚಳವಳಿಯು ಪ್ರಾರಂಭಿಸಲ್ಪಟ್ಟಿದೆಂಬ ವಾರ್ತೆಯು ಕೇಳಬರುತ್ತಿದೆ. ಕೆಲವು ಮಂದಿ ದೇಶಪ್ರೇಮಿಗಳ ಮಂತ್ರಾಲೋಚನೆಗೆ ಕಿವಿಗೊಟ್ಟು ಶ್ರೀ ದಾ ಕೂರರ ಸಾಹೇಬರು ಶ್ರೀ ಸರ್ದಾರರೊಡನೆ ಮಾಡಿದ ಒಪ್ಪಂದವನ್ನು ಬದಿಗೊತ್ತಿ ಸ್ವತಂತ್ರವಾಗಿ ವರ್ತಿಸುತ್ತಿರುವರು. ತನ್ನ ದಿವಾನರನ್ನು ಬದಿಗೊತ್ತಿ, ಪ್ರಜೆಗಳ ಬೇಡಿಕೆಗಳು ನ್ಯಾಯವಿಲ್ಲವೆಂದು ಸಾರುವುದಕ್ಕಾಗಿ ಮನಗಂಡ ಠಾಕೂರರು ಜಾರಿಗೆ ಒಪ್ಪಿದ ಈ ಮಂತ್ರಾಲೋಚನೆಯ ಫಲ ಏನೆಂದು ತಿಳಿಯದು.

ಈ ಸಂಸ್ಥಾನಗಳ ವಿಷಮಪರಿಸ್ಥಿತಿಯೊಂದನ್ನು ಬಿಟ್ಟರೆ ಕಣ್ಣಿದಿರು ನೋಡಿದಿದ್ದರೆ, ಅವುಗಳ ಅಸ್ತಿತ್ವವೇ ಗಂಡಾಂತರಕ್ಕೊಳಗಾಗುವ ದಿನಗಳು ಬರುವುದರಲ್ಲಿರಲಿಕ್ಕಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದಾಗಿದೆ.

ಅರೆನೋಟಗಳು

ಸಾಂಪತ್ತಿಕ ಸ್ವಾತಂತ್ರ್ಯವೂ ಅಭಿವೃದ್ಧಿ ಮುಖವಾದ ಭಾರತೀಯರಿಗೆ ಅತ್ಯಾವಶ್ಯಕವಾಗಿರುವಾಗ, ಹಾಗೆ ಕೈಗಾರಿಕೆಗಳ ನೂತನ ಯೋಜನೆಗೆ ಧಾರಾಳವಾಗಿ ಕೈಯಿಕ್ಕಿದರೆ ಭಾರತ ವರ್ಷಕ್ಕೆ ಕೆಡುಕುಂಟು ಎಂದು ತಮ್ಮ ಬೇಳೆಯನ್ನು ಬೇಯದೆಂದು ತಿಳಿದ ಪರದೇಶೀಯರು ಬೋಧನೆಗೆ ತೊಡಗಿರುವರು. ಬ್ರಿಟಿಷರು ಬುದ್ಧಿ ಹೇಳುವುದರಲ್ಲಿ ಅರ್ಥವಿಲ್ಲ. ಉದ್ದೇಶವು ಎಂಥದಿರಬೇಕೆಂದು ಹೊಳೆಯದಿರದು. ನಮ್ಮ ಸಂಪತ್ತು ಹೆಚ್ಚುವ ಹಾಗೆ ಮಾತ್ರವಲ್ಲದೆ, ನಮ್ಮ ದುಡಿತದಿಂದ ಅನ್ಯರು ಶ್ರೀಮಂತರಾಗಿ ಬಾಳುವಂತಾಗಬಾರದೆಂದೂ ಸಹ ನಮ್ಮ ಸರ್ವತೋಮುಖವಾದ ಕೈಗಾರಿಕೆಗಳ ಅಭಿವೃದ್ಧಿಯು ಹಂಚಿಕೆಯಾಗಬೇಕು.

++ ++ ++

ನಮ್ಮ ರಾಜಾಧಿರಾಜರುಗಳ ವಿಷಯ ಮಾತೆತ್ತುವಾಗ, ಕೊಡೈಕನಾಲದಲ್ಲಿರುವ ನಭಾ ಮಹಾರಾಜರ ಪ್ರಸ್ತಾಪವೇ ಪತ್ರಿಕೆಗಳಲ್ಲಿ ಬಾರದಿರುವುದು ಶೋಚನೀಯವೆನಿಸುತ್ತದೆ. ಇವರಾಗಲಿ, ಮಹಾರಾಣಿಯವರಾಗಲಿ ಕುಮಾರರಾಗಲಿ ನಗುವುದನ್ನೇ ಮರೆತಿರುವಷ್ಟು ಅಸಹನೀಯ ಯಾತನೆಯಿಂದ ನರಳುತ್ತಿರುವರು. ಕಾಂಗ್ರೆಸ್ ಸರಕಾರಗಳು ಸಹ ಇವರ ವಿಷಯ ಪ್ರಸ್ತಾಪವೇ ಎತ್ತದಿರುವುದರಿಂದ, ಹಿಂಸಾತುರರಾದ ಕ್ರಾಂತಿಕಾರರಿಗಿಂತ ಇವರು ಭಯಂಕರವಾಗಿ ಪರಿಗಣಿಸಿದವರೇನು ಎಂದೂ ಕೇಳುವಹಾಗಿರುವರು. ಲೋರ್ಡ ವಿಲ್ಲಿಂಗಡನರ ಖಾಸಗಿ ಸೆಕ್ರೆಟರಿಯವರು—ಇವರ ವಿಷಯವನ್ನು ಸಹಾನುಭೂತಿಯಿಂದ ನಿರ್ಧರಿಸುವರು ಎಂದು ಎಂದೋ ಬರೆದಿದ್ದರು. ಅದು ಮರೆತೇ ಹೋಯಿತೆ?

++ ++ ++

ಜಿನ್ನಾರವರ ಮನಸ್ಸಿನ ದುಃಖವು ಎಷ್ಟು ಅಪಾರವಾಗಿರಬೇಕು! ಇವರು ಮುಸ್ಲಿಮ ಲೀಗಿನ ಕಾಯಂ ಅಧ್ಯಕ್ಷರು. ಅವರ ಪ್ರೀತಿಯ ಮಾನಸ ಪುತ್ರನಾದ ಪಾಕಿಸ್ತಾನವು ಮುಸ್ಲಿಮ ಲೀಗು ಮತ್ತು ಸಿಂಧ ಮುಸ್ಲಿಮ ಲೀಗ ದುರಂಗೇತನಾಯಿತು. ಆಗಾಖಾನರೂ ಗಾಂಧೀಜಿಯವರನ್ನು ಕಾಣಲು ಹೋದದ್ದಲ್ಲದೆ, ಲೀಗಿನ ಕಡೆಗೆ ಗಮನಿಸಲಿಲ್ಲ—ಇಷ್ಟು ವಿಷಯಗಳಲ್ಲಿ ತನ್ನ ಸಹಸಂತಾಪವಿದೆ ಎಂದು ಅಲಿಘಡಿನ ಪ್ರೊಫೆಸರ್ ಅಬ್ದುಲ್ ಮಜೀದರು ಬರೆದಿರುವರು. ಬಂಗಾಳದ ಮುಸ್ಲಿಮ ಲೀಗಿನ ಬಲ ಕುಂದುತ್ತಲಿದೆ.

++ ++ ++

ಜಮೀನ್ದಾರಿಗಳಿರುವ ಪ್ರಾಂತ್ಯಗಳಲ್ಲಿನ ಜಮೀನ್ದಾರರು ಒಕ್ಕಲು ಕಾನೂನು ಮುಂದರಿಸಿರೆಂದು ಕಾಂಗ್ರೆಸು ಮಂತ್ರಿಗಳಿಗೆ ಪ್ರೋತ್ಸಾಹ ಕೊಡುತ್ತಿರುವರು. ಹಿಂದೆ, ಇಂಥದೇನೂ ಪ್ರಸ್ತಾಪವೆದ್ದಿದ್ದರೆ, ರಕ್ಷಾಕವಚ ತೊಡಿಸಿರೆಂದು ಗವರ್ನರರನ್ನು ಇವರು ಕಾಣಲು ಓಡುತ್ತಿದ್ದರು. ಫೆಡರೇಶನ್ ಸ್ಥಾಪನೆ ಹೊಂದಿಥ ಒಳಿತ ದೇಶೀಯ ರಾಜರುಗಳೂ ಈ ಜಮೀನ್ದಾರರ ಸ್ಥಾನದಲ್ಲಿ, ಗವರ್ನರ ಜನರಲ್‌ರ ಕಡೆಗೆ ರಕ್ಷಾಕವಚ ತೊಡಿಸಿಕೊಳ್ಳಲು ಹೋಗುವಂತಿಲ್ಲ.

++ ++ ++

ಶಾಸನೋಲ್ಲಂಘನೆಯನ್ನು, ಜವಾಬ್ದಾರ ಸರಕಾರ ಬೇಕೆನುವ ಪ್ರಜೆಗಳು ದೇಶೀಯ ರಾಜ್ಯಗಳಲ್ಲಿ ಕೈಕೊಳ್ಳುವಾಗ, ಶಾಸನಾಧಿಕಾರವುಳ್ಳ ಪರಿಷ್ಕೃತ ಸರಕಾರವು ರಾಜರುಗಳ ಸಹಾಯಕ್ಕೆ ಹೋದೀತೆ? ಕಾಂಗ್ರೆಸು ಪ್ರಾಂತ್ಯಗಳ ನೆರೆಯ ರಾಜ್ಯಗಳಲ್ಲಿನ ಗಲಭೆ ಅಣಗಿಸುವುದಕ್ಕೆ ಪರಿಷ್ಕೃತ ಸರಕಾರವು ಸಹಾಯ ಮಾಡಬಹುದಾದರೂ, ಪ್ರಜಾ ಪ್ರಾತಿನಿಧ್ಯದ ವಿಷಯ ಸ್ಪಷ್ಟಾಭಿಪ್ರಾಯವುಳ್ಳ ಕಾಂಗ್ರೆಸ್ ಸರಕಾರಗಳು ಯಾವ ಪಕ್ಷ ಹಿಡಿದಾವು? ಗವರ್ನರರು ರಾಜ್ಯಗಳಿಗೆ ಸಹಾಯ ಮಾಡಿರೆಂದರೆ, ಮಂತ್ರಿಗಳು ರಾಜೀನಾಮೆ ಕೊಡುವರೇ? ಎಂದು ಪ್ರಶ್ನೆಗಳಿಗೆ ಪ್ರಾರಂಭ.

++ ++ ++

ಸಿಂಧದ ಮುಸ್ಲಿಮಲೀಗ್ ಮುಖಂಡರು ಸರ್ ಗುಲಾಮ್ ಹುಸೇನ್ ಹಿದಾಯತ್ತುಲ್ಲಾರವರು ತಮ್ಮ ಲೀಗ್ ಅಧ್ಯಕ್ಷತೆಗೆ ರಾಜೀನಾಮೆ ಕೊಟ್ಟರು. ಮದ್ರಾಸು ಜಸ್ಟಿಸ್ ಪಕ್ಷದ ಮುಖಂಡರು ಬೊಬ್ಬಿಲಿಯ ರಾಜರು ತಮ್ಮ ಜಸ್ಟಿಸ್ ಪಕ್ಷಾಧ್ಯಕ್ಷತೆಗೆ ರಾಜಿನಾಮೆ ಕೊಟ್ಟರು. ಆ ಲೀಗೂ ಈ ಪಕ್ಷವೂ ತಾವೂ ಸ್ವಾತಂತ್ರ್ಯ ಸಾಧಕರೆಂದು ಧ್ಯೇಯವನ್ನು ಸೂಚಿಸಿಕೊಂಡು, ಅದೇ ಧ್ಯೇಯದಿಂದ ಹೋರಾಡುತ್ತಿರುವ ಕಾಂಗ್ರೆಸಿಗೆ ವಿರುದ್ಧರಾಗಿವೆ! ಮಧ್ಯಪ್ರಾಂತ್ಯದಲ್ಲಿ ಶಿಕ್ಷಣಪ್ರಚಾರಕ್ಕಾಗಿ ವಿದ್ಯಾಮಂದಿರ ರಚನೆಗಳಾಗಬಾರದೆಂದು ಮುಸ್ಲಿಮರೂ, ಹಿಂದುಸ್ಥಾನಿಯನ್ನು ಕಡ್ಡಾಯವಾಗಿ ಕಲಿಸಬಾರದೆಂದು ಜಸ್ಟಿಸರೂ ರಗಳೆಮಾಡುತ್ತಿದ್ದಾರೆ. ಹಾಗೆ—ಧ್ಯೇಯ, ಹೋರಾಟಗಳು ಒಂದೇ ಇರುವ ಇವೆರಡು ಪಕ್ಷಗಳು ಒಂದರಿಂದ ಮತ್ತೊಂದಕ್ಕೆ ಹರಿಯಬಾರದೆ?

++ ++ ++

ಕಾಂಗ್ರೆಸಿನ ಅತ್ಯಾಚಾರಗಳು ಎಂಬ ಅಸ್ಪಷ್ಟವಾದೊಂದು ಮಾತು ಜಿನ್ನಾರವರ ಬಾಯಿಂದ ಹೊರಟಿದೆ. ಎಲ್ಲಿ, ಯಾವಾಗ ಏನು ಎಂಬುದು ಜಿನ್ನಾ ಯಾರಿಗೂ ತಿಳಿಸಿಲ್ಲ. ಸಿಂಧ ಪ್ರಾಂತ್ಯದ ಮುಖ್ಯಮಂತ್ರಿಗಳು —ಮುಸ್ಲಿಮ ಲೀಗಿನವರು ನಾನು ಅವರನ್ನು ಸೇರದಿರುವಲ್ಲಿ ನನ್ನನ್ನು ಕೊಂದಿಕ್ಕುವ ಹಂಚಿಕೆ ಮಾಡಿರುವರು. ಲೀಗಿನ ದುಷ್ಟ ವ್ಯವಹಾರಗಳಲ್ಲಿ ನಾನೂ ಸೇರಬೇಕಾಗಿ ಅವರ ಒತ್ತಾಯ. ಆದರೆ ಸಿಂಧದಲ್ಲಿ ಲೀಗಿನವರು ಮಂತ್ರಿ ಮಂಡಲ ರಚಿಸುವುದನ್ನು ನೋಡುವ ಮೊದಲು, ಅವರು ನನ್ನನ್ನು ಕೊಂದರೂ ದುಃಖವಿಲ್ಲ ' ಎಂದು ಸ್ಪಷ್ಟವಾದ ಒಂದು ಆತ್ಮಾಭಿಮಾನ ಹೊರಗೆಡವಿದರು.—ಲೀಗಿನ ವೈರಿ!

++ ++ ++

ಲೀಗ್ ಉತ್ಕೃಷ್ಟರೆ ಖಾನ ಸರ್ ಗುಲಾಮರು ,— ಲೀಗಿನಿಂದ ರಾಜೀನಾಮೆ ಕೊಟ್ಟದ್ದಲ್ಲದೆ, ದರಿದ್ರರಿಗಾಗಿ ಕಾಂಗ್ರೆಸ ನಡೆಸುತ್ತಿರುವ ಪ್ರಯತ್ನಗಳನ್ನು ಧಾರಾಳವಾಗಿ ಶ್ಲಾಘಿಸಿದರು! ಅವರ ಪಕ್ಷದವರೇ ಆಗಿದ್ದ ಮಿ ಸಯದರು ಮಂತ್ರಿಶ್ವರ ಅಲ್ಲಾಬಕ್ಷರಲ್ಲಿ ವಿಶ್ವಾಸವಿಲ್ಲೆಂಬ ಠರಾವು ತಂದುದಕ್ಕೆ, ಸರ್ ಗುಲಾಮರು—ನನ್ನನ್ನು ರಾತ್ರಿಯಲ್ಲೇ ನವಾಬ್ ಖಾನ್ ಬಹದ್ದೂರ ಅಲ್ಲಾಬಕ್ಷರನ್ನು ಮಂತ್ರಿಗಳನ್ನಾಗಿ ಮಾಡುವ ಪ್ರಯತ್ನದಿಂದ, ಹೊಸ ಸ್ವರ್ಗ ಹೊಸ ಭೂಲೋಕಗಳ ಸೃಷ್ಟಿ ಮಾಡಲು ಮುಂಕೊಂಡವರು ನೀವು. ಈಗ ಭಕ್ಷರ ಮಾಂಸವನ್ನೇ ಭಕ್ಷಿಸಲು ನೀವು ಸಿದ್ಧರು. ನಿಮಗೆಂದೂ ನನ್ನ ವೋಟು ಸಿಗಲಾರದು!'' ಎಂದರು.

++ ++ ++

ಚೆಂಬರ್ಲೇನರು ಪ್ರೊಫೆಸ್ಸಾರುಗಳೊಳಗೆ ನಡೆದ ವೈತ್ರಿ ಸಂಭಾಷಣೆಗಳ ಮಾತು ಪ್ರಕಟವಾಗದೆಯಷ್ಟೆ. ೧೯೩೧ರಲ್ಲಿ ಗಾಂಧೀಜೀಯವರು ವರ್ತುಲ ಪರಿಷತ್ತಿನಿಂದ ಹಿಂದಿರುಗಿದಾಗ, ಈ ಪ್ರೊಫೆಸರು ಏನೆಂದಿದ್ದರೋ ಅದರೊಡನೆ ಈ ಮಾತುಗಳನ್ನು ಹೋಲಿಸಬಹುದೇ? ಗಾಂಧೀಜೀ ಕಾಣಬಂದಾಗ, ಅದು ರಜಾದಿನವೆಂದು ಅವರನ್ನು ಕಾಣಲೇ ಇಲ್ಲ' ಜವಾಹರಲಾಲರೆ ಅವನ್ನು ಕುರಿತು ಬೇಕೆಂದೇ ಹೀಗೆ ಮಾಡಿದರೆಂದು ಪ್ರೊಫೆಸರ ಮೇಲೆ ಆರೋಪ ಹೊರಿಸಿರುವರು. "ಕೆಥೊಲಿಕ ಸಮಾಜದ ಹೊರಗಣ ಮಹಾತ್ಮರನ್ನು ನಾವು ಮಂಜೂರು ಮಾಡುವುದಿಲ್ಲ. ಪ್ರೊಟೆಸ್ಟಂಟರು ಕೆಲವರು ಗಾಂಧೀಜೀಯನ್ನು ಮಹಾತ್ಮರೆಂದ ಕರೆದರೆ ನಾವು ಒಪ್ಪುವ ಹಾಗಿಲ್ಲ, ಮಾತ್ರವಲ್ಲ ಇಂತಹ ಅಭಿಪ್ರಾಯ ಪಡೆದ ಮಹಾತ್ಮರಿಂದ ನಾವು ಇನ್ನಷ್ಟು ದೂರವಿರುವುದುತ್ತಮ'' ಎಂದರು ಪೋಪ ಸ್ವಾಮಿ! "ಈಗ ಇಂಗ್ಲೆಂಡಿನ ಹೆಸರು ನನ್ನ ಹೃದಯದ ಮೇಲೆ ಕೆತ್ತಿರುವುದ!' ಎನ್ನುತ್ತಾರೆ ಇಂಗ್ಲೆಂಡಿನ ಸರಕಾರದ ವರ್ತನಕ್ಕೆ ವಿರುದ್ಧರಾದ ಗಾಂಧಿಜಿಯವನ್ನು ಅವರೆ ಸನ್ಮಾನಿಸಿದರೆ ಹೇಗಾದೀತು!

++ ++ ++

ಗಾಂಧಿ ಸೇವಾ ಸಂಘದ ಪತ್ರಿಕೆಯಲಿ ಗಾಂಧಿಜಿಯವರು,—ಪ್ರತಿಯೊಬ್ಬನಿಗೂ ಕೆಲಸ ಸಿಗಬೇಕು, ಅನ್ನವಸ್ತ್ರಗಳಿಗೆ ಕೊರತೆಯಾಗಬಾರದು. ಮೂಲ ವಸ್ತುಗಳ ಉತ್ಪಾದನದಲ್ಲಿ ಸೇರಿರುವ ಸಮಸ್ತರೂ ಒಂದೇ ಸಂಘದ ಪಾಲುಮಾಲಿಕರಾಗುವಂತೆ ವ್ಯವಸ್ಥೆಯಾಗಬೇಕು. ಹೊರತು, ದುಡಿತ ಒಬ್ಬರದು, ಲಾಭ ಮತ್ತೊಬ್ಬರದು ಎಂದಾಗಬಾರದು ಎಂದು ಬರೆದಿರುವರು. ನಮ್ಮಲ್ಲಿನ ಸೋಶಲಿಸ್ಟರು ಇದನ್ನೋದಿ, ನಮ್ಮ ಹೇಳಿಕೆಗೂ ಇವರ ಹೇಳಿಕೆಗೂ ಭೇದವೇನಿದೆ? ಅಹ್ಮದಾಬಾದಿನ ಗಿರಣಿ ಕೂಲಿಗಳ ವಿಚಾರ ಮಾಡುತ್ತ, ನೀಯ್ಗೆ ಕಾರ್ಖಾನೆಗಳೆಲ್ಲ ದೇಶದವಾಗಬೇಕು. ರಾಷ್ಟ್ರೀಯ ಕೈಗಾರಿಕೆ ಅದು ಎಂದು ಗಾಂಧಿಜೀ ಹೇಳಿದ ಮೇಲೆ ಇನ್ನು ಸೋಶಲಿಸ್ಟರಿಗೂ ಅವರಿಗೂ ಭೇದವೇನಿದೆ? ಸಮಾಜದಲ್ಲಿ ಸಾಂಪತ್ತಿಕ ವರ್ಗಗಳಿಲ್ಲದಂತೆ ಅವರ ಸೂಚಿಸಿರುವರು'' ಎನ್ನುವರು. ಇನ್ನಾದರೂ, ಈ 'ಧುರೀಣ' ವರ್ಗವು ಕಾಂಗ್ರೆಸನ್ನು ಹಳಿಯುವುದು ಮುಗಿದೀತೆ?

++ ++ ++

ಬ್ರಿಟಿಷ ಸರಕಾರವು ಹೊಸದೊಂದು ಕಾನೂನನ್ನು ಪ್ರಕಟಿಸಿ, ಮಿಲಿಟರಿ ಕರಾರು ಆಗುವ ವೇಳೆ ಪೂರ್ವ ಮಾಡಿದ ಬ್ರಿಟಿಷ ಪ್ರಜೆಗಳು ಬೇರೆ ದೇಶಗಳ ಸೈನ್ಯದಲ್ಲಿ ಅವನ್ನು ಉಚಿತ ಪತ್ರಿಕೆಗಳಲ್ಲಿ ಪರ್ದಿ ಬರೆಯಬಾರದು! ವೈಶ್ಯರ ದೇಶ ಗೌರವ ಭಂಗವಾಗಿಸ್ವದು ನಿಷೇಧ. ಅರ್ಧರ್ನ್ಯಂಟ ಮಾಡಿದ ೧೮ ಗಣಿಗಳ ಹೆಚ್ಚಿದ ಪ್ರಸಂಗಗಳ, ಮಾಡೀ ಚೇದ ಎಂದ ಸರಕಾರದ ಸೂಚನೆ ಇದು ಬ್ರಿಟಿಷ ಸರಕಾರಕ್ಕೆ ಕೃತಜ್ಞತಾ ಸೂಚನೆಯೆ?

++ ++ ++

ಕೆಥೊಲಿಕ ಸನ್ಯಾಸಿ ವರು ಗಳು ಜರ್ಮನ್ ಸರಕಾರದ ವಶವಾಗುವುವು. ಅವನ್ನು ಶಾಲೆ ಆಸ್ಪತ್ರೆ ಮುದಿಗರ ಪ್ರಾರ್ಥನೆ ಕ್ಷೇತ್ರ ಇತ್ಯಾದಿಗಳಿಗಾಗಿ ಉಪಯೋಗಿಸುವ ೨ ೫೦ ವರ್ಷದ ವಯಸ್ಸಿಗೆ ಕಡಮೆಯಾದ ಪಾದರಿಗಳು ಊರಿನ ಹೊರದೇಶಗಳಿಗೆ ಹೋಗುವುದಕ್ಕೆ ಸರಕಾರವು ಅಪ್ಪಣೆಕೊಡದ. ಇವರಿಗೆ ಸಿವಿಲ್ ಚಾಕರಿ ಕೊಟ್ಟು, ಯುದ್ಧಕಾಲಕ್ಕೆ ಸಹಾಯಕ್ಕೆ ಕರೆಯಲಾಗುವುದು. ಸನ್ಯಾಸಿನಿ (ನನ್)ಗಳು ಮದುವೆ ಮಾಡಿಕೊಳ್ಳಬೇಕೆಂಬ ನಿರ್ಬಂಧಕ್ಕೊಳಪಡುವರು, ಜನಗಳ ಸಂಖ್ಯೆ ಹೆಚ್ಚಬೇಕಾಗಿದೆ, ನಾಝಿಗಳಿಗೆ!

++ ++ ++

'ಜರ್ಮನಿ ಪ್ರಾಚೀನ ರೀತಿಗೆ ಹಿಂಜರಿಯುತ್ತದೆ'' ಎಂಬ ಪುಸ್ತಕ ಬರೆದು ಪ್ರಸಿದ್ಧರಾಗಿರುವ ಎಡ್ಗರ್ ಮೌರಾರ್ ಎಂಬವರು ಈಗ ಚೀನಾದಲ್ಲಿ ಪ್ರವಾಸಮಾಡುತ್ತ ಪ್ರತ್ಯೇಕವೊಂದು ಪುಸ್ತಕ ಬರೆದಿರುವರು. "ಜರ್ಮನಿ—ಇಟಲಿ—ಜಾಪಾನು ಇವು ಮೂರು ಇಡೀ ಮನುಷ್ಯಕೋಟಿಯ ಶತ್ರುಗಳು!'' ಎಂದು ಪ್ರಕಟಿಸಿರುವರು. ಚೀನವೇ ಕೊನೆಗೆ ಜಾಪಾನನ್ನು ಗೆಲ್ಲುವುದೆಂದೂ ಅವರ ಭವಿಷ್ಯವಾದ. ಏಕೆ ಚಿಯಾಂಗ್ ಕೈಷೆಕ್‌ರ ಅಧಿನಾಯಕತ್ವದಲ್ಲಿ ಅತಿ ವಿಶ್ವಾಸವನ್ನಿಡಬಹುದು, ಚೀನೀಯ ಸ್ತ್ರೀಯರು ಮುಂದೆ ಬರುತಿರುವುದು ವಿಜಯಕ್ಕೆ ಖಂಡಿತ ಕಾರಣವಾಗುವುದು, ಜಾಪಾನಿನವರು ಕೀರ ಅಪ್ರಬುದ್ಧರು, ಯುದ್ಧಕ್ಷೇತ್ರ ತಿಳಿಯದರು, ಪ್ರಾಚೀನ ಮಾರ್ಗಾವಲಂಬಿಗಳು—ಎಂದು ನಾನಾ ಮುಖ್ಯ ಕಾರಣ ಕೊಟ್ಟಿರುವರು.

++ ++ ++

ಹಿಟ್ಲರು ನಾಝಿಮತ ಸ್ಥಾಪನೆ ಮಾಡುವ ಹಾಗೆ ಅವನಿಗೆ ಗುರುವಾಗಿದ್ದವನು ಬ್ರಿಟಿಷನೊಬ್ಬನೆಂದೂ ಆತನ ಹೆಸರು ಈಗಣ ಬ್ರಿಟಿಷ ಮಂತ್ರಿಯವರದೇ ಎಂದೂ 'ಟಿಟ್‌ಬಿಟ್ಸ್' ಪತ್ರಿಕೆಯಲ್ಲಿದೆ. ಹೂಸ್ಟನ ಸ್ಟುವರ್ಟ ಚೆಂಬರ್ಲೇನನೆಂದು ಇವನ ಹೆಸರು. ಇವನು ಯಾವ ಜರ್ಮನನಲ್ಲಿಂತ ಹೆಚ್ಚಿನ ಜರ್ಮನನಾಗಿ ಬೆಳೆದ ಬ್ರಿಟಿಷನು. ಆರ್ಯ—ಅನಾರ್ಯ ಎಂಬ ವಂಶ ಜಾತಕ ಶೋಧನೆ ಮಾಡಿದ್ದು ಮಹಾಗ್ರಂಥವನ್ನು ಇವನು ರಚಿಸಿದನು. ಯೆಹೂದ್ಯರೂ ಜರ್ಮನರೂ ಸದಾ ವಿರೋಧಿಗಳೆಂದು ಇದರಲ್ಲಿದೆ. ಇಂಗ್ಲೆಂಡು ಜರ್ಮನಿಗೆ ವಿಶ್ವಾಸಘಾತಕ ಮಾಡಿತೆಂದೂ, ಹಿಂಸ್ರಜೀವಿಗಳಲ್ಲಿ ಇಂಗ್ಲಿಷರು ಸೇರಿರುವರೆಂದೂ ಇವರಿಗೆಂದೂ ವಿಜಯವಾದರೆ ಮನುಷ್ಯಕೋಟಿಯ ಸಂಸ್ಕೃತಿಯೇ ನಾಶವಾದೀತೆಂದೂ ಅವನು ಸಿದ್ಧಾಂತ ಬರೆದನು. ಕೈಸರನು ಇವನಿಗೆ ಭೂಷಣಾದಿಗಳನ್ನು ಕೊಟ್ಟನು. ಮಹಾಯುದ್ಧಾನಂತರ, ಡಿಕ್ಟೇಟರುಗಳನ್ನು ಹೊಗಳಿ, ಪ್ರಜಾಪ್ರಭುತ್ವಗಳನ್ನು ವ್ಯರ್ಥವೆಂದೂ ಈತನೆ ಸಾರಿದವನು. ಯುದ್ಧಾನಂತರದಲ್ಲಿ, ಜರ್ಮನಿ ಸೋತಿಲ್ಲವೆಂದೂ ಅದು ಮುಂದೆ ವಿಜಯ ಹೊಂದಲಿದೆ ಎಂದೂ ಅವನೇ ಸಾರಿದನು. ನೂತನ ಜಗತ್ತನ್ನು ಸೃಷ್ಟಿಸಲು ಮಾಡುವ ಹಿಂಸೆ ಹಿಂಸೆಯೇ ಅಲ್ಲವೆಂದೂ ಅವನ ತತ್ವ. ಹಿಟ್ಲರು ಅವನ ಯೋಗ್ಯಶಿಷ್ಯನು.

++ ++ ++

ಬ್ರಿಟಿಷ ಸಾಮ್ರಾಜ್ಯವು ಇಷ್ಟು ವಿಸ್ತಾರವಾಗಿರುವುದರಿಂದ, ಒಂದಲ್ಲ ಒಂದು ಕಡೆ ಗೊಂದಲವಿದ್ದೇ ಇರುವುದು. ೧೯೩೮ರಲ್ಲಿ ಇದಕ್ಕೆ ಬೇಕಾದಷ್ಟು ದೃಷ್ಟಾಂತಗಳಾದುವು. ಪೆಲೆಸ್ಟೀನ ಮಾತ್ರವಲ್ಲದೆ, ಜಮೈಕಾವೇನು ಕಡಪ ತೆಳವಳದ ರಂಗಭೂಮಿ? ದಕ್ಷಿಣ ಆಫ್ರಿಕಾದಲಿ ಯೂರೋಪರ ಜನ್ಮಬಲಿದಿನದು ಮಹಾ ಕಂಟಕವೆನಿಸಿತು. ೧೯೩೯ರಲ್ಲಿ ಸ್ವಾತಂತ್ರ್ಯ ಕಳೆದುಕೊಂಡ ಗವರ್ನರರ ಕೈಕೆಳಗೆ ನರಳುವ ಸೈಪ್ರಸ್ ದ್ವೀಪದಲಿ ರಗಳೆಗಳು ಕಡಮೆಯಿರಲಿಲ್ಲ. ಎಂದು ಜರ್ಮನ್ ಬ್ರಿಟಿಷ ವಾರ್ತಾ ದಾಯಕರ ಬರಹಗಳು ಹೋಗಿವೆ.

++ ++ ++

ಡಾ ಗೆಬೆಲ್ಸ್ ಅಸ್ವಸ್ಥನೆಂದೇ ವಾರ್ತೆಗಳು ಬಂದಿವೆ. ನಿಜವಾಗಿಯೂ ಈ ಅಸ್ವಸ್ಥ್ಯ ಬೇರೆಯೆ ಇದೆ. ಕಳೆದ ಹಲವು ತಿಂಗಳುಗಳಿಂದ ಬಾಧಿಸಿದ ವೇದನೆಗಾಗಿ ಈ ಮಂತ್ರಿ ಹೇಗೆ ಹಿಡಿದಿರುವನ ಎಂದು ಪ್ರಕಟವಾಯಿತು. ಈ ವೇದನೆ ಏನೆಂದರೆ, ಮಂತ್ರೀಪದಕ್ಕೆ ರಾಜೀನಾಮೆ ವಿವಾಹಿತೆಯೊಬ್ಬ ನಟಿಯಲ್ಲಿ ಈತನಿಗೆ ಮೋಹವು ಹೆಚ್ಚಾದುದನ್ನು ಹಿಟ್ಲರು ಅರಿತು, ಸಿಟ್ಟಾಗಿ, ಮಂತ್ರಿಯನ್ನು ಕೆಳ ತರಗತಿಗೆ ಇಳಿಸಲು ಪ್ರಯತ್ನಮಾಡಿದನು. ಗೆಬೆಲ್ಸ ಪತ್ನಿ ನ್ಯಾಯಸ್ಥಾನದಿಂದ ವಿವಾಹ ವಿಚ್ಛೇದವಾಗಬೇಕೆಂದಳಂತೆ, ಹಿಟ್ಲರು ವಿರೋಧಿಸಿದನು. ಆಕೆ ಡಾಕ್ಟರಿಗೆ ಹೋಗುವೆನೆಂದಳು, ಆಗದೆಂದನು. ಈಗಲೇ ಮಂತ್ರಿಪದವಿಯಿಂದ ಕೆಳಗೆ ನಾಝಿಗಳು ಕ್ರಾಂತಿಯೋಜನೆ ಮಾಡುತ್ತಾರೆಂದು, ರಜಾ ಕೊಡಲಾಗಿದೆ.

S. U. N. & Co.,

Silk Merchants,
Chaukhambi, BENARES CITY

ಈಗಿನ ತರಹ(ಕಾಶಿ) ಬನಾರಿಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ. ಈಗ ಕ್ರಯ ತುಂಬಾ ಸುಲಭ ಖಾತ್ರಿ ಮಾಲು. 18 ಮೊಳದ 2½ ಅಗಲದ ಸಣ್ಣ ಬುಟ್ಟಿ ಶೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣತರದ್ದು 18ಮೊಳ ಸಣ್ಣ ಬುಟ್ಟಿ ಶೀರೆಗಳು ರೂ 35ರಿಂದ ರೂ 55. ಪದಲು ಸಾದಾ ಶೀರೆ 18 ಮೊಳ ರೂ 32ರಿಂದ ರೂ 65 ಉದ್ದ ಮೊಳ 16, ಅಗಲ 2½ ರೂ 20ರಿಂದ 35ರ ವರೆಗೆ. ಬೇರೆ ಮಾಲುಗಳ ಪಟ್ಟಿ ಬೇಕಾಗು ಉಚಿತವಾಗಿ ಕಳುಹಿಸಲಾದೀತು.

ವಿಳಾಸ—

ಶಿರೋಮಣಿ ನಾರಾಯಣಾಚಾರ್ಯ
ಚೌಕಂಬಾ, ಬನಾರಿಸ್ ಸಿಟಿ

ದೇಶ ರಕ್ಷಣೆಗಾಗಿ ★

ನವದಂಪತಿಗಳ ಉಪವಾಸ ವ್ರತ!

೫೦೦೦೦೦ ಡಾಲರುಗಳು ಚೀನಿ ಸರಕಾರಕ್ಕೆ ದೊರೆತವು

ಜಪಾನು ಚೀನವನ್ನು ಆಕ್ರಮಿಸಿದಂದಿನಿಂದ ಜಪಾನಕ್ಕೆ ಹೇಗೋ, ಚೀನಕ್ಕೂ ಹಾಗೆ ಧನದ ಅಭಾವವು ತುಂಬಾ ಉಂಟಾಗಿದೆ. ಆದರೆ ಕಾರಣದಿಂದಲೇ ಸರಕಾರವು ಜಪಾನನ್ನು ಹಿಂತೆಗೆಯಲು ಸಾಕಷ್ಟು ಸೈನ್ಯಸರಂಜಾಮುಗಳನ್ನು ಒದಗಿಸಿಕೊಳ್ಳಲಾರದೆ ಬಹಳ ಪೇಚಾಟಪಟ್ಟಿದೆ. ಜಪಾನಿನ ಉತ್ಪತ್ತಿಯ ಮೂಲಗಳು ಅನೇಕವಿರುವದರಿಂದ ಅದು ಯುದ್ಧದ ಆರ್ಥಿಕ ಕ್ಷತಿಯನ್ನು ಹೇಗೂ ಸಹಿಸಿಕೊಳ್ಳಬಲ್ಲುದು. ಅದಕ್ಕೆ ಯೂರೋಪಿನ ಜರ್ಮನಿ ಇಟಲಿ ಮೊದಲಾದ ಪ್ರಬಲ ರಾಷ್ಟ್ರಗಳ ಕ್ರಿಯಾತ್ಮಕ ಸಹಾನುಭೂತಿ ಇರುವದು.

ಚೀನವು ಅನಾಥವಾಗಿದೆ

ಆದರೆ ಚೀನವು ಮಾತ್ರ ಹಾಗಲ್ಲ. ಅದು ಅನಾಥವಾಗಿದೆ. ಅದಕ್ಕೆ ಪ್ರಪಂಚದ ಪ್ರಜಾಸತ್ತಾತ್ಮಕ ರಾಜ್ಯಗಳಿಂದ ದೊರೆತಿರುವ ಸಹಾನುಭೂತಿಯೆಂಬುದು ಕೇವಲ ಕಲ್ಪನೆ ಮಾತ್ರ. ಅದು ಮಾತಿನ ಸಹಾನುಭೂತಿ ಅಷ್ಟೇ ಆಗಿದೆ. ಆದ್ದರಿಂದ ಅದು ತನ್ನ ಉನ್ನತಿ ಉದ್ಧಾರಗಳಿಗಾಗಿ ತನ್ನ ಕಾಲಮೇಲೆಯೇ ನಿಂತುಕೊಳ್ಳಬೇಕು. ಅದಕ್ಕೆ ಬೇರೆ ಉಪಾಯವಿರುವದಿಲ್ಲ. ಆದ್ದರಿಂದ ಚೀನಿ ಸರಕಾರವು ದೇಶದ ಸ್ವಾತಂತ್ರ್ಯರಕ್ಷಣೆಗಾಗಿ ಚೀನೀಜನತೆಯನ್ನೇ ಹೆಚ್ಚಾಗಿ ನಂಬಿದೆ.

ಅವರ ದೇಶಭಕ್ತಿ

ಚೀನಿಯರ ದೇಶಭಕ್ತಿಯು ಅನುಪಮವಾಗಿರ ಪ್ರಿಟೆಂಡುವರಲ್ಲಿ ಸಂದೇಹವಿಲ್ಲ. ಅವರು ತಮ್ಮ ದೇಶವನ್ನು ತಮ್ಮ ಪಿತೃ ಮಕ್ಕಳು ಬಾಂಧವರಿಂಥವರ ಜಾತಿಕುಲ ಮತ ಧರ್ಮಗಳಿಗಿಂತಲೂ ಮೇಲಾಗಿ ತಿಳಿದಿದ್ದಾರೆ. ಅಲ್ಲಿ ಪ್ರೀತ್ಯ ಕವಿವು ಇಲ್ಲಾ ಶಕ್ತಿಗಳೂ—ದೇಶದ ಸತ್ವಪರೀಕ್ಷೆಯ ಈ ಕಾಲದಲ್ಲಿ ಒಂದಾಗಿ ಜಪಾನನ್ನು ವಿರೋಧಿಸಿವೆ. ಆದ್ದರಿಂದಲೇ ಜಪಾನು ತನ್ನ ನಿಶ್ಚಯದಂತೆ ಚೀನದಲ್ಲಿ ಸಫಲತೆಯನ್ನು ಪಡೆಯಲಾರದೆ ಭಗ್ನಮನೋರಥವಾಗಿದೆ.

ಉಪವಾಸ ವ್ರತ

ಆದರೂ ಕೂಡ ಚೀನದಂಥ ವಿಶಾಲವಾದ ದೇಶದಲ್ಲಿ ಕೆಲವರು ಸ್ವಾರ್ಥಿಗಳು, ಪರಮ ಲೋಭಿ, ಕೃಪಣರು ಇರುವುದು ಆಶ್ಚರ್ಯವಲ್ಲ. ಪರಂತು ಅವರನ್ನು ಕೂಡ ಸರಿದಾರಿಗೆ ತರಲು ಪ್ರಯತ್ನಗಳಾಗುತ್ತಿರುವವು. ಶಾಂಘಾಯಿಯಲ್ಲಿ ಲಕ್ಷಾಧಿಪತಿಯಾದ ಒಬ್ಬ ಚೀನೀ ಸಾಹುಕಾರನಿದ್ದಾನೆ. ಅವನಿಗೆ ಹಣವೇ ಸರ್ವಸ್ವ. ಅವನು ಚೀನೀ ಸರಕಾರಕ್ಕೆ ಒಂದೇ ಒಂದು ಕಾಸು ಕೊಟ್ಟಾದರೂ ಸಹಾಯ ಮಾಡಲಿಲ್ಲ. ತಂದೆಯ ಈ ಕೃಪಣತನವು ಅವನ ಮಗ ಹ್ವಾಂಗ್ ಪಿ ಚಾಂಗನಿಗೆ ಅಸಹನೀಯವಾಯಿತು. ಚೀನೀ ಸರಕಾರಕ್ಕೆ ಹಣಸಹಾಯ ಮಾಡಬೇಕೆಂದು ಅವನು ತಂದೆಯನ್ನು ಬೇಡಿದರೂ, ಕಾಡಿದರೂ ಫಲವೇನೂ ದೊರೆಯಲಿಲ್ಲ. 'ಚೀನಕ್ಕೆ ನಿಮ್ಮಂಥವರ ಹಣದ ಅಗತ್ಯವಿದೆ. ನೀವು ದಾನಮಾಡಲೇಬೇಕು.' ಎಂದು ಚಾಂಗನು ಹೇಳಿದ. ತಂದೆಯು ಮಗನ ಮಾತನ್ನು ತಿರಸ್ಕರಿಸಿಯೇ ಬಿಟ್ಟ. ಆಗ ಮಗನು ಆಗ ತಾನೇ ಮದುವೆಯಾಗಿ ಬಂದ ಅವನ ಹೆಂಡತಿಯೂ ಕೋಣೆಗೆ ಅಗಳು ಹಾಕಿ ಒಳಗಿನಿಂದ ಉಪವಾಸವನ್ನಾರಂಭಿಸಿ ಬಿಟ್ಟರು!

ಹೃದಯ ಕರಗಿತು

ದಿನಗಳ ಮೇಲೆ ದಿನಗಳು ಕಳೆದುವು. ತಂದೆಯು ಸರಕಾರಕ್ಕೆ ಹಣಸಹಾಯ ಮಾಡುವದಿಲ್ಲವಾದರೆ ಸಾಯುವ ತನಕ ಉಪವಾಸ ಮಾಡುವೆವೆಂದು ಆ ನವದಂಪತಿಗಳು ಪ್ರತಿಜ್ಞೆ ಮಾಡಿದ್ದರು. ... ಬಂದರೂ ದಂಪತಿಗಳು ತಮ್ಮ ಪ್ರತಿಜ್ಞೆಯನ್ನು ಮುರಿಯಲಿಲ್ಲ. ತಂದೆಯು ಕೃಪಣಜೀವನ ... ಸಾವು ಬಳಿಸಾರಿದುದು ತೋರಿತು. ಆಗ ತಂದೆಯ ಕಣ್ಣುಗಳು ತೆರೆದುವು. ಅವನ ಹೃದಯ ಕರಗಿತು. ಅವನು ತನ್ನ ಸ್ವಾರ್ಥಮಯ ಜೀವನಕ್ಕಾಗಿ ಪಶ್ಚಾತ್ತಾಪಪಟ್ಟ. ಹೇಗೂ ಮಾಡಿ ತನಗೂ ತನ್ನ ಮಗ ಮತ್ತು ಸೊಸೆಗೂ ಇರುವ ಜಗಳವನ್ನು ರಾಜಿಯಿಂದ ತೀರಿಸಬೇಕೆಂದು ತನ್ನ ಸಹೋದರನಿಗೆ ಹೇಳಿದ.

ಮಧ್ಯಸ್ಥಿಕೆಯ ಫಲ

ಸಹೋದರನು ನವದಂಪತಿಗಳನ್ನು ... ಪ್ರಿಯಿಸಿ ... ಕೊಡಿಸಿ ... ೫೦೦೦೦ ಡಾಲರುಗಳನ್ನು ಸಾಹುಕಾರನು ಚೀನೀ ಸರಕಾರಕ್ಕೆ ಸಹಾಯದ ರೂಪವಾಗಿ ಕೊಡಬೇಕೆಂದು ನಿರ್ಣಯವಾಯಿತು. ೫೦೦೦೦ ಡಾಲರುಗಳು ಬಂದರೆ ಎಷ್ಟೋ ಲಕ್ಷ ಜನಕ್ಕೆ ಸಹಾಯವಾಗುವದು. ಚೀನೀ ಸರಕಾರದ ಪ್ರಧಾನರಾದ ಚಾಂಗ್ ಕೈಶೇಕರು ಈ ನವದಂಪತಿಗಳು ತಮ್ಮ ಉಪವಾಸ ಮುಗಿಸಿ ಅನ್ನ ಸೇವನೆ ಮಾಡುವ ಕಾಲಕ್ಕೆ ಅಭಿನಂದನ ಪತ್ರವನ್ನು ಕಳಿಸಿದರು. ... ಜನರಲ್ಲಿ ... ಅವರ ಪ್ರತಿಜ್ಞೆ ... ದೇಶಭಕ್ತಿಯ ... ಎಂಥಾ ದೇಶಭಕ್ತಿ!



ತಿರುವಾಂಕೂರು ಚಳವಳ

ಎಷ್ಟೆಂದರೂ ಅಲ್ಲಿಷ್ಟು ಇಲ್ಲಿಷ್ಟು ಎಂಬಂತೆ ರಾಜಕೀಯ ಸುಧಾರಣೆ ಮಾಡಲು ಮಾತ್ರ ಸರಕಾರವು ಸ್ವೀಕೃತ ಇಚ್ಛೆ ತೋರಿಸಿರುವ ಕಾರಣ, ಸಂಪೂರ್ಣ ಜವಾಬ್ದಾರಿ ಸರಕಾರವು ಪ್ರಜೆಗಳಿಗೆ ದೊರೆಯುದಿರುವಲ್ಲಿ, ಫೆಬ್ರವರಿ ತಾ. ೧೩ರಿಂದ ಸ್ಟೇಟ್ ಕಾಂಗ್ರೆಸು ಸುಸಂಘಟಿತವಾಗಿಯೂ ಶಾಸನೋಲ್ಲಂಘನ ಕ್ರಮವನ್ನು ಕೈಕೊಳ್ಳುವದಾಗಿ ನಿಶ್ಚಿತವಾಗಿದೆ.

ರಾಜಕೀಯ ಕೈದಿಗಳಿಗೆ ಶಿಕ್ಷೆ, ಅವರು ಜಯವಾಳದವರಿಗೆ ಬಾಧೆ ಇಷ್ಟೇ ಇದೆ. ಕೈದಿಗಳನ್ನು ಬಿಡುಗಡೆ ಮಾಡುವದಕ್ಕೆ ಮೊದಲು ಇದ್ದ ಪರಿಸ್ಥಿತಿಗಿಂತ ಇನ್ನೂ ವಿಘ್ನಮಾನಗಳು ಹಾಳಾಗುತ್ತ ಬಂದಿವೆ.

ಸ್ಟೇಟ್ ಕಾಂಗ್ರೆಸು ಮಧ್ಯಪಾನ ನಿವಾರಣೆ ತಂಬಾಕು ಸೇವನೆ ನಿವಾರಣೆ, ಕೈಮಗ್ಗಗಳಿಗೆ ಪ್ರೋತ್ಸಾಹ ಇವುಗಳಿಗಾಗಿ ತೀಕ್ಷ್ಣ ಚಳವಳ ನಡೆಸುವುದು.

ರಾಜಸೇವಾ ... ಈ ಕೆಳಗಣ ವಿಷಯಗಳಲ್ಲಿ ನಡೆವುದು —

೧ ಎಲ್ಲಾ ನಾಡ ತಂಬಾಕು ಅಂಗಡಿಗಳನ್ನು ಕಾವಲಿನ ... ವ್ಯಾಪಾರ ತಡೆವುದು.

೨ ಉಪ್ಪಿನ ಮತ್ತು ಕಾಡು ಕಾಯಿದೆಗಳನ್ನು ಉಲ್ಲಂಘಿಸುವುದು.

೩ ಮಾರ್ಕೆಟು ಸುಂಕ, ಪರಿಸಿಕ್ ಕರ ... ದೇರ ಕೊಡುವುದು.

೪ ಕೂರದೆ ... ಪುಸ್ತಕಾದಿಗಳನ್ನು ಓದಿ ಪ್ರಚಾರ ಮಾಡುವುದು.

ಇದಾಗಿಯಾದರೂ ಇದ್ದರೆ ಸಂಸ್ಥಾನದ ಕಳಗಣ ವಿಷಯಗಳಿಗೆ ಗಮನಕೊಡಬೇಕು —

೧ ಜವಾಬ್ದಾರ ಸರಕಾರವನ್ನು ಕೂಡಲೆ ಜಾರಿಗೆ ತರಬೇಕು.

೨ ರಾಜಕೀಯ ಕೈದಿಗಳನ್ನು ಕೂಡಲೆ ಬಿಡುಗಡೆ ಮಾಡಬೇಕು. ದಂಡನೆ ಅನುಭವಿಸಿದವರಿಗೆ ಯಾವುದೊಂದು ಶಿಕ್ಷೆ ಇಲ್ಲ ಅಗವಾರದು.

೩ ಪಿ. ಪಿ. ... ಎದೆಂದು ... ವನ್ನು ರದ್ದುಗೊಳಿಸಬೇಕು.

೪ ಸ್ಟೇಟ್ ಕಾಂಗ್ರೆಸನ್ನು ಮನ್ನಿಸಿ ಅದರೊಡನೆ ... ಭಾಷಣ ... ಸಡಿಸಬೇಕು.

೫ ರದ್ದಾದ ವೃತ್ತಪತ್ರಿಕಾ ಲೈಸೆನ್ಸುಗಳನ್ನು ಊರ್ಜಿತಗೊಳಿಸಬೇಕು. ಬಾಂದಿನೆ ಕಡೆದ ಪತ್ರಿಕೆಗಳ ಬಹಿಷ್ಕಾರ ರದ್ದಾಗಬೇಕು.

೬ ಜಪ್ತಾದ ಸೊತ್ತನ್ನು ಹಿಂದಕ್ಕೆ ಕೊಡಬೇಕು, ವಸೂಲಾದ ಜುಲ್ಮಾನೆಯನ್ನು ಹಿಂದೆ ತೆರಬೇಕು.

೭. ಗುಂಡಿಕ್ಕಿದುದನ್ನು ವಿಚಾರಿಸಿ, ಪೋಲಿಸರ ಅತ್ಯಾಚಾರವನ್ನು ವಿಚಾರಣೆಗೊಳಪಡಿಸಬೇಕು.

೮. ವಿದ್ಯಾರ್ಥಿಗಳು ಮತ್ತು ಮಜೂರು ಪಕ್ಷದವರ ಮೇಲಿರುವ ವ್ಯಾಜ್ಯಗಳನ್ನು ಹಿಂದೆಗೆಯಬೇಕು.

ಪ್ರಜೆಗಳು ಯಾವ ತರದಲ್ಲಿ, ಎಷ್ಟೇ ಪೀಡೆಗೊಳಗಾದರೆ, ಹಿಂಸೆಗೆ ತಲೆಕೊಡುತ್ತ, ಸಂಪೂರ್ಣ ಅಹಿಂಸಾವ್ರತಿಗಳಾಗಬೇಕು; ಇಲ್ಲವಿದ್ದಲ್ಲಿ ಶಾಸನೋಲ್ಲಂಘನವು ಫಲಕಾರಿಯಾಗದು. ಕೆಲವರು ಸ್ವಾರ್ಥಿಗಳು ಮಾತ್ರ ಕಮ್ಯೂನಿಷ್ಟರಾಗುವನ್ನು ನಿರುದ್ಧ ಚಳವಳದ ಸಲುವಾಗಿ ಅಸತ್ಯಪ್ರಚಾರ ಮಾಡುತ್ತಿರುವುದು ಶೋಚನೀಯವಾಗಿದೆ. ಮುಸ್ಲಿಮರೇ ಮೊದಲಾದ ಅಲ್ಪಸಂಖ್ಯಾತರ ರಕ್ಷಣೆಯ ಜವಾಬ್ದಾರಿಯನ್ನು ಕಾಂಗ್ರೆಸು ಹೊತ್ತಿರುವುದಾಗಿ ಈ ಮೂಲಕ ವಾಗ್ದಾನವಿದೆ!

ಹೊಸ ಫುಲೀಫರು

ಸೈಡೋನಿಯ ಕೊಸೂನ ಮಜೀದಿಯಲ್ಲಿ (ತಾ ೨೦) ಜೆರೂಸಲೆಮ ಅರಬರೂ, ಸಿರಿಯಾ ಅರಬರೂ, ೪೦೦ ಮಂದಿ ಇಟಲಿನ ಅಧಿಕಾರಿಗಳೂ ಪ್ರಾರ್ಥನೆಗೆ ಸೇರಿದಾಗ, ಇಟಲಿಯ ಅರಬರು ಇವರಾರು ... ವಾಗಿರಲು, ಪ್ರಾರ್ಥನೆ ನಡೆಸಿದರು. ಇರುವರೆಗೆ ... ಮುಸೋಲಿನಿಯನ್ನು ನವಖಲೀಫ ಎಂದು ... ಇವರೇ ... ಬಂದಿದೆ ... ಎಲ್ಲಾ ಅರಬರನ್ನು ಒಂದಾಗಿಸುವ ... ಇದರಿಂದ ... ಅರಬರಲ್ಲಿ ಇವರನ್ನು ವಿರೋಧಿಸಿದವರಿಲ್ಲ ... ಪಲೆಸ್ತೀನ ಪ್ರಸ್ತಾಪ ಪ್ರಾರಂಭವಾಗಿದ ... ರಾಜಕೀಯ ... ಮುಹೂರ್ತವಾಗಿದೆ.

ಸ್ವದೇಶಾಭಿಮಾನಿಯಲ್ಲೇ
ನಿಮ್ಮ ಜಾಹೀರಾತುಗಳನ್ನು ಕೊಡಿರಿ

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ
ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

GONO KILLER ORIGINAL

ವ್ಯಾಧಿಗೆ ಸಿದ್ಧೌಷಧ

ಸಕಲ ಮದ್ದುಗಳ ವಿಷಯ ಜಾಗ್ರತೆ ತೆಗೆದುಕೊಳ್ಳಿರಿ. ಕೊಂಡುಕೊಳ್ಳುವದರ ಮೊದಲು ಕೋಳಿ ಗುರುತಿನ ಲೇಬಲ್ ಮತ್ತು ಗೊನೊಕಿಲರ್ ಇದು ತದ್ರೂಪವಾಗಿರುವದನ್ನು ನೋಡಿರಿ.

... ಗೊನೊಕಿಲರ್ ಎಂಬ ಔಷಧವನ್ನು ... ಬೆಲೆ 50 ಮಾತ್ರೆಗಳ ಒಂದು ಡಬ್ಬಿಗೆ ರೂ 3-0-0 ...

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.
Sole Manufacturer: Dr. D. N. JASANI, Vithalbhai Patal Road, BOMBAY
ಎಲ್ಲಾ ಔಷಧಿ ಅಂಗಡಿಗಳಲ್ಲಿ ದೊರೆಯುವದು.

ಹಿಮಾಲಯದ ಕಂದರಗಳಲ್ಲಿಯೂ ನಾಗರಿಕತೆಯ ಭೂತದ ಸುಳಿವು

ಪಾಶ್ಚಾತ್ಯ ನಾಗರಿಕತೆಯು ಮಾನವ ವರ್ಗದ ಒಂದು ಅಭಿಶಾಪ ಎಂದು ಈಗ ವಿಚಾರಿಗಳಿಗೆ ಮನವರಿಕೆ ಯಾಗುತ್ತ ಬಂದಿದೆ. ಹೇಗೆ ಹೇಗೆ ಈ ನಾಗರಿಕತೆಯು ಪ್ರಚಾರವಾಗುತ್ತ ಬರುತ್ತದೋ ಹಾಗೆ ಹಾಗೆ ಪ್ರಪಂಚದಲ್ಲಿ ಅತ್ಯಾಚಾರ ಅನಾಚಾರ-ಸುಳ್ಳು ವಂಚನೆ-ಮೋಸ-ಮೊದಲಾದವುಗಳು ತಮ್ಮ ಅಧಿಕಾರವನ್ನು ನಡೆಯಿಸುತ್ತ ಬಂದಿವೆ. ಆದ್ದರಿಂದಲೇ ಈ ನಾಗರಿಕತೆಯಿಂದ ಮಾನವ ವರ್ಗದ ಸಾರೋದ್ಧಾರವು ಅಸಾಧ್ಯವೆಂದು ಬಗೆದು ಅದಕ್ಕೆ ವಿಚಾರಿಗಳಾದ ಲೋಕಹಿತಕಾರಿಗಳು ಉಪಾಯಗಳನ್ನು ಕಂಡುಹಿಡಿಯುವದರಲ್ಲಿದ್ದಾರೆ.

ಹಳ್ಳಿಗಳ ಜನರು

ನಮ್ಮ ಹಳ್ಳಿಗಳ ಜನರು ಪಟ್ಟಣವಾಸಿಗಳಷ್ಟು ಉಪಾಯ ಚತುರರಲ್ಲ. ಅವರು ಶಿಕ್ಷಿತರೂ ಆಗಿರುವದಿಲ್ಲ. ಆದರೆ ಅವರಲ್ಲಿ ಕಂಡು ಬರುವಷ್ಟು ಸತ್ಯ, ಧರ್ಮನಿಷ್ಠೆ, ಪರೋಪಕಾರ ಬುದ್ಧಿ, ಸೇವಾಭಾವ ಮೊದಲಾದುವು ಪಟ್ಟಣವಾಸಿಗಳಲ್ಲಿ ತೋರುವದಿಲ್ಲ. ಆದ್ದರಿಂದಲೇ ಅವರು ಪಟ್ಟಣವಾಸಿಗಳು ಒಡ್ಡುವ ಜಾಲದಲ್ಲಿ ಸುಲಭವಾಗಿ ಸಿಕ್ಕಿಬೀಳುತ್ತಾರೆ. ಅವರು ಪಟ್ಟಣವಾಸಿಗಳ ಸ್ವಾರ್ಥಕ್ಕೆ ಬಲಿಯಾಗುತ್ತಾರೆ. ಇದು ಪಾಶ್ಚಾತ್ಯ ನಾಗರಿಕತೆಯು ಒಂದು ಫಲ. ಪಟ್ಟಣವಾಸಿಗಳು ಹಳ್ಳಿಗರಿಗಿಂತ ಹೆಚ್ಚು ನಾಗರಿಕರಾಗಿದ್ದಾರೆ.

ಸಬಲರು ದುರ್ಬಲರನ್ನು, ಬುದ್ಧಿವಂತರು ಬುದ್ಧಿಹೀನರನ್ನು ಪೀಡಿಸಿ ಅವರ ಮೇಲೆ ತಮ್ಮ ಅಧಿಕಾರ ನಡೆಸುವದು ಅನಾದಿಯಿಂದ ನಡೆದುಕೊಂಡು ಬಂದ ಸಂಗತಿ. ಅದು ಪಾಶ್ಚಾತ್ಯನಾಗರಿಕತೆಯ ಪ್ರಚಾರದ ಪರಿಣಾಮವಲ್ಲವೆಂದು ಅನ್ನುವದುಂಟು. ಆದರೆ ಹೀಗೆ ತಿಳಿಯುವದು ತಪ್ಪಾಗಿದೆ, ಸಬಲರು ದುರ್ಬಲರನ್ನು ಪೀಡಿಸಲಿಕ್ಕೆ ತಮ್ಮ ಬಲವನ್ನು ಉಪಯೋಗಿಸುವುದಲ್ಲ ಬುದ್ಧಿವಂತರು ಬುದ್ಧಿಹೀನರನ್ನು ಪೀಡಿಸಲಿಕ್ಕೆ ತಮ್ಮ ಬುದ್ಧಿಯನ್ನು ಉಪಯೋಗಿಸುವುದಲ್ಲ. ಯಾರಲ್ಲಿ ಸತ್ಯ, ಧರ್ಮನಿಷ್ಠೆ, ಸೇವಾಭಾವಗಳಿರುವವೋ ಅವರು, ಸಬಲರಿದ್ದೂ, ಬುದ್ಧಿವಂತರಾಗಿಯೂ ತಮ್ಮ ಬಲ ಬುದ್ಧಿಗಳನ್ನು ಲೋಕೋದ್ಧಾರಕ್ಕಾಗಿ ಉಪಯೋಗಿಸುವದು ಯಾಕೆ? ಪಾಶ್ಚಾತ್ಯನಾಗರಿಕತೆಯು ಏಕಪ್ರಕಾರ ಪ್ರಚಾರವಾಗಿರುವ ಯುರೋಪಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ಇಂದು ನಾವು ಏನನ್ನು ಕಾಣುತ್ತೇವೆ? ಬೇರೆಬೇರೆ ರಾಷ್ಟ್ರಗಳು ಬಲಿಷ್ಠ ಮತ್ತು ಬುದ್ಧಿವಂತವಾಗಿದ್ದೂ ಅವು ಒಂದೊಂದರ ನಾಶಕ್ಕೆ ಪ್ರವೃತ್ತವಾಗಿರುವದಿಲ್ಲವೆ? ಹೇಳುವ ತಾತ್ಪರ್ಯವೇನಂದರೆ ಪ್ರಪಂಚದಲ್ಲಿ ನಡೆಯುತ್ತಿರುವ ಅತ್ಯಾಚಾರ ಅನಾಚಾರಗಳಿಗೆ ಪಾಶ್ಚಾತ್ಯ ನಾಗರಿಕತೆಯೇ ಕಾರಣವಲ್ಲದೆ ಜನರ ಬಲಾಬಲಗಳಲ್ಲ.

ಗಿರಿಕಂದರಗಳಲ್ಲಿ

ಹಿಮಾಲಯದ ಗಿರಿಕಂದರಗಳಲ್ಲಿ ವಾಸವಾಗಿರುವ ಕೆಲವು ಮನುಷ್ಯಜಾತಿಗಳಿವೆ. ಅವುಗಳಿಗೆ ಮೊನ್ನೆ ಮೊನ್ನೆಯ ತನಕ ಪಾಶ್ಚಾತ್ಯ ನಾಗರಿಕತೆಯು ಸ್ಪರ್ಶವಾಗಿರಲಿಲ್ಲ. ಅವು ಅಶಿಕ್ಷಿತವಾಗಿದ್ದುವು ನಿಜ; ಅವುಗಳಿಗೆ ಓದು ಬರಹ ತಿಳಿದಿರಲಿಲ್ಲ ನಿಜ. ಆದರೇನು? ಅವುಗಳ ಧರ್ಮನಿಷ್ಠೆ, ಸತ್ಯ ಪರೋಪಕಾರ ಬುದ್ಧಿ, ಸೇವಾಭಾವಗಳು ಅಪ್ರತಿಮವಾಗಿದ್ದುವು. ಅನುಪಮವಾಗಿದ್ದುವು. ಆ ಜಾತಿಗಳಷ್ಟು ಉದಾರ, ಸಾಧು, ಪ್ರಾಮಾಣಿಕ ಜಾತಿಗಳು ಬೇರೆ ಇರಲಿಲ್ಲ. ಇದನ್ನು ಗಿರಿಕಂದರಗಳಿಗೆ ಹೋಗಿ, ಅಲ್ಲಿ ಕೆಲವು ಕಾಲ ವಾಸಿಸಿ, ಅಲ್ಲಿಯ ನಿವಾಸಿಗಳ ನಡೆನುಡಿ, ಆಚಾರ ವಿಚಾರ ಜೀವನ ಕ್ರಮಗಳ ಸೂಕ್ಷ್ಮ ಪರೀಕ್ಷಣ ಮಾಡಿದ ಪಾಶ್ಚಾತ್ಯ ನಾಗರಿಕರೇ ಹೇಳಿದ್ದಾರೆ.

ಈಗ ವ್ಯಾಪಾರನಿಮಿತ್ತವಾಗಿಯೂ, ಸ್ವಾರ್ಥಸಾಧನೆಗಾಗಿಯೂ ಹೊರಗಿನ ನಾಗರಿಕ ಜಾತಿಗಳು ಆ ಗಿರಿಕಂದರಗಳನ್ನು ಸೇರಿವೆ. ಪಾಶ್ಚಾತ್ಯ ನಾಗರಿಕತೆಯ ಭೂತವು ಅಲ್ಲಿಯೂ ಸುಳಿಯತೊಡಗಿದೆ. ಆದ್ದರಿಂದ ಈ ಜಾತಿಗಳು ಕ್ರಮಕ್ರಮವಾಗಿ ನಾಗರಿಕ ಜಾತಿಗಳಿಗೆ ಬಲಿಯಾಗುತ್ತ ಬಂದಿವೆ. ಈ ಜನರಿಗೆ ಓದುಬರಹ, ಲೆಕ್ಕ ಏನೂ ಗೊತ್ತಿರುವುದಿಲ್ಲ. ಆದ್ದರಿಂದ ಅಲ್ಲಿಗೆ ಹೋದ ವ್ಯಾಪಾರಿಗಳು, ಸಾಹುಕಾರರು, ಸಾಲಗಾರರು ಅವರನ್ನು ಚೆನ್ನಾಗಿ ಸುಲಿದು ಸುಲಿಗೆ ಮಾಡತೊಡಗಿದ್ದಾರೆ. ಇವರ ಸಂಪರ್ಕದಲ್ಲಿ ಬಂದು ಆ ಜನರ ಪತನವಾಗಲಿಕ್ಕೆ ಆರಂಭವಾಗಿದೆ. ಅವರು ಉಪಾಯ ಕಾಣದೆ ಒಂದೊಂದಾಗಿ ತಮ್ಮ ಗುಣ ವೈಶಿಷ್ಟ್ಯಗಳನ್ನು ಮರೆತು ಆ ನಾಗರಿಕರನ್ನೇ ಅನುಕರಿಸತೊಡಗಿದ್ದಾರೆ.

ಇಂಥ ಜಾತಿಗಳು ಪೂರ್ಣನಾಗರಿಕವಾಗಿ ಬಿಟ್ಟರೆ ಮತ್ತೆ ಅವುಗಳ ಭವಿಷ್ಯವು ಯಾವ ರೀತಿ ರೂಪಿತವಾಗಬಹುದೋ ಎಂದು ಕಲ್ಪಿಸಿದ ಮಾತ್ರಕ್ಕೇ ಎದೆ ನಡುಗುತ್ತದೆ, ಬಹು ಭಯವಾಗುತ್ತದೆ. ಈಗ ಗಿರಿಕಂದರಗಳ ಈ ಜಾತಿಗಳ ಪೂರ್ಣಪತನವಾಗಿರುವದಿಲ್ಲ, ಆದ್ದರಿಂದ ಅವುಗಳಲ್ಲಿ ಮಹತ್ತಮಗುಣ ವಿಶೇಷಗಳನ್ನೂ ಈಗಲೂ ಕಾಣಬಹುದು. ಚಿಕ್ಕ ಮಕ್ಕಳು ಕೂಡ ಅಲ್ಲಿ ಸ್ವಾರ್ಥವನ್ನು ತೋರಿಸುವದಿಲ್ಲ. ಅವರಿಗೆ ಏನಾದರೂ ತಿಂಡಿ-ವಸ್ತುಗಳನ್ನು ಕೊಟ್ಟರೆಂದರೆ ಎಲ್ಲರೂ ಕೂಡಿ, ಸಂತೋಷದಿಂದ ಹಂಚಿಕೊಂಡು ತಿನ್ನುವರು. ತಡವಾಗಿ ಬಂದವನು ಕೂಡ ನಿರಾಶನಾಗಬೇಕಾದುದಿಲ್ಲ. ಅವನಿಗೂ ಆಗ ಉಳಿದುದರ ಒಂದು ಪಾಲು ದೊರೆಯುವದರಲ್ಲಿ ಸಂದೇಹವಿಲ್ಲ. ಆ ಜನರು ಪ್ರತಿಫಲವಾಗಿ ಏನನ್ನೂ ಕೊಡದೆ ಬೇಕಾದುದನ್ನು ತೆಗೆದುಕೊಳ್ಳುವದೆಂದರೆ ತಮ್ಮ ಗೌರವಕ್ಕೆ ಹಾನಿಕರವೆಂದು ತಿಳಿಯುತ್ತಾರೆ.

ನಾಗರಿಕರು ಹೇಗಿದ್ದಾರೆ

ಗವರ್ನಮೆಂಟ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾರೀಖು ೨೮ನೇ ಶನಿವಾರದಂದು [illegible] ನಮ್ಮ ಡಿ ಸ್ಟ್ರಿಕ್ಟ ಸ್ಕೂಲ್ ಇನ್ಸ್‌ಪೆಕ್ಟರಾದ ಡಾ. ಕೆ. ಪಿಲ್ಬ [illegible] ಶ್ರೀಯುತ ಅಧ್ಯಕ್ಷತೆಯಲ್ಲಿ ಜರಗುವುದು.

ಗೋಲ್ಡ ಕ್ಲಬ್ಬಿನ ಆರಂಭೋತ್ಸವ

[illegible] ಗೋಲ್ಡ ಕ್ಲಬ್ಬಿನ ಆರಂಭೋತ್ಸವವು ಕಳೆದ ಆದಿತ್ಯವಾರ ಸಾಯಂ ಸಮಯ ಡಿಸ್ಟ್ರಿಕ್ಟ ಮತ್ತು ಸೆಷನ್ಸ ಜಡ್ಜರಾದ ಮಾನ್ಯ ಶ್ರೀ ಸಿ. ರಾಜಗೋಪಾಲಾಚಾರಿಯ [illegible] ನೆರವೇರಿ [illegible]

ತ್ರಿಪುರಿ ಕಾಂಗ್ರೆಸ್ ಪ್ರತಿನಿಧಿತ್ವ

ತ್ರಿಪುರಿ ಕಾಂಗ್ರೆಸ್ಸಿಗೆ [illegible] ಪ್ರತಿನಿಧಿಗಳ [illegible] ನಡೆದ [illegible]

ಸಾರ್ವಜನಿಕ ಸಭೆ

[illegible] ಸರಕಾರದ [illegible] ಕಳೆದ ಆದಿತ್ಯವಾರ [illegible] ನಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು. [illegible] ಸರಕಾರದ [illegible] ಮನ್ನು [illegible]

[illegible] ಸರಕಾರದ ಕ್ರಮವನ್ನು ಕೇಳಿ ಗವರ್ನಮೆಂಟ ಕೊಡಲೇಕಿನ ಹೊರಿಸಿ [illegible] ಜಿಲ್ಲಾ ಕಲೆಕ್ಟರು ದಯಾರನ್ನು ನಡೆಸಿದರು.

ತಾಲೂಕು ಸಮಾಚಾರ

ಉಡುಪಿ

ಜಿಲ್ಲಾ ಕ್ಲೋಗಿ [illegible] ಕಮಿಟಿ ಚುನಾವಣೆ

ಉಡುಪಿ ತಾಲೂಕಿನ [illegible] ಕ್ಷೇತ್ರ ಸರ್ಕಲಿಗೆ ಶ್ರೀ ಎಸ್. ಮಂಜಿನ ಶೆಟ್ಟಿ, [illegible] ಕರ್ಕಳ ಸರ್ಕಲಿಗೆ ಶ್ರೀ [illegible] ಗಣಪಯ್ಯ ಶೆಟ್ಟಿ [illegible] ಪ್ರತ್ಯಾಸರಕ್ಕೆ ಶ್ರೀ [illegible] ನಾಥ ಶೆಟ್ಟಿ, ಉಡುಪಿ [illegible] ಸರ್ಕಲಿಗೆ ಶ್ರೀ [illegible] ಸರ್ಕಲಿಗೆ ಶ್ರೀ [illegible] ಸರ್ಕಲಿಗೆ [illegible] ಸ್ಪರ್ಧಿಗಳು [illegible] ಸರ್ಕಲಿನ [illegible] ನಡೆದು [illegible] ಶೆಟ್ಟಿ ಮತ್ತು [illegible] ಪತ್ರಗಳು [illegible]

ತಾ [illegible] ರಂದು [illegible] ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು [illegible]

[illegible]

ಉದಾರತ್ವ, ಕಾರ್ಯಾವಿಚಕ್ಷಣೆ, ಉದ್ಯೋಗ ದುರಂಧರತೆ, ನೌಕರಪ್ರೀತಿ ಇತ್ಯಾದಿ ವರ್ಣಿಸಿ ಭಾಷಣ ಕೊಟ್ಟರು. ಈ ಪ್ರೆಸ್ಸು ಇನ್ನು ಕೆಲವೇ ದಿವಸಗಳಲ್ಲಿ ಪ್ರಭಾಕರ ಪ್ರೆಸ್ ಲಿಮಿಟೆಡ್ ಎಂಬ ಸಂಸ್ಥೆಯಾಗಿ ಮಾರ್ಪಡುವುದು.

ಕಾರ್ಕಳ

ಕಾರ್ಕಳ ಗುಹೆಳಿಯರ ಪರಸ್ಪರ ಸಹಾಯ ಕ್ರಮ ಕೈಗಾರಿಕೆ ಅಭಿವೃದ್ಧಿ ಸಂಘದ ಒಂದು ಮಹಾಸಭೆಯು ತಾ. ೧೭—೧—೧೯೩೯ರ ದಿನ ಒಂದೂ ಬೆಲೆಕಾ ಶಾರದಾಶಾಲೆಯಲ್ಲಿ ಶ್ರೀಮಾನ್ [illegible] ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಧ್ಯೇಯವಾದರ್ಶ ಮತ್ತು ಕಾರ್ಯಸಾಧನೆಗೆ ಅನುಕೂಲವಾದ ಅನೇಕ ಠರಾವುಗಳು ಮಂಜೂರಾದುವು. ಈ ಸಂಘದ ಸದಸ್ಯರು ಅನುಕೂಲದಬಗ್ಗೆ ಒಂದು ನಡೆಯುವ ತರಗತಿಯನ್ನು ತೆರೆಯುವ ಕುರಿತು ಶ್ರೀ. [illegible] ಕಾಮತರು. ಕೊಟ್ಟ ಸೂಚನೆ ಮತ್ತು ನಡಾವಳಿಯನ್ನು ಕೃತಜ್ಞತಾಪೂರ್ವಕ ಸ್ವೀಕರಿಸಲಾಯಿತು.

ಮದ್ರಾಸು ಸರಕಾರದ [illegible] ಕಮಿಶನ ರರಾದ ಶ್ರೀ [illegible] ರಾಮನಾಥನ್, [illegible] ಐ. ಸಿ. ಎಸ್. ರವರು ತಾ. ೧೭—೧—೧೯೩೯ರ ದಿನ ಶ್ರೀ [illegible] ವೆಂಕಟ್ರಾಯ ಬಾಳಿಗ, ಎಂ. ಎಲ್. ಎ ರವರೊಂದಿಗೆ ಕಾರ್ಕಳಕ್ಕೆ ಬಂದು ಇಲ್ಲಿಯ ಇತಿಹಾಸ ಪ್ರಸಿದ್ಧ ಸ್ಥಾನಗಳನ್ನು ಸಂದರ್ಶಿಸಿ, ಹರಿಜನ [illegible] ಅಲ್ಲಿಯ [illegible] ಗಳನ್ನು [illegible] ಮಾಡುತ್ತಿರುವ [illegible] ಒದಗಿಸುವ ಭರವಸೆಯನ್ನು ಕೊಟ್ಟಿದ್ದಾರೆ.

ಸಾದರ ಸ್ವೀಕಾರ

ಮೈಸೂರಿನ [illegible] ಮ್ಯಾನೇಜರಾದ [illegible] ಕಳುಹಿ ಕೊಟ್ಟ ೧ ಮತ್ತು ೩ ಇಸವಿಯ 1939ನೇ ಇಸವಿಯ ಕಲೆಂಡರ್ [illegible] ಕಳುಹಿಸಿದ [illegible] ಗಳನ್ನು ಸಾದರದಿಂದ ಸ್ವೀಕರಿಸಿದ್ದೇವೆ

ನೋಟೀಸು

ಕೆನರಾ ಬೇಂಕ್ ಲಿಮಿಟೆಡ್

ಸಿಟಿ, ಮಂಗಳೂರು

ಈ ಕಳಗೆ [illegible] ಬೇಂಕಿನಿಂದ [illegible] ನಡೆದ [illegible] ಒಪ್ಪಿಸಿ [illegible] ತಾ. 1—2—1939ನೇ [illegible] ತಾ. 14 2—1939ನೇ [illegible] ಈ ಬೇಂಕಿನವರಿಗ [illegible] ಈ ದಿನ ವ ಹೊತ್ತಿನಲ್ಲಿ ಹಿಂಗ ನೋಟೀಸು ಕೊಡದೇ ಈ ಬೇಂಕಿನ ಮೊಂಗರಕೆ [illegible] ಬಹಿರಂಗವಾಗಿ [illegible] ಈ ಮುಖಲ ಕಳುಹಿಸಲಾಗುತ್ತದೆ.

ಲೋನ ನಂಬ್ರ S. L. 72/36

ಬಾಳ್ತಿಲ ಪೋಸ್ಟು, ಬಾಳ್ತಿಲ ಮಾಗಣೆ [illegible] ಇವರ [illegible]

[illegible] ರೂ. 10.

ಬಾಕಿಯಾದ ಬಡ್ಡಿ ವಸ್ತೆ ತಾ. ೭—೩—೧ ಮತ್ತು ಈ ನೋಟೀಸು ಖರ್ಚು ಸಹಾ.

Office of the Bank, City, Mangalore 26th January 1939. — P. Krishna Kamath, Agent

7 O'CLOCK

7 ಒ'ಕ್ಲೋಕ್ ಸೆಟ್ಟಿನಲ್ಲಿ ಒಂದು 7 ಒ'ಕ್ಲೋಕ್ ಲೋಹದ ರೇಜರು ಮತ್ತು ಎರಡು ಬ್ಲೇಡುಗಳು ಒಂದು ಅಚ್ಚು ಕಟ್ಟಾದ ಪೆಟ್ಟಿಗೆಯಲ್ಲಿರುತ್ತವೆ— ನಿಜವಾದ ಲಾಭವಾಗಿದೆ.

ಕ್ರಯ 8 ಆಣೆ



ಒಂದು ಸೆಟ್ಟಿಗೆ ಆಣೆ 12

ಯುರೋಪಿನಿಂದ ನಾವಿನ್ನು ಕಲಿಯಬೇಕಾದುದೇನಿಲ್ಲ

ಡಾ. ಸಿಂಕ್ಲೆಯಾರರ ಅಭಿಪ್ರಾಯ

ಹೊನಲೂಲು ಎಂಬಲ್ಲಿರುವ ಹವಾಯಿ ವಿಶ್ವವಿದ್ಯಾಲಯದ ಒರಿಯಂಟ್ ಇನ್‌ಸ್ಟಿಟ್ಯೂಟಿನ ಮಾಲಿಕರಾದ ಡಾ। ಗ್ರೆಗ್ ಸಿಂಕ್ಲೆಯಾರರಿಂಟವರು ಕಳೆದ ವಾರ ಮಹಾತ್ಮರನ್ನು ಕಂಡು ಮಾತನಾಡಿದರು

ಅವರಿಬ್ಬರೊಳಗೆ ನಡೆದ ಮಾತುಕತೆಯನ್ನು ಬರೆಯುತ್ತಾ ಡಾ ಸಿಂಕ್ಲೆಯಾರರು ಭಾರತದ ನಾಗರಿಕತೆಯೇನೆಂಬುದನ್ನು ತಿಳಿದುಕೊಂಡು ಅಮೇರಿಕಕ್ಕೆ ಹೋಗಲು ಬಂದಿದ್ದರೆಂದು ಶ್ರೀ ಪ್ಯಾರಿಲಾಲರು ಉಲ್ಲೇಖಿಸಿರುವರು

ಹವಾಯಿಯ ಮತ್ತು ಒರಿಯಂಟಲ್ ಇನ್‌ಸ್ಟಿಟ್ಯೂಟಿನ ಪರಿಚಯ ಮಾಡಿಕೊಟ್ಟಾದ ಬಳಿಕ ಡಾ ಸಿಂಕ್ಲೆಯಾರರ ಮಹಾತ್ಮರನ್ನು ಕುರಿತು ಹೀಗೆಂದು ಹೇಳಿದರು.

ಗ್ರೀಸ್ ಮತ್ತು ರೋಮಿನ ನಾಗರಿಕತೆಯಿಂದ ನಾವು ಬೇಕಾದಷ್ಟು ಸ್ಫೂರ್ತಿಯನ್ನು ಪಡೆದಿರುವೆವು ಪ್ರಕೃತ ಯುರೋಪಿನಿಂದ ನಾವು ಕಲಿಯತಕ್ಕುದೇನೂ ಇಲ್ಲ ಹಿಂಸೆ ಮತ್ತು ಸೈನ್ಯದ ಆಡಳಿತದಿಂದಾಗಿ ಅಧೋಗತಿಯನ್ನೈದುತ್ತಿರುವ ಯೂರೋಪನ್ನು ರಕ್ಷಿಸುವ ಉಪಾಯಗಳೇನಾದರೂ ಇವೆಯೋ ಎಂಬುದಾಗಿ ಕಂಡುಹಿಡಿಯಲು ನಾವಿಂದು ಪೌರ್ವಾತ್ಯ ದೇಶಗಳತ್ತ, ಪ್ರಧಾನವಾಗಿ ಹಿಂದೂ ದೇಶದತ್ತ ನಮ್ಮ ದೃಷ್ಟಿಯನ್ನು ಹೊರಳಿಸಿರುವೆವು ಆಂಗ್ಲ ಕವಿಗಳಾದ ಶೇಕ್ಸಪಿಯರ ಮತ್ತು ಮಿಲ್ಟನರನ್ನೋದಿ ತಿಳಿಯುವುದನ್ನು ವಿದ್ಯಾವಂತನೆಂದು ಕರೆಯಲು ಸಾಧ್ಯವಿಲ್ಲವೆಂದು ನಮ್ಮಲ್ಲಿಯ ಪ್ರೊಫೆಸರರೊಬ್ಬರು ಹಿಂದೆ ತಿಳಿದಿದ್ದರು. ಆದರೆ ೫೦ ವರ್ಷಗಳ ನಂತರ, ಕಾಳಿದಾಸ, ಭರ್ತೃಹರಿಗಳನ್ನರಿಯದವನನ್ನು ಅವಿದ್ಯಾವಂತರ ಸಾಲಿಗೆ ಸೇರಿಸುವರೆಂದು ನಾನು ಖಂಡಿತವಾಗಿ ನಂಬುತ್ತೇನೆ

ಅಮೇರಿಕದಲ್ಲೊಮ್ಮೆ ತಾವು ಪ್ರವಾಸ ಮಾಡಬೇಕೆಂದು ನಿಮ್ಮನ್ನು ಕೇಳಬೇಕೆಂದು ನನಗೆ ಮನಸ್ಸಿತ್ತು ಆದರೆ ನನ್ನ ಮಿತ್ರರಾದ ಚಾರ್ಲಿ ಎಂಡ್ರ್ಯೂಸರು "ಬೇಡ ಅವರಿಗೆ ಎಂದೂ ಸಾಧ್ಯವಾಗಲಿಕ್ಕಿಲ್ಲ ಭಾರತದಲ್ಲಿ ಅವರಿರುವುದು ಅಗತ್ಯ" ಎಂಬುದಾಗಿ ನನಗೆ ಮೊದಲೇ ಹೇಳಿಬಿಟ್ಟರು ಆದರೂ 'ತಾವು ಅಮೇರಿಕಕ್ಕೆ ಬಂದರೆ ನಾವು ನಿಮ್ಮನ್ನು ಪ್ರೇಮಾದರಗಳಿಂದ ಸ್ವಾಗತಿಸಲು ಸಿದ್ಧರೇ ಇರುವೆವು"

"ಅನೇಕ ಬಾರಿ ನಾನು ಅಮೇರಿಕಕ್ಕೆ ಹೋಗಬೇಕೆಂದು ಹೊರಟುದಿದೆ" ಮಹಾತ್ಮರು ಉತ್ತರವಿತ್ತರು "ಒಂದು ದಿನ ನಾನು ಬರಲೂ ಬಹುದು ಆದರೆ ಈಗಿನ ಪರಿಸ್ಥಿತಿಯನ್ನು ಕಂಡರೆ ನನಗೆ ಅಮೇರಿಕಕ್ಕೆ ಹೋಗಲು ಆಗುವುದಿಲ್ಲವೆಂದೇ ಹೇಳಬೇಕು"

ಬ್ರಿಟನ್ನು ನಮಗ ಬುದ್ಧಿಹೇಳಬೇಕಾಗಿಲ್ಲ

"ಬುದ್ಧಿ" ನಮಗೆ ಮೊದಲೇ ಬಂದಿರುವುದು

ಶ್ರೀ ಎಚ್ ವಿ ಕಾಮತರ ಭಾಷಣ

"ಸಹಿಸಲಸದಳವಾದ ಬಡತನದಲ್ಲಿ ಮುಳುಗಿರುವ ತನ್ನ ಮಕ್ಕಳನ್ನುದ್ಧರಿಸಬೇಕಾದರೆ ಶಕ್ತಿಸಂಪನ್ನವಾದ ಆರ್ಥಿಕ ಸಂಘಟನೆಯಾಗತಕ್ಕದೆಂದು ಭಾರತವಿಂದು ಮನಗಂಡಿರುವುದು. ನಮ್ಮ ಭವಿಷ್ಯವನ್ನು ನಾವೇ ರೂಪಿಸಿಕೊಳ್ಳಬೇಕಾಗಿದೆ. ಇಲ್ಲದಿದ್ದರೆ ನಾವು ಅಳಿದು ಹೋಗುವುದೇ ಖಂಡಿತ ನಮ್ಮ ಆರ್ಥಿಕ ಸಂಘಟನಾಯೋಜನೆಯು ಬ್ರಿಟಿಷ್ ಭಂಡವಾಳಗಾರರನ್ನೂ ಕಾರ್ಖಾನೆಯವರನ್ನೂ ದಿಗಿಲುಗೊಳಿಸಬಹುದಾದರೂ ನಾವದಕ್ಕೆ ಹೆದರುವಂತಿಲ್ಲ. ನಾವು ಮುಂದೆ ಸಾಗುವೆವು" ಎಂಬುದಾಗಿ ರಾಜಕೀಯ ಯೋಜನಾ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಎಚ್. ವಿ ಕಾಮತರು ಅದೊಂದೆಡೆ ಭಾಷಣ ಮಾಡುತ್ತ ಎಂದಿರುವರು

"ಬ್ರಿಟನ್ನು ನಮಗೆ ಬುದ್ಧಿವಾದವನ್ನು ಹೇಳಬೇಕಾದದ್ದಿಲ್ಲ ಭಾರತ ಎಂದು ಸ್ವಾವಲಂಬಿಯಾಗಿದ್ದು, ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳುವುದು.

ಬ್ರಿಟನ್ನಿಂದು ಉಪದೇಶಿಸುತ್ತಿದೆ, ಎಚ್ಚರಿಸುತ್ತಿದೆ ಮೋಸಕ್ಕೊಳಗಾಗುವ ದಿನಗಳನ್ನು ಬಹುದೂರವಿರಲಿಕ್ಕಿಲ್ಲ ಈ ಬಗೆಯ ಆಟಗಳೆಲ್ಲವೂ ನಮಗೆ ಚಿರಪರಿಚಿತವಾಗಿರುವುವು ನಮ್ಮ ಜನಾಂಗದ ಅಭಿವೃದ್ಧಿಗಾಗಿ ನಾವೇ ಆರ್ಥಿಕ ಸಂಘಟನೆಯನ್ನು ಕೈಕೊಂಡಿರುವೆವಲ್ಲದೆ ನಮ್ಮನ್ನು ಸುಲಿದು ಹೊಟ್ಟೆ ತುಂಬಿಸಿಕೊಳ್ಳುತ್ತಿರುವ ಬ್ರಿಟನ್ನಿನ ಶಕ್ತಿಯನ್ನು ಮುರಿಯಲಿರುವೆವೆಂಬುದು ತಿಳಿದಿಕೊಳ್ಳಲಿ

ಮದುವೆಗಾಗಿ ಮಕ್ಕಳನ್ನು ಕೊಲೆಮಾಡಿದಳು

ಕರಾಚಿಯಲ್ಲೊಬ್ಬ ಹೆಂಗಸ ಆಕೆಗೆ ಮೊದಲನೆಯ ಗಂಡನಲ್ಲಿ ಹುಟ್ಟಿದ ಮೂವರು ಹೆಣ್ಣುಮಕ್ಕಳಿದ್ದವು ಆಕೆಯು ಓರ್ವ ಪುರುಷನನ್ನು ಪ್ರೀತಿಸುತ್ತಿದ್ದಳ ಆದರೆ ಆಕೆಗೆ ಮೊದಲ ಮೂವರು ಮಕ್ಕಳಿರುವುದರಿಂದ ತಾನಾಕೆಯನ್ನು ಮದುವೆಯಾಗಲೊಲ್ಲೆನೆಂದು ಆತನು ನಿರಾಕರಿಸಿದನು ತನ್ನ ಸುಖದ ದಾರಿಯಲ್ಲಿ ತನ್ನ ಮೂವರು ಮಕ್ಕಳೇ ಅಭ್ಯಂತರವಾಗಿರುವರೆಂದು ಬಗೆದು ಆಕೆಯು ಅವರಲ್ಲಿಬ್ಬರನ್ನು ... ಸ್ಥಳಕ್ಕೆ ಬಿಟ್ಟು ... ಈ ಕೊಲೆಯನ್ನು ಮಾಡಿದಳು ... ನೋಡುತ್ತಿದ್ದ ಮೂರನೆಯ ಹುಡುಗಿಯು ಹೆದರಿ ಚೀರಿದಳು ತಾಯಿಯು ಓಡಿ ಬಂದು ಆಕೆಯನ್ನು ಎಳೆದೊಯ್ದು ... ಪ್ರಯತ್ನಿಸಿದಳ. ಆದರೆ ಆಕೆಯು ತಪ್ಪಿಸಿಕೊಂಡು ಹೋಗಿ, ನಡೆದ ವಿಷಯವನ್ನು ಕಲವು ಮಂದಿಗೆ ತಿಳಿಸಿದಳ

ಈ ವರ್ತಮಾನವು ಪೋಲೀಸರಿಗೆ ಮುಟ್ಟಿ, ಅವರು ಆ ಕೊಲೆಗಡುಕಿಯನ್ನು ದಸ್ತಗಿರಿ ಮಾಡಿರುವರು ಇನ್ನು ಯಾವ ಬಗೆಯ ಸುಖವನ್ನು ಪಡೆಯಲಿರುವಳೋ ನೋಡಲಿದೆ

ಸಭೆಯಲ್ಲೊಬ್ಬ ಮಾತನಾಡದ ಗಾಂಧಿ'

ಕಾಸು ಕೊಟ್ಟರೆ ಬಾಯಿ ಬಿಡುತ್ತಾನೆ.

ಸರ್ಬಿಯದಲ್ಲಿ ಮಿಲೋವನ್ ಪೆಟ್ರೊವಿಚ್ ನೆಂಬೊಬ್ಬ ವಿಚಿತ್ರ ಪುರುಷನಿದ್ದಾನೆ ಈತನಿಗೆ ಬಾಯಿ ಬರುತ್ತದಾದರೂ ತಿಂಗಳುಗಟ್ಟಲೆ ಮಾತನಾಡುವುದೇ ಇಲ್ಲ ಹೀಗೆ ಆತನು ಮೌನವ್ರತವನ್ನು ಧರಿಸುವುದರಿಂದ ಅಲ್ಲಿಯವರೆಲ್ಲರೂ ಆತನನ್ನು "ಗಾಂಧಿ" ಎಂಬುದಾಗಿ ಸಂಬೋಧಿಸುವರು

ಆದರೆ ಮಾತನಾಡಲು ಕಾಸುಕೊಟ್ಟರೆ ಆತನು ತನ್ನ ಮೌನವ್ರತವನ್ನು ಮುರಿಯುತ್ತಾನೆ 'ನಾನು ಬಡವರಿಗಾಗಿ, ರೋಗಿಗಳಿಗಾಗಿ, ಅಂಗಹೀನರಿಗಾಗಿ ಮತ್ತು ನಿರುದ್ಯೋಗಿಗಳ ಮಾತನಾಡುತ್ತೇನೆ' ಎಂಬುದೊಂದು ಚೀಟಿಯನ್ನು ಬೆನ್ನಿಗೆ ತೂಗಿಸಿಕೊಂಡು ಆತನು ಊರಿನ ಕೇರಿಕೇರಿಗಳಲ್ಲಿ ಅಲೆದಾಡುವನು. ಆತನ ಕೂಡೆ ಮಾತನಾಡಬೇಕೆಂದಿದ್ದವರು ೫ ನಿಮಿಷಕ್ಕೆ ಎರಡಾಣೆಗಳನ್ನು ಕೊಟ್ಟರಾಯಿತು.'

ಯಹೂದಿಗಳ ಮೇಲೆ ಹಿಟ್ಲರರ ವಕ್ರದೃಷ್ಟಿ!

ಪ್ರಜೋತ್ಪತ್ತಿಗಾಗಿ ಅವರಿಗೆ ಪಾಣಿಗ್ರಹಣ ಮಾಡಲಾಗುವುದು

ಕ್ರೈಸ್ತ ದೇವಾಲಯಗಳೆಲ್ಲವನ್ನೂ ರದ್ದುಗೊಳಿಸಿ, ಅವುಗಳನ್ನು ತನ್ನ ಸೈನಿಕರ ವಸತಿಗೃಹಗಳನ್ನಾಗಿಯೂ, ಇಲ್ಲವೆ ಆಟದ ಅಥವಾ ಪಾಠದ ಶಾಲೆಗಳನ್ನಾಗಿಯೂ ಮಾರ್ಪಡಿಸಬೇಕೆಂಬ ಮಹದಾಲೋಚನೆಯನ್ನು ಹಿಟ್ಲರರು ಮಾಡುತ್ತಿರುವರು

ಆದರೆ ಈ ರೀತಿಯಲ್ಲಿ ಇಂಗ್ರೇಜಿಗಳಿಂದ ಹೊರಗೆ ತಳ್ಳಲ್ಪಟ್ಟ ಸಾಧಾರಣ ೧೦೦,೦೦೦ ಮಂದಿಯ ಪಾಡೇನು? ೫೮ ವರ್ಷಕ್ಕಿಂತ ಕಡಿಮೆ ಪ್ರಾಯದವರನ್ನು ಜರ್ಮನಿಯನ್ನು ಬಿಟ್ಟು ಹೊರಗೆ ಹೋಗಗೊಡಲಾಗುವುದಿಲ್ಲ

ಸೈನ್ಯದಲ್ಲಿ ಕೆಲಸ ಮಾಡಲು ಅವರನ್ನು ತರಬೇತಿ ಮಾಡಲಾಗುವುದು ಬೇರೆ ಬೇರೆ ವೃತ್ತಿಗಳನ್ನವರು ಅನುಸರಿಸುವಂತೆ ಮಾಡಲಾಗುವುದು. ಯುದ್ಧದ ಸಮಯದಲ್ಲಿ ಮಾತ್ರ ಅವರನ್ನು ಸೈನ್ಯದಲ್ಲಿ ಸೇರಿಸಿಕೊಳ್ಳಲಾಗುವುದು.

ಇದು ಪಾದ್ರಿಗಳ ಗತಿಯಾಯಿತು ಇನ್ನು ಮಾದ್ರಿಗಳಿಗ? ಅವರನ್ನು ಮದುವೆ ಮಾಡಿಕೊಳ್ಳುವಂತೆ ಬಲಾತ್ಕರಿಸಲಾಗುವುದು ಅಂತೂ ಜರ್ಮನಿಯ ಪ್ರಜಾಭಿವೃದ್ಧಿಯಾಗಬೇಕೆಂಬ ನಾಝಿ ನೀತಿಯನ್ನು ಈ ರೀತಿಯಲ್ಲೂ ಜ್ಯಾರಿಗೆ ತರಲಾಗುವುದು

ಹಿಟ್ಲರರ ಗುರು ಯಾರು?

ಒಬ್ಬ ಆಂಗ್ಲೇಯನು!

ನಾಝಿ ನೀತಿಯನ್ನು ಪ್ರಚಾರಕ್ಕೆ ತಂದವರು ಹಿಟ್ಲರರಲ್ಲ ಬ್ರಿಟನಿನ ಈಗಿನ ಪ್ರಧಾನ ಮಂತ್ರಿಯಂತೆ ನಾಮಧೇಯವುಳ್ಳ ಓರ್ವ ಆಂಗ್ಲೇಯನ 'ಜರ್ಮನಿಯ ಆಸ್ತೇಕ' ಇದೀ ಪ್ರಸಿದ್ಧ ಚರಿತ್ರೆಯನ್ನೇ ಮಾರ್ಪಡಿಸಿದ ಈ ಆಂಗ್ಲೇಯನ ಹೆಸರಾದರೂ ಮಿ ಹಸ್ಟನ್ ಸ್ಟುವರ್ಟ್ ಚೆಂಬರ್ಲೇನ್ ಎಂದು

ಈತನು ಸಸ್ಯ ಮತ್ತು ವೈದ್ಯ ಶಾಸ್ತ್ರವನ್ನು ಜೆನೆವಾ ವಿಶ್ವವಿದ್ಯಾಲಯದಲ್ಲಿ ಅಭ್ಯಸಿಸಿದನು ಅಲ್ಲಾತನಿಗೆ, ಜರ್ಮನಿಯ ವಾಗ್ಮಿಯ, ಸಂಗೀತ ರಸಾಯನ ಶಾಸ್ತ್ರ, ತತ್ವಶಾಸ್ತ್ರ, ಯುದ್ಧ ಶಾಸ್ತ್ರಗಳ ಹುಚ್ಚು ಹಿಡಿಯಿತು ಜರ್ಮನ್ ಭಾಷೆಯಲ್ಲಿ ಆತನು ಪಾಂಡಿತ್ಯವನ್ನು ಸಂಪಾದಿಸಿದನಲ್ಲದೆ, ಅಂದಿನಿಂದ ಇಂಗ್ಲಾಂಡಿನಲ್ಲಿರುವ ತನ್ನ ಇಷ್ಟಮಿತ್ರರಿಗೆ ಜರ್ಮನ್ ಭಾಷೆಯಲ್ಲೇ ಪತ್ರಾದಿಗಳನ್ನು ಬರೆಯತೊಡಗಿದನು

ಜನಾಂಗಗಳ ಚರಿತ್ರೆಯನ್ನಾತನು ಓದಿ ತಿಳಿದುಕೊಂಡನಲ್ಲದೆ, ಅನೇಕ ಶೋಧಗಳನ್ನೂ ಈ ಕುರಿತು ಆತನು ನಡೆಸಿದನು ಮತ್ತು ಮಾನವ ಜಾತಿಯ ದೊಡ್ಡದೊಂದು ಚರಿತ್ರೆಯನ್ನು ಬರೆದನು ಈ ಪುಸ್ತಕದಲ್ಲಾತನು, ಅನೇಕಾನೇಕ ವರ್ಷಗಳ ಹಿಂದೆ ಹಿಂದೂದೇಶದಿಂದ ಜರ್ಮನಿಗೆ ಹೋದ ಅದೊಂದು 'ಆರ್ಯ' ಪಂಗಡದವರಿಂದಾಗಿ ದಕ್ಷಿಣ ಯೂರೋಪು ಪ್ರಗತಿಯನ್ನೈದಿತೆಂದೂ, ಅವರ ಪರಂಪರೆಯವರೇ ಈಗಿನ ಟ್ಯೂಟೋನಿಕ್ ಜನಾಂಗದವರೆಂದೂ ಪ್ರತಿಪಾದಿಸಿರುವನು

ಯೂರೋಪಿನಲ್ಲಿ ಈ ಪುಸ್ತಕವು ಮಾರಿ ಹೋದುದಕ್ಕೆ ಮಿತಿಯಿಲ್ಲ ಆಗಿನ ಕೈಸರರಾದ ಎರಡನೆಯ ವಿಲಿಯಮರೇ ಎರಡು ಸಾವಿರ ಪ್ರತಿಗಳನ್ನು ಪಡೆದು ತನ್ನ ಮಿತ್ರರಿಗೆ ಹಂಚಿದರು. ಮಿ. ಚೆಂಬರ್ಲೇನನಿಗೂ ಕೈಸರರಿಗೂ ಸ್ನೇಹವುಂಟಾಯಿತು.

೧೯೦೮ರಲ್ಲಿ ಈ ಪುಸ್ತಕದ ಪ್ರತಿಯೊಂದು ಎಡೋಲ್ಫ್ ಹಿಟ್ಲರರ ಕೈಯೊಳಗೆ ಬಿತ್ತು. ಜರ್ಮನಿಯೊಳಗಿರುವ ಪ್ರಬಲ ಜನಾಂಗಗಳೆಂದರೆ ಯಹೂದ್ಯರು ಮತ್ತು ಜರ್ಮನರು ಇವರೊಳಗೆ ಯಾವಾಗಲೂ ಕಲಹವು ತಪ್ಪದು ಎಂಬುದಾಗಿ ಆ ಪುಸ್ತಕದಲ್ಲಿ ಹೇಳಲ್ಪಟ್ಟಿತ್ತು ಕಷ್ಟಪರಂಪರೆಗಳನ್ನು ಅನುಭವಿಸಿ ವಿಕಾರಗೊಂಡ ಹಿಟ್ಲರರ ಮನಸ್ಸಿನಲ್ಲಿ ಈ ವಿಷಯವು ಚೆನ್ನಾಗಿ ನಾಟಿತು ತನ್ನ ಸುತ್ತಮುತ್ತಲೂ ಕಾಣಬರುತ್ತಿರುವ ದುಷ್ಕೃತ್ಯಕ್ಕೆ ಇದೇ ಕಾರಣವೆಂದು ಅವರು ಮನಗಂಡರು ಯಹೂದ್ಯರ ಕುರಿತು ಕೋಪದ ಕಿಡಿಯು ಅಂದೇ ಅವರ ಮನಸ್ಸಿನಲ್ಲಿ ಸಿಡಿಯಿತು ಇದೇ ಚೆಂಬರ್ಲೇನನು ಬರೆದ, ೧೯೦೮ರಲ್ಲಿ ಪ್ರಕಟವಾದ 'ಆರ್ಯರ ಸಂಸ್ಕೃತಿ' ಎಂಬ ಇನ್ನೊಂದು ಪುಸ್ತಕವನ್ನೂ ಹಿಟ್ಲರರು ಓದಿದರು

ಮಹಾಯುದ್ಧವು ಪ್ರಾರಂಭವಾಯಿತು, ಮಿ ಚೇಂಬರ್ಲೇನನು ದಿಗ್ಭ್ರಮೆಗೊಂಡನು ಪ್ರಪಂಚದ ನಾಗರಿಕತೆಯ ದೀವಿಗೆಯಾದ ಜರ್ಮನಿಯನ್ನು ಟ್ಯೂಟೋನಿಕ್ ಜನಾಂಗವು ಪೋಷಿಸಬೇಕೆಂದು ಅವನು ಸಾರಿದನು ನಿರಾಶೆಯಿಂದ ಕೋಪಪರವಶನಾದ ಆತನು ತನ್ನ ಜನ್ಮಭೂಮಿಯನ್ನೇ ದೂಷಿಸಿ ಕರಪತ್ರಗಳನ್ನು ಹೊರಡಿಸಿದನು

ಆಂಗ್ಲೇಯನಷ್ಟು ಪಶುಸ್ವಭಾವದ ನೀಚನು ಮತ್ತೊಬ್ಬನಿಲ್ಲ. ಆತನು ಹುಟ್ಟುವಾಗಲೇ ಈ ಪಶುಮನೋವೃತ್ತಿಯು ಅವನೊಡನೆ ಜನ್ಮಕ್ಕೆ ಬರುವುದು. ಈ ಯುದ್ಧದಲ್ಲಿ ಇಂಗ್ಲಾಂಡು ವಿಜಯಿಯಾದರೆ ಮಾನವನ ಸಂಸ್ಕೃತಿಯು ನಶಿಸಿ ಸೈತಾನನ ವಶವಾಗುವುದು' ಎಂದು ಒಂದು ಕರಪತ್ರದಲ್ಲಾತನು ಬರೆದಿದ್ದನು

ಈ ಕರಪತ್ರವನ್ನು ಬರೆದುದಕ್ಕಾಗಿ ಕೈಸರರು ಆತನನ್ನು ಬಹುಮಾನಿಸಿ, ಆ ಕರಪತ್ರಗಳನ್ನು ಗಾಡಿಗಾಡಿಗಳಲ್ಲಿ ತುಂಬಿಸಿ ಸೈನ್ಯದ ಪಾಳೆಯಕ್ಕಕಳುಹಿಸಿಕೊಟ್ಟು ಅಲ್ಲಿ ಎಲ್ಲರಿಗೂ ಹಂಚಿಸಿದರು.

ಯುದ್ಧದ ಕೊನೆಯ ದಿನಗಳಲ್ಲಿ ಆತನು "ಪ್ರಜಾಪ್ರಭುತ್ವವೂ ಸ್ವಾತಂತ್ರ್ಯವೂ" "ರಾಜಕೀಯ ನೀತಿ" ಮೊದಲಾದ ಕರಪತ್ರಗಳಲ್ಲಿ ಪ್ರಜಾಪ್ರಭುತ್ವಗಳನ್ನು ತೆಗಳಿ, ಸರ್ವಾಧಿಕಾರವೇ ಸರ್ವಶ್ರೇಷ್ಠವಾದುದೆಂದು ಪ್ರತಿಪಾದಿಸಿರುವನು ಈ ರೀತಿಯಲ್ಲಿ ನಾಝಿನೀತಿಯ ತಳಹದಿಯನ್ನಾತನು ಹಾಕಿಕೊಟ್ಟನು ಯುದ್ಧವು ಮುಗಿದೊಡನೆ, ನೆಲ ಮತ್ತು ಜಲದ ಮೇಲೆ ಜರ್ಮನಿಗೆ ಪರಾಜಯವಾದುದಿಲ್ಲವೆಂದೂ, ಯಹೂದ್ಯರ ವಿಶ್ವಾಸಘಾತುಕತನದಿಂದಾಗಿಯೇ ಜರ್ಮನಿಯು ವರ್ಸೇಲ್ಸ್ ಒಪ್ಪಂದಕ್ಕೆ ಸಹಿ ಹಾಕಬೇಕಾಯಿತೆಂದೂ ಮೊದಲು ಸಾರಿದವನೂ ಈತನೆ ಆದುದರಿಂದ ಆ ಒಪ್ಪಂದವನ್ನು ಬದಿಗೊತ್ತಿ, ಜರ್ಮನಿಯು ಪುನಃ ಯುದ್ಧಸಿದ್ಧತೆಗಳನ್ನು ಮಾಡತಕ್ಕದೆಂದು ಬೋಧಿಸಿದವನೂ ಈತನೆ.

ಹಿಟ್ಲರರಿಗೆ ಅವನೊಮ್ಮೆ ಹೀಗೆಂದು ಬರೆದಿದ್ದನು 'ಬಲಾತ್ಕಾರದಲ್ಲಿ ಎರಡು ವಿಧವಿದೆ. ಅರಾಜಕತೆಯಿಂದಲೇ ಹುಟ್ಟಿ, ಅರಾಜಕತೆಯಲ್ಲೇ ಅಂತ್ಯವಾಗುವುದೊಂದು ವಿಧ ಹೊಸ ರಾಷ್ಟ್ರವನ್ನೇ ನಿರ್ಮಾಣ ಮಾಡುವಂತಹುದು ಇನ್ನೊಂದು ವಿಧ ನೀನೊಬ್ಬ ಪ್ರಸಿದ್ಧ ಸಂಘಟನಾ ಶಕ್ತಿಯುಳ್ಳ ನಿರ್ಮಾಪಕನೆಂದು ಚರಿತ್ರೆಯಲ್ಲಿ ಉಲ್ಲೇಖಿಸಲ್ಪಡುವುದೆಂದು ನಾನು ದೃಢವಾಗಿ ನಂಬುತ್ತೇನೆ"

1938 ಮುಸ್ಲಿಮ ರಾಜ್ಯಗಳ ಇತಿಹಾಸ

ಮಧ್ಯ ಯುರೋಪು ಮತ್ತು ಪೂರ್ವ ಆಸ್ಯ ಇವೇ ಬಹಳವಾಗಿ ಕಳೆದ ವರ್ಷ ನಮ್ಮ ಕಣ್ಣ ಮುಂದೆ ಇದ್ದರೂ, ಮುಸ್ಲಿಮ ರಾಜ್ಯಗಳು ಬಹಳವಾಗಿ ಆಗಾಗ ಗೋಚರಕ್ಕೆ ಬರುವಂತಾಗಿತ್ತು.

ಪೆಲೆಸ್ತೀನದಲ್ಲಿ

ಅಶಾಂತಿ ಮುಂದರಿಯಿತು. ಇದರಿಂದಲೇ ಅರಬರೆಲ್ಲ ಒಂದಾಗಬೇಕೆನ್ನುವ ಪ್ರಯತ್ನಗಳಾದುವು. ಪೆಲೆಸ್ತೀನದಲ್ಲಿನ ಅರಬರಿಗೆ ಬೇಕಾಗುವಷ್ಟು ಸಹಾನುಭೂತಿಯನ್ನು ಮುಸ್ಲಿ ರಾಷ್ಟ್ರಗಳೆಲ್ಲವು ತೋರ್ಪಡಿಸ ತೊಡಗಿದವು. ಅರಬರೊಳಗೆ ತಂಡಗಳು ಇವೆ, ಆದರೆ, ಇದೊಂದು ವಿಷಯದಲ್ಲಿ ಮಾತ್ರ ಅವರಲ್ಲಿ ಐಕ್ಯಮತವುಂಟು. ಅರಬರ ಇತಿಹಾಸವನ್ನು ಬರೆವಂದು ಈಗಣ ಪೆಲೆಸ್ತೀನ ಅರಬರ ದುರ್ದಶೆಯು ತುಂಬಾ ವಿವರವು ಅದರಲ್ಲಿ ಬರಲಿಕ್ಕಿರುವುದು ನಿಂದಿತ.

卐

ಅಫಘಾನಿಸ್ಥಾನ

ಈ ದೇಶದಿಂದ ಹೊರಗ ಕೊಡಲ್ಪಡುವ ವಾರ್ತೆಗಳೇ ಅತ್ಯಲ್ಪ. ಇದು ಉತ್ತಮ ಲಕ್ಷಣವೆಂದರೆ, ಇಲ್ಲಿಂದ ಆಗಾಗ ದಂಗೆಗಳು, ತಳಮಳಗಳು, ಕ್ರಾಂತಿ, ಹೊಂಚು, ಒಳಸಂಚು ವಾರ್ತೆಗಳೇ ಹೊರಡುವ ಪದ್ಧತಿ. ಈಗ ಶಾಹನು ಆಳುವ ಮುಂದಿಯೊಳ್ಳಿ ವಿವೇಕಿಗಳು. ಆಡಳಿತವೂ ಚೆನ್ನಾಗಿ ಸಾಗುತ್ತಲಿದೆ.

卐

ಇರಾನ

ಇಲ್ಲಿಂದ ತುಂಬಾ ವಾರ್ತೆ ಪ್ರಕಟ [illegible] ಉತ್ತೇಜಕವಾಗಿ [illegible] ಕಾರ್ಯ [illegible] ಇದು ಮುಗಿದು ಈಗ [illegible] ವಿಶೇಷ [illegible] ಕಾರವನ್ನೇ ಇನ್ನು ಆಳುತ್ತಿದ್ದಾರೆ. ಅವರ ಪ್ರಜೆಗಳು ಅವರ ಕೋರಿಕೆಗೆ ವಿಧೇಯರಾಗಿ ವರ್ತಿಸುತ್ತಿದ್ದಾರೆ. [illegible] ಬದಲಾವಣೆಗಳನ್ನು ಅಪೇಕ್ಷಿಸುತ್ತಿಲ್ಲ.

卐

ಇರಾಕ್

ಇರಾಕ್ ಪ್ರದೇಶವು ಒಂದು ವ್ಯವಸ್ಥಿತ ಸ್ಥಿತಿಯನ್ನು ಹೊಂದಿದೆ. ಮುಖ್ಯ ಮಂತ್ರಿಗಳು, ಪ್ರಜಾರಂಜಕ ಕಾರ್ಯಗಳಲ್ಲಿ ತೊಡಗಿ, ಹಿಂದಿನ ಏಕಾಧಿಪತ್ಯದ ಹಾವಳಿಯನ್ನು ಕಡಿಮೆ ಮಾಡಿಸಿರುವರು. ಸಂಪತ್ತು ಮತ್ತು ಸಂಸ್ಕೃತಿ ಎರಡೂ ವಿಚಾರಗಳಲ್ಲಿ ರಾಜ್ಯವು ತುಂಬಾ ಮುನ್ನಡೆದಿದೆ. ಕುಟ್ ಎಂಬಲ್ಲಿ ಅಣೆಕಟ್ಟನ್ನು ಹಾಕಿ ಧಾರಾಳವಾದ ಜಮೀನಿಗೆ ಕೃಷಿಯು ಸಾಧ್ಯವಾಗುವಂತೆ ಮಾಡಲಾಗಿದೆ. ಇರಾಕ್ ಪೆಟ್ರೋಲಿಯಮು ಬ್ರಿಟಿಷ ಕಂಪನಿಯವರಿಗೆ ಒಪ್ಪಿಸಲಾಗಿದೆ. ವಿದ್ಯೆ ಮತ್ತು ಕ್ಷೇಮ ಸಾಧನೆ ಸರ್ವತ್ರ ಹಂಚುವರೆ ಪ್ರಯತ್ನಗಳಾಗುತ್ತವೆ. ನಿರಾಶ್ರಿತರು ನೆಲೆಸಿಲ್ಲುವರಾದರೆ ಅವರಿಗೆ ಬೇಕಾಗುವಷ್ಟು ಸ್ಥಳಾನುಕೂಲತೆ ಒದಗಿಸಲಾಗುತ್ತದೆ. ಪೆಲೆಸ್ತೀನ ಚಳವಳಿಯ ಫಲವಾಗಿ ಇರಾಕೀ ಜನರು ಉದ್ರೇಕಗೊಂಡು ತಮ್ಮ ರಾಜ್ಯವನ್ನು ಬಲಪಡಿಸುವುದರಲ್ಲಿದ್ದಾರೆ.

卐

ಸಿರಿಯಾ ಮತ್ತು ಲೆಬೆನೊನ್

ಈ ಪ್ರಾಂತ್ಯಗಳಲ್ಲಿ ಅಲೆಕ್ಸಂಡ್ರೆಟ್ಟದ ಪ್ರಕರಣದಿಂದ ಫ್ರೆಂಚರೊಡನೆ ಕಚ್ಚಾಟವೆದ್ದಿತು. ಈಗ ರಾಜಿಯಾಗಿದೆ. ಇವರಿಗೂ ಪೆಲೆಸ್ತೀನ ವಿಚಾರದಿಂದ ಫ್ರೆಂಚರೊಡನೆ ಸಂಧಾನ ಮಾಡಿಕೊಳ್ಳುವ ಅಗತ್ಯವುಂಟಾಯಿತು. ಆದರೆ, ಬಹಳವಾಗಿ ಮುಂದರಿದು, ಸಂಪತ್ತನ್ನು ಹೆಚ್ಚಿಸಿಕೊಂಡಿಲ್ಲ. ನಿರಿಯದ ಕಷ್ಟಗಳು ಬಹಳವಾದುವು; ಇನ್ನೂ ಅವು ಮುಗಿದಿಲ್ಲ; ಈ ಜನರೂ ಬಹಳ ಸುಲಭದಲ್ಲಿ ಮಣಿತು ಬರಲು ಇಚ್ಛಿಸುವವರಲ್ಲ.

卐

ಟ್ರೇನ್ಸ್‌ಜೋರ್ಡನ್

ಇಲ್ಲಿನ ವಾರ್ತೆಗಳು ನಿಕ್ಕವರಿಗೆ ತಿಳಿದು ಬರುವುದು. ಅಪರೂಪ. ಅಮ್ಮಾನ್ ಎಂಬಲ್ಲಿರುವ ಮುಖ್ಯ ಮಂತ್ರಿಗಳ ಬದಲಾವಣೆ ಮಾತ್ರ ಪ್ರಕಟವಾಗುವ ವಾರ್ತೆ. ಈಗ ಪೆಲೆಸ್ತೀನ ವಿಷಯ ಮನಸ್ಸು ಕದಡಿರುವುದಾದರೂ, ಸರಕಾರವೂ ಜನರೂ ತಲೆಗೆಡಿಸಿಕೊಂಡಿಲ್ಲವೆಂಬುದೇ ತೃಪ್ತಿಕರ.

卐

ಅರೇಬಿಯ

ಇಲ್ಲಿ ವಿಶೇಷ ಬದಲಾವಣೆ ಏನೇನೂ ಇಲ್ಲ. [illegible] ಸಾಮ್ರಾಂತ್ಯದಲಿ ಚಮಿಣಿವಿದ್ದ ಸಿಕ್ಕಿತನ್ನುವುದೊಂದು ವಿಶೇಷ ವಾರ್ತೆ. ಸೌದೀ ಅರಬಸ್ಥಾನದಲಿ ಅರಸು ಬಹಳ ಚೆನ್ನಾಗಿ ಆಳುತ್ತಿರುವನು. ಉಳಿದ ಭಾಗಗಳಲ್ಲಿ ಎಂದಿನಂತೆ ರಾಜ್ಯಭಾರವು ಸಾಗುತ್ತಿದೆ. ದಕ್ಷಿಣಭಾಗದಲ್ಲಿನ [illegible] ಸ್ವಾಧೀನ ಮಾಡಿಕೊಂಡಿರುವುದು. ಅನ್ಯ [illegible] ಅಲ್ಲಲ್ಲಿ [illegible]

卐

ಇಜಿಪ್ತ

[illegible] ಜಗತ್ತಿನ [illegible] ಸ್ವಾತಂತ್ರ್ಯ [illegible] ಮೊದಲಿಡಿದು [illegible] ಇದು [illegible] ವ್ಯಕ್ತಿ [illegible] ಪ್ರತಿ [illegible]

卐

ತುರ್ಕಿ

[illegible] ಧನದಿಂದ [illegible] ನನ್ನು [illegible] ಇವೇ [illegible] ತುರ್ಕಿ ರಾಜ್ಯದ ಅಧಿಪತಿ [illegible] ಸ್ವತಂತ್ರವಾಗಬೇಕು [illegible] ತುರ್ಕಿಯ [illegible] ವ್ಯಕ್ತಿಗಳು [illegible] ರಾಜ್ಯವನ್ನು [illegible] ತುರ್ಕಿಯ [illegible] ಮುನ್ನಡೆಪುದೇ [illegible] ವಾಗಿದೆ.

ಅಂತೂ, ಈ ರಾಜ್ಯಗಳೆಲ್ಲವೂ ಪಾಶ್ಚಾತ್ಯರ ಕಡೆಗೆ ನೋಡುತ್ತಿವೆಯಾದರೂ, ತಮ್ಮ ಹಿತಸಾಧಕವಾದ ಮಾರ್ಗವನ್ನು ಮರೆವುದಿಲ್ಲ, ಹೊಸ ವಿರೋಧವಿದ್ದರೆ, ಎದುರಿಸುವ ಶಕ್ತಿಯುಳ್ಳವಾಗಿವೆ. ತುರ್ಕಿ, ಇರಾಕ್, ಅಫಘಾನಿಸ್ಥಾನ, ಇರಾನ ಮತ್ತು ಇತರ ರಾಜ್ಯಗಳು ಒಂದರೊಡನೆ ಮತ್ತೊಂದು ಕರಾರು ಮಾಡಿಕೊಂಡಿವೆ. ಇವೆಲ್ಲವನ್ನೂ ಈಜಿಪ್ತ ಗೌರವದಿಂದ ಕಾಣುತ್ತದೆ. ಇವೆಲ್ಲವೂ ಐಕ್ಯಹೊಂದುವ ಲಕ್ಷಣಗಳು — ಇನ್ನೂ ತುಂಬುತ್ತ ಬರುತ್ತವೆನ್ನಬೇಕು.

ಜೋಧಪುರ ಸರಕಾರ

ಮಹಾರಾಜರು—ದೇವಲಿ [illegible] ನನ್ನು ಜಪ್ತು ಮಾಡಿರುವರು. ಥಾಕೂರ ಜಗತ್‌ಸಿಂಗರನ್ನು ರಾಜ್ಯದ ಗಡಿಯ ಹೊರಗೆ ಹೋಗಬೇಕಾಗಿ ಅಪ್ಪಣೆ ಕೊಟ್ಟಿರುವರು. ಅವರ ಮತ್ತು ಕುಟುಂಬದ ಖರ್ಚಿಗೆ ತಿಂಗಳಿಗೆ ೪೫೦ ರೂಪಾಯಿ ಜೀವನಾರ್ಥ ಕೊಡುವರು. ಈ ಸಿಂಗರ ವಿಷಯ ವಿಮರ್ಶೆ ಮಾಡಲು ಇಬ್ಬರು ಸರದಾರರನ್ನು ನೇಮಿಸಲಾಗಿತ್ತು. ಅವರ ರಿಪೋರ್ಟಿನ ಫಲವಾಗಿ, ಸಿಂಗರ ಜಮೀನು ಜಪ್ತಾಯಿತು.

ಗಾಂಧಿ ಆಗಾಖಾನರ ಭೇಟಿ

ಕಳೆದ ವಾರ ಬಾರ್ಡೋಲಿಯಲ್ಲಿ ನಡೆದ ಗಾಂಧಿ ಆಗಾಖಾನರ ಭೇಟಿಯು ಬಹಳ ಮಹತ್ವವುಳ್ಳದ್ದಾಗಿರುವುದು.

ಮೊದಲಿಂದ ಅಂತ್ಯದ ತನಕವೂ ಇಬ್ಬರೂ ಬಹಳ ಸ್ನೇಹಭಾವದಿಂದ ಮಾತುಕತೆಗಳನ್ನು ಜರಗಿಸಿರುವರು.

ಹಿಂದೂ ಮುಸಲ್ಮಾನರ ಐಕ್ಯದ ಕುರಿತು ತನ್ನ ಯೋಜನೆಯನ್ನು ಮಹಾತ್ಮರು ಆಗಾಖಾನರ ಮುಂದಿಟ್ಟರು. ಈ ಕುರಿತು ಅವರೊಳಗೆ ತುಂಬಾ ಚರ್ಚೆ ನಡೆಯಿತು. ಅವರ ಮಾತುಗಳ ಫಲಿತಾಂಶವೇನೆಂದು ಪೂರ್ಣವಾಗಿ ತಿಳಿದಿಲ್ಲವಾದರೂ, ಅನೇಕ ವಿಷಯಗಳ ಕುರಿತು ಅವರೊಳಗೆ [illegible] ಹುಟ್ಟಿದ [illegible] ಪೂರ್ವಾರ್ಧ [illegible] ಭಾರತೀಯರ [illegible] ಒಪ್ಪಿ [illegible]

ಆಗಾಖಾನ [illegible] ವಕರು [illegible] ಅನುಯಾಯಿಗಳು

ಆಗಾಖಾನರಿಗೆ [illegible] ಕ್ಷೇತ್ರ [illegible]

[illegible]

[illegible]

ಮುಸಲೋನಿಗೆ ಹಿಟ್ಲರನ ಅಭಯ

[illegible] ಗಮನಕೊಡಲಿಲ್ಲವೆಂದು ಹಿಟ್ಲರನು [illegible] ವನು.

ಫ್ರಾನ್ಸು ಒಪ್ಪಂದವನ್ನು ಮುರಿಯುವುದೆ?

ಪೋಲೆಂಡು, ರಶ್ಯ, ಜ [illegible] ಮತ್ತು ರುಮೇನಿಯಾಗಳನ್ನು ಸೇರಿ ಜರ್ಮನಿಗಳು ಮುತ್ತಿದರೆ ಫ್ರಾನ್ಸು ಸಹಾಯ ಮಾಡಬೇಕು ಎಂದು ಅವುಗಳೊಳಗೆ ಇದ್ದ ಒಪ್ಪಂದವನ್ನು ಮುರಿದು ಯುದ್ಧಭಯವನ್ನೇ ತಪ್ಪಿಸಬೇಕೆಂದೂ ಫ್ರೆಂಚ್ ಸರಕಾರದೊಳಗೆ ಪರದೇಶದ ಸಕ್ರೆಟರಿಗಳಾದ ಬೊನೆಟರ ನಾಯಕತ್ವದಲ್ಲಿ ಒಂದು ಪಂಗಡವು ಅಭಿಪ್ರಾಯಪಡುತ್ತದೆ.

ಅಬಿಸೀನಿಯದಲ್ಲಿ ಇಟಲಿಯನ್ ರಾಕ್ಷಸೀ ಕೃತ್ಯಗಳು

ಅಬಿಸೀನಿಯದಲ್ಲಿ ಯುರೋಪಿಯನ ಆಯುಧಗಳನ್ನೇ [illegible] ಅಂತಹವರನ್ನು ಕೂಡಲೇ ಸೆರೆಹಿಡಿಯಬೇಕೆಂದು ಅಲ್ಲದಿದ್ದರೆ ಅವರನ್ನು ಅಲ್ಲಿಯೇ ಕೊಂದು ಅವರ ಮನೆಗಳನ್ನು ಮತ್ತು ಅವರ ಇಡೀ ಕುಟುಂಬವನ್ನು ಸುಟ್ಟು ಹಾಕಬೇಕೆಂದೂ ಎಲ್ಲಾ ಅಬಿಸೀನಿಯದ ಇಟಲಿಯನ್ ಅಧಿಕಾರಿಗಳಿಗೆ ತಿಳಿಸಿರುತ್ತಾರೆ.

ಜಪಾನಿಗೆ ರಶ್ಯದ ಎಚ್ಚರ

ರಶ್ಯವು ಜಪಾನಿಗೆ ಈ ಮೊದಲು ಮೀನನ್ನು ಹಿಡಿಯಲು ಕೊಟ್ಟ [illegible] ಇನ್ನು ಕೂಡಾ ತನಗೆ ಕೊಡಬೇಕೆಂದೂ ಇಲ್ಲವಾದರೆ ಯುದ್ಧದ [illegible] ಕಳುಹಿಸುವೆವೆಂದು ಜಪಾನ ಬೆದರಿಸಿತ್ತು. ಅದಕ್ಕುತ್ತರವಾಗಿ ರಶ್ಯವು ಜಪಾನಿನ ಯಾವುದೇ [illegible] ಬಂದರೆ ಅದನ್ನು ಕೂಡಲೇ [illegible] ನಾಶಮಾಡುವೆವೆಂದು ಉತ್ತರ ಕೊಟ್ಟಿದೆ. ಈಗ ಜಪಾನು [illegible] ರಶ್ಯದೊಡನೆ [illegible] ಸಂಧಾನವನ್ನು ನಡೆಸುತ್ತಿದೆ.

ನಾಳಿನ ಜರ್ಮನಿ!

(ಹೆರ್ ಕಲ್ಲರ್—ನಾರ್ವಿಗಳ ಸಂಘ ದಭ್ಯುದಯ ಇಲಾಖಾ ಮಂತ್ರಿ)

[illegible]

[illegible]

[illegible]

ಜಪಾನು

ಸೈನ್ಯಾಧ್ಯಕ್ಷರ ಇಸ್ತಿಫಾರು!

[illegible]

[illegible]

[illegible] ಕಾರಣಗಳು.

ಚೀನಿಯರು [illegible] ಯುದ್ಧರಂಗದಲ್ಲಿ ಹಿಂದು ಮುಸಲ್ಮಾನರ [illegible] ಸೇನೆಯನ್ನು [illegible] ಜಪಾನಿಗೆ ಸೇರಿರುವ ಪಟ್ಟಣದಲ್ಲೇ ನಾಲ್ಕು ಲಕ್ಷ ಕಳ್ಳ ಸೇನೆಯರು ಜಪಾನನ್ನು ಮಾರ್ಗನಾಯಕನ್ನರಲ್ಲಿ ಕೆಣಕುತ್ತಿದ್ದಾರೆ.

ಸ್ವದೇಶಾಭಿಮಾನಿ
ತಾರೀಕು ೨೭–೧–೧೯೩೯

ಜಮೀನ್ದಾರರು ರೈತರು.

(ಈಗ ಎಸೆಂಬ್ಲಿಯಲ್ಲಿ ವಿಮರ್ಶಿಸ ಲಾಗುವ ಹೊಸ ಮಸೊದೆ.)

ಜಮೀನ್ದಾರರು ಮತ್ತು ರೈತರುಗಳೊಳಗಣ ಸಂಬಂಧವನ್ನು ವಿಮರ್ಶಿಸಿ, ಅದಕ್ಕಾಗಿ ನೇಮಕಹೊಂದಿದ್ದ ಕಮಿಟಿಯವರು ಬರೆದುಕೊಂಡ ರಿಪೋರ್ಟಿನಿಂದ, ಮುಖ್ಯ ಮೂರು ವಿಷಯಗಳು ಈಗ ಎಸೆಂಬ್ಲಿಯ ಮುಂದೆ ವಿಚಾರಕ್ಕೆ ಬಂದಿವೆ.

೧ ಜಮೀನಿನ ಮಣ್ಣಿನ ಧನಿ ಜಮೀನ್ದಾರನೋ, ರೈತನೋ?

೨ ಗೇಣಿ ಮತ್ತು 'ಸೇಶಕುಶ'ಗಳನ್ನು, ಕಾಯಂ ಸೆಟ್ಲಮೆಂಟ ಮತ್ತು ಪಟ್ನಾ ರೆಗ್ಯುಲೇಶನ್‌ಗಳ ಮೂಲಕ (೧೮೦೫)ರಲ್ಲಿ ಶಾಶ್ವತವಾಗಿ ನಿರ್ಧರಿಸಿದ್ದೋ?

೩. ಈ ರೆಗ್ಯುಲೇಶನುಗಳ ವ್ಯವಹಾರದಿಂದ ರೈತರ ಸ್ಥಿತಿ ಹಾಳಾಗಿದೆಯೋ?

ಕಮಿಟಿಯ ಅಧಿಕ ಮತವು, ಜಮೀನಿನ ಮಣ್ಣಿನ ಅಧಿಕಾರವು ರೈತನದೆಂದು ನಿರ್ಧರಿಸಿತು ಮಂತ್ರಿ ಪ್ರಕಾಶನ್‌ರವರೂ ಅದನ್ನು ಬಹಳ ಚೆನ್ನಾಗಿ ಸಮರ್ಥಿಸಿದರು ವಿಮರ್ಶಕರು–ಕಮಿಟಿಗೆ ಈ ಮೊದಲೇ ಈ ಅಭಿಪ್ರಾಯವಿದ್ದು, ಇದಕ್ಕೆ ಬೇಕಾಗುವ ಆಧಾರಗಳನ್ನು ಕಮಿಟಿಯು ಸಂಗ್ರಹಿಸಿದ್ದು ಅವರ ನೇಮಕಕ್ಕೆ ಕಾರಣದ ಮಾತು ಎಂದರು ರೈತನೇ ಮಣ್ಣಿನ ಧನಿ ಎಂದು ಪ್ರಕಾಶನ್ನರು ಎಂದಿನಿಂದಲೂ ಹೇಳುತ್ತಿದ್ದ ಕಾರಣ, ಅವರೇ ಅಧ್ಯಕ್ಷರಾಗಿದ್ದ ಕಮಿಟಿಯು ಹೀಗೆ ತೀರ್ಮಾನಿಸಲು ಆಸ್ಪದವಾಯಿತು ಎನ್ನುವರು. ಎಸೆಂಬ್ಲಿಯಲ್ಲಿ ಇವರು ನಡೆದಿರುವ ಭಾಷಣವು ಈ ಅಭಿಪ್ರಾಯವನ್ನೇ ಚೆನ್ನಾಗಿ ಪೋಷಿಸುತ್ತದೆ. ಕೋರ್ಟುಗಳಿಗೆ ಅರಿವಿಲ್ಲದೆ ಈ ವಿಷಯದಲ್ಲಿ ವಿರುದ್ಧ ತೀರ್ಮಾನಗಳಾಗಿರಬಹುದೆಂದೂ ಇವರ ಅಭಿಪ್ರಾಯ.

ಮಿರ್ಜಾಪುರದ ಜಮೀನ್ದಾರರು ಇದಕ್ಕೆ ವಿರುದ್ಧವಾಗಿರುವ ಅಭಿಪ್ರಾಯವನ್ನು ಎಸೆಂಬ್ಲಿಯಲ್ಲಿ ಕೊಟ್ಟಿರುವರು. ಶ್ರೀಮಂತ ಜಮೀನ್ದಾರರು ತಮ್ಮ ಅಭಿಪ್ರಾಯವನ್ನು ಜಮೀನ್ದಾರ ಸಮೂಹಕ್ಕೆ ಸರಿಹೊಂದುವಂತೆ ತಿಳಿಸಬಲ್ಲರೇ ಹೊರತು, ಈಗ ಸೇರಿರುವ ಎಸೆಂಬ್ಲಿಯ ಸದಸ್ಯರಲ್ಲಿ ಇವರ ಅಭಿಪ್ರಾಯಗಳು ಮನ್ನಣೆಹೊಂದಲಿಲ್ಲ. ಜಮೀನ್ದಾರರು ಎಲ್ಲ ತಮ್ಮ ಜಮೀನಿನ ಧನಿಗಳು ಎಂಬುದನ್ನು,ಅವರು ಅಲ್ಲ ಎಂಬುದಕ್ಕೆ ಕಮಿಟಿಯು ಕೊಟ್ಟಿರುವಷ್ಟೇ ಬಲವಾದ ಆಧಾರಗಳನ್ನು ಇವರು ಕೊಟ್ಟರು. ಕಳೆದ ೧೦೦ ವರ್ಷಗಳಲ್ಲಿ ನ್ಯಾಯಸ್ಥಾನಗಳಿಂದ ದೊರೆತ ನಾನಾ ತೀರ್ಮಾನಗಳೂ ಇವರ ಬೆಂಬಲಕ್ಕಿವೆ ೧೯೦೮ರಲ್ಲಾದ ಎಸ್ಟೇಟ್ ಲೀಜ್ ಎಕ್ಟಿನ ವಿಚಾರಕಾರ ಕಮಿಟಿಯ ಅಭಿಪ್ರಾಯವೂ ಇವರದೇ ಆಗಿದೆ ಈಗ ಈ ಕಮಿಟಿಯು, ಹಿಂದಣ ಅಭಿಪ್ರಾಯಗಳೆಲ್ಲ ತಪ್ಪಾಗಿವೆ ಎಂದೂ ತಾವು ಹೇಳುವುದು ಮಾತ್ರ ಸರಿ ಎಂದೂ ಹೇಳುತ್ತದೆ ಎಷ್ಟಿದ್ದರೂ ಯಾವುದು? ಕಮಿಟಿಯ ಬಹುಮತದ ಅಭಿಪ್ರಾಯವೆ? ಹಿಂದಣ ವಾಡಿಕೆ ವಿಶ್ವಾಸಗಳೆ? ಕಾಯಂ ತೀರ್ವೆ ನಿರ್ಧಾರವಾಗುವ ಮೂರು ವರ್ಷಗಳ ಹಿಂದೆ ಹಿಂದೆ ೧೭೯೦ರಲ್ಲಿ, ಡೆವೆನ್ಯೂ ಬೋರ್ಡಿನವರು ಹಾಗೆ ತೀರ್ವೆ ಮಾಡಲು ಸೂಚಿಸಿವಾಗ ಹೇಳಿದುದೂ ತಪ್ಪು ಅಭಿಪ್ರಾಯವೆ? "ಕೃಷಿಮಾಡುವ ರೈತನಿಗೆ ಆ ಹೊಲದ ಮಣ್ಣಿನ ಸ್ವಾಮಿತ್ವವಿಲ್ಲ" ಎಂದು ಈ ಬೋರ್ಡು ಅಂದು ಹೇಳಿರುವುದೇಕೆ? ಉತ್ಪನ್ನದ ಅಂಶವನ್ನು ಗೇಣಿಯಾಗಿ ಕೊಡುವ ತನಕ ರೈತರಿಗೆ ಆ ಜಮೀನು ಕೃಷಿಗೆ ಹಕ್ಕಿದೆ ಎಂದೂ ಬರೆದಿದೆಯಲ್ಲ! ಕೋರ್ಟುಗಳ ವ್ಯವಹರಣೆಗಳಿಗೂ ತೀರ್ಮಾನಗಳಿಗೂ ಈ ವಾಕ್ಯಗಳೇ ಆಧಾರ. ಜಮೀನ್ದಾರರೇ ಧನಿಗಳೆಂದು ಇದು ರುಜುಮಾಡುತ್ತದೆಯೆ?

ಗೇಣಿಯ ಬಿವಚನ್ನು ೧೮೦೫ರಲ್ಲಿ ಕಾಯಂ ನಿರ್ಧಾರಮಾಡಲಾಗಿದೆಯೋ? ಎಂಬ ಪ್ರಶ್ನೆ ಬೇಕಾದಷ್ಟು ಚರ್ಚಿಸಬರುವುದಾಗಿದೆ. ಮೂಲ ಕಾನೂನಿನಲ್ಲಿ, ಜಮೀನ್ದಾರರ ಹಕ್ಕುಗಳನ್ನು ಹೇಳುವಾಗ, ರೈತನ ಅಭ್ಯುದಯ ಸಾಧನೆಯ ಜವಾಬ್ದಾರಿಯನ್ನೂ ಜಮೀನ್ದಾರರ ಮೇಲೆ ಹೇರಿಸಲಾಗಿದೆ. ಅಕ್ರಮ ತೀರ್ವೆ ವಸೂಲಿಗಳಾಗದಂತೆ ರೈತನನ್ನು ಕಾಪಾಡಲಾಗಿದೆ. ಜಮೀನ್ದಾರರು ಪಟ್ನಾ ಮಾತ್ರ, ಅದರಲ್ಲಿ ಗೇಣಿ ನಿರಿಸಲು ತಮಗೆ ಅಧಿಕಾರವಿದೆಯಾಗಿ ಸಾಧಿಸುತ್ತಾರೆ; ಅಕ್ರಮವಾಗಿ ಏನನ್ನೂ ವಸೂಲು ಮಾಡಿಲ್ಲವೆನ್ನುತ್ತಾರೆ ಕಮಿಟಿಯು ಇದಕ್ಕೆ ತೀರ ವಿರುದ್ಧವಾದ ಅಭಿಪ್ರಾಯವನ್ನ (ಬಹುಮತದಂತೆ) ಸಾರಿಯದೆ ಕಾಯಂ ತೀರ್ವೆ ನಿರ್ಣಯವಾದ ಬಳಿಕ, ಯಾವ ರೀತಿಯಲ್ಲೂ ರೈತನಿಂದ ಹೆಚ್ಚಿಗೆ ಗೇಣಿ ಪಡೆಯಲು ಜಮೀನ್ದಾರನಿಗೆ ಹಕ್ಕಿಲ್ಲವೆಂದು ಕಮಿಟಿ ಬರೆದಿದೆ ಕೋರ್ಟುಗಳು ಜಮೀನ್ದಾರನ ಕಡೆಗೇ ಅಭಿಪ್ರಾಯಪಟ್ಟು ಹಾಗೆಯೇ ತೀರ್ಮಾನಿಸಿವೆ ೧೮೫೯ರಲ್ಲಿ ಈ ಬಗೆಯ ಹಕ್ಕನ್ನು ಆಗಣ ಆಕ್ಟು ತಿದ್ದುಪಡಿಯಲ್ಲಿ ವಿಶದಪಡಿಸಲಾಗಿದೆ ಅಷ್ಟು ಹಕ್ಕು ಇಲ್ಲದಿದ್ದಲ್ಲಿ ಅದನ್ನು ವಿಶದಪಡಿಸಲಾಗುತ್ತಿತ್ತೇ? ಕಮಿಟಿಯು ಅಭಿಪ್ರಾಯವನ್ನು ಅಂಗೀಕರಿಸಿದರೆ ೧೮೦೫ನೇ ಇಸ್ವಿಯ ನಂತರ ಇದುವರೆಗೆ ಹೆಚ್ಚಿಸಿದ ಎಲ್ಲ ಗೇಣಿಯೂ ಅನ್ಯಾಯ [illegible] ದಾಗುವುದು ಈ ಐಕ್ಯವನ್ನು ಒಪ್ಪಿಕೊಂಡರೆ ಜಮೀನ್ದಾರರು ರೈತರಿಗೆ ಹಿಂದೆ ತೆರಬೇಕಾಗುವುದು ಹೀಗೆ ತೆರಬೇಕಾಗಿ ಬಂದಲ್ಲಿ ಹಲವು ಜಮೀನ್ದಾರರು, ತಮ್ಮ ಜಮೀನನ್ನು ರೈತರಿಗೆ ಹಂಚಿಕೊಟ್ಟು ಋಣಮುಕ್ತರಾಗಬೇಕಾದೀತ ರೈತನ್ನು ಜಮೀನುಗಳಿಗೂ ಈ ಗತಿಯು ಬಂದ [illegible] ಈ ರೈತರಿಗೂ ಅದೇ ಕಷ್ಟವುಂಟಾಗದೇ? ೧೮೦೫ರಲ್ಲಿ ತೆತ್ತುದಕ್ಕಿಂತ ಹೆಚ್ಚಿನ [illegible] ಕೆಯಲ್ಲ ಹೆಚ್ಚಿನದನ್ನ ಹಿಂದೆ ಪಾವತಿಮಾಡಗ ತಕ್ಕುದಾದೀತ. ಸರಕಾರವೂ ಹಾಗೆ ವಸೂಲಾಗಿ [illegible] ಹಿಂದೆ [illegible] ದಾಗಿ [illegible] ದೀತ.

ರೈತರ ಗೋಳು [illegible] ಆ ಗೋಳನ್ನು ಅದಷ್ಟು [illegible] ೧೯೦೮ರಲ್ಲಾದ ಎಸ್ಟೇಟ್ ಲೀಜು ಎಕ್ಟು ಇದಕ್ಕಾಗಿಯೇ [illegible] ಆದರೆ ಅದನ್ನು ಜಾರಿಗೆ ತಂದರು. ಸರಕಾರವಾಗಿಲ್ಲದಿರಬೇಕು [illegible] ಜಮೀನ್ದಾರರಲ್ಲಿ ಗೇಣಿ ವಿಚಾರ ಪುನಃ ಪರಿಶೀಲಿಸಲಾಗಲೇಬೇಕಾಗಿದೆ ಈಗಣ ಧಾನ್ಯ ಬೆಲೆಗೆ ಅನುಸಾರವಾಗಿ ಗೇಣಿಯನ್ನಿಳಿಸಬೇಕಾಗುವುದು [illegible] ಭಾರವೆನಿಸಬಾರದ, ಹಾಗೆಂದು ೧೮೦೫ನೇ ಇಸ್ವಿಯ ನಿರ್ಧರವಾದಗಳು ಈಗ ಜ್ಯಾರಿಗೆ ತರಲಾಗುವುದೇ? ಈಗ ರೂಪಾಯಿಯ ಬೆಲೆ ಎಷ್ಟಿದೆ? ಎಂತೂ ಸರಕಾರವು ಇತ್ತಂಡಗಳಿಗೂ ನ್ಯಾಯವಾಗುವಂತೆ ಈ ಪ್ರಶ್ನೆಯನ್ನು ತೀರ್ಮಾನಿಸಬೇಕಾಗಿದೆ ಇದು ಸುಲಭವಲ್ಲ.

ಚೇಂಬರ್ಲೇನರಿಗೆ ಜಪಾನಿನ ಆಮಂತ್ರಣ

ಪೂರ್ವ ಏಷ್ಯಾದಲ್ಲಿ ಬ್ರಿಟಿಷರೂ ಅಮೇರಿಕನರೂ ಸೇರಿ ಮಾಡಲಿಕ್ಕಿರುವುದೇನೆಂದು ತಿಳಿಯಲು ಜಪಾನಿನ ಪತ್ರಿಕೆಗಳು ಕಾದಿವೆ ಪಾರ್ಲಿಮೆಂಟನಲ್ಲಿ 'ಐಡೆನ, ರಾಷ್ಟ್ರಗಳು ಮಾಡಿಕೊಂಡ ಕರಾರನ್ನು ವಿರೋಧಿಸಿಯ ಮಾತುಕತೆ ನಡೆದಿದೆ 'ಈಗ ನಾವು ಯುದ್ಧ ಮೂಲಕವಾಗಿಯ ಚೀನವನ್ನು ವಿವೇಕಕ್ಕೆ ತರಬೇಕಾಗಿದೆಯಾದರೂ, ಚೀನವು ಶಾಂತಿಸಂಪತ್ತುಗಳಿಂದ ಕೂಡಿರಬೇಕೆಂದೇ ನಮ್ಮ ಆಸೆ" ಎಂದೊಂದು ಪತ್ರಿಕೆ ಬರೆದಿದೆ.

ಬ್ರಿಟನ್ನು, ಅಮೇರಿಕ, ಫ್ರಾನ್ಸುಗಳು ಚೀನದಲ್ಲಿ ನುಗ್ಗಿ ನಾನಾ/ರೀತಿ ಹಾವಳಿ ಮಾಡಿದುದಾಗಿ ಪತ್ರಿಕೆಗಳು ದೂರಿಟ್ಟಿವೆ.

ಮುಖ್ಯಮಂತ್ರಿಗಳು — ಚೇಂಬರ್ಲೇನ— ಹಲಿಫೆಕ್ಸರುಗಳನ್ನು ಜಪಾನಿಗೆ ಆಮಂತ್ರಿಸಿ, ಅವರು ತಾವಾಗಿ ನಿಜಸ್ಥಿತಿಯನ್ನು ತಿಳಿದುಕೊಳ್ಳುವಂತಾಗಲೆಂದು ಸೂಚಿಸಲು. ಒಂದು ಪತ್ರಿಕೆ ಮಂತ್ರಿಗಳಿಗೆ ಅರಿಕೆ ಬರೆದಿದೆ.

ತ್ರಿಪುರಿಯಲ್ಲಾಗುವ ಕೊಂಗ್ರೆಸು ಅಧ್ಯಕ್ಷರು ಯಾರು?

ಆಂಧ್ರ ಕೊಂಗ್ರೆಸ್ ಕಮಿಟಿಯು ಅಧ್ಯಕ್ಷರು ಶ್ರೀ ಪಟ್ಟಾಭಿ ಸೀತಾರಾಮಯ್ಯನವರು ಈ ಬಾರಿಗೆ ಅಧ್ಯಕ್ಷ ಪದವಿಗೆ ಚುನಾವಣೆ ಹೊಂದ. ವಂತೆ ಶಿಫಾರಸು ಮಾಡಿ, ಸರದಾರ ವಲ್ಲಭ ಭಾಯಿ ಪಟೇಲರು, ಬಾಬುರಾಜೇಂದ್ರ ಪ್ರಸಾದರು, ಜೈರಾಮದಾಸ ದೌಲತ್‌ರಾಮರು, ಆಚಾರ್ಯ ಕೃಪಾಲಿನಿಯವರು ಶಂಕರರಾವ್ ದೇವರು, ಭೂಲಾಭಾಯಿ ದೇಸಾಯಿಯವರು, ಅವರ ಹೆಸರನ್ನು ಜನತೆಯ ಮುಂದೆ ಇಟ್ಟಿರುವರು ಮೌಲಾನಾ ಅಜಾದರು ಇವರನ್ನೇ ಚುನಾಯಿಸುವಂತಾಗಲೆಂದು ತಮ್ಮ ಹೆಸರು ಸೂಚಿಕವಾದಾಗ, ಅಧ್ಯಕ್ಷ ಪದವಿಯನ್ನು ನಿರಾಕರಿಸಿದರು ಶ್ರೀ ಸುಭಾಷರನ್ನು ಮತ್ತೊಂದು ವರ್ಷಕ್ಕೂ ಚುನಾಯಿಸಬೇಕೆಂದು ಸೂಚನೆಗಳು ಬಂದರಲು, ಅವರ ಪದವಿಯನ್ನು ನಿರಾಕರಿಸಿಲ್ಲ ಇದು ಅಷ್ಟು ಸೂಚನೆಗಳಲ್ಲಿ [illegible] ತು ಮಂಬರರ ಅಭಿಪ್ರಾಯವಾಗಿದೆ

ಪ್ರತಿವರ್ಷವೂ ಅಧ್ಯಕ್ಷರನ್ನು ಚುನಾಯಿಸಬೇಕೆಂದಿರುವುದು ಉತ್ತಮ ಒಬ್ಬರನ್ನೇ [illegible] ವರ್ಷ ಚುನಾಯಿಸ [illegible] ಅವರ ಅಧಿಕಾರದ ಅವಧಿಯನ್ನು ಇಷ್ಟು ವರ್ಷಗಳಿಗೆಂದು. ಮೊದಲೇ ನಿರ್ಣಯವಾಗುತ್ತಿತ್ತು ಕಾರ್ಯಕಾರಿ ಸಮಿತಿಯೇ ಕೊಂಗ್ರೆಸಿನ ಕಾರ್ಯ ಮಾಡಿಗಳನ್ನು ನಿರ್ಧರಿಸುವುದಾಗಿದೆ [illegible] ಅಧ್ಯಕ್ಷರೇ ಮಾತ ಹೆಚ್ಚೇನೂ ಆ [illegible] ಜನಾಂಗವೆ ಒಂದು [illegible] ಸ್ವಾತಂತ್ರ್ಯ [illegible] ಸೂಚಿತವಾಗುತ್ತದೆಯೋ ಹಾಗೆಯೇ [illegible] ಸೂಚಿಸುವರು. ಇಷ್ಟೆ ಮಾತ

ಚುನಾವಣೆ ಮಾತಿನ [illegible] ಚುನಾವಣೆ [illegible]

ಹಿಟ್ಲರರ ಕುರಿತು ಮಹಾತ್ಮರ ಖಂಡನೆ

ಅಮಾನುಷ ನಾಸ್ತಿಕನ ಕೋಪೋದ್ರೇಕ

ಪೆಲಸ್ತೀನಕುರಿತು ಬ್ರಿಟನಿನ ಧೋರಣೆಯು ಪಳು ಸಮಾನವಾದುದು

ಅರಬರ ಅತ್ಯಾಚಾರಗಳ ಖಂಡನೆ

[illegible] ಇಂಗ್ಲಿಷರದ್ದು [illegible] ಹಾಗೆಯೇ ಪೆಲಿಸ್ತೀನ ಅರಬರದ. ಯಹೂದ್ಯರನ್ನು ಅರಬರ ಮೇಲೆ ಬಲಾತ್ಕಾರದಿಂದ ಹೊರಿಸುವುದು ತಪ್ಪು ಆದರೆ ಅರಬರು ನಡೆಸುತ್ತಿರುವ ಅತ್ಯಾಚಾರಗಳನ್ನು ನಾನು ಸಮರ್ಥಿಸುವುದಿಲ್ಲ

ಯಹೂದ್ಯರು ತಮಗೇ ಒಂದು ವಸತಿಯನ್ನು ಹಗಿಸಿಕೊಡಬೇಕೆಂದು ಬಯಸಿದ ಕಾಗಿನ ಕುರಿತು ಅವರ ಅಭಿಪ್ರಾಯ ವು ಈ [illegible] ಇದೆ ಪ್ರಪಂಚದ ಇತರ ಜನಾಂಗಗಳಂತೆ ತಾವು ಹುಟ್ಟಿ ಬೆಳೆದು, ದುಡಿಯುತ್ತಿರುವ ದೇಶದಲ್ಲಿ' ಅವರೇಕೆ ವಾಸಿಸಬಾರದು?

ಜರ್ಮನಿಯಲ್ಲಿ ಯಹೂದ್ಯರನ್ನು ಪೀಡಿಸುತ್ತಿರುವುದರ ಕುರಿತೂ ಮಹಾತ್ಮರು ತೀವ್ರ ಖಂಡನೆಯನ್ನು ತೋರ್ಪಡಿಸಿರುವರು. ಹಿಟ್ಲರರಷ್ಟು ಉನ್ಮಾದಗ್ರಸ್ತವಾದ ಕಾಪ್ರರತ್ನವನ್ನು ಈ ತನಕ ಯಾವ ಪ್ರಜಾಪೀಡಕ ನಿರಂಕುಶ ಪ್ರಭುವೂ ತೋರಿಲ್ಲ. ಯಹೂದ್ಯರಲ್ಲಿ ದೂರದರ್ಶಿತ್ವವುಳ್ಳ ಯಾರಾದರೊಬ್ಬರು ಧೈರ್ಯದಿಂದ ಮುಂದೆಬಂದು ಅಹಿಂಸಾಪರವಾದ ಚಳವಳವನ್ನು ಹೂಡುವುದರಲ್ಲಿ ಮುಂದಾಳುತ್ವವನ್ನು ವಹಿಸಿದರೆ, ಅವರನ್ನು ಮುತ್ತಿದ್ದ ನಿರಾಶೆಯ ಕಾರ್ಮೋಡಗಳು ತೊಲಗಿ, ಆಹಾ ಎನ್ನುವಷ್ಟರಲ್ಲಿ ಆಶೆಯ ಸೂರ್ಯೋದಯವಾಗಬಹುದೆಂಬ ನಂಬುಗೆಯು ನನ್ನಲ್ಲಿದೆ. ಕೆಲವೇ ಮಂದಿ ಯಹೂದ್ಯರು ಜಹೋವನ್ನು ತಮಗೆ ಕೊಟ್ಟ ಕಷ್ಟಸಹಿಷ್ಣತೆಯನ್ನು ಶಾಂತರೀತಿಯಿಂದ ಪ್ರದರ್ಶಿಸಿದರೆ, ಅಧಃಪತನಕಾರಿಯಾದ ಈ ನರಭೀತಿಯು ಬೇರೆಯೇ ರೂಪವನ್ನು ತಾಳಬಹುದಾಗಿದೆ. ಆಗ ಮಾತ್ರ ಈ ಚಳವಳವು ಅಮಾನುಷ ನಾಸ್ತಿಕನೊಬ್ಬನ ಕೋಪೋದ್ರೇಕವನ್ನೆ ಇದಿರಾಯಿಸಲು ಹೂಡಿದ ಅಚ್ಚ ಧಾರ್ಮಿಕ ಚಳವಳವಾಗಿ ಪರಿಣಮಿಸಬಹುದು

ಶ್ರೀ ಜಮ್ನಾಲಾಲ ಬಜಾಜರ ಮೇಲೆ ಜಯಪುರದ ನಿರ್ಬಂಧ

ಫೆಬ್ರುವರಿ ತಾರೀಕು ೧ರಂದು ನಿರ್ಬಂಧವನ್ನು ಮುರಿದು 'ಸತ್ಯಾಗ್ರಹ ಹೂಡುವರು

ಜಯಪುರದ ಸಂಸ್ಥಾನಾಧೀಶರು ಪ್ರಜಾಮಂಡಲದ ಅಧ್ಯಕ್ಷರಾದ ಶ್ರೀ ಜಮ್ನಾಲಾಲರು ಸಂಸ್ಥಾನದೊಳಗೆ ಕಾಲಿಡ ಕೂಡದೆಂದು ಈ ನೊದಲೇ ಒಂದು ನಿರ್ಬಂಧವನ್ನು ಹಾಕಿದರಷ್ಟೆ ಆ ನಿರ್ಬಂಧವನ್ನು ಅಲ್ಲಿಯ ಮಹಾರಾಜರು ಹಿಂತೆಗೆಯದಿದ್ದರೆ ಫೆಬ್ರುವರಿ ತಾರೀಕು ಒಂದರಂದು ತಾನು ಆ ಆಜ್ಞೆಯನ್ನುಲ್ಲಂಘಿಸಿ ಸತ್ಯಾಗ್ರಹವನ್ನು ಹೂಡುವೆನೆಂದು ಶ್ರೀ ಜಮ್ನಾಲಾಲರು ಪ್ರಕಟಿಸಿದ್ದಾರೆ ತನಗೆ ಶಿಕ್ಷೆಯಾದಲ್ಲಿ ತನ್ನ ಹಿಂದಿನಿಂದ ಪ್ರಜಾಮಂಡಲದವರು ಸತ್ಯಾಗ್ರಹವನ್ನು ಮುಂದರಿಸಬೇಕೆಂದು ಕೇಳಿಕೊಂಡಿದ್ದಾರೆ ಮತ್ತು ಈ ಸತ್ಯಾಗ್ರಹಕ್ಕೆ [illegible] ವಿಧದಿಂದಲೂ ಸಹಾಯಮಾಡಬೇಕೆಂದು [illegible] ನಾಗರೀಕರನ್ನು ಬಿನ್ನವಿಸಿದ್ದಾರೆ [illegible] ಜಮ್ನಾಲಾಲ ಬಜಾಜರು ಕಳೆದ ಬಾರಿ [illegible] ಕ್ಕೆ ಬಂದ ಇಂದು [illegible] ಅವರ ಅಭಿಪ್ರಾಯವನ್ನು ತಿಳಿದು [illegible] ನರು, ಅಲ್ಲಿಂದ [illegible] ದಂದು ಜಯಪುರದ ನಿರ್ಬಂಧದ ಆಜ್ಞೆಯನ್ನು [illegible] ರು.

ರಾಜಕೋಟೆದಲ್ಲಿ ಪುನಃ ಸತ್ಯಾಗ್ರಹ ಕ್ಕಾರಂಭವಾಗುವುದೇ?

ರಾಜಕೋಟ ಸತ್ಯಾಗ್ರಹವು [illegible] ನಡೆದ ಒಪ್ಪಂದದ ಬಳಿಕ [illegible] ದೇಶದಲ್ಲೆಲ್ಲಾ ಅಭಿನಂದನೆಗಳು ನಡೆಯುತ್ತಿರುವಾಗಲೇ ಆ ಸಂಸ್ಥಾನದಲ್ಲಿ ಪುನಃ ಸತ್ಯಾಗ್ರಹವು ಆರಂಭವಾಗುವ ಭೀತಿಯುಂಟಾಗಿದೆ ಹೊಸ ರಾಜ್ಯಘಟನೆಯ ವಿಚಾರ ಮಾಡಲು ಕಮಿಟಿಗೆ ಯಾರ್‍ಯಾರನ್ನು ನೇಮಿಸಬೇಕೆಂಬ ವಿಚಾರದಲ್ಲಿ ಪಕ್ಷಗಳೆರಡರೊಳಗೆ ಮತಭೇದವು ಬಂದು ದರಬಾರದವರು ಪ್ರಜಾಮಂಡಳದವರ ಅಭಿಪ್ರಾಯವನ್ನು ತಿರಸ್ಕರಿಸಿದ್ದಾರೆ ಈ ಸಂಬಂಧವಾಗಿ ಸರದಾರ ವಲ್ಲಭಭಾಯಿ ಪಟೇಲರು ರಾಜಕೋಟದ ಠಾಕೂರ ಸಾಹೇಬರಿಗೆ ಒಂದು ಪತ್ರ ಕಳುಹಿಸಿ ಅದರಲ್ಲಿ ಸಾಮ್ರಾಜ್ಯಶಾಹಿ ಸರಕಾರದ ಪ್ರತಿನಿಧಿಯ ಮಾತುಗಳಿಗೆ ಕಿವಿಕೊಡದೆ ಪ್ರಜಾಮಂಡಳದೊಡನೆ ಸ್ನೇಹದಿಂದಲೂ, ಪ್ರೇಮದಿಂದಲೂ ನಡೆಯುವುದೊಳ್ಳೆಯದು. ನಾವು ಜಾಗ್ರತೆಯಾಗಿ ತಿಳಿಸಿದ್ದಾರೆ ಮತ್ತು ಆ ಕಮಿಟಿಗೆ ನೇಮಿಸಲ್ಪಟ್ಟ ಪ್ರಜಾಮಂಡಳದವರು ಕಮಿಟಿಯಿಂದ ಹೊರ ಬಂದಿರುವರು.

ಚೈನದಲ್ಲಿ ಠಕಾರಿ ಕರೆನ್ಸಿ ನೋಟುಗಳು

ಜಪಾನರು ಚೈನದ ಕರೆನ್ಸಿ ನೋಟುಗಳಂತೆ ಠಕಾರಿ ನೋಟುಗಳನ್ನು ತಯಾರಿಸುತಿದ್ದಾರೆ. ಅಮೋಯಿ ಎಂಬಲ್ಲಿ ಜಪಾನರು ಸೆಂಟ್ರಲ್ ಬೇಂಕ್ ಓಫ್ ಚೈನಾ, ಬೇಂಕ್ ಓಫ್ ಚೈನಾ ಮತ್ತು ದಿ ಫಾರ್ಮರ್ಸ್ ಬೇಂಕ್ ಓಫ್ ಚೈನಾದ ಒಂದ. ಮತ್ತು ಐದು ಡೋಲರುಗಳ ಕೃತಕ ಕರೆನ್ಸಿ ನೋಟುಗಳನ್ನು ತಯಾರಿಸಿದ್ದಾರೆ ಟೈವನ್ ಎಂಬಲ್ಲಿ ಹತ್ತು ಮತ್ತು ಇಪ್ಪತ್ತು ಸೆಂಟ್ಸಿನ ಕೃತಕ ನೋಟುಗಳನ್ನು ಧಾರಾಳವಾಗಿ ತಯಾರಿಸಿ ಜಪಾನಿಯ ಸೈನ್ಯವು ಈಗ ದಾಳಿಯಿಟ್ಟಿರುವ ಅಮೋಯ್ ಎಂಬಲ್ಲಿಗೆ ಕಳುಹಿಸಿದ್ದಾರೆ.

ಶ್ರೀ ಮೇನಕೆಯ ನೃತ್ಯಕಲಾ ನೈಪುಣ್ಯ

ಶ್ರೀ ಅ. ನ. ಕೃಷ್ಣರಾಯರು

ಲಲಿತ ಕಲೆಗಳ ಸ್ಥಾನ ನಿರ್ದೇಶವಮಾಡಿದ ಪ್ರಾಚೀನ ಪಂಡಿತರು ನೃತ್ಯಕ್ಕೆ ಹಿರಿಯ ಸ್ಥಾನವಿತ್ತರು. ಭರತ ಮಹಾಮುನಿಯು ನಾಟ್ಯವನ್ನು ಐದನೆಯವೇದವೆಂದು ಕರೆದನು. ದೇವಾದಿದೇವತೆಗಳು ನಾಟ್ಯಕಲೆಯ ಪುರಸ್ಕರ್ತರಾಗಿದ್ದರು. ಸಾಕ್ಷಾತ್ ವಿಷ್ಣುವು ರಂಗನಾಥನೆನಿಸಿಕೊಂಡನು, ಶಿವನು ತನ್ನ ತಾಂಡವಕ್ಕೆ ಪ್ರಸಿದ್ಧನಾಗಿ ನಟರಾಜನಾದನು. ಪುರಾಣಕಾಲದ ಕುಲೀನಸ್ತ್ರೀಯರಿಗೆ ನಾಟ್ಯನಿಪುಣತೆಯು ಒಂದು ಆವಶ್ಯಕವಾದ ಶೋಭೆಯಾಗಿತ್ತು. ಅರ್ಜುನನಂತಹ ವೀರಾಧಿವೀರನು ನಾಟ್ಯಕಲಾನಿಪುಣ, ವಿರಾಟನ ಮಗಳಾದ ಉತ್ತರೆಯ ನಾಟ್ಯಾಚಾರ್ಯನಾಗಿ ತನ್ನ ಅಜ್ಞಾತಕಾಲವನ್ನು ಕಳೆದನು. ತಮಿಳಿನ ಶಿಲಪ್ಪದಿಕಾರಂ ಮಣಿಮೇಖಲೆ, ಕನ್ನಡದ ಭರತೇಶ ವೈಭವ ಮತ್ತು ಸಂಸ್ಕೃತ ನಾಟಕಗಳಲ್ಲಿ ನಾಟ್ಯಕಲೆಯ ಬಗೆಬಗೆಯ ವಿಧಾನಗಳೂ ಹಿರಿಮೆಯೂ ಬಣ್ಣಿಸಲ್ಪಟ್ಟಿವೆ.

ಕಾಲಗತಿಯಿಂದ ನಾಟ್ಯಕಲೆ ಬೆಲೆವೆಣ್ಣುಗಳ ಸೊತ್ತಾಯಿತು. ಅದರಲ್ಲಿ ಅಭಿರುಚಿಯನ್ನು ತೋರುವುದೂ, ಅಭ್ಯಾಸಾನುಸಕ್ತತೆಯನ್ನು ಪ್ರದರ್ಶಿಸುವುದೂ ಕುಶೀಲವಾಗುತ್ತ ಬಂದು, ಕಲೆಯು ಅನುಯಾಯಿಗಳಿಲ್ಲದೆ ಹಾಳಾಗುತ್ತ ಬಂದಿತು. ಸಂಸ್ಕೃತಿಯ ಸಂಪರ್ಕದಿಂದ ದೂರವಿದ್ದ ವೇಶ್ಯೆಯರ ಕೈಗೆ ಸಿಕ್ಕಿ ಕಲೆಯು ಕೊಳೆಯುತ್ತ ಬಂದಿತು.

ಇತ್ತೀಚೆಗೆ ಎಲ್ಲ ಭಾರತೀಯ ಕಲೆಗಳಿಗೂ ಪುನರ್ಜನ್ಮಬಂದಂತೆ ನಾಟ್ಯಕಲೆಗೂ ಒಳಳ್ಳೆ ಕಾಲಾರಂಭವಾಯಿತು. ಬಂಗಾಳದಲ್ಲಿ ಕವಿ ರವೀಂದ್ರರೂ, ಮಲಬಾರಿನಲ್ಲಿ ಕವಿ ವಳ್ಳತ್ತೋಳರವರೂ ನಾಟ್ಯಕಲೆಯ ಹಿರಿಮೆಯನ್ನು ಸಾರುತ್ತ ಬಂದರು. ಉದಯಶಂಕರ್, ಮೇನಕಾ ಹತಿಸಿಂಗ್, ಗೋಪೀನಾಥ್ ಮೊದಲಾದ ಕಲಾವಿದರು ತಮ್ಮ ನೈಪುಣ್ಯದಿಂದ ಕಲೆಗೆ ಸಮಾಜಗೌರವದ ಬುನಾದಿಯನ್ನು ಸ್ಥಾಪಿಸುತ್ತ ಬಂದರು. ಈ ಕೆಲಸದಲ್ಲಿ ಹೆಚ್ಚಿನ ಕೀರ್ತಿ ಶ್ರೀಮತಿ ಲೀಲಾ ಸೋಖಿ (ಮೇನಕಾ) ಅವರಿಗೆ ಸಲ್ಲಬೇಕಾಗಿದೆ. ಮುಂಬಾಯಿಯ ಪ್ರಸಿದ್ಧ ಡಾಕ್ಟರಾದ ಸೋಖೀಯವರ ಧರ್ಮಪತ್ನಿಯಾದ ಲೀಲಾ ಅವರು ತಮ್ಮ ಸಮಾಜದ ಎಲ್ಲ ಅವಹೇಳನವನ್ನೂ ಎದುರಿಸಿ ಈ ಕಲೆಯ ಸೇವೆಗೆ ನಿಂತರು. ಇಂದೂ ನಾಟ್ಯವನ್ನು ಪೂರ್ಣಮೆಚ್ಚುವ ಸ್ಥಿತಿ ಬಂದಿಲ್ಲ. ಕಲೆಯ ಪರಂಪರೆಯನ್ನು ಕಳೆದುಕೊಂಡ ಜನಾಂಗಕ್ಕೆ ಜಾಜ್, ಚಾರ್ಲ್ಸ್‌ಟನ್‌ಗಳ ಸೊಗಸೂ, ಫ್ರೆಡ್ ಆಸ್ಟೇರ್, ಜಿಂಜರ್ ರೋಜರ್ಸ್, ಎಲ್ಲಿನಾರ್ ಪವಲ್‌ರ ಚಾಕಚಕ್ಯವೂ ಇನ್ನೂ ಭಾರತೀಯ ನೃತ್ಯಕಾರರಲ್ಲಿಯೂ ಅವರ ಕಲೆಯಲ್ಲಿಯೂ ಕಾಣಬರುತ್ತಿಲ್ಲ. ಭಾರತೀಯ ನೃತ್ಯ ವಿಧಾನದ ಆಂಗಿಕ ಚಲನವಲನಗಳು ಅವರಿಗೆ ಅರ್ಥವಿಲ್ಲದ ಉಲುಕು-ಕುಲುಕುಗಳಾಗಿ ಕಂಡು ಬರುವುದೇನೂ ಆಶ್ಚರ್ಯವಲ್ಲ.

ಉನ್ನತಕಲೆಯನ್ನು ಕಂಡು ಅದರ ಗುಣವನ್ನು ಪರಿಗ್ರಹಿಸುವುದಕ್ಕೆ ರಸಿಕ ಪ್ರೇಕ್ಷಕನಲ್ಲಿ ಎರಡು ಗುಣಗಳಿರಬೇಕು. ಪ್ರೇಕ್ಷಕನು ಸುಹೃದಯನಾಗಿ ಕಲಾವಿದನ ರಸಸೃಷ್ಟಿಗೆ ಯೋಗ್ಯರೀತಿಯಲ್ಲಿ ಪ್ರತಿಸ್ಪಂದಿಸುವವನಾಗಿರಬೇಕು. ಅವನ ರಾಗ, ಭಾವಗಳು, ಅಭಿನಯ, ಮುದ್ರೆಗಳು ಪ್ರೇಕ್ಷಕನ ಅಂತರಂಗವನ್ನು ಮುಟ್ಟಬೇಕು. ಇದಕ್ಕೆ ಪ್ರೇಕ್ಷಕನೂ ಕಲಾವಿದನಂತೆ ರಸಸಿದ್ಧಿ ಪಡೆದವನಾಗಿರಬೇಕು. ಎರಡನೆಯದಾಗಿ ಕಲೆಯ ಓನಾಮವನ್ನಾದರೂ ಪ್ರೇಕ್ಷಕನು ಬಲ್ಲವನಾಗಿರಬೇಕು. ಕಾವ್ಯದಲ್ಲಿ ಹೇಗೆ ಕೆಲವು ಸಮಯಾಚಾರಗಳೂ (Convention) ಕವಿಸಮಯಗಳೂ ಇವೆಯೋ ಹಾಗೆ ನಾಟ್ಯದಲ್ಲಿಯೂ ಇವೆ. ಕಾವ್ಯದಲ್ಲಿ ರಸವನ್ನು ಹೇಗೆ ಮಾತಿನ ಸಾಧನದಿಂದ ಉದ್ದೀಪಿಸಬೇಕೋ ಹಾಗೆ ನಾಟ್ಯದಲ್ಲಿ ತಾಳ, ಭಾವಗಳಿಂದ ತೋರಬೇಕಾಗುತ್ತದೆ. ಭಾವ ಪ್ರದರ್ಶನಕ್ಕೆ ಮುದ್ರೆ, ಭಂಗಿಗಳನ್ನುಪಯೋಗಿಸಬೇಕಾಗುತ್ತದೆ. ಭಾವ ಭಂಗಿಗಳ ಸೂಕ್ಷ್ಮ ತತ್ವಗಳನ್ನು ಪ್ರೇಕ್ಷಕರಲ್ಲಿ, ಎಲ್ಲರೂ ತಿಳಿಯಲು ಸಾಧ್ಯವಿಲ್ಲದಿದ್ದರೂ ವಸ್ತು ಯಾವುದು, ವಸ್ತುವನ್ನು ನಿರ್ವಹಿಸುವ ರೀತಿ ಯಾವುದು, ನಿಲುವಿಕೆಯ ಅಥವಾ ಭಾವವನ್ನು ಸೂಚಿಸುವ ರೀತಿಗಳಿಗೆ ಆಧಾರ ಯಾವುದು ಎಂಬಷ್ಟನ್ನಾದರೂ ಅರಿತಿರಬೇಕು. ಇಲ್ಲದಿದ್ದರೆ ಉತ್ತಮ ಗಾಯಕನನ್ನು ಕೇಳಿದ ಶ್ರಾವಕ 'ಎಲ್ಲಾ ಒಂದೇ ರೀತಿಯಿದೆ. ಅದೇ 'ತನನ- ಅದೇ ಧಿನ್ ಧಿನ್' ಎಂದು ಹೇಳಿದಂತಾಗುತ್ತದೆ.

ಮೇನಕೆಯ ಕಲೆಯನ್ನು ಸಮನ್ವಯ ಹಾಗೂ ರಸಕಲೆಯೆಂದು ಕರೆಯಬಹುದು. ರವೀಂದ್ರರ ಸಂಪ್ರದಾಯಕ್ಕೆ ಸೇರಿದ ಬಂಗಾಳ ನೃತ್ಯಕಾರರು ಸಂತಾಲಿ, ಮಣಿಪುರಿ ಹಳ್ಳಿಗಳಲ್ಲಿರುವ ಕಲೆಯನ್ನು ರೂಢಿಸಿಕೊಂಡು ಅದಕ್ಕೆ ಅಭಿರುಚಿಯ ಮೆರುಗನ್ನಿತ್ತಿದ್ದಾರೆ. ಮಣಿಪುರಿಯಲ್ಲಿ ರಾಗಕ್ಕಿಂತಲೂ ತಾಳಕ್ಕೆ ಪ್ರಾಧಾನ್ಯ. ನರ್ತಕ ತನ್ನ ಸಮಸ್ತ ಭಾವನೆಯನ್ನು ತಾಳಗತಿಯಿಂದಲೂ, ದೇಹದ ಆಂದೋಲನದಿಂದಲೂ ತೋರಬೇಕಾಗುತ್ತದೆ. ದಕ್ಷಿಣದ ಕಥಾಕಳಿಯಲ್ಲಿ ಮುದ್ರೆಗಳಿಗೆ ಪ್ರಾಧಾನ್ಯ. ದಕ್ಷಿಣದಲ್ಲಿ ಪ್ರಸಾರದಲ್ಲಿರುವ ನಾಚ್ ಅಥವಾ ತಾಫ ಸಂಪ್ರದಾಯ ನೃತ್ಯ (ಅಭಿನಯ, ಭಾವಪೂರ್ಣ) ನೃತ್ತ (ಗತಿ, ದೈಹಿಕ ಚಲನ, ಹಿಂದೋಲನ)ಗಳ ಮೇಳದಿಂದ ಮಾಡಿದ ಜಾತಿಗೆ ಸೇರಿದುದಾಗಿದೆ. ಉತ್ತರದ ಕಥಕ್, ಗುಜರಾತದ ಗರ್ಭಾ ದಕ್ಷಿಣ ತಾಫೆಗಳು ಭಾರತ ನಾಟ್ಯಶಾಸ್ತ್ರದ ಒಂದೊಂದು ಭಾಗವನ್ನು ಹೆಚ್ಚು ಬೆಳಸಿಕೊಂಡಿವೆ ಕಾಣಬರುತ್ತದೆ.

ಈ ಎಲ್ಲ ಬೇರೆ ಬೇರೆ ಪದ್ಧತಿಗಳಲ್ಲಿಯೂ ಅನೇಕ ಕುಂದುಕೊರತೆಗಳಿವೆ. ಕಥಾಕಳಿಯ ವಿಲಂಬ, ಅಪಾರವಾದ ಪಕ್ಕವಾದ್ಯ, ಕಥಕ್ಕಿನ ಏಕಪಕ್ಷೀಯ ಹಾಗೂ ವೇಗ, ತಾಫೆಯ ಶಿಷ್ಟ ಕಾರ್ಯಗಳ ಕಲೆಯನ್ನು ಬಾಧಿಸಿ ರಸಹಾನಿಕ್ಕೆ ಕಾರಣವನ್ನುಂಟುಮಾಡುತ್ತವೆ.

ಮೇನಕೆ ಈ ಎಲ್ಲಾ ಸಂಪ್ರದಾಯಗಳಲ್ಲಿನ ತತ್ವವನ್ನು ಸಂಗ್ರಹಿಸಿಕೊಂಡು ಕೊರತೆಗಳನ್ನು ದೂರಮಾಡಿದ್ದಾಳೆ. ವಸ್ತುವನ್ನು ಆಯ್ದುಕೊಳ್ಳುವ ರೀತಿಯಿಂದ ಮೊದಲುಗೊಂಡು ರಂಗರಚನೆಯವರೆಗೆ ಭಾರತೀಯ ಕಲಾ ತತ್ವಗಳಿಗೆ ವಿರೋಧವಾಗದಂತೆ ಆಧುನಿಕ ವಿದ್ಯುತ್ ಪರಿಕರಗಳ ಉಪಯೋಗವನ್ನು ಮಾಡಿಕೊಂಡಿದ್ದಾಳೆ.

ಸಾಧಾರಣವಾಗಿ ತಾನೆ ಒಂದು ಹಾಡು, ಪದ, ಜಾವಳಿಗಳ ಅಭಿನಯ ನಿರೂಪಣವನ್ನಾಗಲಿ, ರಾಮಾಯಣ, ಭಾರತ, ಭಾಗವತದಲ್ಲಿನ ಕಥಾಭಾಗವನ್ನಾಗಲೀ ಅವಲಂಬಿಸಿರುತ್ತಿತ್ತು. ಹಾಡುಗಳನ್ನು ಅರ್ಥ ಮಾಡಿಕೊಂಡು ಅಭಿನಯಿಸುವುದೂ, ಕಥೆಗಳನ್ನು ಮನಸ್ಸು ಬಂದ ಹಾಗೆ ವ್ಯಾಖ್ಯಾನ ಮಾಡುವುದೂ ಸಾಮಾನ್ಯವಾಗಿತ್ತು. ಮೇನಕೆಯು ನೃತ್ಯ ಸಮಾರಂಭದಲ್ಲಿ ಭಾವ ಪ್ರಧಾನವಾದ ವಸ್ತುಗಳಿಗೆ ಮಹತ್ವ ಕೊಟ್ಟು ಪ್ರಭಾತ ಮಂಗಳ, ಉಷಃಕಾಲ, ವಿರಹವಿಲಾಪ, ಕ್ರೀಡಾ, ಭಕ್ತಿಭಾವ, ಸಂಧ್ಯಾ ಮೊದಲಾದ ವಸ್ತುಗಳು ಕೆಲವು ಭಾವವನ್ನು ಪ್ರಧಾನ ಮಾಡಿದ ಪುರಾಣೋಕ್ತ ವಿಷಯಗಳು, ಶಿವನ ಸಂಹಾರ ನೃತ್ಯ—ಇಲ್ಲಿ ವೀರರಸದ ವಿವಿಧ ಸ್ವರೂಪಗಳಾದ ಕ್ರೋಧ, ಉನ್ಮತ್ತತೆಗಳನ್ನು ತೋರುವುದೇ ಉದ್ದೇಶ. ಕುಂಜರಸ, ಲಾಸ್ಯ ಮೊದಲಾದವು ಕರುಣ, ಶೃಂಗಾರ ರಸಗಳನ್ನು ಎತ್ತಿ ತೋರುತ್ತವೆ. ಕಥೆಯನ್ನು ಅಭಿನಯದ ಮೂಲಕ ನಿರೂಪಿಸುವ ಬಗೆಯನ್ನು ಮೇನಕಾ ಪ್ರದರ್ಶಿಸುತ್ತಾಳೆ. ವಿಶ್ವಾಮಿತ್ರ-ಮೇನಕಾ, ಕೃಷ್ಣಲೀಲಾ, ದೇವವಿಜಯ ಇವು ಈ ಜಾತಿಗೆ ಸೇರಿದವುಗಳು. ನರ್ತಕನಿಗೆ ವಸ್ತುವು ನೆರವಾಗದೆ ರಸದ ಸೃಷ್ಟಿ, ವಿಕಾಸಗಳಿಗೆ ನೆರವಾಗಬೇಕೆಂಬುದೇ ಮೇನಕೆಯ ಉದ್ದೇಶ. ವಸ್ತು ಯಾವುದಾಗಿದ್ದರೂ ಪ್ರೇಕ್ಷಕರ ಹೃದಯದ ಮೇಲೆ ನವರಸಗಳ ತಾಂಡವ ಮಾತ್ರ ಆಗತಕ್ಕದ್ದು ಬೇಕು. ಉಷಾ ನೃತ್ಯವಾದರೆ ಮುಗ್ಧತೆ ಅರಳಬೇಕು, ವಿರಹವಾದರೆ ದುಃಖದ ದಾರುಣವೇದನೆಯಲ್ಲಿ ಕೊರಗಬೇಕು, ಸಂಧ್ಯೆಯಾದರೆ ಶಾಂತಿ ದಾಂತಿಗಳು ಮೂಡಬೇಕು. ಈ ರಸಸಿದ್ಧಿಯೇ ಕಡೆಗೇ ವಸ್ತುಗಳ ಮತ್ತು ಕಲಾವಿದರ ಲಕ್ಷ್ಯ.

ವಸ್ತುಗಳ ವ್ಯಾಖ್ಯಾನಕ್ಕೆ ಮೇನಕೆ ಎಲ್ಲ ಸಂಪ್ರದಾಯಗಳ ಹಿರಿ ಕೌಶಲ್ಯವನ್ನು ಉಪಯೋಗಿಸಿಕೊಳ್ಳುತ್ತಾಳೆ. ಭರತ ನಾಟ್ಯ ಶಾಸ್ತ್ರದ ಶಿರ, ಹಸ್ತ, ಕಟಿ, ಪಾದಗಳ ಮುದ್ರೆ, ಭಂಗಿಗಳು ಅವಳ ಕಲೆಯಲ್ಲಿ ಎದ್ದು ಕಾಣುತ್ತವೆ. ಆಂಗಿಕ ಅಭಿನಯದಲ್ಲಿ ಮೇನಕೆಯದು ಹಿರಿಯ ಸಾಮರ್ಥ್ಯ. ಕರೆಯುವಾಗ, ಬೇಡವೆನ್ನುವಾಗ ವ್ಯಗ್ರತೆಯನ್ನು ಸೂಚಿಸುವಾಗ ಮೇನಕೆಯ ಹಸ್ತಮುದ್ರೆಗಳು ಸಜೀವ ಮೂರ್ತಿಗಳಾಗುತ್ತವೆ. ಕೋಪವಾಗಲಿ, ತಿರಸ್ಕಾರವಾಗಲೀ, ತ್ಯಾಗವಾಗಲಿ ಭೋಗವಾಗಲಿ ಮೇನಕೆಯು ಒಂದು ಉಚ್ಚ ಅಂತಸ್ಥಿನ ಮೇಲೆ ನಿಂತು ಸೂಚಿಸುತ್ತಾಳೆ. ಪ್ರಣಯವೆಂದರೆ ರಾಧಾಕೃಷ್ಣರ ಪ್ರಣಯ, ಪ್ರಣಯ ಕಲಹವೆಂದರೆ ಆದರ್ಶ ದಂಪತಿಗಳ ಕಲಹವೆಂಬುದನ್ನು ಮರೆಯುವುದಿಲ್ಲ. ಮೇನಕೆ ಅಭಿನಯಿಸುವಾಗ ನಮ್ಮ ಮುಂದೆ ನಿಲ್ಲುವವರು ರಾಧಾ, ಮೇನಕಾ, ಪಾರ್ವತಿ ಮೊದಲಾದ ಭಾರತೀಯ ಆರಾಧ್ಯ ಮೂರ್ತಿಗಳು.

ದಕ್ಷಿಣದ ಮೇಳ, ಕಥಾಕಳಿಗಳಲ್ಲಿರುವಂತೆಯೇ ಕಥಕ್, ಮಣಿಪುರಿಗಳಲ್ಲಿಯೂ ಒಂದು ಬಗೆಯ ಏಕತಾನದ ತಾಳಗತಿಯುಂಟು. ಇದನ್ನು ಅಸಂಸ್ಕೃತರಾದ ನೃತ್ಯಗಾರರು ತಲೆಬೇಸರ ಹುಟ್ಟಿಸುವಷ್ಟು ಉಪಯೋಗಿಸುತ್ತಾರೆ. ಮೇಳದಲ್ಲಿ ಮೊದಲಿಂದ ಕೊನೆಯವರೆಗೆ 'ತಾ-ನಾ-ತಿನ್, ತಾ-ನ್ನಾ-ತಿನ್' ಮಣಿಪುರಿಯಲ್ಲಿ 'ಧಿ-ಧಿನ್-ದಿಕ್-ಧಿ-ಧಿನ್-ದ್ರಿಕ್'; ಇದು ಇಂದಿನ ಅಭಿರುಚಿಗೆ ಜಿಗುಪ್ಸೆಯನ್ನುಂಟುಮಾಡುತ್ತದೆ. ಮೇನಕಾ ತನ್ನ ನೃತ್ಯಗಳಿಗೆ ಅನುಗುಣವಾದ ರಾಗಗಳನ್ನು ಅಳವಡಿಸಿ ಸನಾಯಿ—ತಬಲಾ—ತಂಬೂರಿ—ಮೊದಲಾದ ವಾದ್ಯಗಳ ಸಹಾಯದಿಂದ ಹಿನ್ನೆಲೆಯನ್ನು ಸೃಜಿಸುತ್ತಾಳೆ. ರಾಗ, ರಸವನ್ನು ಅನುಸರಿಸುತ್ತವೆ. ಘಟನವನ್ನು ತೋರುವುದಕ್ಕೆ ಮಾಲ್ಕಂಸ ವಿಷಾದ, ಚಿಂತೆ, ರಾತ್ರಿ ಭಯಗಳಿಗೆ ಬಹಾರ್ ಬಿಹಾಗ್, ಕಂಕರ ರಾಗಗಳು, ಉಷಃಕಾಲಕ್ಕೆ ಭೈರವ, ಸಂಧ್ಯೆಗೆ ಪೂರ್ವಿ. ವಿಚಾರಪೂರ್ಣವಾದ ಈ ರಾಗಸಂಯೋಜನೆಯು ಮೇನಕೆಯ ನೃತ್ತಗಳನ್ನು ಅಪೂರ್ವ ಕಲಾ ಕೃತಿಗಳನ್ನಾಗಿಸುತ್ತವೆ.

ಸಂಪ್ರದಾಯದ ನೃತ್ಯಗಳಲ್ಲಿನ ಮತ್ತೊಂದು ದೋಷವೆಂದರೆ ಜನ್ಮಾಂತರದ ಪಕ್ವ ಉಡುಗೆ ತೊಡುಗೆಗಳು. ಆ ಕಿರೀಟ, ಭುಜಕೀರ್ತಿ, ಘಾಸುಘಾಸು ನೋಡಿದರೆ ಭಯ ಹೇಸಿಗೆಗಳು ಹುಟ್ಟುತ್ತವೆ. ಮೇನಕಾ ತನ್ನ ಉಡುಗೆ ತೊಡುಗೆಗಳಿಗೆ ಗುಪ್ತ ರತ್ನಮಾನದ ಕಾಂಗ್ರಾ ಚಿತ್ರ ಪದ್ಧತಿ (ಇವುಗಳನ್ನು ರಜಪೂತ ಚಿತ್ರಕಲೆ ಎಂದು ಕರೆಯುತ್ತಾರೆ) ಚಿತ್ರಕಲೆ ಸಂಪ್ರದಾಯಗಳನ್ನು ಅನುಸರಿಸಿದ್ದಾಳೆ. ಸರಿಯಾದ ಅಂಗ, ದೇಹಕ್ಕೆ ಹೊಂದಿಕೊಂಡ ಅರೆಕುಪ್ಪಸ, ತೆಳುವಾದ ಮೇಲು ಹೊದಿಕೆ, ಸ್ವಲ್ಪ ಎತ್ತಿ ಕಾಣುವ ವೈಖರಿ, ಬಣ್ಣಗಳು, ಇವು ವಸ್ತುಗಳಿಗೆ ಒಂದು ಬಗೆಯ ಪ್ರಾಚೀನತೆಯನ್ನೂ ನವಸೌಂದರ್ಯವನ್ನೂ ಕೊಡುತ್ತವೆ. ಕೆಲವು ನಿಲುವಿಕೆಯ ಭಂಗಿಗಳು, ಮೂಕ ಚಿತ್ರಗಳು (Tableaux) ನಿಸ್ಸಂಶಯವಾಗಿ ಪ್ರಸಿದ್ಧ ಕಾಂಗ್ರಾ ಚಿತ್ರಗಳಾದ ನವವಧು, ರಾಗ ಸಿಂಧು, ಭೈರವಿ, ರಾಗಗೌರಿ, ಅಭಿಸಾರಿಕಾನಾಯಿಕಾ, ಸಂಧ್ಯಾ ಭೈರವಗಳ ಪ್ರತಿಚಿತ್ರಗಳಾಗಿದ್ದವು.

ಮೇನಕೆಯ ಪ್ರದರ್ಶನವೆಂದರೆ ರಾಗ-ಭಾವ-ತಾಳಗಳ ಮೇಳ; ನಾಟ್ಯ-ನೃತ್ತ-ನೃತ್ಯಗಳ ಕೂಟ; ಚಿತ್ರ-ಸಂಗೀತ-ನೃತ್ಯ ಕಲೆಗಳ ತ್ರಿವೇಣಿ ಸಂಗಮ. ಕೆಲವು ಸಣ್ಣ ಪುಟ್ಟ ದೋಷಗಳು ಆಕೆಯ ಪ್ರದರ್ಶನಗಳಲ್ಲಿ ಕಂಡು ಬರುತ್ತಿದ್ದವು. ಕಲಾವಿದೆಯಾದ ಮೇನಕಾ ಅವುಗಳ ಸುಧಾರಣೆಯ ಕಡೆಗೆ ಗಮನವಿಡುತ್ತಾಳೆಂದು ನಾವಿಲ್ಲಿ ಸಹಕ್ಷರವಾಗಿ ಸೂಚಿಸುತ್ತೇವೆ. ವಾದ್ಯ ಮೇಳವು ಸಾಲದು. ಮೊದಲಿನಿಂದ ಕೊನೆಯವರೆಗೂ ಸನಾಯಿಯ ನಾದವಲ್ಲದೆ ಬೇರೆ ಯಾವುದೂ ಕೇಳಬರುತ್ತಿರಲಿಲ್ಲ. ಸಿತಾರ್, ದಿಲರುಬಾ, ಸಾರಂಗಿ, ಇಸ್ರಾಜ್ ವಾದ್ಯಗಳಿಗೆ ಎಡೆಕೊಡಬೇಕು. ವಿಲಾಯತಿ ವಾದ್ಯಗಳನ್ನು ಪೂರ್ಣವಾಗಿ ವರ್ಜಿಸಬೇಕು. ಕೆಲವು ನೃತ್ಯಗಳಿಗಾದರೂ ಸೂಕ್ತವಾದ ಹಿನ್ನೆಲೆಗಳನ್ನು ನಿಯೋಜಿಸಬೇಕು. ಕ್ರಿಯಾಶಕ್ತಿ

[೧೬ನೇ ಪುಟಕ್ಕೆ ಮುಂದುವರಿಯುವುದು]

FANCY SHIRTING

Snow white very soft decent and durable. 9 yds ×54" sufficent for 6 shirts. Price 5—8—0 Post free. money refunded if unapproved Half dozen fancy handkerchiefs 22"×22" will be given to every purchaser.

AGENTS WANTED EVERY WHERE ASK FOR FREE PARTICULARS.

NATIONAL TRADING CO.,
LUDHIANA, A. 211.

ಬರೀ ರೂ. 1-4-0ಕ್ಕೆ 3 ಗಡಿಯಾರಗಳು ಮತ್ತು 1295 ಫ್ರೀ ಬಹುಮಾನಗಳು

ಒಂದೇ ಬಾರಿಗೆ ರೂ. 1-4-0ಕ್ಕೆ ನಮ್ಮ 8 ಸೀಸೆ ಪರಿಮಳದ ಸೆಂಟನ್ನು ಅಥವಾ 8 ಸೀಸೆ ಮುಲಾಮನ್ನು ಕೊಳ್ಳುವವರಿಗೆ 2 ಗೋಲ್ಡ ಗಿಲ್ಟಿನ ಡಮ್ಮಿ ರಿಸ್ಟವಾಚುಗಳೂ ಒಂದು ಕಟ್ಟುವ ಪಟ್ಟಿ, ಕೂಡ

1 ಪೋಕೆಟು ವಾಚು, ಒಂದು ಜಿಲ್ಲೆಟ್ ರೇಜರೂ, ಒಂದು ಶೇವಿಂಗ್ ಬ್ರಷೂ, ಒಂದು ಶೇವಿಂಗ್ ಸಾಬೂನು, ಒಂದು ಕನ್ನಡಿ ಒಂದು ಬಾಚಣಿಗೆ, 14 ಕೆರೆಟ್ ರೋಲ್ಡ್ ಗೋಲ್ಡ ನಿಬ್ಬಿನ ಫೌಂಟನ್ ಪೆನ್ನು, ಒಂದು ಸೆಟ್ಟು ರೋಲ್ಡ ಗೋಲ್ಡ ಗುಂಡಿಗಳು, ಒಂದು ಪಾಕೆಟ್ ಪೌಡರು, ಒಂದು ಚೂರಿ, ಒಂದು ಪೇರ್ ಕನ್ನಡಕ, ಒಂದು ಬಂಗಾರದ ಗಿಲ್ಟಿನ ಉಂಗುರ, 300 ಫೀಟ್ ಪ್ರೋಕಸ್ ಬೀಳುವ ಒಂದು ಟೋರ್ಚ್ ಲೈಟು ಅಥವಾ 10 ವರ್ಷ ಗ್ಯಾರಂಟಿ ಇರುವ ಗಟ್ಟಿಯಾದ ನಿಕಿಲಿನಿಂದ ಮಾಡಲ್ಪಟ್ಟ ಒಂದು ಟೈಮ್ ಪೀಸೂ ಇವುಗಳನ್ನು ಉಚಿತವಾಗಿ ಕೊಡುವೆವು. ಪೆಕಿಂಗ್ ಮತ್ತು ಟಪ್ಪಾಲು ಖರ್ಚು 0—14—0 ಪ್ರತ್ಯೇಕ

The American Commercial Stores, Post Box No. 12218 Calcutta (S. A.

ಶ್ರೀಮಾನ್ ವೈಸ್ರಾಯರ ಭಾಷಣ

ರೂಪಾಯಿಯ ಬೆಲೆ—ರಕ್ಷಣೋದ್ದೇಶದ ಸುಂಕವಿಧಿ—ಒಟ್ಟಾವಾ ಕರಾರು—ಸೈನ್ಯ ಇಲಾಖಾ ಖರ್ಚು—ಹಿಂದೀಯರ ಸೇನಾಂಗ ಇತ್ಯಾದಿ ಮಹತ್ವಪೂರ್ಣ ವಿಷಯಗಳನ್ನು ಕುರಿತು ವೈಸ್ರಾಯರು ಬೊಂಬಾಯಿಯಲ್ಲಿ ಎಂದುದು.

೧. ರೂಪಾಯಿಯ ವಿನಿಮಯದ ಬೆಲೆ ಇದು ಕಠಿನ ಸಮಸ್ಯೆ. ವಾಣಿಜ್ಯ ಸಂಘಗಳ ಸೂಚನೆಯನ್ನು ಅಂಗೀಕರಿಸುವುದು ಸಾಧ್ಯವಾದುದಲ್ಲ. ಹಿಂದಣ ಇತಿಹಾಸದ ಪುಟ ತಿರುವಿ ಇದರ ಇತ್ಯರ್ಥಕ್ಕೇನೂ ಪ್ರಯೋಜನವಿಲ್ಲ. ಯಾವುದೊಂದೇ ದೇಶದ ಹಣಚಲಾವಣೆಯ ವಿಷಯವಾಗಿ ಇತ್ಯರ್ಥಿಸುವುದು ಸುಲಭವಾಗಿಲ್ಲ. ಇಪ್ಪತ್ತು ವರ್ಷಗಳಿಂದಲೂ ಈ ಸಮಸ್ಯೆ ಜಗತ್ತಿನ ಎದುರಲ್ಲಿದೆ. ಇಂಡಿಯಾ ಸರಕಾರವು ಈ ವಿಷಯವನ್ನು ರೈತನ ಮತ್ತು ತೆರಿಗೆದಾರನ ಹಿತದ ದೃಷ್ಟಿಯಿಂದ ಬಾರಬಾರಿಗೂ ವಿಮರ್ಶಿಸಿ ನೋಡಿಯದೆ. ಆದುದರಿಂದ ವಿನಿಮಯದ ಬೆಲೆಯನ್ನು ಬದಲಾಯಿಸಲು ನಾವು ಇಷ್ಟಪಟ್ಟರೂ ಅದು ಸಾಧ್ಯವಾಗಿಲ್ಲ. ನನ್ನ ಜವಾಬ್ದಾರಿಯನ್ನು ನಾನು ಬಲ್ಲೆನು. ಈಗ ನಾವು ಯಾವ ದರವನ್ನು ಇಟ್ಟಿರುವೆವೋ ಅದನ್ನೇ ಮುಂದರಿಸಬೇಕಾಗಿದೆ. ಹೊರತು ಬೇರೆ ವಿಧಾನದಿಂದ ಯಾವ ತರದ ಹಿತವೂ ಉಂಟಾಗಲಾರದು. ಸರಕಾರವು ಈ ಬೆಲೆಯ ಇಳಿತಾಯವನ್ನು ತನ್ನ ಯಾವತ್ತು ಬಲದಿಂದ ಇದಿರಿಸುವುದು.

× × ×

೨. ಕೆಲವು ಜನಾಂಗಗಳಿಗೆ ಕಡಮೆ, ಕೆಲವಕ್ಕೆ ಹೆಚ್ಚಿನ ಪೋಷಕವನ್ನು ಒಂದೇ ಸರಕಿನ ಮೇಲೆ ವಿಧಿಸುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯವಿದೆ; ಮಾತ್ರವಲ್ಲ, ಹಿಂದೀ ಕೈಗಾರಿಕೆಗಳಿಗೆ ಸಂಪೂರ್ಣ ಲಾಭಕರವಾದ ಸುಂಕ ವಿಧಿ ಇರಬೇಕೆನ್ನುವಿರಿ. ಆದರೆ, ಈ ವಿಧಿಯಿಂದ ಬಡ ಕೃಷಿಕರಿಗಾಗಲಿ ಇತರರಿಗಾಗಲಿ ಹಾನಿಯುಂಟಾಗಬಾರದೆನ್ನುವುದು ನಮ್ಮ ತತ್ವ. ರಕ್ಷಣೆ ಎಂಬ ವಸ್ತು ಮೆಚ್ಚಿದೆನಾವು ಮಾಡಿರುವೆವು. ಇದರಿಂದ ಪ್ರಯೋಜನವುಂಟಾಗಿದೆ. ಇದನ್ನು ಈಗ ತ್ಯಜಿಸಿ ಬದಲಾಯಿಸಬೇಕೆನ್ನುವುದು ಅಸಂಗತವಾಗಿದೆ. ಈಗ ನಮ್ಮ ಸುಂಕದ ಆಯವನ್ನು ಬೇಕಾದಂತೆ ಹೆಚ್ಚಿಸುವುದಕ್ಕೆ ಅನುಕೂಲ ಉಪಾಯಗಳುಂಟು. ಇವನ್ನು ನಾವು ತ್ಯಜಿಸಲಾಗುವಂತಿಲ್ಲ. ಬದಲಾವಣೆಯಿಂದ ಗಿರಾಕಿಯರಿಗೆ ಮೋಸವುಂಟು, ಹೆಚ್ಚಿನ ಉಪಕಾರ ಅವರಿಗಾಗದು. ಸರಕಾರದ ಆಯವು ಕುಂದುವುದು.

೩. ಸೇನಾಂಗದ ಖರ್ಚು: ನಾವು ಪ್ರತಿವರ್ಷ ವ್ಯಯಿಸುವ ೪೫ ಕೋಟಿಯು ನಮ್ಮ ದೇಶಕ್ಕೆ ಭಾರವಾದುದೆಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ವಿಸ್ತಾರವಾದ ರಾಜ್ಯಗಳಲ್ಲಿ ೧೫ ವರ್ಷಗಳಿಂದಲೂ ಸೇನಾಂಗದ ಖರ್ಚನ್ನು ಇಳಿಸಿಕೊಂಡೇ ಬಂದಿರುವ ರಾಜ್ಯವೆಂದರೆ ನಮ್ಮದೇ. ೧೯೨೨ರಲ್ಲಿ ೬೫ ಕೋಟಿ ರೂಪಾಯಿ ವ್ಯಯವಿದ್ದುದು, ಕಳೆದ ವರ್ಷ ೪೬ಕ್ಕೂ ಕಡಮೆಯಾಗಿತ್ತು! ಪ್ರತಿಯೊಂದೂ ದೇಶವು ಧಾರಾಳವಾಗಿ ಆಧುನಿಕ ಸಂಗ್ರಾಮಶಾಸ್ತ್ರಕ್ಕೆ ಅನುಕೂಲವಾಗಿ ವ್ಯಯಭಾರವನ್ನು ಏರಿಸುತ್ತ ಬಂದಿದೆ. ಇನ್ನು ನಮ್ಮ ಖರ್ಚು ಕಡಮೆ ಮಾಡುವುದು ಕ್ಷೇಮಕರವಾಗದು.

× × ×

೪. ಯೋಗ್ಯ ಉಮೇದುವಾರರೇ ದೊರೆಯದಿರುವಾಗ, ಸೇನಾಂಗದಲ್ಲಿ ಹಿಂದೀಯರನ್ನು ಹೆಚ್ಚಾಗಿ ಸೇರಿಸಿಕೊಳ್ಳುವುದು ಬಹು ಕಷ್ಟವಾಗಿದೆ. ಉಮೇದುವಾರರ ಸಂಖ್ಯೆಯು ಪ್ರತಿ ಅರ್ಧ ವರ್ಷದ ಪರೀಕ್ಷೆಗಳಿಗೆ ಕಡಮೆಯಾಗಿಯೇ ಬರುತ್ತಲಿದೆ. ನೌಕಾವಿಭಾಗಕ್ಕೆ ಖಾಲಿ ಇರುವಷ್ಟು ಉಮೇದುವಾರರು ದೊರೆಯುತ್ತಿಲ್ಲ. ದೀರ್ಘ ಕಾಲದ ತರಬೇತು ಅನುಭವವಿಲ್ಲದೆ ಸೇನಾಂಗದಲ್ಲಿ ಸಿಕ್ಕವರನ್ನು ನೇಮಿಸಬರುವುದಿಲ್ಲವಷ್ಟೆ.

× × ×

೫. ವಾಣಿಜ್ಯ ಸಹಾಯಕ ನೌಕಾಬಲ ಇದು ಉತ್ತಮವಾಗಬೇಕು, ಹೆಚ್ಚಬೇಕು ಎಂದು ಸರಕಾರದ ಆಶಯವಿದೆ. ಅದಕ್ಕಾಗಿ ಅನುಕೂಲತೆ ಮಾಡಲಾಗುತ್ತಿದೆ. ನೌಕಾಸಂಘಗಳೊಳಗೆ ಮೈತ್ರಿಯುಂಟಾಗುವ ಹಾಗೆ ನಾನು ಪ್ರಯತ್ನಪಡುತ್ತಿದ್ದೇನೆ.

೬. ಬ್ರಿಟಿಷರೊಡನೆ ವ್ಯಾಪಾರೀ ಕರಾರು ಇನ್ನೂ ಆಗಿಲ್ಲವೆಂದು ನನಗೂ ಖೇದವಾಗುತ್ತದೆ. ಆದರೂ, ಒಟ್ಟಾವಾ ಕರಾರನ್ನು ಇದೇ ಬಜೇಟು ಮುಗಿದ ಬಳಿಕ ನಾವು ಅನುಸರಿಸುವ ಹಾಗಿಲ್ಲ. ಕರಾರಿನ ಪ್ರತಿಯೊಂದು ವಿಷಯವನ್ನೂ ಎಸೆಂಬ್ಲಿಯ ಮುಂದಿಡಲೂ ನಿರ್ಧರಿಸಲಾಗಿದೆ.

೭. ರೈಲ್ವೆ ಬಾಡಿಗೆ ಇಳಿಸಬೇಕೆಂದರೆ, (ಹತ್ತಿ ವ್ಯಾಪಾರಕ್ಕಾಗಿ), ಇದರಿಂದ ಹೆಚ್ಚಿನ ಸರಕೇನೂ ಅತ್ತಿತ್ತ ಚಲಾವಣೆ ಹೊಂದದಾದರೂ, ಸರಕಾರಕ್ಕೆ ವಾರ್ಷಿಕ ೧೪ ಕೋಟಿ ರೂಪಾಯಿ ನಷ್ಟವುಂಟಾದೀತೆಂದ ಈಗ ತಿಳಿದು ಬಂದಿದೆ.

೮. ಹಿಂದೀಯರನ್ನೇ ಹೆಚ್ಚಾಗಿ ಮೇಲು ಹುದ್ದೆಗಳಿಗೆ ಸೇರಿಸಿಕೊಳ್ಳಬೇಕೆನ್ನುವ ವಿಷಯ. ೧೯೩೫, ೩೬, ೩೭ರಲ್ಲಿ ೩೦, ೭ ಮತ್ತು ೬ ಯುರೋಪೀಯರನ್ನು ಮಾತ್ರ ನೇಮಿಸಲಾಗಿದೆ. ಹೀಗಾಗಿ, ಇನ್ನು ಮುಂದರಿಸಿ ಹೋಗುವ ಹಾಗೆ ಹಿಂದೀಯರ ನೇಮಕಗಳೇ ಹೆಚ್ಚುವ ಸಂಭವವಿದೆ. ಎಲ್ಲರೂ ಹಿಂದೀಯರಾಗಬೇಕಾದರೆ, ಧಾರಾಳ ಸಮಯ ಕಳೆಯಬೇಕು.

—※—

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ

ಸ್ವಾತಂತ್ರ್ಯ ದಿನಾಚರಣೆ

ಪ್ರತಿ ವರುಷದಂತೆ ಈ ವರುಷವಾದರೂ ಇದೇ ೨೬ನೇ ತಾರೀಕಿನ ದಿವಸ ಸಂಪೂರ್ಣ ಸ್ವಾತಂತ್ರ್ಯ ದಿನವನ್ನು ಪಾಲಿಸಬೇಕು. ಕರ್ನಾಟಕದೊಳಗಿನ ಎಲ್ಲ ಕಾಂಗ್ರೆಸ ಕಮಿಟಿಯವರು ಮತ್ತು ಕಾರ್ಯಕರ್ತರು ತಮ್ಮ ತಮ್ಮ ಕ್ಷೇತ್ರದಲ್ಲಿಯ ಎಲ್ಲ ಊರುಗಳಲ್ಲಿ ಈ ದಿನವನ್ನು ಪಾಲಿಸಬೇಕು. ನಾವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂದಡಿ ಇಟ್ಟಿದ್ದರೂ ನಮಗೆ ಸಂಪೂರ್ಣ ಸ್ವಾತಂತ್ರ್ಯವು ದೊರೆತಿಲ್ಲವೆಂಬುದನ್ನು, ಮರೆಯಲಾರೆವು. ನಾವು ನಮ್ಮಲ್ಲಿಯ ಸ್ಥಳೀಯ ಸಣ್ಣ ಪುಟ್ಟ ಭೇದಗಳನ್ನು ಮರೆತು ನಮ್ಮ ಮುಂದೆ ಇರುವಂಥ ಸಂಪೂರ್ಣ ಸ್ವಾತಂತ್ರ್ಯವನ್ನು ದೊರಕಿಸಲು ನಾವೆಲ್ಲರೂ ಸಿದ್ಧರಾಗಬೇಕು.

ಆ ದಿವಸ ಬೆಳಿಗ್ಗೆ ಪ್ರಭಾತ ಫೇರಿ, ಧ್ವಜವಂದನ (೮½ ಗಂಟೆಗೆ) ಸಾಯಂಕಾಲ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ಇವುಗಳನ್ನು ಜರಗಿಸಬೇಕು. ಸಾರ್ವಜನಿಕ ಸಭೆಗಳಲ್ಲಿ ಇದೂ ವರೆಗೆ ಕಾಂಗ್ರೆಸ್ಸಿನವರು ಸ್ವಾತಂತ್ರ್ಯ ಸಂಪಾದನಗಾಗಿ ಮಾಡಿದ ಕಾರ್ಯಗಳನ್ನು ತಿಳಿಸಿ ಹೇಳಬೇಕು. ಈ ಕೆಳಗೆ ಕೊಟ್ಟಿರುವ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸಭೆಯಲ್ಲಿ ಓದಿ ಅದರಲ್ಲಿ ನಮ್ಮ ಪೂರ್ಣ ವಿಶ್ವಾಸವನ್ನು ವ್ಯಕ್ತಮಾಡಬೇಕು. ಮೊನ್ನೆ ವಾರ್ಧಾದಲ್ಲಿ ಸೇರಿದ ಕಾಂಗ್ರೆಸ ವರ್ಕಿಂಗ ಕಮಿಟಿಯವರು ಸದ್ಯದ ಪರಿಸ್ಥಿತಿಗೆ ಅನುಗುಣವಾಗುವಂತೆ—ಈ ಕೆಳಗಿನ ಪ್ರತಿಜ್ಞೆಯನ್ನು ಪ್ರಸಿದ್ಧಿಸಿರುವರು.

ಸಂಪೂರ್ಣ ಸ್ವಾತಂತ್ರ್ಯ ಪ್ರತಿಜ್ಞೆ

ಸ್ವಾತಂತ್ರ್ಯವನ್ನು ಉಪಯೋಗಿಸುವ, ತಮ್ಮ ಶ್ರಮದ ಫಲವನ್ನು ದೊರಕಿಸುವ ಮತ್ತು ಜೀವನಕ್ಕೆ ಜನಾಂಗಕ್ಕೆ ಅವಶ್ಯವಿರುವ ವಸ್ತುಗಳನ್ನು ಸಂಪಾದಿಸುವ ಹಕ್ಕು ಜಗತ್ತಿನಲ್ಲಿಯ ಇತರ ಜನಾಂಗದವರಂತೆ ಹಿಂದೂಸ್ಥಾನದ ಜನತೆಗಾದರೂ ಉಂಟು. ಜನತೆಯ ಈ ಹಕ್ಕನ್ನು ಕಸಿದುಕೊಂಡು ದಬ್ಬಾಳಿಕೆಯನ್ನು ನಡಿಸುವಂಥ ಯಾವುದೇ ಸರಕಾರವನ್ನು ಬದಲು ಮಾಡುವ ಅಥವಾ ನಾಶಗೊಳಿಸುವ ಅಧಿಕಾರವು ಜನತೆಗೆ ಉಂಟು. ಬ್ರಿಟಿಷ ಸರಕಾರದವರು ಹಿಂದೀಯರ ಸ್ವಾತಂತ್ರ್ಯವನ್ನು ನಷ್ಟಗೊಳಿಸಿದ್ದಲ್ಲದೆ ಸಾಮಾನ್ಯ ಜನತೆಯ ರಕ್ತ ಶೋಷಣೆಯನ್ನು ಮಾಡಿ ತಮ್ಮ ಅಸ್ತಿತ್ವವನ್ನು ಇಲ್ಲಿ ನೆಲೆಸಿದ್ದಾರೆ ಮತ್ತು ಹಿಂದೂಸ್ಥಾನದ ಆರ್ಥಿಕ ರಾಜಕೀಯ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ನಾಶವನ್ನು ಈ ಸರಕಾರದವರು ಮಾಡಿದ್ದಾರೆ. ಆದಕಾರಣ ಬ್ರಿಟಿಷ ಸಾಮ್ರಾಜ್ಯದ ಸಂಪೂರ್ಣ ಸಂಬಂಧವನ್ನು ಕಡಿದುಹಾಕಿ—ಹಿಂದೂಸ್ಥಾನವು ಪೂರ್ಣ ಸ್ವರಾಜ ಅಥವಾ, ಸಂಪೂರ್ಣ ಸ್ವಾತಂತ್ರ್ಯವನ್ನು ಸಂಪಾದಿಸಬೇಕೆಂಬುದರಲ್ಲಿ ನಮ್ಮ ವಿಶ್ವಾಸವಿದೆ.

"ನಮ್ಮ ಸ್ವಾತಂತ್ರ್ಯ ಸಂಪಾದನೆಗೆ ಅತ್ಯಂತ ಪ್ರಭಾವಶಾಲಿಯಾದ ಮಾರ್ಗವು ಹಿಂಸಾಮಯವಲ್ಲವೆಂದು ನಾವು ತಿಳಿಯುತ್ತೇವೆ. ಹಿಂದೂಸ್ಥಾನವು ಶಕ್ತಿಯನ್ನು, ಸ್ವಾವಲಂಬನೆಯನ್ನು ಶಾಂತ ಮತ್ತು ಯೋಗ್ಯ ಉಪಾಯಗಳಿಂದ ದೊರಕಿಸಿ ಸ್ವಾತಂತ್ರ್ಯ ಪಥದಲ್ಲಿ ಹೆಚ್ಚಾಗಿ ಮುಂದಡಿ ಇಟ್ಟಿದೆ ಮತ್ತು ಈ ಮಾರ್ಗಗಳನ್ನು ಅನುಸರಿಸುವುದರಿಂದಲೇ ನಮ್ಮ ದೇಶವು ಸಂಪೂರ್ಣ ಸ್ವಾತಂತ್ರ್ಯವನ್ನು ಸಂಪಾದಿಸುತ್ತದೆ."

ಸಂಪೂರ್ಣ ಸ್ವಾತಂತ್ರ್ಯವು ನಮಗೆ ದೊರೆಯುವ ವರೆಗೆ ನಾವು ಈ ಅಹಿಂಸಾಮಯವಾದ ಯುದ್ಧವನ್ನು ಮುಂದುವರಿಸುವೆವೆಂಬ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಇಂದು ಪುನಃ ನಾವು ಮಾಡುತ್ತೇವೆ."

ಗುದ್ಲೆಪ್ಪ ಹಳ್ಳೀಕೇರಿ
ಪ್ರ ಕಾರ್ಯದರ್ಶಿ

(೧೫ನೇ ಪುಟದಿಂದ ಮುಂದುವರಿದುದು)

ಸಿಂಗ್ ತನ್ನ ನಸ್ಯಗಳಿಗೆ ಸಿಸ್ತೆಲೆಗಳನ್ನು ಎಡಬಾಯಿಸುತ್ತಿದ್ದಳು. ಆಕೆಯ ತೆ ಕೆಲವಾದರೂ ಸ್ಥಾನ ಎದೆ ಬೆರಳು ಬದಲಾವಣೆಗಳನ್ನು ಮಾಡುವುದೆಂಳೆ ಯಿದೆ. ಮೇನಕೆಯ್ಯಾಗಲೀ ಆಕೆ ಸಹ—ನರ್ತಕರಾಗಲೀ ನಟ್ಟಿಗಳನ್ನು ಮುಗಿಸ ಪ್ರದರ್ಶಿಸಿ ಅವಸರಪಡಬಾರದು. ಪಶ್ಚಿಮಿನ ರಂಗದ ಮೇಲ ಪ್ರೇಕ್ಷಕರ ಎದುರಿಗೇ ನಾಟ್ಯವನ್ನು ಮುಗಿಸುವುದರ ಬದಲು ನಾಲ್ಕು ಹೆಜ್ಜೆ ಒಳಗೆ ಹೋಗಿ ನೇಪಥ್ಯದಲ್ಲಿ ಮುಗಿಸಬಹುದು. ಪ್ರವೇಶಿಸುವಾಗಲೂ ನೇಪಥ್ಯದಿಂದಲೇ ತಾಳದ ಗತಿಯನ್ನು ಹಿಡಿದು ಬರಬಹುದು. ಮೇನಕೆಯ ಸಹನರ್ತಕರಲ್ಲಿ ಒಬ್ಬರಾದ ರಾಮನಾರಾಯಣರ ಕಲೆಯಲ್ಲಿ ಶಕ್ತಿಯಿದೆ ಆದರೆ ಲಾಲಿತ್ಯವಿಲ್ಲ. ಅವರದು ಕಸರತ್ತಿನ ದೇಹವೇ ವಿನಾ ನೃತ್ಯದ ದೇಹವಲ್ಲ. ಅವರ ಮುಖದಲ್ಲಿ ಭಾವವಿಲ್ಲ. ಏನೋ ಒಂದು ಬಗೆಯ ಬೇಸರ, ತಿರಸ್ಕಾರಗಳಿಂದ ಕುಣಿಯುತ್ತಾರೆ. ಮೋಹನಖಾನರ ನೃತ್ಯದಲ್ಲಿ ಲಾವಣ್ಯವಿದೆ ಆದರೆ ಕ್ರಿಯಾಶಕ್ತಿಯಿಲ್ಲ. ಅದೇ ಕೈಕಾಲುಗಳ ಅಲುಗಾಟ—ಅದೇ ತಾಳದ ಗತಿ—ಎರಡನೆಯ ಬಗೆಯೇ ಬರದೇನೋ ಎನ್ನಿಸುತ್ತಾರೆ. ಮಿಕ್ಕ ನರ್ತಕಿಯರು ತಮ್ಮ ಕರ್ತವ್ಯಭಾರವನ್ನು ನಿರ್ವಹಿಸಿಕೊಂಡು ಹೋಗುತ್ತಾರೆ. ಆ ಎಲ್ಲರ ಮಧ್ಯೆಯೂ ರಾಜಿಸುವ ಧ್ರುವತಾರೆಯೊಂದರೆ ಮೇನಕೆಯೊಬ್ಬಳೇ. ಈಕೆಯ ಜತೆಗೆ ಉತ್ತಮ ಕಲಾವಿದನೊಬ್ಬನು ದೊರೆತರೆ ನೃತ್ಯಗಳು ಹೆಚ್ಚು ಶೋಭಾಯಮಾನವಾಗುವವು.

ಭಾರತೀಯ ನೃತ್ಯಕಲೆಗೆ ಮೇನಕೆಯು ಅಭೂತಪೂರ್ವವಾದ ಕಾಣಿಕೆಯನ್ನರ್ಪಿಸಿದ್ದಾಳೆ. ಭಾರತೀಯ ನೃತ್ಯಕಲೆಯು ಜಗತ್ತಿನಲ್ಲಿ ತಲೆಯೆತ್ತಿಕೊಂಡು ಮೆರೆಯುವಂತೆ ಅದಕ್ಕೆ ಅಂತರ-ರಾಷ್ಟ್ರೀಯ ಕೀರ್ತಿಯನ್ನು ಸಂಪಾದಿಸಿದ್ದಾಳೆ. ಮೇನಕೆಗೆ ನಟರಾಜನು ಹೆಚ್ಚಿನ ಪ್ರಗತಿಯನ್ನು ಅನುಗ್ರಹಿಸಲೆಂದು ನಾವು ಹೃತ್ಪೂರ್ವಕವಾಗಿ ಬಯಸುತ್ತೇವೆ. 'ಕನ್ನಡ ನುಡಿ'

ಜಾಗ್ರತೆ! ಜಾಗ್ರತೆ!

ದೇಶ ವಿದೇಶಗಳಲ್ಲಿ ಪ್ರಖ್ಯಾತವಾದ ನಮ್ಮ ಮಾಲುಗಳು ವಿಶ್ವಪ್ರಶಂಸನೀಯವಾಗಿ ದಿನೇ ದಿನೇ ಗಿರಾಕಿಗಳು ಹೆಚ್ಚುತ್ತಿರುವದನ್ನು ಕಂಡು, ಈ ಹೆಸರಿನಲ್ಲಿ ಬೇರೆ ನಕಲಿ ಮಾಲುಗಳುಂಟಾಗತೊಡಗಿರುವದರಿಂದ ನಮ್ಮ ಗಿರಾಕಿಗಳು ಕೆಳಗಿನ ಅಡ್ರೆಸ್ಸನ್ನು ನೋಡಿ ತೆಗೆದುಕೊಳ್ಳಿರಿ.

ನಕಲಿ ಮಾಲಿಗೆ ಮೋಸಹೋಗಬೇಡಿರಿ!

DRAKSHAMRUTHA

ದ್ರಾಕ್ಷಾಮೃತ

ಪಂಡಿತ ಜವಾಹಿರಲಾಲ ನೆಹರೂ ಬಂದಾಗ ಹುಬ್ಬಳ್ಳಿ ವಸ್ತುಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ ಸಾವಿರಾರು ಜನರಿಂದ ಮೆಚ್ಚಿಸಲ್ಪಟ್ಟು ಭಂಗಾರದ ಮೆಡಲ್ ಮತ್ತು ಅನೇಕ ಸರ್ಟಿಫಿಕೇಟುಗಳು ದೊರೆತಂಥ

ಒಂದೇ ಸವನೆ ೨೦ ವರ್ಷದ ಅನುಭವದಿಂದ, ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ದೇಶೀ ಯಂತ್ರಗಳ ಮೂಲಕ ತಯಾರಾಗುವ,

ಶಕ್ತಿಯ ಮೇಲೆ ಮೊದಲನೇ ತರದ ಟಾನಿಕ್.

ಇದರ ಸೇವನೆಯಿಂದ ರಕ್ತ ಶುದ್ಧಿಯಾಗುವದು, ಶೌಚ ಸಾಫವಾಗಿ ಪಚನಶಕ್ತಿಯು ಬೆಳೆಯುವದು, ಕಣ್ಣು ಕೈ ಕಾಲು ಉರಿಯೋಣ ಮೊದಲಾದ ಉಷ್ಣ ಮತ್ತು ಪಿತ್ತವಿಕಾರಗಳು ನಾಶವಾಗುವವು ಸ್ತ್ರೀಯರಿಗೆ ಮುಟ್ಟಿನ ದೋಷದಿಂದಾದ ಸರ್ವರೋಗ ನಿವಾರಣೆಯಾಗಿ ಸಂತತಿಧಾರಕವಾಗುವದು. ಅಂತೂ ಇದು ಬಾಲವೃದ್ಧ ಸ್ತ್ರೀಪುರುಷರಿಗೆ ಅತಿ ಉಪಯುಕ್ತವಾಗಿದೆ.

ಕ್ರಯ ೧ ಬಾಟ್ಲಿ ರೂ. ೧।

ಮ್ಯಾನೇಜರ್: ದ್ರಾಕ್ಷಾಮೃತ ಡಿಪೋ, ಪೋಸ್ಟು—ನಿಪ್ಪಾಣಿ, ಜಿಲ್ಲಾ ಬೆಳಗಾಂವ.

ಸ್ಟಾಕಿಸ್ಟರು: ಮಂಗಳೂರು—ಕೆನರಾ ಮೆಡಿಕಲ್ ಸಪ್ಲೈಯರ್ಸ್, ಯು. ಆರ್. ಶೆಣೈ ಮತ್ತು ಸ್ಮಾಲ್ ಟೌನ್ ಕೋ. ಬಂಟವಾಳ—ಎ. ಆರ್. ಪ್ರಭು ಕುಂದಾಪುರ—ಕೆ ಆರ್ ಭಟ್ಟ, ಉಡುಪಿ—ಪೈ ಫಾರ್ಮಸಿ, ಪುತ್ತೂರ—ಶ್ರೀನಿವಾಸ ಪೈ. ಕಾರ್ಕಳ—ವಿ ಶೆಣೈ, ಕಾಸರಗೋಡು—ರಾಮನಾಯಕ ಮತ್ತು ಭಟ್ ಬ್ರದರ್ಸ್

ಜಯಪುರ ಪದ್ಧತಿ: × × × × × × ಜಿಲ್ಲಾ ಎಡ್ಯುಕೇಶನ್ ಕೌನ್ಸಿಲುಗಳು

★ ★ ★

ಜಯಪುರ ಪದ್ಧತಿ:

ಗಾಂಧಿಜೀಯವರ ಕಠಿಣ ಟೀಕೆ

ಅಧಿಕಾರಿಗಳ ಅಪ್ಪಣೆ ಹಿಂತೆಗೆಯದಿರುವಲ್ಲಿ ರಾಜ್ಯವನ್ನು ಅಪ್ಪಣೆ ಉಲ್ಲಂಘಿಸಿ ಪ್ರವೇಶಿಸುವೆನೆಂದೂ, ಫೆಬ್ರವರಿ ೩೩ ನೆ ರ ವಾಯಿದೆ ಕೊಟ್ಟು ಜಮ್ನಾಲಾಲ ಬಜಾಜರು ಬರೆದುದನ್ನು ವಿಮರ್ಶಿಸಿ ಗಾಂಧಿಜೀ ಹೀಗೆ ಬರೆದರು:

ಇದು ಅಖಿಲಭಾರತದ ಪಕ್ಷಿಯಾಗಿ ಚಳವಳಿಕ್ಕೆ ಕಾರಣವಾದೀತೆಂಬುದನ್ನು ತಿಳಿದು ಜಯಪುರದ ಸರಕಾರವು ತನ್ನ ಅಪ್ಪಣೆ ಹಿಂದೆಗೆದೀತೆಂದು ನಂಬಬೇಕಾಗಿದೆ. ಇನ್ನಾದರೂ, ದೇಶೀಯ ರಾಜರುಗಳೂ ವರಿಷ್ಠ ಸರಕಾರವೂ ಒಂದು ಯೋಜನೆಯನ್ನು ಮಾಡಿಕೊಂಡರೆ ಚೆನ್ನಾದೀತು. ಈಗ ಜಯಪುರವು ಮಾಡುತ್ತಿರುವ ಕ್ರಮವನ್ನು ವರಿಷ್ಠ ಸರಕಾರವು ಒಪ್ಪಿಲ್ಲವೆಂದು ನಂಬಿದ್ದೇನೆ. ಏಕೆಂದರೆ, ಇಂತಹ ಅಪ್ಪಣೆಗಳು ಎಷ್ಟು ಕಠಿನವಿವೆ ಎಂದರೆ, ಇವನ್ನು ನ್ಯಾಯವಾಗಿ ಎದುರಾಡದೆ ಇರಲಾಗುವಂತಿಲ್ಲ.

ಜಯಪುರದ ದೇಶಭಕ್ತರಿಗೆ ಬುದ್ಧಿ ಕಲಿಸದೆ ಜಯಪುರ ಸರಕಾರಕ್ಕೆ ಶಾಂತಿ ಇಲ್ಲ. ಜಮ್ನಾಲಾಲರೇ ಅಧ್ಯಕ್ಷರಾಗಿರುವ ರಾಜ ಪ್ರಜಾಮಂಡಲವನ್ನು ಶಾಸನ ವಿರುದ್ಧವೆಂದು ನಿಷ್ಕರ್ಷಿಸಲಾಗಿದೆ. ಜಮ್ನಾಲಾಲರು ಎಲ್ಲಿ ಹೇಳಿಕೆ ಪ್ರಕಟಿಸಿರುವರು.. ಇದನ್ನೋದಿದರೆ, ಸರಕಾರವು ತನ್ನ ಅಪ್ಪಣೆಯನ್ನು ಹಿಂತೆಗೆಯಬೇಕಾಗಿ ತೋರದಿರದು.

ಜಯಪುರದ ಕೌನ್ಸಿಲಿನಲ್ಲಿ (ಇದ್ದ [illegible] ನಾಲ್ವರು ಮೆಂಬರರೂ ಇಂಗ್ಲಿಷರು) ಸಾರ್ವಜನಿಕ, ದಯಾಪೂರ್ಣರಾದವರೂ [illegible] ಪ್ರಜಾಸೇವೆಯ ಪ್ರಯತ್ನಗಳನ್ನು, ಅವಲ್ಲಿ ಜಮ್ನಾಲಾಲರು ಸೇರಿರುವರಾದರೆ ನಿಷೇಧಿಸಲೆಂದೇ ಹಟ ನಡೆಯುತ್ತದೆ

ಅಧಿಕಾರಿಗಳಿಗೆ [illegible] ದುರ್ಲಭವಾದ ನೂತನ ಕರ್ಮವಿದು.'

ಜಯಪುರದ ಈ ರೀತಿಯಲ್ಲಿನ [illegible] ಲಕ್ಷಣಗಳಿಂದ, ಇದು ಅಖಿಲಭಾರತದ ಪಕ್ಷ

"ಚಿತ್ತ ಉಳಿಯಿತು;
ಮಗು ಕೊಳೆಯಿತು"

ಕರ್ನೂಲು ತೀರ್ಪಿನಿಂದ

ಕಳೆದ ನವೆಂಬರು ೨೬ರಲ್ಲಿ, ಸುಬ್ಬಣ್ಣನ [illegible]ಬ್ಬನೇ ಮಗ (ಎಂಟು ವರ್ಷ ವಯಸ್ಸು)ನು ಶಾಲೆಗೆ ಹೋಗಲಿಲ್ಲವೆಂದು ಲಕ್ಷ್ಮೀನರಸ ಎಂಬಾತನು ಹುಡುಗನಿಗೆ ಒಂದೇಟು ಕೊಟ್ಟು, ಅಕ್ಕನಿಗೆ ಹುಡುಗನಿಗೆ ಉಣಿಸಿ ದುಸ್ತು ಹಾಕಿ ಶಾಲೆಗೆ ಕಳಿಸು ಎಂದನು. ಸುಬ್ಬಣ್ಣ ಒಂಡಾರಿ ಪೊಲೀಸು ಕನ್ಸ್ಟೇಬಲ್ ಲಕ್ಷ್ಮೀನರಸನು ಈತನ ಭಾವ ಹಾಗೂ ಅಳಿಯ. ಸುಬ್ಬಣ್ಣನಿಗೆ ಮಗನು ಅಳುತ್ತಿದ್ದುದು ಬಹಳ ದುಃಖ ಕೊಟ್ಟಿತು. ಮಾವನು ಹೊಡೆದನೆಂದು ಹುಡುಗ ದೂರಿದನು ಸುಬ್ಬಣ್ಣನು ಸಿಟ್ಟಾಗಿ, ಒನಕೆ ಹಿಡಿದು, ಲಕ್ಷ್ಮೀನರಸನನ್ನು ತಲೆಗೆ ಒಡೆದನು ನರಸು ಬಿದ್ದ; ಆಸ್ಪತ್ರೆಗೆ ಒಯ್ದರು. ಅವನು ಮತ್ತೆ ಏಳಲೇ ಇಲ್ಲ

ಹನ್ನೆರಡು ಸಾಕ್ಷಿಗಳ ವಿಚಾರಣೆಯಾಯಿತು ಬೇಕೆಂದೇ ಹೊಡೆದುದಲ್ಲ ಎಂದು ಸುಬ್ಬಣ್ಣನ ಸಾಧನೆ

"ಚಿತ್ತವನ್ನು ಉಳಿಸಿದರೆ ಮಗು ಕೊಳೆಯುವುದೆಂಬ ಗಾದೆಗೆ ಬೆಲೆ ಕೊಡುವ ತಂದೆ ವಿವೇಕಿ. ವಿಶೇಷ ಪ್ರೀತಿಯಿಂದ ಮಗುವನ್ನು ಕೆಡಿಸಿದ ದೃಷ್ಟಾಂತವಿದು ಶಾಲೆಗೆ ಹೋಗದ ಮಗುವಿಗೆ ಮೃತನು ಬಡಿದುದು ನ್ಯಾಯವಲ್ಲವೆಂದು ತಂದೆ ತಿಳಿದನಾದರೂ, ಒನಕೆಯಿಂದ ಬಡಿದು ಪ್ರತಿ ಶಿಕ್ಷಿಸುವಷ್ಟು ಅನ್ಯಾಯವಾಗಿಲ್ಲ ಆದುದರಿಂದ ಎಸೆಸರರ ಅಭಿಪ್ರಾಯದಂತೆ, ನಿಷ್ಕಾರಣವಾಗಿ ಕೊಂದ ಅಪರಾಧವಾಗಿದೆ. ಆದಕ್ಕಾಗಿ ಮರಣದ ವರೆಗೆ ದ್ವೀಪಾಂತರವಾಸ!" ಎಂದು ಜಡ್ಜರ ತೀರ್ಪು.

ಗಾಂಧಿಜಿಯವರ ಕಠಿನ ಟೀಕೆ

ಯಾಗುವರೆ ಯೋಗ್ಯವಾಗಿದೆ:-ಜಮ್ನಾಲಾಲರೇ ಒಂದು ಸಂಘ! ಅವರು ಅಖಿಲಭಾರತದ ಕೊಂಗ್ರೆಸಿನ ಕಾರ್ಯಕಾರೀ ಮಂಡಲದ ಸದಸ್ಯರು, ಖಜಾನಜೀಯವರು. ಜಯಪುರದ ಅಪ್ಪಣೆ ಕಠಿನವಾಗಿದ್ದು, ಅದನ್ನು ಕೇಳಲು ಎದುರಿಸದೆ ಬೇರೆ ಉಪಾಯವಿಲ್ಲ ಹಾಗೆ ಮಾಡದಿದ್ದರೆ,- ದೇಶೀರಾಜ್ಯಗಳಲ್ಲಿ ಮುಂದೆ ಯಾವ ತರದ ಚಳವಳಿಗಳಿಗೂ ದಾರಿ ಸಿಗದು. ಸ್ವಲ್ಪವಾದರೂ ರಾಜಕೀಯ ತತ್ವವು ತಗುಲಿದರೆ, ಸರಕಾರಗಳು ಯಾವ ಸೇವೆಗೆ ಅಡ್ಡ ಬರುವಂತಾಗುವುದು.

ಜಯಪುರದ ಮತ್ತೊಂದು ಕಂಟಕ ವಿಶೇಷವೆಂದರೆ, ಪ್ರಜೆಗಳನ್ನು ಆಳುವಾತನು ಮಹಾರಾಜನಲ್ಲ, ಒಬ್ಬ ವಿಶೇಷಾಧಿಕಾರವುಳ್ಳ ಇಂಗ್ಲಿಷನು. ಕೇಂದ್ರ ಸರಕಾರದ ಅಭಿಪ್ರಾಯಗಳನ್ನು ಇವನು ಜ್ಯಾರಿಗೆ ತರುತ್ತಾನೆಯೋ? ಹಾಗೆ ಮಾಡುತ್ತಿನಾದರೆ, ವೈಸ್ರಾಯರು ಇತ್ತೀಚೆಗೆ ನುಡಿದ ಪಿತಾಮರಗಳಿಗೆ ಬೆಲೆ ಎಷ್ಟಾದೀತು? ಅಲ್ಲದಿದ್ದರೆ, ಇಂಗ್ಲಿಷ ದಿವಾನನು ರಾಜ್ಯಕ್ಕೇ ಕೊನೆಗೆ ಹಾನಿಕರವಾಗುವಂತಹ ರಾಜಕೀಯ ಚಳವಳಿಗಳನ್ನು ಪ್ರಾರಂಭಿಸಬಹುದೇ?

ಜಯಪುರ ಸರಕಾರದ ಖಜಾನೆಯಲ್ಲಿ ಧಾರಾಳ ಹಣವಿದೆಯಂತೆ ಪ್ರಜೆಗಳು ಎಷ್ಟು ದೂರ ಚಳವಳಿಸಿದರೂ ಅವನ್ನು ತಡೆವ ಶಕ್ತಿ ಸರಕಾರಕ್ಕೆ ಈ ಕಾರಣದಿಂದ ಇದೆ ಹತ್ಯಾರುಗಳಿಂದ ಜನರು ಸಾಧುವಾಗಿ ಒಗ್ಗದೆ ಹೋದರೆ, ಖಜಾನೆಯ [illegible] ಬಂದಾಗಲ್ಲ, ಬಿದರೆ ಇದೆ [illegible]

ಜಯಪುರದ ರೀತಿಯೇ ಎಲ್ಲ [illegible] ರಾಜ್ಯಗಳಲ್ಲಿ [illegible] ಸರಕಾರವನ್ನು [illegible] ಇದಲ್ಲದೆ [illegible]

ಒಮ್ಮೆಗೆ ಮುಗಿದುವು.

ಇದೇ ತಾ. ೨೦ರಲ್ಲಿ, ಮದ್ರಾಸು ಎಸೆಂಬ್ಲಿಯಲ್ಲಿ, ಪ್ರಾಥಮಿಕ ವಿದ್ಯಾಭ್ಯಾಸವನ್ನು ಕುರಿತಾದ ೧೯೨೦, ೧೯೩೪, ೧೯೩೫ನೆ ಇಸ್ವಿಯ ಹಲವು ಆಕ್ಟುಗಳನ್ನು ತಿದ್ದುಪಡಿ ಮಾಡುವ ಮಸೂದೆಯನ್ನು ಮಂತ್ರಿ ಶ್ರೀ ಸಿ. ಜೆ. ವಾರ್ಕಿಯವರು ಮಂಡಿಸಿದರು ಜಿಲ್ಲಾ ಎಡ್ಯುಕೇಶನ್ ಕೌನ್ಸಿಲುಗಳನ್ನು ರದ್ದುಮಾಡಿ, ಮಂಜೂರಾತಿ ಮತ್ತು ಗ್ರೇಂಟುಗಳನ್ನು ಶಾಲೆಗಳಿಗೆ ಕೊಡುವ ಅಧಿಕಾರವನ್ನು ಆಫಿಸರುಗಳಿಗೇ ಕೊಡುವುದು ಈ ಮಸೂದೆಯ ಉದ್ದೇಶ.

೧೯೨೦ರಲ್ಲಿ ಈ ಹೊಸ ಪ್ರಾಥಮಿಕ ಶಿಕ್ಷಣದ ಆಕ್ಟು ಹೊರಬಿದ್ದ [illegible], ಎರಡೇ ವರ್ಷಗಳಲ್ಲಿ ಅದರ ಕುಂದುಗಳು ತಿಳಿದು ಬಂದುವು. ೧೯೩೬ರಲ್ಲಿ ಅದನ್ನು ರದ್ದುಮಾಡುವ ಬಗ್ಗೆ ವಿಮರ್ಶೆ ನಡೆಯಿತು ಕ್ರಿಪೋರ್ಟ್ ೧೯೩೭ರಲ್ಲಿ ಹೊರಬಿತ್ತು. ಅದರಂತೆ, ಇಷ್ಟು ಕಾಲ ಆ ರಿಪೋರ್ಟಿನ ಕಾರ್ಯತಃ ಪರಿಣಮಿಸಿಲ್ಲವಾದರೂ, ಶ್ರೀ ರೆಡ್ಡಿಯವರು ಮಂತ್ರಿಗಳಾಗಿದ್ದಾಗ ಅದು ಮುಂದೆ ಬರದಂತೆ [illegible] ಸರಕಾರ [illegible] ಈಗ ವಿದ್ಯಾಭ್ಯಾಸವು ಸರ್ವತ್ರ ಹರಡಬೇಕೆಂಬ ಕಾರಣದಿಂದಲೇ ಈ ಮಸೂದೆ ಹೊರಬಿದ್ದು, ಈ ವಿನಃ [illegible] ಕೌನ್ಸಿಲುಗಳು ಒಮ್ಮೆಗೆ [illegible]

ಈ ಕೌನ್ಸಿಲುಗಳು ಈಗ ಅವಿನಯಿಕ [illegible] ತಿಳಿಸಿದರೆ [illegible] ಉಪಕಾರ ಅಥವಾ [illegible] ಅಥವಾ ಹೊಸ [illegible] ಮಂಡಳಿಯನ್ನು ಒಡೆವುದು [illegible]

ತುಂಬುವಂತಾದ, ಹಲವು ಅಧಿಕಾರಗಳ ನಡುವೆ ಸಿಕ್ಕಿಬಿದ್ದ ಪ್ರಾಥಮಿಕ ವಿದ್ಯಾಪ್ರಚಾರಕ್ಕೆ ಇದರಿಂದ ಸಹಾಯವಾದೀತೆಂದು ಸದ್ಯಕ್ಕೆ ನಂಬಬೇಕಾಗಿದೆ ಅನಾವಶ್ಯಕ ಶಾಲೆಗಳನ್ನು ಮುಚ್ಚಿಸಿ, ಅಯೋಗ್ಯ ಶಾಲೆಗಳನ್ನು ಸಂಜೀವನ ಪ್ರಯೋಗದಿಂದ ಬಾಳಿಸಿ ಬಂದ ಕೀರ್ತಿ ಈ ಕೌನ್ಸಿಲುಗಳಿಗೆ ಇದೆ. ಹೊರತು, ವಿದ್ಯಾಪ್ರಚಾರ ಕಾರ್ಯವನ್ನೆಲ್ಲ ಸಮ್ಮಿಲಿತ ಕಾರ್ಯಕ್ಕೆ ಈ ಕೌನ್ಸಿಲುಗಳು ಹೂಡುವ ವ್ಯವಸ್ಥೆ ಮಾಡಿದ್ದಿಲ್ಲ. ಇನ್ನು ಮುಂದೆ ಈ ಜಿಲ್ಲೆಯಲ್ಲಿ ೨೦-೩೦ ಮಂದಿ ಮಾತ್ರ ಪ್ರಾಥಮಿಕ ವಿದ್ಯಾಪ್ರಚಾರಕ್ಕೆಂದು ಕೆಲಸಮಾಡುವ ಬದಲು ೨೦೦ ಜನರಷ್ಟು ಜನಸೇವೆಗೆ ಒದಗುವಂತೆ ವ್ಯವಸ್ಥೆಯಾಗಬೇಕಾಗಿದೆ ಎಂತೂ ಇದೊಂದು ಒಳ್ಳೆ ಮಹಾಸಭೆ ಹೊಸ ಸಂಸ್ಥೆಯಾಗುವ ಸಂಭವವಿಲ್ಲ ಇನ್ನು ಗ್ರೇಂಟಿಗಾಗಿ ಮಾತ್ರ ಹಾತೊರೆದು ವ್ಯಾಪಾರ ಪ್ರೇಮದನ್ನು ಶಾಲೆಯ ಹೆಸರಲ್ಲಿ ಮಾಡಲಿಕ್ಕಿಲ್ಲ. ಜಾತಿಗಳ ಹೆಸರಲ್ಲಿ ಶಾಲೆಗಳು ಮುಗಿದ ಮೇಲೆ [illegible] ಈಗ ಮಾಡುವ ಕಮಿಟಿಗಳನ್ನು [illegible] ಪ್ರಕಾರವೂ ನೋಡಬಹುದಾಗಿದೆ, ಆದರೆ ಕೌನ್ಸಿಲುಗಳನ್ನು ಆಕ್ಟು ಪ್ರಕಾರ ರಚಿಸಿದ ಕಾರಣವೇ ಮತ್ತೊಂದು. ಆಕ್ಟು ಮೂಲಕ ರದ್ದು ಮಾಡಿದಂತಾಯಿತು. ಜಿಲ್ಲಾ ವಿದ್ಯಾಪ್ರಚಾರದಲ್ಲಿ [illegible] ಈಗ ಹೊಸ ಕೌನ್ಸಿಲು ರಚನೆಯಾಗಿದೆ [illegible] ಗಳ ಅನ್ಯಾಯ ಸಾಗದಂತೆ [illegible]

ಎಸ್ ಎಸ್ ಎಲ್ ಸೀ

ವಿದ್ಯಾರ್ಥಿಗಳ ಮುಷ್ಕರ :: ಸರಕಾರದ ಧೋರಣೆ

[illegible] ವಿದ್ಯಾರ್ಥಿಗಳು ಮುಷ್ಕರ [illegible]

ಹೊರಕ್ಕಟ್ಟಿದ ಈ ವಿಷಯ [illegible] ತಿಳಿಸಿದೆ.

ಅಯೋಗ್ಯ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕಳಿಸುವರೆ ವಿದ್ಯಾರ್ಥಿಗಳ ಒತ್ತಾಯಕ್ಕೆ ಹೆಡ್ಮಾಸ್ಟರುಗಳ ಒಳಗಾಗಿ ನಡೆದರೆ, ಶಾಲೆಯ ಗೌರವವು ಕೆಡುತ್ತದೆ. ಮುಷ್ಕರ ಮೊದಲಾದುವು ಆಗುವಂತೆ ಕೆಡುಗರು ಮಾತಬಹ ವಾದುವನ್ನು ಮನ್ನಿಸಿ, ಇಲಾಖಾ ಅಪ್ಪಣೆಗಳನ್ನು ಗಮನಕ್ಕೆ ತಾರದ ದೋಷಕ್ಕೆ ಅವರು ಒಳಗಾಗುತ್ತಾರೆ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕಳುಹುವಾಗ, ನ್ಯಾಯಕ್ಕೆ ಸರಿಯಾಗುವಷ್ಟು ಧೀಮಾಶಾಯದಲ್ಲಿ ಅಯೋಗ್ಯರನ್ನು ಅಗತ್ಯವಾಗಿಯೂ ಹಿಂದರಿಸಬೇಕಾಗಿದೆ. ಯಾವ ರೀತಿಯಲ್ಲಿ ಅವರನ್ನು ಯೋಗ್ಯರೆಂದು ತೀರ್ಮಾನಿಸಲಾಗಿದೆಯೋ ಅದನ್ನು ಜಿಲ್ಲಾ ವಿದ್ಯಾಂಗದ ಅಧಿಕಾರಿಗಳಿಗೆ ತಿಳಿಸಬೇಕು. ಈ ವಿಷಯವನ್ನು ವಿದ್ಯಾರ್ಥಿಗಳ ಹೆತ್ತವರಿಗೆ ಅಗತ್ಯಕಂಡಲ್ಲಿ ಸೂಚಿಸಬೇಕು. ಹೊರಗಣ ಬೇಜವಾಬ್ದಾರರು ದೂಬ್ಬ ವಿರೋಧಿಸಲು ಯತ್ನಿಸಿದರೆ ಅವರನ್ನು ಗಣನೆಗೆ ತಾರದೆ ಶಾಲೆಗೆ ಕೊಡಲಾಗಿ ಇಲಾಖಾ ಅಪ್ಪಣೆಗಳನ್ನು ಅಕ್ಷರಶಃ ಪಾಲಿಸಬೇಕು ಎಂದು ಸರ್ಕಾರು ಪ್ರಕಟಿಸಿರುವರು.

ಅಲ್ಲಿಗೆ ವಿದ್ಯಾರ್ಥಿಗಳ ಮುಷ್ಕರ ಶಾಂತವಾಗಿ ಮುಗಿದಿದೆ.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲ ತರದ ಸೀರೆಗಳೂ, ದೋತರಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗಳಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ
"ಲಿವರ್ ಕ್ಯೂರ್"
ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ. ಜವ್ವಿಮ್ಮ ವೆಂಕಟಪ್ಪ ನಾಯ್ಯ
ವಿಶೇಷ ಮಾಹಿತಿಗೆ ಬರೆಯಿರಿ. ಲಿವರ್ ಮತ್ತು ಸ್ಪ್ಲೀನ್ ಸ್ಪೆಸಿಯಲಿಸ್ಟ್,
ಮೈಲಾಪುರ, ಮದ್ರಾಸು.

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ.
ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store,
28 Meachua Bazar St., CALCUTTA

ಶಾಲಿವಾಹನ ಶಕ ೧೮೬೧ನೆಯ ಬಹುಧಾನ್ಯ ಸಂವತ್ಸರದ ಮಾಘ ಶು| ೮ ಶನಿವಾರದಿಂದ ಮಾಘ ಶು| ೧೪ ಶುಕ್ರವಾರದ ವರೇಗಿನ ಪಂಚಾಂಗ. (೧೯೩೯ನೇಯ ಮಕರ ಪುಯಂತೆಲ್

28	ಶನಿ	೬	೫೩॥	ಅಶ್ವಿನೀ	೧೮॥	೧೮	[illegible]
29	ರವಿ	೭	೫೦॥	ಭರಣೀ	೧೭॥	೧೫	
30	ಸೋ.	೮	೪೬॥	ಕೃತ್ತಿಕಾ	೧೬	೧೬	
31	ಕುಜ	೯	೪೨॥	ರೋಹಿಣಿ	೧೩॥	೧೭	
1	ಬುಧ	೧೦	೩೭॥	ಮೃಗಶಿರಾ	೧೦॥	೧೮	
2	ಗುರು	೧೧	೩೨	ಆರ್ದ್ರಾ	೭।	೧೯	
3	ಶುಕ್ರ	೧೨	೨೬।	ಪುನರ್ವಸೂ	೪	೨೦	

THE PIE-MONEY BANK LTD.,

Maidan Road, MANGALORE.

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ... ranging from Re 100/ to Rs 5000/ run regularly on systematic lines Unique Banking facilities to Businessmen and interested Public

Apply for particulars—**K R. GURU**, *Managing Director*

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ಹೆಚ್ಚು ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲ್ಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ... ಸೇವನೆಯಿಂದ ... ಶರೀರಕ್ಕೆ ಏನೂ ಅಪಾಯವಾಗದೆ ... ಕೂಡಲೇ ಗರ್ಭಧಾರಣ ಬಂದಾಗುವುದು ... ಮೊದಲೇ ... ಔಷಧ ಬೇಡಿರಿ ... ವೈದ್ಯ ಎಲ್. ಸಿ. ಪಿ. ಎಸ್. ... ಈ ಚೂರ್ಣದಿಂದ ... ಗರ್ಭಧಾರಣವೂ ಆಗುವುದಿಲ್ಲ ... ಕ್ರಯ ರೂ ೪-೦-೦ ...

ವಿಳಾಸ — ಸಂಜೀವಿನೀ ಔಷಧಾಲಯ, ಮು. ಪೋ. ಮಿರಜಿ, (S M. C.

The
Canara Industrial & Banking Syndicate Limited.

(Incorporated in British India)

(Estd: 1925)

HEAD OFFICE: 'MUKUND NIVAS' UDIPI, S INDIA

Member:

Reserve Bank of India, Bankers' Clearing House Bombay

Season Deposits Maturing Between

30th June and 15th July 1939 Are

Accepted @ 3½% p. a

Banking Business of Every Description Transacted on Sound lines.

Particulars on application to any of our 35 Branches.

THE

Canara Banking Corporation Udipi, Ltd.,

WILL NOW RECEIVE

SEASON DEPOSITS

AT ALL BRANCHES

AT

3½% PER ANNUM

REPAYABLE AFTER 6 MONTHS

For Particulars Call at or Apply to any of its Branches

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ಪಿನ್ನು ರೋಗಗಳನ್ನು ಗುಣಪಡಿಸಿ ಶರೀರಶಕ್ತಿಯನ್ನುಂಟು ಮಾಡಬಲ್ಲ ಪಟ್ಟಿಗಳ ... 20 ತೊಲಿಗಳ ದಬ್ಬಿ ರೂ 1-1-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,

ಆಯುರ್ವೇದಿಕ್ ಸಮಾಜ, ಪೆರಿಡೇಪಿ

P O Peridepi (ನೆಲ್ಲೂರು ಜಿ)

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲೆಂಟೈನ್

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,

ಕೊಡಿಯಾಲ್ ಬಜಾರ್, ಮಂಗಳೂರು

ಡೋಂಗರೆ

ಇವರ

ಬಾಲಾಮೃತವು

ಮಕ್ಕಳ

ಹಳೆಯ, ಮತ್ತು ಅಸಾಧ್ಯವಾದ ಕೆಮ್ಮು, ಮತ್ತು ಒಳಜ್ವರ ಇವುಗಳನ್ನು ಗುಣಪಡಿಸಿ ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುತ್ತದೆ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ರೂಬಲಗು ರಿಂದ	ರೊಬಲಗು ವರೆಗೆ
ಭತ್ತ ಅವ್ವಲ್ ತರದ ಗುದ್ದು ಮುಡಿಗೆ	1—10—0	—
,, ದುಯಂ ,, ,,	1—8—0	1—8—0
,, ಅವ್ವಲ್ ಸುಗ್ಗಿ ,,	1—10—0	—
,, ದುಯಂ ,, ,,	1—9-0	–
ಅಕ್ಕಿ ಅವ್ವಲ್ ಗುದ್ದು ,,	4—6 0	4–8—0
,, ದುಯಂ ,, ,	4—2—0	3—14—0
,, ಅವ್ವಲ್ ಸುಗ್ಗಿ ,,	4–4–0	–
,, ದುಯಂ ,, ,,	4–0 0	4—0—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	36–0—0	44 0–0
,, ಸಿಪ್ಪೆ ಇದ್ದದು ,,	38–0—0	47–0–0
ಕೊಬ್ಬರಿ ಆಫೀಸು ಖಂಡಿಗೆ	51—0 -0	–
,, ದಿಲ್‌ಪಸಂದಿ ,,	55–0 0	—
ತೆಂಗಿನ ಎಣ್ಣೆ ಮಣಕ್ಕೆ	3 -6—0	3—6—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	3—4—0	4–0–0
ಗೇರುಬೀಜ ಮುಡಿಗೆ	3–8—0	3–12—0
ಕಬ್ಬಿನ ಬೆಲ್ಲ ಖಂಡಿಗೆ	35—0–0	40—0–0
ಒಳ್ಳೆಮೆಣಸು ಹಂಡ್ರಡ್ವೇಟಿಗೆ	15—12–0	16—0—0

ನಾಲ್ಕು ಮಾತು!

೧. ಹಿಟ್ಲರನ ಕಣ್ಣು ಎತ್ತ ತಿರುಗುವುದು?

ಹೊಲೆಂಡಿನಲ್ಲೇನೋ ಗೊಂದಲವುಂಟಾಗಿದೆ; ಅದು ಸ್ಪಷ್ಟವಾಗಿಲ್ಲ. ಜರ್ಮನ ನಾಝಿಗಳು ಅಲ್ಲಿ ನಾನಾ ಚಳವಳ ಹೂಡಿರುವರೆಂದೂ ಹಿಟ್ಲರು ತನ್ನ ಪುಸ್ತಕದಲ್ಲಿ ಮೊದಲೇ ಹೊಲೆಂಡಿನ ಕಡೆಗೆ ತಿರುಗುವನೆಂದು ಬರೆದಿರುವಂತೆ ಈಗ ಮಾಡಲಿರುವನೆಂದೂ ಹೊಲ್ಲೆಂಡು ಎಚ್ಚರವಿಟ್ಟು ಕಾಯುತ್ತದೆ. ಜಪ್ಪರ ಗಡಿನಾಡಿನಲ್ಲಿ ಹಿಟ್ಲರು ನಾನಾ ಮುಂಜಾಗ್ರತೆಗಳನ್ನು ತೆಗೆದುಕೊಳ್ಳುತ್ತಿರುವುದು ಪ್ರಕಟವಾಗಿದೆ. ಬ್ರಿಟಿಷರು ಇದನ್ನು ಕೇಳಿದರೂ, ತಿಳಿದಿಲ್ಲವೆಂಬಂತಿದ್ದಾರೆ, ಇವರ ಕಡೆಗೆ ಅವರ ಗಮನವೂ ಬರುವುದೆಂದರೆ, ಯುರೋಪಿನಲ್ಲಿ ಪುನಃ ಯುದ್ಧ ಭಯದ ವಾರ್ತೆ ಹರಡುವುದೆಂದು ಅವರು ಬೆದರಿರುವರು.

ಫ್ರಾನ್ಸು ಇಟಲಿಗಳೊಳಗೆ ನಡೆವ ವಿವಾದದಿಂದ, ಯುದ್ಧವು ಸಮೀಪಗತವಾಗಿದೆಯೋ ಎಂದು ತಿಳಿಯಬಹುದಾದಲ್ಲಿ, ಜರ್ಮನಿಯು ವಾಸ್ತವವಾಗಿಯೂ ಫ್ರಾನ್ಸಿನ ಮೇಲೆ ದಂಡೆತ್ತಿ ಹೋಗುವುದಾದರೆ, ಬೆಲ್ಜಿಯಮ್ ಹೊಲ್ಲೆಂಡುಗಳು ತಟಸ್ಥವೆಂದು ಪ್ರಮಾಣಮಾಡಿವೆಯಾದರೂ ಹಿಟ್ಲರು ಅವುಗಳ ಮಾರ್ಗ ಹಿಡಿದೇ ಫ್ರಾನ್ಸಿಗೆ ಮುಂದೊತ್ತುವುದು ಅಗತ್ಯವಾಗುವುದು. ಫ್ರಾನ್ಸೂ ಬೆಲ್ಜಿಯಮೂ ಗಡಿನಾಡನ್ನು ಭದ್ರಪಡಿಸಿವೆ. ಹೊಲ್ಲೆಂಡು ಮೂಲಕವಾಗಿಯಲ್ಲದೆ, ಇವನ್ನುಳಿದು ಫ್ರಾನ್ಸಿನೊಳಗೆ ಬರಲಾಗುವುದಿಲ್ಲ. ಅದಕ್ಕಾಗಿ, ಡಚ್ಚ ಸರಹದ್ದಿನಲ್ಲಿ ಜರ್ಮನರು ಉತ್ತಮ ಮೋಟಾರು ರಸ್ತೆಗಳನ್ನು ಮೊದಲೇ ಸಿದ್ಧಮಾಡಿರಿಸಿರುವರು. ಡಚ್ಚರ ತಾಟಸ್ಥ್ಯವನ್ನು ಮುರಿಯುವುದು ಒಂದೇ ಮಾತ್ರ ಜರ್ಮನಿಗೆ ಉಪಾಯ.

ಸ್ವಿಟ್ಜರ್ಲೆಂಡು ಮಾರ್ಗವಾಗಿ ಫ್ರಾನ್ಸಿನೊಳಗೆ ನುಗ್ಗುವ ಪ್ರಸ್ತಾಪ ಬಂದಾಗ, ಇಟಲಿಯು ಅತ್ತ ಸ್ನೇಹದಿಂದಿರುವಾಗ, ಜರ್ಮನ್ ಸೇನೆಗಳು ಅದನ್ನು ಸಾಧಿಸಬಹುದೆಂದು, ತೀರ್ಮಾನವಾಗಿದೆ.

ರೋಮ್-ಬರ್ಲಿನ್ ಒಂದಾದರೆ, ದಾರಿಸಿಗೆ ಹಾಸಿಯುಂಟು. ಫ್ರೆಂಕೋ ಜಯಶೀಲನಾದರೆ, ದಕ್ಷಿಣದಿಂದಲೂ ಫ್ರಾನ್ಸಿಗೆ ಜರ್ಮನರೂ ಇಟಲಿಯನರೂ ನುಗ್ಗಬಹುದು. ಫ್ರೆಂಕೋ ಫ್ರೆಂಚ ಪಕ್ಷಪಾತಿಯಾಗಿಲ್ಲ.

ಆದರೂ, ಯುದ್ಧವಾಗುವಂತೆ ಡಿಕ್ಟೇಟರರು ನಿರ್ಧರಿಸರು. ಒತ್ತಾಯಮಾಡಿ ಫ್ರಾನ್ಸಿನಿಂದ ರಿಯಾಯತಿ ಪಡೆವರು. ಚೇಂಬರ್ಲೇನರು ರೋಮ್ ಸಂದರ್ಶನೆಗೆ ಹೋಗುವಾಗಲೆ ಹೊಲ್ಲೆಂಡಿನ ಮೇಲೆ ನಾನಾ ದೂರುಗಳು ಜರ್ಮನಿಯಿಂದ ಬರುವುದೂ, ಒಂದು ಪೂರ್ವಾಲೋಚಿತ ಕಾರ್ಯಕ್ರಮ.

೨. ಕೊಮ್ಯುನಲ್ ಎವಾರ್ಡು ಮತ್ತು ಕ್ರೈಸ್ತರು.

ಅವರ ಅಪೇಕ್ಷೆ ಹಾಗಿದೆಯಾದರೆ, ಕ್ರೈಸ್ತರು ಈಗ ಆ ಹಾಳು ಎವಾರ್ಡನ್ನು ತಿದ್ದಿಸಿಕೊಳ್ಳಬಹುದು ಎಂದು ಗಾಂಧಿಜೀ ಹೇಳುವರು.

ಪ್ರೊಟೆಸ್ಟಾಂಟರು ಯಾವಾಗಲೂ ರಾಷ್ಟ್ರೀಯರಾಗಿಯೆ ಮಾತಾಡುವವರು. ಇತ್ತೀಚೆಯ ಪರಿಷತ್ತುಗಳೇ ಮೊದಲಾದುವಲ್ಲಿ ಪ್ರಕಟವಾದ ಅಭಿಪ್ರಾಯಗಳಿಂದ ಕೆಥೊಲಿಕರೂ ಸ್ವಮತವೊಂದನ್ನೇ ಹಿಡಿದಿರುವುದರ ಬದಲಾಗಿ, ರಾಷ್ಟ್ರೀಯ ಭಾವನೆ ಕೂಡಿದವರೆಂದೇ ತಿಳಿದು ಬರುತ್ತದೆ. ಹೀಗೆ, ಕ್ರೈಸ್ತರ ಅಭಿಪ್ರಾಯವು ಜಂಟಿ ಮತದಾನಕ್ಕೆ ಒಲಿದಿದೆ. ಕೊಂಗ್ರೆಸ್ ಮಂತ್ರಿಗಳು ಅಧಿಕಾರ ತಳೆದಲ್ಲಿ ಕ್ರೈಸ್ತರು ಉತ್ತೇಜನವನ್ನೆ ಹೊಂದುವುದು ಎಲ್ಲರಿಗೂ ಗೊತ್ತಾಗಿಯೆ ಇದೆ.

ಇನ್ನು ಈ ವಿಷಯ—ಕ್ರೈಸ್ತರೇ ನೋಡಿಕೊಂಡು ಮುಂದುವರಿಯುವುದಗತ್ಯ. ಯಾವ ಸಮಾಜಗಳು ಎವಾರ್ಡನ್ನು ತಿದ್ದ ಬೇಕೆನ್ನುವುವೊ ಅವುಗಳು ತಮಗೇ ಬೇಕಾದಂತೆ ತಿದ್ದಿಕೊಳ್ಳಲಾಗುವಂತೆ ಆಟ ಇದೆ. ಯಾವುದೊಂದು ಪ್ರಾಂತ್ಯದಲ್ಲಿ ಮಾತ್ರವೇ ಆದರೂ, ಹೀಗೆ ತಿದ್ದಲಾಗುವುದು. ಇದೀ ದೇಶದಲ್ಲಾಗಬೇಕೆಂದೇನೂ ಇಲ್ಲ. ಕ್ರೈಸ್ತರೂ ಹಿಂದುಗಳೂ ಮಾತ್ರ ಒಪ್ಪಿಕೊಂಡಲ್ಲಿ, ಜಂಟೀ ಮತದಾನವನ್ನು ಕೂಡಲೆ ಜ್ಯಾರಿಗೆ ತರಲು ಪ್ರಯತ್ನಮಾಡಬಹುದು. ಪ್ರತ್ಯೇಕ ಜಾತ್ಯನ್ಯಯವಾದ ಚುನಾವಣೆಯನ್ನು ಕಿತ್ತು ಹಾಕಲೆತ್ನಿಸುವುದೇ ಅವರ ಕರ್ತವ್ಯ. ಅಕ್ಟ್ ಜ್ಯಾರಿಗೆ ಬಂದ ಹತ್ತು ವರ್ಷಗಳೊ ತರುವಾಯ ಮಾತ್ರವೇ ಹೀಗೆ ಎವಾರ್ಡನ್ನು ತಿದ್ದಿಕೊಳ್ಳಬಹುದೆಂದಿದ್ದು ಆದರೆ, ಬ್ರಿಟಿಷ ಸರಕಾರವು ಒಪ್ಪಿದಲ್ಲಿ, ಈ ಅವಧಿಯನ್ನು ಗಣನೆಗೆ ತರಬೇಕಾಗಿಲ್ಲ. ಸರಕಾರವೇ ಕೈಕೊಂಡು ತಿದ್ದಬಹುದು. ನಿಜವಾಗಿಯೂ ಹೀಗೆ ತಿದ್ದುಪಡಿ ಮಾಡಲು ಸರಕಾರಕ್ಕೆ ಸದಿಚ್ಛೆಯಿದೆಯೋ ಇಲ್ಲವೊ ಎಂಬುದನ್ನು ಈಗ ಪರೀಕ್ಷಿಸಿ ನೋಡಬಹುದು. ಪ್ರಾಂತಿಕ ಮತ್ತು ಕೇಂದ್ರದ ಎಸೆಂಬ್ಲಿ ಕೌನ್ಸಿಲುಗಳಲ್ಲಿನ ಕ್ರೈಸ್ತ ಪ್ರತಿನಿಧಿಗಳು ಎವಾರ್ಡನ್ನು ತಿದ್ದುವುದಕ್ಕಾಗಿ ನಿರ್ಣಯಗಳನ್ನು ಸೂಚಿಸಿಕೊಂಡು, ಅವನ್ನು ಅಲ್ಲಿ ಮಂಜೂರು ಮಾಡಿಸಿಕೊಳ್ಳಬೇಕಾಗಿದೆ. ಬ್ರಿಟಿಷ ಸರಕಾರವು ಆಗ ಈ ನಿರ್ಣಯವನ್ನು ಜ್ಯಾರಿಗೆ ತರಬೇಕಾಗುವುದು.

ಹಿಂದೀ ಕ್ರೈಸ್ತರು ಇಷ್ಟು ಮುಂದೆ ಬರುವದಾದರೆ, ಈ ದೇಶದಲ್ಲಿ ಜನಾಂಗಿಕ ಮತ್ತು ರಾಷ್ಟ್ರೀಯ ಭಾವನೆಗಳು ಬೆಳೆದಂತೆ ಮಾಡುವ ಭಾಗ್ಯವು ಅವರಿಗೆ ಮೊದಲಾಗಿ ಸಲ್ಲುವುದು. ಇತರ ಅಲ್ಪಸಂಖ್ಯಾಕರು ಇವರ ರೀತಿ ಹಿಡಿಯಬಹುದು.

೩ ಪೆಲೆಸ್ತೀನ ಪರಿಷತ್ತು.

ಇದು ನಮ್ಮವರು ಅನುಭವಿಸಿದ್ದ ರೌಂಡ್ ಟೇಬಲ್ ಕೊನ್ಫೆರೆನ್ಸಿನಂತಾಗುತ್ತದೆ ಎಂದು ಬಿದ್ದ ಅಪ್ರಾನ್ನ ಉದ್ಭವವಿಲ್ಲದಿರುವುದೆಂಬ ಪ್ರಸ್ತಾಪವು ಅರಬರ ಮುಂದೆ ಬಂದು, ಹಿಂದೂ ಮುಸ್ಲಿಮರೊಳಗೆ ನ್ಯಾಯ ತೀರ್ಮಾನಿಸುವುದಾಗಿ ಹೇಳಿ, ಪಕ್ಷಪಾತವೆಂಬ ಬಂಡೆಯ ಮೇಲೆ ನ್ಯಾಯವನ್ನು ಚೂರಾಗುವಂತೆ ಒಡೆದಿಕ್ಕಿತು. ಎವಾರ್ಡು ಹೊರಟಿತು, ಇಂತಹ ಛಲವ ಮತ್ತೊಂದು ವಿಲ್ಲವೆನಿಸಿದೆ.

ಅರಬರೆಲ್ಲರು ಈಗ ಒಂದೇ ಅಭಿಪ್ರಾಯವುಳ್ಳಂತೆ ಅತ್ತ ತೆರಳಿರುವರು. ಕೈರೋ ಪರಿಷತ್ತಿನ ನಿರ್ಣಯ ಹೀಗಾಗಿದೆ. ಆದರೆ, ಬ್ರಿಟಿಷರು ಯೆಹೂದ್ಯರ ಪಕ್ಷವಾಗಿ ನಿಂತಲ್ಲಿ, ಅವರಿಗೂ ಸಮ್ಮಗತಿಯೇ ಉಂಟಾಗುವುದು. ಅರಬರಲ್ಲಿ ಇತ್ತಂಡಗಳಾಗಿರುವುದೂ ಬ್ರಿಟಿಷ ಮುತ್ಸದ್ದಿಗಳಿಗೆ ಅನುಕೂಲವೇ ಆಗಿದೆ. ಅರಬರಲ್ಲಿ ಒಂದು ಪಕ್ಷವು ತಾವೇ ಸಮಸ್ತ ಪೆಲೆಸ್ತೀನ ಅರಬರ ಪ್ರತಿನಿಧಿಗಳು ಎಂದು ಹೇಳುತ್ತಿರುವರು.

ಇವರ ಹಕ್ಕು, ತಮ್ಮ ವಚನ ಇವನ್ನೆಲ್ಲ ಪರಿಷತ್ತು ಎಣಿಸುವ ಹಾಗಿಲ್ಲ. ಇಂಡಿಯಾಕ್ಕೆ ಬರುವ ಹಾದಿಯಲ್ಲಿ ಪೆಲೆಸ್ತೀನು ಇರುವುದರಿಂದ, ಬ್ರಿಟನ್ನು ತನ್ನ ಅನಾನುಕೂಲತೆಗಳನ್ನು ದೃಢಪಡಿಸಿಕೊಳ್ಳಬೇಕಾಗಿದೆ. ಪೆಲೆಸ್ತೀನನ್ನು ತನ್ನ ಹಿಡಿತದೊಳಗಿಂದ ಬ್ರಿಟನ್ನು ಎಂದೂ ಬಿಡಲಿಚ್ಛಿಸದು. ಹಾಗೆ ನೀತಿಯುದೆ, ಹೀಗೆ ನ್ಯಾಯವಿದೆ ಎಂದು ಕೆಲವು ತತ್ವಗಳನ್ನು ಸಾರಿ, ಇನ್ನೊಂದು ಬಗೆಯಲ್ಲಿ ಪೆಲೆಸ್ತೀನನ್ನು ಹಂಚಿ ಹಾಕಲು ಪ್ರಯತ್ನಗಳಾಗಬಹುದು.

ಅರಬರು ಕೂಡ ಸ್ವಾತಂತ್ರ್ಯವನ್ನು ತಾವೇ ಸಾಹಸದಿಂದ ಒಳಸಿಕೊಳ್ಳಬೇಕಾಗಿದೆ. ಯೆಹೂದ್ಯರೂ ಇವರೂ ತಾವಾಗಿ ಮೈತ್ರಿ ಸಂಭಾಷಣೆಗಳಿಗೆ ಪ್ರಯತ್ನಿಸಿದರೆ, ಪೆಲೆಸ್ತೀನು ಅರಬರಿಗೇ ಪ್ರಾಧಾನ್ಯವಾಗಿ ಸಲ್ಲತಕ್ಕದೆಂಬುದನ್ನು ಮರೆಯದಿದ್ದರೆ, ಎಲ್ಲವೂ ಸರಿಯಾಗಿ ನೆರವೇರುವುದು.

೪ ಬ್ರಿಟನ್ನಿನ ರಾಜನೀತಿ

ಕಳೆದ ಮಹಾಯುದ್ಧದಿಂದೀಚೆಗೆ ಬ್ರಿಟಿಷ ರಾಜನೀತಿಯು, ಯುದ್ಧಫಲವಾಗಿ ಯುರೋಪಿನ ರಾಷ್ಟ್ರಗಳ ಬಲವನ್ನು ಅತ್ತಿತ್ತ ಸಮತೂಗಿಸಿ ಕಾಪಾಡುವುದೇ ಆಗಿದೆ. ಯುರೋಪಿನಲ್ಲಿ ಯಾರೇ ಬಲಿಷ್ಠರಾಗಲಿ, ಕಿರಿದಾಗಲಿ ಬ್ರಿಟನ್ನು, ಸೇರದವರು ಬಲಿಷ್ಠರಾಗುವ ಹಾಗೆ ಅವಕಾಶವಿಲ್ಲದೆ, ಬ್ರಿಟಿಷರ ಅಧಿಕಾರ ಮಹತ್ವವು ಕುಂದುತ್ತದೆಂಬ ಭಾವನೆ ಅಲ್ಲಿದೆ. ಫ್ರಾನ್ಸು ಮುಖಂತರವೇ ತಳೆದರೆ, ಬ್ರಿಟಿಷ ಬಲವು ಕುಂದುವುದು. ಅದಕ್ಕಾಗಿ ವರ್ಸಾಯ್ ಒಪ್ಪಂದವಾದುದೇ, ಅದು ಬಾಳದು ನ್ಯಾಯವಲ್ಲದು ಎನ್ನುವುದರಲ್ಲಿ ಬ್ರಿಟನ್ನೇ ಮುಂದಾದುದು. ಜಗತ್ತಿನ ಹಣಕಾಸು ಕಡಮೆಯಾದುವಳಿಕ್ಕೆ ಆ ಒಪ್ಪಂದವನ್ನೇ ದೂರಲಾಯಿತು; ಫ್ರಾನ್ಸು ಮಹತ್ವ ತಳೆದರೆ, ಇಂಗ್ಲೆಂಡನ್ನು ಗೆಲ್ಲುವುದೆಂದು ಇಂಗ್ಲೆಂಡು ನಂಬದು; ಆದರೆ, ತಾನಾಗಿ ಫ್ರಾನ್ಸಿನ ಸಹಾಯ ಯಾಚನೆ ಮಾಡುವುದು ಬ್ರಿಟನ್ನಿಗೆ ಒಪ್ಪದು. ಜರ್ಮನಿಯು ಬಲಿಷ್ಠವಾಗುತ್ತ ಬಂತು, ಫ್ರೆಂಚ ನಾಣ್ಯದ ಬೆಲೆ ಇಳಿಯಿತು; ಆಗ ಫ್ರಾನ್ಸನ್ನು ಬ್ರಿಟನ್ನೇ ತನ್ನ ಕೈಗೊಂಬೆಯಾಗಿ ಬಾಳಿಸಬೇಕಾಗಿ ಬಂತು. ಈಗ ಫ್ರಾನ್ಸು ಇಂಗ್ಲೆಂಡಿನ ಸೆರಗು ಹಿಡಿದಿದೆ, ಅದು ಹೋಗುವಂತೆ ಹೋಗಬೇಕಾಗಿದೆ. ಈ ಸಂಬಂಧವು ಕಡಿಯದಂತೆ ನೋಡುವುದು ಬ್ರಿಟನ್ನಿನ ಮುಖ್ಯ ಪ್ರಯತ್ನ. ಫ್ರಾನ್ಸಿಗೆ ಇದು ಗೊತ್ತಿದ್ದೇ 'ಬ್ರಿಟನ್ನಿನ ಪರಂಪರಾಗತ ಸಂಬಂಧ' ಎಂದು ಫ್ರಾನ್ಸು ಪದೇ ಪದೇ ಸಾರುತ್ತಿದೆ. ಫ್ರಾನ್ಸು ರಶಿಯಾದೊಡನೆ ಸಂಧಾನವನ್ನು ಸ್ವತಂತ್ರವಾಗಿ ಮಾಡಿತು, ಬ್ರಿಟನ್ನು ಒಪ್ಪಲಿಲ್ಲ. ಫ್ರಾನ್ಸು ಅದನ್ನು ಹಾಗೆಯೆ ಬಾಕಿಯುಳಿಸಿತು. ರಷ್ಯವು ಅಧಿಕಾರರಂಗದಲ್ಲಿ ಕಾಲಿಟ್ಟರೆ, ಬ್ರಿಟನ್ನಿನ ಅಧಿಕಾರ ಮಹತ್ವವು ಕುಂದುವುದು, ಮಾತ್ರವಲ್ಲ, ಫ್ರಾನ್ಸು ಬ್ರಿಟನ್ನಿನ ಸೆರಗು ಬಿಟ್ಟು ಸ್ವತಂತ್ರವಾಗುವುದು!

THE

Bank of Mangalore Ltd.,

MANGALORE.

ESTD 1931

Branches-

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Saving Bank deposit 3½% on daily balances.

All kinds of banking business transacted.

ಎಡೆಬಿಡದ ದಣುವಿನಿಂದ ಸ್ತ್ರೀಯು ಕೋಪಭಾವದವಳಾದಳು

ಇತರರೊಡನೆ ಜೀವಿಸಲು ಅನರ್ಹಳಾದಳ ಕ್ರುಶನ್ ಲವಣಗಳಿಂದ ಆಕೆಯು ತನ್ನ ಸಂಕಟವನ್ನು ನೀಗಿದಳು

ಒರ್ವ ಸ್ತ್ರೀಯು ಹೀಗೆ ಬರೆಯುತ್ತಾಳೆ "ನನ್ನ ಪ್ರಾಯ ೩೯. ಆದರೆ ಕೆಲವು ದಿನಸಗಳಲ್ಲಿ ನೂರು ವರ್ಷ ವಯಸ್ಸಿನ ಭಾವವು ನನ್ನಲ್ಲಿ ಬರುವುದು. ನನ್ನಲ್ಲಿ ಕಾರಣವಿಲ್ಲದೆ ದಣುವುಂಟಾಗುವುದು. ಆಗ ನನ್ನ ನರಗಳ ಶಕ್ತಿಯು ಕುಂದಿ ನನ್ನಲ್ಲಿ ಕೋಪಾವೇಶವು ಉಂಟಾಗಿ ಇತರರೊಡನೆ ಜೀವಿಸಲು ನಾನು ಅಯೋಗ್ಯಳಾಗುತ್ತಿದ್ದೆ. ಕೆಲಸ ಮಾಡಲು ನನ್ನಲ್ಲಿ ಶಕ್ತಿಯೆ ಇರಲಿಲ್ಲ. ನನ್ನಲ್ಲಿ ಪ್ರಮಾದಗಳೂ ಬಂದು. ತರದ ಸಿಟ್ಟಿನ ಭಾವವು ಉಂಟಾಗಿ ಜಗಳಾಡುವುದೆ ನೆಂದೆನಿಸಿ, ನನಗೆ ಎನಿಸುತ್ತಿತ್ತು. ಅದಕ್ಕೆಲ್ಲಾ ನನ್ನ ನರಗಳ ಕಾರಣವೆಂದು ವೈದ್ಯರು ಸೂಚಿಸಿದರು. ನಾನು ಕ್ರುಶನ್ ಲವಣಗಳನ್ನು ಉಪಯೋಗಿಸಿದೆನು. ಅದನ್ನು ಉಪಯೋಗಿಸಲಾರಂಭಿಸಿದಂದಿನಿಂದ ನಾನು ಸಂಪೂರ್ಣ ಹೊಸಬಳಾಗಿರುತ್ತೇನೆ. ಜೀವನದಲ್ಲಿ ಉಲ್ಲಾಸವೂ ಸಿವಚೇತನವೂ ಉಂಟಾಗಿರುತ್ತದೆ. ನನ್ನಲ್ಲಿ ಶಕ್ತಿಯು ಬಂದಿರುತ್ತದೆ. ಕೆಲಸಮಾಡಲು ಉತ್ಸಾಹವುಂಟಾಗಿರುತ್ತದೆ."

ಕೆಟ್ಟ ಆರೋಗ್ಯದ ಹೆಚ್ಚಿನವರಲ್ಲಿ ಕೋಪಾವಿಷ್ಟತೆಗೆ ಕಾರಣವು. ದೇಹವು ಸ್ವಚ್ಛವಾಗಿರದಿದ್ದರೆ ಅನೇಕ ಸಂಕಟಮಯ ಪೀಡನೆಗಳುಂಟಾಗುತ್ತವೆ. ನಿಮ್ಮ ದೇಹದಿಂದ ವಿಷವನ್ನು ಹೊರಗಟ್ಟಿರಿ ಆಗ ನಿಮ್ಮ ಮನಸ್ಸಿನ ನಿಸ್ತೇಜ ಭಾವವು ಮಾಯವಾಗುವುದು ಮತ್ತು ನೀವು ಉಲ್ಲಾಸವಂತರಾಗುವಿರಿ.

ಪ್ರತಿದಿವಸ ಒಂದಿಷ್ಟು ಕ್ರುಶನ್ ಲವಣವನ್ನು ಸೇವಿಸಿ, ಅದು ನಿಮ್ಮ ದೇಹದೊಳಗಿನ ಕಲ್ಮಶಗಳನ್ನು ವಿಷಗಳನ್ನು ಹೊರದೂಡುವುದು.



ನಿಮ್ಮ ಅಂಗಾಂಗಗಳಿಗೆ ಶುದ್ಧರಕ್ತವನ್ನು ಪೂರೈಸಿ, ಅವುಗಳಲ್ಲಿ ಹುರುಪನ್ನು ಚೇತನವನ್ನು ಉಂಟು ಮಾಡುವುದು

ಎಲ್ಲಾ ಬಜಾರುಗಳಲ್ಲಿ ಸ್ಟೋರುಗಳಲ್ಲಿ ಕ್ರುಶನ್ ಲವಣವು ಮಾರಲ್ಪಡುತ್ತದೆ.

ಅಲ್ಪಸಂಖ್ಯಾಕರಿಗೆ ಸ್ವಾಧಿಕಾರ ಕೊಟ್ಟರೆ ಬಹುಸಂಖ್ಯಾಕರಿಗೆ ರಾಜ್ಯವಿಲ್ಲ

ಜೆಕ್ಕೊಸ್ಲೊವೇಕಿಯದಲ್ಲಿರುವ ಅಲ್ಪಸಂಖ್ಯಾಕರಿಗೆ ಸ್ವಾಧಿಕಾರವು ದೊರೆಯಬೇಕೆಂದು, ಹಿಟ್ಲರನು ಒಂದು ದೊಡ್ಡ ಯುದ್ಧವನ್ನು ಮಾಡಲಿಕ್ಕೂ ಸಿದ್ಧನಾದನು. ಯುರೋಪಿನಲ್ಲಿ ಗಲಾಟೆಯೋ ಗಲಾಟೆಯಾಯಿತು. ಮತ್ತೆ ನಮ್ಮ ಮಹಾನುಭಾವರಿಂದ ಬ್ರಿಟಿಷ ಮುಖ್ಯ ಮಂತ್ರಿ ಚೆಂಬರ್ಲೇನ ಸಾಹೇಬರು ಮಧ್ಯಸ್ತಿಕೆ ಮಾಡಿ, ಜೆಕ್ಕೊಸ್ಲೊವೇಕಿಯದ ಅಲ್ಪಸಂಖ್ಯಾಕರು—ಅಂದರೆ, ಸುಡೇಟಾನ ಜರ್ಮನರಿಗೆ, ಹಂಗೇರಿಯನರಿಗೆ, ಪೋಲಂಡಿಗೆ ಸ್ವಾದಿಕಾರವನ್ನು ಕೊಡುವದೆಂದು ತಹನಾಮೆಯಾಯಿತು. ಜೆಕೊಸ್ಲೊವೇಕಿಯದ ಒಂದು ಪಾಲು ಜರ್ಮನಿಗೆ, ಮತ್ತೊಂದು ಪಾಲು ಹಂಗೇರಿಗೆ, ಮಗದೊಂದು ಪಾಲು ಪೋಲೆಂಡಿಗೆ ಸೇರಿಕೊಂಡುವು. ಹಿಟ್ಲರನು ಶಾಂತನಾದನು.

ಅಲ್ಪಸಂಖ್ಯಾಕರ ಹಿತಕಾರಿ ಹಿಟ್ಲರ್!

ಹಿಟ್ಲರನಿಗೆ ಅಲ್ಪಸಂಖ್ಯಾಕರ ಇಷ್ಟೊಂದು ಹಿತಮಾಡಬೇಕೆಂಬ ಈ ಪರೋಪಕಾರ ಬುದ್ಧಿ ಹುಟ್ಟಿರುವುದೇಕೆ? ಅವನು ಜೆಕೊಸ್ಲೊವೇಕಿಯದ ಅಲ್ಪಸಂಖ್ಯಾಕರಿಗೆ ಸ್ವಾಧಿಕಾರವನ್ನು ಕೊಡಲು, ಅಷ್ಟು ಉತ್ಸುಕನಾದುದೇಕೆ? ಜೆಕೊಸ್ಲೊವೇಕಿಯದ ಅಲ್ಪಸಂಖ್ಯಾಕರಿಗೆ ಸ್ವಾಧಿಕಾರ ಮತ್ತು ಸ್ವಯಂನಿರ್ಧಾರದ ಹಕ್ಕು ಅಧಿಕಾರಗಳು ದೊರೆತಂತೆ ಪ್ರಪಂಚದ ಎಲ್ಲಾ ಅಲ್ಪಸಂಖ್ಯಾಕರಿಗೂ ಈ ಹಕ್ಕು ಅಧಿಕಾರಗಳು ದೊರೆತರೆ ಹೇಗಾದೀತು? ಅಲ್ಪಸಂಖ್ಯಾಕರ ಭಾಷೆ, ಧರ್ಮ, ಸಂಸ್ಕೃತಿಗಳ ರಕ್ಷಣೆಯಾಗಬೇಕು ಬಹುಸಂಖ್ಯಾಕರು ಅವರ ಮೇಲೆ ಅನ್ಯಾಯ, ಅತ್ಯಾಚಾರ, ಅನಾಚಾರಗಳನ್ನು ನಡೆಸದಂತೆ ರಕ್ಷಣೋಪಾಯಗಳಿರಬೇಕು ಎಂದು ಹೇಳುವ ಮಾತು ಒಂದು, ಈ ಅಲ್ಪಸಂಖ್ಯಾಕರು ತಾವು ಮನಸ್ಸು ಮಾಡಿದರೆ ತಮ್ಮದಾದ ಒಂದು ಅಥವಾ ಹೆಚ್ಚಿಗೆ ಒಂದರಿಂದ ಒಂದು ಸ್ವತಂತ್ರವಾದ ರಾಜ್ಯಗಳನ್ನೇ ಮಾಡಿಕೊಳ್ಳುವ ಅಧಿಕಾರ, ಅಥವಾ ಬೇರೆ ರಾಜ್ಯಗಳೊಂದಿಗೆ ಸೇರಿಕೊಳ್ಳುವ ಅಧಿಕಾರವಿರಬೇಕೆನ್ನುವ ಮಾತು ಇನ್ನೊಂದಾಗಿದೆ. ಒಂದು ನ್ಯಾಯಯುಕ್ತವಾಗಿರುವುದಾದರೆ ಮತ್ತೊಂದು ಅನ್ಯಾಯಪೂರ್ಣವಾಗಿರುವದು. ಹಿಟ್ಲರನು ಅಲ್ಪಸಂಖ್ಯಾಕರಿಗೆ ಪೂರ್ಣ ಸ್ವತಂತ್ರರಾಗುವ ಅಧಿಕಾರವಿರಬೇಕೆನ್ನುವ ತತ್ವದಲ್ಲಿ ಅವನ ಸ್ವಾರ್ಥವೊಂದೇ ಕಂಡುಬರುತ್ತದೆ. ಅದರಲ್ಲಿ ಅಲ್ಪಸಂಖ್ಯಾಕರ ಹಿತರಕ್ಷಣೆ ಎಂಬ ಪರದೆಯ ನೆರಿಯಲ್ಲಿದ್ದು ತನ್ನ ಸಾಮ್ರಾಜ್ಯವನ್ನು ವಿಸ್ತರಿಸುವ ಅವನ ಮಹತ್ವಾಕಾಂಕ್ಷೆಯು ಸ್ಪಷ್ಟವಾಗುತ್ತದೆ. ಅದ್ದರಿಂದಲೇ ಜೆಕೊಸ್ಲೊವೇಕಿಯದ ಅಲ್ಪಸಂಖ್ಯಾಕರ ಹಿತರಕ್ಷಣೆ ಎಂದು ಹೇಳಿಕೊಂಡು ಹಿಟ್ಲರನೂ ಅವನ ಕೃಪಾಕಟಾಕ್ಷಕ್ಕೆ ಪಾತ್ರನಾದ ಹಂಗೇರಿ ಪೋಲೆಂಡುಗಳೂ ಜೆಕೊಸ್ಲೊವೇಕಿಯದ ಒಂದೊಂದು ತುಂಡನ್ನು ನುಂಗಿಕೊಂಡು ಬಾಯಿಚಪ್ಪರಿಸುವವು.

ಅಲ್ಪಸಂಖ್ಯಾಕರು ಎಲ್ಲ ದೇಶಗಳಲ್ಲಿದ್ದಾರೆ

ಅಲ್ಪಸಂಖ್ಯಾಕರು ಜೆಕೊಸ್ಲೊವೇಕಿಯದಲ್ಲಿ ಮಾತ್ರ ಇದ್ದವರಲ್ಲ, ಅವರು ಪ್ರಪಂಚದ ಪ್ರತಿಯೊಂದು ದೇಶ, ಪ್ರತಿಯೊಂದು ರಾಜ್ಯದಲ್ಲಿ ವಾಸವಾಗಿರುತ್ತಾರೆ. ಜರ್ಮನಿ, ಹಂಗೇರಿ, ಪೋಲಂಡ್, ಇಟಲಿ, ಯುಗೊಸ್ಲೊವಿಯ, ರುಮಾನಿಯ, ಸ್ಪೈನ, ಪೋರ್ಚುಗಲ್, ಫ್ರಾನ್ಸ, ಗ್ರೇಟ್ ಬ್ರಿಟನ್ ಮೊದಲಾದ ಯುರೋಪಿನ ಎಲ್ಲೆಡೆಗಳಲ್ಲಿ ಇದ್ದಾರೆ. ಈ ಎಲ್ಲಾ ರಾಜ್ಯಗಳಲ್ಲಿ ವಾಸವಾಗಿರುವ ಪ್ರತಿಯೊಂದು ಸಣ್ಣ ದೊಡ್ಡ ಅಲ್ಪಸಂಖ್ಯಾಕ ಜಾತಿಕೂಟಗಳಿಗೆ ಸ್ವಾಧಿಕಾರ ಮತ್ತು ಸ್ವಯಂನಿರ್ಧಾರದ ಅಧಿಕಾರವು ದೊರೆವುದಾದರೆ ಬಹುಸಂಖ್ಯಾಕರಿಗೆ ಮತ್ತೆ ರಾಜ್ಯವೇ ಉಳಿಯಲಿಕ್ಕಿಲ್ಲ. ಹಿಟ್ಲರನ ಜರ್ಮನಿಯು ಕೂಡ ಅನೇಕ ಚಿಕ್ಕ ಚಿಕ್ಕ ಅಲ್ಪಸಂಖ್ಯಾಕ ಜಾತಿಕೂಟಗಳ ಸ್ವತಂತ್ರ ರಾಜ್ಯಗಳಾಗಿ ಒಡೆದು ಹೋಗಬೇಕಾಗುವುದು. ಆದರೆ ಹಿಟ್ಲರನಿಗೆ ಬೇಕಾದುದು ಅಲ್ಪಸಂಖ್ಯಾಕರ ಹಿತವಲ್ಲ, ಜರ್ಮನಿಯ ರಾಜ್ಯವಿಸ್ತಾರ. ಅದ್ದರಿಂದ ಯುರೋಪಿನ ಇತರ ಅಲ್ಪಸಂಖ್ಯಾಕರಿಗೂ ಸ್ವಾಧಿಕಾರ ಮತ್ತು ಸ್ವಯಂನಿರ್ಧಾರದ ಅಧಿಕಾರಗಳು ದೊರೆಯಬೇಕೆಂದು ಅವನು ಹೇಳುವುದಿಲ್ಲ. ಹಾಗೆ ಹೇಳುವನಾದರೆ ಅವನು ದೊಡ್ಡ ಮೂರ್ಖನೆಂದೇ ಹೇಳಬೇಕು. ಯಾಕೆಂದರೆ ಜೆಕೊಸ್ಲೊವೇಕಿಯವು ಮಹಾಯುದ್ಧದ ಒಂದು ಕೇಂದ್ರವಾಗಿ ಪರಿಣಮಿಸದಂತೆ, ಯುರೋಪಿನ ರಾಜ್ಯಗಳೆಲ್ಲವೂ ಅಂಥ ಕೇಂದ್ರಗಳಾಗಿ ಪರಿಣಮಿಸುವುವು. ಯುರೋಪಿನಲ್ಲೆಲ್ಲ ಯುದ್ಧದ ಕಿಡಿಗಳು ಹಾರಬೇಕೆಂದು ಹಿಟ್ಲರನು ಇಚ್ಛಿಸುವುದಿಲ್ಲ. ಅವನಿಗೆ ಏನಕೇನಪ್ರಕಾರೇಣ ತನ್ನ ಸಾಮ್ರಾಜ್ಯ ವಿಸ್ತರಣೆಯಾದರಾಯಿತ.

ಹೇಳುವದು ಶಾಸ್ತ್ರ—ಇಕ್ಕುವದು ಗಾಳ

ಇದೇ ಈಗ ಹಿಟ್ಲರನ ಧ ಸರ್ವಾಧಿಕಾರಿಗಳ ಮನೋವೃತ್ತಿಯಾಗಿದೆ. ಅವರು ಅಲ್ಪಸಂಖ್ಯಾಕರ ಹಿತವೆಂದ [illegible] ತತ್ವಗಳನ್ನೇನೋ ಹೇಳುತ್ತಿರುತ್ತಾರೆ. ಆದರೆ ಆಚರಣೆಯಲ್ಲಿ ಕೇವಲ ತಮ್ಮ ಸ್ವಾರ್ಥವನ್ನೇ ಸಾಧಿಸುತ್ತಾರೆ. ಜೆಕೊಸ್ಲೊವೇಕಿಯದ ಅಲ್ಪಸಂಖ್ಯಾಕರಿಗೆ ಸ್ವಾಧಿಕಾರವು ದೊರಕಿತು. ಅವರು ಜರ್ಮನಿ, ಹಂಗೇರಿ, ಪೋಲೆಂಡುಗಳಿಗೂ ಸೇರಿಕೊಂಡರು. ಆದರೆ ಜರ್ಮನಿ, ಹಂಗೇರಿ, ಪೋಲೆಂಡುಗಳಲ್ಲಿಯೇ ಅಲ್ಪಸಂಖ್ಯಾಕರಿರುವರಲ್ಲ? ಅವರ ಗತಿಯೇನು? ಅವರಿಗೆ ಸ್ವಾಧಿಕಾರವು ಪ್ರಾಪ್ತವಾಗುವುದೆ? ಜೆಕೊಸ್ಲೊವೇಕಿಯದ ಅಲ್ಪಸಂಖ್ಯಾಕರಿಗೆ ದೊರೆತ ಹಕ್ಕು ಅಧಿಕಾರಗಳು ಅವರಿಗೂ ದೊರೆಯುವುದೆ? ಪೋಲೆಂಡಿನಲ್ಲಿ ಅಲ್ಪಸಂಖ್ಯಾಕರಾಗಿ ೪,೫೩೦,೦೦೦ ರಷ್ಯನರೂ [illegible],೦೦೦,೦೦೦ ಜರ್ಮನರೂ, ೩,೦೦೦,೦೦೦ ಯಹೂದಿಯರೂ ಇದ್ದಾರೆ. ಹಂಗೇರಿಯಲ್ಲಿ ಅಲ್ಪಸಂಖ್ಯಾಕರಾಗಿ ೫೦೦,೦೦೦ ಜರ್ಮನರೂ ೮೦೦೦೦ ಯುಗೊಸ್ಲೊವಿಯರೂ, [illegible]೫೦,೦೦೦ ಸ್ಲಾವಕರೂ ಇದ್ದಾರೆ. ಇವರಿಗೆಲ್ಲ ಸ್ವಾಧಿಕಾರವು ದೊರೆತು ಸ್ವತಂತ್ರರಾಗುವರಾದರೆ ಜರ್ಮನಿ, ಹಂಗೇರಿ, ಪೋಲೆಂಡುಗಳ ಸ್ಥಿತಿ ಹೇಗಾಗುವುದು?

ಇಟಾಲಿಯ ಜರ್ಮನ್ ಅಲ್ಪಸಂಖ್ಯಾಕರು

ಇಟಲಿಯು ಜರ್ಮನಿಯ ಸ್ನೇಹದಲ್ಲಿದೆ. ಮುಸಲೋನಿಯು ಹಿಟ್ಲರನ ಅಪದ್ಬಾಂಧವ. ಆದರೆ ಇಟಲಿಗೆ ಸೇರುವ ಟಿರೋಲ್ ಪ್ರಾಂತವು ಯುದ್ಧಪೂರ್ವದಲ್ಲಿ ಜರ್ಮನಿಗೆ ಸೇರಿತ್ತು. ಈಗಲೂ ಆ ಪ್ರಾಂತ್ಯದಲ್ಲಿ ಜರ್ಮನರೇ ಅಧಿಕರಾಗಿದ್ದಾರೆ. ಪರಂತು ಹಿಟ್ಲರನು ಟಿರೋಲನ್ನು ತನಗೆ ಕೊಡಬೇಕೆಂದು ಮುಸಲೋನಿಯ ಹತ್ತಿರ ಮಾತೆತ್ತಬಹುದು ಕೂಡ ಇಲ್ಲ. ಆದರ ಮೇಲೆ ಟಿರೋಲಿನ ಅಲ್ಪಸಂಖ್ಯಾಕ ಇಟಾಲಿಯನ್ ಜರ್ಮನರಿಗೆ ರಾಜಕೀಯ ಸಾಮಾಜಿಕ ಯಾವತು ಅಧಿಕಾರಗಳು ಇರುವುದಿಲ್ಲ. ಅವರ ಧರ್ಮ, ಭಾಷೆ, ಸಂಸ್ಕೃತಿಗೆ ಯಾವ ಮನ್ನಣೆಯೂ ಇರುವುದಿಲ್ಲ. ಇತರ ಅಲ್ಪಸಂಖ್ಯಾಕರ ಮೇಲೆ ಆಗುವ ಅತ್ಯಾಚಾರಗಳಿಗಿಂತ ಅವರ ಮೇಲೆ ಆಗುವ ಮುಸಲೋನಿಯ ಅತ್ಯಾಚಾರಗಳು ವಿಶೇಷವಾಗಿವೆ. ಆದರೂ ಕೂಡ ಹಿಟ್ಲರನು ಮೌನ ಸಾಧಿಸಿದ್ದಾನೆ. ಕಣ್ಣು ಮುಚ್ಚಿದ್ದಾನೆ. ಇಲ್ಲಿ ಹಿಟ್ಲರನಿಗೆ ತನ್ನವರೇ ಆದ ಜರ್ಮನ ಅಲ್ಪಸಂಖ್ಯಾಕರ ಹಿತಕ್ಕಿಂತ ಮುಸಲೋನಿಯ ಸ್ನೇಹವು ಅಧಿಕ ಬೇಕಾಗಿದೆ. ಮುಸಲೋನಿಯನ್ನು ಕೆಣಕಿಸುವದು ಅವನಿಗೆ ಬೇಡವಾಗಿದೆ. ಅದ್ದರಿಂದ ತನ್ನವರನ್ನು ಕೈಬಿಟ್ಟಿದ್ದಾನೆ. ಇಲ್ಲಿ, ಅವರ ಸಹಾಯಕ್ಕೆ ಹೋದರೆ—ಪರಿಣಾಮ—? ಮಹಾಯುದ್ಧವಷ್ಟೆ! ಅದ್ದರಿಂದ ಇಟಾಲಿ—ಈ ಪ್ರಕರಣದಲ್ಲಿ ಅವನು ಕಣ್ಣುಮುಚ್ಚಿ ಹಾಲು ಕುಡಿಯುವ ಬೆಕ್ಕಾಗಿದ್ದಾನೆ.

ಹಿಟ್ಲರನ ಅನುಕರಣೆಯನ್ನು ಮುಸಲೋನಿ ಮಾಡಿದ್ದಾನೆ

ಆಫ್ರಿಕದಲ್ಲಿ ಟ್ಯೂನಿಸಿಯ ಎಂಬ ಫ್ರೆಂಚರಿಗೆ ಸೇರಿದ ಒಂದು ರಾಜ್ಯವಿದೆ. ಅದರಲ್ಲಿ ಇಟಲಿಯಾನ ಅಲ್ಪಸಂಖ್ಯಾಕರಿದ್ದಾರೆ. ಹಿಟ್ಲರನು ಸುಡೇಟನ ಲ್ಯಾಂಡನ್ನು ಜೆಕೊಸ್ಲೊವೇಕಿಯದಿಂದ ಕೇಳಿದಂತೆಯೇ ಮುಸಲೋನಿ ಅವನನ್ನು ಅನುಕರಿಸಿ ಫ್ರೆಂಚರಿಂದ ಟ್ಯುನಿಸಿಯವನ್ನು ಕೇಳತೊಡಗಿದ್ದಾನೆ. ಆ ಸಂಬಂಧ ಟ್ಯುನಿಸಿಯದಲ್ಲಿ ದೊಡ್ಡ ದೊಡ್ಡ ಗಲಭೆ ಗಲಾಟೆಗಳು ಆಗಿಯೂ ಇವೆ. ನ್ಯಾಯತಃ ಅಲ್ಲಿಂದಲೂ ಒಂದು ಯುದ್ಧದ ಕಿಡಿ ಹಾರಲೂ ಬಹುದು. ಅದನ್ನು ಹಾಂದಾಗಲೆ ನೊಂದಿಸುವ ಪ್ರಯತ್ನಕ್ಕಾಗಿ ಚೆಂಬರ್ಲೇನರು ಈಗ ಇಟಲಿಗೆ ಹೋಗಿರುವ ಒಂದು ಉದ್ದೇಶವಿದೆ. ಆದರೆ ಹಿಟ್ಲರನು ಸುದೇಟಾನ ಲ್ಯಾಂಡನ್ನು ತೆಗೆದುಕೊಂಡಮೇಲೆ ಮುಸಲೋನಿಯು ಟ್ಯುನೀಸಿಯವನ್ನು ಹೇಗಾದರೂ ಮಾಡಿ ತೆಗೆದುಕೊಳ್ಳದೆ ಇರುವನೆ ಎಂಬುದು ಒಂದ ಪ್ರಶ್ನೆ. ಇಬ್ಬರೂ ಅಣ್ಣತಮ್ಮಂದಿರಂತೆ ಇರುತ್ತ ಅವನು ಯಾಕೆ ಸುಮ್ಮಗಾಗಿಯಾನು?

ಯುಗೊಸ್ಲೊವೇಕಿಯದಲ್ಲಿ, ರುಮೇನಿಯದಲ್ಲಿ, ಸ್ವಿಸ ಫ್ರಾನ್ಸಗಳಲ್ಲಿ, ಗ್ರೇಟ್ ಬ್ರಿಟನ್‌ನಲ್ಲಿ ಅಲ್ಪಸಂಖ್ಯಾಕರಿದ್ದಾರೆ. ಹಿಟ್ಲರನು ಇವರೆಲ್ಲರ ಹಿತಕಾರಿ ಆಗಿಬಿಟ್ಟರೆ, ಈ ಎಲ್ಲ ಕಡೆಗಳಲ್ಲಿ ತಾಂಡವ ನೃತ್ಯಕ್ಕೆ ಆರಂಭವಾಗುವುದು, ಪ್ರಳಯ ದೃಶ್ಯಗಳು ತೋರಿಬರುವುವು. ಅದ್ದರಿಂದ ಅಲ್ಪಸಂಖ್ಯಾಕ ಪ್ರಶ್ನೆಯನ್ನು ಬಿಡಿಸಲಿಕ್ಕೆ ಹಿಟ್ಲರ ಮುಸಲೋನಿಯರು ತೋರಿಸುವ ಮಾರ್ಗವು ಪ್ರಶಸ್ತವಾಗಿರುವುದಿಲ್ಲ. ಅದಕ್ಕೆ ಬೇರೆಯೇ ಉಪಾಯಗಳನ್ನು ಕಂಡುಕೊಳ್ಳಬೇಕು.

ಹಿಂದುಸ್ಥಾನಕ್ಕೆ ಒಂದು ಪಾಠ

ನಮ್ಮ ದೇಶದಲ್ಲಿ ಮುಸಲ್ಮಾನರು ಒಂದು ಅಲ್ಪಸಂಖ್ಯಾಕ ಜಾತಿಯಾಗಿದ್ದಾರೆ. ಅವರ ಮುಖಂಡರ ತಮ್ಮ ಜಾತಿಗೂ ಸ್ವಾಧಿಕಾರ ಮತ್ತು ಸ್ವಯಂನಿರ್ಧಾರದ ಕನಸು ಕಾಣುತ್ತಾರೆ. ಅವರು ಹಿಟ್ಲರನ ಅನುಕರಣ ಮಾಡತೊಡಗಿದ್ದಾರೆ. ಆ ಮುಖಂಡರು ನಾಜಿಗಳಾಗತೊಡಗಿದ್ದಾರೆ. ದೇಶವು ಎಚ್ಚರವಾಗಬೇಕು. ಜಾತಿಮತದ ಭೇದವಿಲ್ಲದ ಒಂದೊಂದು ರಾಜ್ಯದ ಎಲ್ಲ ಜನರು ಸಮಾನ ಹಕ್ಕು ಅಧಿಕಾರಗಳನ್ನು ಪಡೆಯುವುದು [illegible] ಆದರ್ಶವು ಯಾವಾಗಲೂ ವ್ಯವಹಾರ ಸಾಧ್ಯವಾಗಿರುವುದಿಲ್ಲ. ಅಲ್ಪಸಂಖ್ಯಾಕ ಜಾತಿಗಳಿಗೆ ಅವುಗಳ ಭಾಷೆ ಧರ್ಮ ಸಂಸ್ಕೃತಿಯ ರಕ್ಷಣೋಪಾಯಗಳನ್ನು ಮಾಡಿಕೊಡುವುದು ನ್ಯಾಯ. ಆದರೆ ಅವುಗಳಿಗೆ ಸ್ವಾಧಿಕಾರ ಕೊಡುವುದು ಮೂರ್ಖತನ. [illegible] ಹಕ್ಕು ಕೊಟ್ಟುಬಿಟ್ಟರೆ ಬಹುಸಂಖ್ಯಾಕರಿಗೆ ರಾಜ್ಯಗಳೇ ಉಳಿಯಲಾರವು.

'DILROZ' Regd

Dil Roz' is a sure cure for Oriental sores, [illegible] all kinds of deep-rooted sores, skin eruptions, Pimples, Eczema, Ringworm, Sinus, Fistula, auxillary Abscess.

There is no need of dressing the wounds, nor are baths prohibited.

Price Rs. 2. Postage extra

TAHIR DIN
Amaksh LAHOER

(Regd)

ಅಮೃತಾಂಜನ

ತಲೆವೇದನೆ, ತಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊದಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲಿ ಶಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN-DEPOTS BOMBAY MADRAS CALCUTTA

ಹರ್ ಹಿಟ್ಲರನಿಗೆ ಜಾತಿ ಬಹಿಷ್ಕಾರ

ಧಾರ್ಮಿಕ ದ್ವೇಷ—ಅತ್ಯಾಚಾರ-ಅನಾಚಾರ

ಪೋಪ ಸಾಹೇಬರ ಸಿಟ್ಟು—ಜಾತಿ ಬಹಿಷ್ಕಾರ

ರಷ್ಯದ ಬೊಲ್ಶೆವಿಕರಿಗ ಜಾತಿಯಿಲ್ಲ, ಧರ್ಮವಿಲ್ಲ, ನೀತಿಯಿಲ್ಲ, ನಂಬಿಕೆಯಿಲ್ಲ, ಅಲ್ಲಿ ಪಾದರಿಗಳ ಮೇಲೆ, ಧರ್ಮಾಚಾರ್ಯರ ಮೇಲೆ ಭೀಕರ ಅತ್ಯಾಚಾರಗಳ, ಬೊಲ್ಶೆವಿಕರು ಧರ್ಮ ದ್ವೇಶದಿಂದ ಇಗರ್ಜಿಗಳನ್ನು ಕೆಡವಿಹಾಕಿದರು, ಪ್ರಾರ್ಥನಾಲಯಗಳನ್ನು ಸುಟ್ಟಿಟ್ಟರು. ರಷ್ಯವು ಧರ್ಮಬಾಹಿರ ದೇಶ, ಭೂಲೋಕದ ದೊಡ್ಡ ನರಕಕುಂಡ ಎಂದು ಧರ್ಮಪ್ರಾಣರು ಹೇಳಿದ್ದರು. 'ಅಪ್ಪಾ, ದೇವರೆ! ಪರಲೋಕದಲ್ಲಿರುವ ತಂದೆಯೇ! ರಷ್ಯದ ಸೈತಾನುಗಳಿಂದ ನಮ್ಮ ಧರ್ಮವನ್ನು ಕಾಪಾಡೆ!' ಎಂದು ಅವರು ಪ್ರಾರ್ಥಿಸಿದ್ದರು.

ಹಿಟ್ಲರನ ಅವತಾರ

ಅಷ್ಟಾಗುವಾಗ ಜರ್ಮನಿಯಲ್ಲಿ ಹಿಟ್ಲರನ ಅವತಾರವಾಯಿತು. ದೇವರು ಧರ್ಮಪ್ರಾಣರ ಪೂಜೆ ಪ್ರಾರ್ಥನೆಗಳನ್ನು [illegible] ಅವರ ಪೇಲ [illegible] ತೋರಿದ. ಹಿಟ್ಲರ ಜನ್ಮದಿಂದ ಕ್ರಿಸ್ತ-ರೋಮನ [illegible] ಅವನು ಜರ್ಮನಿಯಲ್ಲಿ [illegible] ವದ ಕ್ರೈಸ್ತರಿಗೂ [illegible] ಸುಪ್ರಸಿದ್ಧ [illegible] ಹಿಟ್ಲರ [illegible]

[illegible] ರನು ಹಿಡಿದರೂ [illegible] ದ್ರಷ್ಟಿಯಿಂದ ಧರ್ಮಬಾಹಿರ ರಷ್ಯವ [illegible] ಅವನ ರಕ್ಷಕ ಸರಿಯಾಗಿ [illegible] ಧರ್ಮಪ್ರಾಣರು ಮನಸ್ಸಿನಲ್ಲಿ [illegible] ತಿಂದರು.

ಇಬ್ಬರದೂ ಒಂದೇ ಪಂಥ!

ಆದರೆ ಈಗ ಪವಿತ್ರ ಧರ್ಮಪ್ರಾಣರ ಆಶ ವ್ಯತ್ಯಾಸಗಳು ಬಿರುಕಿಯಲ್ಲಿ [illegible] ಹೊಂದಿವೆ. ಧಾರ್ಮಿಕದ ಸ್ಪೈನಿನ [illegible] ವಿಕರೂ ನಾಜಿಗಳೂ [illegible] ಕೂತುಕೊಂಡಿದ್ದಾರೆ. [illegible] ಹಿಟ್ಲರನೂ ಧರ್ಮದ್ವೇಷಿಯಾಗಿದ್ದಾನೆ.

ಹಿಟ್ಲರನೀಗ ಪಾದರಿಗಳ ಮೇಲೆ ಅತ್ಯಾಚಾರ [illegible] ಅವರ ಇಗರ್ಜಿ ಪ್ರಾರ್ಥನಾಲಯಗಳನ್ನು [illegible] ಧರ್ಮಪ್ರಾಣರಿಗೆ [illegible] ದು ಕಷ್ಟವಾಗಿದೆ. ಪಾದರಿಗಳ, ಧರ್ಮಾಚಾರ್ಯರುಗಳ ಹಣಕಾಸು, ಭೂಮಿ [illegible] ಗಳನ್ನು ರಾಜಭಂಡಾರಕ್ಕೆ ಸೇರಿಸಿಬಿಟ್ಟಿದ್ದಾನೆ.

ಧರ್ಮದ್ರೋಹಿ ಹಿಟ್ಲರ್!

ಹಿಟ್ಲರನು ಇಷ್ಟರಿಂದಲೇ ತೃಪ್ತನಾಗಿಲ್ಲ. ಅವನ ಹುಟ್ಟು ರೋಮನ ಕೆಥೊಲಿಕನಾಗಿದ್ದರೂ ತನ್ನ ಧರ್ಮಸಿದ್ಧಾಂತಗಳಿಗೆ ವಿರೋಧವಾದ ಆಚರಣೆಯನ್ನು ಇಟ್ಟುಕೊಂಡಿದ್ದಾನೆ. ಜರ್ಮನ ತರುಣರಿಗೆ ಧರ್ಮಸಿದ್ಧಾಂತಗಳಿಗೆ ವಿರೋಧವಾದ ಶಿಕ್ಷಣವನ್ನು [illegible] ಅದ್ದರಿಂದ ಅವರೆಲ್ಲರೂ ಧರ್ಮದ್ರೋಹಿಗಳೂ ಆಗಿದ್ದಾರೆ. ಕ್ರೈಸ್ತರು ಮೂರ್ತಿ ಪೂಜಕರಲ್ಲ. ಆದರೂ ಹಿಟ್ಲರನು ಜರ್ಮನ ಕ್ರೈಸ್ತರಿಗೆ ಮೂರ್ತಿ ಪೂಜೆಯನ್ನು ಕಲಿಸಿಕೊಟ್ಟಿದ್ದಾನೆ.

ಪೋಪರ ಸಿಟ್ಟು

ಇದನ್ನು ಕೇಳಿ ಪೋಪರಿಗೆ ವಿಪರೀತ ಸಿಟ್ಟು ಬಂದಿದೆ. ಅವರು ಹಿಟ್ಲರನ [illegible] ಕೆಂಡ ಕಾರುತ್ತಿದ್ದಾರೆ. ಹಿಟ್ಲರನಿಗೆ ಜಾತಿ ಬಹಿಷ್ಕಾರ ಹಾಕುವ ಆಲೋಚನೆಯನ್ನಿಟ್ಟಿದ್ದಾರೆ. ಧರ್ಮರಕ್ಷಣೆಗಾಗಿ ಇನ್ನೊಬ್ಬನನ್ನು ಕಳುಹಿಸಿಕೊಡು ದೇವಾ! ಎಂದು ಪ್ರಾರ್ಥನೆಗೆ ತೊಡಗಿದ್ದಾರೆ.

ಹಿಟ್ಲರನು ಮಣಿಯುವುದಿಲ್ಲ

ಪೋಪರ ಜಾತಿಬಹಿಷ್ಕಾರದ ಬೆದರಿಕೆಗೆ ಹಿಟ್ಲರನ ಮಾತ್ರ ಮಣಿಯುವುದಿಲ್ಲ. ಅವನಿಗೆ ದೇವರ ಭಯವೇ ಇಲ್ಲದ ಮೇಲೆ ಪೋಪರ ಭಯವೆಲ್ಲಿಯದು? [illegible] ಅವನ [illegible] ಧರ್ಮ [illegible] ಹಿಟ್ಲರ [illegible] ಧರ್ಮ [illegible] ದೇಶ [illegible] ಇದರಿಂದ [illegible] ಯಾಗಿದೆ.

ಧರ್ಮದ ಮೇಲೆ ವಕ್ರದೃಷ್ಟಿ

[illegible] ಅವರದೆ [illegible] ಧರ್ಮ [illegible] ದೇಶ [illegible] ಸಂಸ್ಕೃತಿ [illegible] ಧರ್ಮದಲ್ಲಿ ಜನರಿಗೆ ಶ್ರದ್ಧೆ ಭಕ್ತಿ [illegible] ಎಲ್ಲಾ ಧರ್ಮಗಳೂ, [illegible] ಕ್ರೈಸ್ತ ಧರ್ಮವು ಈಗ [illegible] ಗೆ ಬಂದು ಮುಟ್ಟಿದೆ ಎನ್ನುವರು.

ಧರ್ಮರಕ್ಷಣೆಗೆ ದೇವರು ಬೇಡ

ಧರ್ಮರಕ್ಷಣೆಗೆ ದೇವರು ಬೇಡ. ಧರ್ಮರಕ್ಷಣೆಗೆ ದೇವರನ್ನು ಕೇಳುವ ಸಮಯವು ಇದಲ್ಲ. ಧರ್ಮಾಚಾರ್ಯರೂ, ಧರ್ಮಪ್ರಾಣರೂ ಧರ್ಮದ ಧಾರಣೆಗೆ ನಯಯುಕ್ತಿಯಿಂದ ಧರ್ಮವನ್ನು ದೇಶಕಾಲವರ್ತಿಸ್ಸಿಗೆ ಸರಿಯಾಗಿ ಹೊಂದಿಸಿಕೊಳ್ಳಬೇಕು. ಆಗ ಜನರಿಗೆ ಸ್ವಾಭಾವಿಕವಾಗಿ ಧರ್ಮದಲ್ಲಿ ಶ್ರದ್ಧೆ ಹುಟ್ಟುತ್ತದೆ. ಹಿಟ್ಲರ-ಲೆನಿನರಿಗೆ ಜಾತಿ ಬಹಿಷ್ಕಾರ ಹಾಕುವ ಯೋಚನೆಯೇ ಕೂಡುವುದಿಲ್ಲ. ಅವರು ಕೂಡ ಧರ್ಮಪ್ರಿಯರು ಧರ್ಮನಿಷ್ಠರೂ ಆಗುತ್ತಾರೆ.

ವಿವಿಧ ವಿಷಯಗಳನ್ನರಿಯಲು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ

ನಗಡಿ ಮತ್ತು ಕೆಮ್ಮಿಗೆ

ಯೋಗ್ಯವಾದ ಮದ್ದು

ಕಂಠನಾಳ, ಹೃದಯ, ಶ್ವಾಸಕೋಶಗಳ ನರಳುವಿಕೆಗೆ ಪೆಪ್ಸನಾಕೆಯು [illegible] ಯೋಗ್ಯವಾದ ಶ್ವಾಸದೌಷಧಿಯಾಗಿರುತ್ತದೆ. ಇದರ ಆಶ್ಚರ್ಯಕರವಾದ ಗುಣವು [illegible] ನಾಶಪಡಿಸುವದು [illegible]

ಪೆಪ್ಸ್ [illegible]

[illegible]

ಯಾವಾಗಲೂ ಪೆಪ್ಸನ್ನೇ ಕೊಂಡುಕೊಳ್ಳಿರಿ

PEPS

ವಿಷಹಾರಿ ಶ್ವಾಸನೀಯ ವಟಾಕ್ರೆಗಳು

ಒಂದು ಬಾರಿ ಪರೀಕ್ಷಿಸಿರಿ!

[illegible]

ಸಾರಥಿ ನಸ್ಯವು ಬಣ್ಣದಲ್ಲಿಯೂ, ರುಚಿಯಲ್ಲಿಯೂ, ಒಳ್ಳೆದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದು.

[illegible]

ಏಜೆಂಟರು ಬೇಕಾಗಿದ್ದಾರೆ

[illegible] ಸಾರಥಿ

ಮೆನ್ಯುಫೆಕ್ಚರರ್ಸ್ ಒಫ್ [illegible] ನಂಬ 47 [illegible]

PAPAYA

[illegible] home with [illegible] Nature [illegible] papaya [illegible] melon-like fruit [illegible]

Centuries ago explorers found Brazilian natives [illegible] meat by smearing it with the yellow-orange flesh and black seeds of the then wholly unknown fruit. It had a somewhat unattractive juice but a delightful flavour and science soon found that beyond its delicious taste it contained a digestive principle now known as papain. To-day this is commercially extracted as it is almost the only vegetable source of a substance closely allied to pepsin.

We never see these fruits in northern markets for it will not stand transportation, but every tropical country knows it, and in most of them it grows best along moist and steaming lowlands. Growing it is easy, and because it is medicinal and delicious it has become one of the best liked of all tropical products.

[illegible] drawback [illegible] living depend [illegible] Nature is [illegible] regions where papaya [illegible] best.

At [illegible] taken in the [illegible] regions through the tropical [illegible] market. With them [illegible] papaya [illegible] native [illegible] malaria. One longs to tell him that growing delicious and beneficial fruits need not be the [illegible] Mosquitoes and malaria make a tough combination to beat. But it has been done and the papaya grower should listen to the [illegible] voice of the experts at Geneva.

The Malaria commission of the League of Nations says that six grains of quinine a day will prevent Malaria, and if one neglects the precaution, a daily dose of 15 grains to 20 grains of quinine during 5 to 7 days, will cure this scourge of papaya growers.

M. Feo. No. 153

ಭೂಮಿಯ ನಿರ್ಮಾಣ ಕಾಲ

ದೇವರು-ಪರಲೋಕದಲ್ಲಿರುವ ತಂದೆಯು-ಭೂಮಿಯನ್ನೂ ಅದರ ಮೇಲಿರುವ ಸಮಸ್ತ ಜೀವಿಗಳನ್ನೂ ಮನುಷ್ಯರನ್ನೂ ಸೃಷ್ಟಿಸಿದನು ಭೂಮಿಯಲ್ಲಿರುವ ಜೀವಿಗಳ ಉಪಯೋಗಕ್ಕಾಗಿಯೇ ಅವನು ಸೂರ್ಯ ಚಂದ್ರರನ್ನೂ, ನಕ್ಷತ್ರಗಳನ್ನೂ ನಿರ್ಮಿಸಿದನು ಸೂರ್ಯನೂ ಚಂದ್ರನೂ ಭೂಮಿಯ ಸುತ್ತು ತಿರುಗಿ ಹಗಲು ರಾತ್ರಿಗಳಲ್ಲಿ ಪ್ರಕಾಶವನ್ನು ಕೊಡುತ್ತಾರೆ-ಎಂದು ಮೊದಲಾಗಿ ಪ್ರಾಚೀನಕಾಲದ ಜನರ ತಿಳುವಳಿಕೆಯಾಗಿತ್ತು ದೇವರು ಭೂಮಿಯನ್ನು ನಿರ್ಮಿಸಿ ಎಷ್ಟು ಕಾಲವಾಯಿತು? ಯೇಸುವು ಹುಟ್ಟುವ 4004 ವರ್ಷಗಳ ಮೊದಲು ಭೂಮಿಯಾಯಿತೆಂದು ಬ್ಯಾಬಲಿನಲ್ಲಿ ಹೇಳಿದೆ. ಅಂದರೆ, ಬ್ಯಾಬಲನ್ನು ಬರೆದವರ ಅಭಿಪ್ರಾಯದ ಮೇರೆಗೆ ಭೂಮಿಯು ಆಗಿ ಇಂದಿಗೆ ಕೇವಲ 5942 ವರ್ಷಗಳು ತಾನೇ ಆದುವು ಸೂರ್ಯನು ಭೂಮಿಯ ಸುತ್ತು ತಿರುಗುವದೆಂಬ-ಭೂಮಿಯು ನಿರ್ಮಾಣವಾಗಿ 5942 ವರ್ಷಗಳು ತಾನೇ ಆದುದೆಂಬ-ಇವೇ ಮೊದಲಾದ ಅಭಿಪ್ರಾಯಗಳು ಎಷ್ಟು ಸುಳ್ಳಾಗಿವೆ ಎಂಬುದು ಈಗಿನ ವೈಜ್ಞಾನಿಕ ಶೋಧಗಳಿಂದ ಗೊತ್ತಾಗುತ್ತದ

ಭೂಮಿಯು ಒಂದು ಸ್ವತಂತ್ರ ವಸ್ತುವಲ್ಲ

ಭೂಮಿಯು ಒಂದು ಸ್ವತಂತ್ರ ವಸ್ತುವಲ್ಲ. ಸೂರ್ಯನು ತನ್ನ ಪಥದಲ್ಲಿ ತನ್ನ ಸ್ವಸುತ್ತು ತಿರುಗುತ್ತಿರುವಾಗ ಅದರಿಂದ ಸಿಡಿದು ಹೋದ ಒಂದು ತುಂಡು ಭೂಮಿಯ ಆಕಾರವನ್ನು ತಳೆಯಿತು. ಹಾಗೆಯೇ ಬುಧ, ಗುರು ಮೊದಲಾದ ಗ್ರಹಗಳಾದುವು. ಈ ಗ್ರಹಗಳು ತಮ್ಮ ಪಥದಲ್ಲಿ ಸೂರ್ಯನ ಸುತ್ತು ತಿರುಗುತ್ತಿರುವಾಗ ಸಿಡಿದುಹೋದ ತುಂಡುಗಳೇ ಚಂದ್ರರು ಅಥವಾ ಉಪಗ್ರಹಗಳೆನ್ನಿಸಿದುವು. ಆದ್ದರಿಂದ ಸೂರ್ಯನು ಭೂಮಿಯ ಸುತ್ತು ತಿರುಗುವುದಲ್ಲ ಭೂಮಿಯೇ ಸೂರ್ಯನ ಸುತ್ತು ತಿರುಗುವುದಾಗಿದೆ

ಭೂಮಿಯ ನಿರ್ಮಾಣಕಾಲ

ಅದು ಯಾವದೆಂದು ನಿಶ್ಚಯವಾಗಿ ಹೇಳಬೇಕಾಗುವುದಿಲ್ಲ ಅಂತೂ ಅದು ಕೇವಲ ೬೦೦೦ ವರ್ಷಗಳ ಹಿಂದೆ ತಾನೆ ಆಯಿತೆಂದು ಬ್ಯಾಬಲಿನಲ್ಲಿ ಹೇಳಿರುವುದು ಅಜ್ಞಾನದ ಪರಮಾವಧಿಯಾಗಿದೆ ಒಂದು ದಿನ ಇಬ್ಬರು ಕ್ರೈಸ್ತ ಮಹಿಳೆಯರು ಲಂಡನಿನಲ್ಲಿರುವ ಲೋಕಪ್ರಸಿದ್ಧ ವಸ್ತುಸಂಗ್ರಹಾಲಯವನ್ನು ನೋಡಲಿಕ್ಕೆ ಹೋಗಿದ್ದರು ಅದರಲ್ಲಿ ಪ್ರದರ್ಶನಕ್ಕೆ ಇಟ್ಟಿರುವ ಒಂದಾನೊಂದು ವಿಚಿತ್ರ ಕಲ್ಲನ್ನು ಕಂಡು ಅವರಿಗೆ ಪರಮಾಶ್ಚರ್ಯವಾಯಿತು "ಅಕ್ಕಾ! ಇಲ್ಲಿ ನೋಡು-ಈ ಕಲ್ಲು ೧೦೦೦೦ ವರ್ಷಗಳ ಹಿಂದಿನದಂತೆ! ಭೂಮಿ ಹುಟ್ಟುವ ಮೊದಲೇ ಈ ಕಲ್ಲು ಹುಟ್ಟಿರಬೇಕು!" ಎಂದು ಒಬ್ಬಳು ಇನ್ನೊಬ್ಬಳೊಡನೆ ಹೇಳಿದಳು. ಬ್ಯಾಬಲನ್ನು ಓದಿ ಅದನ್ನೇ ಸತ್ಯ ವೇದವೆಂದು ನಂಬಿದ ಪಾಪದ ಮಹಿಳೆಯರಿಗೆ, ಭೂಮಿಯು ಹುಟ್ಟುವ ಮೊದಲು ಕಲ್ಲು ಹೇಗೆ ಹುಟ್ಟುವುದು, ಮತ್ತು ಅದು ವಸ್ತುಸಂಗ್ರಹಾಲಯದಲ್ಲಿ ಹೇಗೆ ಬರುವುದು ಎಂಬುದು ಹೊಳೆಯಲಿಲ್ಲ, ಅಂಧಶ್ರದ್ಧೆಯೆಂದರೆ ಹೀಗಿರುವುದು!

ಹೇಲೆಯ ಶೋಧ

ಹದಿನೇಳನೆ ಶತಮಾನದ ಮಧ್ಯಕಾಲದಲ್ಲಿ ಹೇಲೆ ಎಂಬ ಒಬ್ಬ ಪ್ರಸಿದ್ಧ ಇಂಗ್ಲಿಷ್ ಶಾಸ್ತ್ರಜ್ಞನು ಇದ್ದನು ಅವನೇ [illegible] ಮೊತ್ತ ಮೊದಲು ಹೇಲೇ ಗ್ರಹವನ್ನು [illegible] ದನು. ಭೂಮಿಯ ಪ್ರಾಯವನ್ನು ಸಮುದ್ರದ ಉಪ್ಪಿನ ಪರಿಮಾಣದಿಂದ ತಿಳಿಯಬಹುದೆಂದ ಸೂಚಿಸಿದನು ಆರಂಭ ಕಾಲದಲ್ಲಿ ಸಮುದ್ರದ ನೀರೆಲ್ಲ ಬಾವಿನೀರಿನಂತೆ ಸಿಹಿಯಾಗಿಯೇ ಇದ್ದಿತು ಆದರೆ ನದಿಗಳ [illegible] ಸಮುದ್ರಕ್ಕೆ [illegible] ದ ಹಾಗೆ, ಅದು ಭೂಮಿಯ ಮಣ್ಣನ್ನು ಸಮುದ್ರಕ್ಕೆ ಸಾಗಿಸ [illegible] ವುದು. ಈ ಮಣ್ಣಿನಲ್ಲಿ ಉಪ್ಪು ಇದೆ ನದಿಯ ಉಪ್ಪುಮಣ್ಣನ್ನು ನೀರಿನೊಂದಿಗೆ ಸಮುದ್ರಕ್ಕೆ ಸಾಗಿಸಿದ ಹಾಗೆ ಮಣ್ಣು ಸಮುದ್ರದ ತಳವನ್ನು ಸೇರುವುದು ಉಪ್ಪು ಸಮುದ್ರ ನೀರಿನಲ್ಲಿ ಕೂಡಿ [illegible] ವುದು ಹೀಗೆ ಸಮುದ್ರವು ಉಪ್ಪಾಯಿತೆಂದು ವಿಜ್ಞಾನಿಗಳು ಹೇಳುವರು ಈ ರೀತಿ ಭೂಮಿಯ ಮೇಲಿರುವ ಎಲ್ಲಾ ನದಿಗಳು ಸಮುದ್ರಕ್ಕೆ ಸಾಗಿಸುವ ಉಪ್ಪು ವರ್ಷಕ್ಕೆ [illegible] ೧೨,೬೦೦ ಮಿಲಿಯ ಟನ್ನುಗಳಾಗುತ್ತದೆ ಎಲ್ಲಾ ಸಮುದ್ರಗಳ ನೀರೊಳಗಿರುವ ಉಪ್ಪು ಎಷ್ಟಾಗುತ್ತದೆಂಬುದನ್ನು ಅಂದಾಜು ಮಾಡಿದ್ದಾರೆ ಈ ರೀತಿ ಗುಣಿಸಿ ಶೋಧಿಸಿ ನೋಡುವಾಗ ಭೂಮಿಯ ಪ್ರಾಯವು ಈಗ ೯೦ ಮಿಲಿಯ ವರ್ಷಗಳಾದರೂ ಆಗಿರಬೇಕೆಂದು ಹೇಳುತ್ತಾರೆ ಕೆಲವರು ೩೦೦ ಮಿಲಿಯ ವರ್ಷಗಳಾದರೂ ಆಗಿರಬಹುದೆನ್ನುತ್ತಾರೆ!

ಇನ್ನೊಂದು ರೀತಿಯಿಂದ

ಭೂಮಿಯ ಪ್ರಾಯವನ್ನು ಮತ್ತೊಂದು ರೀತಿಯಿಂದಲೂ ಅಂದಾಜು ಮಾಡುತ್ತಾರೆ ಭೂಮಿಯ ಮೇಲೆ ದೊಡ್ಡ ದೊಡ್ಡ ಬಂಡೆಗಳಿವೆಯಷ್ಟೆ. ಇವು ಒಮ್ಮಿಂದೊಮ್ಮೆಗೆ ಆದವುಗಳಲ್ಲ ಕೆಸರುಮಣ್ಣು ವರ್ಷ ವರ್ಷ ಒಂದು ತರದ ಮೇಲೆ ಇನ್ನೊಂದು ತರ ಬೀಳುತ್ತ ಗಟ್ಟಿಯಾಗಿ ಬಂಡೆಗಳಾದುವು. ಹೀಗೆ ಆದ ಬಂಡೆಗಳ ಎತ್ತರವು ಪ್ರಪಂಚದ ಕೆಲವು ಭಾಗಗಳಲ್ಲಿ ೩೦೦,೦೦೦ ಅಡಿಗಳಷ್ಟು ಇರುತ್ತದೆ. ಒಂದು ಅಡಿ ಎತ್ತರದ ಮಣ್ಣು ಬೀಳಬೇಕಾದರೆ ೫೦೦ ವರ್ಷಗಳು ಬೇಕೆಂದು ತಿಳಿದರೆ, ಇಷ್ಟು ಎತ್ತರದ ಬಂಡೆಯಾಗಲು ೧೫೦ ಮಿಲಿಯ ವರ್ಷಗಳು ಬೇಕಾಗುವುವು ಭೂಮಿಯು ಈ ಬಂಡೆಗಳಾಗುವ ಮೊದಲೇ ಇರಬೇಕು. ಆದ್ದರಿಂದ ಈ ರೀತಿಯಿಂದಲೂ ಕೂಡ ಭೂಮಿಯ ಪ್ರಾಯವು ೧೫೦ ಮಿಲಿಯ ವರ್ಷಗಳಿಗೆ ಕಡಿಮೆಯಾಗುವುದಿಲ್ಲ

ಕೆಲ್ವಿನನ ಹೇಳಿಕೆ

ಭೂಮಿಯು ಸೂರ್ಯನಿಂದ ಸಿಡಿಯುವಾಗ ಅದರ ತಾಪ ಮಾನವು ಸೂರ್ಯನಲ್ಲಿದ್ದಷ್ಟೇ ಇತ್ತು ಕ್ರಮೇಣ ಅದರ ಮೇಲ್ಮೈ ಆರುತ್ತ ಬಂದು ಅದಕ್ಕೆ ಈಗಿನ ಸ್ವರೂಪವು ಬಂದಿದೆ ಅದರ ಒಳಗೆ ಈಗಲೂ ಉರಿಯುತ್ತಿರುವುದನ್ನು ಜ್ವಾಲಾಮುಖಿಗಳಿಂದ ತಿಳಕೊಳ್ಳಬಹುದು ಈಗ ಒಂದು ವರ್ಷದಲ್ಲಿ ಭೂಮಿಯ ತಾಪಮಾನವು ಎಷ್ಟು [illegible] ಯಾಗುತ್ತದೆ [illegible] ಬುದನ್ನು ತಿಳಿದರೆ [illegible] ವನ್ನು ಗೊತ್ತುಹಚ್ಚಲಿಕ್ಕೆ ಆಗುತ್ತದೆ. ಲಾರ್ಡ್ ಕೆಲ್ವಿನ ಎಂಬವನು ಈ ರೀತಿ ಲೆಕ್ಕಮಾಡಿ ಭೂಮಿಯು ಆಗಿ ಕನಿಷ್ಠ ೨೦ ಮಿಲಿಯ ವರ್ಷಗಳಾದರೂ ಆಗಿರಬೇಕೆಂದು ಹೇಳಿದ್ದಾನೆ

ರೇಡಿಯಂ ವಿಧಾನ

ಭೂಮಿಯಲ್ಲಿ ರೇಡಿಯಂ [illegible] ಧಾತುಗಳು ದೊರೆಯುತ್ತವೆ ಇವು ಒಂದು [illegible] ಗಿವೆ [illegible] ಅತಿಶಯವಾದ [illegible] ವನ್ನು ಕೊಡುತ್ತ [illegible] ಇವು ಒಂದಾನೊಂದು ಕಾಲದಲ್ಲಿ [illegible] ಲೋಹದ ರೂಪವನ್ನು [illegible] [illegible]

ಈ ರೀತಿಯಲ್ಲಿ ಭೂಮಿಯ ಮೇಲಿದ್ದ ರೇಡಿಯಂ ಧಾತುವು ಸೀಸವಾಗಲಿಕ್ಕೆ ಕನಿಷ್ಠ ೩೦೦೦ ಮಿಲಿಯ ವರ್ಷಗಳಾದರೂ ಬೇಕಾಗುವುವು. ಆದ್ದರಿಂದ ಕೆಲವು ವೈಜ್ಞಾನಿಕರ ಅಭಿಪ್ರಾಯದ ಮೇರೆಗೆ ಭೂಮಿಯು ಆಗಿ ೩೦೦೦ ಮಿಲಿಯ ವರ್ಷಗಳಾದರೂ ಆಗಿರಬೇಕು

ಭೂಮಿಯ ಮೇಲಿನ ಸೃಷ್ಟಿಕ್ರಮ

ಭೂಮಿಯ ಮೇಲಿನ ಸೃಷ್ಟಿಯು ಒಂದೇ ದಿನ ಒಂದೇ ಸಮಯಕ್ಕೆ ಆದುದಲ್ಲ ಮೊದಲು ಭೂಮಿಯು ಸೂರ್ಯನಂತೆಯೇ ಉರಿಯುತ್ತಿದ್ದ, ಅದು ಯಾವ ಜೀವಿಗಳ ಇರುವಿಕೆಗೂ ಅನುಕೂಲವಾಗಿರಲಿಲ್ಲ ಕ್ರಮೇಣ ಅದು ಆರುತ್ತ ಬಂದು ಅದರಲ್ಲಿ ನೀರು-ಮಣ್ಣು ಆಯಿತು. ಮೊದಲು ನೀರಿನಲ್ಲಿ ಅಂತರಗಂಗೆ-ಪಾಚಿಯ ಜಾತಿಯವು ಹುಟ್ಟಿದವು ಅನಂತರ ಕ್ರಮವಾಗಿ-ಕೆಲಕೆಲವು ಮಿಲಿಯಾಂತರ ವರ್ಷಗಳು ಕಳೆದ ಹಾಗೆ ಸಮುದ್ರದಲ್ಲಿ ಮೀನುಗಳು, ನೆಲದ ಮೇಲೆ [illegible] ಅನಂತರ ಇತರ [illegible] ಚರಗಳು, ಕಟ್ಟಕಡೆಗೆ ಮನುಷ್ಯನು ಹುಟ್ಟಿದನು ಎನ್ನುತ್ತಾರೆ ಭೂಮಿಯ ಮೇಲಿರುವ ಅತಿ ಪುರಾತನ [illegible] ೯೦೦ ಮಿಲಿಯ ವರ್ಷಗಳ ಹಿಂದಿನ ಪರ್ವತಗಳ ಬಂಡೆಗಳ ಮೇಲೆ [illegible] ದಲ್ಲಿದ್ದ ಪ್ರಾಣಿ-ಜೀವಿಗಳ ಅವಶೇಷ [illegible] ಈ ಪ್ರಕಾರ ಲೆಕ್ಕ ಮಾಡಿದರೆ [illegible] ಭೂಮಿಯ ಪ್ರಾಯವು ಈಗ [illegible] ಮಿಲಿಯ ವರ್ಷಗಳು [illegible] ಹೇಳಬಹುದು

ಒಂದೊಂದು ರೀತಿಯಲ್ಲಿ ಒಬ್ಬೊಬ್ಬರು ಹೇಳುತ್ತಾರೆ

[illegible] ಮಾಡ [illegible] ನಿಶ್ಚಿತ ಮಾತಿನಿಂದ ಹೇಳಲಿಕ್ಕೆ [illegible] ಈ ವಿಷಯ [illegible] ವೈಜ್ಞಾನಿಕ ಅಭಿಪ್ರಾಯವು [illegible] ಆಗಿರುವುದ [illegible] [illegible]



DIAMONDS! DIAMONDS
BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

[illegible] ವಜ್ರಗಳು [illegible] ಧಾರಣೆಗೆ [illegible] ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ [illegible]

ನಮ್ಮಲ್ಲಿ [illegible] ಪರೀಕ್ಷಿಸಿ ನೋಡಿದರೆ ನಮ್ಮ ವಜ್ರಗಳ ಉತ್ಕೃಷ್ಟ ಜಾತಿ, ಸಲ್ಲಕ್ಷಣಗಳು ತಾನಾಗಿಯೇ ತಿಳಿದು ಬರುವುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಶ್ರೀ

ಮಹಾಶಿವರಾತ್ರಿ ಪೂಜಾ ಮಹೋತ್ಸವದ ಸಲುವಾಗಿ

ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೋಸ್ಕರ

ಅತ್ಯಪೂರ್ವ ಸಂದರ್ಭ! **ಅಪೂರ್ವ ರಿಯಾಯತಿ!!**

ತಾ **3-2-1939**ರಿಂದ **5-3-1939**ರ ವರೆಗೆ ಮಾತ್ರ

ಸೇಕಡಾ 33 ರಿಯಾಯತಿ ದರದಲ್ಲಿ ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೆ ಮಾತ್ರ ರಿಟರ್ನ್ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

ಇದೇ ಬರುವ ತಾರೀಕು 17—2—1939ರಲ್ಲಿ ಶ್ರೀ ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥೇಶ್ವರ ದೇವರ ಸನ್ನಿಧಿಯಲ್ಲಿ ಜರಗುವ ಶ್ರೀ ಮಹಾಶಿವರಾತ್ರಿ ಮಹೋತ್ಸವಕ್ಕೆ ಬಂದು ಹೋಗತಕ್ಕ ಯಾವತ್ತು ಯಾತ್ರಾರ್ಥಿಗಳಿಗೆ ನಮ್ಮ ಬಸ್ಸುಗಳ ಯಾವತ್ತು ಸೇವನುಗಳಿಂದ ಧರ್ಮಸ್ಥಳಕ್ಕೆ ಹೋಗತಕ್ಕ ಯಾತ್ರಾರ್ಥಿಗಳಿಗೆ ಮಾತ್ರ ಸೇಕಡಾ 33 ರಿಯಾಯತಿಯಿಂದ ರಿಟರ್ನ್ ಟಿಕೇಟುಗಳನ್ನು ಕೊಡುವಂತೆ ಏರ್ಪಾಡನ್ನು ಮಾಡಿರುವೆವು

N. B. [illegible]

ಇಂತಹ ಅತ್ಯಪೂರ್ವ ಸಂದರ್ಭವನ್ನು ಕಳಕೊಳ್ಳದಿರಿ!

JOINT MANAGERS.

The Combined Booking Agency,
MANGALORE.

The Joint Booking Office,
KODIALBAIL.

ಇಂಡಿಯಾದ ಅತ್ಯುತ್ತಮ ಸಾಬೂನು

ನಂಬಿದರೆ ನಂಬಬಹುದು

ಆದರೆ ಅತ್ಯುತ್ತಮ ಸುಗಂಧಪೂರಿತ

ಸ್ವಸ್ತಿಕಾ **ಕಾಂತಿ** ಟೋಯಿಲೆಟ್

ಸಾಬೂನನ್ನು ಒಂದು ಸಲ ಉಪಯೋಗಿಸಿದವರು ಎಂದೆಂದಿಗೂ ಇತರ ಯಾವ ಸಾಬೂನನ್ನೂ ಉಪಯೋಗಿಸಲು ಇಚ್ಛಿಸಲಾರರು!

'ಕಾಂತಿ' ಸಾಬೂನನ್ನು [illegible] ದ ಎಲ್ಲಾ ಕಡೆಗಳಲ್ಲಿಯೂ [illegible] ರ [illegible]

ಎಲ್ಲಾ ಕಡೆಗಳಲ್ಲೂ ಮಾರಲ್ಪಡುತ್ತದೆ.

ಅತ್ಯುತ್ತಮ [illegible] ಆಯಿಲ್ ಎಲ್ಲಾ ಜನರ ಮನಸ್ಸನ್ನು ಸೆಳೆಯುವುದು!

ದಿಲ್ ಕುಷ್ ಹೇರ್ ಆಯಿಲ್

[illegible]

ಕ್ರಯ: 6 ಔನ್ಸ್ ಶೀಸೆಗೆ 0—12—0
,, 12 ,, ,, 1 4 0

ರುಬಿ ಪೇಮಿನ್ ಬಾಮ್

[illegible] ಉಡುಪಿಯಲ್ಲಿ ಏಜೆಂಟರು ಬೇಕು

ಏಜೆಂಟ್ಸ್—

ಷಾ ಕಂಪೆನಿ, ಮಂಗಳೂರು.

CONSTRUCTIVE BANKING

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore.

And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OVER A CRORE.

ESTD 1906
CANARA BANK, LIMITED.

ಸ್ವದೇಶಾಭಿಮಾನಿ

stablished 1906 Regd. No. M

ಸಂಪುಟ ೩೩] ತಾರೀಖು ೨೭-೧-೧೯೩೯ (27-1-1939) [ಸಂಚಿ

THE

Bombay Life Assurance Company, Ltd.,

(ESTD: 1908.)

45-47 Churchgate Street, Fort-BOMBAY.

Evidence of

PROGRESS, SECURITY & STABILITY.

Year	New Business completed	Premium Income	Life Fund	Business in force
1931	73,00,000	11,00,000	33,00,000	2,27,00,000
1934	1,04,00,000	19,00,000	58,00,000	3,71,00,000
1937	1,40,00,000	31,00,000	95,00,000	6,00,00,000

The Company offers all that is best and up-to-date in

LIFE ASSURANCE.

Applications for agencies will be consid[illegible] from Honest & Respectable LADIES & GENTLEMEN.

For full particulars apply to any of our following Offices:—

Kochikar Brothers, Limited,
Madras Branch Secretaries,
Bombay Life Building, UDIPI (S India).

(1) Visveswarapuram Circle, Bangalore City (2) Car Street, Mangalore. (3) Puthiyara, Calicut. (4) Charni Road, Girgaum, Bombay No. 4 (5) P. B. 357 Mount Road, Madras. (6) Ottapalam, S. Malabar. (7) Central Station Road, Trivandrum.

MAKE LIFE WORTH-LIVING!

Indigestion Insomnia — Dry Cough
Nervousness Weak Heart &c.
these make you wiery of Life!

CONSULT US AND BY
YOUR LIFE'S HAPPINESS!

Oils — that cool the brain and induce sleep.
Lehas — that build-up your wasted system.
Asavas — that regenerate your jaded nerves.

All Genuine Ayurvedic Preparations-
-from this huge Ayurvedic Concern of a Century's Standing—

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು -
ನರಗಳ ಅಬಲತೆ - ದುರ್ಬಲ ಹೃತ್ಕೋಶ - ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ - ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ — ತೈಲಗಳು
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ — ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ಸತ್ತ್ವರನ್ನು ಹರಿಸುವ — ಆಸವಗಳು
ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, - ದ. ಕನ್ನಡ
(ಬ್ರಾಂಚ್: ಕುಮಟ, ಉತ್ತರ ಕನ್ನಡ.)

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

Swadeshabhimani. Estd 1906

Date 3 [illegible] 1939



ಕಾಶೀಕ್ಷೇತ್ರದ ಒಂದು [illegible]

ಸಚಿತ್ರ ವಾರ ಪತ್ರಿಕೆ

ಸ್ವದೇಶಾಭಿಮಾನಿ

stablished 1906 **Regd. No M 3406**

ಸಂಪುಟ ೩೩] ತಾರೀಖು ೨೭ ೧–೧೯೩೯ (27–1–1939) [ಸಂಚಿಕೆ ೪

THE

Bombay Life Assurance Company, Ltd.,

(Estd 1908)

45-47 Churchgate Street, Fort-BOMBAY.

Evidence of

PROGRESS, SECURITY & STABILITY.

Year	New Business completed	[illegible]	[illegible]	[illegible]
[illegible]	[illegible]	[illegible]	[illegible]	[illegible]
1931	[illegible]	[illegible]	[illegible]	[illegible]
1937	1,4[illegible],00,000	31,06,000	[illegible]	[illegible],00,00,00[illegible]

The Company offers all that is best and up to-date in

LIFE ASSURANCE.

Applications for agencies will be considered from Honest & Respectable LADIES & GENTLEMEN.

For full particulars apply [illegible]

Kochikar Brothers Limited,

[illegible] Secretaries

Bombay Life Building, UDIPI (S India)

(1) [illegible]

MAKE LIFE WORTH-LIVING!

Indigestion Insomnia Dry Cough
Nervousness Weak Heart &c
these make you weary of Life!

CONSULT US AND BY
YOUR LIFE'S HAPPINESS!

Oils – [illegible]
Lehas – [illegible]
Asavas – [illegible]

All Genuine Ayurvedic Preparations-
-from this huge Ayurvedic Concern of a Century's Standing—

Bhuvanendra Products, Ltd.,
Katapady, S. Kanara.

(BRANCH—KUMTA N KANARA)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ ನಿದ್ರಾವಿಹೀನತೆ ಒಣ ಕೆಮ್ಮು
ನರಗಳ ಅಬಲತೆ ದುರ್ಬಲ ಹೃತ್ಕೋಶ ಇವುಗಳು
ಜೀವನದಲ್ಲಿ ನೈರಾಶ್ಯವನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ ನಿಮ್ಮ ಜೀವಮಾನದ ಆನಂದ
ವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆಕೊಡುವ – ತೈಲಗಳು
ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ ಲೇಹಗಳು
ನಿಶ್ಶೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ – ಆಸವಗಳು
ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ ಕನ್ನಡ

(ಬ್ರಾಂಚ್. ಕುಮುಟ, ಉತ್ತರ ಕನ್ನಡ)

Edited, Printed & Published by A S Kamath at the Sharada Press Car Street Mangalore

ಸ್ವದೇಶಾಭಿಮಾನಿ

Swadeshabhimani. Estd 1906

Date 3 2 1939



ಸಚಿತ್ರ ವಾರ ಪತ್ರಿಕೆ

ಮುಸ್ಲಿಂ ಲೀಗ್ ವಾರ್ತೆಗಳು

ಮುಸ್ಲಿಮುಲೀಗಿನ ಕಮಿಟಿಯು ಗೊತ್ತುಪಡಿಸಿದ ಕೆಲಸ

(೨೯ ಜನವರಿ)

ಮುಸ್ಲಿಮರು ಅಲ್ಪ-ಸಂಖ್ಯಾತರಾಗಿರುವ ಪ್ರಾಂತ್ಯಗಳಲ್ಲಿನ ಲೀಗ್ ಶಾಖೆಗಳು–ಅಸ್ಸಾಮು ಬಂಗಾಳ ಮತ್ತು ಸಿಂಧ, ಪಂಜಾಬ, ಗಡಿನಾಡುಗಳಿಗೆ ಕಳುಹಲಾಗುವ ಪ್ರತಿನಿಧಿ ಮಂಡಲದಲ್ಲಿ ಸೇರಲು ಬೇರೆ ತಮ್ಮ ಪ್ರತಿನಿಧಿಗಳ ಹೆಸರುಗಳನ್ನು ಸೂಚಿಸಬೇಕೆಂದಾಯಿತು. ಈ ಪ್ರತಿನಿಧಿಗಳು ನಾಳಿನ ಎಪ್ರಿಲ್‌ನಲ್ಲಿ ಆಯಾ ಪ್ರಾಂತ್ಯಗಳಲ್ಲಿ ಒಂದೊಂದು ವಾರ ಸಂಚರಿಸಬೇಕೆಂದೂ ನಿರ್ಧಾರವಾಯಿತು

ಪರರಾಷ್ಟ್ರಗಳಿಗೆ ಪ್ರತಿನಿಧಿಗಳನ್ನು ಕಳುಹುವ ವಿಚಾರದಲ್ಲಿ,–ಪತ್ರಿಕೆಗಳೊಡನೆ ಸಂಬಂಧ ಬೆಳೆಯಿಸಿಕೊಂಡು, ಪ್ರಮುಖರೊಡನೆ ಪತ್ರವ್ಯವಹಾರ ನಡೆಯಿಸಿ, ಅಫಗಾನಿಸ್ಥಾನ, ಇರಾನ, ಸಿರಿಯಾ, ನೆಜ್ದ ಹೆಜಾಜ್, ಇಜಿಪ್ತ, ತುರ್ಕಿ, ಮೊರೊಕ್ಕೊ, ಟ್ಯುನಿಸ್, ಜರ್ಮನಿ, ಇಟಲಿ, ಚೀನಾ, ಜಪಾನು, ಇಂಗ್ಲಂಡುಗಳಲ್ಲಿ ಮುಸ್ಲಿಮು ಲೀಗ್ ವಿಷಯು ಮುಂದೆ ಪ್ರಚಾರ ಮಾಡಲು ಅನುಕೂಲತೆ ನೋಡಿಕೊಳ್ಳಬೇಕೆಂದೂ ಸೂಚನೆ

ಇದಾದ ಬಳಿಕ, ಇಬ್ಬರು ಅಥವಾ ಹೆಚ್ಚು ಮಂದಿ ಆ ದೇಶಗಳಿಗೆ ತೆರಳಿ, ಅಲ್ಲಿನ ಸ್ಥಿತಿಗಳನ್ನು ಪರಾಂಬರಿಸಿ, ಒಂದು ವರದಿ ಒರೆದುಕೊಳ್ಳಬೇಕೆಂದೂ, ಅದನ್ನುನೋಡಿ ಮುಂದೆ ಪ್ರಮುಖರದೊಂದು ಪ್ರತಿನಿಧಿಕೂಟವನ್ನು ಕಳುಹಬೇಕೆಂದೂ ನಿಶ್ಚಯಿಸಲಾಯಿತು

ಫೆಡರೇಶನ್ ವಿಚಾರದಲ್ಲಿ, ಹಿಂದೀ ಮುಸ್ಲಿಮರು ಹೇಗೆ ನಡೆದುಕೊಳ್ಳತಕ್ಕುದೆಂದು ಚರ್ಚಿಸಲಾಯಿತು.

ಶ್ರೀ ಜಿನ್ನಾರವರು—ಬ್ರಿಟಿಷ ಮುಖ್ಯಮಂತ್ರಿಗಳಿಗೂ, ಇಂಡಿಯಾ ಸಕ್ರೆಟರಿಯವರಿಗೂ ವಸಾಹತುಗಳ ಸೆಕ್ರೆಟರಿಯವರಿಗೂ ಹೀಗೆ ತಂತೀವಾರ್ತೆ ಕಳುಹಿಸಿರುವರು. "ಮುಸ್ಲಿಮ ಲೀಗಿಗೆ ಪೆಲೆಸ್ತೀನ ಸಮಸ್ಯೆಯನ್ನು ಈ ರೀತಿಯಾದ ಪರಿಷತ್ತಿನಲ್ಲಿ ಪ್ರಾತಿನಿಧ್ಯ ಕೊಡಬೇಕು, ಅರಬರು ಕೇಳಿಕೊಂಡಿರುವುದನ್ನು ಸಲ್ಲಿಸಲಿಕ್ಕಾಗಬೇಕು, ಪರಿಷತ್ತಿನ ಫಲವನ್ನು ಕಾತುರದಿಂದ ಕಾಯುತ್ತಿರುವೆನು ಈ ಪರಿಷತ್ತು ವ್ಯರ್ಥವಾದರೆ, ಜಗತ್ತಿನ ಮುಸ್ಲಿಮರಿಗೆ ಕ್ಲೇಶವುಂಟಾಗುವುದು ಇದರ ಪರಿಣಾಮಗಳು ಭಯಂಕರವಾದಾವು"

ಇಡೀ ಹಿಂದುಸ್ಥಾನದಲ್ಲಿ ಈ ಬಗೆಯ ಠರಾವುಗಳನ್ನು ಮಂಜೂರುಮಾಡಲು, ಫೆಬ್ರುವರಿ ೩ಾ ರಲ್ಲಿ ಲೀಗ್ ಸಭೆಗಳು ಜರುಗಬೇಕು ಎಂದೂ ಅವರ ಸೂಚನೆ

ಮದ್ರಾಸು ಕ್ಷೇಮಸಾಧನೆಯ ಕಾನೂನು

ಹದಿನೆಂಟು ತಿಂಗಳ ಪರಿಶ್ರಮದಿಂದ ತಯಾರಾಗಿದ್ದ ಈ ಮಸೂದೆಯು ಈಗ ಎಸೆಂಬ್ಲಿ–ಕೌನ್ಸಿಲುಗಳೆರಡರಿಂದಲೂ ಮಂಜೂರಾದುದು ತೃಪ್ತಿಕರವಾಗಿದೆ ನಾಗರಿಕ ಜೀವನದ ಪ್ರತಿದಿನದ ಪ್ರತಿಯೊಂದು ಕೂಲಂಕಷ ವಿಚಾರದಲ್ಲಿ ಈ ಕಾನೂನಿನಲ್ಲಿ ನಿರ್ದೇಶವಿದೆ ಜನನದ ಮೊದಲೂ, ಮರಣದ ಅನಂತರವೂ ಪ್ರತಿಯೊಂದು ಮಾನವಜೀವಿಗೆ ಕ್ಷೇಮವು ಎತರಿಂದ ಉಂಟಾದೀತೆಂಬುದೇ ಈ ಕಾನೂನು ಸೃಷ್ಟಿಸಿದವರ ಪ್ರಯತ್ನ ಈ ಪ್ರಯತ್ನಗಳು ಸಾರ್ವಜನಿಕ ಕ್ಷೇಮ ಸಾಧನೆಗಾಗಿವೆ ಹೊರತು ಯಾವನೊಬ್ಬ ಮಂತ್ರಿಯ ಆತ್ಮತೃಪ್ತಿಗೆ ಅಥವಾ ಸ್ವಾರ್ಥಸಾಧನೆಗಾಗಿಲ್ಲ ಎಂದು ತಿಳಿದೇ, ಇಷ್ಟು ತ್ವರೆಯಾಗಿ ಮಸೂದೆ ಮಂಜೂರಾಯಿತೆನ್ನಬೇಕು. ಸರಕಾರಕ್ಕಂತೂ ವಿಶೇಷ ಜವಾಬ್ದಾರಿ ಹೊರಬೇಕಾಗಿ ಬಂದಿದೆ, ಆಕ್ಷೇಪಕರ ದೂರುಗಳು ಹೆಚ್ಚುವ ಹಾಗಿದೆ, ಮಂತ್ರಿಗಳಿಗೆ ಯಾವ ಪ್ರಯೋಜನವೂ ಇಲ್ಲ. ವಿವೇಕದಿಂದ ಮಾಡಿದ ವಿಮರ್ಶೆಗಳೆಲ್ಲವನ್ನೂ ಮಂತ್ರಿ ರಾಜನ್‌ರವರು ಒಪ್ಪಿಕೊಂಡಿದ್ದಾರೆ, ಮಸೂದೆಯನ್ನು ತಿದ್ದಿದ್ದಾರೆ.

ಇನ್ನು ಬೇಕಾದುದ ಸಮಸ್ತರ ಸಹಕಾರ ಸಮಸ್ತರಿಗೆ ಉಪಯುಕ್ತವುಂಟೆನ್ನುವಾಗ, ಸಹಕಾರವು ತಾನಾಗಿ ದೊರೆಯಬೇಕು, ಅದನ್ನು ಪಡೆವ ಪ್ರಯತ್ನಗಳು ಸಾರ್ಥಕವಾಗದಿರವು ಸಮಾಜದ ಕಟ್ಟುಗಳು, ಪುರಾತನ ಭಾವನೆಗಳು ಇವು ಈ ಆಕ್ಟು ಜನ್ಮರಿಗೆ ಬಾರದಂತೆ ತಡೆಯದೆ, ಜನಾರೋಗ್ಯ ಸಾಧಕವಾದ ಈ ಕಾನೂನು ಜನರ ಜೀವನದಲ್ಲಿ ತುಂಬ ಸುಖವನ್ನು ತರಲೆಂದ ಹಾರಯಿಸಬೇಕಲ್ಲವೆ?

(ನೇ ಪುಟದಿಂದ ಮುಂದುವರಿದುದು)

ಅಂಗೈ ನೋಡಲು ಕನ್ನಡಿ ಬೇಕೆ?

ಕಾಂಗ್ರೆಸಿನೊಳಗೆ ಈ ಬಗೆಯ ಅವಿಧೇಯತೆ, ಭ್ರಷ್ಟತೆಗಳು ತಲೆದೋರಲು ಕಾರಣವೇನು? ಎಂಬುದನ್ನು ಇಲ್ಲಿ ತುಸು ಪ್ರತಿಪಾದಿಸಿದರೆ ಅಪ್ರಾಸಂಗಿಕವಾಗದು. ಕಾಂಗ್ರೆಸಿನೊಳಗೆ ಇವು ಮೊದಲಿಂದಲೂ ಇದ್ದಿರಬೇಕು ಆದರೆ ಇತ್ತೀಚೆಗೆ ಇವುಗಳ ಕುರಿತು ದೂರುಗಳು ಹೆಚ್ಚೆಚ್ಚಾಗಿ ಕೇಳಬರುತ್ತಿವೆ.

ಇತ್ತೀಚೆಗೆ ಎಂದರೆ ಎಂದಿನಿಂದ? ಸಮಾಜವಾದಿಪಕ್ಷವು (ತೀವ್ರಗಾಮಿಪಕ್ಷ) ಕಾಂಗ್ರೆಸ್ಸಿನೊಳಗೆ ತಲೆದೋರಿದಂದಿನಿಂದೆನ್ನಬಹುದು ಅವರು ನಿಶ್ಚಿತವಾದ ಯಾವ ಕಾರ್ಯಕ್ರಮವನ್ನು ತಮ್ಮ ಮುಂದೆ ಇಟ್ಟುಕೊಂಡಿದ್ದರೂ ಅಲ್ಲಲ್ಲಿ ಚಳವಳಿಗಳನ್ನೆಬ್ಬಿಸಿ ಪೀಕಲಾಟಗಳನ್ನುಂಟುಮಾಡುವುದೇ ಅವರ ಕರ್ತವ್ಯವಾಗಿ ಪರಿಣಮಿಸತೊಡಗಿದೆ ಮುಷ್ಕರಗಳನ್ನು ತಂದು ಮಂಗಳೂರಿನಲ್ಲಿ ಕೃಷಿಮಾಡಿದರೆ ಎಂದೂ ಅಷ್ಟು ರುಚಿಕರವಾಗಿ ಬೆಳೆಯದು. ಹಾಗೆಯೇ ರಷ್ಯದ ಕುರಿತ ತಾವು ಓದಿದ ಪುಸ್ತಕದ ಬದನೆ ಕಾಯಿಗಳನ್ನು ಇಲ್ಲಿಯವರು ಕೃಷಿ ಮಾಡಲು ನೋಡುತ್ತಿರುವರು. ಇದು ಎಂದೂ ಸರಿಯಲ್ಲವೆಂಬುದಾಗಿ ಮಹಾತ್ಮರು ಅವರಿಗೆ ಎಷ್ಟೋ ಬಾರಿ ಹೇಳಿದುಂಟು

ಇನ್ನೊಂದು ವಿಷಯವೆಂದರೆ ಅವರ ಅಧಿಕಾರ ಲಾಲಸೆ. ಇದು ಕಾಂಗ್ರೆಸ್ ಅಧ್ಯಕ್ಷಸ್ಥಾನದ ಕುರಿತು ಶ್ರೀ ಸುಭಾಸ ಬಾಬುಗಳು ಆಡಿದ ಮಾತುಗಳಿಂದಲೂ, ಅಲ್ಲಲ್ಲಿ ನಡೆದ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆಯಿಂದಲೂ, ಪ್ರಾಮುಖ್ಯವಾಗಿ ಬಿಹಾರಿನ ಕಿಸಾನರ ಅವಿಧೇಯತೆಯಿಂದಾಗಿ ಒಡೆದು ಕಾಣುತ್ತದೆ. ತನ್ನ ಪಕ್ಷವನ್ನು ಬಲಪಡಿಸುವುದಕ್ಕಾಗಿ, ಅಧಿಕಾರಾಕಾಂಕ್ಷಿಗಳಾದ ಯಾರೂ ಇಂತಹ ಭ್ರಷ್ಟ ಕಾರ್ಯಗಳನ್ನು ನಡೆಸುತ್ತಾರೆ

ಆದರೆ ಕಾಂಗ್ರೆಸ್ಸಿನವರು ಸತ್ಯ ಮತ್ತು ಅಹಿಂಸೆಗಳನ್ನು ತಮ್ಮ ಮೂಲತತ್ವಗಳನ್ನಾಗಿ ಇಟ್ಟುಕೊಂಡಾಗ, ಈ ತತ್ವಗಳಿಗೆ ವಿರೋಧವಾಗಿ ವರ್ತಿಸುವುದು ಬಂಡಾಯವೂ ದ್ರೋಹವೂ ಆಗಿರುತ್ತದೆ

ಇಂತಹ ದ್ರೋಹಿಗಳನ್ನು ಹೊರತಳ್ಳದಿದ್ದಲ್ಲಿ ಕಾಂಗ್ರೆಸ್ಸು ತನ್ನ ವರ್ಚಸ್ಸನ್ನು ಕಳಕೊಳ್ಳುವುದರಲ್ಲಿ ಸಂಶಯವಿಲ್ಲ ಇದೀಗ ನಿಂತು ಕಾದಾಡುವ ಶತ್ರುಗಳಿಗಿಂದ ಹಿತಶತ್ರುಗಳನ್ನು ನಿಗ್ರಹಿಸುವುದೇ ಕಷ್ಟವೆಂದು ಹಿರಿಯರಾಡುವ ಮಾತು ಸುಳ್ಳಲ್ಲ. ಕಾಂಗ್ರೆಸ್ಸಿನೊಳಗೆ ವಂಚನೆ, ಭ್ರಷ್ಟತೆಗಳು ತಲೆದೋರಿರುತ್ತವೆಂದು ಆಗಾಗ್ಗೆ ಕೇಳಬರುತ್ತಿದ್ದರೂ, ಅವುಗಳನ್ನು ಕಿತ್ತೊಗೆಯಲು ಆಗದಿದ್ದುದಕ್ಕೆ ಕಾರಣವಾದರೂ ಇದೇ ಹಿತಶತ್ರುತನವಾಗಿದೆಯೆಂದು ಎದೆತಟ್ಟಿ ಹೇಳಬಹುದಾಗಿದೆ.

ತಾ 1-2-39ರಿಂದ ಪ್ರಾರಂಭ!

ಮೋತಿಲಾಲ್ ಸಬಿತಾ ಇವರು ಅಭಿನಯಿಸಿದ

೩೦೦ ದಿವಸಗಳ ನಂತರ

ಎಂಬ ಹಿಂದೀ ವಾಕ್ಚಲನ ಚಿತ್ರವು

ಟಾಕಿಸಿನಲ್ಲಿ ಪ್ರದರ್ಶಿಸಲ್ಪಡುತ್ತದೆ.



ಆರೋಗ್ಯವುಳ್ಳ ಕುಟುಂಬವು ಸುಖದಾಯಕ ಕುಟುಂಬವಾಗಿದೆ.

ನಿಮ್ಮ ಕುಟುಂಬದ ಪ್ರತಿಯೊಬ್ಬನಿಗೆ ಸರಿಯಾದ ಮತ್ತು ತಕ್ಕುದಾದ ಆಹಾರವನ್ನು ಕೊಡಬೇಕು ಹಾಗಾದರೆ ಮಾತ್ರ ಅವರ ... ಆರೋಗ್ಯವಂತರಾಗುವರು ... ಸುಖಿಗಳಾಗಿರುವರು.

...

ಓವಲ್‌ಟಿನ್

ಪೌಷ್ಟಿಕ ಆಹಾರ ಪಾನೀಯ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ ಮತ್ತು ಸ್ಟೋರುಗಳಲ್ಲಿ ಮಾರಲ್ಪಡುತ್ತದೆ

OVALTINE

ಏಜಂಟರು. - ಜೇಮ್ಸ್ ರೈಟ್, 85 ಎ, ಕ್ಲೈವ್ ಸ್ಟ್ರೀಟ್, ಕಲ್ಕತ್ತಾ ಮತ್ತು ಬೊಂಬಾಯಿ, ಮದರಾಸು ಮತ್ತು ಕರಾಚಿ.

卐

ರಕ್ಷ್ಯೋರ್ಮಹಾರ್ಘ್ಯನ್ನತು ಮರ್ಗನ

ದೇವಾ । ನ ಭೇಜಿರೇ ಭೀಮ

ವಿಶೇಣ ಭೀತಿನ್ || ಸುಧಾಂ

ವಿನಾ ನ ಪ್ರಯಯುರ್ವಿರಾಮಂ

ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ।

卐

ಸ್ವದೇಶಾಭಿಮಾನಿ

SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು

卐

ದೊರೆಯಲಿಲ್ಲ ರತ್ನಗಳು

ಸಾ-। ಗರವ ಮಥಿಸಲು ಸುರಂ

ಗದರಿಂ । ಹರುಷವಾಯಿತೆ! ನುತ

ವಿಶ್ವವ ಸುಡುವ ಬರುತಿರುವ ||

ಗರಳಕವರಂಜಿದರೆ! ಸುಧೆಯನು

ಪಡೆದು ಕ್ಷುದ್ರರ

ತೆರದಿ ಹುಲಿಕುಲಿ । ತೆರಳಿ ಬಿಲ್ಲರೆ!

ತೊರೆದು ಧೀರರು

ನಿಶ್ಚಿತಾರ್ಥವನು ||

卐

ತಾರೀಕು ೩—೨—೧೯೩೯ | ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 3—2—1939

ಕಾಂಗ್ರೆಸ್ ಕಿರೀಟಕ್ಕಾಗಿ ಕಚ್ಚಾಟ

ತ್ರಿಪುರಿ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕಾಗಿ ಸ್ಪರ್ಧೆ ನಡೆದುದು ಬಹಳ ಶೋಚನೀಯವಾದುದು. ಬರಿಯ ಸ್ಪರ್ಧೆ ನಡೆದುದಾದರೆ ಚಿಂತೆಯಿಲ್ಲ; ಹಿಂದೊಮ್ಮೆ ಇದೇ ಪ್ರಕಾರ ... ಶ್ರೀ. ... ಸ್ಪರ್ಧೆ ನಡೆದಿತ್ತು ... [illegible]

ಆಜಾದರು ಹಿಂತೆಗೆದುದೇಕೆ?

[illegible]

ಸ್ಫುಟ ತರಂಗ!

[illegible]

ಬಿಹಾರದ ಪರಿಸ್ಥಿತಿ

[illegible]

ಕಾಂಗ್ರೆಸಿನೊಳಗೆ ಭ್ರಷ್ಟತೆ

ಕಾಂಗ್ರೆಸಿನೊಳಗೆ ಅವಿಧೇಯತೆ, ... [illegible]

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ಧೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ವರ್ತಮಾನಕ್ಕೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಈ ವಾರದ ಮೊದಲನೆ ನೋಟ—ಸ್ಪೈನಿನ ಕಡೆಗೆ. ಬಾರ್ಸೆಲೋನವು ಫ್ರೆಂಕೋ ವಶವಾಯಿತು. ಇಟಲಿ ಜರ್ಮನಿಗಳು ಫ್ರೆಂಕೋವನ್ನು ಆದರದಿಂದ ವಂದಿಸಿವೆ. ಸ್ಪೆಯಿನ್ ಸರಕಾರವಕ್ಷವು ಸರಕಾರವನ್ನು ೩೦ ಮೈಲು ದೂರಕ್ಕೆ ಒಯ್ದಿದೆ. ಫ್ರೆಂಚರು ಟ್ಯುನಿಸ್ ಪ್ರಾಂತ್ಯದ ವಿಷಯ ಇಟಲಿಯ ಆಕಾಂಕ್ಷೆಯನ್ನು ಕುರಿತು ಭಾವಿಸಿ ಕೂತಿರುವಂತೆ ಇಟಲಿಯು ಮಾಡಿದೆ. ಇತ್ತ ಹಿಟ್ಲರು ಹೊಸ ಆಸೆಗಳನ್ನು ಕುರಿತಾದ ಭಾಷಣದಿಂದ ಯುರೋಪನ್ನು ಗುಡುಗಿಸಲಿರುವನು. ಸ್ಪೆಯಿನು ಫ್ರೆಂಕೋ ವಶವಿನ್ನು ಕೆಲತಿಂಗಳಲ್ಲೇ!

++ ++ ++

ಅತ್ತ ದಕ್ಷಿಣ ಅಮೇರಿಕದಿಂದ ಸೈಟ್ರೇಟ್ ಒಫ್ ಸೋಡಾದ ಮೂಲಕ ನಮಗೆ ತಿಳಿದಿರುವ ಚಿಲಿಪ್ರದೇಶದಲ್ಲಿ, ಮಹಾಭೂಕಂಪವಾಗಿದೆ. ಒಂದು ಮುಖ್ಯ ನಗರವೇ ಹೆಸರಿಲ್ಲದಂತಾಗಿದೆ. ಸತ್ತವರ ಸಂಖ್ಯೆ ೩೦೦೦೦ಕ್ಕೆ ಕಡಮೆಯಾಗದು. ಕ್ವೆಟ್ಟಾ ಕರುವಾಯು ಇದೇ ಭಯಂಕರ ಉತ್ಪಾತ.

++ ++ ++

ಬ್ರಿಟಿಷ ಮಂತ್ರಿಗಳೊಬ್ಬರು—ಕೆಲವರು ಇನ್ನು ಕೆಲತಿಂಗಳುಗಳಲ್ಲೇ ಯುದ್ಧವಾಗಲಿದೆ ಎನ್ನುತ್ತಾರೆ, ಕೆಲವರು ಈ ವರ್ಷ ಯುದ್ಧವಾಗುವಂತಿಲ್ಲ ಎನ್ನುತ್ತಾರೆ. ಇವರಿಬ್ಬರೂ ಸರಿಯಾಗಿ ವಿವೇಕವಿಲ್ಲದವರು. ಪ್ರಪಂಚದ ಈಗಣ ಗತಿಗೆಟ್ಟ ಸ್ಥಿತಿಯಲ್ಲಿ ಯಾವಾಗ ಏನಾದೀತೆಂದು ಹೇಳವುದು ಯಾರಿಗೂ ಸಾಧ್ಯವಲ್ಲ ಎಂದು ತಿಳಿಸಿರುವರು. ಆದರೆ ಇದೊಂದು ಖಂಡಿತವಂತೆ,—ಬ್ರಿಟನ್ನು ಮತ್ತು ಬ್ರಿಟಿಷ ಸಾಮ್ರಾಜ್ಯವು ಯುದ್ಧ ಮಾಡದು, ಸಾಧ್ಯವಿದ್ದಷ್ಟು ಮಿತವಾಗಿ ನಿಲ್ಲುವಂತದೆ. ಆದರೆ ಖಂಡಿತವಾಗಿಯೂ ಯುದ್ಧಸನ್ನಾಹವು ತೀವ್ರತೆಯಿಂದ ಸಾಗುವುದಾಗಿದೆ.

++ ++ ++

ವತ್ತೊಬ್ಬ ಮಂತ್ರಿ ಸ್ಯಾಮುಎಲ್‌ರು—ಸರ್ವ ಜನಾಂಗಗಳೂ ಯುದ್ಧಸಾಹಸಗಳ [illegible]ಯನ್ನು ಇಳಿಸುವ ವ್ಯವಸ್ಥೆ ಮಾಡುವವಾಗೆ ಬ್ರಿಟನ್ನು ಪ್ರಯತ್ನಿಸುವುದು ಬ್ರಿಟನ್ನಿನ ಮುಖ್ಯ ಧ್ಯೇಯ, ಎಂದು ಮತ್ತೊಂದು ಕಡೆ ಭಾಷಣಮಾಡು[illegible] ನಾಗಲೀ, ಬ್ರಿಟನ್ನು ಸೈನಿಕರನ್ನು ಧಾರಾಳವಾಗಿ ಸೇರಿಸಿಕೊಳ್ಳುವುದಕ್ಕೆಂದೇ ಒಬ್ಬ ಅಧಿಕಾರವನ್ನು ಹೊಸದಾಗಿ ನೇಮಿಸಿರುವರು!

++ ++ ++

ಸಿಂಧ ಸಿನಲ್ಲಿರುವ ಇಂಡಿಯನ್ ಲೀಗ್ ನವರು ಸ್ವಾತಂತ್ರ್ಯ ದಿನಾಚರಣೆ ಮಾಡಿದರು. ಸರ್ ಸ್ಟೇಫರ್ಡ್ ಕ್ರಿಪ್ಸರು— 'ಸರಕಾರವು ಪ್ರಾಂತಿಕ ಕೊನ್ಸ್ಟಿಟ್ಯುಎಂಟ್ ಸಭೆಗಳನ್ನು ಏರ್ಪಡಿಸಿಕೊಂಡು, ಅವುಗಳ ಪ್ರತಿನಿಧಿಗಳದೊಂದು ಕೇಂದ್ರ ಸಭೆಯನ್ನು ನೇಮಿಸಿಕೊಂಡರೆ ಅದರ ಮೂಲಕವಾಗಿ ಹೊಸ ರಾಜ್ಯಾಂಗ ರಚನೆಯ ಮಸೂದೆಯನ್ನು ಸುಲಭವಾಗಿ ಮಾಡಿಕೊಳ್ಳಬಹುದು, ಅನಂತರ ಭಾರತೀಯರಿಗೂ ಬ್ರಿಟನ್ನಿಗೂ ಈ ಮಸೂದೆಯು ಮಂಜೂರಾತಿಯು ಕರಾರಾದರೆ ಇದರಿಂದ ಎರಡೂ ದೇಶಗಳೊಳಗೆ ಮೈತ್ರಿ ಹೆಚ್ಚುವುದು ಎಂದು ಸೂಚಿಸಿರುವರು.

++ ++ ++

ಕೊಂಗ್ರೆಸ್ ಅಧ್ಯಕ್ಷಪದವಿಯನ್ನು [illegible]ತವಾಗಿ ಚುನಾವಣೆಯಾಗ ವಂತಾದುದು ಒಂದು ವಿಶೇಷ ವಿಷಯ. ಶ್ರೀ ಸುಭಾಷರು ಒಬ್ಬ ಉಮೇದ್ವಾರರು, ಇನ್ನೊಬ್ಬರು ಡಾ. ಸೀತಾರಾಮಯ್ಯನವರು. ಮದ್ರಾಸು ಪ್ರಾಂತ್ಯದ ಅಧ್ಯಕ್ಷರಾಗಲು ಹತ್ತು ವರ್ಷ ದಾಟಿವೆ. ಡಾ. ಸೀತಾರಾಮಯ್ಯನವರು ಯೋಗ್ಯರೇ ಆಗಿರುವರು. ಫೆಡರೇಶನನ್ನು ಕೆಲ ತಿದ್ದುಪಡಿಗಳಾದರೆ ಅಂಗೀಕರಿಸಲೊಪ್ಪುವ ಕಾಂಗ್ರೆಸ್ ವಂಗಡವಿದೆಯೆಂದೂ ಶುದ್ಧ ಫೆಡರೇಶನ್ ವಿರೋಧಿಗಳನ್ನೆ ಚುನಾಯಿಸಬೇಕೆಂದೂ ಶ್ರೀ. ಸುಭಾಷರ ಅಭಿಪ್ರಾಯ. ಮಹಾಮಖಂಡರು ಡಾ||ರ ಕಡೆಗೆ ಒತ್ತಿ ಬರೆದಿರುವುದು ಸರಿಯಾದುದಲ್ಲ ಎಂದೂ ಅವರ ಮಾತು. ಆಚಾರ್ಯ ನರೇಂದ್ರದೇವರು, ಸುಭಾಷರನ್ನೆ ಆರಿಸಬೇಕಾಗಿ ಬರೆ

ಆರೆನೋಟಗಳು

ದರು. ಹೀಗೆ ಚಳವಳವಾಗಿದೆ' ಗಾಂಧಿಜಿಯವರ ದೂರು ಬೇರೆ ಇದೆ.

++ ++ ++

"ಕೊಂಗ್ರೆಸಿನವರಲ್ಲಿ ಅಧಿಕಾಧಿಕವಾಗಿ ಶಿಸ್ತುಭಂಗವೇ ಮೊದಲಾದ, ಅಕ್ರಮ ವ್ಯವಹಾರ ಕುರಿತಾದ ದೂರುಗಳು ಹೆಚ್ಚುತ್ತ ಬರುತ್ತಿವೆ. ನನಗೆ ಇಂದು ವಿಶೇಷ ಚಿಂತೆಗೆ ಇವೇ ಕಾರಣವಾಗಿವೆ. ಒಳಗಿಂದೊಳಗೆ ಕೊಳೆತು ಬರುತ್ತಿರುವ ಕುಂಟಳಕಾಯಂತೆ ಕೊಂಗ್ರೆಸು ಸಂಸ್ಥೆಯಾಗಿರುವುದೇ? ಎಂದು ಭಾವಿಸಬೇಕಾಗಿದೆ. ಚುನಾವಣೆಗಳಲ್ಲಿ ಯಾರೋ ಬಂದು ಯಾರಿಗೋ ಪಕ್ಷವಾಗಿ ವೋಟು ಕೊಟ್ಟು ಹೋಗುವ ವೇಷಧಾರಿಗಳ ತಂಡವೂ ಬೆಳೆವುದು ಒಳ್ಳೆತಲ್ಲ. ಕೊಂಗ್ರೆಸು ರಿಜಿಸ್ಟರುಗಳಲ್ಲಿ, ಇಲ್ಲದ ಜನರ ಹೆಸರಿರುವುದೂ ಹಾಳು. ಕಳ್ಳ ನಾಣ್ಯಗಳ ಚಲಾವಣೆಯಷ್ಟೆ ಹಾಳಾದ ಕಳ್ಳ ವೋಟುಗಳ ಚಲಾವಣೆಯಾಗುತ್ತಿರವುದು ಒಳ್ಳೆತಲ್ಲ.

++ ++ ++

"ಪ್ರತಿಸ್ಪರ್ಧಿಗಳಿಲ್ಲದೆ ಕಾಂಗೆಸು ಚುನಾವಣೆಗಳಾಗುತ್ತಿಲ್ಲ. ಹಲವರ ಮೇಜವಾಟದಾದ ಭಾಷಣ ಮಾಡುತ್ತಿರುವರು. [illegible] ಇವುಗಳಲ್ಲಿ ಪ್ರಕಟವಾಗುತ್ತದೆ. ಬಿಹಾರದಲ್ಲಿ ಶಿಸ್ತು ಮೀರಿ ನಡೆವ ಘಟನೆಗಳು ಒಬಳ. ಇಲ್ಲಿ ಕಿಸಾನರು ಕೊಂಗೆಸ್ ವಿರೋಧವಾಡುತ್ತಿರುವರು. ಕಿಸಾನರ ದಂಗೆ' ಘೋಷಿಸಿಯೇ [illegible] [illegible]

++ ++ ++

[illegible]

ಸ್ವಾತಂತ್ರ್ಯ [illegible] ಜನರನ್ನು ನಡೆಸಿ [illegible] ಆವರಲ್ಲಿ ನನ್ನೊಳಗೂ ಯೋಗ್ಯ ಶಕ್ತಿ ಇದೆಯೇ? ಇದನ್ನೆಲ್ಲ [illegible] ತಿಳಿಸಿ [illegible] ಸತ್ಯ ಸ್ಥಿತಿಯನ್ನು ಎಲ್ಲರೂ ತಿಳಿಯಲಿ. ಕೊಂಗ್ರೆಸನ್ನು ಕೆಡವದಿ. ಈಗ ನಡೆವಂತೆ ನಡೆದರೆ, ಅನಾಯಕತ್ವವುಂಟಾದೀತು [illegible]ಯಲ್ಲಿ ಇದನ್ನೆ ಕಾಣುವೆವೇ?" ಎಂದು ಮಹಾತ್ಮಾಜಿ ಎನ್ನುವರು.

++ ++ ++

ರೈತರೇ ಜಮೀನಿನ ಮಾಲಿಕರು. [illegible]ದಾರ ಪದ್ಧತಿಯನ್ನು ಮುಗಿಯಬೇಕಾಗಿದೆ. ರೈತರು ಜಮೀನ್ದಾರರಿಗೆ ಕೊಡಬೇಕಾಗಿರುವುದು ಶಿಷ್ಟ ಗೇಣಿ. ಅದನ್ನು ಏರಿಸಲು ಯಾರಿಗೂ ಅಧಿಕಾರವಿಲ್ಲ. ಸರಕಾರಕ್ಕೆ ಜಮೀನ್ದಾರರಿಗಳ ತೆರುವ [illegible] ಅವರು ರೈತರಿಂದ ವಸೂಲು ಮಾಡುವುದು. ೩, ಕೋಟಿ ರೂಪಾಯಿ ಈ ಸ್ಥಿತಿಯು ಮುಗಿಯಬೇಕು—ಎಂದು ಜಮೀನ್ದಾರಿಗಳ ತಿದ್ದುಪಡಿಯ ಮಸೂದೆಯನ್ನು

ಮುರತ್ತರಲು ಮದ್ರಾಸು ಎಸೆಂಬ್ಲಿಯು ನಿರ್ಧಾರಮಾಡಿತು.

++ ++ ++

ರಾಜಮಹೇಂದ್ರಿಯ ಕೊಲೆಜಿಗೆ ನೇಮಿಸಲಾದ ಒಬ್ಬ ಪ್ರೊಫೆಸರರಿಗೆ ತೆಲುಗು ಭಾಷಾಜ್ಞಾನವಿಲ್ಲೆಂದು, ಅಲ್ಲಿ ಒಂದು ಮಹಾಸಭೆಯಾಯಿತು. ಸರಕಾರವು ದೇಶಭಾಷೆಗಳಲ್ಲೇ ಶಿಕ್ಷಣವಾಗಬೇಕೆನ್ನುವಾಗ, ಭಾಷಾಜ್ಞಾನವಿಲ್ಲದವರನ್ನು ಅಲ್ಲಲ್ಲಿನ ಶಾಲೆಗಳಿಗೆ ಕಳುಹುವುದು ಸರಿಯಲ್ಲ ಎಂದು ನಿರ್ಣಯವಾಗಿ, ಮಂತ್ರಿಗಳವರನ್ನು ಈ ವಿಷಯ ಕಾಣಬೇಕೆಂದೂ, ನಿರ್ಧಾರವಾಯಿತು. [illegible] ಅಥವಾ ಕನ್ನಡನಾಡೂ ಈ ವಿಷಯದ ಕಡೆಗೆ ಗಮನಕೊಡಬೇಕು.

++ ++ ++

"ದುಬಲರಾ" (ದುರ್ಬಲರು) ಜಾತಿಗಳಿಗಿರುವ ಪರಿತಾಪವು [illegible] [illegible] ಇವರು 'ಗೊಂಡರು' ಎಂಬವರಂತೆ, ಗುಲಾಮರಂತೆ ಜಮೀನ್ದಾರರಿಗೆ ಸೇರಿದ ಜಾತಿಯವರ [illegible] [illegible]

++ ++ ++

[illegible]

++ ++ ++

[illegible] ಕಡೆಗ [illegible] ಇವರೀಗ [illegible] ಸಂಗಡಿಗಳು [illegible] ಫ್ರಾನ್ಸಿನಲ್ಲಿ [illegible] [illegible]

++ ++ ++

ಫ್ರಾನ್ಸ ಸರಕಾರವು ಖಂಡಿಗೆಟ್ಟಳೆಯಾಗಿ ಚಿನ್ನ ಪಡೆದು ಈಗ ಸುರಕ್ಷಿತವಾಗಿದೆ. ನಾಳೆ

೫೦೦೦ ವಿಮಾನಗಳನ್ನು ಕ್ರಯಕ್ಕೆ ಕೊಳ್ಳುವಷ್ಟು ಹಣ ಸಿದ್ಧವಿದೆ. ಈಗ ಫ್ರಾನ್ಸು ಯಾರನ್ನೂ ಹೀನದೃಷ್ಟಿಯಿಂದ ನೋಡುವುದೂ ಇಲ್ಲ, ಯಾರಿಗೆ ಬೆದರುವುದೂ ಇಲ್ಲ. ಇದನ್ನು ಇತರರು ತಿಳಿದರೆ, ಯುದ್ಧ ಮಾಡಲಿಳಿಸರು—ಎಂದು ಫ್ರೆಂಚ ಮಂತ್ರಿಗಳು ಪ್ರಕಟಿಸಿರುವರು.

++ ++ ++

ಜನರೆಲ್ಲರು ತಮ್ಮಲ್ಲಿರುವ ಚಿನ್ನದ ನಗನಾಣ್ಯಗಳ ಖಾನೇಸುಮಾರಿ ತಯಾರಿಸಿ ಕೊಡಬೇಕಾಗಿಯೂ, ಮುಂದೆ ಇದನ್ನು ನೋಡಿಯೇ ಸರಕಾರವು ತನಗೆ ಬೇಕಾಗುವ ಚಿನ್ನವನ್ನು ಜನರಿಂದ ಪಡೆಯುವುದಾಗಿಯೂ ಜಪಾನು ಸರಕಾರವು ಈಗಲೆ ಕಾನೂನು ಮಂಜೂರು ಮಾಡಿ, ಚಿನ್ನದ ಖಾನೆಸುಮಾರಿಗೆ ತೊಡಗಿದೆ.

++ ++ ++

ಚಿಲಿಯಲ್ಲಾದ ಭೂಕಂಪದ ಹಾವಳಿ ನಿವಾರಣಗಾಗಿ, ದಕ್ಷಿಣ ಅಮೇರಿಕದ ರಾಜ್ಯಗಳೂ ಸಂಯುಕ್ತ ರಾಜ್ಯಗಳೂ ಹಣ ಕೂಡಿಸತೊಡಗಿವೆ. ೧೯೨೩ರಲ್ಲಿ ಜಪಾನಿನಲ್ಲಿ ಭೂಕಂಪವಾದಾಗ, ಈ ರಾಜ್ಯಗಳೆಲ್ಲ ಹಣ ಕಳಿಸಿದುದನ್ನು ನೆನಪಿಗೆ ತಂದುಕೊಂಡು ಜಪಾನು ಸಹ [illegible] ಪವನನ್ನು ಈಗಲೆ ಕೂಡಿಸಿ ಕಳುಹಿಸಿದೆ. ಚಿಲಿಯನ್ ಎಂಬಲ್ಲಿ ೬೦೦೦೦ ಜನರಿದ್ದರು. ಇದು ಸಂಪೂರ್ಣ ನಾಶವಾಗಿದೆ. [illegible] ಇವರಲ್ಲಿ ೧೫೦೦೦ ಮಂದಿ ಸತ್ತು [illegible] ಕನ್ಸೆಪಶನ್ ನಗರದಲ್ಲಿ ೨೦೦೦೦ ಹೆಣಗಳ ಬಿದ್ದಿವೆ. [illegible]

++ ++ ++

[illegible]

++ ++ ++

[illegible]

++ ++ ++

[illegible]

++ ++ ++

[illegible] ಕರ್ನಾಟಕದೊಳಗಣ [illegible] ಸರಕಾರವು, ಕರ್ನಾಟಕದ ಏಕೀಕರಣವನ್ನು [illegible] ಅಭಿಪ್ರಾಯವನ್ನು [illegible]

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ
"ಲಿವರ್ ಕ್ಯೂರ್"
ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು
ವಿಲಕ್ಷಣ ತಯಾರಿ. ಜಮ್ಮಿ ವೆಂಕಟರಮಣಯ್ಯ
ಶೀಶೆ ಬಾಟಿಗೆ ಲಿವರ್ ಮತ್ತು ಸ್ಪ್ಲೀನ್ ಸ್ಪೆಸಿಯಲಿಸ್ಟ್,
ಒಂದೆಯ, ಮೈಲಾಪುರ, ಮದ್ರಾಸು

'DILROZ' Regd
Dil Roz' is a sure cure to Oriental sores, local sores, all kinds of deep-rooted sores, skin eruptions, Pimples, Eczema, Ringworm, Sinus Fistula, auxillary Abscess.
There is no need of dressing the wounds, nor are baths prohibited.
Price Rs. 2 Postage extra
TAHIR DIN
Anarkali, LAHORE

ಸೊಕ್ಕಿನ ಬೆಕ್ಕು

(ತಾ. ೨೮—೧—೩೯ರಲ್ಲಿ ಗವರ್ನಮೆಂಟ ಹೈ. ಎ. ಟ್ರೈನಿಂಗ್ ಶಾಲಾ ವರ್ಧಂತಿಯ ಕಾಲದಲ್ಲಿ— ಪ್ರಾಥಮಿಕ ತರಗತಿಯ ಬಾಲಕರು ಅಭಿನಯಿಸಿದೊಂದು ಚಿಕ್ಕ ದೃಶ್ಯ.)

[ಒಂದು ಗುಡಿಸಲು ನಾಯಿಕಾಲ, ದೃಶ್ಯಾರಂಭದಲ್ಲಿ ಕಾಣುವುದು. ಗಿಳಿಪಕ್ಷಿ, ಮನೆಯ ಯಜಮಾನನು ಪ್ರವೇಶಿಸುವನು. ಯಜಮಾನನು ಕಣ್ಣೊರಸಿಕೊಂಡು ಹೊರಗೆ ನೋಡಿ]—ಓಹೋ, ಇಷ್ಟರಲ್ಲೇ ಸಂಜೆಯಾಯಿತಲ್ಲ! ಇನ್ನು ಹಾಲು ಕರೆಯುವುದು ಯಾವಾಗ? ಅದನ್ನು ಕೂಸಿಗೆ ಕಾಯಿಸಿ ಕೊಡುವುದು ಯಾವಾಗ? ಹೊಟ್ಟೆಗೆ ಕೊಟ್ಟು ಬರುವುದು ಯಾವಾಗ? ಕೂಸಂತೂ ಈಗ ತಾನೆ ಸುಮ್ಮನೆ ಸುಮ್ಮನೆ ಹತ್ತು ದಿನದ ಕೂಸನ್ನು ಹೆತ್ತ ತಾಯಿ ಬಿಟ್ಟು ಹೋದಳು. ನನಗೆ ಬೇರೆ ಕೆಲಸಕ್ಕೆ ಹೋಗುವುದಕ್ಕಿಂತ ಕೂಸಿನ ಆರೈಕೆ ಇಟ್ಟುಕೊಳ್ಳಬೇಕು. ನಾಲ್ಕು ಸಾರಿ ಮಟ್ಟಿನ ಹಣದಿಂದ ಜೀವನ ಸಾಗಿಸಬೇಕು. ಹಾಲು ಕರೆದು ಬರುವೆನು (ಒಂದು ಹೋಗುವನು)

(ಗಿಳಿ ಹಾಡುವುದು)

ಕಾಡಿನ ಹಕ್ಕಿಯು, ಗೂಡಿನೊಳಿಟ್ಟು
ನಾಡಿನ ಹಾಡರು ಕಲಿಸುವರೆಷ್ಟು ॥
ಕಲಿಸಿದಷ್ಟೆ ನಾ ಹಾಡಲು ಕಲಿತರು
ಒಲಿದು ಮೂಢನಾನೆನರು ಬಲ್ಲಿದರು.
ರಾರುಷ್ಟಾ. ಮಾತಾಡೋ ॥

ಯಜಮಾನನು (ಹಾಲು ಕರೆದು ಬಂದನು) ಇರಲಿ, ಮೊದಲು ಹೊಟ್ಲೇಗೆ ಹೋಗಿ ಬರುತ್ತೇನೆ. ದೀಪ ಹಚ್ಚುವುದು, ಒಲೆ ಹೊತ್ತಿಸುವುದು, ಹಾಲು ಕಾಯಿಸುವುದು ಇದೆಲ್ಲ ಮತ್ತೆ. ಕೂಸಿಗೆ ಇಷ್ಟೇ ಮಡಗುವೆನು.

(ಅಷ್ಟರಲ್ಲಿ ಬೆಕ್ಕು ಅಡ್ಡ ಕಟ್ಟುವುದು)

ಥೂ ಬೆಕ್ಕೇ—ನನಗೆ ಅವಸರ ಹೆಚ್ಚು. ಕೂಸಿನ ಹಾಲು ಕುಡಿಸಲಿಲ್ಲ. ನಿನಗೇನು? (ಎಂದು ಅದನ್ನು ಓಡಿಸುವನು) (ಹಾಲನ್ನು ನೆಲುವಿನ ಮೇಲೆ ಇಡುವನು)

ಇನ್ನು ಬೇಗನೆ ಕೂಸು ಕೂಗುವ ಮೊದಲು ನಾನು ಹೊಟ್ಲೆಗೆ ಹೋಗಿ ಬಂದುಬಿಡುತ್ತೇನೆ.

(ಹೊರಗೆ ಬಂದು)

ಕತ್ತಲಾಗಿಯೇ ಹೋಯಿತಲ್ಲ! ಬಾಗಿಲು ಭದ್ರಮಾಡಲಿಕ್ಕೂ ಸಮಯವಿಲ್ಲ. ಇರಲಿ. ಬೇಗನೆ ಹೋಗಿ ಬರುತ್ತೇನೆ. (ಹೊರಡುವನು)

ಗಿಳಿ—ರಾಮಯ್ಯ ಮಾತಾಡೋ! ಸುತ್ತಲು ಕತ್ತಲಾಯಿತು. ದೀಪ ಹಚ್ಚಿಲ್ಲ. ಬೊಳ್ಳು, ಬೊಳ್ಳು! ಕಳ್ಳರು ಬಂದಾರು, ಬಾಗಿಲು ಕಾಯು.

(ಬೊಳ್ಳು ಓಡಿಬರುವುದು)

ಯಜಮಾನ—ಬೊಳ್ಳು, ಇಲ್ಲೇ ಇದ್ದು ಬಾಗಿಲು ನೋಡಿಕೋ. ದೀಪ ಹಚ್ಚಿಲ್ಲ. ಕೂಸು ಮಲಗಿದೆ. ಒಳಗೆ ಎಚ್ಚರ ನೋಡಿಕೋ

(ಯಜಮಾನ ಹೋಗುವನು)

ಬೊಳ್ಳು (ಹಾಡುವುದು—)

ಸಾಸಿರ ಕಾಳೊಂದ್ವರ ಕದರೇ—ಕೇಳಿ ಒಳ್ಳೆ ।
ಮಾಸಿಯ ಮನೆಳನು ಕಳ್ಳನ ಗಂಟಾ—
ಹಂಬಲಿಸಿ ।
ಮನೆಯೊಡಾ ನನ್ನಾಧೀನಾ ।
ಸಜ್ಜನಕೆಲ್ಲಾ ನಾ । ದೀನಾ ।
ಹದ ಬಂದರೆ ಬೇಗಳೇ—ಕೇಂದರೆ ಗಂ—
ಬಾಯಿಯದ್ದು ಬಾಳ ನೆ ಜಾಣಾ ॥
(ಮನೆಯೊಳಗೆ ಬೆಕ್ಕು ಹಾಡುವುದು)
ಕತ್ತಲಲ್ಲಾದರು ಕಣ್ಣನಗುಟಿ ।
ಮೆತ್ತನೆ ನಡೆದರು ಕೂರುಗುರು ಓ ।
ಬಾಲನನಾಡಿಸಿ ಲೀಲೆಯೋಳಿರೆ ಜೆ
ಕೊಳ್ಳೆಯನಾಡಿಸಿ ಪೆಟ್ಟ ತಲೆಗೆ ಪ
ಹಾಲು ಬೆಣ್ಣೆಗಳು ಬೇಕೇ ಬೇಕು
ಕಾಳಿರಿ ನನ್ನಾ ಹೆಸರೇ ಘಳ್ಳ । —

ಹುಟ್ಟಿದಂದಿನಿಂದ ಪ್ರತಿದಿನವೂ ಒಳಗೆ ತರುವ ಹಾಲು ಮೊದಲು ನನಗೆ. ಆ ಮೇಲೆ ಬೇರೆಯವರಿಗೆ. ಈವತ್ತು ಏನಾಗಿದೆ? ನನಗೆ ಹಾಲಿಲ್ಲವಂತೆ. ಮೊದಲು ಮೋಟಲಿಗ, ಗುಕ್ಕೆ ಕೂಸಿಗೆ, ಆ ಮೇಲೆ ನನಗ. ಈಗ ನಾನು ಅಷ್ಟು ಕೀಳಾದೆನೆ! ಆ ಗೃಹ್ಯವಂತೆ ಹೋದುದರಿಂದ ನನಗೆ ಇಷ್ಟು ಕಷ್ಟವಾಯಿತು. ಈ ಕೂಸು ಹುಟ್ಟಿದ್ದೇ, ಅವಳು ಸತ್ತಳು, ನನಗೆ ಹಾಲಿಲ್ಲ. ಇಲಿ ತಿಂದೇ ಎಷ್ಟು ಜೀವಿಸಬಹುದು? . . ನಾನು ನೆಲುವಿನ ಮೇಲಿಂದ ಒಂದಿಷ್ಟು ಹಾಲು ಕುಡಿದುಕೊಳ್ಳುತ್ತೇನೆ. ಅಷ್ಟು ಹಾಲಿನಲ್ಲಿ ಇಷ್ಟು ತೆಗೆದರೆ ಏನು? ಯಾರೂ ನೋಡುವುದಿಲ್ಲ, ಕಣ್ಣು ಮುಚ್ಚಿಕೊಂಡು ಹಾಲು ಕುಡಿದುಕೊಳ್ಳುತ್ತೇನೆ. (ನೆಲುವಿನ ಕಡೆಗೆ ಹೋಗುತ್ತದೆ)

ಗಿಳಿ—ಧನಿ ಮನೆಯಲ್ಲಿ ಇಲ್ಲ. ಮಗುವು ಮಲಗಿದೆ ಒಳಗೆ ಕತ್ತಲು ನೋಡು ಬೊಳ್ಳು, ಬೆಕ್ಕೊಂಟು, ಅದಕ್ಕೆ ಕಣ್ಣುಂಟು, ಬಾಗಿಲು ಭದ್ರವಿಲ್ಲ.

ಬೊಳ್ಳು—(ಕೂಗಳಿ) ಅಯ್ಯೋ, ಒಳಗೆ ಹೋಗುವುದಕ್ಕೆ ಇಲ್ಲವಲ್ಲ. ನಾನು—ಹೊರಗಿನವ, ನೈಲಿಗೆ. ಬೆಕ್ಕು ಒಳಗಿನವ, ಮುದಿ

(ಪಾತ್ರವು ನೆಲುವಿನಿಂದ ಕೆಳಕ್ಕೆ ಬಿದ್ದ ಶಬ್ದ ಆಯಿತು)

ಅದೇನು ಶಬ್ದವಾಯಿತು? ಈಗೇನು ಮಾಡಲಿ? ಮಗುವು ಏಳುತ್ತದೋ ಏನೋ! ಕೂಗುತ್ತದೋ! ಏನಾಗುವುದೊ!

ಗಿಳಿ—ನೆಲುವಿನಿಂದ ಹಾಲು ಕೆಳಗೆ ಬಿತ್ತು ಮಗುವಿನ ಹಾಲಿಗೆ ಸೊನ್ನೆ ಬಿತ್ತು ಧನಿ ಬಂದರೆ, ನಾಯಿಗೆ ಕೊಂದರೆ. ನಮ್ಮ ಮೇಲೆ ಸಿಟ್ಟು,' ಬೆಕ್ಕಿಗೆ ಪೆಟ್ಟು

ಬೊಳ್ಳು—(ಒಗುಳುವುದು)

ರಾಮಯ್ಯ, ಈಗ ಏನು ಮಾಡುವುದು? ನನಗ ಕಣ್ಣು ಕಾಣುವುದಿಲ್ಲವಲ್ಲ! ಏನು ಹೇಳಿ ಯಾರು? ಬೆಕ್ಕು ಅವನ ಪ್ರೀತಿಯದು. ನಾವು ಅವನ ಸೇವಕರು. ಈಗ ಏನು ಗತಿಯಾಗ?

(ಯಜಮಾನನು ಬರುವನು)

ಯಜಮಾನ ಏನು ಬೊಳ್ಳು! ಏನಾಯಿತು? ನೀನು ಏನು ಬಗುಳುತ್ತಿ? ಯಾರು ಒಳಗೆ ನುಗ್ಗಿದರು? ಮಗುವು ಎದ್ದಿದೆಯೋ?

ಗಿಳಿ—ಧನಿ ಇಲ್ಲ ಮನೆ ಕತ್ತಲು ನನ ವಿಗಟ್ಟಿ ಒಬ್ಬ ಚಿತ್ತಿಗಾಯಿತ ನೆಲುವು ತಂದ. ಗಡಿಗೆ ಬಿದ್ದು ನಾಯಿ ಮೈಲಿಗೆ ನಾನು ಗೂಡಿಗೆ ಧನಿ ಹೋಗ ಬೆಕ್ಕು ಹಾಲಿಗೆ.

ಯಜಮಾನ—ನೋಡುತ್ತೇನೆ ಆ ಬೆಕ್ಕಿಗೆ ಮಾಡುತ್ತೇನೆ ಒಗೆ!

(ಒಳಗೆ ಹೋಗಿ ನೋಡುವನು)

ಏನು? ಹಾಲೆಲ್ಲ ಚೆಲ್ಲಿ ಹೋಯಿತು. ಇದ್ದ ಹಾಲನ್ನೆಲ್ಲ ಮೊಟ್ಟೆಗೆ ಕೊಟ್ಟು ಬಂದೆನಲ್ಲ! ಈಗ ಮಗುವಿಗೆ ಉಪವಾಸವಾಗುವುದ ತಪ್ಪ ಇಲ್ಲದ ಬಗ (ಬೆಕ್ಕನ್ನು ನೋಡಿ) ಕೂಸಿಗಿಂತ ನಿನಗೆ ಹಾಲು ಬೇಕು. ಸಾಕಿದ್ದಕ್ಕೆ ಹಾಲು ದ ನರಗ ಪ್ರತಿ ಎರಡೇ ಸಿಕ್ಕ. ಈ ಧ ಬೆಕ್ಕು ಪ ನನ ಲ್ಲಿ ಇರಬಾರದು. ಸಾಕಿದ ಯಜಮಾನನ ನ್ನ ಕೆಡಿ ದಿದ ಇನ್ನು ಕೂಸನ್ನು ಕೆಡಿಸಿತು. ನೀನು ಇನ್ನು ನ್ಯಾಯನೆ ಹೋಗಿ ಬಾಳು. (ಬೆಕ್ಕನ್ನು ಓಡಿಸುವನು)

ಇನ್ನು ಪ್ರೀತಿಯಿಂದ ಸಾಕಿದ ದನವಿದ ಅದನ್ನು ಚೆನ್ನಾಗಿ ಪ್ರೀತಿಸಿ, ಇನ್ನು ಹಾಲು ಕೊಟ್ಟೀತೇ ಎಂದು ನೋಡಿ ಬರುತ್ತೇನೆ (ಹೋಗುವನು)

ಬೆಕ್ಕು—ಅಯ್ಯೋ ಕರ್ಮವೇ! ಸುಖವಾಗಿದ್ದೆ. ನಾನಾಗಿ ದನದಿಂದ ಕುಡಿದುಕೊಳ್ಳುತ್ತಿರದ ಹಾಲನ್ನು ಪ್ರತಿದಿನವೂ ಎಲ್ಲರಿಗೂ ಮೊದಲಾಗಿ ಕುಡಿಯುತ್ತಿದ್ದೆ. ಈಗ ನಾನು ಒಂದಿಷ್ಟು ಹಾಲು ಚೆಲ್ಲಿದಕ್ಕೆ ಮನೆಯಿಂದ ಹೊರಡಿಸಿದರಲ್ಲ ನಾಲ್ಕು ವರ್ಷ ನಾನು ಇಲ್ಲಿದ್ದು ಇವರಿಗೆ ಮಾಡಿದ ಉಪಕಾರವನ್ನು ಮರೆತರಲ್ಲ! ನಾನು ಸ್ಮಶಾನಕ್ಕೆ ಹೋಗುವ ಹಾಗೆ ಕಸಬರಿಕೆಯಿಂದ ಹೊಡೆದು ಓಡಿಸುವುದೆ? ಈ ದುರ್ಭಾಗ್ಯ ಏತರಿಂದ ಉಂಟಾಯಿತು? ನೋಡುವ,

(ಹೊರಗ ಬರವುದ)

ನಾಯಿ—ನಡಿ ಹೊರಗೆ, ಕಳ್ಳ! ಓಡುತ್ತಿಯೋ ಕಚ್ಚಬೇಕೋ! ನನಗೆ ಮನೆಯ ಒಳಗೆ ಹೋಗುವುದಕ್ಕಿಲ್ಲ. ಇಲ್ಲದಿದ್ದರೆ ನಿನ್ನನ್ನು ಅಲ್ಲಿಯೇ ಸೀಳಿ ಹಾಕುತ್ತಿದ್ದೆ (ಬಗಳುವುದು)

ಬೆಕ್ಕು—ಹೊರಗೆ ಇದ್ದು ಇಷ್ಟು ಕಾರುಬಾರು ಮಾಡಿದೆಯಾ? ನಾನು ಕದ್ದೆನೆಂದು ನಿನಗೆ ಯಾರು ಹೇಳಿದರು? ಅಲ್ಲಿ ಕತ್ತಲಿತ್ತು. ನಿನಗೇನೂ ಕಣ್ಣು ಕಾಣಿಸದು. ಹಾಗಿದ್ದರೂ ನೀನು ಬೊಬ್ಬಿಟ್ಟು ಯಜಮಾನನು ಓಡಿ ಬರುವಂತೆ ಮಾಡಿದೆ. ಏನು ಸೊಕ್ಕು!

ನಾಯಿ—ನನಗೆ ಕತ್ತಲಲ್ಲಿ ಕಾಣಲಿಲ್ಲ. ನಿಜ. ಆದರೆ ಗಿಳಿಯು, ಕಿಟಕಿಯಿಂದ ಎಲ್ಲ ನೋಡಿ "ಯಜಮಾನರು ಇಲ್ಲ. ಪನೆಯಲ್ಲಿ ಕಳ್ಳರು ಓಡಿ ಬಾಳ್ಳು" ಎಂದಿತು. ಅದರಿಂದ ನಾನು ಬಗುಳಿದೆ. ನಿನ್ನನ್ನು ಹಿಡಿಯಲಿಕ್ಕೆ ಮಾತ್ರ ಒಳಗೆ ಹೋಗಲಿಲ್ಲ. ಬಗುಳಿದಕ್ಕೆ ಯಜಮಾನರು ಬಂದರು. ಎಲ್ಲ ನೋಡಿದರು. ನಿನ್ನನ್ನು ಓಡಿಸಿದರು. ಕೂಸಿನ ಹಾಲನ್ನು ಕದ್ದೆಯೇಕೆ?

ಬೆಕ್ಕು—ಕದ್ದುದು ಎಲ್ಲಿ? ನನಗೆ ಧನಿಯಾಗಲಿ ಕೊಡುತ್ತಿದ್ದ ಹಾಲನ್ನು ನಾನಾಗಿ ತೆಗೆದರೆ ಅದ ಕದ್ದಂತಾಯಿತೆ?

ನಾಯಿ—ಯಜಮಾನರು ನಿನಗೆ ಕೊಡಲಿಲ್ಲ ಎಂದ ಮೇಲೆ, ಯಾರು ಇಲ್ಲದಿದ್ದಾಗ ನೀನು ತೆಗೆದದ್ದು, ಕದ್ದಹಾಗೆ ಆಗುತ್ತೇನು? ಕೂಸಿನ ಹಾಲನ್ನು ಕದ್ದದ್ದು!

ಬೆಕ್ಕು—ಹಾಗೆ ಯಾರ ಹೇಳುತ್ತಾರೆ?

ನಾಯಿ—ಅದೋ ಗಿಳಿ!

ಬೆಕ್ಕು—ಹಾ! ಹೀಗೆ! ಗಿಳಿಯೇ ಎಲ್ಲಕೂ ಕಾರಣ. ಗೂಡಿನಲ್ಲಿ ಇದೆ, ಅತ್ತಿತ್ತ ಹೋಗದು ಪಕ್ಷಿ. ಅದರ ನನ್ನ ಮೇಲೆ ಬೈರ (ಅತ್ತ ಹೋಗಿ) ರೀ! ದಾರಿ ಕಾಯ್ದದ್ದು ಬಾಳಿನದ್ದು

ಗಿಳಿ—ಯಜಮಾನರು ಹೇಳಿ ಹೋಗಿದ್ದಾರೆ ಕತ್ತಲಾಗಿದೆ ಬಾಗಿಲು ಭದ್ರವಿಲ್ಲವೆಂದು ಕೂಸು ಒಳಗೆ ಮಲಗಿದೆ ಕಳ್ಳರು ಬಂದಾರು ಎಂದಿದ್ದರೆ ನೀನು ನೆಲುವಿಗೆ ಹಾರಿದ್ದು ನನಗೆ ಕಿಟಕಿಯಿಂದ ಕಂಡಿತು ಎಂದು ಕೂಸಿಗೆ ಇದ್ದ ಹಾಲು ಚೆಲ್ಲಿ ಹೋಯಿತ ಅದನ್ನು ಒಳ್ಳೆಗೆ ಹೇಳಿದೆ ಅಷ್ಟರಲ್ಲಿ ಗಡಿಗೆ ಕಳಗೆ ಬಿದ್ದ ಶಬ್ದವಾಯಿತು ಅದನ್ನು ಕೇಳಿ ಬೊಳ್ಳು ಬೊಗಳಿತು ನನ್ನಲ್ಲಿ ತಪ್ಪೇನ?

ಬೆಕ್ಕು—ನಿಲ್ಲಿ ತಪ್ಪು! ಎಲ್ಲ ತಿಳಿಸಿದವನು ನೀನು. ನನ್ನ ಬದಲು ನನ್ನ ಮನೆ ಹೋಯಿತು ಸ್ಥಾನ ಹೋಯಿತು. ಇಷ್ಟು ದಿನ ಸುಖವಾಗಿದ್ದ ಈಗ ಸ್ಮಶಾನಕ್ಕೆ ಹೋಗಬೇಕು. ಎಂದರು ನನ್ನನ್ನು ಕೆಡಿಸುವುದಕ್ಕೆ ಮಾಡಿದ ಕಾರಣ ನೀನು ಎಂದರೆ ಸ್ಥಾನ ಬೇಕು. ನಿನಗೆ ಕಲಿಸುತ್ತೇನೆ

(ಗಿಳಿಯ ಗೂಡಿನ ಮೇಲೆ ಹಾರಿ, ಅದರ ಗರಿ ಕಿತ್ತುಕೊಂಡಿತು. ನಾಯಿ ಅದನ್ನು ಓಡಿಸಿಬಿಡುತ್ತದೆ)

(ದನ ಅತ್ತ ಬರುವುದು)

ದನ (ಹಾಡುವುದು)

ಸತ್ಯವೆ ನಮ್ಮ ತಾಯಿ ತಂದೆ, ಸತ್ಯವೇ
ನಮ್ಮ ಬಂಧು ಬಳಗವು
ಸತ್ಯವಾಕ್ಯಕೆ ತಪ್ಪಿ ನಡೆದರೆ, ಅಚ್ಯುತನು
ಹರಿ ಮೆಚ್ಚನು ಹರಿಯದೀ ಗೋವು ನಾನು
ಹುಟ್ಟಿಯಾಲಿನ್ನು ದನವೇ ನಾವೆ । ನೆಲದ
ಲಿವ್ಹು ಧನವನು
ನಾವೆ । ಕೊಟ್ಟ ಮಲ್ಲಿಗೆ । ಅಷ್ಟು ಹಾಲನು
ಇತ್ತು ಜನರಿಗೆ ಉಣಬಡಿಸುವೆ । ಹರಿಹರೀ
ಗೋವಿಂದ ನ್ನಾ

ನಾಯಿ—ನೀನೇನು ಇತ್ತ ಬಂದೆ?

ದನ—ಯಜಮಾನನು ಸಂಜೆಗೆ ಹಾಲು ಕರೆದರೆ, ಇವರಿಗೂ ಮಗುವಿಗೂ ಬೇಕಾದಷ್ಟು ಹಾಲನ್ನು ಒಡೆದೇ ಸಲ ಕೊಟ್ಟೆ. ನನಗಂತೂ ಕರುವಿಲ್ಲ. ಅವರೂ ಇವರ ಕೂಸಿಗಾದರೂ, ಪಾಪ, ತಾಯಿ ಇಲ್ಲದರಿಂದ ನನ್ನ ಹಾಲಿನಿಂದ ಅದು ಬದುಕಲೆಂದು. ತುಂಬಾ ಹಾಲು ಕೊಟ್ಟೆನು. ಪುನಃ ಬಂದರು. 'ಒಂದು ಸಲ ಎಲ್ಲ ಹಾಲನ್ನು ಇಳಿಸಿದ ಮೇಲೆ ಕೊಡಲೇ ಇನ್ನು ಎಲ್ಲಿಂದ ಕೊಡಲಿ?', ಯಜಮಾನರು ಬಹಳವಾಗಿ ಪ್ರೀತಿಯಿಂದ ಮೈತಿಕ್ಕಿ ಹಾಲು ಕೊಡು ಎಂದರು. ಒಂದು ತೊಟ್ಟೂ ಹಾಲು ಉಳಿಯಲಿಲ್ಲ. ಅದಕ್ಕಾಗಿ ಸಿಟ್ಟಾಗಿ ನನ್ನನ್ನು ಹಟ್ಟಿಯಿಂದ ಹೊರಗೆ ಓಡಿಸಿದರು. ಹಟ್ಟಿಗೆ ಬೀಗ ಹಾಕಿದರು. ಇನ್ನು ಈ ಕತ್ತಲಲ್ಲಿ ಹತ್ತಿರಲ್ಲಿ ಭಯಪಟ್ಟು ಬೆಳಗ್ಗೆ ಆಗುವ ವರೆಗೆ ಅಲೆದಾಡಬೇಕಾಗಿದೆ ನಾನು ಏನು ಮಾಡಲಿ?

ನಾಯಿ—ಕೂಸಿಗೆ ಇಟ್ಟ ಹಾಲನ್ನು ಬೆಕ್ಕು ಚೆಲ್ಲಿತು. ಅದನ್ನು ಗಿಳಿ ನೋಡಿತು ನನಗೆ ಹೇಳಿತು. ನಾನು ಬೊಗಳಿದೆ ಯಜಮಾನರು ಬಂದರು. ಬೆಕ್ಕನ್ನು ಓಡಿಸಿದರು. ನೀನು ಇಷ್ಟು ಹಾಲು ಕೊಟ್ಟೇ ಇಲ್ಲ ಎಂದು ಅವರು ಆಸೆಯಿಂದ ಹಟ್ಟಿಗೆ ಹೋದರು. ನೀನು ಕೊಡಲಿಲ್ಲ ಹೀಗೆ ಕೂಸಿಗಾಗಿ ಅವರು ಚಿಂತೆ ಹಿಡಿದಿರಬೇಕು

ಬೆಕ್ಕಿನ ಮೇಲಿನ ಸಿಟ್ಟು ನಮ್ಮ ಮೇಲೂ ಬಂತು ಪಾಪ, ಕೂಸಿಗೆ ಏನು ಉಪಾಯವೊ!

ದನ—ಹಾಗಾದರೆ, ನಮ್ಮ ಈ ಕಷ್ಟಕ್ಕೆ ಈ ಬೆಕ್ಕೇ ಕಾರಣವೊ? ಅದು ಎಲ್ಲಿದೆ? ಅದು ಸಿಕ್ಕಿದರೆ, ಅದನ್ನು ಈಗ ಕಾಲಿನಿಂದ ಒದ್ದು, ಕೊಂಬಿನಿಂದ ಸೀಳಿ ಕೊಲ್ಲುತ್ತಿದ್ದೆ. ಬೆಕ್ಕು ಎಲ್ಲಿದೆ?

ನಾಯಿ—ಕೇಳು, ಕೇಳು! ಹಟ್ಟಿಯ ಹುಲ್ಲಿನ ರಾಶಿಯಲ್ಲಿ ತನ್ನ ನೆಂಟರನ್ನು ಕೂಡಿಸಿ ಗಾಯನ ಮಾಡುತ್ತದೆ (ಕೂಗಾಟ ಕೇಳಿಸುವುದು)

ದನ—ಅಯ್ಯೋ! ಅಲ್ಲಿ ಕೋಳಿಯಾಟವುಂಟು ಕೂಟವುಂಟು!

ನಾಯಿ—ಹೌದು, ಅವನೇ, ಅವನೇ ಇತ್ತ ಬಂದ! (ಕೋಳಿ ಬರುವುದು).

ಕೋಳಿ—(ಹಾಡುವುದು) ಕೊ—ಕೊ—
. ಕೊಕ್ಕೋ—ಕ್ಕೊ.
ವೇಳೆಯಾಯಿತು, ಕಾಲವರಿತಿರಿ ಕೇಳಿ ।
ಕಾಲವು ತಪ್ಪುವುದೆನ್ನ ನೋಡಿಕೋ ।
ಶೀಲವು ಕೆಡದಾ ಗೌರವವಿಟ್ಟುಕೊ ।
ಕತ್ತು ಕಳೆಯದೆ ಫಲವನ್ನು ಪಡೆಯೋ ।
ಜೀವನ ಸಾಗಲಿ ಕೀರ್ತಿಯು ಕಟ್ಟಿಕೋ
ಕೊ—ಕೊ—ಕ್ಕೋ—ಕ್ಕೋ!

ದನವರೇ ನನ್ನ ಸಂಸಾರ ಕಟ್ಟಿತು, ಈ ಪಕ್ಷಿಗಳ ಸಂಗೀತ ಕಚೇರಿಯಿಂದ. ಈ ಹಾಡಿದ ಬೆಕ್ಕು ಬಿಟ್ಟ ಮೇಲೆ ಕೂಡ ಕೂಡಿಸಿದೆ ಗೂಡಿಂದ ಇದ್ದಾರೆ ಎಷ್ಟು ಚಿತ್ತಿ ಪ್ರಿಯ ಮಾಡುವರೋ! ಎಷ್ಟು ಪಿಳ್ಳೆಗಳು ಸತ್ತವು!

ದನ—ನನಗೂ ಈ ಬೆಕ್ಕು ಕಂಟಕವಾಯಿತಲ್ಲ

ನಾಯಿ—ನನ್ನ ಕೆಲಸಕ್ಕೆ ಇದು ಕಣ್ಣಿ ಮುಚ್ಚಿತು!

ದನ—ಈ ಬೆಕ್ಕಿಗೆ ಏನು ಗತಿಯಾಗಿ ಅದಕ್ಕೆ ಇತ್ತ ನಡೆದ ಎಲ್ಲ ಹಾದಿ ಬಿಡ್ಡ ಹೊಡೆದು ಮಲಗಿರೂಣ್ಣಿನ

(ಬೆಕ್ಕು ಇತ್ತ ಬಂದು ಇವರ ಮಾತನ್ನು ಕಂಡು ಸಂತೋಷಿಸುವುದು)

ನಂಟರಿಷ್ಟರಿಗೆಲ್ಲ ಇಲ್ಲಿನ ಅವಸ್ಥೆ ನಾಶಗೈದ ಮೇಲೆ, ವಿದಾಯವಂದನೆಯಾಗಿದೆ ಈಗ ಸ್ವಾಮಿಯ ಬಳಿಗೆ, ಮನೆಗೆ ಹೋಗಲಿ. ಪೆಟ್ಟು ಮುಟ್ಟಿ. ಹೋಗಲಿ ಬಿಲ್ಲನ್ನೆ, ಇಲ್ಲಿಂದ ಒಂದೆರಡು ಇಲಿಗಳನ್ನಾದರೂ ಹಿಡಿದು ಅತ್ತ ಹೋಗುವೆನ ಇವರು ಸುಮ್ಮನಾಗಿ ನಿಲ್ಲಲಿ

(ಬೆಳಕು ನ ಗೃಹ ಪ್ರವೇಶಿಸುವುದು)

(ಎಲ್ಲರೂ ಆಶ್ಚರ್ಯದಿಂದ ನೋಡುವರು)

[ಬೆಕ್ಕು ತಪ್ಪಿಸಿಕೊಂಡು ಓಡುವುದು]

ಎಲ್ಲರ ಗಾಯನ—

ಬೆಕ್ಕಿನ ಬಿಡಾರ ಬೇರೆ,
ಸೊಕ್ಕಿನ ಗುಡಾರ ಬೇರೆ,
ಕೋಳಿ—ಕಾಲವನರಿತವನಿಗೆ ಕೊಕ್ಕೊಕ್ಕೊಕ್ಕೋ,
ದನ—ಹಾಲುಮಕ್ಕಳಿಗೆ ದನವನು ಕೇಳಿ,
ಗಿಳಿ—ಬಾಲರಿಗೆ ಶುಕಾ ಹಾಡುವುದಕಾಗಿ,
ನಾಯಿ—ಬೊಳ್ಳು ಬಾಗಿಲಿಗೆ ಕಾವಲು ತಾನು,
ಎಲ್ಲರ—ಏತರ ಹಕ್ಕು
ಮಿಯ್ಯಾಂ ಬೆಕ್ಕು
ಬೆಕ್ಕಿನ ಬಿಡಾರ ಬೇರೆ
ಸೊಕ್ಕಿನ ಬಿಡಾರ ಬೇರೆ
ತೆರೆ ಬೀಳುವುದು)

ಕಾಲನಾಟಕಕ್ಕಿಂತಲೂ ಕರಾಳವಾಗಿದೆ!

★ ಹಿಟ್ಲರನಾಟ

೧೯೪೮ರೊಳಗಾಗಿ ಇಂಗ್ಲಂಡೂ ಜರ್ಮನ ಸಾಮ್ರಾಜ್ಯದ ಒಂದಂಗವಾಗುವುದು.

ಯುರೋಪಿಯದ ಮೇಲೆ ಹಿಟ್ಲರನ ಕಣ್ಣು

ಇನ್ನು ಹತ್ತು ವರ್ಷಗಳೊಳಗಾಗಿ ಸಮಸ್ತ ಯುರೋಪವನ್ನು ಮಾತ್ರವಲ್ಲ ವಿಶ್ವದ ಪಶ್ಚಿಮ ಭಾಗಗಳನ್ನು ಕೂಡ-ಚತುರೋಪಾಯಗಳಿಂದ ಗೆದ್ದು ತನ್ನ ವಿಶಾಲ ಜರ್ಮನ ಸಾಮ್ರಾಜ್ಯಕ್ಕೆ ಸೇರಿಸಿ ಬಿಡುವ ಒಂದು ಯೋಜನೆಯನ್ನು ಹಿಟ್ಲರನು ತಯ್ಯಾರಿಸಿರುವನೆಂಬ ಒಂದು ರೋಮಾಂಚಕಾರಿಯಾದ ವರ್ತಮಾನವು ಪ್ರಪಂಚದಲ್ಲೆಲ್ಲ ಹರಡಿ ಯುರೋಪ-ಅಮೇರಿಕಗಳ ರಾಜಕೀಯ ಮುತ್ಸದ್ದಿಗಳನ್ನೆಲ್ಲ ತಲ್ಲಣಗೊಳಿಸಿದೆ. ಹತ್ತು ವರ್ಷಗಳ ಈ ಯೋಜನೆಯು ಪ್ರಕಾರ ಹಿಟ್ಲರ-ಮುಸಲೋನಿ ಮತ್ತು ಜಪಾನು ಕೂಡಿಯೇ ಹಂಚಿಕೆ ಮಾಡಿ ಯುರೋಪಿನ ಭೂಮಧ್ಯ ಸಮುದ್ರದ ಕರಾವಳಿ ದೇಶಗಳನ್ನು ಮುಸಲೋನಿಯೂ ವಿಶ್ವದ ಪೂರ್ವ ದೇಶಗಳನ್ನು ಜಪಾನೂ, ಯುರೋಪಿಯದ ಉಳಿದ ದೇಶಗಳನ್ನು ಹಿಟ್ಲರನೂ ವಶಮಾಡಿಕೊಂಡು ತಮ್ಮ ತಮ್ಮ ಸಾಮ್ರಾಜ್ಯಗಳನ್ನು ಬಡಾಯಿಸುವ ಆಲೋಚನೆಯಾಗಿದೆ. ಈ ಯೋಚನೆಯ ಪ್ರಕಾರ ಇಂಗ್ಲಂಡ ಆಯರ್ಲೆಂಡುಗಳು ಕೂಡ ಜರ್ಮನ ಸಾಮ್ರಾಜ್ಯಕ್ಕೆ ಸೇರಿ ಬಿಡುವುದು

ಬ್ರಿಟಿಷ ಪ್ರಧಾನ ಮಂತ್ರಿ ಚೇಂಬರಲೇನರು ಜರ್ಮನಿಗೆ ಹೋಗಿ, ಹಿಟ್ಲರನೊಡನೆ ಮಾತುಕತೆ ಬೆಳೆಸಿದ ಫಲಸ್ವರೂಪ ಮ್ಯುನಿಕ್ ಒಪ್ಪಂದವಾಯಿತಷ್ಟೆ! ಆ ಒಪ್ಪಂದವಾಗುವ ಮೊದಲೇ ಹಿಟ್ಲರನು ಈ ಯೋಜನೆಯನ್ನು ತಯಾರಿಸಿ, ತನ್ನ ಆಪ್ತರಿಗೆಲ್ಲ ಆ ವಿಷಯವನ್ನು ತಿಳಿಸಿದ್ದನು. ಮ್ಯುನಿಕ್ ಒಪ್ಪಂದವಾಗುವ ಮೊದಲು-ಜೆಕೊಸ್ಲೊವೇಕಿಯ ಸರಕಾರವು ಸುಡೇಟನ್ ಜರ್ಮನರ ಕಾರ್ಯಾಲಯಗಳ ಜಪ್ತಿ ಮಾಡಿದಾಗ ಈ ಯೋಜನೆಗೆ ಸಂಬಂಧಪಟ್ಟ ಕಾಗದಪತ್ರಗಳು ಆ ಸರಕಾರದ ವಶವಾಗಿದ್ದುವು. ಅವನ್ನೆಲ್ಲ ಇಂಗ್ಲಂಡಿನ ವತ್ರಪತ್ರಿಕೆಗಳಲ್ಲಿ ಪ್ರಕಟಿಸಿ ಹಿಟ್ಲರನ ಸಾಹಸಿಕ ಮಹತ್ವಾಕಾಂಕ್ಷೆಯು ವಿಸಿರುವದೆಂಬುದನ್ನು ತಿಳಿಸಲಿಕ್ಕೆ ಜೆಕೊಸ್ಲೊವೇಕಿಯ ಸರಕಾರವು ಆ ಕಾಗದಪತ್ರಗಳನ್ನು ಇಂಗ್ಲಂಡಿನ ಪತ್ರಕಾರರಿಗೆ ಕಳುಹಿಸಿಕೊಟ್ಟಿತಾದರೂ ಅವು ಹೇಗೋ ಪತ್ರಕಾರರ ಕೈಗೆ ಮುಟ್ಟದೆ ಚೇಂಬರಲೇನರ ವಶವಾದುವು. ಆದರಿಂದ ಮ್ಯುನಿಕ್ ಒಪ್ಪಂದವಾಗುವ ತನಕ ಅವು ಪತ್ರಿಕೆಗಳಲ್ಲಿ ಪ್ರಕಟವಾಗಲೇ ಇಲ್ಲ. [illegible] ಹಿಟ್ಲರನ ಆಶೆ ಪ್ರಯತ್ನಗಳನ್ನು ತಿಳಿದೂ ತಿಳಿದೂ ಜೆಕೊಸ್ಲೊವೇಕಿಯ ವನ್ನು ಹಿಟ್ಲರನಿಗೆ ದಾನಮಾಡಿ [illegible] ತಾವು [illegible] ತಮ್ಮ ಸ್ವಂತ ಕೈಗಳಿಂದ ಕಡಿದುಹಾಕುವ ಆತ್ಮಘಾತುಕ [illegible] ನೀತಿಯನ್ನು ಅವ ಲಂಬಿಸಿದರು.

ಇಂಗ್ಲಂಡಿನ ಮೃತ್ಯುಪತ್ರ

ಈ ವರ್ಷವಲ್ಲವಾದರೂ ೧೯೪೦ರಲ್ಲಿ ಆಗದಿರದು. ಲೇಬರ್ ಪಕ್ಷವು ಈಗಿಂದಲೂ ಅದಕ್ಕೆ ಸಿದ್ಧವಾಗುತ್ತ ಬರುತ್ತಲಿದೆ. ಆದರೆ ಸರ್ ಸ್ಟೆಫರ್ಡ್ ಕ್ರಿಪ್ಸರವರನ್ನು ಈ ಪಕ್ಷವು ಹಿಂತೆಗೆಸಿತ್ತಷ್ಟೆ. ಈ ಪಕ್ಷದಲ್ಲಿ ಮುಂದಾಳಾಗಲೂ ಯೋಗ್ಯರಾದವರನ್ನೇ ಬೋಧಿಸಿದರೆ ಹೇಗೆ? ಸಮಾಜವಾದವೇ ಮುಖ್ಯವೆಂದು ಲೇಬರ್ ಪಕ್ಷವೆನ್ನುತ್ತದೆ, ಎಲ್ಲ ಪಕ್ಷದವರೇ ಬ್ರಿಟಿಷಸರಕಾರಕ್ಕೆ ಬೆಂಬಲವಾಗಿರಬೇಕೆಂದು ಇವರನ್ನುತ್ತಾರೆ. ಪರರಾಷ್ಟ್ರನೀತಿವಿಚಾರವನ್ನು ಮಾತ್ರ ಇವರು ತಿಳಿಸುತ್ತಿಲ್ಲ; ಈ ಪಕ್ಷದಲ್ಲಿ ಉತ್ತಮ ನಾಯಕರಿರುವರು, ಇತರರೊಡನೆ ಸೇರಿದರೆ, ಇವರು ಮರೆಯಾಗುವರು. ಇವರನ್ನು ಮೀರುವ ಅಧಿನಾಯಕರು ಇತರ ಪಕ್ಷಗಳಲ್ಲಿರುವರು. ಲೇಬರ್ ಪಕ್ಷದಲ್ಲಿ, ಮುಖಂಡರು ಆತ್ಮವಿಶ್ವಾಸವಿಲ್ಲದವರೆಂದು ಒಬ್ಬ ವಿಮರ್ಶಕರು ಬರೆದಿರುವರು. ಅಧಿಕಾರವಹಿಸಿ ಆಳುವುದಕ್ಕೆ ಇವರು ಬೆದರುವರಂತೆ. ಈಗ ಮಂತ್ರಿಪದವಿಯಲ್ಲಿರುವವರು ಅಷ್ಟು ಉತ್ತಮ ನಾಯಕರಲ್ಲವಾದರೂ ಆಳುವ ಶಕ್ತಿ ತೋರಿಸಬಲ್ಲರು. ಇವರೆಲ್ಲ ಅದು ಮಾಯುವಂತೆ. ಕ್ರಿಪ್ಸರವರು ಈ ಪಕ್ಷದ ನಾಯಕರು ಅಧಿಕಾರ ನಿರ್ವಹಿಸಬೇಕೇ ಹೊರತು, ವಿರುದ್ಧಪಕ್ಷದವರಾಗಿರಬಾರದೆಂದೇ ಸಾರುತ್ತಾರೆ. ಇದು ನಾಯಕರಿಗೆ ಸಮ್ಮತವಾಗಿಲ್ಲ.

ಸಿಡಿಗುಂಡುಗಳ ಅನಾಹುತ

ವಿದ್ಯುಚ್ಛಕ್ತಿಯ ಯಂತ್ರ ಕಾರಖಾನೆಗಳು, ಅಂಚೆಮನೆಗಳು, ಮೊದಲಾದ ಸ್ಥಳಗಳಲ್ಲೆಲ್ಲ ಸಿಡಿಮದ್ದಿನಿಂದ ಅನಾಹುತಗಳು ಇಂಗ್ಲೆಂಡಿನಲ್ಲಿ ಆಗುತ್ತಲೇ ಇವೆ. ಐರ್ಲೆಂಡಿನಲ್ಲಿ ಕ್ರಾಂತಿಕಾರರು ಈ ರೀತಿ ಮಾಡುತ್ತಿರುವರೆಂದೂ ತಿಳಿದು ಬಂದಿದೆ. ಕೆಲವೇ ವರ್ಷಗಳ ಹಿಂದೆ ಐರ್ಲೆಂಡಿನಲ್ಲಿ ಒಳಕಲಹಗಳೆದ್ದು ಒಂಭತ್ತು ವರ್ಷಗಳ ತನಕ ಹೋರಾಟವಾದುದನ್ನು ಅವರು ಮರೆತರೇ? ಇದರಿಂದ ಬಲುಗಾಬರಿಯಾದರೂ ಸ್ಮರಣೆಯಲ್ಲಿಲ್ಲವೆ? ಹಿಂದೆ ಅಲ್ಲಿ ಉತ್ಪಾತಕ್ಕೆ ಕಾರಣರಾದವರಲ್ಲಿ ಉಳಿದ ಕೆಲವರು ಈ ಉತ್ಪಾತಗಳನ್ನು ಮಾಡಿಸಿದ್ದಾರೆಂದು ಹೇಳುವರು. ಇವರು ಡಿವೇಲೇರಾರಲ್ಲಿ ವಿಶ್ವಾಸವುಳ್ಳವರಲ್ಲ. ಆದ್ದರಿಂದ ಈ ಉತ್ಪಾತ.

ಮೆಂಚೆಸ್ಟರಿನಲ್ಲಿ ಬೆಂಕಿಯ ಅನಾಹುತ

ಅಲ್ಲಲ್ಲಿ ಇಂಗ್ಲೆಂಡಿನಲ್ಲಿ ಸಿಡಿಮದ್ದು ತಾಗಿ ಸಿಡಿದು ಬೆಂಕಿ ಹತ್ತುವ ಸಂಭವಗಳು ಹೆಚ್ಚಾಗುತ್ತ ಬರುತ್ತಲಿವೆ. ಇದಕ್ಕೆ ಐರಿಶ್ ಜನಗಳ ಸಿತಾಬಿಯೇ ಕಾರಣವೆನ್ನುತ್ತಾರೆ. ಇದುವರೆಗೆ ಇಪ್ಪತ್ತು ವರ್ಷಗಳಿಂದ ಎಂದೂ ಆಗಿರದ ವಿಚಿತ್ರ ಅಗ್ನಿಸ್ಫೋಟ ಮಂಚೆಸ್ಟರಿನ ಮಧ್ಯಭಾಗದಲ್ಲಿರುವ ಕೆ... ವಿಕ್ಟೋರಿಯಾ ಸ್ಟ್ರೀಟಿನಲ್ಲಿ ಆಗಿರುತ್ತ ಸಿಡಿಗುಂಡಿನ ಸ್ಫೋಟ... ತಿಳಿದುಬಂತು. ಐದು ಮಾಳಿಗೆಯ ಕಟ್ಟಡ ಧ್ವಂಸವಾಯಿತು. ಈ ಸ್ಥಳಕ್ಕೆ ಕಾರಣ ಐರಿಶ್ ಜನಗಳ ಸಿತಾಬಿಯೆಂದು ಪೊಲೀಸರು ಎಣಿಸುತ್ತಾರೆ.

ವಿಸ್ಫೋಟನೆಗಳು ನೇರಿದ್ದ ಎಂದು ಪ್ರದರ್ಶನದ ಭೋಜನಗೃಹದಲ್ಲಿ ಸಿಡಿಗುಂಡಿನ ಗಳಿಂದ ಎಂಟು ಜನರಿಗೆ ಪೆಟ್ಟಾಗಿದೆ.

ತಾ ೧೧ ೨ ೩೯

ನಾಝಿಗಳ ಕನಸು ★

ಯೆಹೂದ್ಯ ವಂಶದ ನಿರ್ಮೂಲನೆ ಯಾದವರ ಹಾಗೆಯೇ!

ಭೂಲೋಕದಲ್ಲಿ ಒಬ್ಬನೇ ಒಬ್ಬ ಯೆಹೂದ್ಯನೂ ಉಳಿಯಲಿಲ್ಲ. ಕೊನೆಯ ಕೆಲವು ನೂರನ್ನು ಪಂಜರಗಳಲ್ಲಿಟ್ಟು, ಹಳೆಯ ದೋಣಿಗಳಲ್ಲಿ ತುಂಬಿ ದಕ್ಷಿಣ ಧ್ರುವಸಾಗರದ ಕಡೆಗೆ ಒಯ್ಯಲಾಯಿತು. ಅಲ್ಲಿ, ಸುತ್ತಲೂ ನಾನಾ ರಾಜ್ಯಗಳ ನಾನಾ ಯುದ್ಧದ ಹಡಗುಗಳು ಸುತ್ತಾಡುತ್ತಿರುವಾಗ ಈ ಪಂಜರಗಳನ್ನು ಒಂದೇಸಂದಾಗಿ ತೆರೆದು ಒಳಗಿದ್ದವರನ್ನು ನೀರಲ್ಲಿ ಇಳಿಸಲಾಯಿತು. ಸಿಪಾಯರು ಕಲಾಸಿಗಳು ಆ ಹಡಗುಗಳನ್ನೇರಿ, ಈ ಯೆಹೂದ್ಯರ ಮೇಲೆ ಗುಂಡಿನ ಮಳೆ ಸುರಿಸಿದರು. ಒಂದು ತಾಸಿನೊಳಗೆ ಈ ಕವಾಯತು ಮುಗಿಯಿತು. ಚಿಕ್ಕ ಯುದ್ಧದ ದೋಣಿಗಳಲ್ಲಿ ಸಿಪಾಯರನ್ನು ತುಂಬಿಸಿ, ಅಲ್ಲಲ್ಲಿ ತೇಲುತ್ತಿದ್ದವರನ್ನು ಅವರು ನೈಮರೆತಿದ್ದರೂ ಕೊಲ್ಲಲು ಅಪ್ಪಣೆಯಾಯಿತು. ಒಬ್ಬರೇ ಒಬ್ಬರು ಇನ್ನು ಉಳಿದಿಲ್ಲವೆಂದು ತಿಳಿದ ಕೂಡಲೆ,—ಇನ್ನು ಜಗತ್ತಿನಲ್ಲಿ ಶಾಂತಿ, ಅಭ್ಯುದಯ, ಇನ್ನು ಲೋಭ, ಸುಳ್ಳು, ದಗೆ, ಪಿತೂರಿ, ಕಳ್ಳತನಗಳಿಗಿಲ್ಲ ಎಂದು ಉಳಿದೆಲ್ಲ ಜನಾಂಗಗಳೆಂದುವು.

ಯೆಹೂದ್ಯರ ಆಸ್ತಿಯನ್ನು ಅವರನ್ನು ನಿರ್ಮೂಲಿಸಲು ಸಹಾಯ ಮಾಡಿದವರೊಳಗೆ ಹಂಚಲಾಯಿತು. ಇನ್ನು ಸಮಸ್ತ ಜನಾಂಗಗಳು ಸುಖವಾಗಿ ಏಕೆ ಬಾಳಬಾರದೆಂಬ ಪ್ರಶ್ನೆಯೇ ಹುಟ್ಟಲಿಲ್ಲ. ಅಷ್ಟು ಅದು ಖಂಡಿತವಾಗಿತ್ತು.

ಆದರೆ, ಪರಸ್ಪರ ಸಹಾಯ, ಸಂಧಿ ಎಂದು ಇನ್ನು ಹುಟ್ಟಲಿಲ್ಲ. ಜಪಾನಿನವರು ಒಬ್ಬ ಅಸ್ವಭಿಂತದವರನ್ನು ಕೊಂದು ರಸ್ತೆಯ ಮೇಲೆ ಬಿಟ್ಟರು. ಜರ್ಮನರು ಸುಡೆಟಿನ ಜನರ ದೃಷ್ಟಾಂತ ಹಿಡಿದು ಎಲ್ಲಿಯೋ ಇರುವ ಅಲ್ಪಸಂಖ್ಯಾಕರ ಸಲುವಾಗಿ ಸ್ವಿಟ್ಸರ್ಲೆಂಡಿನ ಮೇಲೆ ಬಿದ್ದರು. ಪೋಲೆಂಡಿಯು ಇಟಲಿ ಬ್ರಿಟಿಷರ ವ್ಯಾಪಾರ ಹೆದ್ದಾರಿಯನ್ನು ಆಕ್ರಮಿಸಿ ಅವರೂ ಅಷ್ಟರೇ ಅಲ್ಲದೆ, ಅವರ ದರ್ಪ ಲೋಭ ಮತ್ಸರ ಇತ್ಯಾದಿಗಳನ್ನು ಅಣಗಿಸಬೇಕೆಂದರು.

'ಪ್ರಪಂಚದ ಶಾಪ ಇಂಗ್ಲಿಷರು. ಇವರನ್ನು ನಿರ್ಮೂಲಿಸಬೇಕು' ಎಂದು ಇಟಲಿಯ ಶಾಲೆಗಳಲ್ಲಿ ಕಲಿಸಿತು.

ಹೀಗಾಗಿ, ಪ್ರಪಂಚದಲ್ಲೆಲ್ಲ ಮಹಾಯುದ್ಧವು ಪ್ರಾರಂಭವಾಯಿತು. ಯಾವ ಜನಾಂಗ ಹಗೆ ಎನ್ನುವುದೇ ತಿಳಿಯದ ಸ್ಥಿತಿಯಾಯಿತು. ಸ್ವಂತದ ಜರ್ಮನರನ್ನು ಅಂಚಿನಲ್ಲಿ ಎದುರಿಸಿ, ಒಬ್ಬನೇ ಒಬ್ಬ ಜರ್ಮನನು ಬದುಕಿರುವ ತನಕ ಲೋಕಶಾಂತಿಯು ಅಸಾಧ್ಯವೆಂದರು. ಹಿಟ್ಲರ ಪುಸ್ತಕದಲ್ಲಿ ಫ್ರಾನ್ಸನ್ನು ಧ್ವಂಸಗೊಳಿಸಬೇಕಾಗಿ ಬರೆದಿದೆಯಲ್ಲವೆ, ಅದೇ ಈ ಅಭಿಪ್ರಾಯಕ್ಕೆ ಆಧಾರವಾಯಿತು.

ಅಮೇರಿಕನರು ಬಹಳ ಹೊತ್ತು ಕಾಯುತಿದ್ದು, ಕೊನೆಗೆ ಒಂದು ದಿನ ಜಪಾನಿಯರ ಮೇಲೆ ಯುದ್ಧಾರಂಭ ಮಾಡಿದರು. ಯಾವನೊಬ್ಬ ನೈಮಾನಿಕನು ತನ್ನ ವಿಮಾನದಿಂದ ಸಿಡಿಗುಂಡುಗಳನ್ನು ತನಗೊಲ್ಲದವರ ಮೇಲೆ ಚೆಲ್ಲುವುದಕ್ಕೆ ಹಿಂದೆಗೆವ ಅಗತ್ಯವೇನೂ ಇದ್ದಿಲ್ಲ.

ಯುದ್ಧ ನಡೆವ ದೇಶಗಳೊಳಗೆ ನಡೆಯುತ್ತಿದ್ದುದರ ಮಾತಂತಿರಲಿ. ಪ್ರತಿದೇಶದಲ್ಲಿಯೂ ಜನಗಳಲ್ಲಿ ಪಂಗಡಗಳಾಗಿದ್ದು ಒಂದು ಮತ್ತೊಂದನ್ನು ಅಣಗಿಸುವ ಪ್ರಯತ್ನ ಮಾಡುತ್ತಿತ್ತು. ಎಲ್ಲಿ ಕೇಳಿದರೂ, ಅಸೂಯೆ ಅಪ್ರಾಸ ಕಳವು ಸುಲಿಗೆ ಮಂತ್ರಗಳೇ ತುಂಬಿದ ಮಾತು ಕೇಳಬರುತ್ತಿತ್ತು. ಒಂದು ಜನಾಂಗವು ಮತ್ತೊಂದನ್ನು ನಂಗುವ ಪ್ರಯತ್ನ ಮಾಡಿತು. ಸುಳ್ಳು ಸುದ್ದಿಗಳ ಪ್ರಕಟನೆ ಬಹಳವಾಗಿತ್ತು. ಪತ್ರಿಕೆಯೊಬ್ಬರಿಗೂ ಸ್ವಾತಂತ್ರ್ಯ ಬಹಳ ಬೇಕಾಗಿತ್ತು. ತಮ್ಮ ಶಾಲೆಗಳನ್ನು ಅವರು ಹಿಂತೆರೆಲಿ... ಸತ್ಯವನ್ನು ಕದ್ದು ಮುಚ್ಚುವುದ ಮೊದಲಾದುವು ಸಾಮಾನ್ಯವಾಗಿದ್ದುವು.

ಆಫ್ರಿಕಾಖಂಡದಲ್ಲಿನ ಜನಾಂಗವು ಎಂದೂ ಮಗ್ಗಿರುತ್ತ... ಉಪವಾಸದಿಂದ ಕೋಟ್ಯಂತರ ಸತ್ತರು. ಪಾಶ್ಚಾತ್ಯರ ದುರ್ಗತಿಯೇ ಮೇಲೆ ಏಳ... ಕಾಮಾದಿ ಇತ್ಯಾದಿಗಳೂ ಇದ್ದುವು. ಆದರೆ, ಅವರ ಪ್ರಾಚೀನ ಶತ್ರುಗಳನ್ನು ಬಹಳವಾಗಿ ಸಿದ್ಧವಿಟ್ಟಿದ್ದರು.

ಯೆ ಹೂದ್ಯರಲ್ಲಿ ಕೊನೆಯವನು ಸತ್ತ ಕರವಾಯ. ಕೆಲವು ವರ್ಷಗಳ ತನಕ ಈ ಬಗೆಯ ಯುದ್ಧಗಳಾದುವು. ಕೊನೆಗೆ ಎರಡು ಒಳ್ಳೆ ಪಂಗಡಗಳು ಉಳಿದುವು. ಒಂದು ಪಂಗಡದವರ ಮಕ್ಕಳಲ್ಲಿ ಕಲಿಗಳ ಪತ್ತೆಯಿತ್ತು... ಇದ್ದಿಲ್ಲ. ಇವರಾದರೂ ತಾವೇ ಸ್ವಪಕ್ಷ ನಿರ್ಮೂಲಿಸಿ ಎಂದ ಪ್ರತಿಯೊಬ್ಬರು ಮತ್ತೊಬ್ಬನ್ನು ಕೊಂದು ತೀರದೆ ಜಗತ್ತಿನ ಶಾಂತಿಯನ್ನು ಕಾಯ್ದರು.

ಕಟ್ಟಕಡೆಗೊಬ್ಬನೇ ವ್ಯಕ್ತಿಗಳು ಉಳಿದುವು ಒಂದು ಗುಡಿಸಲಲ್ಲಿ, ಒಬ್ಬ ಮುದುಕ, ಒಬ್ಬ ಮುದುಕಿ. ಮುದುಕನ ಮುಖಕ್ಕೆ ಕೆಲವು ಕಲೆಗಳುಳ್ಳವನು. ಮುದುಕಿಯು ಮುಖಕ್ಕೆ ಹಾನಿಯಿಲ್ಲ.

ಒಂದು ರಾತ್ರಿ, ಮುದುಕಿ ತಾನೇ ಪರಿಶುದ್ಧ ಆರ್ಯವಂಶದವಳೆಂದು ಮುದುಕನನ್ನು ಕೊಡಲಿಯಿಂದ ಕೊಂದುಬಿಟ್ಟಳು. ಅಷ್ಟರಲ್ಲಿ ರಾತ್ರಿ ಉಣ್ಣುವ ಮೊದಲೇ ಅನ್ನದಲ್ಲಿ ಅವನು ಬೆರಸಿಟ್ಟ ವಿಷದ ಪರಿಣಾಮವಾಗಿ ಅವಳು ಸತ್ತಳು!

ಇನ್ನು ಕುಪಿತ ಶತ್ರುಗಳಿಗೆ ಒಂಬತ್ತು ವಿಲಾಸ್ಯ ದೇಶವೆಲ್ಲ ಅವರವು. ಜಿಂಕೆಗಳು ಸಾಧುವಾಗಿ ಯಾವ ಭಯವೂ ಇಲ್ಲದೆ ಅತ್ತಲಿತ್ತ ನಲಿದುವು. ಮೋಡಗಳೂ ಧೀರರಾದುವು. ನಗರಗಳು ಕಾಡಾದುವು.

ಅಲ್ಲಿಗೆ ಜಗತ್ತಿನಲ್ಲಿ ಶಾಂತಿ, ಲೋಭ ಮಂತನ ಕಳವುಗಳು ಮಾಯವಾದುವು.

ಜೀವನದಲ್ಲಿ ನೂತನ ಆಸಕ್ತಿ ಸುಖಾನಂದಗಳು

ರಕ್ತ ಕ್ಷೀಣತೆಯಿಂದುಂಟಾಗುವ ಬಿಳಿಚಿಕೆ ನರಗಳ ದುರ್ಬಲತೆ, ಹಸಿವಿಲ್ಲದಿರುವಿಕೆ, ನಿದ್ರಾಹೀನತೆ ನಿಶ್ಶಕ್ತಿ ಮುಂತಾದ ವ್ಯಾಧಿಗಳಿಂದ ಪೀಡಿಸಲ್ಪಟ್ಟು, ಜೀವನವನ್ನೇ ಒಂದು ಹೊರೆಯಾಗಿ ಎಣಿಸಿ ಕಾಲವನ್ನು ನೂಕುತ್ತಿರುವವರಿಗೆ ಶುದ್ಧ ರಕ್ತಾಭಿವೃದ್ಧಿಯನ್ನೂ, ವೀರ್ಯೋತ್ಸಾಹಗಳನ್ನೂ ಜೀವನದಲ್ಲಿ ಸುಖಾನಂದಗಳನ್ನೂ ಉಂಟುಮಾಡುವ ಅದ್ಭುತವಾದ ಬಲವರ್ಧಕ ಔಷಧವೆಂದರೆ

ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತ

ಸ್ತ್ರೀಪುರುಷರು ವಯೋಭೇದವಿಲ್ಲದೆ ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು.

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು:
ಆಯುರ್ವೇದಾಶ್ರಮ
ಮದರಾಸು.

ಸ್ಟಾಕಿಸ್ಟರು:
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು



ಇನ್ನು ಮುಂದೆ
ವಿವಿಧ ಡಿಗ್ರಿ ಡಿಪ್ಲೋಮಗಳನ್ನು
ಪಡೆಯಲಿರುವ ವಿದ್ಯಾರ್ಥಿಗಳು
ಇಂತಿಷ್ಟು ಪ್ರವೇಶಪಾಠ್ಯಕ್ರಮಗಳುಳ್ಳವರಾಗಬೇಕೆಂದು
ಮದ್ರಾಸು ಸರಕಾರವು
ನಿರ್ಧರಿಸುವುದರಲ್ಲಿದೆ.

ದಿವಂಗತ ಪೋಪಸ್ವಾಮಿ

ಪಾಯಸ್ XI

ರೋಮ್—ಫೆಬ್ರವರಿ ತಾ ೧೦, ಬೆಳಗ್ಗೆ ೯ ಘಂಟೆಗೆ (೩.೧ ಮಧ್ಯಾಹ್ನ ಇಂಡಿಯನ್ ಟೈಮ್) ಪೋಪಸ್ವಾಮಿ ಸ್ವರ್ಗಾರೋಹಣ ಮಾಡಿದರು. ಇವರ ಆಪ್ತರು ಅದೇ ಕಾಲ, ಮಹಾ ನಿರ್ವಾಣಕ್ಕೆ ಸಮೀಪಿಸುವವರಿಗಾಗಿ ಪ್ರಾರ್ಥನೆ ಮಾಡುವಾಗ, ಪೋಪಸ್ವಾಮಿ ತಾವೂ ಅದೇ ಪ್ರಾರ್ಥನೆ ಹೇಳುವಂತೆ ತುಟಿ ಅಲ್ಲಾಡಿಸುತ್ತಲಿರುವಷ್ಟು ಬಲಹೀನರಾಗಿದ್ದರು ಕೊನೆಗೆ, ಪ್ರಯಾಣ ಕಾಲದಲ್ಲಿ, ಬಲಗೈಯನ್ನೆತ್ತಿ, ಸಮಸ್ತರನ್ನು ಆಶೀರ್ವದಿಸಿ, ಕೈಯನ್ನಿಳಿಸಿದೊಡನೆ ಈ ಪ್ರಪಂಚದ ಮೇಲೆ ಕಣ್ಣು ಮುಗಿದರು. ಪ್ರಾಣಗಳು ಅಳಿದುವು, ಆತ್ಮವು ಸ್ವರ್ಗದ ಕಡೆ ಹೊರಟಿತು ಕೊನೆಯ ಮಾತುಗಳು—"ಶಾಂತಿ! ಶಾಂತಿ ಓ ಯೇಸುಸ್ವಾಮಿ!" ಎಂಬಂತಿದ್ದುವು

ಇವರ ಪೂರ್ವಾಶ್ರಮದ ಹೆಸರು ಎಂಬ್ರೊಸ್ ಡಾಮಿಯನ್ ಏಕಿಲ್ಲೆ ರಾತ್ತಿ, ಜನನ ೧೮೫೭ ಮೇ ತಾ ೩೧ ರೇಶ್ಮೆ ನೇಯ್ಗೆ ಮಾಡುವವರ ಕುಟುಂಬದಲ್ಲಿ ಹುಟ್ಟಿದವರು. ಬಹಳ ಮೇಧಾವಿಗಳು. ಬಾಲ್ಯದಿಂದಲೂ ವಿದ್ಯಾರ್ಜನೆಯಲ್ಲಿ ನಿಪುಣರಾಗಿ, ಬೇಗನೆ ಪಂಡಿತರಾಗಿ, ೩೩ನೆ ವಯಸ್ಸಿನೊಳಗಾಗಿ ವೈದಿಕರಾಗಿ ಸ್ಥಾನಹೊಂದಿದರು. ಕ್ರಮೇಣ ಒಂದೊಂದೇ ಅಂತಸ್ತಿಯು, ಹಾಗೂ ಒಂದೊಂದೇ ದೇಶದಲ್ಲಿ ಉದ್ಯೋಗ ಮಾಡುತ್ತ, ಪ್ರತಿ ಕಡೆ ಕೀರ್ತಿ ಸಂಪಾದಿಸಿ, ಉತ್ತಮ ಆದಳಿತ ಮಾಡಿದುದಕ್ಕಾಗಿ ಹೆಸರುಗೊಂಡು, ಈಗ ಅವರ ಪಟ್ಟಾಭಿಷೇಕದ ವರ್ಧಂತ್ಯುತ್ಸವವು ತಾ ೧೨ರಲ್ಲಿ ಜರಗುವಂತಿರುವ ವರೆಗೂ ಜೀವಿಸಬೇಕೆಂದು ಸರ್ವರ ಇಚ್ಛೆ ಇದ್ದಿದ್ದರೂ, ದೇವಾಜ್ಞೆ ಬಂದು ತೆರಳಿದರು

ಹೃದ್ರೋಗವೇ ಅವರ ಕೊನೆಯ ವಿಶೇಷ ಜಾಡ್ಯವಾಗಿತ್ತು ಥಟನೇ ಪಟೇ ಆಕ್ರಮಿಸಿತು ೧೯೩೬ನೆ ಡಿಸೆಂಬರಿನಿಂದಲೂ ಹೀಗೆ ನರಳಿರುವರು

ಫೆಬ್ರವರಿ ತಾ ೨೮, ಮುಖ್ಯ ವೈದಿಕ ಶಿಖಾಮಣಿಗಳು ಸೇರಿ ಇವರ ಉತ್ತರಾಧಿಕಾರಿಯನ್ನು ಚುನಾಯಿಸುವರು ನಾನ್ನೂರ ವರ್ಷಗಳಿಂದ ಲೂ ಇಟೆಲಿಯ ವರೇ ಪೋಪರಾಗುವ ಪದ್ಧತಿಯನ್ನು ಸ್ವಲ್ಪ ಬದಲಾಯಿಸಿ, ಅಮೇರಿಕದ ಅಥವಾ ಇತರ ದೇಶದವರನ್ನು ಈ ಬಾರಿಗೆ ಆರಿಸಬಹುದೆನ್ನುತ್ತಾರೆ

ಧರ್ಮ ವಿಚಾರಗಳಲ್ಲಿ ಮಾತ್ರವಲ್ಲದೆ, ರಾಜಕೀಯ ವಿಚಾರಗಳಲ್ಲೂ ದಕ್ಷರಾಗಿದ್ದರ ಜಗತ್ತಿನ ಮುಂದೆ ಒರ ವ ಪ ತಿಯೊಂದ ಪ್ರ ಮುಖ್ಯ ವಿಚಾರದಲ್ಲಿ ತನ್ನ ಸಮಾಜಕ್ಕೆ ೪೦೦ ಮಿಲ್ಲಿಯ ಜನಸಂಖ್ಯೆ—ಇವರ ಅಗಾಗ ಕಳು ಹುತ್ತಿದ್ದ ಸ್ಪಷ್ಟ ಪತ್ರಕಗಳ ಧಿವ್ಯವಾಗಿದ್ದುವು. ಎಷ್ಟೋ ಸರಕಾರಗಳೊಡನೆ ಒಪ ದಗಳನ್ನು ಮಾಡಿ, ಆ ಜನಾಂಗಗಳ ಪ್ರತಿನಿಧಿಗಳು ತನ್ನ ಅರಮನೆಗೆ ಬರುವಂತೆ ಮಾಡಿದರು ೬೦ ವರ್ಷಗಳಿಂದಲೂ ಇಟೆಲಿಯ ಸರಕಾರದೊಳಗೆ ಸೇರಿದ್ದ ತನ್ನ ಸ್ವಾಸ್ಥ್ಯವನ್ನು ಪ್ರತ್ಯೇಕಿಸಿ ಸ್ವತಂತ್ರರಾದರು ಸ್ವತಂತ್ರ ರಾಜನಷ್ಟೆ ಅಧಿಕಾರ ಕಳಿದ್ದರು ಇಡೀ ಇಟೆಲಿ ರಾಜ್ಯದ ಧರ್ಮಶಾಸ್ತ್ರದ ಕಾನೂನನ್ನೆ ಹಲವು ವಿಚಾರಗಳಲ್ಲಿ ಇವರ ಒತ್ತಾಸೆಯಿಂದ ಮಾಡಿಕೊಂಡಿದೆ ಇಪ್ಪತ್ತು ರಾಜಕೀಯ ಕರಾರುಗಳನ್ನು ಮಾಡಿದ್ದರು. ಮುಸ್ಸೊಲಿನಿಯನ್ನು ಕರೆಯಿಸಿ (ಅತ್ಯಪೂರ್ವ ಭೇಟಿ) ಅವನಿಗೂ ಬಿರುದುಕೊಟ್ಟಿದ್ದರು

ಕ್ರಿಸ್ತಸ್ವಾಮಿಯ ಆಳಿಕೆಯಲ್ಲಿ
ಕ್ರಿಸ್ತಸ್ವಾಮಿಯ ಶಾಂತಿ

ಎಂಬುದಷ್ಟೆ ಅವರ ಮೂಲಮಂತ್ರವಾಗಿದ್ದಿತು.

ಜನನಗಳನ್ನು ಮಿತಪಡಿಸುವ ಕ್ರಮಗಳು, ವಿವಾಹ ಸಂಬಂಧ ವ್ಯವಸ್ಥೆಗಳು, ವಿದ್ಯಾ ಪ್ರಚಾರ, ರಾಜ್ಯಾಂಗದಲ್ಲಿ ವೈದಿಕ ಸಂಬಂಧ, ವಿಶೇಷ ವಿಪರೀತವಾದ ರಾಷ್ಟ್ರೀಯ ಭಾವ, ಕೊಮ್ಯುನಿಜಮ್ ಮೊದಲಾದ ನಾನಾ ವಿಚಾರಗಳಲ್ಲಿ ತೀಕ್ಷ್ಣಾಭಿಪ್ರಾಯ ಪ್ರಕಟಿಸುವ ಧೈರ್ಯವು ಇವರದು.

ಧರ್ಮವನ್ನು ನಿರ್ಮೂಲಿಸುವ ಕೋಮ್ಯುನಿಜಮ್, ಸಮಾಜದ ತರಗತಿಗಳೊಳಗೆ ವೈಮನಸ್ಸು ಸೃಷ್ಟಿಸುವ ಕೊಮ್ಯುನಿಜಮ್, ಕೆಲವರು ನಿರಂಕುಶರೂ ನೇರ ಸಮಸ್ತರ ಸ್ವಾಯತ್ತವನ್ನು ಅಪಹರಿಸುವ ಕೊಮ್ಯುನಿಜಮ್—ಇವರಿಗಾಗುತ್ತಿರಲಿಲ್ಲ

ನಾಝಿ ಪದ್ಧತಿಯನ್ನು ವಿರೋಧಿಸಿ, ಜರ್ಮನ್ ಭಾಷೆಯಲ್ಲೇ ಮೊದಲಾಗಿ ಇವರು ರಾಯಸ ಬರೆದರು ಸ್ವಾತಂತ್ರ್ಯವೇ ಮುಖ್ಯವೆಂಬುದನ್ನು ಬೋಧಿಸಿ, ಈ ನಾಝಿಗಳ ನಿರಂಕುಶತೆ ದೂರವಾಗಬೇಕೆಂದರು "ಯಾವುದೊಂದು ವಂಶ, ಜನಾಂಗ, ದೇಶದ ಸರಕಾರಗಳೇ ಸರ್ವಶ್ರೇಷ್ಠವೆಂದು ಯಾವನು ಬಗೆವನೋ ಆತನು ದೇವರ ಚಿತ್ತಕ್ಕೆ ವಿರೋಧವನ್ನೆ ಉಂಟುಮಾಡುತ್ತಾನೆ ದೇವರಿಗೂ ಆತನು ಸೃಷ್ಟಿಸಿದ ಜೀವಿಗೂ ಇರುವ ತಾರತಮ್ಯವನ್ನು ನಿರ್ಮೂಲಿಸಲು ಹೊರಡುವವನು ಯಾವ ಜೀವಿಯನ್ನು ದೇವರ ಸಮಾನತೆಗೆ ಏರಿಸುವುದರ ಮೂಲಕ ಶ್ರೇಷ್ಠತೆ ಸಾಧಿಸುತ್ತಾನೋ, ಅದರಿಂದ ಅವನು ವ್ಯರ್ಥವಾದುದರ ಪ್ರವಾದಿಯಾಗುವನು" ಎಂದರು.

ಸುಮಾರು ೨೦ ಹೊಸ ಸರಂತ ನಿರ್ಮಾಣವಾದುವು. ಇವರ ಕಾಲದಲ್ಲಿಯೆ ನೂರು ಹೊಸ ಮಿಶ್ಯನುಗಳ ಸ್ಥಾಪನೆಹೊಂದಿದವು

೧೯೩೩ರಲ್ಲಿ ಜ್ಯುಬಿಲಿ ವರ್ಷ ಸಂಭವಿಸಿದ ಹನ್ನೆರಡು ಲಕ್ಷ ಯಾತ್ರಿಕರು ಆಗ ರೋಮಿಗೆ ಬಂದಿದ್ದರ ನಮ್ಮ ದೇಶದಿಂದ ಅತ್ಯ ನಾಲ್ಕೈದು ಯಾತ್ರಿಕರು ಹೋದದ್ದುಂಟು

ಪ್ರತಿಯೊಬ್ಬ ಹಿಂದೀ ಯಾತ್ರಿಕನಿಗೆ ತನ್ನ ಉಂಗುರವನ್ನು ಮುದ್ದಿಡ ಕೊಟ್ಟು, ಸಮಸ್ತರೊಡನೆ ಸಂಭಾಷಿಸಿ, ೨೦ ನಿಮಿಷಗಳ ಕಾಲ ಉತ್ತಮ ಭಾಷಣ ಮಾಡಿದರು ಇತರ ಯಾವ ಯಾತ್ರಿಕರಿಗೂ ದೊರೆತ ಆದರಕ್ಕಿಂತ ನಮಗೆ ಹೆಚ್ಚಿನ ಸ್ವಾಗತ ಕೊಟ್ಟಿರುವೆವು ಏಕೆಂದರೆ ನಿಮ್ಮ ಮಾತೆಯ ಸಹಕಾರವೇ ಬೇರೆ ನಿಮ್ಮಲ್ಲಿ ಪ್ರತಿಯೊಬ್ಬ [illegible] ಕಯುವು ಪವಿತ್ರವಾಗಿದೆ ನಿಮ್ಮ ನಡುವೆ ನಾವು ನಡೆವಂತೆ, ವಿಶಾಲವಾದ ಹಿಂದೂದೇಶದ [illegible] ಸನಂದಿಭಾವನೆಯು ನಮ್ಮಲ್ಲಿ ಉಂಟಾಗಿದೆ [illegible] ಮೂಲಕವಾಗಿ ಇದೀ [illegible] ನಾವು ವಂದಿಸತ್ತೇವೆ ಸವಸ್ತರಿಗೂ ನಮ್ಮ ಆಶೀರ್ವಾದಗಳ [illegible] ಇಂಡಿಯಾದವನ್ನು ನಾವು ಆಶೀರ್ವದಿಸುತ್ತೇವೆ ' ಎಂದರು.

ಇಂಡಿಯದಲ್ಲಿ [illegible] ಇನ್ನೆ ಷ್ಟು [illegible] ದೇಶೀಯ ಬಿಷಪರನ್ನಾಗಿ ನಿಯಮಿಸಿದವರ [illegible]

ಶ್ರೀ ವಾಕರ್ [illegible] ಹಲವು ಗ್ರಹಸ್ಥರಿಗೆ ವೈ[illegible] ದೃಷ್ಟಿಯಿಂದ [illegible] ಪಡಿಸಿದರು

ಕೊಂಗ್ರೆಸಿನ ಕಾರ್ಯಕಾರಿಗಳು

ನಾನಾ ಊಹಾಪೋಹಗಳು

ಸರದಾರ ವಲ್ಲಭಭಾಯಿ ಪಟೇಲರೇ ಮೊದಲಾಗಿ ಒಟ್ಟು ೧೨ ಮಂದಿ ತಮಗೆ ಕೊಂಗ್ರೆಸ್ ಕಾರ್ಯಕಾರೀ ಮಂಡಲದಲ್ಲಿರುವ ಸ್ಥಾನವನ್ನು ತ್ಯಜಿಸುವ ಇಚ್ಛೆ ತೋರಿಸಿ, ಶ್ರೀ ಸುಭಾಷಚಂದ್ರರು ತಮಗೆ ಬೇಕಾಗಿರುವ ಕಾರ್ಯಕ್ರಮವನ್ನು ಗೊತ್ತು ಮಾಡಿ, ಆಗತ್ಯ ಅನುಕೂಲರನ್ನು ತಮ್ಮ ಕಾರ್ಯನಿಯುಕ್ತರನ್ನಾಗಿ ಮಾಡಲು ಅವಕಾಶ ಸಿಗುವಂತೆ, ಒಂದು ತಿಂಗಳ ಅವಧಿಯನ್ನಿತ್ತು ರಾಜೀನಾಮೆ ಕೊಟ್ಟಿರುವರೆಂದ ತಿಳಿದು ಬಂದಿದೆ

ಈ ಹನ್ನೆರಡು ಮಂದಿ ಸದಸ್ಯರೂ ತಮ್ಮೊಳಗೆ ಧಾರಾಳವಾಗಿ ಆಲೋಚಿಸಿಕೊಂಡು ಹೀಗೆ ವರ್ತಿಸಿರುವರಾ ಗಿಯೂ ಪ್ರಕಟವಾಗಿದೆ

ಈ ಪತ್ರವು ಸುಭಾಷರ ಕೈಗೆ ತಲುಪಿದ ಅವರು ಗಯಾದಲ್ಲಿರುವ ರಾಜಕೀಯ ಪರಿಷತ್ತಿನ ಕಾರ್ಯ ಮುಗಿಸಿ, ತಾ ೧೨ರಲ್ಲಿ ವ ಹಾತ್ಮರನ್ನು ಕಾಣುವರೆಂಥೂ ಸೂಚಿತವಾಗಿದೆ

* * * *

ಸರ್ವರೂ ಒಂದೇಯಾಗಿ ಬ್ರಿಟಿಷ ಸಾಮ್ರಾಜ್ಯಶಾಹಿಯ ವಿರುದ್ಧ ನಿಲ್ಲುವುದಗತ್ಯ ಹೊರತು ಈಗ ಕೊಂಗ್ರೆಸಿನಲ್ಲಿ ಒಡಕುಂಟಾಗಬಾರದು ಎಂದು ಶ್ರೀ [illegible]ಯವರು ಹೇಳುತ್ತಾರೆ

ಫೆಡರೇಶನ—ಸಂಸ್ಥಾನ—ದೇಶೀಯ ರಾಜ್ಯಗಳ ಸ್ಥಿತಿ ಇವೆರಡೇ ಮುಖ್ಯ ಸಮಸ್ಯೆಗಳು ಈಗ ಚರ್ಚೆಗೆ ಅರ್ಹವಾಗಿವೆ ಕೌನ್ಸಿಲುಗಳ ಕೆಲಸ, ಈ ಮೋಡ[illegible] ಪಾಲಿಟಿ ಇವುಗಳಿಗೆ ಕೆಲ ಪ್ರಿಯರನ್ನು ತ್ಯಜಿಸೋಣ ಇಷ್ಟೆ ಕೊಂಗ್ರೆಸು ಕಮಿಟಿಗಳ ಕೆಲಸವಾಗಿದೆಯಾದರೂ ಸತ್ಯಾಗ್ರಹ ಮೊದಲಾದ ಸಾರ್ವಜನಿಕ [illegible] ಗಳಲ್ಲಿ ಕೊಂಗ್ರೆಸಿನವರು ಭಾಗವಹಿಸುತ್ತಾ [illegible] ಶಾಸನೋಲ್ಲಂಘನೆಗೆ ಸಿದ್ಧರಾಗಿರ ವರು

[illegible] ಸ್ಥಿತಿ ಬದಲಾಗದ ಮಹಾತ್ಮರ [illegible] ವಾಗಿ [illegible] ಅದನ್ನು ಅವರು ಗಣನೆಗೆ [illegible] ತ್ರಿಪುರ ಅಧಿವೇಶನಕ್ಕೆ [illegible] ಇದನ್ನು ಸಂಪೂರ್ಣ ವರಿ ಸುದಿರಲಿ

ಸದ್ಯಸಿನ [illegible] ಸಮಿತಿ [illegible] ಸಿದ್ಧ[illegible] ತಾ [illegible] ರಲಿ ಮದ್ರಾಸ್ [illegible] ನಡೆಯಿತು

[illegible] ಚುನಾವಣೆ [illegible] ವಾಗಲಿ

ಸಮಸ್ತರು ತಮ್ಮ ಭೇದಭಾವಗಳನ್ನು ಮೂಲೆಗೊತ್ತಿ, ಒಂದಾಗಿ ಮುಂದಿನ ಹೋರಾಟದಲ್ಲಿರಬೇಕೆಂಬುದೇ ಮುಖ್ಯ ವಿಷಯ"

* * * *

ಎಡಪಕ್ಷದವರೇ ಮಾತ್ರ ಮುಂದಿನ ಕಾರ್ಯಕಾರೀ ಮಂಡಲದ ಸದಸ್ಯರಾಗರು ಎಂಬುದನ್ನು ಸೋಶಲಿಸ್ಟ ಮುಖಂಡರು ಶ್ರೀ ಪುರುಷೋತ್ತಮದಾಸ ತ್ರಿಕಮದಾಸರು ಕಲ್ಕತ್ತೆಯಲ್ಲಿ ಅಧ್ಯಕ್ಷರ ಕರೆದ ಸಭೆಗೆ ಹೋಗಿದ್ದು ಹಿಂತಿರುಗಿ ಬಂದು ಹೇಳಿರುವರು. ಅಧ್ಯಕ್ಷ ಚುನಾವಣೆಯ ಫಲಿತಾಂಶದಿಂದಾದ ವಿದ್ಯಮಾನಗಳನ್ನು ವಿಮರ್ಶಿಸುವುದಕ್ಕಾಗಿ ಈ ಸಭೆ ಕೂಡಿಸಲಾಗಿತ್ತು. ಗಾಂಧಿಜಿಯವರನ್ನು ಕಂಡಾದ ಬಳಿಕ, ಅಧ್ಯಕ್ಷರು ಹೊಸ ಸೂಚನೆಗಳನ್ನು ಮುಂದಿಡುವರು ಬ್ರಿಟಿಷ ಸರಕಾರಕ್ಕೆ ಖಂಡಿತ ಎದುರಿಸುವ ವಿಚಾರದ ಮಾತಾಗಿದೆ [illegible] ಹಿಂದೀಯರಿಗೆ ಸಂಪೂರ್ಣ ಸ್ವರಾಜ್ಯಕೊಡಬೇಕೆಂದು ಕೇಳಿಕೆ ಹೊರಟರೆ ಪಾಶ್ಚಾತ್ಯ ವಿದ್ಯಮಾನಗಳಿಂದ ಈ ವಿಚಾರವನ್ನು ವಿಳಂಬಿಸಲು ಇಂಗ್ಲೆಂಡಿಗೂ ಸಾಧ್ಯವಾಗದ [illegible] ತಿಳಿಸುವುದನ್ನು ಗಾಂಧಿಭಕ್ತರು ಒಪ್ಪಿದ ಹಾಗಾದಲ್ಲಿ ಪ್ರತ್ಯೇಕ ಪಕ್ಷಗಳಾಗವು ಒಪ್ಪದವರು ಸೇರದಿದ್ದರೂ, ಯಾವ ಪಕ್ಷದವರೂ ಅಲ್ಲದವರು ಸೇರಿ ಎಡಪಕ್ಷವನ್ನು ಸಮರ್ಥಿಸುವರು.

* * * *

ಶ್ರೀ ಎಸ್ ಶ್ರೀನಿವಾಸಯ್ಯಂಗಾರರೂ ಇದೇ [illegible] ಮಾತುಕತೆ ಎತ್ತಿರುವರು. ಅತ್ತ ಒಬ್ಬರ ಭಾವನಾಚಾತುರ್ಯದಿಂದ ಕೇಂದ್ರ ಸರಕಾರವು ಉಂಟಾದಲ್ಲಿ ಕೆಳಗೆ ಕಾಣಿಸಿರುವಂತೆ ಮಂತ್ರಿಪದಗಳಿವೆ ಎನ್ನುವರು —

ಪ್ರಧಾನಿ [illegible] ಗಾಂಧಿ
ಪರದೇಶಗಳ ಮಂತ್ರಿ ಶ್ರೀ ಜವಾಹರಲಾಲ ನೆಹರು
[illegible] ಭೂಲಾಭಾಯಿ ದೇಸಾಯಿ
[illegible] ಮೌಲಾನಾ ಅಬುಲ್ ಕಲಾಮ್ ಆಜಾದ
[illegible] ರಾಜೇಂದ್ರ ಪ್ರಸಾದ
[illegible] ವಲ್ಲಭಭಾಯಿ ಪಟೇಲ
ಸೈನ್ಯ [illegible] ಖಾನ್ ಅಬ್ದುಲ್ ಗಫರ್ ಖಾನ್
ವಿದ್ಯಾ[illegible] ಶ್ರೀಮತಿ ಸರೋಜಿನಿ ನಾಯಡು
ಫೈನನ್ಸ್ ಶ್ರೀ [illegible]
[illegible]

ಇದನ್ನು ಹೇಳುವವರ [illegible] ನ ಬುದ್ಧಿ?

KANTI
Toilet Soap

ಇಂಡಿಯಾದ ಅತ್ಯುತ್ತಮ ಸಾಬೂನು

ನಂಬಿದರೆ ನಂಬಬಹುದು

ಆವರೆ ಅತ್ಯುತ್ತಮ ಸುಗಂಧಪೂರಿತ

ಸ್ವದೇಶೀ ಕಾಂತಿ ಟೊಯಿಲೆಟ್

ಸಾಬೂನನ್ನು ಒಂದು ಸಲ ಉಪಯೋಗಿಸಿದವರು ಎಂದೆಂದಿಗೂ ಇತರ ಯಾವ ಸಾಬೂನನ್ನೂ ಉಪಯೋಗಿಸಲು ಇಚ್ಛಿಸಲಾರರು!

'ಕಾಂತಿ' ಸಾಬೂನನ್ನು ಹಿಂದುಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಮಿಲಿಯಗಟ್ಟಲೆ ಜನರು ಶ್ಲಾಘಿಸಿ ಉಪಯೋಗಿಸುತ್ತಿರುವರು.

ಎಲ್ಲಾ ಕಡೆಗಳಲ್ಲೂ ಮಾರಲ್ಪಡುತ್ತದೆ.

S. U. N. & Co.,

Silk Merchants,
Chaukhamba BENARES CITY

ಈಗಿನ ತರಹ(ಕಾಶಿ) ಬನಾರಿಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯ ಬೇಡಿರಿ ಈಗ ಕಯ ತಾ[illegible] ಸುಲಭ ಮಾತ್ರ ಮಾಡಿ 18 ಮೊಳದ 2½ ಅಗಲದ ಸಣ್ಣ ಬುಟ್ಟ ಶೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣತರದ್ದು 18ಮೊಳ ಸಣ್ಣ ಬುಟ ಶೀರೆಗಳು ರೂ. 35ರಿಂದ ರೂ 55 ಪಡಖು ಸಾದಾ ಶೀರೆ 18 ಮೊಳ ರೂ 32ರಿಂದ ರೂ 65 ಉದ್ದ ಮೊಳ 16, ಅಗಲ 2½ ರೂ 20 ರಿಂದ 35ರ ವರೆಗೆ ಬೇರೆ ಮಾಲುಗಳ ಕಟಲಾಗು ಉಚಿತವಾಗಿ ಕಳುಹಿಸಲಾದೀತು

ವಿಳಾಸ—
ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬೆನರೆಸ್ ಸಿಟಿ.

ಮಂಗಳೂರು ಸಮಾಚಾರ

ಎಜ್ಯುಕೇಶನಲ್ ಕೌನ್ಸಿಲಿನ ಮೀಟಿಂಗು

ಮುಂದಿನ ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲಿನ ಮೀಟಿಂಗ್, ಅವರ ಆಫೀಸಿನಲ್ಲಿ ಇದೇ ತಾ ೧೪ನೇ ಶನಿವಾರ ಬೆಳಗ್ಗೆ ೧೦ ಗಂಟೆಗೆ ಜರಗುವುದು

ವಿದ್ಯಾರ್ಥಿನಿಯರ ಉದ್ಘಾಟನಾ ಸಮಾರಂಭ

ಸ್ಥಳೀಯ ಪಿ. ಇ. ಯಂ ಹೈಸ್ಕೂಲಿಗೆ, ಸಾಹುಕಾರ ಶ್ರೀ ವಿಠ್ಠಲ ಶಾಂತರಾಮ ಕುಲಕರ್ಣಿಯವರು ತಮ್ಮ ಮೃತ ತಂದೆಯ ಸ್ಮಾರಕವಾಗಿ ಹಾಕಿಸಿಕೊಟ್ಟ ವಿದ್ಯಾರ್ಥಿನಿಯರ ಉದ್ಘಾಟನಾ ಸಮಾರಂಭವನ್ನು ಶ್ರೀ ಸಿ ರಾಜಗೋಪಾಲಾಚಾರಿಯವರು ನೆರವೇರಿಸಿದರು

ಸ್ಥಳೀಕ ಆರ್ಯಸಮಾಜದ ೨೧ನೇ ವರ್ಧಂತ್ಯುತ್ಸವ

ಸ್ಥಳೀಕ ಆರ್ಯಸಮಾಜದ ೨೧ನೇ ವರ್ಧಂತ್ಯುತ್ಸವವು ಇದೇ ತಾರೀಕು ೧೭-೨೩ರ ವರೆಗೆ ಸನ್ಯಾಸಿಗುಡ್ಡೆಯಲ್ಲಿರುವ ಆರ್ಯಸಮಾಜ ಮಂದಿರದಲ್ಲಿ ಜರಗುವುದು. ಕಲ್ಲಿಕೋಟೆಯ ಆರ್ಯಧರ್ಮ ಪ್ರಚಾರಕರಾದ ಶ್ರೀಯುತ ಕರಮಚಂದ ಭಲ್ಲಾರವರು ಅಧ್ಯಕ್ಷಸ್ಥಾನವನ್ನು ವಹಿಸುವರು ಎಲ್ಲರಿಗೂ ಸುಸ್ವಾಗತವಿದೆ.

ರಾಜಿನಾಮೆ

ಶ್ರೀಮತಿ ಕಮಲಾದೇವಿಯವರು ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿಯ ತಮ್ಮ ಸದಸ್ಯತನಕ್ಕೆ ರಾಜಿನಾಮೆಯಿತ್ತಿರುವರೆಂದು ತಿಳಿದು ಬರುತ್ತದೆ ಕರ್ನಾಟಕ ಪ್ರಾಂತೀಕ ಕಾಂಗ್ರೆಸ ಕಮಿಟಿಯ ಉಪಾಧ್ಯಕ್ಷತನಕ್ಕೆ ರಾಜಿನಾಮೆಯಿತ್ತಿರುವರೆಂಬ ವಾರ್ತೆಯು ನಿರಾಧಾರವಾಗಿದೆ.

ದ ಕ ಜಿಲ್ಲಾ ಕಾಂಗ್ರೆಸ ಕಮಿಟಿಯ ಚುನಾವಣೆ

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಚುನಾವಣೆಯಲ್ಲಿ ಸ್ಥಳೀಕ ಸೆಂಟರ್ ಶಾಖೆಗೆ ಮಾತ್ರ ಚುನಾವಣೆಯು ... ಶ್ರೀ ಕ ಉಪೇಂದ್ರ ಪೈ ಮತ್ತು ಶ್ರೀ. ಕೆ ಅಹ್ಮದ್ ಬಾವಾ, ಇವರು ಉಮೇದ್ವಾರರಾಗಿದ್ದರು. ಪೋಲಿಂಗ್ ಕಳೆದ ತಾರೀಕು ೩ರಂದು ೬ರಿಂದ ೮ ಗಂಟೆಯ ತನಕ ನಡೆಯಿತು. ಕೊನೆಗೆ ಶ್ರೀ ಕೆ. ಉಪೇಂದ್ರ ಪೈಗಳು ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿಯಲ್ಲಿ ಮುಸ್ಲಿಮರಿಗೆ ಒಂದು ಸ್ಥಾನವು ಇರಬೇಕೆಂಬ ಸದುದ್ದೇಶದಿಂದ ತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆದರು. ಪೋಲಿಂಗ್ ಅಲ್ಲಿಗೆ ಮುಗಿಯಿತು. ಕೆ. ಅಹ್ಮದ್ ಬಾವಾರವರು ಈ ರೀತಿಯಲ್ಲಿ ಪ್ರತಿಸ್ಪರ್ಧಿಯಿಲ್ಲದೆ ಚುನಾಯಿತರಾದರು

ಜಿಲ್ಲಾ ಪ್ರೆಸ್ ವರ್ಕರ್ಸ್ ಯೂನಿಯನ್

ಇದರ ಅರ್ಧ ವಾರ್ಷಿಕ ಸಭೆಯೊಂದು ತಾ. ೧೨ನೇ ಆದಿತ್ಯವಾರ ಸಂಜೆ ೫ ಗಂಟೆಗೆ ಸರಿಯಾಗಿ ಫೆಲಿಕ್ಸ್ ಪೈ ಬಜಾರಿನಲ್ಲಿ, ಯೂನಿಯನಿನ ಅಧ್ಯಕ್ಷರಾದ ಶ್ರೀಮತಿ ಕಮಲಾದೇವಿಯವರ ಅಧ್ಯಕ್ಷತೆಯಲ್ಲಿ ಜರುಗಿತು

ನಗರ ಸಭೆ.

ಜನವರಿ ತಾರೀಕು ೨೩ರ ಮೀಟಿಂಗಿನ ನಂಬ್ರ ೫೭ನೇ ಮತ್ತು ಫೆಬ್ರವರಿ ತಾರೀಕು ೬ನೇ ಮೀಟಿಂಗಿನ ನಂಬ್ರ ೫೦ನೇ ಗೊತ್ತುವಳಿಗಳ ಕುರಿತಾಗಿ ಪುನಃ ನಿರ್ಣಯಗಳ ಬಗ್ಗೆ ತಾ. ೧೫ನೇ ಬುಧವಾರ ಸಂಜೆ ಗಂಟೆ ೫ಕ್ಕೆ ಒಂದು ವಿಶೇಷ ಸಭೆಯು ಜರುಗಿತು.

ಮಾನ್ಯ ಲೇಬರ್ ಮಂತ್ರಿಗಳಾದ ನಾಮದಾರ ವಿ. ವಿ ಗಿರಿಯವರು.

ಮಾನ್ಯ ಲೇಬರ್ ಮಂತ್ರಿಗಳಾದ ಶ್ರೀ ವಿ ವಿ. ಗಿರಿಯವರು ಕಳೆದ ೧೪ನೇ ಸಾಯಂಕಾಲ ಗಂಟೆ ೪.೫೫ಕ್ಕೆ ಮೈಲಿಗೆ ಚಿತ್ತೈಸಿದರು. ಅವರನ್ನು ಅನೇಕ ಮಂದಿ ಪ್ರಮುಖರು ಮುಜಾವರು ರೈಲ್ವೆ ಸ್ಟೇಷನಿನಲ್ಲಿ ಸ್ವಾಗತೀಕರಿಸಿದರು. ೫.೩೦ ಗಂಟೆಗೆ ಫೆಲಿಕ್ಸ್ ಪೈ ಬಜಾರಿನಲ್ಲಿ ವಸ್ತು ಪ್ರದರ್ಶನಾಲಯದ ಉದ್ಘಾಟನೋತ್ಸವವನ್ನು ನೆರವೇರಿಸಿದರು. ೬.೩೦ ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ದಿವಂಗತ ದೇಶಭಕ್ತ ಕಾರ್ನಾಡು ಸದಾಶಿವರಾಯರ ಭಾವಚಿತ್ರವನ್ನು ಅನಾವರಣಮಾಡಿದರು. ೭.೧೫ ಗಂಟೆಗೆ ನೇಕಾರ ಮುಜೂರರ ರಾತ್ರಿ ಶಾಲೆಗಳಿಗೆ ಸಂದರ್ಶನವನ್ನಿತ್ತರು.

ಮಾರಣೆ ದಿವಸದ ಕಾರ್ಯಕ್ರಮಗಳಲ್ಲಿ ಪೂರ್ವಾಹ್ನ ೮.೩೦ರಿಂದ ೧೧ರ ತನಕ ಮಾನ್ಯರಿಗೆ ನಾನಾ ಶಿಷ್ಟಮಂಡಲಗಳಿಗೆ ಭೇಟಿ ಕೊಡುವುದೇ ಮುಖ್ಯ ಕಾರ್ಯಕ್ರಮವಾಗಿದ್ದಿತು. ಮಾನ್ಯ ಮಂತ್ರಿಗಳಿಂದ ಸ್ವೀಕರಿಸಲ್ಪಟ್ಟ ಹತ್ತು ಡೆಪ್ಯುಟೇಶನುಗಳಲ್ಲಿ ಬಾರ್ ಎಸೋಸಿಯೇಶನಿನಲ್ಲಿ ಐದು ಉಳಿದ ಐದು ಡೆಪ್ಯುಟೇಶನುಗಳನ್ನು ಕಾಂಗ್ರೆಸ್ ಆಫೀಸಿನಲ್ಲಿಯೂ ಸ್ವೀಕರಿಸಲ್ಪಟ್ಟವು

ಪತ್ರಿಕೋದ್ಯಮಿಗಳ ಸಂಘ

ಅಲ್ಲಿಂದ ೮.೧೫ಕ್ಕೆ ಸರಿಯಾಗಿ ಗವರ್ನಮೆಂಟು ಕಾಲೇಜಿನಲ್ಲಿ ಪತ್ರಿಕೋದ್ಯಮಿಗಳ ಸಂಘದ ಆರಂಭೋತ್ಸವವನ್ನು ನೆರವೇರಿಸಿ, ತಾನು ಸ್ವತಃ ಹಿಂದೆ ಒಬ್ಬ ಸಂಪಾದಕನಾಗಿದ್ದವರಿಂದ ಪತ್ರಿಕಾ ವ್ಯವಸಾಯದ ಕುರಿತು ಕೆಲವು ಹಿತೋಕ್ತಿಗಳನ್ನು ಆಡಿದರು ಪತ್ರಿಕೆಗಳು ಸರಕಾರವನ್ನಾಗಲಿ ಇತರರನ್ನಾಗಲಿ ಟೀಕಿಸುವಾಗ ಮೂಲ ಸತ್ಯವನ್ನು ತಿಳಿದು ಜನತೆಗೂ ಸರಕಾರಕ್ಕೂ ಪ್ರಯೋಜನವಾಗುವ ರೀತಿಯಲ್ಲಿ ಟೀಕಿಸುತ್ತಿರಬೇಕೆಂದು ಬೋಧಿಸಿದರು ಕಾಂಗ್ರೆಸ್ ಸರಕಾರದ ಕೆಳಗೆ ಪತ್ರಿಕೆಗಳಿಗೆ ಹೆಚ್ಚಿನ ಸ್ವಾತಂತ್ರ್ಯವು ದೊರಕಿರುತ್ತದೆಂದೂ ಇದನ್ನು ಪತ್ರಿಕೆಗಳು ದುರ್ವಿನಿಯೋಗಿಸಬಾರದೆಂದು ಮುಂತಾಗಿ ಹಿತೋಕ್ತಿಗಳನ್ನಾಡಿದರು. ನಂತರ ಸಂಘದ ಕಾರ್ಯದರ್ಶಿಗಳು ಧನ್ಯವಾದವನ್ನರ್ಪಿಸಲು ಸಮಾರಂಭವು ೫.೩೦ಕ್ಕೆ ಅಂತ್ಯವಾಯಿತು.

ನೆಹರೂ ಮೈದಾನಿನಲ್ಲಿ ಸಾರ್ವಜನಿಕ ಸಭೆ.

ಸಾಯಂಕಾಲ ೬ ಗಂಟೆಗೆ ಸರಿಯಾಗಿ ಜಿ. ಕಾ ಕಮಿಟಿಯ ಆಶ್ರಯದಲ್ಲಿ ಸಾರ್ವಜನಿಕ ಸಭೆಯು ಶ್ರೀ ಯುಸ್ ಎನ್ ಹೊಳ್ಳರ ಅಧ್ಯಕ್ಷತೆಯಲ್ಲಿ ಜರುಗಿತು ಮಾನ್ಯ ಮಂತ್ರಿಯವರು ಭಾಷಣ ಮಾಡುತ್ತಾ "ಕಳೆದ ವರ್ಷ ಭಾಷಣ ಮಾಡಿ ಹೋದ ಮೇಲೆ ಇಲ್ಲಿ ದೊಡ್ಡ ಸಭೆಯನ್ನುದ್ದೇಶಿಸಿ ಅನೇಕ ಸಮಸ್ಯೆಗಳನ್ನು ... ಮುಂದಿಟ್ಟಿರುವೆನು. ಆದರೆ ಈಗಿನ ರಾಜಕೀಯ ಸ್ಥಿತಿಯು ಮಾರ್ಪಾಟು ಹೊಂದಿದೆ. ದೇಶೀಯ ಸಂಸ್ಥಾನಗಳಲ್ಲಿ ಪ್ರಜೆಗಳು ಸ್ವಾತಂತ್ರ್ಯವನ್ನು ಪಡೆಯಲು ಚಳವಳಿಯನ್ನು ಹೂಡಿರುವರು ಮಹಾತ್ಮಾ ಗಾಂಧಿಯವರಾದರೋ ಇದರಲ್ಲಿ ಭಾಗವಹಿಸಲು ಪೂರ್ವಸಿದ್ಧತೆಯನ್ನು ಮಾಡುತ್ತಿರುವರು. ಶ್ರೀ ಜವಾಹರಲಾಲ ನೆಹರೂರವರೆಂದಂತೆ ನಾವು ಉಗ್ರಪಕ್ಷೀಯರು. ನಾವು ಗಾಂಧೀವಾದಿಗಳೆಂಬ ಭೇದವನ್ನು ಮರೆತು ಸರ್ವಪ್ರಯತ್ನಶಾಲಿಯನ್ನು ಪಡೆಯಲು ನಾವೆಲ್ಲರೂ ಒಂದಾಗಬೇಕೆಂದು ನಾನು ವಿನಂತಿಮಾಡಿಕೊಳ್ಳುವೆನು ನಮಗೆ ಈ ವರೆಗೆ ಸಿಕ್ಕಿದುದು ಕೇವಲ ನೀರಡಿಕೆ ಮುಗಿದ ಸ್ವರಾಜ್ಯ. ಸಂಪೂರ್ಣ ಸ್ವರಾಜ್ಯವನ್ನು ಪಡೆಯಲು ನಾವು ಪ್ರಬಲ ಹೋರಾಟಕ್ಕೆ ಸಿದ್ಧರಾಗಬೇಕಾಗುವುದು."

"ಹಿಂದು ಮುಸ್ಲಿಂ ಐಕ್ಯದ ಕುರಿತು ಗಾಂಧಿ ಆಗಾಖಾನರೊಳಗಣ ಒಪ್ಪಂದ ವ್ಯವಹಾರವು ಜಯವಾಗಲಿದೆಯೆಂದು ತಿಳಿಸಲಾಗಿದೆ ಸಂಪೂರ್ಣ ಸ್ವರಾಜ್ಯ ಸಿಗಬೇಕಾದರೆ ನಾವು ಕೇವಲ ಭಾರತೀಯರೆಂಬ ಮನೋವೃತ್ತಿಯು ನಮ್ಮಲ್ಲಿರಬೇಕು."

ಭಾರತದಲ್ಲಿರುವ ೭ ಲಕ್ಷ ಹಳ್ಳಿಗಳ ಜನರಿಗೆ ಸರಿಯಾದ ಊಟ, ಸೌಕರ್ಯಗಳು ದೊರಕಿದಂತೆ ನಮಗೆ ಸಂಪೂರ್ಣ ಸ್ವಾತಂತ್ರ್ಯವು ದೊರಕುವುದೆಂದು ತಿಳಿಸಿದರು. ಸಾಲಪರಿಹಾರ ಮಸೂದೆಯಿಂದ ಜಮೀನ್ದಾರರಿಗೂ ರೈತರಿಗೂ ಪರಸ್ಪರ ಪ್ರೀತಿ ಸಂತೋಷ ಉಂಟುಮಾಡುವುದೆಂದರು. ಸಂಪೂರ್ಣ ಸ್ವಾತಂತ್ರ್ಯವನ್ನು ಸಂಪಾದಿಸಲು ಕಾಂಗ್ರೆಸಿನ ಶಕ್ತಿಯು ಇನ್ನಷ್ಟು ಹೆಚ್ಚಬೇಕೆಂದೂ, ಎಲ್ಲರೂ ಐಕ್ಯಹೊಂದಿ ಸಂಘಟಿತರಾಗಬೇಕೆಂಬುದೇ ನನ್ನ ಸಂದೇಶವೆಂದು ತಿಳಿಸಿದರು.

ಕಡೆಗೆ ಅಧ್ಯಕ್ಷರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮತ್ತು ನಾಗರಿಕರ ಪರವಾಗಿ ಮಂತ್ರಿಗಳಿಗೆ ವಂದನೆಯನ್ನರ್ಪಿಸಲು ಸಭೆಯು ಚದರಿತು

ಇಂದು ಬೆಳಗ್ಗೆ ಮಾನ್ಯ ಮಂತ್ರಿಯವರು ಕಾಂಞಂಗಾಡಿಗೆ ತೆರಳಿದರು.

ತಾಲೂಕು ಸಮಾಚಾರ

ಉಡುಪಿ

ತಾ. ೧೩ಕ್ಕೆ ಕಾಡಬೆಟ್ಟಿನಲ್ಲಿರುವ ಪಿಲಿದರ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಉಡುಪಿ ಪಟ್ಟಣದೊಳಗಣ ಕಾಂಗ್ರೆಸ ಪ್ರಾಥಮಿಕ ಸದಸ್ಯರ ಮಹಾಸಭೆ ಸೇರಿತು. ತಾ. ಕಾಂ. ಕಮಿಟಿಯ ಅಧ್ಯಕ್ಷರೂ ರಿಟರ್ನಿಂಗ್ ಆಫೀಸರರೂ ಆದ ಶ್ರೀ. ಪಿ. ಲಕ್ಷ್ಮೀನಾರಾಯಣ ನಾಯಕರು ಅಗ್ರಾಸನ ವಹಿಸಿದ್ದರು. ಅಲ್ಲಿ ವರ್ಷಕ್ಕೆ ನವೀನವಾಗಿ ಸ್ಥಾಪಿಸಲ್ಪಡುವ ಉಡುಪಿ ಟೌನ್ ಕಾಂಗ್ರೆಸ ಕಮಿಟಿಗೆ ಆರಿಸಲಿಕ್ಕಿದ್ದ ಏಳು ಪ್ರತಿನಿಧಿಗಳ ಚುನಾವಣೆಯಾಗತಕ್ಕದಿದ್ದು ಶ್ರೀಮತಿ ಪಿ ಮನೋರಮಾ ಬಾಯಿ, ಶ್ರೀ. ಗಳಾದ ನಗರ ರಾಮರಾವ್, ಆರ್ ಎಮ್ ಅಂದ್ರಾದೆ ಮಿಯಾರ ನರಸಿಂಹಾಚಾರ್ಯ, ಕೆ ವಿಠಲ ಶೆಣೈ, ಪಿ ವೆಂಕಟೇಶ ನಾಯಕ್, ಯು. ರಾಮಚಂದ್ರ ... ಅವಿರೋಧವಾಗಿ ಸರ್ವಾನುಮತದಿಂದ ಆರಿಸಲ್ಪಟ್ಟಿರುತ್ತಾರೆ.

ತಾ ೧೩ಕ್ಕೆ ಸಾಯಂಕಾಲ ೬ ಗಂಟೆಗೆ ರಥಬೀದಿಯಲ್ಲಿ ಡಾ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಮಹಾಸಭೆ ಸೇರಿ, ಮುನಿಸಿಪಾಲಿಟಿಯವರು ಹಿಂದೆ ಸರ್ವಾನುಮತದಿಂದ ಸದ್ಯ ಉಡುಪಿಗೆ ಚಿತ್ತೈಸಲಿರುವ ಮೈಸೂರು ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್‌ರವರಿಗೆ ಮಾನ ಪತ್ರ ಅರ್ಪಿಸುವ ನಿರ್ಣಯವನ್ನು ಪುನರಾಲೋಚಿಸುವ ಇರಾದೆಗೆ ಅಸಂತೋಷ ವ್ಯಕ್ತಪಡಿಸಿ, ಒಂದು ವೇಳೆ ಮುನಿಸಿಪಾಲಿಟಿಯವರು ಸತ್ಕರಿಸದಿದ್ದಲ್ಲಿ ಮಹಾಜನರ ದಿವಾನರಿಗೆ ಯೋಗ್ಯ ಸ್ವಾಗತ ಸತ್ಕಾರ ನೀಡಬೇಕೆಂದು ನಿಶ್ಚಯವಾಯಿತು.

ತಾ ಕಾಂ ಕಮಿಟಿಯ ಅಧ್ಯಕ್ಷರು ಕಾರ್ಯದರ್ಶಿ ... ಇತರ ಸದಸ್ಯರು ತಾ ೧೫ಕ್ಕೆ ಪೂರ್ವಾಹ್ನ ಪಲಿಮಾರಿಗೆ ಹೋಗಿ ಪಲಿಮಾರು ... ಗ್ರಾಮಗಳನ್ನೊಳಗೊಂಡ ಪಲಿಮಾರು ಫಿರ್ಕಾ ಕಾಂಗ್ರೆಸ ಕಮಿಟಿಯನ್ನು ನವೀನವಾಗಿ ಸ್ಥಾಪಿಸಿದರು. ಡಾ ಪಿ ಎಸ್ ಕುಮಾರನ್ ನಂಬಿಯಾರರು ಅಧ್ಯಕ್ಷರಾಗಿ ಮಂಡಳಿಯು ... ಶ್ರೀ ಕೆ ಗಣಪಯ್ಯ ಶೆಟ್ಟಿ ಪಲಿಮಾರು. ಈಗಾಗಲೇ ಕ್ಷಿಪ್ರ ಮುಂದುವರಿದ ಕಾಂಗ್ರೆಸು ... ಪಡೆದ ಮುಂದಣ ಕೀರ್ತಿಯನ್ನು ಹೊಂದಲೆಂದು ಅಭಿಲಾಷಣ ಇತ್ತರು

ತಾ ೧೩ಕ್ಕೆ ಸ್ಥಳೀಯ ... ವಿದ್ಯಾರ್ಥಿಗಳ ಹಾಸ್ಟೆಲ್ ವಾರ್ಷಿಕೋತ್ಸವವು ... ಮುಖ್ಯೋಪಾಧ್ಯಾಯರಾದ ... ಎಚ್ ಮನೋರಮಾ ... ಅಧ್ಯಕ್ಷತೆಯಲ್ಲಿ ಜರಗಿತು. ... ನಂತರ ... ವರದಿವಾಚನ ಭಾಷಣಗಳಲ್ಲದೆ ಹಾಸ್ಯ ವಿನೋದಾದಿಗಳೂ ಇದ್ದುವು ಒಂದೆರಡು ವರ್ಷ ಈ ಹೊಸ್ಟೆಲು ... ಈಗ ಚೇತರಿಸಿಕೊಂಡಿದೆ. ... ಸ್ಥೈರ್ಯವಿದೆ

ತಾ. ೧೬ಕ್ಕೆ ಸ್ಥಳೀಯ ಮುನಿಸಿಪಲ್ ಕೌನ್ಸಿಲಿನ ವಿಶೇಷ ಸಭೆಯು ಅಧ್ಯಕ್ಷರಾದ ಶ್ರೀ ... ಲಕ್ಷ್ಮೀನಾರಾಯಣ ... ಸಭಾಧ್ಯಕ್ಷತ್ವದಲ್ಲಿ ನೆರೆದು, ಸರ್ ಮಿರ್ಜಾ ಇಸ್ಮಾಯಿಲ್‌ರಿಗೆ ಮಾನಪತ್ರವನ್ನೀಯಬೇಕೆಂದು ಈ ಮೊದಲೇ ಮಾಡಲಾಗಿದ್ದ ಠರಾವು ಮುಂದೂಡಲಾಯಿತು.

ಕಾರ್ಕಳ

ಕಾರ್ಕಳ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಮಾಸಿಕ ಸಭೆಯು ತಾರೀಕು ೮-೩-೪೭ರ ದಿನ ಬೋರ್ಡ್ ಮಿಡ್ಲ್ ಎಲಿಮೆಂಟರಿ ಶಾಲೆಯಲ್ಲಿ ಈ ರೇಂಜ್ ಡೆಪ್ಯುಟಿ ಇನ್ಸ್‌ಪೆಕ್ಟರ ಶ್ರೀ ಯು. ಬಿ ಸುಬ್ಬಯ್ಯ, ಯಂ. ಎ., ಯಲ್. ಟಿ.ಯವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ, ವಿಮರ್ಶಾಪಾಠಗಳಾದ ಬಳಿಕ ಅಧ್ಯಕ್ಷರು ಭಾಷಣ ಮಾಡುತ್ತ ಉಪಾಧ್ಯಾಯರ ಸಂಘಗಳು ಮತ್ತು ಇಂಥ ಮಾಸಿಕ ಸಭೆಗಳಿಂದಾಗುವ ಪ್ರಯೋಜನಗಳನ್ನು ತೋರಿಸಿಕೊಟ್ಟು ಈ ಸಭೆಗಳನ್ನು ನಡೆಸುವ ಕುರಿತು ಉಪಯುಕ್ತ ಸಲಹೆಗಳನ್ನು ಕೊಟ್ಟರು ಅವುಗಳನ್ನು ಅನುಸರಿಸಿಕೊಂಡು ಕಾರ್ಕಳ ... ಕೇಂದ್ರವು ಇತರ ಕೇಂದ್ರಗಳಿಗೆ ಮಾರ್ಗದರ್ಶಕವಾಗುವದೆಂದ ನಂಬಿದ್ದೇವೆ

ಹೆಚ್ಚಿ ಸರ್ಕಲಿನಿಂದ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಅಭ್ಯರ್ಥಿಗಳಾದ ವಕೀಲ ನಿಟ್ಟೆ ಮಹಾಬಲ ಹೆಗ್ಡೆ ಮತ್ತು ಕೆ. ರಾಮರಾಯ ಪುರಾಣಿಕರೊಳಗಿನ ಚುನಾವಣೆಯು ತಾ. ೧೩ರಂದು ನಡೆದು ಕ್ರಮವಾಗಿ ಅವರು ೫೮, ೧೫ ಮತಗಳನ್ನು ಪಡೆದು ಶ್ರೀ ಹೆಗ್ಡೆಯವರು ಬಹುಮತದಿಂದ ಆರಿಸಿ ಬಂದರು ಈ ಚುನಾವಣೆಯಲ್ಲಿ ೫೦ ಮತಗಳು ನಿಷ್ಪ್ರಯೋಜಕವಾದುವು ಶಿರ್ವ ... ಚುನಾವಣಾಧಿಕಾರಿ ... ಶ್ರೀ ಪಿ ಮಂಜುನಾಥ ... ತಿರಸ್ಕರಿಸಲ್ಪಟ್ಟಿವೆ

ಶ್ರೀ ಉಡುಪಿ ಕ್ಷೇತ್ರದಿಂದ ಶ್ರೀ ಅದಮಾರು ಮಠದ ಶ್ರೀ ಪಾದಂಗಳವರು ನಾಳೆ ತಾರೀಕು ೧೭-೩-೪೭ನೇ ... ಸಾಯಂಕಾಲ ಗಂಟೆ ೭ಕ್ಕೆ ಮಂಗಳೂರಿಗೆ ಚಿತ್ತ ಸಲಿರುವುದರಿಂದ ಶ್ರೀ ಯವರನ್ನು ಯೋಗ್ಯ ರೀತಿಯಲ್ಲಿ ಸ್ವಾಗತೀಕರಿಸಿ ಕರೆತರಬೇಕೆಂದು ... ಹೈಸ್ಕೂಲ್ ರಸ್ತೆಗಾಗಿ ರಥಬೀದಿಯಿಂದ ಶ್ರೀ ವೆಂಕಟ್ರಮಣ ದೇವಸ್ಥಾನಕ್ಕೆ ಕರೆತರಬೇಕಾಗಿ ನಿಶ್ಚಯಿಸಿರುವುದರಿಂದ ಆ ಸಮಯ ... ಸಾಯಂಕಾಲ ೬ ಗಂಟೆಗೆ ಸರಿಯಾಗಿ ... ಕಟ್ಟೆಯ ... ಶ್ರೀ ವೆಂಕಟ್ರಮಣ ದೇವಳದ ಮೊಕ್ತೇಸರರು ಅಪೇಕ್ಷಿಸುತ್ತಾರೆ

"ನಾನು ೩೫ ವರ್ಷಕಾಲದಿಂದ ಕೆನರಾ ಬ್ಯಾಂಕಿಂಗ್ ಕೊಆಪರೇಟಿವ್ ಸೊಸೈಟಿ, ಲಿಮಿಟೆಡ್ ಈ ಬ್ಯಾಂಕಿನ ಅನೇಕ ಶಾಖೆಗಳಿಂದಲೂ ಹೆಡ್ ಆಫೀಸಿನಿಂದಲೂ ಬ್ಯಾಂಕಿನ ಎಲ್ಲಾ ವಿಧವಾದ ಲೇವಾದೇವಿ ನಡೆಸುತ್ತ ನಮ್ಮ ಸರ್ವ ಕೆಲಸವನ್ನು ಅತಿ ನಯ ನೀತಿಗಳಿಂದ ನಡೆಸಿಕೊಟ್ಟು ನಮ್ಮ ವ್ಯಾಪಾರಕ್ಕೆ ಅನೇಕ ವಿಧವಾಗಿ ಉತ್ತೇಜನಕೊಟ್ಟು ನಮ್ಮನ್ನು ನಡೆಸಿದಕ್ಕಾಗಿ ನಾವು ತುಂಬಾ ಆಭಾರಿಯಿಂದ ಈ ಬ್ಯಾಂಕಿನ ಕೆಲಸ ರೀತಿಯನ್ನೇ ಪ್ರಶಂಸಿಸುತ್ತೇವೆ ... ಜನರಿಗೆ ನಮ್ಮಿಂದ ಉತ್ತೇಜನವಿದ್ದಲ್ಲಿ ... ಈ ಬ್ಯಾಂಕಿನ ... ಜನಗಳಿಗೆ ... ವಿನಯದಿಂದ ಎಲ್ಲಾ ... ಪಡೆಯುವರೆಂದು ಹೇಳಲು ಸಂತೋಷ ಪಡುತ್ತೇನೆ."

ಕಾಶೀಮಠ ನಾರಾಯಣ ಆಚಾರ್ಯ

ಶ್ರೇಷ್ಠತರದ ದೃಷ್ಟಿಚಕ್ರಗಳಿಗೆ

ರಬ್ಬರು ಮೊಹರುಗಳಿಗೆ

ನಾಯಕ್ಸ್ ಸ್ಟೋರ್ಸ್

ರಥಬೀದಿ, ಮಂಗಳೂರು.

ಕ್ಷಯರೋಗ ನಿವಾರಣೆಯಲ್ಲಿ

ಸಾಮಾಜಿಕವಾದ ಸೇವೆಯೆ ಅತ್ಯುಪಯುಕ್ತವಾಗಿದೆ

ಮೂರು ರೋಗಗಳ ನಿವಾರಣೆಗಾಗಿ ಸಮಾಜದಲ್ಲಿ ಧಾರಾಳವಾಗಿ ಪ್ರತೀಕ್ಷಿಸುವ, ಅವು ಅಂಟದಂತೆ ನಿವಾರಣೋಪಾಯಗಳನ್ನು ಕೈಕೊಳ್ಳುವ ಅಗತ್ಯವಿದೆ. ಫರಂಗಿರೋಗ, ಕುಷ್ಠರೋಗ, ಕ್ಷಯರೋಗ, ಇವೇ ಆ ಮೂರು ಇವುಗಳಲ್ಲಿ ಕೊನೆಯದೇ ಅತಿ ವಿಶೇಷವಾಗಿದೆ. ಮಾನವವಂಶವನ್ನು ವಿಪರೀತ ಕಾಟಕ್ಕೆ ಇದೇ ಒಳಪಡಿಸಿಯದೆ. ನಮ್ಮ ದೇಶದಲ್ಲಂತೂ, ಸಾಂಪತ್ತಿಕ ದುರವಸ್ಥೆ ಮತ್ತು ಸಾಮಾಜಿಕವಾದ ಕೆಲ ಅನಿಷ್ಟ ವಿಧ್ಯಮಾನಗಳು ಈ ರೋಗದ ಹಾವಳಿಯು ದಿನೇದಿನೇ ಹೆಚ್ಚುತ್ತ, ಇದಕ್ಕೆ ಹೆಚ್ಚು ಹೆಚ್ಚಾಗಿ ವರ್ಷವರ್ಷವೂ ಬಲಿಗಳು ದೊರೆವಂತೆ ಮಾಡಿವೆ ಜನರನ್ನು ಮುತ್ತಿಕೊಂಡಿರುವ ದಾರಿದ್ರ್ಯ, ಶಕ್ತಿವರ್ಧಕವಾಗಿರದ ಆಹಾರದ ಉಪಯೋಗ, ಪರದಾ ಪದ್ಧತಿ ಬಾಲವಿವಾಹ ಪದ್ಧತಿ, ಬಡವರಲ್ಲಿ ಮದ್ಯಪಾನದ ದುರಭ್ಯಾಸ, ಗ್ರಾಮಾಂತರಗಳಲ್ಲೂ ನಗರಗಳಲ್ಲೂ ವಸತಿಗಳ ಅನಾರೋಗ್ಯಕರ ಸ್ಥಿತಿ, ಜಂಟೀಕುಟುಂಬ ಪದ್ಧತಿಯ ಪರಿಣಾಮವಾಗಿ ಹಲವು ಹದಿನೆಂಟು ಜನಗಳ ಒಕ್ಕೂಟದಲ್ಲಿ ವ್ಯಕ್ತಿಗಳ ಹಾಗೂ ಹೆಚ್ಚುತ್ತಲಿರುವ ಎಳಗೂಸುಗಳ ಆರೈಕೆಗೆ ಉಂಟಾಗುವ ಕೊರತೆ, ಎಷ್ಟೋ ಆರೋಗ್ಯ ರಕ್ಷಣೆಗೆ ಏರ್ಪಾಡಾದರೂ, ಅದೆಲ್ಲ ಅವ್ಯವಸ್ಥಿತವಾಗಿ ನಗರಗಳಲ್ಲೂ ಕ್ಷೇಮಪಾಲನೆಗೆ ಉಪಾಯ ಕಡಮೆಯಾಗಿರುವಿಕೆ, ಪ್ರತಿ ಜನಕ್ಕೂ ಅಲ್ಪ ದುಡಿತಕ್ಕಾದರೂ ಮಹಾಪರಿಶ್ರಮವುಂಟಾಗಿರುವ ಬಾಧೆ, ಕ್ಷಯರೋಗದ ಹೆಸರೇ ಇಲ್ಲದ ಕಡೆಗೂ ಸಂಚಾರಾನುಕೂಲ್ಯ ಹೆಚ್ಚಿರುವ ಕಾರಣ ರೋಗದ ಅಂಟು ಹಬ್ಬುವುದಕ್ಕೆ ಅನುಕೂಲತೆಗಳು ಇವುಗಳಲ್ಲಿ ಒಂದೊಂದೂ ಎಲ್ಲವೂ ಸೇರಿ ಕ್ಷಯರೋಗವು ಹಬ್ಬಿ ಹರಡಿ ಮುತ್ತುವಂತೆ ಮಾಡುತ್ತಲಿವೆ ಇವೆಲ್ಲ ಕಾರಣಗಳ ಪರಿಣಾಮವನ್ನು ಹೋಗಲಾಡಿಸುವುದಕ್ಕೆ ಪ್ರತಿಯೊಂದು ರೀತಿಯಿಂದ ಸಮಾಜದಲ್ಲೂ ಬಹಳವಾಗಿ ಪ್ರಚಾರಮಾಡಿದ ವಿನಾ ಸಾಧ್ಯವಾಗಲಾರದು ಪ್ರಚಾರವೂ ತೀಕ್ಷ್ಣವಾಗಿಯೂ ತೀವ್ರವಾಗಿಯೂ ನಡೆಯಬೇಕಾಗಿದೆ

ಮೊದಲಾಗಿ, ಎಳೆಕೂಸುಗಳ ಜಾಗ್ರತೆ ಬಹಳವಾಗಬೇಕು ಏಕೆಂದರೆ ಕ್ಷಯರೋಗದ ಬೀಜವು ತೀರ ಎಳೆವಯಸ್ಸಿನಲ್ಲೇ ಬಿತ್ತಲಾಗುವುದು ಎಂದೂ, ಅದರ ಬೆಳವಣಿಗೆ ತಡೆದರೇ ಮಾತ್ರ ಮುಂದೆ ಯುವಕನು ಅದರಿಂದ ಪಾರಾಗಬಹುದೆಂದೂ ಈಗ ಶೋಧನೆಗಳಿಂದ ಗೊತ್ತಾಗಿದೆ ಬಾಲ್ಯದಲ್ಲಿ ತೆಗೆದುಕೊಂಡ ಜಾಗರೂಕತೆಯ ಮಹತ್ವದಿಂದಲೇ ಮುಂದೆ ಯುವಕನು ಕ್ಷಯವಿರಹಿತನಾಗಿ ಬಾಳಬಹುದಾಗಿದೆ. ಗರ್ಭಧರಿಸಿದ ದಿನದಿಂದಲೂ ಈ ನಿವಾರಣೋಪಾಯಗಳನ್ನು ಕೈಕೊಳ್ಳಬೇಕು ಇದುಕಾರಣ, ಮಾತೃಸೇವೆ, ಗರ್ಭಿಣಿಯರ ಸೇವಾಶುಶ್ರೂಷೆಗಳು, ಶಿಶುಸಂಗೋಪನ,—ಈ ವಿಷಯಗಳಲ್ಲಿ ಹೆಚ್ಚಿನ ಜಾಗ್ರತೆಯಿರಬೇಕು ಇವುಗಳಿಂದ ಬಾಳಂತಿಯರು ಎಳಗೂಸುಗಳು ಮೊದಲಾದವರನ್ನು ಉಳಿಸಬಹುವುದು ಶಾಲೆಗಳಲ್ಲಿ ಹೊಸ ವಾಯುವಿನ ಸುಳಿವಿರುವ ಬಯಲುಗಳಲ್ಲಿ ಜರಗಿಸುವ, ಮಕ್ಕಳ ದೈಹಿಕ ಪರಿಶ್ರಮ ಕಡಮೆಯಾಗುವಂತೆ ಸಾಧಿಸಿ, ಹೈಸ್ಕೂಲುಗಳಲ್ಲಿನ ವಿದ್ಯಾರ್ಥಿಗಳ ಜೀವನಾರೋಗ್ಯವನ್ನು ವಿಮರ್ಶಿಸಿ, ಅವರ ಚಿತ್ತವರಿಗೆಲ್ಲ ಧರ್ಮಾರ್ಥವಾಗಿ ವೈದ್ಯಕೀಯ ಶುಶ್ರೂಷಾಕ್ರಮ ತಿಳಿಸಿ, ಸೇವೆ ಮಾಡಿದರೆ, ಕ್ಷಯರೋಗವು ಅಂಟದಂತೆ, ಅಂಟಿದಲ್ಲಿ ಹಬ್ಬದಂತೆ, ಮುಂದಿನ ತಲಾಂತರದವರನ್ನು ಕಾಪಾಡಬಂದೀತು

ಮಜೂರ, ಕರಗತಿಯವರ ಕೂಲಿ ಹೆಚ್ಚುವಂತಾಗಿ, ಕೆಲಸದ ಅವಧಿಯನ್ನಿಷ್ಟು ಇಳಿಸಿ, ಅವರ ಆರೋಗ್ಯಸಾಧಕ ವಸತಿಗಳಲ್ಲಿರುವಂತೆ ಅವರಿಗೆ ವ್ಯಾಯಾಮಾದಿಗಳಿಗೂ ಅವಕಾಶ ಸಿಗುವಂತೆ ಅನುಕೂಲತೆಗಳನ್ನು ಏರ್ಪಡಿಸಿ ಪಾಶ್ಚಾತ್ಯರಲ್ಲಿರುವ ಹಾಗೆ ಕ್ಷಯರೋಗ ನಿವಾರಣೆಗೆ-ನಾವೂ ಪ್ರಯತ್ನಿಸಿದಲ್ಲಿ, ಇಲ್ಲಿಯೂ ಆ ರೋಗನಿವಾರಣೆಗೆ ನಾವೂ ಸಾಧಿಸಿದಂತಾದೀತು

ಪಾಶ್ಚಾತ್ಯರು ಈ ಭಾಗದಲ್ಲಿ,—ನಿರೀಕ್ಷಣಾ ಸಮಿತಿಗಳನ್ನು ಏರ್ಪಡಿಸಿಕೊಂಡಿದ್ದಾರೆ. ಅಲ್ಲಲ್ಲಿ ಕ್ಷಯನಿವಾರಣಾ ಸಂಘಸಮಿತಿಗಳಿವೆ. ಇವು ಆರೋಗ ಇಲಾಖಾ ಅಫೀಸರು ಗೃಹವೈದ್ಯರು ಮೊದಲಾದವರೊಡನೆಯೂ ಆರೋಗ್ಯಭವನ ಆಸ್ಪತ್ರೆ ಬಯಲುಶಾಲೆ ಮೊದಲಾದುವುಗಳೊಡನೆಯೂ ಸೇರಿ ಕೆಲಸ ಮಾಡುತ್ತಿರುವರು. ಈ ಸಂಘದ ಸದಸ್ಯರುಗಳು ತಾವಾಗಿಯೇ (ಗೌರವಾರ್ಥವಾಗಿ) ಮನೆಗಳಲ್ಲಿ ಸಂದರ್ಶಿಸಿ, ಅಲ್ಲಿ ಅಗತ್ಯವಿರುವುದನ್ನು ತಿಳಿದು, ವಿಚಕ್ಷಣವೈದ್ಯರು ಅಭಿಪ್ರಾಯಗಳನ್ನು ತಿಳಿಸುವಂತೆ ಮಾಡುವರು ರೋಗಿಯನ್ನು ಉತ್ತಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಸಿಗುವಂತೆ ವ್ಯವಸ್ಥೆ ಮಾಡುವರ ಧನಸಹಾಯ ಸಿಗುವ ಹಾಗೂ, ಮಕ್ಕಳಿಗೆ ಬಯಲು ಶಾಲೆಗಳಲ್ಲಿ ಪ್ರವೇಶ ಸಿಗುವ ಹಾಗೂ, ರೋಗಿಗಳ ವಸತಿಗಳಲ್ಲಿ ರೋಗಿಗಳು ಸೇರುವ ಹಾಗೂ, ಅವರಿಗೆ ಸುಲಭ ಉಪಯುಕ್ತ ಉದ್ಯೋಗ ದೊರೆವ ಹಾಗೂ ಪ್ರಯತ್ನ ಮಾಡುವರು ಇಂಥ ಕಮಿಟಿಗಳು ರೋಗಿಗೆ ಎಷ್ಟು ಉಪಕಾರ ಮಾಡುತ್ತವೆ! ತಾವತ್ರ್ಯಗಳನ್ನು ಕಡೆದು ರೋಗಿಗೆ ಗುಣಹೊಂದುವ ಸಾಧನಗಳನ್ನೂ ವಿಧ್ಯಮಾನಗಳನ್ನೂ ಹೆಚ್ಚಿಸುತ್ತವೆ

ಕ್ಷಯರೋಗ ನಿವಾರಣಾ ಸಭೆಗಳ ಜೋರಾಗಿ ಈ ಭಾಗದಲ್ಲಿ ಪ್ರಚಾರ ಮಾಡುವುವು ಅಲ್ಲಲ್ಲಿ ಪ್ರದರ್ಶನ, ಭಾಷಣ, ಮಾಯಾಲಾಂದ್ರ ಅಥವಾ ಚಲಚ್ಚಿತ್ರಗಳ ದೇಖಾವೆ, ಪತ್ರಿಕಪ್ರಚಾರ, ದೊಡ್ಡಕ್ಷರದ ಜಾಹೀರಾತು ಮೊದಲಾದುವುಗಳ ಮೂಲಕ ಜನರಲ್ಲಿ ಮಾಹಿತಿ ಹರಡಿಸುವರು ೫ನೆ ಜೋರ್ಜರ ಸ್ಮಾರಕ ನಿಧಿಯಿಂದ್ಪ್ರನಡೆವ ಸಾಧನೆಗಳೂ ಈ ದೇಶದಲ್ಲಿ ಇವೇ ನಾನಾ ಸಮಿತಿಗಳ ಮುಖಾಂತರ ಹಲವು ವಿಭಗಳಲ್ಲಿ ಈ ಬಗೆಯ ಪ್ರಚಾರವು ಇಲ್ಲಿಯೂ ನಡೆಯುತ್ತಲಿದೆ ಜಾಡಾ ಪೇಟೆಗಳಲ್ಲಿ ಸಿನೆಮಾ ಚಿತ್ರಗಳನ್ನಿಯ್ದು, ಗ್ರಾಮಗ್ರಾಮಗಳಲ್ಲಿ ಅವನ್ನು ಪ್ರದರ್ಶಿಸಿ, ಕ್ಷಯರೋಗದ ಕಾರಣ ಮತ್ತು ನಿವಾರಣೆಗಳ ವಿಷಯವಾದ ಮಾಹಿತಿಯನ್ನು ಹಬ್ಬಿಸುತ್ತಿರುವರು

ಹೀಗ ಸಾಮಾಜಿಕ, ಆರೋಗ್ಯ ಮತ್ತು ಶಿಕ್ಷಣವರ್ಧಕ ಉಪಾಯಗಳಿಂದ, ವಸತಿಗಳ ಮತ್ತು ಜೀವನಕ್ರಮದ ತಿದ್ದುವಿಕೆಯಿಂದ, ನಗರಗಳ ಹತ್ತಿರ ಉಪನಗರ ರಚನೆಯಿಂದ, ಆಹಾರವಸ್ತುಗಳ ನಿರ್ದೇಶದ ಮೂಲಕ, ಕೃಷಿಕ್ರಮಗಳನ್ನು ತಿದ್ದಿ, ಗರ್ಭಿಣಿಯರ ಮತ್ತು ಕೂಸುಗಳ ಆರೈಕೆಯನ್ನು ಹೆಚ್ಚಿಸಿ, ಬಯಲಲ್ಲಿಯೆ ಹೆಚ್ಚಾಗಿ ಎಳೆಯರಿರುವಂತೆ ಪ್ರಯತ್ನಿಸಿ, (ಬಾಲವೀರ ದಳಗಳಮುಖಾಂತರ) ಇನ್ನಿತರ ವಿಧಾನಗಳಿಂದ ಪಾಶ್ಚಾತ್ಯರು ಈ ರೋಗದ ಹಾವಳಿಯನ್ನು ಕಳೆದ ಐವತ್ತು ವರ್ಷಗಳೊಳಗೆ ಕಾಲಂಶಕ್ಕೆ ಇಳಿಸಿರುವರು ಇದೇ ವಿಧಾನಕ್ಕೆ ನಾವೂ ಕೈಹಚ್ಚಿದರೆ,—ಇಲ್ಲಿಯೂ ಅಷ್ಟೇ ಬೇಗನೆ ನಾವು ಕ್ಷಯರೋಗವನ್ನು ನಿರ್ಮೂಲಿಸಬಹುದು ವರ್ಷಕ್ಕೆ ಹತ್ತುಲಕ್ಷ ಜನರು ಈ ರೋಗಕ್ಕೆ ತುತ್ತಾಗುತ್ತಿರುವರು, ಒಂದುಕೋಟಿ ಜನರಾದರೂ ಹೀನಾರೋಗ್ಯರಾಗಿ ನರಳುವಂತೆ ಮಾಡುವ ಈ ರೋಗವು ನಿರ್ಮೂಲವಾಗಬೇಡವೆ?

— ಡಾ. ಎಮ್, ಕೇಶವ ಪೈ,
M B O B E

ಸ್ಪೈಯಿನು ಸರಕಾರ

ಸ್ಪೆಯಿನ್‌ಯುದ್ಧವು ಮುಗಿಯುತ್ತ ಬರುತ್ತದೆ. ಬ್ರಿಟಿಷರೂ ಫ್ರೆಂಚರೂ ಫ್ರೆಂಕೋ ಸರಕಾರವನ್ನು ಮನ್ನಣೆ ಮಾಡಲೊಪ್ಪಲು ಸಿದ್ಧರು; ಆದರೆ ಇಟೆಲಿಯನರು ಅಲ್ಲಿಂದ ಮೊದಲಾಗಿ ಹಿಂಬರಲಬೇಕಾಗಿದೆ ಆದರೆ, ಎಲ್ಲ ವ್ಯವಸ್ಥೆ ನೆಟ್ಟಗಾದ ಬಳಿಕ ಮಾತ್ರ ಇಟಲಿ ಹಿಂದೆಗೆವುದಂತೆ ನೆಟ್ಟಗಾಗುವರು ಯಾರೋ! ಏರ್ಲಿಂಡು ಫ್ರೆಂಕೋ ಸರಕಾರವನ್ನು ಮನ್ನಿಸಿಯಾಗಿದೆ. ಫ್ರೆಂಕೋವನ್ನು ಬ್ರಿಟಿಷರೂ ಫ್ರೆಂಚರೂ ಬೇಗನೆ ಮನ್ನಿಸಿದರೆ, ಇನ್ನೂ ಇಟಲಿಯ ಒತ್ತಾಯದಿಂದ, ಯುದ್ಧದ ಫಲಗಳನ್ನು ಹಂಚಿಕೊಳ್ಳಲು ಇಟಲಿಯಾನರು ಮುಂದೊತ್ತರು ದಿನ ಹೋಗುವಷ್ಟಕ್ಕೆ ಈ ಸುಲಿಗೆ ಹೆಚ್ಚುವುದು ಮೈನೋರ್ಕಾ ದ್ವೀಪವನ್ನು ಫ್ರೆಂಕೋ ವಶಪಡಿಸುವಾಗ, ಸ್ಪೆಯಿನ್ ಸರಕಾರವು ಹಿಂದೆಗೆಯಿತಾದರೂ, ಬ್ರಿಟಿಷ ಯುದ್ಧನಾವೆ ಅತ್ತ ಹೋದುದು ಉಚಿತ ವೆಂದು ತೋರಿಬಂದಿಲ್ಲ ಬರ್ಲಿನಿಗೂ ಒಪ್ಪಿಲ್ಲ ಈ ಬಗೆಯಲ್ಲಿ ಇಂಗ್ಲೆಂಡು ನಡುವೆ ಕೈಹಾಕಿದುದು ಸರಿಯಲ್ಲವೆಂದು ಜರ್ಮನ್ ಪತ್ರಿಕೆಗಳೆಂದಿವೆ ಮೈನೋರ್ಕ ದ್ವೀಪದಲ್ಲಿ ಗೋಪನದಲ್ಲಿ ಕೋಟೆಗಳನ್ನು ಕಟ್ಟಿಸಿರುವರೆಂದೂ, ಇಂಗ್ಲಿಷರು ತಮ್ಮವರನ್ನು ದೇಶಕ್ಕೊಯ್ಯುವರೆಂಬ ನೆನದಿಂದ ಇಟಲಿಗೆ ಈ ಕೋಟೆಗಳು ಕಣ್ಣಿಗೆ ಬೀಳದಂತೆ ಕಡೆದರೆಂದೂ ಇಟಲಿ ಎನ್ನುತ್ತದೆ

ಫ್ರಾನ್ಸಿನಲ್ಲಿ ಒಂದು ಲಕ್ಷ ನಿರಾಶ್ರಿತರೂ ಒಂದು ಲಕ್ಷ ಸಿಪಾಯರು ಸ್ಪೆಯಿನಿನಿಂದ ಬಂದ ಇಳಿದಿರುವರು. ಹೀಗಾಗಿ, ರಾಜಧಾನಿ ಮೆಡ್ರಿಡನ್ನು ಕಾಪಾಡುವ ಸೇನೆಯು ಕಡಮೆಯಾಗಿದೆ ಇನ್ನು ಸ್ಪೆಯಿನ್ ಸರಕಾರ ಪಕ್ಷವು ಉಳಿಯುವುದುಂಟೆ?

೧೯೩೬ರಲ್ಲಿ ಜುಲೈ ೧೮ರಂದು, ಅಲ್ಲಿನ ಅರಸನ ಪಕ್ಷದ ಒಬ್ಬ ಮಹಾಸೇನಾನಾಯಕನನ್ನು ಈ ಸರಕಾರ ಪಕ್ಷವು ಕೊಂದಿಕ್ಕಿ, ಬೊಲ್ಶೆವಿಕ್ ರೀತಿಯಲ್ಲಿ ಜನರನ್ನು ಆಳತೊಡಗಿ ಮಾಡಿದ್ದ ಅನರ್ಥ ಅತ್ಯಾಚಾರಗಳ ನೆನವು ಇನ್ನು ಮರೆತುದಿಲ್ಲ ಪುರಾತನ ಕಾಲದಿಂದ ಬಾಳಿ ಬಂದಿದ್ದ ಸಂಘ ಸಂಸ್ಥೆ ರೀತಿರಿವಾಜುಗಳನ್ನು ಮುರಿದು ಹಾಕಲು ಆಗಲೇ ಮಹಾಪ್ರಯತ್ನಗಳನ್ನು ಇದೇ ಸರಕಾರವು ಮಾಡಿತು, ಧರ್ಮಸಂಸ್ಥೆಗಳನ್ನು ನಿರ್ಮೂಲಿಸ ತೊಡಗಿ, ಜನರು ತಮ್ಮ ಸುಧಾರಣೆಗಳಲ್ಲಿ ವಿಶ್ವಾಸವಿಡುವರೆಂದು ನಂಬಿದರು ಸಮಾಜವಾದಿಗಳಿಗಿಂತ ಸಮತಾವಾದಿಗಳು ಮುಂದೊತ್ತಿ, ಜನರನ್ನು ಸದೆಬಡಿಯಲೆತ್ನಿಸಿದರು ಜನರಲ್ ಫ್ರೆಂಕೋ ಸಹ ಇದೇ ಸರಕಾರಕ್ಕೆ ಸೇರಿದ್ದವನೇ ಪ್ರಾಚೀನತೆಯ ಅಭಿಮಾನಿಗಳಿಗೆ ಈ ಅನ್ಯಾಯ ವರ್ತನೆಯು ಸರಿತೋರಲಿಲ್ಲ. ಹೀಗಾಗಿ ಎರಡು ಪಕ್ಷಗಳಾದುವು ೧೯೩೧ರಲ್ಲಿ ನಡೆದ ಕ್ರಾಂತಿಯ ಕಾಲದಲ್ಲಿ ಈ ಸರಕಾರವು ಕಡಮೆ ಸುಧಾರಣೆಗಳನ್ನು ತಂದಿದ್ದರೆ, ಇಂದಿಗೂ ಅದು ಬಾಳುತ್ತಿತ್ತು ಪ್ರಚಂಡ ಕ್ರಾಂತಿ, ರಷ್ಯದ ಬೊಲ್ಶೆವಿಕರ ನೀತಿ ಇವುಗಳಿಂದಲೇ ಜನರು ಕೇಳಿ ಪ್ರತ್ಯೇಕ ಪಂಗಡಗಳಾದುವು ಇದಕ್ಕೇ ಕಾರಣವೇ ಫೆಸಿಸ್ಟ ಪಂಗಡಗಳು ನಾಝಿಗಳು ಇವರ ಸಹಾಯಕ್ಕೆ ಬಂದುವು ಯುದ್ಧವು ಮುಂದರಿಯಿತು ಇನ್ನೀಗ ಮುಗಿಯಬಹುದು ಆದರೂ ನೆಮ್ಮದಿಯ ಕೆಲಸ ಬಹಳ ಕಠಿನವಾಗಿದೆ, ಸುಲಭವಲ್ಲ

ಸ್ಪೆಯಿನಿನ ಪಾಠವನ್ನು ಭಾರತವಾಸಿಗಳು ಕಲಿಯಲಿ ಎಂದು ಶ್ರೀ ವೆಲ್ಸರು ಪ್ರವಾಚವನ್ನು ನುಡಿದಿರುವರು ನಿಜ ಹೊಸ ರಾಜ್ಯಭಾರಕ್ರಮ ಸ್ಥಾಪಿಸಲೆಳಸುವರು, ಕ್ರಾಂತಿಯನ್ನುಂಟುಮಾಡುವ ಸಂದರ್ಭಗಳಲ್ಲಿ, ಪುರಾತನಕಾಲದ ಸಂಬಂಧವನ್ನು ಕ್ಷಣದಲ್ಲಿ ಕಡಿದಿಕ್ಕುವ ಪ್ರಬಲ ಚಳವಳ ಮಾಡಬಾರದು. ಹಾಗೆ ಮಾಡಿದ್ದಲ್ಲಿ, ಒಳಜಗಳಗಳಾರಂಭಿಸಿ, ದೇಶವು ಮಣ್ಣುಪಾಲಾಗುವುದು.

ಇಂಡಿಯದ ವಿಷಯವಾಗಿ ಪ್ರಸಿದ್ಧ ಭವಿಷ್ಯವಾದಿ ಕೀರೊ 1939

'ಪ್ರಪಂಚದ ಭವಿಷ್ಯವಾದ' ಎಂಬ ಗ್ರಂಥದಲ್ಲಿ, ಕೀರೋ ಹೀಗೆ ಬರೆದಿರುವನು:

. ಹಿಂದೂದೇಶದಲ್ಲಿ ಅಶಾಂತಿಯೂ ರಾಜದ್ರೋಹವು ಇನ್ನಷ್ಟು ಪ್ರಬಲವಾಗುವುದು ಬ್ರಿಟಿಷ ಸರಕಾರವು ಇಂಡಿಯಾ ಪ್ರಶ್ನೆಯನ್ನು ಹೇಗೆ ತೀರ್ಮಾನಿಸಬೇಕೆಂದರೂ, ಅದೂ ವ್ಯರ್ಥವಾದೀತು

ಮುಂದೆ, ಸ್ತ್ರೀಯರೇ ಭಾರತವರ್ಷದ ಭವಿಷ್ಯದಲ್ಲಿ ಹೆಚ್ಚಿನ ಭಾಗ ವಹಿಸುವರು ಬ್ರಿಟಿಷರ ಆಳಿಕೆಯಿಂದ ಮುಕ್ತರಾಗುವ ಪ್ರಯತ್ನದಲ್ಲಿ ಅವರೇ ತಮ್ಮ ಸಂಪೂರ್ಣ ಶಕ್ತಿಯನ್ನು ವಿನಿಯೋಗಿಸುವರು ಇವರು ಸ್ವಭಾವತಃ ಸಾಧುಗಳಾದರೂ, ಉದ್ರೇಕಗೊಂಡಲ್ಲಿ ಜಗತ್ತನ್ನೇ ಚಕಿತಗೊಳಿಸುವಷ್ಟು ಧೀರೆಯರಾಗಿ, ಸಮಸ್ತವನ್ನು ಬಲಿಗೊಡಲೂ ಮುಂದೊತ್ತುವರು ಈ ಹೋರಾಟಕ್ಕಾಗಿ ಸಾವಿರಗಟ್ಟಲೆಯಾಗಿ ಇವರು ಜೈಲುಪಾಲಾಗುವರು ಬ್ರಿಟಿಷ ಆಡಳಿತವು ಸರಿಯಾಗಿ ನಡೆಯದಂತೆ ವಿರೋಧವಾಗಿ ಇವರೇ ವರ್ತಿಸುವರು ಸರಕಾರದ ಪ್ರತಿಯೊಂದೂ ಇಲಾಖೆಯಲ್ಲಿ ಅಂಧಕಾರವನ್ನೆ ಉಂಟುಮಾಡುವರು. ಇವರ ಪ್ರಾಬಲ್ಯ ಮುರಿಯಲು ಬ್ರಿಟಿಷ ಅಧಿಕಾರಿಗಳೂ ಮಿಲಿಟರಿ ಪೊಲೀಸ ಸಹಾಯ ಹಿಡಿದೂ ಏನೂ ಮಾಡಲಾರದಾದಾರು ಇಂಡಿಯದಲ್ಲಿ ಈ ಮೂಲೆಯಿಂದ ಆ ಮೂಲೆಗೂ ಇನ್ನುಂಟಾಗಲಿರುವ ಹೋರಾಟವು ಸ್ತ್ರೀಯರದು.

ಬೆಯೊನೆಟ್, ಬೊಂಬುಗಳೇ ಮೊದಲಾದುವನ್ನು ಗಣನೆಗೆ ತರದೆ, ಅವೆಲ್ಲವೂ ವ್ಯರ್ಥವಾಗುವ ಹಾಗೆ ಮಹಾತ್ಮಾಜಿಯವರ ಸತ್ಯಾಗ್ರಹ ತತ್ವವನ್ನು ಸಾರಿರುವರು

ದೇಶೀಯ ರಾಜರುಗಳು, ಇಂಗ್ಲೆಂಡಿನ ಕೃಪೆಯಿಂದ, ತಮ್ಮ ಸಿಂಹಾಸನಗಳನ್ನೇರಿ ಅಧಿಕಾರ ನಡೆಸುತ್ತಿರುವರು ಇವರು ಕ್ರಮೇಣ ತಮ್ಮ ಪ್ರಜೆಗಳ ಸಾಲಿಗೆ ಬಂದು, ತಮ್ಮವರ ಬಂಧವಿಮೋಚನೆಗಾಗಿಯೂ ಪ್ರಯತ್ನಿಸುವರು

ಕಳೆದ ಮಹಾಯುದ್ಧ ಕಾಲದಲ್ಲಿ ಮೊಳಗಿದ ತುಪಾಕಿಗಳು, ಈ ನವಯುಗದ ಯುಗಾರಂಭವನ್ನೆ ಸ್ವಾಗತೀಕರಿಸಿದ ಉತ್ಸವ ಕಾಲದವೆಂದು ತಿಳಿಯಬೇಕು.

ಗ್ರಹಗಳ ಸೂಚನೆ ಇಷ್ಟಿದೆ, ಹೀಗಿರುವಾಗ ಇಂಗ್ಲೆಂಡು ಇಂಡಿಯವನ್ನು ತನ್ನ ಅಂಕೆಯಲ್ಲಿಟ್ಟುಕೊಳುವುದು ಹೇಗೆ? ಕುಂಭರಾಶಿಯ ಫಲವೇ ಇಂದಿಯಿತ್ತಿದೆ

ಚಂದ್ರನು ಮುಂದರಿಯಬಾರದು, ಸಮುದ್ರವು ಅಲ್ಲಾಡಬಾರದು ಎಂದೆಲ್ಲ ಹೇಳಿದರೆ ಎಷ್ಟು ಮೂರ್ಖತ್ವವೋ, ಅಷ್ಟೆ ಮೂರ್ಖತನವು ಗ್ರಹಚಾರ ಫಲದಿಂದ ಇಂಡಿಯವು ಮುನ್ನಡೆವಾಗ ಇಂಗ್ಲೆಂಡು ತಡೆದರೆ ಉಂಟಾಗುವುದು

ಭೂತಕಾಲದಲ್ಲಿ ತನ್ನ ಅಂಕೆಯಲ್ಲಿಟ್ಟುಕೊಂಡನ್ನು ಸುಲಭವಾಗಿ, ಭವಿಷ್ಯತ್ಕಾಲದಲ್ಲಿ ಇಂಡಿಯವನ್ನು ಇಂಗ್ಲೆಂಡು ಇಟ್ಟುಕೊಳ್ಳಲಾರದೆಂಬುದು ಖಂಡಿತವಾಗಿದೆ ಆದುದರಿಂದ ಇಂಡಿಯಕ್ಕೆ ಈಗ ಸ್ವಾತಂತ್ರ್ಯವನ್ನು ಕೊಟ್ಟು ಆ ದೇಶದ ಕೋಟ್ಯಂತರ ನಿವಾಸಿಗಳ ಮೈತ್ರಿ ಸಂಪಾದಿಸುವುದೇ ಇಂಗ್ಲೆಂಡಿಗೆ ಮೊದಲಾದ ಉಪಾಯ

ಇನ್ನಿದೆ, ಇನ್ನಿಷ್ಟರಲ್ಲೇ ಮತ್ತೊಂದು ಮಹಾಯುದ್ಧ । ಅದಕ್ಕೆ ಮೊದಲೇ ಇಂಗ್ಲೆಂಡು ಇಂಡಿಯಕ್ಕೆ ಸ್ವಾತಂತ್ರ್ಯ ಕೊಡಲಿ!

ಯಕ್ಷಗಾನ ಕಾಲಕ್ಷೇಪ

ತಾ ೧೧—೨—೩೯ನೇ ಶನಿವಾರ ರಾತ್ರಿ ೯ ೩೦ ಗಂಟೆಗೆ ಸರಿಯಾಗಿ ಬೋಳಾರ ಅರೆಕೆರೆ ಬಾಲ್ಯಯನವರ ಮನೆಯ ಲಗ್ನಚಪ್ಪರದಲ್ಲಿ ಪಂಡಿತ ಬಿ ಬಾಬಣ್ಣರವರ ಅಧ್ಯಕ್ಷತೆಯಿಂದ 'ಸೌಭದ್ರ ಪರಿಣಯ'ವೆಂಬ ಯಕ್ಷಗಾನ ಕಾಲಕ್ಷೇಪವು ಶ್ರೀ ಅಗರಿ ರಾಮಣ್ಣಕೈನಳ ಹಾಡುವಿಕೆಯಿಂದಲೂ, ಎಮ್ ದಾಸಪ್ಪಾಚಾರ್ಯರ ಮೃದಂಗ ವಾದನದಿಂದಲೂ, ಅರ್ಜುನ—ಕೆ ಬಾಬುವೈದ್ಯರು, ಹನುಮಂತ—ಪೋಲೀಸ್ ಅನಂತಣ್ಣರವರು, ಕೃಷ್ಣ—ಜಪ್ಪು ದೇವಪ್ಪಶೆಟ್ಟರು ಬಲರಾಮ—ಪೋಲೀಸ್ ಕುಂಞಾಣರವರು, ಕೌರವ—ಪಂಡಿತ ಮಂಜುನಾಥನವರು, ಕರ್ಣ—ಕದ್ರಿ ಜನಾರ್ಧನಾಚಾರ್ಯರು, ಸೌಭದ್ರ—ಕುಂಞಕಣ್ಣರವರು ಮೊದಲಾದ ಅರ್ಥಧಾರಿಗಳ ಕೂಡುವಿಕೆಯಿಂದ ಯಶಸ್ವಿಯಾಗಿ ಜರಗಿತು

ಇಂದಿನ ವಾರ್ತೆ

ಇಂದಿನ ವಾರ್ತೆ.

ಹಾಲಿ ವರ್ಷದಲ್ಲಿ ರೈಲ್ವೆಗಳಿಂದ ಏನ ಲಾಭವು ಎರಡು ಕೋಟಿ ರೂಪಾಯಿ, ಮುಂದಣ ವರ್ಷಕ್ಕೆ ೨೧೩ ಲಕ್ಷ ರೂಪಾಯಿಯೆಂದು ಅಂದಾಜು. ಒಟ್ಟು ಖರ್ಚು ೬೩॥ ಕೋಟಿ ರೂಪಾಯಿ. ಎರಡು ಕೋಟಿ ರೂಪಾಯಿಗಳು ವರಿಷ್ಠ ಸರಕಾರಕ್ಕೆ ಖರ್ಚಿಗೆ ದೊರೆವುವು.

ಮುಂದಣ ವರ್ಷದಲ್ಲಿ ೧೫ ಕೋಟಿ ರೂಪಾಯಿಗಳನ್ನು ಹೊಸ ಖರ್ಚಿಗೆ ವಿನಿಯೋಗಿಸುವರು. ೩೬೬೦ ಹೊಸ ಗಾಡಿಗಳೂ ತಯಾರಾಗುವುವು. ದಕ್ಷಿಣ ಬಿಹಾರ ರೈಲ್ವೆಗಳನ್ನು ಕೊಂಡುಕೊಳ್ಳುವರು.

ಮುಂಬಾಯಿ ಒರಿಸ್ಸಾ ಸರಕಾರದ ಮಂತ್ರಿಮಂಡಲಗಳು ತ್ರಿಪುರಿಯಲ್ಲಿ ಕೊಂಗ್ರೆಸು ಸೇರುವ ಮೊದಲೇ ರಾಜೀನಾಮೆಕೊಡಬಹುದಾಗಿ, 'ಹರಿಜನ' ಪತ್ರಿಕೆಯೊಳಗಣ ಲೇಖಗಳಿಂದ ಅಭಿಪ್ರಾಯಮಾಡಿಕೊಳ್ಳಬಹುದು. ಬೋಸ್–ನೆಹರುಗಳೊಳಗೆ ಸಂಭಾಷಣೆಗಳು ನಡೆಯಬಹುದು, ಅವುಗಳಿಂದ ಕೊಂಗ್ರೆಸಿನ ಮುಂದಣ ಕಾರ್ಯಕ್ರಮದ ಅಂದಾಜಾದೀತು.

ಹೈನಾನ ದ್ವೀಪವನ್ನು ಜಾಪಾನು ಸ್ವಾಧೀನಪಡಿಸಿಕೊಂಡುದರ ದೆಸೆಯಿಂದ ಪೆಸಿಫಿಕ್ ಸಾಗರದ ಪರಿಸರದಲ್ಲಿನ ರಾಜನೀತಿಕ್ರಮದಲ್ಲಿ ಇತಿಹಾಸದಲ್ಲಿ ಬದಲಾವಣೆಯುಂಟಾದೀತೆಂದ ಚಿಯಾಂಗ್ ಕೈಶೇಕ್ ತಿಳಿಸಿ, ಆ ದ್ವೀಪದಲ್ಲಿ ವಿಮಾನಗಳ ಠಾಣ್ಯವನ್ನು ಜಾಪಾನು ಸ್ಥಾಪಿಸಲಿದೆ ಎಂದು ಸೂಚಿಸಿರುವರು. ಹೊಂಗ್ ಕೊಂಗ್, ಸಿಂಗಾಪುರ, ಔಸ್ಟ್ರೇಲ್ಯ, ಫಿಲಿಪ್ಪಾಯಿನ್ ದ್ವೀಪಗಳು ಎಲ್ಲವನ್ನೂ ಇಲ್ಲಿಂದಲೇ ಜಣಗಿಸಬರುವುದು. ಬ್ರಿಟಿಷರು ಮತ್ತು ಅಮೇರಿಕದ ವೈಕ್ರಿಯಿಂದ ಜಾಪಾನಿಗೆ ಬಾಧಕವಾರದಂತೆ, ಈ ದ್ವೀಪವನ್ನು ಮೊದಲೇ ಜಾಪಾನು ಆಕ್ರಮಿಸಿ ಅಲ್ಲೇ ನೆಲೆನಿಂತಿದೆ. ಇತ್ತ ಮೈನೊರ್ಕದಲ್ಲಿ ಫ್ರೆಂಕೋ ಇಳಿಯುವಾಗಲೆ ಅತ್ತ ಹೈನಾನ್ [illegible]ಗಬೇಕೆ? ಜಾಪಾನು ಮಾತ್ರ, ಚೀನಕ್ಕೆ ಕಳ್ಳತನದಿಂದ ಹೋಗುವ ಯುದ್ಧಸಾಮಗ್ರಿಗಳನ್ನು ಅರಿದಾರಿಯಲ್ಲೇ ತಡೆಯಲು ಹೀಗೆ ಮಾಡಿದೆ ಹೊರತು, ಆ ಸ್ಥಳ ತನಗೆ ಬೇಕಾಗಿಲ್ಲವೆಂದು ಬರೆದಿದೆ.

ಕೆನಿಯಾದಲ್ಲಿ ಇನ್ನಷ್ಟು ಇನ್ನೂ ಯಿಟಿಷರು ಬಂದು ನೆಲೆಸಿಲ್ಲವ ಹಾಗೆ ೨೫೦,೦೦೦ ಪವನು ಸಹಾಯಧನವನ್ನು ಅಲ್ಲಿನ ಸರಕಾರವು ಸೆಂಕ್ಷನು ಮಾಡಿದೆ.

ಔಸ್ಟ್ರೇಲ್ಯವು ತನ್ನ ವಿಮಾನಸೇನೆಯ ಸ್ವಲ್ಪ ೧೩೨ರಿಂದ ೨೧೨ಕ್ಕೆ ಏರಿಸುವುದು.

ಪಾಲ್ಘಾಟಿನ ಸಬ್ ಕಲೆಕ್ಟರ ಚೆಟ್ಟ್ಯೂರರ್ ವರಿಗೆ, (ತ್ಯಾಗರಾಜ ಉತ್ಸವದಲ್ಲಿ ಸಿಗಾರೇಟು ಪ್ರಸಂಗ ಎದ್ದ ವಿಚಾರ) ರಾಮನಾಡು ಜಿಲ್ಲೆಗೆ ವರ್ಗವಾಗಿದೆ.

ಪ್ರಖ್ಯಾತ ಲೇಖಕ ಶ್ರೀ। ವೆಲ್ಸರವರ ಅಭಿಪ್ರಾಯದಲ್ಲಿ–೧೯೪೦ರ ಮೊದಲೇ ಇನ್ನೊಂದು ಯುದ್ಧವಾಗಲಿದೆ. ಸ್ಪೈಯಿನ್ ಸೋತಿ, ಹಿಂದೀಯರು ವಿವೇಕ ಹೊಂದಲಿ ಎಂದರು.

ಯುವಕರು ಕೈಗಾರಿಕೆಗಳಲ್ಲಿ ಆಸಕ್ತಿ ತೋರುವ ಹಾಗೆ ಸಂಯುಕ್ತ ಪ್ರಾಂತ್ಯದ ಸರಕಾರವು ೩೦,೦೦೦ ಸೆಂಕ್ಷನು ಮಾಡಿಯದೆ.

ಸರಕಾರೀ ನೌಕರಿ ಸ್ತ್ರೀಯರಿಗೆ ಸಿಗಬಾರದೆಂದು 'ಲೀಗ್ ಆಫ್ ನೇಶನ್ಸ್' ಕೌನ್ಸಿಲು ನಿರ್ಧಾರಮಾಡಿದೆ.

ಬಂಗಾಳ ಸರಕಾರವು ವ್ಯಕ್ತಿ ತೆರಿಗೆ ವಿಧಾಯಿಸಲಿರುವುದೆಂದು ಸೂಚನೆ. ತಾ [illegible]ರಲ್ಲಿ ಮಂಡಲೇಯಲ್ಲಿ ೨೦,೦೦೦ ಜನರ ಹಿಂದು ಅಪ್ಪಣೆಗೆ ವಿರೋಧವಾಗಿ ಮೆರವಣಿಗೆ ಮಾಡಿದಾಗ, ಪೊಲೀಸರು ಗುಂಡು ಹಾರಿಸಲು, ಹನ್ನೊಂದು ಮಂದಿ ಸತ್ತರು, ೧೯ ಮಂದಿಗೆ ಗಾಯಗಳಾದುವು. ಮುಂದೆಲ್ಲ ಶಾಂತಿ.

ಬರ್ಲಿಂಡ, ಜನರಲ್ ಫ್ರೆಂಕೋವಿನ ಸರಕಾರವನ್ನು ಅಂಗೀಕರಿಸಿದೆ. ಅಸ್ಸಾಮಿನಲ್ಲಿ ಇನ್ನು ಕಮಿಶನರು ಇಸಮುಗಳು ಇರಬಾರದು. ಕೌನ್ಸಿಲು ಹೀಗೆ ಸೂಚಿಸಿದುದನ್ನು ಗವರ್ನರರು ಒಪ್ಪಿಕೊಂಡರು.

ಕೌನ್ಪುರದಲ್ಲಿ ಕಣ್ಣಿನಾರ ಸಂಜೆಯಿಂದ ಇದುವರೆಗೆ (ತಾ. ೧೨) ದಂಗೆ ನಡೆದಾಗ, ಪೊಲೀಸರು ೬ ಕಡೆ ಗುಂಡುಹಾರಿಸಬೇಕಾಯಿತು. ೨೨ ಮಂದಿ ಸತ್ತಿರುವರೆಂದೂ, ೨೦೦ ಮಂದಿ ಗಾಯಗೊಂಡಿರುವರೆಂದೂ, ೫೦೦ ಮಂದಿಯನ್ನು ಸೆರೆಹಿಡಿದರೆಂದೂ ವಾರ್ತೆ.

ಚೀನದ ಕಳ್ಳಕಲಾಸಿಗಳು ಬ್ರಿಟಿಷ ಹಡಗನ್ನು ಸೆರೆಹಿಡಿದರು.

ಗ್ರಾಮಗಳಲ್ಲಿ ದಿಂಗೆಗಳನ್ನು ಇಳಿಸಿ, ಹೊಸ ತೆರಿಗೆಗಳ ಮೂಲಕ ಈ ನಷ್ಟವನ್ನು ತುಂಬಿ, ಬಂಗಾಳ ಸರಕಾರವು ಹೊಸ ಬಜೇಟನ್ನು ಮುಂದಿಟ್ಟಿದೆ. ಈಗಿನ ಮಂತ್ರಿಮಂಡಲದಲ್ಲಿ ಅವಿಶ್ವಾಸ ಸೂಚಿಸುವ ಠರಾವು ಮುಂದೆ ಬರುವುದು.

ಸ್ಪೈಯಿನ್ನಿನಲ್ಲಿ ರೈಲ್ವೆ ಗಾಡಿಗಳು ಢಿಕ್ಕಿ ಹೊಡೆದುದರಿಂದ ೩೧ ಮಂದಿ ಸತ್ತರು, ನೂರು ಜನರಿಗೆ ಗಾಯಗಳಾಗಿವೆ.

ಎಲ್ಲ ಮ್ಯುನಿಸಿಪಾಲಿಟಿಗಳಲ್ಲಿ ಧರ್ಮಾರ್ಥವಾಗಿ ಕಡ್ಡಾಯ ಪ್ರಾಥಮಿಕ ವಿದ್ಯಾಭ್ಯಾಸ ಪ್ರಚಾರ ಮಾಡಲು ಒರಿಸ್ಸಾ ಸರಕಾರವು ನಿರ್ಧರಿಸಿಯದೆ.

ಸಂಯುಕ್ತ ಸರಕಾರದ ವಿಮಾನವು ತಾಸಿಗೆ ೩೨೦ ಮೈಲು ವೇಗದಿಂದ ಹಾರಿ, ೨೫೦೦ ಮೈಲು ಸಂಚರಿಸಿ, ನೆಲಕ್ಕಿಳಿಯುವಾಗ ಮುರಿದು ಬಿತ್ತು. ಇನ್ನು ವೇಗವಾಗಿ ಇನ್ಯಾವ ವಿಮಾನವೂ ಸಂಚರಿಸಿದ್ದಿಲ್ಲ. ಬಹುಶಃ ಮುರಿದುದೂ ಇಲ್ಲ!

ಬ್ರಿಟಿಷ ಕೊಚ್ಚಿಯಲ್ಲಿ ಕೊಂಗ್ರೆಸ್ ಧ್ವಜವನ್ನು ಮ್ಯುನಿಸಿಪಲ್ ಕಟ್ಟಡಗಳ ಮೇಲೆ ಏರಿಸಬಾರದಾಗಿ ಮೆಜಿಸ್ಟ್ರೇಟರ ಆಜ್ಞೆಯಾಗಿದೆ.

ದಿವಂಗತ ಶ್ರೀ ರಾಮನ್ ಮೆನೂನರ ಸ್ಥಾನದಲ್ಲಿ ಶ್ರೀ ಈಶ್ವರನ್ ನಂಬೂದಿರಿಪಾದರು ಚುನಾವಣೆ ಹೊಂದಿದರು (ಎಸೆಂಬಿಗೆ).

ಮುಂದಿನ ವಾರ

ಸ್ಪೈಯಿನಿನಲ್ಲಾಗುತ್ತಿದ್ದ ಯುದ್ಧಪ್ರಕರಣವು ಮುಗಿಯದೆ ಇರಬಹುದಾದರೂ, ಅದರ ಕೊನೆ ನಿರ್ಧಾರವಾದಂತಿದೆ. ಇನ್ನಿಷ್ಟು ಗುಲ್ಲೆಬ್ಬಿಸುವುದೇ ವಿನಾ, ಜನರಲ್ ಫ್ರೆಂಕೋ ಗೆದ್ದವನೆ ಸರಕಾರದ ಪಕ್ಷವನ್ನು ಸಂಭಾಷಣೆಗೆ ಕರೆಯಲೂ ಅವನು ಒಪ್ಪುವುದಿಲ್ಲವೆಂಬುದು ಶೋಚನೀಯ.

ಬರುವ ವಾರ

ನಾಗಯ್ಯ ಸೆಟ್ಟರು

೨.

ನಗರದ ಶಿವಪ್ಪನಾಯ್ಕರ ಹಾಗೆ ನಾಗಯ್ಯ ಸೆಟ್ಟರು

ನಾಗಯ್ಯನಿಗೆ ನಡುಗದ ಒಳ್ಳಲಿಲ್ಲ!

ನಾಗಯ್ಯನ ಬಲಗೈ ಬಚ್ಚ

ನಾಗಯ್ಯನಿಗೆ ಮಂತ್ರಿಗಳು ಬಹಾಳರು

ನಾಗಯ್ಯ ಇಟ್ಟರೆ ಊರು, ಸುಟ್ಟರೆ ಧೂಳು

ಶ್ರೀ। ಕಾರಂತರ

ಹಳ್ಳಿಯ 10 ಸಮಸ್ತರು

ಯಾವಕ್ಕು ಗ್ರಾಮ ದೇವ, ದೇವತೆಗಳೇ

ಶತ್ರುಗಳೆಂದರೇ, ಜನರೆಲ್ಲ ಸ್ಪೈಯಿನಿನವರೇ, ಅವರನ್ನು ಕೊನೆಯ ತನಕ ಬಡಿದು ಧ್ವಂಸಗೊಳಿಸಿದರೆ, ಅವನಿಗೇನ ಸಿಕ್ಕೀತು? ಜರ್ಮನಿ ಮತ್ತು ಮಿತ್ರರಾಷ್ಟ್ರಗಳೊಳಗೆ ೧೯೧೭ರಲ್ಲಾಗಬಹುದಾಗಿದ್ದ ಸಂಧಾನವನ್ನು ವ್ರಿಟಿಷ ಸರಕಾರವು ಮಾಡಿದಕ್ಕಿದ್ದಿತು, ಶಾಂತಿಯಾಗಲೆಂಬವರು ದೇಶಭಕ್ತರಲ್ಲೆಂದೂ ಸಾರಲಾಗಿತ್ತು. ಆಗ ಶಾಂತಿಯಾಗಿದ್ದರೆ, ಆ ಶಾಂತಿಯೆಂಬುದು ಅನಂತರ ಉಂಟಾದುದರಿಂದ ಯಾವ ಭಯಾನಕ ಪರಿಣಾಮಗಳು ಇನ್ನೂ ತಲೆದೋರುತ್ತಲಿವೆಯೋ ಅವು ಇಲ್ಲವಾಗುವುತ್ತಿದ್ದುವು. ಜನರಲ್ ಫ್ರೆಂಕೋ ಹೀಗೇ ಚರಿತ್ರವನ್ನು ಪುನಃ ಬರೆಯುತ್ತಿರುವನು. ಸರಕಾರಪಕ್ಷ ಸೋತಿ ಕೆಟ್ಟಿದೆ, ಗಡಿಯಾಚೆ ಓಡಿಬರುತ್ತದೆ, ಅಧ್ಯಕ್ಷರಿಗೂ ಮಂತ್ರಿಗಳಿಗೂ ಒಮ್ಮತವಿಲ್ಲ. ಇದನ್ನು ಕಂಡೂ ಅವನೇಕೆ ಶಾಂತಿಗೆ ಒಪ್ಪಬಾರದು? ಇದೀ ಜನಾಂಗವು ದೈನ್ಯದಿಂದ ನಾಶ ಹಾಳಾಗುವ ತನಕ ಯುದ್ಧವೇ? ಇದು ಧರ್ಮಸಮ್ಮತವೂ ಅಲ್ಲ, ರಾಜನೀತಿಗೆ ಸಮ್ಮತವೂ ಅಲ್ಲ.

卐

ಈ ಜಯದಿಂದ ಇಟೆಲಿಗೆ ಯಾವ ಸಂಭ್ರಮವಿದೆ? ಕಂಡುಬಂದುದಿಲ್ಲ. ಸೈನ್ಯವು ಜಯ ಹೊಂದಿತು, ಇನ್ನು ರಾಜಕೀಯ ಜಯವುಳಿದಿದೆ ಎಂದು ಸಿನ್ಯರ್ ಗಾಯಡಾ ಬರೆವನು. ಫ್ರೆಂಕೋವಿನ ಜಯವು ಮೊದಲೇ ನಿಶ್ಚಿತವಾಗಿತ್ತು, ಅಷ್ಟರಲ್ಲಿ ಪ್ರಜಾಸತ್ತೆಗಳ ಜಡಿಗೆ ಇದೆ ಎಂಬ ಮಾತು ಸಾರಲ್ಪಾದ ಕೂಡಲೇ ಈ ಜಯವು ಬೇಗನೆ ಲಭಿಸಿದೆ. ದಿಕ್ಟೇಟರರು ಸ್ಪಷ್ಟವಾಗಿ ತಮ್ಮ ಮದಾಂಧತೆಯನ್ನು ತೋರಿದರು. ರೋಮ್–ಬರ್ಲಿನಿಗಳ ವಿರುದ್ಧ ಫ್ರಾನ್ಸು ಇಂಗ್ಲೆಂಡು ಯಾವಾಗಲು ಇವೆ ಎಂದು ಚೆಂಬರ್ಲೇನರೂ [illegible]ದರು. [illegible] ದರನ್ನು ಬಲಿಕೊಟ್ಟು ದಿಕ್ಟೇಟರರ ಹಸಿವನ್ನು ಇನ್ನು ಸಮಾಧಾನಗೊಳಿಸ ಬರಲಾರದು. ಎಂದೂ ಸಾರಲಾಯಿತು. ಇನ್ನು ರಿಯಾಯಿತಿ ಕೊಡುವುದಾದರೆ, ಫ್ರಾನ್ಸ ಅಥವಾ ಇಂಗ್ಲೆಂಡು ರಾಜ್ಯಭಾಗವನ್ನು ಬಿಟ್ಟುಕೊಡಬೇಕಾದೀತು. ಇಂಗ್ಲೆಂಡು ಬಲವಾಗಿದೆಂದು ಜರ್ಮನರೂ ಮಾತಾಡುತ್ತಾರೆ. ಮುಸ್ಸೊಲಿನಿ ಕಣ್ಣಿಗಾಗಿರ ಮನ. ಅವನಿಗೆ ಹಿಂದೆಗೆವುದೂ ಮುಂದೊತ್ತುವುದೂ ಒಂದೇ ರೀತಿಯಲ್ಲಿ ಕಠಿನವಾಗಿದೆ. ಮ್ಯುನಿಚ್ ಒಪ್ಪಂದದ ಹೆಸರು ಇನ್ನು ಕೇಳಿಸಲಾರದು.

卐

ಅರಬರನ್ನೂ ಯೆಹೂದ್ಯರನ್ನೂ ಸಮ್ಮೇಳನ [illegible] ಪೆಲೆಸ್ತೀನ ಪರಿಷದ ವಿಚಿತ್ರ ರೀತಿಯಲ್ಲಿ ಸಾಗುತ್ತಲಿದೆ. ಇವರ [illegible] ಗಳು ಎಲ್ಲಿ ಯಾವಾಗ ಹೇಗೆ ಒಟ್ಟು ಕೂಡಿ ಮಾತಾಡುವುವೋ ತಿಳಿದಿಲ್ಲ. ಹಿಂದೀ [illegible] ಕೊನ್ಫರೆನ್ಸಿನಲ್ಲಿ ಹೀಗಿಲ್ಲ. ಆದುದಿಲ್ಲ. ಈ ಮಧ್ಯೆ ಜಿನ್ನಾರವರಿಗೆ ದೊಡ್ಡದೊಂದು ಸಂದೇಶವನ್ನು ಇಂಡಿಯಾ ಕರೆಗಾರರು ಈ ಪರಿಷದ್ವಿಚಾರದಲ್ಲಿ ಕಳಿಸಿ ಜಿನ್ನಾರವರ [illegible]ವನ್ನು ಪ್ರಕಟಿಸಿರವರ. ಹಿಂದೀ ಮುಸ್ಲಿಮರು ಇನ್ನು ತಾವು ಆಗ್ನೇಯದ ಭಾವಿಸಲಿಕ್ಕೆ [illegible] ಕಾರಣ [illegible] ಈ ವಿಷಯ [illegible] ಸ್ಲಿಮಲೀಗನ್ನು [illegible] ಎಂದ ಹೇಳುತ್ತಿದ್ದರು. [illegible] ಮಹಾತ್ಮರು ಹೇಳಿದರೆ ಹಿಂದುಗಳ ಪ್ರತಿ[illegible] ಗಳೆಂದೇ [illegible] ಕೊಂಗ್ರೆಸನ್ನು ಬ್ರಿಟಿಷ ಸರಕಾರವು [illegible] ಎನ್ನುವುದೆಂಬಂತ ಈ ಪ್ರಸಂಗವು ಸೂಚಿಸುತ್ತದೆ. ಜಿನ್ನಾರವರು ಇಲ್ಲಿನವರೇ ಅಲ್ಲದ, ಎಲ್ಲ ಮುಸ್ಲಿಮರ ಸಮವಾಗಿ ಪ್ರತಿನಿಧ್ಯ ಪಡೆದಿರುವಂತೆ ಈಗ ತೋರಿದರೆ? ಜಿನ್ನಾರವರು ಹೀಗೆ ಎಲ್ಲ ಮುಸ್ಲಿಮರ ಕೊಂಡಾಟಕ್ಕೆ [illegible]ದಾಗಿರುವರು.

卐

ಗಾಯಕವಾಡರು ತಮ್ಮ ಅಧಿಕಾರದಲ್ಲಿ ಅರಸೊಪ್ಪಿಸಿ ಎಷ್ಟು ಚೆನ್ನಾಗಿ ಪ್ರಜಾಹಿತವನ್ನು ಸಾಧಿಸಬಹುದೆಂಬುದನ್ನು ತೋರಿಸಿಕೊಟ್ಟು ಯಾವ ಕಾಲಕ್ಕೂ ಮಾದರಿಯಾಗಿರುವರು. ಮುತ್ಸದ್ದಿ ರಾಜರೆಂತಲೂ ಬೀಗ[illegible] ಹೊಸ ರೀತಿಯಲ್ಲಿ ಮುಂದರಿದು ಇತರ ರಾಜರುಗಳಿಗೂ ಮಾದರಿ ತೋರಿಸಿರುವರು. ಆರೋಗ್ಯ ಕುಂದಿದ ಕಾರಣ ಮಾತ್ರ ಇತ್ತೀಚೆಗೆ ಅವರು ಮರೋಪಿಗೆ ಆಗಾಗ ಪ್ರಯಾಣ ಮಾಡುತ್ತಿದ್ದರು. ಇಲ್ಲಿನ ಪ್ರಜೆಗಳೂ ಚಳವಳ ಎಬ್ಬಿಸಿದ ಮಾತು ಅಷ್ಟು ಕೇಳಬರುತ್ತಿಲ್ಲ. ಎಂತೂ, ಇತಿಹಾಸದಲ್ಲಿ ಇವರಿಗೆ ಚಿರಸ್ಥಾನವಿದೆ.

ಹೈನಾನು ದ್ವೀಪ

[ಈ ವಾರದಲ್ಲಿ ಜಪಾನು ಇದೊಂದು ದ್ವೀಪದ ವಿಷಯ ಫ್ರಾನ್ಸು, ಇಂಗ್ಲೆಂಡು, ಜಪಾನು, ಅಮೇರಿಕಗಳು ಬಹಳವಾಗಿ ಚಿಂತಿಸಬೇಕಾಗಿದೆ. ಚೀನವಂತೂ ಇದು ಮತ್ತೊಂದು ಯುದ್ಧಕ್ಕೆ ಸನ್ನಾಹವೆನ್ನುತ್ತಿದೆ. ಅದೇಕೆ? ಏನದು?]

ಬೇಕಾದಾಗ ಸೆಳೆದ ಕೊಳ್ಳಬಹುದೆಂದೇ ಜಾಪಾನು ಈ ದ್ವೀಪವನ್ನು ಕರಿತಾಗಿ ಎಂದಿಸಂದಲೂ ನಂಬಿದ್ದಿತು. ಹತ್ತಿರದ ಅನ್ನಾಮ್ ಸರಕಾರದ ಹೆಸರಲ್ಲಿ ಫ್ರೆಂಚರು ಪಾರಾಸೆಲ್ ದ್ವೀಪಗಳನ್ನ ವಶಪಡಿಸಿಕೊಂಡಾಗ ಪಾಶ್ಚಾತ್ಯರಿಗೆಲ್ಲ ತೊಂದರೆಗೀಡು ಮಾಡುವುದು ಬೇಡವೆಂದು ಜಾಪಾನು ಹೈನಾನು ವಿಷಯ ಕೈಬಿಡಿದ್ದಿತು. ಈಗ ಯುದ್ಧಸನ್ನಾಹಗಳು ಈ ದ್ವೀಪದ ಮಾರ್ಗವಾಗಿ ಚೀನಕ್ಕೆ ತಲುಪುತ್ತವೆಂದು ಆದರೆ ಅದನ್ನು ಜಾಪಾನು ಸುಗ್ಗಿ ನಿಲಿಸಸ್ಥಿಸನ ಮಾಡಿರುವುದು. [illegible] ಈ ಸನ್ನಾಹವು [illegible] ಹಿಂದೆ [illegible] ನಗರವನ್ನು ವಶಪಡಿಸಿ[illegible]ತು. ಇನ್ನು ಇಂಡೋಚೀನದ ಮೂಲಕ ಈ ಹದ್ಯಾರ ವ್ಯಾಪಾರ ಸಾಗುವ ಹಾಗೆ ಈ ದ್ವೀಪವನ್ನ ಹಿಡಿದಿದೆ. ಎಷ್ಟೇಕ ಇನ್ನು ಹತ್ತಿರವೇ ಇರುವ [illegible] ಪರ್ಯಾಯ ದ್ವೀಪವನ್ನು ಜಾಪಾನು ಸುಲಭವಾಗಿ ಹಿಡಿದು ಫ್ರೆಂಚರ [illegible] ಅಲ್ಲೇ ಪತ್ತಿ [illegible] ಕ್ವಾಂಗ್ ಚೋವಿನ ವ್ಯಾಪಾರ ತಡವುದು. ಆದರೆ, ಫ್ರಾನ್ಸ್ ವಿರೋಧವಾಗಿ ಯುದ್ಧಕಾರಣ ಹುಟ್ಟಿಸಲು, ಜರ್ಮನಿ ಇಟೆಲಿಗಳ ಪ್ರೀತಿ ಇದ್ದರೂ ಫ್ರಾನ್ಸು ಸಮ್ಮತಿಸದೆನ್ನಬಹುದು. ಚೀನದಲ್ಲಿ ಇತರ ರಾಷ್ಟ್ರೀಯರು ನಾನಾ [illegible]ಯಾಗಿ ಸಹಾಯ ಮಾಡುವ ಕ್ರಮ ತಿಳಿದು, ಅದನ್ನು ಆಕ್ಷೇಪಿಸಿ ಜಾಪಾನು ಹೀಗೆ ವರ್ತಿಸುತ್ತದೆನ್ನಬೇಕು. ಒರ್ಮ[illegible]ದ ಯುನಾನ್ ಮೂಲಕ ಸಾಮಗ್ರಿಗಳು ಚೀನಕ್ಕೆ ಹೋಗುತ್ತಿರುವುದೂ, ಬ್ರಿಟನ್ನು ಅಮೇರಿಕಗಳು ಚೀನಕ್ಕೆ ಧನ ಸಹಾಯ ಮಾಡುತ್ತಿರುವುದೂ, ಜಾಪಾನಿಗೆ ಧರ್ಮವೆಂದು ಅಂಗೀಕರಿಸಬರುವದಿಲ್ಲ. ಜಾಪಾನು ಈ ದ್ವೀಪವನ್ನು ಹಿಡಿದು, ರಾಜ್ಯವನ್ನು ವಶಪಡಿಸಿಕೊಳ್ಳುವುದೆನ್ನುವುದಿಲ್ಲ. ಇದು ಯುದ್ಧಕಾಲದ ನೀತಿಯಂತೆ, ಸೈನ್ಯದ ನಡೆವಾಟು ಸರಿಯಾಗಿ ನಡೆಯಲು ಆಗತ್ಯವಂತೆ. ಬಹು ದೀರ್ಘಕಾಲದ ವರೆಗೆ ಈ ದ್ವೀಪವನ್ನು ಅದ ವಶಪಡಿಸಿಕೊಂಡು ಬಾಳಬಹುದು. ಲೀಗ್ ಒಫ್ ನೇಶನ್ಸಿನಿಂದ ಪಡೆದ ತಕ್ಕೆಂದು ಪಡೆದ ಹಲವು ಜರ್ಮನ ಪಸಾಹತ್ತಗಳನ್ನು ಜಾಪಾನು ಹಿಡಿದುಕೊಂಡಲ್ಲೊಪ್ಪದು.

ಇಲ್ಲಿ ವಿಮಾನ ನಿಲ್ದಾಣವನ್ನು ಸ್ಥಾಪಿಸುವಾಗ, [illegible]ಟನ್ನು ಫ್ರಾನ್ಸು ಅಮೇರಿಕಗಳಿಗೆ ನಾನಾ ಆಪತ್ತು ಉಂಟಾಗಬಹುದು. ಈ ರಾಜ್ಯಗಳೇನ ಮಹಾದುಃಖವು ಫ್ರಾನ್ಸು ಇಂಗ್ಲೆಂಡುಗಳು ಈಗ ಜಪಾನ [illegible] ಮಾಡಿದುದರ ಕಾರಣ ತಿಳಿಯಬೇಕೆಂದು ಜಪಾನಿಗೆ ಕೇಳಿವೆ. ಡಚ್ಚರೂ ಅಮೇರಿಕನರೂ ಹಾಗೇ ಕೇಳಬಹುದು. ಜಪಾನು ಮಾರ್ಯಾದೆಯಿಂದ ಉತ್ತರ ಕೊಡುವುದು, ಅದ್ಯಪಿ ಕರ ಉತ್ತರವಾದೀತು. ಹಾಗೆಂದು [illegible] ಸರಕಾರವೂ ಈ ಉತ್ತರಕ್ಕೆ ಸಮಾಧಾನವನ್ನು ಈಗಲೆ ಕೇಳಲಾರವು. ಪಾಶ್ಚಾತ್ಯಸರಕಾರಗಳು ಈ [illegible] ಬ್ಬರಂಗಕ್ಕಿಳಿದರೆ, [illegible] ಉತ್ತಮ ಸಂಧಿ ದೊರೆಯುವುದು. ಆದರೆ ಅವು ಹಾಗೆ ಯುದ್ಧಕ್ಕೆ ತೊಡಗುವಂತಿಲ್ಲ. [illegible] ಯುರೋಪಿನಲ್ಲಿ ಯುದ್ಧವಾಗುವುದು [illegible] ಸಾಧಿಸುವವರು ಎಲ್ಲದಲ್ಲಿ ಯುದ್ಧವಾಗಲಿನ್ನು ವರೆಗೆ? ಚೀನವನ್ನಾಗಿ ಇಷ್ಟು ವಿಸ್ತಾರ ಪ್ರದೇಶವು ಜಾಪಾನಿಗೆ ಸಿಗುವ ತನಕ ಅವರ ಸುಮ್ಮನಿರುತ್ತಿದ್ದರೇ? ಹೈನಾನು ಚೀನದ ವಶದಿಂದ ಹೋದ. ಚೀನಕ್ಕೆ ನಷ್ಟವಾಗುವಾಗ ಸಹಾಯ ಮಾಡಿದ ಸರಕಾರಗಳು ಈಗ ಎಲ್ಲಿಯೂ ಸಿಡಿಗುಂಡುಗಳು ಬೀಳದಂತೆ ನೋಡುವುವು. ಇಂಡೋಚೀನ ಹೈನಾನುಗಳೊಳಗಣ ವ್ಯಾಪಾರಸಂಬಂಧವು ಕಡಿದಂತೆ ಮಾತ್ರ ಫ್ರೆಂಚರು ಪ್ರಯತ್ನಿಸುವರು. ಹೊಂಗ್ ಕೊಂಗಿನ ವ್ಯಾಪಾರ ಕುಂದಂತೆ ಮಾತ್ರ ಬ್ರಿಟನ್ನು ವಿವರ ಕೇಳಿದೆ ಎನ್ನಬೇಕು. ಯುದ್ಧಹಡಗುಗಳು ಮಾತ್ರ ಅತ್ತ ತಿರುಗದಂತೆ, ಜಾಪಾನು ಜಾಗ್ರತೆ ನೋಡೀತು. ಆಗ ಜಾಪಾನು ತೆಂಕಿಗೆ ತೊಡಗಿದರೆ, ಇಂದಿಯುವು ಸಮೀಪದಲ್ಲಿಗುವ ಕಾರಣ, ಮುಂದೆ ನಡೆವ ಕ್ರಮಗಳನ್ನೆಲ್ಲ ನಿರೀಕ್ಷಿಸಲೇ ಬೇಕಾಗಿ ಒದಿವುದು.

ಸ್ವದೇಶಾಭಿಮಾನಿ

ತಾರೀಖು ೧೭—೨—೧೯೩೯

ನಮ್ಮ ಶತ್ರುಗಳು.

ನಮಗೆ ಹಲವು ಶತ್ರುಗಳು. ಇವನ್ನು ಎದುರಿಸಲು ವಿದ್ಯಾರ್ಥಿಗಳೇ ಮುಂದೆ ಬರಬೇಕು.

ಅದೃಷ್ಟವನ್ನೆ ನಂಬಿ, ಪೌರುಷ ಮರೆವುದು ಒಂದು ಹಗೆಗಿಂತಲೂ ಹೆಚ್ಚಿನ ಹಾನಿಯನ್ನುಂಟುಮಾಡುತ್ತದೆ. ನಿರಕ್ಷರತೆ ಎಷ್ಟು ಕಾಲ ಜನರಲ್ಲಿದ್ದೀತೋ ಅಷ್ಟು ಕಾಲ ನಮಗೆ ಏಳಿಗೆಯಿರದು. ಹುಚ್ಚು ನಂಬಿಕೆಗಳು ನಿರ್ಮೂಲವಾಗದಿರುವಲ್ಲಿ ಇನ್ನಷ್ಟು ಹಾವಳಿ. ಯಥಾರ್ಥವರ್ತನವಿಲ್ಲದ ಜನಾಂಗವೇ ಕೆಟ್ಟುಹೋಗುವುದು.

ಹೊಸ ಹುರುಪಿನಿಂದ ಹೊಸ ಪರಿಸ್ಥಿತಿಯನ್ನು ಉಂಟುಮಾಡುವ ಮೊದಲು, ಹಳೆಯದನ್ನು ತಿದ್ದಿ ಸರಿಪಡಿಸುವ ಪ್ರಯತ್ನಗಳಾಗಬೇಕು. ಆದರೆ, ಹಿತಕರವಾವುದೋ ಅದೊಂದನ್ನೂ ಮುಟ್ಟಬಾರದು. ಇದಕ್ಕಾಗಿ ವಿವೇಕದಿಂದ ದೇಶಾಭ್ಯುದಯ ಸಾಧನೆಗೆ ಸುಧಾರಣೆ ಮಾಡುತ್ತ ಬರಬೇಕು. ಅವಸರದಿಂದ ಕೆಲಸ ಮುಂದರಿಸಿದರೆ, ಮತ್ತೆ ಮರುಗುವುದಕ್ಕೂ ಅವಕಾಶ ಸಿಗಲಾರದಂತಾದೀತು.

ಹಲವು ರಾಷ್ಟ್ರಗಳು, ಕಟ್ಟುನಿಟ್ಟಿನ ಕಾನೂನುಗಳು ಇದ್ದರೂ, ನಮ್ಮಲ್ಲಿ ರೂಢಿ ಎಂಬ ಅರಸು ಇರುವನು. ರೂಢಿಯು ಪುರಾತನವಾಗಿರುವಷ್ಟೂ ಪವಿತ್ರವಾದುದೆಂದು, ಅದನ್ನು ಮನ್ನಿಸುವುದೂ ಒಂದು ರೂಢಿ. ಅದನ್ನು ಕುರಿತಾಡಿದರೆ, 'ನಾವೇನು ಮಾಡಬಹುದು? 'ಅದೇ ರೂಢಿ' ಎನ್ನುವರು. ವಾಸ್ತವ ವಿಚಾರವಿಲ್ಲದೆ ರೂಢಿ ಪಾಲನೆಯಾಗುತ್ತ ಬರುವವರನ್ನು, ಪಿಟ್ಟು ರಸಿಕರು, ಕೋರ್ಟಿಗೆ ಒಯ್ದು ಅವರನ್ನು ನ್ಯಾಯವಿಚಾರಣೆಗೆ ಗುರಿಮಾಡಬೇಕೆನ್ನುವರು. ಈ ಅದೃಷ್ಟವಿಶ್ವಾಸದ ದುರಾದೃಷ್ಟವು ದೂರವಾಗದೆ ಜನಸಂಗಕ್ಕೆ ಉಳಿಗಾಲವಿಲ್ಲ. ಯುವಕರು ಈ ವಿಷಯ ಪರ್ಯಾಲೋಚಿಸಿ, ಧೀರರಾಗಿ 'ಅದೃಷ್ಟವಿಚಾರವನ್ನು ಅತ್ತ ತಳ್ಳಿ ಪೌರುಷ ಬೆಳೆಸ ಕಲಿತರೆ, ಅದು ಸಾವಿರ ಸೇನೆಗಳ ಬಲವನ್ನು ಜನಾಂಗಕ್ಕೆ ಕೊಡಬಲ್ಲುದು. ಎಲ್ಲ ಬಲಿಷ್ಠ ಜನಾಂಗಗಳ ಯುವಕರು ಅದೃಷ್ಟ-ನಂಬದ ಧೀರರು.

ಅಲ್ಪ ಸಂಖ್ಯಾಕರು ತಮ್ಮ ಧ್ಯೇಯವನ್ನು ತಿಳಿದು, ಅದನ್ನು ಮುಟ್ಟಲು ಯಾವ ತ್ಯಾಗ ಕಷ್ಟಸಹನೆ ಮೊದಲಾದುವನ್ನು ಕೈಕೊಳ್ಳಬಲ್ಲರೋ, ಅದೇ ಅವರನ್ನು ಅವರ ಗುರಿಗೆ ಮುಟ್ಟಿಸುವುದು. ದೇಶಹಿತವಾದುದನ್ನು ಯಾವಾಗಲೂ ಸಾಧಿಸಬಹುದಾಗಿದೆ ಎಂಬುದರಲ್ಲಿ ಯುವಕರಿಗೆ ವಿಶ್ವಾಸವಿದ್ದರೆ, ಭಾರತವರ್ಷವನ್ನು ನಿಜವಾಗಿಯೂ ನೂತನವಾಗಿ ನಿರ್ಮಿಸಲು ಯುವಕರಿಗೆ ಸಾಧ್ಯವಾದೀತು.

ನಿರಕ್ಷರತೆ ಮತ್ತೊಂದು ವೈರಿ. ಈ ವೈರಿಯ ನಾಶವು ಕಷ್ಟವೇ ಇಲ್ಲ. ಒಂದೇ ತಲಾಂತರದಲ್ಲಿ ಜನಸಂಖ್ಯೆಯಲ್ಲಿ ನೂರರಲ್ಲಿ ನೂರೂ ಮಂದಿ ಅಕ್ಷರಸ್ಥರಾಗುವಂತೆ ಮಾಡುವುದು ಯುವಕರಿಗೇ ಸಾಧ್ಯ.

ಸುಳ್ಳು ವಿಶ್ವಾಸಗಳೂ, ಲಂಚಪದ್ಧತಿಯೂ ಮಾಯವಾಗಿದೆ, ಸಾಮಾಜಿಕ—ಜೀವನವು ಪವಿತ್ರವಾಗಲಾರದು. ಕಳೆದ ವರ್ಷ ಹರಿಪುರದಲ್ಲಾದ ಕೊಂಗ್ರೆಸ್ ಅಧಿವೇಶನದಲ್ಲಿ, ಒಂದು ನೋಟೀಸು ಬಹಳ ದೊಡ್ಡದಾಗಿ ತೂಗುತಿತ್ತು, ಅದರಲ್ಲಿ "ಯಥಾರ್ಥರಾಗಿರಿ—ಗಾಂಧಿ" ಎಂಬೆರಡೇ ಮಾತುಗಳಿದ್ದುವು. ಯಥಾರ್ಥತೆಯಲ್ಲಿಲ್ಲವೊ ಅದನ್ನು ಅಣಗಿಸಲು ಯುವಕ ಶಕ್ತಿಸಿದರೆ, ಭಾರತವರ್ಷವು ತಾನಾಗಿ ತೀವ್ರವಾಗಿ ಉದ್ಧಾರಹೊಂದುವುದು.

ಆದರೆ, ಈ ವೈರಿಗಳನ್ನು ನಿರ್ಮೂಲಿಸುವ ಶಕ್ತಿ ಎಲ್ಲಿಂದ ಬಂದೀತು? ದೇವರಲ್ಲಿ ವಿಶ್ವಾಸ, ಜೀವಂತ ವಿಶ್ವಾಸವಿರಬೇಕು. ವಿಜ್ಞಾನದ ಸರಿಯಾದ ತಿಳಿವಳಿಕೆಯೂ ಅಗತ್ಯ.

ಧರ್ಮವೂ ವಿಜ್ಞಾನವೂ ಮೈತ್ರಿಯಿಂದ ಇರಬಹುದೇ? ವಿಷಯಗಳನ್ನು ಸರಿಯಾಗಿ ಅಳೆದುನೋಡಲು ವಿಜ್ಞಾನವು ಬೇಕು; ಧರ್ಮವು ವಿಷಯಗಳಿಗೆ ಬೆಲೆ ಕಟ್ಟುವ ಒರೆಗಲ್ಲು. ವಿಜ್ಞಾನವು ರಾಶಿಗಳನ್ನು ಅಳೆವುದು, ಧರ್ಮವು ಅವುಗಳ ಗುಣವಿಮರ್ಶೆ ಮಾಡುವುದು.

ವಿಜ್ಞಾನದ ಪ್ರಯೋಗಕ್ರಮ, ಧರ್ಮದ ಜೀವಾಳ ಇವೆರಡೂ ಇದ್ದರೆ, ಮನುಷ್ಯನು ಸಂಪೂರ್ಣತೆಯನ್ನು ಹೊಂದುವನು. ಜಗತ್ತು ನಿಜವಾಗಿಯೂ ದೇವರ ರಾಜ್ಯವಾಗುವ ಹಾಗೆ ವಿಜ್ಞಾನವನ್ನು ಅದರ ಸೇವೆಗೆ ವಿನಿಯೋಗಿಸಬೇಕು. ಹಾಗಾದಲ್ಲಿ ವೈರಿಗಳಿರರು.

ಡಾ: ಕಾಗಾವಾ

ಕೊಂಗೇರಿ ಗುರುಕುಲ ಆಶ್ರಮದಲ್ಲಿ ಮೈಸೂರು ದಿವಾನರ ಸಹಕಾರೀ ಭಾಷಣ

ದಕ್ಷಿಣ ಭಾರತದ ಗ್ರಾಮೋದ್ಧಾರಕರ ಸಂಘದ ಎರಡನೆ ಅಧಿವೇಶನದಲ್ಲಿ ಶ್ರೀಮಾನ್ ಮೈಸೂರು ದಿವಾನರು ಡಾ। ಕಾಗಾವಾ ಎಂಬ ಜಪಾನಿನ ಸಮಾಜಸೇವಕರನ್ನು (ಅತ್ತ ಬಂದಿದ್ದರು) ಸಭಿಕರಿಗೆ ಪರಿಚಯ ಮಾಡಿಸಿ ಕೊಡುತ್ತ—ಇವರು ಕ್ರಾಂತಿಕಾರರು, ಸಮಾಜವಾದಿಗಳು, ಮುಷ್ಕರಗಳ ಅಧಿನಾಯಕರು, ನೆರೆಮನೆಗೂ ಸ್ವಾಭಿಪ್ರಾಯ ಕಾಪಾಡಲು ತೆರಳಿದವರು, ಶಾಂತಿ ಸಾಧಕರು, ಪ್ರಪಂಚದಲ್ಲಿನ ಸುಧಾರಕರಲ್ಲಿ ಪ್ರಮುಖರು ಡಾ। ಕಾಗಾವಾರವರು ಇತ್ತ ಬಂದಿರುವುದೂ ನನಗೆ ಸಂತೋಷಕರವಾಗಿದೆ. ಇವರು ಬಡತನವೆಂದರೇನೆಂದು ಆ ಜನ್ಮ ಅನುಭವಿಸಿದವರು, ಪ್ರತ್ಯಕ್ಷವಾಗಿ ಹೀನಜೀವನ ದಾರಿದ್ರ್ಯ ಪಾಪಕೃತ್ಯಗಳು ಮೊದಲಾದುವುಗಳ ಪರಿಚಯವುಳ್ಳವರು. ಇಷ್ಟನ್ನು ಅನುಭವಿಸಿಯೂ, ಗುಲಾಮ ಮನೋಧರ್ಮವನ್ನು ತ್ಯಜಿಸಿ, ಧ್ವಂಸಕಾರಿಗಳಾಗದೆ ನಿರ್ಮಾಣ ಶೀಲರಾಗಿ, ವಿಜ್ಞಾನದ ಸಂಪೂರ್ಣ ಪ್ರಯೋಜನ ಪಡೆಯಲು ನಿರ್ಧರಿಸಿ, ಸರಳ ಜೀವನದ ಪ್ರೋತ್ಸಾಹಕರಾಗಿರದೆ, ಜೀವನವೆಂಬುದು ಆನಂದಮಯವಾದ ಕಲೆ, ಕುಂಟ ಚೆಟುವಟಿಕೆಯುಳ್ಳುದು, ಸರಳ ಜೀವನವೆಂಬುದರಿಂದ ಮನುಷ್ಯನು ತನ್ನ ದೇಹದ ಅಗತ್ಯಗಳಿಗೆ ಗುಲಾಮನಾಗುವನು. ಯಂತ್ರಗಳನ್ನು ಧಿಕ್ಕರಿಸುವ ಬದಲಾಗಿ ಇತರರ ಸೇವೆಗಾಗಿ ಅದನ್ನು ವಿನಿಯೋಗಿಸಲು ಕಲಿತರೆ ಅಂತಹ ಅದ್ಭುತ ಸೃಷ್ಟಿಯೇ ಮತ್ತೊಂದಿಲ್ಲವೆಂದು ತಿಳಿಯಬಹುದು, ಎಂದವರು.

ಯಂತ್ರಗಳು ಪ್ರಪಂಚದ ಕಷ್ಟಮಯ ಕೆಲಸಗಳನ್ನು ಮಾಡುತ್ತಿರಲಿ, ಜಗ ಮನುಷ್ಯನಿಗೆ ಸುಖವಾಗಿ ಜೀವಿಸಲು ಅವಕಾಶ ದೊರೆವುದು.

"ಗ್ರಾಮೋದ್ಧಾರಕರು ಈ ಸೂತ್ರಗಳನ್ನು ಹೀಗೆ ಕೈಕೊಳ್ಳಬಹುದು" ಡಾ। ಕಾಗಾವಾರವರೇ ಕೆಲ ದೃಷ್ಟಾಂತಗಳನ್ನು ಕೊಟ್ಟಿರುವರು —

೧ ಎಲ್ಲ ಯುವಕರಿಗೆ ಇದೀ ದೇಶದಲ್ಲಿ ಕೃಷಿಯ ವಿಷಯ ಶಿಕ್ಷಣ ಸಿಗಬೇಕು

೨ ಗ್ರಾಮಗಳ ಸಾಮಾಜಿಕ ಜೀವನಕ್ಕೆ ಕೇಂದ್ರಗಳಾಗಿ ಗ್ರಾಮಕೂಟಗಳಿರಬೇಕು

೩ ತಾಯಿಂದಿರು ಹೊಲದ ಕೆಲಸಕ್ಕೆ ಹೋಗುವಾಗ, ಅವರ ಚಿಕ್ಕ ಕೂಸುಗಳಿಗಾಗಿ ಶಿಶುವಿಹಾರಗಳಿರಬೇಕು

೪ ಸಹಕಾರ ಲೇವಾದೇವಿ ಸಂಘಗಳ ವ್ಯಾಪ್ತಿಯು ಹೆಚ್ಚುವಂತಾಗಿ, ಗ್ರಾಮಸ್ಥರು ಯಂತ್ರ ಸಹಾಯಪಡೆವ ಅನುಕೂಲತೆ ಒದಗಿಸುವುದಾಗಬೇಕು. ಇದು ಹೇಗೆ?

"ಇವರು ಸಹಕಾರೀ ಸಂಘಗಳನ್ನು 'ಕೃತಿಯ ಮೂಲಕ ಭ್ರಾತೃಭಾವತ್ವಲ್ಲ' ಎಂದು ಕರೆವರು. ಜನರು ಎಂತಹರಿರಬೇಕು? ಯಾವ ಬಗೆಯ ಸಹಕಾರಿಗಳು?

ಜೀವದ ಬಾಳಿಕೆಗೆ—ಇನ್ಶೂರೆನ್ಸು ಸಹಕಾರಿಗಳು, ದುಡಿತಕ್ಕೆ ಉತ್ಪನ್ನಕಾರರ ಸಹಕಾರಿಗಳು; ವಿನಿಮಯಕ್ಕೆ—ವ್ಯಾಪಾರೀ ಸಹಕಾರಿಗಳು, ಬೆಳವಣಿಗೆಗೆ—ಸಾಲ ಕೊಡುವ ಸಹಕಾರಿಗಳು, ವೃತ್ತಿ ಚುನಾವಣೆಗೆ—ಪರಸ್ಪರ ಸಹಾಯಕ ಸಹಕಾರಿಗಳು, ಉದ್ದೇಶಕ್ಕೆ—ಗಿರಾಕಿ ಸಹಕಾರಿಗಳ.

ಪ್ರಪಂಚದ ಮುಂದೆ ಎರಡು ದಾರಿಗಳಿವೆ. ದ್ವೇಷದ ದಾರಿ, ಇದು ಕೊಮ್ಯುನಿಸ್ಟು, ಫೆಸಿಸ್ಟರುಗಳಿಗಿರಲಿ, ಇದ್ದುದನ್ನು ಧ್ವಂಸ ಮಾಡಿ ಒಂದು ವಂಶ ಅಥವಾ ಒಂದು ಸಾಮಾಜಿಕ ತರಗತಿಯನ್ನು ಮಾತ್ರ ಊರ್ಜಿತವಿಡುವುದು. ಮತ್ತೊಂದು, ಪ್ರೇಮದ ದಾರಿ, ದೇವರ ರಾಜ್ಯವು ನಿಮಗೆ ಬೇಕಾಗಿದೆಯಾದರೆ, ಅದನ್ನೆ ಹುಡುಕುತ್ತಿರಿ, ಉಳಿದೆಲ್ಲವು ತಾನಾಗಿ ಕೈಗೂಡಿ ಬರುವುದು.

ಇಂಗ್ಲೆಂಡಿನಲ್ಲಿ, ಮೇಲೆ ಹೇಳಿದ ಮೊದಲನೆ ದಾರಿಹಿಡಿದು, ಒಳಸುಗ್ಗಿ, ಮೊದಲನೆ ತತ್ವವನ್ನು ಬಿತ್ತಿ ಬರುವ ದಂಡುಗಳಲ್ಲಿ ಎದುರಿಸಲು, ಸ್ವಯಂಸೇವಕರನ್ನು ಕೂಡಿಸುತ್ತಿರುವರು. ಇಲ್ಲಿ ನಾವು ಅಂಥ ಸ್ವಯಂಸೇವಕರ ದಳವೊಂದನ್ನು ನಿರ್ಮಾಣ ಮಾಡಿ, ದಾರಿದ್ರ್ಯ ದುಃಖ, ತಂಟೆ ಸಮಾಜದ್ವೇಷ ಮೊದಲಾದುವನ್ನು ನಿರ್ಮೂಲಿಸಿ, ಸರ್ವರೂ ಪ್ರೇಮಮಯವಾದ ಭ್ರಾತೃಬಂಧನದಲ್ಲಿ ಬಾಳಬೆಳಸುವಾ

ಮಂತ್ರಿಮಂಡಲಗಳ ರಾಜೀನಾಮೆಗಳ ವಿಷಯ

(ನವಾಧಿಲ್ಲಿಯಿಂದ ವಾರ್ತೆ)

ಎಸೆಂಬ್ಲಿ ಅಧಿವೇಶನ ನಡೆಯುವಾಗಲಿಲ್ಲ ಈ ವಿಷಯವೇ ಬಹಳ ಪ್ರಸ್ತಾವವು ನಡೆಯುತ್ತಿರುವುದು. ಕಲ್ಕತ್ತದಲ್ಲಾದ ಸಂಭಾಷಣೆಯ ಕೂಟದಲ್ಲಿ ಸೇರಿದವರು ಧಾರಾಳವಮಂದಿ, ಬೋಸರು ಗಾಂಧಿಜಿಯವರೊಡನೆ ಸಂಧಾನ ಮಾಡಿ ಸಹಕಾರ ದುಡಿದುಕೊಳ್ಳಬೇಕೆಂದು ಬೋಧಿಸಿರುವರಂತೆ. ಅದರ ಪರಿಣಾಮವಾಗಿ ಈಗ ಬೋಸರು ವಾರ್ಧಾಕ್ಕೆ ತೆರಳಿರುವರು.

ಕೊಂಗ್ರೆಸ್ ಕಾರ್ಯಕಾರೀ ಮಂಡಲದಲ್ಲಿ ಗಾಂಧೀ ತತ್ವಾನುಯಾಯಿಗಳಾದ ಸದಸ್ಯರವಿಷಯ ಬೋಸರು ಬರೆದುದನ್ನೆಲ್ಲ ಬೋಸರೇ ಹಿಂತೆಗೆಯದಿರುವಲ್ಲಿ ಗಾಂಧಿಜಿಯ ಸಹಕಾರವು ಸಿಗುವಂತಿಲ್ಲ. ಬೋಸರು ಈ ರೀತಿ ನಡೆಯದಿರುವಲ್ಲಿ, ಗಾಂಧೀತತ್ವವುಳ್ಳವರು ಕಾರ್ಯಕಾರೀ ಮಂಡಲದಲ್ಲಿರರು, ಅವರ ಸಹಕಾರವೂ ಬೋಸರಿಗೆ ದೊರೆಯಲಾರದು.

ಕಲ್ಕತ್ತೆದಲ್ಲಿ ಎರಡು ಮಾತ್ರ ಮುಖ್ಯ ನಿರ್ಣಯಗಳಾದುವಂತೆ. ಫೆಡರೇಶನನ್ನು ತಿರಸ್ಕರಿಸುವುದೂ ಬ್ರಿಟಿಷ ಸರಕಾರಕ್ಕೆ ಆರುತಿಂಗಳ ನೋಟಿಸು ಕೊಡುವುದೂ ಒಂದು, ದೇಶೀಯ ರಾಜ್ಯಗಳ ವಿಷಯವಾಗಿ ಇನ್ನೊಂದು.

ಮೊದಲನೆ ವಿಷಯ, ಬಲಪಕ್ಷವು ಈ ಯೋಜನೆಯನ್ನು ಅನುಕೂಲವಾಗುವಂತೆ ಬದಲಾಯಿಸಿದರೆ ಫೆಡರೇಶನಿಗೆ ಒಪ್ಪುವಂತಿದೆಯಂತೆ. ಆದರೂ ಯೋಜನೆಯನ್ನು ಎದುರಿಸಲು ಎಲ್ಲರೊಡನೆ ಸಹಕರಿಸುವುದು ನಿಶ್ಚಯ. ಆದರೆ, ಆರುತಿಂಗಳ ನೋಟಿಸು ಮಾತ್ರ ಏಕೆ, ಬೇಕಾದಾಗ ನೋಟಿಸು ಕೊಡಬಹುದು, ನೇರವಾದ ಸತ್ಯಾಗ್ರಹ ಕ್ರಮವೂ ಇದೆಯಲ್ಲ ಎನ್ನುವರು.

ರಾಜ್ಯಗಳ ವಿಷಯ, ಕೊಂಗ್ರೆಸು ಈಗ ಅಭಿಪ್ರಾಯ ಬದಲಿಸಿದೆ. ರಾಜ್ಯಗಳ ವಿಮೋಚನೆಗೆ ಕೊಂಗ್ರೆಸು ಕೈಯಿಕ್ಕುವುದು. ಈ ಸಂದರ್ಭದಲ್ಲಿ ಸದ್ಯಸ್ಥಿತಿ ತಿಳಿದು, ಮುಂಬಾಯಿ ಮತ್ತು ಒರಿಸ್ಸಾ ಮಂತ್ರಿಮಂಡಲಗಳು ತಮ್ಮ ಹುದ್ದೆಗೆ ರಾಜೀನಾಮೆ ಕೊಡಬಹುದು.

ಇದರಿಂದ, ಎಲ್ಲ ಕೊಂಗ್ರೆಸು ಮೆಂಬರರೂ ಒಂದಾಗಿ ಕಾರ್ಯಸಾಧನೆ ಮಾಡಬಂದೀತು. ಕೊಂಗ್ರೆಸಿನ ಮೂಲಕ ಭಾರತಮುಕ್ತಿಗೆ ಕೊಂಗ್ರೆಸುಮಂತ್ರಿಗಳು ಎಷ್ಟು ಅನುಕೂಲರೆಂದೂ ಈ ಪರಿಯಲ್ಲಿ ತಿಳಿಸಲಾದೀತು. ಇದರಿಂದ ಮಹಾತ್ಮಾಜಿಯವರ ಅಧಿಪತ್ಯವು ಪುನಃ ಸ್ಥಾಪನೆಹೊಂದುವುದು.

ಸಂಬಳ ಕಡಿತ

ಕರಾವು ವರಿಷ್ಠ ಸಭೆಯಲ್ಲಿ ಮಂಜೂರು ಆಗಿದೆ.

ಒಂಮಾವರೆ ತಾಸು ತರ್ಕಿಸಿ, ಫೈನೆನ್ಸು ಮೆಂಬರರು ಬರ್ರೀ ಪ್ರೆರ್ಡ್. ನಿಮಿಷ ಮಾತ್ರ 'ಸರಕಾರದ ಅಭಿಪ್ರಾಯವನ್ನು ಸೂಚಿಸಲಾಗುವುದಿಲ್ಲ' ಎಂಬಷ್ಟೆ ತಿಳಿಸಿದ ಬಳಿಕ,—ವೋಟು ಎತ್ತುವ ಅಗತ್ಯವೇ ಇಲ್ಲದೆ, ಎಸೆಂಬ್ಲಿಯಲ್ಲಿ ಎಲ್ಲ ಸರಕಾರೀ ನೋಕರರ ರೂಪಾಯಿ ೨೦೦ಕ್ಕೆ ಮೇಲ್ಪಟ್ಟ ಕಲಬನ್ನು ಕತ್ತರಿಸುವ ಅಗತ್ಯವಿದೆ ಎಂಬ ಸೂಚನೆಯು ಮಂಜೂರಾಗಿದೆ. ಇದು ಬರುವ ಎಪ್ರಿಲಿನಿಂದ ಜ್ಯಾರಿಗೆ ಬರತಕ್ಕದೆಂದೂ ಆಯಿತು.

ದೇಶದ ಸಾಂಪತ್ತಿಕ ಸ್ಥಿತಿಗೂ ಸರಕಾರೀ ಉದ್ಯೋಗಗಳ ಸಂಬಳಕ್ಕೂ ಯಾವ ಸಂಬಂಧವೂ ಇಲ್ಲದೆ, ಸಂಬಳಗಳ ಕ್ರಮವೇ ದಾಮಾಶಾಯಿಕ್ಕೆ ವಿರೋಧದರಿಂದ, ಸಾಮಾಜಿಕ ಭೇದಗಳು ಅತ್ಯಧಿಕವಾಗಿವೆ ಎಂದೂ ಅತ್ಯುತ್ತಮಯ ಸರಕಾರದ ನೋಕರಿಗೇ ಸೇರುವಂತಾಗಿ ದೇಶಹಿತದ ಇತರ ಯಾವ ಕಾರ್ಯಗಳಲ್ಲಿ ಅನುಸರಿಸಲು ಹಿಂದೆಗೆವರೆಂದೂ, ಆದರೂ ಅತಿ ಜಾಣ ಹಿಂದೀಯರನ್ನು ಯೂರೋಪಿಯರ ಕೈಗಳಿಗೇ ಇಡುವರೆಂದೂ ಮೊದಲಾಗಿ ಶ್ರೀ ಸಾಮಿ ವೆಂಕಟಾಚಲಂ ಚೆಟ್ಟಿಯರರು ಸೂಚಿಸಿದರು. ಇವರ ಅಭಿಪ್ರಾಯದಲ್ಲಿ ರೂ. ೧೫೦ ಸಾಕಷ್ಟು ಸಂಬಳ ತಿಂದಿತ್ತು. ಶ್ರೀ ಲಕ್ಷ್ಮೀಕಾಂತ ಮೈತ್ರರು ರೂ ೨೦೦ಕ್ಕೆ ಮೇಲ್ಪಟ್ಟ ಸಂಬಳಗಳಲ್ಲಿ ಮಾತ್ರ ಕಡಿತವಿಕ್ಕಿದರೆ ಸಾಕೆಂದರು.

ಗ್ರಿಗ್ ಸಾಹೆಬರು ಊರಿಗೆ ಹಿಂದಿರಳುವ ಕಾರಣ, ಈಗಲಾದರೂ ದೇಶದ ಪ್ರತಿನಿಧಿಗಳ ಮಾತನ್ನು ಮನ್ನಿಸಿ ಒಂದೇ ಒಂದು ರಿಯಾಯಿತಿಯನ್ನಾದರೂ ತೋರಿಸುವಂತಾಗಲೆಂದೇ ಚೆಟ್ಟಿಯಾರರು ಸೂಚಿಸಿದರು.

ಸರಕಾರವು ಅಭಿಪ್ರಾಯ ಕೊಡುವುದಿಲ್ಲ ಎನ್ನುವುದರಿಂದ ಈ ಪ್ರಶ್ನೆಗೆ ಸರಕಾರವು ಗಮನಕೊಡುತ್ತಿಲ್ಲವೆಂದು ಸ್ಪಷ್ಟ ದೇಶೀಯರೂ ಈ ಸಂಬಳಗಳ ಮೋಹದಿಂದ ಬ್ರಿಟಿಷರೊಡನೆ ಸೇರಿ, ಅವನ್ನು ಇಳಿಸಲು ಒಪ್ಪುವುದಿಲ್ಲವೆನ್ನುವಷ್ಟು ವಿವೇಕ ಕಳೆದುಕೊಳ್ಳುವಂತಾಗಿದೆ. ಎಂದಾದರೂ ಸಂಬಳ ಇಳಿಸಿದಂದ ಕೂಡಲೆ ಕೆಲವು ನೂರು ಪೇದೆಗಳನ್ನೂ ಗುಮಾಸ್ತರನ್ನೂ ವಜಾಮಾಡಿ, ನಾಲ್ಕಾರು ಮೇಲಾಧಿಕಾರರ ಇನಾಮುಗಳನ್ನೇ ಹೆಚ್ಚಿಸುತ್ತಾರೆ ಏನು ವಿನೋದ! ಶಿಕ್ಷಿತರಿಗೆ ಇಲ್ಲಿ ಕೆಲಸವಿಲ್ಲ, ಅಲ್ಲಿ ಕೆಲವರಿಗೆ ಭಾರೀ ಹುದ್ದೆಗಳು! ಇತ್ಯಾದಿ ಟೀಕೆಗಳಾದುವು.

ನಾಹಾಸ ಪಾಶಾರವರ ಪತ್ರ

ತ್ರಿಪುರಿ ಕೊಂಗ್ರೆಸ್ ಅಧಿವೇಶನಕ್ಕೆ ಬರುವರು

ಶ್ರೀ। ಸುಭಾಷಚಂದ್ರ ಬೋಸರು, ನಾಳಿನ ಕೊಂಗ್ರೆಸ್ ಅಧಿವೇಶನಕ್ಕೆ ಇಜಿಪ್ತದ ರಾಷ್ಟ್ರೀಯ ಪಕ್ಷದ ನಹಾಸ ಪಾಶಾರವರನ್ನೂ ಇತರ ಪ್ರತಿನಿಧಿಗಳನ್ನೂ ಬರುವಂತೆ ಕೇಳಿಕೊಂಡಿದ್ದರು.

'ಮಾರ್ಚ ತಾ ೧೦ರಲ್ಲಾರಂಭವಾಗುವ ಈ ಅಧಿವೇಶನಕ್ಕೆ ಬರುವಂತೆ ಆಹ್ವಾನ ಪತ್ರ ತಲುಪಿದೆ. ವಾಫ್ದ ಸಭೆಯು ಕಳೆದ ಸಲ ಸೇರಿದಾಗ, ಆ ಪತ್ರಿಕೆಗಾಗಿ ನಿಮಗೆಲ್ಲ (ಕೊಂಗ್ರೆಸಿಗೆ) ಧನ್ಯವಾದ ಒಪ್ಪಿಸಿ, ಇಜಿಪ್ತದ ಮಹಾಜನರ ಪರವಾಗಿ ಸಹೋದರತೆ, ಐಕ್ಯಸಾಧನೆಗಳಲ್ಲಿ ನಾವು ನಿಮ್ಮೊಡನೆ ಇರುವೆವೆಂದು ತಿಳಿಸಲು ನನಗೆ ಅಧಿಕಾರ ಕೊಟ್ಟಿರುವರು. ಇಂಡಿಯಕ್ಕೆ ನಮ್ಮ ವಾಫ್ದದ ಪ್ರತಿನಿಧಿಗಳು ಹೋಗುವವರಿದ್ದಾರೆ. ಇಲ್ಲಿನ ರಾಜಕೀಯ ವಿಧ್ವಾನಗಳ ಒತ್ತಾಸೆಯಿಲ್ಲದಿರುವಲ್ಲಿ, ನಾನು ಈ ಪ್ರತಿನಿಧಿಗಳ ಮುಖಂಡನಾಗಿ ಅಲ್ಲಿಗೆ ಬಂದು ಇಜಿಪ್ತದ ಜನರು ಹಿಂದೀಯರಲ್ಲಿಟ್ಟಿರುವ ಪ್ರೀತಿಯನ್ನು ಪ್ರತ್ಯಕ್ಷ ಸಾರುವವನಿದ್ದೇನೆ' ಎಂದೀಗ ತಂತಿ ಮೂಲಕ ಉತ್ತರ ಕೊಟ್ಟಿರುವರು

ಬರುತ್ತದೆ! ಬರುತ್ತದೆ!!

ಮೋತಿಲಾಲ್, ರೋಸ್, ಮಾಯಾ ಬೆನರ್ಜಿ ಇವರು ಅಭಿನಯಿಸಿದ

ನಾವು ಮೂವರು

ಎಂಬ ಹಿಂದೀ ವಾಕ್ಚಲನ ಚಿತ್ರವು ಸದ್ಯದಲ್ಲೇ ಚಿತ್ರಾ ಟಾಕೀಸಿನಲ್ಲಿ ಪ್ರದರ್ಶಿಸಲಾಗುವುದು

ಅಂಗ್ಲೈ ನೋಟ!

(೭ನೇ ಪುಟದಿಂದ ಮುಂದುವರಿದುದು)

ಆಡಳಿತೆ ಕಡಿಮೆಮಾಡುವ ಮಾತಿಲ್ಲ, ಬದಲೂ ಇನ್ನೂ ಅಧಿಕ ಶಸ್ತ್ರ ಸನ್ನಾಹ ಮಾಡಬೇಕು

ದೇಶದಲ್ಲಿ ಸರಕಾರಕ್ಕೆ ಸಾಲ ಹೊರಿಸದ ಅನುಭವವು ಉಂಟಾಗಿದೆ. ಅಗ ಉಳಿದ ಹಾದಿಯೆಂದರೆ ಚಿನ್ನದ ಬೆಂಬಲವನ್ನು ಅಲಕ್ಷಿಸಿದ ಚಲಾವಣೆಯನ್ನು ಏರಿಸುವುದು. ಇದರ ಪರಿಣಾಮವೆಂದರೆ ಜರ್ಮನ ಮಾರ್ಕಿನ ಬೆಲೆಯು ವಿದೇಶೀಯ ವ್ಯಾಪಾರದ ದೃಷ್ಟಿಯಿಂದ ತಗ್ಗುವುದೇ ಸರಿ.

ಹಿಟ್ಲರನ ಹೊಸ ಬ್ಯಾಂಕು ಅಧಿಕಾರಿಯು ಎಂಥ ವಿಪ್ಲವ ತರುತ್ತಾನೋ ನೋಡಲಿದೆ

ಸಂಯುಕ್ತ ಅಮೇರಿಕ. ಈ ಎಲ್ಲ ರಾಜಕೀಯ ಅಶಾಂತಿಯ ದಿವಸಗಳಲ್ಲಿ ಈ ದೇಶವೊಂದು ಎದ್ದುಗೊಟ್ಟು ನಿಂತಂತಿದೆ. ರೂಸವೆಲ್ಟರು ತಮ್ಮ ಧೋರಣೆಯನ್ನು ಬೇಕಾದುದಕ್ಕಿಂತ ಗಟ್ಟಿಯಾಗಿ ಒದರುತ್ತಿರುವರು. ಇದು ಚುನಾವಣೆಯ 'ತಂತ'ವೆಂದು ಅವರ ಎದುರಾಳಿಗಳೂ ಸಾರಿದರೂ, ಸಂಯುಕ್ತ ಅಮೇರಿಕವು ನಿರಂಕುಶ ರಾಜ್ಯಗಳ ಕಡೆಗೆ ತಿರಸ್ಕಾರ ತಾಳಿದೆ ಎಂಬುದು ಸ್ಪಷ್ಟ. ಆದುದರಿಂದಲೇ ಪ್ರಬಲ ಭುಕ್ತಗಳಿಗೆ ಕಾಸು ಬಹಿರಂಗ ... ಕ್ಕೆ ಸಿದ್ಧನಿರುವೆನೆಂದಿರುವನು. ರೂಸವೆಲ್ಟರ ಧೋರಣೆಯಂತೆ ಇದರೆ ಈ ದೇಶವು ಪಶ್ಚಿಮದ ರಾಜಕೀಯ ... ಬೇರೆಯಾಗಿರದೆ ಸಹಕರಿಸುವುದೆಂದು ... ಆಗಾಯಿತು. ಅಂದೇ ... ವಿಲ್ಸನರ ... ಲಕ್ಷ್ಯ ... ಅಂತರ್ರಾಷ್ಟ್ರೀಯ ಸಭೆಯೂ ಜಗತ್ತಿನ ... ತಿಗೆ ... ಸಾಧನವಾಗ ... ತ

... ನ ಕಡೆಗೂ ... ಪೆಸಿಫಿಕ್ ಶಾಂತಸಾಗರದ ... ಗಳಲ್ಲಿ ಯುದ್ಧ ... ಹಡಗುಗಳಿಂದ ಜಪಾನ ... ದ್ದರೂ ಜಪಾನ ... ಯಿತು. ಇದಕ್ಕೆ ... ಗಳನ್ನು ... ಈ ... ದ್ವೀಪಗಳ ... ದೂರವಾಗಿದೆಯಾದರೂ ಜಪಾನ ... ಸಂಯುಕ್ತ ಅಮೇರಿಕದ ಮೇಲೆ ಉದ್ವಿಗ್ನವಾಗಿದೆ

ಜಪಾನಿನ ಧೋರಣೆಯನ್ನು ಬ್ರಿಟನು ಖಂಡಿಸುವುದು: ಪೂರ್ವ ದೇಶದ ... ದಲ್ಲಿ ಕಾಣುವ ಇದು ... ಈ ಮೊದಲು ಇಂಗ್ಲೆಂಡ್ ಫ್ರಾನ್ಸ್ ಮೊದಲಾದ ... ತಮಗೆ ಚೀನದಲ್ಲಿ ಇರುವ ವ್ಯಾಪಾರ ಸ್ವಾತಂತ್ರ್ಯವು ಜಪಾನ ಚೀನವನ್ನು ... ಕಡೆಸುತ್ತಿದೆ ... ವಿರೋಧಿಸುತ್ತಿತ್ತು. ಆದರೆ ಜಪಾನು ಮೊನ್ನೆಯ ತನಕ ತನಗೆ ಚೀನದಲ್ಲಿ, ಶಾಶ್ವತ ರಾಜ್ಯಸ್ಥಾಪನೆಯ ಬಯಕೆ ಇಲ್ಲವೆಂದು ಬ್ರಿಟನ ಮೊದಲಾದ ದೇಶಗಳು ಗಾಬರಿಯಾಗುವ ಕಾರಣವಿಲ್ಲವೆಂದೂ ಹೇಳುತ್ತ ಬಂದಿತು

ಆದರೆ ಇತ್ತೀಚೆಗೆ ಬ್ರಿಟನ ಜಪಾನಿಗೆ ಕಳುಹಿಸಿದ ರಾಯಸವು ಸಾಕಷ್ಟು ಸ್ಪಷ್ಟವೂ, ತೀವ್ರವೂ ಆಗಿದೆ, ಹಿಂದಿನ ಮಂತ್ರಿಗಳು ಈಗಿನ ಜಪಾನ ಮುಖ್ಯ ಸಚಿವ ಹಿರನೋರವರೂ ಆಡುತ್ತಿರುವ ಮಾತುಗಳಿಂದ–ತಮಗೆ ಹೀಗೆ ಅರ್ಥವಾಗುವುದೆಂದು ಬ್ರಿಟನು ವಿವರಿಸಿ ಒರೆದಿದೆ

"ಜಪಾನು, ಚೀನ, ಮಂಚುಕೋ ಸೇರಿ ಒಂದು ಆರ್ಥಿಕ ಬಲೆಯನ್ನು ಚೀನದ ಮೇಲೆ ಹೊರಿಸಿ, ಅದರ ಸಂಚಾಲನೆಯು ಜಪಾನು ಇರಿಸಿಕೊಳ್ಳುವುದು. ತಮ್ಮ ರಾಜಕೀಯ, ಆರ್ಥಿಕ, ಲಾಭಗಳಿಗೆ ಅನ್ಯದೇಶಗಳ ಪಡೆಗಳನ್ನು ತಡೆಯಾಗದಂತೆ ನೋಡುವುದು.

ಮಿತವ್ಯಯದ ಟಿನ್ನುಗಳು!

ದೊಡ ಸೈಜು (8 ಔನ್ಸು) ರೂ 1-4-0

(... ಬಾಟ್ಲಿಗಳಿಗಿಂತ ನಷ್ಟ ಇರುತ್ತದೆ)

ಸಣ್ಣ ಸೈಜು (4 ಔನ್ಸು) ಆಣೆ 11

ಹೆಚ್ಚು ಬೆಲೆ ಯಾಕೆ ಕೊಡುತ್ತೀರಿ?

ಎಂಡ್ರೂಸ್ ಮಿತವ್ಯಯದ ಟಿನ್ನುಗಳಲ್ಲಿ ಆರೋಗ್ಯವನ್ನುಂಟುಮಾಡುವ ... ಗುಣವೂ ... ರುಚಿಯೂ ಉತ್ತಮಗೊಳಿಸಲ್ಪಟ್ಟಿದೆ ಮತ್ತು 8 ಔನ್ಸಿನ ದೊಡ್ಡ ಸೈಜಿನ ಟಿನ್ನಿನಿಂದ 6 ಆಣೆಯ, 4 ಔನ್ಸಿನ ಸಣ್ಣ ಟಿನ್ನಿನಿಂದ 5 ಆಣೆಯ ... ಉಳಿತಾಯವಾಗುತ್ತದೆ. ... ಬಾಟ್ಲಿಯ ಕ್ರಯವು ರೂ 1-10-0 ಮತ್ತು ರೂ 1 ಆಗಿತ್ತು. ... ಸೂತ್ರದಿಂದ ತಯಾರಿಸಲ್ಪಟ್ಟ ಈ ಎಂಡ್ರೂಸ್ ಲವಣವು ... ಅಜೀರ್ಣದ ... ಜೀರ್ಣೇಂದ್ರಿಯಗಳನ್ನು ... ಎಲ್ಲಾ ಭಾಗಗಳನ್ನು ... ಸುತ್ತದೆ

ಈಗಲೇ ಸೇವಿಸಲು ಪ್ರಾರಂಭಿಸಿರಿ–ಪ್ರತಿದಿವಸ ಬೆಳಿಗ್ಗೆ ಒಂದು ಯಾ ಎರಡು ಚಮಚೆ ಎಂಡ್ರೂಸ್ ಲವಣವನ್ನು ಸೇವಿಸಿರಿ ಆರೋಗ್ಯವನ್ನು ಕಾಪಾಡುವುದಕ್ಕೆ ಎಂಡ್ರೂಸ್ ಲವಣವನ್ನು ಯಾವಾಗಲೂ ಸೇವಿಸಿರಿ



6549

ANDREWS
LIVER SALT
for Inner Cleanliness

ಚೀನವನ್ನು ... ಜಪಾನು ... ಕಮ್ಯುನಿಸ್ಟ ... ಸೇರಿಸುವುದು. ಚೀನದಲ್ಲಿ ಅಲ್ಲಲ್ಲಿ ಅಸಿದ್ಧವಾದ ... ಜಪಾನ ಸೈನ್ಯವನ್ನು ಇರಿಸುವುದು. ಅಂತರ್ಮಂಗೋಲಿಯವನ್ನು ಚೀನದಿಂದ ಬೇರ್ಪಡಿಸಿ, ಪ್ರತ್ಯೇಕವಾದ ಕಮ್ಯುನಿಸ್ಟ ವಿರೋಧ ರಾಜ್ಯವಾಗಿ ಇರಗೊಡಿಸುವುದು"

ಈ ಅರ್ಥದಂತಾದರೆ ತಮಗೂ ಚೀನಕ್ಕೂ ಇರುವ ವ್ಯಾಪಾರ ಮೊದಲಾದ ಆರ್ಥಿಕ ಸಂಬಂಧ ಸ್ವಾತಂತ್ರ್ಯಗಳಿಗೆ ಹಾನಿಯಿದೆ. ಈ ವಿಷಯದಲ್ಲಿ ಎಲ್ಲ ದೇಶಗಳೂ ಚೀನದೊಡನೆ ಸಮಾನತೆಯಿದೆ–ಎಂದು ಹಿಂದೆ ಒಂಭತ್ತು ರಾಷ್ಟ್ರಗಳೊಳಗಾದ ಸಂಧಿವಸಕ್ಕೆ ಭಂಗ ಸರಿ. ಈ ಸಂಧಾನವನ್ನು ಜಪಾನು ... ಚೀನವನ್ನು ಬಲವಂತಪಡಿಸಿ ಮುರಿಯುವುದು ತಪ್ಪು ... ಬೇಕಾದ ... ಆರ್ಥಿಕ ಧೋರಣೆಯು ... ಮಾತ್ರ ಬ್ರಿಟನು ಎನ್ನುವುದು. ... ದೇಶಗಳೊಳಗಾದ ಚೀನದ ಸಂಧಾನವು ಮಾರ್ಪಡಬೇಕಾದರೆ, ಅವೆಲ್ಲವುಗಳ ಒಪ್ಪಿಗೆಯೂ ಅವಶ್ಯ.

ಹೀಗೆಂದು ಸ್ಪಷ್ಟತೆಯಿಂದ ಬ್ರಿಟನು ಖಂಡಿಸಿದೆ. ಫ್ರಾನ್ಸು ಅದರಂತೆ ತನ್ನ ಪ್ರತಿಭಟನೆಯನ್ನು ತಿಳಿಸಿದೆ. ಜಪಾನಿನ ಉತ್ತರವು ನಿಮಂತ್ರಣವಾಗಿ ಬರುವ ಧೈರ್ಯವಿಲ್ಲ, ಇತ್ತ ಇಂಗ್ಲೆಂಡ್, ಸಂಯುಕ್ತ ಅಮೇರಿಕಗಳು ಚೀನ ಸರಕಾರಕ್ಕೆ ಸಾಲಕೊಡತೊಡಗಿವೆ. ಅಲ್ಲದೆ ಯುದ್ಧಸಾಮಾಗ್ರಿಗಳನ್ನು ಸಾಗಿಸಲು ಅನುಕೂಲವಾದ ಹೊಸ ಹಾದಿಯ ... ಬರ್ಮಾ, ಇಂಡೋ ಚೀನದ ... ನಡೆದಿದೆ.

(ಚೀನದಲ್ಲಿ ಅನ್ಯದೇಶಿಯರು ... ಬಂಡವಲು ಈ ಪ್ರಮಾಣದಲ್ಲಿದೆ

ಬ್ರಿಟನು	೬೫೨,೦೦೦,೦೦೦	ಪವನು.
ಜಪಾನು	೧೯೦,೦೦೦,೦೦೦	„
ಫ್ರಾನ್ಸು	೬೦,೦೦೦,೦೦೦	„
ಸಂ ಅಮೇರಿಕ	೫೦,೦೦೦,೦೦೦	„
ಇತರ ದೇಶ ...	೬೬೦,೦೦೦,೦೦೦	„

೬೫೨,೦೦೦,೦೦೦ ಪವನುಗಳನ್ನು ಅಲ್ಲಿ ಚೆಲ್ಲಿದ ಬ್ರಿಟನು, ಜಪಾನಿನ ದಾಸ್ಯಕ್ಕೆ ಚೀನವು ... ಹಿಂದೆ ಸರಿಯುವುದು ... ಅಲ್ಲದೆ ಹಾಂಗಕಾಂಗಿನಲ್ಲಿ ಅನ್ಯದೇಶೀಯರ ವ್ಯಾಪಾರಕ್ಕೆ ... ಎಲ್ಲ ಜಪಾನಿನ ಲಾಭಕ್ಕೆ ಹೋಗುವುದರಿಂದ–ಈ ಪೈಪೋಟಿಯಿಂದಲೂ ಪೂರ್ವ ದೇಶವು ... ಉದಾಸೀನ್ಯಕ್ಕೆ ಹಾದಿಯಾಗಿಲ್ಲ

ಶಾಲಿವಾಹನ ಶಕ ೧೮೬೧ನೆಯ ಬಹುಧಾನ್ಯ ಸಂವತ್ಸರದ ಮಾಘ ಬ| ೧೪ ಶನಿವಾರದಿಂದ ಫಾಲ್ಗುಣ ಶು| ೫ ಶುಕ್ರವಾರದ ವರೆಗಿನ ಪಂಚಾಂಗ. (೧೯೩೯ನೇಯ ಫೆಬ್ರವರಿ ತಿಂಗಳು

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕುಂಭ ಸಂಕ್ರಮ	ಶರಾ
18	ಶನಿ	೨೭	೧೬॥	ಶ್ರವಣಾ	೧೪	೬	
19	ರವಿ	೨೮	೨೧॥	ಧನಿಷ್ಠಾ	೨೦।	೭	ಫೆ. 19 ಅಮಾವಾಸ್ಯೆ
20	ಸೋ.	೨೯	೨೬	ಶತಭಿಷಾ	೨೫॥	೮	
21	ಕುಜ	೧	೨೮॥	ಪೂ ಭಾದ್ರ	೩೦॥	೯	
22	ಬುಧ	೨	೩೧॥	ಉ ಭಾದ್ರ	೩೪	೧೦	
23	ಗುರು	೩	೩೨॥	ರೇವತೀ	೩೬॥	೧೧	
24	ಶುಕ್ರ	೪	೩೨।	ಅಶ್ವಿನೀ	೩೭॥	೧೨	

THE PIE-MONEY BANK LTD.,

Maidan Road, MANGALORE

Undertakes all kinds of Banking Business. Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars—K R. GURU, *Managing Director*

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಚಿಕ್ಕ ಪ್ರಾಯದಲ್ಲಿ ಹೇರಳ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬೇಡವೆಂದು [illegible] ಈ ಚೂರ್ಣವನ್ನು [illegible] ಇದರ ಸೇವನೆಯಿಂದ ಮುಟ್ಟಾಗುವಿಕೆಯು ನಿಯಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ [illegible] ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. [illegible] ಔಷಧ [illegible] ಮುಖ್ಯ [illegible] ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ [illegible] ಬೆಲೆಯು [illegible]

ವಿಳಾಸ — ಸಂಜೀವಿನೀ ಔಷಧಾಲಯ, ಮು. ಪೋ. ವಿರಜಿ, (S M. C.

The Canara Industrial & Banking Syndicate Limited.

(Incorporated in British India)

(Estd: 1925)

HEAD OFFICE: "MUKUND NIVAS" UDIPI - INDIA

Member:

Reserve Bank of India, Bankers' Clearing House Bombay

Season Deposits Maturing Between 30th June and 15th July 1939 Are Accepted @ 3½% p. a

Banking Business of Every Description Transacted on Sound lines.

Particulars on application to any of our 35 Branches

THE

Canara Banking Corporation Udipi, Ltd.,

(INCORPORATED IN BRITISH INDIA)

THE REGISTER OF MEMBERS & TRANSFER BOOKS

of the CORPORATION will remain closed from 16—2—'39 to 5-3-'39 both days inclusive

(By Order)

V R KAMATH,
Manager

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ

ಮೇಹರೋಗ ಶರೀರದ ಬಲಹೀನತೆ ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು [illegible] ಪುದರಲ್ಲಿ ಅಮೋಘವಾದದ್ದು. [illegible] ಗಳನ್ನು [illegible] ಶರೀರ [illegible] 2 ವಾರಗಳ [illegible] 20 ತೊಲೆಗಳ ಡಬ್ಬಿಗೆ 1 4 0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ ಎ ಆಫ್ ಕೋ,
ಆಯುರ್ವೇದಿಕ ಸಮಾಜ ಪೆರಡೇಲು
P O Peridepi (ನೆಲ್ಲೂರು)

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲಿಂಟೈನ್

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು

ಡೊಂಗರೆ

ಇವರ

ಬಾಲಾಮೃತವು

ಮಕ್ಕಳ

ಹಳೆಯ [illegible] ವನ್ನು [illegible] ಇವುಗಳನ್ನು [illegible] ನಡಿಸಿ ಮಕ್ಕಳಿಗೆ ಪುಷ್ಟಿಯನ್ನು ಬಲವನ್ನೂ ಕೊಡುತ್ತದೆ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ ಅಸ್ಸಲ್ ಕೆಂಪು ಗುಡ್ಡೆ ಮುಡಿಗೆ	1—10—0	—
ದುಯಂ " "	1—8—0	1—3—0
ಅಸ್ಸಲ್ ಸುಗಿ "	1—10—0	—
ದುಯಂ " "	1—9 0	—
ಅಕ್ಕಿ ಅಸ್ಸಲ್ ಗಟ್ಟಿ "	4—6 0	4—8—0
ದುಯಂ	4—2 0	3 14 0
ಅಸ್ಸಲ್ ಸುಗಿ	4—4—0	—
ದುಯಂ " "	4—0—0	4—0—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	36—0 0	44 0—0
" ಸಿಪ್ಪೆ ಇದ್ದದು "	?8—0—0	47—0—0
ಕೊಬ್ಬರಿ ಆಫೀಸು ಖಂಡಿಗೆ	51 0 0	—
" ದಿಲ್‌ಪಸಂದ "	55—0 0	
ತೆಂಗಿನ ಎಣ್ಣೆ ಮಣಕ್ಕೆ	8—6—0	8—6—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	3—4—0	4—0—0
ಗೇರುಬೀಜ ಮುಡಿಗೆ	3—8—0	3—12—0
ಕಪ್ಪಿನ ಬೆಲ ಖಂಡಿಗೆ	35—0—0	40 0—0
ಒಳ್ಳೆಮೆಣಸು ಹಂಡ್ರೆಡ್‌ವೇಟಿಗೆ	15—12—0	16—0—0

ದೇಶೀಯ ರಾಜ್ಯಗಳು ★

★ ಕೊಂಗ್ರೆಸು ಇನ್ನು ಸುಮ್ಮನಿರಲಾದೀತೇ?

ರಾಜಕೋಟ ಜಯಪುರಗಳಲ್ಲಿ ನಡೆದ ಚಳವಳಿಗಳನ್ನು ಕುರಿತಾಗಿ ಯಾವ ಅಭಿಪ್ರಾಯಗಳು ಇರಬಹುದಾದರೂ, ಶ್ರೀ ಜಮ್ನಾಲಾಲರನ್ನೂ ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರನ್ನೂ ಅಲ್ಲಿನ ಸರಕಾರಗಳು ನಡೆಸಿದ ರೀತಿಯನ್ನು ತಿಳಿದು ಮಾತ್ರ, ಸುಮ್ಮನಿರಬಾರದ ಎಂದೇ ಸಮಸ್ತರೂ ಹೇಳಬಹುದಾಗಿದೆ. ಅಲ್ಲಿನ ಸರಕಾರಗಳ ವರ್ತನದಿಂದ ಜನರಲ್ಲಿ ಇನ್ನಷ್ಟು ಹೆಚ್ಚಿನ ದರ್ಪವುಂಟಾಗಿ, ಚಳವಳವು ತೀವ್ರವಾಗಿ ನಡೆಯಲೇ ಬೇಕಾಗುವಂತಿದೆ. ಸೇರೆಯಾಗಲಿ ಕಸ್ತೂರಿಬಾಯಿಯವರಾಗಲಿ [illegible] ದಲ್ಲಿದ್ದರೂ ಅವರನ್ನು ನಡೆಸುವ ಕ್ರಮವನ್ನು ದಹರಧಿರಲಾಗುತ್ತಿರಲಿಲ್ಲ. ಈಗ ಅವರ ವೃದ್ಧಾಪ್ಯದ ದೆಸೆಯಲ್ಲಿ ಹೀಗೆ ಸರಕಾರವು ದುಷ್ಟರೀತಿಯಿಂದ ಅವರನ್ನು ನಡೆಸುವುದನ್ನು ಯಾವ ರೀತಿಯಲ್ಲೂ ಕ್ಷಮಿಸಬಹುದಂತಿಲ್ಲ.

ಬ್ರಿಟಿಷ ಇಂಡಿಯಾದಲ್ಲಿ ರಾಜಕೀಯ ಕೈದಿಗಳಿಗೆ ವಿಶೇಷ ರಿಯಾಯಿತಿ ನಡೆವ ಪಕ್ಷ ಇದೆ ಎಂದು ನಿರ್ವಿವಾದವಾಗಿ ಒಪ್ಪಿಕೊಳ್ಳಬಹುದಾಗಿದೆ. ದೇಶೀಯ ರಾಜ್ಯಗಳು ಈ ರಿಯಾಯಿತಿಗಳನ್ನು ತೋರಿಸಬಾರದೆಂಬುದ ದುರ್ವ್ಯವಹಾರವಲ್ಲದೆ ಮತ್ತೇನ? ಈ ವ್ಯವಹಾರಗಳಿಗೆ ಅಲ್ಲಲ್ಲಿನ ರಾಜರುಗಳ [illegible] ದೆಂದು ಜನರು ನಂಬಿದರೆ [illegible] ಇಲ್ಲಿ ನೂರಾರು [illegible] ರಾಜ್ಯಗಳೊಳಗಣ ರೀತಿಯು ವರಿಷ್ಠ ಸರಕಾರಕ್ಕೆ ಸರಿಬೀಳದಿದ್ದಾಗ ಆ ವರಿಷ್ಠರೇ ಒಳ ಒತ್ತಾಯಪಡಿಸಿ ಅಲ್ಲಿಯವನ್ನು ಸಂಪಡಿಸಿದುದುಂಟು. ವರಿಷ್ಠ ಸರಕಾರದ [illegible] ಸರ ಸುದಿಯಂತೆ ಈ ರಾಜರು ನಡೆ[illegible]ದರಿಂದ, ರಾಜಕೋಟ ಜಯಪುರಗಳಲ್ಲಿ ಈ ಮಹಾಧಿಕಾರಿಗಳು ಕೈಹಾಕಿದರೆ [illegible] ನಾಗಲಾರದು ಮಾತ್ರವಲ್ಲ, [illegible] ಗಳಲ್ಲಿ ನಡೆದಂತೆ ನ್ಯಾಯ ಸಂಘಟಿ[illegible]

ವರಿಷ್ಠ ಸರಕಾರವು ಈ ರಾಜರುಗಳ ಕಡೆಗೆ ಮಾತ್ರವಲ್ಲದ ಪ್ರಜೆಗಳ ಕಡೆಗೆ ಕರ್ತವ್ಯಬದ್ಧರೆಂಬುದನ್ನು ವರಿಷ್ಠ [illegible] ಗಾಂಧಿಜೀ ಹೇಳುವಂತೆ ಒಪ್ಪಿಕೊಳ್ಳಲೇ ಬೇಕಾಗಿದೆ. ಇತ್ತೀಚೆಗ ಸಹ ಈ ಕರ್ತವ್ಯವನ್ನು ವರಿಷ್ಠ ಸರಕಾರವು ಪಾಲಿಸಿ [illegible] ಎಂದೂ ನಮಗೆ ಗೊತ್ತೇ ಇದೆ. ಜಯಪುರ ರಾಜಕೋಟಗಳಲ್ಲಿ ಹೀಗೆ ಕರ್ತವ್ಯ ಪಾಲಿಸಲು [illegible] ತ್ತುವುದಕ್ಕೆ ವರಿಷ್ಠ ಸರಕಾರದ ಕೈ ತಡೆಯುತಹ ವಿಶೇಷ ಕಾರಣಗಳಾವುವು? ಇಲ್ಲಿ [illegible] ಸೇಠರನ್ನೂ ಕಸ್ತೂರಿಬಾಯಿಯವರನ್ನೂ [illegible] ದೃಷ್ಟಿಯಿಂದ ಕಾಣುವ ಈ ಸಂದರ್ಭವು, ವರಿಷ್ಠ ಸರಕಾರದ ಕೈಯನ್ನು ಹೇಗೆ ತಡೆಯಬಹುದು.

ಈ ಪ್ರಶ್ನೆಯೀಗ ಮುಂದೊತ್ತಿದ ಆ ರಾಜ್ಯಗಳೇ ಮಾತ್ರವಲ್ಲದೆ, ದೂರವಿರುವ ರಾಜ್ಯಗಳಲ್ಲಿನ ಪ್ರಜೆಗಳೂ ಅಲ್ಲಿ ನಡೆವ ಅತ್ಯಾಚಾರ ತಿಳಿದು ಉದ್ರೇಕಗೊಂಡಿರುವರು. ವರಿಷ್ಠ ಸರಕಾರವು ಆ ರಾಜ್ಯಗಳಲ್ಲೆಲ್ಲ ನಡೆವುದಕ್ಕೆ ಅಲ್ಲಿನ ಸರಕಾರಗಳೇ ಬಾಧ್ಯವೆಂದು ಹೇಳುತ್ತಿದೆಯಾದರೆ, ಇನ್ನು ಶೀರ ಸಂದಿಗ್ಧ ಕಾಲವೊಂದು ಸಮೀಪಿಸುವುದಕ್ಕೆ ಹೆಚ್ಚಿನ ವಿಳಂಬವುಂಟಾಗಲಾರದು. ತಮ್ಮ ರಾಜ್ಯಗಳೊಳಗೆ ಯಾವ ಬಗೆಯ ಚಳವಳಕ್ಕೂ ಎಡಗೊಡದೆ ಅದನ್ನು ಮುಂಡಿಕೆಹಾಗಿ ತೀವ್ರವಾಗಿ ಕ್ರೂರವಾಗಿ ಅಣಗಿಸುವೆವೆಂದು ಕೆಲ ರಾಜರುಗಳು ಒಪ್ಪಂದಮಾಡಿಕೊಂಡಿರುವ ವಾರ್ತೆಯೊಂದು ದಟ್ಟವಾಗಿ ಕೇಳಬರುತ್ತಲಿದೆ. ಈಗ ವರಿಷ್ಠ ಸರಕಾರವು ಇಂತಹ ಕ್ರೂರಾಚರಣೆ ದಮನ ನೀತಿಯು ಯುಗವು ಕಳೆದಿದೆ ಎಂದು ಆ ರಾಜರುಗಳಿಗೆ ತಿಳಿಸಬೇಕಾಗಿದೆ. ನೆರೆಹೊರೆಯ ಪ್ರಾಂತ್ಯಗಳ ವಾತಾವರಣವು ರಾಜ್ಯಗಳಿಗೆ ಹಬ್ಬದಿರುವುದು ವಿಚಿತ್ರವೆನಿಸೀತು; ಪ್ರಾಂತ್ಯಗಳೊಳಗಣ ರಾಜನೀತಿಗೆ ರಾಜ್ಯಗಳೊಳಗಣ ರಾಜನೀತಿ ವಿರುದ್ಧವಾಗಿರುವುದನ್ನು ವರಿಷ್ಠ ಸರಕಾರವು ಕಂಡು ಸುಮ್ಮನಾದರೆ ಅದೂ ವಿಪರೀತವೆನಿಸೀತು.

ರಾಜ್ಯಗಳು ಪ್ರಜೆಗಳಿಗೆ ಅನುಕೂಲವಾಗಿ ವರ್ತಿಸಿದ ಎಷ್ಟೋ ಉದಾಹರಣೆಗಳು ಇರುವ ಕಾರಣ, ರಾಜರುಗಳೆಲ್ಲರೂ ಪ್ರಜಾ ವಿರೋಧಿಗಳು ಎಂದು [illegible] ವುದಿಲ್ಲ. ಸುಧಾರಣೆಯು ಸರಿಯಾಗಿ ನಾನಾ ರೀತಿ ಸೇಕಾಡುವ ರಾಜ್ಯಗಳ ವೃತ್ತಾಂತಗಳೂ ಪ್ರಕಟವಾಗುತ್ತಲಿವೆ. ಭಾರತವರ್ಷದಲ್ಲಾಗುತ್ತಿರುವ ಬದಲಾವಣೆಗಳಿಗೆ ಅನುಕೂಲವಾಗಿ, ಈ ರಾಜ್ಯಗಳಲ್ಲೂ ಬದಲಾವಣೆಗಳಾಗುತ್ತಲಿವೆ. ಇವು ಉತ್ತರ ದೇಶದ ಕೆಲವು ಚಿಕ್ಕ ರಾಜ್ಯಗಳ ಹೀಗಿನ್ನೂ ಅತಿಕೆಯೆಯನ್ನು ಪ್ರಾರಂಭಿಸಿರುವುದು ಅವುಗಳ ಹಿತಕ್ಕಾಗಿ.

ಸಮಸ್ತ ಜನರೂ ಈ ವಿಷಯದಲ್ಲಿ ಏಕಮನಸ್ಸಿನವರಾಗ ದೇಶದಲ್ಲಿ [illegible] ರಾಜಕೀಯ ಸಂಸ್ಥೆಯು ಕೊಂಗ್ರೆಸ ಈ [illegible] ದಲ್ಲಿ ಸುಮ್ಮನಿರಲುಗುವುದಿಲ್ಲ. ಜನರೆಲ್ಲ [illegible] ಲ್ಲಿ ವಿಶೇಷ ಭಕ್ತಿಯಿಂದ ನಡೆದುಕೊಳ್ಳುತ್ತಾರೆಯೋ ಅಂಥವರಾದ ಶ್ರೀ ಬಜಾಜ ಶ್ರೀ ಕಸ್ತೂರಿಬಾಯಿಯವರನ್ನು ಹೀಗೆ ದಂಡಿಸುತ್ತಿರಾದರೆ, ಕೊಂಗ್ರೆಸ ಹೇಗೆ ಮೌನವಾಗಿ ಕೈ ಕಟ್ಟಿಕೊಂಡ ಕೂತಿರಬಹುದು. ಪಂಡಿತ ಜವಾಹರಲಾಲರು — ಈ ರೀತಿ ರಾಜರುಗಳ ರೀತಿ ಒದಗಿದಾದರೆ ಈ ಚಳವಳ ಹೀಗೆ [illegible] ನಡೆವುದರಿಂದ ಬ್ರಿಟಿಷ ಪ್ರಾಂತ್ಯಗಳ ಪ್ರಜೆಗಳ ತಟಸ್ಥರಾಗಿ ತಳೆದಿರಲಾಗುವುದಿಲ್ಲ [illegible] ಇದೂ ಜವೇ [illegible] ಬ್ರಿಟಿಷ ಸಾಮ್ರಾಜ್ಯದ [illegible] ರಾಜಕೋಟಗಳಲ್ಲಿ ನಡೆವ ಅವ್ಯವಸ್ಥೆಯು [illegible] ವಾಗಿ ವರಿಷ್ಠ ಸರಕಾರವು ದೂರುಹಾಕಬೇಕಾಗಿದೆ. ಈ ಸರಕಾರದ [illegible] ಅನ್ಯಾಯ ವರ್ತನೆಗಳ [illegible] ನಾಡಿನಲ್ಲಿ [illegible] ಇವರ ವೆಸರಿ [illegible] ವರಿಷ್ಠ ಸರಕಾರವು [illegible] ಪುದ [illegible] ಈ ಸ್ವತಂತ್ರವಾವುದೂ [illegible] ವರಿಷ್ಠ ಸರಕಾರದ ಮುತ್ಸದಿಗಳು [illegible] ಈ ಭಾಗದಲ್ಲಿ ಇನ್ನೂ ದಾಕ್ಷಿಣ್ಯ ಹಿಡಿದ ಕೂತಿರಬಹುದೆ? ಇದುವರೆಗೆ ನಡೆದುದನ್ನು [illegible]

ಫ್ರಾಂಕೋವಿನ ದಿಗ್ವಿಜಯದ ಪರಿಣಾಮ ಏನಂತೆ?

ಸರಕಾರೀ ಪಕ್ಷವು ಕೊನೆಯು ಅಂಗುಲದ ವರೆಗೂ ಬಿಡದೆ ಕಾದಿದ ದೇಶದ ರಕ್ಷಣೆಗೆ ಫ್ರಾಂಕೋವನ್ನು ಹೋರಾಡ [illegible] ಸಾರುವುದನ್ನು, ಫ್ರಾಂಕೋವು ಸಂ[illegible]ದಿ ಸೈನ್ಯದ ಸಹಾಯದಿಂದ ರಾಜ್ಯವನ್ನು ಗೆದ್ದುದು ಮಹತ್ವದ್ದೇನೂ ಅಲ್ಲ. ಆದಕ್ಕಿಂತಲೂ [illegible] ಅಂಶವನ್ನು ತಿಳುವುದ ಕಡು ಕಠಿಣವಾಗಿದೆ ಎಂದೇ ಹೇಳ[illegible] ಈ ರಾಜ್ಯಭಾರಕ್ಕೆ ಮೊದಲು ಸಮಸ್ತ [illegible] ಆದಾದ ಬಳಿಕವೇ ಪಟ್ಟಿ[illegible] ಮದ್ರಿದ್ [illegible] ತ್ಯಗಳನ್ನು [illegible] ಗುವನೆಸು ತ್ತಾರೆ.

ಸರಕಾರೀ ಪಕ್ಷದ [illegible]

[illegible]

ಅದನ್ನು ಮನಸಾಕಕ್ಷೇಳುವವು. ನಾವು ಯಾರನ್ನೂ ಪ್ರಚೋದಿಸಲಿಕ್ಕಿಲ್ಲವುದಿಲ್ಲ. ನಮ್ಮ ಯಥಾರ್ಥವಾದ ಧ್ಯೇಯವೇನೆಂದು ಮದ್ರಿದ್ ವಲೆನ್ಸಿಯಾಗಳಲ್ಲಿ ಜನರು ತಿಳಿದುಕೊಂಡರೆ, ಅಷ್ಟೇ ಸಾಕು. ಅವರ ತಿಳಿವಳಿಕೆಯು ಮೇಲೆ ನಮ್ಮ [illegible] ಕಾರ್ಯಕ್ರಮವು ಆಧಾರಿಸಿಕೊಂಡಿದೆ ಎಂದ ಫ್ರಾಂಕೋ ಪಕ್ಷದವರ ಮಾತಿದೆ. ಸ್ಪೇನ್ ಸರಕಾರವು ಮದ್ರಿದಿಗೆ ಬಂದುದು ಚೆನ್ನಾಗಿದೆ [illegible] ಜನರೆನ್ನುತ್ತಾರೆ.

ಫ್ರಾನ್ಸಿನಲ್ಲಿ ಈಗ ಕೆಟಲೋನಿಯದ [illegible] ಜನರು ಸೇರಿ, ಅಶ್ರಯಪಡೆಯುತ್ತಿರುವರು.

ಮೆಕ್ಸಿಕೊದಲ್ಲಿ ಜನರ ಶಾಂತವಾಗಿದ್ದಾರೆ. ಯುದ್ಧದ ಭಯ ಹಿಡಿದಿಲ್ಲ.

[illegible]

ಜಾಗ್ರತೆ! ಜಾಗ್ರತೆ

ದೇಶ ವಿದೇಶಗಳಲ್ಲಿ ಪ್ರಖ್ಯಾತವಾದ ನಮ್ಮ ಮಾಲುಗಳು ವಿಶ್ವಾಸ ಶಂಸನೀಯವಾಗಿ ದಿನೇ ದಿನೇ ಗಿರಾಕಿಗಳು ಹೆಚ್ಚುತ್ತಿರುವದನ್ನು ಕಂಡು, ಈ ಹೆಸರಿನಲ್ಲಿ ಬೇರೆ ನಕಲಿ ಮಾಲುಗಳುಂಟಾಗತೊಡಗಿರುವದರಿಂದ ನಮ್ಮ ಗಿರಾಕಿಗಳು ಕೆಳಗಿನ ಅಡ್ರೆಸ್ಸನ್ನು ನೋಡಿ ತೆಗೆದುಕೊಳ್ಳಿರಿ

ನಕಲಿ ಮಾಲಿಗೆ ಮೋಸಹೋಗಬೇಡಿರಿ!

DRAKSHAMRUTHA

ದ್ರಾಕ್ಷಾಮೃತ

ಪಂಡಿತ ಜವಾಹಿರಲಾಲ ನೆಹರೂ ಬಂದಾಗ ಹುಬ್ಬಳ್ಳಿ ವಸ್ತುಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ ಸಾವಿರಾರು ಜನರಿಂದ ಪ್ರಶಂಸಲ್ಪಟ್ಟ ಬಂಗಾರದ ಮೆಡಲ್ ಮತ್ತು ಅನೇಕ ಸರ್ಟಿಫಿಕೇಟುಗಳು ದೊರೆತಂಥ

[illegible] ವರ್ಷದ ಅನುಭವದಿಂದ, ತಾಜಾ ಮತ್ತು [illegible] ಯಂತ್ರಗಳ ಮೂಲಕ ತಯಾರಾಗುವ

ಶಕ್ತಿಯ ಮೇಲೆ ಮೊದಲನೇ ತರಹ ಟಾನಿಕ್.

ಇದರ ಸೇವನೆಯಿಂದ ರಕ್ತ ಶುದ್ಧಿಯಾಗುವದು, ಕೌಟ ಸಾಧನವಾಗಿ [illegible] ಕೈ, ಕಾಲು, ಉರಿಯೋಣ ನೋವಬಾವ ಉಷ ಮತ್ತು [illegible] ದೋಷದಿಂದಾದ ಸರ್ವರೋಗ [illegible] ಸ್ತ್ರೀಪುರುಷರಿಗೆ ಅತಿ ಉಪಯುಕ್ತವಾಗಿದೆ

ಕ್ರಯ ೧ ಬಾಟ್ಲಿ ರೂ. ೧।

ಮ್ಯಾನೇಜರ್: ದ್ರಾಕ್ಷಾಮೃತ ಡಿಪೋ, ಪೋಸ್ಟ—[illegible], ಜಿಲ್ಲಾ ಬೆಳಗಾವಿ

ಸ್ಟಾಕಿಸ್ಟರು: ಮಂಗಳೂರು—ಜನತಾ ಮೆಡಿಕಲ್ ಸಪ್ಲಾಯರ್ಸ್, [illegible] ಶೆಣೈ ಮತ್ತು ಸ್ಕೂಲ್ ಬುಕ್ ಕೊ. ಬಂಟವಾಳ—ಎ. ಆರ್. ಪ್ರಭು. ಉಡುಪಿ—[illegible] ಭಟ್ಟ [illegible] ಫಾರ್ಮಸಿ. ಪುತ್ತೂರು—ಶ್ರೀನಿವಾಸ ಪೈ. ಕಾರ್ಕಳ—ವಿ ವಿ ಶೆಣೈ. [illegible] ಕೆ. ರಾಮನಾಯಕ ಮತ್ತು ಭಕ್ತ ಬ್ರದರ್ಸ.

ಭಾರತೀಯರ ಮೇಲೆ

ಆಳರಸರು ಬೀಸಿದ ಭಾರತೀಯ ಸಂಘಶಾಸನದ ಬಲೆ

ಇದನ್ನು ಕಡಿದು ಹಾಕಬೇಕೆಂದು ರಾಷ್ಟ್ರೀಯ ಮಹಾಸಭೆಯು ಭಗೀರಥ ಪ್ರಯತ್ನಗಳನ್ನು ಮಾಡುತ್ತದೆ. ಪ್ರಾಂತೀಯ ಸರಕಾರಗಳು ಬ್ರಿಟಿಷ ಸರಕಾರವನ್ನು ಎಚ್ಚರಿಸಿವೆ. ವಿರೋಧವು ನಾಲ್ಕು ದಿಕ್ಕುಗಳಿಂದ ಪ್ರತಿಧ್ವನಿಸುತ್ತದೆ.

ವಿರೋಧವು ನಾಲ್ಕು ದಿಕ್ಕುಗಳಿಂದ ಪ್ರತಿಧ್ವನಿಸುತ್ತದೆ.

ಭಾರತದ ರಾಜಕೀಯ ಮೋಕ್ಷವು ಸಂಘಶಾಸನ ಅಥವಾ ಫೆಡರೇಶನ ಕ್ರಮವನ್ನು ಅನುಸರಿಸುವುದರಲ್ಲಿ ಇದೆ ಎಂದು ಮೊತ್ತಮೊದಲು ಸರ್ ತೇಜಬಹದ್ದೂರ ಸಪ್ರುರವರ ದಿವ್ಯಚಿತ್ತಕ್ಕೆ ತೋರಿತು. ಸಂಘಶಾಸನ ಎಂದರೆ ಬ್ರಿಟಿಷ ಹಿಂದೂಸ್ಥಾನದ ಪ್ರಾಂತ್ಯಗಳ ಮತ್ತು ದೇಶೀ ಸಂಸ್ಥಾನಗಳ ಪ್ರತಿನಿಧಿಗಳಿಂದ ಆಗುವ ಮಿಶ್ರಿತ ಶಾಸನ ವ್ಯವಸ್ಥೆ ಆಗಿದೆ. ಆದರೆ ಯಾರು ಭಾರತಕ್ಕೆ ಸಂಘಶಾಸನ ಕ್ರಮವೇ ಹಿತಕಾರಿಯಾಗಿದೆ ಎಂದು ಮೊದಲು ಹೇಳಿದರೋ, ಆ ತೇಜಬಹದ್ದೂರ ಸಪ್ರುರವರೇ ಮತ್ತೆ ಭಾರತೀಯರಿಗೆ ಬ್ರಿಟಿಷರು ದಾನಮಾಡಿ ಕೊಟ್ಟಿರುವ ಆ ಸಂಘಶಾಸನವನ್ನು ಕಠಿಣವಾಗಿ [illegible] ವಿರೋಧಿಸಿದ್ದಾರೆ. ಅವರು ಮಾತ್ರ ಈ ಶಾಸನವನ್ನು ವಿರೋಧಿಸಿರುವರೆಂದಲ್ಲ. ಹಿಂದೂದೇಶದ ಪ್ರತಿಯೊಂದು ಪ್ರಾತಿನಿಧಿಕ ಸಂಸ್ಥೆಯೂ ಅದನ್ನು ವಿರೋಧಿಸಿರುವುದು. ಈಗ ಸಂಘಶಾಸನವನ್ನು ಪುರಸ್ಕರಿಸುವ ಒಬ್ಬನೇ ಒಬ್ಬ ಭಾರತೀಯ ಮುಖಂಡ ಅಥವಾ ಸಾರ್ವಜನಿಕ ಸಂಸ್ಥೆಯು ಇರುವದಿಲ್ಲ. ನಮ್ಮ ರಾಷ್ಟ್ರೀಯ ಮಹಾಸಭೆಯಂತೂ ಈ ಸಂಘಶಾಸನವನ್ನು ಮುರಿದು ಹಾಕಲಿಕ್ಕೆ ಇನ್ನೊಂದು ಕಾಯದೆಭಂಗ ಆಂದೋಲನವನ್ನು ಹೂಡಲಿಕ್ಕೂ ಸಿದ್ಧವಾಗಿದೆ.

ಕೊಟ್ಟುದನ್ನು ಬೇಡವೆನ್ನುವದುಂಟೆ?

ಈ ಕಾಲದಲ್ಲಿ ದಾನಧರ್ಮ ಮಾಡುವವರು ಕಡಿಮೆ. ಬ್ರಿಟಿಷರು ನಾವು ಕೇಳಿದ ಸಂಘಶಾಸನವನ್ನು ನಮ್ಮ ಮೇಲೆ ಅನುಗ್ರಹವಿಟ್ಟು ನಮಗೆ ಕೊಟ್ಟಿದ್ದಾರೆ. ಅವರು ಉದಾರಭಾವದಿಂದ ಕೊಟ್ಟುದನ್ನು ನಾವು ಬೇಡವೆಂದು ತಿರಸ್ಕರಿಸುವದು ಮೂರ್ಖತನವಲ್ಲವೆ? ಅಲ್ಲ. ಸಂಘಶಾಸನವು—ಬ್ರಿಟಿಷರ ನಮಗೆ ಮಾಡಿದ ದಾನವಲ್ಲ. ಅದು ನಮ್ಮನ್ನು ಸದಾಕಾಲ ಪರತಂತ್ರರನ್ನಾಗಿ ಇಡಲು ನಮ್ಮ ಮೇಲೆ ಬೀಸಿದ ಒಂದು ಬಲೆ. ಒಮ್ಮೆ ಆದರೊಳಗೆ ನಾವು ಸಿಕ್ಕಬಿದ್ದೆವೆಂದರೆ ಮತ್ತೆ ಅದರಿಂದ ಪಾರಾಗುವುದು ಅಸಾಧ್ಯವಲ್ಲದಿದ್ದರೂ ಬಹಳ ಕಠಿಣವೆನ್ನಿಸುವುದು. ಆದ್ದರಿಂದ ಅಂಥ ಬಲೆಯಲ್ಲಿ ಬೀಳದಂತೆ ಎಚ್ಚರಿಕೆಯಾಗಿರಬೇಕಾದ್ದು ನಮ್ಮ ಕರ್ತವ್ಯ.

ಬ್ರಿಟಿಷರೊಡನೆ ದಾನವನ್ನು ಕೇಳಲಿಲ್ಲ

ಕೊಟ್ಟುದನ್ನು ಬೇಡವೆನ್ನುವದು ಮೂರ್ಖತನವಾಗಲಿಕ್ಕೆ ನಾವು ಬ್ರಿಟಿಷರಿಂದ ದಾನವನ್ನು ಕೇಳಿ ಮತ್ತೆ ಅವರು ಕೊಟ್ಟುದನ್ನು ಬೇಡವೆಂದು ತಿರಸ್ಕರಿಸಲಿಲ್ಲ. ನಾವು ಬ್ರಿಟಿಷರಿಂದ ನಮ್ಮ ಜನ್ಮಸಿದ್ಧ ಸ್ವಾತಂತ್ರ್ಯ ಹಕ್ಕು ಅಧಿಕಾರಗಳನ್ನು ಕೇಳಿದ್ದೇವೆ. ಅವನ್ನು ಅವರು ಕೊಡದಿದ್ದರೆ ನಾವು ಹೇಗಾದರೂ ಪಡೆಯುವೆವು. ಇದರಲ್ಲಿ ದಯೆದಾಕ್ಷಿಣ್ಯದ ಪ್ರಶ್ನೆ ಇರುವುದಿಲ್ಲ. ನಮಗೆ ಸ್ವಯಂ ಸರಕಾರದ ಅಧಿಕಾರವು ಬೇಕು. ನಮಗೆ ಯಾವ ಬಗೆಯ ಸಂಘಶಾಸನವು ಬೇಕೆಂಬುದನ್ನು ತೀರ್ಮಾನಿಸುವ ಹಕ್ಕು ನಮ್ಮದು. ಈಗ ಬ್ರಿಟಿಷರು ನಮಗೆ ದಯಪಾಲಿಸುತ್ತ ಮಾಡಿರುವ ಸಂಘಶಾಸನವಲ್ಲ. ಅದನ್ನು ಅವರು ಕೇವಲ ತಮ್ಮ ಸ್ವಾರ್ಥ ಸಾಧನೆಯ ಒಂದು ಉಪಾಯವಾಗಿ ನಮಗೆ ಕೊಟ್ಟಿದ್ದಾರೆ. ಅವರ ಬಿಡ್ಡಿದ ಉರುಳುಗಳಿಗೆ ನಾವು ಹೇಗೆ ಬೇಕೆಂದೇ ತಲೆಕೊಡಬಹುದು?

ಆಳರಸರ ಕುಟಿಲೋಪಾಯ

ನಮಗೆ ಸಂಘಶಾಸನವು ಬರಬೇಕೆಂದರೆಯೇ ನಮ್ಮ ಎರಡು ಭುಜಗಳಂತಿದ್ದ ಏಡನ ಮತ್ತು ಬರ್ಮಾಗಳನ್ನು ನಮ್ಮ ದೇಶದಿಂದ ಪ್ರತ್ಯೇಕ ಮಾಡಿರುವರು. ಮೊದಲು ಅವು ಒಂದೇ ಭಾರತ ಸರಕಾರದ ಶಾಸನ ಸೂತ್ರದಿಂದ ಕಟ್ಟಲ್ಪಟ್ಟಿದ್ದುವು. ಅವುಗಳನ್ನು ಕಳಕೊಂಡು ಭಾರತವು ಕಂಗಾಲಾಗಿದೆ. ಭುಜಗಳನ್ನು ಕಳಕೊಂಡ ಶರೀರದಲ್ಲಿ ಬಲವೆಷ್ಟು ಉಳಿಯಬಹುದು? ಭಾರತವನ್ನು ಸದಾಕಾಲ ಅತಂತ್ರ ಪರತಂತ್ರ ಮತ್ತು ಕೈಲಾಗದ ತಬ್ಬಲಿಯನ್ನಾಗಿರಬೇಕೆಂಬ ದುರ್ಭಾವನೆಯಿಂದ ಪ್ರೇರಿತರಾಗಿಯೇ ಬ್ರಿಟಿಷರು ಈ ಒಳಸಂಚನ್ನು ಮಾಡಿದ್ದಾರೆ.

ಸಂಘಶಾಸನವಲ್ಲ—ಖಿಚಡಿ ಶಾಸನ.

ಸಂಘಕ್ಕೆ ಸೇರುವಂಥ ಪ್ರತಿನಿಧಿಗಳು ಸಮಾನ ಹಕ್ಕು ಅಧಿಕಾರ ಸ್ಥಾನಮಾನವುಳ್ಳವರಾಗಿರಬೇಕು. ಆದರೆ ಭಾರತೀಯ ಸಂಘಶಾಸನದಲ್ಲಿ ಸೇರುವಂಥ ಪ್ರತಿನಿಧಿಗಳು ಹಾಗೆ ಇರುವುದಿಲ್ಲ. ಒಂದು ಕಡೆ ಸ್ವೇಚ್ಛಾಚಾರಿಗಳೂ ನಿರಂಕುಶರೂ ಆದ ರಾಜ ಮಹಾರಾಜರು, ಜಮೀನುದಾರರ ಮತ್ತು ನೌಕರಶಾಹಿಯ ಪ್ರತಿನಿಧಿಗಳು, ಇನ್ನೊಂದ ಕಡೆ ಪ್ರಾಂತೀಯ ಸ್ವಾತಂತ್ರ್ಯವನ್ನು ಪಡೆದಿರುವ ಬ್ರಿಟಿಷ ಹಿಂದೂಸ್ಥಾನದ ಪ್ರಾಂತ್ಯಗಳ ಪ್ರಜೆಗಳ ಜವಾಬುದಾರರಾದ ಪ್ರಜಾಪ್ರತಿನಿಧಿಗಳು. ಕೂಡಿ ಈ ಸಂಘಶಾಸನವಾಗುತ್ತದೆ. ಈ ಸಂಘಶಾಸನದ ಸರಕಾರದಲ್ಲಿ ನಾವು ಕರೆದು ಹೊಂದಿದ ಪ್ರತಿನಿಧಿಗಳು ಇರುವರಲ್ಲವಾದರೂ ಅವರ ಒದಲಿಗೆ ಆಳರಸರ ಸ್ವೇಚ್ಛೆಗೆ ತಾನಾಗಿ [illegible] ಒಲ್ಲ ರಾಜ ಮಹಾರಾಜರ [illegible] ಪ್ರತಿನಿಧಿಗಳಿದ್ದಾರೆ. ಇವರ ಸಂಖ್ಯೆ [illegible] ನ್ಯಾಯವಿಧಾಯಕ ಸಭೆಗಳಲ್ಲಿ [illegible] ವರಿಷ್ಠ ನ್ಯಾಯವಿಧಾಯಕ ಸಭೆಗಳಲ್ಲಿ [illegible] ದೇಶೀ ಸಂಸ್ಥಾನಗಳಲ್ಲಿ ಇರುವ ಜನಸಂಖ್ಯೆ ಸೇಕಡಾ [illegible] ದೇಶೀ ರಾಜರಿಗೆ ದೊರೆತ ಪ್ರಾತಿನಿಧ್ಯವು ಸೇಕಡಾ [illegible] [illegible] ಪ್ರತಿನಿಧಿಗಳು [illegible] ದೇಶೀ ಸಂಸ್ಥಾನಗಳ ಪ್ರಜೆಗಳಿಗೆ [illegible] [illegible] ತಲೆ [illegible] ಸಂಘಶಾಸನವು [illegible] ವಿಚಾರ [illegible] ವುದು.

ಸಂಘಶಾಸನದಲ್ಲಿ ಪ್ರಜಾಧಿಕಾರ

ಈ ಸಂಘಶಾಸನದಲ್ಲಿ ಪ್ರಜಾಪ್ರತಿನಿಧಿಗಳಿಗಿರುವ ಅಧಿಕಾರವು [illegible] ಪ್ರಜಾಪ್ರತಿನಿಧಿಗಳಿಗೆ [illegible] ರದ ಬೊಕ್ಕಸದ ಮೇಲೆ ಪೂರ್ಣಾಧಿಕಾರವಿರುವುದಿಲ್ಲ. ಸೈನ್ಯವಿಭಾಗ, ವಿದೇಶ ವ್ಯವಹಾರ ಖಾತೆಯ ಮೇಲೂ ಅವರಿಗೆ ಅಧಿಕಾರವಿರುವುದಿಲ್ಲ. ಶಾಸನದಲ್ಲಿ ಬರೆದಷ್ಟು ಕೆಲವು ವಿಂಗಡಿಸಿಟ್ಟ ಖಾತೆಗಳನ್ನು ಮಾತ್ರ ಅವರು ತಮ್ಮ ಅಧಿಕಾರಕ್ಕೆ ತೆಗೆದುಕೊಳ್ಳುವರು. ಮಿಕ್ಕ ಎಲ್ಲ ವಿಚಾರಗಳಲ್ಲಿ ವಾಯ್ಸರಾಯರೇ ಸರ್ವತಂತ್ರ ಸ್ವತಂತ್ರನಾಗಿರುತ್ತಾನೆ. ವಾಯ್ಸರಾಯರ ಖರ್ಚು, ಸೇನೆಯ ಖರ್ಚು ಮೊದಲಾದುವನ್ನು ಹೆಚ್ಚುಕಡಿಮೆ ಮಾಡುವ ಅಧಿಕಾರವು ಪ್ರಜಾಪ್ರತಿನಿಧಿಗಳಿಗಿಲ್ಲ. ಅವೆಲ್ಲ ವಾಯ್ಸರಾಯರ ಮನಸ್ಸಿನಂತೆಯೇ ನಡೆಯಬೇಕು. ವಾಯ್ಸರಾಯರ ಖರ್ಚು ವರ್ಷಕ್ಕೆ [illegible] ಲಕ್ಷ ರೂಪಾಯಿ ಆಗುತ್ತದೆ. ಇವರಲ್ಲಿ ಅವನ ವೇತನ [illegible] ಲಕ್ಷ, ನೌಕರಿ [illegible], ಪತ್ನಿಯ ಖರ್ಚು [illegible] ಲಕ್ಷ, ಸತ್ಕಾರಕೂಟಗಳಿಗೆ [illegible] ಪ್ರಯಾಣ ಭತ್ತೆ [illegible] ಟಪ್ಪಾಲು ತಂತಿ [illegible] ಲಕ್ಷ, ಗುಪ್ತಖರ್ಚು [illegible] ಮೋಟರ ಖರ್ಚು [illegible] ಪ್ರೈವೇಟ ಸೆಕ್ರೆಟರಿ [illegible] ಮಿಲಿಟರಿ ಸೆಕ್ರೆಟರಿಗೆ [illegible] ಆಗುತ್ತದೆ. ಅಂಗರಕ್ಷಕ [illegible] ಪ್ರತ್ಯೇಕ ಇದೆ. [illegible] ಸೇನೆಯ ಮೇಲಿನ ಖರ್ಚು [illegible] ಕೋಟಿ ರೂಪಾಯಿ [illegible] ಲಿನ ಬಡ್ಡಿ [illegible] ಕೋಟಿ [illegible] ಅಧಿಕಾರವಿರುವುದಿಲ್ಲ. [illegible] ಸೈನ್ಯಕ್ಕೆ [illegible] ಇದರ ಒಂದು [illegible] ಲಕ್ಷ ಮತ್ತು [illegible] ಲಕ್ಷ ಖರ್ಚಾಗುವುದು [illegible] ಸಂಘಶಾಸನ [illegible] ಫಾನಗಳಿಂದ ಇರುವುದು.

ಕಾಂಗ್ರೆಸು ಹೋರಾಡಲಿಕ್ಕೆ ಸಿದ್ಧವಾಗಿದೆ

[illegible] ಸಂಘಶಾಸನವನ್ನು ಮುಣ್ಣುಪಾಲು ಮಾಡಬೇಕೆಂದು ಅಪೂರ್ವ ಸನ್ನಾಹಗಳನ್ನು ಸಿದ್ಧಗೊಳಿಸುತ್ತ ಇದೆ. ಈ ವರ್ಷದ ಕಾಂಗ್ರೆಸ ಅಧ್ಯಕ್ಷರಾದ ಶ್ರೀ. ಸುಭಾಷಚಂದ್ರಬೋಸರು ಬರುವ ವರ್ಷಕ್ಕೂ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಇವರು ಬ್ರಿಟಿಷರಿಂದ ನಮಗೆ ಕೊಡಲ್ಪಟ್ಟಿರುವ ಸಂಘಶಾಸನದ ಕಡುವೈರಿಗಳಾಗಿರುವರು. ತಮ್ಮ ಅಧಿಕಾರದ ಅವಧಿಯೊಳಗೆ ಅದನ್ನು ಮುರಿದುಬಿಡಬೇಕೆಂದು ಅವರು ದೃಢಸಂಕಲ್ಪಮಾಡಿರುವರು. ಆದ್ದರಿಂದ ಇನ್ನೊಂದು ವರ್ಷದೊಳಗಾಗಿ ಸಂಘಶಾಸನದ ಸಂಬಂಧ ಕಾಂಗ್ರೆಸಿಗೂ ಆಳರಸರಿಗೂ ಮಹಾ ಸಂಘರ್ಷವು ಉಂಟಾಗುವ ಸಂಭವವಿದೆ. ಭಾರತೀಯ ತರುಣ ತರುಣಿಯರು ಆ ಘಳಿಗೆಯಲ್ಲಿ ತಮ್ಮ ಪಾಲಿನ ಕರ್ತವ್ಯವನ್ನು ಮಾಡಿಯೇ ತೀರುವರೆಂದು ವಿಶ್ವಾಸವಿದೆ. ಹಾಗಾದರೆ ಭಾರತದ ಭವಿಷ್ಯವು ಉಜ್ವಲವಾಗುವುದು.

ತರುಣ ಹುಡುಗಿಯಲ್ಲಿ ಬಲವಾದ ರಕ್ತದ ಒತ್ತಾಟ

ಕ್ರುಶನ್ ಲವಣವು ಅವಳ ಚಿಕಿತ್ಸೆಗಳಲ್ಲೊಂದಾಗಿತ್ತು

ನಡು ಪ್ರಾಯದ ನಂತರ ಸಾವಿರಾರು ಜನರು ಬಲವಾದ ರಕ್ತದ ಒತ್ತಾಟದಿಂದ ನರಳುತ್ತಿದ್ದಾರೆ. ಆದರೆ ತರುಣ ಪ್ರಾಯದ ಹುಡುಗಿಯು ರಕ್ತದ ಒತ್ತಾಟದಿಂದ ನರಳುವುದೆಂದರೆ ಸಾಮಾನ್ಯವಾದುದಲ್ಲ. ಆವಳು ತನ್ನ ನರಳುವಿಕೆಯ ವಿಷಯವಾಗಿ ಹೀಗೆ ಬರೆಯುತಿದ್ದಾಳೆ -

"ನಾನು ಬಲವಾದ ರಕ್ತದ ಒತ್ತಾಟದಿಂದ ನರಳುತಿದ್ದೇನೆ. ನಾನು ಅನೇಕ ಡಾಕ್ಟರುಗಳನ್ನು ವಿಚಾರಿಸಿದಲ್ಲಿ ನಾನು ತರುಣಳಾಗಿರುವುದರಿಂದ ನನ್ನ ಈ ರೋಗವು ಸಾಮಾನ್ಯವಲ್ಲವೆಂದು ತಿಳಿಸಿದರು. ಅನೇಕ ಔಷಧಿಗಳನ್ನು ಉಪಯೋಗಿಸಿದರೂ ಪ್ರಯೋಜನ ದೊರಕದಿರಲು ನನ್ನ ಡಾಕ್ಟರರು ಕ್ರುಶನ್ ಲವಣವು ನನ್ನ ಈ ರೋಗಕ್ಕೆ ಉತ್ತಮವಾದ ಭೇದಿಯ ಔಷಧವೆಂದು ತೀರ್ಮಾನಿಸಿದರು. ಇದರ ಫಲಿತಾಂಶವು ನನಗೆ ಸಂತೋಷವನ್ನಿತ್ತಿತು. ಕ್ರುಶನ್ ಲವಣವನ್ನು ಸೇವಿಸಿದ ಕೆಲವು ದಿವಸಗಳಲ್ಲಿಯೇ ನನ್ನಲ್ಲಿದ್ದ ರಕ್ತದ ಒತ್ತಾಟವು ಕಡಮೆಯಾಯಿತು. ನಾನು ಈ ಮದ್ದನ್ನೇ ಮುಂದರಿಸುತ್ತೇನೆ." ಎಸ್ ಐ ಬಿ

ನಮ್ಮ ಅವಯವಗಳ ಜಡ ಪ್ರಕೃತಿಯವುಗಳಾಗಿರುವಾಗ ಅವುಗಳಿಂದ ದೇಹದಲ್ಲಿಯ ಕೆಟ್ಟ ವಸ್ತುಗಳನ್ನು ಹಿಂಗಿಸಲು ಸಾಧ್ಯವಾಗುವುದಿಲ್ಲ. ಕೆಟ್ಟ ಪದಾರ್ಥಗಳು ರಾಶಿಯಾಗಿ ರಕ್ತನಾಳಗಳನ್ನು ಪ್ರವೇಶಿಸುತ್ತವೆ. ಈ ಕೆಟ್ಟ ವಸ್ತುಗಳ ರಕ್ತವು ಸರಿಯಾಗಿ ಚಲಿಸದಂತೆ ಅಡ್ಡಿಮಾಡುತ್ತದೆ. ಇದರಿಂದಾಗಿ ರಕ್ತನಾಳಗಳ ಮೇಲೆ ಒತ್ತಾಟವು ಅಧಿಕವಾಗುತ್ತದೆ. ಕ್ರುಶನ್ ಲವಣವು ಅನೇಕ ವಿಧ ಲವಣಗಳ ಒಂದು ಸಂಗ್ರಹವಾಗಿರುವುದರಿಂದ ಇವು ನಿಮ್ಮ ಕಲಿಜ, ಮೂತ್ರಾಶಯ ಮೊದಲಾದ ಜೀರ್ಣಾಂಗಗಳನ್ನು ಸರಿಯಾದ ಆರೋಗ್ಯ ಸ್ಥಿತಿಯಲ್ಲಿರಿಸುತ್ತದೆ. ಇವು ನಿಮ್ಮ ದೇಹದ ಒಳಭಾಗವನ್ನು ಯಾವಾಗಲೂ ಕ್ರಿಯಾಗಿರಿಸಿ ರಕ್ತವನ್ನು ಶುದ್ಧಗೊಳಿಸುತ್ತದೆ. ಹೊಸತಾಗಿ ಶುದ್ಧವಾದ ರಕ್ತವನ್ನು ಪತೀ ಭಾಗದಲ್ಲಿಯೂ ಕಳುಹಿಸುತ್ತದೆ. ಕ್ರುಶನ್ ಲವಣವು ಎಲ್ಲಾ ಔಷಧಿ ಸ್ಟೋರಲ್ಲಿಯೂ ಸ್ಟೋರುಗಳಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.



No 3 V

ಲೋಧ್ರ

ಗರ್ಭಾಶಯ ರೋಗನಿವಾರಿಣಿ

ಹೆಂಗಸರಿಗೊಂದು ವರದಾನ

[illegible] ಸಮಯದಲ್ಲಿ ಬಹಿಷ್ಟೆ ದೋಷ ಬಹಿಷ್ಟೆಯಾಗುವಾಗ ಉಂಟಾಗುವ ನೋವು ಸಮಯಕ್ಕೆ ಸರಿಯಾಗಿ ಬಹಿಷ್ಟೆಯಾಗದಿರುವುದು ಗರ್ಭರೋಗವು [illegible] ಜೀತನ [illegible] [illegible] ಇತರ ಹೆಂಗಸರ ಎಲ್ಲ ರೋಗಗಳು ಈ ಔಷಧಿಯಿಂದ ಗುಣವಾಗುತ್ತದೆ

ಲೋಧ್ರ

ಎರಡು ಸೈಜಿನ ಬಾಟ್ಲಿಗಳಲ್ಲಿ ದೊರೆಯುತ್ತದೆ
ರೂಪಾಯಿ 3 ಮತ್ತು 1 10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ ಮತ್ತು ಡ್ರಗ್ಗಿಸ್ಟ್ಸ
ರೋಯಪೆಟ್ಟ, ಮದ್ರಾಸು

ಸ್ಟಾಕಿಸ್ಟರು —
ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು.

ತಾರೀಕು 17—2—39ರಿಂದ

ದಕ್ಷಯಜ್ಞ

ಎಂಬ ತಮಿಳ ಚಿತ್ರವು

ಚಿತ್ರಾ ಟಾಕಿಸಿನಲ್ಲಿ ಪ್ರದರ್ಶಿಸುವುದು.

'ಚೀನದ ಸೋಲು ನಮ್ಮ ಗೇಲು'

ಚೀನಲ್ಲಿ ಜಪಾನು ಗೆದ್ದರೆ ನಮಗೇನೂ ನಷ್ಟವಿಲ್ಲ, ಆದರೆ ಲಾಭವೇ ಆಗುವದು. ಎಂದು ಪಾಶ್ಚಿಮಾತ್ಯ ರಾಷ್ಟ್ರಗಳೆಲ್ಲ ಮನಸ್ಸಿನಲ್ಲಿ ಮಂಡಿಗೆ ತಿನ್ನಲಾರಂಭಿಸಿವೆ. ಚೀನದಲ್ಲಿ ಜಪಾನು ಗೆದ್ದರೆ ಚೀನದ ಔದ್ಯೋಗಿಕ ಉನ್ನತಿಯಾಗುವದು. ಚೀನೀಯರ ಕೊಳ್ಳುವ ಶಕ್ತಿ ಹೆಚ್ಚುವದು. ಚೀನದಲ್ಲಿ ವ್ಯಾಪಾರ ಉದ್ಯೋಗಗಳು ಬೆಳೆಯುವವು ಅದರಲ್ಲಿ ನಾವು ತುಂಬಾ ಲಾಭ ಸಂಪಾದಿಸಬಹುದು ಎಂದು ಎಣಿಸಿ ಪಾಶ್ಚಾತ್ಯ ರಾಷ್ಟ್ರಗಳು ಚೀನದ ಸಹಾಯಕ್ಕೆ ಬಾರದಿವೆ ಜಪಾನೇ ಗೆದ್ದುಕೊಳ್ಳಲಿ ಎಂದಿವೆ.

ಅಕ್ಕಸಾಲಿಗೆ ಅಕ್ಕನನ್ನೂ ಬಿಡ

ಆದರೆ ಜಪಾನನನ್ನು ಅಕ್ಕಸಾಲಿಗನಿಗೆ ಹೋಲಿಸಬಹುದು. ಅಕ್ಕಸಾಲಿಗನು ಅಕ್ಕನನ್ನೂ ಬಿಡ. ಅದು ಅವನ ಸ್ವಾಭಾವಿಕಧರ್ಮ. ಜಪಾನಿನ ಅನ್ಯಾಯದ ಯುದ್ಧದಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ಚೀನದ ಸಹಾಯಕ್ಕೆ ಬಾರದೆ ಜಪಾನಿನೊಡನೆ ಅಕ್ಕ [illegible] ತನ್ನವನ್ನು ಬೆಳೆಸಿದರೂ ಕೂಡ ತನ್ನ ಕಾರ್ಯಸಾಧನೆ ಮಾಡ ಮೇಲೆ ಜಪಾನು ಈ ಎಲಾ ರಾಷ್ಟ್ರಗಳಿಗೆ ದೊಡ್ಡ ಮೋಸವನ್ನು ಕೊಡದೆ ಇರಲಾರದು. ಈಗ ಚೀನವು ಸ್ವತಂತ್ರವಾಗಿರುವಾಗ ಪಾಶ್ಚಾತ್ಯ ರಾಷ್ಟ್ರಗಳಿಗಿರುವ ಲಾಭಗಳು ಮುಂದೆ ಅದು ಜಪಾನಿಗೆ ಅಧೀನವಾದಾಗ ತಮಗೆ ದೊರೆಯುವ ಲಾಭಗಳಿಗಿಂತ ಅತಿಶಯವಾಗಿದ್ದವು. ಆ ಚಾತುರ್ಯದಿಂದ ತಮ್ಮ ಕಾಲ ಮೇಲೆಯೇ ತಾವು ಕೊಡಲಿ ಹೊಡಕೊಂಡೆವು ಎಂದು ಮರುಗುವ ದಿನಗಳು ಬಂದೇ ಬರುವುವು.

ಮಂಚೂಕುವೋದ ಪಾಠ

ಚೀನವನ್ನು ಜಪಾನು ಗೆದ್ದರೆ ಅದು ಏನು ಮಾಡೀತೆಂಬುದನ್ನು ಮಂಚೂಕುವೋ ತಿಳಿಸುವುದು. ಮೊದಲು ಚೀನದ ಒಂದು ಅಂಗವಾಗಿದ್ದು ಸ್ವತಂತ್ರವಾಗಿದ್ದ ಮಂಚೂಕುವೋ ಈಗ ಆರೇಳು ವರ್ಷಗಳಿಂದ ಜಪಾನಿನ ಅಧೀನವಾಗಿದೆ ಮಂಚೂಕುವೋ ಜಪಾನಿನ ಅಧೀನವಾದ್ದೇ ತಡ; ಅಲ್ಲಿಂದ ಇಂಗ್ಲಿಷರು, ಅಮೇರಿಕನರು ಮೊದಲಾದ ವಿದೇಶಿಯರೆಲ್ಲರೂ ಹೊರಗಟ್ಟಲ್ಪಟ್ಟರು. ಈಗ ಜಪಾನಿನ ಮಧ್ಯಸ್ಥಿಕೆಯಿಂದಲೇ ವಿದೇಶಿಯರು ದೇಶದೊಡನೆ ವಾಣಿಜ್ಯ ವ್ಯವಹಾರ ಸಂಬಂಧಗಳನ್ನು ಬೆಳಸಿಕೊಳ್ಳಬಹುದಾಗಿದೆ. ಇಂಥ ವ್ಯಾಪಾರಗಳಲ್ಲಿ ಲಾಭದ ದೊಡ್ಡ ಪಾಲು ಮಧ್ಯಸ್ಥಿಕೆಗೆ ಬಂದವರ ಜೇಬಿಗೇ ಸೇರುವುದೆಂಬುದನ್ನು ಜನ [illegible] ಕರು ಅನುಭವದಿಂದ ಹೇಳಬಲ್ಲರು.

ತಪ್ಪು ತಿಳುವಳಿಕೆ

ಚೀನದಲ್ಲಿ ಜಪಾನು [illegible] ಸ್ಥಿತಿಯಿಂದ ತಾವು ವ್ಯಾಪಾರ ಮಾಡುವ [illegible] ತಮಗೆ ದೊರೆ[illegible] ಮಾತ್ರ [illegible] ಕೆಲವು ಪಾಶ್ಚಾತ್ಯ ರಾಷ್ಟ್ರಗಳು ಊಹಿಸಿವೆ. ಯಾಕಂದರೆ ಚೀನದಲ್ಲಿ [illegible] ದೊಡ್ಡ ದೊಡ್ಡ ಉದ್ಯೋಗಗಳನ್ನು ಆರಂಭಿಸಿದಾಗ ಜಪಾನಿನೊಡನೆ ಚೀನವೂ ಸಂಪನ್ನವಾಗುವುದು. ಚೀನಿಯರ ಕೊಳ್ಳುವ ಶಕ್ತಿ ಹೆಚ್ಚುವುದು. ಚೀನವು ಬಹು ವಿಶಾಲವಾದ ದೇಶ. ಅಲ್ಲಿಯ ಜನರ ಕೊಳ್ಳುವ ಶಕ್ತಿ [illegible] ಮಾತ್ರ ಹೆಚ್ಚಿದರೂ, ತಮ್ಮ [illegible] ರೂಪಾಯಿಗಳ ವ್ಯಾಪಾರವಾಗುವುದು. ಆಗ ತಾವು ಚೀನದಲ್ಲಿ ಹೆಚ್ಚು ಹಣ ವಿನಿಯೋಗಿಸಿ ಹೆಚ್ಚು ಲಾಭ ಸಂಪಾದಿಸಬಹುದು ಎಂದಿದ್ದಾರೆ. ಪಾಶ್ಚಾತ್ಯ ರಾಷ್ಟ್ರಗಳೆಲ್ಲ ವಾಣಿಜ್ಯ ವ್ಯಾಪಾರಿ ರಾಷ್ಟ್ರಗಳಾಗಿವೆ. ವ್ಯಾಪಾರಿಗಳು ಸರ್ವದಲ್ಲಿ ಲಾಭವನ್ನೇ ಕಾಣುತ್ತಾರೆ. ಆದರೆ ಅನೇಕ ಸಂದರ್ಭಗಳಲ್ಲಿ ಅವರ ಲಾಭಗಳೆಲ್ಲ ನಷ್ಟದಲ್ಲಿಯೇ ಪರಿಣಮಿಸುತ್ತವೆ. ಚೀನದಲ್ಲಿ ಹಾಗೆಯೇ ಆಗಬಹುದೆಂದು ನಮಗೆ ತೋರುತ್ತದೆ.

ಜಪಾನಿನ ಮೋಸ

ಜಪಾನಿನ ಗೆಲುವಿನಿಂದ ಪಾಶ್ಚಾತ್ಯರಿಗೆ ಲಾಭವಿದೆ ಎಂದು ಹೇಳಿ ಪ್ರಚಾರ ಮಾಡುವವರು, ಬೇರೆ ಯಾರೂ ಅಲ್ಲ. ಜಪಾನಿಯರೇ ಆಗಿದ್ದಾರೆ. ಚತುರರಾದ ಅವರು ಹೀಗೆಲ್ಲಾ ಪ್ರಚಾರಮಾಡಿ ಪಾಶ್ಚಾತ್ಯ ರಾಷ್ಟ್ರಗಳ ಜನಮತವು ತಮ್ಮ ಅನ್ಯಾಯದ ಯುದ್ಧಕ್ಕೆ ಅನುಕೂಲವಾಗುವಂತೆ ಉಪಾಯ ಹೂಡಿದ್ದಾರೆ. ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ಸ್ವಾರ್ಥಕ್ಕೆ ಕಟ್ಟುಬಿದ್ದು ಜಪಾನಿಯರನ್ನು ಈ ಯುದ್ಧದಲ್ಲಿ ವಿರೋಧಿಸದೆ ಇರಲಿ ಎಂದು ಅವುಗಳ ಮೊಣಕೈಗೆ ಬೆಲ್ಲವನ್ನು ಸವರಿದ್ದಾರೆ. ಜಪಾನಿಗೆ ಈಗ ಹೊರದೇಶಗಳಲ್ಲಿ ಸಾಲಸಿಕ್ಕದೆ ಗತ್ಯಂತರವಿಲ್ಲ. ಚೀನೀ ಜಪಾನ್ ಯುದ್ಧದಲ್ಲಿ ಅದರ ಭಂಡವಾಳವು ಬರಿದಾಗುತ್ತ ಬಂದಿದೆ. ತಾವು ಕೇಳಿದಷ್ಟು ಸಾಲವು ತಮಗೆ ಹೊರದೇಶಗಳಲ್ಲಿ ದೊರೆಯಬೇಕೆಂದು ಜಪಾನಿಯರು ಹೀಗೆ ತಮ್ಮ ಗೆಲುವಿನಿಂದ ಪಾಶ್ಚಾತ್ಯರಿಗೆ ಲಾಭವಿದೆ ಎಂದು ಹೇಳುತ್ತಿರುವರೇ ಹೊರತು ಮತ್ತೇನಿಲ್ಲ. ಇದು ಕುತಂತ್ರ ಜಪಾನಿನ ದೊಡ್ಡ ಮೋಸವೇ ಸರಿ.

ಅಂತರಂಗದ ಉದ್ದೇಶ

ಚೀನದಲ್ಲಿ ಜಪಾನು ಯುದ್ಧವನ್ನಾರಂಭಿಸಿದ್ದುದು ಲೋಕ ಕಲ್ಯಾಣಕ್ಕಾಗಿಯೆಂದೂ [illegible] ದವಡೆಯೊಳಗೆ ಸಿಕ್ಕಿ ನುಚ್ಚುನೂರಾಗಲಿದ್ದ ಚೀನವನ್ನು ಬದುಕಿಸಲಿಕ್ಕೆಂದೂ ಜಪಾನು ಹೇಳುತ್ತ ಬಂದಿದೆ. ಆದರೆ ಅದಿಲ್ಲಿಯವರೆಗೆ ಯಾವ ರಾಷ್ಟ್ರವಾದರೂ ಲೋಕ ಕಲ್ಯಾಣಕ್ಕಾಗಿ ಇನ್ನೊಂದು ರಾಷ್ಟ್ರದ ಮೇಲೆ ಅನ್ಯಾಯದ ಯುದ್ಧಕ್ಕೆ ಹೋದುದಿಲ್ಲ. ತನ್ನ ಕಲ್ಯಾಣವನ್ನೇ ಲೋಕ ಕಲ್ಯಾಣವೆನ್ನುವುದಾದರೆ, ಲೋಕ ಕಲ್ಯಾಣಕ್ಕಾಗಿ ಜಪಾನು ಚೀನದಲ್ಲಿ ಯುದ್ಧವನ್ನಾರಂಭಿಸಿದ್ದು [illegible] ಈ ಯುದ್ಧದಲ್ಲಿ ಜಪಾನು ಗೆದ್ದರೆ [illegible]

ಔದ್ಯೋಗಿಕ ಉನ್ನತಿಯು ಸಾಧ್ಯವಲ್ಲ

ಪಾಶ್ಚಾತ್ಯ ದೇಶಗಳು ಔದ್ಯೋಗಿಕ ರಾಷ್ಟ್ರಗಳಾಗಿವೆ. ಚೀನವು ಕೃಷಿ ಪ್ರಧಾನ ದೇಶವಾಗಿರುವುದು. ಪಾಶ್ಚಾತ್ಯರ ಅರ್ಥದಲ್ಲಿ ಚೀನದಲ್ಲಿ ಔದ್ಯೋಗಿಕ ಉನ್ನತಿಯು ಸಾಧ್ಯವಲ್ಲ. ಚೀನವು ಇನ್ನು ಶತಮಾನಗಳ ತನಕ ಕೃಷಿ ಪ್ರಧಾನ ದೇಶವಾಗಿಯೇ ಉಳಿಯುವುದು. ಅಲ್ಲಿಯ ಕೃಷಿ ಉತ್ಪತ್ತಿಗಳನ್ನು ಜಪಾನ ತನಗೆ ಅನುಕೂಲವಾದ ದರದಲ್ಲಿ ಕೊಂಡುಕೊಂಡು ತಾನು ತಯಾರಿಸಿದ ಕೈಗಾರಿಕೆ ಸಾಮಾನುಗಳನ್ನು ಚೀನಕ್ಕೆ ಮಾರುವುದು. ಜಪಾನ ಔದ್ಯೋಗಿಕ ರಾಷ್ಟ್ರವಾಗಿದೆ. ಅದಕ್ಕೆ ಕಚ್ಚಾ ಮಾಲು [illegible] ಸಿದ್ಧ ಸಾಮಗ್ರಿಗಳನ್ನು ಮಾರಲಿಕ್ಕೆ ಕ್ಷೇತ್ರ ಬೇಕು. ಇವೆರಡಕ್ಕೂ ಚೀನವು ಅನುಕೂಲವಾಗಿದೆ. [illegible] ಹೆಚ್ಚಿಸಿ ಸಾಮ್ರಾಜ್ಯ ರಕ್ಷಣೆ ಮಾಡಲಿಕ್ಕೂ ಚೀನವು ಪಕ್ಕದಲ್ಲಾಗಿದೆ ಮತ್ತು ಅನುಕೂಲವಾಗಿದೆ. ಅದರಿಂದ ಚೀನದ ಔದ್ಯೋಗಿಕ ಉನ್ನತಿಯಾದರೆ ತಮ್ಮ ಯಂತ್ರೋಪಕರಣಗಳು ಅಲ್ಲಿ ಹೆಚ್ಚಾಗಿ ಮಾರಿ ತಾವು ಹೆಚ್ಚು ಲಾಭ ಸಂಪಾದಿಸಬಹುದೆಂಬ ಪಾಶ್ಚಾತ್ಯರ ಕನಸು ಕನಸಾಗಿಯೇ ಉಳಿಯುವುದು. [illegible] ಜಪಾನಿನ ಸಂರಕ್ಷಣೆಯಲ್ಲಿ ಚೀನದಲ್ಲಿ [illegible] ಕೆಗಳು [illegible] [illegible] ಪಾಶ್ಚಾತ್ಯ ರಾಷ್ಟ್ರಗಳ [illegible]

ಚೀನವು ಪರಾಧೀನವಾದರೆ

ಈಗ [illegible] ಯುದ್ಧದಲ್ಲಿ ಚೀನವು [illegible] ದೇಶಗಳಿಗೆ ಅಲ್ಲಿ ಪ್ರವೇಶ ದೊರೆಯುವುದೇ ಕಷ್ಟವಾಗುವುದು. ಏನಾದರೂ ಅಲ್ಲಿ ಪಾಶ್ಚಾತ್ಯರಿಗೆ ವ್ಯಾಪಾರವಾಗುವುದಾದರೆ, ಜಪಾನರು ತಮ್ಮಿಂದ ಸಾಧ್ಯವಿಲ್ಲ ಅಥವಾ ತಮಗೆ ಬೇಡವೆಂದು ತಮ್ಮ ಸ್ವೇಚ್ಛೆಯಿಂದ ಬಿಟ್ಟುಕೊಟ್ಟು ವಸ್ತು ಒಡವೆಗಳಲ್ಲಿ ಮಾತ್ರ. ಜಪಾನಿಗೆ ತನ್ನ ಸ್ವಾರ್ಥಸಾಧನೆ ಅಥವಾ ತನ್ನದೇ ಬೇಳೆಯನ್ನು ಬೇಯಿಸಲಿಕ್ಕೆ ಬೇಕಾದಲ್ಲಿ ಮಾತ್ರ ಅದು ಚೀನದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಿಗೆ ವ್ಯಾಪಾರ ಮಾಡ ಬಿಡುವುದು.

ಪಾಶ್ಚಾತ್ಯರು ಚೀನಕ್ಕೆ ಸಹಾಯ ಮಾಡಲಿ

ಪರಾಧೀನ ಚೀನದಲ್ಲಿ ಜಪಾನು ಬಿಟ್ಟುಕೊಟ್ಟಂಥ ಕ್ಷೇತ್ರದಲ್ಲಿ ಪಾಶ್ಚಾತ್ಯರು ವ್ಯಾಪಾರ ಮಾಡಿ ದೊರೆಯುವ ಲಾಭವು ಅತ್ಯಲ್ಪವೇ ಸರಿ. ಈಗ ಪಾಶ್ಚಾತ್ಯರು ಚೀನದಲ್ಲಿ ವ್ಯಾಪಾರ ಮಾಡಿ ಸಂಪಾದಿಸುವ ಲಾಭವು ಅದಕ್ಕಿಂತ ಎಷ್ಟೋ ಪಾಲು ಅಧಿಕವಾಗಿರುವುದು. ಚೀನವು ಸ್ವತಂತ್ರವಾಗಿದ್ದರೆ ಅದು ತನ್ನ ಸ್ವಾರ್ಥವನ್ನೆ ನೋಡಲಾದ ಭಾವ ದೃಷ್ಟಿಯಿಂದ ಆಲೋಚಿಸಿಯೂ ಸ್ವತಂತ್ರವಾಗಿರುವುದರಿಂದ ಪಾಶ್ಚಾತ್ಯರಿಗೆ ಲಾಭ [illegible] ಜಪಾನಿಗೆ ಅಧೀನವಾಗಿರುವುದರಿಂದ ಅಲ್ಲ. ಅದ್ದರಿಂದ ಪಾಶ್ಚಾತ್ಯರು [illegible] [illegible] ಚೀನ ಯುದ್ಧದಲ್ಲಿ [illegible] ಸಹಾಯ ಮಾಡಬಾರದು. ಪಾಶ್ಚಾತ್ಯರು [illegible] [illegible] ಸಹಾಯವೂ [illegible] [illegible] ಸವುದಿಲ್ಲ. [illegible] ಚೀನಕ್ಕೇ ಈ ಯುದ್ಧದಲ್ಲಿ [illegible] ಸಹಾಯ ಮಾಡಲಿ [illegible] ಸಕಾಲದಲ್ಲಿ [illegible] ಹೋಗುವುದಿಲ್ಲ.

ಬನ್ನಿರಿ' ಪರೀಕ್ಷಿಸಿರಿ'

ನಮ್ಮಲ್ಲಿ

ಎಲ್ಲಾ ತರದ ಪುಸ್ತಕಗಳನ್ನು, ಲಗ್ನಪತ್ರಿಕೆ ಮುಂತಾದವುಗಳನ್ನು ಕಡಿಮೆ ದರದಲ್ಲಿ ಮಾಡಿಕೊಡುತ್ತೇವೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರಕರವಾದ ಔಷಧಿ.

ಡಾ॰ ಜಸಾನಿಯವರ
ಜಗತ್ಪ್ರಸಿದ್ಧ

GONO KILLER

ಗೊನೋಕಿಲರ್ (ರಜಿಸ್ಟರ್ಡ)

ಪ್ರಮೇಹ ವ್ಯಾಧಿಗೆ ದಿವ್ಯೌಷಧ

ನಕಲಿ ಔಷಧಿಗಳ ವಿಷಯ ಜಾಗ್ರತೆ ತೆಗೆದುಕೊಳ್ಳಿರಿ. ಕೊಂಡುಕೊಳ್ಳುವದರ ಮೊದಲು ಕೋಳಿ ಗುರುತಿನ ಚಿಹ್ನ ಸೀಲು ಮತ್ತು ಗೊನೋಕಿಲರ್ ಇರುತ್ತದೊ ಎಂಬುದನ್ನು ನೋಡಿರಿ.

[illegible] ಅಲ್ಲೋಪಥಿ ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೇ ಇಂಜೆಕ್ಷನ್ [illegible] ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೊನೋಕಿಲರ್ ಎಂಬ [illegible] ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ [illegible] [illegible], ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ [illegible] ಪ್ರಮೇಹ [illegible] ಸ್ರಾವ, ಯಾವದೇ [illegible] ನೋವು, ಮೂತ್ರದಲ್ಲಿ [illegible] ಮೂತ್ರ ರೋಗವಿರುವಲ್ಲಿ [illegible] ಇವೇ ಮೊದಲಾದ ಯಾವತ್ತು ಗೊನೋರೋಕಸ್ ಸಂಬಂಧವುಳ್ಳ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.
50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3–0–0 (ಮೂರು) ವಿ ಪಿ ಛಾರ್ಜು ೬ ಆಣೆ ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer: **Dr. D. N. JASANI,** Vithalbhai Patel Road, BOMBAY

ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ.

ದ್ವಿತೀಯ ಉತ್ತರಕುಮಾರ-ಹಿಟ್ಲರ್ ದೇವರು!

ಹಿಟ್ಲರ್ ದೇವರಿಂದ ಸ್ವರ್ಗರಾಜ್ಯವಾಯಿತಂತೆ

'ಜರ್ಮನಿ-ನರಕ ಕುಂಡವು ಎಲ್ಲಾ ಸುಳ್ಳು ಸುಳ್ಳು

ಜರ್ಮನಿಯಲ್ಲಿ ಹಿಟ್ಲರ ದೇವರ ಅವತಾರವಾಗುವ ಮೊದಲು ಜರ್ಮನಿಯೆಲ್ಲಾ ಒಂದು ನರಕಕುಂಡವಾಗಿದ್ದಿತಂತೆ. ಆದರೆ ಅದೀಗ ಸ್ವರ್ಗರಾಜ್ಯವಾಗಿದೆ ಎಂದು ಹಿಟ್ಲರನ ಅನುಯಾಯಿಗಳು ರಾಗ ಆಲಾಪನೆಮಾಡಿ ತುತೂರಿ ಊದುತ್ತಾರೆ. ಆದರೆ ಅವರ ಆಲಾಪನೆಗೆ ಬೆಲೆ ಎಷ್ಟೆಂಬುದನ್ನು ಈ ಲೇಖನವು ಸ್ಪಷ್ಟ ಮಾಡುತ್ತದೆ.

೧೯೩೩ರಲ್ಲಿ ಹಿಟ್ಲರನು ಅಧಿಕಾರಕ್ಕೆ ಬಂದ ಕೂಡಲೆ ಮಾನವ ಸಮಾಜದ ಉದ್ಧಾರಕ್ಕೆ ಪರಮಾತ್ಮನ ಅವತಾರವಾಯಿತೆಂದು ಅವನ ಹೊಗಳುಭಟ್ಟರು ಪ್ರಪಂಚಕ್ಕೆ ಸಾರಿದರು. ಹಳೆ ಜರ್ಮನಿಯ ಭಗ್ನಾವಶೇಷಗಳ ಮೇಲೆ ಹೊಸ ಜರ್ಮನಿಯ ಭವ್ಯಮಂದಿರವು ಕಟ್ಟಲ್ಪಡುವುದೆಂದು ಅವರನ್ನುತ್ತಿದ್ದರು. ಆದರೆ ಈ ಆರು ವರ್ಷಗಳ ಕಾಲಾವಧಿಯಲ್ಲಿ ಹಿಟ್ಲರ ಪಂಗಡಿಗರು ಜರ್ಮನಿಯ ಅಥವಾ ಮಾನವ ಸಮಾಜದ ಸಾರೋದ್ಧಾರಕ್ಕಾಗಿ ಮಾಡಿದುದೇನು ಎಂದು ಕೇಳಿದರೆ ಬಾಯಿ ಮುಚ್ಚಿ ಸುಮ್ಮಗಿರಬೇಕಾಗುವುದು. ಯಾಕೆಂದರೆ ಹಿಟ್ಲರ ದೇವರು ದ್ವಿತೀಯ ಉತ್ತರಕುಮಾರನಷ್ಟೇ ಆಗಿದ್ದಾನೆ. ಅವನ ನಾಜೀ ಪಂಗಡಿಗರು ಕೇವಲ ಅವನ ಹೊಗಳುಭಟರಾಗಿರುವರು.

ಜರ್ಮನಿಯ ಪುನರ್ರಚನೆ.

ಮಹಾಯುದ್ಧವು ಮುಗಿದಾಗಿನ ಜರ್ಮನಿಯಂತೆ ಈಗಿನ ಜರ್ಮನಿ ಇರುವುದಿಲ್ಲ ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಆಗ ಪಾದಾಂಕ್ರಿತವಾಗಿದ್ದ ಜರ್ಮನಿ ಈಗ ಅಭಿಮಾನದಿಂದ ತಲೆಎತ್ತಿ ನಿಂತಿದೆ. ಆಗ ಸಾಲದ ಭಾರದಿಂದ ಮುಗ್ಗರಿಸಿ ಬೀಳುತಿದ್ದ ಜರ್ಮನಿ ಈಗ ಸರ್ವಪ್ರಕಾರದಿಂದ ಸಂಪನ್ನವಾಗಿದೆ. ಆಗ ನಿರ್ವೀರ್ಯ ಮತ್ತು ನಿಸ್ತೇಜವಾಗಿದ್ದ ಜರ್ಮನಿ ಈಗ ನವಯುಗದ ಸ್ಫೂರ್ತಿ ಉತ್ಸಾಹ ಆಸೆ ಭರವಸೆಗಳಿಂದ ತುಂಬಿ ತುಳುಕುತ್ತಿದೆ. ಹಳೆ ಜರ್ಮನಿಯ ಭಗ್ನಾವಶೇಷಗಳ ಮೇಲೆ ಹೊಸ ಜರ್ಮನಿಯ ಪುನರ್ರಚನೆಯಾಗಿದೆ. ಆದರೆ ಇದರ ಶ್ರೇಯಸ್ಸು ಯಾರಿಗೆ? ಹಿಟ್ಲರನಿಗೆ? ಅವನ ನಾಜಿ ಪಂಗಡಿಗರಿಗೆ? ಅಲ್ಲ, ಅಲ್ಲ, ಸರ್ವಥಾ ಅಲ್ಲ.

ಹಿಟ್ಲರ ಮಾಡಿದುದು ಏನೂ ಇಲ್ಲ

ನವೀನ ಜರ್ಮನಿಯ ನಿರ್ಮಾಣ ಕಾರ್ಯದಲ್ಲಿ ಹಿಟ್ಲರ ಮಾಡಿದುದು ಏನೂ ಇಲ್ಲ. ೧೯೩೨ರಲ್ಲಿ ಜರ್ಮನಿಯಲ್ಲಿ ೬೦ ಲಕ್ಷ ನಿರುದ್ಯೋಗಿಗಳಿದ್ದರು. ಆದರೆ ಆಗ ಅಧಿಕಾರಾರೂಢವಾಗಿದ್ದ ರಾಷ್ಟ್ರೀಯ ಸರಕಾರವು ಕೇವಲ ಒಂದುವರೆ ವರ್ಷದೊಳಗಾಗಿ ಆ ನಿರುದ್ಯೋಗಿಗಳ ಸಂಖ್ಯೆಯನ್ನು ಕೇವಲ ೫೦ಲಕ್ಷಕ್ಕೆ ತಂದಿಳಿಸಿತು. ಈ ಮಹಾಕಾರ್ಯವನ್ನು ಸಾಧಿಸಿದ ರಾಷ್ಟ್ರೀಯ ಸರಕಾರವು ನಿಜವಾಗಿ ನಮ್ಮೆಲ್ಲರ ಹೆಮ್ಮೆಯ ವಿಷಯವಾಗಿರುವುದು. ಹಿಟ್ಲರನು ಅಧಿಕಾರಕ್ಕೆ ಬಂದ ಮೇಲೆ ಜರ್ಮನಿಯಲ್ಲಿ ನಿರುದ್ಯೋಗಿಗಳೇ ಇಲ್ಲವೆಂದು ಹಿಟ್ಲರನು ಬಡಾಯಿಕೊಚ್ಚಿಕೊಳ್ಳುತ್ತಾನೆ. ಹೇಗೆ ಇಲ್ಲ? ಯಾಕೆ ಇಲ್ಲ? ಎಂಬುದನ್ನು ಆಲೋಚಿಸಿದರೆ ರೋಮಾಂಚನವಾಗುವುದು. ಹಿಟ್ಲರನು ಇದ್ದ ನಿರುದ್ಯೋಗಿಗಳನ್ನೆಲ್ಲ ಸೈನ್ಯಕ್ಕೆ ವರ್ತಿಸಿಂದಿದ್ದಾನೆ. ಅಥವಾ ಸರಕಾರದ ಸೈನಿಕ ಕಾರ್ಖಾನೆಗಳಲ್ಲಿ ಅವರಿಂದ ಒತ್ತಾಯದ ಕೆಲಸಗಳನ್ನು ತೆಗೆದುಕೊಳ್ಳುತಿದ್ದಾನೆ. ಈ ಜನರಿಗೆ ಸುಖಜೀವನದ ಯಾವ ಸೌಕರ್ಯಗಳೂ ಇರುವುದಿಲ್ಲ. ಕೇವಲ ಜೀವಧಾರಣೆ ಮಾಡಿಕೊಂಡಿದ್ದಾರೆ. ಅವರ ಜೀವನವು ನಿರುದ್ಯೋಗಿಯಾಗಿದ್ದಾಗಿನ ಜೀವನಕ್ಕಿಂತಲೂ ಕಷ್ಟತರವಾಗಿದೆ. ಹೀಗಾದ ಮೇಲೆ ಜರ್ಮನಿಯಲ್ಲಿ ಈಗ ನಿರುದ್ಯೋಗಿಗಳಿಲ್ಲವೆನ್ನುವುದರಲ್ಲಿ ಸತ್ಯಾಂಶವು ಎಷ್ಟಿದೆಯೆಂಬುದನ್ನು ವಾಚಕರೇ ಆಲೋಚಿಸಲಿ. ಜರ್ಮನಿಯಲ್ಲಿ ನಿರುದ್ಯೋಗಿಗಳ ಸಂಖ್ಯೆಯನ್ನು ತಗ್ಗಿಸಿದ ಶ್ರೇಯಸ್ಸು ಹಿಟ್ಲರನಿಗಲ್ಲ, ಅವನು ಅಧಿಕಾರಕ್ಕೆ ಬರುವ ಮೊದಲು ಇದ್ದ ರಾಷ್ಟ್ರೀಯ ಸರಕಾರಕ್ಕೆ ಸಲ್ಲಬೇಕು.

ಬರೀ ಜಗ್ಗಳಿಕೆಯ ಮಾತು

ಹಿಟ್ಲರನ ಅನುಯಾಯಿಗಳು ತಮ್ಮನ್ನು ತಾವು ಹೊಗಳಿಕೊಳ್ಳುವುದರಲ್ಲಿ ಉತ್ತರಕುಮಾರನನ್ನೂ ಮೀರಿಸಿದ್ದಾರೆ. ವ್ಯಾಪಾರ ಮಹಿವಾಟುಗಳ ಉಪಯೋಗಕ್ಕೆ ಎರುವ ವಿಮಾನಗಳು ತಮ್ಮಲ್ಲಿರುವಷ್ಟು ಮತ್ತೆ ಯಾವ ರಾಷ್ಟ್ರದಲ್ಲಿಯೂ ಇರುವುದಿಲ್ಲವೆಂದೂ, ಅವರೆನ್ನುತ್ತಾರೆ. ವಿಮಾನ ಸಂಚಾರಕ್ಕೆ ಇವರಷ್ಟು ಅನುಕೂಲಗಳು ಮತ್ತೆಲ್ಲಿಯೂ ಇರುವುದಿಲ್ಲವೆನ್ನುತ್ತಾರೆ. ಎಲ್ಲ ನಿಜ. ಆದರೆ ಜರ್ಮನಿಗೆ ಈ ಉತ್ತಮ ಸ್ಥಾನವನ್ನು ತಂದುಕೊಟ್ಟವರು ನಾಜಿಗಳಲ್ಲ. ಹಿಟ್ಲರನು ಅಧಿಕಾರಕ್ಕೆ ಬರುವ ೫ ವರ್ಷಗಳ ಮೊದಲಿಂದಲೂ ವಿಮಾನ ಸಂಚಾಲನದಲ್ಲಿ ಜರ್ಮನಿಯು ಗಣನೀಯ ಸ್ಥಾನವನ್ನು ಪಡೆದಿತ್ತು. ರೈಲು ಪ್ರಯಾಣದಷ್ಟು ಸುಲಭವಾಗಿ ಮತ್ತು ಕಡಿಮೆ ಖರ್ಚಿನಿಂದ ಆಗಲೂ ಜರ್ಮನಿಯ ವಿಮಾನಗಳಲ್ಲಿ ಕೂತು ಯೂರೋಪಿನಲ್ಲೆಲ್ಲ ಹಾರಾಡಬಹುದಾಗಿತ್ತು. ಹಾಗಾದರೆ ತಮ್ಮ ವಿಮಾನಗಳು ಜಗತ್ತಿನಲ್ಲಿ ಶ್ರೇಷ್ಠವಾಗಿವೆ ಎಂದು ನಾಜಿಗಳು ಹೇಳಿಕೊಳ್ಳುವುದು ಜಗ್ಗಳಿಕೆಯಲ್ಲದೆ ಮತ್ತೇನೂ ಅಲ್ಲವೆಂಬುದು ಸ್ಪಷ್ಟ.

ಕೆಲಸಗಾರರಿಗೆ ಸುಖ.

ನಾಜಿಗಳು ಹೇಳಿಕೊಳ್ಳುತ್ತಿರುವ ಇನ್ನೊಂದು ಹೆಗ್ಗಳಿಕೆ ಮಾತೆಂದರೆ ಕೆಲಸಗಾರರಿಗೆ ಸುಖ ಕೊಟ್ಟಿದ್ದೇವೆಂಬುದು. ಆದರೆ ಅವರ ಈ ಮಾತಿನಲ್ಲಿ ಸತ್ಯವಿರುವುದಿಲ್ಲ. ಕೆಲಸಗಾರರ ಮನಸ್ಸಿನ ಕ್ಲೇಶವನ್ನು ಕಳೆಯಲಿಕ್ಕೆ ಜರ್ಮನಿಯ ಕಮ್ಯಾರ್ಖಾನೆಗಳಲ್ಲಿ ಈಗ [illegible] ಅನುಕೂಲತೆಗಳಿರುವುವೋ ಅವೆಲ್ಲ ಹಿಟ್ಲರನ ಅಧಿಕಾರಕ್ಕೆ ಬರುವ ಮೊದಲೂ ಇದ್ದುವು. ಆಗಲೂ ಕಮ್ಯಾರ್ಖಾನೆಗಳಿಗೆ ಹೊಂದಿಕೊಂಡು ಕೆಲಸಗಾರರ ಉಪಯೋಗಕ್ಕೆ ಆಟದ ಬಯಲುಗಳೂ, ಕ್ರೀಡಾಸ್ಥಾನಗಳೂ, ನಾಟಕ ಸಿನೆಮಾ ಮಂದಿರಗಳೂ ಇದ್ದುವು. ಬೇಸಿಗೆ ಕಾಲದಲ್ಲಿ ರಜೆತೆಗೆದುಕೊಂಡು ಕೆಲಸಗಾರರು ದೇಶ ಸಂಚಾರಮಾಡಿ ಆನಂದಪಡುತಿದ್ದರು; ಜ್ಞಾನ ಸಂಪಾದನೆ ಮಾಡಿಕೊಳ್ಳುತ್ತಿದ್ದರು.

ಮೃತ್ಯುಸ್ವರೂಪ ಹಿಟ್ಲರ

ವಾಸ್ತವವಾಗಿ ಹೇಳಬೇಕಾದರೆ ಹಿಟ್ಲರನು ಕೆಲಸಗಾರರ ಪಾಲಿಗೆ ಕಾಲಸ್ವರೂಪನಾಗಿದ್ದಾನೆ. ಅವನ ಶಾಸನ ಕಾಲದಲ್ಲಿ ಕೆಲಸಗಾರರಿಗೆ ಜೀವನದ ಯಾವ ಸುಖವೂ ಲಭಿಸಿರುವುದಿಲ್ಲ. ಅವರು ಕೆಲಸ ಮಾಡಬೇಕಾದ ಸಮಯ, ಅವರಿಗೆ ದೊರೆಯಬೇಕಾದ ಮಜೂರಿ ಮೊದಲಾದುವುಗಳ ಕುರಿತು ಯಾವ ನೇಮ ನಿಬಂಧನೆಗಳೂ ಇರುವುದಿಲ್ಲ. ಕೆಲಸಗಾರರ ಸಂಘಗಳೆಲ್ಲ ಈಗ ನಿರ್ನಾಮವಾಗಿವೆ. ಕೆಲಸಗಾರರ ಮುಖಂಡರೆಲ್ಲ ಸೆರೆಯಲ್ಲಿದ್ದಾರೆ. ಕೆಲಸಗಾರರಿಂದ [illegible] ಸ್ವೇಚ್ಛೆಯಿಂದ ಕೆಲಸತೆಗೆದುಕೊಳ್ಳುತ್ತಾರೆ. ಪ್ರಾಚೀನ ಕಾಲದ ಗುಲಾಮರಿಗೂ ಈಗಿನ ಜರ್ಮನಿಯ ಕೆಲಸಗಾರರಿಗೂ ಹಕ್ಕು ಅಧಿಕಾರಗಳ ವಿಷಯದಲ್ಲಿ ಯಾವ ಅಂತರವೂ ಇರುವುದಿಲ್ಲ. ಅವರ ಈ ಅವಸ್ಥೆಗೆ ಹಿಟ್ಲರನೇ ಕಾರಣನಾಗಿದ್ದಾನೆ.

ಹಿಟ್ಲರನಿಗೆ ವ್ಯಕ್ತಿತ್ವವಿಲ್ಲ

ಹಿಟ್ಲರನ ಕಾಲದ ಜರ್ಮನಿಯು [illegible] ಹಾಗಾಯಿತು. ಮತ್ತೆ ಅವನು ಸ್ವತಃ [illegible] ಸ್ವತಂತ್ರ ವ್ಯಕ್ತಿಯಾಗಿದ್ದಾನೆಯೆ? ಅದೂ ಇಲ್ಲ. [illegible] ಅವನ ನಾಜಿ ಪಂಗಡಿಗರ [illegible] ಸಿದ್ಧಾಂತ [illegible] ವಿಚಾರ [illegible] ಕಾರ್ಯಕ್ರಮಗಳೆಲ್ಲ [illegible] ತೆಗೆದುಕೊಂಡ [illegible] ವುಗಳಾಗಿವೆ. ಅವನು ಜರ್ಮನಿಗೆ ತನ್ನ ಸ್ವಂತದ್ದು ಕೊಟ್ಟಿರುವುದು ಏನೂ ಇರುವುದಿಲ್ಲ. ಎಲ್ಲಾ ಇಟಾಲಿಯನ ಮುಸಲೋನಿಯ ಅನುಕರಣೆಯಾಗಿರುವವು. ಯಾವುದನ್ನು ಯಾವ ಕಾರ್ಯವನ್ನು ಹಿಟ್ಲರನು ಜರ್ಮನಿಯಲ್ಲಿ ಮಾಡಿತೋರಿಸಿ, ಅದನ್ನು ತಾನೇ ಮಾಡಿದ್ದು ಎಂದು ಹೇಳುತ್ತಾನೋ ಅದನ್ನು ಅದಕ್ಕೆ ಕೆಲವು ವರ್ಷಗಳ ಮೊದಲು ಇಟಾಲೀನ ಮುಸಲೋನಿಯು ಆರಂಭಿಸಿದ್ದನು. ಅವರು ಆರಂಭಿಸಿದ ಅನಂತರವೇ ಅವೇ ಕಾರ್ಯಗಳನ್ನು ಇವನು ಸ್ವಲ್ಪ ಹೆಚ್ಚುಕಡಿಮೆ ಮಾಡಿ, ಅವಕ್ಕೆ ತನ್ನ ರೂಪು ಒಪ್ಪುಕೊಟ್ಟು ತನ ಕಾರ್ಯಗಳೆಂದು ಜರ್ಮನಿಯಲ್ಲಿ ಆರಂಭಿಸಿರುವನು.

ಹಿಟ್ಲರನ ವಿಶೇಷತೆ.

ಇತರರ ಸೊತ್ತನ್ನು ತಮ್ಮದೆಂಬಂತೆ ಪ್ರಪಂಚಕ್ಕೆ ತೋರಿಸಿ ಮೋಸಮಾಡುವುದರಲ್ಲಿ ಹಿಟ್ಲರನು ಅತ್ಯಂತ ಪ್ರವೀಣನಾಗಿರುವನು. ಈ ಕಲೆಯಲ್ಲಿ ಅವನಷ್ಟು ಸಮರ್ಥರು ಮತ್ತಾರೂ ಇರುವುದಿಲ್ಲ. ಅವನು ಜಗತ್ತಿಗೆ ಕೊಟ್ಟಿರುವ ಏನಾದರೂ ವಿಶೇಷವಿದ್ದರೆ, ಯಹೂದಿಗಳ ಮೇಲೆ ಆತನು ನಡೆಸಿರುವ ಅತ್ಯಾಚಾರವಷ್ಟೇ ಆಗಿರುವುದು. ಈ ಅತ್ಯಾಚಾರದಲ್ಲಿ ಅವನು ಪ್ರಪಂಚವನ್ನೇ ದಂಗುಗೊಳಿಸಿದ್ದಾನೆ. ಆದರೆ ಈ ಅತ್ಯಾಚಾರಕ್ಕೂ ಬೇಕಾದ ಪ್ರೇರಣೆಯು ಅವನಿಗೆ ರಷ್ಯದ ಇತಿಹಾಸದಿಂದ ದೊರೆಯಿತು ಎಂದು ಚರಿತ್ರಕಾರರು ಹೇಳುವರು.

ದೊಡ್ಡಸ್ತಿಕೆಯ ಕಾರಣ.

ಹಿಟ್ಲರನು ಸ್ವಂತದ್ದಾಗಿ ಜಗತ್ತಿಗೆ ಕೊಡುವಂಥಾದ್ದು ಏನು ಇರುವುದಿಲ್ಲವಾದರೆ ಅವನು ಜರ್ಮನಿಯ ಸರ್ವಾಧಿಕಾರಪಟ್ಟಕ್ಕೆ ಬಂದುದು ಹೇಗೆ ಎಂಬ ಸಂದೇಹವಾಗುವುದು. ಅದಕ್ಕೆ ದೊಡ್ಡ ಕಾರಣವೇನೂ ಇರುವುದಿಲ್ಲ. ರಷ್ಯದ ಸ್ಟಾಲೀನ, ಇಟಲಿಯ ಮುಸಲೋನಿಯರು ಸೂರ್ಯಚಂದ್ರರಂತೆ. ಅವರ ಮುಂದೆ ಜರ್ಮನಿಯ ಹಿಟ್ಲರನು ಮಿಣುಕುಹುಳದಂತೆ ಇರುವನು. ಇಟಲಿಗಿಂತ ಜರ್ಮನಿಯು ವಿಶಾಲವಾಗಿದೆ, ಬಲಿಷ್ಠವಾಗಿದೆ, ರಷ್ಯಕ್ಕೆ ಸಾಮ್ರಾಜ್ಯತೃಷ್ಣೆ ಇಲ್ಲ, ಆದರೆ ಜರ್ಮನಿಗೆ ಅದು ಬಹಳ ಇದೆ. ಜರ್ಮನಿಯ ವೈಶಾಲ್ಯವೂ ಬಲಿಷ್ಠ ಸಾಮ್ರಾಜ್ಯತೃಷ್ಣೆಯೂ ಹಿಟ್ಲರನಿಗೆ ಅಪರಿಮಿತ ಶಕ್ತಿ ಸಾಮರ್ಥ್ಯಗಳನ್ನು ತಂದುಕೊಟ್ಟವು. ಹಿಟ್ಲರನು ಯಾರಿಂದ ಪ್ರೇರಿತನಾದನೋ, ಯಾರಿಂದ ಪ್ರಭಾವಿತನಾದನೋ ಆ ಸ್ಟಾಲೀನ ಮುಸಲೋನಿಯರಿಗಿಂತಲೂ ಅವನ ಹೆಚ್ಚಿನವನೆನ್ನಿಸಿಕೊಂಡನು. ಆದರೆ ನೋಡಿದವು ಮೋಡವೇ, ಸೂರ್ಯಚಂದ್ರರು ಸೂರ್ಯಚಂದ್ರರೇ! ಸೂರ್ಯಚಂದ್ರರ ಸ್ಥಾನಮಾನಗಳು ಮೋಡಕ್ಕೆ ಎಲ್ಲಿಂದ ಬಂದಾವು!

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಚಾಕು ತಗಲುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಚಿಕ್ಕ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ)ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಶ್ರೀ

ಮಹಾಶಿವರಾತ್ರಿ ಪೂಜಾ ಮಹೋತ್ಸವದ ಸಲುವಾಗಿ

ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೋಸ್ಕರ

ಅತ್ಯಪೂರ್ವ ಸಂದರ್ಭ! **ಅಪೂರ್ವ ರಿಯಾಯತಿ!!**

ತಾ **3-2-1939**ರಿಂದ **5-3-1939**ರ ವರೆಗೆ ಮಾತ್ರ

ಸೇಕಡಾ 33⅓% ರಿಯಾಯತಿ ದರದಲ್ಲಿ ಧರ್ಮಸ್ಥಳ ಕ್ಷೇತ್ರ ಯಾತ್ರಾರ್ಥಿಗಳಿಗೆ ಮಾತ್ರ ರಿಟರ್ನ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

ಇದೇ ಬರುವ ತಾರೀಕು 17 2 1939ರಲ್ಲು ಶ್ರೀ ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥೇಶ್ವರ ದೇವರ ಸನ್ನಿಧಿಯಲ್ಲಿ ಜರಗುವ ಶ್ರೀ ಮಹಾಶಿವರಾತ್ರಿ ಮಹೋತ್ಸವಕ್ಕೆ ಬಂದು ಹೋಗತಕ್ಕ ಯಾವತ್ತು ಯಾತ್ರಾರ್ಥಿಗಳಿಗೆ ನಮ್ಮ ಲ್ಯಾನುಗಳ ಯಾವತ್ತು ಸ್ಟೇಷನುಗಳಿಂದ ಧರ್ಮಸ್ಥಳಕ್ಕೆ ಹೋಗತಕ್ಕ ಯಾತ್ರಾರ್ಥಿಗಳಿಗೆ ಮಾತ್ರ ಸೇಕಡಾ 33⅓% ರಿಯಾಯತಿಯಿಂದ ರಿಟರ್ನ ಟಿಕೇಟುಗಳನ್ನು ಕೊಡುವಂತೆ ಏರ್ಪಾಡನ್ನು ಮಾಡಿರುವೆವು

N B ಪ್ರಯಾಣವು ಮೇಲೆ ಸೂಚಿಸಿದ ಮುದ್ದತಿಯೊಳಗೆ ಮುಗಿಯತಕ್ಕದಾಗಿದೆ

ಇಂತಹ ಅತ್ಯಪೂರ್ವ ಸಂದರ್ಭವನ್ನು ಕಳಕೊಳ್ಳದಿರಿ

JOINT MANAGERS.

The Combined Booking Agency, MANGALORE. **The Joint Booking Office,** KODIALBAIL.

THE

Bank of Mangalore Ltd.,

MANGALORE

ESTD 1931

Branches-

Panemangalore Mudabidri & Padubidri.

Fixed Deposits will be received at following rates of interest

For 3 months		3½%
6 „		4%
12 „		5%
24	& upwards	6½%

Interest Payable Quarterly

Saving Bank deposit 3½% on daily balances.

All kinds of banking business transacted

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್.

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ.

ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store,
28 Meachua Bazar St, CALCUTTA.

ಅತ್ಯುತ್ತಮ ಹೇರ್ ಆಯಿಲ್ ಎಲ್ಲಾ ಜನರ ಮನಸ್ಸನ್ನು ಸೆಳೆಯುವುದು!

ದಿಲ್‌ಕುಷ್ ಹೇರ್ ಆಯಿಲ್

ಪುರಾತನ ರೀತಿಯ ಕೇಶವನ್ನು ಪೋಷಿಸುವದಕ್ಕೆ ಅನುಕೂಲವಾಗಿ ಆಹ್ಲಾದಕರವಾದ ಸುಗಂಧವಿದೆ ಇದರಿಂದ ಕೂದಲು ದಪ್ಪವಾಗಿ ಬೆಳೆಯುವುದು, ಉದುರುವ ಕಾಯಿಲೆ ತಡೆಗಟ್ಟುವುದು ನಿದ್ರೆಗೆ ಉಪಯುಕ್ತವಾಗಿದೆ

ಸ್ಪೆಷಲ್ 8 ಔನ್ಸು ಸೀಸೆಗೆ 0—12—0

„ 12 „ „ 1 4-0

ರುಬಿ ಪೆಯಿನ್ ಬಾಮ್

ಇದು ಉಳುಕು, ಪೆಟ್ಟಿನ ಗಾಯ, ನೋವು ಶಕ್ತಿ ನಿವಾರಣೆಗೆ ಮೇಲಿನ ಬಾಮ್ ಡಬ್ಬಿಯೊಂದಕ್ಕೆ ಆ. 4

ಉಡುಪಿಯಲ್ಲಿ ಏಜೆಂಟರು ಬೇಕು

ಏಜೆಂಟ್ಸ್— **ಶಾ ಕಂಪೆನಿ, ಮಂಗಳೂರು.**

ಸ್ವಾಭಿಮಾನಿ

Established 1906 — Regd. No. M 34

ಸಂಪುಟ ೩೩] ತಾರೀಖು ೧೭-೨-೧೯೩೯ (17—2—1939) [ಸಂಚಿಕೆ

THE

Bombay Life Assurance Company, Ltd.,

(ESTD: 1908.)

Life Insurance creates certainty, security, stability, peace of mind and happiness to YOU and your family; and thus makes life worth living.

The entire fabric of this Institution is based on the rock of "Service first and service last" to the POLICY-HOLDERS, to the Community and the society at large.

Our Service and Experience of Twenty eight years are at your Disposal to plan your Insurance requirements.

Honest, Energetic and Influential persons will have great opportunity to help the cause of society and also to earn a permanent and decent remuneration.

Apply to, :— **Kochikar Brothers Limited,**
Madras Branch Secretaries,
The Bombay Life Assurance Co., Ltd.,
The Bombay Life Building,
Gandhinagar, UDIPI.

or any of our following offices.

Post Box No. 337, Mount Road, Madras.
Visweshwarapuram Circle, Bangalore City.
Charni Road, Girgaum, BOMBAY 4.
Car Street, Mangalore.
Pathiyara, Calicut.
Central Station Road, Trivandrum.
Ottapalam, S. Malabar.

MAKE LIFE WORTH-LIVING!

Indigestion – Insomnia – Dry Cough – Nervousness – Weak Heart &c.,
these make you wiery of Life!

CONSULT US AND BUY YOUR LIFE'S HAPPINESS!

Oils – that cool the brain and induce sleep.
Lehas – that build-up your wasted system.
Asavas = that regenerate your jaded neaves.

All Genuine Ayurvedic Preparations
from this huge Ayurvedic Concern of a Century Standing—

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು - ನರಗಳ ಅಟಲತೆ - ದುರ್ಬಲ ಹೃತ್ಕೋಶ - ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ—ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ — ತೈಲಗಳು
ಕೃಶವಾದ ಪ್ರಕೃತಿಯನ್ನು ಪುಷ್ಟವಾಗಿ ಮಾಡುವ — ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ — ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, — ದ. ಕನ್ನಡ
(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ವಿವಿಧ ವಿಷಯ

ಪ್ರಭುವಿನ ಔತಣಕ್ಕೆ ಮದ್ಯ ಬೇಕಾಗಿಲ್ಲ

ಕಲ್ಕತ್ತದಲ್ಲಿ ಬೆಪ್ಟಿಸ್ಟ ಚರ್ಚ್ ಮತ್ತು ವಿಶನಿನವರ ಸಮ್ಮಿಳಿತ ಸಭೆಯಲ್ಲಿ ಮದ್ಯ ನಿಷೇಧವನ್ನು ಪುಷ್ಟೀಕರಿಸುವ ಹಲವು ಠರಾವುಗಳಾಗಿವೆ.

ಹಲವು ಕಾಂಗ್ರೆಸ್ ಪ್ರಾಂತೀಯ ಸರಕಾರಗಳು ಜಾರಿಗೆ ತಂದಿರುವ ಮದ್ಯನಿಷೇಧ ಕಾನೂನನ್ನು ಅನುಮೋದಿಸಿ ಆ ಸಭೆಯು ತಮ್ಮ ಜಾತೀಯ ಹಬ್ಬಗಳಿಗಾಗಿ ಸರಕಾರದವರು ಮದ್ಯ ಕೊಳ್ಳಲು ಅನುಕೂಲತೆಗಳನ್ನು ಏರ್ಪಡಿಸಬೇಕೆಂದಿಲ್ಲ. ಇನ್ನುಮುಂದೆ ಅಖಿಲ ಕ್ರೈಸ್ತರು ಹೋಲಿ ಕಮ್ಯೂನಿಯನ್ ನ ಪ್ರಭುವಿನ ಔತಣ ಸಮಾರಂಭವು ಅಮಲುಕರವಾದ ಮದ್ಯವಿಲ್ಲದೆ ನಡೆಸಬಹುದೆಂದು ಸೂಚಿಸಿದೆ.

ಹಿಂದೀಯ ಕ್ರೈಸ್ತರು ಹೀಗೆ ಅಮಲು ಸೇವನೆಯನ್ನು ನಿಷೇಧಿಸಿ ಅಖಿಲ ಕ್ರೈಸ್ತ ಧರ್ಮವನ್ನುದ್ದೀಪನಗೊಳಿಸುವಂತಾಗುವುದು ಸಂತೋಷಕರ.

ಉಪಾಧ್ಯಾಯರೂ ಮದ್ಯಪಾನವನ್ನು ಬಿಟ್ಟುಬಿಡಬೇಕು

ಹೀಗೆಂದು ಸೂರತ್ ಜಿಲ್ಲೆಯ ಶಾಲಾ ಸಮಿತಿಯವರು ಒಂದು ಠರಾವನ್ನು ಮಂಜೂರು ಮಾಡಿರುವರು. ಈ ಸಂಸ್ಥೆಯು ತಮ್ಮ ಅಧೀನದಲ್ಲಿರುವ ಎಲ್ಲ ಉಪಾಧ್ಯಾಯರೂ ಮದ್ಯಪಾನವನ್ನು ಬಿಟ್ಟುಬಿಡಬೇಕೆಂದು ಎಚ್ಚರಿಸಿರುವರು.

ಈ ಸಂಸ್ಥೆಯ ಕೈಕೆಳಗಿರುವ ಹಲವು ಉಪಾಧ್ಯಾಯರು ಮದ್ಯಪಾನಕ್ಕೆ ಬಲಿಬಿದ್ದಿರುವರಂತೆ. ಮದ್ಯಪಾಯಿಗಳಾದ ಉಪಾಧ್ಯಾಯರಿಗೆ ಭಾವೀ ಜನಾಂಗದ ಶಿಕ್ಷಣ ಕಾರ್ಯಭಾರವನ್ನು ಸಹಿಸಿಕೊಡುವುದು ಅಪಾಯಕರವೆಂದು ಸಂಸ್ಥೆಯ ಭಾವನೆ.

ಸರಿ ಮದ್ಯಪಾನದಿಂದ ಒಂದೆಡೆ ಕಡಿಮೆ ಸಂಬಳದ ಉಪಾಧ್ಯಾಯನ ಮನೆವಾರ್ತೆಯ ಸುಖಕ್ಕೆ ಬಹಳ ತೊಂದರೆ. ಇನ್ನೊಂದೆಡೆಯಿಂದ ಅವನ ಆರೋಗ್ಯವೇ ಕೆಟ್ಟು ಕರ್ತವ್ಯದಲ್ಲಿ ಅಸಡ್ಡೆ, ಮುಂತಾದ ವಿಷ್ಮ ವಿಚಾರಗಳು ತಲೆದೋರಲು ಕಾರಣವಿದೆ.

ಕಳ್ಳಾಟಿಕೆಯಲ್ಲ, ಚಾರಿತ್ರಿಕ ಸೇಡಿಗಾಗಿ

ಲುಧಿಯಾನ ಜಿಲ್ಲೆಯ ಕೊಟ್ಲಕಲನ್ ಎಂಬಲ್ಲಿ ನಡೆದ ಒಂದು ವಿಚಿತ್ರ ಢಕಾಯಿತಿಯ ಕಥೆಯಿದು.

ಒಂದು ದಿನ ಸೂರ್ಯಾಸ್ತವಾದೊಡನೆಯೇ ಶಸ್ತ್ರಧಾರಿಗಳಾದ ಐದು ಮಂದಿ ಢಕಾಯಿತರು ರಾಮಲಾಲ್ ಎಂಬ ಒಬ್ಬ ಧನಿಕ ಬ್ರಾಹ್ಮಣನ ಮನೆಗೆ ಮುತ್ತಿಗೆ ಹಾಕಿದರು. ಒಬ್ಬ ಢಕಾಯಿತನು ಮುಖ್ಯ ದ್ವಾರದಲ್ಲಿ ನಿಂತನು. ಇನ್ನೊಬ್ಬನು ಮನೆಯ ಮಾಡಿಗೇರಿ ಒಂದು ಗುಂಡನ್ನು ಹಾರಿಸಿದನು. ಗುಂಡಿನ ಶಬ್ದ ಕೇಳಿದೊಡನೆಯೆ ನೆರೆಹೊರೆಯವರೆಲ್ಲರೂ ಅಲ್ಲಿಗೆ ಬಂದರು. ಆಗ ಮಾಡಿನ ಮೇಲೆ ನಿಂತ ಢಕಾಯಿತನು 'ಗೆಳೆಯರೇ, ನಾವು ಕಳ್ಳಾಟಿಕೆಗಾಗಿ ಇಲ್ಲಿ ಬಂದಿಲ್ಲ. ಈ ಬ್ರಾಹ್ಮಣನು ನಮ್ಮ ಸಿಕ್ ಗುರು ಗೋವಿಂದರ ನಾಲ್ವರೂ ಮಕ್ಕಳನ್ನು ವಧಿಸಿದ ಹಸನ್ ಗಂಗುವಿನ ವಂಶಸ್ಥನು. ಆದುದರಿಂದ ನಾವು ಆ ಸೇಡನ್ನು ತೀರಿಸಲು ಈಗ ಈತನನ್ನು ಸುಲಿಗೆಮಾಡಲು ಬಂದಿರುವೆವು' ಎಂದು ಭಾಷಣಮಾಡುತ್ತಾ ಪಂಜಾಬಿ ಜನಪದವೊಂದನ್ನು ರಾಗದಿಂದ ಹಾಡಲಾರಂಭಿಸಿದನು. ಅಷ್ಟರಲ್ಲಿ ಉಳಿದ ನಾಲ್ಕು ಮಂದಿ ಢಕಾಯಿತರು ಆ ಬ್ರಾಹ್ಮಣನ ಇದ್ದಬದ್ದುಗಳನ್ನೆಲ್ಲಾ ಗಂಟುಮೂಟೆ ಕಟ್ಟಿಕೊಂಡು ನಡೆದೇ ಬಿಟ್ಟರು.

ಈಗ ಪೋಲೀಸರ ತನಿಖೆ ನಡೆಯುತ್ತಿದೆ. ಕಳ್ಳಾಟಿಕೆಗೆ ಚಾರಿತ್ರಿಕ ಬಲವನ್ನು ಸಂಯೋಗಿಸ ಬರುತ್ತದಲ್ಲವೇ?

ಚೀನದ ಗೊರಿಲ್ಲಾಯೋಧರ ತಂತ್ರ

ಜಪಾನರು ತಾವು ಚೀನದಲ್ಲಿ ಗೆದ್ದ ಪ್ರದೇಶಗಳಲ್ಲಿ ಚೀನಿಯ ಸೈನಿಕರನ್ನು ತರಬೇತುಗೊಳಿಸಿ ಚೀನಿಯ ಮಹಾಜನರನ್ನೇ ಕಾದಾಡಲು ಮಾಡ ಸಂತೆಯೇ ಚೀನದ ಗೊರಿಲ್ಲಾಯೋಧರು ತಾವು ಸೆರೆಹಿಡಿದಿರುವ ಜಪಾನು ಸಿಪಾಯರನ್ನು ಬಹಳ ಪ್ರೇಮದಿಂದ ಲಾಲಿಸಿ ಪಾಲಿಸಿ ತಮ್ಮ ಪಕ್ಷ ವಹಿಸಿ ಜಪಾನಿಯರನ್ನು ಕಾದಾಡುವಂತೆ ಮಾಡುತ್ತಿರುವರು. ಇಂತಹ ಜಪಾನು ಸೈನಿಕರು ನರಳುತ್ತಿರುವ ಚೀನಿ ಸೈನಿಕರಿಗೆ ವೈದ್ಯಕೀಯ ಸಹಾಯ ಶುಶ್ರೂಷೆಗಳನ್ನು ಮನಃಪೂರ್ವಕವಾಗಿ ಮಾಡುತ್ತಿರುವರು. ಪ್ರೆಂಗಿನಲ್ಲೇ ಸುಮಾರು ೩೦೦ ಜಪಾನು ಸೈನಿಕರು ಈಗ ಚೀನಿಯರ ಪಕ್ಷವಾಗಿ ಹೋರಾಡುತ್ತಿರುವರು. ಇವರೀಗ ಚೀನಿಯ ಹಳ್ಳಿಪಳ್ಳಿಗಳ ಭೋಳೇ ನಿವಾಸಿಗಳಿಂದಲೂ ಬಹಳವಾಗಿ ಪ್ರಶಂಸಿಸಲ್ಪಡುತ್ತಿರುವರು. ಗೊರಿಲ್ಲಾ ಸೈನ್ಯದ ಮುಂದಾಳುಗಳು ಶೀಘ್ರದಲ್ಲೇ ಇಂತಹ ೧೧,೦೦೦ ಜಪಾನು ಸೈನಿಕರನ್ನು ತಮ್ಮ ಪಕ್ಷಕ್ಕೆ ಒಲಿಸಿಕೊಳ್ಳುವ ಭರವಸೆಯುಳ್ಳವರಾಗಿರುವರು.

ಜರ್ಮನ್ ಕನ್ಯೆಯರ ವರ ಬೇಟೆ

ಇತ್ತೀಚೆಗೆ ಜರ್ಮನಿನ ಕನ್ಯೆಯರೆಲ್ಲರೂ ವಿವಾಹೇಚ್ಛೆಯಿಂದ ಉದ್ವಿಗ್ನರಾಗಿ ವರಬೇಟೆಯನ್ನಾರಂಭಿಸಿರುವರು. ಈ ವರ್ಷ ಮ್ಯೂನಿಕ್ ಪ್ರಾಂತ್ಯವೊಂದರಲ್ಲೇ ಪ್ರತಿಯೊಬ್ಬ ಬ್ರಹ್ಮಚಾರಿಯೂ ಮೂರಕ್ಕಿಂತ ಕಡಿಮೆಯಿಲ್ಲದ ಕನ್ಯೆಯರ ಪಾಣಿಗ್ರಹಣಕ್ಕೆ ಆಮಂತ್ರಿಸಲ್ಪಟ್ಟಿರುವನಂತೆ.

ಇದಕ್ಕೆ ಕಾರಣವೇನೆಂದರೆ ಜರ್ಮನಿಯಲ್ಲಿ ಕನ್ಯೆಯರಿಗಿರುವ ಕಡ್ಡಾಯವಾದ ಕಾಯಕಷ್ಟವು. ಅಲ್ಲಿ ವಿವಾಹಿತ ಸ್ತ್ರೀಯರಿಗೆ ಮಾತ್ರ ಕೆಲವು ಸೌಲಭ್ಯಗಳಿವೆ. ಆದರೆ ಅವಿವಾಹಿತ ತರುಣಿಯರ ಬಾಳು ಗೋಳಾಗಿ ಪರಿಣಮಿಸುವಂತಿದೆ. ಅವರು ತಮ್ಮ ಹೆತ್ತವರನ್ನು ತ್ಯಜಿಸಿ ಹಲವು ವೇಳೆ ದೂರದಲ್ಲಿರುವ ಕೃಷಿಕ್ಷೇತ್ರಗಳಲ್ಲಿಯೋ ಕಾರ್ಖಾನೆಗಳಲ್ಲಿಯೋ ಸೇವೆಸಲ್ಲಿಸದಿರಬೇಕಾಗಿ ನಿಬಂಧನೆಗಳಾಗಿವೆ. ಹಿಟ್ಲರನ ಈ ನಿಬಂಧನೆಗಳಿಂದಾಗಿ ನೂರಾರು ತರುಣಿಯರು ಸುಖದ ಬಾಳಿನ ಆಸೆಗಾಗಿ ಹಿಂದೆ ಮುಂದು ನೋಡದೆ ನೈಜಪ್ರೇಮ ಪ್ರೇರಿತರಾಗದೆ "ಆಪತ್ತಿಗಾದವನೇ ಪತಿ" ಎಂಬಂತೆ ವಿವಾಹಗಳನ್ನು ಮಾಡಿಕೊಂಡು ಈ ನಿಬಂಧನೆಯ ಬಂಧನಗಳಿಂದ ಪಾರಾಗಬೇಕಾಗಿದೆ.

ವಿಯಾನ್ನದಲ್ಲೇ ಇಂತಹ "ಆಪತ್ತಿಗಾದವನೇ ಪತಿ" ಎಂಬ ಸಿದ್ಧಾಂತದ ವಿವಾಹಗಳು ಈ ವರ್ಷವೊಂದರಲ್ಲೇ ಮುಮ್ಮಡಿಯಾಗಿ ಹಿಟ್ಲರಾಭಿಲಾಷೆಯ ಮಕ್ಕಳು ಮರಿಗಳು ಜರ್ಮನಿಗೆ ಬಂದು ಸೇರಲಾರಂಭಿಸಿವೆ. ಕೆಲ ತರುಣಿಯರ ಬಾಳಂತೂ ಗೋಳೇ ಆಗಿ ಪರಿಣಮಿಸಿಯದೆ. 'ನಾಜಿ ರಾಜ್ಯ ಸ್ಥಾಪನಾಕಾರ್ಯಕಲಾಪಗಳಿಂದ ಕೆಲವರ ಪತಿಯರಿಗೆ ನಿತ್ಯ ವೈಧವ್ಯ ವ್ರತವನ್ನಾಚರಿಸಬೇಕಾಗಿದೆ.

ವರ್ಣದ್ವೇಷ ಸಾಧನೆಗಾಗಿ ಸವರ್ಣೀಯರ ತ್ಯಾಜ್ಯ

ಲೋರ್ಡ್ ಹಸ್ಟಿ ಪಿಟ್‌ರಾಲ್ಡರ ಪುತ್ರನಾದ ಕೆಪ್ಟನ್ ದಿ' ಮಾಟ್ ಪಿಟ್‌ರಾಲ್ಡರು ಹರಿಜನರ ಉದ್ಧಾರದಲ್ಲೇ ತಲ್ಲೀನರಾಗಿ ಕೆನಿಯದಲ್ಲಿ ವಾಸಿಸುತ್ತಿದ್ದರು. ಇವರು ತಮ್ಮ ಧವಳ ಬಂಧುಗಳ ಸಂಪರ್ಕವನ್ನೇ ತ್ಯಜಿಸಿ ಕರಿಬಂಧುಗಳೆಡೆಯಲ್ಲೇ ವಾಸಿಸಿದ್ದರು. ಇವರು ಆಫ್ರಿಕದವರೊಡನೆಯೂ ಹಿಂದೀಯರೊಡನೆಯೂ ಸ್ನೇಹಸಂಬಂಧಗಳನ್ನು ಬೆಳೆಸಿಕೊಂಡಿದ್ದರು. ಅಗಾಗ್ಗೆ ಕರಿಯರ ಉತ್ಕರ್ಷಕ್ಕಾಗಿ ಹಲಕೆಲವು ಲೇಖಗಳನ್ನು ಬರೆದು ಪ್ರಮುಖ ಪತ್ರಿಕೆಗಳ ಮೂಲಕ ಅವರ ಹಿತಸಾಧನೆಮಾಡುತ್ತಿದ್ದರು. ಈ ವರ್ಷ ದುರ್ದೈವ ವಶಾತ್ ಇವರು ಪರಂಧಾಮವನ್ನೈದಿದರು. ಕರಿಬಂಧುಗಳ ಏಳಿಗೆಯನ್ನು ನೋಡಲು ಸಹಿಸಲಾರದೆ ಇವರ ಬಿಳಿ ಬಂಧುಗಳು ಇವರ ಅಂತಿಮಕ್ರಿಯೆಗಳಲ್ಲೂ ಭಾಗವಹಿಸಲಿಲ್ಲ. ವರ್ಣದ್ವೇಷವು ಇಷ್ಟು ಪ್ರಬಲ ಬಲವುಳ್ಳದಲ್ಲವೇ?

ರಕ್ಷ್ಯವರ್ಗಹಾರ್ಯಸ್ತುಕುರ್ಯಾನ
ದೇವಾ । ನ ಭೇಜಿರೇ ಭೀಮ
ವಿಕ್ರಮ ಭೀತಿಮ್ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ।

ಸ್ವದೇಶಾಭಿಮಾನಿ
SWADESHABHIMANI
ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

ದೊರೆಯಲನುವದು ರತ್ನಗಳು
ಸಾ । ಗರನ ಮಥಿಸಲು ಸುರರ
ಗದರಿಂ । ಹದುಮವಾಯಿತೆ! ಮತೆ
ವಿಷವ ಸುಡುವ ಬರುತಿರುವ ॥
ಗರಳಕವರಂಜಿದರೆ! ಸುಧೆಯಾಸು
ವರೆಗು ಕ್ಷುದ್ರರಿ
ಕರದ ಕುಳಿತರೆ । ಕೆಳೆ ಬಲ್ಲರೆ
ಕೈಕೊಂಡ ಧೀರರು
ನಿಶ್ಚಿತಾರ್ಥವನು ॥

ತಾರೀಕು ೨೪—೨—೧೯೩೯ | ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 24—2—1939

ಸ್ಫುಟತರಂಗ!

ಸ್ಪೈನಿನ ಪರಿಸ್ಥಿತಿ

ಸ್ಪೈನಿನ ಕಲಹವು ಇನ್ನು ಸ್ವಲ್ಪ ಸಮಯದಲ್ಲೇ ಕೊನೆಗೊಳ್ಳಬಹುದು ಮಿತ್ರರ ವಿಶ್ವಾಸಘಾತ, ಶತ್ರುಗಳ ಆಘಾತಗಳಿಂದಾಗಿ ಸರಕಾರದ ಬೆನ್ನೆಲುಬೇ ಮುರಿದು ಹೋಯಿತು ಸರಕಾರದ ಪಾಲಿಗೆ ಮೇಲೆ ಮೇಲೆ ಸೋಲೇ ಬಂತು. ಪ್ರಕೃತ ಮೆಡ್ರಿಡಿನಲ್ಲಿ ಭಯಂಕರ ಸಂಗ್ರಾಮವು ನಡೆಯುತ್ತಿದೆ ವೀರ ಸೇನಾನಾಯಕರಾದ ಜನರಲ್ ಮಯಾಜರು ಪುನಃ ಮೆಡ್ರಿಡನ್ನು ಸಂರಕ್ಷಿಸುವಭಾರವನ್ನು ವಹಿಸಿದವರು

ಆದರೂ ಸ್ಪೈನಿನ ಭವಿಷ್ಯವು ನಿಶ್ಚಯವಾದಂತೆಯೇ ಸರಿ ಸರಕಾರದವರು ಶರಣ್ಯರು ಪಟ್ಟರೂ ಜನರಿಗೆ ಕಷ್ಟತನುವಾದ ದಾಸ್ಯಜೀವನವೇ ಇನ್ನು ಗತಿಯಾಯಿತು ಆಧುನಿಕ ನಾಗರಿಕತೆಯ ಫಲವೇ ಇದು."

ಪ್ರಜಾಪ್ರಭುತ್ವಗಳ ಅಭಿನಯ

ಪ್ರಜಾಪ್ರಭುತ್ವ ರಾಷ್ಟ್ರಗಳು ಇನ್ನು ಸ್ವಲ್ಪ ಸಮಯದಲ್ಲಿ ಫ್ರಾಂಕೋಸರಕಾರವನ್ನು ಒಪ್ಪಿಕೊಳ್ಳಬಹುದು. ಬ್ರಿಟನ್ ಮತ್ತು ಫ್ರಾನ್ಸು ಫ್ರಾಂಕೋರವರ ಅಧಿಕಾರವನ್ನು ಒಪ್ಪಿಕೊಳ್ಳುವ ಆಲೋಚನೆಯನ್ನು ಮಾಡುತ್ತಿರುವರೆಂದು ಊಹಿಸಲಾಗಿದೆ ಪರಂತು ಇದೇನು ಹೊಸತಲ್ಲ ಪ್ರಜಾಪ್ರಭುತ್ವ ರಾಷ್ಟ್ರಗಳ ಹೇಡಿತನದ ಪರಮಾವಧಿ ಎಂದು ತಪ್ಪಿಂದ ಇದನ್ನು ಪ್ರಯುಕ್ತವೆನ್ನು ತಾವು ಮಾಡಿರುವೆವೆಂದು ಹೇಳಲು ಮೀರಾದಷ್ಟು 'ನಾಟಕಾಭಿನಯ'ವನ್ನು ಅವು ಮಾಡಿರುವವು ಫ್ರಾಂಕೋರವರು ಕ್ರೂರ ಶಾಸನಗಳನ್ನು ಎಸಗಿ ಜನರನ್ನು ತೊಂದರೆಗೀಡು ಮಾಡಿದರೂ ಅವರ ಸರಕಾರವನ್ನು ತಾವು ಒಪ್ಪವು. ಮೀರಿದರೆ ಗುರುತಿಸುವುದುತ್ತವೆಂಬ ಘೋಷಣೆಯನ್ನು ಪ್ರಜಾಪ್ರಭುತ್ವ ರಾಷ್ಟ್ರಗಳು ಈಗಾಗಲೇ ಮಾಡಿಕೊಂಡಿರುವುವು ಪ್ರಜಾಪ್ರಭುತ್ವರಾಷ್ಟ್ರಗಳು ನಿಜವಾಗಿಯೂ ಭೀತಿಯುಳ್ಳವುಗಳು!

ಜರ್ಮನಿಯ ದರ್ಪ

ಆದ್ದರಿಂದ ಪ್ರಜಾಪ್ರಭುತ್ವರಾಷ್ಟ್ರಗಳು ಈ ಬಗೆಯ ಭೀತಿಯ ಪ್ರದರ್ಶನವನ್ನು ಮಾಡಕೂಡದೆಂದು ಜರ್ಮನಿಯು ಗದರಿಸತೊಡಗಿದೆ ತನ್ನ ತನ್ನ ಕೆಲಸವನ್ನು ನೋಡಿಕೊಳ್ಳುವಂತೆ ಆಗಾಗ್ಗೆ ಅದು ಪ್ರಜಾಪ್ರಭುತ್ವ ರಾಷ್ಟ್ರಗಳನ್ನು ಗದರಿಸುತ್ತಿರುವುದಲ್ಲದೆ, ಸರ್ವಾಧಿಕಾರಿಗಳ ಕಾರ್ಯಕ್ರಮಗಳಿಗೆ ಯಾರು ಅಡ್ಡಬಂದರೂ ಅವರನ್ನು ತಾವು ಬಿಡುವಂತಿಲ್ಲವೆಂದು ಆರ್ಭಟಿಸುತ್ತಿರುವುದು.

ಸರ್ವಾಧಿಕಾರಿ ರಾಷ್ಟ್ರಗಳನ್ನು ಸಂತುಷ್ಟಿಗೊಳಿಸಲು ಇವು ಎಷ್ಟೆಷ್ಟು ಪ್ರಯತ್ನಪಡುತ್ತಿರುವವೋ, ಅಷ್ಟಷ್ಟು ತುಚ್ಛೀಕಾರದಿಂದ ಅವನ್ನವು ಬರೆಯುತ್ತಿರುವುವು. ಫ್ರಾನ್ಸು ನಿರಾಶೆಯಿಂದ ತಾವು ಬೇಗನೆ ಇಟಲಿಯ ಬಲುಮೆಯನ್ನು ನಶಿಯಲಿರುವೆನೆಂದು ಹೇಳುತ್ತಿದ್ದರೂ, ತನ್ನ ಪ್ರಯತ್ನಗಳಲ್ಲದು ಎಂದೂ ಜಯಶೀಲವಾಗಲಿಕ್ಕಿಲ್ಲವೆಂದು ದೃಢವಾಗಿ ಹೇಳಬಹುದು

ಪೆಲೆಸ್ತ್ಯಾನಿನ ಗೊಂದಲ

ಪೆಲೆಸ್ತ್ಯಾನಿನ ಪ್ರತಿನಿಧಿಗಳು ಲಂಡನಿನಲ್ಲಿ ಮಿ. ಚೆಂಬರ್ಲೇನರೊಡನೆ ಮಾತುಕತೆಗಳನ್ನು ನಡೆಸುತ್ತಿರುವರು ಆದರೆ ಇವುಗಳಿಂದ ಯಾವ ತರದ ಸತ್ಫಲವೂ ಉತ್ಪನ್ನವಾಗಲಿಕ್ಕಿಲ್ಲವೆಂದು ಈಗಾಗಲೇ ಊಹಿಸಲವಕಾಶವಿದೆ ಬಾಲ್ಫರ್ ಒಪ್ಪಂದವನ್ನು ರದ್ದುಗೊಳಿಸಿ ತಮಗೆ ಪೆಲೆಸ್ತ್ಯಾನಲ್ಲಿ ಮೇಲ್ಮೆ ದೊರಕಬೇಕೆಂದು ಅರಬರು ವಾದಿಸುತ್ತಿರಲು, ಯೆಹೂದ್ಯರು ಈಗಿನ ಕೊರತೆಯೇ ಯಾವಾಗ ಅವರಿಗೊಂದು ಮಾತಾಕತನ್ನು ಒದಗಿಸಿಕೊಡುವುದು. ಅತ್ಯಗತ್ಯವಾಗಿರುತ್ತದೆ ಯೆಹೂದ್ಯರಿಗೆ ಮೇಲ್ಮೆ ದೊರಕದಂತೆ ಪ್ರಯತ್ನಿಸುತ್ತಿರಲು. ಅರಬರಿಗೆ ಹೆಚ್ಚಿನ ಅನುಕೂಲತೆಗಳೊದಗುತ್ತ ಯೆಹೂದ್ಯರು ಸಾಧಿಸುತ್ತಿರುವರ ಹಾಗೆ ಬಿಡುವ ಮಂಗಡದವರು ಒಂದು ಕಡೆಗೆ, ಇನ್ನೊಂದು ಪಂಗಡದವರು ಮತ್ತೊಂದು ಕಡೆಗೆ ಎಳೆಯುತ್ತಿರಲು ಅವರೊಳಗೆ ಒಪ್ಪಂದವಾಗುವುದಾದರೂ ಹೇಗೆ? ಇಂತಹ ಪರಿಸ್ಥಿತಿಯಲ್ಲಿ ಬ್ರಿಟಿಷ್ ರಾಜನೀತಿಜ್ಞರು ಯಾವ ಉಪಾಯವನ್ನು ಹೂಡುವರೋ ನೋಡಬೇಕು

ನೆಹರೂರವರ ಎಚ್ಚರಿಕೆ.

ಅಭಿಪ್ರಾಯ ಭೇದಗಳಿಂದ ಕೊಂಗ್ರೆಸಿನೊಳಗೆ ಒಡಕುಂಟಾಗುವ ಪರಿಸ್ಥಿತಿಯು ಒದಗಿದಾಗ, ಜನರನ್ನು ಎಚ್ಚರಿಸಿ, ಪುನಃ ಅವರೊಳಗೆ ಐಕ್ಯವನ್ನುಂಟುಮಾಡುವ ಕೆಲಸವನ್ನು ಪಂಡಿತ ಜವಾಹಿರಲಾಲರು ಎಷ್ಟೋ ಸಾರಿ ಮಾಡಿರುವರು ಈ ವರ್ಷದ ಅಧ್ಯಕ್ಷ ಚುನಾವಣೆಯ ವಾದವಿವಾದಗಳಿಂದಾಗಿ ಕೊಂಗ್ರೆಸಿನೊಳಗೆ ಒಡಕು ತಲೆದೋರುವಂತಾಗಿದೆ ಬಲಪಕ್ಷೀಯರು ಮತ್ತು ಎಡಪಕ್ಷೀಯರೆಂಬ ಭಾಗ ಎದ್ದು ವಿತಂಡವಾದದ ಪ್ರಸಂಗವು ಬಂದೊದಗಿರುವುದು.

ಕೊಂಗ್ರೆಸಿನೊಳಗೆ ಇಂತಹ ಪಕ್ಷಭೇದವನ್ನು ತಂದೊಡ್ಡುವುದು ಸರಿಯಲ್ಲವೆಂದು ಮಾತ್ರವಲ್ಲದೆ, ಪಕ್ಷದವರು ಇನ್ನೊಂದು ಪಕ್ಷದವರ ಸಹಕಾರವಿಲ್ಲದೆ ಕೊಂಗ್ರೆಸ್ ರಥವನ್ನು ಮುನ್ನಡೆಸಲಾರರೆಂದು ಹುಚ್ಚತನವೆಂದೂ ಅವರು ಎಚ್ಚರಿಸಿರುವರು

ಐಕ್ಯವಾಗಬೇಕು.

ತಮ್ಮದೊಂದು ಪ್ರತ್ಯೇಕ ಪಕ್ಷವಿಲ್ಲವೆಂದು 'ಎಡಪಕ್ಷೀಯ'ರೆನ್ನಿಸಿಕೊಳ್ಳುವವರು ಹೇಳುತ್ತಿದ್ದರೂ ಮೊದಲು ಪಕ್ಷದ ಮಾತನ್ನೆತ್ತಿದವರು ಅವರೇ. ಎಡಪಕ್ಷೀಯನು ಯಾರೊಬ್ಬನಾದರೂ ಅಧ್ಯಕ್ಷಸ್ಥಾನಕ್ಕೆ ಹುರಿಯಾಳಾಗಿ ನಿಂತಲ್ಲಿ ತಾನು ತನ್ನ ಉಮೇದ್ವಾರಿಕೆಯನ್ನು ಹಿಂದೆಗೆಯಲು ಸಿದ್ಧನಿರುವೆನೆಂದು ಶ್ರೀ ಬೋಸರು ಪ್ರಾರಂಭದಲ್ಲೇ ಹೇಳಲಿಲ್ಲವೆ? ಇದರಿಂದ ತನ್ನದೊಂದು ಪಕ್ಷವು ಬೇರೆ ಇದೆಯೆಂಬುದು ಸುಸ್ಪಷ್ಟವಲ್ಲವೆ? ಮಾತ್ರವಲ್ಲ, ತನ್ನ ಪಕ್ಷೀಯರ ಸಮ್ಮೇಳನವನ್ನು ಕಲ್ಕತ್ತೆಯಲ್ಲಿ ಒದಗಿಸುವುದರಿಂದ, ಎಡ ಪಕ್ಷೀಯರ ತಂಡವೊಂದು ಬೇರೆ ಇರುವುದೆಂಬ ವಿಷಯವನ್ನು ಶ್ರೀ ಬೋಸರೇ ಸ್ಪಷ್ಟಪಡಿಸಿದಂತಾಯಿತು

ಆದುದರಿಂದ ನೆಹರೂರವರ ಎಚ್ಚರಿಕೆಯ ಕರೆಯನ್ನು ಗಮನಿಸಿದವರು ತಮ್ಮ ಸನಾತನವನ್ನು ತಾವೇ ಅಗೆದುಕೊಂಡಂತೆ. ಬ್ರಿಟಿಷ್ ಸರಕಾರದವರೊಡನೆ ಹೋರಾಡುವ ಸಮಯ ನಮ್ಮ ಶಕ್ತಿ ಪಕ್ಷಭೇದದಿಂದ ಹಾಳಾಗಬಾರದು. ಆ ಸಂದರ್ಭದಲ್ಲಿ ನಮ್ಮೊಳಗೆ ಐಕ್ಯವಿಲ್ಲದಿದ್ದಲ್ಲಿ, ನಾವು ಮರಣವನ್ನು ಹೊಂದುವುದೇ ಖಂಡಿತ ಶ್ರೀ ಬೋಸರ ಮತ್ತು ಗಾಂಧೀವಾದಿಗಳ ನಡುವೆ ಮಹಾತ್ಮಾಗಾಂಧಿಯವರ ಮಾತುಕತೆಗಳಿಂದಾಗಿ ಐಕ್ಯವಾಗುವ ಸೂಚನೆಗಳು ಕಾಣುತ್ತಿರುವುವು ಆದರೂ ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಏನು ಜರಗಲಿರುವುದೋ ನೋಡಬೇಕು ಆದರೆ ಒಂದು ವಿಷಯವನ್ನು ಎದೆತಟ್ಟಿ ಹೇಳಬಹುದು. ಶ್ರೀ ಪಟ್ಟಾಭಿಯವರ ಉಮೇದ್ವಾರಿಕೆಯನ್ನು ಸಮರ್ಥಿಸಿದವರು ಮಹಾತ್ಮಾ ಗಾಂಧಿ. ಬೋಸರು ಎಂದೂ ಮರೆಯಲಿಕ್ಕಿಲ್ಲ.

ಸಂಸ್ಥಾನಗಳಲ್ಲಿ ಕೊಂಗ್ರೆಸ್ಸಿನ ಆಸಕ್ತಿ.

ಶೀಘ್ರದಲ್ಲಿಯೇ ತಿರುಪುರದಲ್ಲಿ ಸಮಿತಿಯದೊಂದು ಸಭೆಯು ಜರಗಲಿದೆ ಎಂದು ತಿಳಿಯಬಂದಿದೆ. ಕೊಂಗ್ರೆಸ್ಸು ಸಂಸ್ಥಾನಗಳ ಚಳವಳಿಗಳಲ್ಲಿ ಭಾಗವಹಿಸಿ ಒಮ್ಮೆಗೆ ಬ್ರಿಟಿಷ್ ಸಾಮ್ರಾಜ್ಯಶಾಹಿತ್ವವನ್ನು, ಸಂಸ್ಥಾನಗಳನ್ನು ಎದುರಿಸಿ ಮಾಡುವ ಆಲೋಚನೆಯನ್ನು ನಡೆಸುತ್ತಿದೆ ಸಂಸ್ಥಾನಗಳು ಭಾರತದಲ್ಲಿ ಇರಕೂಡದೆಂದು ಶ್ರೀ ನೆಹರೂರವರ ಅವರ ಸಾರಿ ಹೇಳಿದ್ದರು, ಶ್ರೀ ಗಾಂಧೀಜಿಯವರ ಮಾತ್ರ ಈ ಮಾತಿಗೆ ಒಪ್ಪಲಾರದೆ ಸಂಸ್ಥಾನಿಕರ ಬಂದುದೇ ಸಂಸ್ಥಾನಿಕ ಪ್ರಜಾ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಪಟ್ಟಾಭಿಯವರು, ಸಂಸ್ಥಾನಗಳ ವ್ಯವಸ್ಥೆಯೊಂದೇ ಭಾರತದಲ್ಲಿ ಐಕ್ಯತೆಯನ್ನು ತಂದೊಡ್ಡುವ ಸಾಧನವೆಂದು ಹೇಳಿರುವರು. ಆಗತ್ಯಬಿದ್ದರೆ ಪುನಃ ಸತ್ಯಾಗ್ರಹ ಸಮರವನ್ನು ಹೂಡಲು ತಾನು ಸಿದ್ಧನೆಂದು ಮಹಾತ್ಮರು ಹೇಳಿರುವರು.

ಭಾರತದ ದಿಗಂತದಲ್ಲಿ ಒಂದುಗೂಡಿದ ಈ ಕಾರ್ಮೋಡಗಳು ಶೀಘ್ರದಲ್ಲಿಯೇ ಕರಗಿ, ಬಲ ಮತ್ತು ಎಡಪಕ್ಷೀಯರೆಂಬ ಭೇದಭಾವವಿಲ್ಲದೆ ಎಲ್ಲರೂ ಒಂದಾಗಿ ಬ್ರಿಟಿಷ್ ರಾಜನೀತಿಜ್ಞರನ್ನು ಭಾರತದಿಂದ ಗಡಿಪಾರುಮಾಡುವ ದಿನಗಳು ಬಹು ದೂರವಿಲ್ಲವೆಂದು ನಾವು ಆಶಿಸೋಣ

"ಸ್ವರಾಜ್ಯವು ಭಾರತದ ಗವಾಕ್ಷವನ್ನು ತಟ್ಟುತ್ತಿರುವುದು ನಿಶ್ಚಿತಂತ ಕನ್ನಡಿಯಂತೆ ಎದ್ದಿರಾಗಿದೆ" ಆಬಾಗ ಭಾರತದ ಪವಿತ್ರ ಕ್ಷೇತ್ರದಿಂದ ಹೊರಟ ಧೀರಪುತ್ರರೊಬ್ಬರು ಗುಡುಗಿದರು, ಎಚ್ಚರಿಸಿದರು ಇನ್ನು ದಾರ್ಘದಿಂದ ಆಶ್ರಯ ಹೊರದಬ್ಬುವ ಸಾಹಸ ಬೇಕಾಗಿರುವುದು.

ಸ್ವರಾಜ್ಯವು ಸುಲಭವಲ್ಲ.

ಆದರೆ ಸುಲಭದಲ್ಲಿ ನಮಗೆ ಸ್ವರಾಜ್ಯವು ಲಭಿಸಬಹುದೆಂದು ನಾವು ಮಾತ್ರ ಭ್ರಮಿಸಕೂಡದು ಇಂದಿಗೆ ಅರ್ಧ ಶತಮಾನದಿಂದ ಸ್ವರಾಜ್ಯಕ್ಕಾಗಿ ನಾವು ಪಟ್ಟ ಕಷ್ಟಗಳೆಷ್ಟು? ಆದರೆ ಸ್ವರಾಜ್ಯವು ನಮಗಿನ್ನು ಕನಸಿನ ಗಾಳಿಯಾಗಿಯೇ ಉಳಿದಿರುವುದು. ಸ್ವರಾಜ್ಯವು ಲಭಿಸಬೇಕಾದರೆ ನಾವು ಈ ತನಕ ಪಟ್ಟ ಕಷ್ಟಕ್ಕಿಂತ ಹತ್ತುಪಾಲು ಕಷ್ಟನಷ್ಟಗಳನ್ನು ಅನುಭವಿಸಬೇಕಾದೀತು. ಆದುದರಿಂದಲೇ ಶ್ರೀ ನೆಹರೂರವರು "ಸ್ವರಾಜ್ಯವನ್ನು ಪಡೆಯಲು ಸಿದ್ಧರಾಗಿರಿ" ಎಂದರು

ನಾವು ಸಿದ್ಧರಾಗುವುದು, ಸ್ವರಾಜ್ಯದಿಂದ ಎಷ್ಟು ನಾನಾವನ್ನು ಪಡೆಯಲಿಕ್ಕಲ್ಲ ಆದಕ್ಕೆ ನಿಷ್ಠೆಯೇ ಅಗತ್ಯವಿದೆ ಸ್ವರಾಜ್ಯವನ್ನು ಪಡೆಯಬೇಕಾದರೆ, ಅದರೊಡನೆ ಬರ ಬರಬಹುದಾದ ಕಷ್ಟಗಳನ್ನು ಹೋರಾಡಲು ನಾವೀಗ ಎದ್ದೇಳಬೇಕಾಗಿದೆ.

DIAMONDS! DIAMONDS
BEST BRILLIANCY!
K. R. K. SHET,
MANGALORE
ಮಂಗಳೂರಿನ ಪ್ರಸಿದ್ಧ ರತ್ನ ವ್ಯಾಪಾರಿ
ವಜ್ರಗಳು!
ಎನ್ ಸ್ವಾಮ್ಯದಿಂದ ಎಲ್ಲ ರತ್ನಗಳು ಒಜ್ಜರ ಕಾರ್ಖಾನೆಗಿಂತ ಕಡಿಮೆ ದರದಲ್ಲಿ ದೊರೆಯುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ
ನಮ್ಮಲ್ಲಿ ಒಂದೇ ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ದರಗಳ ಉತ್ಕೃಷ್ಟ ಮಾನವತೆಯೂ, ಸಭ್ಯತೆಗಳೂ ತಾನಾಗಿಯೇ ತಿಳಿದುಬರುವವು.
ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ತೆರೆಯಲ್ಪಟ್ಟಿದೆ
ಕೆಳಗಿನ
ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು

ಫೆಬ್ರುವರಿಯ ಮೂರನೆಯ ವಾರ

ಯೂರೋಪಿನಲ್ಲಿ

ಪಾರಿಸ್: ಸ್ಪೈಯಿನ್ ಸರಕಾರದ ಕಡೆಯಿಂದ ಫ್ರೆಂಕೋ ಪಕ್ಷಕ್ಕೆ ಸಂಧಾನ ಪ್ರಸ್ತಾವವನ್ನು ತೊಡಗಿಸಲು, ಬ್ರಿಟಿಷ ಸರಕಾರದ ಮುಖಾಂತರ ಪ್ರಯತ್ನಗಳಾಗುವುವೆಂದು ವಾರ್ತೆಯಿದೆ.

ಸರಕಾರದ ಪಕ್ಷವಾಗಿ ಯುದ್ಧಮಾಡಿದವರಾರನ್ನೂ ಯಾವ ಬಗೆಯಲ್ಲೂ ದಂಡಿಸಬಾರದು, ಅಥವಾ ಆ ಸರಕಾರದ ಕಡೆಗೆ ಸಹಾನುಭೂತಿಯುಳ್ಳವರನ್ನು ಹಿಂಸೆ ಮಾಡಬಾರದು ಎಂಬ ಶರ್ತವೊಂದೇ ಮೊದಲನೆ ಪ್ರಸ್ತಾವದಲ್ಲಿರುವುದು. ಈ ಮಾತಿಗೆ ಒಡಂಬಟ್ಟರೆ, ಪ್ರೆಸಿಡೆಂಟ್ ಅಜಾನಾರವರು ಫ್ರೆಂಕೋವನ್ನು ಕಾಣಲೂ ಹೊರಡುವರಂತೆ.

ಸರಕಾರ ಪಕ್ಷವು ಇನ್ನೆಷ್ಟು ದಿನ ಕಾದಾಡಬಹುದು? ಸೋಲುವುದು ನಿಶ್ಚಿತ ಅರೆತಾಸಿಗೊಂದು ಸಿಡಿಗುಂಡು ಸಿಡಿಯುತ್ತದೆ

ಪೋಲೆಂಡು ಫ್ರೆಂಕೋ ಸರಕಾರವನ್ನು ಮಂಜೂರು ಮಾಡಿದೆ.

ಸ್ಪೈಯಿನಿನಿಂದ ಇಲ್ಲಿಗೆ ಬಂದಿರುವ ನಿರಾಶ್ರಿತರನ್ನು ಮರಳಿ ಸ್ಪೈಯಿನಿಗೆ ಕಳುಹುವ ಪ್ರಯತ್ನಗಳಾಗುವುವು.

ಫ್ರೆಂಚ ಸರಕಾರದ ಕಡೆಯಿಂದ ಮೊ. ಬೆರಾರ್ಡರು ಅತ್ತ ತೆರಳಿ, ಫ್ರೆಂಕೋವಿನೊಡನೆ ಸಂಭಾಷಣೆ ನಡೆಸುತ್ತಿರುವರು ಫ್ರೆಂಕೋ ಸರಕಾರವನ್ನು ಮಂಜೂರು ಮಾಡಲು ಪ್ರಯತ್ನಗಳಾಗುತ್ತವೆಂದು ವಾರ್ತೆ

ಮುಂಬರುವ ವಾರ, ಬ್ರಿಟಿಷ ಪ್ರತಿನಿಧಿಗಳೂ ಅತ್ತ ತೆರಳಿ ಅದೇ ಬಗೆಯ ಮಾತುಕತೆ ನಡೆಸುವ ಪ್ರಯತ್ನಮಾಡುವರು.

ಸರಕಾರದ ಪಕ್ಷವು ಯುದ್ಧ ಮುಗಿಸುವಂತಾದರೆ, ಶಾಂತಿಸ್ಥಾಪನೆಗೆ ಯಾವ ಶರ್ತಗಳಿರಬಹುದು ಎಂಬುದನ್ನು ಫ್ರೆಂಕೋ ಮೊದಲಾಗಿ ತಿಳಿಸುವಂತಾಗಬೇಕೆಂದು ಬ್ರಿಟಿಷ ಮತ್ತು ಫ್ರೆಂಚ ಸರಕಾರಗಳು ಆಶಿಸುತ್ತಿವೆ ಫ್ರೆಂಕೋ ಪಕ್ಷದವರು—ರಕ್ತ ಸುರಿವಂತೆ ಮಾಡಿದವರನ್ನು ಖಂಡಿತವಾಗಿ ನ್ಯಾಯವಿಚಾರಣೆಗೆ ಒಳಪಡಿಸಿ, ಶಿಕ್ಷಿಸುವುದಾಗಿ ನಿರ್ಧಾರವಿದೆ ಎನ್ನುತ್ತಾರೆ

ಫ್ರೆಂಕೋವಾದರೋ, ಗೆದ್ದುದನ್ನು ಉಳಿಸಿಕೊಳ್ಳುವ ಆಸೆ ಮಾಡುವನು ಯುದ್ಧಯಂತ್ರಗಳ ಬಲವಾಗಿ, ಜನಗಳ ತಾಪತ್ರಯ ನಿವಾರಣೆ ಮಾಡುವುದು ಗಕ್ಕ ಎನ್ನುತ್ತಾನೆ

೧೫೦೦೦ ಟನ್ನು ಆಹಾರಾದಿ ಉಪಯೋಗದ ಉತ್ಕೃಷ್ಟ ವಸ್ತುಗಳನ್ನು ಹಿಡಿದು ರಾಜಧಾನಿಯೊಳಗೆ ನುಗ್ಗಿ ಜನರಿಗೆಲ್ಲ ಸಹಾಯ ಮಾಡಲು ಸಿದ್ಧರಾಗಿದ್ದಾರೆ

ಸ್ಪೈಯಿನ ಸರಕಾರದ ರಾಯಭಾರಿಯೂ ಬ್ರಿಟಿಷ ಪರರಾಷ್ಟ್ರಗಳ ಮಂತ್ರಿಯನ್ನು ಕಂಡು, ಸ್ಪೈಯಿನಿನ ಸದ್ಯಸ್ಥಿತಿಯನ್ನು ಚೆನ್ನಾಗಿ ವಿವರಿಸಿರುವನು ಸರಕಾರ ಪಕ್ಷದ ವ್ಯಕ್ತಿಗಳೆಲ್ಲರ ಒಕ್ಕಟ್ಟಿನಿಂದ ಇರುವರೆಂದೂ ತಿಳಿಸಿರುವನು

ಪ್ರತಿಹಿಂಸೆಯಿಲ್ಲ, ಪರದೇಶೀಯರು ಹಿಂದೆ ಸರಿಯಬೇಕು ಎಂಬ ಶರ್ತಗಳಾದಲ್ಲಿ, ಬ್ರಿಟಿಷರು ಫ್ರೆಂಕೋ ಸರಕಾರವನ್ನು ಮನ್ನಿಸುವರೆಂದು ತಿಳಿಸಲಾಗಿದೆ

ಸೋತವರೆಲ್ಲ ಸಾಯಬೇಕೆಂದು ಮುಖಂಡರ ಶಿರಚ್ಛೇದನ ಮಾಡುವರೆ ಫ್ರೆಂಕೋ ಒಪ್ಪದಿರುವಲ್ಲಿ ಸಮಾಧಾನವಿದೆ ಬ್ರಿಟನ್ನಿಗೆ.

ಬ್ರಿಟಿಷ ಸ್ಟೀಮರನ್ನು, ಆದರೆ ಮೇಲೆ ವಿಮಾನ ಶಕರೇ ಇದ್ದರೂ, ಫ್ರೆಂಕೋ ಪಕ್ಷವು ಸೆರೆಹಿಡಿದಿದೆ.

ಜರ್ಮನಿಯೂ ಇದನ್ನೆಲ್ಲ ಕಂಡು – ಪ್ರಜಾಧಿಪತ್ಯಗಳನ್ನು ಒಂದಾಗಿಸಿ, ತಮ್ಮ ತತ್ವಗಳನ್ನೆಸಾರಿ, ಕೊಮ್ಯುನಿಸ್ಟರ ವಿರುದ್ಧವಾಗಿರುವವರನ್ನು ಈ ಅಧಿಪತ್ಯಗಳು ಸೇರಿದಂತೆ ಬ್ರಿಟಿಷರೂ ಫ್ರೆಂಚರೂ ಸಾಧನೆ ಮಾಡುತ್ತಿರುವರು, ಆದರೆ, ಫ್ರೆಂಕೋವಿನ ಕಷ್ಟಕಾಲದಲ್ಲಿ ಸಹಾಯಮಾಡಿದ ಜನಾಂಗಗಳನ್ನು ಅವನು ಮರೆಯುವವನಲ್ಲ ಎಂದು ಪ್ರಕಟವಾಗಿದೆ

ತಾ. ೧೬ರಲ್ಲಿ ಎಲಿಕೆಂಟನಿನಲ್ಲಿ ಸಿಡಿಗುಂಡಿಗೆ ೬೦ ಮಂದಿ ಸತ್ತರು, ೧೫೦ಕ್ಕೆ ಗಾಯ. ಫ್ರಾನ್ಸಿಗೆ ತೆರಳಿದ ಸೈನಿಕರಲ್ಲಿ ಇದುವರೆಗೆ ೬೦೦೦೦ ಮಂದಿ ಮರಳಿ ಫ್ರೆಂಕೋವನ್ನು ಸೇರಿರುವರು.

ಫ್ರೆಂಚರ ಗಡಿನಾಡಿನಲ್ಲಿರುವ ಭದ್ರವಾದ ಕೋಟೆಗಳ ಸಾಲನ್ನು ಸಂರಕ್ಷಣೆ ಮಾಡುವ ಕವಾಯತು ಈ ವಾರ ಜರಗುವುದು.

ಮೂರು ತಿಂಗಳಿಂದ, ಆಫ್ರಿಕದಲ್ಲಿ ಫ್ರಾನ್ಸಿಗಿರುವ ವಸಾಹತುಗಳ ಮೇಲೆ ಕಣ್ಣಿಟ್ಟಿರುವ ಇಟೆಲಿಯಿಂದ ಯಾವ ಗಂಡಾಂತರವೂ ಉಂಟಾಗದಂತೆ, ಆ ವಸಾಹತುಗಳ ರಕ್ಷಣೆಗಾಗಿ ಯುದ್ಧ ಸಿದ್ಧತೆ ಮಾಡುತ್ತಲಿದೆ ಮುಖ್ಯ ಠಾಣ್ಯಗಳಲ್ಲಿನ ಸೇನೆಗಳ ಬಲವು ಇಮ್ಮಡಿಯಾಗಿದೆ

ಲಂಡನ್: ಇಂಗ್ಲೆಂಡಿನ ವಾಣಿಜ್ಯ ಬೋರ್ಡಿನ ಅಧ್ಯಕ್ಷ ಶ್ರೀ ಒಲಿವರ್ ಸ್ಟೆನ್ಲಿಯವರು ತಮ್ಮ ಪಾರ್ಲಿಮೆಂಟರಿ ಸೆಕ್ರೆಟರಿಯರೊಡನೆ, ಮಾರ್ಚ ತಿಂಗಳಲ್ಲಿ ಬರ್ಲಿನಿಗೆ ತೆರಳಿ ವಾಣಿಜ್ಯಾಭಿವೃದ್ಧಿಗಾಗಿ ಸಂಧಾನ ಮಾಡಲಿರುವರು

ಬ್ರಿಟಿಷ ಕೈಗಾರಿಕೆ ಸಂಘಗಳ ಪ್ರತಿನಿಧಿಗಳೂ ಜರ್ಮನ ಪ್ರತಿನಿಧಿಗಳೂ ಒಂದು ಕಡೆ ಸೇರಿ, ವ್ಯಾಪಾರವನ್ನು ಹೆಚ್ಚಿಸುವುದಕ್ಕಾಗಿ ಸಂಭಾಷಣೆ ಜರುಗಿಸಿ ಪೂರ್ವಸಿದ್ಧತೆಗಳು ಸಾಗಿವೆ

ಮುಂದಿನ ವಾರ ಈ ವಿಷಯ ಒಬ್ಬ ಬ್ರಿಟಿಷ ಮುತ್ಸದ್ದಿಗಳು ಬರ್ಲಿನಿಗೆ ತೆರಳಿ, ಪೂರ್ವ ಪ್ರಸ್ತಾವನೆಗೆ ಕೈಯಿಕ್ಕುವರು

ಸೋಮವಾರವೇ ಜರ್ಮನಿಗೆ ಹಿತವಾರ್ತೆಯೊಂದನ್ನು ರೇಡಿಯೋ ಮೂಲಕ ಈ ಅಧ್ಯಕ್ಷರು ಸೂಚಿಸಿದ್ದಾರೆ ಅಲ್ಲಿ ಒಂದು ಸಂತೆ ನಡೆದಿತ್ತು ಸುಮಾರು ೪೦೦ ಮಂದಿ ಜರ್ಮನ ವರ್ತಕರು ಅತ್ತ ಬಂದಿದ್ದರು ಜರ್ಮನಿಯಂಥ ಗಿರಾಕಿ ಇಂಗ್ಲೆಂಡಿಗಿಲ್ಲ ಕಳೆದ ವರ್ಷ ೬ ಮಿಲ್ಲಿಯ ಪವನಿನ ಬಟ್ಟೆಯನ್ನು ಇಂಗ್ಲೆಂಡಿನಿಂದ ಜರ್ಮನಿಗೆ ಮಾರಲಾಗಿದೆ ಆದುದರಿಂದ ಜರ್ಮನಿಯ ಕೊಂಡುಕೊಳ್ಳುವುದೇ ಮಾತ್ರವಲ್ಲದೆ, ಮಾರಲೂ ಸಿದ್ಧವಿದೆಯೆಂದು ನಿರ್ಧಾರವಾದರೆ, ಉಭಯ ವ್ಯಾಪಾರಿಗಳಿಗೂ ಲಾಭವಿದೆ ಎಂದು ಇವರೆಂದರು.

ಈ ಪ್ರಸ್ತಾವವನ್ನು ಬರ್ಲಿನಿನಲ್ಲಿ ಕೇಳಿ, ಸಾಂಘಿಕ ವ್ಯಕ್ತಿಗೆ ಅನುಕೂಲವಾಗಿದೆ ಎಂದು ಅಲ್ಲಿ ಹಿಗ್ಗಿಕೊಂಡಿರುವರು ಆದರೆ, ಪತ್ರಿಕೆಗಳು ಈ ಸಂಭಾಷಣೆಗಳಿಂದ ಹೆಚ್ಚಿನ ಪ್ರಯೋಜನವು ಪಕ್ಕನೆ ಆಗದು ಎಂದು ಟೀಕಿಸಿವೆ

ಪೆಲೆಸ್ಟೀನ ಪರಿಷತ್ತು: ಈ ಪರಿಷತ್ತು ಎರಡು ವಾರಗಳಿಂದ ಸೇರಿದೆ. ಪ್ರಾರಂಭದಲ್ಲಿ ಎಲ್ಲಿತ್ತೋ ಅಲ್ಲೇ ವಿಚಾರಗಳು ನಿಂತಿವೆ ಇತ್ತಂಡಗಳಲ್ಲಿ ಒಮ್ಮತವಾಗುವುದು ಕಠಿನವೇ. ಅರಬರೂ ಯೆಹೂದ್ಯರೂ ತಾವು ಮೊದಲು ಹೇಳಿದ ಶರ್ತಗಳನ್ನು ಒಂದು ಅಕ್ಷರವೂ ತಿದ್ದಬಾರದೆಂದು ಒತ್ತಾಯಮಾಡಿರುವರು.

ಅರಬರಿಗೆ ಸ್ವತಂತ್ರ ರಾಜ್ಯ ಬೇಕೆನ್ನುವ ಕೇಳಿಕೆಗೆ ಮನ್ನಣೆ ದೊರೆಯಲಾರದು. ಈ ವಿಚಾರವನ್ನು ಮುಂದರಿಸಲಾಗಿದೆ. ಹಾಗೆಂದು ಅರಬರಿಗೂ ಬ್ರಿಟಿಷ ಸರಕಾರಕ್ಕೂ ಸಂಧಾನವಾಗಬಾರದೆಂದಿಲ್ಲ ಆದರೂ ಎರಡು ಪಕ್ಷಗಳೂ ಭಿನ್ನವಾಗಿಯೇ ತತ್ವದಲ್ಲಿ ನಿಂತಿವೆ.

ಚರ್ಚೆ ನಡೆದು ಮುಂದೆ ಎಂದೋ ಒಂದು ಬಗೆಯ ತೀರ್ಮಾನವಾದೀತಂತೆ. ಇಷ್ಟನ್ನು ಯಾರೂ ಯಾವುದೊಂದು ಪರಿಷತ್ತಿನ ವಿಷಯ ಯಾವಾಗಲೂ ಹೇಳಬಹುದು.

ಇಡೀ ವಿಷಯವನ್ನೆಲ್ಲ ಒಟ್ಟಿಗೇ ಚರ್ಚಿಸುವುದು ಯೆಹೂದ್ಯರಿಗೆ ಉತ್ತಮವೆನಿಸಿದೆ ಶರ್ತಗಳೆಲ್ಲವೂ ಇತ್ತಂಡಗಳಿಗೂ ಸಮಾನವಾಗಿ ಅನ್ವಯಿಸುವುದಾದರೆ, ಅವನ್ನು ಯೆಹೂದ್ಯರು ಒಪ್ಪಿಕೊಳ್ಳುವರು.

ಒಂಬತ್ತು ಸಲ ಸೇರಿದರೂ, ಅರಬರು ಸ್ವತಂತ್ರರಾಜ್ಯವೇ ಆಗಬೇಕೆಂದು ತರ್ಕಿಸುತ್ತಾರೆ

ಚೆಂಬರ್ಲೇನರು ಪ್ರತಿನಿಧಿಗಳನ್ನು ತಮ್ಮ ಭವನದಲ್ಲಿ ಸ್ವಾಗತಮಾಡಿಕೊಂಡು ಖಾಸಗಿಯಾಗಿ ಚರ್ಚಿಸುವರು

ಕಳೆದ ವಾರ ಪೆಲೆಸ್ತೀನದಲ್ಲಿ ೭೦ ಹಳ್ಳಿಗಳನ್ನು ಸೈನಿಕ ಪೋಲೀಸರ ಶೋಧನೆ ಮಾಡಿ ಹತ್ಯಾರುಗಳನ್ನು ಜಪ್ತು ಮಾಡಿದರು ೫೦ ಮಂದಿಗಳು ಕಳೆದ ವಾರ ಹತಾಹತರಾದರು. ಪೆಲೆಸ್ತೀನ ಪರಿಷತ್ತಿನ ವಿಷಯ ಎರಡು ಯೆಹೂದಿ ಪತ್ರಿಕೆಯೊಂದನ್ನು ಬಹಿಷ್ಕರಿಸಿರುವರು

ಲಿಥುವಾನಿಯ: ಜೆಕ್ ರಾಜ್ಯದಲ್ಲಾದಂತೆ ಇಲ್ಲಿ ಜರ್ಮನರ ಗಡಿಬಿಡಿಗೆ ಪ್ರಾರಂಭವಾಗಿದೆ

ಸಿರಿಯಾ: ಪೆಲೆಸ್ತೀನದ ಬಳಿ ಇರುವ ಈ ರಾಜ್ಯವನ್ನು ಫ್ರೆಂಚರು ಅಧಿಕಾರ ಮಾಡುತ್ತಿರುವರು. ೧೯೩೬ರಲ್ಲಿ ಈ ರಾಜ್ಯಕ್ಕೆ ಸಂಪೂರ್ಣ ಸ್ವಾತಂತ್ರ್ಯಕೊಡುವ ಶರ್ತವಿದ್ದರೂ, ಅದನ್ನು ಇಂದಿಗೂ ಫ್ರೆಂಚ ಸರಕಾರವು ಮಂಜೂರು ಮಾಡಿಲ್ಲ ಕಳೆದ ತಿಂಗಳಲ್ಲಿ ಇದಕ್ಕಾಗಿ ಇಬ್ಬರು ಮಂತ್ರಿಗಳು ಇಲ್ಲಿ ರಾಜೀನಾಮೆ ಕೊಟ್ಟರು. ಅವರಲ್ಲೊಬ್ಬನು ಹಿಂದಿನ ಜನರು ಚಳವಳಿ ಎಬ್ಬಿಸಿದರು. ಈಗ ಎಲ್ಲ ಮಂತ್ರಿಗಳೂ ರಾಜೀನಾಮೆ ಕೊಟ್ಟಿರುವರು ಇದು ಮತ್ತೊಂದು ಹೊಸ ಚಳವಳಿಯನ್ನು ಪ್ರಾರಂಭಿಸಿ, ಬ್ರಿಟಿಷರಿಗೆ ಪೆಲೆಸ್ತೀನಿನ ಬಾಧೆಯ ಮತ್ತೊಂದು ಪ್ರತಿರೂಪವಾದೀತು.

ಪ್ರೆಸಿಡೆಂಟ ರೂಸವೆಲ್ಟರು: ಸೆನ್ ಫ್ರಾನ್ಸಿಸ್ಕೋದಲ್ಲಿ ಹತ್ತು ಮಿಲ್ಲಿಯ ಡೊಲ್ಲರ ಮೌಲ್ಯದ ಪ್ರದರ್ಶನವೊಂದನ್ನು ತೆರೆವ ಸಮಾರಂಭದಲ್ಲಿ ಭಾಷಣ ಮಾಡುತ್ತ, ಈ ಪ್ರೆಸಿಡೆಂಟರು, (ಸುಮಾರು ೧೦೦೦ ಮೈಲು ದೂರದಲ್ಲಿ ನೌಕಾಬಲದ ಪ್ರದರ್ಶನವಾಗುವಲ್ಲಿಂದ ಈ ಭಾಷಣವಾದುದು) – ಅಮೇರಿಕದ ಎಲ್ಲ ರಾಜ್ಯಗಳು ಅಂತರ್ಜನಾಂಗಿಕ ಐಕ್ಯ, ಪರಸ್ಪರ ಸಹಾಯ ವಿಶ್ವಾಸಗಳು ಈ ಮೂಲಕವಾಗಿ, ದುಃಖಪೀಡಿತವಾಗಿರುವ ಜನಾಂಗಗಳ ಮನಸ್ಸಿನಲ್ಲಿ, ಪ್ರಜಾಸತ್ತೆಯನ್ನು ಊರ್ಜಿತಪಡಿಸಲು ಏಕನಾಯಕರ ಕೈಯಿಂದ ಹೇಗೆ ಸಾಧ್ಯವೆಂಬುದನ್ನು ರುಜುಮಾಡಿದೆ ಎಂದರು

“ಪ್ರತಿಯೊಂದು ಕಾನೂನು ಸಮ್ಮತವಾದ ರೀತಿಯಿಂದ, ವ್ಯಾಪಾರಾಭಿವೃದ್ಧಿಯನ್ನೂ ವ್ಯಾಪಾರ ಸಂಚಾರ ಸಂಸ್ಕೃತಿಗಳ ಹರಿವು ವೃದ್ಧಿಯಾದುವು ನಿರಾತಂಕವಾಗಿ ಸಾಗುವಂತೆ ಮಾಡುವೆವಲ್ಲದೆ, ರಾಜ್ಯವಿಸ್ತಾರವನ್ನು ನಾವು ಆಶಿಸುವುದಿಲ್ಲ ಯುದ್ಧ ಸನ್ನಾಹವನ್ನು ಇಳಿಸಲು ಪ್ರತಿಯೊಂದು ಸೂಚನೆಯನ್ನು ನಾವು ಪರ್ಯಾಲೋಚಿಸಿ ಅಂಗೀಕರಿಸುವೆವು

ಬಲಪ್ರದರ್ಶನ ಮಾಡುವವರ ಮೇಲೆ ಮಾತ್ರ ನಾವು ಶಕ್ತಿಯನ್ನು ಉಪಯೋಗಿಸುವೆವು ಪರರ ಇಚ್ಛೆಯಂತೆ ಮಾತ್ರ ನಾವು ಆಳುವವರ ಈ ತತ್ವವನ್ನು ನಾವು ಕಾಪಾಡುವವರು” ಎಂದ ಮತ್ತೊಂದು ಭಾಷಣದಲ್ಲಿ ಸೂಚಿಸಿರುವರು

ಏಕಾಧಿಕಾರಿಗಳು ಪುನಃ ಬಲಪ್ರದರ್ಶಿಸಿದಲ್ಲಿ ಯುದ್ಧಭಯ ಬೀರುವರಾಗಿ ವಾರ್ತೆ ಅವರಿಗೆ ಕಲಿಸಿದೆ.

ಜಾಪಾನು: ಹೈನಾನು ದ್ವೀಪದ ಬಳಿ, ಶಂಘಾಯಿಯಿಂದ ನೂರು ಮೈಲು ದೂರ ಸಾಗರದಲ್ಲಿ, ಹತ್ತು ಹಡಗುಗಳಿವೆ, ನಾಲ್ಕು ಯುದ್ಧ ನಾವೆಗಳಿವೆ ಇವು ಚೀನಿಯರು ಹಾಕಿರುವ ತಡೆ ಮೀರಿ, ಹೈನಾನು ಕಡೆಗೆ ಚಲಿಸುತ್ತವೆಂದು ವಾರ್ತೆ

ಚಿಯಾಂಗರಿಗೆ ಇನ್ನೂ ಬೇರೆ ಬೇರೆ ಬಂದರುಗಳಿಂದ ಯುದ್ಧ ಸಾಮಗ್ರಿಗಳು ತಲಪುತ್ತವೆಂದೂ ಜಪಾನು ಸಾರಿ ಹೀಗೆ ಮಾಡಿದೆ

ರೋಮ್: ಹೊಸ ಪೋಪರ ಚುನಾವಣೆ ತಾ ೨೮ಕ್ಕೆ, ಪುನಃ ಇಟೆಲಿಯಾನರೇ ಆಗಬಹುದು

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ
ಜಗತ್ಪ್ರಸಿದ್ಧ

GONO KILLER

ಗೊನೊಕಿಲರ್ (ರಜಿಸ್ಟರ್ಡ)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ನಕಲಿ ಮದ್ದುಗಳ ವಿಷಯ ಜಾಗ್ರತೆ ತೆಗೆದುಕೊಳ್ಳಿರಿ. ಕೊಂಡುಕೊಳ್ಳುವದರ ಮೊದಲು ಕೋಳಿ ಗುರುತಿನ ಕೆಂಪು ಸೀಲು ಮತ್ತು “ಗೊನೊಕಿಲರ್” ಇದೆ ಎಂಬುದನ್ನು ನೋಡಿರಿ

ಮುಂಚಿನ ಅತ್ಯುತ್ತಮ ಔಷಧ ಇಂಗ್ಲೀಷು ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೇ ಇಂಜೆಕ್ಷನ್ ಔಷಧಕಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೊನೊಕಿಲರ್ ಎಂಬ ಗುಳಿಗೆಗಳನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗದಾಗಿದ್ದರೂ, ಗೋನೊರಿಯಾ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ, ಸ್ತ್ರೀ ಪಳಿಕೆ ಸ್ರಾವ, ಮೂತ್ರದಲ್ಲಿ ಉರಿ ಮತ್ತು ತೀವ್ರ ಸುರಿಯುವಿಕೆ ಮೂತ್ರ ಕಟ್ಟುವಿಕೆ, ಧಾತು ಬೀಳುವುದು ಮೊದಲಾದ ಯಾವತ್ತು ಗೊನೊರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜು 8 ಆಣೆ ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer: Dr. D. N. JASANI, Vithalbhai Patal Road, BOMBAY

ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ.

ಸ್ಟಾಕಿಸ್ಟ—ಮೆಸರ್ಸ್ ಫೆರ್ನಾಂಡಿಸ್ ಮತ್ತು ಕಂಪೆನಿ ಕೆಮಿಸ್ಟ್ಸ ಮತ್ತು ಡ್ರಗ್ಗಿಸ್ಟ್ಸ ಮಂಗಳೂರು.

ಹಳ್ಳಿಯ ಹತ್ತು ಸಮಸ್ತರು

ಮೊದಲ ಮಾತು

ಇದು ನಮ್ಮ ಗ್ರಾಮಜೀವನದ ಹಲವು ಪ್ರಮುಖ ವ್ಯಕ್ತಿಗಳ ಚಿತ್ರ ಯಾರನ್ನಾದರೂ ಉದ್ದೇಶಿಸಿಯೇ ಬರೆಯಲಿಲ್ಲವಾದರೂ ವ್ಯಕ್ತಿ ರೂಪಗಳು ಘಟನೆಯ ರೂಪಗಳು, ಘಟನೆಯ ರೀತಿಗಳು ಹಳ್ಳಿಯ 'ಶಾಂತ' ಆವರಣ—ಇವೆಲ್ಲ ವಾಸ್ತವವಾದುವು. ಹಳ್ಳಿಯು ಸಾವನ್ನ ಕೋಟೆ, ಕುಂದಾಪುರದೊಳಗಿನ ಒಂದು ಗ್ರಾಮ ಸಮೂಹ, ವ್ಯಕ್ತಿಗಳು ವರ್ತನ ರೀತಿಗಳು ಹಲವು ಅಲ್ಲಿನವೆ ಬರಿಯ ಪಾತ್ರಕಲ್ಪನೆಯುಗಳೇ ಈ ಚರಿತ್ರೆಗಳು ನುರಿ ಅವನ್ನು ಓದಿಕೊಂಡು ಮುಂದೆ ಬರುವ ಪ್ರಸ್ತಾವನೆಯನ್ನು ಓದಿದರೆ, ಅನಂತರದಲ್ಲಿ ಸಾಮಾಜಿಕ ಜೀವನದ ಒಂದು ಸಮಸ್ಯೆಯು ನಮ್ಮ ಹಳ್ಳಿಯಲ್ಲಿ ಹೇಗೆ ಬಿಡಿಸಲ್ಪಡಬಹುದು ನಾನು ಬರೆದ ಪ್ರಸ್ತಾವನೆಯ ಬಳಿಕ ವಾಚಕರು ಒಂದೊಂದು ಕಾದಂಬರಿಯನ್ನು ಕಲ್ಪಿಸಲಿ ಅವರ ಮುಂದಿರುವ ಪಾತ್ರಗಳು ಇಂಥವು—ಎಂದು ಒದಗಿಸಿಕೊಡುತ್ತೇನೆ

ಇತಿ

ಶಿವರಾಮ ಕಾರಂತ.

೨. ನಾಗಯ್ಯ ಸೆಟ್ಟರು.

ನಮ್ಮ ಊರಿನ ವಿಷಯ ಬಲ್ಲವರಿಗೆ ನಾಗಯ್ಯ ಸೆಟ್ಟರ ಹೆಸರು ಎಂದೂ ಮರೆಯಲಾಗಲಿಕ್ಕಿಲ್ಲ. ಅವರ ಕಾರುಭಾರ, ರೀತಿ, ಕಲಾಪ ಎಲ್ಲ ಅಂಥವು ಕೆಲವರು ಅವರ ಹೆಸರು ಕೇಳಿಯೇ ನಡುಗಬಹುದು. ಒಳಗಿಂದೊಳಗೆ 'ಒಂದು ದಿವಸ ಅವನ ಹಣ ಹೆಬ್ಬಾಗಿಲಿನಲ್ಲಿ ಬೀಳುತ್ತದೆ' ಎನ್ನುವವರು ಇದ್ದಾರೆ, 'ಬೀಳಲಿ' ಎಂದು ಆಸೆ ಮಾಡುವವರೂ ಇದ್ದಾರೆ. ಇದೆಲ್ಲ ಅವರಿಗೆ ಆಗದವರ ಮಾತು. ಊರ—ಎಂದ ಮೇಲೆ ಹೊಲಗೇರಿ ಇದ್ದೇ ಇದೆ. ಹಳ್ಳಿಯೆಂದ ಮೇಲೆ ಜದ್ದು, ಜಗಳ, ಪಕ್ಷ, ಪ್ರತಿಪಕ್ಷ ತಪ್ಪೀತೇ?

ನಾಗಯ್ಯನ ಒಳ ಹೊರಗುಗಳನ್ನೆಲ್ಲ ಸಮನಾಗಿ ತಿಳಿದವರು ಎಂದರೆ ಸೀಕ್ರೆಕಾಳರು. 'ನಾಗಯ್ಯ ಹ್ಯಾಗೆ?' ಎಂದು ಕೇಳುವುದಾದರೆ ಅವರನ್ನು ಕೇಳಬೇಕು. "ನಾಗಯ್ಯ ಎಂದರೆ ಒಬ್ಬ ತುಂಡರಸ. ಹಿಂದಿನ ಕಾಲವಾಗಿದ್ದರೆ ನಗರ ಸಂಸ್ಥಾನವನ್ನೊ ಬಾರಕೂರನ್ನೊ ಕಲಿಯಾಗಿ ಮಾಡುವ ತಾಕತ್ತು ಇದ್ದವ. ಈ ಕ್ಷಣಕ್ಕೆ ೫೦೦ ಜನ ಒಂದು ಧ್ವನಿಗೆ ಬೇಕು ಎಂದರೆ ಕರೆಸುವ ತ್ರಾಣ ಅವನಿಗಿದೆ. ನೋಡುವ ನಮ್ಮೂರಿನಲ್ಲಿ ಅಂಥವ ಇನ್ನೊಬ್ಬ ಘಟನನ್ನು ತೋರಿಸಿ"—ಎಂದು ತೆರೆದ ಬಾಯಿಗೆ ಐತಾಳರು ಕೇಳುತ್ತಾರೆ. ಐತಾಳರ ಮೇಲೆಯೂ ಅದೇ ಪ್ರೀತಿ ಅಭಿಮಾನ ನಾಗಯ್ಯನಿಗಿದೆ.

ನಾಗಯ್ಯನ ಮನೆತನ ದೊಡ್ಡದು. ಅವನ ತಂದೆ ಇಷ್ಟರಲ್ಲಿಗೆ ಪಡುಪಟ್ಟ ಬೈಲಿನ ಯಜಮಾನನು. ನಾಡವರ ಕುಲಕ್ಕೆ ಒಂದು ಮನೆ ಪಡುಪ್ರಟ್ಟನದು. ಒಂದು ಮನೆಯಿಂದ ಸರಕಾರಕ್ಕೆ ಎರಡು ಸಾವಿರ ಮೇಲ್ಪಟ್ಟು ಸರಕಾರ ಹಣ ಸಲ್ಲುತ್ತದೆ. ಇತ್ತ ಅವನ ತಾಯಿ ಮನೆ ಮುಪರೋಳಿ, ಅಷ್ಟು ಸಮಸಮ ಬಲ್ಲಿವಂತರು. ಇನ್ನು ನಾಗಯ್ಯನೇ ಭಾರೀ ವ್ಯಾಪಾರ ವಾಳೆಬಳಿ, ಜಗುಲಿಗಳಿಂದ ಕಟ್ಟಿದ ಛತ್ರ ಇಳಿದರೆ ನಾಗಯ್ಯ ಬಿಸ್ಸಮೇಲೆ ಒಂದರವರ ಕೈಗೆ ಸೇರಬೇಕು. ಮೊದಲ ನಾಗಯ್ಯ 'ಮೊದುವಿನ ಕಂಪನಿ' ನಡೆಯಿಸುತ್ತಿದ್ದ. ಈಗ ಇಂಜನ್ ತರಿಸಿ ರೈಸ್ ಮಿಲ್ಲು ಮಾಡಿದ್ದಾನೆ. ಹಳ್ಳಿ ಊರಿಗೆ ಈ ಇಂಜನ್ ಗಿಂಜನ್ ಎಲ್ಲಾ ಯಾಕೆ ಎಂದು ಯಾರಾದರೂ ಕೇಳಿದರೆ ಹೊಗಬೇಕು. ಈ ಘಟ್ಟಗರನ್ನು ನಾಗೀ, ರುಕನ್ನು, ಲಕ್ಷ್ಮಸಬ್ಬು ಎಂದು ಕರೆದು ದಿನ್ನಸತ್ತ ಸಲಾಂ ಹಾಕುವ ದಗಳೆ ಹೋಯಿತಲ್ಲ ಅದಕ್ಕೆ ಒಂದು ಕುಡಾಗಾಯಿಲ್ ಇಂಜನ್ ತಾಸಿ ಒತ್ತದ ಮಿಲ್ಲು ಇರಿಸಿಬಿಟ್ಟಿದ್ದೇನೆ' ಎಂದ ಸಮಾಧಾನ ಹೇಳುತ್ತಾನೆ.

ನಾಗಯ್ಯನ ರೂಪವೇ! ಎತ್ತಗಿಪ್ಪ ಶರೀರ ವರ್ಷ ಮೂವತ್ತೆರಡು, ಮ ಎಲ್ಲವ ಪರು ವಯಸ್ಸು ಪ್ರಾಯ. ತೆಳ್ಳಗೂ ಅಲ್ಲ ದಪ್ಪವೂ ಅಲ್ಲ, ಎತ್ತರವೂ ಅಲ್ಲ ಕುಳ್ಳೂ ಅಲ್ಲ. ಅಂತಹ ಕಾಯ. ಯಾವಾಗಲೂ ತೆಳ್ಳಗಿನ ನೀಮ ಸುತ್ತು ಉಟ್ಟು ಮೈಮೇಲೆ ಬೆಳ್ಳಗಿನ ಮಕ ಮಲ್ಲು ಅಂಗಿ. ಅಂಗಿಯೊಳಗಿನ ಬಣ್ಣದ ಬನೀನು ಅರ್ಧ ಕಾಣುತ್ತಿರಬೇಕು. ಅಂಗಿಗೆ ಚಿನ್ನದ ಗುಂಡಿ ಬೇರೆ. ಈಗಿನ ರೀತಿಯ ಕ್ರಾಪ್ ತಲೆ, ಕಿವಿಗಳಲ್ಲಿ ಕಡಲೆ ಗಾತ್ರದ ಮಿನುಗುವ ವಜ್ರದ ಒಂಟಿಗಳು. ಒಂದು ಕೈಗೆ ಚಿನ್ನದ ತೋಡಾ ಸಹ ಇದೆ. ನೋಡಿದ ಕ್ಷಣವೇ ಶ್ರೀಮಂತರ ಮನೆಯವರು ಎಂದು ಒಡೆದು ಹೇಳುವ ಉಡಿಗೆತೊಡಿಗೆ. ವ್ಯಾಪಾರದಿಂದಲೇ ನಾಗಯ್ಯ ಸಿರಿವಂತನಾದನೇ ಎಂದು ಕೇಳಿದರೆ ಹಾಗೇನೂ ಇಲ್ಲ. 'ಇಡಿ ದಿವಸ ಕಕ್ಕಡಿಗೆ ಅಂಟಿ ಕುಳಿತಿರಲಿಕ್ಕೆ ನನಗೆ ಗಂಜಿಗೆ ಬೇರೆ ಗತಿ ಇಲ್ಲವೇ!' ಎಂದು ಬರಿಯ ವ್ಯಾಪಾರಿಗಳನ್ನು ಕಂಡು ಅವನೇ ಹಂಗಿಸುತ್ತಾನೆ.

ನಾಗಯ್ಯ ಭಂಡಸಾಲೆಯಲ್ಲಿ ಕಳೆಯಬಹುದಾದಷ್ಟು ಸಮಯವನ್ನು ಕೋಳಿಪಡೆ, ಕಂಬಳ, ತಾಳಮದ್ದಲೆ ಮೊದಲಾದ ವಿನೋದಗಳಲ್ಲೂ ಕಳೆಯುತ್ತಾನೆ. ಕೋರ್ಟಿಗೆ ಹೆದರಿ ಕುಳಿತಿರುವ ವ್ಯಕ್ತಿಯೂ ಅಲ್ಲ. ಯಾವಾಗಲೂ ನಾಗಯ್ಯನ ನಮ್ಮ ಊರಲ್ಲಿ ಕಾಣಬೇಕೆಂದರೆ ಸಾಧ್ಯವೂ ಇಲ್ಲ. ವ್ಯಾಪಾರ, ಕೋರ್ಟು, ಕರುಗಾಟ ಇವುಗಳಲ್ಲಿ ತೇಲುವ ನಾಗಯ್ಯ ಸಾಮಾನ್ಯ ಮಳೆಗಾಲದ ಸಮಯ. ಮಾತ್ರ ಪಡುಪಟ್ಟ ಬೈಲಿನ ಹೆಬ್ಬಾಗಿಲ ಜಗುಲಿಯ ಮೇಲೆ ಒರಗಿ ದರ್ಬಾರು ನಡೆಯಿಸುವುದನ್ನು ಕಾಣಬಹುದು. ಅದು ಡಾಕ್ಟರರು ಯಾರೋ 'ನೀವು ಮಳೆಗಾಲದಲ್ಲಿ ಸುತ್ತುತ್ತಿದ್ದರೆ ಕೆಮ್ಮು (ನೀಮಸ) ಜಾಸ್ತಿಯಾದೀತ' ಎಂದು ಹೆದರಿಸಿರುವುದರಿಂದ. ಆಗ ಲಾದರೆ ನಾಗಯ್ಯ ಹೆಬ್ಬಾಗಿಲಿಗೆ ಸಹಜವಾದ ಅಲಂಕಾರ. ಅವನಿಲ್ಲದ ವೇಳೆಯಲ್ಲಿ ಅವನ ತಂದೆ ಸುಬ್ಬರಸ್ತ ಸೆಟ್ಟರು, ಪಡುಪಟ್ಟ ಯಜಮಾನರು. 'ಹೂಂ ನಾಗ ಇಲ್ಲದೆ ಮನೆ ಕೈಸ ವೃಷೇ ಇಲ್ಲವಂದು ಹೇಳುತ್ತಾರೆ. ನಾಗಯ್ಯ ಒಮ್ಮೆಗೆ ಗೇಣ ಬಾಕಿ ಇರಿಸಿದವರು. [illegible] ಎಂದು ಒಪ್ಪೆ ಉಸಿರು [illegible] ಕರಿದು. ಒಕ್ಕಲ ದಾ [illegible] ಸಂತೆಯೇಳಿಗೆ ಧಕ್ಕ ಬಂದು. ಮನೆಯ ಅಂಗಳದಲ್ಲಿ ಏಳುತ್ತದೆ. ಇತ್ತ [illegible] ಗೇಣ ಬಾಕಿ ಈ ವರೆಗೆ [illegible] ಮಾಡಿದವರ ಬಗ್ಗೆ ಕೋರ್ಟಿಗೆ ಹೋದುದೂ ಇಲ್ಲ. ಆದರೂ ಬರಹದಲ್ಲಿ ಅರೆ ಮುಡಿ ಜಾಸ್ತಿ ಎಂದಿದ್ದರೆ [illegible] ನಷ್ಟವಾಗಿಯೇ ಆಗುತ್ತದೆ. ಹಾಗೇನಾದರೂ ತಪ್ಪಿದರೆ ನಾಗಯ್ಯನ ದೀರು ಹೆಬ್ಬಾಗಿಲಿನ ಕಂಬಕ್ಕೆ ಬಿಗಿಸಿ ಹೊಡೆಯಿಸಿ [illegible] ಎಂದು ಒಕ್ಕಲುಗಳಿಗೆ ತಿಳಿದದೆ. ಒಮ್ಮೆ [illegible] ಕಣ್ಣಿಗೆ ಬೀಳುವ ಒಕ್ಕಲು.

ಪಡುಪಟ್ಟ ಬೈಲಿನ ಯಜಮಾನರು ಸೂರಪ್ಪ ಸೆಟ್ಟರು ಎಂದರೆ ಅಲಂಕಾರಕ್ಕೆ, ವಾಸ್ತವದ ದರ್ಬಾರ ನಾಗಯ್ಯನದು. ಅವರು ಹೇಳಿದ [illegible], ಅವರ ಮಾಡಿದ್ದೆಲ್ಲ, ಅವರು ಆಳಿದ ಅಳತೆ [illegible] ಮುಡಿಗೆ [illegible] ಅವರ ಒಕ್ಕಲು, ಯಂತೆ ಕೊಟ್ಟು ಧನಿಯರಿಂದಲೇ ಅಕ್ಕಿ ಕೊಂಡಾರಲ್ಲದೆ ಹೊರಗೆ ಹೋಗುವಂತಿಲ್ಲ [illegible]. ಇದ ಈಗಿನ ಯಜಮಾನರ ಕಾಲದಲಿ ಮಾತ್ರವಲ್ಲ ಹಿಂದಿನ ಯಜಮಾನರ ಕಾಲದಲ್ಲೂ ಹಾಗೆ ಮನೆಗೆ ಯಜಮಾನರು ರಿಕಾರ್ಡಿನ ಮಟ್ಟಿಗೆ ಯಾರೇ ಇರಲಿ—ನಾಗಯ್ಯ ಆಳಿದು ಉಳಿದ ಗೇಣಿ ಮನೆ.

ಅನ್ನದ ಗುಣ [illegible] ಹೇಳಬಹುದು. [illegible] ಕ್ಷೈನಾತಿ [illegible] ರನ್ನು ಹೇಳಬಹುದು. ಎಂದರೂ ತಪ್ಪಾಗದ ಅಂಥಾ ಕ್ಷೈನಾತಿ [illegible] ನಾಗಯ್ಯ [illegible]

[illegible]

ನಾಗಯ್ಯ [illegible] ಹೊರಗೆಲಿಗೆ ಹೊರಡುವುದ ಇರಲಿ [illegible] ಹೊಂದುವಂತಿಲ್ಲ. ಸಗಳಿಗೆ ಹೊಳ್ಳಿಟ್ಟರೆ ಅರದಿ ಬಿದ್ದದ ನಾಗಯ್ಯನ ಕೈಯಲ್ಲಿ ರಾತ್ರಿಗೆ ಹಾರಟೆ ಅದರ ಜತೆಗೆ ಒಂದು ಬೆಟರಿ ಲೇಂಪು' ಇಂಗ್ಲೀಷಿನವರು [illegible] ಎಂತಹರಲ್ಲಿ [illegible] ಒಬ್ಬ [illegible] ಕಂಡರೆ [illegible] ಧನಿಯರ ಸುದ್ದಿಯನ್ನು ತಿಳಿಯಬೇಕಾದರೆ ನೀವು ಬಚ್ಚನನ್ನೆ ಕೇಳಬೇಕು.

ಸಣ್ಣ ಧನಿಯರ ಸುದ್ದಿ ಕೇಳುತ್ತೀರಾ? ನಾಗೊಡೆಯರ ಪಂಚಾಯತಿಯೇ' ಅವರದರೆ ನ್ಯಾಯೂರು ರುಹಾರಾಜರ. ಅವರ ಜನಸ್ತಿಕೆ ಅವರ ಜಬರ್, ಅವರ ಮಾತಿಗಿದ್ದ ಧರಮು—ಈ ವಾಗಣೆಯಲ್ಲಿ ಮತ್ಯಾರಿಗಿದೆ? ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಲ್ಲ ಅಂತೇನೆ

ಒಡೆಯರಿಗೆ 'ದುಡ್ಡು ಎಂದರೆ ಕಸಕ್ಕೆ ಸಮ. ಸಂಪಾದನ ಮಾಡಿದರೂ ಹಾಗೆ, ಕಳೆದರೂ ಹಾಗೆ. ಒಂದು ರಾತ್ರೆಗೆ ಖುಶಿಕಂಡರೆ ಸಾವಿರ ರೂಪಾಯಿ ಚೆಲ್ಲಿಯಾರು'

ನೀವು ಇದನ್ನು ಕೇಳಿ ಇದೆಲ್ಲ 'ಗನ್ಪಾಲ' ಎಂದು ಅನ್ನಬಹುದು. ಆದರೆ ಬಚ್ಚ ತನ್ನ ಒಡೆಯನ ದರ್ಬಾರನ್ನು ಕಣ್ಣಾರೆ ಕಂಡವ. ಬಚ್ಚ ಹೇಳುವ ಕಥೆಯನ್ನು ಕೇಳಿರಿ. 'ಪಡುಪಟ್ಟಿಗೆ ಜಾರುಪೂಜಾರಿ ಸ್ವಲ್ಪ ಗಟ್ಟಿ ಒಕ್ಕಲು ಮಗನಪ್ಪ. ಒಂದು ವರ್ಷ ಅವನ ಗೇಣಿ ಬಾಕಿಯಾಯಿತು. ಒಂದಲ್ಲ ಎರಡಲ್ಲ—ಅರವತ್ತು ಮುಡಿ. 'ಜಾರು ಯಾಕೆ ಬಾಕಿಮಾಡಿದ ಎಂದು ದೊಡ್ಡ ಒಡೆಯರಾಡಿದ ಸುದ್ದಿ ಸಣ್ಣ ಧನಿಯರ ಕಿವಿಗೆ ಬಿತ್ತು. ಅವರು ಕೂಡಲೆ ನನ್ನನ್ನು ಕರೆಸಿ, 'ಬಚ್ಚ—ಆ ಜಾರೂಗೆ ಹೇಳು ಸಂಜೆಯೊಳಗೆ ೬೦ ಮುಡಿ ಅಕ್ಕಿಯನ್ನು ಭಂಡಾರು ಮನೆಗೆ ಮುಟ್ಟಿಸು ಅಂದರು. ನನಗೆ ತಿಳಿಯದೇ ಭಂಡಸಾಲೆಗೇನು ಎಂದು ಕೇಳಿದ. ಧನಿಯರು ನಕ್ಕು 'ನೀನೊಬ್ಬ ಕೆಪ್ಪ (ಕಿವುಡ) ಭಂಡಾರ್ಕನ ಮನೆಗೆ ಅಂದರು. ನಾನು ತಕ್ಷಣ ಜಾರೂಗೆ ತಿಳಿಸಿದೆ. ಅಕ್ಕಿ ಮುಡಿಗಳ ಸಾಲು ಅದೇ ಸಂಜೆಗೆ ಭಂಡಾರಕ್ಕನ ಮನೆಗೆ ಬಂದಿತು. ಅವಳ ಅದೃಷ್ಟ ಹೇಳಿ'

ಭಂಡಾರಕ್ಕ ಗೂ ಅವರಿಗೂ ಒಳ್ಳೇಯ [illegible] ಎಂದು ಬಚ್ಚನಿಗೆ ಗೊತ್ತು. ಆದರೆ ತೆಗೆದ [illegible] ಅಕ್ಕಿಯನ್ನು ಅಲ್ಲಿಗೆ ಸಾಗಿಸು ಎನ್ನಬೇಕಾದರೆ ಸಾಮಾನ್ಯ ಮರ್ಜಿಯಾಗಲಾರದು. ನಾಗಯ್ಯ ಧನಿಯರ ಒಂದು [illegible] ಸಾರದ ಹತ್ತು ನೋಟುಗಳನ್ನು [illegible]

[illegible]

ಆಗಿದ್ದಳೆ

ಅವಳನ್ನು ಇರಿಸಿಕೊಂಡವರು [illegible] ಗೊತ್ತಿಲ್ಲ. [illegible] ದರು. ಈಗ [illegible] ಅನ್ನುತ್ತಿದ್ದರು [illegible] ನವಾಕ [illegible] ಅನ್ನುವುದ [illegible] ನಮ್ಮ ಅರ್ಥ ತಿಳಿದ [illegible] ನಾಗ ಅವರಿಗೆ ಇಪ್ಪತ್ತನಾಲ್ಕು, ಇಪ್ಪತ್ತೈದು [illegible] ಇರಲಿಕ್ಕಿಲ್ಲ ಪ್ರಾಯದ ಕೊಬ್ಬು [illegible] ನಮ್ಮ ಧನಿಯರ ಮನೆ ನಡೆದೀತಾ

ಒಂದು ರಾತ್ರಿ ನಾನು ಧನಿಯರು ಕತ್ತಲಾದ ಮೇಲೆ ಪೇಟೆಯಿಂದ [illegible] ಯಾಕೋ ಏನೋ ಸುಶೀಲ ಮನೆಯ ಮುಂದಿನ [illegible] ಸುಶೀಲ [illegible] ಮೇಲೆ ಕುಳಿತುಕೊಂಡು ಎಲೆ ಅಡಿಕೆ ತಿನ್ನುತ್ತಿದ್ದಳು. ಯಾಕೋ ಏನೋ ನಮ್ಮ ಧನಿಯರ ನದರಿಗೆ ಸುಶೀಲ ಬಿದ್ದಳು. ಧನಿಯರಿಗೆ ಆಗ ಇಪ್ಪತ್ತು ವರ್ಷ ಆಯಿತೋ [illegible] ನಾವು ಅವಳ ಮನೆಯನ್ನು ದಾಟಿ ಹೋದಮೇಲೆ ಧನಿಯರು ನನ್ನನ್ನು ಕರೆದು 'ಬಚ್ಚ—ಅದ್ಯಾರದು?' ಕಾಣಲಿಕ್ಕೆ ಸುಮಾರಾಗಿದ್ದಾಳೆ ಎಂದರು

ನನಗ ಹೇಳಬೇಕೇ 'ಸು' ಎಂದರೆ ಸುಕ್ಕಸುಂಡೆ ಎಂದು. ಅಂದಾಜುಮಾಡಲಿಕ್ಕೆ ಮರುದಿನ ಸುಶೀಲ ಮನೆಗೆ ಹೋಗಿ 'ನಾಗಯ್ಯ ಒಡೆಯರು ನಿಮ್ಮನ್ನು ಭಾರಿ ವಿಚಾರಿಸಿದರು' ಅಂದ. ಅವಳ ಮೌಲು ಒಲ್ಲಿರಾ? 'ಯಾರ ಆ ಹುಡುಗನೇ' ಅಂದಳು. ತಿಂದ ತಗಲಿ.

(೧೧ನೇ ಪುಟಕ್ಕೆ ಮುಂದುವರಿದಿದೆ)

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ ವಿ ಪಂಡಿತರ

ಜೀವನಿ

ಸ್ತ್ರೀಯರ ಸಮಸ್ತ ವಿಧವಾದ ಗರ್ಭಾಶಯ ರೋಗಗಳಿಗೂ ಸಂಜೀವನ.

ಬೆಲೆ: ರೂ 1-0-0

ಸುಬಲಾ

ಶರೀರದ ಹೆಚ್ಚು ಉಷ್ಣವನ್ನು ಕಡಿಮೆಮಾಡಿ, ರಕ್ತಶುದ್ಧಿ ಪಡಿಸಿ, ರಕ್ತವನ್ನು ಹೆಚ್ಚುಮಾಡಿ ಶರೀರಕ್ಕೆ ಶಕ್ತಿಯನ್ನುಂಟುಮಾಡುವಂತೆ ಅಪೂರ್ವ ವನೌಷಧಿಗಳಿಂದ ತಯಾರಿಸಿರುವ ರುಚಿಕರ

ಬೆಲೆ: ರೂ 1-0-0

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ ಮಂಗಳೂರು

ಜಗತ್ತಿನ ದೃಷ್ಟಿಯಲ್ಲಿ ಭಾರತ

[ಲೇಖಕರು: ಪ್ರೊ. ಯನ್. ಆರ್. ಮಲ್ಕಾನಿ, ಯಂ. ಎ.]

ಈ ಲೇಖದ ಲೇಖಕರಾದ ಪ್ರೊ. ಮಲ್ಕಾನಿಯವರು ಯೂರೋಪಿನ ಸಂಚಾರ ಮಾಡಿ ಬಂದು ಕೆಲವೇ ದಿನಗಳಾದುವು. ಭಾರತದ ಕುರಿತು ಯುರೋಪಿನ ಜನತೆಯಲ್ಲಿ ಎಷ್ಟು ಅಜ್ಞಾನವು ತುಂಬಿರುತ್ತದೆಂಬುದನ್ನು ಈ ಲೇಖನದಲ್ಲಿ ತೋರಿಸಿಕೊಟ್ಟಿದ್ದಾರೆ. ಲೇಖಕರು ತಮ್ಮ ಅನುಭವಕ್ಕೆ ಬಂದ ಮಾತುಗಳನ್ನೇ ಈ ಲೇಖನದಲ್ಲಿ ಹೇಳುವುದರಿಂದ, ಅದನ್ನು ಓದಿ ವಾಚಕರಿಗೆ ತುಂಬಾ ಮನೋರಂಜನವಾಗುವುದು ಮಾತ್ರವಲ್ಲ, ವಿದೇಶಗಳಲ್ಲಿ ಹಿಂದುಸ್ಥಾನಕ್ಕೆ ಅನುಕೂಲ ಪ್ರಚಾರಕಾರ್ಯ ನಡೆಯುವುದು ಎಷ್ಟು ಅವಶ್ಯ ಎಂಬುದೂ ಸ್ಪಷ್ಟವಾಗುವುದು —'ವಿಶ್ವಮಿತ್ರ'

ಯುರೋಪದ ವ್ಯವಹಾರ ನೀತಿಗಳ ಕುರಿತು, ನಾವು—ಭಾರತೀಯರು—ಸಾಕಷ್ಟು ಪರಿಚಿತರಾಗಿ ಇರುವೆವಾದರೂ ಯೂರೋಪಿನ ಜನರು ನಮ್ಮ ಕುರಿತು ಬಹಳ ಅಜ್ಞಾನಿಗಳಾಗಿದ್ದಾರೆಂಬುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಯೂರೋಪ ಸಂಚಾರ ಮಾಡುತ್ತ ನಾನೊಂದು ದಿನ ವಿಯಲಾನ ನಗರದಲ್ಲಿದ್ದೆ. ಅಲ್ಲಿಯ ಒಬ್ಬ ಸಜ್ಜನನೊಡನೆ ನಡೆದ ನನ್ನ ಸಂಭಾಷಣೆಯು ಈಗಲೂ ನನಗೆ ನೆನಪಿದೆ. ಅವನು ಹಿಂದೂಸ್ಥಾನದ ರಾಜಮಹಾರಾಜರುಗಳು, ಆನೆ ಹುಲಿಗಳು ಮತ್ತು ಹಾವುಗಳ ವಿಷಯವನ್ನಷ್ಟೇ ಕೇಳಿದ್ದನು. ಸರ್ಪಗಳನ್ನು ಬಿಟ್ಟು ಉಳಿದುವುಗಳನ್ನು ನೋಡುವ ಭಾಗ್ಯವು ತನಗೆ ಒದಗಿಬಂದಿದ್ದರೆ ತಾನು ಬಹಳ ಭಾಗ್ಯವಂತನಾಗುತ್ತಿದ್ದೆನೆಂದು ಅವನು ಹೇಳಿದ! ಇದರಲ್ಲಿ ಯಾವ ಆಶ್ಚರ್ಯವಿದೆ? ದೇಶೀರಾಜನೊಂದಿಗೆ ಆನೆಯಮೇಲೆ ಕೂತು ಹುಲಿಯ ಬೇಟೆಮಾಡುವುದನ್ನು ಪ್ರತಿಯೊಬ್ಬ ಯೂರೋಪಿಯಾನನು ಮನಸಾರೆ ಮೆಚ್ಚುವನು—ಮಾತ್ರ, ಬೇಟೆಯಾಡುವಾಗ ಹಾವುಗಳ ಕಾಟ ಮಾತ್ರ ಇರಕೂಡದು! ! ಹಿಂದುಸ್ಥಾನದ ಕುರಿತು ಯೂರೋಪಿಯನರ ತಿಳುವಳಿಕೆಯು ಇಷ್ಟೇ ಇರುವುದು. ಹೌದು, ಭಾರತವಾಸಿಗಳಾದ ಯೂರೋಪಿಯನರಿಗಾದರೂ ಹಿಂದೂ ಧರ್ಮ, ಭಾರತೀಯ ಕಲೆ ಆರ್ಯಸಂಸ್ಕೃತಿಯ ಸ್ವಲ್ಪ ತಿಳುವಳಿಕೆ ಇದ್ದಿರಬಹುದು ಎಂದು ನೀವು ಊಹಿಸಬಹುದು. ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ವಿಷಯ, ಕನಿಷ್ಠಪಕ್ಷ ಅದರ ಕೆಲವು ಅಧ್ಯಕ್ಷ ಜನರ ವಿಷಯ ಅವರು ತಿಳಿದಿರಬಹುದೆಂದು ನೀವು ಎಣಿಸಬಹುದು. ಈ ಯೂರೋಪಿಯನರಿಗೆ ಭಾರತೀಯ ಸ್ವಾತಂತ್ರ್ಯ ಆಂದೋಳನದಲ್ಲಿ ಸ್ವಲ್ಪವಾದರೂ ಅಭಿರುಚಿ ಇದ್ದಿರಬಹುದೆಂದು ನೀವು ತಿಳಕೊಳ್ಳಬಹುದು. ಆದರೆ ನೂರಲ್ಲಿ ೯೦ ಜನರಿಗೆ ಈ ಯಾವ ಸಂಗತಿಯೂ ಗೊತ್ತಿರುವದಿಲ್ಲ. ಹೌದು; ಗಾಂಧಿ ಮತ್ತು ಠಾಗೋರರ ವಿಷಯವನ್ನು ಅವರಲ್ಲಿ ಕೆಲವರು ಸ್ವಲ್ಪ ಕೇಳಿದ್ದಾರೆ, ತಪ್ಪೆ. ಠಾಗೋರರ ಹೆಸರು ಮಾತ್ರ ಅವರಿಗೆ ಗೊತ್ತು. ಗಾಂಧಿ ಅಂದರೆ ಲಂಗೋಟಿ ಉಟ್ಟುಕೊಳ್ಳುವ ಒಬ್ಬ ಜನ, ಆಡಿನ ಹಾಲು ಕುಡಿಯುವರು, ಒಮ್ಮೊಮ್ಮೆ ಇಂಗ್ಲಿಷರೊಡನೆ ಜಗಳಕ್ಕೆ ಸಿಲ್ಕುವರು—ಹಾಂ; ಅವರು ಒಬ್ಬ ಮಹಾಪುರುಷರು, ಸತ್ಯ ಮತ್ತು ಶಾಂತಿಯ ಉಪಾಸಕರು, ಎಂದು ಅವರು ಹೇಳುವರು. ಆದರೆ ಗಾಂಧಿಯವರು ಎಲ್ಲಿದ್ದಾರೆ ಏನು ಮಾಡುತ್ತಾರೆ, ಎಂಬುದು ಯಾವುದೂ ಗೊತ್ತಿಲ್ಲ. ಯೂರೋಪಿನ ರಾಜ್ಯಗಳಲ್ಲಿ ಗಾಂಧಿಯವರ ಕುರಿತು ಇಷ್ಟಾದರೂ ಜನರ ತಿಳುವಳಿಕೆ ಇದ್ದುದಲ್ಲವಾದರೆ, ಆ ರಾಜ್ಯಗಳ ಹಿಂದುಸ್ಥಾನೀ ಜನರಿಗೆ ತಲೆ ಎತ್ತಿಕೊಂಡಿರಲಿಕ್ಕೂ ಕಷ್ಟವಾಗುತಿತ್ತು. ಗಾಂಧಿಯವರ ವಿಷಯವು ಯೂರೋಪಿನ ಜನರಿಗೆ ತಿಳಿದಿಲ್ಲವಾದರೂ ಅವರ ವಿಷಯದಲ್ಲಿ ಆ ಜನರಿಗೆ ಪೂಜ್ಯಭಾವವಿದೆ, ಗೌರವ ಬುದ್ಧಿ ಇದೆ. ಅದ್ದರಿಂದಲೇ ನಾನು ಎಲ್ಲಿಗೆ ಹೋದೆನೋ ಅಲ್ಲೆಲ್ಲ ಅಪಮಾನಿತನಾಗುವುದರಿಂದ ಬದುಕಿದೆ.

ಒಂದು ದಿನ ನಾನು ಬರ್ಲಿನಿನ ಮ್ಯೂಜಿಯಮಿಗೆ ಅದು ಮುಚ್ಚುವ ಅರ್ಧ ಘಂಟೆ ಮೊದಲು ಹೋದೆ. ನಾನೊಬ್ಬ ವಿದೇಶೀಯನೆಂದು ತಿಳಿದು, ಮ್ಯೂಜಿಯಮಿನ ಅಧಿಕಾರಿಯು ನನಗೆ ಅದನ್ನು ನೋಡಲಿಕ್ಕೆ ಬಿಟ್ಟನು. ನಾನು ಹಿಂತಿರುಗಿ ಬರುತ್ತಾ ಅವನಿಗೆ ನಮಸ್ಕಾರ ಕೊಟ್ಟೆ. ಆಗ ಆಶ್ಚರ್ಯಪಟ್ಟು ಅವನು ನನ್ನ ವಿಷಯವನ್ನು ಕೇಳಿದನು. ನಾನೊಬ್ಬ ಭಾರತೀಯ ಎಂದಾಕ್ಷಣ, ಅವನು ಕುತೂಹಲದಿಂದ—'ನಿಮಗೆ ಗಾಂಧಿವಿಷಯ ಗೊತ್ತೆ?' ಎಂದ. ಹೌದು ಎಂದಾಗ—'ಅವರೊಡನೆ ಸಂಭಾಷಣೆ ಮಾಡಿದ್ದೀರಾ?' ಎಂದು ಪುನಃ ಕೇಳಿದ. 'ಹೌದು, ನನ್ನ ಹತ್ತಿರ ಅವರದೊಂದು ಪತ್ರವಿದೆ.' ಎಂದೆ. ಅವನು ಆ ಪತ್ರವನ್ನು ನೋಡಿದ. ನನ್ನ ಹತ್ತಿರಕ್ಕೆ ಬಂದ. ಆದರೆ ಆ ಪತ್ರವನ್ನು ಮುಟ್ಟಲಿಲ್ಲ! ಹೇಳಿದ—'ಇದು ನನಗೆ ಎಷ್ಟು ಪವಿತ್ರ ಮತ್ತು ಪ್ರಿಯವಾಗಿರುವುದೆಂದರೆ, ಅದನ್ನು ಮುಟ್ಟಲಿಕ್ಕೆ ನಾನು ಯೋಗ್ಯನಿದ್ದೇನೆಂದು ತಿಳಿಯುವುದಿಲ್ಲ. ತಾವು ಸ್ವದೇಶಕ್ಕೆ ಮರಳಿದಾಗ ದಯೆಯಿಟ್ಟು ನನ್ನ ಪ್ರೇಮಾಭಿವಾದನವನ್ನು ತಿಳಿಸಲಿಕ್ಕೆ ಹೇಳುತಿದ್ದರು. ಆದರೆ ಗಾಂಧಿಯವರ ವಿಷಯವಾದ ಅವರ ತಿಳುವಳಿಕೆಯು ಮಾತ್ರ ಕಡಿಮೆ ಇತ್ತು. ಎಷ್ಟೋ ಮಂದಿ—'ಏನು ಗಾಂಧಿಯವರು ಯೋಗಿಗಳೆ?' ಎಂದು ಕೇಳಿದ್ದರು.

ಎಲ್ಲಾ ಕಡೆ ಇದೇ ಪ್ರಶ್ನೆ!

ಯೂರೋಪಿನ ಇತರ ಜನರಿಗಿಂತ ಇಂಗ್ಲೀಷರು ಹಿಂದುಸ್ಥಾನದ ಕುರಿತು ಸ್ವಲ್ಪ ಹೆಚ್ಚಿಗೆ ತಿಳಿದಿದ್ದಾರೆ. ಯಾಕೆಂದರೆ, ಇಲ್ಲಿ ಅವರ ಸ್ವಾರ್ಥವಿದೆ. ಹೀಗಿದ್ದರೂ ಹಿಂದೂಸ್ಥಾನದ ವಿಷಯವನ್ನು ತಿಳಕೊಳ್ಳಲಿಕ್ಕೆ ಅವರಿಗೆ ಆತುರವಿದೆಯೆಂದು ಯಾರೂ ತಿಳಕೊಳ್ಳಕೂಡದು. ಸಾಮಾನ್ಯವಾಗಿ ಈಗ ಇಂಗ್ಲಿಷರು ಮೊದಲಿಗಿಂತ ಹೆಚ್ಚು ನಮ್ರರಾಗಿದ್ದಾರೆ. ಹಿಂದುಸ್ಥಾನದ ವಿಷಯದಲ್ಲಿ ಅವರ ಅಸಹಿಷ್ಣುತೆ ಕಡಿಮೆ ಕಡಿಮೆಯಾಗಿದೆ, ಮತ್ತು ಕಾಂಗ್ರೆಸಿನ ಶಕ್ತಿ ಬಲ ಪರಾಕ್ರಮಗಳನ್ನು ಅವರು ತಿಳಿದಿದ್ದಾರೆ. ಹೆಚ್ಚಾಗಿ ಇಂಗ್ಲಿಷರು ಅವೇ ಮೂರು ಪ್ರಶ್ನೆಗಳನ್ನು ಎಂದರೆ—(೧) ತಾವು ಹರಿಜನರಿಗಾಗಿ ಏನು ಮಾಡಿದ್ದೀರಿ? (೨) ಹಿಂದು ಮುಸಲ್ಮಾನರೊಳಗೆ ಒಕ್ಕಟ್ಟಾಗುವುದು ಸಾಧ್ಯವೆ? (೩) ಹಿಂದುಸ್ಥಾನದಿಂದ ಇಂಗ್ಲಿಷರು ಹೊರಟು ಹೋದರೆ ಅದು ತನ್ನ ರಕ್ಷಣೆಯನ್ನು ಮಾಡಿಕೊಳ್ಳಲು ಸಮರ್ಥವಾಗಿದೆಯೆ? ಎಂದು ಕೇಳುತ್ತಿರುತ್ತಾರೆ. ಬಿಲಾಯತಿಯ ಪತ್ರಪತ್ರಿಕೆಗಳು ಹಿಂದುಸ್ಥಾನದ ಕುರಿತು ಸಂಪೂರ್ಣ ಮೌನವಾಗಿವೆ ಎಲ್ಲಿಯಾದರೂ ದಂಗೆ ಪಿತೂರಿಗಳಾದ ವರ್ತಮಾನಗಳನ್ನು ಮಾತ್ರ ಪ್ರಕಟಿಸುತ್ತವೆ. ಜವಾಹರಲಾಲರು ಇಂಗ್ಲಂಡಿಗೆ ಬಂದ ಸುದ್ದಿಯು ಆ ಪತ್ರಿಕೆಗಳಿಗೆ ಬೇಡ. ಆದರೆ 'ನಾನು ಇನ್ನು ಒಂದು ವರ್ಷಕ್ಕಿಂತ ಹೆಚ್ಚು ಬದುಕಲಾರೆ!' ಎಂದು ಗಾಂಧಿಯವರು ಹೇಳಿದರೆ ಅದನ್ನು ಆಗ ತ್ವಪ್ರಕಟಿಸುವರು. ಒಂದು ದಿನ ನ್ಯೂ ಸ್ಟೇಟ್ಸ್ ಮೇನ ಮತ್ತು ನೇಶನ ಎಂಬ ಪ್ರಸಿದ್ಧ ಪತ್ರಿಕೆಯ ಸಂಪಾದಕರೊಡನೆ ಸಂಭಾಷಣೆ ಮಾಡಿಕೊಂಡಿದ್ದೆ. ತಾವು ಭಾರತೀಯ ವಿಚಾರಗಳನ್ನು ಪತ್ರಿಕೆಯಲ್ಲೇಕೆ ಪ್ರಕಟಿಸುವುದಿಲ್ಲ ಎಂದು ಕೇಳಿದಾಗ ಅವರು ಕೊಟ್ಟ ಉತ್ತರವು ತುಂಬ ಬೋಧಪ್ರದವಾಗಿದೆ. ಅವರು ಹೇಳಿದರು—'ಹಿಂದುಸ್ಥಾನಕ್ಕಿಂತಲೂ ಹೆಚ್ಚು ಮಹತ್ವವುಳ್ಳ ಬೇರೆ ಎಷ್ಟೋ ದೇಶಗಳಿವೆ. ನಮಗೀಗ ಜೆಕೊಸ್ಲೊವಾಕಿಯ, ಸ್ಪೈನ, ಚೀನ ವಿಷಯಗಳು ಹೆಚ್ಚು ಪ್ರಾಮುಖ್ಯವಾಗಿವೆ. ಹಿಂದುಸ್ಥಾನವಾದರೋ ಇಷ್ಟರವರೆಗೆ ಯೂರೋಪಿನ ಕಾರ್ಯಕಾರ್ಯಗಳಿಂದ ಹೊರಗಿದೆ. ಜನರು ಎಷ್ಟರ ತನಕ ಕೊಲ್ಲಲ್ಪಡುವುದಿಲ್ಲವೋ ಅಷ್ಟರತನಕ ಅವು ಸಮಾಚಾರಗಳೇ ಅಲ್ಲ. ಸ್ಪೈನಿನಲ್ಲಿ ನೂರಾರು, ಚೀನದಲ್ಲಿ ಸಾವಿರಾರು ಕೊಲ್ಲಲ್ಪಡುತಿದ್ದಾರೆ. ಹಿಂದುಸ್ಥಾನದ ವಿಷಯವಾಗಿ ಬ್ರಿಟಿಷ ಸಮಾಚಾರ ಪತ್ರಗಳು ಬರೆಯಬೇಕೆಂದಾದರೆ ಹಿಂದುಸ್ಥಾನದ ಜನರು ಹೀಗೆಯೇ ಕೊಂದುಕೊಲ್ಲಿಸಿಕೊಳ್ಳಬೇಕಾಗುವುದು. ಈಗ ನೂರರಲ್ಲಿ ಒಬ್ಬನಿಗಾದರೂ ಹಿಂದುಸ್ಥಾನದ ವಿಷಯವು ಬೇಕಾಗಿಲ್ಲ. ಅದ್ದರಿಂದ ನಾನು ಅದನ್ನು ನನ್ನ ಪತ್ರಿಕೆಯಲ್ಲಿ ಒರಿಯಲಾರೆ!' ಈ ಸಂಪಾದಕರು ಸ್ವತಂತ್ರಬುದ್ಧಿಯವರು ಸುತ್ತಾಹಿಗಳು ಆಗಿದ್ದಾರೆ. ಸ್ವತಂತ್ರ ವಿಚಾರವುಳ್ಳವರೂ ಆಗಿದ್ದಾರೆ. ಆದರೆ ಜನರಿಗೆ ಬೇಡವಾದ್ದನ್ನು ಅವರು ತಮ್ಮ ಪತ್ರಿಕೆಯಲ್ಲಿ ಹೇಗೆ ಬರೆಯಬಲ್ಲರು? ಹಿಂದುಸ್ಥಾನದ ಸುದ್ದಿಗಳನ್ನು ಕಳುಹಿಸಲಿಕ್ಕೆ ಅವರಿಗೆ ಹಿಂದುಸ್ಥಾನಿ ಸುದ್ದಿಗಾರರು ಬೇಡ. ಯಾಕೆಂದರೆ ಅವರು ಬ್ರಿಟಿಷರ ದೃಷ್ಟಿಯಿಂದ ಆ ಸುದ್ದಿಗಳನ್ನು ಬರೆಯಲಾರರು. ಗಾಂಧಿಯವರು ಸಜ್ಜನರು ಹೌದು. ಆದರೆ ಅವರ ರಾಜಕಾರಣಗಳ ಮೇಲೆ ವಿಶ್ವಾಸವಿಡಲಿಕ್ಕಾಗುವುದಿಲ್ಲವೆನ್ನುತ್ತಾರೆ. ಗಾಂಧಿಯವರನ್ನು ದೊಡ್ಡ ಪ್ರಚಾರಕರೆಂದೂ, ಅವರಿಂದ ಡಾ. ಗೋಬೆಲ್ಸ (ಹಿಟ್ಲರನ ಹಸ್ತಕ) ಕೂಡ ಸ್ವಲ್ಪ ಸ್ವಲ್ಪ ಕಲಿತುಕೊಳ್ಳಬಹುದೆಂದೂ ಹೇಳುತ್ತಾರೆ. ಈಗೀಗ ಗಾಂಧಿಯವರನ್ನು ಇಂಗ್ಲಿಷರು ಸ್ವಲ್ಪ ಅನುಕೂಲದೃಷ್ಟಿಯಿಂದ ನೋಡಲಾರಂಭಿಸಿದ್ದಾರೆ. ಅದೂ ಲಾರ್ಡ ಲಿನ್‌ಲಿತ್‌ಗೋ ವ್ಹಿಸರಾಯರಿಗೆ ಮರಳಿ ಬಂದತರುವಾಯ. ಅವರ ಆತ್ಮಕಥೆಯು ಪ್ರಕಟವಾದಂದಿನಿಂದ ಜವಾಹರಲಾಲರನ್ನು ಜನರು ಸ್ವಲ್ಪ ಹೆಚ್ಚಿಗೆ ತಿಳಿಯಲಾರಂಭಿಸಿದ್ದಾರೆ. ಜನರು ಅವರನ್ನು ನೋಡುವ ಉತ್ಸಾಹದಿಂದ ಇದ್ದಾರೆ. ಆದರೆ ಸರಕಾರವು ಅವರನ್ನು ಇನ್ನೂ ಭಯಂಕರ ಮತ್ತು ರಾಜಿಗೆ ಬಾರದಂಥ ಅದ್ಭುತವ್ಯಕ್ತಿಯೆಂದು ತಿಳಕೊಂಡಿದೆ.

ರಾಜಮಹಾರಾಜರು ಮತ್ತು ವಿದ್ಯಾರ್ಥಿಗಳು.

ಯೂರೋಪಿಯನರಲ್ಲಿ ಹಿಂದುಸ್ಥಾನ ವಿಷಯವಾದ ಜ್ಞಾನವು ಬೆಳೆಯಲಿಕ್ಕೆ ಅದರಲ್ಲಿ ನಮ್ಮ ಕುರಿತು ಅಭಿರುಚಿ ಉಂಟಾಗುವ(ದಕ್ಕೆ) ನಾವೇನು ಮಾಡಿದ್ದೇವೆ? ಯೂರೋಪಿಗೆ ಹೋಗುವ ಭಾರತೀಯರೆಂದರೆ ಹೆಚ್ಚಾಗಿ ಇಲ್ಲಿಯ ರಾಜಮಹಾರಾಜರು ಮತ್ತು ವಿದ್ಯಾರ್ಥಿಗಳು. ಬ್ರಿಟಿಷ ಸಾಮ್ರಾಜ್ಯಾಂತರ್ಗತ ದೇಶಗಳಿಗೆ ಇಲ್ಲಿಯ ಕೆಲವು ಸಣ್ಣ ವ್ಯಾಪಾರಗಳೂ ಕೂಲಿಗಳೂ ಹೋಗುತ್ತಾರೆ. ವ್ಯಾಪಾರಗಳು ಮತ್ತು ಕೂಲಿಜನರನ್ನು ನೋಡಿ ಯೂರೋಪಿಯನರಿಗೆ ಸ್ವಲ್ಪ ಕುತೂಹಲವುಂಟಾಗಬಹುದು? ಆದರೆ ಅವರಿಂದ ಯೂರೋಪಿಯನರು ಹಿಂದುಸ್ಥಾನದ ಯಾವ ವಿಷಯಗಳನ್ನು ತಿಳಕೊಳ್ಳಬಹುದು? ಮತ್ತು ಅಲ್ಲಿಗೆ ಹೋಗುವ ರಾಜಮಹಾರಾಜರುಗಳ ಕುರಿತು ಏನನ್ನು ಹೇಳದಿರುವುದೇ ವಾಸಿ. ಹಿಂದುಸ್ಥಾನದಲ್ಲಿ ಸಾಧ್ಯವಿಲ್ಲದ ಭೋಗವಿಲಾಸಗಳ ಅನುಭವಕ್ಕಾಗಿಯೇ ಅವರು ಯೂರೋಪಿಗೆ ಹೋಗುವರು. ಮತ್ತೆ ಇಲ್ಲಿಂದ ವಿದ್ಯಾರ್ಥಿಗಳು ಹೋಗುವುದು ಕೂಡ ಯೋಗ್ಯತೆಯನ್ನು ಸಂಪಾದಿಸಲಿಕ್ಕೆ ಅಲ್ಲ. ಪರೀಕ್ಷೆ ಪಾಸು ಮಾಡಿಸಲಿಕ್ಕೆ ಆಗಿದೆ. ಅವರ ದುಂದುವೆಚ್ಚ, ಜೀವನಕ್ರಮ ಇವುಗಳಿಂದ ಯಾರಿಗೂ ಭಾರತದ ಕುರಿತು ಸದ್ಭಾವನೆಯು ಉಂಟಾಗಲಾರದು. ಇಂಗ್ಲಾಂಡಿಗೂ ನಮ್ಮಗೂ ಇರುವ ವ್ಯಾಪಾರ ಸಂಬಂಧವನ್ನು ನೋಡಿದರೂ ಕೂಡ ಇಲ್ಲಿಯ ವಿದ್ಯಾರ್ಥಿಗಳು ಅಲ್ಲಿಗೆ ಹೋಗುವುದು ನಷ್ಟದಾಯಕವಾಗಿದೆ.

ಉಡಿಗೆತೊಡಿಗೆ ಮಾನಮರ್ಯಾದೆ.

ಭಾರತೀಯ ವಿದ್ಯಾರ್ಥಿಗಳು ಅಲ್ಲಿಗೆ ಹೋಗಿ ಕಲಿತುಕೊಳ್ಳುವುದನ್ನು ನಾವಿಯೋ ನಾವು ಅವರನ್ನು ಅಲ್ಲಿಗೆ ಹೋಗಬಾರದೆನ್ನುವುದಲ್ಲ. ಆದರೆ ಅಲ್ಲಿಗೆ ಹೋಗುವ ವಿದ್ಯಾರ್ಥಿಗಳು ಅಲ್ಲಿ ಇಟ್ಟುಕೊಳ್ಳುವ ಆಚಾರ, ವ್ಯವಹಾರ, ರೀತಿನೀತಿ, ಜೀವನಕ್ರಮ, ಇವು ಕೂಡ ಭಾರತಕ್ಕೆ ಲಾಂಛನಾಸ್ಪದವಾಗಿರುವವು. ಒಂದು ದೇಶವಿಷಯವನ್ನು ತಿಳಕೊಳ್ಳಲಿಕ್ಕೆ ಆ ದೇಶವಾಸಿಯ ಉಡಿಗೆತೊಡಿಗೆಯು ಬಹಳ ಸಹಾಯಕವಾಗುತ್ತದೆ. ನಮ್ಮ ಸ್ತ್ರೀಯರು ಉಟ್ಟುಕೊಳ್ಳುವ ಸೀರೆಯು ಅತ್ಯಂತ ಸರಳ, ಸುಂದರ ಮತ್ತು ಆಕರ್ಷಕ ಉಡಿಗೆಯಾಗಿದೆ. ಇಲ್ಲಿಯ ಸ್ತ್ರೀಯರು ಅಲ್ಲಿಗೆ ಹೋಗುವಾಗ ಸೀರೆಗಳನ್ನು

[೬ ನೇ ಪುಟಕ್ಕೆ ಮುಂದುವರಿಯುವುದು]

ಜಾಗ್ರತೆ! ಜಾಗ್ರತೆ

ದೇಶ ವಿದೇಶಗಳಲ್ಲಿ ಪ್ರಖ್ಯಾತವಾದ ನಮ್ಮ ಮಾಲುಗಳು ವಿಶ್ವಪ್ರಶಂಸನೀಯವಾಗಿ ದಿನೇ ದಿನೇ ಗಿರಾಕಿಗಳು ಹೆಚ್ಚುತ್ತಿರುವದನ್ನು ಕಂಡು, ಈ ಹೆಸರಿನಲ್ಲಿ ಬೇರೆ ನಕಲಿ ಮಾಲುಗಳುಂಟಾಗತೊಡಗಿರುವದರಿಂದ ನಮ್ಮ ಗಿರಾಕಿಗಳು ಕೆಳಗಿನ ಅಡ್ರೆಸ್ಸನ್ನು ನೋಡಿ ತೆಗೆದುಕೊಳ್ಳಿರಿ.

ನಕಲಿ ಮಾಲಿಗೆ ಮೋಸಹೋಗಬೇಡಿರಿ!

DRAKSHAMRUTHA

ದ್ರಾಕ್ಷಾಮೃತ

ಪಂಡಿತ ಜವಾಹಿರಲಾಲ ನೆಹರೂ ಬಂದಾಗ ಹುಬ್ಬಳ್ಳಿ ವಸ್ತುಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ ಸಾವಿರಾರು ಜನರಿಂದ ವರ್ಣಿಸಲ್ಪಟ್ಟು, ಭಂಗಾರದ ಮೆಡಲ್ ಮತ್ತು ಅನೇಕ ಸರ್ಟಿಫಿಕೇಟುಗಳು ದೊರೆತಂಥ

ಒಂದೇ ಸವನೆ ೫೦ ವರ್ಷದ ಅನುಭವದಿಂದ, ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ದೇಶೀ ಯಂತ್ರಗಳ ಮೂಲಕ ತಯಾರಾಗುವ,

ಶಕ್ತಿಯ ಮೇಲೆ ಮೊದಲನೇ ತರದ ಟಾನಿಕ್.

ಇದರ ಸೇವನೆಯಿಂದ ರಕ್ತ ಶುದ್ಧಿಯಾಗುವದು, ಶೌಚ ಸಾಫವಾಗಿ ಪಚನಕ್ರಿಯೆ ಬೆಳೆಯುವದು, ಕಣ್ಣುಕೈ, ಕಾಲು, ಉರಿಯೋಣ ಮೊದಲಾದ ಉಷ್ಣ ಮತ್ತು ಪಿತ್ತವಿಕಾರಗಳು ನಾಶವಾಗುವವು, ಸ್ತ್ರೀಯರಿಗೆ ಮುಟ್ಟುದೋಷದಿಂದಾದ ಸರ್ವರೋಗ ನಿವಾರಣೆಯಾಗಿ ಸಂತತಿಧಾರಕವಾಗುವದು. ಅಂತೂ ಇದು ಬಾಲ-ವೃದ್ಧ ಸ್ತ್ರೀಪುರುಷರಿಗೆ ಅತಿ ಉಪಯುಕ್ತವಾಗಿದೆ.

ಕ್ರಯ ೧ ಬಾಟ್ಲಿ ರೂ. ೧।

ಮ್ಯಾನೇಜರ್: ದ್ರಾಕ್ಷಾಮೃತ ಡಿಪೋ, ಪೋಸ್ಟು—ನಿಪ್ಪಾಣಿ, ಜಿಲ್ಲಾ ಬೆಳಗಾಂವ.

ಸ್ಟಾಕಿಸ್ಟರು: ಮಂಗಳೂರು-ಕೆನರಾ ಮೆಡಿಕಲ್ ಸಪ್ಲೈಯರ್ಸ; ಯು. ಆರ್. ಶೆಣೈ ಮತ್ತು ಸ್ಕೂಲ್ ಬುಕ್ ಕೊ. ಬಂಟವಾಳ-ಎ. ಆರ್. ಪ್ರಭು. ಕುಂದಾಪುರ- ಕೆ. ಆರ್. ಭಟ್ಟ ಉಡುಪಿ: ಪೈ ಫಾರ್ಮಸಿ. ಪುತ್ತೂರು: ಶ್ರೀನಿವಾಸ ಪೈ. ಕಾರ್ಕಳ: ವಿ. ವಿ. ಶೆಣೈ. ಕಾಸರಗೋಡು: ಕೆ. ರಾಮನಾಯಕ ಮತ್ತು ಭಕ್ತಾ ಬ್ರದರ್ಸ್.

'DILROZ' Regd

'Dil Roz' is a sure cure for Oriental sores, local sores, all kinds of deep-rooted sores; skin eruptions Pimples, Eczema, Ringworm, Sinus Fistula auxillary-Abscess.

There is no need of dressing the wounds, nor are baths prohibited

Price Rs. 2. Postage extra.

TAHIR DIN

ಸಪ್ತಾಹಾಂತ್ಯದ ಸುದ್ದಿಗಳು

ಝಾನ್ಸಿ ಜಿಲ್ಲಾ ಪ್ರಜೆಗಳಲ್ಲಿ ಮೂವರನ್ನು ಒರ್ಛಾ ರಾಜ್ಯದ ಪೊಲೀಸರು ರಾಜ್ಯದ ಗಡಿಯ ಹೊರಗೆ ಬಂದು ಗುಂಡಿಕ್ಕಿ ಗಾಯಪಡಿಸಿರುವ ರಿಂದು, ಯುಕ್ತಪ್ರಾಂತ್ಯದ ಸರಕಾರದ ಶೀಘ್ರ ಕಿಗೆ ಕರೆಲಾಗಿದೆ ಕೂಲಂಕಷಗಳನ್ನು ಶೀ ಮುಖ್ಯ ಮಂತ್ರಿಗಳು ಕೆಂಪೀ ವಾರ್ತೆ ಕಳಿಸಿರುತ್ತಾರೆ ಈ ಸಂದರ್ಭದಲ್ಲಿ ಶ್ರೀ ನೆಹರುಗಳು ಹೀಗೆನ್ನುವರು –ದೇಶೀಯ ರಾಜ್ಯಗಳ ಪೊಲೀಸರು ಪ್ರಜೆಗಳ ಮೇಲೆ ನಡೆಸುವ ನಾನಾ ಅತ್ಯಾಚಾರಗಳು ಸರ್ವಸಾಮಾನ್ಯವಾಗಿ ಗೋಚರಕ್ಕೆ ಬರುತ್ತವೆ ಇವು ಅವರ ನಿತ್ಯ ಕಲ್ಪಿತವು, ಆಚರಣೆಗಳಾದರೂ, ಈ ಎಾರಿ ಬ್ರಿಟಿಷ ಸಾಮ್ರಾಜ್ಯದಲ್ಲೂ ನುಗ್ಗಿ ಹಿಂಸೆಮಾಡುವುದು ವಿಶೇಷ ಅವರು ತಮ್ಮ ರಾಜ್ಯದ ಒಂದು ಸ್ಥಳದಿಂದ ಮತ್ತೊಂದಕ್ಕೆ ಹೋಗುವಾಗ, ಬ್ರಿಟಿಷ ಜಿಲ್ಲೆಯನ್ನು ದಾಟಿ ಹೋಗುವುದು (ಶಾಂತಿ ಕರ್ತವ್ಯಗಳಿಗಾಗಲ್ಲ) ಜನಗಳ ಮೇಲೆ ಯುದ್ಧಮಾಡುವುದು ಮೊದಲಾದುವನ್ನು ಸರಕಾರವು ಅನುಮೋದಿಸ ಬಾರದು. ಹಾಗೆ ಮಾಡಿದರೆ, ಅವರು ಯುದ್ಧಗಳೆಂದೇ ಪರಿಗಣನೆಗೆ ಬರಬೇಕಾಗುವುದು ಮಂತ್ರೀಶ್ವರರು ಏನು ಮಾಡುವರೋ ನೋಡಬೇಕು

++ ++ ++

ಸಿಂಧ ಸರಕಾರಕ್ಕೆ ಹೊಸ ಮಂತ್ರಿಯಾಗಿ ಸರ್ ಗುಲಾಮ ಹುಸ್ಸೇನ ಹಿದಾಯತ್ ಉಲ್ಲಾರನ್ನು ನೇಮಿಸಲಾಗಿದೆ ಶ್ರೀ ಅಲ್ಲಾ ಬಕ್ಷರ್ ಇದೇ ಎಂದು ಕೀರ್ತಿ

+ ++ ++

ಜಾರಿಯಾದಲ್ಲಿನ ಯುರೋಪಿಯ ಸಂಘದ ೩೦೦ ಮಂದಿ ಪ್ರತಿನಿಧಿಗಳು ಶ್ರೀ ರಾಜೇಂದ್ರ ಬಾಬು ಗಳನ್ನು ಸ್ವಾಗತಮಾಡಿದರು. ಅವರ ವಾರ್ಷಿಕೋತ್ಸವದ ಕಾಲದಲ್ಲಿ ಶ್ರೀ ಬಾಬುಗಳು–ಇಷ್ಟು ಭಿನ್ನ ಭಾಷೆ ಮತಾಚಾರಗಳಿರುವ ಈ ದೇಶಕ್ಕೆ ಪ್ರತಿನಿಧಿ ಅಗತ್ಯವಾಗಿದೆ ಅದರೆ, ಅದ ಮಾತ ಗ್ರಹಿಸಿ ಅತ್ಯಂತ ಅಗಾಧವಾದ ಅದನ್ನು ಕಾಂಗ್ರೆಸು ಧರಿಸುವುದ ಎಂದರು

++ ++ ++

ಒಂಗೋಲದ ವ ತ್ರಿಕ್ಕಿಂದ ಕೃಷಿಕ ಪ್ರಜಾಪಕ್ಷದವರಿಂದ ಒಬ್ಬ ಮಂತ್ರಿಗಳ ರಾಜೀನಾಮೆ ಕೊಟ್ಟು ಹೇಳಕ್ಕೆ ಬಂದರೆ, ಅತ್ತ ಹಿಂದೂ ಮಹಾಸಭೆಯ ವರು, ಸುಳ್ಳು ಛಲವನ್ನಿ ಹರಡಿ, ಮಹಮ್ಮದೀಯರು ಮೇರೆ ಜನಾಂಗದವರೆಂದು ಸಾರಿ, ಈ ಮಂತ್ರಿಮಂಡಲವು ಹಿಂದು ಗಳನ್ನು ವಿರೋಧಿಸಿ ಆಳತೊಡಗಿರುವರು ಇವರೊಡನೆ ಸೇರಿರುವ ಹಿಂದೂ ಮೆಂಬರರು ರಾಜೀನಾಮೆ ಕೊಟ್ಟು ಹೊರಡಬೇಕು ಎಂದು ಸಾರಿದ್ದಾರೆ

++ ++ ++

ಮುಂಬಾಯಿ ಮದ್ರಾಸು ಮಂತ್ರೀಶ್ವರರು ಈ ವಾರ ರಾಜೀನಾಮೆ ಕೊಟ್ಟು, ಹತ್ತಿರದ ದೇಶೀಯ ರಾಜ್ಯಗಳಲ್ಲಿನ ಸತ್ಯಾಗ್ರಹವನ್ನು ನಡೆಸುವವರಿದ್ದಾರೆಂದು ಸುಳ್ಳು ವಾರ್ತೆ ಬಾಂಬೆಯಲ್ಲಿ ಹಬ್ಬಿದೆ ಡಾ। ಪಟ್ಟಾಭಿ ಸೀತಾರಾಮಯ್ಯನವರು ಹೈದರಾಬಾದನ್ನು, ಶ್ರೀ ಮೀರರು ರಾಜಕೋಟೆಯನ್ನು, ಶ್ರೀ ರಾಜಗೋಪಾಲಾಚಾರ್ಯರು ತ್ರಿವಾಂಕೂರನ್ನು ಸುಗಿ, ಪ್ರಜಾ ಚಳವಳದಲ್ಲಿ ಭಾಗವಹಿಸುವರು ಎಂದೇ ಸಾರಲಾಗಿತ್ತು ಅದೆಲ್ಲವೂ ಸುಳ್ಳೆಂದು ಆಯಾ ಮಂತ್ರಿಗಳು ಪ್ರಕಟಿಸಿರುವರು.

++ ++ ++

ಹೈದ್ರಾಬಾದು ಸತ್ಯಾಗ್ರಹಿಗಳು ಜನಿವಾರವನ್ನು ಧರಿಸಿಕೊಳ್ಳಬಾರದು, ಸಂಧ್ಯಾವಂದನೆ ಮಾಡಬಾರದು, ಎಂದು ಜೈಲು ಅಧಿಕಾರಿಗಳು ಅಪ್ಪಣೆ ಕೊಟ್ಟ ಕಾರಣ, ಮೂವರು ಹಿಂದುಗಳು ತಾ ಗಿನಿಂದ ಉಪವಾಸ್ಥರಾಗಿದ್ದಾರೆ

++ ++ ++

ಗೌಹಾತಿಯಲ್ಲಿ ರಾಜದ್ರೋಹಾತ್ಮಕ ಭಾಷಣ ಮಾಡಿದ ತಾಯಬ್ ಶೇಕ್‌ನನ್ನು ಮೊನ್ನೆ ಅಹ್ಮದಾಬಾದಿನಲ್ಲಿ ಕೈದುಮಾಡಿ, ಕಲ್ಕತ್ತಕ್ಕೆ ಕಳುಹಿ ಮೊಕದ್ದಮೆಯಲ್ಲಿ ವಿಚಾರಣೆಮಾಡುವರು ಗೌಹಾತಿಯಲ್ಲಿ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಕಾಲದಲ್ಲಿ, ಇವರು ಮಾಡಿದ ಭಾಷಣ ಅಷ್ಟು ಜೋರಾಗಿತ್ತಂತೆ.

++ ++ ++

ಇಜಿಪ್ತದ ದ ಸಾಹಸ ಸಂಸ್ಕಾರವರ (ಮುಖ ಪರ) ಮಾಹಿ ತಾ ಕಳೆ ಮೊಬ್ಬಾ ಮಿಗೆ ತಲಪುವರ ಅಲ್ಲಿಂದ ಥಿಲ್ಲಿಗೆ ಬಂದು, ಜಮಾಯತ್ ಅಲ್ ಉಲೇಮ ದ ಅಧ್ಯಕ್ಷರನ್ನು ಕಾಣುವರು ಆ ಸಂಘದ ಅಧಿವೇಶನವು ಅಗ ಅಲಿ ಒರಗುವುದು.

++ ++ ++

೧೯೩೦–೩೨ರಲ್ಲಿ ಸತ್ಯಾಗ್ರಹದ ದೆಸೆಯಿಂದ ಸರಕಾರದ ವಶಕ್ಕೆ ಕಳೆದುಕೊಂಡವರನ್ನು ಸ್ಥನ ನೇಕರಿಗೆ ಸೇರಿಸಿಕೊಳ್ಳುವುದಕ್ಕಾಗಿ ಸರಕಾರವು ನಿರ್ಧರಿಸಿದೆ ಹಿಂದೆ ಮಾಡಿದ ಸಿಪಾಯಿಯ ಅವಧಿಯನ್ನು ಮಂದಕ್ಕೆ ಇವರಿಗೆ ಕೂಡಿಸಿ ಕೊಡಲಾದೀತು

++ ++ ++

ರಾಜಕೋಟದ ಸತ್ಯಾಗ್ರಹಿಗಳ ಲಲನೀ ವಿಕ್ಟೋರಿಯನ್ನು ಕೈದುಮಾಡಲಾಗಿದೆ ಜಮನಾ ಗರದ ರಾಜರು ಈ ದಿನ ದಿವಾನರನ್ನು ಕಾಂಡ್ರಾ ೧೦೦ ಪಿ ಕ್ಕೈದಿಗಳ ಇರುವರ

ಜಗತಿನ ದೃಷ್ಟಿಯಲ್ಲಿ ಭಾರತ

ಒನೇ ಪುಟದಿಂದ ಮುಂದುವರಿದುದು

ಬ್ರಿಕಾಂಡೇ ಹೋಗುವರ ಅಷ್ಟರಿ ದ ಕಾಲ ಜನರ ಇಲಿಯಸ್ಸೀಯ ರನು ಒಹಳ ಇಲ್ಲಿ ತ್ತಿದೆ ಎಡರೆ ನಮ್ಮ ದೇಶದ ಎಂದ ಮುಂದುವರಿದ ವಿದ್ಯಾರ್ಥಿಗಳ ಎನುವಾಡು ವರ ಅವರ ಯೂರೋಪಿಯ ನರ ಉಡಿಗೆ ತೊಡಿಗೆ ಸ್ನೇ ಅನ ಕರಿಸುವರ ಉಡಿಗೆಯು ಅಗ್ಗವಾಗಿರಬಹುದೆ ಯುರೋಪಿಯರ ಉಡಿಗೆಗಿಂತಲೂ ನಮ್ಮ ಉಡಿಗೆಯು ಹೆಚ್ಚು ಅಗ್ಗವಾಗಿರುವಾಗ ಮತ್ತು ನಮಗೆ ಒಪ್ಪುವಂತದ್ದು ಆರೋಗ್ಯವೂ ಆಗಿರುವಾಗ ನಾವು ಅನ್ಯರನ್ನು ಅನುಕರಿಸಬೇಕು ನಾನು ನನ್ನ ದೇಶದ ಉಡಿಗೆಯಲ್ಲೇ ಇಟಲಿಗೆ ಹೋದಾಗ ಮೊದಲು ... ನನ್ನ ... ಗೇಲಿಮಾಡತೊಡಗಿದ? ಆದರೆ ಅದ ನನ್ನ ರಾಷ್ಟ್ರೀಯ ಉಡಿಗೆಯಾಗಿದೆ ಎಂದಾಗ ಅವರು ನನ್ನನ್ನು ಪ್ರಶ್ನೆಗಳಿಂದಾರಂಭಿಸಿದರ ಮತ್ತು ಇತರ ಭಾರತೀಯರು ಕೂಡ ಇಲ್ಲಿಗೆ ದೇಶೀ ಉಡಿಗೆಯಿಂದ ಯಾಕೆ ಬರುವುದಿಲ? ಎಂದು ಕೇಳತೊಡಗಿದರು

ಇಟಾಲಿಯನನೊಬ್ಬನ ಗದರಿಕೆ

ಬಹಳ ಮಾತನ್ನು ಉದಿಸಿ ಕ ರೆ ಹೇಳಬಹುದು ಆದನ್ನೇ ... ಕ ... ಕೇಳಬಹುದು ಇಟಲಿಯ ಲಿದ್ದಾಗ ... ನನ್ನನ್ನು ಗದರಿಸಿ ಎನು, ... ಭಾಷೆ ಇರ ... ಇಲ್ಲಿ ... ವಾಗ ಇಂಗ್ಲೀಷಿನಲ್ಲಿ ಮಾತಾಡುವುದಕ್ಕೆ ... ಕೇಳಿದಾಗ ... ಅಧರಿಂದ ... ನನ್ನ ಪ್ರಯಾಣದಲ್ಲಿ ಸಾಧ್ಯವಿದ್ದಲ್ಲೆಲ್ಲ ... ಮಾತೃಭಾಷೆ ... ಹಾಡಿಕೆಯಿಂದ ... ಇನ್ನೂ ಆಶ್ಚರ್ಯವಾಗುವುದ ... ವಿದ್ಯಾರ್ಥಿಗಳ ... ಹೋದಾಗ ... ಹೀಗೆ ... ಪುಸ್ತಕಗಳ ... ಕೇಳಿದರಾದರೂ ... ವಿದ್ಯಾರ್ಥಿಗಳ ... ಇಂಗ್ಲೀಷಿನ ... ಪತ್ರಿಕೆಗಳನ್ನು ಸೇದತ್ತ ... ಈ ವಿದ್ಯಾರ್ಥಿಗಳ ಭಾರತ ...

... ಮಾತೃಭಾಷೆಯನ್ನು ... ಇಂಗ್ಲೀಷಿನಲ್ಲಿ ... ಗೌರವ ... ಆದೀತು!

ನಮ್ಮ ಮಾತೃಭೂಮಿ

ಈಗಲಾದರೆ ... ಹಿಂದಿನ ... ತಮ್ಮ ... ದೇಶದ ... ಎಲ್ಲಿ ... ಇಲ್ಲಿ ...

ಕೆಟ್ಟ ಕೆಮ್ಮು ಮತ್ತು ಎದೆ
ನೋವನ್ನು ಗುಣಪಡಿಸಿಕೊಳ್ಳಿರಿ

ಕೆಮ್ಮು ಬ್ರೊಂಕೈಟಿಸ ಮತ್ತು ಎದೆಯ ಬಾಧೆಯನ್ನು ಅಲಕ್ಷಿಸದಿರಿ ಅದು ನಿಮ್ಮ ಸುಖವನ್ನೇ ಸೂರೆಗೊಳ್ಳುವುದು ಆದುದರಿಂದ ಬೇಕಾದಾಗ ಸೇವಿಸಲೂ ಯಾವಾಗಲೂ ವಿಷಹಾರಿ ಶ್ವಾಸನೀಯ ಪೆಪ್ಸ ಗುಳಿಗೆಗಳನ್ನು ಹತ್ತಿರವೇ ಇಟ್ಟುಕೊಳ್ಳಿರಿ

ಇವು ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಆದರಿಂದ ಹೊರಟ ಔಷಧೀಯ ... ನಿಮ್ಮ ಶ್ವಾಸಕೋಶಗಳನ್ನು ಪ್ರವೇಶಿಸುತ್ತದೆ ... ಪೆಪ್ಸ ವಾಯು ... ಸುವುದು, ಗಂಟಲನ್ನು ಸಂಪಡಿಸುವುದು ... ನ್ನು ನಿವಾರಿಸುವುದು ಮತ್ತು ಕೆಮ್ಮು ಇನ್‌ಫ್ಲುಯೆಂಜಾ ಮುಂತಾದ ಎಲ್ಲಾ ತರದ ... ರಕ್ಷಿಸುವುದು.

ಎಲ್ಲಾ ಔಷಧ ವ್ಯಾಪಾರಿಗಳು ... ಮಾರುತ್ತಾರೆ

ಏಜಂಟ್ಸ

... ಯಾವಾಗಲೂ ಪೆಪ್ಸನ್ನೇ ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

KANTI
Toilet Soap

ಇಂಡಿಯಾದ ಅತ್ಯುತ್ತಮ ಸಾಬೂನು

ನಂಬಿದರೆ ನಂಬಬಹುದು

ಅಪರ ಅತ್ಯುತ್ತಮ ಸುಗಂಧಪೂರಿತ

ಸ್ವದೇಶಾ ಕಾಂತಿ ಟಾಯಿಲೆಟ್

ಸಾಬೂನನ್ನು ಒಂದು ಸಲ ಉಪಯೋಗಿಸಿದವರು ಎಂದೆಂದಿಗೂ ಇತರ ಯಾವ ಸಾಬೂನನ್ನೂ ಉಪಯೋಗಿಸಲು ಇಚ್ಛಿಸಲಾರರು!

'ಕಾಂತಿ' ಸಾಬೂನನ್ನು ಹಿಂದ ಸ್ಥಾನದ ಎಲ್ಲಾ ಕಡೆಗಳಲ್ಲಿಯೂ ... ಪ್ರಶಂಸಿಸಿ ಉಪಯೋಗಿಸಿರುವರು

ಎಲ್ಲಾ ಕಡೆಗಳಲ್ಲೂ ಮಾರಲ್ಪಡುತ್ತದೆ.

S. U. N. & Co.,
Silk Merchants
Chowkhambha, BENARES CITY

... 18 ... 2½ ... ಸೀರೆಗಳು 1ಕ್ಕೆ ರೂ. 45ರಿಂದ 150 ಸಾಧಾರಣವಾದ 18 ... ಸೀರೆಗಳ ರೂ. 35ರಿಂದ ರೂ. 55 ... ಸಾದಾ ಸೀರೆ 18 ... ರೂ. 320 ... 60 ... 16, ಅಗಲ 21 ರೂ. 20ರಿಂದ 35ರ ವರೆಗೆ ... ಉಚಿತವಾಗಿ ಕಳುಹಿಸಲಾಗುವುದು

ಶಿರೋಮಣಿ ನಾರಾಯಣಾಚಾರ್ಯ,
... ಬೆನಾರಸ್ ಸಿಟಿ.

ಹದಿನೇಳು ತಿಂಗಳ ಅನುಭವ

ಮೌಲಾನಾ ಆಬುಲ್ ಕಲಮ್ ಆಜಾದರವರ ಹೇಳಿಕೆ

ಗಡಿನಾಡಿನಲ್ಲಿ ಸಂಚಾರ ಮುಗಿಸಿ ಹಿಂದೆ ರಳುವಾಗ, ಮೌಲಾನರು ಈ ರೀತಿ ತಿಳಿಸಿರು ವರು. ವಾಯುವ್ಯ ಗಡಿನಾಡಿನಲ್ಲಿ ಸರಕಾರ ವನ್ನು ನಿರ್ವಹಿಸತೊಡಗಿ ಹದಿನೇಳು ತಿಂಗಳು ಕಳೆದುವು. ಇತರ ಪ್ರಾಂತ್ಯಗಳಲ್ಲಿ ಕೊಂಗ್ರೆಸು ಕೈಕೊಂಡ ಕಾರ್ಯಕ್ರಮನ್ನೆ ಇಲ್ಲಿಯೂ ಜ್ಯಾರಿಗೆ ತರುವುದು ನಮ್ಮ ಉದ್ದೇಶ

ಇಲ್ಲಿ ನಮಗೆ ಎದುರಾಗಿ ಯಾವ ವಿಶೇಷ ಸಂಕಷ್ಟಗಳು ತಲೆದೋರಬಹುದೋ ಅವನ್ನು ನಾವು ಆಗ ಗಣನೆಗೆ ತಂದುದಿಲ್ಲ ಇದು ಚಿಕ್ಕ ಪ್ರಾಂತ್ಯ, ಆದರೂ ಇಲ್ಲಿನ ಪರಿಸ್ಥಿತಿ ಬಲು ಕಠಿನವಾಗಿದೆ.

ಇದು ಪರಿಷ್ಮ ಸರಕಾರದ ದಂಡು ಸನ್ನಾಹ ಕ್ಕೆಲ್ಲ ಮುಖ್ಯ ಕೇಂದ್ರವಾಗಿತ್ತು, ಸ್ವತಂತ್ರವಾದ ವಂಶಗಳ ಮೇಲೆ ಒಂದಲ್ಲ ಮತ್ತೊಂದು ರೀತಿ ಯಿಂದ ಇಲ್ಲಿ ಸೈನಿಕ ರಗಳೆಗಳಿದ್ದುವು. ಈ ಪಹಿವಾಟುಗಳ ಪರಿಣಾಮವು ಜನಗಳ ಸಾ ಮಾನ್ಯ ವರ್ತನವನ್ನು ಬದಲಾಯಿಸಿದೆ

ಗಡಿನಾಡಿನ ಸರಕಾರವಾದ ಕಾರಣ, ಇ ಲ್ಲಿನ ಕ್ರಮ, ನೆಟ್ಟಗೆ ಕೇಂದ್ರ ಸರಕಾರದ ಅಧೀ ನತೆಯಲ್ಲಿದೆ ಪ್ರಾಂತಿಕ ಸರಕಾರಕ್ಕೆ ಇದರಲ್ಲಿ ಹಿಡಿತವಿಲ್ಲ

ಇದರಿಂದ ನಾನಾ ವಿದ್ಯಮಾನಗಳ ಹೋ ರಾಟ ನಡೆಯಲು ಅನುಕೂಲವಾಗಿದೆ. ಹಲವು ಹುದ್ದೆಗಳು, ನಾನಾ ಭಿನ್ನಕಾರ್ಯ ನಿರ್ವಾಹ ವನ್ನು ಕೈಕೊಳ್ಳುತ್ತವಲ್ಲದೆ, ರಾಜಕೀಯ ಕರ್ತ ವ್ಯವೂ ಇವನ್ನು ಸೇರಿದೆ

ಎರಡು ಬೇರೆ ಬೇರೆ ದಾರಿಗಳ ಮೇಲೆ ಒಂದೇ ವೇಳೆ ಈ ಆಡಳಿತಂಗಳು ನಡೆಯಬೇ ಕಾಗಿದೆ. ಕೇಂದ್ರ ಸರಕಾರವೂ ಪ್ರಾಂತಿಕ ಸರ ಕಾರವೂ ಇಲ್ಲಿ ಸಮಾನಾಂತರ ರೇಖೆಗಳಲ್ಲಿ ಎಂಬಂತೆ ವರ್ತಿಸುವ ಕಾರಣ, ಇಲ್ಲಿನ ಕಾಂ ಗ್ರೆಸ್ ಮಂತ್ರಿಗಳು ವಿಶೇಷ ಮಿತಿಯಿಂದ ನಡೆ ದುಕೊಳ್ಳಬೇಕಾಗಿದೆ , ಬೇರೆ ಪ್ರಾಂತ್ಯಗಳ ಲ್ಲಿನ ಸರಕಾರಗಳಷ್ಟು ಸುಲಭವಾಗಿ ಇಲ್ಲಿ ರಾಜ್ಯಭಾರ ನಿರ್ವಹಿಸಬರುವುದಿಲ್ಲ

ದೇಶದ ರಾಜ್ಯಭಾರವು ಬದಲಾಗಿರು ಕಾರಣ, ಇಲ್ಲಿಯೂ ಆ ಸುಧಾರಣೆಗಳು ಜ್ಯಾ ರಿಗೆ ಬರಬೇಕು . ಇಲ್ಲದಿರುವಲ್ಲಿ ಇದೊಂದು ಬೇರೆಯಾಗಿಯೆ ಉಳಿಯುವುದಲ್ಲವೆ?

ಹೊಸ ರಾಜ್ಯಭಾರ ಕ್ರಮವನ್ನು ಜ್ಯಾರಿಗೆ ತರಲು ಕೊಂಗ್ರೆಸು ಇಲ್ಲಿ ಅಧಿಕಾರ ಸ್ವೀಕರಿಸ ಮದೆ ಇಲ್ಲಿನ ಪದ್ದೆದಾರರಿಗೆ ಈ ಹೊಸ ಕ್ರಮಗಳಂತೆ ವರ್ತಿಸಲು ಯೋಗ್ಯ ವಾತಾ ವರಣದ ನಿರ್ಮಾಣವಾಗಬೇಕು.

ಇವೆಲ್ಲವೂ ಇಲಿ ಸಾಧ್ಯವಾದೀತೇ ಎಂದು ಮೊದಲೇ ತಿಳಿಯುವುದು ಕಷ್ಟವಾಗಿತ್ತು. ಹಾಗಿ ದ್ದರೂ ಕೊಂಗ್ರೆಸು ಈ ಕಾರ್ಯಭಾರವನ್ನು ವಹಿ ಸಿತು.

ಎಷ್ಟೋ ಆತಂಕಗಳಿದ್ದರೂ ಕಾರ್ಯಕ್ರಮಕ್ಕೆ ತಕ್ಕಂತೆ ನಡೆದುಕೊಳ್ಳಲು ನಾವು ಯತ್ನಿಸಬೇ ಕಾಯಿತು

ಈಗ ಹದಿನೇಳು ತಿಂಗಳು ದಾಟಿದ ಬಳಿಕ, ಇಷ್ಟು ದಿನ ನಡೆದುದನ್ನು ವಿಮರ್ಶಿಸಿ ಮುಂದೆ ಹೇಗೆ ನಡೆಯಬೇಕೆಂದು ನಿರ್ಧರಿಸುವುದ ಅಗತ್ಯ ಅದಕ್ಕಾಗಿ ನಾನು ಇತ್ತ ಬಂದುದು.

ರಚನಾತ್ಮಕ ಕಾರ್ಯಕ್ರಮವನ್ನು ಮಂತ್ರಿ ಗಳು ಕೈಕೊಂಡು ನಡೆವಾಗಲೇ, ಥಕ್ಕನೆ ದರೋ ಡೆಗಳು ಹಿಂಸೆಗಳು ಹೆಚ್ಚಿದುವೇಕೆ ಎಂದು ಜನರು ಚಕಿತರಾಗಿರುವರು. ಗಡಿಯಾಚೆಯ ಕಡೆಯಿಂದ ದಾಳಿಯಿಡುವುದು ಹೆಚ್ಚಿದೆ ಬನ ವಿನಲ್ಲಾದ ಅತ್ಯಾಚಾರ ಕಾಂಡವು ಒಂದು ದೃಷ್ಟಾಂತ

ಕೊಂಗ್ರೆಸು ಮಂತ್ರಿಗಳು ಈ ಹಿಂಸಾತ್ಮಕ ಕೃತಿಗಳನ್ನು ಅಡಗಿಸಲು ಯತ್ನಿಸುತ್ತದು ನಿಜ ವೆಂದು ಜನರು ನಂಬುತ್ತಾರಾದರೂ, ಇನ್ನೂ ಇವು ಹೇಗೆ ಉಳಿದಿದೆ ಎಂದೂ ಪ್ರಶ್ನಿಸುತ್ತಾರೆ ಇಲ್ಲಿನ ವಿದ್ಯಮಾನಗಳು ಮಂತ್ರಿಗಳಿಗೆ ಸರಿಬಿ ದ್ದಿಲ್ಲವೊ ಎಂಬ ಪ್ರಶ್ನೆಯಿಂದ ಕೊಂಗ್ರೆಸು ತನ್ನ ಕಾರ್ಯಕ್ರಮದಂತೆ ನಡೆಯಲು ಏಕೆ ಬಿಡುವುದಿಲ್ಲ ಎಂದು ಜನರು ಕೇಳುತ್ತಾರೆ ಇದಕ್ಕೆ ಉತ್ತರ ಕೊಡಬೇಕಾದರೆ ಸ್ವಲ್ಪ ಆಲೋಚಿಸಿ ತಿಳಿಯ ಬೇಕು ಆದರೂ, –

ಇಷ್ಟು ನಿಜ, ಇನ್ನೂ ಬಹುಕಾಲ ಇದೇ ರೀತಿ ವಿದ್ಯಮಾನಗಳು ನಡೆದರೆ ಆಗದು. ಕೂ ಡಲೆ ಇವನ್ನು ತಿದ್ದ ಬೇಕು ಹಲವು ವಿಚಾರ ಗಳಿದ್ದುವು. ಅವನ್ನು ಪರ್ಯಾಲೋಚಿಸಲಾಗಿದೆ ಸದ್ಯದಲ್ಲೇ ತೃಪ್ತಿಕರವಾದ ತೀರ್ಮಾನಗಳಾ ಗುವುವು

ಮುಸ್ಲಿಮರಿಗೆ ಸರಕಾರದ ಹುದ್ದೆಗಳು

೧೯೩೧ರ ಇಸ್ವಿಯ ಖಾನೆಸುಮಾರಿಯ ಪ್ರಕಾರ, ಮುಸ್ಲಿಮರ ಸಂಖ್ಯೆ ಒಟ್ಟು ಜನಸಂಖ್ಯೆ ಯಲ್ಲಿ ನೇಕಡಾ ೭೮ಂತಿದೆ. ಸರಕಾರದ ಹುದ್ದೆ ಗಳಲ್ಲಿ ಅವರಿಗೆ ಸರಿಯಾದ ದಾಮಾಶಾಯ ದಲ್ಲಿ ನೌಕರಿ ದೊರೆತಿಲ್ಲವೆಂದು ದೂರು ಇದೆ. ಅದನ್ನು ಕುರಿತಾಗಿ ಸರಕಾರವು ಅಂಕಸಂಖ್ಯೆ ಗಳ ದಾಮಾಶಾಯಯಿಂದ ಕೂಡಿದ ಒಂದು ಪತ್ರಕ ಹೊರಡಿಸಿದೆ.

ಒಟ್ಟು ಹುದ್ದೆಗಳು [illegible], ಮುಸ್ಲಿಮ ರಿಗೆ [illegible] ನೇಕಡಾ [illegible] ಜ್ಯುಡಿಷಿಯಲ್ ಇಲಾಖೆ [illegible] ಮುಸ್ಲಿಮರಿಗೆ [illegible] ನೇ. [illegible], ಏಜೆನ್ಸಿ ಇಲಾಖೆ [illegible] ಮುಸ್ಲಿಂರಿಗೆ [illegible] ನೇ [illegible], ಪೊಲೀಸ್ [illegible] ಮು [illegible] ನೇ [illegible], ರೆವಿನ್ಯೂ ಇಲಾಖೆ [illegible] ಮುಸ್ಲಿಮರಿಗೆ [illegible] ನೇ. [illegible]. ಫೊರೆಸ್ಟ್ ಇಲಾಖೆ [illegible] ಮುಸ್ಲಿಮರಿಗೆ [illegible] ನೇ [illegible] ಪಬ್ಲಿಕ್ ವರ್ಕ್ಸ್ ಇಲಾಖೆ [illegible] ಮುಸ್ಲಿಂರಿಗೆ [illegible] ನೇ [illegible], ಮೆಡಿಕಲ್ ಇಲಾಖೆ [illegible] ಮುಸ್ಲಿಮರಿಗೆ [illegible] ನೇ [illegible], ವಿದ್ಯಾ ಇಲಾ ಖೆ [illegible] ಮುಸ್ಲಿಮರಿಗೆ [illegible] ನೇ [illegible] ಅಬಕಾರಿ ಇಲಾಖೆ [illegible] ನೇಕಡಾ [illegible]

ಗಜೆಟೆಡ್ ಅಫಿಸರುಗಳು ಒಟ್ಟು [illegible] ರಲ್ಲಿ [illegible] ಮುಸಿ ಮರು ಮಾತ್ರ [illegible] ದರು. [illegible] ರಲ್ಲಿ [illegible] ಮುಸ್ಲಿ ಮರು ಎಂದರೆ,–ನೇಕಡಾ [illegible] ಇದ್ದುದು ಈಗ [illegible] ರಂತಾಗಿದೆ.

೧೦೦ ರೂಪಾಯಿಗಿಂತ ಹೆಚ್ಚಿನ ತಲಬಿನ ಹುದ್ದೆಗಳು ೧೯೩೪ರಲ್ಲಿ [illegible] ಇದ್ದುವು, ಇವಲ್ಲಿ ಮುಸ್ಲಿಮರಿಗೆ [illegible] ದೊರೆತಿದ್ದುವು. ಈಗ ಈ ಹುದ್ದೆಗಳ ಸಂಖ್ಯೆ [illegible], ಮುಸ್ಲಿಮ ರಿಗೆ [illegible]. ದಾಮಾಶಾಯವು [illegible] ರಿಂದ [illegible] ಕ್ಕೇರಿದೆ.

ರೂ [illegible] ರಿಂದ ರೂ ೧೦೦ರ ವರೆಗಣ ತಲಬುಳ್ಳ [illegible] ಹುದ್ದೆಗಳಲ್ಲಿ ೧೯೩೪ರಲ್ಲಿ [illegible] ಮುಸ್ಲಿಮರಿಗೆ, ಈಗ [illegible] ರಲ್ಲಿ ಮುಸ್ಲಿಮರಿಗೆ [illegible] ಎಂದರೆ, ದಾಮಾಶಾಯ ವು [illegible] ರಿಂದ [illegible] ಕ್ಕೆ ಏರಿದೆ.

ರೂ. [illegible] ಕ್ಕಿಂತ ಕಡಿಮೆ ತಲಬಿನ [illegible] ಹುದ್ದೆಗಳಲ್ಲಿ [illegible] ಮುಸ್ಲಿಮರಿಗಾಗಿವೆ ದಾಮಾಶಾಯವು [illegible] ಆಗಿದೆ

ನಮ್ಮ ಸಂಸ್ಥಾನದಲ್ಲಿ ಉಚ್ಚ ಶಿಕ್ಷಣವು ಎಲ್ಲ ಸಮಾಜ ಅಥವಾ ಉಪಸಮಾಜಗಳೊ ಳಗೆ ಏಕಪ್ರಕಾರವಾಗಿ ಹರಡಿರುವುದಿಲ್ಲವಾದು ದರಿಂದ, ಎಲ್ಲ ಸಮಾಜಗಳಿಗೆ ಅವುಗಳ ಜನ ಸಂಖ್ಯೆಯ ದಾಮಾಶಾಯದಂತೆ ಸರಕಾರದ ಹುದ್ದೆಗಳ ವಿನಿಯೋಗ [illegible] ಅನುಕೂಲ ವಾಗಿಲ್ಲ ಆದರೂ, ಮುಸ್ಲಿಮರನ್ನು [illegible] ದಾಮಾಶಾಯಕ್ಕೆ ಮೀರಿ ಒಟ್ಟು ಹುದ್ದೆಗಳಲ್ಲಿ ನೇಮಿಸಿರುವರು ಮೇಲ್ತರಗತಿಗಳಲ್ಲಿ ಅವರ ಸಂಖ್ಯೆ ಹೆಚ್ಚುತ್ತ ಬರುತ್ತಲಿದೆ

ವಾರ್ಧಾ ವಾರ್ತೆ

[illegible] ವಾರ್ಧಾಕಡೆಗೆ ಎಲ್ಲ ಕಣ್ಣುಗಳು ತಿರುಗಿವೆ ಕೊಂಗ್ರೆಸು ಮುಖಂಡರು ತಾ [illegible] ರಲ್ಲೇ ಬಂದು ಸೇರಿದರು ಇವರೊಳಗೆ ನಾಲ್ಕು ತಾಸು ಭಾವನಾವಿಮರ್ಶೆಗಳು ನಡೆದುವು ಗಾಂಧಿಯವರೂ ಇವರೊಡನೆ ಸಂಭಾಷಿಸಿದ ರು. ಶ್ರೀ ಬೋಸರನ್ನು ಚುನಾಯಿಸಿದ ಬಳಿಕ ಬಲಪಕ್ಷದವರಾಗಿರುವವರು ಏನು ಮಾಡಬೇಕು ಇವರು ಪಜಾ ಆದಲ್ಲಿ, ಬೋಸರಿಗೆ ಬೇಕಾದ ಕಾರ್ಯಕಾರೀ ಮಂಡಳಿಯನ್ನು ನಿರ್ಮಾಣ ಮಾ ಡಿಕೊಂಡು ಅವರ ಧ್ಯೇಯದಂತೆ ಕಾರ್ಯಕ್ರಮ ವನ್ನು ಅಂಗೀಕರಿಸಬಹುದಲ್ಲವೆ ಎಂಬ ಪ್ರಶ್ನೆ ಯೊಂದೇ ಚರ್ಚೆಯಾಗುತ್ತಿರುವಂತಿದೆ

ನೀಸರಿಗೆ ಬಲಪಕ್ಷದವರ ಸಹಾಯ ಸಹ ಕಾರಗಳು ಖಚಿತವಾಗಿ ದೊರೆವಂತಿಲ್ಲವೆಂದು ಗಾಂಧಿಜೀಯವರ ತಿಳಿಸಿದರೆಂದೂ ಇನ್ನು ಮುಂದಿನ ಏರ್ಪಾಡನ್ನು ಜವಾಹರಲಾಲರು ಮತ್ತು ಮೌಲನಾ ಆಜಾದರುಗಳು ತಲುಪಿದ ಬಳಿಕ ಚರ್ಚಿಸಿ ಇತ್ಯರ್ಥಿಸಲಾದೀತೆಂದು ತಾ [illegible] ವಾರ್ತೆ ತಾ [illegible] ರಲ್ಲಿ ತೀರ್ಮಾನ ವಾಗಲಿದೆ ಎಂದ ಹುಂಕೈಸುತ್ತಾರೆ



ನೋಟೀಸು

ಕಾರ್ಕಳ ಡಿ। ಮುನ್ಸಿಫ್ ಕೋರ್ಟಿನಲ್ಲಿ

R. E. P. 1128/1938.

R. E. A. 1332/1938.

ರತ್ನಾಬಾಯಿ ಯಾನೆ

ಶಾಂತಾ ಬಾಯಿ ಅರ್ಜಿದಾರಳು.

ಅಣ್ಣಪ್ಪ ನ್ಯಾಕ ಎ ದ್ರಿ.

ಅಣ್ಣಪ್ಪ ನ್ಯಾಕ ಬಿದ್ರಪೆಟ್ಟು ಕೃಷ್ಣನ್ಯಾಕರ ಮಗ, Taxi-driver Singam Building Girgaum Bombay–ಇವರಿಗೆ ಈ ಮೂ ಲಕ ತಿಳಿಸುವುದೇನೆಂದರೆ ಎದುರು ಸ್ಥಿರಾಸ್ತಿ ಯನ್ನು [illegible] ಹರಾಜು [illegible] ಬಗ್ಗೆ ಅವ್ರು ಜ್ಯಾರಿ ಅರ್ಜಿಯನ್ನು ಮತ್ತು [illegible] Bid and set off ಕೇಳಿ ಒಡಕೊಂಡ ಅರ್ಜಿ ಯನ್ನು ಸಹ ತಾ 26 2-1939ಕ್ಕೆ [illegible] ಬಗ್ಗೆ ಇಟ್ಟಿರುವುದರಿಂದ, ತ [illegible] ಆಕ್ಷೇಪ ಗಳನ್ನು ಅದೇ ದಿನ ಬೆಳಿಗ್ಗೆ ಘಂಟೆ 10ಕ್ಕೆ ಹಾಜರಾಗಿ ಕೋರ್ಟಿಗೆ ಮನವಿಮಾಡಿಕೊಳ್ಳ ಬಹುದೆಂತಲೂ [illegible] ಗೈರಹಾಜರಿಯಲ್ಲಿ ಏಕ ಪಕ್ಷ ತೀರ್ಮಾನಿಸಲಾಗು ದೆಂತಲೂ ಈ ಮೂಲಕ ಎದುರಿಗೆ ತಿಳಿಸಲಾಗುತ್ತದೆ

ನೋಕ್ಸ್ಯ್ರ್ಯ ಕಾರ್ಕಳ ತಾ. 10-2-[illegible] K. B. Joishi, ಅರ್ಜಿದಾರಳ ವಕೀಲ

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ಜಿಲ್ಲಾ ಭೂಮಾಲಿಕರಿಗೆ ದಿವಾನರಿತ್ತ ಆಶ್ವಾಸನೆ.

ತಾ. ೧೯ನೇ ಆದಿತ್ಯವಾರ ಬೆಳಿಗ್ಗೆ ಜಿಲ್ಲಾ ಭೂಮ್ಯಾಲಿಕರ ಸಂಘದ ಅಧ್ಯಕ್ಷರಾದ ಶ್ರೀ ಯಂ ಎಸ್. ಶ್ರೀನ್ಸುರೀ ಮೊದಲಾದ ಕೆಲವು ಪ್ರಮುಖರು ಮಾನ್ಯ ದಿವಾನರನ್ನು ಕಂಡು ಒಂದು ಬಿನ್ನವತ್ತಳೆಯನ್ನರ್ಪಿಸಿ ಹಲವು ವಿಚಾರಗಳನ್ನು ದಿವಾನರ ಮುಂದಿರಿಸಿದರು.

ದಿವಾನರು ಪ್ರತೀ ಒಂದು ವಿಚಾರವನ್ನು ಪರಾಂಭರಿಸುತ್ತಾ ಕಳೂರು ಕಟ್ಟೆ ಹಳ್ಳಕ್ಕೆ ಸ್ಕೀಮಿಗೆ ಹಾಕುವ ಯೋಜನೆಯನ್ನು ಮಾಡೋಣ. ಇಗುಂಬೆ ಗಟ್ಟದ ಮಾರ್ಗಗಳನ್ನು ಬೇಗನೆ ಅಗಲಮಾಡಿಸಿ ದುರುಸ್ತಿಮಾಡಿಸುವಂತೆ ನೋಡುತ್ತೇನೆ. ಮೋಟಾರ್, ಲಾರಿ, ಕಾರು ಇತ್ಯಾದಿಗಳ ಮೇಲೆ ಮೈಸೂರಿನಲ್ಲೂ ಇಲ್ಲೂ ತೆರಬೇಕಾದ ತೆರಿಗೆಯ ವಿಚಾರದಲ್ಲಿ ನಾನು ಮದ್ರಾಸು ಸರಕಾರವನ್ನು ಕೇಳುವೆನು ನೀವೂ ಕೇಳಿ. ಈ ವಿಚಾರದಲ್ಲಿ ಇತ್ಯರ್ಥಕ್ಕೆ ಬರಲು ಯತ್ನಿಸಿರಿ ವಿದ್ಯುದ್ದೀಪದ ವಿಚಾರದಲ್ಲಿ ಕಳಸಕ್ಕೆ ಬೇಗನೇ ವಿದ್ಯುಚ್ಛಕ್ತಿಯು ಬರಲಿದೆ ಇಷ್ಟಲ್ಲದೆ ಗೆರಸೊಪ್ಪೆಯ ಜಲಪಾತದ ವಿದ್ಯುಚ್ಛಕ್ತಿಯ ಏರ್ಪಾಡು ಪೂರ್ತಿಯಾಯಿತೆಂದರೆ ದಕ್ಷಿಣಕನ್ನಡಕ್ಕೆ ಅತೀ ಅಗ್ಗದಲ್ಲಿ ವಿದ್ಯುಚ್ಛಕ್ತಿ ದೊರೆಯುವ ಏರ್ಪಾಡುಮಾಡಲಾಗುವುದು ಮಂಗಳೂರಿಗೆ ಅಲ್ಲಿಂದ ಒಂದೇ ೫೦ ಮೈಲುಗಳ ದೂರವಿರುವುದರಿಂದ ಅತೀ ಕಡಿಮೆ ಬೆಲೆಗೆ ವಿದ್ಯುಚ್ಛಕ್ತಿ ದೊರೆಯಬಹುದು ಎಂದು ಹೇಳಿದರು

ಅಪಘಾತ.

ಕಳೆದ ಶುಕ್ರವಾರ (ಶಿವರಾತ್ರಿ) ರಾತ್ರಿ ಸುಮಾರು ೧೩ ವರ್ಷ ಪ್ರಾಯದ ಕೃಷ್ಣಪ್ಪನೆಂಬ ಹುಡುಗನು ಸ್ಥಳೀಯ ಮಂಗಳಾದೇವಿ ದೇವಸ್ಥಾನದ ಬಳಿ ಮಾವಿನ ಕಾಯಿ ತೆಗೆಯಲು (ಶಿವರಾತ್ರಿಯ ಕಾಲಿಗಾಗಿ) ಮಾವಿನ ಮರವೇರಲು ವಿದ್ಯುಚ್ಛಕ್ತಿಯ ಸರಿಗೆ ತಗಲಿದುದರಿಂದ ಹೊಟ್ಟೆಯ ಮಗ್ಗಲು ಬೆನ್ನು ವಿಪರೀತ ಸುಟ್ಟು ಹೋಗಿದೆ ಇದೀಗ ಆಸ್ಪತ್ರೆಯಲ್ಲಿದ್ದಾನೆ

ಆರ್ಯಸಮಾಜ ವಾರ್ಷಿಕೋತ್ಸವ

ಸ್ಥಳೀಯ ಆರ್ಯಸಮಾಜದ ೨೧ನೇ ವಾರ್ಷಿಕೋತ್ಸವವು ಕಳೆದ ಕಳೆಯಿತು. ಆರ್ಯಮಿತ್ರರೆನಿಗಳಾದ ಶ್ರೀ ಕರಮಚಂದ್ ಭಲ್ಲಾರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿತು. ಹೈದರಾಬಾದಿನ ಆರ್ಯ ಸತ್ಯಾಗ್ರಹಕ್ಕೆ ಧನಸಹಾಯವನ್ನು ಕೇಳಲಾಗಿ ನೆರೆದವರಿಂದ ನೂರಾರು ರೂಪಾಯಿ ವಸೂಲಾಯಿತು.

ಎಜ್ಯುಕೇಶನಲ್ ಕೌನ್ಸಿಲು.

ದ ಕ ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲಿನ ಸಭೆಯು ಕೌನ್ಸಿಲ್ ಆಫೀಸಿನಲ್ಲಿ ಕಳೆದ ೧೨ನೇ ಸೋಮವಾರ ಶ್ರೀ ಎಂ. ಎಸ್ ಚಮ್ಮಾಡರ ಅಧ್ಯಕ್ಷತೆಯಲ್ಲಿ ಜರುಗಿತು. ಅನೇಕ ವಿಚಾರಗಳು ಚರ್ಚೆಯಾಗಿ ಮಂಜೂರಾತಿ ಹೊಂದಿತು.

ಶುದ್ಧಿ ಸಂಸ್ಕಾರ

ಶ್ರೀಮತಿ ಹೆಸ್ಲೀಬಾ ಕರೋಲಿನ್ ರತ್ನಂ ಎಂಬ ೧೯ ವರ್ಷದ ಪ್ರೊಟೆಸ್ಟಾಂಟ್ ಕ್ರೈಸ್ತ ತರುಣಿಯು ಕಳೆದ ಶುಕ್ರವಾರ ಸನ್ಯಾಸಿಗಳ ಆರ್ಯಸಮಾಜ ಮಂದಿರದಲ್ಲಿ ಆರ್ಯಧರ್ಮವನ್ನು ಸ್ವೀಕರಿಸಿದಳು. ಈಕೆಗೆ ರತ್ನಾವತಿ ದೇವಿ ಎಂಬ ಹೆಸರಿಡಲಾಯಿತು

ಸೆನೆಟಿನ ಚುನಾವಣೆ

ಮದ್ರಾಸು ಸೆನೆಟಿಗೆ ನಡೆದ ಚುನಾವಣೆಯಲ್ಲಿ ಸೈಂಟ್ ಎಲೋಸಿಯಸ್ ಕೊಲೇಜಿನ ಗಣಿತದ ಲೆಕ್ಚರರಾದ ಶ್ರೀ ಎಸ್. ರಾಮಚಂದ್ರ ಅಯ್ಯರರು ಪ್ರಚಂಡ ಬಹುಮತದಿಂದ ಚುನಾಯಿತರಾಗಿರುವರು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಮಹಾಸಭೆ

ಮತ್ತೊಮ್ಮೆ ಶ್ರೀ ಶ್ರೀನಿವಾಸ ಮಲ್ಯರು ಅಧ್ಯಕ್ಷರಾಗಿ ಅವಿರೋಧವಾಗಿ ಆರಿಸಲ್ಪಟ್ಟರು.

ಇದೇ ತಾ ೧೯ನೇ ಆದಿತ್ಯವಾರ ಸಂಜೆ ೫ ಘಂಟೆಗೆ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ

ಮಂಗಳೂರು ಸಮಾಚಾರ

ಆಫೀಸಿನಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಮಹಾಸಭೆಯು ಶ್ರೀ ಯು ಶ್ರೀನಿವಾಸ ಮಲ್ಯಾ ಅವರ ಅಧ್ಯಕ್ಷತೆಯಲ್ಲಿ ಜರಗಿತು ಗತವರ್ಷದ ವರದಿ ಹಾಗೂ ಲೆಕ್ಕಪತ್ರಗಳನ್ನು ಸಭೆಯ ಮುಂದಿರಿಸಿ ಮಂಜೂರಾತಿ ಪಡೆಯಲಾಗಿ ಈ ವರ್ಷದ ಅಧಿಕಾರಿ ವರ್ಗ ಹಾಗೂ ಕಾರ್ಯಕಾರಿ ಘಂಡಳಿಯ ಸದಸ್ಯರ ಚುನಾವಣೆ ನಡೆದು ಈ ಕೆಳಗಿನವರು ಆಯಾ ಸ್ಥಾನಗಳಿಗೆ ಅವಿರೋಧವಾಗಿ ಚುನಾಯಿಸಲ್ಪಟ್ಟಿದ್ದಾರೆ.

ಅಧ್ಯಕ್ಷ ಶ್ರೀ ಯು ಶ್ರೀನಿವಾಸ ಮಲ್ಯ, ಉಪಾಧ್ಯಕ್ಷರು ಶ್ರೀಗಳಾದ ಬಿ ವೆಂಕಟಪ್ಪಾ ಬಾಳಿಗ, ಬಿ.ಎ ಬಿ ಎಲ್, ಎಂ ಎಲ್ ಸಿ ಎನ್ ಶೇಷಗಿರಿ ರಾವ್, ಪ್ರಧಾನ ಕಾರ್ಯದರ್ಶಿ ಶ್ರೀ ಎನ್. ಶೇಷಗಿರಿ ರಾವ್, ಜತೆ ಕಾರ್ಯದರ್ಶಿ ಶ್ರೀ ಎ ನಾರಾಯಣ ರಾವ್, ಸದಸ್ಯರು ಶ್ರೀಗಳಾದ ಯು ಸ್. ಯನ್. ಹೊಳ್ಳ, ಎಲ್ ಎಸ್ ನಾಯ್ಕ್ ಗುರುಸಯ್ಯ ಶೆಟ್ಟಿ, ಶಿವಪ್ಪ ಶೆಟ್ಟಿ, ಜಗಜೀವನದಾಸ ಶೆಟ್ಟಿ, ರಾಮಪ್ಪ ಹೆಗ್ಗಡೆ, ಸಂಜೀವ ಶೆಣೈ, ಸುಬ್ಬಣ್ಣ ಭಟ್ ಬಿ ನಾಗೇಂದ್ರನಾಥ ಬಾಳಿಗಾ.

ಅದಾಗಿ ಈ ವರ್ಷ ಶ್ರೀಮತಿ ಕಮಲಾದೇವಿ ಮತ್ತು ಶ್ರೀ. ಶ್ರೀನಿವಾಸ ಮಲ್ಯಾ ಇವರು ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷ ಹಾಗೂ ಜೊತೆ ಕಾರ್ಯದರ್ಶಿಯರಾಗಿ ಆರಿಸಲ್ಪಟ್ಟುದಕ್ಕಾಗಿ ಅವರನ್ನು ಅಭಿನಂದಿಸಲಾಯಿತು. ಹೊಸ ವರ್ಷದ ಅಂದಾಜು ಆದಾಯ ವೆಚ್ಚವನ್ನು ಮಂಜೂರುಮಾಡಿ ಇತರ ಸಾಮಾನ್ಯ ವಿಷಯಗಳ ನಿರ್ಧಾರಗಳಾಗಿ ಸಭೆ ಮುಕ್ತಾಯವಾಯಿತು.

ಬೀಡಿ ಲೇಬರ್ ಯೂನಿಯನ್ ಮಹಾಸಭೆ.

ಶ್ರೀ ಯಸ್ ಯನ್ ಹೊಳ್ಳರು ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಇದೇ ತಾ. ೧೯ನೇ ಆದಿತ್ಯವಾರ ಸಂಜೆ ಘಂಟೆ ೬ಕ್ಕೆ ಸರಿಯಾಗಿ ಜಿಲ್ಲಾ ಬೀಡಿ ಕೆಲಸಗಾರರ ಮಹಾಸಭೆ ಯೂನಿಯನ್ ಆಫೀಸಿನಲ್ಲಿ ಜರಗಿತು ಗತ ವರ್ಷದ ವರದಿ ಲೆಕ್ಕಪತ್ರಗಳ ಮಂಜೂರಾತಿಯಾಗಿ ಹೊಸವರ್ಗದ ಅಧಿಕಾರಿ ವರ್ಗದ ಚುನಾವಣೆ ನಡೆದು ಈ ಕೆಳಗಿನವರು ಆಯಾ ಸ್ಥಾನಗಳಿಗೆ ಆರಿಸಲ್ಪಟ್ಟರು

ಅಧ್ಯಕ್ಷ ಶ್ರೀ ಯಸ್ ಎನ್ ಹೊಳ್ಳ, ಉಪಾಧ್ಯಕ್ಷ ಶ್ರೀ [illegible]ಷವನ್, ಕೋಶಾಧಿಕಾರಿ ಶ್ರೀ [illegible]ವಿಂದನ್, ಪ್ರಧಾನ ಕಾರ್ಯದರ್ಶಿ ಶ್ರೀ ಸುಂದರ ಕಾಮತ್, ಜತೆ ಕಾರ್ಯದರ್ಶಿ ಶ್ರೀ. ಕೆ ಮಾರನ್

ಇದಲ್ಲದೆ ಕಾರ್ಯಕಾರಿ ಮಂಡಳಿಯ ಸದಸ್ಯರುಗಳ ಆಯ್ಕೆ ಜರಗಿ ಇತರ ಕೆಲವು

ಕಳೆದ ವಾರ ಇಲ್ಲಿಗೆ ಚಿತ್ತಯಿಸಿದ ಮೈಸೂರಿನ ದಿವಾನರಾದ

ಅಮೀನ್ ಉಲ್ ಮುಲ್ಕ್ ಸರ್ ಮಿರ್ಜಾ ಇಸ್ಮಾಯಿಲ್ ಕೆ. ಸಿ. ಐ. ಇ. [illegible] ಇವರು.

ವಿಷಯಗಳ ನಿರ್ಧಾರಗಳಾಗಿ ಸಭೆ ಮುಕ್ತಾಯವನ್ನು ಹೊಂದಿತು,

ಪೌರಸಭೆ

ಮಂಗಳೂರು ನಗರಸಭೆಯ ಇದೇ ಒಂದು ವ ತಾ ೨೭ನೇ ಸೋಮವಾರ ಸಾಯಂಕಾಲ ಗಂಟೆ ೫ ಕ್ಕೆ ಚೆಯರ್‌ಮೆನ್ ದಿವಾನ್ ಶ್ರೀ ವೆಂಕಟಪ್ಪಯ್ಯ ಬಾಳಿಗರ ಅಧ್ಯಕ್ಷತೆಯಲ್ಲಿ ಮುನಿಸಿಪಲ್ ಆಫೀಸಿನಲ್ಲಿ ಜರಗುವುದು

ಉಡುಪಿ

(೧೯ನೇ ಫೆಬ್ರವರಿ ಸಂವಾದದಾತರು)

ಶ್ರೀ ಕೃಷ್ಣ ಮಠದ ಸ್ವಾಗತ

ಶಿವಸಂಕರ ಶ್ರೀಕೃಷ್ಣ ಮಂದಿರದ ಕಳುಹಿಸಿಟ್ಟ ವಿಧದಲ್ಲಿ ಸಾರ್ವದೇವನಿ ಪರಮಹಂಸಿಗೆಯು ಶ್ರೀ ಕೃಷ್ಣ ಕಂದಘ ಪನ್ನಕೆದ ಹಲೀಗ ಬಂದು ಅಲ್ಲಿ ಸೇರಿದ್ದ ಸ್ವಾಮಿ ಜಗಳಜಾನೆ ಪಾತನಾದಿ ತನಗೆ ಏರ್ಪಡಿಸಿದ್ದ ಆಸನದಲ್ಲಿ ಕುಳಿತರು ಆಗ ಗೌಡ ಸಾರಸ್ವತ ಸಮಾಜದ ಸ್ವಾಮಿಜಿಯವರೂ ಬಂದಿದ್ದರು ಅಲ್ಲಿ ಅವರಿಗೆ ಪರ್ಯಾಯ ಮಠದ ಕಡೆಯಿಂದ ಮಾನಪತ್ರವ ಸ್ಪರ್ಪಿಸಲಾಯಿತು ಇದಕ್ಕೆ ದಿವಾನರ ಅಚ್ಚಾದ ಉತ್ತರವನ್ನು ಸಭಿಕರಿಗೆ ಅವರ ಪರವಾಗಿ ಶ್ರೀ. ವಿಟ್ಠಲ ಶೆಟ್ಟಿ ಓದಿದರು ದಿವಾನರು ತನಗೆ ವಿವಿಧ ಮತಗಳಲ್ಲಿರುವ ಸಹಾನುಭೂತಿಯನ್ನು ಸೂಚಿಸಿ ಉಡುಪಿಯ ಮಠದವರು ತನಗೆ ಕೊಟ್ಟ ಮನ್ನಣೆಗಾಗಿ ಧನ್ಯವಾದವನ್ನಿತ್ತರು ನಂತರ ಶ್ರೀ ಕೃಷ್ಣ ರಥೋತ್ಸವವನ್ನು ನೋಡಿದ ಮೇಲೆ ಮೆರವಣಿಗೆಯೊಡನೆ ವಿಶ್ರಾಂತಿಗಾಗಿ ಪ್ರಯಾಣಿಕರ ಬಂಗ್ಲೆಗೆ ತೆರಳಿದರು.

ಅನಾಥಾಲಯದ ಶಂಕುಸ್ಥಾಪನೆ

ಮರುದಿನ ತಾ. ೨೦ನೇ ಸೋಮವಾರ ಬೆಳಗ್ಗೆ ೮ ೧೫ಕ್ಕೆ ದಿವಾನರು ಮಣಿಪಾಲದಲ್ಲಿ ನಿರ್ಮಿಸಲಿರುವ ಅನಾಥಾಲಯದ ಶಂಕುಸ್ಥಾಪನೆಯನ್ನು ಮಾಡಿ ಈ ಅನಾಥ ರಕ್ಷಣ ಶಾಲೆಯು ಭಾಗ್ಯಯಾಗಿ ನಡೆದುಕೊಂಡು ಪುರೋಗಾಭಿವೃದ್ಧಿ ಹೊಂದಲೆಂದು ಹಾರೈಸಿದರು.

ಅಲ್ಲಿಂದ ದಿವಾನರು ಮಂಗಳೂರಿಗೆ ಬಂದ ಮೆಸರ್ಸ್ ಎಂ ಲಕ್ಷ್ಮಯ್ಯ ಶೆಟ್ಟಿ ಎಂಡ್ ಸನ್ಸ್ ಗಿರಿ ಕಾಫಿ ವರ್ಕ್ಸ್, ಈ ಸಂಸ್ಥೆಯನ್ನು ಸಂದರ್ಶಿಸಿದರು,

[illegible] ಅವರು ಧರ್ಮಸ್ಥಳ ಕ್ಷೇತ್ರವನ್ನು ಸಂದರ್ಶಿಸಿ ಈ ಜಿಲ್ಲೆಯ ಪ್ರವಾಸವನ್ನು ಕೊನೆ ಯಶಸ್ವಿಯಾಗಿ ಗೈಸಿದರು

ಉಡುಪಿಯಲ್ಲಿ ಗೌಡಸಾರಸ್ವತ ಬ್ರಾಹ್ಮಣ ಮಠಾಧೀಶರುಗಳ ಆಗಮನ.

ತಾ ೧೬ನೇ ರಾತ್ರೆ ಸುಮಾರು [illegible] ಮಂಗಳೂರಿನಿಂದ ಗೌಡಸಾರಸ್ವತ ಬ್ರಾಹ್ಮಣ ಸಮಾಜದ ಶ್ರೀ ಕಾಶೀಮಠದ ಶ್ರೀ ಸುಕೃತೀಂದ್ರ ಶ್ರೀಪಾದಂಗಳವರು, ಶ್ರೀ ಗೋಕರ್ಣ ಮಠಾಧೀಶರಾದ ಶ್ರೀ ಇಂದಿರಾಕಾಂತ ಶ್ರೀಪಾದಂಗಳವರು ಮತ್ತು ಅವರ ಶಿಷ್ಯರಾದ ಶ್ರೀ ಕಮಲಾನಾಥ ಶ್ರೀಪಾದಂಗಳವರು ಉಡುಪಿ ಅಷ್ಟಮಠಗಳ ಶ್ರೀಪಾದಂಗಳವರ ಆಮಂತ್ರಣದ ಮೇರೆಗೆ ಉಡುಪಿ ಕಲ್ಸಂಕದಲ್ಲಿ ಚಿತ್ತೈಸಲು ಶ್ರೀ ಕೃಷ್ಣ ಪರ್ಯಾಯ ಮಠಾಧಿಪತಿಗಳಾದ ಶ್ರೀ ಪಲಿಮಾರು ಶ್ರೀ ಪಾದಂಗಳವರಾದ ಕಳುಹಿಸಿದ [illegible] ವಾದ್ಯ ಇತ್ಯಾದಿಗಳಿಂದ ಮೆರವಣಿಗೆಯಾಗಿ [illegible] ರಥಬೀದಿಗೆ ತರಲು ವೈಭವದ ಸ್ವಾಗತವಾಗಿ ಶ್ರೀ ಕೃಷ್ಣ ದೇವಸ್ಥಾನಕ್ಕೆ ಬರಮಾಡಿಸಲಾಯಿತು. ಮಹಾದ್ವಾರದಲ್ಲಿ ಪರ್ಯಾಯ ಮಠಾಧೀಶರಾದ ಪಲಿಮಾರು ಶ್ರೀಪಾದಂಗಳವರು ಶ್ರೀ ಸೋದೆ ಮಠದ ಶ್ರೀಪಾದಂಗಳವರು ಮತ್ತು ಶ್ರೀ ಅದಮಾರು ಮಠದ ಶ್ರೀಪಾದಂಗಳವರು ಆಮಂತ್ರಿತ ಶ್ರೀಪಾದಂಗಳವರನ್ನು ಸ್ವಾಗತಿಸಿ, ಶ್ರೀಕೃಷ್ಣದೇವರ ದರ್ಶನಮಾಡಿಸಿ, [illegible] ಮಹಾಸನಕ್ಕೆ ಕರೆದೊಯ್ದರು. [illegible] [illegible] ಉಭಯ ಪಂಗಡದ ಶ್ರೀಪಾದಂಗಳವರಿಗೆ [illegible] ಶ್ರೀ [illegible] ಶ್ರೀಪಾದಂಗಳವರು ಈ ವಿಶೇಷ ಸುಯೋಗದ ಸಂದರ್ಭದಲ್ಲಿ [illegible] ಬ್ರಾಹ್ಮಣ ವರ್ಗದವರು ಏಕಮತ [illegible] ಅನ್ಯೋನ್ಯ ಭಾವದಿಂದಿರಬೇಕೆಂದು ಸರಸವಾದ [illegible] ಶ್ರೀ. ಗಳವರ [illegible] ವೆಂಕಟ್ರಮಣಾಚಾರ್ಯರು [illegible] [illegible] ಶ್ರೀ [illegible] ಶ್ರೀ [illegible] ವೆಂಕಟೇಶ ದೇವಳಕ್ಕೆ [illegible] ಶ್ರೀ [illegible] ಶ್ರೀ ವಿಟ್ಠಲ ರಾಂತಾಚಾರ್ಯರ ಸೇವೆಯಾಗಿ ಶ್ರೀ. ಲಕ್ಷ್ಮೀವೆಂಕಟೇಶ ದೇವಳಕ್ಕೆ ಇತ್ತ ವಿದ್ಯುದ್ದೀಪಗಳನ್ನು ಶ್ರೀ ಮಠಾಧಿಪತಿಗಳ ಅಮೃತಹಸ್ತಗಳಿಂದ ಬೆಳಗಿಸಲಾಯಿತು. ಶ್ರೀ ಪಾದಂಗಳವರು ಎರಡು ದಿನಗಳಿದ್ದು ಶ್ರೀ ಕೃಷ್ಣನ ಸೇವಾದಿಗಳನ್ನು ಜರಗಿಸಿ ಶಿಷ್ಯವೃಂದದ ಆದರಗಳನ್ನು ಸ್ವೀಕರಿಸಿ ಮರುದಿನ ಅಲ್ಲಿಂದ ರಥೋತ್ಸವದ ಸಮಾರಂಭಕ್ಕೆ ತೆರಳಿದರು. ಒಂಟಿವಾಳದಿಂದ ಶ್ರೀಗಳವರು ಪರ್ಯಾಯಕ್ಕೆ ಪ್ರಯಾಣ ಬೆಳೆಸುವರಾಗಿ ತಿಳಿದುಬರುತ್ತದೆ.

ದಕ್ಷಿಣ ಕನ್ನಡ ಸೆಂಟ್ರಲ್ ಕೋ ಒಪರೇಟಿವ್ ಬೇಂಕಿನ ರಜತೋತ್ಸವದ ಅಧ್ಯಕ್ಷರಾದ ಸರ್ ಮಿರ್ಜಾ ಇಸ್ಮಾಯಿಲರೂ, ಬ್ಯಾಂಕಿನ ಡೈರೆಕ್ಟರರೂ ಮತ್ತು ಸಿಬ್ಬಂದಿಯವರು

ಮದ್ರಾಸು ಸರಕಾರದ ಆಯುವ್ಯಯದ ಅಂದಾಜು

(ಬಜೇಟು)

(ಸಾವಿರ ರೂಪಾಯಿ)

	೧೯೩೭-೩೮.	೧೯೩೮-೩೯ ಅಂದಾಜು	೧೯೩೯-೪೦ ಅಂದಾಜು
ಕಂದಾಯ:	೧೬,೦೦,೬೨.	೧೬,೨೭,೧೯.	೧೬,೨೩,೪೫.
ವ್ಯಯ:	೧೫,೮೨,೯೬.	೧೬,೨೪,೭೬	೧೬,೪೦,೭೨.
ಲಾಭನಷ್ಟ	+೧೭,೬೬.	+೨,೪೩.	−೧೭,೨೭

ಅರ್ಥ ಮಂತ್ರಿ ರಾಜಗೋಪಾಲಾಚಾರ್ಯರು ತಾ ೨೦ರಲ್ಲಿ ಈ ಬಜೇಟು ಅಂದಾಜನ್ನು ಮದ್ರಾಸು ಎಸೆಂಬ್ಲಿಯ ಮುಂದಿಟ್ಟರು.

೧೯೩೭-೩೮ರಲ್ಲಿ ಸುಮಾರು ೧೨,೦೦೦ ಮಾತ್ರ ಉಳಿದೀತೆಂದು ಅಂದಾಜು ಇದ್ದರೂ ೧೭ ಸಾವಿರದಷ್ಟು ಉಳಿಯಿತು ನೆರೆಹಾವಳಿ, ಬಿರುಗಾಳಿಯ ಹಿಂಸೆ ಮಳೆ ಕಡಿಮೆಯಾದುದರ ದುಷ್ಪರಿಣಾಮ, ಅರ್ಧಕೋಟಿ ರೂಪಾಯಿ ಕಿರ್ವೆ ಮಾಫಿ, ಇತ್ಯಾದಿಗಳಿಂದ ಸರಕಾರಕ್ಕೆ ಬಾಧೆ ಒದಿದಿದೆ ಸುಂಕ, ಸ್ಟೆಂಪು, ರಿಜಿಸ್ಟ್ರೇಶನ್ ಇಲಾಖೆಗಳ ಆಯುವು ಇಳಿದಿದೆ. ೪೨॥ ಲಕ್ಷರೂಪಾಯಿಗಳನ್ನು, ಚಿಕ್ಕ ಬಂದರುಗಳ ಫಂಡಿನಿಂದ ಮಂಜೂರಾದ ಕಾನೂನು ಪ್ರಕಾರ ಆಯಕ್ಕೆ ಸೇರಿಕೊಂಡಿದೆ

೧೯೩೮-೩೯ರಲ್ಲಿ ಆಯುವು ೧೬,೨೭,೧೯,೦೦೦ ಎಂದು ಅಂದಾಜು ಉತ್ತರ ಆರ್ಕಾಡು ಜಿಲ್ಲೆಯಲ್ಲಿ ಮದ್ಯಪಾನ ನಿಷೇಧಿಸಲಾದೀತು, ಎಂದರೆ, ಒಟ್ಟು ನಾಲ್ಕು ಜಿಲ್ಲೆಗಳಲ್ಲಿ, ಅಧಿಪತ್ಯದ ಸುಮಾರು ಐದರಲ್ಲೊಂದು ಭಾಗ ವಿಸ್ತೀರ್ಣದಲ್ಲಿ ಮದ್ಯಪಾನ ನಿವಾರಣೆಯಾದಂತಾಗುವುದು ಇದರಿಂದ ೬೧ ಲಕ್ಷರೂಪಾಯಿ ನಷ್ಟವಾಗುವುದು. ದೇಶೀಯ ಮದ್ಯದ ಮೇಲೆ ಇತರ ಜಿಲ್ಲೆಗಳಲ್ಲಿ ಸುಂಕ ಏರಿಸಿ, ವಿದ್ಯುದುಪಯೋಗದ ಮೇಲೆ ತೆರಿಗೆ ಹಾಕಿ, ಮೋಟರ್ ಸ್ಪಿರಿಟ್ ಮಾರಾಟದ ಮೇಲೆ ಸುಂಕ ವಿಧಿಸಿ, ಸುಮಾರು ೧೫ ಲಕ್ಷರೂಪಾಯಿ ಕೂಡಿಸಬಹುದಾಗಿ ಸೂಚಿಸಲಾಗಿದೆ

ಕೆವಿನ್ನು ಎಣಿಕೆನಲ್ಲಿ ೧೬,೨೭,೨೦೦ ಕಡಮೆ ಉತ್ಪನ್ನವಾದೀತು ಇದಕ್ಕಾಗಿ, ಹೊಗೆಸೊಪ್ಪಿನ ಮಾರಾಟದ ಮೇಲೆ ಒಂದು ತೆರಿಗೆ ಎಲ್ಲಾ ವ್ಯಾಪಾರದ ಮೇಲೊಂದು ತೆರಿಗೆ ವಿನೋದ ಪ್ರದರ್ಶನಗಳ ಮೇಲೆ ತೆರಿಗೆ–ಹೀಗೆ ಹೊಸ ತೆರಿಗೆಗಳು ಉಂಟಾಗುವುವು

ಒಂದು ಮಿತಿಯ ಮೇಲೆ ಹೆಚ್ಚಿನ ಸಂಬಳದಾರರಿಗೆಲ್ಲ ತೆರಿಗೆ (ಕಡಿತದ ರೂಪದಲ್ಲಿ) ವಿಧಿಸಲಾಗುವುದು ಇದರಂತೆ, ಇತರ (ಸೆಕ್ರಿಟರಿ ಒಫ್ ಸ್ಟೇಟ್‌ರು ನೇಮಿಸುವವರ) ಸಂಬಳದಲ್ಲೂ ಕಡಿತವಾಗಲೆಂದು ಸರಕಾರವು ಬ್ರಿಟಿಷ ಸರಕಾರಕ್ಕೆ ತಿಳಿಸಿಯದೆ

❖❖❖

ಇದು ಪರೀಕ್ಷೆಯ ವರ್ಷ ಜನಗಳ ಸಹಕಾರ, ತ್ಯಾಗ, ಸರಿಯಾದ ತಿಳುವಳಿಕೆ, ದೇಶಭಕ್ತಿ ಇವುಗಳ ಮೇಲೆ ಸರಕಾರವು ಈ ವರ್ಷದ ಆಡಳಿತಕ್ಕೆ ನಿರ್ಭರವಾಗಿರ ಬೇಕಾಗಿದೆ

‘ಪ್ರಪಂಚದ ಸ್ಥಿತಿ ವಿಶೇಷವಾಗಿದೆ. ಊಹಿಸಲೂ ಅಸಾಧ್ಯ ಜವಾಬ್ದಾರ ಸರಕಾರಗಳು ಹೇಗೆ ನಡೆಯುತ್ತಿವೆಂಬುದನ್ನು ಜನರು ಚೆನ್ನಾಗಿ ತಿಳಿದುಕೊಳ್ಳುವಂತಾಗಿದೆ. ಜನರು ಹಾಗೆ ತಿಳಿದುಕೊಳ್ಳುವ ಕಾರಣ, ಸರಕಾರಕ್ಕೆ ಬಲು ಸರಕಾರವು ಜನಹಿತಕ್ಕಾಗಿ ಸಾಧಿಸಿ ಸಂರಕ್ಷಣೋಪಾಯಗಳನ್ನು ಕೈಕೊಂಡಿದೆ

‘ಫೆಡರೇಶನನ್ನು ನಿರಾಕರಿಸಿ, ಅದನ್ನು ತ್ಯಜಿಸಿರೆಂದು ಬ್ರಿಟಿಷಸರಕಾರಕ್ಕೆ ತಿಳಿಸಿ, ಇನ್ನಷ್ಟು ಉಪಯುಕ್ತವಾದ ಸಂಯೋಜಿತ ರಾಷ್ಟ್ರಾಧಿಪತ್ಯದ ಕಾನೂನಾಗುವಂತೆ ಸಾಧಿಸಬೇಕೆಂದು ಸೂಚಿಸಲಾಗಿದೆ.

ದೇಶೀಯರಾಜ್ಯಗಳನ್ನು ಫೆಡರೇಶನಿನಲ್ಲಿ ಸೇರಿಸುವುದರಿಂದ, ದುರ್ಬಲವೇ ಹೆಚ್ಚಿನಂಶವಾಗಿದೆ ಕೇಂದ್ರಸರಕಾರವು ಜವಾಬ್ದಾರವಾದುದಲ್ಲವದರಿಂದ, ಪ್ರಾಂತಿಕ ಸ್ವರಾಜ್ಯದ ಬೆಲೆ ಕಡಮೆಯಾಗಿದೆ

ಕಾಲಸ್ಥಿತಿ ಚೆನ್ನಾಗಿರಲಿಲ್ಲ ದವಸಗಳ ಬೆಲೆ ಏರಿಲ್ಲ ಮಳೆಗಾಲವು ಸಫಲಕೊಟ್ಟಿಲ್ಲ ಮೂರು ಜಿಲ್ಲೆಗಳಲ್ಲಿ ಕ್ಷಾಮವಿದೆ ಇದರ ಹಾವಳಿ ತಡೆಯಲು ೨೧ ಲಕ್ಷರೂಪಾಯಿ ವ್ಯಯವಾಗಿದೆ ೨೫ ಲಕ್ಷರೂಪಾಯಿ ಬೆಲೆಯ ಕೆಲಸ ಕಾಮಗಾರಿ ಇದಕ್ಕಾಗಿ ಸಾಗುತ್ತದೆ ಸುಮಾರು ೧೯ ಲಕ್ಷರೂಪಾಯಿ ಕಿರ್ವೆ ಮಾಫಿಮಾಡಬೇಕಾಗಿದೆ.

ಅತ್ತ, ಕೃಷ್ಣಾ ಗೋದಾವರಿ ಜಿಲ್ಲೆಗಳಲ್ಲಿ ನೆರೆ, ಸೇಲಂ ವಿಶಾಖಪಟ್ಟಗಳಲ್ಲಿ ಹಾವಳಿ ಧಾನ್ಯ ಜಾನುವಾರುಗಳ ವಿನಾಶ ಚಳಿಗಾಲದ ಮಳೆ ವ್ಯರ್ಥ ಕೆಲಸಗಾರರಿಗೆ ಕೆಲಸ ದೊರೆಯದಂತಾಯಿತು ಇನ್ನಷ್ಟು ಕಿರ್ವೆ ಮಾಫಿ ಬಿಡಬೇಕಾಗುವುದು ನಮ್ಮ ಸೋದರ ವರ್ಗವು ಬರ್ಮಾದಲ್ಲಿ ವಿಪರೀತ ಹಿಂಸೆ ನಷ್ಟಕಷ್ಟಗಳಿಗೆ ಗುರಿಯಾಗಿದೆ

ಈ ವರ್ಷ ಫಸಲು ಕಡಮೆ, ದವಸಗಳ ಬೆಲೆ ಏರಬಹುದು ಇದರಿಂದ ಹಾನಿಯಿದೆ. ಮುಖ್ಯ ಬೆಳೆಗಳ ಬೆಲೆ ಕಡಮೆಯಾಗಿದೆ ಧೈರ್ಯದಿಂದ ಆಡಳಿತವನ್ನು ಕೈಕೊಳ್ಳುವೆನಾದರೂ ಯಾವ ಕ್ಷಣದಲ್ಲೂ ಈ ಮಂತ್ರಿಗಳು ಹೊರಬೀಳಬಹುದಾಗಿರುವ ವಿದ್ಯಮಾನಗಳಲ್ಲಿ, ಬಲು ಎಚ್ಚರದಿಂದ ಮುಂದರಿಯಬೇಕಾಗಿದೆ

1939 40

ಹಿಂದಣ ಸರಕಾರಗಳ ರೀತಿಯನ್ನು ತೊರೆದು ಹೊಸ ರೀತಿಯಲ್ಲಿ ಈ ಅಂದಾಜುಗಳನ್ನು ಮಾಡಬೇಕಾಗಿರುವುದರಿಂದ, ಹೊಸ ಜನಹಿತಕರ ಕೆಲಸಗಳನ್ನು ಧಾರಾಳವಾಗಿ ಕೈಕೊಳ್ಳಲಿರುವ ಕಾರಣ, ನಾವು ಸಿಲ್ಕಿನ ಕಡೆಗೆ ಕಣ್ಣಿಡಲಾಗುವುದಿಲ್ಲ ಜೀವನವು ಬದಲಾಗುತ್ತ ಬಾರದೆ, ಪ್ರಜೆಗಳಿಗೆ ಸುಖವುಂಟಾಗದು, ಅದಕ್ಕಾಗಿ ಖರ್ಚು ಹೆಚ್ಚು, ಇಸಮುಗಳೂ ಹೆಚ್ಚುವುವು. ಹಿಂದಣ ಸರಕಾರಗಳು ನಫೆ ತೋರಿಸುವ ಉದ್ಯಮಮಾಡಿವೆ, ನಾವು ಹಣ ಸಾಲದಿಂದೇ ಹವಣಿಸಬೇಕಾಗಿದೆ ಬಡವರ ಸುಖ ಹೆಚ್ಚಬೇಕು, ತೆರಿಗೆ ಇಳಿಯಬೇಕು ತೆರ ಬಲ್ಲವರು ಸುಖಿಗಳು, ಅವರ ಸುಖಕ್ಕೆ ಕೊರತೆಯಿಲ್ಲದೆ ಅವರು ಸ್ವಲ್ಪ ಹೆಚ್ಚು ತೆರಿಗೆ ಬಡವರ ಹಿತವರ್ಧನೆಗಾಗಿ ತೆರುವಂತಾಗಬೇಕು, ಇದು ಈಗ ಸೂಕ್ತ. ಭಾರ ಹೊರಬಲ್ಲವರು ಭಾರ ಹೊರಲೇ ಬೇಕು, ಇಲ್ಲದಿರುವಲ್ಲಿ ದುರ್ಬಲರು ಹೊರುವ ಭಾರವು ಕಡಮೆಯಾಗದು

ಬಂದರುಗಳ ಹುಟ್ಟು, ಮದ್ಯಪಾನ ಮಾರಾಟದ ಸುಂಕದ ಹುಟ್ಟು, ಕಡಮೆಯಾಗುವುದು ಕಿರ್ವೆ ಹೆಚ್ಚುವುದಾದರೂ, ರಿಯಾಯಿತಿಗಳು ಹೆಚ್ಚಬೇಕಾದೀತು. ವಿದ್ಯುಚ್ಛಕ್ತಿಯ ಇಲಾಖೆಯಿಂದ ಹನ್ನೊಂದು ಲಕ್ಷ ಆಯುವು ಹೆಚ್ಚುವುದು

ಖರ್ಚಿನ ವಿಷಯಗಳಲ್ಲಿ, ಮೊದಲನೆ ಭಾಗದ ಖರ್ಚು ಕಳೆದ ವರ್ಷಕ್ಕಿಂತ ೨೦ ಲಕ್ಷ ಹೆಚ್ಚುವುದು ಹೊಸ ಯೋಜನೆಗಳು ಹಲವು ಇವೆ. ೩೪॥ ಲಕ್ಷರೂಪಾಯಿ ಬೇಕಾದೀತು. ಮದ್ಯನಿವಾರಣೆಯ ಸುಂಕ ನಷ್ಟವು ಇದೀ ವರ್ಷಕ್ಕೆ ೩೩ ಲಕ್ಷವಾಗುತ್ತದೆ. ಆದರೂ ಇದನ್ನು ಇನ್ನು ಒಂದು ಜಿಲ್ಲೆಗೆ ಹರಡುವುದೇಕೆಂದು ಕೇಳಬಹುದು. ಅತಿ ದರಿದ್ರರ ಮೇಲೆ ಪರೋಕ್ಷ ರೀತಿಯಿಂದ ಈ ಸುಂಕವು ಅತ್ಯಧಿಕವಾದ ತೆರಿಗೆಯಂತಿದೆ, ಇದು ಮುಗಿಯಲೇ ಬೇಕು, ಅದರ ಸ್ಥಾನದಲ್ಲಿ ಇತರ ಸುಲಭ ತೆರಿಗೆಗಳಾಗಬೇಕು ಇದನ್ನು ಇಷ್ಟು ನಿಧಾನವಾಗಿ ಹರಡುವುದೇಕೆನ್ನುವರು, ಮಾಡುವುದೇನು? ಖಜಾನೆಯ ಭದ್ರತೆ ನೋಡ ಬೇಡವೆ? ಸರಕಾರದ ಭದ್ರತೆ ಬೇಡವೆ? ವಿಶ್ವಾಸ ಬೆಳೆಯಬೇಕು ಅದಕ್ಕಾಗಿ ನಿಧಾನ ನಡಿಗೆ, ಒಂದೇ ಹೊಸ ಜಿಲ್ಲೆಯಲ್ಲಿ ಇದನ್ನು ಜ್ಯಾರಿಮಾಡುವುದು. ಜವಾಬ್ದಾರಿಯನ್ನು ತಿಳಿಯದವರು, ಇಡೀ ಸಂಸ್ಥಾನಕ್ಕೆ ಈ ಕಾನೂನು ಲಗಾವಾಗುವಂತೆ ಮಾಡುವ ನೆವಹಿಡಿದು ಹೊರ ಬೀಳಬಹುದು ಸೇಲಂ, ಚಿತ್ತೂರು, ಕಡಪಾ, ಉತ್ತರ ಆರ್ಕಾಡು ಜಿಲ್ಲೆಗಳಲ್ಲಿಷ್ಟೆ ಜ್ಯಾರಿಗೆ ತರುವುದರಿಂದ ಮುಕ್ಕಾಲುಕೋಟಿರೂಪಾಯಿ ನಷ್ಟವುಂಟು

ಮದ್ಯಪಾನ ನಿವಾರಣೆಯ ಕಾನೂನು ಬಲು ಚೆನ್ನಾಗಿ ಜ್ಯಾರಿಗೆ ಬಂದಿದೆ ಸೇಲಂನಲ್ಲಿ ಒಂದೂವರೆ ವರ್ಷದಿಂದ ಸತ್ಪರಿಣಾಮವುಂಟು ಮಾಡಿದೆ ಆಫೀಸರರೂ ಮಹಾಜನರೂ ಬಹಳ ಸಹಕರಿಸಿ ಉತ್ತಮ ಫಲವನ್ನುಂಟುಮಾಡಿದ್ದಾರೆ ಆದುದರಿಂದಲೇ ಧೈರ್ಯವಿಟ್ಟು ಈ ವರ್ಷ ೨೩೮೧೯ ಚದರ ಮೈಲು ವಿಸ್ತೀರ್ಣಕ್ಕೂ ಈ ಕಾನೂನನ್ನು ಜ್ಯಾರಿಗೆ ತರುವೆವು

ಹೊಸ ತೆರಿಗೆಗಳು

ಈಗ ೪೨,೧೯,೦೦೦ ರೂಪಾಯಿಯ ನಷ್ಟವನ್ನು ತುಂಬಿಸಬೇಕಾಗಿದೆ. ಪೆಟ್ರೋಲ್ ಮಾರಾಟದ ಮೇಲೊಂದು ಸುಂಕ, ವಿದ್ಯುಚ್ಛಕ್ತಿಯ ಮಾರಾಟದ ಮೇಲೊಂದು ಸುಂಕ,– ಇವನ್ನು ವಿಧಿಸಲೆಳಸಿದ್ದೇವೆ ಈ ತೆರಿಗೆಗಳನ್ನು ವಿಧಿಸುವುದು ಅಕ್ರಮವಲ್ಲೆಂದು ಫೆಡರಲ್ ಕೋರ್ಟು ನಿರ್ಧರಿಸಿಯದೆ ಈ ವಿಷಯ ಕಾನೂನಾಗಲಿರುವ ಮಸೂದೆಗಳನ್ನು ಮೊದಲೇ ಪ್ರಕಟಿಸಿರುವೆವು ಇವೆರಡು ಸುಂಕಗಳಿಂದ ೧೫,೯೬,೨೦೦ ರೂಪಾಯಿ ಸಿಗಬಹುದೆಂದು ಅಂದಾಜು.

೧೯೩೭ರಲ್ಲಿ ದೇಶೀಯ ಮದ್ಯದ ಸುಂಕವು ಸೇಕಡಾ ೨೫ರಂತೆ ಇಳಿಸಲಾಗಿತ್ತು ಈ ಸುಂಕವನ್ನು ಈಗ ಗ್ಯಾಲನಿಗೆ ರೂ ೧-೮-೦ರಂತೆ ಏರಿಸುವೆವು ಇದರಿಂದ ೧೨ ಲಕ್ಷ ರೂಪಾಯಿ ದೊರೆವುದು

೧೩ನೇ ಪುಟಕ್ಕೆ ಮುಂದುವರಿದಿದೆ]

ಕಳೆದ ಆದಿತ್ಯವಾರ ಗೌಡಸಾರಸ್ವತ ಸಮಾಜದ ಉಭಯ ಮಠದ ಶ್ರೀಪಾದಂಗಳವರಿಗೆ

ಬ್ರಿಟಿಷ ಪತ್ರಿಕೆಗಳಲ್ಲಿ ಕೊಂಗ್ರೆಸಿನ ಸದ್ಯಸ್ಥಿತಿ ವಿಮರ್ಶೆ

ಶ್ರೀ। ಸುಭಾಷಚಂದ್ರರ ಚುನಾವಣೆಯೂ ದುದೇ, ಇನ್ನು ಕೊಂಗ್ರೆಸಿನಲ್ಲಿ ಒಕ್ಕಟ್ಟು ಇರಲಾರದೆಂದೂ, ಎಡಪಕ್ಷದವರಿಗೆ ಬಲವು ಹೆಚ್ಚುವುದೆಂದೂ, ಮಾತ್ರವಲ್ಲದೆ, ಗಾಂಧಿಜಿಯು ಪ್ರಾಬಲ್ಯ ಕ್ಷೀಣಿಸುವುದೆಂದು ಈ ವಿಜಯವೇ ಸೂಚಿಸುವುದೆಂದೂ, ಬ್ರಿಟಿಷ ಪತ್ರಿಕೆಗಳು ಮೇಲಿಂದ ಮೇಲೆ ಸಾರತೊಡಗಿವೆ. ಕೊಂಗ್ರೆಸಿನಲ್ಲಿ ಒಡಕುಹುಟ್ಟಿದ ಹಾಗೆ ಈ ವರ್ಷವೆಲ್ಲ ಶ್ರೀ। ಸ ಭಾಷರು ಕಾರ್ಯನಿರ್ವಹಿಸಿರುವುದನ್ನು ಯಾವ ಪತ್ರಿಕೆಗಳೂ ಅಷ್ಟು ಸೂಚಿಸಿಲ್ಲ, ಗಾಂಧಿಜಿಯವರು ಇವರೊಡನೆ ಸಂಪೂರ್ಣ ಐಕ್ಯಮತ್ಯ ಪ್ರಳ್ಳವರೆಂಬುದನ್ನು ಪತ್ರಿಕೆಗಳು ನಂಬಿಲ್ಲ. ಡಾ। ಪಟ್ಟಾಭಿ ಸೀತಾರಾಮಯ್ಯನವರು ಲೋರ್ಡ ಲಿನ್ಲಿತ್ಗೋವರ ಕಡೆಯ ಉಮೇದುವಾರರೆಂದೂ, ಫೆಡರೇಶನ್ನು ಜ್ಯಾರಿಗ ಬರುವಂತೆ ಮಾಡಲು ಗಾಂಧಿಜಿಯವರ ಪ್ರಯತ್ನಗಳು ಗೋಪನದಲ್ಲಾಗುತ್ತಿದ್ದುವೆಂದೂ ಆದ್ದರಿಂದಲೇ ಆವರು ಡಾಕ್ಟರರ ಚುನಾವಣೆಗಾಗಿ ಪ್ರಚಾರ ಮಾಡುತ್ತಿದ್ದರೆಂದೂ ಸಾರಲಾಗಿದೆ

ಗಾಂಧಿಜಿಯವರೇ 'ಹರಿಜನ'ದಲ್ಲಿ ಬರೆದ ಲೇಖಗಳಲ್ಲಿನ ಕೆಲ ಮಾತುಗಳನ್ನು ಎತ್ತಿ ಹಿಡಿದು, ತಾವು ಭಾವಿಸಿರುವ ಟೀಕೆಗಳಿಗೆ ಆಧಾರವಾಗುವಂತೆ ಉಲ್ಲೇಖಿಸಿರುವರು. ಬೋಸರು ಕ್ರಾಂತಿಕಾರರ ನಾಯಕರೆಂದು ಮೊದಲೇ ಬರೆದು, ಸರಕಾರದ ಗುಲಾಮತನವನ್ನು ಸ್ವೀಕರಿಸದಂತೆ ಇವರು ಎಲ್ಲರನ್ನ (ಕೊಂಗ್ರೆಸಿನವರು) ಕಾಪಾಡುವವರೆಂದೂ, ಕೊಂಗ್ರೆಸಿನಲ್ಲಿ ಫೆಡರೇಶನು ವಿರುದ್ಧ ಪಕ್ಷಕ್ಕೆ ಇವರು ನಾಯಕರೆಂದೂ ಸೂಚಿಸಲಾಗಿದೆ. ದುರ್ವೃತ್ತಿಯಿಲ್ಲದೆ ಚುನಾವಣೆಗಳು ನಡೆಯಬೇಕು ಎಂದು ಗಾಂಧಿಜಿಯವರೆಂದುದನ್ನು ಎತ್ತಿ, ಬೋಸರು ಗೆದ್ದುದು ದುರ್ವೃತ್ತಿಯವರ ದೆಸೆಯಿಂದಲೇ ಎಂದು ಟೀಕಿಸಿದ್ದಾರೆ!

ಹಿಂದೆ ಹುಟ್ಟು ಮೊದಲಾದುದು ಕೊಂಗ್ರೆಸಿನಲ್ಲಿರಬಾರದು ಜಂತಹವರನ್ನು ಕೊಂಗ್ರೆಸಿನಿಂದ ಹೊರಡಿಸತಕ್ಕದ್ದು ಎಂದು ಗಾಂಧಿಜಿಯವರು ಬರೆದುದರ ಮೇಲೆ ಕೆಲವರನ್ನು ಕೊಂಗ್ರೆಸಿನಿಂದ ಹೊರಕ್ಕೆ ದಬ್ಬಲಾಗುವುದು ಅಂತೆ. ಇನ್ನು ಮುಂದೆ ಅತಿ ಕಠಿನವಾದ ಶಿಸ್ತಿನ ಹೋರಾಟಗಳು ನಡೆಯಲಿವೆ ಎಂದು ಗಾಂಧಿಜಿಯವರೆಂದುದು ... 'ಹೊರತಾಗಿದೆ ಎಂದೇ' ಅರ್ಥ ಮಾಡಿಕೊಂಡಿರುವರು—

ರಾಜಕೀಯರಂಗದಲ್ಲಿ ... ಅಧಿಕಾರ ನಡೆಸಬೇಕೆಂದು ಆಶಿಸುವಂತ ಜನಗಳಿಗೆ ಇದೆಲ್ಲ ಏನೇನೋ ಬೇರೆ ಅರ್ಥವಾಗುವಂತಿದೆ, ಇದು ವರೆಗೆ ಹಿಂದೂ-ಮುಸ್ಲಿಮರೊಳಗೆ ಭೇದಭಾವಗಳಿರುವವನ್ನು ದೊಡ್ಡದಾಗಿ ಗಣಿಸಿ, ಅವನ್ನೇ ಜನತೆಯ ಮುಂದೆ ಸಾರಿಸುತ್ತಿದ್ದವರೆಲ್ಲರಿಗೆ ಇದೀಗ ಹೊಸತೊಂದು ಪುರಾಣ ಬರೆಯಲು ಸಿಕ್ಕಿದಂತಾಗಿದೆ. ಪಂಡಿತ ಜವಾಹರಲಾಲರನ್ನು ಇದುವರೆಗೆ ಕೊಂಗ್ರೆಸಿನಲ್ಲಿ ಒಡಕುಹುಟ್ಟಿಸುವ ಪಕ್ಷದವರೆಂದು ಎದುರು ಹಿಡಿದಿದ್ದರು, ಪಕ್ಷವಿರಬೇಕು, ಆದರೆ ವಿಮರ್ಶಾಧಿಕಾರವೂ ಇರಬೇಕು ಎಂದು ಅವರೇ ತಿಳಿಸಿಬಿಟ್ಟ ಕಾರಣ ಈಗ ನೆಹರು ವಿಚಾರ ಹಾಗೆ ಬರುವುದಿಲ್ಲ.

"ಬ್ರಿಟಿಷ ಪತ್ರಿಕೆಗಳಲ್ಲಿ, ಇಂಡಿಯವು ಈ ಫೆಡರೇಶನ್ ವಿಷಯವಾಗಿ ಇಕ್ಕಂಡಗಳಾಗಿರುವುದು ಎಂದೇ ಸಾರುವುದು ಇಷ್ಟು, ಅಧ್ಯಕ್ಷ ಚುನಾವಣೆಯಲ್ಲಿ, ಚುನಾವಣೆ ನಡೆಯದೆ ಅಧ್ಯಕ್ಷರನ್ನು ಮಾಡಿಕೊಂಡಿದ್ದರೆ—ಪ್ರಜಾಸತ್ತೆ ಇನ್ನೆಲ್ಲಿ ಉಳಿದಿದೆ ಎನ್ನುತ್ತಿದ್ದರು" ಎಂದು ಶ್ರೀ। ನೆಹರುರವರು ಹೇಳಿಯೇ ಮುಗಿಸಿರುವಾಗ, ಈಗ ಏನುಮಾಡುವುದೆಂದು, ಅಪ್ರಕೃತ ಚಿತ್ರಗಳನ್ನು ಪ್ರದರ್ಶಿಸುವ ಈ ಪತ್ರಿಕೆಗಳಿಗೆ ಸೂಚಿಸಲಾಗಿದೆ

ಹೊಸ ಪೆಟ್ರೋಲ್ ತೆರಿಗೆ ಮಂತ್ರೀಶ್ವರರ ವಿವರಣೆ.

"ಗೆಲನಿಗೆ ಒಂದಾಣೆ ಒಂದುವರೆ ಆಣೆ ಹೊಸ ಸುಂಕ ವಿಧಿಸಿದರೆ ಧನರು ದೂರಬಾರದು ಗೆಲನಿಗೆ ಬೆಲೆ ೧೩ ಆಣೆಯಿಂದ ೧೪ ಆಣೆ, ರೂ ೧-೧-೦ ಮತ್ತೂ ಹೆಚ್ಚು ಹೀಗೆ ಹೆಚ್ಚನೆ ಏರಿದಾಗ ದೂರಿದವರು ಕಡಿಮೆ. ಈಗ ಒಂದುವರೆ ಆಣೆ ಹೆಚ್ಚಿದರೆ ದೂರಬಾರದು ಯಾವ ಒಂದುವರೆ ಆಣೆಯಿಂದ ಆಗಬಹುದಾದ ಉಪಕಾರಕ್ಕಿಂತಲೂ ಈ ಹಣವು ಒಟ್ಟುಕೂಡುವುದರಿಂದ ಜನರಿಗೆ ಹೆಚ್ಚಿನ ಪ್ರಯೋಜನವಿದೆ ಹುಲ್ಲಿನಿಂದ ಹಾಲು ಕರೆಯಬರುವುದೇ? ಒಂದೊಂದೇ ಹುಲ್ಲಿನ ಕಡ್ಡಿ, ಕಟ್ಟಾದರೆ, ಅದನ್ನು ಎಮ್ಮೆ ತಿನ್ನುವಂತಾದರೆ, ಆಗ ತಾನೆ ಹಾಲು? ಇದೊಂದು ಬಗೆಯ ಧರ್ಮವೆಂದು ತಿಳಿಯಿರಿ ತನ್ನ ಕಾರಿಗೆ ಮೊದಲಾಗಿ ಪೆಟ್ರೋಲ್ ತುಂಬಿಸಿದ ಕೂಲಿಗ ಒಂದು ಒಂದುವರೆ ಆಣೆ ಇನಾಮು ಕೇಳುವವರು ಎಷ್ಟೋ ಮಂದಿ ಇರುವರು ಈ ತೆರಿಗೆ ತೆತ್ತಲ್ಲಿ, ಕಾರುಗಳ ವೇಗವೇನೂ ಹೆಚ್ಚದು ಹೀಗೆ ತೆರಿಗೆ ತೆರುವುದರಿಂದ, ದಾರಿಗಳು ಇನ್ನೂ ಸುಗಮವಾಗುವವೆ? ಎಂದು ಕೇಳಬಾರದು ಉದ್ದೇಶವನ್ನು ನೋಡಿರಿ ಇದು ಪೆಟ್ರೋಲಿನ ಮೇಲೆ ಸುಂಕವಲ್ಲ, ಅದನ್ನು ಕೊಂಡುಕೊಳ್ಳುವಾತನ ಮೇಲೆ ನಾವು ಬಡವರು, ನಮ್ಮಲ್ಲಿ ಎಷ್ಟೋ ಹಳ್ಳಿಗ ಕಾಸಿಲ್ಲ ಹಾಲುಬೇಕೆಂದು ಎಲ್ಲರೂ ಎನ್ನುವರು ಜನರು ಹಾಲುಕರೆಯಲು ಕಾದಿರುವರು ನಮಗೆ ಒಂದೊಂದು ಎಸಳು ಹುಲ್ಲು ಕೊಡಿರಿ ಎಂದು ಕೂಗುವಾಗ, ಈ ೧½ ಆಣೆ ಕೊಡಲಾರದೆ ಮೋಟರನ್ನು ಕ್ರಯಕ್ಕೆ ಕೊಂಡು ಕೊಂಡು, ಅದರಲ್ಲಿ ಸವಾರಿಮಾಡುವ ಶ್ರೀಮಂತಿಕೆಯುಳ್ಳವನ ಮಾತ್ರ ಒಂದೂವರೆ ತೆರಲಿ ಗಾಡಿಗಳಲ್ಲಿ ದಾರಿಬಿಡುವಂತೆ, ದಾರಿಹೋಕರ ಪ್ರಾಣಭಯದಿಂದ ಪಕ್ಕಕ್ಕೆ ಓಡುವುದು, ಪ್ರತಿಯೊಬ್ಬರೂ ಕಾರಿಗೆ ದಾರಿಬಿಡುವಂತೆ ಈ ಕಾರುಸಂಚಾರವು ಮಾಡುವ ಕಾರಣ ಜನ

ಅಫೀಮು

ಸೇಲಂನಲ್ಲಿ ಮದ್ಯಪಾನ ನಿವಾರಣೆಗೆ ಪ್ರಾರಂಭಿಸಿದಂತೆ, ಅಸ್ಸಾಮಿನಿಂದ ಅಫೀಮನ್ನು ಬಹಿಷ್ಕರಿಸಬೇಕೆಂದು ಅಲ್ಲಿನ ಮಂತ್ರಿಗಳು ಪ್ರಯತ್ನ ಮಾಡುತ್ತಿರುವರು ಹತ್ತುಸಾವಿರ ಜನ ಅಸ್ಸಾಮರೂ ಅಫೀಮು ಸೇವನೆಯಿಂದ ಆರೋಗ್ಯ ಹಾಳುಮಾಡಿಕೊಂಡಿರುವರು, ಅಫೀಮು ಅವರಿಗೆ ಸಿಗಲಾರದಂತಾದರೂ ಅಷ್ಟುಜನರು ರೋಗಿಗಳಾಗಬಹುದು. ಅಫೀಮು ಬಹಿಷ್ಕಾರದಿಂದ ಸರಕಾರಕ್ಕೆ ಎಂಟುಲಕ್ಷ ರೂಪಾಯಿ ನಷ್ಟವಿದೆ ಜನರು ಒಂದಾಗಿ ಸಹಕರಿಸಿ ಈ ಪಾನಾರ್ಥದನ್ನು ಜಯಗೊಳಿಸಿದರೆ, ಈ ಹಣ ನಷ್ಟವಾದರೂ ಸರಕಾರವು ಚಿಂತಿಸದು ಎಂದು ಅಲ್ಲಿನ ಮಂತ್ರಿಗಳು ತಿಳಿಸಿರುವರು.

ಹಿತಕ್ಕೆ ಸಂಚಿತನ್ನು ತೆರಲಾರದವನು ಕಾರನ್ನಿಟ್ಟುಕೊಂಡು ಎಂತಹ ಮಹಾನುಭಾವನಾಗ್ಯಾನ? ಹೀಗೆ ತತ್ತರಿ, ರಾಜ್ಯಾಡಳಿತಭಾರವನ್ನು ಹೊರಬೇಕಾದವರ ಕೈಗೆ ಸಹಾಯವಾಗಿದಂತಾಗುವುದು. ಒಂದಣೆ ರಾಜರು ಎತ್ತುಗಾಡಿಗಳಿಗಾಗಿ ಸಮರ್ಥವಾದ ದಾರಿಗಳನ್ನು ಮಾಡಿದ ಪುಣ್ಯವಂತರು ನೀವೆ ಚೆನ್ನಾಗಿ ಅರಿಕೊಂಡು ಕರ್ನಲ ಹಿತಸಾಧಿಸಿರಿ ಎಂದು ಬಿಂದಿಯಮೇಲೆ ಶಾಸನಕೊರೆದರೆ 'ಹೀಗೆ ದೇಶದ ಮತ್ತು ಜನತೆಯ ಹಿತವರ್ಧನೆಗಳಿಗಾಗಿ ತೆರಿಗೆ ತೆರಬೇಕಾಗಿದೆ.

ಕೆಲವರ ಧಂದೆಯವರ ...
ಹೊಗ್ಗರು,
ಎಲ್ಲರು ... ಕೊಡಬಲ್ಲರು,
ಪ್ರತಿಯೊಬ್ಬರು ತಂಚಿದನವನ್ನಾದರೂ
ಕೊಡಬೇಕು—
ಸಮಸ್ತರ ಹಿತವರ್ಧನೆಗಾಗಿ'

ತ್ರಿಪುರಿ : ಕೊಂಗ್ರೆಸ್ ಅಧಿವೇಶನದ ನಗರ.

ಅಕಬರ ಸಾಮ್ರಾಜ್ಯದ ಪ್ರತಿಸ್ಪರ್ಧಿಯಾಗಿ (ವೈಸ್ರಾಯ) ಗೊಂಡ್ವಾನ ರಾಜ್ಯದಲ್ಲಿದ್ದ ಅಸಾಫ್ ಖಾನನಿಗೆ,—ಸೈನ್ಯವನ್ನು ನೋಡಿಯೆ 'ಹೆದರುವವನು ನಾನಲ್ಲ' ಎಂದು ಹೇಳಿಕಳಿಸಿದ ರಾಣಿ ದುರ್ಗಾವತಿಯ ಹೆಸರು ಇತಿಹಾಸದಲ್ಲಿ ಮೆರೆಯುತ್ತದೆ "ಬರಲಿ ನಿಮ್ಮ ಸೇನೆಗಳು ಅದೇ ಬಯಲಲ್ಲಿ ನಾವು ಸ್ವತಂತ್ರರೋ, ಇಲ್ಲಿಗೆ ಇಷ್ಟು ತಂದಿಸುವವರೋ ಎಂಬುದನ್ನು ಖಡ್ಗವೇ ನಿರ್ಣಯ ಮಾಡಲಿ" ಎಂದು ಧೀರವಾಣಿಯನ್ನು ಪ್ರಕಟಿಸಿದವಳೇ ಡಳಪತಿ ಶಹಸ ರಾಣಿ ದುರ್ಗಾವತಿ!

ಇದೇ ಉತ್ತಮ ಸಾಹಸದ ವಾತಾವರಣವು ಇನ್ನೂ ತುಂಬಿರುವ ಮಹಾಕೋಸಲ ದೇಶವೇ ನಾಳಿನ ಕೊಂಗ್ರೆಸ್ ಅಧಿವೇಶನ ಸೇರಲಿರುವ ಸ್ಥಳ ಮಹಾಕೋಸಲದ ಜನಗಳು ಎಲ್ಲರು ಸಲವಾದರೂ ಭಾರತವರ್ಷದ ಸ್ವಾತಂತ್ರ್ಯ ಪರಿಪಾಲನೆಗಾಗಿ ಕಾದಾಡಿರುವರು. ದುರ್ಗಾವತಿಯ ಕಾಲದಲ್ಲೆಷ್ಟೋ, ಝಾನ್ಸಿಯ ಲಕ್ಷ್ಮೀಬಾಯಿಯ ಕಾಲದಲ್ಲಿ ಮತ್ತಷ್ಟು. ಸ್ವಾತಂತ್ರ್ಯಪೋಷಕವಾದ ಈ ನಾಡೇ ಕೊಂಗ್ರೆಸ್ ಅಧಿವೇಶನಕ್ಕೆ ಈಗ ಉಪಯುಕ್ತವಾಗಿದೆಯಲ್ಲವೆ?

ಅಧಿವೇಶನ ಸೇರುವ ಸ್ಥಾನದ ಹೆಸರು ತಿಲ್ವಾರಾಘಾಟ್. ನರ್ಮದಾನದಿಯು ಕಲಕಲಿಸಿನಾದವನ್ನು ಚೆಲ್ಲಿಸುತ್ತ, ಒಂದು ಮೈಲು ದೂರದಲ್ಲಿ ತ್ರಿಪುರಿ ನಗರವಿದೆ

ಇಕ್ಕಟ್ಟಾದ ಕಣಿವೆಗಳೂ, ಅರಣ್ಯಾಚ್ಛಾದಿತವಾದ ಬೆಟ್ಟಗಳೂ ಇರುವಲ್ಲಿ ಸೌಂದರ್ಯದ ಬೀಡಾಗಿ ತ್ರಿಪುರಿ ಇದೆ ವಿಂಧ್ಯಪರ್ವತಗಳ ಸಾಲು, ಅವುಗಳ ಎದುರಲ್ಲಿ ಚಿಕ್ಕದೊಡ್ಡ ಬೆಟ್ಟಗಳು ಜೇಕೆ ಕೂಡಿ ಕತ್ತರಿಸುವಲ್ಲಿ, ಹಸುರು ಇಕ್ಕಟ್ಟಾದ ಕಣಿವೆಗಳಿಂದ ಹರಿದುಹೋಗಿ ಸಮಾಧಾನವನ್ನು ನೀಡಲಿರುವ ಉಪನದಿಗಳು ಹೊರಡುವಲ್ಲಿ ಹೊಳೆಗಳು ದಿನ್ನೆಯಲ್ಲೇರಿ ತಪ್ಪನೆ ಗುಡ್ಡಗಳ ಸುತ್ತಿಯುಂಡ ಹರಿಕ್ಕು, ಸಾರಿಗೆ ಜಲ ಸಂಚಾರ ಅಸಾಧ್ಯವಾಗಿರುವಲ್ಲಿ, ಬೆಟ್ಟಗಳಂತಹ ಮೈದೀಳಿ ಬಿತ್ತಿ ಮುಚ್ಚಿರುವ ಪ್ರಾಂತಗಳ ಸಮೂಹಗಳೇ ನಿಬಿಡವಾಗಿರುವಲ್ಲಿ, ಚಿಕ್ಕ ಗ್ರಾಮಗಳಲ್ಲಿ ಜನರು ಜಾನುವಾರು ಮೇಯಿಸಿ ಜೀವನ ನಿರ್ವಾಹ ಮಾಡುತ್ತಿರುವಲ್ಲಿ ಮೇಳದ ಜಂತುಗಳು ಇವನ್ನು ಕೊಳ್ಳೆ ಹೊಡೆಯುವುದರಿಂದ ಅವನ್ನು ಹೋಲಿಯಾಡಲು ಧೀರ ಸಂಘಗಳು ಒದಗಲಿ—ಅಲ್ಲಿದೆ ತ್ರಿಪುರಿ

ಪ್ರಕೃತಿದ ದಿನ್ನೆಯಿಂದ ಕಡಿದು ನರ್ಮದೆಯ ... ಪುರಾತನ ಪ್ರದೇಶವು ಇಲ್ಲಿಂದ ದಕ್ಷಿಣ ದಿಕ್ಕಿನಲ್ಲಿದೆ. ತ್ರಿಪುರಿಯು ಸಮುದ್ರ ಮಟ್ಟದಿಂದ ೪೪೦೦ ಅಡಿ ಎತ್ತರವಾಗಿದೆ

ನರ್ಮದಾ ನದಿಯ ಮೇಲೆ ಸೂರ್ಯನು ಉದಯಿಸುವ ಉತ್ಸವ ವೈಭವವನ್ನು ಬಣ್ಣಿಸಲು ನಮ್ಮ ... ಈ ಜನ್ಮದಲ್ಲಿ ಅದನ್ನು ಮರೆಯಲಾರೆವು. ಗಭೀರ ನೀಲಿನ ನರ್ಮದೆ ಗಂಭೀರವಾಗಿ ಹರಿಯುವಾಗ, ಸೂರ್ಯನ ಕಿರಣಗಳು ಆ ಪ್ರವಾಹದ ಮೇಲೆ ಕರಗಿದ ಬಂಗಾರದಂತೆ ತೋರುವ ಹಾಗೆ ಮಾಡುವುದು ... ನರ್ಮದೆಯ ಈ ತೀರ್ಥ ಕುಡಿದವರು ... ಬಾಧೆಯಿಂದ ...

ನಮಗೆ ಶತಶತಮಾನಗಳಿಂದಲೂ ಪರಿಚಿತವಾದ ಗ್ರಾಮಪುರ ತ್ರಿಪುರಿ. ಸ್ವಾತಂತ್ರ್ಯ ಸಿಕ್ಕಿತು ತ್ರಿಪುರಿಯು ನಡೆಸುವುದು. ರಾಷ್ಟ್ರ ಸಭಾಧಿವೇಶನಕ್ಕೆ ದುರ್ಗಾವತಿ ಲಕ್ಷ್ಮೀಬಾಯಿ ಮುಂತಾದ ಪವಿತ್ರಾತ್ಮಗಳ ಆಶೀರ್ವಾದವಿರಲಿ

ಪಂಡಿತ ಡಿ. ಗೋಪಾಲಾಚಾರ್ಲುರವರ
ಬಾಲಭಾಸ್ಕರ

ಎಳೆ ಮಕ್ಕಳ ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ಮಕ್ಕಳ ಆರೋಗ್ಯವನ್ನು ನೆಲೆಗೊಳಿಸುವುದು.

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು.
ಆಯುರ್ವೇದಾಶ್ರಮ ::
ಮದರಾಸು.



ಸ್ಟಾಕಿಸ್ಟರು
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಲು ... ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕೆ ನಸ್ಯವು ಮನಸ್ಸನ್ನು ಉತ್ತೇಜನಗೊಳಿಸುತ್ತದೆ ಎಲ್ಲರ ರುಚಿಗೆ ತಕ್ಕದಾಗಿದ ನಸ್ಯ ಎಲ್ಲರಿಗೂ ಅನುಕೂಲವಾದ ದರದಲ್ಲಿದೆ

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

... ಸಾರಥಿ ನಸ್ಯ 1 ಪೌಂಡಿಗೆ ರೂ. 3-8-0 ... ಸಾರಥಿ ನಸ್ಯ 1 ಪೌಂಡಿಗೆ ರೂ. ...-0-0
(ವಿ. ಪಿ. ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ.

ವಿಳಾಸ —
ಎ. ಪಿ. ಸಾರಥಿ
ಮೆನ್ಯುಫೆಕ್ಚರರ್ಸ್ ಒಫ್ ಮೆಡ್ರಾಸ್ ಸ್ನಫ್, ಪಿ. ಬಿ. ನಂಬ್ರ 47 ಮದ್ರಾಸು

ಜಾಹೀರಾತುಗಳಿಗೆ:
ಸ್ವದೇಶಾಭಿಮಾನಿ
ಅತ್ಯುತ್ತಮ ಸೌಕರ್ಯಕೊಡುವುದು:
ಪ್ರತಿಫಲಬರುವಂತೆ ಸಾಧಿಸುವುದು

ದಕ್ಷಿಣ ಕನ್ನಡ ಸೆಂಟ್ರಲ್ ಕೋ ಒಪರೇಟಿವ್ ಬೇಂಕಿನ ರಜತೋತ್ಸವದ ಅಧ್ಯಕ್ಷರಾದ ಸರ್ ಮಿರ್ಜಾ ಇಸ್ಮಾಯಿಲರೂ, ಬ್ಯಾಂಕಿನ ಡೈರೆಕ್ಟರರೂ ಮತ್ತು ಸಿಬ್ಬಂದಿಯವರು

ಮದ್ರಾಸು ಸರಕಾರದ ಆಯವ್ಯಯದ ಅಂದಾಜು

(ಬಜೇಟು)

(ಸಾವಿರ ರೂಪಾಯಿ)

	೧೯೩೭-೩೮.	೧೯೩೮-೩೯ ಅಂದಾಜು	೧೯೩೯-೪೦ ಅಂದಾಜು
ಆದಾಯ:	೧೬,೦೦,೭೨.	೧೬,೨೩,೧೯.	೧೬,೨೩,೪೫
ವ್ಯಯ:	೧೫,೮೨,೯೬.	೧೬,೨೦,೭೬.	೧೬,೪೦,೭೨.
ಲಾಭನಷ್ಟ	+ ೧೭,೭೬.	+ ೨,೪೩.	— ೧೭,೨೭

ಮುಖ್ಯ ಮಂತ್ರಿ ರಾಜಗೋಪಾಲಾಚಾರ್ಯರು ತಾ ೨೦ರಲ್ಲಿ ಈ ಬಜೆಟು ಅಂದಾಜನ್ನು ಮದ್ರಾಸು ಎಸೆಂಬ್ಲಿಯ ಮುಂದಿಟ್ಟರು.

೧೯೩೭-೩೮ರಲ್ಲಿ ಸುಮಾರು ೧೨,೦೦೦ ಮಾತ್ರ ಉಳಿದೀತೆಂದು ಅಂದಾಜು ಇದ್ದರೂ ೨೮೩ ಸಾವಿರದಷ್ಟು ಉಳಿಯಿತು. ನೆರೆಹಾವಳಿ, ಬಿರುಗಾಳಿಯ ಹಿಂಸೆ, ಮಳೆ ಕಡಿಮೆಯಾದುದರ ದುಷ್ಪರಿಣಾಮ, ಅರ್ಧಕೋಟಿ ರೂಪಾಯಿ ಕೀರ್ವೆ ಮಾಫಿ, ಇತ್ಯಾದಿಗಳಿಂದ ಸರಕಾರಕ್ಕೆ ಬಾಧೆ ಹಿಡಿದಿದ್ದರೂ ಸುಂಕ, ಸ್ಟಾಂಪು, ರಿಜಿಸ್ಟ್ರೇಶನ್ ಇಲಾಖೆಗಳ ಆಯವು ಇಳಿದಿದೆ. ೪೨ ಲಕ್ಷರೂಪಾಯಿಗಳನ್ನು ಚಿಕ್ಕ ಬಂದರುಗಳ ಫಂಡಿನಿಂದ ಮಂಜೂರಾದ ಕಾನೂನು ಪ್ರಕಾರ ಆಯಕ್ಕೆ ಸೇರಿಕೊಂಡಿದೆ.

೧೯೩೮-೩೯ರಲ್ಲಿ ಆಯವು ೧೬,೨೩,೧೯೦೦೦ ಎಂದು ಅಂದಾಜು. ಉತ್ತರ ಆರ್ಕಾಡು ಜಿಲ್ಲೆಯಲ್ಲಿ ಮದ್ಯಪಾನ ನಿಷೇಧಿಸಲಾದೀತು. ಎಂದರೆ ಒಟ್ಟು ನಾಲ್ಕು ಜಿಲ್ಲೆಗಳಲ್ಲಿ, ಅಧಿಪತ್ಯದ ಸುಮಾರು ಐದರಲ್ಲೊಂದು ಭಾಗ ವಿಸ್ತೀರ್ಣದಲ್ಲಿ ಮದ್ಯಪಾನ ನಿವಾರಣೆಯಾದಂತಾಗುವುದು. ಇದರಿಂದ ೬೫ ಲಕ್ಷರೂಪಾಯಿ ನಷ್ಟವಾಗುವುದು. ದೇಶೀಯ ಮದ್ಯದ ಮೇಲೆ ಇತರ ಜಿಲ್ಲೆಗಳಲ್ಲಿ ಸುಂಕ ಏರಿಸಿ, ವಿದ್ಯುಚ್ಛಕ್ತಿಯ ಉಪಯೋಗದ ಮೇಲೆ ತೆರಿಗೆ ಹಾಕಿ, ಮೋಟರ್ ಸ್ಪಿರಿಟ್ ಮಾರಾಟದ ಮೇಲೆ ಸುಂಕ ವಿಧಿಸಿ, ಸುಮಾರು ೧೫ ಲಕ್ಷರೂಪಾಯಿ ಕೂಡಿಸಬಹುದಾಗಿ ಸೂಚಿಸಲಾಗಿದೆ.

ಉಳಿದ ಬಾಬಿನಲ್ಲಿ ೧೭,೨೭,೦೦೦ ಕಡಿಮೆ ಉತ್ಪನ್ನವಾದೀತು. ಇದಕ್ಕಾಗಿ, ಹೊಗೆಸೊಪ್ಪಿನ ಮಾರಾಟದ ಮೇಲೆ ಒಂದು ತೆರಿಗೆ, ಎಲ್ಲ ವ್ಯಾಪಾರದ ಮೇಲೊಂದು ತೆರಿಗೆ, ವಿನೋದ ಪ್ರದರ್ಶನಗಳ ಮೇಲೆ ತೆರಿಗೆ—ಹೀಗೆ ಹೊಸ ತೆರಿಗೆಗಳು ಹುಟ್ಟಬಹುವು.

ಒಂದು ಮಿತಿಯ ಮೇಲೆ ಹೆಚ್ಚಿನ ಸಂಬಳದಾರರಿಗೆಲ್ಲ ತೆರಿಗೆ (ಕಡಿತದ ರೂಪದಲ್ಲಿ) ವಿಧಿಸಲಾಗುವುದು. ಇದರಂತೆ, ಇತರ (ಸೆಕ್ರೆಟರಿ ಒಫ್ ಸ್ಟೇಟ್‌ರು ನೇಮಿಸುವವರ) ಸಂಬಳದಲ್ಲೂ ಕಡಿತವಾಗಲೆಂದು ಸರಕಾರವು ಬ್ರಿಟಿಷ ಸರಕಾರಕ್ಕೆ ತಿಳಿಸಿಯದೆ.

❖❖❖

ಇದು ಪರೀಕ್ಷೆಯ ವರ್ಷ. ಜನರ ಸಹಕಾರ, ತ್ಯಾಗ, ಸರಿಯಾದ ತಿಳಿವಳಿಕೆ, ದೇಶಭಕ್ತಿ ಇವುಗಳ ಮೇಲೆ ಸರಕಾರವು ಈ ವರ್ಷದ ಆಡಳಿತಕ್ಕೆ ನಿರ್ಭರವಾಗಿರ ಬೇಕಾಗಿದೆ.

ಪ್ರಪಂಚದ ಸ್ಥಿತಿ ವಿಶೇಷವಾಗಿದೆ. ಊಹಿಸಲೂ ಅಸಾಧ್ಯ. ಜವಾಬ್ದಾರ ಸರಕಾರಗಳು ಹೇಗೆ ನಡೆಯುತ್ತವೆಂಬುದನ್ನು ಜನರು ಚೆನ್ನಾಗಿ ತಿಳಿದುಕೊಳ್ಳುವಂತಾಗಿದೆ. ಜನರು ಹಾಗೆ ತಿಳಿದುಕೊಳ್ಳುವ ಕಾರಣ, ಸರಕಾರಕ್ಕೆ ಬಲ. ಸರಕಾರವು ಜನಹಿತಕ್ಕಾಗಿ ಸಾಧಿಸಿ ಸಂಕಲ್ಪ ತೋಳ್ಬಲಗಳನ್ನು—ಕೈಕೊಂಡಿದೆ.

ಫೆಡರೇಶನನ್ನು ನಿರಾಕರಿಸಿ, ಅದನ್ನು ತ್ಯಜಿಸಿರೆಂದು ಬ್ರಿಟಿಷಸರಕಾರಕ್ಕೆ ತಿಳಿಸಿ, ಇನ್ನಷ್ಟು ಉಪಯುಕ್ತವಾದ ಸಂಯೋಜಿತ ರಾಷ್ಟ್ರಾಧಿಕೃತದ ಕಾನೂನಾಗುವಂತೆ ಸಾಧಿಸಬೇಕೆಂದು ಆಜ್ಞಿಸಲ್ಪಟ್ಟಿದೆ.

ದೇಶೀಯರಾಜ್ಯಗಳನ್ನು ಫೆಡರೇಶನಿನಲ್ಲಿ ಸೇರಿಸುವುದರಿಂದ, ದುರ್ಬಲವೇ ಹೆಚ್ಚುವಂತಾಗಿದೆ. ಕೇಂದ್ರಸರಕಾರವು ಜವಾಬ್ದಾರವಾದುದಲ್ಲದರಿಂದ, ಪ್ರಾಂತಿಕ ಸ್ವರಾಜ್ಯದ ಬೆಲೆ ಕಡಮೆಯಾಗಿದೆ.

ಕಾಲಸ್ಥಿತಿ ಚೆನ್ನಾಗಿರಲಿಲ್ಲ. ದವಸಗಳ ಬೆಲೆ ಇಳಿಲ್ಲ. ಮಳೆಗಾಲವು ಸಕ್ರಮವಾಗಿಲ್ಲ. ಮೂರು ಜಿಲ್ಲೆಗಳಲ್ಲಿ ಕ್ಷಾಮವಿದೆ. ಇದರ ಹಾವಳಿ ತಡೆಯಲು ೨೧ ಲಕ್ಷರೂಪಾಯಿ ವ್ಯಯವಾಗಿದೆ. ೨೫ ಲಕ್ಷರೂಪಾಯಿ ಬೆಲೆಯ ಕೆಲಸ ಕಾಮಗಾರಿ ಇದಕ್ಕಾಗಿ ಸಾಗುತ್ತಿದೆ. ಸುಮಾರು ೧೯ ಲಕ್ಷರೂಪಾಯಿ ಕೀರ್ವೆ ಮಾಫಿಮಾಡಬೇಕಾಗಿದೆ.

ಅತ್ತ, ಕೃಷ್ಣಾ, ಗೋದಾವರಿ ಜಿಲ್ಲೆಗಳಲ್ಲಿ ನೆರೆ, ಸೇಲಂ ವಿಶಾಖಪಟ್ಣಗಳಲ್ಲಿ ಹಾವಳಿ, ಧಾನ್ಯ ಜಾನುವಾರುಗಳ ವಿನಾಶ, ಚಳಿಗಾಲದ ಮಳೆ ವ್ಯರ್ಥ. ಕಲಸಗಾರರಿಗೆ ಕೆಲಸ ದೊರೆಯದಂತಾಯಿತು. ಇನ್ನಷ್ಟೋ ಕೀರ್ವೆ ಮಾಫಿ ಬಿಡಬೇಕಾಗುವುದು. ನಮ್ಮ ಸೋದರ ವರ್ಗವು ಬರ್ಮಾದಲ್ಲಿ ವಿಪರೀತ ಹಿಂಸೆ ನಷ್ಟಕಷ್ಟಗಳಿಗೆ ಗುರಿಯಾಗಿದೆ.

ಈ ವರ್ಷ ಫಸಲು ಕಡಮೆ, ದವಸಗಳ ಬೆಲೆ ಏರಬಹುದು. ಇದರಿಂದ ಹಾನಿಯಿದೆ. ಬೆಳೆಗಳ ಬೆಲೆ ಕಡಮೆಯಾಗಿದೆ. ಧೈರ್ಯದಿಂದ ಆಡಳಿತವನ್ನು ಕೈಕೊಳ್ಳುವೆನಾದರೂ ಯಾವ ಕ್ಷಣದಲ್ಲೂ ಈ ಮಂತ್ರಿಗಳು ಹೊರ ಬೀಳಬಹುದಾಗಿರುವ ವಿದ್ಯಮಾನಗಳಲ್ಲಿ, ಬಲು ಎಚ್ಚರದಿಂದ ಮುಂದರಿಯಬೇಕಾಗಿದೆ.

1939 40

ಹಿಂದಣ ಸರಕಾರಗಳ ರೀತಿಯನ್ನು ತೊರೆದು ಹೊಸ ರೀತಿಯಲ್ಲಿ ಈ ಅಂದಾಜುಗಳನ್ನು ಮಾಡಬೇಕಾಗಿರುವುದರಿಂದ, ಹೊಸ ಜನಹಿತಕರ ಕೆಲಸಗಳನ್ನು ಧಾರಾಳವಾಗಿ ಕೈಕೊಳ್ಳಲಿರುವ ಕಾರಣ, ನಾವು ಹಿಲ್ಲಿನ ಕಡೆಗೆ ಕಣ್ಣಿಡಲಾಗುವುದಿಲ್ಲ. ಜೀವನವು ಬದಲಾಗುತ್ತ ಬಾರದೆ, ಪ್ರಜೆಗಳಿಗೆ ಸುಖವುಂಟಾಗದು. ಅದಕ್ಕಾಗಿ ಖರ್ಚು ಹೆಚ್ಚು, ಇಸಮುಗಳೂ ಹೆಚ್ಚುವುವು. ಹಿಂದಣ ಸರಕಾರಗಳು ನಷ್ಟ ತೋರಿಸುವ ಉದ್ಯಮಮಾಡಿವೆ, ನಾವು ಹಣ ಸಾಲದೆಂದೇ ಹವಣಿಸಬೇಕಾಗಿದೆ. ಬಡವರ ಸುಖ ಹೆಚ್ಚಬೇಕು, ತೆರಿಗೆ ಇಳಿಯಬೇಕು. ತೆರ ಬಲ್ಲವರು ಸುಖಿಗಳು, ಅವರ ಸುಖಕ್ಕೆ ಕೊರತೆಯಿಲ್ಲದೆ ಅವರು ಸ್ವಲ್ಪ ಹೆಚ್ಚು ತೆರಿಗೆ ಬಡವರ ಹಿತವರ್ಧನೆಗಾಗಿ ತೆರುವಂತಾಗಬೇಕು, ಇದು ಈಗ ಸೂತ್ರ. ಭಾರ ಹೊರಬಲ್ಲವರು ಭಾರ ಹೊರಲೇ ಬೇಕು, ಇಲ್ಲದಿರುವಲ್ಲಿ ದುರ್ಬಲರು ಹೊರುವ ಭಾರವು ಕಡಮೆಯಾಗದು.

ಬಂದರುಗಳ ಹುಟ್ಟು, ಮದ್ಯಪಾನ ಮಾರಾಟದ ಸುಂಕದ ಹುಟ್ಟು, ಕಡಮೆಯಾಗುವುದು. ಕೀರ್ವೆ ಹೆಚ್ಚುವುದಾದರೂ, ರಿಯಾಯಿತಿಗಳು ಹೆಚ್ಚಬೇಕಾದೀತು. ವಿದ್ಯುಚ್ಛಕ್ತಿಯ ಇಲಾಖೆಯಿಂದ ಹನ್ನೊಂದು ಲಕ್ಷ ಆಯವು ಹೆಚ್ಚುವುದು.

ಖರ್ಚಿನ ವಿಷಯಗಳಲ್ಲಿ, ಮೊದಲನೆ ಭಾಗದ ಖರ್ಚು ಕಳೆದ ವರ್ಷಕ್ಕಿಂತ ೨೦ ಲಕ್ಷ ಹೆಚ್ಚುವುದು. ಹೊಸ ಯೋಜನೆಗಳು ಹಲವು ಇವೆ. ೩೫॥ ಲಕ್ಷರೂಪಾಯಿ ಬೇಕಾದೀತು. ಮದ್ಯನಿವಾರಣೆಯ ಸುಂಕ ನಷ್ಟವು ಇದೀ ವರ್ಷಕ್ಕೆ ೨೩ ಲಕ್ಷವಾಗುವುದು. ಆದರೂ ಇದನ್ನು ಇನ್ನೂ ಒಂದು ಜಿಲ್ಲೆಗೆ ಹರಡುವುದೇಕೆಂದು ಕೇಳಬಹುದು. ಅತಿ ದರಿದ್ರರ ಮೇಲೆ ಪರೋಕ್ಷ ರೀತಿಯಿಂದ ಈ ಸುಂಕವು ಅತ್ಯಧಿಕವಾದ ತೆರಿಗೆಯೆಂತಿದೆ, ಇದು ಮುಗಿಯಲೇ ಬೇಕು, ಅದರ ಸ್ಥಾನದಲ್ಲಿ ಇತರ ಸುಲಭ ತೆರಿಗೆಗಳಾಗಬೇಕು. ಇದನ್ನು ಇಷ್ಟು ನಿಧಾನವಾಗಿ ಹರಡುವುದೇಕೆನ್ನುವರು, ಮಾಡುವುದೇನು? ಖಜಾನೆಯ ಭದ್ರತೆ ನೋಡ ಬೇಡವೆ? ಸರಕಾರದ ಭದ್ರತೆ ಬೇಡವೆ? ವಿಶ್ವಾಸ ಬೆಳೆಯಬೇಕು. ಅದಕ್ಕಾಗಿ ನಿಧಾನ ನಡಿಗೆ, ಒಂದೇ ಹೊಸ ಜಿಲ್ಲೆಯಲ್ಲಿ ಇದನ್ನು ಜ್ಯಾರಿಮಾಡುವುದು. ಜವಾಬ್ದಾರಿಯನ್ನು ತಿಳಿಯದವರು, ಇಡೀ ಸಂಸ್ಥಾನಕ್ಕೆ ಈ ಕಾನೂನು ಲಗಾವಾಗುವಂತೆ ಮಾಡುವ ನೆವಹಿಡಿದು ಹೊರ ಬೀಳಬಹುದು. ಸೇಲಂ, ಚಿತ್ತೂರು, ಕಡಪಾ, ಉತ್ತರ ಆರ್ಕಾಡು ಜಿಲ್ಲೆಗಳಲ್ಲಷ್ಟೆ ಜ್ಯಾರಿಗೆ ತರುವುದರಿಂದ ಮುಕ್ಕಾಲುಕೋಟಿರೂಪಾಯಿ ನಷ್ಟವುಂಟು.

ಮದ್ಯಪಾನ ನಿವಾರಣೆಯ ಕಾನೂನು ಬಲು ಚೆನ್ನಾಗಿ ಜ್ಯಾರಿಗೆ ಬಂದಿದೆ. ಸೇಲಂನಲ್ಲಿ ಒಂದೂವರೆ ವರ್ಷದಿಂದ ಸತ್ಪರಿಣಾಮವುಂಟು ಮಾಡಿದೆ. ಅಧಿಕಾರಿಗಳೂ ಮಹಾಜನರೂ ಬಹಳ ಸಹಕರಿಸಿ ಉತ್ತಮ ಫಲವನ್ನುಂಟುಮಾಡಿದ್ದಾರೆ. ಆದುದರಿಂದಲೇ ಧೈರ್ಯಪಟ್ಟು ಈ ವರ್ಷ ೨೩೮೧ ಚದರ ಮೈಲು ವಿಸ್ತೀರ್ಣಕ್ಕೂ ಈ ಕಾನೂನನ್ನು ಜ್ಯಾರಿಗೆ ತರುವೆವು.

ಹೊಸ ತೆರಿಗೆಗಳು

ಈಗ ೪೨,೯೯,೦೦೦ ರೂಪಾಯಿಯ ನಷ್ಟವನ್ನು ತುಂಬಿಸಬೇಕಾಗಿದೆ. ಪೆಟ್ರೋಲ್ ಮಾರಾಟದ ಮೇಲೊಂದು ಸುಂಕ, ವಿದ್ಯುಚ್ಛಕ್ತಿಯ ಮಾರಾಟದ ಮೇಲೊಂದು ಸುಂಕ,— ಇವನ್ನು ವಿಧಿಸಲೆಳಸಿದ್ದೇವೆ. ಈ ತೆರಿಗೆಗಳನ್ನು ವಿಧಿಸುವುದು ಅಕ್ರಮವಲ್ಲೆಂದು ಫೆಡರಲ್ ಕೋರ್ಟು ನಿರ್ಧರಿಸಿಯದೆ. ಈ ವಿಷಯ ಕಾನೂನಾಗಲಿರುವ ಮಸೂದೆಗಳನ್ನು ಮೊದಲೇ ಪ್ರಕಟಿಸಿರುವೆವು. ಇವೆರಡು ಸುಂಕಗಳಿಂದ ೧೫,೯೩,೦೦ ರೂಪಾಯಿ ಸಿಗಬಹುದೆಂದು ಅಂದಾಜು.

೧೯೩೫ರಲ್ಲಿ ದೇಶೀಯ ಮದ್ಯದ ಸುಂಕವು ಸೇಕಡಾ ೨೫ರಂತೆ ಇಳಿಸಲಾಗಿತ್ತು. ಈ ಸುಂಕವನ್ನು ಈಗ ಗೆಲನ್ನಿಗೆ ರೂ ೧-೮-೦ರಂತೆ ಏರಿಸುವೆವು. ಇದರಿಂದ ೧೦ ಲಕ್ಷ ರೂಪಾಯಿ ದೊರೆವುದು.

೧೩ನೇ ಪುಟಕ್ಕೆ ಮುಂದುವರಿದಿದೆ]

ಕಳೆದ ಆದಿತ್ಯವಾರ ಗೌಡಸಾರಸ್ವತ ಸಮಾಜದ ಉಭಯ ಮಠದ ಶ್ರೀಪಾದಂಗಳವರಿಗೆ ಮೆಸರ್ಸ್ ಕೊಚ್ಚಿಕಾರ್ ಬಂಧುಗಳು ಆಚರಿಸಿದ ಪಾದಪೂಜೆಯ ಸಮಯ ತೆಗೆದ ಚಿತ್ರ.

ಬ್ರಿಟಿಷ ಪತ್ರಿಕೆಗಳಲ್ಲಿ ಕೊಂಗ್ರೆಸಿನ ಸದ್ಯಸ್ಥಿತಿ ವಿಮರ್ಶೆ

ಶ್ರೀ ಸುಭಾಷಚಂದ್ರರ ಚುನಾವಣೆಯಾದುದೇ, ಇನ್ನು ಕೊಂಗ್ರೆಸಿನಲ್ಲಿ ಒಡ್ಡಟ್ಟು ಇರಲಾರದೆಂದೂ, ಎಡಪಕ್ಷದವರಿಗೆ ಬಲವು ಹೆಚ್ಚುವುದೆಂದೂ, ಮಾತ್ರವಲ್ಲದೆ, ಗಾಂಧಿಜಿಯು ಪ್ರಾಬಲ್ಯ ಕ್ಷೀಣಿಸುವುದೆಂದು ಈ ವಿಷಯವೇ ಸೂಚಿಸುವುದೆಂದೂ, ಬ್ರಿಟಿಷ ಪತ್ರಿಕೆಗಳು ಮೇಲಿಂದ ಮೇಲೆ ಸಾರತೊಡಗಿವೆ. ಕೊಂಗ್ರೆಸಿನಲ್ಲಿ ಒಡಕುಹುಟ್ಟಿದ ಹಾಗೆ ಈ ವರ್ಷವೆಲ್ಲ ಶ್ರೀ ಭೋಷರು ಕಾರ್ಯನಿರ್ವಹಿಸಿರುವುದನ್ನು ಯಾವ ಪತ್ರಿಕೆಗಳೂ ಅಷ್ಟು ಸೂಚಿಸಿಲ್ಲ, ಗಾಂಧಿಜಿಯವರು ಇವರೊಡನೆ ಸಂಪೂರ್ಣ ಐಕ್ಯಮತ್ಯವುಳ್ಳವರೆಂಬುದನ್ನು ಪತ್ರಿಕೆಗಳು ನಂಬಿಲ್ಲ. ಡಾ। ಪಟ್ಟಾಭಿ ಸೀತಾರಾಮಯ್ಯನವರು ಲೋಕರ್ಡ ಲಿನ್ಲಿತ್ಗೋರವರ ಕಡೆಯ ಉಮೇದುವಾರರೆಂದೂ, ಫೆಡರೇಶನು ಜನ್ಮರಿಗೆ ಬರುವಂತೆ ಮಾಡಲು ಗಾಂಧಿಜಿಯವರ ಪ್ರಯತ್ನಗಳು [illegible] ಈ ದೆಸೆಯಿಂದಲೂ ಅವರು ಡಾಕ್ಟರರ ಚುನಾವಣೆಗಾಗಿ ಪ್ರಚಾರ ಮಾಡುತ್ತಿದ್ದರೆಂದೂ ಸಾರಲಾಗಿದೆ

ಗಾಂಧಿಜಿಯವರೇ 'ಹರಿಜನ'ದಲ್ಲಿ ಬರೆದ [illegible]ಗಳಲ್ಲಿನ ಕೆಲ ಮಾತುಗಳನ್ನು ಎತ್ತಿ ಹಿಡಿದು, ತಾವು ಭಾವಿಸಿರುವ ಟೀಕೆಗಳಿಗೆ ಆಧಾರವಾಗುವಂತೆ ಉಲ್ಲೇಖಿಸಿರುವರು. ಮೋಟರ ಕ್ರಾಂತಿಕಾರರ ನಾಯಕರೆಂದ ಮೊದಲು ಬರೆದ ಸರಕಾರದ ಗುಲಾಮತನವನ್ನು ಸ್ವೀಕರಿಸದಂತೆ ಇವರು ಎಲ್ಲರನ್ನು (ಕೊಂಗ್ರೆಸಿನವರು) ಕಾಪಾಡುವವರೆಂದೂ ಕೊಂಗ್ರೆಸಿನಲ್ಲಿ ಫೆಡರೇಶನು ವಿರುದ್ಧ ಪಕ್ಷಕ್ಕೆ ಇವರು ನಾಯಕರೆಂದೂ ಸೂಚಿಸಲಾಗಿದೆ [illegible] ಚುನಾವಣೆಗಳು ನಡೆಯುಬೇಕೆಂದ ಗಾಂಧಿಜಿಯವರೆಂಬುದನ್ನು ಎತ್ತಿ ತೋರಲು ಗೆದ್ದುದು [illegible] ದೆಸೆಯಿಂದಲೇ ಎಂದ ಟೀಕಿಸಿದಾರೆ।

[illegible] ಕೊಂಗ್ರೆಸಿನಲ್ಲಿ [illegible] ಗಾಂಧಿಜಿ [illegible] ಕೊಂಗ್ರೆ[illegible] [illegible] ಗಾಂಧಿಜಿಯವರ [illegible] ಎಂದು [illegible] ವರು.

ರಾಜಕೀಯರಂಗದಲ್ಲಿ [illegible] ಅಧಿಕಾರ ನಡೆಸಬೇಕೆಂದು [illegible] ಜನಗಳಿಗೆ ಇದೆಲ್ಲ ಏನೇನೋ ತೋರಿ ಅರ್ಥವಾಗುವಂತಿದೆ. ಇದು ವರೆಗೆ [illegible] ರೊಳಗೆ ಭೇದಭಾವಗಳಿರುವವನ್ನು ಮಹತ್ತಾಗೆಣಿಸಿ, ಅವನ್ನ ಜನತೆಯ [illegible] ಸುತ್ತಿದ್ದವರೆಲ್ಲರಿಗೆ ಇದೀಗ ಹೊಡ್ಡದೊಂದು ಪುರಾಣ ಎದೆ [illegible] ಪಂಡಿತ ಜವಾಹರಲಾಲರನ್ನು ಇಮುವರೆಗೆ ಕೊಂಗ್ರೆಸಿನಲ್ಲಿ ಒಡಕುಹುಟ್ಟಿಸುವ ಪಕ್ಷದವರ [illegible] ರು ಹಿಡಿದಿದ್ದರು. ಐಕ್ಯವಿರಬೇಕು, ಇದ[illegible] ಸಾರ್ವಾಧಿಕಾರವೂ ಇರಬೇಕು ಎಂದು ಅವರೇ ತಿಳಿಸಿಬಿಟ್ಟ ಕಾರಣ ಈಗ ನೆಹರು ವಿಚಾರ ಹಾಗೆ ಬರುವುದಿಲ್ಲ

'ಬ್ರಿಟಿಷ ಪತ್ರಿಕೆಗಳಲ್ಲಿ [illegible] ಈ ಫೆಡರೇಶನ್ ವಿಷಯವಾಗಿ ಇತ್ತಂಡಗಳಾಗಿರುವುದು ಎಂದೇ ಸಾರುವುದು ಇತ್ತ ಅಧ್ಯಕ್ಷ ಚುನಾವಣೆಯಲ್ಲಿ, ಚುನಾವಣೆ ನಡೆಯದೆ ಅಧ್ಯಕ್ಷರನ್ನು ಮಾಡಿಕೊಂಡಿದ್ದರೆ,-ಪ್ರಜಾಸತ್ತೆ ಇನ್ನೆಲ್ಲಿ ಉಳಿದಿದೆ ಎನ್ನುತ್ತಿದ್ದರು' ಎಂದು ಶ್ರೀ। ನೆಹರುರವರು ಹೇಳಿಯೆ ಮುಗಿಸಿರುವಾಗ, ಈಗ ಏನುಮಾಡುವುದೆಂದು, ಅದ್ಭುತ ಚಿತ್ರಗಳನ್ನು ಪ್ರದರ್ಶಿಸುವ ಈ ಪತ್ರಿಕೆಗಳಿಗೆ ಸೂಚಿಸಲಾಗಿದೆ

ಹೊಸ ಪೆಟ್ರೋಲ್ ತೆರಿಗೆ ಮಂತ್ರೀಶ್ವರರ ವಿವರಣೆ.

"ಗೆಲನಿಗೆ ಒಂದಾಣೆ ಒಂದುವರೆ ಆಣೆ ಹೊಸ ಸುಂಕ ವಿಧಿಸಿದರೆ ಜನರು ದೂರಬಾರದು. "ಲನಿಗೆ ಬೆಲೆ ೧೩ ಆಣೆಯಿಂದ ೧೪ ಆಣೆ, ರೂ ೧-೧-೦ ಮತ್ತೂ ಹೆಚ್ಚು ಹೀಗೆ ಫಕ್ಕನೆ ಏರಿದಾಗ ದೂರಿದವರು ಕಡಿಮೆ. ಈಗ ಒಂದುವರೆ ಆಣೆ ಹೆಚ್ಚಿದರೆ ದೂರಬಾರದು ಯಾವ ಒಂದುವರೆ ಆಣೆಯಿಂದ ಆಗಬಹುದಾದ ಉಪಕಾರಕ್ಕಿಂತಲೂ ಈ ಹಣವು ಒಟ್ಟುಕೊಡುವುದರಿಂದ ಜನರಿಗೆ ಹೆಚ್ಚಿನ ಪ್ರಯೋಜನವಿದೆ ಹುಲ್ಲಿನಿಂದ ಹಾಲು ಕರೆಯಬರುವುದೇ? ಒಂದೊಂದೇ ಹುಲ್ಲಿನದಳ ಕೂಡಿಸಿ, ಕಟ್ಟಿದರೆ, ಅದನ್ನು ಎಮ್ಮೆ ತಿನ್ನುವಂತಾದರೆ, ಆಗ ತಾನೆ ಹಾಲು' ಇದೊಂದು ಒಗೆಯ ಧರ್ಮವೆಂದು ತಿಳಿಯಿರಿ ತನ್ನ ಕಾರಿಗೆ ಮೊದಲಾಗಿ ಪೆಟ್ರೋಲ್ ತುಂಬಿಸಿದ ಕೂಲಿಗೆ ಒಂದು ಒಂದುವರೆ ಆಣೆ ಇನಾವು ಕೊಡುವವರು ಎಷ್ಟೋ [illegible] ಇರುವರು ಈ ತೆರಿಗೆ ತೆತ್ತಲ್ಲಿ, ಕಾರುಗಳ ವೇಗವೇನೂ ಹೆಚ್ಚದು ಹೀಗೆ ತೆರಿಗೆ ತೆರವುದರಿಂದ, ದಾರಿಗಳು ಇನ್ನು ಸುಗಮವಾಗುವುವೆ? ಎಂದು ಕೇಳಬಾರದು. ಉದ್ದೇಶವನ್ನು [illegible] ಇದು [illegible] ಸುಂಕ [illegible], ಅದನ್ನು ಕೊಡುಕೊಳ್ಳವಾತನ ದೆ[illegible] ನಾವು ಒಡವರು ನಮ್ಮಲ್ಲಿ ಎನು ಇಲ್ಲ ಹುಲ್ಲಿಗೆ ಕಾಸಿಲ್ಲ ಹಾಲುಬೇಕೆಂದ ಎಲ್ಲರೂ ಎನ್ನುವರು. ಜನರು [illegible] ರುವರು ನಮಗೆ [illegible] ಹುಲ್ಲು [illegible] ಈಗ, ಆಗ[illegible] ಮೋಟರನ್ನು [illegible] , ಅದರಲ್ಲಿ ಸವಾರಿಮಾಡುವ ಶ್ರೀಮ[illegible] ಮಾತ್ರ ಒಂದೂವರೆ [illegible] ದಾರಿ[illegible] ಎತ್ತಿ[illegible] ಪ್ರತಿಯೊಬ್ಬರೂ [illegible]

ಅಫೀಮು

ಸೇಲಂನಲ್ಲಿ ಮದ್ಯಪಾನ ನಿವಾರಣೆಗೆ ಪ್ರಾರಂಭಿಸಿದಂತೆ, ಅಸ್ಸಾಮಿನಿಂದ ಅಫೀಮನ್ನು ಬಹಿಷ್ಕರಿಸಬೇಕೆಂದು ಅಲ್ಲಿನ ಮಂತ್ರಿಗಳು ಪ್ರಯತ್ನ ಮಾಡುತ್ತಿರುವರು ಹತ್ತುಸಾವಿರ ಜನರಾದರೂ ಅಫೀಮು ಸೇವನೆಯಿಂದ ಆರೋಗ್ಯ ಹಾಳುಮಾಡಿಕೊಂಡಿರುವರು. ಅಫೀಮು ಇವರಿಗೆ ಸಿಗಲಾರದಂತಾದರೂ ಇಷ್ಟುಜನರು ರೋಗಿಗಳಾಗಬಹುದು. ಅಫೀಮು ಬಹಿಷ್ಕಾರದಿಂದ ಸರಕಾರಕ್ಕೆ ಏದುಲಕ್ಷ ರೂಪಾಯಿ ನಷ್ಟವಿದೆ ಜನರು ಒಂದಾಗಿ [illegible] ದನ್ನು ಜಯಗೊಳಿಸಿದರೆ, ಈ ಹಣ ನಷ್ಟವಾದರೂ ಸರಕಾರವು ಚಿಂತಿಸದ [illegible] ಮಂತ್ರಿಗಳು ತಿಳಿಸಿರುವರು.

ಹಿಕಳ್ [illegible] ತೆರಲಾರದವನ [illegible] ಎಂತಹ [illegible] ನ? ಹೀಗೆ ತತ್ತರಿ [illegible] ಯಾಗಿ [illegible] [illegible] ಹಿತವರ್ಧ[illegible] ತೆರಬೇಕಾಗಿದೆ.

[illegible]

[illegible]

ಪಂಡಿತ ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ



[illegible] ಲಿವರ್ ಮತ್ತು ಸ್ಪ್ಲೀನ್ [illegible] ಆರೋಗ್ಯ[illegible] ವುದು.

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

[illegible]

ಆಯುರ್ವೇದಾಶ್ರಮ :. ಮದರಾಸು.

[illegible]

ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಒಂದು ಬಾರಿ ಪರೀಕ್ಷಿಸಿರಿ!

[illegible] "ಸಾರಥಿ ನಸ್ಯ"ವನ್ನು [illegible] ಸಂತೋಷವಾಗುತ್ತದೆ [illegible] ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ [illegible] ಅನುಕೂಲವಿಂದ ದರವನ್ನಿತಲಾಗಿದೆ

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

[illegible] ಸಾರಥಿ ನಸ್ಯ 1 ಪೌಂಡಿಗೆ ರೂ [illegible]-0 [illegible] ಸಾರಥಿ ನಸ್ಯ 1 ಪೌಂಡಿಗೆ ರೂ [illegible] 0-0

(ವಿ ಪಿ ಮತ್ತು ರೈಲ್ವೆ ಚಾರ್ಜು ಪ್ರತ್ಯೇಕ)

ಏಜೆಂಟರು ಬೇಕಾಗಿದ್ದಾರೆ

ವಿಳಾಸ –

ಎ ಪಿ ಸಾರಥಿ

ಮೆನ್ಯುಫೆಕ್ಚರರ್ಸ್ ಆಫ್ ಮದ್ರಾಸ್ ಸ್ನಫ್, ಪಿ. ಬಿ ನಂಬ್ರ 47 ಮದ್ರಾಸು

ತ್ರಿಪುರಿ : ಕೊಂಗ್ರೆಸ್ ಅಧಿವೇಶನದ ನಗರ

ಅಕಬರ ಬಾದಶಾಹನ ಪ್ರತಿನಿಧಿಯಾಗಿ (ವೈಸ್ರಾಯ) ಗೊಂಡ್ವಾನ ರಾಜ್ಯದಲ್ಲಿದ್ದ ಅಸಾಫ್ ಖಾನನಿಗೆ,—ಸೈನ್ಯವನ್ನು ನೋಡಿಯೆ ಹೆದರುವವಳು ನಾನಲ್ಲ ಎಂದು ಹೇಳಿಕಳಿಸಿದ ರಾಣಿ ದುರ್ಗಾವತಿಯ ಹೆಸರು ಇತಿಹಾಸದಲ್ಲಿ ಮೆರೆಯುತ್ತಿದೆ 'ಬಲಿ ನಿಮ್ಮ ಸೇನೆಗಳು ಅದೇ ಬಯಲಲ್ಲಿ ನಾವು ಸ್ವತಂತ್ರರೋ, ಧಿಲ್ಲಿಗೆ ಕಪ್ಪ ತುಂಬಿಸುವವರೋ ಎಂಬುದನ್ನು ಖಡ್ಗವೇ ನಿರ್ಣಯ ಮಾಡಲಿ" ಎಂದು ಧೀರವಾಣಿಯನ್ನು ಪ್ರಕಟಿಸಿದವಳೇ ಬಳಿಕ ಶಹನ ರಾಣಿ ದುರ್ಗಾವತಿ

ಇದೇ ಉತ್ತಮ ಸಾಹಸದ ವಾತಾವರಣವು ಇನ್ನೂ ತುಂಬಿರುವ ಮಹಾಕೋಸಲ ದೇಶದ ನಾಳಿನ ಕೊಂಗ್ರೆಸ್ ಅಧಿವೇಶನ ಸೇರಲಿರುವ ಸ್ಥಳ ಮಹಾಕೋಸಲದ ಜನಗಳು ಎರಡು ಸಲವಾದರೂ ಭಾರತವರ್ಷದ ಸ್ವಾತಂತ್ರ್ಯ ಪರಿಪಾಲನೆಗಾಗಿ ಕಾದಾಡಿರುವರು ದುರ್ಗಾವತಿಯ ಕಾಲದಲ್ಲೊಮ್ಮೆ ಝಾನ್ಸಿಯ ಲಕ್ಷ್ಮೀಬಾಯಿಯ ಕಾಲದಲ್ಲಿ ಮತ್ತೊಮ್ಮೆ. ಸ್ವಾತಂತ್ರ್ಯಪ್ರೇಮಕವಾದ ಈ ನಾಡು ಕೊಂಗ್ರೆಸ ಅಧಿವೇಶನಕ್ಕೆ ಈಗ ಉಪಯುಕ್ತವಾಗಿದೆಯಲ್ಲವೆ?

ಅಧಿವೇಶನ [illegible] ಸ್ಥಾನದ ಹೆಸರು ತ್ರಿಪುರಿ [illegible] ನರ್ಮದಾನದಿಯು [illegible] ವನ್ನು [illegible] ತ್ರಿಪುರಾ ನಗರವಿದೆ

ಇಕ್ಕಟ್ಟಾದ ಕಣಿವೆಗಳು, ಅರಣ್ಯ[illegible] ಎತ್ತರದ ಬೆಟ್ಟಗಳು ಇದುವಲ್ಲಿ ಸೌಂದರ್ಯದ [illegible] ತ್ರಿಪುರಿ [illegible] ಪರ್ವತಗಳ [illegible] ಅವುಗಳ ಎದುರಲ್ಲಿ [illegible] ಕಣಿವೆಗಳ [illegible] ನರ್ಮದಾನದಿಯನ್ನು [illegible] ಉಪನದಿಗಳು [illegible] [illegible]

[illegible] ಪ್ರದೇಶವು [illegible] ತ್ರಿಪುರಿಯು [illegible] ಎತ್ತರವಾಗಿ

ನರ್ಮದಾ [illegible] ಉತ್ತಮ [illegible] ಈ [illegible] ನರ್ಮದಾ [illegible] ಗಂಭೀರವಾಗಿ [illegible] ಮಹಾಕೋಸಲದ ಪವಿತ್ರ [illegible] ಈ ತೀರ್ಥ [illegible]

ನಮಗೆ [illegible] ತ್ರಿಪುರಿ [illegible] ತ್ರಿಪುರಿಯು ನಡೆಸುವುದು [illegible] ಸಭಾಧಿವೇಶನಕ್ಕೆ ದುರ್ಗಾವತಿ [illegible] ಪವಿತ್ರಾತ್ಮಗಳ ಆಶೀರ್ವಾದವಿರಲಿ

ಜಾಹೀರಾತುಗಳಿಗೆ:

ಸ್ವದೇಶಾಭಿಮಾನಿ

ಅತ್ಯುತ್ತಮ ಸೌಕರ್ಯಕೊಡುವುದು:

ಪ್ರತಿಫಲಬರುವಂತೆ ಸಾಧಿಸುವುದು.

ರಾಜಮಂತ್ರಿಗಳನ್ನು ಆಮಂತ್ರಿಸಿ ಗಾಂಧಿಯವರು ಸಭೆ ಕರೆಯಬೇಕು

ಪ್ರಕೃತ ನಮ್ಮ ದೇಶದ ಮುಂದಿರುವ ಪ್ರಶ್ನೆಯೆಂದರೆ ದೇಶೀಯ ಸಂಸ್ಥಾನಗಳ ಪ್ರಜೆಗಳಿಗೆ ಸ್ವರಾಜ್ಯ ಕೊಡುವದಾಗಿದೆ. ಕೆಲವು ದೇಶೀ ಸಂಸ್ಥಾನಗಳ ಅರಸರು ಪ್ರಗತಿಪರಮಾರ್ಗದಲ್ಲಿ ನಡೆದು ಉತ್ತಮ ಶಾಸಕರೆಂದು ಹೆಸರು ಪಡೆದಿರುವರಾದರೂ ಎಷ್ಟೋ ಸಂಸ್ಥಾನಗಳಲ್ಲಿ ಈಗಲೂ ಅರಾಜಕತೆ ತುಂಬಿದೆ ಅಷ್ಟು ತಾನೇ ಅಲ್ಲ. ಮಾದರಿ ಸಂಸ್ಥಾನ, ರಾಮರಾಜ್ಯಗಳಲ್ಲಿ ಆಡಳಿತದ ಕುಂದುಕೊರತೆಗಳನ್ನು ಕಾಣಲಾರೆವಾದರೂ ಜನರಿಗೆ ತೃಪ್ತಿ ಇರುವದಿಲ್ಲ. ಯಾಕೆಂದರೆ ಸುರಾಜ್ಯವು ಎಷ್ಟು ಮಾತ್ರಕ್ಕೂ ಸ್ವರಾಜ್ಯವೆನ್ನಿಸುವದಿಲ್ಲ. ಈ ಕಾರಣದಿಂದ ಈಗ ಮೈಸೂರು, ತಿರುವಾಂಕೂರು, ಹೈದರಾಬಾದು, ರಾಜಕೋಟ, ಕಾಶ್ಮೀರ, ಜಯಪುರ ಮೊದಲಾದ ಹತ್ತು ಹಲವು ಸಣ್ಣ ದೊಡ್ಡ ಸಂಸ್ಥಾನಗಳಲ್ಲಿ ಸ್ವರಾಜ್ಯ ಚಳವಳವು ಆರಂಭವಾಗಿದೆ.

ಕಾಂಗ್ರೆಸಿನ ಉತ್ತರದಾಯಿತ್ವ

ದೇಶೀ ಸಂಸ್ಥಾನಗಳಲ್ಲಿ ಆರಂಭವಾದ ಈ ಚಳವಳಿಗಳಲ್ಲಿ ಕಾಂಗ್ರೆಸಿನ ಉತ್ತರದಾಯಿತ್ವವು ಬಹಳವಾಗಿರುವುದು ಅದು ಮೊದಲಿಗೆ ತಾನು ದೇಶೀ ಸಂಸ್ಥಾನಗಳ ವಿಚಾರಗಳಲ್ಲಿ ಕೈಹಾಕುವದಿಲ್ಲವೆಂದು ನಿರ್ಣಯಮಾಡಿ ಉದಾಸೀನವಾಗಿತ್ತು ಸಂಸ್ಥಾನಾಧಿಪತಿಗಳೊಡನೆ ಸ್ನೇಹದಿಂದಿರುವದು ಸಾಧ್ಯವಾದರೆ ಹಾಗೆ ಆಗಲಿ, ಸಂಸ್ಥಾನಾಧಿಪತಿಗಳು ತಾವಾಗಿ ಪ್ರಜೆಗಳಿಗೆ ಸ್ವರಾಜ್ಯದಾನ ಮಾಡುವುದಾದರೆ ಹಾಗೆ ಆಗಲಿ, ವ್ಯರ್ಥ ಆಂದೋಲನ ಬೇಡ ಎಂದೆಣಿಸಿ ಕಾಂಗ್ರೆಸು ಈ ರೀತಿಯ ವರ್ತನವನ್ನಿಟ್ಟುಕೊಂಡಿತ್ತು ದೇಶೀ ಸಂಸ್ಥಾನಗಳ ಪ್ರಜೆಗಳು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ತಿಳಿದು ತಮ್ಮ ಕಾಲಮೇಲೆ ತಾವು ನಿಂತುಕೊಳ್ಳುವಷ್ಟು ಜಾಣರಾದ ಹೊರತು ಅವರಿಗೆ ಕಾಂಗ್ರೆಸು ಬೆಂಬಲವನ್ನಿತ್ತು ಪ್ರಯೋಜನವಿಲ್ಲವೆಂದೂ ಅದು ತಿಳಿದಿತ್ತು. ಕಾಂಗ್ರೆಸು ಹೀಗೆ ಉದಾಸೀನವಾಗಿದ್ದುದರಿಂದ ಒಂದು ರೀತಿಯ ಪ್ರಯೋಜನವೇ ಆಯಿತು. ದೇಶೀ ರಾಜರುಗಳಲ್ಲಿ ಯಾರು ಯಾರು ಎಷ್ಟೆಷ್ಟು ಆಳ ನೀರಿನಲ್ಲಿದ್ದಾರೆಂಬುದರ ಪರೀಕ್ಷೆ ಆಯಿತು, ಪ್ರಜೆಗಳೂ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ತಿಳಿದು ಸಬಲ ಆಂದೋಲನವನ್ನು ಹೂಡಲಿಕ್ಕೆ ಸಮರ್ಥರಾದರು ಈಗ ಕಾಂಗ್ರೆಸಿಗೆ ದೇಶೀ ಸಂಸ್ಥಾನಗಳ ವಿಚಾರದಲ್ಲಿ ಕೈಹಾಕದೆ ಉಪಾಯವಿಲ್ಲವಾಗಿದೆ

ಮಹಾತ್ಮಾಜಿಯವರ ಎಚ್ಚರಿಕೆ

ಇನ್ನು ಕಾಂಗ್ರೆಸ ಹಿಂದಿನಂತೆ ಉದಾಸೀನವಾಗಿರಲಾರದೆಂದೂ, ದೇಶೀ ಸಂಸ್ಥಾನಗಳ ರಾಜಮಹಾರಾಜರ ಮನೋಗತಿಯು ಈಗಿನಂತೆಯೇ ಮುಂದೂ ಇರುವದಾದರೆ ಪ್ರಜೆಗಳು ನಡೆಸುವ ಸ್ವರಾಜ್ಯ ಆಂದೋಲನಕ್ಕೆ ಕಾಂಗ್ರೆಸು ಬೆಂಬಲವಾಗಿರಬೇಕಾದೀತೆಂದೂ ಮಹಾತ್ಮಾಜಿಯವರು ಎಚ್ಚರಿಕೆಯನ್ನಿತ್ತಿರುವರು. ಪ್ರಾಯಶ ಮುಂದಿನ ಕಾಂಗ್ರೆಸ ಸಭಾಧಿವೇಶನದಲ್ಲಿ ಈ ವಿಚಾರವನ್ನೇ ಪ್ರಾಮುಖ್ಯವಾಗಿ ಚರ್ಚೆಗೆ ತೆಗೆದುಕೊಳ್ಳಬೇಕಾಗುವದು ದೇಶೀ ಅರಸರು ಮೊದಲಿನಂತೆ ಇನ್ನು ಸರ್ವತಂತ್ರ ಸ್ವತಂತ್ರ ನಿರಂಕುಶ ಪ್ರಭುಗಳಾಗಿ ಇರಲಾರರು ಪ್ರಜೆಗಳಿಗೆ ತಮ್ಮ ಸಂಸ್ಥಾನಗಳ ಆಡಳಿತದಲ್ಲಿ ಹೆಚ್ಚೆಚ್ಚು ಜವಾಬ್ದಾರಿಯು ದೊರೆಯಲೇ ಬೇಕು.

ಪ್ರಭುಗಳಿಗೂ ಕಾಂಗ್ರೆಸಿನ ಸಹಾಯಬೇಕು

ಕಾಂಗ್ರೆಸಿನ ಸಹಾಯ ಸಹಾನುಭೂತಿಗಳನ್ನು ಅಪೇಕ್ಷಿಸುವ ಪ್ರಜಾಮಂಡಲಿಗಳು ಹೇಗೆ ಇವೆಯೋ, ಕಾಂಗ್ರೆಸಿನ ಸಹಾಯ ಸಹಾನುಭೂತಿಗಳನ್ನು ಅಪೇಕ್ಷಿಸುವ ರಾಜಮಹಾರಾಜರುಗಳೂ ಇರುವರು ಪ್ರಜೆಗಳಿಗೆ ಸ್ವರಾಜ್ಯವನ್ನು ಕೊಟ್ಟು ಅವರ ಸುಖದಲ್ಲಿಯೇ ತಮ್ಮ ಸುಖವನ್ನು ಕಾಣಲಪೇಕ್ಷಿಸುವ ಅವರು ಕೆಲವು ಕಾರಣಗಳಿಂದ ಪ್ರಜೆಗಳಿಗೆ ಸ್ವರಾಜ್ಯವನ್ನು ಕೊಡಲಾರದೆ ಇದ್ದಾರೆ, ಇದಕ್ಕೆ ರಾಜಕೋಟದ ಪ್ರಕರಣವೇ ಒಂದು ಉದಾಹರಣೆಯಾಗಿದೆ. ಅಲ್ಲಿಯ ಅರಸರು ಪ್ರಜೆಗಳಿಗೆ ಸ್ವರಾಜ್ಯಕೊಡುವೆನೆಂದು ವಾಗ್ದಾನವಮಾಡಿದರೂ, ಬ್ರಿಟಿಷ ಆಳರಸರು ನಡುವೆ ಕೈಹಾಕಿ ಅರಸರ ಅಪೇಕ್ಷೆ ನಡೆಯದಂತೆ ಸೂತ್ರಚಾಲನ ಮಾಡಿದರು ಅಂಥ ಅರಸರ ಸಹಾಯಕ್ಕೆ ಕಾಂಗ್ರೆಸು ಹೋಗುವದು ಅಗತ್ಯವಾಗಿದೆ

ಗಾಂಧಿಯವರಿಗೆ ಸೂಚನೆ.

ಆದ್ದರಿಂದ ಬೇರೆ ಬೇರೆ ಸಂಸ್ಥಾನಗಳ ಪ್ರಜಾಮಂಡಲಿಗಳು ಕೋರುವಂಥ ಸ್ವರಾಜ್ಯವನ್ನು ಕೊಡಲು ಸುಲಭವಾಗುವಂತೆ ಈ ಮಂಡಲಗಳಲ್ಲಿ ಸಹಾನುಭೂತಿಯುಳ್ಳ ದೇಶೀ ಸಂಸ್ಥಾನಗಳ ರಾಜಮಹಾರಾಜರು ಮತ್ತು ಮಂತ್ರಿಕೂಟಗಳ ಒಂದು ಸಭೆಯನ್ನು ಕರೆದು ಗಾಂಧಿಯವರು ಆ ಸಂಬಂಧ ವಿಚಾರ ವಿಮರ್ಶೆಮಾಡಿ ಒಂದು ನಿರ್ಧಾರಕ್ಕೆ ಬರಬೇಕೆಂದು ರೋಯ್ಸ ವೀಕ್ಲಿ ಎಂಬ ಪತ್ರಿಕೆಯು ಗಾಂಧಿಯವರಿಗೆ ಸೂಚನೆಕೊಟ್ಟಿದೆ ಸೂಚನೆಯು ಉತ್ತಮವಾಗಿದೆ ತ್ರಿಪುರಿ ಕಾಂಗ್ರೆಸು ಕೂಡುವ ಮೊದಲೇ ಇಂಥ ಒಂದು ಸಭೆಯು ಕರೆಯಲ್ಪಟ್ಟು ಅದರಲ್ಲಿ ದೇಶೀ ಸಂಸ್ಥಾನಾಧೀಶರ ಅಭಿಪ್ರಾಯಗಳನ್ನು ತಿಳಕೊಂಡುದಾದರೆ, ದೇಶೀ ಸಂಸ್ಥಾನಗಳ ಕುರಿತಾದ ಮುಂದಿನ ಧೋರಣೆ ಮತ್ತು ಕಾರ್ಯಕ್ರಮವನ್ನು ತ್ರಿಪುರಿ ಕಾಂಗ್ರೆಸಿನಲ್ಲಿ ಗೊತ್ತುಮಾಡಿಕೊಳ್ಳುವದು ಸುಲಭವಾಗುತ್ತದೆ ಕಾಂಗ್ರೆಸು ಕೂಡುವ ಮೊದಲೇ ಅಂಥಸಭೆಯನ್ನು ಕರೆಯುವುದ ಅಸಾಧ್ಯವೆಂದಾದರೆ ಅದು ಕೂಡಿದ ಅನಂತರ ಅದಷ್ಟು ಶೀಘ್ರದಲ್ಲಿ ಗಾಂಧಿಯವರು ಅಂಥ ಸಭೆ ಕರೆಯಬೇಕು ಈ ಸಭೆಯಲ್ಲಿ ರಾಜರಿಗೂ ಪ್ರಜೆಗಳಿಗೂ ಒಪ್ಪುವಂಥ ಏನಾದರೊಂದು ತೀರ್ಮಾನವಾದರೆ ವ್ಯರ್ಥವಾಗಿ ಆಂದೋಲನವನ್ನು ಹೂಡುವ ಪರಿಶ್ರಮವು ಸಿಲ್ಲದು ಅಂಥ ತೀರ್ಮಾನಕ್ಕೆ ಬಾರದಿದ್ದರೂ ಕೂಡ ಸಭೆಕರೆದುದರಿಂದ ನಷ್ಟವಿಲ್ಲ ಅದರಿಂದ ಪ್ರಜಾಪಕ್ಷಕಾರ್ಯಕ್ಕೆ ಹುಂಬಾಸಪಡೆದು ದೇಶೀ ಸಂಸ್ಥಾನಗಳ ಪ್ರಜೆಗಳಿಗೆ ಅನುಕೂಲವಾಗಿ ಜನಮತವುಂಟಾಗುವುದು. ಮತ್ತು ಆಂದೋಲನವಾರಂಭವಾದಾಗ್ಗೆ ಅದು ಶೀಘ್ರದಲ್ಲಿ ಸತ್ಫಲವನ್ನು ಕೊಡುವುದು.

ಒಂದು ದಸ್ಕತಿಗೆ ನೂರು ರೂಪಾಯಿ!

ದಸ್ಕತಿನ ಬೇಟೆಗಾರರಿಗೆ ಸುವರ್ಣ ಸಂಧಿ!

ವ್ಯರ್ಥವಾಗಿ ಸಂದುಹೋಗುವ ಕಾಲವನ್ನು ಬುದ್ಧಿವಂತರಾದವರು ಏನಾದರೊಂದು ವಿನೋದವೃತ್ತಿಯಲ್ಲಿ ತೊಡಗಿಸಿ ಅದರಿಂದ ಅಲಭ್ಯ ಲಾಭವನ್ನು ಸಂಪಾದಿಸುವರು ಅಂಚೆಚೀಟುಗಳ ಸಂಗ್ರಹ, ಫೋಟೋಗಾರಿಕೆ, ಹಳೆ ನಾಣ್ಯಗಳನ್ನು ಒಟ್ಟುಮಾಡುವದು ದಸ್ಕತುಗಳನ್ನು ಪಡೆದಿಡುವದು ಇವೆಲ್ಲಾ ಅಂಥ ವಿನೋದವೃತ್ತಿಗಳಾಗಿರುವವು

ಕೆಲಸವಿಲ್ಲದವರ ಕೆಲಸಗಳಲ್ಲಿ

ಇಂಥ ವೃತ್ತಿಗಳನ್ನು ಕೆಲಸವಿಲ್ಲದವರ ಕೆಲಸಗಳೆಂದು ಕೆಲವರು ಹೇಳುತ್ತಾರೆ. ಇದು ಶುದ್ಧ ತಪ್ಪು ಭಾವನೆ, ಕಾಲವು ಕಳೆದಂತೆ ಇಂಥ ಒಂದೊಂದು ವಿನೋದ ವೃತ್ತಿಯಿಂದಲೇ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸಿ ಶ್ರೀಮಂತರಾದವರು ಇದ್ದಾರೆ ಯಾರನ್ನಾದರೂ ಕಡೆಗಣ್ಣಿನಿಂದ ನೋಡಿ ಅಪಹಾಸ್ಯ ಮಾಡುವುದು ದೊಡ್ಡ ಸಂಗತಿಯಲ್ಲ. ಆದರೆ ಯಾವದೇ ಸಂಗತಿಯಲ್ಲಿ ಒಬ್ಬರಿಗೊಬ್ಬರು ಮಾರ್ಗದರ್ಶಕರಾಗುವುದೂ ಒಬ್ಬರನ್ನೊಬ್ಬರು ಅನುಸರಿಸಿ ನಡೆಯುವುದೂ ವಿಶೇಷವಾಗಿದೆ

ಲಾಭಕಾರಿ ವೃತ್ತಿ

ಇತರ ಎಲ್ಲ ವಿನೋದ ವೃತ್ತಿಗಳಿಗಿಂತ ದಸ್ಕತುಗಳ ಸಂಗ್ರಹವು ಈಗ ವಿಶೇಷ ಲಾಭಕಾರಿಯಾಗಿದೆ ಅಮೇರಿಕದ ಅಧ್ಯಕ್ಷ ರೂಸವೆಲ್ಟರ ಬರೆದ ಹಳೆಯ ಪತ್ರಗಳಿಗೆ ಪೇಟೆಯಲ್ಲಿ ಒಂದು ಪವನಿಂದ ೩೦ ಪವನುಗಳ ತನಕ ಕ್ರಯಬರುತ್ತದೆ ಅವರು ಕೈಯಂತ್ರದಲ್ಲಿ ಅಚ್ಚುಹಾಕಿ ದಸ್ಕತುಮಾಡಿದ ಪತ್ರವಾದರೆ ಒಂದು ಪವನ, ಅಂದರೆ ೧೫ ರೂಪಾಯಿಕ್ರಯ ಎಲ್ಲಾ ಪತ್ರವನ್ನು ಅವರ ಸತಹ ಬರೆದು ದಸ್ಕತು ಹಾಕಿದುದಾದರೆ ೩೦—೩೫ ಪವನುಗಳು ಅಂದರೆ ೪೦೦—೫೦೦ ರೂಪಾಯಿ ಕ್ರಯವು ಇರುತ್ತದೆ ರೂಜವೆಲ್ಟರು ಕಾಗದ ಪತ್ರಗಳ ಮೇಲೆ ದಸ್ಕತು ಹಾಕಿದ ಸ್ಥಳ ಕಾಲ ರೀತಿ ಭೇದವನ್ನನುಸರಿಸಿ ಅವರ ಪತ್ರಗಳಿಗೆ ಪೇಟೆಯ ಧಾರಣೆಯ [illegible] ಇರುವುದು

ಗಾಂಧಿಯವರ ದಸ್ಕತಿಗೆ ೧೫ ರೂಪಾಯಿ

ಮಹಾತ್ಮಾಗಾಂಧಿಯವರು ಒಬ್ಬ ಜಗತ್ಪ್ರಸಿದ್ಧ ವ್ಯಕ್ತಿಗಳಾಗಿರುವರು. ಅವರ ದಸ್ಕತಿಗೂ ಬೆಲೆ ಇರುವುದು, ಆವಶ್ಯಕತೆ ಮತ್ತು ಪ್ರಾಮುಖ್ಯತೆಯನ್ನನುಸರಿಸಿ ಅವರ ದಸ್ಕತುಗಳ ಧಾರಣೆಯು ಒಂದು ಒಂದೂವರೆ ಪವನಗಳ ತನಕ ಏರಿದುಬಿಡಿ ಈಗ ಪಾಶ್ಚಾತ್ಯ ದೇಶಗಳಲ್ಲಿ ಅವರ ಸ್ವಹಸ್ತಾಕ್ಷರದ ಪತ್ರಗಳನ್ನು ಒಂದೊಂದು ಪವನುಕೊಟ್ಟು ಕೊಂಡುಕೊಳ್ಳುವವರಿದ್ದಾರೆ ಅಮೇರಿಕದ ಅಧ್ಯಕ್ಷರಾಗಿದ್ದ ರೂಜವೆಲ್ಟರ ದಸ್ಕತುಗಳಿಗೆ ಸಮಪಾಲಾಗಿ ಅಷ್ಟೆ ಬೆಲೆಬರುವುದು [illegible] ಬೆಲೆ ಅರ್ಧಪವನ ಅವರ ಈಗ ದಿನಂಗತರಾಗಿರುವುದರಿಂದ ಅದನ್ನು ಏರಲೂಬಹುದು.

ಸೋಜಿಗದ ಸಂಗತಿ

ರುಡಿಯಾರ್ಡಕಿಪ್ಲಿಂಗ ಎಂಬವರು ಪ್ರಸಿದ್ಧಸಾಹಿತಿಗಳು ಅವರ ಜೀವಮಾನಕಾಲದಲ್ಲಿ ನಡೆದ ಒಂದು ಸೋಜಿಗದ ಸಂಗತಿ ಇದೆ. ಅವರು ಸಣ್ಣ ಸಣ್ಣ ಹಣಗಳಿಗೆ ಕೊಡುತಿದ್ದ ಬೇಂಕಚೆಕ್ಕುಗಳನ್ನು ವಟಾಯಿಸುತ್ತಲೇ ಇರಲಿಲ್ಲವಂತೆ ಕಾರಣ ಆ ಚೆಕ್ಕುಗಳ ಮೇಲೆ ಕಿಪ್ಲಿಂಗರ ದಸ್ಕತು ಇರುತಿತ್ತು ಅಂಥ ಚೆಕ್ಕುಗಳನ್ನು ಬೇಂಕುಗಳಲ್ಲಿ ವಟಾಯಿಸುವ ಬದಲಿಗೆ ಪೇಟೆಗಳಲ್ಲಿ ಮಾರಿದರೆ ಹೆಚ್ಚು ಲಾಭ ಬರುತ್ತಿತ್ತು!

ನಿರುದ್ಯೋಗಿಗಳಿಗೆ ಸುವರ್ಣಸಂಧಿ

ಇದು ನಿರುದ್ಯೋಗಿಗಳಿಗೆ ಸುವರ್ಣಸಂಧಿಯಾಗಿದೆ ಈ ಕಾಲದಲ್ಲಿ ಯಾವ ವೃತ್ತಿಯಿಂದಲೂ ಹಣ ಸಂಪಾದಿಸಬಹುದು ಬುದ್ಧಿವಂತಿಕೆ ಮತ್ತು ಧೈರ್ಯಸ್ಥೈರ್ಯ ಸ್ಫುರಣೆಗಳೇ ಈಗ ಮನುಷ್ಯನ ಜೀವನದ ಸಫಲತೆಗೆ ಬೇಕಾಗಿರುವವು ಅವನಿಗೆ ವ್ಯಾಪಾರ ಉದ್ಯೋಗಕ್ಕೆ ಬೇರೆ ಬಂಡವಾಳವು ಬೇಡ

ಆಕೆಯ ತಲೆಯು ಸೀಸದ ತಲೆಯಂತೆ ಭಾರವಾಗಿತ್ತು

ಬಾಲ್ಯದಿಂದ ಶಿರೋವೇದನೆಯಿದ್ದಿತು

ದಿನನಿತ್ಯ ಕ್ರುಶನ್ ಸೇವನೆಯಿಂದ ಆಕೆಯ ಆರೋಗ್ಯ ನೆಟ್ಟಗಾಗಿರುವುದು

ಇಪ್ಪತ್ತು ವರ್ಷಗಳ ಕಾಲ ಅತಿ ಕಠಿಣತರದ ಶಿರೋವೇದನೆಯನ್ನು ಅನುಭವಿಸಿ, [illegible] ಸೇವನೆಯಿಂದ ಒಳ್ಳೆ [illegible] ಈ ಸ್ತ್ರೀಗೆ ಈಗ ಸ್ವರ್ಗ ಕಂಡಂತಾಗಿದೆ ಈಗ ಆವಳು ನಿತ್ಯವೂ ಕ್ರುಶನ್ ಲವಣವನ್ನು ಸೇವಿಸಲು ಮರೆಯುವುದಿಲ್ಲ ಆಕೆಯ ಹಿಂದಿನ ಸಂಕಟಗಳನ್ನು [illegible] ಆಕೆಯ ಪತ್ರವು ಇಲ್ಲಿ ಕೊಡಲಾಗಿದೆ

ಅನೇಕ ವರ್ಷಗಳತನಕ ಶಿರೋವೇದನೆ [illegible] ಅದು ಮೊದಲು [illegible] ಕ್ರುಶನ್ ಲವಣಗಳ [illegible] ಆಗುವುದನ್ನು ಕಂಡು, ಅದನ್ನು ಸೇವಿಸಬೇಕಾಗಿ ಅಪೇಕ್ಷಿಸಿ ಒಂದು ಬಾಟ್ಲಿಯನ್ನು ತಕೊಂಡೆ ಬರೇ ಎರಡು ತಿಂಗಳ ಸೇವನೆಯಿಂದ ನನಗೆ ವಿಚಿತ್ರ ತರದ ಫಲವು ದೊರಕಿರುತ್ತದೆ ನನ್ನಲ್ಲಿರುವ ಶಿರೋವೇದನೆಯು ಮಾಯವಾಗಿರುತ್ತದೆ ಕ್ರುಶನ [illegible] ವಿಚಿತ್ರ ತರದ್ದು ಶ್ರೀ. ಇ. ಡಿ

ಹೊಟ್ಟೆಯ ತಾಳ ಸ್ಥಿತಿಯ [illegible] ಕಾರಣವೆಂದ ಅನೇಕ ಸಂದರ್ಭಗಳಲ್ಲಿ ಕಂಡುಹಿಡಿಯಲಾಗಿದೆ ದೇಹದೊಳಗೆ ಉಂಟಾಗುವ ಕಶ್ಮಲಗಳನ್ನು ರಕ್ತವು ಹೀರಿಕೊಂಡಿರುವುದರಿಂದಲೇ, ಶಿರೋವೇದನೆಯುಂಟಾಗುವುದು ಈ ವಿಷಕಶ್ಮಲಗಳನ್ನು ತೆಗೆದುಬಿಡಿರಿ ಅವುಗಳು ಇನ್ನೊಮ್ಮೆ ಉಂಟಾಗದಂತೆ ನೋಡಿಕೊಳ್ಳಿರಿ ಆಗ ನೀವು ಸಂಕಟದಿಂದ್ಧಾರಾಗುವಿರಿ ನಿಮ್ಮ ಅಂಗಾಂಗಗಳನ್ನು ಪರಿಶುದ್ಧವಾಗಿರಲು ಕ್ರುಶನ್ ಲವಣಗಳು ನಿಸರ್ಗದೊಡನೆ ಸಹಕರಿಸುತ್ತವೆ ಅದು ನಿಮ್ಮ ದೇಹದೊಳಗಿರುವ ವಿಷಕಶ್ಮಲಗಳನ್ನು ಹೊರ

ಡಿಸುತ್ತದೆ ಅದರಿಂದಲೇ ಕ್ರುಶನ್ ಲವಣಗಳಿಂದ ಖ್ಯಾತಿಯಾದ ಗುಣವು ದೊರಕುತ್ತದೆ, ಎಲ್ಲಾ ಸ್ಟೋರುಗಳಲ್ಲಿ ಬಜಾರುಗಳಲ್ಲಿ ಕ್ರುಶನ್ ಲವಣವು ಮಾರಲ್ಪಡುತ್ತದೆ 19

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ — ಜಮ್ಮಿ ವೆಂಕಟ್ರಮಣಯ್ಯ

ವಿಶೇಷ ಮಾಹಿತಿಗೆ ಬರೆಯಿರಿ — ಲಿವರ್ ಮತ್ತು ಪ್ಲೀನ್ ಸ್ಪೆಸಿಯಲಿಸ್ಟ್, ಮೈಲಾಪುರ, ಮದ್ರಾಸು

ಬರೇ ರೂ 1–4–0ಕ್ಕೆ 3 ಗಡಿಯಾರಗಳು ಮತ್ತು 1295 ಫೆನ್ಸಿ ಬಹುಮಾನಗಳು!

ಒಂದೇ ಬಾರಿಗೆ ರೂ. 1–1–0ಕ್ಕೆ ನಮ್ಮ 8 ಸೀಸೆ ಪರಿಮಳದ ಸೆಂಟನ್ನೂ ಅಥವಾ 8 ಸೇರ ಹುಳುಕಡ್ಡಿಯ ಮದ್ದನ್ನು ಪಡಕೊಳ್ಳುವವರಿಗೆ 2 ಗೋಲ್ಡ ಗಿಲ್ಟಿನ ರಿಸ್ಟುವಾಚುಗಳೂ ಒಂದು ಕಟ್ಟುವ ಪಟ್ಟಿ ಕೂಡ

1 ಪೊಕೆಟು ವಾಚು, ಒಂದು ಜಿಲ್ಲೆಟ್ ರೇಜರೂ, ಒಂದು ಶೇವಿಂಗ್ ಬ್ರಶೂ, ಒಂದು ಶೇವಿಂಗ್ ಸಾಬೂನು, ಒಂದು ಕನ್ನಡಿ ಒಂದು ಬಾಚಣಿಗೆ, 14 ಕೆರೆಟ್ ರೋಲ್ಡಗೋಲ್ಡ ನಿಬ್ಬಿನ ಫೌಂಟನ್ ಪೆನ್ನೂ, ಒಂದು ಜತ್ತು ರೋಲ್ಡಗೋಲ್ಡ ಗುಂಡಿಗಳು, ಒಂದು ಪೆಕೆಟ್ ಪೌಡರು, ಒಂದು ಚೂರಿ ಒಂದು ಪೇರ್ ಕನ್ನಡಕ, ಒಂದು ಬಂಗಾರದ ಗಿಲ್ಟಿನ ಉಂಗುರ, 300 ಫೀಟ್ ಫೋಕಸ್ ತೋರುವ ಒಂದು ಟೋರ್ಚ್ ಲೈಟು ಅಥವಾ 10 ವರ್ಷ ಗ್ಯಾರಂಟಿ ಇರುವ ಗಟ್ಟಿಯಾದ ಮಶಿನರಿಯಿಂದ ಮಾಡಲ್ಪಟ್ಟ ಒಂದು ಜರ್ಮನ್ ಟೈಮ್‌ಪೀಸೂ ಇವುಗಳನ್ನು ಉಚಿತವಾಗಿ ಕೊಡುವೆವು ಪೆಕಿಂಗ್ ಮತ್ತು ಟಪ್ಪಾಲು ಖರ್ಚು 0—14—0 ಪ್ರತ್ಯೇಕ

The American Commercial Stores, Post Box No 12213 Calcutta (S. A

ಮದ್ರಾಸು ಸರಕಾರದ ಆಯವ್ಯಯದ ಅಂದಾಜು ಬಜೆಟು

(೧೦ನೆಯ ಪುಟದಿಂದ)

ಹೀಗೆ ಕಡಿಮೆ ಬೀಳುವ ೪೨ ಲಕ್ಷವನ್ನು ಗಿಟ್ಟಿಕ್ಕೆ ಇಳಿಸುವೆವೆಂದು ನಂಬಿದ್ದೇವೆ. ಜನಹಿತಕ್ಕಾಗಿ ಸಾಧಿಸುವಾಗ ನಷ್ಟವನ್ನು ಎಣಿಸಬೇಕಾಗಿಲ್ಲ. ಇದನ್ನಿತ್ತ ಹಿಡಿದು ನಾನಾ ಬಗೆಯ ಮತ್ಸರದ ಟೀಕೆಗಳಿಂದ ಪ್ರಯೋಜನವಿಲ್ಲ. ಸಾಲ ತೆತ್ತಿದ್ದೇವೆ, ಅದಕ್ಕಾಗಿ ಯಾರೂ ಗೋಳಿಡುವ ಅಗತ್ಯವಿಲ್ಲ, ಆರ್ಥಿಕದಲ್ಲಿ ಜನರಿಗಿರುವ ವಿಶ್ವಾಸವನ್ನು ಹೆಚ್ಚಿಸಿದ್ದೇವೆ, ಕುಂದಿಸಿಲ್ಲ.

ಇನ್ನೂ ಇನ್ನೂ ಮದ್ಯ ನಿವಾರಣಾದಿಗಳ ಕಾರಣದಿಂದ, ಆಯವು ಇಳಿಯಬಹುದು, ಜನಹಿತಕ್ಕೆ ಮಾಡುವ ಯೋಜನೆಗಳಿಂದ ಸಾಲವು ಹೆಚ್ಚೀತು, ಅಥವಾ ಖಾಳಿತಾಯವಿಲ್ಲವಾದೀತು. ಅದಕ್ಕಾಗಿ—

ಇನ್ನೂ ಹೊಸ ತೆರಿಗೆಗಳ ಸೂಚನೆ.

ಈ ವರ್ಷಾರಂಭದೊಳಗೇ ನಷ್ಟ ತುಂಬಿಸಲು ಕೆಲ ನೂತನ ಆಯಗಳನ್ನು ನೋಡಬೇಕಾಗಿದೆ.

೧ ಹೊಗೆಸೊಪ್ಪು ಮಾರಾಟದ ಮೇಲೆ ತೆರಿಗೆ ವಿಧಿಸುವೆವು. ಇದು ಹಿಂದೆಯೇ ಸೂಚಿತವಾಗಿತ್ತು. ಬೇಸಾಯಗಳಿಗೆ ಇದರಿಂದ ಬಾಧೆಯಿಲ್ಲ, ಮಾರುವವರು ಮಾತ್ರ ಸುಲಭವಾಗಿ ಚಿಲ್ಲರೆ ಸುಂಕ ತೆರಬೇಕಾಗುವುದು. ತಂಬಾಕಿನ ಮೇಲೆ ಸುಂಕವು ಪ್ರತಿರಾಜ್ಯದಲ್ಲೂ ಇದೆ, ನಾವೇಕೆ ಅದನ್ನು ವಿಧಿಸಬಾರದು?

ಸಾಮಾನು ವಿಕ್ರಯದ ಮೇಲೊಂದು ಸುಂಕವು ಅಗತ್ಯವಾಗಿದೆ. ಇತರ ತೆರಿಗೆಗೆ ಒಳಪಡದ ಸಾಮಾನಿನ ಮೇಲೆ ಮಾತ್ರ ಇದನ್ನು ವಿಧಿಸಲಾದೀತು. ೧೦,೦೦೦ ಮತ್ತು ೪೦,೦೦೦ದ ವಾರ್ಷಿಕ ವ್ಯಾಪಾರದೊಳಗಣ ವಹಿವಾಟುಗಳಿಗೆ ನಿರ್ದಿಷ್ಟವಾದ ತೆರಿಗೆ ಕೊಡಬೇಕಾಗುವುದು. ಎಂದರೆ, ರೂಪಾಯಿಯಲ್ಲಿ ಒಂದು ಪೈ. ಈ ಬಗೆಯ ತೆರಿಗೆ ಯೂರೋಪಿನ ರಾಜ್ಯಗಳಲ್ಲೆಲ್ಲ ಇದೆ.

ಟೀಕಾಕಾರರು

ಜನರಿಗೆ ಮದ್ಯ ಕುಡಿಸಿ ತೆರಿಗೆ ಸುಲಿಯುವುದು ಉತ್ತಮವೆನ್ನುವಂತೆ, ನಮ್ಮನ್ನು ಟೀಕಿಸುವವರಿದ್ದಾರೆ. ಯಾವುದೊಂದು ತೆರಿಗೆಗೆ ವಿರುದ್ಧವಾಗಿ ಅತ್ಯುತ್ತಮವೆನಿಸಬಹುದಾದ ಆಕ್ಷೇಪಗಳನ್ನು ಎತ್ತಬಹುದು. ಬಡವರ ಕಡೆಗೆ ನಾವಷ್ಟು ಕಠಿನವಾಗಲಾರೆವು. ಪೆಟ್ರೋಲ್, ವಿದ್ಯುಚ್ಛಕ್ತಿಗಳ ತೆರಿಗೆಯೆಂದರೆ ಶ್ರೀಮಂತರ ಮೇಲೆಯೇ ಬೀಳುವುದು. ಭಾರೀ ವ್ಯಾಪಾರಿಗಳು ನ್ಯಾಯವಾದಷ್ಟು ತೆರಿಗೆ ತೆರದಿರುವಷ್ಟು ಹಾಳಾಗಿರುವ ನಮ್ಮ ಕಾನೂನನ್ನು ತಿದ್ದಬೇಕಾಗಿದೆ. ಈಗ ಮದ್ಯನಿವಾರಣೆ ಸಾಧಿಸಿದಲ್ಲಿ, ಜನರಲ್ಲಿ ವ್ಯಯಕ್ಕೆ ಬರುವ ಹಣವು ೧೫ ಕೋಟಿ ರೂಪಾಯಿ ಆಗುವುದು. ಇದರಿಂದ ಜನಜೀವನದ ಮಾನವು ಏರುವುದು. ಆಗ ವ್ಯಾಪಾರ ಹೆಚ್ಚುತ್ತ ವ್ಯಾಪಾರಿಗಳಿಗೆ ನಫೆ ಏರುವುದು. ಈ ಬಗೆಯ ಎಣಿಕೆ ಮಾಡಿದರೇ ದೇಶಭಕ್ತಿಯಿಂದ ನಮ್ಮ ಸರಕಾರವು ಕೈಕೊಳ್ಳುವ ಕಾರ್ಯಕ್ರಮ, ಹೊರಿಸುವ ತೆರಿಗೆ ಇತ್ಯಾದಿಗಳ ಅರ್ಥವು ತಿಳಿದುಬಂದೀತು.

ಇಡೀ ದೇಶದಲ್ಲಿ ಮದ್ಯದ ಗಂಧವೇ ಇಲ್ಲದಂತೆ ಮಾಡಬರುವುದು. ಖಜಾನೆಗೆ ಮಾತ್ರ ಇತರ ರೀತಿಗಳಿಂದ ಹಣ ಕೊಡುವಂತಾಗಬೇಕು. ಅಲ್ಪ ಆಯದೊಳಗೆ ಸ್ವರಾಜ್ಯ ನಡಿಸಿರೆಂದು, ಕಂಡಂತೆ ಹಣ ವ್ಯಯಿಸಿದ ಹಿಂದಣ ಸರಕಾರಗಳು ಉತ್ತರಾಧಿಕಾರವನ್ನು ಕೊಟ್ಟುದರ ಫಲವಿದು. ಸ್ವರಾಜ್ಯವೆಂದು ಇಲ್ಲಿ ಕರೆದರೆ ಸಾಲದು, ಕೇಂದ್ರದಲ್ಲಿ ಜವಾಬ್ದಾರಿ ಇನ್ನೂ ಇಲ್ಲ. ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳೊಳಗೆ ನ್ಯಾಯವಾದ ಹಣದ ಹಂಚಿಕೆಯಿಲ್ಲವಾಗಿದೆ.

ಗೌಡಸಾರಸ್ವತ ಸಮಾಜದ ಉಭಯ ಮಠಾಧೀಶರಿಗೆ ಉಡುಪಿ ಕೃಷ್ಣಮಠದ ಶ್ರೀಪಾದಂಗಳವರು ಸ್ವಾಗತವಿತ್ತಾಗ ತೆಗೆದ ಚಿತ್ರ

ಇದಲ್ಲದೆ—

ವಿನೋದ ವಿಲಾಸಗಳ ಮೇಲೊಂದು ತೆರಿಗೆ ಅಗತ್ಯವೆನಿಸಿಯದೆ. ಜಿಲ್ಲಾ ಬೋರ್ಡು, ಮ್ಯುನಿಸಿಪಾಲಿಟಿಗಳು ಈ ತೆರಿಗೆ ವಿಧಿಸುತ್ತವೆ. ಈಗ ಅದನ್ನು ಪ್ರಾಂತಿಕ ಸರಕಾರವೇ ಕೂಡಿಸಿ ದತ್ತಿಮಾಶಯಗಳನ್ನು ಹಂಚಬೇಕೆಂದು ಸೂಚನೆಯಿದೆ.

ಪ್ರಜಾಹಿತದ ಎಷ್ಟೋ ಕಾಮಗಾರಿ ಕಾರ್ಯಕ್ರಮವಿದೆ. ಇದೆಲ್ಲವನ್ನು ಕೊಂಗ್ರೆಸು ಅಧಿಕಾರ ನಿರ್ವಹಿಸುತ್ತಿರುವುದನ್ನು ಅರ್ಥೈಸಿ ಹೇಳಬೇಕಾಗಿದೆ. ಕಾರ್ಯಕ್ರಮಕ್ಕೆ ಸರಿಯಾಗಿ ಹಣ ದೊರೆಯದಿರುವಲ್ಲಿ, ಯಾವ ಸರಕಾರವು ಎಂತಹ ಪ್ರಜಾಹಿತವನ್ನು ಈ ವಿಧ್ಯವಾನಗಳಲ್ಲಿ ಸಾಧಬಂದೀತು?

ಒಂದು ಮಿತಿಯ ಮೇಲಣ ಸಂಬಳದಾರರೂ ಉದ್ಯೋಗಸ್ಥರ ಮೇಲೆ ಕಡಿತವನ್ನಿಕ್ಕದಾಗದು. ಗ್ರೇಡುಗಳಲ್ಲಿ ಸಂಬಳಗಳನ್ನೆ ಇಳಿಸಲಾಗಿದೆ, ಹೊಸಬರಿಗೆ ಮಾತ್ರ. ಇದು ಅನ್ಯಾಯವೆಂದವರು ಅನ್ಯಾಯ ಹೊಂದದ ರೀತಿಯಲ್ಲಿ ಸ್ವಲ್ಪ ಕಡಿತ ಕೊಳ್ಳಬೇಕು. ಇಂಡಿಯಾ ಕಾರಣೀಕರು ತಮ್ಮನೇ ಮಾಡಿಕೊಳ್ಳಲಿಟ್ಟವರ ಮೇಲೂ ಈ ಕಡಿತವನ್ನಿಕ್ಕಲು ಪ್ರಯತ್ನಿಸುವುದು ಅಗತ್ಯವೂ ಉತ್ತಮವೂ ಆಗಿದೆ ಎಂದು ಬರೆದುಕೊಂಡಿದ್ದೇವೆ.

ಕಾಮಗಾರಿಗಳು

ತುಂಗಭದ್ರಾ ಕಾಲುವೆ, ಭವಾನೀ ಕಾಲುವೆ, ಇವುಗಳನ್ನು ಕೈಕೊಳ್ಳುವ ವಿಷಯ ಮುಖ್ಯ ಇಂಜಿನೀಯರರ ತೀರ್ಮಾನ ಕಾಯುತ್ತೇವೆ. ಅದು ದೊರೆತೊಡನೆ ಯಾವುದನ್ನು ಪ್ರಾರಂಭಿಸುವುದೆಂದು ನಿರ್ಧರಿಸುವೆವು.

ವಿದ್ಯುದುತ್ಪಾದನವು ಮುಂದೊತ್ತಿದೆ. ಈ ವರ್ಷ ಸುಮಾರು ೩೩ ಲಕ್ಷ ಆಯವು ಇದರಿಂದ ದೊರೆವುದೆಂದು ಅಂದಾಜು ಇದೆ. ಇನ್ನು ೧೫ ಲಕ್ಷ ವ್ಯಯಿಸುತ್ತೇವೆ.

ಲೋಕಲ್ ಸಂಸ್ಥೆಗಳಿಗೆ ಈ ವರ್ಷ ೬೧ ಲಕ್ಷ ಸಾಲ ಕೊಡಲಾದೀತು. ರೈತರಿಗೂ ಸಹಕಾರೀ ಸಂಘಗಳಿಗೂ ಇದರಿಂದ ಪ್ರಯೋಜನವಿದೆ.

ಪ್ರತಿಯೊಂದು ಜಿಲ್ಲೆಯಲ್ಲಿ ನೀರಿನ ಸರಬರಾಯಿಯ ಕಾಮಗಾರಿಗೆ ಪ್ರಾರಂಭವಾಗುವುದು. ರೂರಲ್ ಆಸ್ಪತ್ರೆಗಳೂ ಚಿಕ್ಕವುವು ಗುಡಿ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹವು ದೊರೆವುದು.

ಕೈಗಾರಿಕೆ—ಮುಷ್ಕರಗಳು

ಕಾಮಗಾರರ ಯೂನಿಯನುಗಳು ವಸ್ತುತಃ ಪ್ರಯೋಜನ ಹೊಂದಲು ನಾವು ಸಾಮುದಾಯಿಕ ಪ್ರಯತ್ನಗಳು ಇವನ್ನು ಸರಕಾರವು ಮಂಜೂರು ಮಾಡಿದೆ.

ಆದರೆ, ತಿಳಿವು ಕಡಮೆಯಾಗಿ, ಸುಳ್ಳಿನ ಪ್ರಚಾರ ನಡೆದ, ನಾಯಕರ ಸ್ವಾರ್ಥಾದಿಗಳಿಂದ್ಯ ಕಾಂಗ್ರೆಸ್ ಹಿಸ್ಕಿಸುವೆವೆಂಬ ದುರ್ಭಾವನೆಯಿಂದ, ಅನ್ಯಾಯಗಳು ನಡೆದು ಮುಷ್ಕರಗಳಿಂದ ಹಾನಿಯೂ ಹೆಚ್ಚಿದೆ. ಅಲ್ಲಲ್ಲಿ ಹಿಂಸೆಯಾಗಿದೆ. ಧನಿ—ಮಜೂರರೊಳಗೆ ಭೇದವನ್ನು ಕಾಣದಿರಲು, ಸರಕಾರಕ್ಕೆ ಬೇಕಾಗಿರುವ ಸಮ್ಮತವು (ಹಣವೂ) ಪೂರ್ಣವಾಗುವ ತನಕ ಎಲ್ಲವನ್ನೂ ಮಾಡಲಾಗುವುದಿಲ್ಲೆಂದು ಈ ದೇಶದ ಜನರು ಮರೆಯಬಾರದಾಗಿದೆ.

ಹಿಂಸಾಕಾರಿಗಳು.

ಯಾವ ಮಹಾತ್ಮನ ತತ್ತ್ವಗಳನ್ನು ಅನುಸರಿಸಿ ಕೆಲಸಗಾರರು ಮುಷ್ಕರಕ್ಕೆ ತೊಡಗುವರೊ, ಅವರೇ ಆ ತತ್ತ್ವಗಳಂತೆ ನಡೆದುಕೊಳ್ಳದೆ, ಆ ತತ್ತ್ವಗಳಂತೆ ನಡೆದುಕೊಳ್ಳದೆ, ಬಲಾತ್ಕಾರ ಸುಗಸ್ಸು, ಕಳ್ಳ, ಸತ್ಯಾಗ್ರಹದ ಹೆಸರಿನ ಹಿಂಸೆ ಎಂಥ ಪೆಸಿದಲಾದುವನ್ನು ಎತ್ತಿ, ಆ ಮಹಾತ್ಮರ ಹೆಸರನ್ನೆ ಕೆಡಿಸುತ್ತಾರೆ. ಸರ್ಕಾರವು ಒಗ್ಗಟ್ಟಾಗಿಯೂ ಹೊರಬಂದು, ಈ ಎಡಜನಗಳನ್ನು ದಂಡಿಸ ಬಂತೆ ಬಲಾತ್ಕರಿಸುವ ಕಾರ್ಯಕ್ರಮಗಳನ್ನು ಆ ಮುಷ್ಕರಗಾರರು ಮಾರ್ಗತನದಿಂದ ಕೈಕೊಳ್ಳುತ್ತಿರುವುದು ಶೋಚನೀಯವಾಗಿದೆ. ಏಕೆ? ಜನಗಳಲ್ಲಿ ಆ ಕಡೆ ನೋಡಿ, ತಮ್ಮಲ್ಲಿ ಸಹಾನುಭೂತಿಯೂರಿಸಲಿ ಎಂದು! ಇದು ಕೇವಲ ತಾತ್ಕಾಲಿಕ ಸಹಾನುಭೂತಿಗೆ ಕಾರಣವಾಗಿ, ಕ್ರಮೇಣ ಜನರ ಮನಸ್ಸು ಈ ಮುಷ್ಕರಗಾರರ ಕಡೆಗೆ ಕಠಿಣವಾಗ ಬಂತೆ ಮಾಡೀತು.

ಬೋರ್ಡುಗಳು

ಎಲ್ಲ ಜಿಲ್ಲಾ ಬೋರ್ಡುಗಳು ನವೀನ ಹೆದ್ದಾರಿಗಳ ರಚನೆಗೆ ಯೋಜನೆಗಳನ್ನು ತಯಾರಿಸಿವೆ. ಈ ವರ್ಷ ಇನ್ನೆಷ್ಟೋ ಜಿಲ್ಲೆಗೆ ಬರುವವು. ರೈತರ ಸಾಲದ ಭಾರವೂ ಇಳಿಯುತ್ತ ಬರುತ್ತದೆ.

ಹಿಂದುಳಿದ ಜನಗಳ ಅಭ್ಯುದಯಕ್ಕಾಗಿ ಹೆಚ್ಚಿನ ಹಣವು ವಿನಿಯೋಗವಾಗುವುದು. ಮೇಲ್ತರಗತಿಗಳಲ್ಲಿ ಇವರಿಗೆ ಫೀಸು ಇಲ್ಲ, ಪರೀಕ್ಷೆಗೂ ಇಲ್ಲ, ಸರಕಾರದಲ್ಲಿ ಉದ್ಯೋಗ ಹೊಂದಲು ವಯಸ್ಸಿನ ಮಿತಿಯನ್ನು ಹೆಚ್ಚಿಸಿರುವೆವು. ಇವರ ಅಸ್ಪೃಶ್ಯತಾ ನಿವಾರಣೆಗೆ ಅಗತ್ಯ ಉಪಾಯಗಳನ್ನು ಮಾಡುತ್ತೇವೆ.

ಸಾರಾಂಶ

ತೀರ್ಪೆ ಮಾಫಿಯೊಂದು ಮುಖ್ಯವು ಕೋಟಿ ರೂಪಾಯಿಯ ನಷ್ಟವೇ ಮೊದಲಾಗಿದ್ದ ಬವಣೆ ಕೊಂಗ್ರೆಸು ಮಂತ್ರಿಗಳಿಗೆ ಸೇರಿತು. ಕಳ್ಳನು ನೆರೆಗಳೆಂದು ಆರ್ಥಿಕ ರೂಪಾಯಿ ವ್ಯಯವಾಗುತ್ತಿತ್ತು. ಮದ್ಯ ನಿವಾರಣೆಯಿಂದ ಮುಖ್ಯಲು ಕೋಟಿಯಷ್ಟು ಪುನಃ ಸುಂಕವು ಇಳಿದು ಇತರ ವಾಟುಗಳಲ್ಲಿ ಹನ್ನೆರಡು ಕೋಟಿ ಆಯ ಇಳಿದು ಪ್ರಾಂತಿಕ ಆಯವು ಎರಡು ಕೋಟಿ ಇಳಿದರೂ,—ಇದು ವಿಹಾರ ಪ್ರಾಂತ್ಯದ ಎಲ್ಲಾ ಆದಾಯಕ್ಕೆ ಹೆಚ್ಚು. ಆದರೂ, ಜನರ ಸ್ವಲ್ಪ ತ್ಯಾಗದಿಂದ ಹೊಸ ವಿಧಾನಗಳನ್ನು ಆಕ್ಷೇಪಿಸದಿದ್ದಲ್ಲಿ, ಈ ಕಾರ್ಯಕ್ರಮವೇ ಉತ್ತಮವೆಂದೂ, ಈ ಬಜೆಟು ಅಂದಾಜು ಮಿಗತೆಯದೂ ಹೇಳಿ ಮುಗಿಸಿದರು.

ಮೈಸೂರು ದಿವಾನರಾದ ಸರ್ ಮಿರ್ಜಾರಿಗೆ ಕೊಲ್ಹಾಪುರ ಸಹೋದರರಿತ್ತ ಸತ್ಕಾರ ಕೂಟದ

ಸ್ವದೇಶಾಭಿಮಾನಿ

ತಾರೀಕು ೨೪—೨—೧೯೩೯

'ತಮ್ಮಿಚ್ಛೆಯಂತೆ ನಡೆಯಲಿ!'

ಶ್ರೀ ಸುಭಾಷಚಂದ್ರ ಬೋಸರ ದೇಹಸ್ಥಿತಿಯು ಹಾಳಾಗಿದೆ; ಅವರು ಇನ್ನು ಕೆಲದಿನಗಳ ತನಕ ಹಾಸಿಗೆ ಬಿಡುವಂತಿಲ್ಲ, ಜ್ವರವಿದೆ, ನಾಡಿ ಮಂದವಾಗಿದೆ, ಉಬ್ಬಸವಿದೆ ಎಂದು ಒಂದು ಕಡೆಯಿಂದ ವಾರ್ತೆ ಬರುವಾಗಲೆ, ವಾರ್ಧಾದಲ್ಲಿ ಸೇರಿರುವ ನಮ್ಮ ಕರ್ಮವೃದ್ಧರಲ್ಲಿ ಹತ್ತು ಮಂದಿ, ಅವರ ಚುನಾವಣೆಯ ಪರಿಣಾಮವಾಗಿ ಮುಂದೆ ಹೇಗೆ ನಡೆದುಕೊಳ್ಳಬೇಕೆಂದು ಸಂಭಾಷಿಸಿ ಹೀಗೇನೋ ನಿರ್ಧಾರಮಾಡಿಕೊಂಡಿರುವರೆಂದೂ ವಾರ್ತೆ ಬಂದಿದೆ —

> 'ಕಾಂಗ್ರೆಸ ಕಾರ್ಯಕ್ರಮವು ಸಂಪೂರ್ಣ ಬದಲಾಗಬೇಕೆನ್ನುವವರಿಗೆ ಇದೊಂದು ಉತ್ತಮ ಸಂದರ್ಭ, ಅವರಿಗೆ ಬಹುಮತ ದೊರೆತಿದೆ. ಅವರೇಕೆ ಈಗ ತಮ್ಮಿಚ್ಛೆಯಂತೆ ನಡೆಯಲು ಅವಕಾಶ ಪಡೆಯಬಾರದು? ಅವರು ಅದರಿಂದ ಜಯಶೀಲರಾದರೆ, ಗಾಂಧೀಜೀಯವರಿಗಿಂತ ಅಧಿಕ ಸಂತುಷ್ಟರು ಇನ್ನಾರೂ ಇರರು. ಅವರು ಜಯಶೀಲರಾಗದಿದ್ದರೆ ದೇಶಕ್ಕೆ ಬಹು ದಿನಗಳಿಂದ ಕಲಿಯುವ ಅಗತ್ಯವಿದ್ದ ಒಂದು ಪಾಠವನ್ನು ಕಲಿತಂತಾಗುವುದು. ಅವರು ಸೋತಲ್ಲಿ ಕಾಂಗ್ರೆಸು ಹಾಳಾಗದಂತೆ ನಾವು ನೋಡಿಕೊಳ್ಳುವೆವು. ಈಗ ನಾವು ಅವರಿಗೆ ಅವಕಾಶ ಕೊಡಬಾರದಾದರೆ, ಜವಾಬ್ದಾರಿಯೆಂಬುದನ್ನು ಅವರು ಮುಂದೆ ಎಂದೂ ಕಲಿತುಕೊಳ್ಳುವಂತಿಲ್ಲ.'

ನಿಜವಾಗಿಯೂ,—ಜ್ಞಾನವೃದ್ಧರೂ ಹೀಗೆ ಈ ಸಂದರ್ಭದಲ್ಲಿ ಆಡುವುದುಂಟೆ? ಹಾಗೆಂದು ವಾರ್ತಾ ಸಂಗ್ರಾಹಕರು ಸುಳ್ಳು ಹೇಳುವುದಕ್ಕುಂಟೆ? ಈ ಭಾವಗಳು ಜನಾಂಗದ ನಾಯಕರಲ್ಲಿವೆ ಎಂದು ಅಧಿಕಾರವಾಣಿಯಿಂದ ಹೇಳಲು ಆಧಾರಗಳಿಲ್ಲದೆ ಸಾಧ್ಯವೆ?

ಕಾರ್ಯಕಾರೀ ಮಂಡಲಿಯಲ್ಲಿ ಗಾಂಧೀಜೀಯವರ ಅನುಯಾಯಿಗಳು ಗಾಂಧೀ ತತ್ವವನ್ನು ಮನ್ನಿಸದೆ ನಡೆವಂತೆ ತೋರದೇ? ಸುಭಾಷರು ಅಧ್ಯಕ್ಷತೆ ಪಡೆದುದಕ್ಕಾಗಿ ಅವರನ್ನು ಅಭಿನಂದಿಸುವಾಗ, ಅವರು 'ಸೋತರೆ' ಅವರಿಗೊಂದು ಪಾಠವೆನ್ನುವ ಮಾತ ಕಪಟತೆಯ ಕಿಲುಬನ್ನು ಈ ಅಭಿನಂದನೆಯಿಂದ ಹೊರಡಿಸಲಾರದೇ?

ಅಭಿಪ್ರಾಯ ಭೇದದಿಂದ, ಕೆಲವರು ಕಾರ್ಯಕಾರೀ ಮಂಡಲದವರು ರಾಜೀನಾಮೆ ಕೊಟ್ಟರೂ ಅನ್ಯಾಯವೆನಿಸದು ಏಕೆಂದರೆ, ಭಿನ್ನಾಭಿಪ್ರಾಯವಿರುವಲ್ಲಿ ಕಾಂಗ್ರೆಸ್ ಕಾರ್ಯಕ್ರಮವನು ನಿರ್ದೇಶಿಸುವುದೂ ನಡೆಸುವುದೂ ಕಷ್ಟ. ಮನಸ್ಸಾಕ್ಷಿಯ ಸಮಾಧಾನಕ್ಕಾಗಿ ಅಂತವರು ಕೂಡಲೆ ಹೊರಗೆ ಬರುವುದು ನ್ಯಾಯವೆಂದು ಗಾಂಧೀಜೀಯವರೂ ಸೂಚಿಸಿದವರು. ಆದರೆ, ಈ ಬಗೆಯಾಗಿ, ಪೆ ಶ್ರಾಭಿಪ್ರಾಯ ನಿರೂಪಣದಿಂದ ದೀನ ಸಾಧುಭಾವವನ್ನು ಪ್ರಕಟಿಸಿ, ಅತ ಸೋತು ಬುದ್ಧಿ ಕಲಿವಲ್ಲಿಂದ ನಾವು ಹೊರಡುತ್ತೇವೆನ್ನುವುದು ಎಂತಹ ಗರ್ವ ಅಸಮಾಧಾನವನ್ನುಂಟುಮಾಡದಿರದು. 'ಸ್ವ-ಸೇವೆ'ಯೆಂಬುವೇ ಗೌರವಕರವಾದುದೆಂದು ಸದಾ ಸದಾ ಬೋಧಿಸುತ್ತಿದ್ದವರ ಬಾಯಲ್ಲಿ ಈ ಮಾತುಗಳು ಶೋಭಿಸಲಾರವು. ಯಾರೂ ಹೀಗೆ ಹೇಳಿರಬಹುದೇ? ಎಂದು ಎಣಿಸುವುದು ಸಹ ಅಸಹನೀಯವಾಗಿದೆ.

ಸರದಾರರ ಜತೆಯ ರಾಜಕೀಯರ ಸೂಚನೆಗೆ ವಿರೋಧವಾಗಿ ಸುಭಾಷರು ಚುನಾವಣೆಗೆ ನಿಂತುದೇ, ಮತ್ತೂ ಗೆದ್ದುದೇ ಅವರಲ್ಲಿರುವ ಅಕ್ಷಮ್ಯ ಅಪರಾಧವೆ? ಗೆದ್ದ ಬಳಿಕ,—ಶಿಸ್ತು ಪ್ರಕಾರ, ಸೋತ ಪಕ್ಷದವರು ಸಹ ಔದಾರ್ಯದಿಂದ ಅವರೊಡನೆ ಕೂಡಿ ನಡೆಯುವುದೇ ಗೌರವಕರ. ಅಥವಾ, 'ಯುವಕ' ಸುಭಾಷರು ತಮ್ಮ ಚುನಾವಣೆಯನ್ನು ವಿರೋಧಿಸಿದವರೆಂದು ಇವರನ್ನು ತಾವಾಗಿ ಹೊರದೂಡುವರೆಂಬ ಭಯವಿತ್ತೇ? ಇದಕ್ಕೆ ಕಾರಣವಿಲ್ಲ, ತಾನು ಐಕ್ಯಕ್ಕಾಗಿ ಎಲ್ಲರನ್ನು ವಿಚಾರಿಸಿಕೊಂಡು ಸಮಾಧಾನವಾಗಿ ನಡೆದುಕೊಳ್ಳುವೆನು ಎಂದು ಗೆದ್ದ ಭರದಲ್ಲಿ ಅವರು ದೀನಪ್ರಾರ್ಥನೆ ಮಾಡಿಲ್ಲವೆ?

ಚುನಾವಣೆಗಳಲ್ಲಿ ಸೋತವರೇ ಗೆದ್ದವರ ಪ್ರಥಮ ಶ್ಲಾಘಕರು. ಗೆದ್ದವನನ್ನು ತ್ಯಜಿಸಿ ಹೊರಡುವ ಸಂಭವವಿರಬಹುದಾದರೆ, ಪ್ರತಿಯೊಂದು ಚುನಾವಣೆಯಾದ ಕೂಡಲೆ, ಒಂದೊಂದು ಕ್ರಾಂತಿಗೆ ಅವಕಾಶ ದೊರೆಯಬಹುದು. ಬೋಸರಿಗೆ ಒಂದು ಪಾಠ ಕಲಿಸುವ ಆಸೆಯೊ, ಕುತೂಹಲವೆ? (ನಾವು ಇದನ್ನು ನಂಬುವುದು ತಪ್ಪು) ಹಾಗಿದ್ದರೆ, ಅವರು ಸ್ವೇಚ್ಛೆಯಾಗಿ ನಡೆಯಲೆನ್ನುವ ಈ ಔದಾಸಿನ್ಯಪೂರ್ವಕವಾದ ಆಶೀರ್ವಾದವೇಕೆ? ಬೋಸರಿಗೆ ಸ್ವತಂತ್ರವಾಗಿ ನಡೆವ ಆಸೆ ಇದೆಯಾದರೆ, ಕಾಂಗ್ರೆಸಿನ ಸೂತ್ರಗಳಂತೆ ಹಾಗೆ ನಡೆಯಲು ಅವರಿಗೆ ಸಂಪೂರ್ಣ ಅನುಕೂಲತೆಗಳು ಇದ್ದೇ ಇವೆ.

ಬೋಸರು ಇಂದಿನ ತನಕವೂ ಕಾಂಗ್ರೆಸಿನಲ್ಲಿ ಒಡಕು ಬಾರದಂತೆ ಸರ್ವ ಪ್ರಯತ್ನಗಳನ್ನು ಮಾಡುವೆನು, ಗಾಂಧೀಜೀಯವರ ವಿಶ್ವಾಸವನ್ನು ಸಂಪಾದಿಸಿಕೊಳ್ಳುವೆನು ಎಂದೇ ಇರುವರು. ವಿಧೇಯವಾಗಿ ಶ್ರದ್ಧೆಯಿಂದ ನಡೆವ ಗುಣಗಳುಳ್ಳವರಾರೂ ಅಧ್ಯಕ್ಷರನ್ನು ತೊರೆದು ವೈರಾಗ್ಯ ಪ್ರಭುಗಳಾಗಿ ಮೆರೆಯಲು ಇಚ್ಛಿಸರು. ಇಂತಹ ದುರ್ಭಾವನೆಗಳು ನಮ್ಮ ಹಿರಿಯ ಮುಂದಾಳುಗಳಲ್ಲಿ ಉಂಟಾಗಬಾರದು. ಉಂಟಾದರೆ, ದೃಶ್ಯಾಂತವಾದೀತು.

ಶ್ರೀ ಜವಹರಲಾಲರನ್ನೆ ನಂಬಿ ಅವರ ಪ್ರಯತ್ನ ಫಲಗಳನ್ನು ಕಾಯಬೇಕಾಗಿದೆ.

ಮೈಸೂರಿನ ದಿವಾನರಿಗೆ ದಕ್ಷಿಣ ಕನ್ನಡದ ದಿವ್ಯ ಸ್ವಾಗತ!

ಕಳೆದ ತಾರೀಕು ೧೮ರಲ್ಲಿ ಮೈಸೂರು ದಿವಾನರಾದ ಅಮೀನ್ ಉಲ್-ಮುಲ್ಕ್ ಸರ್ ಮಿರ್ಜಾ ಮಹಮ್ಮದ್ ಇಸ್ಮಾಯಿಲ್ ಕೆ. ಸಿ. ಐ. ಇ., ಒ. ಬಿ. ಇ. ಇವರನ್ನು ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಅಧ್ಯಕ್ಷರೂ, ಮಂಗಳೂರು ಸಹಕಾರ ಸೆಂಟ್ರಲ್ ಬೇಂಕಿನ ಅಧ್ಯಕ್ಷರೂ ಸಿ. ಪಿ. ಸಿ. ಕಂಪೆನಿಯ ಜನರಲ್ ಮೆನೇಜರೂ ಸಂಪಾಜೆಗೆ ತೆರಳಿ ಸ್ವಾಗತೀಕರಿಸಿದರು. ಅಲ್ಲಿಂದ ಮಂಗಳೂರಿಗೆ ದಯಮಾಡಿಸಿ ಕದ್ರಿ ಪ್ರಯಾಣಿಕರ ಬಂಗ್ಲೆಯಲ್ಲಿ ವಿಶ್ರಾಂತಿಹೊಂದಿದರು. ಸಂಜೆ ೪ ಗಂಟೆಗೆ ಸರಿಯಾಗಿ ಹೈಲೇಂಡ್ ಕಾಫಿ ವರ್ಕ್ಸನ್ನು ಸಂದರ್ಶಿಸಿದರು. ೫ ಗಂಟೆಗೆ ಜಿಲ್ಲಾ ಬೋರ್ಡು ಅಧ್ಯಕ್ಷರಿಂದಲೂ ಇತರಕೆಲವು ಮಹನೀಯರಿಂದಲೂ ಸತ್ಕಾರ ಕೂಟವು ನೆರವೇರಿತು.

ದ. ಕ. ಸಹಕಾರಿ ಸೆಂಟ್ರಲ್ ಬೇಂಕಿನ ರಜತೋತ್ಸವ

ಸಂಜೆ ಆರು ಗಂಟೆಗೆ ದಕ್ಷಿಣ ಕನ್ನಡ ಸಹಕಾರಿ ಸೆಂಟ್ರಲ್ ಬೇಂಕಿನ ರಜತೋತ್ಸವ ಸಮಾರಂಭದಲ್ಲಿ ದಿವಾನರು ಅಧ್ಯಕ್ಷಸ್ಥಾನವನ್ನು ವಹಿಸಿದರು. ಬಾಲಿಕೆಯ ಸ್ವಾಗತಗೀತ ಮೊದಲಾದ ಕಾರ್ಯಕ್ರಮವು ನೆರವೇರಿದ ಬಳಿಕ ಬೇಂಕಿನ ಡಾೖರೆಕ್ಟರರ ಪರವಾಗಿ ಪಿ. ಮೊಂತೇರೊರವರ ಸ್ವಾಗತ ಭಾಷಣವನ್ನಿತ್ತರು. ಶ್ರೀ ಉಳ್ವಾಲ ರಂಗೇಶರಾಯರು ಬೇಂಕಿಗೆ ಬಂದ ಅನೇಕ ಮಹನೀಯರ ಸಂದೇಶಗಳನ್ನೋದಿದರು.

ಅಧ್ಯಕ್ಷರ ಭಾಷಣ

ಅಧ್ಯಕ್ಷರು ತಮ್ಮ ಸುಂದರವೂ ಗಂಭೀರವೂ ಆದ ಭಾಷಣದಲ್ಲಿ ದಕ್ಷಿಣ ಕನ್ನಡವು ಮೊದಲು ಮೈಸೂರು ಅಧಿಪತ್ಯದ ಒಂದು ಭಾಗವಾಗಿತ್ತೆಂದೂ ಈಗಲೂ ಇದು ಕರ್ನಾಟಕದ ಒಂದಂಶವಾಗಿದೆಯೆಂದೂ ಈ ಜಿಲ್ಲೆಯವರು ಮೈಸೂರಿನ ಕಾಫಿ ಕಾರ್ಖಾನೆಯ ಅಭಿವೃದ್ಧಿಗೆ ಅನೇಕ ಸಹಾಯವಿತ್ತಿರುವರೆಂದೂ ಹೇಳಿದರು. ದಕ್ಷಿಣ ಕನ್ನಡ ಮತ್ತು ಮೈಸೂರಿನ ಸಂಬಂಧವು ದಿನ ಸಹೋಗುತ್ತ ಅಭಿವೃದ್ಧಿ ಹೊಂದುತ್ತಲಿದೆಯೆಂದೂ ಸೂಚಿಸಿದರು ಮತ್ತು ಈ ಎರಡು ಪ್ರದೇಶಗಳ ಪರಸ್ಪರ ಬೆಳವಣಿಗೆಗೆ ತಾನು ತನ್ನಿಂದಾದಷ್ಟು ಸಹಾಯಮಾಡಲು ಸಿದ್ಧನಿರುವೆನೆಂದೂ ಸೂಚಿಸಿ ಬೇಂಕಿನ ಪ್ರಗತಿಯ ವಿಷಯ ಪ್ರಶಂಸಿಸಿ ಬೇಂಕಿನ ಅಭಿವೃದ್ಧಿಯನ್ನು ಕೋರಿದರು. ಶ್ರೀ ಕೆ. ಜಿ. ಬಲ್ಲಾಳರ ವಂದನಾರ್ಪಣೆ ಬಳಿಕ ರಾಷ್ಟ್ರಗೀತವಾದ ಬಳಿಕ ಉತ್ಸವವು ಕೊನೆಗೊಂಡಿತು.

ರಾತ್ರಿ ಕೆನರಾ ಹೈಸ್ಕೂಲಿನ ಆವಾರದಲ್ಲಿ ಕೆಲವು ಸಂಸ್ಥೆಗಳ ಮತ್ತು ಮುನಿಸಿಪಾಲಿಟಿಯ ಪರವಾಗಿ ದಿವಾನರಿಗೆ ಒಂದು ಡಿನ್ನರ್ ಪಾರ್ಟಿಯು ನಡೆಯಿತು.

ಮರುದಿನ ಇಲ್ಲಿಂದ ಕಾರ್ಕಳ ಮಾರ್ಗವಾಗಿ ಉಡುಪಿಗೆ ತೆರಳಿದರು. ಅಲ್ಲಿಯ ಪಂಚಾಯತ ಸಭೆಗಳು ಒಪ್ಪಿಸಿದ ಮಾನಪತ್ರಗಳಿಗೆ ಕೃತಜ್ಞತೆಯನ್ನು ಸೂಚಿಸಿ ಯೋಗ್ಯವಾದ ಭಾಷಣವನ್ನಿತ್ತರು.

ಉಡುಪಿಯಲ್ಲಿ

ದಿವಾನರು ಕಳೆದ ತಾ. ೧೯ನೇ ಅಪರಾಹ್ನ ಉಡುಪಿಗೆ ಚಿತ್ತೈಸಿ ಮಲ್ಪೆಯನ್ನು ಸಂದರ್ಶಿಸಿ ಮುನಿಸಿಪಾಲಿಟಿಯವರ ಗಾಂಧಿ ಮೈದಾನದಲ್ಲಿ ಹಾಜಿ ಅಬ್ದುಲ್ಲಾ ಸ್ಮಾರಕ ವ್ಯಾಯಾಮ ಶಾಲಾ ಪರಾರದಲ್ಲಿ ಏರ್ಪಡಿಸಿದ ಮಹಾಸಭೆಯಲ್ಲಿ ಮಾನಪತ್ರವನ್ನು ಸ್ವೀಕರಿಸಿ ದಿವಂಗತ ಹಾಜಿ ಅಬ್ದುಲ್ಲಾ ಸಾಹೇಬರ ಭಾವಚಿತ್ರದ ಅನಾವರಣ ಸಮಾರಂಭವನ್ನು ನೆರವೇರಿಸಿದರು.

ಅಲ್ಲಿಂದ ದಿ ಬೊಂಬಾಯಿ ಲ್ಯಾಫ್ ಎಶ್ಯೂರೆನ್ಸಿನ ಪ್ರಧಾನ ಸೆಕ್ರೆಟರಿಗಳಾದ ಮೆ। ಕೊಳ್ಕೆಬೈಲ್ ಸಹೋದರರು ಏರ್ಪಡಿಸಿದ ಸತ್ಕಾರಕೂಟಕ್ಕೆ, ಬೊಂಬೈ ಲ್ಯಾಫ್ ಎಶ್ಯೂರೆನ್ಸಿನವರು ಹೊಸದಾಗಿ ಕಟ್ಟಿಸಿದ ಕಟ್ಟಡಕ್ಕೆ ತೆರಳಿದರು.

ಮೆಸರ್ಸ್ ಕೊಳ್ಕೆಬೈಲ್ ಬಂಧುಗಳು ದಿವಾನರನ್ನು ಸ್ವಾಗತೀಕರಿಸಿ, ಈ ಸಂಸ್ಥೆಯ ಪರವಾಗಿ ಡೈರೆಕ್ಟರರಲ್ಲೊಬ್ಬರಾದ ಶ್ರೀ ಕೆ. ನರಸಿಂಹ ಪೈಗಳು ತಮ್ಮ ಭಾಷಣದಲ್ಲಿ 'ಸರ್ ಮಿರ್ಜಾರವರ ತಮಗೆ ಅನೇಕ ತರದ ಬೇರೆ ಕೆಲಸಗಳಿದ್ದರೂ ದಕ್ಷಿಣ ಕನ್ನಡದ ಸಂಚಾರವನ್ನು ಕೈಕೊಂಡದಕ್ಕಾಗಿ ದಕ್ಷಿಣ ಕನ್ನಡಿಗಳು ಅವರಿಗೆ ಆಭಾರಿಗಳಾದ್ದೇವೆ. ಈಗಿನ ದಿವಾನರು ದಕ್ಷಿಣ ಕನ್ನಡ ಮತ್ತು ಮೈಸೂರೊಳಗೆ ಪರಸ್ಪರ ಅಭಿವೃದ್ಧಿಯುಂಟಾಗುವಂತೆ ಸಹಾಯವನ್ನೀಯುವರೆಂದು ನಾವು ಆಶಿಸುತ್ತೇವೆ. ದಿವಾನ ಸಾಹೇಬರೆ! ನೀವು ಮೈಸೂರಿಗಾಗಿ ಮಾಡಿದ ಸೇವೆಯನ್ನು ಸಾಕಷ್ಟು ಸ್ಪಷ್ಟಗೊಳಿಸಲು ಕಷ್ಟವಾದ ವಿಷಯ. ಕಳೆದ ಹದಿನೆರಡು ವರ್ಷಗಳಿಂದ ನೀವು ಮೈಸೂರಿಗಾಗಿ ದುಡಿದುದ್ದನ್ನು ನೋಡುವಾಗ ನಿಮ್ಮನ್ನು ನವ ಮೈಸೂರಿನ ಜನ್ಮದಾತರೆಂದು ಹೇಳಲೂ ಯಾವ ಸಂದೇಹವೂ ಇಲ್ಲ. ನೀವು ಬಡವ ಬಲ್ಲಿದನೆಂಬ ಭೇದವಿಡದೆ ಎಲ್ಲರನ್ನು ಸರಿಸಮಾನವಾಗಿ ಕಾಣುವುದರಲ್ಲಿ ಬಹಳ ಖ್ಯಾತರಾಗಿರಿ. ನಾನು ನನ್ನ ಸ್ವಂತ ಅನುಭವದಿಂದ ಹೇಳಬೇಕಾದರೆ ನೀವು ಜನರ ಸೌಕರ್ಯಕ್ಕಾಗಿ ಅವರಿಗೆ ಬೇಕಾದ ಸೌಕರ್ಯಗಳನ್ನು ಮಾಡಲು, ಅನೇಕ ಕಡೆಗಳನ್ನು ಬೆಳಗಾಗುವ ಮೊದಲೇ ಕುದುರೆಯ ಮೇಲೆ ಕೂತು ಸಂದರ್ಶಿಸುವುದನ್ನು ನಾನು ಕಂಡಿರುತ್ತೇನೆ. ಮೈಸೂರಿನಲ್ಲಿ ಸಾಧಾರಣವಾಗಿ ಉದ್ಯೋಗ ಪ್ರಶ್ನೆಯು ಬಗೆಹರಿಯಲಿಕ್ಕೆ ಕಾರಣವೇ ನಿಮ್ಮ ಶ್ರಮದ ಫಲವಾಗಿರುತ್ತದೆ. ... ಕೈಗಾರಿಕೆ, ಆರೋಗ್ಯ ಇಲಾಖೆ ಮೊದಲಾದವುಗಳಿಗೆಲ್ಲ ಎಲ್ಲಾ ಕಡೆಯಲ್ಲಿ ... ಆಧಾರವಾದ ಮನ್ನಣೆಯಿದೆ. ... ಇವೇ ಜೀವನಕ್ಕೆ ... ಇದೆಲ್ಲವೂ ನಿಮ್ಮ ನಾಡಿನಲ್ಲಿ ಧಾರಾಳವಾಗಿದೆ. ಕೆಲವರು ಇಂತಹ ಕಾರ್ಯಗಳಿಗೆ ಹಣವನ್ನು ವ್ಯಯಿಸುವುದು ದುರ್ವ್ಯಯವೆನ್ನುತ್ತಾರೆ. ಆದರೆ ನಾನು ದುರ್ವ್ಯಯವೆಂದು ತಿಳಿಯುವುದಿಲ್ಲ. ... ಕಾರವು ಕೂಡ ದೇಶದ ಏಳ್ಗೆಗೆ ಒಂದು ಕಾರಣವಾಗಿರುತ್ತದೆ. ಈ ವಿಷಯವಾಗಿ ದಕ್ಷಿಣ ಕನ್ನಡಿಗರಾದ ನಾವು ಮೈಸೂರನ್ನು ಹೊಗಳುತ್ತೇವೆ. ದೇವರು ನಿಮಗೆ ಆರೋಗ್ಯವನ್ನಿತ್ತು ಮೈಸೂರಿಗೂ ಕರ್ನಾಟಕಕ್ಕೂ ನಿಮ್ಮ ಸೇವೆಯು ಒದಗಲೆಂದು ದೇವರನ್ನು ಪ್ರಾರ್ಥಿಸುತ್ತೇವೆ. ಅದಲ್ಲದೆ ಮೈಸೂರಿಗೆ ಕೆಲವು ಸಮಯದ ಹಿಂದೆ ಸಂದರ್ಶನವಿತ್ತ ಜವಹರ ... ಕೂಡಾ ಮೈಸೂರು ಆದರ್ಶ ಸಂಸ್ಥಾನವೆಂಬ ಅಭಿಪ್ರಾಯವನ್ನು ಪಟ್ಟಿರುವರು. ನಾವು ತಮಗೂ, ಮೈಸೂರಿಗೂ ಮೈಸೂರುವಾಸಿಗಳಿಗೂ ಸುಖವಾಗಲೆಂದು ಕೋರುತ್ತೇವೆ' ಎಂದರು.

ಮಾನ್ಯ ದಿವಾನರು ಇದಕ್ಕೆ ಉತ್ತರವೀಯುತ್ತಾ ತನಗೆ ಸತ್ಕಾರವನ್ನಿತ್ತುದಕ್ಕೆ ಕೃತಜ್ಞತೆಯನ್ನು ಸೂಚಿಸಿದರು. ಇಷ್ಟು ಸಣ್ಣ ಊರಲ್ಲಿ ಇಷ್ಟು ಒಳ್ಳೇ ಕಟ್ಟಡವಿರುವುದಾಗಿ ತಾನು ಎಣಿಸಿಲ್ಲವಾಗಿ ತಿಳಿಸಿದರು. ಈ ಕಂಪೆನಿಯವರು ಬೆಂಗಳೂರಲ್ಲಿ ಜನತೆಗೆ ಮಾಡಿರುವ ಮತ್ತು ಮಾಡುತ್ತಿರುವ ಸೇವೆಯ ಕುರಿತು ಪ್ರಶಂಸಿಸಿದರು. ಮೈಸೂರು ಮತ್ತು ದಕ್ಷಿಣ ಕನ್ನಡದ ಪರಸ್ಪರ ಅಭಿವೃದ್ಧಿಗೆ ಸಾಕಷ್ಟು ಸಹಾಯವನ್ನೀಯುವೆನೆಂಬ ಆಶ್ವಾಸನೆಯನ್ನಿತ್ತರು.

(೯ನೇ ಪುಟವನ್ನು ನೋಡಿರಿ)



ವಿಚಿತ್ರ ನಾಡಿನ ವಿಚಿತ್ರ ಸಭೆ

ಅಮೇರಿಕದ ಸುಳ್ಳರ ಸಭೆಯು ವಿಚಿತ್ರ ನಾಡಿನ ವಿಚಿತ್ರ ಸಭೆ ಆಗಿರುವುದು. ಅದರ ಪ್ರಾರಂಭವು ಎಲ್ಲ ಸಭೆ ಸಮಾಜಗಳಂತೆ ಒಂದು ಸಣ್ಣ ಊರಿನಲ್ಲಿ ಒಂದು ಸಣ್ಣ ಪರಿಣಾಮದಲ್ಲಿ ಆಯಿತು. ಈಗಲಾದರೋ ಅದು ಇಡೀ ದೇಶದಲ್ಲಿ ಅಚ್ಚುಮೆಚ್ಚಿನ ಸಂಸ್ಥೆಯಾಗಿರುವುದು. ಜನರು ಇದರ ಸದಸ್ಯರಾಗಿರುವುದನ್ನು ತಮ್ಮ ಹೆಮ್ಮೆಯ ವಿಷಯವೆಂದು ತಿಳಿಯುತ್ತಾರೆ. ಈಗ ಈ ಸಭೆಯ ಸದಸ್ಯರು ಅಮೇರಿಕದ ಪ್ರತಿಯೊಂದು ಪ್ರಾಂತದಲ್ಲಿ ಮಾತ್ರವಲ್ಲದೆ ಕೆನಡದಲ್ಲೂ ಜಗತ್ತಿನ ಪ್ರತಿಯೊಂದು ದೇಶದಲ್ಲೂ [illegible] ಇಂಗ್ಲಾಂಡಿನಲ್ಲಿ ಕೂಡ ಈ ಸಭೆಯ ಸದಸ್ಯರಿರುತ್ತಾರೆ. ಇವರು ಒಂದೇ ಜಾತಿಮತ ಸಂಪ್ರದಾಯಗಳಿಗೆ ಅಥವಾ ಒಂದೇ ವೃತ್ತಿ ಉದ್ಯೋಗಗಳಿಗೆ ಸೇರಿದವರು ಆಗಿರುವುದಿಲ್ಲ. ಈ ಸಭೆಯಲ್ಲಿ ಎಲ್ಲ ಜಾತಿಮತ ಸಂಪ್ರದಾಯದವರೂ ಎಲ್ಲ ವೃತ್ತಿ ಉದ್ಯೋಗಗಳನ್ನು ಅವಲಂಭಿಸುವವರೂ ಸದಸ್ಯರಾಗಿ ಇರುತ್ತಾರೆ. ಹತ್ತು ಹನ್ನೆರಡು ವರ್ಷಗಳ [illegible] ಕ್ಕಿಂದ ಆರಂಭಿಸಿ ೬೦-೭೦ ವರ್ಷ ಪ್ರಾಯದ ಮುದುಕ ಮುದುಕಿಯರು ಕೂಡ ಈ ಸಭೆಯಲ್ಲಿ ಸೇರಿರುತ್ತಾರೆ. ಇದರಷ್ಟು ಜನಪ್ರಿಯವಾದ ಸಂಸ್ಥೆಯು ಅಮೇರಿಕದಲ್ಲಿ ಬೇರೊಂದು ಇರುವುದೇ ಇಲ್ಲವಂತೆ.

ಸಭೆಯ ಪ್ರಾರಂಭ

ಕೆಲವು ವರ್ಷಗಳ ಹಿಂದೆ ಓಟಿಸ್ ಸಿ. ಹಲಟ್ ಎಂಬ ಲೇಖಕರೊಬ್ಬರು ಅಮೇರಿಕದ ಒಂದು ಪತ್ರಿಕೆಯಲ್ಲಿ ಒಂದು ವಿಚಿತ್ರವಾದ ಲೇಖನವನ್ನು ಬರೆದು— ಕೆಲವು ದಿನಗಳ ಹಿಂದೆ ನಮ್ಮ ಊರಿನಲ್ಲಿ ಒಂದು ಸಭೆಯು ಕೂಡಿತು. ಊರಿನ ಸುಳ್ಳರ ಸ್ಪರ್ಧೆಗೆ ಹಲವು ಮಂದಿ ಸ್ಪರ್ಧಿಸಲು ಬಂದಿದ್ದರು. ತಾವು ಗೆಲ್ಲಬೇಕು, ತಾವು ಗೆಲ್ಲಬೇಕು ಎನ್ನುವ ಅವರ ಸ್ಪರ್ಧಾಭಾವವು ನೋಡಲಿಕ್ಕೆ ಬಹಳ ಸೋಜಿಗವಾಗುತಿತ್ತು. ಎಲ್ಲರೂ ಚಿತ್ರವಿಚಿತ್ರವಾದ ಸುಳ್ಳು ಸುಳ್ಳು ಕತೆಗಳನ್ನು ಹೇಳಿದರು' ಎಂದು ಪ್ರಕಟಿಸಿದರು. ಆ ಲೇಖನದ ವಿಷಯವನ್ನು ಅವರು ಮರೆತೇ ಬಿಟ್ಟಿದ್ದರು. ಆದರೆ ಮುಂದಿನ ವರ್ಷದ ಕ್ರಿಸ್‌ಮಸ್ ಹಬ್ಬವು ಬಂದಾಗ ಬಂದರೆ [illegible] ಲೊಂದರಂತೆ ಹಲವಾರು ತಂತಿಗಳು, ಪತ್ರಗಳೂ ಹಲಟರಿಗೆ ಬಂದುವು. ಈ ಸರ್ವವು ಸುಳ್ಳರ ಸ್ಪರ್ಧೆಯಾಗುವುದೇ ಎಂದು ಅವು ಹಲಟರನ್ನು ಕೇಳಿದ್ದುವು. ಅವರು ಬರೆದ ಲೇಖನವು ಬರೀ ಕಲ್ಪನೆಯಾಗಿತ್ತು. ಅಂಥ ಸ್ಪರ್ಧೆಯು ನಡೆದೇ ಇರಲಿಲ್ಲ ಎಂದು ಯಾರಿಗೂ ತಿಳಿಯಗೊಡಲಿಲ್ಲ. ಅಂಥ ಸ್ಪರ್ಧೆಯು ನಡೆದುದು ನಿಜವೆಂದೇ ಎಲ್ಲರೂ ನಂಬಿದ್ದರು. ಅವರೆಲ್ಲರ ಸ್ಪರ್ಧೆಯಲ್ಲಿ ಭಾಗ ತೆಗೆದುಕೊಳ್ಳುವ ಇಚ್ಛೆಯುಳ್ಳವರಾಗಿ ತಮ್ಮ ತಮ್ಮ ಸುಳ್ಳು ಕತೆಗಳನ್ನು ಕಳುಹಿಸಿದ್ದರು. ಆದ್ದರಿಂದ ಸುಳ್ಳರ ಸಭೆಯನ್ನು ಮಾಡಿದರೆ ಅದಕ್ಕೂ ಸದಸ್ಯರು ದೊರೆಯುವರೆಂದು ಹಲಟರು ತಿಳಿದರು. [illegible] ರಲ್ಲಿ ಅಮೇರಿಕದಲ್ಲಿ ಸುಳ್ಳರ ಸಭೆಯು ಸ್ಥಾಪಿಸಲ್ಪಟ್ಟಿತು.

ಸದಸ್ಯರು ಹೇಳಿದ ಸುಳ್ಳುಗಳು

ಈ ಸಭೆಯ ಸದಸ್ಯರು ಎಷ್ಟು ಚೆನ್ನಾಗಿ ಸುಳ್ಳು ಕತೆಗಳನ್ನು ಹೇಳುವರೆಂದರೆ, ಅವುಗಳನ್ನು ಸುಳ್ಳೆಂದು ಯಾರು ಹೇಳಲಾರರು. ನಿಜವೆಂದು ನಂಬಿದರೂ ಅವುಗಳಿಂದ ಯಾರಿಗೂ ತಮ್ಮ ಮಾನಹಾನಿಯಾಯಿತೆಂದು ತಿಳಿಯುವ [illegible] ಇದ್ದಿಲ್ಲ. ಈ ಎಲ್ಲ ಕತೆಗಳು ಎಷ್ಟು ಚಮತ್ಕಾರಿಕವಾಗಿದ್ದುವೆಂದರೆ, ಯಾವ ಕತೆಯನ್ನು ಯಾವ ಪತ್ರಿಕೆಗೆ ಕಳುಹಿಸಿದರೂ, ಅದನ್ನು ಪ್ರಕಟಿಸದೆ ತಿರಸ್ಕರಿಸಿದುದಿಲ್ಲ. ಜಗತ್ತಿನ ಅಪ್ರತಿಮ ಸುಳ್ಳುಗಾರ ಎಂಬ ಬಿರುದನ್ನು ಪಡೆಯಲಿಕ್ಕೆ ಕೆಲವು ಜನ ಸದಸ್ಯರು ಕಳುಹಿಸಿದ ಸುಳ್ಳುಗಳನ್ನು ಇಲ್ಲಿ ಕೊಟ್ಟಿದ್ದೇನೆ.

'ನಮ್ಮ ಊರಿನ ಒಂದು ಕೋಣವು ಒಬ್ಬ ರೈತನನ್ನು ಹಾದು ತಿವಿಯಿತು. ಅವನ ಪ್ರಾಣ ಹೋಗುವುದೇ ನಿಶ್ಚಯವೆಂದಾಯಿತು. ಒಂದು ಕುರಿಯ ಜೀರ್ಣಾಂಗಗಳನ್ನು ತೆಗೆದು [illegible]

ಅಂತರಾಷ್ಟ್ರೀಯ ಸುಳ್ಳರ ಸಭೆ

ಕೇಳುವವರ ಮನೋರಂಜನೆಗೆ, ಈ ಸಭೆಯ ಸದಸ್ಯರು ಹೇಳುವುದೆಲ್ಲಾ ಸುಳ್ಳು; ಇದೇ ಅವರ ಕೆಲಸ

ಅಮೇರಿಕವು ವಿಚಿತ್ರ ನಾಡು; ಅದ್ಭುತ ದೇಶ. ಅಲ್ಲಿಯ ಜನರು ಎಣಿಸುವುದು, ಆಡುವದು, ಮಾಡುವದು ಎಲ್ಲಾ ವಿಚಿತ್ರ, ಎಲ್ಲಾ ಅದ್ಭುತ. ಅಮೇರಿಕದಲ್ಲಿ ಕಳ್ಳರ ಸಭೆಗಳಿವೆ, ಸುಳ್ಳರ ಸಭೆಗಳಿವೆ, ಉಚ್ಚರ ಸಭೆಗಳಿವೆ, ಘಟಿಂಗರ ಸಭೆಗಳಿವೆ. ಯಾಕೆಂದರೆ ಸಂಘ ಸಂಸ್ಥೆ ಸಭೆ ಸಮಾಜಗಳ ಮೂಲಕ ಕಾರ್ಯಸಾಧನೆಮಾಡಿಕೊಳ್ಳುವಷ್ಟು ಸುಲಭವಾಗಿ ಮತ್ತಾವ ಉಪಾಯದಿಂದಲೂ ಕಾರ್ಯವನ್ನು ಸಾಧಿಸುವದು ಸುಲಭವಲ್ಲ— ಇದು ಅಲ್ಲಿಯ ಪ್ರತಿಯೊಂದು ಜಾತಿಮತ ವೃತ್ತಿ ಉದ್ಯೋಗದ ಜನರಿಗೆ ಚೆನ್ನಾಗಿ ಗೊತ್ತಿದೆ.

ತನ ಹೊಟ್ಟೆಯಲ್ಲಿ ಇಟ್ಟು ಹೊಲಿದರು. ಅವನು ಗುಣವಾಗುವ ಹಾಗಿಲ್ಲವೆಂದು ಡಾಕ್ಟರರು ಹೇಳಿದರ, ಕೊನೆಗೆ ಹಾಗೆಯೇ ಒಪರೇಶನ ಮಾಡಿದರು. ರೋಗಿಗೆ ಗುಣವಾಯಿತು. ಆದರೆ ಮುಂದೆ ಎರಡು ವರ್ಷಗಳಲ್ಲಿ ಆ ರೈತನಿಗೆ ಎರಡು ಕೊಂಬುಗಳು ಹುಟ್ಟಿದುವು. ನಾಲ್ಕು ವರ್ಷಗಳಲ್ಲಿ ಅವನ ಮೈ ಮೇಲೆ ಉಣ್ಣೆಯೂ ಬೆಳೆಯಲಾರಂಭವಾಯಿತು. ಈಗ ರೈತನು ವರ್ಷಕ್ಕೆ ೩೦ರಿಂದ ೪೦ ರಾತಲ ಉಣ್ಣೆಯನ್ನು ಕೊಡುತ್ತಾನೆ.

ಒಬ್ಬ ಮಹಿಳೆಯು ಹೇಳಿದ ಸುಳ್ಳು ಹೀಗಿದೆ — ನನ್ನ ಸ್ವರಲ್ಲಿ ಎಲ್ಲಿ ಇಲ್ಲದಷ್ಟು ಸೊಳ್ಳೆಗಳಿವೆ. ಒಂದು ಸೊಳ್ಳೆಯು ನನಗೆ ಹಗಲೂ ರಾತ್ರಿ ಪೀಡೆ ಕೊಟ್ಟಿತು. ಅದರ ಘೋಷೆಯಿಂದ ನಿದ್ರೆಯನ್ನು ಕಳೆಯುವುದೇ ಅಸಾಧ್ಯವಾಯಿತು. [illegible] ಅದು ಒಂದು ಕೋಳಿ ಮರಿಯನ್ನು ತಿಂದುಬಿಟ್ಟಿತು. ಆ ಮೇಲೆ ಒಂದು ಬೆಳೆದ ಕೋಳಿಯನ್ನೇ ತಿಂದಿತು. [illegible] ಅದು ನೂರು [illegible] ಗಳನ್ನು ತಿಂದಿತು. ಒಂದು ದನವನ್ನು ಇಡಿಯಾಗಿ ನುಂಗಿಬಿಟ್ಟಿತು. ಈಗ ಅದು ಸತ್ತುಹೋಗಿದೆ. [illegible] ಒಂದು ಕುದುರೆಯ ಮೇಲೆ [illegible] ಅದನ್ನು [illegible] ಕುದುರೆಯ ಹಿಂಗಾಲುಗಳಿಂದ ಒದೆಯಿತು. ಆದ್ದರಿಂದ ಸೊಳ್ಳೆಯ [illegible] ಅದು ಸತ್ತಿತು.

ಮೀನುಗಾರನ ಕಥೆ

ಒಂದು ದಿನ [illegible] ಹೊಳೆಯಲ್ಲಿ ಮೀನು ಹಿಡಿಯುತ್ತಿದ್ದೆ. [illegible] ಒಂದು ದೊಡ್ಡ ಮೀನು [illegible] ಅದು [illegible] ಗಾಳದ ಎಳೆಯನ್ನು [illegible] ಹಾಗೆ [illegible] ೫೦—೬೦ [illegible] ಅಷ್ಟರಲ್ಲಿ ಬೆಮ್ಮನೆ ಗಾಳವನ್ನು ಎಳೆದು ನಾನು ದಂಡೆಗೆ ಬೀಸಿದೆ. ಆ ಮೀನು ದೊಪ್ಪನೆ ಬಂದು ದಂಡೆಯಲ್ಲಿ ಬಿದ್ದಿತು. ಅದು ಗಾಳದ ಎಳೆಯನ್ನು ನುಂಗುತ್ತ ಇತ್ತು. ೪೦೦—೫೦೦ ಅಡಿ ಉದ್ದ ಎಳೆಯನ್ನು ನುಂಗಿರಬಹುದು. ನಾನು ಗ್ರಾಬರಿಯಿಂದ ಎಳೆಯನ್ನು ಸರಸರನೆ ಎಳೆದು ತೆಗೆದೆ. ಏನಾಯಿತು ಬಲ್ಲಿರಾ? ಮೀನಿನ ಬೆನ್ನು [illegible] ಗಾಳಕ್ಕೆ ಸಿಕ್ಕಿ ಬಂದಿತು. ಮೀನು [illegible] ನೀರಿನಲ್ಲಿ ಈಜಿ ಹೋಯಿತು.

ಕಾರ್ಯನಿರ್ವಾಹಕ ಸಮಿತಿ

ಅಮೇರಿಕದ ಸುಳ್ಳರ ಈ ಸಭೆಗೆ ಕಾರ್ಯನಿರ್ವಾಹಕ ಸಮಿತಿಯು ಇರುವುದು. ಸಭೆಯನ್ನು ಸ್ಥಾಪಿಸಿದ ಹಲ್ಲಟ್ಟರೇ ಅದರ ಅಧ್ಯಕ್ಷರಾಗಿರುವರು. [illegible] ದೇಶದ ಪ್ರತಿಷ್ಠಿತ ಗೃಹಸ್ಥರೂ ಮಹಿಳೆಯರೂ ಕಾರ್ಯನಿರ್ವಾಹಕ ಸಮಿತಿಯಲ್ಲಿ [illegible]. ಈ ಸಭೆಯ ಸದಸ್ಯರು ಸಭೆಗೆ ವರ್ಗಣಿ [illegible] ಕೊಡಬೇಕಾದುದಿಲ್ಲ. ಸಭೆಯ ಸದಸ್ಯನಾಗಿರುವುದಕ್ಕೆ ಕೊಡುವ [illegible] ಪತ್ರಗಳನ್ನು [illegible] ಆದರೆ ಸದಸ್ಯನಾದವನು ಕೇಳುವವರ ಮನೋರಂಜನೆಗಾಗಿ ವರ್ಷಕ್ಕೊಂದರಂತೆಯಾದರೂ ಒಂದು ದೊಡ್ಡ ಸುಳ್ಳನ್ನು ಹೇಳಿ [illegible]. ಇದೇ ಸದಸ್ಯರ [illegible] ವಾಗಿರುವುದು ಅಷ್ಟೆ! ನಮ್ಮ

ಬರುವ ವಾರ

ಜನ್ಮ ಪೈಗಳು

[illegible]

ಇಪ್ಪತ್ತು ವರ್ಷದ ಹಿಂದಿನ ಸಾಹಿತ್ಯಕ್ಕೆ [illegible]

[illegible]

[illegible] ಜನ್ಮ ಪೈಗಳು

[illegible]

[illegible]

[illegible]

ಮಹಾಭಾರತಕ್ಕೆ ಪೈಗಳು

ಶ್ರೀ ಕಾರಂತರ

ಹಳ್ಳಿಯ 10 ಸಮಸ್ಯೆಗಳು

[illegible]

ದೇಶದಲ್ಲಿ [illegible] ಈ ಸಭೆಯ ಸದಸ್ಯ [illegible] ಸುಳ್ಳು ಕಥೆಗಳನ್ನು ಕಲ್ಪಿಸಿ ಹೇಳುವುದರಲ್ಲಿ [illegible] ಅಮೇರಿಕನರಿಗೆ ಭಾರತೀಯರು [illegible] ವಾಗಿ ಈ ಸುಳ್ಳರ ಸಭೆಯ ಸದಸ್ಯರಾಗಬೇಕು. ಅಲ್ಲವಾದರೆ [illegible] ನಮ್ಮದೇ ಆದ [illegible] ಸಭೆಯನ್ನು ಮಾಡಿಕೊಳ್ಳಿ.

ನಮ್ಮದು ಮಾತ್ರ 'ಧರ್ಮಾಮಿ' ಅಲ್ಲ

ಸುಳ್ಳರ [illegible] ಈ ಲೇಖನದ [illegible] ಎಂದು [illegible] ಅಮೇರಿಕದಲ್ಲಿ ಅಂತರಾಷ್ಟ್ರೀಯ ಸುಳ್ಳರ ಸಭೆಯಿರುವುದರಿಂದ [illegible] ಪೂರ್ವದಲ್ಲಿ [illegible] ಸತ್ಯವಾಗಿರುವುದು. ಅದ್ಭುತ [illegible] ಪತ್ರಿಕೆಯಲ್ಲಿ [illegible] ಬರೆದ ಲೇಖನವನ್ನೇ [illegible] ಓದುಗರಿಗೆ [illegible] ಕೊಟ್ಟಿರುವೆನು.



ಶಾಲಿವಾಹನ ಶಕ ೧೮೬೦ನೇಯ ಬಹುಧಾನ್ಯ ಸಂವತ್ಸರದ ಫಾಲ್ಗುಣ ಶು॥ ೬ ಶನಿವಾರದಿಂದ ಫಾಲ್ಗುಣ ಶು॥ ೧೨ ಶುಕ್ರವಾರದ ವರೇಗಿನ ಪಂಚಾಂಗ. (೧೯೩೯ನೇಯ ಫೆಬ್ರು ಮಾಯಿ

25	ಶನಿ	೫	೩೦।	ಭರಣಿ	೩೭॥	೧೩	ಫೆ. 26 ಬುಧವಾರ ಫೆಬ್ರುವರಿ ಸಂಕ್ರಮಣ
26	ರವಿ	೬	೨೮	ಕೃತ್ತಿಕಾ	೩೬।	೧೪	
27	ಸೋಮ.	೭	೨೪	ರೋಹಿಣಿ	೩೪	೧೫	
28	ಕುಜ	೮	೧೯॥	ಮೃಗಶಿರಾ	೩೧	೧೬	
1	ಬುಧ	೯	೧೪॥	ಆರ್ದ್ರಾ	೨೭॥	೧೭	
2	ಗುರು	೧೦	೯।	ಪುನರ್ವಸು	೨೪	೧೮	
3	ಶುಕ್ರ	೧೧	೩॥ ಘ್ನುಹಳ	ಪುಷ್ಯಾ	೨೦	೧೯	

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 3½ per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars—**K. R. GURU,** *Managing Director*

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

[illegible]

ವಿಳಾಸ — ಸರ್ವಜೀವಿನೀ ಔಷಧಾಲಯ ಮು. ಪೋ. ಮಿರಜ, (S. M. C.

The Canara Industrial & Banking Syndicate Limited.

(Incorporated in British India)

(Estd: 1925)

HEAD OFFICE. 'MUKUND NIVAS' UDIPI, S INDIA

Member:

Reserve Bank of India, Bankers' Clearing House Bombay

Season Deposits Maturing Between

30th June and 15th July 1939 Are

Accepted @ 3½% p. a

Banking Business of Every Description Transacted on Sound lines.

Particulars on application to any of our 35 Branches

THE

Canara Banking Corporation Udipi, Ltd.,

(INCORPORATED IN BRITISH INDIA)

THE REGISTER OF MEMBERS & TRANSFER BOOKS

of the CORPORATION will remain closed from 16—2—'39 to 5-3-'39 both days inclusive

(By Order)

V R KAMATH,
Manager.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿ ಮಾಡಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅದ್ವಿತೀಯವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ ಶರೀರಶಕ್ತಿಯನ್ನುಂಟುಮಾಡಬಲ್ಲ ಡಬ್ಬಿಗಳಿಗೆ ಸಾಕ್ಷು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ ಎ. ಆಂಡ್ ಕೋ.,
ಆಯುರ್ವೇದಿಕ್ ಫಾರ್ಮಸಿ ಪೆರಿಡೆಪಿ
P O Peridepi (ನೆಲ್ಲೂರು ಡಿ.)

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲೆಂಟೈನ್

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಕರ್ಣಬ್ಯಾ ಬಜಾರ್ ಮಂಗಳೂರು.

ಡೋಂಗರೆ

ಇವರ

ಬಾಲಾಮೃತವು

ಮಕ್ಕಳ
ಹಳೆಯ ಮತ್ತು ಅಸಹ್ಯವಾದ ಕೆಮ್ಮು
ಮತ್ತು ಒಳಜ್ವರ ಇವುಗಳನ್ನು ಗುಣ
ಪಡಿಸಿ ಎಲ್ಲರಿಗೆ ಪುಷ್ಟಿಯನ್ನು
ಬಲವನ್ನು ಕೊಡುತ್ತದೆ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ ಅವ್ವಲ್ ಕರದ ಗುಡ್ಡು ಮುಡಿಗೆ	1—11—0	—
,, ದುಯಂ ,, ,,	1—10—0	1—10—0
,, ಅವ್ವಲ್ ಸುಗ್ಗಿ ,,	1—10—0	—
,, ದುಯಂ ,, ,,	1—9—0	—
ಅಕ್ಕಿ ಅವ್ವಲ್ ಗುಡ್ಡು ,,	4—2 0	4—2—0
,, ದುಯಂ ,,	3—14—0	3 14—0
,, ಅವ್ವಲ್ ಸುಗ್ಗಿ ,,	4—4—0	—
,, ದುಯಂ ,, ,,	3—8—0	3—8—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	45 0—0
,, ಸಿಪ್ಪೆ ಇದ್ದದು ,,	37—8—0	47—8—0
ಕೊಬ್ಬರಿ ಆಫೀಸು ಖಂಡಿಗೆ	45—0 0	—
,, ದಿಲ್‌ಪಸಂದ ,,	47—8 0	
ತೆಂಗಿನ ಎಣ್ಣೆ ಮಣಕ್ಕೆ	3—5—0	3—5—0
ಸಿಪ್ಪೆಯದ್ದ ಅಡಿಕೆ 1000ಕ್ಕೆ	3—4—0	3—12—0
ಗೇರುಬೀಜ ಮುಡಿಗೆ	3—12—0	3—12—0
ಕಬ್ಬಿನ ಬೆಲ್ಲ ಖಂಡಿಗೆ	42—8—0	60—0—0
ಒಳ್ಳೆಮೆಣಸು ಹಂಡ್ರೆಡ್ವೇಟಿಗೆ	15—8—0	16—8—0

ಕೊಟ್ಟಷ್ಟಂತೆ ಇನ್ನೂ ಬೇಕು

ಕೇಳದೇನೇ ಕೊಡಬೇಕು—ಅದು ಉತ್ತಮ ಪಕ್ಷ, ಕೇಳಿದಾಗ ಕೊಡಬೇಕು—ಅದು ಮಧ್ಯಮ ಪಕ್ಷ, ಕೇಳಿಯೂ ಕೊಡದಿರುವುದು ಕನಿಷ್ಠ ಪಕ್ಷ. ಇಂಗ್ಲಿಷರು ಈ ಮೂರು ಪಕ್ಷಗಳಿಗೂ ಸೇರಿದವರಲ್ಲ. ಅವರದು ನಾಲ್ಕನೆಯ ವಿಜಾತೀಯ ಪಕ್ಷ. ಮೂಗುದಾರ ಹಿಡಿದು ಬಗ್ಗಿ ನೋವು ಮಾಡಿದಾಗಲೇ ಹಟಗಾರಿ ಎತ್ತಿನಿಂದ ಕೆಲಸ ತೆಗೊಳ್ಳುವಂತೆ ಇಂಗ್ಲಿಷರನ್ನು ಬೈದು ಭಂಗಿಸಿ, ಸ್ವೇಚ್ಛೆನಡಿಸಿದಾಗಲೇ ಅವರಿಂದ ಏನನ್ನಾದರೂ ಪಡೆಯಬಹುದು, ಅನ್ಯಥಾ ಸಾಧ್ಯವಿಲ್ಲ. ಅದು ಅವರ ವ್ಯಕ್ತಿಗಳದಲ್ಲ, ಜಾತಿಯ ಸ್ವಭಾವ ಹಾಗೆ! ಕೇಳಿದಾಗ ಕೊಟ್ಟುಬಿಟ್ಟರೆ ಕೇಳಿದವನಿಗೂ ತೃಪ್ತಿ, ಕೊಟ್ಟವನಿಗೂ ತೃಪ್ತಿ, ಕೇಳಿದೊಡನೆ ಕೊಡದೆ ಬಲತ್ಕಾರದಿಂದ ತಗೊಳ್ಳ ಪಡಾವರೆ, ಅದರಿಂದ ಇಬ್ಬರಿಗೂ ಸುಖವಿಲ್ಲ. ಇಂಗ್ಲಾಂಡು ಐಯರ್ಲಾಂಡುಗಳ ಕಳೆದ ನೂರು ವರ್ಷಗಳ ಸಂಬಂಧವು ಇಂಥಾದ್ದಿರುವುದು. ಆದ್ದರಿಂದಲೇ ಐಯರ್ಲಾಂಡು ಕೇಳಿದ್ದನ್ನು ಇಂಗ್ಲಾಂಡು ಸಮಯ ಸಮಯದಲ್ಲಿ ಕೊಡಲಿಲ್ಲ. ತನ್ನ ಮತ್ತು ತನ್ನ ಸಾಮ್ರಾಜ್ಯದ ಭದ್ರತೆ ರಕ್ಷಣೆಗಳಿಗೆ ಐಯರ್ಲಾಂಡಿನ ಸ್ನೇಹವು ಅತ್ಯಗತ್ಯವೆಂದು ತೋರಿದಾಗಲೇ ಸ್ವರಾಜ್ಯದ ಸಣ್ಣ ಸಣ್ಣ ತುಂಡುಗಳನ್ನು ಅದರ ಬಾಯಿಗೆ ಹಾಕಿ ಐಯರ್ಲಾಂಡನ್ನು ಸುಮ್ಮಗಿರಿಸುವ ಮಹಾ ಪ್ರಯತ್ನವನ್ನು ಇಂಗ್ಲಾಂಡು ಮಾಡಿತು. ಆದರೆ ಹೇಗೆ ಹೇಗೆ ಕೊಡುತ್ತ ಬಂದಿತೋ ಹಾಗೆ ಹಾಗೆ ಐಯರ್ಲಾಂಡಿನ ಸ್ವಾತಂತ್ರ್ಯಾಭಿಲಾಷೆಯೂ ಹೆಚ್ಚುತ್ತ ಬಂದಿತು. ಅದು ತನಗೆ ಕೊಟ್ಟದ್ದು ಸಾಲದು ಇನ್ನೂ ಇನ್ನೂ ಬೇಕು, ಸಾಮ್ರಾಜ್ಯಾಂತರ್ಗತ ಸಾಂತ ಸ್ವರಾಜ್ಯವು ಬೇಡ, ಪೂರ್ಣ ಸ್ವಾತಂತ್ರ್ಯವು ಬೇಕು—ಅನ್ನತೊಡಗಿತು.

ಸೇನೆಯನ್ನು ಹಿಂತೆಗೆಯಿರಿ—ಇಲ್ಲವಾದರೆ ಜೋಕೆ!

ಐಯರ್ಲಾಂಡಿನ ಮೇಲೆ ಇಂಗ್ಲಾಂಡಿಗೆ ಈಗ ಯಾವ ಅಧಿಕಾರವೂ ಇರುವುದಿಲ್ಲ. ಇದ್ದ ಎಲ್ಲ ಅಧಿಕಾರಗಳನ್ನು ಅದು ತನ್ನ ಬಂದು ಜಾತಿಯ ದುರ್ಗುಣದ ಮೂಲಕ ಕಳಕೊಂಡಿದೆ. ಐಯರ್ಲಾಂಡು ಈಗ ತನಗೆ ಬೇಕಾದ ಶಾಸನ ಘಟನೆಯನ್ನು ತಯಾರಿಸಬಹುದು, ಕಾಯಿದೆ ಕಾನೂನುಗಳನ್ನು ಮಾಡಬಹುದು. ಸಾಮ್ರಾಜ್ಯವನ್ನು ಬಿಟ್ಟು ಹೊರಗೆ ಹೋಗಲೂ ಬಹುದು. ಅದಕ್ಕೆ ಪೂರ್ಣ ಸ್ವಾತಂತ್ರ್ಯವು ಪ್ರಾಪ್ತವಾಗಿದೆ. ಜನರದ್ದೇ ಸರಕಾರವು ಈಗ ಅದಕ್ಕೆ ಇದೆ. ಆದರೆ ಇಂಗ್ಲಾಂಡಿಗೆ ಐಯರ್ಲಾಂಡಿನ ಮೇಲೆ ಇದ್ದ ಪ್ರಾಚೀನ ಅಧಿಕಾರದ ಒಂದು ಅವಶೇಷವೆಂತೆ ಇಂಗ್ಲಾಂಡಿನ ಒಂದು ಚಿಕ್ಕ ಸೇನೆಯು ಐಯರ್ಲಾಂಡಿನಲ್ಲಿ ಈಗಲೂ ಇರುವುದು. ಆ ಸೇನೆಯಿರುವುದು ತನ್ನ ರಾಷ್ಟ್ರದ ಅಭಿಮಾನಕ್ಕೆ ಕುಂದು, ಗೌರವಕ್ಕೆ ಹಾನಿ, ತನ್ನ ರಾಷ್ಟ್ರದ ಮೇಲೆ ಅಲ್ಲಸಲ್ಲದ ಅತ್ಯಾಚಾರ ಅನಾಚಾರಗಳನ್ನು ನಡಿಸಿದ ಸೇನೆ ಅದು, ಅದು ಅಲ್ಲಿ ಇರಲಿಕ್ಕೇ ಕೂಡದು. ಅದನ್ನು ಕೂಡಲೇ ಹಿಂದಕ್ಕೆ ಕರೆಸಿರಿ ಎಂದು ಐಯರ್ಲಾಂಡು ಈಗ ಹೇಳತೊಡಗಿದೆ ಹೀಗೆಂದು ಹೇಳಿ ಐಯರ್ಲಾಂಡಿನ ಪ್ರಜಾಪ್ರಭುತ್ವದ ಅಥವಾ ರಿಪಬ್ಲಿಕನ್ ಸೇನೆಯು ಕಳೆದ ಜನವರಿ ತಿಂಗಳ ೧೫ನೆ ತಾರೀಕಿನ ದಿನ ಇಂಗ್ಲಾಂಡಿಗೆ ಒಂದು ಎಚ್ಚರಿಕೆಯ ಪತ್ರವನ್ನು ಕಳುಹಿಸಿ—ನಾಲ್ಕು ದಿನಗಳಲ್ಲಿ ಬ್ರಿಟಿಷ ಸೇನೆಯನ್ನು ಹಿಂದಕ್ಕೆ ಕರೆಸದಿದ್ದರೆ ಜೋಕೆ, ಪರಿಣಾಮವು ಬಹಳ ಕೆಟ್ಟದ್ದಾಗುವುದು, ಎಂದಿತು.

ಹಗ್ಗ ಸುಟ್ಟರೂ ತಿರುಪು ಹೋಗಬಾರದು

ಇಂಗ್ಲಾಂಡಿನ ಸ್ವಾಭಿಮಾನದ ಹಗ್ಗವು ಪೂರ್ಣ ಸುಟ್ಟುಹೋಗಿರುವುದು ಅದಕ್ಕೆ ತಿಳಿದಿದೆ. ಆದರೆ ಸುಟ್ಟ ಹಗ್ಗದ ತಿರುಪೂ ಹೋಗಿಬಿಟ್ಟರೆ ಮತ್ತೆ ಹಗ್ಗಕ್ಕೆ ಅಸ್ತಿತ್ವವೆಲ್ಲಿ? ಆದ್ದರಿಂದ ಸುಟ್ಟ ಹಗ್ಗದ ತಿರುಪಾದರೂ ಉಳಿದುಕೊಳ್ಳಲಿ ಎಂಬುದು ಇಂಗ್ಲಾಂಡಿನ ಪ್ರಯತ್ನ. ಅದಕ್ಕೋಸ್ಕರ ಐಯರ್ಲಾಂಡಿನ ಬೆದರಿಕೆಯ ಪತ್ರಕ್ಕೆ ಇಂಗ್ಲಾಂಡು ಬಗ್ಗಲಿಲ್ಲ. ಐಯರ್ಲಾಂ-

ಇಂಗ್ಲಾಂಡಿನಲ್ಲಿ ಇಂಗ್ಲಿಷರ ವಿರುದ್ಧ

ಭೀಕರ

ರೋಮಾಂಚಕಾರಿಗಳ ಒಳಸಂಚು

ಬೋಂಬುಗಳ ಸಿಡಿತ . . . .

★ ಭಯೋತ್ಪಾದಕ ಕಾಗದ ಪತ್ರ ★

ಪ್ರಾಣಾಪಹಾರದ ಬೆದರಿಕೆ

ಇಂಗ್ಲಾಂಡು ಎಲ್ಲರಿಗೆ ಮಾಡಿದಂತೆ ಐಯರ್ಲಾಂಡಿನ ಮೋಟು ಕೈಗೂ ಜೇನು ಸವರಿ ಅದರ ಸ್ವಾತಂತ್ರ್ಯಾಭಿಲಾಷೆಯನ್ನು ಪೂಸಿಸುವ ಪ್ರಯತ್ನ ಮಾಡಿತು. ವಿಭಾಗಿಸಿ ಆಳುವ ತಂತ್ರವನ್ನು ಅಲ್ಲಿಯೂ ಹೂಡಿ ನೋಡಿತು. ಆದರೆ ಎಲ್ಲ ಕಡೆಗಳಲ್ಲಿಯಕ್ಕಿಂತ ಅಲ್ಲಿ ಅದಕ್ಕೆ ಸಂಪೂರ್ಣ ಅಸಫಲತೆಯು ಪ್ರಾಪ್ತವಾಯಿತು; ಪೂರಾ ಪೂರಾ ಸೋತು ಹೋಯಿತು. ಇಂಗ್ಲಿಷರ ಮಂತ್ರ ತಂತ್ರ ರೂಪು ಬಣ್ಣಗಳ ಪೂರ್ಣ ಪರಿಚಯವಿರುವ ಐಯರ್ಲಾಂಡು ಅದು ಒಡ್ಡಿದ ಮಾಯಾಜಾಲದಲ್ಲಿ ಸಿಲುಕಿ ಜೀವನ್ಮೃತವಾಗಲಿಲ್ಲ. ಆದರ ಪರಿಣಾಮವೇ ಇದು—ಪೂರ್ಣ ಸ್ವಾತಂತ್ರ್ಯ ಬೇಕೆನ್ನುವ ಹಠ! ಅದಕ್ಕಾಗಿ ಬಹು ಭೀಕರ ಉಗ್ರ ಒಳಸಂಚು!!

ಡಿಗೇಬೇಡವಾದ ಸೇನೆಯನ್ನು ಅಲ್ಲಿ ಅದರ ಇಚ್ಛೆಗೆ ವಿರುದ್ಧವಾಗಿ ಇಡುವುದರಿಂದ ಪುರುಷಾರ್ಥ ಸಂಪಾದನೆ ಯಾವುದೂ ಆಗುವುದಿಲ್ಲ ಎಂದು ತಿಳಿದಿದ್ದರೂ, ಅಂಥ ಸೇನೆಯನ್ನು ಹಿಂದಕ್ಕೆ ಕರೆಸುವುದು ತನ್ನ ಸ್ವಾಭಿಮಾನಕ್ಕೆ ಕುಂದು ಎಂದು ಅದು ಎಣಿಸಿ ಸುಮ್ಮಗಾಗಿದೆ. ಐಯರ್ಲಾಂಡು ಹೇಳಲಿಲ್ಲ, ಆದರೆ ತಾವು ತಮ್ಮಷ್ಟಕ್ಕೆ ಮುಂದೆ ಆ ಸೇನೆಯನ್ನು ಹಿಂದಕ್ಕೆ ತಂದರೆ ಲೋಕವು ನಂಬಬೇಕಾದ ಇಂಗ್ಲಾಂಡಿನ ಆಶೆಯಾಗಿದ್ದಿರಬಹುದು. ಪರಂತು ಅಷ್ಟು ಸಮಯ ಪನ್ನು ಕಾಯಲಿಕ್ಕೆ ಸಿದ್ಧವಿಲ್ಲದ ಐಯರ್ಲಾಂಡು ಈಗ ಇಂಗ್ಲಿಷರ ವಿರುದ್ಧವಾಗಿ ಬಹು ಭಯಂಕರ ಆಂದೋಲನವನ್ನು ಆರಂಭಿಸಿರುವುದು. ಎಚ್ಚರಿಕೆಯ ಪತ್ರದಲ್ಲಿ ಇಂಗ್ಲಾಂಡಿಗೆ ಕೊಟ್ಟ ಸಮಯವು ಕಳೆದೊಡನೆಯೇ ಐಯರ್ಲಾಂಡಿನ ಸಂತಾನರು ಇಂಗ್ಲಾಂಡನ್ನು ಪ್ರವೇಶಿಸಿ ಬೋಂಬುಗಳ ಚೆಲ್ಲಾಟವನ್ನು ಆರಂಭಿಸಿರುವರು.

ಪೋಲೀಸರೇ ದಿಗಿಲುಗೊಂಡಿದ್ದಾರೆ

ಸ್ಫೋಟಕ ವಸ್ತುಗಳ ಬಸೆಯಿಂದ ಇಂಗ್ಲಾಂಡಿನ ಸಾಮಾನ್ಯ ಜನತೆಯು ಮಾತ್ರವಲ್ಲ ಸ್ವತಃ ಪೋಲೀಸರ ಕೂಡ ದಿಗಿಲುಗೊಂಡಿರುವರೆಂದು ಪತ್ರಿಕೆಗಳಿಂದ ತಿಳಿದು ಬರುತ್ತದೆ. ಜನವರಿ ತಾ ೧೬ರಿಂದ ಇಂಗ್ಲಾಂಡಿನ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ಬೋಂಬುಗಳ ಸ್ಫೋಟನವಾಗಿರುವುದು. ಗುಪ್ತ ಪೋಲೀಸರು ಪ್ರಯತ್ನ ಮಾಡಿದಷ್ಟು ಐಯರ್ಲಾಂಡಿನ ರಿಪಬ್ಲಿಕನ ಸೇನೆಯು ಒಂದು ಮಹಾ ಭಯಂಕರ ಪಿತೂರಿ ನಡೆಸಿ ತನ್ನ ಕಾರ್ಯವನ್ನು ಸಾಧಿಸಲು ಹೊರಟಿದ್ದ ಸಂಗತಿಯು ಸ್ಪಷ್ಟವಾಗುತ್ತದೆ. ಅನೇಕ ಮಂದಿಯನ್ನು ಸಂದೇಹದ ಮೇಲೆ ಹಿಡಿದು ವಿಚಾರಣೆಗೆ ಗುರಿಮಾಡಿರುವರು. ಮುಂದೊಂದು ಅನುಕೂಲ ಸಂದರ್ಭವು ದೊರೆತಾಗ, ಒಂದೇ ದಿನ ಒಂದೇ ಸಮಯ ಇಂಗ್ಲಾಂಡಿನ ಎಲ್ಲಾ ಸಾರ್ವಜನಿಕ ಪ್ರದೇಶಗಳನ್ನು ಕೆಡವಿ ಹಾಕಿ, ಪ್ರಮುಖ ವ್ಯಕ್ತಿಗಳ ಪ್ರಾಣಹರಣ ಮಾಡಬೇಕೆಂಬ ಉದ್ದೇಶದಿಂದ ರಿಪಬ್ಲಿಕನ ಸೇನೆಯು ಇರುವ ಬುದ್ಧಿಕತೆ ಬಯಲಿಗೆ ಬಂದಿರುವುದು. 'ನಮಗೆ ನೀವು ಬೇಕಾದ ಶಿಕ್ಷೆ ಕೊಡಬಹುದು, ನಮ್ಮನ್ನು ನೀವು ಫಾಶಿ ಮಾಡಬಹುದು. ಆದರೆ ನಮ್ಮ ಕಾರ್ಯಸಾಧನೆಯು ಆಗಿಯೇ ಆಗುವುದು' ಎಂದು ವಿಚಾರಣೆಗೊಳಪಟ್ಟ ಆಪಾದಿತರು ಹೇಳಿದ್ದು. ಇದರಿಂದ ಹತ್ಯಾಕಾರಿಗಳ ಪಕ್ಕಹುಡುಕಲಿಕ್ಕೆ ಗುಪ್ತ ಪೋಲೀಸರು ಕೊಡಹಟ್ಟಿಲೆ ಬಿದ್ದರು. ಸರ್ವಸ್ವ ಸಂಪಾದಿಸಿದ್ದಾರೆ ಆದರೆ ಈ ಸಮಸ್ಯೆಯನ್ನು ಬಿಡಿಸುವುದು ಅವರಿಗೂ ಸಾಧ್ಯವಾಗಿಲ್ಲ.

ಹಗಲು ರಾತ್ರಿ ಗುಪ್ತ ಕಾವಲು

ಸಿದ್ಧರ ಅರಮನೆ ಬಕ್ಕಿಂಗ್ಹಾಮ ಅರಮನೆ, ಸ್ಕಾಟ ಲ್ಯಾಂಡ ಯಾರ್ಡ, ಪಾರ್ಲಿಮೆಂಟ ಸಭಾ ಭವನ ಮೊದಲಾದವುಗಳನ್ನು ಬಾಂಬು ಹಾಕಿ ಕೆಡವುವ ಮತ್ತು ಇಂಗ್ಲಾಂಡಿನ ಪ್ರಮುಖ ವ್ಯಕ್ತಿಗಳನ್ನೂ ಸರಕಾರದ ಅಧಿಕಾರಿಗಳನ್ನೂ ಗುಂಡಿಟ್ಟು ಕೊಂದುಹಾಕುವ ಸಂಚುಗಾರರ ಕಾಗದ ಪತ್ರಗಳು ದೊರಕಿರುವುದರಿಂದ ಈಗ ಆ ಕಟ್ಟಡಗಳನ್ನು ಪೋಲೀಸ ವರ್ಗದವರು ಹಗಲೂ ರಾತ್ರಿ ಕಾಯುತ್ತಿರುವರು. ವ್ಯಕ್ತಿ ಅಧಿಕಾರಿಗಳ ಪ್ರಾಣರಕ್ಷಣೆಗೆ ಚತುರ ಅಂಗರಕ್ಷಕರು ತುಂಬಾ ದುಡಿಯುತ್ತಿರುವರು. ಮತ್ತೆ ಶಸ್ತ್ರಾಸ್ತ್ರಗಳನ್ನು ಪತ್ತೆ ಹಚ್ಚುವ ಮಹಾ ಪ್ರಯತ್ನದಲ್ಲಿರುವರು. ಆದರೆ ಐಯರ್ಲಾಂಡು ಇದನ್ನೆಲ್ಲ ತಿಳಿಯದೆ ಇದೆಯೇ?

ಇಂಗ್ಲಾಂಡಿನ ಬಹು ಕನಿಕರ ಸ್ಥಿತಿ

ಇಂಗ್ಲಾಂಡಿನ ಸ್ಥಿತಿಯು ಈಗ ಬಹಳ ಕರುಣಾಸ್ಪದವಾಗಿರುವುದು. ಎಲ್ಲೆಲ್ಲಿಂದ ಅದರ ಮೇಲೆ ಆಕ್ರಮಣಗಳಾರಂಭಿಸಿರುವುವು. ಆಸ್ತಿತ್ವದ ದೀಪವು ವ್ಯವಹಾರಗಳಲ್ಲಿ ತಮ್ಮ ಸ್ವಾರ್ಥವನ್ನು ಬಿಟ್ಟು ಅದರ ಸಹಾಯಕ್ಕೆ ಬರುವವರು ಒಬ್ಬರೂ ಇರುವುದಿಲ್ಲ. ಹಲವು ಬಗೆಗಳು ಬಿದ್ದುಹೋದ ಮೇಲೆ ಬ್ರಿಟಿಷ ಸಾಮ್ರಾಜ್ಯ ಈಗ ಎದ್ದು ನಿಲ್ಲಲಿಕ್ಕೂ ಅಸಮರ್ಥವಾಗಿದೆ. ಒಮ್ಮೆ ಕಡೆಯಿಂದ ಸರ್ವಾಧಿಕಾರಿಗಳು ಅದರ ಮೇಲೆ ಬಂದುಗುಟ್ಟಿ ಅದನ್ನು ಸಂಗ್ರಾಮಕ್ಕೆ ಕರೆಯುತ್ತಿರುವರು. ಇನ್ನೊಂದು ಕಡೆಯಿಂದ ಅಧೀನ ರಾಜ್ಯಗಳೆಲ್ಲ ತಾವು ಸ್ವತಂತ್ರವಾಗಿ ನಡೆಸುತ್ತೇವೆ ಎನ್ನುತ್ತಿರುವುವು. ಈ ಒಳಸಂಚುಗಳ ಆರಂಭ. ಈ ಸಂಕಷ್ಟದಿಂದ ಪಾರಾಗುವುದು ಪ್ರಾಣವೇ ಹೋಗುವಂತೆ ತೋರುತ್ತದೆ. ಆದರೆ ಅದರ ಅಭಿಮಾನ ಮಾತ್ರ ಇಷ್ಟು ದಿನದಿಂದಲೂ ಕೇಳಿಸುವುದು. ಪ್ರಾಣಸಂಕಟವು ಅಸಹನೀಯವಾದಾಗ ಸಿಂಹವು ಕೊನೆಯ ಅಭಿಮಾನವೂ ಹೀಗೆಯೇ ಇರುತ್ತದೆ.

ಅಬಿಸೀನಿಯದಲ್ಲಿ ಕಾದಾಟ ಮುಗಿದಿಲ್ಲ

ಅಬೀಸೀನಿಯದ ಅನೇಕ ಭಾಗಗಳಲ್ಲಿ ಇಥಿಯೋಪಿಯನ್ ಸೇನಾವಿಭಾಗಗಳನ್ನು ಇಟಾಲಿಯನರು ಕಳಕಿದಾರರು. ಅಲ್ಲಿ ಇನ್ನೂ ಕಾದಾಟ ನಡೆಯುತ್ತಿದೆ ಎಂದು ತಿಳಿದಿದೆ. ಸೋತುಹೋದ ಕಾರಣ, ರಾಜಧಾನಿಯಿಂದ ಇನ್ನೂ ಸೇನೆ ತರಿಸಲು ಒದೆದುಕೊಂಡಿರುವರು.

ಇರಿಸಿದ್ದ ಇದರ ಸೈನ್ಯ ಅಬಿಸೀನಿಯದ ನಾಯಕನು ಇಟಾಲಿಯನರ ವಿರುದ್ಧ ಹೋರಾಡುತ್ತಿದ್ದ ಒಬ್ಬ ವೀರನನ್ನು ಬಂಧಿಸಿದ್ದರು. ಕಸರಿದ ಕ್ಲಿಷ್ಟನ ಇಟಾಲಿಯನ್ ಅಲ್ಲಿಗೆ ಬಂದ ವಿಮಾನಗಳ ಸಿಡಿಗುಂಡು ಚೆಲ್ಲಿದವು. ಗುಂಡು ಹಾರಿ ಮಿಗಿಲಾಗಿ ಗುಂಡುಗಳ ಸುರಿಮಳೆಗೈದವು. ಸರಿ ಸರಿ ಕಾಡುಗಳಲ್ಲಿ ಸಂಪೂರ್ಣವಾಗಿ ಅಡಗಿ ನಿಂತು ಸಂಗ್ರಾಮವನ್ನು ಹಲವು ವರ್ಷಗಳ ವರೆಗೂ ನಡೆಸುವರು. ಒದೆದು ನೋಡುವ ಇಟಾಲಿಯನರ ಗುಂಡಿಗೆ ಸಿಕ್ಕಿದರು.

ಶ್ರೇಷ್ಠ ತರದ

ದೃಷ್ಟಿ ಚಕ್ರಗಳಿಗೆ

ರಬ್ಬರು ಮೊಹರುಗಳಿಗೆ

ನಾಯಕ್ಸ್ ಸ್ಟೋರ್ಸ್

ರಥಬೀದಿ, ಮಂಗಳೂರು.

ಲೋಧ್ರ

ಗರ್ಭಾಶಯ ರೋಗನಿವಾರಿಣಿ

ಹೆಂಗಸರಿಗೊಂದು ವರದಾನ

ಯಾವ ವಯಸ್ಸಿನ ಸ್ತ್ರೀಯರಿಗೂ ಆಗುವ ಮುಟ್ಟಿನ ನೋವು, ಸಮಯಕ್ಕೆ ಸರಿಯಾಗಿ ಮುಟ್ಟಾಗದಿರುವುದು, ಗರ್ಭಸ್ರಾವ, ಬಂಜೆತನ, ಸ್ವೇತಪ್ರದರ, ಮುಂತಾದ ಇತರ ಹೆಂಗಸರ ಎಲ್ಲಾ ರೋಗಗಳು ಈ ಔಷಧಿಯಿಂದ ಗುಣವಾಗುತ್ತದೆ

ಲೋಧ್ರ

ಎಲ್ಲಾ ಸ್ಥಳದ ವ್ಯಾಪಾರಿಗಳಲ್ಲಿ ದೊರೆಯುತ್ತದೆ
ಬಾಟ್ಲಿ 1 ಕ್ಕೆ ರೂ 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್

ರೋಯಪೆಟ್ಟ, ಮದ್ರಾಸು

ಸ್ಟಾಕಿಸ್ಟರು....

ಪೋಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು.

ಆಯುರ್ವೇದೀಯ ಡಾಕ್ಟರರು

ಬಳ್ಳಾರಿಯಲ್ಲಿ ಆಯುರ್ವೇದೀಯ ವೈದ್ಯರು ಡಾ॥ ಪಿ. ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಸೇರಿ, ಸರಕಾರವು ಮದ್ಯಪಾನ ನಿವಾರಣಾ ಕಾನೂನಿನ ಹಾಗೆ, ಆಸವ ಅರಿಷ್ಟಗಳ ಮೇಲೆ ಬಹಿಷ್ಕಾರ ದೃಷ್ಟಿಯಿಂದ ನೋಡುವುದಾದರೆ, ಸತ್ಯಾಗ್ರಹವನ್ನೆ ಆಚರಿಸುವರು ಎಂದು ನಿರ್ಣಯವಾಗಿದೆ.

ಕೊಂಗ್ರೆಸು ನಮಗೆ ವಿಶ್ವಾಸಘಾತಕ ಮಾಡಿದೆ ಎಂದೊಬ್ಬರು (ಪಂಡಿತ ಶಿವಶರ್ಮಾ) ನುಡಿದು, ಸ್ವದೇಶೀ ವೈದ್ಯವನ್ನು ಕೊಂಗ್ರೆಸು ಪ್ರೋತ್ಸಾಹಿಸಿಲ್ಲವೆಂದು ಸಾರಿದರು.

ಇನ್ನು ಅರುವತ್ತು ದಿನಗಳೊಳಗೆ ನಿಯಮಗಳನ್ನು ತಿದ್ದುಪಡಿ ಮಾಡಿಲ್ಲವಾದರೆ, ಸತ್ಯಾಗ್ರಹವೇ ಗತಿ ಎಂದು ಡಾ॥ ಲಕ್ಷ್ಮೀಪತಿಗಳೆಂದರು. ಇವರಿಗೂ ಮುಖ್ಯಮಂತ್ರಿಗಳಿಗೂ ನಡೆದ ಪತ್ರವ್ಯವಹಾರವನ್ನು ಸಭೆಯಲ್ಲಿ ಓದಲಾಯಿತು.

ಡಾ॥ ಮುಖರ್ಜಿಯವರು,—ಕೊಂಗ್ರೆಸು ಸರಕಾರವು ವೈದ್ಯಕೀಯ ಚಿಕಿತ್ಸೆಯನ್ನು ಒಂದೊಂದು ಯುಗಕ್ಕೆ ಹಿಂತಳ್ಳಿದರು. ಶಾಸನೋಲ್ಲಂಘನವೇ ಗತಿ ಎಂದರು.

ಸ್ವಾಮಿ ತಪಸೀಬಾಬಾರವರು ಮದ್ರಾಸು ಮುಂಬಾಯಿ ಸರಕಾರಗಳ ವರ್ತನೆ ಖಂಡಿಸಿದರು.

ಸಹಜವೂ ಆರೋಗ್ಯಬಾಧಕವಲ್ಲದವೂ ಆದ ಅರಿಷ್ಟ ಆಸವಗಳನ್ನು ಮದ್ಯಗಳೆಂದರೆ ಸತ್ಯಾಗ್ರಹವೇ ಗತಿ ಎಂದು ಡಾ॥ ಅಚ್ಚೈಯ್ಯರೆಂದರು.

ಡಾ॥ ಟಿ ಎಮ್ ಶಾಸ್ತ್ರಿ (ಇಂಡಿಯನ್ ಮೆಡಿಕಲ್ ಲೀಗ್ ಸೆಕ್ರೆಟರಿ) ಈ ನಿರ್ಣಯವನ್ನು ಸಮರ್ಥಿಸಿದರು.

ಸರಕಾರದ ಮದ್ಯಪಾನ ನಿವಾರಣಾ ಕಾನೂನನ್ನು, ಇದೊಂದು ವಿಷಯವಲ್ಲದೆ, ಇನ್ನೆಲ್ಲ ವಿಷಯಗಳಲ್ಲೂ ಸಮರ್ಥಿಸಿ ಒಂದು ನಿರ್ಣಯವಾಯಿತು.

ಇಬ್ಬರು ಎಮ್ ಎಲ್. ಎಗಳ ಮೇಲೆ ಮೊಕದ್ದಮೆಗಳು.

ಪಂಜಾಬಿನ ಸರದಾರ ಚನನ ಸಿಂಘ ಎಂ ಎಲ್ ಎಯವರು ಲಾಹೋರಿನ ಅಕಾಲೀ ಜಥಾದ ನಾಯಕರಾಗಿ, ಸಿಕ್ಖ ಗುರುದ್ವಾರ ಪ್ರಬಂಧಕ ಕಮಿಟಿಯ ಮೆಂಬರರಾಗಿ ರೂ ೧೦೦೭೬ರನ್ನು ೧೯೩೬ರಲ್ಲಿ ವಂತಿಗೆ ಕೂಡಿಸಿದರೂ ಆ ಹಣವನ್ನು ಗುರುದ್ವಾರ ಕಮಿಟಿಯಲ್ಲಾಗಲಿ ಲೇವಣಿಪತ್ತಿ ಇಡದೆ, ಯಾವುದೋ ಒಂದು ಕೊಲೆ ಮೊಕದ್ದಮೆಯಲ್ಲಿ ವಿನಿಯೋಗಿಸಿದರೆಂದ ವಿಶ್ವಾಸಘಾತುಕದ ಮೊಕದ್ದಮೆಗೆ ಒಳಗಾಗಿದ್ದಾರೆ. ಸಿಂಧದ ಎಮ್ ಎಲ್ ಎಗಳಾಗಿರುವ ಶ್ರೀ॥ ನಾರಾಯಣದಾಸ ಬೇಚಾರ ಎಂಬವರು ಡಾಲ್ಮಿಯಾ ಸಿಮೆಂಟ ಕಾರಖಾನೆಯನ್ನು ಸಂದರ್ಶಿಸಿ ಅಲ್ಲಿಯ ಕೆಲಸಗಾರರಲ್ಲಿ ಅತೃಪ್ತಿ ಹುಟ್ಟಿಸಿ, ಕಾರಖಾನೆಯಲ್ಲಿ ಮುಷ್ಕರಾದಿಗಳು ಆಗುವ ಸಂಭವ ಉಂಟುಮಾಡಿರುವರೆಂದು, ಕಾರಖಾನೆಯವರ ಫಿರ್ಯಾದು. ಆದರೆ, ಇವರು ಮಜೂರ ಮುಖಂಡರಾಗಿ, ಕೆಲಸಗಾರರು ಕರೆದುದಕ್ಕೆ ಮಾತ್ರ ಅತ್ತ ಹೋದವರೆಂದೂ ಯಾವುದೊಂದು ಕೆಟ್ಟಾಟದ ವಿವರ್ತ ಮಾತ್ರ ಮಾಡಿದ್ದರೆಂದೂ ಅವರ ಹೇಳಿಕೆ. ಅವರ ಕಾರಖಾನೆಯೊಳಗೆ ಬಾರದಂತೆ ತಡೆಗಟ್ಟಬೇಕಾಗಿ ಕಂಪನಿಯು ಅಪೇಕ್ಷಿಸಿರುವುದೆ. ಎರಡೂ ಮೊಕದ್ದಮೆಗಳ ತೀರ್ಮಾನ ಹೊರಬಿದ್ದಿಲ್ಲ.

ಶ್ರೀ॥ ಸುಭಾಷರು

ಇನ್‌ಫ್ಲುಯೆಂಜಾ, ಕುಬ್ಬಸ, ಕಾವಿನ ಜ್ವರಗಳಿಂದ ನಾಲ್ಕು ದಿನಗಳಿಂದಲೂ ಹಾಸಿಗೆ ಹಿಡಿದಿರುವರು ಎಂದು (ತಾ ೧೮) ಕಲ್ಕತ್ತಾ ವಾರ್ತೆ. ಅವರ ಜ್ವರವು ಇಳಿಯುತ್ತಲೇ ಇದೆ, ನೋವೂ ಕರಿನಿಸಿದೆ. ಅತಿ ಬಲಹೀನರಾಗಿ ಮಲಗಿಯೇ ಇರಬೇಕಾಗಿದೆ. ಯಾವ ಕಾರ್ಯವನ್ನೂ ಮಾಡಬರುತ್ತಿಲ್ಲ. ಅವರನ್ನು ಬಾಧಿಸದಿರಿ ಎಂದು ಅವರ ಡಾಕ್ಟರರು ತಿಳಿಸಿರುವರು.

ಇತ್ತ ವಾರ್ಧಾದಲ್ಲಿ ಒಬ್ಬೊಬ್ಬರಾಗಿ 'ಬಲ' ಪಕ್ಷದ ಮುಖಂಡರು ಬಂದು ಸೇರುತ್ತಿರುವರು.



ಹಳ್ಳಿಯ ಹತ್ತು ಸಮಸ್ತರು

೫ನೇ ಪುಟದಿಂದ ಮುಂದುವರಿದುದು

ನನಗೇನ—ಹಾಗೇ ಹೋಗಿ ಧನಿಯರಿಗೆ ಹೇಳಿದೆ. ಮೂರು ದಿವಸದೊಳಗೆ ನಮ್ಮಲ್ಲಿಗೆ, ಅಂದರೆ ಭಂಡಸಾಲೆಗೆ ಕುಂದಾಪುರ ಸರ್ಕಲ ಇನ್ಸ್‌ಪೆಕ್ಟರು ಆ ದಾವೆದಾರರ ಸವಾರಿ ಬಂದಿತ್ತು. ಅವರಿಗೂ ಧನಿಯರಿಗೂ ಒಂದು ರಾಶಿ ಗಜಗುಜು ಗುಸುಗುಸು ನಡೆಯಿತು. ಥಟ್ಟನೆ ಕಿಸೆಯಿಂದ ಧನಿಯರು ೧೦ ನೋಟು ನೂರರದ್ದು ಮಹಾರಾಯರೇ ಎಸೆದರು. ನಾಯಿಯಲ್ಲವೇ ಎಷ್ಟು ತೆರೆದು ನಕ್ಕರು. ಇನ್ಸ್‌ಪೆಕ್ಟರು ರೂಪಾಯಿ ಕಿಸೆಗೆ ತುರುಕಿಕೊಂಡು ನಡೆದೇ ಬಿಟ್ಟರು.

'ಅಲ್ಲಿಂದ ಒಂದು ಹದಿನೈದು ದಿವಸ ಕಳೆಯಲಿಲ್ಲ ಸುಶೀಲಾ ರಿಜಿಸ್ಟ್ರಿಗೆ ದಾಖಲು. ಮಾಮನ ರಿಜಿಸ್ಟ್ರಿಗೆ ಅಂದೆ ಶ್ಯಾಮಣ್ಣಯ್ಯನ ಮರ್ಯಾದೆಯಾಯಿತು, ಮಣ್ಣಾಯಿತು, ಮಸಣವಾಯಿತು. ಸತ್ತವಳು ಸತ್ತುಹೋದಳು. ಈ ಬ್ರಾಹ್ಮಣ ನಾಲ್ಕು ವರ್ಷ ಸುಶೀಲಾ ಸುಶೀಲಾ ಎಂದು ರಾಗಮಾಡಿ ನರಳಿ ಸತ್ತಿತು. ಅವಳು ಅಷ್ಟು ಬೇಗ ಸಾಯಲಿಕ್ಕಾಗಿ ಶ್ಯಾಮಣ್ಣಯ್ಯನ ಮಕ್ಕಳಿಗೆ ನಾಲ್ಕು ಮುಡಿ ಅಕ್ಕಿಯಿಂದರೂ ಉಳಿಯಿತು. ಅವಳ ಇದ್ದರೆ—ಅವಳ ಪತಿ ಅಕ್ಕಿಯೇ ಗತಿ.

'ಮತ್ತೆಲ್ಲಾ ಸ ... ಆದೊಂದ ...ವಿನಲ್ಲಿ ನಮ್ಮ ಧನೀರ ಮನಸ್ಸು ಸ್ವಲ್ಪ ಹಾಗಾಗೆ ಆದುದರ ಪ್ರಾಯ ನೋಡಿ. ವಯಸ್ಸು ಹೋದರೆ ತನ್ನಂತೆ ಹದಕ್ಕೆ ಬರುತ್ತೆ ಬುದ್ಧಿ. ಅವರಂಥ ದುಡ್ಡಪಾಯು ಸೇರಿದರೆ ಮೇಲಿಯವರು ಇದಕ್ಕೆ ಹೈಲುಗುದ್ದರ ಹಾಗೆಂದ್ರೆ ಇವರೇ ಬೇಕ ಅವರ ತಿರುಗೆ. ಒಂದು ಲೆಕ್ಕ ಇದೆ. ಈ ಊರಿನಲ್ಲಿ ಇದ್ದ ಮನೆಯೊಂದು ಸಿಗದಿ ಕುಂಟಿ ಸುಮ್ಮನೆ ಕಂಡಲ್ಲಿ ಹೋಗುವವರಲ್ಲ. ಇನ್ನು ಹಾಗೇ ಅವರು ಇರಿಸಿಕೊಂಡ ಜನ, ಎಲ್ಲಾದರೂ ಬೇರೆಯವರನ್ನು ಕರೆಯಿಸಿದಳು ಎಂದು ತಿಳಿದರೆ ಕಣ್ಣೆರಡು ಬಿಟ್ಟು ಹೂಳಿಸಿಯಾರು.

ಇತ್ತಲಾಗಿ ಅವರ ಕೈನಾತಿ ಬಚ್ಚ, ಅತ್ತಲಾಗಿ ಅವರ ಗುರು ದ್ರೋಣಾಚಾರ್ಯರಂಥ ಸೀತ್ಯೈತಾಳರು. ಇವರಿಬ್ಬರದೂ ಸರ್ಟಿಫಿಕೇಟು ಇದೆಯೆಂದ ಮೇಲೆ ನಮ್ಮೂರಿನ ಮುಟ್ಟಗಾರರೂ ನಾಗಯ್ಯ ಒಬ್ಬ ತುಂಡರಸ ಎಂಬುದರಲ್ಲಿ ಸಂಶಯವೇನು?

ನಾಗಯ್ಯನವರ ಠೀವಿ ನೋಡಬೇಕಾಗಿದ್ದರೆ ಆ ಕಳೆದ ಚುನಾವಣೆಯಲ್ಲಿ ನೋಡಬೇಕಿತ್ತು. ಅವರು ಕಾಂಗ್ರೆಸ ಪಾರ್ಟಿ, ಸೂರಪ್ಪ ಸೆಟ್ಟರು 'ಜಸ್ಟೀಸ' ಪಾರ್ಟಿ. ಚಿಕ್ಕ ಒಡೆಯರಿಗೆ ತಿಳಿಯದಂತೆ ಹೆಗ್ಗಡೆಯರಿಗೆ ದೊಡ್ಡ ಒಡೆಯರಿಗೆ ಮಾತ ಕೊಟ್ಟರು. ಅವರು ಮಾತು ಕೊಟ್ಟದ್ದು ತಿಳಿಯದೆ ಇವರು ಸೆಟ್ಟರಿಗೆ ಮಾತು ಕೊಟ್ಟರು. ಇಲೆಕ್ಷನ್ ಮುಗಿಯುವ ತನಕ ನಾಗಯ್ಯನವರ ಕಾಲು ನಿಲ್ಲಲಿಲ್ಲ. ಭಂಡಸಾಲೆಯಲ್ಲೇ ಬಿಡಾರ. ಆ ಎರಡು ತಿಂಗಳ ಕಾಲ ಒತ್ತಿ ತಿರುಗಾಡಿ ಮುಚ್ಚಿಕಾಡಿದಷ್ಟು ಗದ್ದೆ ಕುಡಿದು ಎಸೆದಷ್ಟು ಸೀಯಾಳ ನಮ್ಮಂಥವರಿಂದ ನಾಲ್ಕು ವರ್ಷಕ್ಕೆ ಮುಗಿಸಲಿಕ್ಕೆ ಬರಲಿಕ್ಕಿಲ್ಲ. ಸೂರಪ್ಪ ಸೆಟ್ಟರು ದುನಿಯ ಯಜಮಾನರಾದರೇನು—ಜಸ್ಟಿಸಿಗೆ ನಾಲ್ಕು ಓಟು ಸಿಕ್ಕಿರಬಹುದು ಅದು ಯಜಮಾನರದ್ದು. ಮನೆಯವರದ್ದು ಒಕ್ಕಲು ಮಕ್ಕಳು, ಧನಿಯರಿಗೆ ಬೇಕಾದವರು, ಹಂಗಿಗರು ಸಾಲಿಗರು ಅರಸಿನ ಪೆಟ್ಟಿಗೆಯಲ್ಲಿ ಓಟು ಹಾಕಿದುದು. ನಾಗಯ್ಯ ಒಡೆಯರಲ್ಲದಿದ್ದರೆ ಈ ದಸ್ಕಕ್ಕೆ ಸೆಟ್ಟರ ಕಾಂಗ್ರೆಸ್ಸಿಗೆ ಜಯ ಆಗುತ್ತಿರಲಿಲ್ಲ ಎಂದು ಬಚ್ಚ ಪ್ರಮಾಣ ಮಾಡಿ ಹೇಳುತ್ತಾನೆ.

'ನಾಗಯ್ಯ ಧನಿಯರ ಹೆಸರು ಮಹಾತ್ಮಾ ಗಾಂಧಿಯವರಿಗೆ ಮುಟ್ಟಲಿಕ್ಕೆ ಅಡ್ಡಿಯಿಲ್ಲ' ಎಂದು ಬಚ್ಚನ ಖಾತ್ರಿಯಾದ ನಂಬಿಕೆ.

ಬೇಸಿಗೆಕಾಲಕ್ಕೆ ಬಿಸಿ ಬಿಸಿ ಟೀ

ಬಿಸಿಲಿನ ಬೇಗೆಯು ಅತಿಯಾಗಿರುವಾಗ ಟೀಯು ಪೂರ್ಣವಾಗಿ ತಂಪನ್ನುಂಟುಮಾಡುವುದು. ಟೀಯು ಶಾರೀರಿಕ ಮತ್ತು ಮಾನಸಿಕ ಆಯಾಸವನ್ನು ಪರಿಹರಿಸಿ ಉತ್ಸಾಹವನ್ನುಂಟುಮಾಡುವುದು. ದಿನವೆಲ್ಲಾ ದುಡಿದು ಆಯಾಸಪಟ್ಟಿರುವಾಗ ಅಥವಾ ದೂರಪ್ರಯಾಣ ಮಾಡಿ ಬಳಲಿರುವಾಗ ಒಂದೇ ಒಂದು ಬಟ್ಟಲು ಬಿಸಿ ಬಿಸಿ ಟೀ ಕುಡಿಯಿರಿ ಆಗ ಅದು ನಿಮಗೆ ಎಷ್ಟು ಆನಂದ ಮತ್ತು ಉತ್ಸಾಹವನ್ನು ಕೊಡುವುದೆಂಬುದನ್ನು ಪರೀಕ್ಷಿಸಿರಿ

ಚಿತ್ರಗಳನ್ನೊಳಗೊಂಡ ನಮ್ಮ ಪುಸ್ತಕ

ಇಂಡಿಯನ್ ಟೀಯ ಚರಿತ್ರೆಯು ಓದುವುದಕ್ಕೆ ಒಂದು ಕಾದಂಬರಿಯಂತಿದೆ ಟೀಯ ವ್ಯವಸಾಯ, ಅದರ ತಯಾರಿಕೆಯ ವಿಧಾನಗಳು ಮತ್ತು ಅದನ್ನು ಪಾನಮಾಡುವುದರಿಂದ ಅತಿಶ್ಯಯ ಉಪಯೋಗತೆ ಮತ್ತು ಅನುಕೂಲಗಳನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವಿದ್ದಲ್ಲಿ "ಯಾವ ಕಾಲವಾದರೂ ಟೀಗೆ ಸಕಾಲವೇ" ಎಂಬ ಚಿತ್ರಗಳನ್ನೊಳಗೊಂಡಿರುವ ಪುಸ್ತಕವನ್ನು ನಮ್ಮಿಂದ ತೀಳ ತರಿಸಿಕೊಳ್ಳಿ. ಈ ಜಾಹೀರಾತನ್ನು ಕತ್ತರಿಸಿ ನಿಮ್ಮ ಹೆಸರು ವಿಳಾಸ ಮತ್ತು ಹುದ್ದೆ ಇವುಗಳನ್ನು ಈ ಜಾಹೀರಾತಿನಲ್ಲಿ ಬರೆದು ಈ ಕೆಳಗೆ ಕೊಟ್ಟಿರುವ ವಿಳಾಸಕ್ಕೆ ಒರೆದರೆ ಮುಫತ್ತಾಗಿ ನಿಮಗೆ ಚಿತ್ರಗಳನ್ನೊಳಗೊಂಡ ಪುಸ್ತಕದ ನಕಲೊಂದನ್ನು ಕಳುಹಿಸುತ್ತೇವೆ

ವಿಳಾಸ - ಕಮಿಷನರ್ ಫಾರ್ ಇಂಡಿಯಾ,
ಇಂಡಿಯನ್ ಟೀ ಮಾರ್ಕೆಟ್ ಎಕ್ಸ್‌ಪ್ಯಾನ್‌ಷನ್ ಬೋರ್ಡ್
ಪಿ ಪೋ ಬಾಕ್ಸ್ ೨೧೭೨ ಕಲ್ಕತ್ತ



ಇಂಡಿಯಾದ ಟೀಯು ತೃಪ್ತಿ ಮತ್ತು ಆನಂದವನ್ನು ಕೊಡುವುದು

ಇಂಡಿಯನ್ ಟೀ ಮಾರ್ಕೆಟ್ ಎಕ್ಸ್‌ಪ್ಯಾನ್‌ಷನ್ ಬೋರ್ಡಿನವರಿಂದ ಪ್ರಕಟಿಸಲ್ಪಟ್ಟಿದ್ದು

IK95 SVI

ನಾಜೀ ಪಾಳಯದೊಳಗೆ ಕಚ್ಚಾಟಕ್ಕಾರಂಭ

ಕಲಹದ ಕಿಡಿಯು ಹೊಗೆಯಾಡುತ್ತಿದೆ

ಜರ್ಮನಿಗೊಂದು ಸಾಮಾನ್ಯ ಸೇನೆ ಹಿಟ್ಲರನಿಗೊಂದು ವಿಶೇಷ ಸೇನೆ

ಹೇಗೆ

ನಾಜೀ ಸೇನೆಯು ಪುನರ್ನಿರ್ಮಾಣವಾಗುತ್ತಿದೆ

ಯೂರೋಪೆಲ್ಲ ಭಯಗೊಂಡಿದೆ

ಹರ್ ಹಿಟ್ಲರನ ನಾಜೀಪಾಳಯದಲ್ಲಿ ಕಚ್ಚಾಟಕ್ಕಾರಂಭವಾಗಿ ಕೆಲವು ದಿನಗಳಾದವು ಸೇನೆಯ ಬೇರೆ ಬೇರೆ ಅಧಿಕಾರಿಗಳು ಪರಸ್ಪರ ದ್ವೇಷಾಸೂಯೆಗಳ ಮೂಲಕ ಕಚ್ಚಾಡಲಾರಂಭಿಸಿರುವರು. ಇದನ್ನು ಕಂಡ ಹಿಟ್ಲರ್ ಇಬ್ಬರ ನ್ಯಾಯ ಮೂರನೆಯವನಿಗೆ ಲಾಯವೆಂದರಿತು ಸೇನೆಯ ಪುನರ್ನಿರ್ಮಾಣವನ್ನಾರಂಭಿಸಿರುವನು. ಈಗ ಜರ್ಮನಿಯಲ್ಲಿ ಒಂದು ಸಾಮಾನ್ಯ ಸೇನೆಯು ಇರುವುದಲ್ಲದೆ ವಿಶೇಷ ನಗರಗಳಲ್ಲಿ ಕಾದು ನಾಜಿಗಳ ಸಂರಕ್ಷಣೆಮಾಡಲಿಕ್ಕೆ ವಿಶೇಷ ಸೇನೆಯೂ ತಯಾರಾಗಿದೆ ಇದರಲ್ಲಿ ೩೦೦ ೦೦೦ ಸೈನಿಕರು ಇರುವರು. ಇವರು ಸಾಮಾನ್ಯ ಸೇನೆಯ ಸೈನಿಕರಿಗಿಂತಲೂ ಹೆಚ್ಚು ಸಮರ್ಥರೂ ಯೋಗ್ಯರೂ ಆಗಿರುತ್ತಾರೆ. ಹೆಚ್ಚಾಗಿ ಸೇನಾಧಿಕಾರಿಗಳೇ ಈ ಸೇನೆಯಲ್ಲಿ ಸೈನಿಕರಾಗಿ ಕೆಲಸ ಮಾಡುವುದರಿಂದ ಇದು ಎಷ್ಟು ಬಲಿಷ್ಠವಾದ ಸೇನೆಯಾಗಿರುವುದೆಂಬುದರಲ್ಲಿ ಏನೂ ಸಂದೇಹವಿಲ್ಲ. ಸಾಮಾನ್ಯ ಸೇನೆಯು ಕೆಲಸಕ್ಕೆ ಬಾರದೆಹೋದಾಗ ಈ ಸೇನೆಯೇ ಮುಂದೆ ಬಂದು ಕಾರ್ಯಸಾಧನೆ ಮಾಡುವುದು. ಆದ್ದರಿಂದ ಈ ಸೇನೆಯೊಂದಿರುವುದು ಸಾಮಾನ್ಯ ಸೇನೆಗೆ ಎಂಥ ದುರ್ಧರ ಪ್ರಸಂಗದಲ್ಲಿಯೂ ಧೃತಿಗೆಟ್ಟು ಕಂಗೆಡದಂತೆ ಧೈರ್ಯಸ್ಥೈರ್ಯ ಸಾಹಸ ಬಲಗಳನ್ನು ತುಂಬಿಸುವುದು. ಗೋರಿಂಗನು ಈ ವಿಶೇಷ ಸೇನೆಯ ಅಧಿಕಾರ ಪಟ್ಟದಲ್ಲಿರುವನು. ಮೊದಲವನು ಜರ್ಮನಿಯ ವಿಮಾನ ಸೇನೆಯ ಮುಖ್ಯಾಧಿಕಾರಿಯಾಗಿದ್ದನು. ಹಿಟ್ಲರನು ಇವನ ಮೇಲೆ ಸಂಪೂರ್ಣ ವಿಶ್ವಾಸವನ್ನಿಟ್ಟಿದ್ದಾನೆ. ಮಿಲಿಟರಿ ಕಾರ್ಯಗಳಲ್ಲಿ ಬಹಳ ಸಮರ್ಥನೂ ವಿಚಕ್ಷಣನೂ ಆಗಿದ್ದಾನೆ, ಆದ್ದರಿಂದ ವಿಮಾನ ಸೇನೆಯ ಕೆಲಸದಿಂದ ಅವನನ್ನು ಹಿಟ್ಲರನು ಈ ಉಚ್ಚಪದವಿಗೆ ಏರಿಸಿರುವನು. ಜರ್ಮನಿಯಲ್ಲಿ ಈ ಒಂದು ಹೊಸ ಸೇನೆಯಾಗಿರುವುದು ಯೂರೋಪಿನ ರಾಜಕಾರಣ ಪುರುಷರಿಗೆ ಭಯವನ್ನುಂಟುಮಾಡಿರುವುದು. ಸೇನಾಧಿಕಾರಿಗಳ ಅಂತಃಕಲಹ ನಿವಾರಣೆಗೆ ಹಿಟ್ಲರನು ಈ ಹೊಸ ಸೇನೆಯನ್ನು ರಚಿಸಿದನಾದರೂ ಸಮಯ ಬಂದಾಗ ಇದೇ ಸೇನೆಯು ಯೂರೋಪಿನಲ್ಲಿ ಅಶಾಂತಿಯನ್ನು ಹರಡಿಸಲಿಕ್ಕೆ ಮುಂದಾಗುವುದು ಖಂಡಿತವಾಗಿದೆ. ಆದ್ದರಿಂದ ಎಂದೋ ಒಂದು ದಿವಸ ಆಗಬೇಕಾದ ಯುದ್ಧವು ನಾಳೆ ನಾಡದೇ ಆರಂಭವಾಗಬಹುದು.

ಸೇನಾನಿರ್ಮಾಣದ ಕಾರಣ

ಸಂಗ್ರಾಮಿಯಾಗಿ ಅಧವಾ ಬದಲಿ ಕೆಲಸ ನೋಡಿ ಸೇನಾಧಿಕಾರಿಗಳು ಯಾವ ಪಾರ್ಟಿ ಸಂಗಡದ ಸದಸ್ಯರಾಗಿರಲಿಕ್ಕೂ ಕೂಡದು ಎಂದು ಜರ್ಮನ ಸೇನೆಯಲ್ಲಿ ಒಂದು ನಿಯಮವಿದೆ. ಆದರೆ ಈ ನಿಯಮಕ್ಕೆ ವಿರುದ್ಧವಾಗಿ ಅನೇಕ ಸೇನಾಧಿಕಾರಿಗಳು ನಾಜಿ ಸಂಗಡದ ಸದಸ್ಯರಾಗಿದ್ದರು. ಕಳೆದ ಜೆಕೋಸ್ಲೋವೇಕಿಯ ಪ್ರಕರಣದಲ್ಲಿ—ನಾಜಿಸಂಗಡಕ್ಕೆ ಸೇರದೆ ಇದ್ದ ಪ್ರಧಾನ ಸೇನಾಧಿಕಾರಿಗಳು ಜೆಕೋಸ್ಲೋವೇಕಿಯದಲ್ಲಿ ಜರ್ಮನಿಯು ಯುದ್ಧ ಮಾಡಕೂಡದೆಂದು ಹೇಳುತ್ತಿದ್ದರಾದರೂ, ಅವರ ಮಾತನ್ನು ಮೀರಿ ನಾಜೀಸಂಗಡಕ್ಕೆ ಸೇರಿದ್ದ ಅವರ ಕೆಳ ಅಧಿಕಾರಿಗಳು ಅಂಥ ಯುದ್ಧವು ಆಗಲೇ ಬೇಕು ಎಂದು ಹೇಳತೊಡಗಿದರು. ನಾಜೀಸಂಗಡಕ್ಕೆ ಯುದ್ಧವು ಬೇಕಾಗಿತ್ತು. ಸಂಗಡಕ್ಕೆ ಸೇರಿದ್ದ ಸೇನಾಧಿಕಾರಿಗಳು ಸಂಗಡದ ನಿರ್ಣಯಕ್ಕನುಸಾರ ಯುದ್ಧವಾಗಲೇ ಬೇಕೆಂದರು. ಆದರೆ ಅವರ ಮೇಲಧಿಕಾರಿಗಳಿಗೆ ಯುದ್ಧವು ಬೇಕಾಗಿರಲಿಲ್ಲ. ನರಂತು ಕೆಳ ಅಧಿಕಾರಿಗಳು ಮೇಲಧಿಕಾರಿಗಳನ್ನು ಮೀರಿ ನಡೆಯುವುದು ಶಿಸ್ತಿಗೆ ವಿರೋಧವಾಗಿತ್ತು. ಅದೇ ರೀತಿ ಮುಂದೆಯೂ ನಡೆಯುವುದಾದರೆ ಜರ್ಮನ ಸೇನೆಯು ಕ್ರಮ ತಪ್ಪಿ ಹೋಗುವುದು. ಆದ್ದರಿಂದ ಮಿಲಿಟರಿ ಆಫೀಸರರು ಯಾವ ಪಾರ್ಟಿಗೂ ಸೇರಿರ ಕೂಡದೆಂಬ ನಿರ್ಣಯವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂದು ಸೇನೆಯ ಪ್ರಧಾನ ಪುರುಷನಾದ ಬೆಕ್ಕನು ಹಿಟ್ಲರನಿಗೆ ತಿಳಿಸಿದನು. ಹಿಟ್ಲರನು ಅದಕ್ಕೆ ಒಪ್ಪಲಿಲ್ಲ. ಆದ್ದರಿಂದ ಬೆಕ್ಕನು ತನ್ನ ಪದವಿಗೆ ರಾಜಿನಾಮೆ ಕೊಟ್ಟನು.

ಪದಚ್ಯುತಿ ಮುಂದಿಯ ಛಿನ್ನವತ್ತಳೆ

ಬೆಕ್ಕನು ರಾಜಿನಾಮೆ ಕೊಟ್ಟ ಕೂಡಲೇ ಸೇನೆಯ ಐದು ಮಂದಿ ಅಧಿಕಾರಿಗಳು ಆಗಿನ ಪ್ರಧಾನ ಜನರಲ್ ಕೇಟಲನಿಗೆ ಒಂದು ಛಿನ್ನವತ್ತಳೆಯನ್ನು ಕಳುಹಿಸಿ ಕೊಟ್ಟರು. ಅದರಲ್ಲಿ ಅವರು—ಸೇನೆಯಲ್ಲಿ ಕ್ರಮಶಿಸ್ತುಗಳಿರಬೇಕಾದರೆ ಸೈನಿಕರ ಯಾವ ಪಾರ್ಟಿ ಸಂಗಡಕ್ಕೂ ಸೇರಿರಬಾರದೆಂದೂ ಬ್ರೌಮ್‌ಸಿಚ್ ರ ರಾಜೀನಾಮೆಯು ಅನ್ಯಾಯವಾಗಿದೆ ಬೆಕ್ಕನ ಸಮರ್ಥನ ಮಾಡುವರೆಂದು ತಿಳಿಸಿದರು. ಇದರಿಂದ ನಾಜಿಸಂಗಡಿಗರಿಗೆ ಸಿಟ್ಟು ಬಂದಿತು. ತಮ್ಮ ಪಾರ್ಟಿಯ ಧ್ಯೇಯದರ್ಶಗಳಿಗೆ ವಿರೋಧವಾಗಿ ಈ ಐವರ ಬೆಕ್ಕನೊಡನೆ ಸಹಾನುಭೂತಿಯನ್ನು ತೋರಿಸಿದರಾದ್ದರಿಂದ ಅವರನ್ನು ದಂಡಿಸಬೇಕೆಂದು ನಾರ್ಟಿಯ ಪತ್ರವು ಹೊರಟಿತು.

ಮಧ್ಯಸ್ಥಿಕೆ—ಮುಸ್ಸುಮುಸ್ಸು

ಪಾರ್ಟಿಯಲ್ಲಿ ಅವರ ವಿಚಾರಣೆ ನಡೆದು ಆ ಐವರನ್ನು ಶಿಕ್ಷಿಸಬೇಕೆಂದು ಪಾರ್ಟಿಯ ಅಭಿಪ್ರಾಯವಿತ್ತು. ಆದರೆ ಮಿಲಿಟರಿ ಅಧಿಕಾರಿಗಳನ್ನು ಸಿವಿಲ್ ಅಧಿಕಾರಿಗಳು ವಿಚಾರಿಸಿ ದಂಡಿಸುವ ಕ್ರಮವು ಯಾವ ದೇಶದಲ್ಲಿಯೂ ಇರುವುದಿಲ್ಲ. ಆದ್ದರಿಂದ ಮಧ್ಯಸ್ಥಿಕೆ ಮಾಡಲು ಗೋರಿಂಗನು ಹಿಟ್ಲರನಲ್ಲಿ ಹೋದನು. ಆದರೆ ಏನೂ ಪ್ರಯೋಜನವಾಗಲಿಲ್ಲ. ನಾಜಿಪಾರ್ಟಿಯ ಕೆಲವು ಜನ ಅಧಿಕಾರಿಗಳು ಆ ಐವರನ್ನು ಕೈದುಮಾಡಲು ಬಂದರು. ಐವರೂ ತಮ್ಮ ಕಾರ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದರು. ಪಾರ್ಟಿಯ ಅಧಿಕಾರಿಗಳಿಗೆ ಮಿಲಿಟರಿಯ ಅಧಿಕಾರಿಗಳಾದ ತಮ್ಮನ್ನು ಕೈದುಮಾಡುವ ಅಧಿಕಾರವಿಲ್ಲೆಂದು ಆ ಐವರು ಹೇಳಿದರೂ ಕೇಳದೆ ಇದ್ದುದರಿಂದ ಮಾತ್ಸಾಮುಷ್ಟಿಗೆ ಆರಂಭವಾಯಿತು. ಪಿಸ್ತೂಲನ್ನು ಸುಟ್ಟರು. ಈ ಕಲಹದಲ್ಲಿ ಪಾರ್ಟಿಯ ಇಬ್ಬರು ಸತ್ತುಬಿದ್ದರು. ಉಳಿದವರು ಗಾಯಗೊಂಡು ಓಡಿಹೋದರು. ಆಗ ನಾಜಿಪಾರ್ಟಿ ಮತ್ತು ಮಿಲಿಟರಿಯೊಳಗೆ ಭಯಂಕರ ಅಂತಃಕಲಹವು ಆರಂಭವಾಯಿತು. ಹಿಟ್ಲರನು ಕಣ್ತೆರೆದು ನೋಡಿದನು. ಭವಿಷ್ಯವು ಅಂಧಕಾರಮಯವಾಗಿರುವುದನ್ನು ಕಂಡನು. ದಿನಗಳೆದಂತೆ ಮುಂದರಿದು ಬಿಟ್ಟರೆ ಸರ್ವನಾಶವಾಗುತ್ತಿತ್ತು. ಆದ್ದರಿಂದ ನಾಜಿಗಳು ಮತ್ತು ಮಿಲಿಟರಿಯೊಳಗೆ ಇರುವ ಕಲಹವನ್ನು ಶಮನಗೊಳಿಸುವ ನೆವನ ಹೇಳಿ ಅವನು ಗ್ಯುಸಿಚಿನಲ್ಲಿ ಒಂದು ಸಭೆ ಕರೆದನು.

ರಾಜಿಪಂಚಾಯತಿಕೆ

"ನೀವೆಲ್ಲರು ಒಂದಾಗಿ ಬರೆದ ರಾಜೀನಾಮೆಯ ಪತ್ರವು (ತಾ ೨೨) ಸಕಾಲದಲ್ಲಿ ಇಲ್ಲಿ ತಲುಪಿಯದೆ ನನ್ನ ಅಸ್ವಸ್ಥದ ದೆಸೆಯಿಂದ ಅದಕ್ಕೆ ಉತ್ತರ ಬರೆಯಲಾಗಲಿಲ್ಲ

ಸಾಮಾನ್ಯ ವಿಧ್ಯಮಾನಗಳಲ್ಲಾದರೆ,—ಆ ಪತ್ರವನ್ನು ಪುನರಾಲೋಚಿಸುವುದಕ್ಕೆ ನಿಮಗೇ ಕಳುಹುವವನಿದ್ದೆ ರಾಜೀನಾಮೆಗಳನ್ನು ನಾವು ತ್ರಿಪುರಿಯಲ್ಲಿ ಸೇರುವ ವರೆಗೆ ಹಿಂದೆಗೆಯಿರಿ ಎನ್ನುವವನಿದ್ದೆ.

ಆದರೆ, ಪೂರ್ಣ ಆಲೋಚಿಸಿಯೇ, ಎಲ್ಲ ವಿಧ್ಯಮಾನಗಳನ್ನು ತೂಗಿನೋಡಿಯೇ ನೀವು ಹೀಗೆ ನಿಶ್ಚಯಿಸಿರುವಿರೆಂದು ನನಗೆ ತಿಳಿಸಿರುವ ಕಾರಣ, ಹಾಗೆ ಹಿಂದೆ ಕಳುಹಲಿಲ್ಲ

ನೀವು ಪುನರಾಲೋಚನೆ ಮಾಡುವ ಅವಕಾಶವನ್ನಾದರೂ ನಾನು ಕಂಡಿದ್ದರೆ, ರಾಜೀನಾಮೆಗಳನ್ನು ಹಿಂದೆಗೆಯಿರಿ ಎಂದು ಬೇಡಿಕೊಳ್ಳುವವನಿದ್ದೆ ಈಗ ನಾನು ಹಾಗೆ ಅರಿಕೆಮಾಡಿಕೊಂಡರೂ ಫಲಸಿಗದು, ಆದುದರಿಂದ ಶೋಕಾಕುಲನಾಗಿಯೇ ಆ ರಾಜೀನಾಮೆಗಳನ್ನು ಅಂಗೀಕರಿಸಿರುವೆನು

ರಾಜೀನಾಮೆ ಕೊಟ್ಟಮಾತ್ರಕ್ಕೆ ನನ್ನ ಸಹಕಾರವನ್ನು ನೀವು ಹಿಂದೆಗೆದಿಲ್ಲವೆಂದು ನಾನು ನಂಬಬೇಕಾಗಿದೆ ನನ್ನ ಕರ್ತವ್ಯಪಾಲನೆಯ ಮುಂದಣ ಕಾಲದಲ್ಲಿಲ್ಲ ನಿಮ್ಮ ಸಂಪೂರ್ಣ ಸಹಕಾರವು ನನಗೆ ತುಂಬಾ ದೊರೆವುದೆಂದು ವಿಶ್ವಾಸದಿಂದ ನಂಬಿರುವೆನು ಅಂತಹ ನಿಮ್ಮ ಸಹಕಾರವು ನನಗೆ ಅತ್ಯಮೂಲ್ಯವಾದ ದೆಂದು ನಾನು ತಿಳಿಸುವ ಬೇರೆ ಅಗತ್ಯವಿಲ್ಲ

ನಮ್ಮಲ್ಲಿನ ಭೇದಭಾವಗಳಿಗಿಂತ ಐಕ್ಯಮತದ ಭಾವಗಳು ಹೆಚ್ಚೇ ಆಗಿವೆ ಎಂದು ತ್ರಿಪುರಿಯಲ್ಲಿ ನಾವು ಕಾಣುವೆವೆಂದು ನಾನು ನೆರೆನಂಬಿರುವೆನು ಹೀಗಿರುವುದರಿಂದ, ನಾವೆಲ್ಲರು ಒಂದಾಗಿಯೆ ಒಪಕಿಲ್ಲದೆ ಮುಂದೆ ಸಾಗುವೆವೆಂದು ಖಂಡಿತ ಹೇಳಬಹುದಾಗಿದೆ

ದಿನೇ ದಿನೇ ಜ್ವರ ಎಹಳ ಪರ ತ್ತಿದೆ ಗುಣಮುಖನಾಗಿದೆ, ಸಾವಕಾಶ."

ಈ ಮಧ್ಯೆ, ವರಿಷ್ಟ ಎಸೆಂಬ್ಲಿಯ ಸದಸ್ಯರು ಶ್ರೀ ಶಂಭೂದಯಾಳ ಮಿತ್ರರು ಶ್ರೀ ಸುಭಾಷರಲ್ಲಿ ಅವಿಶ್ವಾಸಸೂಚಕ ಒಂದು ನಿರ್ಣಯವನ್ನು ಕಾಂಗ್ರೆಸ್ ಕಮಿಟಿಯು ನಾಳಿನ ಅಧಿವೇಶನದಲ್ಲಿ ಮುಂತರುವರಾಗಿ ಸೂಚಿಸಿರುವರು ಎಸೆಂಬ್ಲಿ ಮೆಂಬರರು ಇವರ ಸೂಚನೆಯನ್ನು ಬಹಳವಾಗಿ ಸಮರ್ಥಿಸುವರೆಂದು ನಂಬಲಾಗಿದೆ

ಈಗಲೆ ಜವಾಹರರು ಒಕ್ಕಾಗಿ ತೆರಳಿದ್ದು ಆಚಾರ್ಯ ನರೇಂದ್ರದೇವರೇ ಮೊದಲಾದ ಸೋಶಲಿಸ್ಟ ಮುಖಂಡರನ್ನು ಕಂಡು, ಈ ಬಿಕ್ಕಟ್ಟಿನ ನಿವಾರಣೆಯ ಆಲೋಚನೆ ಮಾಡುತ್ತಿರುವರಂತೆ ಇದರಿಂದ, ಇನ್ನೂ ವಿಶೇಷ ವಾರ್ತೆಗಳು ಹೊರಬಲಿವೆ ಎನ್ನಬಹುದಾಗಿದೆ

ಪಾರ್ಲಿಮೆಂಟರಿ ಸಬ್ ಕಮಿಟಿ ತಾನಾಗಿ ಮಾಯವಾಗುವಂತಾಗಿದೆ ಒಟ್ಟಿಲ್ಲ ಕಾರ್ಯಕಾರೀಮಂಡಲದ ಅಧಿಕಾರವು ಈಗ ಶ್ರೀ ಸುಭಾಷರು ಮತ್ತು ಸೋದರ ಶ್ರೀ ಶರತ್ ಚಂದ್ರಬೋಸರು ಇವರೊಳಗೇ ಅಡಕವಾಗುವಂತಾಗಿದೆ. ಮುಕ್ಕವರು ಹೊರಬಿದ್ದರಷ್ಟೆ,

ಹೊಸ ಕಾರ್ಯಕಾರೀಮಂಡಲದಲ್ಲಿ,—ಆಚಾರ್ಯನರೇಂದ್ರ ದೇವರು, ಎಸ್. ಶ್ರೀನಿವಾಸ ಅಯ್ಯಂಗಾರರು, ಜಯಪ್ರಕಾಶ ನಾರಾಯಣರು, ಅಣೆಯವರು ಖಂಡಿತ ಸೇರುವರೆಂದು ವಾರ್ತೆ.

ಕಮಿಟಿಯ ಕಾರ್ಯದರ್ಶಿಯೂ ಇಲ್ಲ ಸ್ಥಾನ ಖಾಲಿಬಿದ್ದಿದೆ ತಾತ್ಕಾಲಿಕವಾಗಿ ಆಚಾರ್ಯ ಕೃಪಲಾನಿಯವರ ಬದಲಾಗಿ ಮುಕ್ತಿಬ್ಬರು ಕಾರ್ಯನಿರ್ವಹಿಸಬೇಕಾಗಿದೆ

ಶ್ರೀ ಸುಭಾಷರು ದೇಹಸ್ವಾಸ್ಥ್ಯ ಹೇಗಿದ್ದರೂ ತಾ ೯ರಲ್ಲಿ ತ್ರಿಪುರಿಗೆ ತೆರಳುವರು. ವಿಷಯನಿಯಾಮಕ ಕಮ್ಮಿಟಿಯಲ್ಲಿ ನೋಗ್ ಆಫಿಸಿಯಲ್ ಸೂಚನೆಗಳನ್ನು ಮಾತ್ರ ಚರ್ಚಿಸಿ, ಕಾಂಗ್ರೆಸಿನ ಅಧಿವೇಶನದ ಮುಂದೆ ಇದುವರೆಗು ಅಧ್ಯಕ್ಷರೇ ತಾವಾಗಿ ಯಾವ ನಿರ್ಣಯವನ್ನೂ ಮುಂತರುವವರಲ್ಲವೆನ್ನುತಿಪ್ಪರೆ

ಅಧಿವೇಶನದಲ್ಲಿ ಚರ್ಚೆಯು ಸ್ವತಂತ್ರವಾಗಿ ನಡೆಯುವಂತೆ ಮಾಡುತ್ತ, ತಾನೇನೂ ವಿಶೇಷ ಸೂಚನೆಯನ್ನು ಮುಂತರುವುದಿಲ್ಲವೆಂದು ಅಧ್ಯಕ್ಷರ ಅಭಿಪ್ರಾಯವಂತೆ

ಜನರಲ್ ಸೆಕ್ರೆಟರಿಯಾಗಿ, ಶ್ರೀ ಆಚಾರ್ಯ ನರೇಂದ್ರದೇವರು ಜಯಪ್ರಕಾಶ ನಾರಾಯಣರು ಮತ್ತು ಎಚ್ ವಿ ಕಾಮತ್ ಇವರ ಹೆಸರುಗಳು ಮುಂದೆ ಕರೆಲಾಗಿದೆ ಕೊನೆಯವರು ಈಗ ನೆಶನಲ್ ಪ್ಲೇನಿಂಗ್ ಕಮಿಟಿ (ರಾಷ್ಟ್ರೀಯ ಯೋಜನಾ ಸಮಿತಿ)ಯ ಕಾರ್ಯದರ್ಶಿಗಳಾಗಿದ್ದಾರೆ

ಮೂರು ನೂನ್ ಅಫಿಸಿಯಲ್ ನಿರ್ಣಯಗಳನ್ನು ಶ್ರೀ ಶರತಚಂದ್ರರು ಈಗಲೆ ತಯಾರಿಸಿ ಕಳುಹಿಸಿರುವರು ಇವುಗಳಲ್ಲಿ ಒಂದು ಫೆಡರೇಶನ್ ವಿಷಯ, ದೇಶೀಯ ರಾಜ್ಯಗಳಲ್ಲಿನ ಚಳವಳಿದಲ್ಲಿ ಕಾಂಗ್ರೆಸಿನ ಕಾರ್ಯಕ್ರಮ [illegible] ಇವನ್ನು ಕುರಿತಾದ ಸೂಚನೆಗಳಿವೆ

ಇಜಿಪ್ಟಿನಿಂದ ಅಲ್ಲಿನ ವಫ್ದ ಪ್ರತಿನಿಧಿಗಳು ಕಾಂಗ್ರೆಸ್ ಅಧಿವೇಶನಕ್ಕೆ ಬರಲಿರುವರು ಅಲ್ಲಿನ ಪಾರ್ಲಿಮೆಂಟಿನಲ್ಲಿ ವಿರುದ್ಧಪಕ್ಷದ ನಾಯಕರೇ ಈ ಪ್ರತಿನಿಧಿಗಳ ಮುಂದಾಳುಗಳಾಗಿರುವರು ತಾ ೯ಕ್ಕೆ ಬೊಂಬಾಯಿಗೆ ಬಂದು ಈ ದೇಶದಲ್ಲಿ ಹದಿನೈದು ದಿನ ಇವರು ಇರುವರು ನಾಹಸ್ ಪಾಶಾರವರು ಈ ಸಾಹಸ್ವವನ್ನು ಅಭಿನಂದನಾಪೂರ್ವಕ ಕಳುಹಿದ್ದಾರೆ ಇಟ್ಟದ ವಾರ್ತಾಪತ್ರಿಕೆಗಳ ಪ್ರತಿನಿಧಿಗಳೂ ಈ ಪ್ರತಿನಿಧಿಗಳಲ್ಲಿ ಕೂಡಿಬರುವರು.

ಸೋಶಲಿಸ್ಟ — ನೆಹರೂರವರ ಪಕ್ಷದಿಂದ ಅವರ ಸೂಚನೆಗಳನ್ನು ಶ್ರೀ ಸುಭಾಷರು ಅಂಗೀಕರಿಸಿದರೆ, ಮುಂದಣ ಕಾರ್ಯಕ್ರಮವನ್ನು ಕೂಡಲೆ ಸರ್ವಸಮ್ಮತವಾದ ರೀತಿಯಲ್ಲಿ ರಚಿಸಬಹುದೆಂದೂ, ಆಗ ನೆಹರುರವರು ಕಾರ್ಯಕಾರಿ ಕಮಿಟಿಯಲ್ಲಿ ಸೇರಲು ಒಪ್ಪುವರೆಂದೂ, ನೆಹರುರವರೇ ಕೊನೆಗೆ ತಾವೇ ಒಂದು ಸರ್ವಸಮ್ಮತವಾಗುವ ಇತ್ಯರ್ಥ ಮಾಡಬಹುದೆಂದು ಅಭಿಪ್ರಾಯಪಡುತ್ತಾರೆ

ಇಂಡಿಯಾ ಸರಕಾರದ ಬಜೇಟು

೨೬೫೫ ಲಕ್ಷ ವ್ಯಯಕ್ಕೆ ಹೆಚ್ಚಿಗೆ ಬೇಕು

ಇನ್ಕಂ ಟೇಕ್ಸ್ ಹೆಚ್ಚುವುದು; ಹತ್ತಿಯ ಮೇಲೆ ದುಬಾರಿ ಸುಂಕ

ಇದೇ ಕಳೆದ ವರ್ಷದಲ್ಲಿ ೯ ಲಕ್ಷ ಆಯವೇ ಹೆಚ್ಚಿಗೆ ಸಿಕ್ಕು ಉಳಿವುದೆಂದು ಹಿಂದೆ ಮಾಡಿದ್ದ ಅಂದಾಜ ವ್ಯರ್ಥವಾಗಿ, ೨೬೫ ಲಕ್ಷ ರೂಪಾಯಿ ಕೊರತೆ ಬೀಳಲಿದೆ

೧೯೩೯—೪೦ನೆ ವರ್ಷದಲ್ಲಿ ಆಯವು [illegible] ಲಕ್ಷವಾಗುವುದೆಂದು ಅಂದಾಜು, ವ್ಯಯವು [illegible] ಲಕ್ಷವೆಂದು ಸೂಚನೆ ಅಂತು [illegible] ಲಕ್ಷ ರೂಪಾಯಿ ಬೇಕು.

[illegible] ಕೇವಲ ಇಳಿದು ಹೋಗುತ್ತಿರುವ ಕಾರಣ, ಎಣಿಸಿದ್ದಷ್ಟು ಆಯವು ಕೂಡಿ ಬಂದುದಿಲ್ಲ ಈ [illegible] ೩೬೭ ಲಕ್ಷ ರೂಪಾಯಿ ಕಡಮೆ. [illegible] ಬಾಬಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟು, ಸರ್ವಿಸುಗಳ ಖರ್ಚಿನಲ್ಲಿ [illegible]

[illegible] ಕಡಮೆ ಯಾಗಲು, [illegible] ಮತ್ತು ಸಾಲ, ಕಡಮೆ [illegible] ಕಾರಣ [illegible] ಎದರಂತೆಯೇ, [illegible] ಆದಾಯ ತಂದಿದೆ

[illegible] ಬೇಂಕಿನ ಬಡ್ಡಿ [illegible] ಅವಕ್ಕೆ ಇಳಿಸಲಾಗಿದೆ

ಈಗ ವ್ಯಾಪಾರ ಕಡಿಮೆ ಯಾಗಿದೆ ಈ ದಿನಗಳು [illegible] ವರ್ಷದ ಅಂದಾಜು [illegible] ಈ ವರ್ಷದ ತಾಜಾ [illegible] ಮಾತ್ರ ಗಣನೆಗೆ ತಂದಿರುವ ಹೊಸ ವರ್ಷದ ಬಜೇಟಿನ [illegible] ಲಾಗಿದೆ

ಇನ್ಕಂ ಟೇಕ್ಸನ್ನು ಸ್ಲೇಬ್ ಸಿಸ್ಟಮಿನಂತೆ ಹೀಗೆ ವಿಧಿಸಲಾದೀತ —

ಖಾಸಗಿ ವೈಯುಕ್ತಿಕ ವ್ಯಾಪಾರ (ರಜಿಸ್ಟರಾಗದ) ಹಿಂದೂ ಅವಿಭಕ್ತ ಕುಟುಂಬ ಮೊದಲಾದವುಗಳಿಗೆ —

		ತೆರಿಗೆ ದರ
ಮೊದಲಿನ ೧೫೦೦ ರ		[illegible]
ನಂತರದ ೩೫೦೦		[illegible]
	೫೦೦೦	[illegible]
	೫೦೦೦ ,,	[illegible]
ಉಳಿದುದು		[illegible]

[illegible] ರೂಪಾಯಿ [illegible] ತೆರಿಗೆ [illegible] ಅರಿವಾಸಿದು ಮೇಲೆ ಮಾತ್ರ ತೆರಿಗೆ

ಸೂಪರ್ ಟೇಕ್ಸ್—ಮೊದಲಿನ [illegible] ರೂಪಾಯಿ ವರೆಗೆ ತೆರಿಗೆಯಿಲ್ಲ ನಂತರದ ಮೊಬ [illegible]

ಲಗುಗಳ ಮೇಲೆ ರೂಪಾಯಿಯಲ್ಲಿ ಒಂದಾಣೆಯಿಂದ, ಒಂದೂವರೆ ಲಕ್ಷದಲ್ಲಿ ರೂಪಾಯಿಗೆ ೬ ಆಣೆ, ಅನಂತರ ೭ ಆಣೆಯಂತೆ.

ಕಂಪೆನಿಗಳಿಗೆ—ರೂಪಾಯಿಯಲ್ಲಿ ೨ ಆಣೆ.

ಕಂಪನಿಗಳಿಗೆ—ಸೂಪರ್ ಟೇಕ್ಸ್ ರೂಪಾಯಿಯಲ್ಲಿ ಒಂದಾಣೆ ([illegible]) ಎಂದರೆ, ವ್ಯಕ್ತಿಗಳು ತೆರುವ ತೆರಿಗೆಯಿಂದ ಸರಕಾರಕ್ಕೆ [illegible] ಸೂಪರ್ ಟೇಕ್ಸ್ ಮೂಲಕ [illegible] ದೊರೆವುದು

ರೈಲ್ವೆಗಳಿಂದ [illegible] ಲಕ್ಷ [illegible] ೧೫೮ ಲಕ್ಷ ರೂಪಾಯಿಗಳನ್ನು [illegible] ಇನ್ಕಂ ಟೇಕ್ಸಿನ [illegible] ಕೊಡಲಾಗುವುದು

[illegible] (೧೯೩೭ ರ) ಆಯವು [illegible]

[illegible] ಲಕ್ಷ ರೂಪಾಯಿ [illegible] ವರ್ಷದಲ್ಲಿ [illegible] ಇಂಡಿಯಾ ಸರಕಾರದ [illegible] ಕಮಿಟಿಯು [illegible] ಬೇಕಾಗಿದೆ

ಈ ವರ್ಷ [illegible] ಮಾಡಿದೆ, [illegible]

ಹತ್ತಿಯ [illegible] ಮೇಲೆ ದುಬಾರಿ ಸುಂಕವಿದೆ ಇದರಿಂದ [illegible] ಲಕ್ಷ [illegible]

ನೋಟೀಸ್

ಮೂಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನ

ಶ್ರೀ ದೇವಸ್ಥಾನದ [illegible] ಅಕ್ರಮವಾಗಿದ್ದಲ್ಲಿ ಹೆಚ್ಚಿಗೆ [illegible] ಬರುವ ಮಾರ್ಚ 20 ನೇ ತಾ 39 ನೇ ದಿವಸ ಬೆಳಿಗ್ಗೆ ಗಂಟೆ 10ಕ್ಕೆ ಶ್ರೀ ದೇವಸ್ಥಾನದ [illegible] ಮಂಟಪದಲ್ಲಿ [illegible] ಮಾಡಲಾಗುವುದು

[illegible] ಮುಂದಾಗಿ [illegible] ಹೆಂದೂಪುರ [illegible]

Sri Venkatramana Temple, Mulki
2—3—1939

K. V. Kamath,
Manager

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕೆ ನಸ್ಯವು ಮನಸ್ಸನ್ನು ಉತ್ತೇಜನಗೊಳಿಸುತ್ತದೆ ಎಲ್ಲರ ರುಚಿಗೆ ತಕ್ಕುದಾಗಿದ್ದು ಎಲ್ಲರಿಗೂ ಅನುಕೂಲವಾದ ದರವುಳ್ಳದಾಗಿದೆ.

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು,

[illegible] ಸಾರಥಿ ನಸ್ಯ 1 ಪೌಂಡಿಗೆ ರೂ. [illegible] ಸಾರಥಿ ನಸ್ಯ 1 ಪೌಂಡಿಗೆ ರೂ. [illegible]

(ವಿ. ಪಿ. ಮತ್ತು ರೈಲ್ವೆ ಚಾರ್ಜು ಇತ್ಯಾದಿ).

ಏಜೆಂಟರು ಬೇಕಾಗಿದ್ದಾರೆ.

ವಿಳಾಸ—

ಎ. ಪಿ ಸಾರಥಿ

ಮೆನ್ಯುಫೆಕ್ಚರರ್ಸ್ ಒಫ್ ಮೆಡ್ರಾಸ್ ಸ್ನಫ್, ಪಿ. ಬಿ. ನಂಬ್ರ 47 ಮದ್ರಾಸು

ವಿದ್ಯಾಶಾಲೆಗಳಿಗೆ

ಪ್ರತಿವಾರವೂ

ಸ್ವದೇಶಾಭಿಮಾನಿ

ಅತ್ಯಾವಶ್ಯಕ ವಾಚನೀಯ ವಿಷಯಗಳನ್ನು ಒದಗಿಸುವುದು

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಗೆ ಹದಿಮೂರು ಮಂದಿಗಳ ರಾಜಿನಾಮೆ



ಸರದಾರ್ ವಲ್ಲಭಾಯಿ ಪಟೇಲರು

"ಬಹುಪಕ್ಷವು ಶ್ರೀ. ಬೋಸರ ಕಡೆಗೊಲಿದಿರುವಾಗ ಅವರು ಬಲಪಕ್ಷದವರು ತನ್ನನ್ನು ಸಹಕರಿಸಲು ಪ್ರಯತ್ನಿಸುವುದೇಕೆ?"

ಮ. ಗಾಂಧಿ

"ಸಹೋದ್ಯೋಗಿಗಳ ಮೇಲೆ ಹಾಕಿದ ಅಪಾದನೆಯು ನನ್ನನ್ನು ಬಹಳವಾಗಿ ನೋಯಿಸಿತು"

ಜವಾಹರಲಾಲ ನೆಹರು

ಅಖಿಲಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಶ್ರೀಗಳಾದ ಸರ್ದಾರ್ ವಲ್ಲಭ ಬಾಯಿ ಪಟೇಲ್, ಮೌಲಾನಾ ಅಬುಲ್ ಕಲಮ್ ಅಜದ್, ಬಾಬು ರಾಜೇಂದ್ರ ಪ್ರಸಾದ, ಮಿಸೆಸ್ ಸರೋಜಿನಿ ನಾಯ್ಡು, ಭುಲಾಭಾಯಿ ದೇಸಾಯಿ, ಡಾ. ಪಟ್ಟಾಭಿ ಸೀತಾರಾಮಯ್ಯ, ಶಂಕರ ರಾವ್ ದೇವ ಹರಿಕೃಷ್ಣ ಮೆಹತಾಬ್, ಆಚಾರ್ಯ ಕೃಪಲಾನಿ, ಖಾನ್ ಅಬ್ದುಲ್ ಗಫರ್ ಖಾನ್, ಜೈರಾಮದಾಸ ದೌಲತ್ ರಾಮ, ಜಮ್ನಾಲಾಲ ಬಜಾಜ ಮುತ್ತು ಪಂಡಿತ ಜವಾಹರಲಾಲ ನೆಹರುರವರು ರಾಜಿನಾಮೆ ಮುತ್ತು ಹೊರಬಂದಿರುವರು.

ಯಾವತ್ತೂ ಜನರು ಯೋಚಿಸಿದ್ದ ಕ್ಕಿಂತಲೂ ಮೊದಲಾಗಿ ಕಾಂಗ್ರೆಸಿನಲ್ಲಿ ಬಿಕ್ಕಟ್ಟು ತಲೆದೋರುವ ಲಕ್ಷಣಗಳು ಕಂಡು ಬರುತ್ತವೆ. ಬೋಸ್ ಮಹಾತ್ಮರೊಳಗೆ ಆದ ಸಂಭಾಷಣೆಯ ಫಲವಾಗಿ ಕಾಂಗ್ರೆಸಿನಲ್ಲಿ ಬಲಪಕ್ಷಿಯರೂ ಎಡಪಕ್ಷಿಯರೂ ಒಮ್ಮನಸ್ಸಿನವರಾಗಿರುವರೆಂದು ಭಾವಿಸಿದ್ದೆವು. ಆದರೆ ನೆನಸಿದಂತಾಗಲಿಲ್ಲ. ಶ್ರೀ. ಬೋಸರ ಅಸ್ವಸ್ಥರಾಗಿ ಅವರಿಗೆ ವಾರ್ಧಾದಲ್ಲಿ ಕೂಡಿದ ಸಭೆಗೆ ಬರಲಿಕ್ಕೆ ಸಾಧ್ಯವಾಗಲಿಲ್ಲ ಇದು ಶ್ರೀ. ಭೋಸರ ದುರಾದೃಷ್ಟ ಭೋಸರು ವಾರ್ಧಾ ಸಭೆಗೆ ಬಂದಿದ್ದರೆ ಅಲ್ಲಿ ಪ್ರತ್ಯಕ್ಷ ಸಂಭಾಷಣೆಗಳಾಗಿ ತಮ್ಮ ಮನಸ್ಸಿನಲ್ಲಿದ್ದ ಭೇದಭಾವನೆಯು ಬಗೆ ಹರಿಯಬಹುದಿತ್ತು.

ಆದುದರಿಂದ ಸಧಸ್ಯರು ಯಾವ ಕಾರ್ಯಕ್ರಮಗಳನ್ನು ಕೈಕೊಳ್ಳದೇ ವರ್ಕಿಂಗ್ ಕಮಿಟಿಯಿಂದ ಹೊರಬರುವುದೇ ತಮ್ಮ ಮೊದಲಿನ ಕರ್ತವ್ಯವೆಂದೆಣಿಸಿ ಹನೆರಡು ಮಂದಿಗಳೂ ಒಟ್ಟಿಗೂ ಜವಾಹರಲಾಲರು ಪ್ರತ್ಯೇಕವಾಗಿಯೂ ತಮ್ಮ ರಾಜಿನಾಮೆಯನ್ನು ಅಧ್ಯಕ್ಷ ಭೋಸರಿಗೆ ಒಪ್ಪಿಸಿದರು.

ಭೂಲಾಭಾಯಿ ದೇಸಾಯಿಯವರು

ಶ್ರೀ. ವಲ್ಲಭ ಭಾಯಿ ಪಟೇಲ ಮತ್ತು ೧೧ ಮಂದಿಗಳ ರಾಜಿನಾಮೆ

ಶ್ರೀಗಳಾದ ವಲ್ಲಭ ಭಾಯಿ ಪಟೇಲ ಮತ್ತು ೧೧ ಮಂದಿ ಸದಸ್ಯರು ಒಪ್ಪಿಸಿದ ರಾಜಿನಾಮೆಯಲ್ಲಿ ಈ ಕೆಳಗಿನಂತೆ ಉಲ್ಲೇಖಿಸಿರುವರು.

"ದೇಶದಲ್ಲಿ ಒಂದು ಸ್ವಚ್ಛವಾದ ಧೋರಣೆಯಿರಬೇಕೆಂಬ ಸಮಯವು ಈಗ ಬಂದಿರುತ್ತದೆ. ಆದರೆ ತಮ್ಮ ತಮ್ಮ ಧೋರಣೆಗಳಿಗೆ ಸರಿ ಬೀಳದ ಎರಡು ಪಕ್ಷಗಳೊಳಗೆ ಒಪ್ಪಂದವಾಗುವುದು ಎಂದೂ ಸರಿ ಬೀಳದ ವಿಷಯವಾಗಿರುತ್ತದೆ. ಆದುದರಿಂದ ತಮ್ಮ ಧೋರಣೆಯ ಕಾರ್ಯಕ್ರಮವನ್ನು ಮುಂದೊತ್ತಲು ತಮಗೆ ಯಾವ ತರದ ಅಡ್ಡಿಯೂ ಬರಬಾರದೆಂದೇ ಈಗಿನ ಈ ಪರಿಸ್ಥಿತಿಯಲ್ಲಿ ನಾವು ರಾಜಿನಾಮೆಯನ್ನು ಕೊಡುವುದು ನಮ್ಮ ಕರ್ತವ್ಯವೆಂದು ಭಾವಿಸುತ್ತೇವೆ".

ಗಾಂಧಿಜಿಯವರ ಅಭಿಪ್ರಾಯ

ಆದರೆ ಗಾಂಧಿಜಿಯವರು ಶ್ರೀ. ಸುಭಾಸರಿಗೆ ಈ ಕೆಳಗಿನ ಉತ್ತಮವಾದ ಕಾರಣಗಳನ್ನು ಕೊಟ್ಟಿರುವರು.

"ಬಹುಮತೀಯ ಪ್ರತಿನಿಧಿಗಳು ನಿಮ್ಮ ಕಡೆಗೊಲಿದಿರಲು ಅತರ ಸಹಾಯದಿಂದ ನಿಮ್ಮ ಧೋರಣೆಯನ್ನು ಸಾಗಿಸಬಹುದಲ್ಲವೆ? ಬೇಕೆಂಬ ನಿಮಗೆ ಕೆಟ್ಟದನ್ನು ಬಹುಮತದವರು ಬಲಪಕ್ಷೀಯರೆಂದು ತಿಳಿದ ನೀವು ಬಲಪಕ್ಷಿಯರನ್ನು ಸಹಕರಿಸಲು ಕೇಳಿಕೊಳ್ಳುವುದೇಕೆ? ಬಲಪಕ್ಷಿಯರ ಮೇಲೆ ಅನೇಕ ಅಪಾದನೆಗಳನ್ನು ಹೊರಿಸಿ ಅವರು ನಮ್ಮ ವೈರಿಗಳು ಎಂದ ನಂತರ ಅವರ ಸಹಾಯವನ್ನು ಕೇಳುವುದರಲ್ಲಿ ಹುರುಳಾದರೂ ಏನಿದೆ? ಕಾಂಗ್ರೆಸಿನ ಸಲ್ಲಿಯ ದೃಷ್ಟಿಯಿಂದ ವರ್ಕಿಂಗ್ ಕಮಿಟಿಯಲ್ಲಿ ಭಿನ್ನಮತದ ಪಕ್ಷದವರಿರುವುದು ಒಳಿತಲ್ಲ"

ನೆಹರೂರವರ ಉದ್ಗಾರ

"ಅಧ್ಯಕ್ಷ ಚುನಾವಣೆಯ ಸಮಯ ಶ್ರೀ. ಭೋಸರು ವರ್ಕಿಂಗ್ ಕಮಿಟಿಯ ಸಹೋದ್ಯೋಗಿಗಳ ಮೇಲೆ ಕೆಲವು ಅಪಾದನೆಗಳನ್ನು ಹೊರಿಸಿರುವರು. ಇದು ನನಗೆ ಬಹಳ ಆಶ್ಚರ್ಯವನ್ನು ವ್ಯಥೆಯನ್ನೂ ಉಂಟುಮಾಡಿತು. ನನ್ನ ತಿಳುವಳಿಕೆಯ ಮಟ್ಟಿಗೆ ಈ ಅಪವಾದನೆಗಳೆಲ್ಲವೂ ನಿರಾಧಾರವಾಗಿವೆ. ಶ್ರೀ. ಭೋಸರು ಹೇಳಿದ ಅಪಾದನೆಗಳು ನಿಜವಾದಲ್ಲಿ ಈ ವರ್ಕಿಂಗ್ ಕಮಿಟಿಯ ಮೆಂಬರರೂ ಅವರನ್ನು ಆದರಿಸುವ ಇತರರೂ ಕಾಂಗ್ರೆಸಿನ ಕೆಲಸವನ್ನು ನಡೆಸಲು ಅಯೋಗ್ಯರಾಗಿರುವರು. ಸುಭಾಸ ಬಾಬುಗಳು ಹೇಳಿದ್ದು ನಿರಾಧಾರಗಳಾದಲ್ಲಿ ಅವನ್ನು ಹಿಂತೆಗೆಯುವುದೇ ಯೋಗ್ಯವಾಗಿರುತ್ತದೆ. ಇವೆರಡರ ಮಧ್ಯೆ ಬೇರೆ ಉಪಾಯವೇ ಇಲ್ಲ"

ಈ ಪ್ರಕಾರವಾಗಿ ನೆಹರುರವರು ಬೋಸರಿಗೆ ಎ. ಐ. ಸಿ. ಸಿ. ಆಫೀಸಿನಲ್ಲಿಯೇ ಹೇಳಿದ್ದರು. ಆದರೆ ಅವರು ಅದಕ್ಕೆ ಗಮನವನ್ನೀಯಲಿಲ್ಲ. ಅದಲ್ಲದೇ ನೆಹರುರವರು ಎಡಬಲ ಪಕ್ಷವೆಂದು ಕಂಡಾಬಟ್ಟೆ ಮಾತನಾಡದೆ ಬೋಸರಿಗೆ ತನ್ನ ಕಾರ್ಯಕ್ರಮವನ್ನೂ ಧೋರಣೆಯನ್ನೂ ನಿರ್ಧರಿಸಲು ಹೇಳಿದ್ದರು. ಆದರೆ ಬೋಸರು ಇದರ ಬಗೆಹರಿಸಲಿಲ್ಲ.

ಅಹಿಂಸಾವಾದದಲ್ಲಿ ಭರವಸೆ.

ಶ್ರೀ. ನೆಹರುರವರ ಅಹಿಂಸಾವಾದದ ವಿಷಯವಾಗಿ ಪೂರ್ಣಭರವಸೆಯುಳ್ಳವರಾಗಿರುತ್ತಾರೆ. ಅವರು ಹೇಳುತ್ತಾರೆ-"ನಾನು ಕೂಡಾ ಅಖಂಡ ಸಾಮ್ಯವಾದಿ. ಆದರೂ ಕೂಡಾ ಗಾಂಧಿಜಿಯವರು ೨೦ ವರ್ಷಗಳಿಂದ ಉಪಾಸಿಸುತ್ತಿದ್ದ ಅಹಿಂಸಾವಾದವನ್ನು ನಾನು ಹೃದಯಪೂರ್ವಕವಾಗಿ ಸ್ವೀಕರಿಸಿದ್ದೇನೆ."



ಬಾಬು ರಾಜೇಂದ್ರ ಪ್ರಸಾದರು

ಬೋಸರಿಗೆ ಸ್ವಾತಂತ್ರ್ಯ-

"ನಾನು ಈ ಮೊದಲೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಿಂದ ಹೊರಬರಬೇಕೆಂದು ನೆನಸಿದ್ದೆ. ಆದರೆ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯ ನಂತರದ ಈ ವಾತಾವರಣದಲ್ಲಂತೂ ನನ್ನಿಂದ ಈ ಸದಸ್ಯತ್ವದ ಹೊರೆಯನ್ನು ಹೊರಲು ಸಾಧ್ಯವೇ ಇಲ್ಲ."

"ಶ್ರೀ. ಬೋಸರಿಗೆ ಸ್ವತಂತ್ರವಾಗಿ ತನ್ನ ಧೋರಣೆಯನ್ನು ಮುಂದೊತ್ತಲು ಅಡ್ಡಿಯಿಲ್ಲದಿರುವುದು ಒಳಿತೆಂದು ಹೇಳುವಮಾತಿಗೆ ನಾನು ಒಪ್ಪುತ್ತೇನೆ. ಆದರೆ ಕಾಂಗ್ರೆಸಿನೊಳಗೆ ಬಂದಿರುವ ಈ ಬಿಕ್ಕಟ್ಟಿನಿಂದ ನಾವು ಧೈರ್ಯಗುಂದಬಾರದು. ಇದರಿಂದ ನಾವು ಒಂದು ಪಾಠವನ್ನು ಕಲಿತು ನಮ್ಮ ಮುಂದಿನ ಧೋರಣೆಯನ್ನು ರೂಪಿಸಬೇಕಾಗಿದೆ. ಗುರುಕಿಲ್ಲದ ಸುಭಾಷ ವ್ಯವಹಾರದ ಶಬ್ದದಿಂದ ನನಗೆ ಸಾಕಾಗಿದೆ."

"ಭವಿಷ್ಯದ ಪ್ರಶ್ನೆಯ ವಿಷಯ ಯಾರೂ ಬೆದರಬೇಕೆಂದಿಲ್ಲ. ಯಾವುದಾದರೂ ಬಿಕ್ಕಟ್ಟು ಉಂಟಾದಲ್ಲಿ ಹಿಂದೆ ಹೋರಾಡಿದಂತೆ ಮುಂದಾದರೂ ಒಗ್ಗಟ್ಟಾಗಿ ಹೋರಾಡುವೆವು."

ಸರದಾರರೇ ಮೊದಲಾಗಿ ಹದಿಮೂರು ಮಂದಿ ಕಾರ್ಯಕಾರೀ ಮಂಡಲಿಯಿಂದ ರಾಜೀನಾಮೆ ಕೊಟ್ಟ ತರುವಾಯ, ಪಂಡಿತ ಜವಾಹಿರಲಾಲರೇ ರಾಜೀನಾಮೆಯೊಡನೆಯೇ ಸವಿವರವಾದ ಪತ್ರವನ್ನು ಅಸ್ವಸ್ಥರಾದ ಶ್ರೀ ಸುಭಾಷರಿಗೆ ಬರೆದ ತರುವಾಯ,-ಏನಂತೆ?

ಇದೆಲ್ಲ ರಿಕಾರ್ಡ್ ತಾ. ೨೪ರಲ್ಲಿ ಅವರಿಗೆ ತಲಪಿತು. ದುರ್ಬಲ, ಜ್ವರಪೀಡಿತರವರು. ಓದಿ ಹೇಳುವವರಿರುವರು, ಆಲೋಚಿಸಿ ಉತ್ತರ ಬರೆಯಲು ಇನ್ನು ಅವಕಾಶಬೇಕು.

ಅವರಿನ್ನೂ ಜ್ವರಪೀಡಿತರು, ದಿನೇ ದಿನೇ ಬಲಗುಂದುತ್ತ ಬರುತ್ತಿರುವ ಕಾರಣ, ತ್ರಿಪುರಿಯಲ್ಲಾಗಬೇಕಾಗಿರುವ ಅಧಿವೇಶನವು ಮುಂದೆ ಸರಿವುದೇ ಎನ್ನುತ್ತಾ ಉತ್ತರಾಕಾಂಕ್ಷಿಗಳಾಗಿ ಸಾವಿರಾರು ಮಂದಿ ಕಾಯುತ್ತಿರುವರು. ಸರಕಾರವೂ ಹಾಗೆಯೇ. ಮುಹೂರ್ತವನ್ನು ನಿರ್ಧರಿಸಲು ಅಧ್ಯಕ್ಷಬಾಬುಗಳೇ ಮಾತ್ರ ಶಕ್ತರು.

ಅವರ ಸೋದರ ಶರತ್ ಚಂದ್ರರು (ಇವರು ಕಾರ್ಯಕಾರೀ ಮಂಡಲದ ಮೆಂಬರು) ಪ್ರಾಂತ್ಯಗಳಲ್ಲಿನ ಮುಖ್ಯ ಕಾಂಗ್ರೆಸು ಮುಖಂಡರೊಡನೆ ಅಲ್ಲಲ್ಲಿ ಟೆಲಿಫೋನ್ ಮೂಲಕ ಸಂಭಾಷಣೆ ಪರಾಮರ್ಶೆ ಮಾಡುತ್ತಿರುವರು.

ಮೂವತ್ತಾರು ತಾಸಿನ ತನಕವೂ ಜ್ವರ ಬಾಧೆಯಿತ್ತೆಂದು ತಾ. ೨೪ರ ವರದಿಯಲ್ಲಿದ್ದು, ಹಲವು ದಿನಗಳ ವಿಶ್ರಾಂತಿ (ದೈಹಿಕ ಮತ್ತು ಮಾನಸಿಕ) ಅಗತ್ಯವೆಂದು ತಿಳಿಸಲಾಗಿದೆ. ಆದರೆ, ಹಿಡಿದ ಮುಹೂರ್ತ ಮುಂದರಿವುದು ಬೇಡವೆಂದೇ ಅಧ್ಯಕ್ಷರು ತಿಳಿಸಿರುವರೆಂದು ವಾರ್ತೆಯುಳ್ಳದೆ.

ಶ್ರೀ। ಶಂಕರ್ ರಾವ್ ದೇವ್—ಇವರು

"ದೇಶದ ಅಭಿಪ್ರಾಯವು ನಮ್ಮ ವಿರುದ್ಧವೇ ಆಗಿರುವಾಗ, ದೇಶಭಕ್ತರಾಗಿರುವ ನಾವು ಅದನ್ನು ಅಂಗೀಕರಿಸುವುದರಲ್ಲಿ ತಪ್ಪೇನು? ಇದೇ ಪ್ರಜಾಸತ್ತೆಯ ಲಕ್ಷಣ. ಅವಶ್ಯಾಗಿಯೆ ಅಧ್ಯಕ್ಷರ ದಾರಿಯಿಂದ ನಾವು ಬದಿಗೆ ಸರಿದರುವೆವು, ರಾಜೀನಾಮೆಗಳ ಕಾರಣವು ಇದು!" ಎಂದರು. "ಅಂತರಂಗದಲ್ಲಿ ನಾವು ಬೇರೇನೂ ಕಾದಿಟ್ಟಿಲ್ಲ. ಅಧ್ಯಕ್ಷರ ಕಾರ್ಯಕ್ರಮವು ಕಾಂಗ್ರೆಸಿನ ಮೂಲಸೂತ್ರಗಳಿಗೆ ಸರಿಯಾಗಿರುವವಷ್ಟಕ್ಕೆ ನಾವು ಅವರೊಡನೆ ಸಹಕರಿಸುವೆವು. ಅವರಿಂದ ನಮ್ಮ ತತ್ವಗಳು ಬೇರೆಯಾಗಿರುವಲ್ಲಿ ಸರ್ವಥಾ ನಮ್ಮಿಂದಾಗದು. ನಮಗೆ ಪ್ರಬಲವಾದ ಬಹುಮತ ದೊರೆತರೂ, ಕಾಂಗ್ರೆಸಿಗೆ ಹಿತವಾಗದ ರೀತಿಯಲ್ಲಿ ನಾವು ಅದನ್ನು ಅಧ್ಯಕ್ಷರ ವಿರುದ್ಧ ಎಸೆಯುವವರಲ್ಲ. ನಾವು ಮಾಡಿರುವ ಮೂಲಸೂತ್ರಗಳಿಗೆ ಅನುಸಾರವಾಗಿರುವ ಕಾರ್ಯಕ್ರಮವು ಹಾಗೆಯೇ ಇದೆ; ಇದಕ್ಕೆ ಒಪ್ಪದ ಕಾರ್ಯಕ್ರಮವನ್ನು ಅಧ್ಯಕ್ಷರು ಸೂಚಿಸಿದರೆ, ಅದನ್ನು ನಾವು ನಿರಾಕರಿಸುವೆವು. ಹಾಗೆಂದು, ನಾವು ಆ ವಿಷಯ ಸೋತರೆ, ನಾವು ಕಾಂಗ್ರೆಸಿನ ಹೊರಗಾಗಿ, ಎಷ್ಟೋ ರಚನಾತ್ಮಕ ಕಾರ್ಯಗಳನ್ನು ಕೈಕೊಳ್ಳುವೆವು. ಕಾಂಗ್ರೆಸಿನ ಮೂಲತತ್ವಗಳಿವೆ. ಅದನ್ನು ವಿರೋಧ ಕಾರ್ಯಕ್ರಮ ನಮಗೊಲ್ಲದು. ಅದರಂತಿರುವ ಕಾರ್ಯಕ್ರಮವಿರುವಲ್ಲಿ ಭೇದಗಳೇ ಇರವು. ಮೂಲತತ್ವಗಳನ್ನು ತೊರೆದರೆ, ನನಗೆ ಪ್ರತಿಯೊಬ್ಬನಿಗೂ ಕೃತಿಸ್ವಾತಂತ್ರ್ಯವಿದೆ.. ಎಂತೂ ತ್ರಿಪುರಿಯಲ್ಲಾಗುವ ಅಧಿವೇಶನದಲ್ಲಿ ಕಾರ್ಯಕ್ರಮವೂ ತತ್ವಗಳೂ ಪ್ರಕಟವಾಗುವುವಷ್ಟೆ" ಎಂದೂ ಅವರು ವಿವರವಾಗಿ ತಿಳಿಸಿರುವರು.



ಜೈರಾಮ್ ದಾಸ ದೌಲತ್ ರಾಮ್

ಖಾನ್ ಅಬ್ದುಲ್ ಗಫರ್ ಖಾನರು

ಗಾಂಧೀ ತತ್ವವೆಲ್ಲಿದೆ?

ಕರನಾಟಕ ಜಿಲ್ಲೆಯ ಯುವಕರ ಸಂಘದ ಅಧಿವೇಶನದಲ್ಲಿ ಅಧ್ಯಕ್ಷರಾಗಿ ಶ್ರೀ। ಎಸ್. ಎನ್. ಶೋಯಿಯವರು—ಕಾಂಗ್ರೆಸಿನ ಕುಂದುಗಳು ಎಷ್ಟೇ ಇರಲಿ, ಅದನ್ನು ತಡೆಯಿ ಸರ್ವನಾಶ ಕೆಲಸವಾದಿರಿ. ಧ್ಯೇಯ ಮತ್ತು ಭಾವನೆಗಳೊಳಗೆ ಬಹುಕಾಲದಿಂದಲೂ ಇದ್ದ ಹೋರಾಟವು ಈಗ ಅಧ್ಯಕ್ಷ ಚುನಾವಣೆಯ ಫಲಿತಾಂಶವಾಗಿ ಹೊರಬಿದ್ದಿದೆ. ಇದರ ಪರಿಣಾಮವು ಏನೂ ಆಗದಿದ್ದರೂ, ಈಗಣ ನಾಯಕರಲ್ಲಿ ಅತೃಪ್ತಿ ಎಂದೇ ಇದರ ಸೂಚನೆ. ಹಾಗೆಂದು, ಸರಿಯಾದ ಎಡಪಕ್ಷವೆಂಬುದು ಇನ್ನೂ ಉಂಟಾಗಿಲ್ಲ; ಸುಮ್ಮನೆ ಇದು ಅವರ ಜಯವೆನ್ನುವುದು ತಪ್ಪು. ಗಾಂಧೀ ತತ್ವದಂತೆ ಮಾತ್ರ ಇನ್ನು ಜನರು ನಡೆವಂತಿಲ್ಲ. ಇನ್ನು ಫೆಡರೇಶನನ್ನು ರದ್ದುಗೊಳಿಸಲು, ಜನಗಣದಿಂದಲೇ ಕಾನ್ಸ್ಟಿಟ್ಯುಯೆಂಟ್ ಎಸೆಂಬ್ಲಿ ಉಂಟಾಗುವ ಹಾಗೆ ಸರ್ವರೂ ಕೇಳಬೇಕು. ಎಂದರೆ, ರಾಜಕೀಯ ಸಮಸ್ತ ಕಾರ್ಯಗಳನ್ನು ಕಾಂಗ್ರೆಸು ಕಮಿಟಿಗಳೇ ನಿರ್ವಹಿಸಬೇಕು. ಆಗ ಮಾತ್ರ ಸರಕಾರವು ಇಂಥ ಎಸೆಂಬ್ಲಿಯಾಗಲೆನ್ನುವುದು. ಆಗ ಕಾಂಗ್ರೆಸೇ ಈ ಎಸೆಂಬ್ಲಿಯಾಗಬೇಕು, ದೇಶೀಯ ರಾಜ್ಯಗಳಲ್ಲಿ ಜಾಗ್ರತಿಯುಂಟಾಗಿರುವುದು ವಿಹಿತವೇ ಆದರೆ ಮುಖಂಡರು ಮಾತ್ರ ಅದನ್ನು ಸರಿಯಾಗಿ ಪೋಷಿಸಿ ಬರುತ್ತಿಲ್ಲ. ರಾಷ್ಟ್ರೀಯ ಸರಕಾರವಾಗಬೇಕು ಎಂದರು.

ರಾಷ್ಟ್ರೀಯ ಪಕ್ಷೀಯರು

"ಜವಾಬ್ದಾರಿಯನ್ನು ಹೊತ್ತುಕೊಳ್ಳುವುದಗತ್ಯ. ಪ್ರಜಾಭಿಪ್ರಾಯದಂತೆ ನಡೆಯಬೇಕೆಂದರೆ, ಈಗಿನ ಮುಖಂಡರು ಕೇಳರಿಲ್ಲ. ನಾವು ಹಾಗೆಯೇ ನಡೆಯಬೇಕು. ಕಾಂಗ್ರೆಸಿನ ನಿರ್ಣಯಗಳನ್ನು ನಾವೇ ವ್ಯಾಖ್ಯಾನಿಸಿ ತರಬೇಕು. ಎಡ-ಬಲ ಎಂದಿಲ್ಲದೆ ಎಲ್ಲರೂ ಒಂದಾಗಲೇ ಬೇಕಾಗಿ ನಮ್ಮ ಆಸೆಯಿದೆ. ಜವಾಬ್ದಾರಿಯನ್ನು ಈಗ ನಾವು ನಿರ್ವಹಿಸಲಾರೆವಾದರೆ, ಜನರಲ್ಲಿನ ಉತ್ಸಾಹವು ಕುಂದುವುದು. ಹದಿಮೂರರ ರಾಜೀನಾಮೆ ನಮಗೆ ಒಂದು ಆಹ್ವಾನ. ನಮ್ಮ ಇಚ್ಛೆ ಇದೇ; ಇತರ ನಾಗರದವರು ನಮ್ಮೊಡನೆ ಸೇರಿ ನಡೆಸಲು ಏನು ಮಾಡುವರೋ ನೋಡೋಣ ಎನ್ನುವರು.

ಜವಾಹರಲಾಲ ನೆಹರೂ

ಜಮ್ನಾಲಾಲ ಬಜಾಜರು

ಇಂದಿನ ಮಾತು

೧. ಕೌನ್ಸಿಲುಗಳು ನಿರ್ನಾಮವಾಗುವುವು

ಕಾಂಗ್ರೆಸು ಮಂತ್ರಿಗಳು ರಾಜ್ಯಗಳ ಪ್ರತಿನಿಧಿಗಳೂ ಸೇರಿ, ಫೆಡರೇಶನ್ ವಿಷಯ ಚರ್ಚಿಸಿ ಜನರು ಒಪ್ಪುವ ರೀತಿಯಲ್ಲಿ ಫೆಡರೇಶನು ಜ್ಯಾರಿಗೆ ಬರುವಂತೆ ಮಾಡಲಾದೀತೆಂದೂ; ಫೆಡರಲ್ ಎಸೆಂಬ್ಲಿಗೆ ರಾಜ್ಯಗಳಿಂದ ನೇಮಿಸುವ ಬದಲಾಗಿ ಆರಿಸುವ ಪ್ರತಿನಿಧಿಗಳೇ ಬರಲಿರುವರೆಂದೂ; ಹಿಂದೂ ಮುಸ್ಲಿಮ ಐಕ್ಯ ಸಾಧನೆಯನ್ನು ಇತರ ಮಹನೀಯರ ಕೈಗೆ ಒಪ್ಪಿಸಲಾಗಿದೆ ಎಂದೂ; ಪ್ರಾಂತ್ಯಗಳಲ್ಲಿ ಮೇಲು ಕೌನ್ಸಿಲುಗಳು ಯಾವ ತಡೆಯನ್ನು ಎಸೆಂಬ್ಲಿಗಳ ಕಾರ್ಯದ ಮೇಲೆ ಹಾಕಲಾರದಿರುವ ಕಾರಣ, ಇನ್ನೆರಡು ವರ್ಷಗಳಲ್ಲಿ ರದ್ದಾಗುವುವೆಂದೂ; ಸಿಂಧದಲ್ಲಿ ಕಾಂಗ್ರೆಸಿನವರನ್ನು ಕೂಡಿಯೇ ಮಂತ್ರಿಮಂಡಲ ರಚಿಸಿದರೆ ಉತ್ತಮವೆಂದೂ-ಶ್ರೀ। ಆಗಾಖಾನರು ತಿಳಿಸಿರುವರು.

೨. ಊರು ತುಂಬ ವಕೀಲರು

ಇದಕ್ಕೇನು ಮಾಡೋಣ ಎಂದು ಸಂಸ್ಥಾನದ ಹೈಕೋರ್ಟ್ ವಕೀಲರ ಸಂಘದ ಸ್ವರ್ಣೋತ್ಸವ ಕಾಲದಲ್ಲಿ ಚರ್ಚೆಯಾಯಿತು. ಎಳೆಯ ವಕೀಲರು ಹಳ್ಳಿಗಳಲ್ಲಿ ಹೋಗಿ ನೆಲಸುವುದು ಉತ್ತಮ ಎಂದು ಸರ್. ಎಮ್. ವೆಂಕಟಸುಬ್ಬಯ್ಯಾ ಅವರೆಂದರು. ಇದರಿಂದ ಹಳ್ಳಿಗಳಲ್ಲಿ ವ್ಯಾಜ್ಯಗಳು ಹೆಚ್ಚುವುವು ಎಂದು ಸರ್. ಸಿ. ಎಸ್. ಶಿವಸ್ವಾಮಿ ಅಯ್ಯರರೂ ಜಸ್ಟಿಸ್ ವರದಾಚಾರ್ಯರೂ ವಾದಿಸಿದರು. ವಕೀಲರು ಹೋದಲ್ಲಿ ವ್ಯಾಜ್ಯಗಳು, ಡಾಕ್ಟರರು ಹೋದಲ್ಲಿ ರೋಗಿಗಳು, ಇಂಜಿನೀಯರು ಹೋದಲ್ಲಿ ದುರುಸ್ತಿಗಳು! ಸರ್. ಶಿವಸ್ವಾಮಿಯವರು ಬಿ. ಎಲ್ ಶಿಕ್ಷಣವು ಇನ್ನೊಂದು ವರ್ಷ ಹೆಚ್ಚಬೇಕೆಂದರು. ಪರೀಕ್ಷೆ ಕಷ್ಟ, ಕಲಿಯುವುದು ಎಂತಾದರೆ,-ಅದನ್ನು ಸಾಧಿಸಬೇಕೆಂಬ ಯುವಕರ ಸಂಖ್ಯೆ ಹೆಚ್ಚಲಾರದೇ? ಅದರ ಬದಲಾಗಿ, ವಕೀಲರೇ ತಮ್ಮೊಳಗೆ ಆಯಾ ಉದ್ಯೋಗ ವಿಭಾಗಗಳನ್ನು ಹಂಚಿಕೊಳ್ಳುವಂತಾದರೆ ಉತ್ತಮವಾದೀತು. ಈ ವಿಷಯ ಚರ್ಚಿಸಿದಷ್ಟು ಅತೃಪ್ತಿಯು ಕಷ್ಟವಾಗುತ್ತ ಬರುತ್ತದೆ. ಪರಂತು ಆಗಾಗ ಈ ಚರ್ಚೆ ಉಂಟಾಗುವುದರಿಂದ, ಈ ರಗಳೆಯೇ ಬೇಡವೆಂದು ವಿದ್ಯಾರ್ಥಿಗಳು ದೂರ ಸರಿದರೂ ಸರಿಯಬಹುದು.

೩. ಬರ್ಮದ ವಿದ್ಯಾರ್ಥಿ ವೀರ

ಬರ್ಮದ ಎಣ್ಣೆ ಬಾವಿಗಳ ಕೆಲಸಗಾರರ ಮುಷ್ಕರವಾಗಲು, ಅವರಲ್ಲಿ ಕೆಲವರು ಮಾಗ್ವೆ ಎಂಬಲ್ಲಿಗೆ ಬರುವಾಗ, ಬರ್ಮಾ ವಿದ್ಯಾರ್ಥಿ ಸಂಘದ ಅಧ್ಯಕ್ಷ, ಕಾರ್ಯದರ್ಶಿಗಳು ಅವರೊಡನೆ ಸೇರಿದರು, ಸರಕಾರದ ಅಪ್ಪಣೆಗೆ ವಿರೋಧವಾದ ಮೆರವಣಿಗೆಗೆ ಇವರು ಸೇರಿದರೆಂದು ಇವರನ್ನು ದಂಡಿಸಲಾಯಿತು. ಆಗಲೇ, ಎಲ್ಲ ವಿದ್ಯಾರ್ಥಿಗಳ ಮುಷ್ಕರಕ್ಕೆ ಪ್ರಾರಂಭ. ಈಗ ಎಲ್ಲ ಶಾಲೆಗಳೂ ಕಾಲೇಜುಗಳೂ ಮುಚ್ಚಿಯೇ ಇವೆ.

ಯುನಿವರ್ಸಿಟಿ ವಿದ್ಯಾರ್ಥಿಗಳು ಸರಕಾರೀ ಅಫೀಸುಗಳೆದುರು ಸತ್ಯಾಗ್ರಹ ಮಾಡಿದರು. (ರಂಗೂನಿನಲ್ಲಿ) ಅವರನ್ನು ಪೋಲೀಸರು ಚದರಿಸುವಾಗ ಹೋರಾಟವಾಯಿತು. ಹಲವರಿಗೆ ಗಾಯಗಳಾದುವು, ಆಸ್ಪತ್ರೆಗೆ ಒಯ್ದರು. ಅವರೊಳಗೆ ಮೊಂಗ್ ಒಂಗ್ ಗ್ಯೋ ಎಂಬಾತನು ಸತ್ತನು.

ಬರ್ಮ ವಿದ್ಯಾರ್ಥಿಸಿಗೆ ಪೆಟ್ಟು ತಗಲದಂತೆ ತಾನೆ ಗಾಯಗೊಂಡು ಸತ್ತನೆಂದು ಈತನು ವೀರನೆನಿಸಿದನು. ಎಲ್ಲ ಭಾಗಗಳಿಂದಲೂ ಈತನ ಕಳೇಬರ ಕಾಣಲು ಸಾವಿರಕಟ್ಟಲೆ ಜನರು ನೆರೆದರು. ಡಿಸೆಂಬರು ೨೨ರಲ್ಲಿ ಶವದ ಮೆರವಣಿಗೆ. ಎಲ್ಲ ಮುಖ್ಯ ಮುಖಂಡರೂ ಹಾಜರಾದರು. ಸನ್ಯಾಸಿಗಳೂ ಸನ್ಯಾಸಿಯರೂ ನೂರಾರು ಬಂದರು. ನೂರು ಮೈಲು ದೂರದಿಂದ ಜನ ಬಂದಿದ್ದರು. ಬಂದವರ ಸಂಖ್ಯೆ ಬಹಳವಾಗಿತ್ತು.

ಎರಡು ಲಕ್ಷ ಜನರ ಮೆರವಣಿಗೆ! ಜಡ್ಸನ್ ಕಾಲೇಜಿನಲ್ಲಿ ಶವವಿತ್ತು; ಸಮಾಧಿ ಸ್ಥಾನವು ನೂರು ಮೈಲು ದೂರ. ಮೆರವಣಿಗೆಯು ಹೊರಟು ಸಮಾಧಿಸ್ಥಾನ ಸೇರಿದರೂ, ಶವವನ್ನು ಹೊರಡಿಸಬಾಗಲಿಲ್ಲ, ಅಷ್ಟು ಜನ! ಎಲ್ಲ ಬೇರೆಡುಗಳೂ, ಸಂಘ ಸಮಿತಿಗಳೂ ಸೇರಿದುವು. ಇಂಡಿಯನ್ ನೆಶನಲ್ ಕಾಂಗ್ರೆಸಿನ ಪ್ರತಿನಿಧಿಗಳೂ ಹಾಜರಾಗಿದ್ದರು. ಸಂಜೆ ಮಸುರಂಗಿನ ಬೆಳಕಿತ್ತು.

ಆದರೂ, ಒಬ್ಬನೇ ಪೋಲೀಸನಾಗಲಿ ಇನ್ಸ್ಪೆಕ್ಟರಾಗಲಿ ಉಸ್ತುವಾರಿ ನೋಡಿದ್ದಿಲ್ಲ. ಮೆರವಣಿಗೆ ತೀರ ಶಾಂತಭಾವದಿಂದ ಸಾಗಿತ್ತು. ಇದರ ಚಲಚ್ಚಿತ್ರವೆತ್ತಿದರು. ಅದನ್ನು ಇದೀ ಬರ್ಮದ ಸಿನೆಮಗಳಲ್ಲಿ ಪ್ರದರ್ಶಿಸಲಾಗಿದೆ.

ಜನರಲ್ ಫ್ರೆಂಕೋ— ಫ್ರಾನ್ಸು ಬ್ರಿಟನ್ನುಗಳಿಗೆ ಮೆಟ್ಟಿನವನಾದನು!

"ನಮ್ಮ ರಕ್ತ ಸುರಿದು ಸ್ಥಾಪಿಸಿದ ನಮ್ಮ ಸಾಮ್ರಾಜ್ಯವನ್ನು ಮುಟ್ಟಲು ನಾವು ಯಾರಿಗೂ ಬಿಡುವವರಲ್ಲ. ನಮ್ಮ ಅಧಿಕಾರವು ಕೈಬಿಡದಂತೆ ನೋಡುವೆವು" ಎನ್ನುತ್ತ, ಸ್ಪೆಯಿನ್ ಸ್ವಾತಂತ್ರ ಫ್ರಾನ್ಸಿಗೆ ಅಗತ್ಯವೆಂದು ಪುನಃ ರಾಜಕೀಯ ವ್ಯವಹಾರಗಳನ್ನು ಸ್ಪೆಯಿನಿನೊಡನೆ ಪ್ರಾರಂಭಿಸಲಾಗುವುದೆಂದು ತಿಳಿಸಿ, ಫ್ರೆಂಕೋವಿನ ಆಡಳಿತವನ್ನು ಫ್ರೆಂಚ್ ಸರಕಾರವು ಗೌರವಿಸಿತು.

ಫ್ರಾನ್ಸಿನ ಮತ್ತು ಜರ್ಮನಿಯ ಸ್ನೇಹಭಾವವು ಹೆಚ್ಚುವಾಗಲೇ ಬ್ರಿಟನರು ಮತ್ತು ಫ್ರೆಂಚರ ಮೈತ್ರಿ ಗಾಢವಾಗುತ್ತಲಿದೆ. ಚೆಂಬರ್ಲೇನರು ಹೇಳಿಕೆಗಳ ಪಾರ್ಲಿಮೆಂಟ ಭಾಷಣಗಳಿಂದ ಫ್ರೆಂಚ್ ಇಂಗ್ಲಿಷ ಸ್ನೇಹವು ಬಹಳ ದೃಢವಾಗಿದೆಂದು ಫ್ರೆಂಚ ಮಂತ್ರಿಗಳೆಂದರು.

ಫ್ರೆಂಕೋವು ತನಗೆ ಹಿಂಸೆ ಮಾಡಿದವರನು ನಿರ್ಮೂಲಿಸಲಿಚ್ಛಿಸಿದೆಂದು ಬೆದರಿಗಿಂದಿರುವ ಜನರು ಸ್ಪೆಯಿನನ್ನು ತ್ಯಜಿಸಲಿರುವರು. ಇವರನ್ನು ಫ್ರೆಂಚ ಮತ್ತು ಬ್ರಿಟಿಷ ಹಡಗುಗಳು ಸುರಕ್ಷಿತವಾಗಿ ಅಲ್ಲಿಂದ ಹೊರ ಒಯ್ಯುವುವು.

ಯುದ್ಧ ಮುಂದರಿಯಬೇಕೆಂದು ಕೂಗುವವರೂ ಇದ್ದಾರೆ.

ಬ್ರಿಟನರು ಫ್ರೆಂಕೋವನ್ನು ಮನ್ನಿಸಿದುದು ತಪ್ಪೆಂದು ಬಹಳವಾಗಿ ವಿರೋಧಿಸಿಗಳುಂಟಿವೆ. ಲಂಡನಲ್ಲಿ, ಲೇಬರ್ ಪಕ್ಷದವರ ಭಾಷಣಗಳು ಆದುವು. ಸಭೆಯ ಗಳನ್ನು ಮುಖ್ಯಮಂತ್ರಿಗಳಿಗೆ ಕಳಿಸಲಾಗಿದೆ. "ಚೆಂಬರ್ಲೇನರ ಈ ಕೃತಿಯನ್ನು ನಾಚಿಕೆಯಿಂದ ಹೋಲಿಸಿಂದು ಕಾಣುತ್ತೇವೆ" ಎಂದು ಸೂಚನೆಗಳಾಗಿವೆ!

ನ್ಯಸ್ರಾಯರೂ ಗಾಂಧಿಜೀಯವರೂ ಬಲು ಸಮೀಪವಾಗಿರುವರು.

ರಾಜಕೋಟಕ್ಕೆ ಗಾಂಧಿಜೀ ಹೊರಡುವ ಮೊದಲು, ಸೇವಾಗ್ರಾಮದಲ್ಲಿ ವೈಸ್ರಾಯರೊಡನೆ ಶ್ರೀಮತಿ ಎಗಥಾ ಹೆರಿಸನರು ವೈಸ್ರಾಯರಿಂದ ಒಂದು ತಂತೀವಾರ್ತೆ ಅವರಿಗೆ ತಲುಪಿಸಿದರು. ಅದರಲ್ಲಿ, ದೇಶೀಯ ರಾಜ್ಯಗಳ ವಿಷಯವಾದ ಪ್ರಶ್ನೆಯಿತ್ತು. ಅದನ್ನೋದಿಯೆ ಗಾಂಧೀಜೀ ಹೊರಡಲು ಉದ್ಯುಕ್ತರಾದರು ಎಂದು ಈಗ ತಿಳಿದು ಬಂದಿದೆ.

ರಾಜಕೋಟಕ್ಕೆ ವೈಸ್ರಾಯರ ಬರುವರೆಂದು ಗಾಂಧಿಜೀಯವರಿಗೆ ತಿಳಿದಿತ್ತು. ಈ ಬೇಗನೆ ಇವರಿಬ್ಬರು ಮಹಾಪುರುಷರು ಒಂದು ಕಡೆ ಸೇರಿ ಸಂಭಾಷಿಸುವ ಸುಮುಹೂರ್ತಕ್ಕೆ ಇನ್ನು ವಿಳಂಬವಾಗಲಾರದು. ಬ್ರಿಟಿಷ ಸಾಮ್ರಾಜ್ಯ ಸರಕಾರವು ದೇಶೀಯ ರಾಜ್ಯಗಳ ಕಡೆಗೆ ಹೇಗೆ ವರ್ತಿಸುವುದೆಂಬ ವಿಷಯದಲ್ಲಿ ನಾನಾ ವಿಭಿನ್ನ ಭಾವನೆಗಳಿವೆ. ಅರ್ಥಕ್ಕರ್ಥ ಮಾತುಗಳೇ ಇದುವರೆಗೆ ಆಯಿತಲ್ಲದೆ ಸ್ಪಷ್ಟವಾದುದಿಲ್ಲ. ಕೆಲವರು ಒಂದು ಅಭಿಪ್ರಾಯ ಹೇಳುವಾಗ ಹಲವರು ಮತ್ತೊಂದು ಹೇಳುವರು. ಯಾವುದು ಸರಿ, ಸಂಪೂರ್ಣ ಅಧಿಕಾರವಾಣಿ, ಯಾರೂ ಸರಿಯಾಗಿ ಹೇಳಲೊಲ್ಲರು.

ಇವರಿಬ್ಬರು ಮಹಾಪುರುಷರೊಳಗೆ ಒಪ್ಪಂದವಾಗದಿದ್ದರೂ, ಇವರೀರ್ವರ ಅಭಿಪ್ರಾಯಗಳು ಪರಸ್ಪರವಾಗಿ ಉಭಯತರಿಗೂ ತಿಳಿದುಬರದಿರದು. ಒಮ್ಮತವು ಕಷ್ಟ. ಸ್ಥಿತಿಸಾಧಕರಾದವುಗಳನ್ನು ಅವರು ತಿಳಿಸಿದ್ದರಿಂದ ಒಳ್ಳೆಯದು, ಸಾಮ್ರಾಜ್ಯ ಸರಕಾರದ ಅಭಿಪ್ರಾಯದಲ್ಲಿ, ಕಾಂಗ್ರೆಸಿನೊಡನೆ ತಕರಾರು ಮಾಡಿದರೆ, ನಾವು ಹೇಗೆ ನಡೆಯಬೇಕೆಂದಿದೆ ಎಂಬುದು ಸ್ಪಷ್ಟವಾಗಲಿರುವುದು. ರಾಜ್ಯಗಳೊಳಗೆ ಪ್ರಜಾಪಕ್ಷಗಳು ಚಳವಳಿ ವಿಚಾರವಾಗಿ ಜಲಿಯನ್ ವಾಲಾ ಬಾಗ್ ನಂತರ ಟನ್ನರು ತಿಳಿಸಿದ ಅಭಿಪ್ರಾಯವು ಎಷ್ಟಕ್ಕೆ ಅನ್ವಯಿಸಬಹುದು? ಅದೂ ಸ್ಪಷ್ಟವಿಲ್ಲ. ದೇಶೀ ಸಂಸ್ಥಾನಗಳ ವಿಷಯ ಕಾಂಗ್ರೆಸಿನವರೂ ನಾನಾ ರೂಪ ಪ್ರಯತ್ನಗಳು ಯಾವ ಪರಿಣಾಮಕ್ಕಾಗಿ ಎಂದು ಬ್ರಿಟಿಷ ಸರಕಾರಕ್ಕೆ ತಿಳಿಯದು.

ಸಂಭಾಷಣೆ ನಡೆದರೆ, ಈ ಸಂಶಯಗಳೆಲ್ಲವು ನಿವಾರಣವಾಗುವುವು. ಇದರಿಂದ ಉತ್ತಮ ಪರಿಣಾಮವುಂಟಾಗದಿದ್ದರೂ, ಕೆಡುಕೇನೂ ಆಗಲಾರದಷ್ಟೆ!

ತ್ರಿಪುರಿಯಲ್ಲಿ

ಸರಕಾರವು ಇನ್ನೂ ಪ್ರತಿಬಂಧಕಾಜ್ಞೆಯನ್ನು ಶಾಂತವಮಾಡಿಲ್ಲವೆಂದು ಸ್ಟೇಟ್ ಕಾಂಗ್ರೆಸಿನವರು ಸತ್ಯಾಗ್ರಹಿಗಳ ಗುಂಪುಗಳ ಕಳಿಸುವ ಕಾರ್ಯದಲ್ಲಿ ಸಭೆ ಸೇರಿ ನಿರ್ಧರಿಸುವರು.

ಗಾಂಧಿಜೀ

ಶ್ರೀ। ಸುಭಾಸ ಬಾಬು ನಿಂದಾಮಾಡಿದರನ್ನು ಕಾಣುವರು.

ಸುಭಾಷರು

ಜವಾಹರರು ಬರೆದ ಪತ್ರ ರಾಜೀನಾಮೆಯೆಂದು ತಿಳಿಯಲಿಚ್ಛಿಸುವರು.

ಸ್ವದೇಶಾಭಿಮಾನಿ

ತಾರೀಕು ೩—೩—೧೯೩೯

ಜನರಲ್ ಫ್ರಾಂಕೋ

ಬ್ರಿಟನ್ನು ಫ್ರಾನ್ಸುಗಳು ಜನರಲ್ ಫ್ರೆಂಕೋವಿನ ವಿಜಯವನ್ನೂ ಸ್ಪೈಯಿನಿನಲ್ಲಿ ಅಧಿಕಾರವನ್ನೂ ಒಪ್ಪಿಕೊಂಡುವು. ಆದರೆ, ಇಂಗ್ಲೆಂಡಿನಲ್ಲಿ ಈ ವಿಷಯದಲ್ಲಿ ಬಲ. ತೀಕ್ಷ್ಣವಾದ ಮತಭೇದವಿದೆ. ಇದನ್ನು ವಿಶ್ವಾಸಘಾತವೆಂದು ಲೇಬರ್ ಪಕ್ಷದವರೂ, ಪ್ರಜಾಸತ್ತೆಯನ್ನೂ ಸ್ವಾತಂತ್ರ್ಯವನ್ನೂ ವಂಚಿಸಿದರೆಂದು ಜವಾಹರಲಾಲ ನೆಹರುರವರೂ ಎನ್ನುತ್ತಾರೆ.

ಈ ವಿಷಯ ಆಲೋಚಿಸಿದರೆ—ಸ್ಪೈಯಿನಿನಲ್ಲಿ ಫ್ರೆಂಕೋವಿನದಲ್ಲದ ಮತ್ತೊಂದು ಸರಕಾರವೂ ಇದೆ, ಇದನ್ನು ಮನ್ನಿಸಿ ವಿಧೇಯರಾಗಿ ನಡೆವ ಪ್ರಜಾಕೋಟಿಯೂ ಇದೆ. ಈ ಸರಕಾರವನ್ನು ಖಂಡಿತವಾಗಿ ಮುರಿದಿಕ್ಕುವ ಶಕ್ತಿಯು ಫ್ರೆಂಕೋವಿಗೆ ಇದೆ ಎಂದು ಹೇಳಬರುವುದಿಲ್ಲ. ಇಷ್ಟರಲ್ಲೇ ಫ್ರೆಂಕೋವಿನ ಅಧಿಕಾರವನ್ನು ಮಂಜೂರು ಮಾಡದಿದ್ದಲ್ಲಿ, ಬ್ರಿಟನ್ನಿಗೂ ಫ್ರೆಂಕೋವಿನ ವಿರುದ್ಧಪಕ್ಷಕ್ಕೂ ಅನುಕೂಲವಾದ ರಿಯಾಯಿತಿಗಳನ್ನು ಪಡೆಯಬಹುದಾಗಿತ್ತು. ಹಾಗೆಂದು, ಮಂಜೂರಾತಿಗೆ ವಿಳಂಬಿಸಿದ್ದಲ್ಲಿ ಸ್ಪೈಯಿನಿನಲ್ಲಿನ ವಿರುದ್ಧಪಕ್ಷವು ಬೆಂಬಲವುಂಟಾಗಿ ಭಾವಿಸಿ, ಅಲ್ಲಿ ಯುದ್ಧವು ಇನ್ನಷ್ಟೇ ಕಾಲ ನಡೆದು ಕೊನೆಗೆ ಯುದ್ಧ ಮುಗಿದಾಗ, ಈಗ ದೊರೆತ ರಿಯಾಯಿತಿಗಳಿಗಿಂತಲೂ ಕಡಮೆ ರಿಯಾಯಿತಿಗಳು ಆಗ ದೊರೆಯಬಹುದೆಂದೂ ಊಹಿಸಬೇಕಾಗಿದೆ.

ಬ್ರಿಟಿಷ ಸರಕಾರವು ಬಲು ಬೇಗನೆ ಹೀಗೆ ಮಂಜೂರಾತಿ ಕೊಡಲು ನಿರ್ಧರಿಸಿತೆಂದು ಲೇಬರ್ ಪಕ್ಷದವರೇ ಮೊದಲಾಗಿ ತೀಕ್ಷ್ಣವಾಗಿ ಪಾರ್ಲಿಮೆಂಟಿನಲ್ಲಿ ಟೀಕಿಸಿರುವರು. ಫ್ರಾನ್ಸು, ಸ್ಪೈಯಿನಿನ ರಾಷ್ಟ್ರೀಯ ಪಕ್ಷದವರು, ರಿಪಬ್ಲಿಕ್ ಸರಕಾರದ ಪ್ರೆಸಿಡೆಂಟರು, ಮೊದಲಾದೆಲ್ಲರು ಬ್ರಿಟಿಷ ಸರಕಾರಕ್ಕೆ ಹೀಗೆ ಮಂಜೂರು ಮಾಡುವುದು ಉತ್ತಮವೆಂದು ಅಭಿಪ್ರಾಯ ತಿಳಿಸಿರುವರು. ಇಲ್ಲದಿದ್ದರೆ ಫ್ರೆಂಕೋ ಒಬ್ಬ ಕಠಿನವಾಗಿ ಮುಂದೊತ್ತಿ, ಇನ್ನೂ ಕಠಿನ ಶರ್ತ ಹೇಳುವ ಪ್ರಸಂಗವುಂಟಾದೀತೆಂದೂ ಅವರು ನಂಬಿರಬೇಕು.

ಫ್ರೆಂಕೋವಾದರೂ ಬಹುದಿನ ಸರಕಾರ ನಿರ್ವಹಿಸಬಹುದೆನ್ನುವ ಶಿಕ್ಷೆ ಸ್ಪೈಯಿನಿನ ಸರಕಾರದ ಭವಿಷ್ಯವೇ ಹಾಗೆ. ಆದರೆ, ಸದ್ಯ ಸ್ಥಿತಿಯಲ್ಲಿ ಸರಕಾರ ನಿರ್ವಹಿಸಲು ಅವನೇ ಸಮರ್ಥನಾಗಿರುವನು. ಇಡೀ ಜನಾಂಗವನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳುವ ಸಾಮರ್ಥ್ಯವು ಅವನಿಗಿದೆ. ಮಂಜೂರು ಮಾಡುವಾಗಲೂ,—ಸ್ಪೈಯಿನ ಸ್ಪೈಯಿನಾಗಿಯೇ ಇರಬೇಕೆಂದೂ, ವಿರೋಧಿಗಳನ್ನು ಹಿಂಸಿಸಬಾರದೆಂದೂ ಬ್ರಿಟಿಷರೂ ಫ್ರೆಂಚರೂ ಹೇಳಿದ ಶರ್ತಗಳಿಗೆ ಫ್ರೆಂಕೋ ಸಮ್ಮತಿಸಿರುವನು.

ಇದುವರೆಗೆ ನಡೆಯುತ್ತಿದ್ದ ಸರಕಾರ ಕ್ರಮವು-ಕಾನೂನು ಸಮ್ಮತವಾಗಿತ್ತೆಂದೂ, ಪ್ರಜಾಸತ್ತಾವಾದಿಯಾಗಿತ್ತೆಂದೂ ನಂಬುವವರಿಗೆ ಫ್ರೆಂಕೋ-ಸರಕಾರದಲ್ಲಿ ನಂಬದಂತಾಗಿದೆ. ಲೆನಿನ್, ಮುಸ್ಸೊಲಿನಿ, ಹಿಟ್ಲರರು ಕಾನೂನು ಪ್ರಕಾರ ಸ್ಥಾಪಿತವಾದ ಸರಕಾರಗಳನ್ನೇ ಮುರಿದವರು. ಆದರೂ ಇವರೇ ಸ್ಥಾಪಿಸಿರುವ ಸರಕಾರಗಳನ್ನು ಕಾನೂನು ಪ್ರಕಾರ ಅಂಗೀಕರಿಸಬೇಕಾಗಿದೆ, ಏಕೆಂದರೆ ಅವೇ ರೂಢಿಯಲ್ಲಿದ್ದು ಅಧಿಕಾರ ನಡೆಸುತ್ತವೆ. ಸ್ಪೈಯಿನಿನಲ್ಲಿ ಇದುವರೆಗೆ ಮೆರೆದ ಸರಕಾರವು ಪ್ರಜಾಪ್ರಭುತ್ವವಾಗಿರಲಿಲ್ಲ; ಅದು ಕೊಮ್ಯುನಿಸ್ಟವೆಂದೇ ಅದರ ವಿರೋಧಿಗಳೆಂದಿರುವರು. ಈ ಮಾತಾದರೂ ಪೂರ್ಣ ಸತ್ಯವಾದುದಲ್ಲ. ನಾನಾ ಬಗೆಯ ಕ್ರಾಂತಿಕಾರರ ಸಹಾ...

ತ್ರಿಪುರಿ ಅಧಿವೇಶನಕ್ಕೆ ಸೂಚನಾತ್ರಯುಗಳು.

ಶ್ರೀ ಶರತ್‌ಚಂದ್ರ ಬೋಸರಿಂದ

೧ ಎಲ್ಲ ಜನಾಂಗಗಳಿಗೂ ಈಗ ಸ್ವಯಂ ನಿರ್ಧಾರ ತತ್ವವೇ ಅನ್ವಯಿಸುತ್ತದೆ. ಕೆಲವು ವರ್ಷಗಳಿಂದ ಅಲ್ಲಲ್ಲಿನ ದೇಶಗಳಲ್ಲಿ ಇದನ್ನು ಅನುಸರಿಸಿ ರಾಜ್ಯಾಂಗರಚನೆಯಾಗಿದೆ. ಇಂದಿಯಕ್ಕೆ ಮಾತ್ರ ಇದಿನ್ನೂ ಅನ್ವಯಿಸಿಲ್ಲ. ಪುರಾತನ ಸಂಸ್ಕೃತಿಯ ಸುಧಾರಣೆಯ ಒಂದೇ ಕಡೆ ಕೂಡಿರುವ ಈ ಜನಾಂಗಕ್ಕೆ ಇದೇಕೆ ವಿಪರೀತ ತಿರಸ್ಕಾರ? ೧೯೩೫ರಲ್ಲಾಗಿರುವ ಇಂಡಿಯಾ ಆಕ್ಟು ಈ ಸೂತ್ರವನ್ನು ಮನ್ನಿಸಿ ನಡೆದಿಲ್ಲ. ಜನರಿಗಂತೂ ಅಧಿಕಾರ ಕೊಟ್ಟಿಲ್ಲ ಮಾತ್ರವಲ್ಲ, ಬ್ರಿಟಿಷ ಸಾಮ್ರಾಜ್ಯಶಾಹಿಯನ್ನು ಇನ್ನೂ ಬಲಪಡಿಸುವ ಪ್ರಬಲ ಕ್ರಮಗಳಿವೆ. ೧೯೩೬ರಲ್ಲೇ ಅದನ್ನು ಜನಾಂಗವು ತಿರಸ್ಕರಿಸಿಯದೆ.

ಫೆಡರಲ್ ಸ್ಕೀಮಿಗೆ ವಿರುದ್ಧವಾಗಿ ಇಷ್ಟು ಕಾಲ ಒಂದೇ ಸ್ವರದಿಂದ ಇಂಡಿಯವು ತನ್ನ ಅಭಿಪ್ರಾಯ ತಿಳಿಸಿಯದೆ. ಹೀಗೆ ತಿಳಿಸುವುದಷ್ಟೆ ಮಾತ್ರ ಸಾಲದು, ಈ ವಿಷಯ ಬ್ರಿಟಿಷ ಸರಕಾರವು ತನ್ನ ಅಭಿಪ್ರಾಯ ತಿಳಿಸುವಂತೆ ಆರು ತಿಂಗಳ ವಾಯಿದೆ ಕೊಡಬೇಕು. ಈ ಉತ್ತರ ನೋಡಿಯೆ, ಬ್ರಿಟಿಷ ಸರಕಾರಕ್ಕೂ ಕೊಂಗ್ರೆಸಿಗೂ ಒಂದು ಕರಾರನ್ನು ರಚಾಯಿಸಿ ಇವೆರಡು ಸ್ವತಂತ್ರ ರಾಷ್ಟ್ರಗಳ ಹೀಗೆ ವರ್ತಿಸಬೇಕೆಂದು ನಿರ್ಧರಿಸಬೇಕಾಗಿದೆ. ಈ ಕರಾರನ್ನು ಬ್ರಿಟಿಷ ಪಾರ್ಲಿಮೆಂಟೂ ಕೊಂಗ್ರೆಸೂ ಒಪ್ಪಿ ಸಹಿ ಹಾಕತಕ್ಕದು.

ಬ್ರಿಟಿಷ ಸರಕಾರವು ಅತೃಪ್ತಿಕರವಾದ ಉತ್ತರಕೊಡುವಲ್ಲಿ, ಇಂಡಿಯದ ಬೇಳಿಕೆಯನ್ನು ನಡೆಸಿಯೇ ಕೊಡಲು, ಅದನ್ನು ಒತ್ತಾಯಪಡಿಸುವುದಕ್ಕಾಗಿ, ಏನುಮಾಡಬೇಕೋ ಅದನ್ನು ನಿರ್ಣಯಿಸಬೇಕಾಗಿದೆ. ಬ್ರಿಟಿಷ ಸರಕಾರದ

ಯದಿಂದಲೇ ಮಾತ್ರ ಆ ಸರಕಾರವು ಮೆರೆದಿತು. ಆ ಸರಕಾರವನ್ನು ಬೇಕಾದರೆ ಕ್ರಾಂತಿಕಾರರ ಸರಕಾರವೆನ್ನಬಹುದು. ೧೯೩೧ರಿಂದ ವೋಟಿನ ಬೆಲೆಯಲ್ಲಿ ಸ್ಪೈಯಿನಿನಲ್ಲಿ ವಿಶ್ವಾಸಗೆಟ್ಟಿದೆ. ಈಗ ಪ್ರೆಸಿಡೆಂಟರಾಗಿರುವರೂ ಅಧಿಕಾರಕ್ಕೆ ಬಂದು ೧೯೩೬ರಲ್ಲಿ, ಫ್ರೆಂಕೋವು ಕೈಕೊಂಡ ಕ್ರಮಗಳಂಥವನ್ನೆ ಕೈಕೊಂಡು. ಪ್ರೆಸಿಡೆಂಟರು ಫ್ರೆಂಕೋ-ವ ತ್ತು ಪ್ರೆಸಿಡೆಂಟ ಅಜಾನರಿಗೆ ಹೆಚ್ಚಿನ ತಾರತಮ್ಯವಿಲ್ಲ.

ಇನ್ನು ಯುದ್ಧವೇನೋ ಸದ್ಯದಲ್ಲೇ ಮುಗಿಯಲಿದೆ. ನಡೆದ ಯುದ್ಧದಲ್ಲಿ ಬ್ರಿಟಿಷರ ನಾವೆಗಳೆಷ್ಟೋ ನಷ್ಟವಾದುವು, ಸ್ಪೈಯಿನಿನ ಜನರೂ ಊರುಗಳೂ ನಷ್ಟವಾದುವು. ಆದರೆ, ಇದ್ದ ರಾಜ್ಯಭಾಗದಲ್ಲಿ, ಫ್ರೆಂಕೋ ಜೀವನವನ್ನು ಪುನರುಜ್ಜೀವನಗೊಳಿಸುತ್ತ ಶಾಂತಿಪಾಲನೆ ಮಾಡುತ್ತ ಬರುತ್ತಿರುವನು. ಇವನ ಸಹಾಯಕರು (ಜರ್ಮನಿ ಇಟಲಿಗಳು) ಈಗ ತಾವು ಮಾಡಿದ ಸಹಾಯಕ್ಕೆ ಬೆಲೆ ಕೇಳಬಹುದಿರರು. ಪಾವತಿ ಮಾಡುವ ಭಾರದಿಂದ ಫ್ರೆಂಕೋ ತಪ್ಪಿಸಿಕೊಳ್ಳಲಾರನು. ಆಗ, ಆ ಚಿಕ್ಕಾಟ ಪೆದ್ದರೆ, ಫ್ರಾನ್ಸು ಬ್ರಿಟನ್ನುಗಳು ಫ್ರೆಂಕೋವಿನ ಸಾಲಗಾರರೊಡನೆ ಹೋರಾಡಬೇಕಾಗುವುದು.

ನೋಡ್ಬೇಕು

ಜನರಲ್ ಫ್ರೆಂಕೋವಿನ ಕೈಗೆ ತೆಂಕು ಪಾಡಲಾಗಿರುವ ಸ್ಪೈಯಿನಿನ ಒಂದು ತುಂಡಲ್ಲದೆ (ರಾಜಧಾನಿಯಿರುವ ಅಂಶ) ಉಳಿದುದೆಲ್ಲ ಸೇರಿದೆ. ಇದು ೧೩೫೦೦೦ ಚದರ ಮೈಲು ವಿಸ್ತಾರವುಳ್ಳದು, ೧೬ ಮಿಲ್ಲಿಯ ಜನಸಂಖ್ಯೆಯುಳ್ಳದು. ಇದರ ಜತೆಗೆ ಆತನಿಗೆ ೧೩೪೦೦ ಚದರ ಮೈಲು ವಿಸ್ತಾರದ ಮತ್ತು ಒಂದೂವರೆ ಮಿಲ್ಲಿಯ ಜನರುಳ್ಳ ವಸಾಹತುಗಳೂ ಸೇರಿವೆ.

ಸ್ಪೈಯಿನ್ ಸರಕಾರ ಪಕ್ಷಕ್ಕೆ—ಮೆಡ್ರಿಡ್ ರಾಜಧಾನಿ-೪೮೦೦೦ ಚದರ ಮೈಲು ವಿಸ್ತೀರ್ಣವಾದ ಪ್ರದೇಶದಲ್ಲಿ ೭ ಮಿಲ್ಲಿಯ ಜನರುಳ್ಳ ಅಂಶ ಮಾತ್ರ ಉಳಿದಿದೆ.

ಅಭಿಪ್ರಾಯವು ೬ ತಿಂಗಳ ಮೊದಲೇ ತಿಳಿದಲ್ಲಿ ಅಥವಾ ಇತರ ಅಗತ್ಯ ವಿದ್ಯಮಾನಗಳುಂಟಾದಲ್ಲಿ ಕೊಂಗ್ರೆಸು ಹೀಗೆ ತಾನಾಗಿ ಮೊದಲೇ ವರ್ತಿಸಬಹುದು.

ಕೊಂಗ್ರೆಸಿನ ಕೇಳಿಕೆ ಮನ್ನಿಸಿದಲ್ಲಿ, ಕೊಂಗ್ರೆಸು ಒಂದು ಕೊನ್ಸಿಟ್ಯುವೆಂಟ್ ಎಸೆಂಬ್ಲಿ ಕೂಡಿಸಿ, ಸ್ವಯಂನಿರ್ಧಾರ ತತ್ವಕ್ಕನುಗುಣವಾದ ರಾಜ್ಯಾಂಗರಚನೆಯ ಕ್ರಮವನ್ನು ರಚಾಯಿಸುವುದು.

ಇವೇ ಆರು ತಿಂಗಳ ತನಕ, ಯಾವತ್ತು ಕೊಂಗ್ರೆಸು ಕಮಿಟಿಗಳೇ ಮೊದಲಾದುವು ಹಿಂದೀ ಜನಾಂಗವನ್ನು ಮುಂದಣ ಕಾರ್ಯಕ್ರಮಕ್ಕಾಗಿ ಸಿದ್ಧಗೊಳಿಸಬೇಕಾಗಿದೆ.

೨ ಇಂಡಿಯವು ಒಂದೇ, ವಿಭಕ್ತವಲ್ಲ ಎಂದು ಕೊಂಗ್ರೆಸು ಪದೇ ಪದೇ ಸಾರಿದೆ. ಬ್ರಿಟಿಷ ಸಾಮ್ರಾಜ್ಯಶಾಹಿಗಾಗಿ ಇದನ್ನು ವಿಭಜಿಸಿರುವರು. ರಾಜ್ಯಗಳೊಳಗಣ ಪ್ರಜೆಗಳಿಗೂ ಬ್ರಿಟಿಷ ಪ್ರಾಂತ್ಯಗಳೊಳಗಣ ಪ್ರಜೆಗಳಿಗೆ ಇರುವ ಹಕ್ಕುಗಳು ಇರಬೇಕೆಂದು ಕೊಂಗ್ರೆಸು ಸಾರಿದೆ. ಹೀಗಾಗಿ, ರಾಜ್ಯಗಳಲ್ಲಿ ಪ್ರಜಾಪ್ರಭುತ್ವ ಸಿಗುವಂತೆ ನಡೆವ ಚಳವಳದಲ್ಲಿ ಕೊಂಗ್ರೆಸು ತನ್ನ ಪೂರ್ಣ ಸಹಾನುಭೂತಿ ತೋರಿಸುವುದೆ. ಇದುವರೆಗೆ ಈ ಸಹಾನುಭೂತಿಯು ಕೇವಲ ನೈತಿಕರೂಪದಿಂದಲೇ ಇತ್ತು. ಈಗ ರಾಜಕೋಟ, ಜಯಪುರ ಮೊದಲಾದ ರಾಜ್ಯಗಳಲ್ಲಿ ನಡೆವ ಚಳವಳ ಕಾಲದಲ್ಲಿ, ಪರಿಷ್ಯ ಸರಕಾರವು ಈ ರಾಜ್ಯಗಳ ಬೆಂಬಲಕ್ಕೆ ನಿಂತ ಜನರ ಚಳವಳವನ್ನು ಅಡಗಿಸ ನೋಡುವುದಾಗಿ ತಿಳಿದು ಬಂದ ಕಾರಣ, ಇನ್ನು ಕೊಂಗ್ರೆಸು ಸಹಾನುಭೂತಿ ಮಾತ್ರ ತೋರಿ ಕೂತರೆ ಸಾಲದಾಗಿದೆ. ಇನ್ನು ವಿದ್ಯಮಾನಗಳನ್ನು ಕಂಡು, ಕೊಂಗ್ರೆಸು ತಾನೂ ಈ ಚಟುವಟಿಕೆಗಳಲ್ಲಿ ಭಾಗವಹಿಸಬೇಕಾಗುವುದು. ಕೊಂಗ್ರೆಸಿನ ಹೆಸರಲ್ಲಿ ರಾಜ್ಯಗಳಲ್ಲಿನ ಪ್ರಜೆಗಳು ಚಳವಳಿಸಿದಂತೆ ಮಾಡಿದ ಹರಿಪುರ ನಿರ್ಣಯವನ್ನು ಇನ್ನು ರದ್ದುಮಾಡಬೇಕು. ಕಾರ್ಯಕಾರೀ ಮಂಡಲವು ರಾಜ್ಯಗಳಲ್ಲಿನ ಪ್ರಜೆಗಳಿಗೆ ಹೇಗೆ ಸಹಾಯ ಮಾಡಬಹುದೆಂಬುದನ್ನು ಕಾಲೋಚಿತವಾಗಿ ಸೂಚಿಸಬೇಕು. ಈ ರಾಜ್ಯಗಳಲ್ಲಿ ಚಳವಳದಲ್ಲಿ ಸೇರಿ ನಾನಾ ಕಷ್ಟ ಕ್ಲೇಶಗಳನ್ನು ಸಹಿಸಿದ ಎಲ್ಲರನ್ನು ಕೊಂಗ್ರೆಸು ಅಭಿವಂದಿಸುತ್ತದೆ.'

೩ ರಾಷ್ಟ್ರೀಯ ಸ್ವಯಂಸೇವಕ ದಳದ ಏರ್ಪಾಡು.

ಅಹಿಂಸಾತ್ಮಕ ತತ್ವದ ಆಧಾರದಿಂದ, ಅಖಿಲ ಭಾರತದಲ್ಲಿ ವರ್ತಿಸತಕ್ಕ ಸ್ವಯಂಸೇವಕರ ದಳವೊಂದು ಪೂರ್ಣ ಹೊಂದಬೇಕು.

ಇವರು—ಸ್ವಾತಂತ್ರ್ಯಸಾಧನೆಗೆ ಹೋರಾಡುವಲ್ಲಿ ಸಹಾಯಕರಾಗಬೇಕು, ಹಾಗೇ ರಾಜ್ಯಗಳಲ್ಲಿನ ಸಾಧನೆಗಳಿಗೆ ಸಹ. ದಂಗೆಗಳಲ್ಲಿ ಶಾಂತಿಪಾಲನೆಗೆ ಇವರು ಸಹಾಯಕರಾಗಬೇಕು, ಜನತೆಯಲ್ಲಿ ಸದಸ್ಮರಣೆ ಕಲಿಸಲಿಕ್ಕೆ ಮತ್ತು ರಚನಾಶೀಲ ಕಾರ್ಯಕ್ರಮವನ್ನು ಜಯ್ಯಾರಿಗೆ ತರಲಿಕ್ಕೆ ಇವರು ಸಹಾಯಕರಾಗಬೇಕು.

ಕೊನೆಯಪಕ್ಷ ಇವರ ಸಂಖ್ಯೆ ಒಂದು ಕೋಟಿಯಾಗಿರಬೇಕು.

ಇಡೀ ದೇಶದಲ್ಲಿ ಕಿಸಾನ್ ಸಭೆಗಳು ಸ್ಥಾಪಿಸಿ, ಕೊಂಗ್ರೆಸಿನ ಕಾರ್ಯಕ್ರಮವನ್ನು ನಡೆಸಬರುವಂತಾಗಬೇಕೆಂದು ಪ್ರೊಫೆಸರ ರಂಗರದೊಂದು ನಿರ್ಣಯವೂ ಇದೆ.

ಬರುತ್ತದೆ! ಬರುತ್ತದೆ!!
ರೂಬಿಲಾ, ಮಾಸ್ಟರ್ ಬೆಂಜಮಿನ್
ಇವರು ಅಭಿನಯಿಸಿದ
ಸ್ವಾಕಲ್ ವಾಲಿ
ಎಂಬ ಹಿಂದೀ ವಾಕ್ಪಟಲನ ಚಿತ್ರವು ಸ್ಥಳೀಯ ಚಿತ್ರಾ ಟಾಕಿಸಿನಲ್ಲಿ ಸದ್ಯದಲ್ಲೆ ಪ್ರದರ್ಶಿಸುವುದು

ಈ ಅಂಕೆಗಳಿಂದೇನು?

ಬ್ರಿಟಿಷ ಸರಕಾರವು ಈ ವರ್ಷದಲ್ಲಿ ೫೮೦ ಮಿಲ್ಲಿಯ ಪವನನ್ನು ಯುದ್ಧ ಸನ್ನಾಹಗಳಿಗಾಗಿ ವ್ಯಯಿಸುವುದು. ಇನ್ನೂರು ಮಿಲಿಯ ವಿಮಾನಸೇನೆಗೆ, ೧೫೦ ಮಿಲ್ಲಿಯ ಭೂ ಮತ್ತು ಜಲ ಸೇನೆಗಳಿಗೆ ಪ್ರತ್ಯೇಕ. ಇದರ ಜಮೆಯಲ್ಲಿ ಕೃಷಿಯ ಅಭ್ಯುದಯಕ್ಕಾಗಿ ಧಾರಾಳ ವ್ಯಯವಾಗಲಿದೆ. ಒಟ್ಟು ಖರ್ಚು ೧,೨೦೦ ಮಿಲ್ಲಿಯ ಪವನು. ಈಗ ಮುಗಿವ ವರ್ಷದ ಖರ್ಚಿಗಿಂತ ೨೦೦ ಮಿಲ್ಲಿಯ ಪವನು ಹೆಚ್ಚು. ತೆರಿಗೆ ಹೆಚ್ಚಿಸಲು ಅಪಾಯ ಉಪಾಯವೊಂದೇ ಸಾಲ!

ಜರ್ಮನ ಜನಾಂಗದ ಆಯವು ಅತಿ ಹೆಚ್ಚಾಗಿದೆ. ಈ ವರ್ಷ, ೬೩,೦೦೦,೦೦೦,೦೦೦ ಪವನು. ಕೆಲಸವಿರುವ ಜನರ ಸಂಖ್ಯೆ ೨೧ ಮಿಲ್ಲಿಯ, ಇದರಲ್ಲಿ ೬ ಮಿಲ್ಲಿಯ ಸ್ತ್ರೀಯರು. ದೈನಿಕ ಶ್ರಮವು ೭ ತಾಸು ೫೦ ಮಿನಿಟುಗಳಾಗಿ ಸಂಪಾದಿಸಲಾಗಿದೆ. ಇದರ ಜತೆಯಲ್ಲಿ ತೆರಿಗೆ ೫೫೦ ಮಿಲ್ಲಿಯ ಪವನಾಗಿತ್ತು. ಈಗ ೧,೮೦೦ ಮಿಲ್ಲಿಯ ಪವನಾಗಿದೆ. ಸಾಲದ ಬಡ್ಡಿ ಸಹ ೩೮೦ ಮಿಲ್ಲಿಯ ಪವನು. ಪ್ರತಿಯೊಂದು ಭಾಗದಲ್ಲಿ ಏರುಗೆಯೆ.

ಫ್ರಾನ್ಸು ದೇಶದಲ್ಲಿ ಜನನ ವಿವಾಹ ಎರಡೂ ಕಡಮೆ ಸಂಖ್ಯೆಗೆ ಇಳಿದಿವೆ. ಕಳೆದ ವರ್ಷ ಜನನಗಳ ಸಂಖ್ಯೆ ಇಳಿದೇ ಹೋಗಿದೆ. ಮರಣಗಳ ಸಂಖ್ಯೆ ಜನನಗಳಿಗಿಂತ ೨೭,೩೬೫ ಹೆಚ್ಚು. ವಿವಾಹಗಳು ಕಳೆದ ವರ್ಷ ೨೦,೨೮೧೧ ಇದ್ದುವು. ಈ ವರ್ಷ ೨೦೦೧೬೦ ಮಾತ್ರ. ಮರಣಗಳು ಕಳೆದ ವರ್ಷ ೪೭೬೧೩೫ ಈ ವರ್ಷ ೪೭೪೧೧೭. ವಿವಾಹವಿಚ್ಛೇದಗಳು ೧೭,೬೭೭ ಇದ್ದುವು. ಈ ವರ್ಷ ೧೮೮೧೩೪. ಒಟ್ಟು ಜನನಗಳು ೪೭೦೧೫೦ ಇದ್ದುವು. ಈ ವರ್ಷ ೪೬೭೭೪೫.

ಬ್ರಿಟಿಷರು ಪತ್ರವ್ಯವಹಾರದಲ್ಲಿ ಮೊದಲನೆಯವರಾಗಿ ಬರುತ್ತಾರೆ ಪ್ರತಿಯೊಬ್ಬನು ಒಂದು ವರ್ಷದಲ್ಲಿ ಸರಾಸರಿ ೭೦ ಪತ್ರಗಳನ್ನು ಬರೆವನಂತೆ. ಯುನೈಟೆಡ್ ಸ್ಟೇಟ್ಸಿನಲ್ಲಿ ಜನರು ಸರಾಸರಿ ೬೭೦ಂತೆಯೂ, ಸ್ವಿಟ್ಸರ್ಲೆಂಡ್, ಜರ್ಮನಿ, ನ್ಯೂಜಿಲೇಂಡ್‌ಗಳಲ್ಲಿ ೫೦ರಂತೆಯೂ ಬರೆವರು. ಇಟಲಿ ಮತ್ತು ಸ್ಪೈಯಿನ್‌ಗಳಲ್ಲಿ ತಲಾ ೨೦ ಪತ್ರ ಮಾತ್ರ.

ಇಟಲಿಯು ಪ್ರತಿವರ್ಷ ೧೨,೦೦,೦೦೦ ಪವನನ್ನು ವಿವಾಹಗಳಿಗಾಗಿ ವ್ಯಯಿಸುತ್ತದೆ. ಹೇಗೆ? ವಿವಾಹಿತರಿಗೆ ಸಾಲದ ರೂಪವಾಗಿ ಸರಕಾರವು ಕೊಡುವುದು. ಆದರೂ ಪರಿಣಾಮವು ಮುಸ್ಸೊಲಿನಿಗೆ ತೃಪ್ತಿಕರವಾಗಿಲ್ಲ. ಕಳೆದ ವರ್ಷ ಮದುವೆಗಳ ಸಂಖ್ಯೆ ಹಿಂದಣ ವರ್ಷಕ್ಕಿಂತ ನೇಕಡಾ ೧೨ರ ಕಡಿಮೆ. ಜನನಗಳ ಸಂಖ್ಯೆ ಹಿಂದಣವುಗಳಿಗಿಂತ ನೇಕಡಾ ೫ ಹೆಚ್ಚು. ಯುದ್ಧದ ಮೊದಲಿನ ದಾಮಾಶಾಯಿಕ್ಕೆ ಇನ್ನೂ ಬಂದಿಲ್ಲ. ೧೯೩೭ರಲ್ಲಾದ ಜನನಗಳಿಗಿಂತ ಕಳೆದ ವರ್ಷ ೪೬೭೫೫ ಜನನಗಳು ಹೆಚ್ಚು. ಜನಸಂಖ್ಯೆಯಲ್ಲಿ ೪೨೪,೩೯೪ ಹೆಚ್ಚು. ಒಟ್ಟು ಜನಸಂಖ್ಯೆ ೪೪,೧೫೬,೦೦೦. ೧೯೬೦ರೊಳಗೆ ೬೦ ಮಿಲ್ಲಿಯವಾಗಲೇಬೇಕೆಂದು ಮುಸ್ಸೊಲಿನಿಯ ಆಸೆ.'

ಲಂಡನಿನ ಒಂದು ಸಿನೆಮಾದಲ್ಲಿ ಟೆಲಿವಿಜನ್ ಮೂಲಕ, ಅಮೇರಿಕದಲ್ಲಿ ನಡೆದ ಮಲ್ಲಯುದ್ಧದ ಪ್ರದರ್ಶನವಾಯಿತು. ಅದನ್ನು ಬಹಳ ಆದರದಿಂದ ಜನರು ಕಂಡರೆಂದು ಈ ವರ್ಷ ೩೫೦ ಸಿನೆಮಾಗಳಲ್ಲಿ ಈ ದೂರದರ್ಶನೋದ್ಯೋಗದ ಛಾಯಾ ಚಿತ್ರಗಳನ್ನು ಮಾತ್ರ ತೋರಿಸುವ ಹಾಗೆ ಕೂಡಲೆ ಏರ್ಪಾಡು ಮಾಡುವರು.

ಮದ್ರಾಸು—ಹಿಂದೀ ವಿರುದ್ಧ ಚಳವಳ ನಡೆದು ಜೈಲು ಸೇರಿದವರು ೭೦೦.

ರಾಜಕೋಟೆ—ಸತ್ಯಾಗ್ರಹಿಗಳು ಜೈಲಿನಲ್ಲಿರುವುದೂ ೭೦೦.

ಚೀನೀ ರಣಾಂಗಣದ ರೋಮಾಂಚನಕಾರಿ ಅನುಭವಗಳು!

★

ಚೀನ ಜಪಾನ ಯುದ್ಧದಲ್ಲಿ ಭಾರತಕ್ಕೆ ಚೀನದ ಮೇಲಿರುವ ಸಹಾನುಭೂತಿಯನ್ನು ಪ್ರತ್ಯಕ್ಷ ಪ್ರಮಾಣಗಳಿಂದ ತೋರಿಸುವುದಕ್ಕೋಸ್ಕರ ಯುದ್ಧದಲ್ಲಿ ಗಾಯಗೊಂಡು ನರಳುತ್ತಿರುವ ಯೋಧರ ಸೇವೆ ಶುಶ್ರೂಷೆಗಳನ್ನು ಮಾಡುವದಕ್ಕೋಸ್ಕರ ಅಖಿಲಭಾರತ ರಾಷ್ಟ್ರೀಯ ಮಹಾಸಭೆಯು ಒಂದು ಸೇವಾದಳವನ್ನು ಕಳುಹಿಸಿಕೊಟ್ಟಿರುವದು ಸರಿಯಷ್ಟೆ! ಆ ಸೇವಾದಳದ ಸದಸ್ಯರಾದ ಡಾಕ್ಟರ್ ಬಿ ಕೆ ಭೋಸ್ ಎಂಬವರು ಕಲ್ಕತ್ತದ ತಮ್ಮ ಒಬ್ಬ ಸ್ನೇಹಿತರಿಗೆ ಚೀನೀ ರಣಾಂಗಣದ ತಮ್ಮ ರೋಮಾಂಚನಕಾರಿ ಅನುಭವಗಳ ಕುರಿತು ಹೀಗೊಂದು ಪತ್ರವನ್ನು ಬರೆದಿದ್ದಾರೆ—

ಹಂಕಾಂಗಿನಲ್ಲಿ

ಬಾಂಬುಗಳು ಸುರಿಮಳೆಯಾಗುವಾಗ ಸ್ಥಿತಿ ಎಂಥಹದಿರುತ್ತದೆಂಬುದರ ಅನುಭವವು ನಮಗೆ, ನಾವು ಹಂಕಾಂಗಿನಲ್ಲಿದ್ದಾಗ ಆಯಿತು. ನಾವು ಎಷ್ಟರ ಮಟ್ಟಿಗೆ ಉದ್ರೇಕಗೊಂಡಿದ್ದೆವೆಂದರೆ ಬಾಂಬುಗಳು ಬೀಳುವಾಗ ಮರೆಯಲ್ಲಿರಬೇಕೆಂಬುದನ್ನೂ ಮರೆತಿದ್ದೆವು. ಅದರ ಬದಲಿಗೆ ವಿಮಾನಗಳಿಂದ ಯಾವ ಪ್ರಕಾರ ಬಾಂಬುಗಳನ್ನು ಗುರಿಯಿಟ್ಟು ಚೆಲ್ಲುತ್ತಾರೆ ಎಂಬ ಚಮತ್ಕಾರವನ್ನು ದೂರದರ್ಶಿ ಮತ್ತು ಸೂಕ್ಷ್ಮದರ್ಶಿಗಳ ಮೂಲಕ ನೋಡುತ್ತ ಇದ್ದೆವು. ಚೀನಿಯರ ವಿಮಾನವನ್ನಿಳಿಸುವ ಗನ್ನುಗಳ ಮೂಲಕ ಜಪಾನಿಯರ ಒಂದು ವಿಮಾನವು ಪೆಟ್ಟು ತಿಂದು ಕೆಳಗೆ ಇಳಿದು ಬರುತ್ತಿದ್ದುದಾದರೆ ಆ ದೃಶ್ಯವನ್ನು ನೋಡಬೇಕೆಂಬ ಆಸೆಯು ನಮಗೆ ಬಹಳ ಇದ್ದಿತು. ಆದರೆ ಈ ಗನ್ನುಗಳಿಂದ ಸಿಡಿದ ಗುಂಡುಗಳ ವಿಮಾನದ ತೀರ ಹತ್ತಿರಕ್ಕೆ ಹಾರಿ ಹೋಗುತ್ತಿದ್ದುವು. ಒಂದ ಗುಂಡಾದರೂ ವಿಮಾನವನ್ನು ಬಡಿಯಲಿಲ್ಲ. ವಿಮಾನದ ಬಾಂಬುಗಳು ನಮ್ಮ ತೀರ ಸಮೀಪವಿದ್ದು ಸಿಡಿಯಲಾರಂಭಿಸಿದೊಡನೆಯೇ ನಾವು ಮನೆಯನ್ನು ಸೇರಿದೆವು.

ಜಪಾನಿಯರ ತಂತ್ರ

ಹಂಕಾಂಗ ಪ್ರದೇಶದಲ್ಲಿ ಚೀನೀಯುದ್ಧ ವಿಮಾನಗಳು ಬಹಳ ಕಡಿಮೆ ಇದ್ದುವೆಂಬುದನ್ನು ಜಪಾನಿಯರು ತಿಳಿದಿದ್ದರು. ಅಲ್ಲಿದ್ದ ವಿಮಾನಗಳೆಲ್ಲ ಬೇರೆ ಕಡೆ ಯುದ್ಧಕ್ಕೆ ಹೋಗಿದ್ದುವು. ಆದ್ದರಿಂದ ಆಕಾಶದಲ್ಲಿ ಎರಡೂ ಪಕ್ಷಗಳ ವಿಮಾನಗಳು ಪರಸ್ಪರ ಕಾದಾಡುವುದನ್ನಾಗಲೀ ಒಂದು ಇನ್ನೊಂದನ್ನು ಅಟ್ಟಿ ಹೋಗುವುದನ್ನಾಗಲೀ ನೋಡಲು ನಮಗೆ ಸಂದರ್ಭ ದೊರೆಯಲಿಲ್ಲ.

— ಒಂದು ದಿನ

ನಾವು ಹಂಕೋನಗರದ ಒಂದು ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ನಡೆಸುತ್ತ ಇದ್ದೆವು. ಆಗಲೇ ಚೀನೀಸೇನೆಯ ಅಧಿಕಾರಿಯೊಬ್ಬನು ಒಂದು ಬಿಗುಲನ್ನು ಊದಿದನು. ಕೆಲವು ಚೀನೀ ವಿಮಾನಗಳು ಶತ್ರುವನ್ನು ಎದುರಿಸಲಿಕ್ಕೆ ಆಕಾಶವನ್ನು ಏರಿದುವು. ನಮ್ಮೊಂದಿಗೆ ಕೆಲಸ ಮಾಡುತ್ತಿದ್ದ ಇತರ ಕೆಲಸಗಾರರಿಗೆ ಈ ವಿಮಾನಗಳು ಹಾರುವಾಗಿನ ಶಬ್ದವನ್ನು ಕೇಳಿ ಕೇಳಿ ಎಷ್ಟು ಅಭ್ಯಾಸವಾಗಿತ್ತೆಂದರೆ ಬೇರೆ ಬೇರೆ ಶಬ್ದಗಳನ್ನು ಕೇಳಿ ಇದು 'ಬಾಂಬು ಹಾಕುವ ವಿಮಾನ—ಇದು ರಷ್ಯದ ನೌಕೆ' ಎಂದು ಮೊದಲಾಗಿ ಹೇಳುತ್ತಿದ್ದರು. ಅವರು ಹೇಳುವದೆಲ್ಲ ನಿಜವೇ ಆಗಿತ್ತು. ಹಾರ್ನಿನ ಶಬ್ದ ಅಥವಾ ಓಡುವ ಶಬ್ದವನ್ನು ಕೇಳಿದ ಹಾಗೆಯೇ ಇದು ಇಂಥ ನಂಬರದ ಬಸ್ಸು ಅಥವಾ ಕಾರು ಎಂದು ಹುಡುಗರು ಹೇಳುವ ಹಾಗೆ ಅವರು ಹೇಳುತ್ತಿದ್ದುದನ್ನು ಕೇಳಿ ನಮಗೆ ಆಶ್ಚರ್ಯವಾಗುತ್ತಿತ್ತು.

ನಮ್ಮ ಒಬ್ಬ ಜವಾನಸಂಗಾತಿಯು 'ಇದು ರಷ್ಯದ ನೌಕೆ' ಎಂದು ಹೇಳುತ್ತಲೇ ನಾನು ಕಿಟಕಿಯ ಕಡೆಗೆ ಓಡಿ ಆಕಾಶವನ್ನು ನೋಡಿದೆ. ಅಲ್ಲಿ ಮೂರು ಚಿಕ್ಕ ಕರಿಯ ವಿಮಾನಗಳು ಒಂದು ಜಪಾನೀ ವಿಮಾನವನ್ನು ಓಡಿಸಿಕೊಂಡು ಹೋಗುತ್ತಿದ್ದುವು. ಅವುಗಳ ವೇಗವು ಅಂದಾಜು ಮಾಡಲಿಕ್ಕಾಗದಷ್ಟು ಬಹಳವಾಗಿತ್ತು. ಈ ವಿಮಾನಗಳನ್ನು ಜಪಾನಿಯರು ಬಹಳವಾಗಿ ಹೆದರುವರು. ಈ ವಿಮಾನಗಳಲ್ಲಿ ರಷ್ಯನ ವಿಮಾನಗಾರರು ಇರುವರೋ ಇಲ್ಲವೋ ನನಗೆ ತಿಳಿಯಲಿಲ್ಲ. ಆದರೂ ಕೆಲವು ಜನ ರಷ್ಯನರು ಚೀನೀಯರಿಗೆ ತರಬೇತಿ ಕೊಡಲಿಕ್ಕೆ ಇರುತ್ತಿದ್ದರೆಂಬುದನ್ನು ನಿಸ್ಸಂದೇಹವಾಗಿ ಹೇಳಬಹುದು. ಚಂಗ್‌ಕಿಂಗ ನಗರವನ್ನು ಬಾಂಬುಗಳಿಂದ ಸುಟ್ಟಿಡುವುದು ಜಪಾನಿಯರಿಗೆ ಬಾಳೆಹಣ್ಣು ತಿನ್ನುವ ಹಾಗೆ ಸುಲಭವಾಗಿತ್ತಾದರೂ, ಅವರು ಆ ಕಡೆ ಬರುತ್ತಲೇ ಇರಲಿಲ್ಲ. ಯಾಕೆಂದರೆ ಅಲ್ಲಿ ಚೀನೀಯರ ಪಕ್ಷದಲ್ಲಿ ಕಾದಾಡಲಿಕ್ಕೆ ಈ ರಷ್ಯನ ನೌಕೆಗಳು ಯಾವಾಗಲೂ ಕಾದು ಇರುತ್ತಿದ್ದುವು.

ಚಂಗ್‌ಕಿಂಗಿನಲ್ಲಿ

ಈಗ ನಾವು ಚಂಗ್‌ಕಿಂಗನಲ್ಲಿ ಕೆಲಸಮಾಡುತ್ತಿದ್ದೇವೆ. ಇಲ್ಲಿ ಕೆಲಸವು ಬಹಳ ಹಗುರವಾಗಿದೆ. ಸಮಯವು, ಆಟ ಊಟ ವಿನೋದಗಳಲ್ಲಿಯೇ ಕಳೆದು ಹೋಗುತ್ತದೆ. ಇನ್ನು ಒಂದೆರಡು ದಿನಗಳಲ್ಲಿ ಚೈನೀಸ್ ನೇಶನಲ್ ರೆಡ್ ಕ್ರಾಸ್ ಸಂಘದಿಂದ ನಮಗೆ ಬೇರೆ ಕಡೆಗೆ ಹೋಗಲು ಆಜ್ಞೆ ಬರಲೂ ಬಹುದು. ಈ ಸಂಘದ ಅಧ್ಯಕ್ಷರು ಒಂದು ವಾರದೊಳಗೆ ಇಲ್ಲಿಗೆ ಬರಬಹುದು. ನಮಗೆ ಯೆನಾನಿಗೆ ಹೋಗುವ ಆಲೋಚನೆ ಇದೆ. ಈ ನಗರವು ಮೊದಲು ಸೋವಿಯಟ್ ಚೀನದ ರಾಜಧಾನಿಯಾಗಿತ್ತು. ಈಗ ಅದು ಚೀನೀ ಸರಕಾರದ ರಾಜಧಾನಿಯಾಗಿದೆ. ಅದು ಒಂದು ಸೇನಾದಳದ ಮುಖ್ಯ ಸ್ಥಾನವಾಗಿರುವುದು.

ಅಧ್ಯಕ್ಷನೊಡನೆ ಭೇಟಿ

ಆ ದಿನ ನಾವು ಚೀನೀ ಸರಕಾರದ ಅಧ್ಯಕ್ಷನ ಭೇಟಿಮಾಡಿದೆವು. ಅವನೊಡನೆ ಮಾತನಾಡುವಾಗ ನಮಗೆ ಬಹಳ ಸಂತೋಷವಾಯಿತು. ಅವನ ದೊಡ್ಡ ಮಹಾತ್ಮನೇ ಸರಿ. ನಾವು ಚೀನೀ ಭಾಷೆಯನ್ನು ತಿಳಿಯದವರಾದ್ದರಿಂದ ಚಿಕ್ಕಮಾರ್ಷಲ್ ಚೀನೀ ಭವನದ ಸ್ಟೇಶನ್ ಮಾಸ್ಟರರು ದುಭಾಷಿಯ ಕೆಲಸ ಮಾಡಿದರು. ಚೀನದ ಅಧ್ಯಕ್ಷನೊಡನೆ ನಾವು ಮಾಡಿದ ಭೇಟಿಯು ನಮ್ಮ ಜೀವನದಲ್ಲಿ ಸ್ಮರಣೀಯ ಘಟನೆಯಾಗಿದೆ ಎಂದು ನನಗೆ ಕಾಣುತ್ತದೆ.

ಲಿಂಬಡಿ ರಾಜ್ಯದಲ್ಲಿ ಹೋರಾಟ

ಇದರ ವಿಸ್ತೀರ್ಣ ೩೪೪ ಚದರ ಮೈಲು, ಜನಸಂಖ್ಯೆ ೩೬೦೦೦ ಕಂದಾಯದ ಉತ್ಪನ್ನ ೬ ಲಕ್ಷ ರೂಪಾಯಿ.

ಇಲ್ಲಿನ ಪ್ರಜೆಗಳ ತಮ್ಮ ಸಂಘಟನೆಯನ್ನು ಸ್ಥಾಪಿಸಲು ನಿರ್ಧರಿಸಿ, ದರ್ಬಾರ ಗೋಪಾಲದಾಸರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿದ್ದರು. ಅಧಿವೇಶನವು ಜರುಗಲಿಲ್ಲ.

ಸನಾತನ ಸಭೆಯವರಿಂದ ೫೦೦ ಮಂದಿ ಅಧಿವೇಶನ ಸ್ಥಳಕ್ಕೆ ನುಗ್ಗಿ ಬಂದು, ಈ ಪರಿಷತ್ತು ಆಗದಂತೆ ನೋಡಿದರು. ಅಲ್ಲಿ ಹೋರಾಟವಾಗಿ, ಸಾಮಾನೆಲ್ಲ ಹಾಳುಗೆಡಹಿದರು. ಲಾಠಿ ಮೊದಲಾದ ಆಯುಧ ಧರಿಸಿ, ದರ್ಬಾರ ಗೋಪಾಲದಾಸರ ಮನೆಗೆ ಮುತ್ತಿಗೆ ಹಾಕಿ, ಅವರು ಪರಿಷದಿಗೆ ಬಾರದಂತೆ ಸಾಧಿಸಿದರು.

೩೦೦೦ ಜನರು ಎಲ್ಲ ಕಡೆಗಳಿಂದಲೂ ಇಲ್ಲಿ ಬಂದಿದ್ದರು. ಶ್ರೀ. ಶ್ರೀಮಾವತಿ ಮುನ್ಶಿಯವರು ಅಧ್ಯಕ್ಷೆಯರಾಗಿ ಸಭೆಯನ್ನು ನೆರವೇರಿಸಿದರು.

೨೫೦೦ ಜನರು ಹತ್ತಾರು ಧರಿಸಿ, ರೈಲ್ವೆ ಸ್ಟೇಶನಿಗೆ ಬಂದು, ಅಲ್ಲಿಗೆ ಹೋಗುವ ಮಾರ್ಗವನ್ನು ಆಕ್ರಮಿಸಿದರು. ದರ್ಬಾರ ಗೋಪಾಲದಾಸರ ಕಾರನ್ನು ಮುತ್ತಿ ಅವರು ಮುಂದೆ ಬರಬಾರದೆಂದು, ಬಂದರೆ ಹಿಂಸೆಯಾದೀತೆಂದು ತಿಳಿಸಿದರು. ಅವರು ರೈಲ್ವೆಸ್ಟೇಶನಿಗೆ ಬಂದರು. ಅಲ್ಲಿಂದ ಅವರು ಹೊರಡದಂತಾಗಿದೆ.

ಥಾಕೂರ ಸಾಹೆಬರಿಗೂ ಪೋಲೀಸ ಅಧಿಕಾರಿಗಳಿಗೂ ಈ ವಾರ್ತೆ ತಿಳಿಸಲಾಯಿತು. ಅವರು ಪೋಲೀಸರ ಸಹಾಯದಿಂದ ಶಾಂತಿಸ್ಥಾಪನೆ ಮಾಡಲು ಪ್ರಯತ್ನಿಸಿದರು. ವೈಸ್ರಾಯರಿಗೂ ಈ ವಾರ್ತೆಗಳನ್ನು ತಿಳಿಸಲಾಗಿದೆ. ಹಲವು ಪ್ರತಿನಿಧಿಗಳನ್ನು ಭೋಜನಶಾಲೆಯಲ್ಲೇ ಸೆರೆಯಲ್ಲಿಟ್ಟಂತಾಗಿದೆ.

ಇವರು ಅಹಿಂಸೆಯಿಂದ ವರ್ತಿಸಿದರೆ ಜಯವೆಂದರು, ಎಲ್ಲ ರಾಜ್ಯಗಳಲ್ಲಿ ಹೀಗೆಯೆ ಚಳವಳಿಯಾಗುವುದೆಂದೂ ಸರದಾರರೂ, ಸ್ವರಾಜ್ಯ ಕಷ್ಟ ಸಹಿಷ್ಣುಗಳಾಗಿರಿ ಎಂದು ಮಹಾತ್ಮರೂ, ಜವಾಹರ ಸರದಾರರು ಇವರಿಗೆ ದೊರೆಯಲೆಂದೂ ಶ್ರೀ ದೇಸಾಯರೂ ಸಂದೇಶ ಕಳಿಸಿರುವರು.

ಒರಿಸ್ಸಾ ಪ್ರಾಂತ್ಯದ ಮಂತ್ರಿಶ್ರೀ ವಿಶ್ವನಾಥದಾಸರ ರಾಜಕೀಯ ಪರಿಷತ್ತನ್ನು ಕಂಡು, ಈ ಒರಿಸ್ಸಾ ರಾಜ್ಯಗಳಲ್ಲಿನ ಸ್ಥಿತಿ ದಾರುಣದ ವರೆ ತಲುಪಿದೆ ಎನ್ನಲ್ಲಿ ಮಾಡದೆ, ಪ್ರಜೆಗಳೂ ರಾಜರೂ ಬೇಕಾದಂತೆ ನಡೆಯಲೆಂದೇ ನಿಶ್ಚಯಿಸಿರುವಂತೆ ತೋರುತ್ತದೆ. ಕಾಂಗ್ರೆಸ್ ಕಾರ್ಯಕಾರೀ ಕಮಿಟಿ ವಿನಿಸ್ಸುತ್ತ ದೇಶ ಅದರಂತೆ ನಾವು ವರ್ತಿಸುವೆವು. ನೀಲಗಿರಿ ರಾಜ್ಯದಲ್ಲಿ ಪ್ರಜಾಪ್ರಭುತ್ವವನ್ನು ಮಾಡಬಾರದೆನ್ನುವ ರಾಜರೇ ಈಗ ಎರಡು ತಿಂಗಳ ತರುವಾಯ ಅದ ಕಾನೂನು ವಿರುದ್ಧವೆನ್ನುವುದನ್ನು ನೋಡಿ ನನಗೆ ಆಶ್ಚರ್ಯ ಎನಿಸುತ್ತದೆ. ದರ್ಬಾರಿನಿಂದ ಸಲ್ಲುವ ಸಂಬಳಕ್ಕಾಗಿ, ಪ್ರಜೆಗಳು ಕೆಲಸ ಮಾಡಬೇಕಾಗಿದೆ, ಎಂದರು.

ಕರ್ನಾಟಕ ಸಮಸ್ಯೆ ನಂ. ೩

ಜಾಣತನಕ್ಕೆ ಬೆಲೆ! ಬುದ್ಧಿಶಕ್ತಿಗೆ ಪಾರಿತೋಷಕ!

೧೦೦ ರೂಪಾಯಿ ಬಹುಮಾನ!

ಪ್ರಥಮ ಬಹುಮಾನ ರೂ ೫೦ ಇತರ ಬಹುಮಾನ ರೂ ೫೦

ಎಲ್ಲರಿಗಿಂತಲೂ ಹೆಚ್ಚು ಉತ್ತರ ಕಳುಹಿಸಿದವರಿಗೆ ಬೆಳ್ಳಿಯ ಪದಕ ಇನಾಂ

ಉತ್ತರವನ್ನು ಖಾಲಿ ಕಾಗದದ ಮೇಲೆ ಕಳುಹಿಸಬಹುದು

ಕುರುಹುಗಳನ್ನು ಗಮನಿಸಿರಿ!

— ಎಡದಿಂದ ಬಲಕ್ಕೆ

1 ಕರ್ನಾಟಕವು ಈಗಾಗಲೇ ನಾಮಾಂಕಿತವಾಗಿದೆ 3 ಗುಣತ್ರಯಗಳಲ್ಲೊಂದು 5 ಒಂದು ಕಾಯಿ 6 ಆಧುನಿಕ ಯುವಕರು ಸಹವಾಸ ದೋಷದಿಂದಲೇ ಚಿಕ್ಕ ಪ್ರಾಯದಲ್ಲಿಯೇ ಇದರ ಅನುಭವ ಹೊಂದುವರು 7 ಇವರಿಗೆ ಹೆಣ ಗಾಡುವವರು ಬಹಳ ಮಂದಿ ಇರುವರು 11 ಚರಿತ್ರೆಯನ್ನು ನೋಡಿದರೆ ಇದರಿಂದ ಹಿಂದೂಸ್ತಾನದವರಿಗೆ ಮಾನಭಂಗವಾಗುತ್ತದೆಂದು ತಿಳಿಯುತ್ತದೆ 12 ಇದು ಯಾವಾಗಲೂ ದುಷ್ಕರವಾದರೂ ಪ್ರತಿ ದಿನವು ತೋರಿಯುತ್ತಿರಬೇಕು 13 ತಪ್ಪು 14 ಇದನು ತನ್ನ ಅಸ್ತಿತ್ವಕ್ಕಾಗಿ ಹೋರಾಡಲು ಹಿಂಜರಿಯಲಾರನು

— ಮೇಲಿನಿಂದ ಕೆಳಕ್ಕೆ —

1 ಮಾಳಿ 2 ಬುದ್ಧಿ ಇಲ್ಲದವ 4 ಸ್ತ್ರೀಯರ ಒಂದು ಹೆಸರು 4 ಕಠೋರವಾದ ಈ ಪದ್ಧತಿಯು ಈಗ ನಿರ್ನಾಮವಾಗಿದೆ 8 ಇದಿಲ್ಲದವನ ಪ್ರಾಣ್ಯಸ್ಪರ್ಧೆ 9 ಮಗಳು 10 ಪರಾಕ್ರಮಶಾಲಿ ತೀಗೆನ್ನುವರು,



ನಿಬಂಧನೆಗಳು: — ಪ್ರವೇಶಧನ ಉತ್ತರಕ್ಕೆ 0—4—0 2 ಉತ್ತರಗಳಿಗೆ ಕಡಿಮೆ ಇರಬಾರದು 5 ಉತ್ತರಗಳನ್ನು 1ರೂ ಗೆ ಕಳುಹಿಸಬಹುದು. ಸರಿಯಾದ ಉತ್ತರವು ತಾ —3—39ರಲ್ಲಿ ಪ್ರಕಟಿಸಿ ಸ್ಪರ್ಧೆಯಲ್ಲಿ ಭಾಗವಹಿಸಿದ ಪ್ರತಿಯೊಬ್ಬನಿಗೂ ಕಳುಹಿಸಲಾಗುವುದು ಸ್ಪರ್ಧೆಯ ವಿಷಯ ದೇಶದ ಪತ್ರಿಕೆಯ ಹಾದಿಯಲ್ಲಿ ಆಕ್ಷೇಪವಿಲ್ಲ. ವ್ಯವಸ್ಥಾಪಕರ ತೀರ್ಪು ಕಡೆಯದು, ಪ್ರವೇಶಧನವನ್ನು ಮನಿಆರ್ಡರ ಅಥವಾ ಪೋಸ್ಟಲ್ ಆರ್ಡರ ಮುಖಾಂತರ ಕಳುಹಿಸಬಹುದು, ಎಲ್ಲಾ ಉತ್ತರಗಳು ತಾ 20—3—39ರೊಳಗೆ ಬಂದು ತಲುಪಬೇಕು. ಯಾವಾಗಲೂ ಸದುಪಯೋಗವಾದ Apt ಶಬ್ದಗಳಿಗೆ ಮಾನ್ಯತೆ ಕೊಡಲಾಗುವುದು. ಸಮಸ್ಯೆಯ ಉತ್ತರ ಮತ್ತು ಪ್ರವೇಶಧನ ಈ ಕೆಳಗಿನ ವಿಳಾಸಕ್ಕೆ ಬರಬೇಕು. 1 ತಪ್ಪಿನ ವರೆಗೂ ಬಹುಮಾನ ಕೊಡಲಾಗುವುದು. ಸ್ಟಾಂಪು ಕಳುಹಿಸುವವರು 0—1—0 ಕಳುಹಿಸಬೇಕು.

ವಿಳಾಸ: — Manager

Karnatak Samasya Station Road **Hubli.**

NOTICE

In the Court of the District Munsiff of Kasaragod.

O. S. No 615/1938

between

Kh[illegible] Mammal Kun[illegible] — Plaintiff.

and

Kadre Beary — Defendant

1

Kadre Beary son of Pilit [illegible] Beary, residing at [illegible] of Kookan village, Kasaragod Taluk

Please take notice that the Plaintiff has filed the above Suit against you for recovery of rent and possession of the property which had been demised to you on lease from the Plaintiff's tarwad under a Chit dated 11—1926 and that the Suit stands posted to 9—3—1939. If you have any objections to the same you may appear before this Court on that date, failing which the Suit shall be decided in your absence.

Kasaragod } K. P. Anantha Rao,
25—2—39 } Advocate for Plaintiff

ವಿಮಾನವನ್ನು ನೋಡಿ

ವಸಂತ ಋತುವಿನ ಶುಭ್ರ ಆಕಾಶವನ್ನು ಹಾರಿಹೋಗುವ ವಾಯುವಿಮಾನವನ್ನು ನೋಡಿರಿ. ರಸಾಯನ ಶಾಸ್ತ್ರ, ಪ್ರಕೃತಿ ವಿಜ್ಞಾನ, ಗಣಿತಶಾಸ್ತ್ರ ಮೊದಲಾದವುಗಳನ್ನು ಗಾಢವಾಗಿ ಅಧ್ಯಯನಮಾಡಿ ಆ ಜ್ಞಾನವನ್ನು ವಿಮಾನಗಳ ರಚನೆಗೆ ಉಪಯೋಗಿಸಿಕೊಂಡುದರಿಂದ ನಾವು ಇಂದು ವಾಯು ವಿಮಾನಗಳ ವಿಚಿತ್ರ ಪರಿಣಾಮಗಳನ್ನು ಕಾಣುತ್ತಿದ್ದೇವೆ. ವಿಮಾನವನ್ನು ನೋಡಿದಾಕ್ಷಣ, ಅದನ್ನು ಮಾಡಿದಾತನು ಯಾರೋ ಒಬ್ಬ ಮಹಾಪುರುಷ ಅಥವಾ ಪುರುಷೋತ್ತಮನಾಗಿರಬೇಕೆಂದು ಊಹಿಸುತ್ತೇವೆ. ಅವನ ಅಸಾಧಾರಣ ಶಕ್ತಿಸಾಮರ್ಥ್ಯಗಳನ್ನು ಕಂಡು ಆಶ್ಚರ್ಯದಿಂದ ತಲೆದೂಗುತ್ತೇವೆ. ಅವನ ಧೀರತೆ, ಏಕಾಗ್ರತೆ, ಕರ್ತವ್ಯ ತತ್ಪರತೆ ಕಷ್ಟ ಸಹಿಷ್ಣುತೆ, ನಿರ್ಭೀತಿಗಳನ್ನೂ ಅವನ ಸೂಕ್ಷ್ಮಬುದ್ಧಿ, ಶಾಂತಚಿತ್ತ ಧೈರ್ಯಸಾಹಸಗಳನ್ನು ಮನಸಾರೆ ಕೊಂಡಾಡುತ್ತೇವೆ

ಆದರೆ ಮಾನವಸಂದರಚಿತವಾದ ವಾಯು ವಿಮಾನವನ್ನು ಮಾನವ ಪ್ರಪಂಚವು ಹೇಗೆ ಉಪಯೋಗಿಸಿಕೊಂಡಿದೆ ಎಂಬುದನ್ನು ನೋಡಿ! ಅದು ಪ್ರಪಂಚದ ದೂರ ದೂರದ ಪ್ರದೇಶಗಳಲ್ಲಿ ನೆಲೆಸಿರುವ ಜನರನ್ನು ಹತ್ತಿರಕ್ಕೆ ತಂದು ಅವರೊಳಗೆ ಪರಸ್ಪರ ಪ್ರೀತಿ ಸ್ನೇಹ ಸಹಾನುಭೂತಿಗಳನ್ನು ಉಂಟುಮಾಡಿ ಭೂಲೋಕವನ್ನು ಸ್ವರ್ಗವನ್ನಾಗಿ ಮಾಡಬಹುದಾಗಿದ್ದ ಸಾಧ್ಯತೆಯನ್ನೂ ಮತ್ತು ಈಗ ಅದೇ ವಿಮಾನವು ಪ್ರಪಂಚದ ನಾಶಕ್ಕೆ ಒಂದು ಸಾಧನವಾಗಿರುವುದನ್ನೂ ಆಲೋಚಿಸಿರಿ. ಭೂಲೋಕವನ್ನು ಸ್ವರ್ಗವನ್ನಾಗಿ ಮಾಡಬಹುದಾಗಿದ್ದ ಸಾಧ್ಯತೆಯನ್ನೂ ಮತ್ತು ಈಗ ಅದೇ ವಿಮಾನವು ಪ್ರಪಂಚದ ನಾಶಕ್ಕೆ ಒಂದು ಸಾಧನವಾಗಿರುವುದನ್ನೂ ಆಲೋಚಿಸಿರಿ ಭೂಲೋಕವನ್ನು ಸ್ವರ್ಗವನ್ನಾಗಿ ಮಾಡಬಹುದಾಗಿದ್ದ ವಿಮಾನವೇ ಈಗ ಭೂಲೋಕವನ್ನು ನರಕವನ್ನಾಗಿ ಮಾಡಲಿಕ್ಕೆ ಉಪಯೋಗಿಸಲ್ಪಡುತ್ತದೆ. ಈ ವಿಮಾನದಿಂದಲೇ ಬಾಂಬುಗಳೂ ಸಿಡಿಗುಂಡುಗಳೂ ಚೆಲ್ಲಲ್ಪಡುವವು, ವಿಷಗಾಳಿಗಳು ತುಂಬಿದ ಬುರುಡೆಗಳು ಒಡೆಯಲ್ಪಡುವವು. ನಿರಪರಾಧಿಗಳಾದ ಪಾಪದ ಜನರು—ವೃದ್ಧರು, ಸ್ತ್ರೀಯರು ಮಕ್ಕಳು ಕೊಲ್ಲಲ್ಪಡುವರು. ಆಧುನಿಕ ಯುದ್ಧವೆಂದರೆ ಒಂದು ಭಯಂಕರ ಹತ್ಯಾಕಾಂಡವೇ ಆಗಿರುವುದು. ಹೀಗೆ ಮಾನವರೂಪಿ ದೇವತೆಗಳು ವಿಮಾನಗಳನ್ನು ರಚಿಸಿದರಾದರೂ, ಮಾನವರೂಪೀ ದೇವತೆಗಳಲ್ಲ ಮರಂತ ಮಾನವರೂಪೀ ದಾನವರು ಇವೇ ವಿಮಾನಗಳನ್ನು ತಮ್ಮ ಸ್ವಾರ್ಥಕ್ಕೂ ಪ್ರಪಂಚದ ನಾಶಕ್ಕೂ ಉಪಯೋಗಿಸಿದರು

ಯಂತ್ರೋಪಕರಣಗಳನ್ನು ನೋಡಿ!!

ಇನ್ನು ಮನುಷ್ಯನ ಬುದ್ಧಿಶಕ್ತಿಯ ಉತ್ಕೃಷ್ಟ ನಮೂನೆಗಳಾಗಿರುವ ಯಂತ್ರೋಪಕರಣಗಳನ್ನು ನೋಡಿ. ಮನುಷ್ಯನಿಗೆ ಹಗಲೂ ರಾತ್ರಿ

ಶ್ರೇಷ್ಠ ತರದ ದೃಷ್ಟಿ ಚಕ್ರಗಳಿಗೆ



ರಬ್ಬರು ಮೊಹರುಗಳಿಗೆ

ನಾಯಕ್ಸ್ ಸ್ಟೋರ್ಸ್

ರಥಬೀದಿ, ಮಂಗಳೂರು.

ಅಧಿಕಾರವು ದೊರೆತಂತೆ ವಿವೇಕವು ಬೆಳೆಯಲಿಲ್ಲ!

ಅವಿವೇಕಿಗಳಾದ ಮಾನವರು ಅಧಿಕಾರದ ದುರುಪಯೋಗ ಮಾಡಿ ದೇವತೆಗಳೆಲ್ಲ ದಾನವರಾಗುತ್ತಿದ್ದಾರೆ

'ನಮ್ಮ ನಾಗರಿಕತೆಯ ಪರೀಕ್ಷಾ ಸಮಯವು ಸನ್ನಿಹಿತವಾಗಿದೆ. ಅದು ಬಿಕ್ಕಟ್ಟಿನಲ್ಲಿ ಸಿಕ್ಕಿಬಿದ್ದು ಹೊರಬರಲಾರದೆ ತೊಳಲಾಡುತ್ತಲಿದೆ ಸುಖ ಶಾಂತಿ ಸಮಾಧಾನಗಳು ನಮಗೆ ಬೇಕಾದಷ್ಟು ಪ್ರಾಪ್ತವಾಗಬಹುದಾದರೂ ನಾವು ಪ್ರಳಯದ ಕಡೆಗೇ ಧಾವಿಸುತ್ತಿದ್ದೇವೆ. ವಿಜ್ಞಾನದ ಬಲದಿಂದ ಜಗತ್ತನ್ನೇ ಜಯಿಸಿ ನಾವು ಅದರ ಒಡೆತನ ಮಾಡುತ್ತಿರುವೆವಾದರೂ ನಮ್ಮನ್ನು ನಾವು ಜಯಿಸಿಕೊಂಡು ನಮ್ಮ ಮೇಲೆ ನಾವು ಒಡೆತನ ಮಾಡಲು ಅಸಮರ್ಥರಾಗಿದ್ದೇವೆ ಮಾನವ ಶಕ್ತಿಯು ಬೆಳೆದಿದೆ; ಆದರೆ ಮಾನವ ವಿವೇಕವು ಬೆಳೆಯಲಿಲ್ಲ ಆದ್ದರಿಂದ ನಾವು ದೇವತೆಗಳಾಗುವ ಬದಲಿಗೆ ದಾನವರಾಗುತ್ತಿದ್ದೇವೆ' ಎಂದು ಸಿ. ಇ. ಯಮ್. ಜೋಡ್ ಎಂಬವರು 'ಲಿವಿಂಗ್ ಏಜ್'ದಲ್ಲಿ ಬರೆಯುವರು.

ಆ ೨೪ ತಾಸುಗಳ ಸತತ ಪರಿಶ್ರಮದಿಂದ ಆರಾಮವನ್ನು ಕೊಟ್ಟು ಅವನು ತನ್ನ ಜೀವನದಲ್ಲಿ ಸುಖವನ್ನು ಕಾಣಬೇಕೆಂಬುದಕ್ಕೋಸ್ಕರ ಯಂತ್ರೋಪಕರಣಗಳ ಆವಿಷ್ಕಾರಗಳಾದುವು ದಿವಸದಲ್ಲಿ ೨೪ ತಾಸುಗಳಲ್ಲೂ ಪರಂತು ಬರೀ ಕೆಲವು ತಾಸುಗಳ ಅಂದರೆ ೩—೪ ತಾಸುಗಳ ತನಕ ಕೆಲಸಮಾಡಿ, ಅಷ್ಟು ಪರಿಶ್ರಮದಿಂದಲೇ ತನ್ನ ಜೀವನದ ಎಲ್ಲಾ ಆವಶ್ಯಕತೆಗಳನ್ನು ಪೂರೈಸಿಕೊಂಡು, ಉಳಿದ ಸಮಯವನ್ನು ಆಟವಿನೋದಗಳಲ್ಲಿ ಕಳೆಯಬೇಕೆಂಬ ಮನುಷ್ಯನ ಸುಖಸ್ವಪ್ನವು ಅವನು ಶೋಧಿಸಿತೆಗೆದ ಯಂತ್ರೋಪಕರಣಗಳಿಂದ ಸಾಧ್ಯವಾಗಿತ್ತು ಆದರೆ ಎರಡು ಸಂಗತಿಗಳು ಈ ಕನಸನ್ನು ನಿಜವಾಗಲಿಕ್ಕೆ ಬಿಡಲಿಲ್ಲ ಮೊದಲನೆಯದಾಗಿ—ಯಂತ್ರೋಪಕರಣಗಳಿಂದ ದೊರೆತ ಆರಾಮ ಸಮಯವು ಪ್ರಪಂಚದ ಎಲ್ಲಾ ಜನರೊಳಗೆ ಸಮಪಾಗಿ ಹಂಚಿಹೋಗುವ ಬದಲಿಗೆ, ಅದ ನಿರುದ್ಯೋಗದ ರೂಪದಲ್ಲಿ ಕೆಲವು ಮಿಲಿಯ ನಿರುದ್ಯೋಗಿಗಳ ಪಾಲಿಗೆ ಬಂದಿದೆ ಉಳಿದ ಜನರ ಮೊದಲಿನಂತೆಯೇ ಜೀವನದ ಆವಶ್ಯಕತೆಗೋಸ್ಕರ, ಅಥವಾ ಸ್ವಲ್ಪ ಹೆಚ್ಚು ಕಡಿಮೆಯಾಗಿ ದಿನಸದ ಇಪ್ಪತ್ತನಾಲ್ಕು ತಾಸು ದುಡಿಯಬೇಕಾಗಿದೆ. ಹಸಿದವನಿಗೂ ಎರಡುರೊಟ್ಟಿ ಹೊಟ್ಟೆತುಂಬಿದವನಿಗೂ ಎರಡುರೊಟ್ಟಿ [illegible] ಯಾರಿಗೆ ಅಷ್ಟು ಆರಾಮವು ಬೇಕಾಗಿಲ್ಲವೋ ಅಂಥ ನಿರುದ್ಯೋಗಿಗಳಿಗೆ ಪೂರ್ಣ ಆರಾಮ ದೊರೆತಿರುವುದು, ಮತ್ತು ಯಾರಿಗೆ ಆರಾಮವು ಅತ್ಯಾವಶ್ಯಕವೋ ಅವರಿಗೆ ದಿವಸದಲ್ಲಿ ಒಂದೆರಡು ತಾಸು ಆರಾಮವು ಕೂಡಾ ಇರುವುದಿಲ್ಲ ಯಂತ್ರೋಪಕರಣಗಳ ದುರುಪಯೋಗ ಮಾಡಿದುದರ ದುಷ್ಪರಿಣಾಮವು ಇದಾಗಿದೆ

ಎರಡನೆಯದಾಗಿ ಯಂತ್ರೋಪಕರಣಗಳನ್ನು ನಮ್ಮ ಆಳುಗಳನ್ನಾಗಿ ಉಪಯೋಗಿಸುವುದರ ಬದಲಿಗೆ ನಾವೇ ಯಂತ್ರೋಪಕರಣಗಳ ಆಳುಗಳಾಗಿದೇವೆ ಈಗ [illegible] ಈ ಯಂತ್ರೋಪಕರಣಗಳ ಸಹಾಯವಿಲ್ಲದೆ ಜೀವನದ ಯಾವ ಕೆಲಸಗಳನ್ನೂ ಮಾಡಲಿಕ್ಕಾಗದಷ್ಟು ಅವುಗಳ ಗುಲಾಮರಾಗಿಬಿಟ್ಟಿದ್ದೇವೆ

ನಮ್ಮ ಮೂರ್ಖತನ

ಹೀಗೆ ನಾವು ವಿಜ್ಞಾನದ ಬಲದಿಂದ ನಿತ್ಯ ವಿಜಯಗಳಾಗಿರುವೆವಾದರೂ, ಸಾಮುದಾಯಿಕ ಆತ್ಮಘಾತ ಮಾಡಿಕೊಳ್ಳುವಂಥ ದುಸ್ಥಿತಿಗೆ ಬಂದು ಮುಟ್ಟಿದ್ದೇವೆ ದಿವ್ಯಜೀವನವನ್ನು ನಡೆಸಲಿಕ್ಕೆ ಬೇಕಾದಂಥ ಎಲ್ಲ ಅನುಕೂಲತೆಗಳು ಇದ್ದೂ 'ಮನುಷ್ಯನು ಆತ್ಮಘಾತ ಮಾಡಿಕೊಳ್ಳಲು ಪ್ರವೃತ್ತನಾಗುವನಾದರೆ ಅವನಷ್ಟು ಮೂರ್ಖನು ಬೇರೊಬ್ಬನಿರುವುದಿಲ್ಲವೆಂದು ಅರ್ಥ ಮಾಡಿಕೊಳ್ಳಬಹುದು. ಇಂಥ ಮೂರ್ಖತನವು ಈಗ ಇಡೀ ಮಾನವ ಸಮಾಜದಲ್ಲಿ ಕಂಡುಬರುತ್ತದೆ ಈ ಮೂರ್ಖತನದ ಕಾರಣವೇನೆಂದರೆ, ನಾವು ಜಗತ್ತನ್ನು ಆಳಿಕೊಳ್ಳಲು ಸಮರ್ಥರಿದ್ದೇವಾದರೂ ನಮ್ಮನ್ನು ಆಳಿಕೊಳ್ಳಲ ಸಮರ್ಥರಾಗಿರುವುದಿಲ್ಲ. ವಿಜ್ಞಾನದ ಬಲದಿಂದ ನಮಗೆ ಜಗತ್ತಿನ ಮೇಲೆ ಅಧಿಕಾರವು ದೊರೆತಂತೆ, ನಮ್ಮಲ್ಲಿ ವಿವೇಕವು ಬೆಳೆಯಲಿಲ್ಲ.

ಅಂದರೆ—ನಮ್ಮ ಹಿಂದಿನ ಸ್ಥಿತಿಗಿಂತ ಈಗಿನ ಸ್ಥಿತಿಯು ಕನಿಷ್ಠವಾಗಿದೆ ಎಂಬುದು ನನ್ನ ಅಭಿಪ್ರಾಯವೆಂದು ಯಾರೂ ತಿಳಿಯಕೂಡದು ಆದರೆ ಈಗಿನಕ್ಕಿಂತ ನಾವು ನಮ್ಮ ಸ್ಥಿತಿಗತಿಗಳನ್ನು ಇನ್ನಷ್ಟು ಸುಧಾರಿಸಿಕೊಳ್ಳಬಹುದೆಂಬುದೇ ನನ್ನ ಅಭಿಪ್ರಾಯವು ಹೀಗೆ ಸುಧಾರಿಸಿಕೊಳ್ಳುವ ಅಗತ್ಯವು ಈಗ ಬಹಳವಾಗಿದೆ. ಯಾಕೆಂದರೆ ನಾವು ಮೊದಲಿಗಿಂತಹೆಚ್ಚು ಸಮರ್ಥರಾಗಿರುವೆವಾದರೂ ನಮ್ಮಲ್ಲಿ ಅದೇ ಪರಿಮಾಣಕ್ಕೆ ವಿವೇಕವು ಬೆಳೆದ ಬರಲಿಲ್ಲ. ಅದು ಬೆಳೆದುಬರಬೇಕಾದ್ದು ಅಗತ್ಯ

ಹೋಲಿ ಮತ್ತು ಈಸ್ಟರಿನ ಸಲುವಾಗಿ

ಗೇಟವೇ ಪ್ರೊಡಕ್ಟ್ಸ್‌ನವರ ಅಮೂಲ್ಯ ಬಹುಮಾನ

ನಮ್ಮ ಭರವಸೆಯ ಇನಾಮು	RS. 42,000	ನಂಬ್ರ 6

ಸರಿಯಾದ ಉತ್ತರ ಕಳುಹಿಸಿದ ಇಪ್ಪತ್ತು ಮಂದಿಗಳೊಳಗೆ ಹಂಚಲ್ಪಡುವುದು'

ಬೊಂಬಾಯಿಯ ಪ್ರಸಿದ್ಧ ಬ್ಯಾಂಕಿನಲ್ಲಿಟ್ಟ ಉತ್ತರಕ್ಕೆ ಸರಿಹೋಲುವ ಉತ್ತರಕ್ಕೆ ಕಡಿಮೆಯೆಂದರೆ ರೂ 2100 ಸಿಗುವುದೆಂದು ಭರವಸೆಯನ್ನೀಯುತ್ತೇವೆ.

ಹೆಚ್ಚು ಸಂಖ್ಯೆಯ ಉತ್ತರ ಕಳುಹಿಸಿದ ಇಬ್ಬರಿಗೆ ಕ್ರಮವಾಗಿ ರೂ 400 ಮತ್ತು 200ರ ಎರಡು ಬಹುಮಾನಗಳು ಕೊಡಲಾಗುತ್ತವೆ ಯಾವುದಾದರೂ ಒಂದು ಸಾಲಿನ್ನು ಸರಿಹೋಲುವ ಉತ್ತರಕ್ಕೆ ರೂ 15 10 ಬಹುಮಾನಗಳನ್ನು ಕೊಡಲಾಗುತ್ತವೆ ಮೇಲಿನ ಅರ್ಧ ಸಾಲಿನ ಉತ್ತರಕ್ಕೆ ಸರಿಹೋಲುವ ಉತ್ತರಕ್ಕೆ 10 ರೂ ಯ 20 ಬಹುಮಾನಗಳನ್ನು ಕೊಡಲಾಗುವುದು. ಮೇಲಿನ ಸಾಲಿನ (ಅರ್ಧ) ಮೊದಲನೇ ಮತ್ತು ಎರಡನೇ ಸಂಖ್ಯೆಗಳನ್ನು ಸರಿಹೋಲುವ ಸಂಖ್ಯೆಗಳನ್ನು ಕಳುಹಿಸಿದ ಉತ್ತರಕ್ಕೆ 5 ರೂ ಯ 40 ಬಹುಮಾನಗಳನ್ನು ಕೊಡಲಾಗುವುದು ಮೊದಲನೇ ಸಂಖ್ಯೆಯನ್ನು ಸರಿಹೋಲುವ ಉತ್ತರಕ್ಕೆ 2ರೂ ಯ 50 ಬಹುಮಾನಗಳನ್ನು ಕೊಡಲಾಗುವುದು

ಮೇಲೆ ಕಾಣುವ ಸಣ್ಣ ಸಣ್ಣ ಚಚ್ಚೌಕಗಳಲ್ಲಿ ೧ರಿಂದ ೨೧ರ ವರೆಗೆ ಅಂಕೆಯನ್ನು ಬರೆಯ [illegible] ಲನ್ನು ಯಾ ಒಂದು ಮೂಲೆಯಿಂದ ಇನ್ನೊಂದು ಮೂಲೆ ವರೆಗೆ ಕೂಡಿಸಿದರೂ ೩೪ ಬರಬೇಕು [illegible] ಉಪಯೋಗಿಸಿದ ಸಂಖ್ಯೆಯನ್ನು ಇನ್ನೊಂದು ಬಾರಿ ಉಪಯೋಗಿಸಬಾರದು.

ಉತ್ತರಗಳನ್ನು ಕಳುಹಿಸುವ ಕಡೇ ತಾ 12-3-1939 ಫಲಿತಾಂಶ 20-3-1939

ಪ್ರವೇಶಧನ 1 ಉತ್ತರಕ್ಕೆ ರೂ. 1, 3 ಉತ್ತರಗಳಿಗೆ ರೂ. 2, 8 ಉತ್ತರಗಳಿಗೆ ರೂ 5, 16 ಉತ್ತರದ ಸೆಟ್ಟಿಗೆ ರೂ 8

ಮೇಲೆ ಕಾಣಿಸಿದ ಪ್ರವೇಶಧನದೊಂದಿಗೆ ಖಾಲಿ ಕಾಗದದಲ್ಲಿ ಎಷ್ಟು ಉತ್ತರಗಳನ್ನೂ ಕಳುಹಿಸಬಹುದು. ಪ್ರವೇಶಧನವನ್ನು ಮನಿ ಆರ್ಡರು ಯಾ ಪೋಸ್ಟಲ್ ಆರ್ಡರು ಮೂಲಕ ಕಳುಹಿಸಬೇಕು. ಮನಿಯಾರ್ಡರಿನ ಕೂಪನಿನ ಮೇಲೆ ಇಂಗ್ಲಿಷಿನಲ್ಲಿ ನಿಮ್ಮ ಪೂರ್ಣ ಹೆಸರನ್ನು ಬರೆಯಿರಿ ನಿಮ್ಮ ಎಡ್ರೆಸು ಬರೆದ ಅಂಚೆ ಕವರೊಂದನ್ನು ಫಲಿತಾಂಶಕ್ಕಾಗಿ ಉತ್ತರದೊಂದಿಗೆ ಕಳುಹಿಸಿರಿ ಮೆನೇಜರರ ತೀರ್ಮಾನವೇ ನ್ಯಾಯಬದ್ಧವೂ ಕಡೇದ್ದೂ ಆಗಿರುತ್ತದೆ.

ಮೂರು ಉತ್ತರವನ್ನು ಕಳುಹಿಸುವವರಿಗೆ ನಮ್ಮ ಸ್ಪೆಶಲ್ ಕೆಮಿಕಲ್ ಭಂಗಾರದ ಉಂಗುರ ಮತ್ತು 8 ಉತ್ತರ ಕಳುಹಿಸುವವರಿಗೆ 1 ಸೆಟ್ಟು ಶರ್ಟು ಗುಂಡಿಗಳು ಯಾ 1 ಬಳೆಗಳು 16 ಯಾ ಹೆಚ್ಚು ಉತ್ತರ ಕಳುಹಿಸುವವರಿಗೆ ಒಂದು ನೆಕಲೇಸು ಯಾ 4 ಬಳೆಗಳು ಮತ್ತು 1 ಉಂಗುರವನ್ನು ಕೊಡುವೆವು

ಕಳೆದ ಬಾರಿಯ 50 ಸಂಖ್ಯೆಯ ಉತ್ತರ.

1ನೇ ಸಾಲು	5,	18,	20,	12
2ನೇ ,,	11,	19,	14,	6
3ನೇ ,,	18,	8,	9,	15
4ನೇ ,,	16,	10,	7,	17

ಎಲ್ಲಾ ಹಣ ಮತ್ತು ಉತ್ತರಗಳನ್ನು ಈ ಕೆಳಗಿನವರಿಗೆ ಕಳುಹಿಸಬೇಕು.

The Manager
Gateway Products
Zaveri Bazar BOMBAY 2.

ದಿವಸ ಹೋದಂತೆ ಹೊಟ್ಟೆನೋವು ದ್ವಿಗುಣಿತವಾಗುತಿತ್ತು

ವರ್ಷಗಟ್ಟಲೆ ಯಾತನೆ [illegible] ದ ಒದ್ದಾಡಿದ ಮಿ. [illegible] ರವರು ಎಲ್ಲಾ ಪೀಡನೆಗಳಿ [illegible] ಮುಕ್ತರಾ [illegible] ದು [illegible] ಅವರ ಹೆಂಡತಿಯು ಇಂತೆಂದು [illegible] ಬಹಳ [illegible] ವಾಗಿ— [illegible] ಈ ಪತ್ರವು ಹೊಟ್ಟೆ ನೋವಿನಿಂದ ನರಳುವವರಿಗೆ ಬಹಳ ಪ್ರಯೋಜನವಾದೀತು.

ನನ್ನ ಪತಿಯು ಸುಮಾರು 7 ವರ್ಷಗಳಿಂದ ಹೊಟ್ಟೆಯ ಪೀಡೆಯಿಂದ ನರಳುತ್ತಿದ್ದು ಗುಣವನ್ನೇ ಹೊಂದಿರಲಿಲ್ಲ ದಿವಸ ಹೋದಂತೆ ಅವರ ಹೊಟ್ಟೆನೋವು ಇನ್ನೂ ಅಧಿಕವಾಗುತಿತ್ತು ಸಾಧಾರಣ ಎರಡು ತಿಂಗಳ ಹಿಂದೆ ಜಠರ ಬಾಧೆಯಿಂದ ಕಂಗಾಲಾಗಿದ್ದರು ಅವರು [illegible] ತಿನ್ನುತ್ತಿದ್ದರೂ ಅವರು ಜಠರ ಬಾಧೆಯಿಂದ ನರಳುತಿದ್ದರು ಡಾಕ್ಟರರೂ ಕೂಡ ಬೇಸರಪಟ್ಟಿರುವರು'

ಈಗ ನಾನು ಮೆಕ್ಲಿನ್ ಬ್ರಾಂಡ್ ಸ್ಟಾಮಕ್ ಪೌಡರಿನ ಜಾಹೀರಾತನ್ನು ನೋಡಿದೆನು. ಒಂದು ಬಾಟ್ಲಿಯನ್ನು ಸೇವಿಸಿದೊಡನೆ ನನ್ನ ಪತಿಯು ಗುಣಹೊಂದಲು ಪ್ರಾರಂಭಿಸಿದರು ಮತ್ತು ಈಗ ಅವರು ಏನನ್ನೂ ತಿನ್ನುವರು. ಅವರು ಈಗ ತಮ್ಮ ಆತ್ಮಮೋಘ ಔಷಧಿಗೆ ಕೃತಜ್ಞತೆಯನ್ನು ಸೂಚಿಸುತ್ತಿರುವರು

ಮಿಸೆಸ್ ಸಿ. ಡಬ್ಲ್ಯು.

[illegible] ಮೆಕ್ಲಿನ್ ಬ್ರಾಂಡ್ ಸ್ಟಾಮಕ್ ಪೌಡರ ಜಠರ ಬಾಧೆಗಳಿಗೆ ಉತ್ತಮವೆಂದು ಕಂಡುಕೊಳ್ಳುವಿರಿ ಒಂದು ಬಾಟ್ಲಿಯನ್ನು ಇವತ್ತೇ ಕೊಂಡುಕೊಳ್ಳಿರಿ ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುತ್ತದೆ

ಕಮ್ಮಿ ದರದಲ್ಲಿ ಮಾರಲ್ಪಡುವ ನಕಲಿ

ಮಾಲಿನ ವಿಷಯ ಜಾಗ್ರತೆಯಿರಲಿ

ನೀವು ತೆಗೆದುಕೊಳ್ಳುವ ಮೊದಲು ಎಲೆಕ್ಸ್ ಸಿ ಮೆಕ್ಲೀನ್ ಎಂಬ ಸಹಿಯಿರುವುದೇ ಎಂದು ನೋಡಿರಿ ಚಿಲ್ಲರೆಯಾಗಿ ಮಾರಾಟ ಮಾಡುವುದಿಲ್ಲ

ಸಹಿಯನ್ನು ನೋಡಿರಿ



ಕೊಳ್ಳುವ ಮೊದಲು ಕಂಪನಿಯ [illegible] ನೋಡಿ

MACLEAN BRAND Stomach Powder

ನಿಜಾಮ ಹೈದರಾಬಾದದಲ್ಲಿ ಹಿಂದುಗಳ ಮೇಲೆ ಅತ್ಯಾಚಾರ

ಸುಳ್ಳು ಅಪರಾಧಗಳು—ಜುಲುಮಾನೆ ಶಿಕ್ಷೆ—ಮತ್ತೆ ಜಬ್ತಿ ಮಾರಾಟಗಳು

ಶೋಲಾಪುರದಲ್ಲಿ ನಾಗರಿಕರ ಸಭೆ ಭಾಷಣಗಳು

ಸ್ವಯಂಸೇವಕರ ದಳಗಳ ರವಾನೆ

ಶೋಲಾಪುರ ಆರ್ಯ ಸತ್ಯಾಗ್ರಹ ಸಮಿತಿಯ ವಿಜ್ಞಪ್ತಿ

ನಿಜಾಮ್ ಹೈದರಾಬಾದದಲ್ಲಿ ಮುಸಲ್ಮಾನೇತರ, ಮುಖ್ಯವಾಗಿ ಹಿಂದೂಗಳ ಮೇಲೆ ಆಗುತ್ತಿರುವ ಅತ್ಯಾಚಾರ ಸಮಾಚಾರಗಳು ನಿತ್ಯವೂ ಬರುತ್ತಲಿವೆ. ಸ್ತ್ರೀಯರ ಮೇಲಂತೂ ಭಯಂಕರ ಅತ್ಯಾಚಾರಗಳಾಗುತ್ತಲಿರುವವು. ಮುಸಲ್ಮಾನ ನೌಕರ ಉದ್ಯೋಗಸ್ಥರು ಪ್ರಕಟವಾಗಿಯೇ ಮುಸಲ್ಮಾನ ಪಕ್ಷಪಾತಿಗಳಾಗಿ ಮುಸಲ್ಮಾನರೊಂದಿಗೆ ಸೇರಿ ಹಿಂದುಗಳ ಮೇಲೆ ಅತ್ಯಾಚಾರ ಮಾಡುತಿದ್ದಾರೆ. ರಸ್ತೆಗಳ ಮೇಲಿಂದ 'ಆರ್ಯಸಮಾಜ ಮುರ್ದಾಬಾದ್, ಹಿಂದೂಸಮಾಜ ಮುರ್ದಾಬಾದ್' ಎಂದು ಮುಸಲ್ಮಾನರ ಮೆರವಣಿಗೆಗಳು ಹೊರಡುತ್ತವೆ. ಕಲ್ಯಾಣದಲ್ಲಿ ಬಕ್ರೀದಿನ ದಿನ ಮುಸಲ್ಮಾನರು ಆಯುಧಪಾಣಿಗಳಾಗಿ ಮೆರವಣಿಗೆ ಹೊರಟರು. ಅದರಲ್ಲಿ ಮುನ್ಸೀಫರು, ತಾಲೂಕುದಾರರು ಮೊದಲಾದವರು ಕೂಡ ಸೇರಿದ್ದರು. ಅವರೆಲ್ಲರ ಕೈಯಲ್ಲಿ ಬಿಚ್ಚುಕತ್ತಿಗಳು ಥಳಥಳಿಸುತ್ತಿದ್ದುವು. ಇವರೆಲ್ಲರೂ ಕುಣಿಯುತ್ತ ನಲಿಯುತ್ತ ಬೈಯುತ್ತ ತೆಗಳುತ್ತ ಹೋಗುತಿದ್ದರು. ರಾತ್ರಿ ೧೦ ಗಂಟೆಗೆ ಅಂಜುಮಾನ ಮೈದಾನದಲ್ಲಿ ಅವರ ಸಭೆಯಾಗಿ ಮುನ್ಸೀಫ ಗುಲಾಮ ಮಹ್ಮದ ಮುರ್ದಾರಿಸ ಮೊದಲಾದ ಸರಕಾರಿ ನೌಕರರು ಭಾಗತೆಗೆದುಕೊಂಡಿದ್ದರು. ಸಭೆ ಮುಗಿದ ಮೇಲೆ ಮುಸ್ಲಿಮ ಲೀಗ ಜಿಂದಾಬಾದ್, ಹಿಂದೂ ಆರ್ಯಸಮಾಜ ಮುರ್ದಾಬಾದ ಎಂದು ಮೊದಲಾಗಿ ಬೊಬ್ಬೆಗಳಾದುವು. ಸಭಿಕರೊಂದಿಗೆ ಪೊಲೀಸರು ಕೂಡ ಬೊಬ್ಬೆಹಾಕುತಿದ್ದರು.

ಬೀದರ ಕೋರ್ಟಿನಲ್ಲಿ [illegible] ಮಾಡಿದ ಅಪರಾಧದ ಮೇಲೆ ೫ ಮಂದಿ ಹಿಂದುಗಳ ಮೇಲೆ ಫಿರ್ಯಾದಿ ಆಗಿದೆ.

ಮಹಾಲಿಂಗಪಲ್ಲಿ ಗುರುವಾರ [illegible] ಗಂಟೆ ಸಮಯಕ್ಕೆ ಬಸ್ಸಯ್ಯ ಎಂಬ ಆರ್ಯ ಯುವಕರು ಸಮಾಜದ ಕೆಲಸಗಳನ್ನು ಮಾಡುತಿದ್ದಾಗ ೨೦-೨೫ ಮಂದಿ ಮುಸಲ್ಮಾನರು ಲಾಠಿ, ಬರ್ಚಿಗಳಿಂದ ಅವರನ್ನು ಆಕ್ರಮಿಸಿ ಹೊಡೆದರು. ಮುನ್ಸೀಫರೂ ಡಾಕ್ಟರರೂ ಈ ದೃಶ್ಯವನ್ನು ನೋಡಲಿಕ್ಕೆ ಬಂದಿದ್ದರು. [illegible] ಕಾಲು ಮತ್ತು ಬೆನ್ನಿನ ಮೇಲೆ ಅನೇಕ ಗಾಯಗಳಿದ್ದುವು. ತಲೆ ಮೇಲೆ ದೊಡ್ಡ ಗಾಯ. ಪಿತ್ತಸ್ಥಿತಿಯು ಚಿಂತಾಜನಕವಾಗಿದೆ. ಈಗ ಸತ್ತು ಹೋದರೆಂದೂ ವರ್ತಮಾನವಿದೆ. ಅವರೂ ಮುಸಲ್ಮಾನರು ಆನಂದದಿಂದ ತಿರುಗುತ್ತಿದ್ದಾರೆ. ಕೊಲೆಗಡುಕನ ಹೆಸರನ್ನು ಕೊಟ್ಟಿದ್ದರೂ ಪೊಲೀಸರು ಆತನನ್ನು ಕೈದುಮಾಡಿರುವುದಿಲ್ಲ.

ಸುಳ್ಳು ಅಪರಾಧಗಳ ಮೇಲೆ ದಂಡನೆಯು ಶಿಕ್ಷೆ

ನಿಜಾಮ ಸರಕಾರವು ಸತ್ಯಾಗ್ರಹ ಆಂದೋಲನದಿಂದ ಭಯಭೀತವಾಗಿದೆ. ಸತ್ಯಾಗ್ರಹಿ ವೀರರು ರಾಜ್ಯವನ್ನು ನುಗ್ಗಿ ಬಂದಾರೆಂದು ದ[illegible] ಕ್ಯೋಸ್ಕರ, ಗಡಿಯಲ್ಲಿ ಪತಿಯೊಬ್ಬನ ತೆನ್ನಾಗಿ ತನಖಿವಿಚಾರ ಮಾಡಿಯೇ ಸರಕಾರವು ಅವರನ್ನು ಒಳಗೆ ಬಿಡುತ್ತದೆ. ನಾಲ್ಕು ಸುತ್ತ ಕಠಿಣ ಕಾವಲು ಇರುತ್ತದೆ. ತಲಾಸಿಮಾಡುವಾಗ ಯಾತ್ರಿಕರ ಮೇಲೆ ಅನೇಕಾನೇಕ ಬಲಾತ್ಕಾರಗಳಾಗುತ್ತವೆ. ಜನರು ಎಷ್ಟು ಹೆದರಿರುವರೆಂದರೆ ಅವರು ಸಮಾಚಾರಗಳನ್ನು ಕಳುಹಿಸಲಿಕ್ಕೂ ಹಿಂದು ಮುಂದು ನೋಡುತ್ತಾರೆ. ಕೋರ್ಟುಗಳಲ್ಲಿ ಸತ್ಯಾಗ್ರಹಿಗಳ ಮೇಲೆ ಫಿರ್ಯಾದುಗಳಾಗುವಾಗ ಹೆದರಿ ಯಾವ ವಕೀಲನೂ ಅವರ ಪರವಾಗಿ ವಾದಿಸಲು ಸಿದ್ಧನಾಗುವುದಿಲ್ಲ. ಪರಮಪೂಜ್ಯ ಮಹಾತ್ಮಾ ನಾರಾಯಣ ಸ್ವಾಮಿಯವರ ಮೇಲಾದ ಫಿರ್ಯಾದಿ ತೀರ್ಮಾನದ ನಕಲು ಇಷ್ಟರ ತನಕ ಸಿಕ್ಕಿರುವುದಿಲ್ಲ. ಸ್ವಾಮಿಯವರನ್ನು ಕಾಣಲಿಕ್ಕೆ ಅನೇಕ ಬಾರಿ ಸರಕಾರಕ್ಕೆ ತಂತಿಗಳನ್ನೂ ಪತ್ರಗಳನ್ನೂ ಕಳುಹಿಸಿ ಪ್ರಾರ್ಥಿಸಿದರೂ, ನಾಲ್ಕು ತಿಂಗಳ ಅವಧಿಯಲ್ಲಿ ಒಂದು ಶುಕ್ರವಾರ ಅವರನ್ನು ಕಾಣಬಹುದೆಂದು ಉತ್ತರ ಬಂದಿದೆ. ಮತ್ತು ಅವರನ್ನು ನೋಡಲಿಕ್ಕೆ ಹೋಗುವವರು ಕೂಡ ಸಾರ್ವಜನಿಕ ವ್ಯಕ್ತಿಯಾಗಿರ ಕೂಡ[illegible]ದೆಂದೂ ಸಮೀಪ ಬಂಧು ಆಗಿರಬೇಕೆಂದೂ ಹೇಳಲಾಗಿದೆ. ಈಗ ಸತ್ಯಾಗ್ರಹ ಸಮಿತಿಯು ಗುಲ್ಬರ್ಗಾ ಜೈಲಿನ ಸುಪರಿಂಟೆಂಡೆಂಟರಿಗೆ—ಇಡೀ ಜಗತ್ತು ಸನ್ಯಾಸಿಗಳಿಗೆ ಬಂಧುಸಮಾನವಿರುವುದರಿಂದ ಸ್ವಾಮಿಯವರು ಯಾರನ್ನು ಕಾಣಬೇಕೆಂದಿರುತ್ತಾರೋ ಅವರನ್ನು ಕಳುಹಿಸಿಕೊಡುವದೆಂದು ಪತ್ರ ಬರೆದರು. ಆದರೆ ಈ ಪತ್ರಕ್ಕೆ ಇನ್ನೂ ಉತ್ತರವು ಬಂದಿರುವುದಿಲ್ಲ.

ಹಿಂದುಗಳ ಮೇಲೆ ಸುಳ್ಳು ಅಪರಾಧಗಳನ್ನು ಹೊರಿಸಬೇಕೆಂಬುದರಕ್ಕೋಸ್ಕರ ಮುಸಲ್ಮಾನರ [illegible] ಹೋಗಿ ತಮ್ಮ ಮಸೀದಿ ಗೋಡೆಗಳ ಮೇಲೆ ತಮ್ಮ ಧರ್ಮವಿರುದ್ಧ ಮಾತುಗಳನ್ನು ಬರೆಯುತ್ತಾರೆ. ಅಂಥವರನ್ನು ಹಿಡಿದುಕೊಟ್ಟಿದ್ದೇವೆ. [illegible] ಮುಸಲ್ಮಾನರು ಬೇಕು ಬೇಕೆಂದೇ ಕುರಾನಿನ ಒಂದು ಪ್ರತಿಯನ್ನು ಒಂದು ರಸ್ತೆ ಮನೆಯೊಳಗೆ [illegible]ದನ್ನು ನೋಡಿದ್ದೇವೆ. ಹಿಂದುಗಳನ್ನು ಸುಳ್ಳು ಅಪರಾಧಗಳ ಜಾಲದಲ್ಲಿ ಸಿಕ್ಕಿಸಿ ಹಾಕಬೇಕೆಂಬುದಕ್ಕಾಗಿಯೇ ಇಂಥ ಅನ್ಯಾಯ ಕೃತ್ಯಗಳನ್ನು ಮಾಡುತಿದ್ದಾರೆ. ಅನೇಕ [illegible] ಅಪರಾಧ ಹಿಂದುಗಳ [illegible] ಅನ್ಯಾಯದ ದಂಡನೆ ಮತ್ತು ಶಿಕ್ಷೆಗೆ ಗುರಿಮಾಡುತ್ತಾರೆ. ಈ ಹಿಂದುಗಳನ್ನು ಹೊಡೆದುದೂ ಅಲ್ಲದೆ ಇದೆ. ಸತ್ಯಾಗ್ರಹಿಗಳಿಗೆ ಕೋರ್ಟುಗಳಲ್ಲಿ ಒಂದೊಂದು ವರ್ಷ ಕಠಿಣಶಿಕ್ಷೆಯಾಗುತ್ತಿರುವುದು. ವಾರಂಗಲ್ಲಿನ ಆರ್ಯರ ಮೇಲೆ ಬಾರಿ ದಂಡನೆಯು ಹೇರಲ್ಪಡುತ್ತದೆ. [illegible] ಪೊಲೀಸರು [illegible] ದಿವಸ [illegible] ಸತ್ಯಾಗ್ರಹಿಗಳ [illegible]ಗಳ ಮನೆಗೆ ಹೋಗಿ [illegible] [illegible] ಸಿಡಿಸುತಾರೆ, [illegible] ಚಾರಗಳನ್ನು ಸಾಮಾನುಗಳನ್ನು, ಪುಸ್ತಕಗಳನ್ನು ಸುಲಭ ಕ್ರಯಕ್ಕೆ ಮಾರಿಬಿಡುತ್ತಾರೆ. ಹೀಗಾಗಿ ಅನೇಕ ಕುಟುಂಬಗಳು ಈಗ ಅನಾಥವಾಗಿವೆ. ಆದರೂ ಇನ್ನು ಅತ್ಯಾಚಾರ ಅನಾಚಾರಗಳು ನಡೆದ ಮೇಲೆ ಕೂಡ ಧೈರ್ಯ ಕೆಡದಿರುವಂಥ ಸತ್ಯಾಗ್ರಹಿಗಳ [illegible] ಧನ್ಯರಾಗಿದ್ದಾರೆ. ಇನ್ನು ಹೆಚ್ಚೆಚ್ಚು ಮುಂದೆ ಹಿಂದುಗಳ [illegible] ಒಂದು ಸ್ವಯಂಸೇವಕ ಸತ್ಯಾಗ್ರಹಿಗಳಾಗಿ ತಮ್ಮ ಹೆಸರುಗಳನ್ನು [illegible]ದ್ದಾರೆ. ಇದರಿಂದ ಹೈದರಾಬಾದ ಜೈಲುಗಳು ತುಂಬಿ ಹೋಗಿ [illegible] ತುಂಬುತ್ತಲಿವೆ.

ಸಭೆ ಭಾಷಣ ಠರಾವುಗಳು

[illegible] ಸ್ವಾಮಿ ಸ್ವತಂತ್ರತಾನಂದರ ಅಧ್ಯಕ್ಷತೆಯಲ್ಲಿ ಶೋಲಾಪುರದಲ್ಲಿ ನಾಗರಿಕರ [illegible] ಸಭೆಯಾಗಿ ಅದರಲ್ಲಿ ಅಧ್ಯಕ್ಷ [illegible] [illegible] [illegible] ಗಳನ್ನು ಕೊಟ್ಟರು. [illegible] ಈ ಕೆಳಗಿನ ಠರಾವುಗಳ [illegible]

(೧) [illegible] ಸತ್ಯಾಗ್ರಹ [illegible] [illegible] ಮತ್ತು [illegible] [illegible] ಹೈದರಾಬಾದ [illegible] [illegible] ಶೋಲಾಪುರದ ನಾಗರಿಕರು [illegible] ಸತ್ಯಾಗ್ರಹಿ [illegible] [illegible] ಸಾರ್ಹ ಗಳನ್ನು [illegible] ಮತ್ತು ಇಂಥ ಅನ್ಯಾಯ ಪೂರ್ಣ ಅತ್ಯಾಚಾರಗಳನ್ನು ಮಾಡಕೂಡದೆಂದು ಹೈದರಾಬಾದ ಸರಕಾರವನ್ನು ಕೇಳಿಕೊಳ್ಳುತ್ತದೆ.

(೨) ಶೋಲಾಪುರದ ನಾಗರಿಕರ ಈ ಸಭೆಯು ಹೈದರಾಬಾದ, ರಾಜಕೋಟೆ ಮತ್ತು ಜಯಪುರದ ಪ್ರಜೆಗಳ ಬೇಡಿಕೆಗಳನ್ನು ನ್ಯಾಯಪೂರ್ಣವೆಂದು ತಿಳಿಯುತ್ತದೆ. ಮತ್ತು ಈ ಮೂರು ರಾಜ್ಯಗಳಲ್ಲಿ ಆರಂಭವಾಗಿರುವ ಸತ್ಯಾಗ್ರಹ ಆಂದೋಲನಗಳಿಗೆ ಬೆಂಬಲವನ್ನು ಕೊಡಬೇಕೆಂದೂ ಸತ್ಯಾಗ್ರಹ ಬಂಧಿಗಳೊಡನೆ ಸಹಾನುಭೂತಿಯನ್ನು ತೋರಿಸಬೇಕೆಂದೂ [illegible] ಮಾನದಲ್ಲಿ ಕೂಡುವ ಅಖಿಲಭಾರತ ದೇಶೀರಾಜ್ಯ ಪ್ರಜಾಪರಿಷತ್ತನ್ನು ಕೇಳಿಕೊಳ್ಳುತ್ತದೆ.

ಸ್ವಯಂಸೇವಕ ದಳಗಳ ರವಾನೆ

[illegible] ಬಂತೆ ಹೈದರಾಬಾದ ರಾಜ್ಯಕ್ಕೆ ಹೋಗಿ ಸತ್ಯಾಗ್ರಹ ಮಾಡುವುದಕ್ಕೋಸ್ಕರ ಸ್ವಯಂ ಸೇವಕ ದಳಗಳ ರವಾನೆಯಾಗುತ್ತ ಇದೆ. ಈ ದಳಗಳನ್ನು ಕಳುಹಿಸಿ ಕೊಡುವಾಗ ಶೋಲಾಪುರ ಸತ್ಯಾಗ್ರಹ ಶಿಬಿರದಿಂದ [illegible] [illegible] [illegible] ಮತ್ತು [illegible] ಬರುತ್ತದೆ. [illegible] [illegible] ಹೈದರಾಬಾದ ಸರಕಾರದ ಅನ್ಯಾಯವನ್ನು ಪರಿಶೋಧಿಸುತಿದ್ದಾರೆ. [illegible] ಸತ್ಯಾಗ್ರಹ [illegible] [illegible] ಸತ್ಯಾಗ್ರಹಿಗಳ [illegible] ಈ [illegible] ಆಗಾಗಲೇ [illegible] [illegible] ಈ [illegible] [illegible] [illegible] [illegible] ಇವರು [illegible] [illegible] [illegible] ಮುಂತಾದವುಗಳಿಗೆ [illegible] ವ್ಯವಹಿಸಿದ.

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ಲೋಧ್ರ
ಗರ್ಭಾಶಯ ರೋಗನಿವಾರಿಣಿ
'ಹೆಂಗಸರಿಗೊಂದು ವರದಾನ'
[illegible] ಬಹಿಷ್ಠೆಯಾಗುವಾಗ ಉಂಟಾಗುವ ನೋವು, ಸಮಯಕ್ಕೆ ಸರಿಯಾಗಿ ಬಹಿಷ್ಠೆಯಾಗದಿರುವುದು, ಗರ್ಭಹೋಗುವುದು, ಬಂಜೆತನ, ಸೂತಿಕಾವಾಯು, ಮುಂತಾದ ಇತರ ಹೆಂಗಸರ ಎಲ್ಲಾ ರೋಗಗಳ ಈ ಔಷಧಿಯಿಂದ ಗುಣವಾಗುತ್ತದೆ.
ಲೋಧ್ರ
ಎರಡು ಸೈಜಿನ ಬಾಟ್ಲಿಗಳಲ್ಲಿ ದೊರೆಯುತ್ತದೆ.
ರೂಪಾಯಿ 3 ಮತ್ತು 1—10—0
ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್
ರೋಯಪೆಟ್ಟ, ಮದ್ರಾಸು
ಸ್ಟಾಕಿಸ್ಟರು:—
ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

[illegible]

ಪುರೋಹಿತ ಶ್ವಾಸಹಾರಿ
ದಮ್ಮಿಗೆ ಗುಣಕಾರಿ

ಶಾಲಿವಾಹನ ಶಕ ೧೮೬೧ನೆಯ ಬಹುಧಾನ್ಯ ಸಂವತ್ಸರದ ಫಾಲ್ಗುಣ ಶು। ೧೪ ಶನಿವಾರದಿಂದ ಫಾಲ್ಗುಣ ಬ। ೫ ಶುಕ್ರವಾರದ ವರೇಗಿನ ಪಂಚಾಂಗ. (೧೯ನೇಯ ಕುಂಭ ಮಾಯಿ

4	ಶನಿ	೧೨	೫೧॥	ಆಶ್ಲೇಷಾ	೧೫॥	೨೨	
5	ರವಿ	೧೩	೪೬।	ಮಘಾ	೧೨	೨೧	
6	ಸೋಮ.	೧೪	೪೧॥	ಪುಬ್ಬಾ	೮॥	೨೨	
7	ಕುಜ	೧೫	೩೬।	ಉತ್ತರಾ	೩॥	೨೩	
8	ಬುಧ	೧೬	೩೪	ಹಸ್ತಾ	೩॥	೨೪	
9	ಗುರು	೧೭	೩೧॥	ಚಿತ್ರಾ	೨೧।	೨೫	
10	ಶುಕ್ರ	೧೮	೩೦॥	ಸ್ವಾತಿ	೨।	೨೬	

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs 100/ to Rs 5000/ run regularly on systematic lines. Unique Banking facilities to Businessmen and interested Public.

Apply for particulars—K. R. GURU, *Managing Director*

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ... ರವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

[illegible]

ವಿಳಾಸ — ಸಂಜೀವಿನೀ ಔಷಧಾಲಯ ...

THE

Canara Banking Corporation Udipi, Ltd.,

(INCORPORATED IN BRITISH INDIA)

THE REGISTER OF MEMBERS & TRANSFER BOOKS

of the CORPORATION will remain closed from 16—2—'39 to 5-3-'39 both days inclusive.

(By Order)

V R KAMATH,
Manager

ಮದನಕಾಮೇಶ್ವರಿ ಲೇಹ.

ಅತ್ಯಂತ ಬಲಕಾರಿ.

[illegible]

... 1-4-0 ...

P. O. Periopi ...

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್ ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ, ... ಮಂಗಳೂರು

The Canara Industrial & Banking Syndicate Limited.

(Incorporated in British India)

(Estd: 1925)

HEAD OFFICE: 'MUKUND NIVAS' UDIPI, S INDIA

Member:

Reserve Bank of India, Bankers' Clearing House Bombay

Season Deposits Maturing Between 30th June and 15th July 1939 Are Accepted @ 3½% p. a

Banking Business of Every Description Transacted on Sound lines.

Particulars on application to any of our 35 Branches

ಡೋಂಗರೆ ಅವರ ಬಾಲಾಮೃತವು

ಮಕ್ಕಳ ...

[illegible]

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ ಅವ್ವಲ್ ತಂದ ಗುದ್ದು ಮುಡಿಗೆ	1—11—0	-
,, ದುಯಂ ,, ,,	1 10 -0	4—10—0
,, ಅವ್ವಲ್ ಸುಗ ,,	1 10—0	
,, ದುಯಂ ,, ,,	1 -9 0	
ಅಕ್ಕಿ ಅವ್ವಲ್ ಗುದ್ದು ,,	4 2 0	4 - 2—0
,, ದುಯಂ ,,	3 14—0	3 14—0
,, ಅವ್ವಲ್ ಸುಗ ,,	4 - 4 - 0	-
,, ದುಯಂ ,, ,,	3 - 8 - 0	3 - 8—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35 - 0 -0	45 0 - 0
,, ಸಿಪ್ಪೆ ಇದ್ದದು ,,	37 - 8—0	47 - 8 - 0
ಕೊಬ್ಬರಿ ಆಫೀಸು ಖಂಡಿಗೆ	46 0 0	—
,, ದಿಲ್ ಪಸಂದ	17 - 8 0	
ತೆಂಗಿನ ಎಣ್ಣೆ ಮಣಕ್ಕೆ	8 5—0	8—5—0
ಸಿಪ್ಪೆಯಿದ್ದ ಅಡಕೆ 1000ಕ್ಕೆ	3—4—0	3 - 12 - 0
ಗೇರುಬೀಜ ಮುಡಿಗೆ	3 - 12—0	3 - 12—0
ಕಬ್ಬಿನ ಬೆಲ್ಲ ಖಂಡಿಗೆ	42—8—0	60—0 - 0
ಒಳ್ಳೇಮೆಣಸು ಹಂಡ್ರಡ್ವೇಟಿಗೆ	15—8 - 0	16—8—0

ಹಳ್ಳಿಯ ಹತ್ತುಸಮಸ್ತರು

[ಕಳೇ ಘಟದಿಂದ ಮುಂದುವರಿದುದು]

ಕಾವೇರಮ್ಮರ ಕೊಳ್ಳುತ್ತ, ಅತ್ತ ಅವರನ್ನು ಟೀಕಿಸುತ್ತ 'ಅಲ್ಲ—ಕಾವೇರಮ್ಮನ ಬಾಯಿ ಎಂಥಾದ್ದು! ಮರವೇ? ಕಂಚೀ' ಹಾಸ್ಯಮಾಡುತ್ತ ಸರಿಯುತ್ತಾರೆ.

ಕಾವೇರಮ್ಮ ಗಟ್ಟಿಗಿತ್ತಿ ಮನೆಕೆಲಸ, ಮನೆ ಸ್ವಾಲ್ಪ ಜಾನುವಾರುಗಳ ಕೆಲಸ ಇಷ್ಟೆಲ್ಲ ತಾನೊಬ್ಬಳೇ ಮುಗಿಸಿ ನಾಲ್ಕು ನಾಸಿಗೆ ಬಿಡುವು ಮಾಡಿಕೊಳ್ಳುವುದೆಂದರೆ ಸುಲಭವಲ್ಲ. ಇತ್ತ ಸಾಹುಕಾರರು ರಾತ್ರಿ ಒಂಭತ್ತು ಘಂಟೆಗೆ ಅಂಗಡಿಗೆ ಕದವಿಕ್ಕಿ, ಬಚ್ಚಲಿಗೆ ಹೋಗಿ ಒಂದು 'ಕಂಠಸ್ನಾನ' ಮಾಡಿ ರಾತ್ರಿ ಹತ್ತುಘಂಟೆಗೆ ಸಮನಾಗಿ ಊಟಮಾಡುತ್ತಾರೆ. ಮಧ್ಯಾಹ್ನ ಅವರು ಒಳಗೆ ಬರುವಾಗ ಎರಡು ಘಂಟೆಯಾದರೂ ಕಳೆಯುತ್ತದೆ. ಊಟ ಮೂರು ಘಂಟೆಗೆ ಮೊದಲು ಮುಗಿದ ದಿವಸವೇ ಇಲ್ಲ.

ಪಂತರ ನಿರ್ಣಯವನ್ನು ಅಧ್ಯಕ್ಷರು ಆಲೋಚನೆ ಹೊಂದಿದ ಠರಾವಾಯಿತೇ ಆಲೋಚಿಸೋಣ ಎಂದು ಶ್ರೀ. ಅಣೆಯವರು ತಿದ್ದುಪಡಿ ತಂದರು. ಅದನ್ನು ಅಂಗೀಕರಿಸಲಾಗಿತ್ತು. ಆದರೆ ಸುಮಾರು ೫೦೦ ಮಂದಿ ಪ್ರತಿನಿಧಿಗಳೇ ಎದ್ದು ನಿಂತು ಸಭಾ ಕಾರ್ಯವನ್ನು ಕೂಗಾಟ ಗಲಾಟೆಗಳಿಂದ ಭಂಗಪಡಿಸಿದರು. ಸುಮಾರು ೧॥ ತಾಸಿನ ವರೆಗೆ ಜವಾಹರರೂ [illegible] ಅಧ್ಯಕ್ಷರೂ ಸಮಾಧಾನ ಹೇಳಿದರೆ ಇವರ [illegible] [illegible] ಸುಮಾರು ೩೦೦ ಮಂದಿ ಈ ಸೂಚನೆಗೆ ವಿರುದ್ಧವಾಗಿ ನಿಂತು. [illegible] [illegible] ಗಢದಂತೆಯೂ [illegible] ವರ್ತಿಸಿದರು.

ಮಹಾತ್ಮಾಜಿಯವರ ತತ್ವಾನುಸಾರವಾಗಿ ಇದುವರೆಗೆ ಕಾಂಗ್ರೆಸು ಕಾರ್ಯ[illegible] ನಡೆದುದ್ದು [illegible] ಹಾಗೆಯೆ ನಡೆಯತಕ್ಕುದು. ಕಾರ್ಯಕಾರೀ ಮಂಡಲದ ಸದಸ್ಯರುಗಳನ್ನು ಮಹಾತ್ಮಾಜಿಯವರ ನಾಯಕತ್ವದಲ್ಲಿ ಕಾಂಗ್ರೆಸಿಗೆ ವಿಶ್ವಾಸವಿದೆ. ಗಾಂಧೀಜಿಯವರ ಒಪ್ಪಿಗೆಗೆ ಸರಿಯಾದ ರೀತಿ ಕಾರ್ಯಕಾರೀ ಮಂಡಲಿಕ್ಕೆ ಸದಸ್ಯರನ್ನು ಅಧ್ಯಕ್ಷರು ನೇಮಿಸಬೇಕು ಎಂಬುದೇ ಪಂತರ ಸೂಚನೆ.

ಈ ಗಲಾಟೆ[illegible] ನೆಹರುರವರು ಬಹಳವಾಗಿ ಹೇಳಿಕೊಂಡರು. ಶಿಸ್ತಿನ ಭಂಗವನ್ನು ಕೊಳಕನ್ನೂ ಸರಿತಾಗಿ ಮಹಾತ್ಮಾಜಿ[illegible] [illegible]ಗ ಬರೆದುದನ್ನು ನೆನಪಿಗೆ ತಂದುಕೊಟ್ಟು, ಇಂತಹರನ್ನು ಒಡಗೊಂಡು ಬಹಳ ಕಠಿಣ [illegible] ಸರು. ಆವಶ್ಯಕತೆಯುಕ್ತರೀವರ ಮಾಡಿ ಸಂಖ್ಯೆಯನ್ನು ಎಲ್ಲಿಂದ ತಂದರೋ ಎಂದು ಆವರಿಗೂ ಸೂಚಿಸಿ—ಇಂತಹರಿಂದ [illegible] ಹೋರಾಟದಲ್ಲಿ ಹೇಗೆ ವಿಜಯವುಂಟಾಗುವುದೋ, ಇದು ಡೆಮಾಕ್ರಸಿಯೋ ಅಥವಾ ಗುಂಡಾರಾಜ್ಯವೋ ಎಂದು ಸಹ ಗದರಿಸಿ, ಕೊನೆಗೆ ದುಃಖಿತರಾಗಿ, ಕರುಣಾಜನಕ[illegible] ಇದಿಂದ ಜತೆಗಾರರನ್ನು ಬಹಳವಾಗಿ ತಗ್ಗಿಸಿ, ನಾವೂ ನಾಚಿ, ಮಾತಾಡಿದರು. ವಿರೋಧಿಗಳಂತಿರಲಿ, ಈಜಿಪ್ಟಿನಿಂದ ಬಂದಿರುವ ಪ್ರತಿನಿಧಿಗಳಾದರೂ ಈ ವಿಷಯ ನೆನೆದು ಕಾಂಗ್ರೆಸಿನ ಮೇಲೆ ಕಟ್ಟುವರು. ಭಾವನೆಗಳು ಉದ್ರೇಕಗೊಂಡಾಗ ಇಷ್ಟೆಲ್ಲ ರಗಳೆಗಳು ಏಳುವುದು ನಿಜ; ಆದರೂ, ಇದು ಅಗತ್ಯವೇ, ನಾವೇ ಮುಂದೆ ಸ್ವಾತಂತ್ರ್ಯ ಹೋರಾಟವುದಿಲ್ಲವೆ? ನಮ್ಮ ಪರೀಕ್ಷಾಕಾಲ ಬರುತ್ತದೆ. ಆಗ ಹೀಗೆಲ್ಲ ವಿಕಟವಾಗಿ ಅಭಿನಯಿಸುವುದೋ? ಇಪ್ಪತ್ತು ವರ್ಷಗಳಲ್ಲಾದ ಕಠಿನ ಕಾರ್ಯವನ್ನೆಲ್ಲ ಮಣ್ಣು ಪಾಲು ಮಾಡುವಿರಲ್ಲ! ಎಂದರು. ಅಲ್ಲಿಗೆ ಎಲ್ಲರೂ ತಣ್ಣಗಾದರು. ಅಣೆಯವರು ತಮ್ಮ ತಿದ್ದುಪಡಿಯನ್ನು ಹಿಂದೆಗೆದರು. ಬಳಿಕ ಮೂಲ ಸೂಚನೆಯನ್ನು ಪಂತರು ತಂದಂತೆ, ತಿದ್ದುಪಡಿಗಳಿಲ್ಲದೆ ಮಂಜೂರು ಮಾಡಲಾಗಿದೆ.

ಶ್ರೀ. ಜಯಪ್ರಕಾಶ ನಾರಾಯಣರು—'ರಾಷ್ಟ್ರೀಯ/ಕೇಂದ್ರ'ಯನ್ನು ಕುರಿತಾದ ಸೂಚ[illegible]

ವಿಷಯನಿಯಾಮಕ ಸಮಿತಿಯಲ್ಲಿ ಗೊಂದಲ
ನೆಹರುರವರ ಖೇದಪೂರ್ಣ ಭಾಷಣ

ನೆಯನ್ನು, ಶ್ರೀ. ಜವಾಹರಲಾಲರ ಪರವಾಗಿ ತಾವೇ ಮಂಡಿಸಿದರು.

ಅರ್ಧ ಶತಮಾನದಿಂದ ಸ್ವರಾಜ್ಯಕ್ಕಾಗಿ ಹೋರಾಡುತ್ತಿದ್ದೇವೆ. ಸ್ವಯಂನಿರ್ಧಾರ ಶಕ್ತಿ ವರ್ಗ ಇತರ ರಾಷ್ಟ್ರಗಳಿಗೆ ಅನ್ವಯಿಸಲಾಗಿದೆ. ಇಂಡಿಯಕ್ಕೂ ಅದು ಇನ್ನು ಕೊಡಲೇ ಅನ್ವಯಿಸಬೇಕು. ಕಾಂಗ್ರೆಸಿನ್ನು ಒಂದಾಗಿ, ಸ್ವರಾಜ್ಯ ನಿರ್ಣಯದಂತೆ ಮುಂದೊತ್ತಲು ಸಿದ್ಧನಾಗಬೇಕು. ನಮ್ಮ ರಾಜ್ಯಾಂಗರಚನೆಯನ್ನು ನಾವೇ ಮಾಡಿಕೊಳ್ಳುವಂತಾಗಬೇಕು—ಎಂದು. ಈ

ಪಂ॥ ಗೋವಿಂದ ವಲ್ಲಭಪಂತ್

ಬಲ [illegible] [illegible] ಗಳ [illegible] [illegible] ಮಾಡಲಾಗಿದೆ.

[illegible] ತಿದ್ದುಪಡಿ [illegible] ಪಡೆದ್ದರೂ ಎಲ್ಲವೂ ಬಿದ್ದುಹೋದವು.

ಜವಾಹರರು [illegible] [illegible] ತಿದ್ದುಪಡಿಗಳಿಗೆ [illegible] ಎಲ್ಲ ಆಕ್ಷೇಪಗಳನ್ನು ಸಮಾಧಾನವಾಗಿ ಕೊಡುತ್ತಿದ್ದರು. 'ಚರಖಾ' ಕೊಟ್ಟು ಹೇಳುವುದಕ್ಕೆ, ಎಷ್ಟವರು ಎಂದು ಯಾರೂ ತಿಳಿದಿದೆಂದರೆ, ನಾವು ನಮ್ಮ ಎಲ್ಲ ಕಾರ್ಯವನ್ನು ಈಗಲೇ ಜೈಲಿಗೆ ತರಬಾರದೆಂದೂ, ಮಂತ್ರಿಗಳು [illegible] ಒಡೊಳಗಿದ್ದೇ ಸರಕಾರವನ್ನು ಹೋರಾಡಕಳ್ಳದೆಂದೂ, ಸುಮ್ಮನೆ ಮಾತಿನಿಂದಲೇ ಬ್ರಿಟಿಷರನ್ನು ಬೆದರಿಸಲಾಗುವುದಿಲ್ಲ ಎಂದೂ, ಮುಂದಿನ ಹೋರಾಟದಲ್ಲಿ ನಾವೆಲ್ಲರು ಮುಂದೆ ಆತ್ಮಬಲಿ ಕೊಡಲು ಸಿದ್ಧರಿರಬೇಕೆಂದೂ ಆದಕ್ಕಾಗಿ ಈಗಿಂದಲೇ ಸಿದ್ಧತೆ [illegible] ಬೇಕೆಂದೂ ಜವಾಹರರು [illegible] ಸಮಿತಿಯಲ್ಲೇ ಸಾರಿಸಿದ್ದರು.

[illegible] ಹಿಂದಿನ ದಿನದ ದುರ್ವರ್ತನವನ್ನು ಕುರಿತು ದುಃಖಪ್ರದರ್ಶಿಸಿ, ಇಂತಹರನ್ನು ನಾವು ಕಾಂಗ್ರೆಸಿನಿಂದ ಹೊರಗಿಡಬೇಕಾಗುವುದೆಂದು ಸೂಚಿಸಿ, [illegible] ಪ್ರದರ್ಶನದಿಂದಲೇ ವಿಜಯದಾಗದೆಂದ, ಕಾಂಗ್ರೆಸ್ಸಿನ [illegible] ಸೋತಲಿಸ್ಟರು. ಹೀಗೆ [illegible] ಮಾಡಿದ್ದಕ್ಕೆ ಅಧ್ಯಕ್ಷರೇ [illegible] ಕ್ಷಮೆ ಯಾಚಿಸಿದರು.

[illegible] ತಿಂಗಳ [illegible] ತರದ [illegible] [illegible] ಆದರೆ, ಅದಕ್ಕೆ ಮೊದಲೇ ಸ್ವರಾಜ್ಯ [illegible] ಆಗಬಾರದು. [illegible], ಅದನ್ನು [illegible]

[illegible]

* * *

[illegible] [illegible] ನಿರ್ಣಯವೂ ಮಂಜೂರಾಗಿದೆ. ಇದರಿಂದ ನಾನಾ [illegible] ಬಹು [illegible] ಎಂದರೆ [illegible] [illegible]. ಅಧ್ಯಕ್ಷರು, ನೆಹರೂರವರ [illegible] ಜನರ [illegible] [illegible] ಹೊರಗಿ [illegible], ಆದರು ಸರ್ವರನ್ನೂ [illegible], ಹೇಗೂ ಸಾವಿರ ಗದ್ದಲದಿಂದ ಪಾರಾದರು.

ಶ್ರೀ। ಸುಭಾಷಚಂದ್ರರು

ತಾ ೧೦ರಲ್ಲಿ—ಮಧ್ಯಾಹ್ನ ೩ ಗಂಟೆಗೆ ಜ್ವರ ಇಳಿದಿತ್ತು. ಸಂಜೆಯಾಗುತ್ತ ಬರುವಂತೆ ಅದು ೧೦೪ ಡಿಗ್ರಿಗೆ ಹೆಚ್ಚಿತು. ಮುಂಬಾಯಿಯ ಆರೋಗ್ಯ ಮಂತ್ರಿ ಗಿಲ್ಡರರು, ಇವರನ್ನು ಪರೀಕ್ಷಿಸಿ (೪ ಗಂಟೆಗೆ) ಬ್ರೊಂಕೊ ನ್ಯುಮೋನಿಯ, ನಾಡಿಗತಿ, ಉಸಿರಾಟ ೪೦ ಇದೆ. ನಾಡಿ ಬಲವಿಲ್ಲದ್ದು. ನ್ಯೂಮೋನಿಯದ ಲಕ್ಷಣಗಳು ಬೆಳೆದುವು. ಜಬಲಪುರದ ಆಸ್ಪತ್ರೆಗೆ ಕೊಂಡೊಯ್ಯಬೇಕು ಎಂದರು.

'ನಾನು ಇಲ್ಲಿಗೆ ಬಂದವನು, ಜಬಲ್‌ಪುರ ಆಸ್ಪತ್ರೆಗೆ ಹೋಗ ಬಂದವನಲ್ಲ. ಅಧಿವೇಶನ ಮುಗಿವ ತನಕ ನನ್ನನ್ನು ಬೇರೆ ಕಡೆಗೆ ಒಯ್ಯುವ ಬದಲು ನಾನಿಲ್ಲೇ ಸಾಯುವೆನು' ಎಂದು ಸುಭಾಷರೆಂದರು. ಎಷ್ಟೇ ಜನ ಸಮಾಧಾನ ಮಾಡಿದರೂ ಕೇಳದೆ, ಒಪ್ಪಲಿಲ್ಲ [illegible] ಮಾತಿದು.

[illegible] ಮುಖ್ಯ ಮಂತ್ರಿಗಳು ಸುಭಾಷರ [illegible], ಅವರಿರುವಲ್ಲೇ ಎಲ್ಲ ಆಲೋಚನೆ ಮಾಡಿರುವರು.

ಮಹಾತ್ಮಾಜಿ—ಆರೋಗ್ಯವನ್ನೂ ಶಕ್ತಿಯನ್ನೂ ಒಲಿಪಡಿಸಿಕೊಳ್ಳಲಿ. ದೇವರು ಸಹಾಯ ಮಾಡಲಿ. ನಾನು ಆರೋಗ್ಯಲಾಭ ಮಾಡಿಕೊಳ್ಳುತ್ತೇನೆ ಎಂದು ಶ್ರೀ [illegible] ಭಾಷರಿಗೆ ವಾರ್ತೆ ಕಳುಹಿದರು.

ನಿಮ್ಮ ಹೊಟ್ಟೆಯನ್ನು ಶುಚಿಯಾಗಿಸಿರಿ!

ಮತ್ತು ನಿಮ್ಮ ಆಹಾರದ ಸವಿಯನ್ನು ಸವಿರಿ

[illegible]

ಇದು ಆವರ [illegible] ಸರಿಯಾಗಿ ಜೀರ್ಣವಾಗದೆ ಹೊಟ್ಟೆಯಲ್ಲಿಯೆ ಇದ್ದು ಕಟ್ಟಿ ಇಸಿದನ್ನು [illegible] ಉತ್ಪನ್ನಗೊಳಿಸಿದ ಕಾರಣವಾಗಿರಬಹುದು. ನಿಮಗೆ ಆಹಾರವನ್ನು ಆಯಾ ಸಮಯಕ್ಕೆ ಸರಿಯಾಗಿ ಸೇವಿಸಬೇಕೆಂಬ ಇಚ್ಛೆ ಉಂಟಾಗಬೇಕಾದರೆ, ಪ್ರತಿ ಊಟವಾದ ನಂತರ ಕ್ರಮವಾಗಿ ಆಹಾರವು ಜೀರ್ಣಹೊಂದಿ ಹೊಟ್ಟೆಯಿಂದ ಹೊರಕ್ಕೆ ಹೋಗಬೇಕು. ನೀವು ಈ ಪ್ರಕಾರವಾಗಿ ನರಳುವಿರಾದರೆ ಆಹಾರವನ್ನು ಸೇವಿಸಿದೊಡನೆ ಮೆಕ್ಲೀನ್ ಬ್ರ್ಯಾಂಡ್ ಸ್ಟೊಮೆಕ್ ಪೌಡರನ್ನು ಸೇವಿಸಿರಿ. ಇದು ನಿಮ್ಮ ಆಹಾರವು ಸರಿಯಾದ ರೀತಿಯಲ್ಲಿ ಕರಗಲು ಸಹಾಯವಾಗಿ, ಅತ್ಯಧಿಕ [illegible], ವಾಯು ಉಂಟಾಗದಂತೆ ಮಾಡಿ ವಿಷಕಾರಿ ವಸ್ತುಗಳನ್ನು ಜೀರ್ಣೇಂದ್ರಿಯಗಳಿಂದ ಹೊರಡಿಸುತ್ತದೆ. ಈ [illegible] ತಯಾರಿಸಿದ ಔಷಧಿಯನ್ನು ಕೊಡುತ್ತಿದ್ದರೆ ವಾಯು, ಪಿತ್ತ, ವಾತ [illegible] ನಾಶವಾಗುತ್ತದೆ. [illegible] ವ್ಯಾಧಿಗಳು ಕೂಡ ಈ ಮೆಕ್ಲೀನ್ ಬ್ರ್ಯಾಂಡ್ ಸ್ಟೊಮೆಕ್ ಪೌಡರಿನಿಂದ ಗುಣಹೊಂದಿದೆ. ಇದರ ಒಂದು ಬಾಟ್ಲಿಯನ್ನು ಕೊಂಡುಕೊಳ್ಳಿರಿ. ಆದರೆ ಖಾತ್ರಿಯಾದ ಮೆಕ್ಲೀನ್ ಬ್ರ್ಯಾಂಡ್ ಸ್ಟೊಮೆಕ್ ಪೌಡರ್ ಸಿಗುವಂತೆ ಬಾಟ್ಲಿಯ ಮೇಲಿನ ಸಹಿಯನ್ನು ನೋಡಿರಿ.

Alex. C. McLean

[illegible] ಎಲ್ಲಾ ಔಷಧಿ ಅಂಗಡಿಗಳಲ್ಲಿಯೂ [illegible] [illegible]



ದೇಶೀ ರಾಜ್ಯಗಳ ಕುರಿತು ಕಾಂಗ್ರೆಸಿನ ಧೋರಣೆಯಲ್ಲಿ ಬದಲಾವಣೆ

ಪತ್ರಿಕೆಗಳ ಅಭಿಪ್ರಾಯ

ಸಿಂಧ ಅಬ್ಸರ್ವರ್- ಧ್ಯೇಯವಾದಿ... ಮೋಡಗಳಲ್ಲೇ ವಿಹರಿಸುತ್ತ, ನಿರಾಶನಾಗಿ ಜುಗಾರಾಡುವವನ ಹಾಗೆ, ಹೊಸ ಯೋಜನೆ ತೋರಿಸುವನು. ಹಾಗೆ ಸೂಚನೆಗಳನ್ನು ಒಪ್ಪಿಸಿದ ಕೂಡಲೆ ಸ್ವರಾಜ್ಯವು ಒಂದು ಬಹುಮಾನವಾಗಿ ಕ್ರಿಸ್ತಮಸಿನಲ್ಲಿ ಇತ್ತ ಬರುವ ಹಾಗಿಲ್ಲ.

++ ++ ++

ಡೈಲಿ ಗೆಜೆಟ್—ಅನರ್ಥಿಯ ಮಾತಲ್ಲದೆ, ಒಂದು ರಾಜ್ಯಭಾರ ಕ್ರಮವನ್ನು ಇನ್ನೂ ತಿದ್ದದಿರುವುದು ಬ್ರಿಟಿಷ ಸರಕಾರಕ್ಕೆ ಯೋಗ್ಯವಾಗಿಲ್ಲ. ಆದರೆ, ನಮಗೆ ಅರ್ಹತೆಯಿರುವ ಸ್ವರಾಜ್ಯವನ್ನು ಸಂಪಾದಿಸುವ ಬದಲು, ಪ್ರಪಂಚದ ಸ್ಥಿತಿ ಕೊಟ್ಟಿರುವ ವಿದ್ಯಮಾನಗಳ ಬೆಂಬಲದಿಂದ, ಬೆದರಿಸಿ ಅದನ್ನು ಪಡೆಯನೋಡುವುದು ವಿಹಿತವಲ್ಲ.

++ ++ ++

ಸಿವಿಲ್ ಮಿಲಿಟರಿ ಗೆಜೆಟ್—ಗಾಂಧಿಭಕ್ತರು ತನ್ನ ಮೇಲೇ ಎತ್ತಿದ ಆಕ್ಷೇಪಗಳನ್ನು ಮೂಲೆಗೊತ್ತಿ, ಎಲ್ಲರ ಮನಸ್ಸು ಬೇರೆ ಕಡೆಗೆ ಹರಿಯುವ ಹಾಗೆ ಬ್ರಿಟಿಷ ಸಾಮ್ರಾಜ್ಯಶಾಹಿಯನ್ನು ಸದೆಬಡಿವ ಬೆದರಿಕೆಯನ್ನು ಬೋಸರು ಎತ್ತಿಹಿಡಿದಿರುವರು. 'ಇಂತಹ ಕೊನೆಯ ಮಾತು'ಗಳು ಬೋಸರ ವಿಷಯ ಹೊಸದೇ. ಈ ಸಾಹಸವನ್ನು ಅಷ್ಟು ಚೆನ್ನಾಗಿ ಗ್ರಹಿಸಲಾಗುವುದಿಲ್ಲ.

ತಾ. ೧೨—೩—'೩೯

ಇಂದು ೫೨ನೆಯ ಅಧಿವೇಶನವು ಮುಗಿಯಿತು. ರಾತ್ರಿ ೧೦ ಗಂಟೆಗೆ ಮಂಗಲವಾಯಿತು. ಮುಂದಣ ಡಿಸೆಂಬರಿನಲ್ಲಿ ಬಿಹಾರಿನಲ್ಲಿ ಕೊಂಗ್ರೆಸ್ ಅಧಿವೇಶನ ಸೇರುವುದೆಂದಾಯಿತು.

ಪ್ರಾರಂಭದಲ್ಲಿ, ಆಜಾದರು, ಅಧ್ಯಕ್ಷ ಬೋಸರಿಗೆ ೧೦೩ ಡಿಗ್ರಿ ಜ್ವರವಿದ್ದು ೧೦೨ಕ್ಕೆ ಇಳಿದಿದೆ ಎಂದೂ, ಅವರು ಬೇಗನೆ ಗುಣಹೊಂದುವಂತೆ ಸರ್ವರೂ ಪ್ರಾರ್ಥಿಸಬೇಕೆಂದೂ ತಿಳಿಸಿದರು. ತನ್ನನ್ನು ಅಧ್ಯಕ್ಷ ಸ್ಥಾನದಲ್ಲಿರುವಂತೆ ಬೋಸರು ಪತ್ರ ಮೂಲಕ ತಿಳಿಸಿದ ಮೇರೆಗೂ ಅವರ ಪತ್ರವನ್ನೋದಿದರು.

ಜವಾಹರಲಾಲರು—ಬ್ರಿಟಿಷರ ಪರರಾಷ್ಟ್ರ ನೀತಿಯನ್ನು ಖಂಡಿಸಿ ನುಡಿದರು. ಈಗ ನಾವು ಸಾಮ್ರಾಜ್ಯದ ಅಂಗವಾಗಿರುವ ಕಾರಣ, ನಮ್ಮ ಅಭಿಪ್ರಾಯವನ್ನು ಮನ್ನಿಸುವವರಿಲ್ಲ. ಬ್ರಿಟಿಷ ಸರಕಾರವು ಎಂದಂತೆ, ಅದು ನಮ್ಮ ಅಭಿಪ್ರಾಯವೆಂದು ಪರಕೀಯರು ತಿಳಿದುಕೊಳ್ಳುವಂತಾಗಿದೆ. ಪರರಾಷ್ಟ್ರಗಳಲ್ಲಾಗುವುದರ ಪರಿಣಾಮವು ಕೂಡಲೆ ನಮ್ಮ ದೇಶದ ಮೇಲೆ ಇರದಾದರೂ, ಮುಂದೆ ಇದ್ದೇ ಇರುವುದು. ಚೆಂಬರ್ಲೇನರ ನೀತಿಯು ಭಯಾನಕವಾಗಿದೆ. ಅವರೊಡನೆ ಹಿಂದೀಯರು ಸಹಕರಿಸಲಾರರು. ಜೆಕೊಸ್ಲೊವಾಕಿಯಾ ಚೀನಗಳಲ್ಲಿ ಇತ್ತೀಚೆಗೆ ಆಗುತ್ತಿರುವುದನ್ನು ತಿಳಿದರೆ, ಬ್ರಿಟಿಷ ನೀತಿಯನ್ನು ನಿಂದಿಸಬೇಕಾಗುವುದು. ಅಂತೂ ಇವರು ಶಾಂತಿಯನ್ನು ಸಮಾಧಿಯಲ್ಲಿ ಹೂಳಿರುವರು. ಜೆಕ್ಕ ರಾಜ್ಯಕ್ಕೆ ಮಾಡಿದ ವಿಶ್ವಾಸಘಾತವನ್ನು ಇತಿಹಾಸವು ಮರೆಯಲಾರದು. ಸ್ಪೈಯಿನ್ ಸರಕಾರವು ಸೋತರೆ, ಅದಕ್ಕೆ ಜರ್ಮನಿ ಇಟಲಿಗಳ ವಿರುದ್ಧವು ಕಾರಣವಲ್ಲ, ಬ್ರಿಟನ್ನು ಫ್ರಾನ್ಸುಗಳು ಅದು ಸಾಯಲೆಂದೇ ಮಾಡಿದ ಪ್ರಯತ್ನಗಳೇ ಕಾರಣ.

ಪ್ರಜಾಸತ್ತೆಗಳನ್ನು ಹೀಗೆ ಕೊಲೆಮಾಡುವಾಗ, ಇಂಡಿಯವು ಸುಮ್ಮನಿರಲಾಗುವುದಿಲ್ಲ. ಇಂಡಿಯವು ಈ ಕೊಲೆಯಲ್ಲಿ ಭಾಗವಹಿಸಲಾರದು. ಇಂಡಿಯವು ಈ ನೀತಿಯಿಂದ ಬಾಹಿರವಾಗಿ, ಸ್ವತಂತ್ರವಾಗಿರುವ ಪ್ರಜಾಸತ್ತೆಗಳ ಸಾಲಿನಲ್ಲಿ ನಿಲ್ಲಬೇಕಾಗಿದೆ. ಇಂಡಿಯವು ಸ್ವಾತಂತ್ರ್ಯ ಪಡೆವುದರಲ್ಲಿದೆ, ಪ್ರಪಂಚದ ಇತಿಹಾಸದಲ್ಲಿ ಅದಕ್ಕೆ ಗಣನೆಯಿದೆ; ಮೌನವಾಗಿರುವುದು ಸೊಗಸಲ್ಲ.

ಬ್ರಿಟಿಷ್ ಪರರಾಷ್ಟ್ರ ನೀತಿಯ ಖಂಡನೆ

ಬರಿಯ ವಾಗಾಡಂಬರದಿಂದ ಜಯ ದೊರೆಯದು

ಭೂಲಾಭಾಯಿಯವರು — ಪರರಾಷ್ಟ್ರಗಳಲ್ಲಿ ನಡೆವುದನ್ನು ನಾವು ಚೆನ್ನಾಗಿ ತಿಳಿದುಕೊಳ್ಳುತ್ತಿರುವುದು ಅಗತ್ಯವಾಗಿದೆ. ತಾನೇ ಸೃಷ್ಟಿಮಾಡಲು ಸಹಾಯಮಾಡಿದ ರಾಜ್ಯಗಳಿಗೂ ಬ್ರಿಟನ್ನು ವಿಶ್ವಾಸಘಾತಮಾಡಿದೆ.

ಗಡಿನಾಡಿನಲ್ಲಿ ಶಾಂತಿಸ್ಥಾಪನೆಗೆಂದು ಹದಿನೈದುಕೋಟಿ ರೂಪಾಯಿ ವ್ಯಯವಾಗಿದೆಂದು ಇಂಡಿಯಾ ಸರಕಾರವೇ ಎಂದಿದೆ. ದೇಶದಲ್ಲೇ ಬೇಕಾದಷ್ಟು ರಗಳೆಗಳಿವೆ ಎಂದು ವಿದೇಶದಲ್ಲಾಗುವ ಈ ಕುಕರ್ಮಗಳನ್ನು ನೋಡದಿರಲಾಗುವುದಿಲ್ಲ.

ಲೀಗ್ ಒಫ್ ನೇಶನ್ಸಿಗೆ ಇಂಡಿಯವು ಮೆಂಬರಾಗುವುದು ಸಾಧ್ಯವಲ್ಲ. ನಮ್ಮ ಮೆಂಬರಿಕೆಯಿಂದ ಇಂಗ್ಲೆಂಡಿಗೆ ಮತ್ತೊಂದು ವೋಟು ಸಿಗುವುದು ಮಾತ್ರ ನಮ್ಮ ಲಾಭ! ನಮ್ಮ ಪ್ರತಿನಿಧಿಯನ್ನು ನಾವು ಆರಿಸಿ ಕಳಿಸಿದಲ್ಲಿ, ಸಮಾನವಾಗಿ ಚರ್ಚಿಸುವ ಅಧಿಕಾರವಿದ್ದರೆ, ಆಗ ಲೀಗ್ ನಮಗೆ ಬೇಕು.

ಮಹಾತ್ಮಾಜಿಯವರ ಪರರಾಷ್ಟ್ರ ನೀತಿ ಎಂದರೆ, ಸಮಸ್ತರೊಡನೆ ಮೈತ್ರಿ, ಸ್ವರಾಷ್ಟ್ರ ನೀತಿಯೆಂದರೆ ಸತ್ಯ ಅಹಿಂಸೆಗಳ ಆಧಾರದಿಂದ ಬಾಳುವ ನೀತಿ — ಎಂದರು.

ಬ್ರಿಟಿಷ ಪರರಾಷ್ಟ್ರ ನೀತಿಗೂ ಇಂಡಿಯಕ್ಕೂ ಸಂಬಂಧವಿಲ್ಲವೆಂದು ಸಾರುವ ನಿರ್ಣಯವು ಮಂಜೂರಾಯಿತು.

++ ++ ++

ದೇಶೀಯ ರಾಜ್ಯಗಳ ವಿಚಾರ

ದೇಶೀಯ ರಾಜ್ಯಗಳಲ್ಲಿನ ಪ್ರಜೆಗಳು ಜಾಗೃತರಾಗಿರುವುದನ್ನು ಅಭಿನಂದಿಸಿ, ಕೊಂಗ್ರೆಸು ಮಾಡಿದ ಸಾಧನೆಯೇ ಅಲ್ಲಿಯೂ ನಡೆವುದೆಂದು ತಿಳಿದು, ಜವಾಬ್ದಾರ ಸರಕಾರವು ರಾಜ್ಯಗಳಲ್ಲಿ ಉಂಟಾಗುವ ಹಾಗೆ ಸ್ವಾತಂತ್ರ್ಯವು ಕುಂದದ ಹಾಗೆ ಪ್ರಜೆಗಳು ಮಾಡುವ ಚಳವಳಿಗಳನ್ನು ಸ್ಥಾಪಿಸಿ, ಕೆಲವು ಜನ್ಮರು ಸಭಾಸಮ್ಮತವಾದ ತಿದ್ದುಪಡಿಗಳನ್ನು ಮಾಡಿದರೂ ತಳ್ಳಿದರು. ಶಿಸ್ತಿನಿಂದ ಪ್ರಜಾ ಚಳವಳಿಗಳನ್ನು ನಡೆಸುವ ಕ್ರಮವನ್ನು ಕೂಡಿ,—ಈ ನಿರ್ಣಯವು ಹರಿಪುರದಲ್ಲಾದ ನಿರ್ಣಯವನ್ನು ತಿದ್ದಿ, ಇಡೀ ಇಂಡಿಯವು ಒಂದೇಯಾಗಿ ಅದರ ವಿಸ್ತಾರದಲ್ಲಿ ಕೊಂಗ್ರೆಸಿನ ಕಾರ್ಯಕ್ಷೇತ್ರವಿರುವ ಕಾರಣ, ದೇಶೀಯ ರಾಜ್ಯಗಳಿಗೂ ಪ್ರಾಂತ್ಯಗಳಲ್ಲಿರುವಷ್ಟು ಸ್ವರಾಜ್ಯವು ದೊರೆಯಲು ಕೊಂಗ್ರೆಸ ಪ್ರಯತ್ನ ಮಾಡಬೇಕೆಂದ ಠರಾವು.

ಬಾಬು ರಾಜೇಂದ್ರ ಪ್ರಸಾದರು ಈ ಠರಾವನ್ನು ಕುರಿತು ದೀರ್ಘ ಭಾಷಣವು ಅನಗತ್ಯವೆಂದು, ದೇಶವೆಲ್ಲ (ಪ್ರಾಂತ್ಯಗಳೂ ರಾಜ್ಯಗಳೂ) ಒಂದೇ ಎಂದು ಕೊಂಗ್ರೆಸು ಎಣಿಸಿದೆ ಎಂದೂ, ಕೊಂಗ್ರೆಸಿಗೆ ಬಲಸಿಗುವ ವರೆಗೆ ರಾಜ್ಯಗಳಲ್ಲಿ ಅಲ್ಲಿನವರೇ ಹೋರಾಡಲೆನ್ನಲಾಗಿತ್ತೆಂದೂ, ಅದರ ಪರಿಣಾಮವು ಉತ್ತಮವಾಯಿತೆಂದೂ, ವಿದ್ಯಮಾನಗಳಿಗೆ ತಕ್ಕಂತೆ ಕಾರ್ಯನೀತಿಯನ್ನು ಬದಲಾಯಿಸಬಹುದೆಂದೂ, ರಾಜರುಗಳೇ ತಾವಾಗಿ ಪ್ರಜಾ ಸ್ವಾತಂತ್ರ್ಯ ಕೊಡಲು ಹಲವರು ಹವಣಿಸಿದ್ದರೆಂದೂ ಇತರರು ಇನ್ನೂ ಕಣ್ತೆರೆದಿಲ್ಲವೆಂದೂ ಹೇಳಿದರು.

ರಾಜಕೋಟದಲ್ಲಿ ಗಾಂಧಿಜಿಗೆ ದೊರೆತ ಯಶಸ್ಸಿನ ಫಲವು ಇಡೀ ದೇಶಕ್ಕೆ ದೊರೆವುದೆಂದರು. ಧೆಂಕಾನಲ್ಲು ಲಿಮಡಿಗಳಿಂದ ಜನರು ಧಾರಾಳವಾಗಿ ಪರಪ್ರಾಂತ್ಯಗಳಿಗೆ ಹೋಗುತ್ತಿರುವರೆಂದೂ ಹೀಗೆಲ್ಲ ಬಹುಕಾಲ ನಡೆಯದೆಂದೂ, ಈ ಪ್ರಜೆಗಳು ಹಿಂದೆ ತೆರಳುತ್ತಲೇ ಅವರಿಗೆ ಸ್ವಾತಂತ್ರ್ಯವು ದೊರೆಯುವಂತಾಗಬೇಕೆಂದೂ ಸೂಚಿಸಿದರು.

ಹಿಂದೀ ರಾಜ್ಯಗಳನ್ನು ಸಾಮ್ರಾಜ್ಯಶಾಹಿ ಆಧಾರಾಂಗಗಳಾಗಿ ಬ್ರಿಟಿಷ್ ಸರಕಾರವು ಮಾಡಿದ್ದು, ರಾಜರುಗಳ ಅಪನ್ಯಯ ಅದೂ ಪರದೇಶಗಳಲ್ಲಿ, ಪ್ರಜೆಗಳು ಸ್ವಪ್ರಯತ್ನದಿಂದ ಬಲುಗೊಳ್ಳುವಂತೆ ಕೊಂಗ್ರೆಸು ಹಿಂದೆ ಹೇಳಿದ ಸೂತ್ರ—ಇವನ್ನು ಕುರಿತು ಅಬ್ದುಲ್ ಗಫರ್ ಖಾನರು ಮಾತೆತ್ತಿದರು.

ದೇಶೀಯ ರಾಜ್ಯಗಳಲ್ಲಿನ ಚಳವಳಿಗಳನ್ನು ನಿರ್ದೇಶಿಸಲು ಕೊಂಗ್ರೆಸು ಒಂದು ಸಮಿತಿಯನ್ನು ನಿರ್ಮಿಸಬೇಕಾಗಿ ಶ್ರೀ. ಕಮಲಾದೇವಿಯರೆಂದರು.

ಮೈಸೂರ ಸರಕಾರವು ಹಿಂದೆ ಮಾಡಿದ ಒಪ್ಪಂದಕ್ಕೆ ವಿರುದ್ಧ ನಡೆದರೆ ಸತ್ಯಾಗ್ರಹ ಮುಂದಾದ ಹತ್ಯಾಕಾಂಡಗಳಿವೆ ಎಂದು ಮೈಸೂರಿನ ಪ್ರತಿನಿಧಿಗಳೊಬ್ಬರು ಎಂದರು.

ಬಾಬು ಪ್ರಸಾದರು—ಕೊಂಚ ಆಡೋಣ ಧಾರಾಳ ಮಾಡೋಣ ವಾಗಾಡಂಬರದಿಂದ ಜಯ ದೊರೆಯದು. ಪಟೇಲರು, ಗಾಂಧಿಜಿ, ಜವಾಹರಲಾಲರು ಮಾಡಿದ ಕೊಂಗ್ರೆಸ ನಿರ್ಣಯವನ್ನು ನೀವು ಕೂಡರೇ? ಎಂದರು.

ನಿರ್ಣಯವು ಮಂಜೂರಾಯಿತು.

++ ++ ++

ಪರದೇಶಗಳಲ್ಲಿನ ಭಾರತೀಯರ ಸಹಾಯ ಮಾಡುವ ಅವರ ಅಲ್ಪಸಂಖ್ಯಾತರಾಗಿ ಇತರರೊಡನೆ ... ಗಿಸ್ವ ಹಾಗೂ ... ಸುಪ್ರಸಿದ್ಧ ... ಕಡಲ್ಲಿ ಹಿಂದೀಯರ ... ಕೊಂಗ್ರೆಸು ಇದೆ ಎನ್ನುವ ಠರಾವನ್ನು ಶ್ರೀ. ಸತ್ಯಮೂರ್ತಿಯವರ ... ಮಂಜೂರಾಯಿತು.

++ ++ ++

ಸರೋಜಿನಿದೇವಿಯವರ ಭಾಷಣ

ವೈದ್ಯರ ಅಪ್ಪಣೆ ಮೀರಿ ಛಲದಂಕರಾಗಿ ತಿಪುರಿಗೆ ಬಂದಿರುವ ಕರ್ತವ್ಯಬದ್ಧ ಸುಭಾಷಚಂದ್ರರಿಗೆ ವಂದನೆಗಳು. ಬಹುಮತದ ಬಲದಿಂದ ಇವರು ಏರಿರುವ ಸ್ಥಾನದ ಸಕಲ ಕರ್ತವ್ಯಗಳನ್ನು ಮಾಡುವುದಕ್ಕಾಗಿ ಇವರ ಬೇಗನೆ ಆರೋಗ್ಯಲಾಭ ಮಾಡಿಕೊಳ್ಳಲೆಂದು ಪ್ರಾರ್ಥನೆ. ಆಜಾದರು ಅಧ್ಯಕ್ಷಸ್ಥಾನವನ್ನು ಕಠಿನಕಾಲದಲ್ಲಿ ನಿರ್ವಹಿಸಿ ಉತ್ತಮವಾಗಿ ಪಾಲಿಸಿದುದಕ್ಕೆ ಕೃತಜ್ಞತೆ, ಅವರು ಪ್ರತಿ ವಿಷಯದಲ್ಲೂ ಅಧ್ಯಕ್ಷರ ನಿರ್ದೇಶದಂತೆ ನಡೆದುಕೊಳ್ಳುತ್ತಿದ್ದರು! ಸ್ವಯಂಸೇವಕರ ಶಿಸ್ತಿನ ಅದ್ಭುತ ಪ್ರದರ್ಶನಕ್ಕೆ ಶ್ಲಾಘನೆ. ನಿನ್ನೆಯ ಗೊಂದಲವು ಶಿಸ್ತನ್ನು ಬಲಪಡಿಸುವುದರ ವೈಚಿತ್ರ್ಯ. ಸರ್ವರಿಗೂ ವಂದನೆಗಳು.

ಇನ್ನು—ಕೊಂಗ್ರೆಸಿನಲ್ಲಿ ಒಡಕು ಎಂದೂ ಹುಟ್ಟಲಾರದೆಂದು ಸರ್ವರಿಗೂ ತಿಳಿಸಲು ಇಚ್ಛಿಸುತ್ತೇನೆ. ಮನೆಗಳಿಗೆ ಮರಳುವಾಗ ತತ್ವಪ್ರಕಾರ ಕೊಂಗ್ರೆಸನ್ನು ಮುರಿಯಬರುವುದಿಲ್ಲ. ರಗಳೆಗಳಿದ್ದರೆ ಅವೆಲ್ಲ ನೀರ ಮೇಲಣ ನೊರೆಯಂತೆ ಮಾತ್ರ. ಪ್ರತಿಯೊಂದೂ ಪ್ರಾಂತ್ಯದಿಂದ ಬಂದವರು—ಕೊನೆ ಹೇಗಾದೀತೆಂದು ಬೆದರಿ ಕೇಳುತಿದ್ದರು. ನಮ್ಮ ಐಕ್ಯವನ್ನು ಮುರಿಯಬರುವಂತಿಲ್ಲ. ಸ್ವಾತಂತ್ರ್ಯಕ್ಕೆಂದು ಹೆಣಗುವಾಗ ಐಕ್ಯವನ್ನು ಮುರಿವವರಾರು? ಕೊಂಗ್ರೆಸ್ಸಿನಲ್ಲಿ ಪಕ್ಷಗಳಿಗೆ ಎಡೆಯಿಲ್ಲ. ಬೇಕಾದಷ್ಟು ಸೇವೆ ತ್ಯಾಗ ಐಕ್ಯಕ್ಕೆ ಅವಕಾಶವಿದೆ. ತಾತ್ಕಾಲಿಕ ಭೇದಗಳಿಂದ ಐಕ್ಯವು ಒಡೆಯದೆಂದು ಮನೆಗಳಲ್ಲಿ ಸಾರುವ.

ಸರ್ವರೂ ಸ್ವಾತಂತ್ರ್ಯದ ಉದ್ದೇಶದಿಂದ ಒಡಕಿಗೆ ಕಾರಣಕೊಡದಿರಲಿ. ಎಳೆಗೂಸಿನ ಅಡಿಯಲ್ಲಿ ಚೂರ್ಣವಾಗಬಹುದಾದ ಮಣ್ಣಿನ ಕೃತಿ ಬ್ರಿಟಿಷ ಸಾಮ್ರಾಜ್ಯವನ್ನು ಎದುರಾಡುವ ನಾವು ಅಂತಹ ಮಹಾತ್ಮನ ಆಜ್ಞೆಯಲ್ಲಿ ಮುಂದರಿಯೋಣ.

ಇನ್ನು ಒಂದೇ ಆಜ್ಞೆ, ಒಂದೇ ಧ್ಯೇಯ, ಒಂದೇ ಧ್ವಜ. ಪರಕೀಯರ ಅಡಿಯಾಳಾಗದ ಭಾರತೀಯ ಸ್ವಾತಂತ್ರ್ಯ!

⊖ ⊖ ⊖

೨೫೦೦ ಸ್ವಯಂಸೇವಕರ ಕೂಟವಿತ್ತು. ನೆಹರುರವರೇ ಇವರನ್ನು ವಂದಿಸಿದರು.

ಒಂದು ಮಿಲ್ಲಿಯ ಶಬ್ದಗಳಷ್ಟು ತಂತೀವಾರ್ತೆಗಳು ಇಲ್ಲಿಂದ ಹೊರಟವು. ೪೦೦ ಪತ್ರಿಕಾವಾರ್ತಿಕರಿದ್ದರು. ೨೫೦೦ ಟೆಲಿಫೋನ್ ಸಂಭಾಷಣೆಗಳಾದುವು!

ಮಹಾತ್ಮಾಜಿಯವರ ಜೈ! ವಂದೇ ಮಾತರಂ ಹಾಡು! ಮಂಗಲವಾಯಿತು.



ಪುರೋಹಿತ ಶ್ವಾಸಹಾರಿ
ದಮ್ಮಿಗೆ ಗುಣಕಾರಿ

ಹಳ್ಳಿಯ ಹತ್ತು ಸಮಸ್ತರು

ಮೊಗೇರ ಅಣ್ಣು

ಕಿಂದಿನ ನಮ್ಮ ಊರಿಗೆ ಜವುಳಿ ವ್ಯಾಪಾರಕ್ಕೆಂದು ಆಗಾಗ ಬರುತಿದ್ದ ಸೇಲಂಕಾರರು ಹಳ್ಳಿಯ ಜನರಿಗೆ ಪಾಲ್ಪಾಟು ಸೀರೆಯನ್ನು ಅಳೆದು ನೂರುವಾಗ "ನೋಡು ಇದು ಬಂಗಾರಿ ಗೆಟ್ಟಿರಂಗು" ಅನ್ನುವ ವಾಡಿಕೆಯಿತ್ತು. ಅದರಂತೆ ಮೊಗೇರ ಅಣ್ಣು ಬಣ್ಣದಲ್ಲಿ "ಗೆಟ್ಟಿರಂಗು." ಕರುಸಿನಲ್ಲಿ ಕಡ ಸ್ವಕಾಂಗು ಆಳು ಅನ್ನಬೇಕು ಅಣ್ಣುವಿಗೆ, ಅರು ಅಡಿಗೊಂದು ಡಿಮೆಯಿಲ್ಲದ ಶರೀರ. ಹಡವಾದ ಎದೆ, ಮಾಂಸಖಂಡದಿಂದ ತುಂಬಿದ ತೋಳುಗಳು. ಅವನ ಶರೀರದ ಆಯ ಅಳತೆ ಪ್ರತಿಯೊಂದು ... ಸೊಗಸಾದ ... ಸಾಮಾನ್ಯರ ಮುಂದೆ ನಿಂತರೆ "ಎದೆ ಬಿಚ್ಚಬೇಕು" ಅನ್ನುತ್ತಾರಲ್ಲ ... "ಕಳ್ಳ ಕುಡಿದರೆ ಆರೋಗ್ಯಕ್ಕೆ ಯಾಕಾದೀತು" ಎನ್ನುವವರಿದ್ದರೆ ಪ್ರತ್ಯುತ್ತರವಾಗಿ ಅಣ್ಣುವನ್ನು ತೋರಿಸಬೇಕು. ಕುಡಿಯದೇ ಅವನು ಬಡೆಯಾದಾನಯೇ ... ಕುಡಿದು ಕೆಡುವ ತರಹ ಜನವೇ ಅಲ್ಲ.

... ಆಳು ಹೇಗೋ ಅವನ ನಾಲಿಗೆ ಹಾಗೆ ... 'ಒಂದು ಪಿಸಾಕು' ... ನಮ್ಮ ನಾಲ್ಕು ಗ್ರಾಮದಲ್ಲಿ ಯಾರ ಹಂಗೂ ಅವನಿಗಿಲ್ಲ. ಇಲ್ಲ ಎಂದರೆ ಇಲ್ಲ, ಉಂಟು ಎಂದರೆ ಉಂಟು. ... ಬಿಟ್ಟಹಾಗೆ ... ನಾಗಯ್ಯ ಸೆಟ್ಟರ ಒಕ್ಕಲು, ... ಕೆಲಸಕ್ಕೆ ... ಸೆಟ್ಟರೇ ಅನ್ನುವವರು ... ಅವನಿಗೆ ಗಾಳಿಪಾಕಿ ಮಾಡಿಸಿಕೊಳ್ಳುವ ... ಇತ್ತ ಅವನ ... ಯಾವ ... ಹೇಳಲಿಕ್ಕೆ ಸಾಧ್ಯವಿಲ್ಲ. ... ಕಾಳಿಂಗಯ್ಯನ ... ಸ್ವಾಧೀನ ... ಅವರ ಮನೆಯ ಮುಂದೆ ಹೋಗಿ ನಿಂತವನೇ ... ಪೂಜಾರ್ತಿ ... ಅವನ ... ನಾಳೆ ಬೇಕಾದರೆ ... ಪೇಟೆಗಾರರ ಗದ್ದೆ ... ಹೋಗಿ ಬಂದಾನು.

ಊರಿನ ನಮ್ಮಾಣಿಯವರಲ್ಲಿ ಅಣ್ಣುವಿಗೆ ... ಅವನಿಂದ ಅದು ನಡೆಯುವ ... ಮಾತು ಸಹ ಅವನಿಗೆ ... ಚಿಕ್ಕವುಟ್ಟ ಮೊಗೇರ ಮಕ್ಕಳು ಅನ್ನುವ ನಾಡಿಕೆಯುಂಟು. 'ನಮಾಣಿ ... ಇರುವ ... ಇನ್ನುವುದರಲ್ಲಿದ' ಎಂದು ... ಅಣ್ಣುವಿನ ಬಲಿ ... "ಹಾಗಿದ್ದ ನೀನು ನಾಗಯ್ಯ ಸೆಟ್ಟರ ... ಹೋಗುವುದೇನು ಅಣ್ಣು" ಎಂದು ಕೇಳಿಗಾರರು. ಅವನನ್ನು ... ಅದಕ್ಕೆ ಅಣ್ಣುವಿನ ಪ್ರತ್ಯುತ್ತರ ತಯಾರು." ನೀವು ... ಎಂದಿದ್ದರೆ ಬರುತ್ತಿದ್ದೆ ... ನೀವು ಕರೆಯಲಿಲ್ಲ, ಅವರು ಕರೆದರು"—ಎಂದನಂತೆ.

ಹಾಗಾದರೆ ಜನವೇ 'ವಡಪ್ಪುರಿ' ಎಂದು ತಿಳಿಯುತ್ತಿರೋ, ಹಾಗೇನಿಗೂ ಇಲ್ಲ. ಅದಕ್ಕೆ ಮೊಸೆ ಸುಬ್ಬನೇ ಸಾಕ್ಷಿ ... ಮೊಸೆ ಸುಬ್ಬನ ಮುಂದೆ ... ಸಂಜೆ ... ಅಂಗಡಿಗೆ ಹೋಗಬೇಕಾದರೆ ಸಾಮಾನ್ಯರಿಗೆ ಧೈರ್ಯ ಒದಗಲಾರದು. ಸುಬ್ಬನೇ ಅನ್ನುತ್ತಾರೆ ಅಣ್ಣುವಿಗೆ ಯಾರ ಪಾರ್ಟಿಯೂ ಇಲ್ಲ. ಅವನ ಪಾರ್ಟಿ ಸೇರಿಯದು ನೀವು ... ಕುಡಿಸಿ ನಿಮ್ಮ ಪಾರ್ಟಿ ಅವನು, ಅವರು ಕುಡಿಸಿದರೆ ಅವರ ಪಾರ್ಟಿ, ನೀವು ಹೊಗಳಿ ನಿಮ್ಮ ಪಾರ್ಟಿ, ನೀವು ತೆಗಳಿ—ಅವರ ಪಾರ್ಟಿ"

ಇನ್ನು ಕೆಲಸದ ವಿಚಾರ ಕೇಳಲೇ ಬೇಡಿ. ಮೂಡಾಬಲಿಗೆ ಹೊರಟ ಎಂದರೆ ಅವನಿಗೆ ಅನ್ನ ನೀರು ಬೇಡ. ಅವನ ಕೈಲಕ್ಷಣ ಒಳ್ಳೆದು ಎನ್ನುತ್ತಾರೆ ಬಲೆಬೀಳು ಬರಿಗೆ ಅವನು ಮನೆಗೆ ಬಂದುದೆಂದೇ ಇಲ್ಲ. ಒಬಿಬಲೆಯಾಗಿ ಮನೆಗೆ ಬಂದರೆ ಆ ದಿನ ಅವನು ಯಾರ ಹತ್ತಿರ ಮಾತು ಸಹ ಆಡಲಿಕ್ಕಿಲ್ಲ, ಆ ದಿನ ಊಟವೇ ಬೇಕಾಗಲಿಕ್ಕಿಲ್ಲ ಅವನಿಗೆ. ಆ ಸಂಜೆ ಮನೆಗೂ ಸಹ ಹೋಗುವಂತಿಲ್ಲ. ಮರುದಿನ ಅದರ ಮರುದಿನ ಎಲೆಬೀಸಿ, ಒಂದು ಕೈ ಕಾಣಬೇಕು—ಅದೇನು, ಬಲ್ಲ ಒಡೆದದ್ದು ಎಂದು ಕಂಡೇ ... ಎಂಬ ... ಅವನದ್ದು ಬಲೆ ... ಕೂಡಲೆ ಕೇಳು ಬ್ಯಾರಿಗಳ ಕೊರಳಿಗೆ ಹಣವನ್ನು ಕಟ್ಟಿಯಾಯಿತು. ... ಅರೆಗಳಿಗೆಯಲಿ ... ಮೊಸೆ ಸುಬ್ಬನ ಗಡಂಗಿನಲ್ಲಿ ಅವನ ಜತೆಯಲ್ಲಿ ... 'ಹತ್ತು ಸೇಸ ಕಡಿಮೆ ಕುಡಿಯುವವರು ಯಾವ ... ಗುತ್ತಿಗ' ಪೂಜಾರಿಗೆ ಬೇರೆ ಕೆಲಸ ಇಲ್ಲವೆ ... ಎಂದುಬಿಟ್ಟನು ... ಅವನ ಕೈಯಲ್ಲಿ ... ದಿವಸ ತನ್ನ ... ಜನರಿಗೆ ತನ್ನಂತೆಯೇ ಹೆಂಡ ತುಂಬಿಸಿ ಮನೆಗ ... ಆ ... ಅವರನ್ನು ಕಂಡು ನಗುತ್ತ 'ಎಷ್ಟು ... ಕಲಿಯುತ್ತಿಕೊ ... ಹೋಗ ಬೇಕು, ಅದು ... ಮೇಲೆ ... (ಕೇರ) ಹೋಗುವವರು ... ಹೇಳುವುದು ಉಂಟು.

ಅಣ್ಣುವಿನ ಸವಾರಿ ... ಸಂಜೆ ... ಸಮುದ್ರಕ್ಕೆ ಒಳಹೊಕ್ಕರೆ ... ಜಾವವಾದರೂ ... ಅಲ್ಲಿ ... ಅವನ ... ಸುಬ್ಬ ಪೂಜಾರಿಯನ್ನಾದರೂ ... ನಮಾತನಾಡುತ್ತಿರಬೇಕು. ... ಹತ್ತು ... ಗಳಿಗೆಯೊಳಗೆ ಮನೆ ... ಅಣ್ಣು ... ತೀರದರೆ ... ಗಡಂಗಿನ ಸವಾರಿ ಹೊರಗಿದೆಯೆಂದು. ಅವನ ಹೆಂಡತಿಗೆ ನಿಶ್ಚಯ. ಬಲು ಹೊತ್ತಾದರೆ ಅವಳೇ ಒಂದು ಅವನನ್ನು ಗಡಂಗಿಗೆ ಬಂದು, ... ಕರೆದುಕೊಂಡು, ಕೈಹಿಡಿದು ಮನೆಗೆ ... ತ್ತಾಳೆ, ಹಾಗೆಂದು ಅಣ್ಣುವಿಗೆ ಕುಡಿದು ... ದು ಎಚ್ಚರವಿಲ್ಲದಿಲ್ಲ ಎಂದು ತಿಳಿಯಬೇಡಿ.

ಆಗ ಅವನದು ... ಉತ್ಸಾಹ ... ಸುಳ್ಳಿನ ... "ದರೆ ... ಹೊಸ ... ಕುಡಿದು ... ಯಾಗಲಾರ ... ಬಾದ ಟೀಕೆ ... ಸಮಯ ... ನಮ್ಮ ... ಕಾರ್ಯ ... ಸಮಯದ ... ಹೊಟ್ಟೆ ... ಯಾದರೆ ...

ಬರುವ ವಾರ

ಅಕ್ಕಸಾಲಿ ತಿಮ್ಮಪ್ಪ

ಓ.

ತಿಮ್ಮಪ್ಪನಿಗೆ ಯಾರಾದ ... ಆಸಕ್ತಿಯಿಲ್ಲ
... ಉತ್ತಮ ನಲ್ಲಿ ... ಊರವರಿಗೆ ...
... ವ್ಯಾಧಿಗಳಲ್ಲಿ ...

ಶ್ರೀ ಕಾರಂತರ
ಹಳ್ಳಿಯ 10 ಸಮಸ್ತರು
... ಗ್ರಾಮ, ದೇವ ...

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಪತ್ರಿಕೆ ... ವಿಳಾಸಕ್ಕೆ ಬರೆಯಿರಿ

ಅತ್ಯುತ್ತಮ ಹೇರ್ ಆಯಿಲ್ — ಎಲ್ಲಾ ಜನರ ಮನಸ್ಸನ್ನು ಸೆಳೆಯುವುದು

ದಿಲ್‌ಕುಷ್ ಹೇರ್ ಆಯಿಲ್
... ತಲೆಕೂದಲು ... ಬೆಳೆಯುವುದು ... ಉಪಯುಕ್ತವಾಗಿದೆ
ಕ್ರಯ: 6 ಔನ್ಸು ಸೀಸೆಗೆ 0—12—0
,, 12 ,, ,, 1—4—0
ರುಬಿ ಪೆಮಿನ್ ಬಾಮ್
... ಡಬ್ಬಿ 1ಕ್ಕೆ ಆ. 4
ಉಡುಪಿಯಲ್ಲಿ ಏಜೆಂಟರು ಬೇಕು
ಏಜೆಂಟ್ಸ್—
ಪಾ ಕಂಪೆನಿ, ಮಂಗಳೂರು.

... ಒಂದು ದಿನ ನಮ್ಮ ಸೇಕ್ರೆಟರಿ ಸವಾರಿ ಸಂಜೆಯ ಸಮಯ ಅವನಿಗೆ ಭೇಟಿಯಾದರು. ಅವನಿಗೆ ಅವರಿಂದಾಗುವ ಒಂದು ಕೆಲಸವಿತ್ತು. ... ಅಣ್ಣುವನ್ನು ಕರೆದು ... "ಅಣ್ಣು, ನಾಳೆ ಮನೆಗೆ ಬಂದುಬಿಡ ... ತಪ್ಪದವನಾಗಬೇಕು. ... ಪಾಯಸ ಮಾಡಿಸುವಾ" ಎಂದರು. 'ಸರಿ, ಅಣ್ಣುವು ... ಹೊಸ ... ಕೂರುತ್ತಾರೆಯೋ ಹೊಸ ...'

'ಗದ್ದು ಪಾಯಸವೇ, ನನಗೆ ಗೊತ್ತಿಲ್ಲ ... ಹಾಕಿ ... ಅಕ್ಕಿ ... ಪಾಯಸ ... ಅಕ್ಕಿ ಪಾಯಸ ... ಮಕ್ಕಳ ಹೊಟ್ಟೆ ...'

'ನಾಳೆ ... ಕಾಣಲಿಕ್ಕಿಲ್ಲ, ... ಹೆಂಡತಿ ... ಮಾವ ...' ಎಂದು ನನ್ನ ಹೆಣ್ಣುಕ್ಕಳಿಗ ಹುಸಿರು. ... ನನಗೆ ... ಸಂಜಿ ... ವಾದಾರೆ ... ಹೊಟ್ಟೆ ... ಸಾವಿರ ... ಸಿಕ್ಕದರೆ ... ಕೆಲಸಿದ ... ಹೊಟ್ಟೆ ... ಊಟ ... ಪಾಯಸ ... (ಮಕ್ಕಳು) ಹೊಡ ...'

ಈ ಉದನ್ನುವ ... ಅವರು ... ತನ್ನ ಪ್ಪಕ್ಕೆ ... ಸಾಧ ... ನನ್ನನ್ನು ... ಎಂದರು.

'ಸಾಮಾನ್ಯರಿವದರೆ ... ಹತ್ತು ಸೀಸೆ ... ಹೋಗುತ್ತದೆಯೇ' ... ಮೊಗೇರ ... ಹೊಟ್ಟೆಗೆ ...

... ಕತೆದು ... ಸಮಸ್ತ ... ನನ್ನ ನೋಡಿ:

... ಅಜ್ಜ ... ನಾಳೆ ... ಮನೆಗೆ ... 'ಬಾ' ...

... ಇದ್ದದ್ದು ... ಬೇಕಾಗುವ ...

... ಅಕ್ಕಿ ಪಾಯಸದ ...

...

... ಅಕ್ಕಸಾಲಿ ... ಒಬ್ಬನ ... ಮಾವ ... ಒಂದು ...

[ಇತಿ ಹಳ್ಳಿಯ ಸಮಸ್ತರು ...]

ಅಂಗ್ಯೆನೋಟ

ಪಕ್ಷದ ವಿಶೇಷ ಲೇಖಕರು: ಶ್ರೀ ಶಿವರಾಮ ಕಾರಂತರು

ಜರ್ಮನಿಯ ಯಹೂದ್ಯರು: ಇತರ ಎಲ್ಲಾ ದೇಶಗಳು ಜರ್ಮನಿಯ ಯಹೂದ್ಯರ ಸ್ಥಿತಿಯನ್ನು ಸುಧಾರಿಸಲು ಯತ್ನಿಸುತ್ತಿರುವಾಗ ಜರ್ಮನಿಯು ಅವರಸ್ಥಿತಿಯನ್ನು ಎಷ್ಟು ಹಾಳು ಮಾಡಬಹುದು ಅಷ್ಟನ್ನು ಮಾಡುತ್ತಿದೆ. ಡಾ। ಸಾಚಟರು ಜರ್ಮನಿಯಿಂದ ಯಹೂದ್ಯರನ್ನು ಅನ್ಯದೇಶಗಳಿಗೆ ಸಾಗಿಸುವ ಬಗ್ಗೆ ಒಂದು ಅಂತರಾಷ್ಟ್ರೀಯ ಸಾಲದ ವ್ಯವಸ್ಥೆ ಮಾಡಬಹುದೆಂದು ಸೂಚಿಸಿದ್ದರು. ಅವರು ಹೇಳಿದ ಬಳಿಕ ಆ ಸ್ಥಾನಕ್ಕೆ ಉಲ್ಪಾಟ್ ಎಂಬವರು ಬಂದರು ಅವರು ಸೇರಿದ ಈವಿಯನ್ ಕಮಿಟಿ ಗೊತ್ತುವಳಿಗಳು ಈಗಷ್ಟೆ ಹೊರಬಂದಿವೆ ಈ ನಿರ್ಣಯಗಳನ್ನು ನೋಡುವಾಗ ಜರ್ಮನಿಗೆ ಹಿಂಸೆಯೇ ಅತ್ಯಂತ ಪ್ರಿಯವಾಗಿದೆಯೆಂದು ಕಾಣುವುದು.

ಮುಂದಿನ ಮೂರು ನಾಲ್ಕು ವರ್ಷಗಳಲ್ಲಿ ೧೫೦,೦೦೦ದಿಂದ ೧೫೦,೦೦೦ ಯಹೂದ್ಯರನ್ನು ಆಸ್ಟ್ರೇಲಿಯ, ಸಂ. ಅಮೇರಿಕ, ಡೊಮಿನಿಕಾ ಮೊದಲಾದ ದೇಶಗಳು ಸ್ವೀಕರಿಸಲು ನಿರ್ಣಯಿಸಿವೆ ಆದರೆ ಅವರು ಹೊರಗೆ ಹೋಗುವಾಗ ಅವರ ಸ್ಥಿತಿಯೇನು? ಜರ್ಮನಿಯಲ್ಲಿ ಆಸ್ಟ್ರಿಯದಲ್ಲಿ, ಸುಡೆಟನ್ ರಾಜ್ಯದಲ್ಲಿ ಸೇರಿ ೬೦೦೦೦೦ ಯಹೂದ್ಯರಿದ್ದಾರೆ ಅವರ ಸಂಪತ್ತು ಸಾಧಾರಣ ೩–೪,೦೦೦,೦೦೦,೦೦೦ ಮಾರ್ಕುಗಳಷ್ಟಿದೆ (೧೨ ಮಾರ್ಕು ೧೦ರೂ ಗೆ ಸಮ) ಈ ಸಂಪತ್ತನ್ನು ಸಾಗಿಸುವ ವಿಚಾರದಲ್ಲಿ ಜರ್ಮನಿಯ ತೀರ್ಮಾನ ವಿಚಿತ್ರವಾಗಿದೆ ಅವರ ಸಂಪತ್ತನ್ನೆಲ್ಲ ಒಂದು ಟ್ರಸ್ಟಿ ಸ್ವೀಕರಿಸಿ ಅದರಲ್ಲಿ ೪ನ್ನೊರಷ್ಟನ್ನು ಯಹೂದ್ಯರಿಗೆ ಮರಳಿಕೊಡುವುದಂತೆ. ಉಳಿದ ಹಣ ಯಾರಿಗೆಂದು ತಿಳಿಯದೇ ಈ ಸಂಪತ್ತು ಸ್ವಹ ನಗದಿಯಿಂದ ಸಾಗುವಂತೆ ಇಲ್ಲ ವಸ್ತು ಒಡವೆಗಳನ್ನು ಕೊಂಡೇ ಸಾಗಬೇಕು

ಇತ್ತ ದೇಶದ ಒಳಗ ಯಹೂದ್ಯರುಇರಲು ತುಂಬ ಕಟ್ಟುನಿಟ್ಟುಗಳು ಹೊರಗೆ ಹೋಗಲು ಅವರ ಹಣವನ್ನು ಬಿಟ್ಟು ಬರಿಗೈಯಿಂದ ಹೋಗುವುದಾದರೆ ಸರಿ ಈಗೀಗ ಯಹೂದ್ಯರನ್ನು ವರಿಸಿದ ಆರ್ಯ ಸ್ತ್ರೀಯರು ತನ್ನ ಪತಿಯರನ್ನು ದೂರನಾಡುವ ಚಳವಳವೂ ನಡೆದಿದೆ ಯಾವ ತೆರನ ನಯನೀತಿಯೂ ಹಿಟ್ಲರನ ರಾಷ್ಟ್ರಧೋರಣೆಯಲ್ಲಿಲ್ಲ ಈವಿಯನ್ ಸಮಿತಿಯವರಿಗೆ ಅಲ್ಲಿ ನಿರ್ಬಂಧದಲ್ಲಿರಿಸಿದವರ ಯೋಗ್ಯರಕ್ಷಣೆಯ ಬಗ್ಗೆ ಅಭಯ ಭರವಸೆಯನ್ನು ಕೊಡುವವರೂ ಇಲ್ಲ

ಫ್ರಾಂಕೋ ವಿಜಯದ ಬಳಿಕ: ಫ್ರಾಂಕೋವಿಗೆ ತನ್ನ ವಿರುದ್ಧವಾಗಿ ಕಾದಾಡಿದವರನ್ನು ಕುರಿತು ದಂಡಿಸುವ ಇಚ್ಛೆಮಾತವಲ್ಲ, ಅದರ ಹಿಂದೂ ಸೇಡನ್ನೂ ಸಾಧಿಸಲು ಅವನು ಸಿದ್ಧ ಆದುದರಿಂದಲೇ ಅವನು ಇನ್ನುಮುಂದೆ ರಾಜಕೀಯ ಚಳವಳ ಭಾಗಿಗಳನ್ನು ವಿಚಾರಣೆಗೆ ಗುರಿಮಾಡುವಾಗ ಜುಲೈ ೧೮ (೧೯೩೬) ರನಂತರ ತನಗೆ ವಿರುದ್ಧವಾಗಿ ನಿಂತ ಎಲ್ಲರನ್ನೂ ತನಿಖೆಗೆ ಗುರಿಮಾಡುವನಲ್ಲದೆ ಹಿಂದೆ ಆಲ್ಫೊನ್ಸೊ ದೊರೆಯನ್ನು ಓಡಿಸಿದ ಜನರ ಕೂಟವನ್ನು ಅಂದರೆ ಅಕ್ಟೋಬರ ೧೯೩೪ರಿಂದ ೧೯೩೬ರ ತನಕ ರಾಜಕೀಯ ದಂಗೆಯಲ್ಲಿ ಭಾಗಿಯಾದವರನ್ನೂ ವಿಚಾರಣೆಗೆ ಗುರಿಪಡಿಸುವವನಿದ್ದಾನೆ

ಆದರೆ ಶಿಕ್ಷೆಯು ಅತ್ಯಂತ ನಯವಾಗಿ ನಡೆಯುವುದೆಂದು ಭರವಸೆ

ಫ್ರಾನ್ಸ್ ರಾಯಭಾರಿಯಾದ ಬೆರಾರ್ಡನು ಫ್ರಾನ್ಸ್ ಫ್ರಾಂಕೋ ಸರಕಾರವನ್ನು ಒಪ್ಪುವ ಪೂರ್ವದಲ್ಲಿ ಸಂಧಾನಕ್ಕೆ ತೆರಳಿದ್ದನಷ್ಟೆ ಅವನು ರಾಜಕೀಯ ಕೈದಿಗಳನ್ನು ಸಾಮಾನ್ಯವಾಗಿ ಬಿಡಬೇಕೆಂದು ಸೂಚಿಸಿದ್ದನು ಈ ಶರ್ತಕ್ಕೆ ಫ್ರಾಂಕೋ ಒಪ್ಪಲಿಲ್ಲವೆಂದು ತಿಳಿದು ಬಂದಿದೆ ಆದರೂ ಫ್ರಾನ್ಸು, ಇಂಗ್ಲೆಂಡುಗಳು ಅವನ ಸರಕಾರವನ್ನು ಒಪ್ಪಿರುತ್ತವೆ. ಈ ಕೊನೆಗಳಿಗೆಯ ಔದಾರ್ಯಕ್ಕಾಗಿ ಫ್ರಾನ್ಸ್, ಇಂಗ್ಲೆಂಡುಗಳನ್ನು ಜರ್ಮನ್ ಪತ್ರಿಕೆಗಳು ಜರಿಯುತ್ತಿವೆ ಒಪ್ಪಿಗೆಯನ್ನು ಕೊಟ್ಟು ದೇಶದವರು, ಫ್ರಾಂಕೋವಿಗೆ ಶಸ್ತ್ರಗಳನ್ನು ಕೊಳ್ಳುವ ಹಕ್ಕನ್ನು ಮಾತ್ರ ಕೊಡಲಿಲ್ಲ. ಕಾರಣ ಈ ಎರಡು ದೇಶಗಳಿಗೂ ಇನ್ನು ಸಂಶಯವೂ ಹೋಗಿಲ್ಲ ಧೈರ್ಯವೂ ಬಂದಿಲ್ಲ ಫ್ರಾಂಕೋವಿಗೆ ಪೂರ್ಣ ವಿಜಯದ ವಿಚಾರದಲ್ಲಿ ಅವರಿಗೆ ಸಂಶಯವಿಲ್ಲ, ಆದರೆ ಇಟೆಲಿಯ ಕಾಲು ಅಲ್ಲಿಂದ ಕೀಳುವ ವಿಚಾರದಲ್ಲಿ ಅವನಂಬುಗೆಯಿದೆ ಅಂತು ಒಲುಮೆ, ಬೆದರಿಕೆಗಳ ವಿಶೇಷ ಆಟವೇ ಪರಸ್ಪರರೊಳಗೆ ನಡೆದಿದೆ

ಈಗ ಫ್ರಾಂಕೋ ರಿಪಬ್ಲಿಕ್ ಸರಕಾರದ ಸಮುದ್ರ ಕರಾವಳಿಯನ್ನು ಮುತ್ತುತ್ತಿದ್ದಾನೆ ಅದರ ಗಡಿಯೊಳಗೆ ಬರುವ ವಿದೇಶೀ ಹಡಗಗಳ ಮೇಲೆ ಅವನ ಕಣ್ಣಿದೆ ಹಿಂದಿನಂತೆ, ಹತ್ತು ಜನರಿಗೆ ಸೇರುವ ಸಮುದ್ರಭಾಗದಲ್ಲಿ ಅವನು ಕಾದಾಟವನ್ನು ಮಾಡನೆಂಬ ಭರವಸೆಯಿಲ್ಲ, ಈಗಾಗಲೇ ಅಲ್ಲಿಗೆ ಹೋಗುತ್ತಿರುವ ಬ್ರಿಟಿಷ ಹಡಗುಗಳ ಮೇಲೆ ಫ್ರಾಂಕೋ ನಾವೆಗಳು ದಾಳಿನಡೆಸಿವೆ

ಈ ಹೋರಾಟದಲ್ಲಿ ಎಲ್ಲರೂ ಫ್ರಾಂಕೋ ಒಪ್ಪಿದರು ಆದರೆ ಕೊನೆಗಾದರೂ ರಷ್ಯವು ನಿಮ್ಮ ನಾನ್ ಇಂಟರ್‌ವೆನ್ಶನ್ ಸಮಿತಿಯು ಎಂದೂ ಸತ್ತಿದೆ ಎಂದು ಸಾರಿ ಅದರಿಂದ ತನ್ನ ಹೆಸರನ್ನು ಹಿಂದೆ ಕಳೆಚಿತು. ಅಂದರೆ ಆ ರಿಪಬ್ಲಿಕ್ ಸರಕಾರಕ್ಕೆ ಶಸ್ತ್ರ ನೀಡಲು ಒಪ್ಪಿದ ಹಾಗಾಯಿತು. ಆದರೆ ಈ ಕೆಲಸ ಮೊದಲೇ ಜರುಗಿದ್ದರೆ ತುಂಬ ಉಪಕಾರವಾಗುತ್ತಿತ್ತು ಇಷ್ಟು ತಡವಾಗಿ ಬಂದ ಸಹಾಯವು ಉಪಕಾರವಾಗುವುದು ಸಂಶಯ

ಇಂಗ್ಲೆಂಡ್, ಮತ್ತು ಸರ್ ಸ್ಟ್ಯಾಫರ್ಡ್ ಕ್ರಿಪ್ಸ್: ಚೆಂಬರ್ಲೇನ್ ದೊರೆಗಳ ಸರಕಾರವು ಪಾರ್ಲಿಮೆಂಟಿನ ಕನಸರ್ವೆಟಿವ್ ಜನರ ಬೆಂಬಲವಡೆಯುತ್ತಿದ್ದರೂ ಅದಕ್ಕೆ ವಿರೋಧಪಕ್ಷವು ಬೆಳೆಯುತ್ತಿದೆ [illegible] ಯನ್ನು ಕೇಳುವಾಗ ನೀವು ಚೆಕೊಸ್ಲೋ[illegible] ಲ್ಯಾಂಡಿನ ಕಷ್ಟಕ್ಕೆ ಸಹಾಯ ಸಿದ್ಧರಿದ್ದಂತೆ ನಡೆದಿರಿ ಎಂದು ಲೇಖಕ ಮಾಡಿದರ ಅವರನ್ನು ಎಲ್ಲವಾಗಿ ಚೇತಿಸಿದರು ಚೆಂಬರ್ಲೇನರ ಹೊರಗಿನ ರಾಜತಂತ್ರದಲ್ಲಿ ತೋರಿಸುತ್ತಿರುವ ಭೀತಿಯೂ, ಶಸ್ತ್ರವನ್ನು ಹೆಚ್ಚಿಸುತ್ತಿರುವುದರಲ್ಲಿ ತೋರಿಸುವ ಉತ್ಸಾಹವೂ ಪರಸ್ಪರ ವಿರುದ್ಧವಾದವು ಎಂದು ಹಲವರ ಮಾತು ಇಂಗ್ಲೆಂಡಿನ ಶಸ್ತ್ರಬಲವನ್ನು ಹೆಚ್ಚಿಸುವ ವಿಷಯದಲ್ಲಿ ಎಲ್ಲ ಪಕ್ಷಗಳ ಒಪ್ಪಿಗೆ ಇದೆ ಅದಲ್ಲದೆ ತಮಗೆ ಗತಿಯಿಲ್ಲದೆಂದು ನಂಬಿಗೆ ಇದೆ ಆದರೆ ಚೆಂಬರ್ಲೇನರ ರಾಜನೀತಿಯು ಯಾರಿಗೂ ಅರ್ಥವಾಗದೆಯೂ ಹೋಗಿದೆ ಅಂತು— ಚೆಂಬರ್ಲೇನ್ ಸರಕಾರವು ಮ್ಯುನಿಚ್ ಒಪ್ಪಂದದ ಗಳಿಗೆಯಿಂದ ಪಾರ್ಲಿಮೆಂಟಿನ ಅಧಿಕಾರವನ್ನು ಕಾನೇ ಅಪಹರಿಸಿಕೊಂಡು ಪ್ರಜಾಪ್ರಭುತ್ವವನ್ನು ಅಲ್ಲಗಳೆದಿದೆ ಎಂಬುದು ನಿಸ್ಸಂಶಯ.

ಆದುದರಿಂದಲೇ ಮೊದಲು ಲೇಬರ ಸದಸ್ಯರಾಗಿದ್ದ ಸರ್ ಸ್ಟ್ಯಾಫರ್ಡ್ ಕ್ರಿಪ್ಸರ ಹೊಸ ಸಂದೇಶಕ್ಕೆ ಫಲ ಅಧಿಕವಾಗುತ್ತಿದೆ ಅವರು ಚೆಂಬರ್ಲೇನರ ವಿದೇಶೀ ಧೋರಣೆಯನ್ನು ಎದುರಿಸುವ ವಿಷಯದಲ್ಲೂ, ವಿದೇಶಗಳ ಎದುರಿಗೆ ತಮ್ಮ ಒಗ್ಗಟ್ಟನ್ನು ಬೆಳೆಸುವ ವಿಷಯದಲ್ಲೂ ಒಕ್ಕಲಾಗಿ ಎಲ್ಲ ಪಂಗಡದವರು ಕೆಲಸಮಾಡಿ ಮುಂದರಿಯಬೇಕೆನ್ನುವವರು ಲೇಬರ ಪಂಗಡದವರು ಅವರನ್ನೇ ಇದಕ್ಕಾಗಿ ಬಹಿಷ್ಕರಿಸಿದರೂ, ಲೇಬರ ಪಂಗಡಕ್ಕೆ ಮುಂದಿನ ಚುನಾವಣೆಯಲ್ಲಿ ಗೆಲುವು ಬರಲಾರದು ಆದುದರಿಂದ ಆಗುವಷ್ಟು ರೀತಿಯಿಂದಲಾದರೂ ಅವರು ಸರ್ ಸ್ಟೆಫರ್ಡರಿಗೆ ಬೆಂಬಲಕೊಟ್ಟು ಚೆಂಬರ್ಲೇನ್ ನೀತಿಯನ್ನು ವಿರೋಧಿಸುವುದು ಅವಶ್ಯವಿದೆ

ಹೊಸ ಯುದ್ಧನಾವೆಗಳು: ಇಂಗ್ಲೆಂಡು ೩೫,೦೦೦ ಟನ್ನಿನ ಎರಡು ನಾವೆಗಳನ್ನು ಜರ್ಮನಿಯ ಅದೇ ಪ್ರಮಾಣದ ಬಿಸ್ಮಾರ್ಕ ಹಡಗಿಗೆ ಪ್ರತಿಯಾಗಿ ನಿರ್ಮಿಸಿದೆ ತಂದಿತು ಈಗ ಅದಕ್ಕೂ ದೊಡ್ಡದಾದ ೪೦,೦೦೦ ಹಡಗ ನಿರ್ಮಾಣವಾಗ ತೊಡಗಿದೆ ಇದು ಹಿಂದಿನ ಎಲ್ಲಾ ಯುದ್ಧನಾವೆಗಳನ್ನು ಬಲದಲ್ಲಿ ಮೀರಿಸುವಂಥದಂತೆ ಅಂದು ಶಸ್ತ್ರಸನ್ನಾಹದ ವೇಗ ನಾವ್ಯ ಜಲಗಳಲ್ಲಿ ಹರಿಯುತ್ತಿದೆ

ಇಟೆಲಿಯ ಲಿಬ್ಯದ ಸೇನೆ: [illegible] ಆಳಗದ ವಿಷಯ ತನಗ ಆ ರಾಜ್ಯದ [illegible]ವನ್ನು ಒಪ್ಪುವಂತೆ ಮಾಡಲು ಮುಸೊಲಿನಿ ಲಿಬಿಯದ ಸೇನೆಯ ಕರಿತು ಒಂದು ಮಾತು ಕೊಟ್ಟಿದ್ದನು. ಇಲ್ಲಿರುವ ಯುದ್ಧಕಾಲದ ಸೇನಾ ಪ್ರಮಾಣವನ್ನು ತಗ್ಗಿಸಿ [illegible] ಕಾಲದ ಮಿತಿಗೆ ತರುವೆನೆಂದು. ಸಾರಿದನು [illegible] ಆಗಿನ ಅಂಗಸ ಕೆಲಸವಾಯಿತೆ ಈಗ ಆ ಸನಕೆಲಸ ಬಗೆಹರಿಯಿತು ಬಿಡೆದು ಬಿಟ್ಟಿ [illegible] ಸೇನೆಗಳು [illegible] ಆ ದೇಶದ [illegible]ಗಳನ್ನು ಸೇರುತ್ತಿವೆ ಸಂಖ್ಯೆಯು ಮೊದಲಿನ ಮಟ್ಟಕ್ಕೆ ಏರಿದೆ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಈ ವಿಷಯ ಪ್ರಶ್ನೆಬಂದಾಗ, ಸೇನೆ ಕಡಿಮೆ ಮಾಡುವುದು ಎಂದರೆ ಚಿರವಾಗಿ ಅಲ್ಲ ಎಂದು ಇಟೆಲಿಗೆ ಬೇಕಾದಂತೆ ಬ್ರಿಟಿಷ ಮಂತ್ರಿಗಳು ಮಾತನಾಡಿದರು. ಇಂಗ್ಲೆಂಡು ಪತಿಕ್ಷ [illegible] ಮಾನವಿಕ್ರಯ ದೇಶರಕ್ಷಣೆ ಮಾಡುತ್ತಿರುವ ಧೋರಣೆಯು ಮುಸಲೋನಿಯ ಕೊಬ್ಬನ್ನು ಹೆಚ್ಚಿಸದೇನು

ರುಮೇನಿಯದ ಸಂಶಯ: ಹಿಟ್ಲರನು ಹಲವು ರೀತಿಗಳಿಂದ ರುಮೇನಿಯದ ದೊರೆ ಕೆರೊಲನನ್ನು ಮಿತ್ರನನ್ನಾಗಿ ಮಾಡಲು ಯತ್ನಿಸುತ್ತಿದ್ದಾನೆ ಅಂತರಂಗದಲ್ಲಿ ಇಬ್ಬರಲ್ಲಿ ಪರಸ್ಪರ ಹೀನಾಯವಿದೆ ಕೆರೊಲನಿಗೆ ಹಿಟ್ಲರನ ರಾಜನೀತಿಯಾಗಲಿ, ಪ್ರಮಾಣಿಕತೆಯಾಗಲಿ ಇನ್ನೂ ಮನಕ್ಕೆ ಬಂದಿಲ್ಲ- ಹಿಟ್ಲರನ್ನು ಬೆದರಿಕೆಯನ್ನೂ ಹಾಕುತ್ತಿದ್ದಾನೆ. ಜೆಕೊಸ್ಲೊವಾಕಿಯ ರುಥೇನಿಯ ಭಾಗವು ಹಂಗೆರಿಯಕ್ಕೆ ದೊರಕರೆ ಜರ್ಮನ ಕೋವಿಗಳು ರುಮೇನಿಯದ ಗಡಿಯಲ್ಲಿ ಬಂದು ನಿಲ್ಲುವವು ಇದರಿಂದಾಗಿ ಟರ್ಕಿ, ರುಮೇನಿಯ, ಯುಗೊಸ್ಲಾವಿಯ, ಗ್ರೀಸುಗಳು ತಮ್ಮ ಗೆಳೆತನವನ್ನು ಕೆಡದಂತೆ ನೋಡುತ್ತಿವೆ

ಸಂ. ಅಮೇರಿಕದ ಶಸ್ತ್ರಸನ್ನಾಹ: ರೂಸವೆಲ್ಟರು ಹಾಕಿದ ಈ ಧೋರಣೆಗೆ ಸಾಕಷ್ಟು ಪ್ರತಿರೋಧವುಂಟೆಂದು. ಮೊದಲಿಗೆ ಕಂಡರೂ ಈಗ ಅವರು ಹಾಕಿದ ವೆಚ್ಚವನ್ನು ಬಹುಮತದಿಂದ ಅಲ್ಲಿನ ಸೆನೆಟು ಮಂಜೂರು ಮಾಡಿದೆ. ಇದರಿಂದ ಬರಿಯ ೩೦೫೦ ಯುದ್ಧ ವಿಮಾನಗಳಿಗೇನೆ ಅವರ ೭೧,೨೦೦,೦೦೦ ಪವನುಗಳನ್ನು ವ್ಯಯಿಸುವವರಿದ್ದಾರೆ ಇದರಂತೆ ಇತರ ವೆಚ್ಚಗಳು ಇವೆ

ಅಲಾಸ್ಕ, ಕೆರೆಬಿಯನ್ ಸಮುದ್ರ ಮೊದಲಾದ ಕಡೆಗಳಲ್ಲಿ ಹೊಸ ಹವಾ ಬಂದರುಗಳನ್ನು ಅವರು ಮಾಡುತ್ತಿರುವರು ಇದಕ್ಕೆ ಅನುಮತಿ ದೊರೆತದೆ

ಮಂಗಲಾರದ ತಿಂಡಿ: ಜಪಾನಿನ ಗಂಟಲಲಿ ಚೀನವು ಚೆನ್ನಾಗಿ ಸಿಲುಕಿಕೊಂಡಿದೆ ನುಂಗಲೂ ಇಲ್ಲ ಬಿಡಲೂ ಇಲ್ಲ ಚೀನದ ಸೇನೆ, ಶಸ್ತ್ರ ಬಲಗಳು ಜಪಾನಿಗಿಂತ ಬಲು ಕನಿಷ್ಠವಾಗಿ ಕಂಡರೂ, ಜಪಾನಿನ ಜೀರ್ಣಶಕ್ತಿಯೇ ಚೆನ್ನಾಗಿಲ್ಲವಾದರೆ ಏನು ಗತಿ

ಜಪಾನು ಸೇನೆಗಳ ಕಾಂಟನ್ ಹಾಂಕೋ ನಗರಗಳನ್ನು ಜಯಿಸಿದ್ದು ಎಂದು ಮಧ್ಯ ಚೀನಕ್ಕೆ ದಾಳಿಇಡರ ಉತ್ತರ ಮಂಗೋಲಿಯವನ್ನು ಸ್ವಾಧೀನ ಪಡಿಸಿಕೊಂಡರು ಆದರೆ ಅವನ್ನು ಚೀನ ಅವ್ಯವಸ್ಥಿತ ದಂಡುಗಾರರಿಂದ ರಕ್ಷಿಸುವ ತ್ರಾಣ ಅವರಿಗೆ ಬಂದಿಲ್ಲ ಅವರ ಕಾದಾಟದ ಸೇನೆ ೬,೦೦೦ ಮೈಲು ಉದ್ದವಾಗಿದೆ, ಆಕ್ರಮಿಸಿದ ದೇಶವು ಆರು ಲಕ್ಷ ಮೈಲು ವಿಸ್ತಾರವಾಗಿದೆ ಅಷ್ಟೊಂದನ್ನು ಜೀರ್ಣಿಸುವ ಬಗೆಯೆಂತು? ಹಣ ಬೇಡವೇ? ಜನಬೇಡವೇ?

ಸಾಲದುದಕ್ಕೆ ದೇಶದ ಮಧ್ಯತರದ ಜನಗಳು ಬಡವರು ಈ ಯುದ್ಧದಿಂದ ಯಾವ ಲಾಭವೂ ಪಡೆಯದವರು. ಅವರ ಸಂಖ್ಯೆ [illegible] ಎಂದಷ್ಟು ಹೀನದ ಸ್ಥಾನಕ್ಕೆ ಇಷ್ಟ ಪಡುತ್ತಿದೆ

ಹೆನಾನ್ ಸ್ವಾಧೀನ: ಜಪಾನ ಸೈನವು ಹಾಂಗಕಾಂಗಿಗೆ ಸಿಂಗಾಪ್ಪುರದಿಂದ ಒಡುವ ಕಡಲು ಹಾದಿಯ ದ್ವೀಪ ಈ ದಾರಿಯಾಗಿ ಚೀನಕ್ಕೆ ಸಿಗುವ ಸಹಾಯವನ್ನು ತಡೆಯಲೆಂದೋ ಅಥವಾ ಅಮೇರಿಕವು ಗುಆಮ್ ದ್ವೀಪವನ್ನು ಯುದ್ಧ ಠಾಣ್ಯವಾಗಿ ಮಾಡುವರೆಂದೂ, ಜಪಾನು ಒಮ್ಮೆಲೆ ಸ್ವಾಧೀನಪಡಿಸಿಕೊಂಡಿತು ೧೯೦೭ರಲ್ಲಿ ಚೀನಕ್ಕೂ ಫ್ರಾನ್ಸಿಗೂ ನಡೆದ ಒಂದು ಕರಾರಿನ ಮೇರೆಗೆ ಈ ದ್ವೀಪವು ಫ್ರಾನ್ಸಿನ ಇಂಡೋಚೈನಾಕ್ಕೆ ಸಂಬಂಧಪಟ್ಟುದೆಂದಾಗಿ ನಿರ್ಣಯವಾಗಿತ್ತು. ಅಷ್ಟಿದ್ದರೂ ಜಪಾನು ಅದನ್ನು ಆಕ್ರಮಿಸಿ ತನ್ನ ಸೇನೆಯನ್ನು ತಂದಿರಿಸುವುದು ಬ್ರಿಟನ ಫ್ರಾನ್ಸು ಎರಡನ್ನು ಕೆರಳಿಸಿವೆ ಈ ಎರಡು ದೇಶಗಳು ತಮ್ಮ ಪ್ರತಿರೋಧವನ್ನು ಪ್ರಕಟಿಸಿದುದಕ್ಕೆ ಪ್ರಕೃತ ಯುದ್ಧದ ಆವಶ್ಯಕತೆಯನ್ನು ಬಿಟ್ಟು ಒಂದೂ ದಿನವೂ ಇಲ್ಲಿರುವುದಿಲ್ಲ' ಎಂದಿರುವುದಂತೆ ಅತ್ತ ಮೊನೊರ್ಕಾ ಫ್ರಾಂಕೋವಿಗೆ ಬಲಿಯಾದ ದಿನವೇ ಇದು ಜಪಾನಿಗೆ ಬಲಿಯಾಯಿತು ಬರ್ಲಿನ್, ಜಪಾನು, ಇಟೆಲಿ ತ್ರಿಪಕ್ಷಗಳ ತಂತ್ರವೂ ಇದು ಇರಬಹುದೆಂದು ಊಹಿಸಲಾಗಿದೆ

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ ಒಂದು ಚಿಟಿಕೆ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ ಎಲ್ಲವರ ರುಚಿಗೆ ತಕ್ಕದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ ೧ ಸಾರಥಿ ನಸ್ಯ 1 ವೀಸಕ್ಕೆ ರೂ 3-6-0 ನವಿಲಿನ ಮಾರ್ಕು ಸಾರಥಿ ನಸ್ಯ 1 ವೀಸಕ್ಕೆ ರೂ 3 0-0

(ವಿ ಪಿ ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ.

ವಿಳಾಸ:—

ಎ. ಪಿ ಸಾರಥಿ

ಮೆನ್ಯುಫೆಕ್ಚರರ್ಸ್ ಓಫ್ ಮೆಡ್ರಾಸ್ ಸ್ನಫ್, ಪಿ. ಬಿ ನಂಬ್ರ 47 ಮದ್ರಾಸು

ಜಾಹೀರಾತುಗಳಿಗೆ:
ಸ್ವದೇಶಾಭಿಮಾನಿ
ಅತ್ಯುತ್ತಮ ಸೌಕರ್ಯಕೊಡುವುದು:
ಪ್ರತಿಫಲಬರುವಂತೆ ಸಾಧಿಸುವುದು.

ಮಂಗಳೂರು ಸಮಾಚಾರ

ಡಿಸ್ಟ್ರಿಕ್ಟ್ ಬೋರ್ಡ್ ಸಭೆ

ನಮ್ಮ ಡಿಸ್ಟ್ರಿಕ್ಟ್ ಬೋರ್ಡ್ ಸಭೆಯು ಕಳೆದ ತಾ. ೧೦ನೇ ಶುಕ್ರವಾರ ಪ್ರಾತಃಕಾಲ ಗಂಟೆ ೧೧ಕ್ಕೆ ಸರಿಯಾಗಿ ಪ್ರೆಸಿಡೆಂಟರಾದ ಡಾ॥ ಕೆ. ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು. ಬಜೆಟ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟ ಮೇರೆಗೆ ಉಪಾಧ್ಯಾಯರಷ್ಟೆ ಸಂಬಳವು ಉಪಾಧ್ಯಾಯಿನಿಯರಿಗೆ ದೊರೆಯಬೇಕೆಂಬ ಸೂಚನೆಯು ಈ ಸಭೆಯಲ್ಲಿ ಅಂಗೀಕಾರವಾಗಿ ಸರಕಾರದ ಮಂಜೂರಾತಿಗೆ ಒಪ್ಪಿಸಲ್ಪಟ್ಟಿರುತ್ತದೆ.

ಈ ಸಭೆಯಲ್ಲಿ ಕಳೆದ ಸಭೆಯಲ್ಲಿ ಬಾಕಿ ಇರಿಸಲಾದ ಹಲವು ವಿಚಾರಗಳ ಇತ್ಯರ್ಥವಾದವು. ಹಲವು ಸರಕಾರಿ ಹುಕುಮುಗಳು ಓದಿ ಮಂಜೂರು ಮಾಡಲಾಯಿತು. ಮಂಗಳೂರಿನ ಇಂಡಸ್ಟ್ರಿಯಲ್ ಮ್ಯೂಸಿಯಮಿಗೆ ತಿಂಗಳಿಗೆ ೧೫ ರೂಪಾಯಿಯ ಧನಸಹಾಯ ಮಾಡುವ ವಿಷಯವು ಮಂಜೂರಾಯಿತು. ಪರೀಕ್ಷಾರ್ಥವಾಗಿ ಸುಳ್ಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜೀನುನೂಲುವನ್ನು ಕಲಿಸಬೇಕೆಂದು ಮಂಜೂರಾಯಿತು. ಹಣವಿಲ್ಲದ್ದರಿಂದ ಹಲವು ಕಾರ್ಯಭಾಗಗಳನ್ನು ಹಿಂದೆ ಹಾಕಲಾಯಿತು.

೧೯೩೯-೪೦ನೇ ಇಸವಿಯ ಬಜೆಟ್ ಎಸ್ಟಿಮೇಟಿನ ವಿಚಾರದಲ್ಲಿ ಅಧ್ಯಕ್ಷರು ಭಾಷಣಮಾಡುತ್ತಾ ತಾಲೂಕು ಬೋರ್ಡುಗಳು ರದ್ದಾದಂದಿನಿಂದ ನಮ್ಮ ಜಿಲ್ಲೆಯ ಎಲಿಮೆಂಟರಿ ವಿದ್ಯಾದಾನಕ್ಕೆ ಹೇಗೆ ಹೇಗೆ ಹಣ ಕಡಿಮೆ ಬೀಳುತ್ತದೆ ಮತ್ತು ಅದನ್ನು ಭರ್ತಿ ಮಾಡಲಿಕ್ಕೆ ಯಾವ ಯಾವ ಉಪಾಯಗಳನ್ನು ಕೈಕೊಳ್ಳಲಾಗಿದೆ ಎಂಬ ವಿಷಯವನ್ನು ಅಂಕೆಸಂಖ್ಯೆಗಳ ಸಹಿತ ವಿಶದಪಡಿಸಿದರು. ಶಾಲೆಗಳನ್ನು ಮುಚ್ಚಿ ಹಣವನ್ನು ಉಳಿಸಿಕೊಳ್ಳುವ ಧೋರಣೆಯ ಕುರಿತು ತಮ್ಮ ಸಂದೇಹವನ್ನು ವ್ಯಕ್ತಪಡಿಸಿದರು. ಹಣದ ವಿದ್ಯಮಾನಗಳನ್ನು ನೋಡಿಕೊಳ್ಳದೆ ಸಂಬಳದಲ್ಲಿ ಹಾಯರ್ ಸ್ಕೇಲನ್ನು ಮಂಜೂರು ಮಾಡುವ ಧೋರಣೆಯು ಅಷ್ಟು ಉಚಿತವಲ್ಲವೆಂದು ಅಭಿಪ್ರಾಯಪಟ್ಟರು. ಅಂತೂ ಈ ಸ್ಕೇಲಿನಿಂದ ೧೯೩೯ರಿಂದ ೩೬ರ ವರೆಗೆ ಸುಮಾರು [illegible] ರೂಪಾಯಿಗಳು ಹೆಚ್ಚಾಗಿ ಖರ್ಚಾಗಿದೆಯೆಂದೂ ಉಪಾಧ್ಯಾಯರ ಸಂಬಳದಲ್ಲಿ ಕಡಿತವನ್ನಲ್ಲದೆ ಬೇರೆ ಉಪಾಯವೇ ಬೋರ್ಡಿಗೆ ಇರಲಿಲ್ಲವೆಂದೂ, ೧೯೩೯-೪೦ರಲ್ಲಿ ಸುಮಾರು [illegible] ರೂಪಾಯಿಗಳಷ್ಟು ಡೆಫಿಸಿಟ್ ಇದ್ದುದನ್ನು ಸಾಲಪಡೆಯುವಂತೆ ನಿರ್ಧರಿಸಲಾಗಿದೆಯೆಂದೂ ತಿಳಿಸಿದರು. ಹಾಗೇ ೧೯೩೮ರ ೩೯ನೇ ಇಸವಿಯ ತಿದ್ದಿದ ಅಂದಾಜುಪಟ್ಟಿ ಹಾಗೂ ೧೯೩೯-೪೦ರ ಸಾಮಾನ್ಯ ಅಂದಾಜುಪಟ್ಟಿಗಳ ವಿಚಾರದಲ್ಲಿಯೂ ಆಯಾ ವಿದ್ಯಮಾನಗಳನ್ನಿಳಗೊಂಡ ವಿಚಾರವನ್ನು ಕೂಡಾ ವಿವರಿಸಿದರು.

ಎಜ್ಯುಕೇಶನಲ್ ಕೌನ್ಸಿಲ್.

ನಮ್ಮ ಎಜ್ಯುಕೇಶನಲ್ ಕೌನ್ಸಿಲಿನ ಸಭೆಯು ತಾ. 11ನೇ ಅಪರಾಹ್ನ 10 ಗಂಟೆಗೆ ಸರಿಯಾಗಿ ಕೌನ್ಸಿಲಿನ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಜರಗಿತು. ಮುಂದಿನ ಜೂನ್ 1ನೇ ತಾರೀಕಿನಿಂದ ಕೌನ್ಸಿಲ್ ತೆಗೆದುಹಾಕಲ್ಪಡುವುದೆಂಬ ಸರಕಾರದ ಆಜ್ಞೆಯನ್ನು ರಿಕಾರ್ಡ್ ಮಾಡಲ್ಪಟ್ಟಿತು. ಕೆಲವು ಶಾಲೆಗಳಿಗೆ ಎಜ್ಯುಕೇಶನಲ್ ಆಫೀಸರರ ಶಿಫಾರಸಿನ ಪ್ರಕಾರ ಮಂಜೂರಾತಿಯನ್ನು ಕೊಡಲಾಯಿತು. ಹಲವು ಶಾಲೆಗಳು ತಮ್ಮಲ್ಲಿನ ನಿಶ್ಚಿಷ್ಟ ಪರಿಸ್ಥಿತಿಗಳನ್ನು ತಪ್ಪುಗಳನ್ನು ತಿದ್ದಿಕೊಳ್ಳದ್ದರಿಂದ ಅವುಗಳಿಗೆ ತಾತ್ಕಾಲಿಕ ಅಂಗೀಕಾರ ಕೊಡಲಾಯಿತು. ಕೆಲವು ಶಾಲೆಗಳ ವಿಚಾರದಲ್ಲಿ ಎಜ್ಯುಕೇಶನಲ್ ಆಫೀಸರರ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನ ವಿಮರ್ಶೆಗಳನ್ನು ಅಪೇಕ್ಷಿಸಲಾಯಿತು. ಕೆಲವು ಕ್ರಿಸ್ತ ಶಾಲೆಗಳ ವಿಚಾರದಲ್ಲಿ ಅವುಗಳನ್ನು ಬೋರ್ಡ್ ಶಾಲೆಗಳ ಮುಂದೆ ಸ್ಥಾಪಿಸಿದುದರ ವಿಚಾರದಲ್ಲಿ ಯಥಾಪ್ರಕಾರದ ಚರ್ಚೆಯು ಇಂದೂ ನಡೆಯಿತು.

ಹೊಸ ಕಲೆಕ್ಟರರು

ನಮ್ಮ ಜಿಲ್ಲಾ ಕಲೆಕ್ಟರರಾದ ಶ್ರೀಯುತ ದಿವಾನ್ ಬಹದ್ದೂರ್ ಎಂ. ವಿ. ವೆಲ್ಲೋಡಿ, ಬಿ. ಎ. ಇವರ ಸರ್ವೀಸನ್ನು ಇಂಡಿಯಾ ಸರಕಾರಕ್ಕೆ ಎರವಾಗಿ ಕೊಟ್ಟದ್ದು ಅವರು ಈಸ್ಟ್ ಇಂಡಿಯಾ ರೈಲ್ವೆ ಕಂಪನಿಯಲ್ಲಿ ಈಚೆಗೆ ಸಂಭವಿಸಿದ ಹಲವು ಅಪಘಾತಗಳ ಕುರಿತು ವಿಚಾರಿಸಲೇರ್ಪಟ್ಟ ಒಂದು ವಿಚಾರಣಾಸಮಿತಿಯಲ್ಲಿ ಕಾರ್ಯನಿರ್ವಹಿಸಲು ನಿಯೋಜಿತರಾಗಿರುವುದರಿಂದ ಇವರ ಸ್ಥಾನಕ್ಕೆ ನಮ್ಮ ಜಿಲ್ಲಾ ಕಲೆಕ್ಟರರಾಗಿ ಖಾನ್ ಬಹದ್ದೂರ್ ಷರ್ಫತ್ ಅಹಮ್ಮದಾಲಿ ಸಾಹೇಬ್ ಬಹದ್ದೂರ್ ಇವರು ನೇಮಿಸಲ್ಪಟ್ಟು ಇವರು ತಾರೀಕು 16ರಲ್ಲಿ ಚಾರ್ಜನ್ನು ವಹಿಸಿದರು.

ಉದಾರ ದಾನ

ಕೊಡಗಿನ ಮಾಜಿ ಎಂ. ಎಲ್. ಸಿ. ಗಳಾದ ಶ್ರೀ ಬಿ. ಶ್ರೀಪತಿರಾಯರು ಸುಬ್ರಮಣ್ಯದಲ್ಲಿ ಕಟ್ಟಿಸಲ್ಪಡುತ್ತಿರುವ ಅಂಗಣಕ್ಕೆ 1500 ರೂಪಾಯಿಯ ಧನಸಹಾಯವನ್ನು ನೀಡಿರುವರು.

ಕೊಂಚಾಡಿ

ಮಂಗಳೂರು ರೇಂಜಿನ ಶಾಲಾ ಡೆಪ್ಯೂಟಿ ಇನ್ಸ್‌ಪೆಕ್ಟರರಾದ ಶ್ರೀ ಎಚ್. ಸಂಜೀವರಾಯರು ಉಡುಪಿ ರೇಂಜಿಗೆ ವರ್ಗವಾದ್ದರಿಂದ ಕೊಂಚಾಡಿ ಶ್ರೀ ರಾಮಪುತ್ರರ ಹಾಯರ್ ಎಲಿಮೆಂಟರಿ ಶಾಲೆಯ ಪರವಾಗಿ ಸನ್ಮಾನ ತಾ. ೯-೩-೩೯ನೇ ಗುರುವಾರ ಸಾಯಂಕಾಲ [illegible] ವಿಯೋಗ ಕೂಟವೊಂದನ್ನು ಏರ್ಪಡಿಸಿದರು.

ಕ್ಷಣಸಮಯಕ್ಕೆ ಶ್ರೀಯುತ ಎಚ್. ಸಂಜೀವರಾಯರು ಶಾಲೆಗೆ ಬಂದೊಡನೆ ಅವರನ್ನು ಶಾಲೆಯ ಮೇಲ್ವಿಚಾರಕರಾದ ಶ್ರೀ ಜಿ. ಆರ್. ಶೆಣೈಗಳವರೂ ಶಾಲಾ ಮಾಜಿ ಮೆನೇಜರರಾದ ಶ್ರೀ ಕೆ. ಕೃಷ್ಣಯ್ಯ ವ್ಯಾನುಭಾಗರೂ ಶಾಲಾ ಬಾಲಿಕಾ ಸಂಘದ ಮುಂದಾಳಾದ ಶ್ರೀ ಜಿ. ನಾರಾಯಣ ಕಾಮತ್ ಮತ್ತು ಶ್ರೀ ಕೆ. ವಾಸುದೇವ ವ್ಯಾನುಭಾಗರೂ ಅಲ್ಲದೆ ಶಾಲಾ ಅಧ್ಯಾಪಕರೂ ಎದುರ್ಗೊಂಡು ಪುಷ್ಪಹಾರದಿಂದ ಸತ್ಕರಿಸಿ, ಛಾಯಾಚಿತ್ರವನ್ನು ತೆಗೆಯಲಾಯಿತು.

ಅನಂತರ ಉಪಹಾರವಾದ ಮೇಲೆ ಶ್ರೀಯುತ ಜಿ. ಆರ್. ಶೆಣೈಗಳ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶಾಲಾ ಮುಖ್ಯೋಪಾಧ್ಯಾಯರು ಅವರ ಗುಣಕಥನವನ್ನು ಮಾಡುತ್ತ ಅವರ ವಿಯೋಗದಿಂದ ತಮಗೆ ತುಂಬಾ ವಿಷಾದವಾಗಿದೆಯೆಂದು ವ್ಯಕ್ತಪಡಿಸಿದರು. ಶ್ರೀ ಕೆ. ಕೃಷ್ಣಯ್ಯ ವ್ಯಾನುಭಾಗರೂ ಅದನ್ನೇ ಪುಷ್ಟೀಕರಿಸಿ ಸಮಯೋಚಿತ ಭಾಷಣಮಾಡಿದರು. ಶ್ರೀ ಎಚ್. ಸಂಜೀವರಾಯರು "ನಾನು ಇಷ್ಟು ಪ್ರಶಂಸೆಗೆ ಪಾತ್ರನಲ್ಲವೆಂದೂ, ನನ್ನ ಉದ್ಯೋಗದ ಕೆಲಸವನ್ನು ಮಾತ್ರ ಮಾಡಿರುವೆನೆಂದೂ ನಿಮ್ಮ ಸಹಾನುಭೂತಿಯಿಲ್ಲದೆ ಇದ್ದಲ್ಲಿ ನನ್ನ ಕಷ್ಟತರ ಕೆಲಸವು ಇಷ್ಟು ಸುಲಭವಾಗುತ್ತಿಲ್ಲವೆಂದೂ ನೀವು ತೋರಿಸಿದ ಈ ಪ್ರೀತಿಯ ಸತ್ಕಾರವು ನನ್ನ ಮನಸ್ಸಿನಿಂದ ಎಂದೂ ಅಳಿಯದೆಂದೂ ಹೇಳಿ ಉಚಿತ ಸಂಘಕ್ಕೆ ಧನ್ಯವಾದವನ್ನಿತ್ತರು.

ತರುವಾಯ ಅಧ್ಯಕ್ಷರು ಶ್ರೀಯುತ ಎಚ್. ಸಂಜೀವರಾಯರು ಶಾಲೆಗೆ ಮಾಡಿದ ಮಹದುಪಕಾರವನ್ನು ಅತ್ಯಂತ ವಿವರಿಸಿ ಅವರಿಂದಾಗಿ ಈ ಶಾಲೆಯು ಇಷ್ಟು ಉಚ್ಛ್ರಾಯಕ್ಕೆ ಬಂತೆಂದೂ ಅವರ ವಿಯೋಗದಿಂದ ತಮಗೆ ತುಂಬಾ ಬೇಸರವಾಗಿದೆಯೆಂದೂ ಶ್ರೀಯುತರಿಗೆ ಶ್ರೀರಾಮನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡ [illegible]

ತಾಲೂಕು ಸಮಾಚಾರ

ಉಡುಪಿ

ಟೂರ್ನಮೆಂಟ್: ಮುನ್ಸಿಪಲ್ ಜಿಮ್ಖಾನ ಕಮಿಟಿಯ ಪರವಾಗಿ ಎಪ್ರಿಲ್ ೩ನೇ ವಾರದಿಂದ ಬೆಡ್‌ಮಿಂಟನ್ ಮೊದಲಾದ ಟೂರ್ನಮೆಂಟುಗಳು ನಡೆಯಲಿರುವುವು. ಇದರಲ್ಲಿ ಭಾಗಿಗಳಾಗಲಿಚ್ಛಿಸುವವರು ಇದೇ ತಾರೀಕು ೩೧ರೊಳಗೆ ಪ್ರವೇಶ ಹಣ ಕೊಟ್ಟು ಹೆಸರು ದಾಖಲ್ಮಾಡಿಕೊಳ್ಳತಕ್ಕದ್ದು. ಹೆಚ್ಚಿನ ವಿವರವನ್ನು ಮುನ್ಸಿಪಲ್ ಜಿಮ್ಖಾನ ಕಮಿಟಿಯ ಕಾರ್ಯದರ್ಶಿಯಿಂದ ತಿಳಿದುಕೊಳ್ಳಬಹುದು.

ಕೋಟ.

ಸ್ಥಳೀಯ ಶ್ರೀ ಶಾಂಭವಿ ವಾಚನಾಲಯದ ದ್ವಿತೀಯ ವರ್ಧಂತ್ಯುತ್ಸವವು ಕಳೆದ ತಾ 12ನೇ ಆದಿತ್ಯವಾರ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಡಾ. ಕೆ. ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಬಹಳ ಸಂಭ್ರಮದಿಂದ ಜರಗಿತು.

ಪುತ್ತೂರು

ಪುತ್ತೂರು ತಾಲೂಕು ಗ್ರಾಮಉದ್ಯೋಗಸ್ಥರ ಸಂಘ

ಈ ಸಂಘದ ಮಹಾಸಭೆಯನ್ನು ಇದೇ ಮಾರ್ಚಿ ತಿಂಗಳ ತಾ. ೨೬ನೇ ರವಿವಾರ ಮಧ್ಯಾಹ್ನ ಗಂಟೆ ೨ಕ್ಕೆ ಸರಿಯಾಗಿ ಪುತ್ತೂರು [illegible] (ಸೇವಾಶ್ರಮ) ಕಟ್ಟಡದಲ್ಲಿ ಜರಗಿಸುವುದೆಂತ ಮಾಡಿದೆ. ಆದ್ದರಿಂದ ಮೆಂಬರರೆಲ್ಲರೂ ಅತೀ ಅಗತ್ಯವಾಗಿ ಬರಬೇಕಲ್ಲದೆ ಪ್ರತಿಯೊಬ್ಬ ಗ್ರಾಮ ಉದ್ಯೋಗಸ್ಥನು ಕೂಡ ತನ್ನ ಹಾಗೂ ನೆರೆಹೊರೆಯ ಗ್ರಾಮಗಳ, ಪಟೇಲ ಶ್ಯಾನುಭೋಗ ತಳವಾರ, ಉಗ್ರಾಣಿ, ಇವರನ್ನು ಹೇಳಿ ಕರಕೊಂಡು ಬರಬೇಕಾಗಿ ವಿನಂತಿ.

ತಾ 26-3-39ನೇ ದಿವಸ ಸಭೆಯ ಮುಂದಿರತಕ್ಕ ಮುಖ್ಯ ವಿಷಯಗಳು.

1 ಶ್ರೀ. ಮೊಳಹಳ್ಳಿ ಶಿವರಾವ್ ಪುತ್ತೂರು ಇವರಿಂದ ತಿದ್ದಲ್ಪಟ್ಟ ತಯಾರಾಗೆಬಂದಿರುವ ಸಂಘದ ಉಪನಿಬಂಧನೆಯ ಮಂಜೂರು ಮಾಡುವಿಕೆ 2 ಹನ್ನೆರಡು ಮಂದಿ ಆಡಳಿತ ಕಮಿಟಿಯ ಮೆಂಬರರನ್ನು ಆರಿಸುವಿಕೆ. 3. ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಲೆಖ್ಖ ಪರೀಕ್ಷಕ, ಖಜಾಂಚಿ, ಇವರ ಚುನಾವಣೆ 4. ಅಧ್ಯಕ್ಷರ ಅನುಮತಿಯಿಂದ ಸಭೆಯ ಮುಂದೆ ಬರಬಹುದಾದ ಎಲ್ಲಾ ವಿಷಯಗಳು.

ಕಾರ್ಕಳ

ಕಾರ್ಕಳ ತಾಲೂಕು ಕಾಂಗ್ರೆಸ ಕಮಿಟಿಗೆ ಕಾರ್ಕಳ ಮುಂತಾದ ಸಂಘದ ಕಡೆಯಿಂದ ತಾ ೧೨-೩-೩೯ರ ದಿನ ಸಾಯಂಕಾಲ ಬೋರ್ಡ್ ಶಾಲಾ ಮೇಟಿ ಅವರ್ಗಳ ಭಾಷಣವನ್ನು ಏರ್ಪಡಿಸಿದರು. ಶಾಲಾ ಮುಖ್ಯೋಪಾಧ್ಯಾಯರು ನಡೆದುದೆಲ್ಲಾ ಕೃತಜ್ಞತಾವಂದನೆಗಳನ್ನು ಅರ್ಪಿಸಿದ ನಂತರ ಜನಗಣಮನ ದೊಂದಿಗೆ ಸಭಾಂತ್ಯವಾಯಿತು.

ಜಿಲ್ಲಾ ಮೆಜಿಸ್ಟ್ರೇಟರ ಪ್ರಕಟನೆ

ಎಲಾ ಕೋವಿ ಲೈಸನ್ಸುದಾರರು, ತಮ್ಮ ಲೈಸನ್ಸುಗಳ ಬದ್ಲಿ ಮುಂದರಿಸುವ ಬಗ್ಗೆ ಮಾಮೂಲ ಪ್ರಕಾರದ ಅರ್ಜಿಗಳನ್ನು ಇನ್ನುಮುಂದೆ ಡಿಸೆಂಬರ್ ತಿಂಗಳ ಮೊದಲನೇ ಜಿಲ್ಲಾ ಮೆಜಿಸ್ಟ್ರೇಟರವರ ಆಫೀಸಿಗೆ ತಲ್ಪುವಂತೆ ಕಳುಹಿಸತಕ್ಕದ್ದು. ಹಾಗೆ ಡಿಸೆಂಬರ್ ತಿಂಗಳಲ್ಲಿ ಸದ್ರಿ ಅರ್ಜಿಗಳು ಇಲ್ಲಿಗೆ ತಲ್ಪದಿದ್ದರೆ ಲೈಸೆನ್ಸುಗಳು ಬದ್ಲಿ ಮುಂದರಿಸಲಾಗ ದಿಸಂಬರ ತಿಂಗಳ ಒಳಗೆ ಅರ್ಜಿದಾರರಿಗೆ ನೋಟೀಸು ಕಳುಹಿ ಪ್ರಯಾಸವಾದೀತು.

ಎಮ್. ವಿ. ವೆಲ್ಲೋಡಿ,
ಜಿಲ್ಲಾ ಮೆಜಿಸ್ಟ್ರೇಟ್.

[illegible] ಮ್ಮಿನ ಎಲಿಮೆಂಟರಿ ಶಾಲೆಯಲ್ಲಿ ಪುನಃ ಚುನಾವಣೆಯು ನಡೆದು ಶ್ರೀಗಳಾದ ಕೆ. ಸಿ. ಜನಾರ್ಧನ ಪ್ರಭು. ಸಿ. ಮಂಜುನಾಥ ಶಾಸ್ತ್ರಿ, ಕೆ ಬಾಬುರಾಯ ಶೆಣೈ, ಎಂ. ಎಸ್, ಅಧಿಕಾರಿ ಮತ್ತು ಕೆ. ಶ್ರೀನಿವಾಸ ಹೆಗ್ಡೆಯವರು ಅತ್ಯಧಿಕ ಮತಗಳನ್ನು ಪಡೆದು ಆರಿಸಿಬಂದರು. ಶ್ರೀ ಕೆ ಗಣಪತಿ ಕಾಮತರು ಚುನಾವಣಾ ಆಫೀಸರರಾಗಿದ್ದರು.

ರಾಜಕೋಟೆ ಪ್ರಕರಣದ ಸಂಬಂಧ ಮಹಾತ್ಮಜಿಯವರು ಉಪವಾಸ ಹಿಡಿದ ಕಾರಣ ತಾ ೬-೩-೩೯ರ ದಿನ ಇಲ್ಲಿ ಸಂಪೂರ್ಣ ಹರತಾಳವೂ, ಆ ದಿನ ಸಾಯಂಕಾಲ ಶ್ರೀ. ಕೆ. ವಿ. ಶರ್ಮರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಭಾಷಣಗಳೂ ಇದ್ದುವು

ಜಿಲ್ಲೆಯ ಎಲ್ಲಾ ಬೋರ್ಡ್ ಎಲಿಮೆಂಟರೀ ಶಾಲೆಗಳ ಅಧ್ಯಾಪಕರ ತಿಳುವಳಿಕೆಯ ಬಗ್ಗೆ

ನಮ್ಮ ಮಾನ್ಯ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರು ಈ ಜಿಲ್ಲೆಯ ಎಲ್ಲಾ ಬೋರ್ಡ್ ಶಾಲೆಗಳ ಉಪಾಧ್ಯಾಯರುಗಳ ಇಂದಿನ ಪರಿಸ್ಥಿತಿಯ ಕುರಿತು ಅವರೊಡನೆ ಸಂಭಾಷಿಸಬೇಕೆಂದೂ, ಅವರ ಸಂಕಷ್ಟ ನಿವಾರಣೆ ಮತ್ತು ಅಭಿವೃದ್ಧಿಯ ಕುರಿತು [illegible] ನಡೆಸಬೇಕೆಂದೂ, ಆ ಸಂಬಂಧ ಉಪಾಧ್ಯಾಯರಿಂದ ಬರುವ ಯೋಗ್ಯ ಸೂಚನೆಗಳನ್ನು ಅಂಗೀಕರಿಸಲು ಸಿದ್ಧರಿರುವೆನೆಂದೂ ಆದರೆ ಜಿಲ್ಲೆಯ ಎಲ್ಲಾ ಉಪಾಧ್ಯಾಯರು ಒಂದೇ ಕಡೆ ಸೇರುವುದು ಪ್ರಯಾಸವಾದುದರಿಂದ ಪ್ರತಿಯೊಂದು ತಾಲೂಕು ಸಂಘದವರು ತಮ್ಮ ತಾಲೂಕಿನ ಕೇಂದ್ರದಲ್ಲಿ ಒಂದು ವಿಶೇಷ ಮಹಾಸಭೆಯನ್ನು ಜರುಗಿಸಬೇಕೆಂದೂ ಅಭಿಪ್ರಾಯಪಟ್ಟು ಪುತ್ತೂರು ತಾಲೂಕಿನವರು ಇದೇ ತಿಂಗಳ ತಾ ೧೯ನೇ ಆದಿತ್ಯವಾರ ಸಭೆ ಜರಗಿಸಬೇಕೆಂದು ಸೂಚಿಸಿರುವರು. ಆದುದರಿಂದ ಪುತ್ತೂರು ತಾಲೂಕಿನ ಎಲ್ಲಾ ಉಪಾಧ್ಯಾಯಿನಿಯರು ಈ ಸುಸಂದರ್ಭವನ್ನು ಕಳಕೊಳ್ಳದೆ ಸದ್ರಿ ದಿನ ಅಪರಾಹ್ನ ಗಂಟೆ 1ಕ್ಕೆ ಪುತ್ತೂರು ಬೋ. ಹಾ. ಎ. ಶಾಲೆಯಲ್ಲಿ ಜರಗುವ ಸಭೆಗೆ ದಯಮಾಡಿ ಬರಬೇಕೆಂದೂ, ತಾಲೂಕಿನವರು ಪ್ರೆಸಿಡೆಂಟರ ಅನುಕೂಲ ಸಮಯವನ್ನು ತಿಳಿದುಕೊಂಡು ತಮ್ಮ ತಾಲೂಕಿನ ಸಭೆಗಳನ್ನು ಜರಗಿಸಬೇಕೆಂದೂ ಈ ಮೂಲಕ ಪುತ್ತೂರ ತಾಲೂಕು ಸಂಘದ ಕಾರ್ಯದರ್ಶಿಯವರು ವಿನಂತಿ ಮಾಡಿಕೊಳ್ಳುತ್ತಾರೆ.

ನೋಟೀಸು

ಕೆನರಾ ಬೇಂಕ್ ಲಿಮಿಟೆಡ್

ಕಾರ್ಕಳ

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನ ಚಿನ್ನಾಭರಣಗಳ ಈ ದಿನ ಮೇಲೆ ಪಡೆದ ಸಾಲಗಳನ್ನಾಗಲೀ ಅದರ ಬಡ್ಡಿಯನ್ನಾಗಲೀ ಮಾಮೂಲಿ ಸರಿಯಾಗಿ ಕೊಡದೆ ಇರುವುದರಿಂದ ಅವರಿಗೆ ಭಟ್ಟಿ ರಿಜಿಸ್ಟರ್ ನೋಟೀಸು ಕಳು [illegible] ಮೃತಪಟ್ಟಿರುವರೆಂದು [illegible] ಇದೇ [illegible] ೧—೪—೩೯ನೇ ಸೋಮವಾರ ಯಾ ಬೇಕಾದವರಿಗೆ ಮತ್ತು ಕೋರುವ ಬೇರೆ ತಾರೀಕಿನ ಸದ್ರಿ ಬೇಂಕಿನ ಪ್ರಿಮಿಸಿನಲ್ಲಿ ವ್ಯಾಪ್ತ ಗಡುವಿನಲ್ಲಿ ಸರಿಯಾಗಿ ಅವರ ಅಡವಿಟ್ಟ ನಗಗಳನ್ನು ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಹಣವನ್ನು ಬೇಂಕಿಗೆ ಸಲ್ಲತಕ್ಕ ಸಾಲಗಳಿಗೆ ಜಮಾಮಾಡಲಾಗುವುದು.

ಲೋನು ನಂ 267 37 ಹೆಸರು ದಾಸಪ್ಪಶೆಟ್ಟಿ [illegible]

(ಸಾಲದ ಮೊಬಲಗು R. 25/-)

Office of the Bank, Karkala
17-3-1939

B. Sundara Pai
Ag. Agent

ಸ್ಲೊವಾಕಿಯಾ!

ಇದನ್ನು ಜರ್ಮನಿಯು ನುಂಗುವುದೆ?

ಮಧ್ಯ ಯುರೋಪಿನಲ್ಲಿ ಪ್ರಜಾಸತ್ತೆಯ ಅತ್ಯುತ್ತಮ ನಿದರ್ಶನವೆಂದರೆ ಜೆಕೊಸ್ಲೊವಾಕಿಯಾ ಎನ್ನುತ್ತಿದ್ದರು. ಕಳೆದ ಸೆಪ್ಟಂಬರಿನಿಂದ ಈಚೆಗೆ ಇದೇ ಸಂಪೂರ್ಣ ನಿರಂಕುಶಾಧಿಕಾರಕ್ಕೆ ಒಳಪಡುತ್ತ ಬರುವಂತಿದೆ.

ಆಳುವ ಪಕ್ಷಕ್ಕೆ ವಿರುದ್ಧವಾಗಿರುವ ಪಕ್ಷಗಳ ನಾಮನಾಶನವಾಗುತ್ತದೆ. ಯೆಹೂದ್ಯರನ್ನು ಹಿಂಸೆಮಾಡಲು ಚಳುವಳಿಗಳು ನಡೆಯುತ್ತವೆ. ಡಾ। ಬೆನಿಶ್ ಮತ್ತು ಅವರ ಪಕ್ಷಗಳನ್ನು ಖಂಡಿಸಿ ಧಾರಾಳವಾಗಿ ಪತ್ರಿಕೆಗಳು ಬರೆಯುತ್ತವೆ. ಈ ಕೃತಿಗಳಲ್ಲಿ ಎಷ್ಟು ಪರಪ್ರೇರೇಪಣೆಯಿಂದ ಹುಟ್ಟಿದುವೋ ತಿಳಿದಿಲ್ಲ. ಮೆಸಾರಿಕ್ ಬೆನೆಶ್‌ರವರ ಆಳಿಕೆಯಲ್ಲಿ, ಅವರು ಜೆಕ್ಕರಾಜ್ಯಕ್ಕೆ ದೂರದೂರದ ಸ್ನೇಹಿತರನ್ನೆ ಮಾಡಿಕೊಂಡುದು ತಪ್ಪಾಯಿತೆಂದು ಎಣಿಸಿದವರು ಬಹಳ ಮಂದಿ ಇಂದಿರಬಹುದು. ವರ್ಸೆಲ್ಸ್, ಲುಕಾರ್ನೊ, ಕರಾರುಗಳನ್ನು ಜರ್ಮನಿಯು ಅಲ್ಲಗಳೆದ ಬಳಿಕಂತೂ, ಇವರ ಸಂಖ್ಯೆ ಹೆಚ್ಚಾಗುತ್ತ ಬಂದಿರಬೇಕು. ಅನಂತರವಂತೂ ಸಮೀಪದ ಗೆಳೆಯರನ್ನು ಅನುಸರಿಸುತ್ತ ಬರುವುದೇ ಮೋಕ್ಷಮಾರ್ಗವೆಂದು ಇವರೂ ಇವರಂತಹವರೂ ನಂಬಿರಬೇಕು. ಜರ್ಮನಿಗೆ ಅನುಕೂಲ ನಡೆದಲ್ಲಿ, ಜರ್ಮನಿಯ ಬಾಧೆ ತಪ್ಪುವುದೆಂದು ಇವರೂ ಭಾವಿಸಿರಬೇಕು. ಜರ್ಮನಿಯ ಸಹಾಯ ಕಂಡಂತೆ ಇವರಲ್ಲಿ ಹೆಚ್ಚಿರಬೇಕು. ಇದನ್ನು ತಿಳಿದು ಜೆಕ್ಕ ಸರಕಾರವು ಸ್ವಲ್ಪ ಎಚ್ಚತ್ತು, ಇತರ ಬಾಂಧವ್ಯವನ್ನು ಇವರು ಗಳಿಸುವುದು ಸರಿಯಲ್ಲವೆಂದು ಹೇಳಿರುವ ಪ್ರಯುಕ್ತ, ಅನುಕೂಲವಾಗಿ ಸುಡೆಟನ್‌ರ ಮುಂದಾಳು ಹರ್ ಕುಂಟ್‌ನು ಎಂದಿಗಿಂತಲೂ ನಿಕೃಷ್ಟ ಸ್ಥಿತಿಯು ಜರ್ಮನರಿಗೆ ಈಗ ಅಲ್ಲಿ ಒದಗಿದೆ ಎಂದು ಹಿಟ್ಲರನಿಗೆ ತಿಳಿಸಿದನು. ಹೀಗಾದರೂ ಜರ್ಮನ ಸಹಾಯ ಪಡೆದ ಇಲ್ಲಿನ ಫೆಡರಲ್ ಸರಕಾರವು ಪೋಲೆಂಡ್, ಹಂಗೇರಿಗಳಿಗೆ ವಿರುದ್ಧವಾಗಿ, ಸ್ಲೊವಾಕಿಯ ರುಥೇನಿಯಾಗಳಲ್ಲಿ ತನ್ನ ಆಡಳಿತಕ್ಕೆ ಮನ್ನಣೆ ಸಿಗುವಂತೆ ಮಾಡಿತು.

ಕಳೆದ ಗುರುವಾರ ರಾತ್ರಿ ಫೆಡರಲ್ ಸೈನ್ಯಗಳು ಸ್ಲೊವಾಕಿಯವನ್ನು ಸುತ್ತುಗಟ್ಟಿ, ಇಡೀ ಸ್ಲೊವಾಕಿಯವನ್ನು ವಶಮಾಡಿಕೊಳ್ಳುವಂತಿತ್ತು. ಸ್ಲೊವಾಕ್ ಮಂತ್ರಿಕೂಟವನ್ನು ನಿವೃತ್ತಿಪಡಿಸಲಾಯಿತು. ಹ್ಲಿಂಕಾಗಾರ್ಡ್ ಸೈನ್ಯವನ್ನೂ ನಿರಸ್ತ್ರರನ್ನಾಗಿಮಾಡಲಾಯಿತು. ಪ್ರಮುಖ ಸ್ಲೊವಾಕರನ್ನು ಸೆರೆಯಲ್ಲಿಟ್ಟು, ಪತ್ರಿಕಾ ನಿಷೇಧ ಕಾನೂನು ಜ್ಯಾರಿಗೆ ತರಲಾಗಿದೆ.

ನಿವೃತ್ತರಾದ ಮಂತ್ರಿಗಳಲ್ಲೊಬ್ಬನು ಯಥಾಸ್ಥಿತಿಯನ್ನು ಹಿಟ್ಲರಿಗೆ ತಿಳಿಸಲು ವಿಯನ್ನಾ ಮಾರ್ಗವಾಗಿ ಹೋದನು. ಹಿಟ್ಲರನು ತನ್ನ ಅತ್ಯಂತ ಆಪ್ತರನ್ನು ಸಭೆಗೆ ಕರೆಯಿಸಿದನು. ಇದರರ್ಥವೇನು? ಜರ್ಮನಿ ಕಾಲು ಹಾಕುವುದೇ? ಏಕೆ? ಲಂಡನ ಇದನ್ನು ನಂಬುವುದಿಲ್ಲ, ಅಸಾಧ್ಯ ಎನ್ನುತ್ತದೆ. ಜೆಕ್ಕ ಸೈನ್ಯಗಳು ಈಗ ಹಿಂತೆರಳಿವೆ, ಹೊಸ ಸರಕಾರವು ಮುರಿದು ಬಿದ್ದಿದೆ ಎಂದು ಶನಿವಾರದ ವಾರ್ತೆ.

ಸ್ವಲ್ಪ ಈಚೆಯ ಇತಿಹಾಸ ತಿಳಿಯಿರಿ. ಡಾ। ಹಾಚಾ ಎಂಬಾತನು ಜಡ್ಜನಾಗಿದ್ದವನು ರಾಜಕೀಯ ತಿಳುವಳಿಕೆ ಇಲ್ಲದ ಕಾರಣವೇ ಸರಕಾರದ ಅಧ್ಯಕ್ಷನಾಗಿ ಚುನಾವಣೆ ಹೊಂದಿದನು. ಮೃತ ಫಾದರ್ ಹ್ಲಿಂಕನ ಬಲಗೈಯಾಗಿದ್ದ ವೈದಿಕ ಆಚಾರ್ಯ ಡಾ। ಟಿಸೋ, ಮುಖ್ಯ ಪ್ರಧಾನನು. ಇವನು ಸಾಮಾನ್ಯನೆಂದು ಭಾವಿಸಿದ್ದರು; ಈಗ ಉಗ್ರನೆಂದು ತಿಳಿದುಬಂದಿದೆ. ಹಿಂಕ್ಲಾ ಗಾರ್ಡ್ ಸೈನ್ಯದ ಖರ್ಚನ್ನು ತಾನೆ ನೋಡಿ ವಿಮರ್ಶಿಸಬೇಕೆಂದು ಸರಕಾರ ಎಂದಿದೆ. ಹಿಂದೆ ಯೆಹೂದ್ಯರ ವಿರೋಧ ನಿಂತುದಕ್ಕೆ ಸ್ಲೊವಾಕರನ್ನು ದೂರಿದವರಿರುವರು. ಡಾ। ಟಿಸೋ ಡಿಕ್ಟೇಟರನಾಗಲು ಶ್ರಮಿಸಿದವನು. ಇದನ್ನು ಮುರಿಯಲು ಈಗ ಇಷ್ಟೆಲ್ಲ ದಂಡು ಬೇಕಾಯಿತು.

ಜರ್ಮನ ಅಲ್ಪ ಸಂಖ್ಯಾತರಿಗೂ ಈ ನಿವೃತ್ತ ಸರಕಾರಕ್ಕೂ ಬಹಳ ಮೈತ್ರಿ ಇತ್ತು. ಹಂಗೇರಿಯು ಈ ರಾಜ್ಯವನ್ನು ನುಂಗಲೆಳಸಿದೆ. ಅದು ಕೂಡದೆಂದು ಸ್ಲೊವಾಕರು ಎನ್ನುವರು. ಜರ್ಮನ ಪತ್ರಿಕೆಗಳು ಸ್ಲೊವಾಕರಲ್ಲಿ ಸಹಾನುಭೂತಿ ತೋರಿಸಿವೆ.

ಇದು ಮಾರ್ಚ ತಿಂಗಳು. ಘಟ್ಟನೆ ರಗಳೆಗಳಾಗುವುದು ಈ ತಿಂಗಳಲ್ಲೇ. ೧೯೩೫ನೇ ಮಾರ್ಚಿಯಲ್ಲಿ ಜರ್ಮನಿಯಲ್ಲಿ ಸಮಸ್ತರೂ ಕಡ್ಡಾಯವಾಗಿ ಸೇರಲಾಜ್ಞೆಯಾಗಿತ್ತು. ೧೯೩೬ ಮಾರ್ಚಿಯಲ್ಲಿ ರ್‍ಹೈನ್‌ಲೇಂಡನ್ನು ಜರ್ಮನಿಯು ಭದ್ರಪಡಿಸಿತು, ೧೯೩೮ ಮಾರ್ಚಿಯಲ್ಲಿ ಒಸ್ಟ್ರಿಯವನ್ನು ಜರ್ಮನಿ ನುಂಗಿತು. ೧೯೩೯ನೇ ಮಾರ್ಚಿಯಲ್ಲಿ ಏನಾಗಬಹುದು?

ತಾ ೧೧ರಲ್ಲಿ, ಜರ್ಮನ ಪಕ್ಷದವರ ಮಂದಿರವನ್ನು ಜೆಕ್ಕ ಸೈನ್ಯವು ವಶಪಡಿಸಿಕೊಂಡಿತು. ಜರ್ಮನ್ ಪಕ್ಷದ ಅಧಿಕಾರಿಗಳಲ್ಲಿ ಹಲವರನ್ನು ಸೆರೆಯಲ್ಲಿಡಲಾಗಿದೆ. ದಂಡಿನವರು ಜರ್ಮನರನ್ನು ಹಿಂಸಿಸುವ ವಾರ್ತೆ ಹರಡಿದೆ.

ಹೊಸ ಮಂತ್ರಿಗಳು ಅಧಿಕಾರಕ್ಕೆ ಬಂದರು.

ಹರ್ ಕುಂಟ್‌ನು ಜರ್ಮನಿಯಲ್ಲಿ, ಮೂರು ದಿನವಿದ್ದು ಮರಳಿ, ಹೊಸ ಜರ್ಮನ್ ಪಕ್ಷವನ್ನು ಸೃಷ್ಟಿಸಿರುವನು. ಸುಡೆಟನ್ ಜರ್ಮನ್ ಪಕ್ಷವು ಸಪ್ಟಂಬರಿನಲ್ಲಿ ಅಂತ್ಯವಾಗಿದೆ.

ಶುಕ್ರವಾರ ಇದ ದಂಗೆಯಲ್ಲಿ ಮೂವರು ಸತ್ತರು. ಹೆತ್ತೊಂಬತ್ತು ಮಂದಿ ಹ್ಲಿಂಕಾ ಗಾರ್ಡುಗಳನ್ನು ಇತ್ತೀಚೆಗೆ ಕೊಂದಿರುವ ಅಪ್ಪ ಪ್ರಕಟವಾಗಿದೆ.

ಜರ್ಮನಿ-ಸ್ಲೊವಾಕಿಯದೊಳಗೆ ಸ್ವಲ್ಪ ಅಭಿಪ್ರಾಯ ಭೇದವಿದೆ. ಅದನ್ನು ತ್ವರೆಯಲ್ಲಿ ಮಾಗಿಸಲಾದೀತೆಂದು ಮುಖ್ಯ ಮಂತ್ರಿಗಳೆಂದರು. ಚಿಕ್ಕದಾದ ಸೈನ್ಯಾಲಯದ ನೆರವು, ಮಂತ್ರಿಮಂಡಲವನ್ನು ಬಲಪಡಿಸಲು ಬಳಸಿದೆ.

ತಾ. ೧೨ರಲ್ಲಿ ಜೆಕ್ಕ ಸೈನ್ಯಗಳು ಒಂದು ಲಕ್ಷದಿಂದ, ಒಂದೇ ಲಕ್ಷಕ್ಕೆ ಇಳಿಸಲಾಯಿತು.

ತಾ. ೧೩ರಲ್ಲಿ, ದಂಡಿನ ಕಾರುಗಳ ಶಸ್ತ್ರಸಜ್ಜಿತವಾಗಿ ರಾಜಧಾನಿಯಲ್ಲೆಲ್ಲ ತಿರುಗಾಡತೊಡಗಿದುವು. ಜನರ ಉದ್ವಿಗ್ನಗೊಂಡಿರುವರ.

ಹ್ಲಿಂಕಾ ಗಾರ್ಡುಗಳು ಚಳುವಳಿಯನ್ನೇ ಹೂಡಿದರೂ ಹೋರಾಡಿ, ಹನ್ನೊಂದು ಮಂದಿ ಸತ್ತರು.

ಹೊಸ ಸ್ಲೊವಾಕ ಮಂತ್ರಿಗಳ ಪ್ರಮಾಣ ಮಾಡಿ ಆಸನವೇರಿದರ. ಪಾರ್ಲಿಮೆಂಟನ್ನು ಈಗ ಕರೆಯಲು ಅನುಕೂಲವಾಗಿಲ್ಲವೆಂದು ಅಧ್ಯಕ್ಷರು ಸಾರಿರುವರು.

ಜರ್ಮನ್ ರಾಜ್ಯದಿಂದ ಹತ್ಯಾರಗಳು ತುಂಬ ಇತ್ತ ಬರುತ್ತವೆ (ಕಳ್ಳಾಟಿಕೆಯಿಂದ). ಮಂತ್ರಿಗಳು ಫೆಡರಲ್ ಸರಕಾರದೊಡನೆ ಚರ್ಚೆಗೆ ತೆರಳಿರುವರು.

ಜರ್ಮನರನ್ನು ಬಹಳ ಹಿಂಸಿಸುತ್ತಾರೆಂದು ರಿಪೋರ್ಟುಗಳು ಜರ್ಮನಿಗೆ ತಲುಪುತ್ತಲೇ ಇವೆ—ಹೊಳೆ ನೀರು ಹರಿದಂತೆ! ಕಳೆದ ವರ್ಷದ ಸೆಪ್ಟೆಂಬರಿನಷ್ಟೆ ದೂರುಗಳು ನೆರೆಯೇರಿರುವುವು.

ಜೆಕೊಸ್ಲೊವಾಕಿಯ ಸರಕಾರವನ್ನು ಕಠಿಣವಾಗಿ ಟೀಕಿಸಿ ಪತ್ರಿಕೆಗಳು ಬರೆದಿವೆ. ಮುಂದಿನ ವಾರ ಏನಾದೀತು?

ತಾ. ೧೫ರಲ್ಲಾದರೂ, ಇಡೀ ಜಗತ್ತಿಗೆ ಸ್ಲೊವಾಕಿಯದ ಪ್ರಶ್ನೆಯು ಒಂದು ಗೋಪನವಾಗಿಯೆ ನಿಂತಿದೆ. ಎರಡು ದಿನಗಳಿಂದಲೂ, ಪರದೆಯ ಹಿಂದೆ ನಡೆಯುತ್ತಿರುವುದೇನೆಂದು ತಿಳಿದಿಲ್ಲ. ಹೊಸ ಮಂತ್ರಿ ಕೂಟದ ನಿರ್ಮಾಣವೆಂಬುದು, ಸದ್ಯದ ಸಮಾಧಾನಕ್ಕಾಗಿಯಂತೆ. ಹೊಸ ಮಂತ್ರಿಗಳು ಒಂದು ಪಕ್ಷ, ಎಳೆಯ ರಾಡಿಕಲ್ ಪಂಗಡ ಒಂದು ಪಕ್ಷ—ಹೀಗೆ ಇತ್ತಂಡಗಳು ಉಂಟಾಗಿವೆ.

ಜರ್ಮನರು ಅಲ್ಪ ಸಂಖ್ಯಾಕರಾದರೂ ತಮ್ಮ ಬೆನ್ನ ಹಿಂದೆ ಇಡೀ ಜರ್ಮನಿಯಿದೆ ಎಂದು ಕೂಗುತ್ತಿರುವರು.

ಒಸ್ಟ್ರಿಯವನ್ನು ಜರ್ಮನಿಗೆ ಸೇರಿಸಿ ಒಂದು ವರ್ಷವಾಯಿತು. ಬ್ರೆಟಿಸ್ಲಾವಾದಲ್ಲಿ ಉತ್ಸವ. ೧೦,೦೦೦ ಜನರ ಗದ್ದಲ.

ಜೆಕ್ಕರಲ್ಲಿ ಇದಕ್ಕೆಲ್ಲ ವಿರೋಧವೆಂದು ಸ್ವಸ್ತಿಕವನ್ನು ಇಳಿಸಿ, ಹರಿದು ಹಾಕಿದರೆಂದು, ಜರ್ಮನ ಹೊಟೆಲುಗಳನ್ನು ಪುಡಿಗೈದರೆಂದು ಮೊದಲಾಗಿ ವಾರ್ತೆಗಳು ಹರಡಿವೆ.

ಡಾ। ಬೆನೆಶರು ಮರಳಿ ಬರಬೇಕಾಗಿ ಜೆಕ್ಕರು ಈ ವಾರದಲ್ಲಿ ಪ್ರಯತ್ನಿಸ ನರಂತೆ ಎಂದು ಜರ್ಮನ್ ಪತ್ರಗಳು ಎನ್ನುತಿವೆ.

ಜರ್ಮನ ಅರಸುತನದೊಳಗೆ ಸ್ಲೊವಾಕರದೊಂದು ಪ್ರತ್ಯೇಕ [illegible] ಆದೀತೆಂದು ನಂಬುತ್ತಾರೆ.

[illegible]

ಸ್ಲೊವಾಕಿಯಾ

ತಾ ೧೪-೩-೩೯

ಜೆಕೊಸ್ಲೊವಾಕಿಯದ ದುರವಸ್ಥೆ [illegible] ಬರ್ಲಿನಲ್ಲಿ [illegible] ತೋರಿಸಿರುವರು. [illegible] ಪ್ರಾರಂಭಿಸಿದರೆಂದೂ ವಾರ್ತೆಗಳು ಹರಡಿವೆ.

ಹಿಟ್ಲರು ಜೆಕ್ಕರಿಗೆ ಕೊನೆಯ ರಾಯಸ ಕಳಿಸಿರುವನು. ಆಲ ತಾಸುಗಳಲ್ಲಿ ನಿರ್ಧಾರವಾಗಲೇ ಬೇಕು, ಜೋಕೆ! ಎಂದೇ ಮಾತು, ಎಂದು ಪತ್ರಿಕೆಗಳು ಲಂಡನಿನಲ್ಲಿ ವಾರ್ತೆ ಕಳಿಸಿದವು.

ಹಂಗೇರಿ ರಾಜ್ಯವು ಕಲ್ಲಾಗಿಕೊಂಡಿದೆ. ಇದರ ತೀರ ಸಮೀಪಕ್ಕೆ ಎರಡೂ ಕಡೆ ಜರ್ಮನಿ ಬಂದು ನಿಲುವುದು. ಗಡಿಯಾಚೆಗೆ ಏನಾದರೂ ಸ್ಲೊವಾಕಿಯವೇ ನೋಡಿಕೊಳ್ಳಲಿ, ಒಳನುಗ್ಗಿದರೇನು ಗತಿ? ಎಂದೇ ಇವರ ಚಿಂತೆ. ಜರ್ಮನಿ ಇನ್ನು ಹಂಗೇರಿಯನ್ನು ನುಂಗುವುದಾಗಿ ಹೊಸ ಯೋಜನೆಗೆ ಅವಕಾಶವುಂಟಾಗಿದೆ!

ಜರ್ಮನ್ ಅಧಿಕಾರಿಗಳು ಮೌನ ಹಿಡಿದು ಕುಳಿತಿರುವರು.

ಬ್ರೆಟಿಸ್ಲಾವಾ (ಸ್ಲೊವಾಕಿಯದ ರಾಜಧಾನಿ) ಶಾಂತವಿದೆ. ನಾಲ್ಕು ಸಿಡಿಗುಂಡುಗಳು! ಆರು ಜನ ಸತ್ತರು! ಮೋಟಾರು ಸೈನ್ಯವು ಗಡಿಗೆ ಜರ್ಮನಿಯಿಂದ ಬಂದು ತಲುಪಿದೆ.

ಜರ್ಮನ ರಿಜರ್ವ ಸೈನ್ಯವೂ ಬವರಿಯದ ಸೈನ್ಯವೂ ಗಡಿಗೆ ತಲುಪಿವೆ.

ತಾ ೧೫-೩-೩೯.

ಜೆಕೊಸ್ಲೊವಾಕಿಯಾ ರಾಜ್ಯವೆಂಬುದು ಇನ್ನಿಲ್ಲವೆಂದಾಯಿತು. ಎಲ್ಲವೂ ಜರ್ಮನಿಯ ಅಧಿಕಾರ ಸೇರಿತು.

ಮುಂದೆ—ಹಂಗೇರಿ? ಅನಂತರ—ಯುಕ್ರಾಯಿನ್!

ಇಲ್ಲಿಗೆ ಈ ವರ್ಷದ ಮಾತು.

ಸ್ಲೊವಾಕಿಯ ರುಥೇನಿಯಗಳು 'ಪ್ರಾಂತಿಕ ಸ್ವರಾಜ್ಯ' ಪಡೆವುವು. ಜರ್ಮನರಿಗೆ ಪ್ರಾಣ ಮತ್ತು ಸೊತ್ತಿನ ರಕ್ಷಣೆ ಸಿಗುವುದು.

ಜೆಕ್ಕ ಸರಕಾರವು ರಾಜೀನಾಮೆ ಕೊಡುವುದು.

ಹಂಗೇರಿಯು ರುಥೇನಿಯದ ಮೇಲೆ ಕಣ್ಣಿಟ್ಟಿತ್ತು, ಈಗ ಅದರ ಪ್ರಾಣಕ್ಕೇ ಭಯ ಹಿಡಿದಿದೆ.

ಪೆಲೆಸ್ತೀನ—ಬಲುಚಿಸ್ಥಾನ.

ಕೊಂಗ್ರೆಸಿನ ನಿರ್ಣಯ.

ಬ್ರಿಟಿಷ ಸಾಮ್ರಾಜ್ಯಶಾಹಿಯೊಡನೆ ವಿರೋಧವಾಗಿ ಹೋರಾಡುತ್ತ ತಮ್ಮ ಸ್ವಾತಂತ್ರ್ಯ ರಕ್ಷಣೆಗಾಗಿ ಸಾಧನೆ ಮಾಡುವ ಅರಬ ಜನಾಂಗದೊಡನೆ ಕೊಂಗ್ರೆಸು ಮೊದಲೇ ಸಹಾನುಭೂತಿ ತೋರಿಸಿಯದೆ. ಪೆಲೆಸ್ತೀನದಲ್ಲಿ ಬ್ರಿಟಿಷರು ಕೈಗೊಂಡಿರುವ ನೀತಿಯನ್ನು ನಿಷೇಧಿಸಿಯದೆ. ಬ್ರಿಟಿಷ ಸೈನ್ಯವೂ ಪೊಲೀಸರೂ ಭಯ ಪ್ರದರ್ಶನ ಮಾಡುತ್ತಿರುವುದನ್ನು ಅದೆಲ್ಲ ನ್ಯಾಯ ಮತ್ತು ಶಾಂತಿಗಳ ಹೆಸರಲ್ಲಿ ಎನ್ನುವುದನ್ನು ತಿಳಿದಿದೆ. ಅರಬರು ಈ ಹೋರಾಟದಲ್ಲಿ ಪ್ರದರ್ಶಿಸಿರುವ [illegible] ಸಾಹಸ [illegible] ಇಂಡಿಯಾ ವಾಸಿಗಳ ಚಿತ್ತರಾಗಿ [illegible] ಅರಬರಿಗೆ [illegible] ಭಾರತವಾಸಿಗಳ [illegible] ಅಭಿನಂದಿಸುತ್ತಾರೆ. [illegible] ಮೊದಲಾಗಿ ಯೆಹೂದ್ಯರಿಗೆ [illegible] ಹಿಂಸೆಗಾಗಿ ಕಳವಳಿಸುತ್ತಲಿರುವ [illegible] ಯೆಹೂದ್ಯರು ಬ್ರಿಟಿಷ ಶಸ್ತ್ರಬಲಗಳ [illegible] ಮೇಲೆ ಭರವಸೆಯಿಟ್ಟು ಅವರ ಸಹಾಯದಿಂದ ಬ್ರಿಟಿಷ ಸಾಮ್ರಾಜ್ಯಶಾಹಿಯು [illegible] ಕೊಂಗ್ರೆಸು [illegible] ಅರಬರೂ ಯೆಹೂದ್ಯರೂ ಒಂದಾಗಿದ್ದು ಸಹಕರಿಸಿ ಪೆಲೆಸ್ತೀನದಲ್ಲಿ ಪ್ರಜಾಸತ್ತೆಯನ್ನು ಸ್ವತಂತ್ರವಾಗಿ ಅನುಭವಿಸಿ [illegible] ಯೆಹೂದ್ಯರಿಗೆ [illegible] ರಕ್ಷಣೆಯನ್ನು [illegible] ಆಶಿಸುತ್ತದೆ.

ಬ್ರಿಟಿಷ ಬಲುಚಿಸ್ಥಾನವನ್ನು [illegible] ರೀತಿಯಲ್ಲಿ ಇನ್ನೂ ಆಳುತ್ತಿರುವ ಪ್ರಯುಕ್ತ, ಇನ್ನು ವಿಳಂಬಿಸದೆ ಆ ಪ್ರಾಂತ್ಯದಲ್ಲಿ ಜವಾಬ್ದಾರಿಯ ಸರಕಾರವನ್ನು ಪ್ರಜಾಸತ್ತೆಗೆ ಅನುಕೂಲವಾಗ [illegible] ಸ್ಥಾಪಿಸಬೇಕಾಗಿಯೂ, ಇತರ ಬ್ರಿಟಿಷ ಪ್ರಾಂತ್ಯಗಳ ಗೌರವವನ್ನೆ ಆ ಪ್ರಾಂತ್ಯಕ್ಕೆ ಕೊಡಬೇಕಾಗಿಯೂ ಕೊಂಗ್ರೆಸು ಕೇಳುತ್ತದೆ.

ನಮ್ಮ ಜನಹಿತವತ್ಸಲರಾಗಿರುವ ದಿವಾನ್ ಬಹದ್ದೂರ ಶ್ರೀ। ಎನ್ ವಿ. ವೆಲ್ಲೋಡಿ, ಐ ಸಿ ಎಸ್ ಇವರಿಗೆ ಇಲ್ಲಿಂದ ವರ್ಗವಾಗಿ, ಅವರ ಬದಲಾಗಿ,—ಖಾನ್‌ಬಹದ್ದೂರ್ ಶರೀಫ ಅಹ್ಮದ ಅಲಿ, ಐ ಸಿ ಎಸ್ ಏನ ಕೊಂಡಾ ಸಬ್‌ಕಲೆಕ್ಟರು ಬರುವರು. ಶ್ರೀ। ವೆಲ್ಲೋಡಿಯವರು ಇಂಡಿಯಾ ಸರಕಾರದ ರೈಲ್ವೆ ಇಲಾಖೆಯಲ್ಲಿ ಕೆಲಸನೋಡುವರು.

ಫ್ರೆಂಕೋ ಮಹಾಶಯನು

ಹಿಟ್ಲರ—ಮುಸಲೋನಿಗಳನ್ನು ಸದ್ಯದಲ್ಲೇ ಕಂಡು ಮುಂದಣ ವರ್ತನದಲ್ಲಿ ಒಂದಾಗಿ ನಡೆವ ರೀತಿ ಹುಡುಕುವನು

ಹಿಂದಿನಂತೆಯಾದರೆ ಸಾವಿರ ವರ್ಷಗಳು ಬೇಕು

ಈಗಿನಂತೆಯಾದರೆ ಹದಿನೈದೇ ವರ್ಷಗಳು ಸಾಕು

ಸಾಮುದಾಯಿಕ ಶಿಕ್ಷಣ ಪ್ರಚಾರದ ಕುರಿತು ಡಾಕ್ಟರ ಲೋಬಾಕರ ಅಭಿಪ್ರಾಯ

ನಮ್ಮ ದೇಶದ ಒಂಭತ್ತು ಪ್ರಾಂತ್ಯಗಳಲ್ಲಿ ಕಾಂಗ್ರೆಸ ಮಂತ್ರಿಮಂಡಲಗಳು ಅಧಿಕಾರ ಸೂತ್ರವನ್ನು ತಮ್ಮ ಕೈಗೆ ತೆಗೆದುಕೊಂಡ ಬಳಿಕ ಈ ಪ್ರಾಂತ್ಯಗಳಲ್ಲಿ ಹಲವಾರು ಸುಧಾರಣೆಗಳು ಆಗಿರುವವು. ಅನೇಕ ದೇಶೋನ್ನತಿಯ ಯೋಜನೆಗಳು ಸಿದ್ಧವಾಗಿ ಕಾರ್ಯರೂಪಕ್ಕೆ ಬಂದಿರುವವು. ಮದ್ರಾಸಿನಲ್ಲಿ ಮದ್ಯ ನಿಷೇಧ, ಬೊಂಬಾಯಿಯ ಮಜೂರ ಹಿತಸಾಧನೆ, ಸಂಯುಕ್ತ ಪ್ರಾಂತ್ಯದ ರೈತರ ಸುಖಸಾಧನೆ, ಬಿಹಾರದ ಶಿಕ್ಷಣ ಪ್ರಚಾರ ಇವೆಲ್ಲ ಈಗ ಪ್ರಸಿದ್ಧವಿರುವವು. ಕಾಂಗ್ರೆಸ ಪ್ರಾಂತ್ಯಗಳಲ್ಲಿ ಇಂಥ ಸುಧಾರಣೆಗಳಾಗಿ ಜನರು ಮೊದಲಿಗಿಂತ ಉತ್ತಮ ಸ್ಥಿತಿಗೆ ಬರುತ್ತಿರುವಾಗ, ಕಾಂಗ್ರೆಸೇತರ ಪ್ರಾಂತ್ಯಗಳಲ್ಲಿ ಜನರ ಸ್ಥಿತಿಗತಿಗಳು ಮೊದಲಿನಂತೆಯೇ ಇರುವವೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಕಾಂಗ್ರೆಸ ಮಂತ್ರಿಮಂಡಲಗಳ ಈ ಕಾರ್ಯಸಾಧನೆಯನ್ನು ಕಂಡು ಆಗಾಖಾನ, ಮೊದಲಾದ ಕಾಂಗ್ರೆಸಿನೊಡನೆ ಸಹಾನುಭೂತಿ ಕೂಡ ಇರದ ಜನರು ಸಂತೋಷಪಟ್ಟು ಶ್ಲಾಘಿಸಿರುವರೆಂದ ಬಳಿಕ, ಈ ಮಂತ್ರಿಮಂಡಲಗಳ ಶ್ಲಾಘನೆಯಲ್ಲಿ ಸತ್ಯವು ಇರಲಿಕ್ಕೇ ಬೇಕು.

ಲೋಬಾಕರ ಪ್ರಶಂಸೆ

ಇಂಗ್ಲಿಷರು ನಮ್ಮ ದೇಶವನ್ನು ಆಳಲಾರಂಭಿಸಿ ೧೫೦ ವರ್ಷಗಳು ಮುಗಿದುಹೋದರೂ ಇಷ್ಟರ ತನಕ ಈ ದೇಶದಲ್ಲಾದ ಶಿಕ್ಷಣ ಪ್ರಚಾರವು ಬಹು ಸ್ವಲ್ಪವಾಗಿರುವುದು. ಈಗಲಾದರೂ ೧೦೦ಕ್ಕೆ ೮ ೧೦ ಮಂದಿ ಮಾತ್ರ ಅಕ್ಷರಜ್ಞಾನವನ್ನು ಸಂಪಾದಿಸಿದವರು ಇದ್ದಾರೆ. ಇದೇ ರೀತಿ ಶಿಕ್ಷಣ ಪ್ರಚಾರವಾಗುವುದಾದರೆ ನಮ್ಮ ದೇಶದ ಜನರು ಪೂರ್ಣ ಸಾಕ್ಷರರಾಗಲಿಕ್ಕೆ ಕನಿಷ್ಠ ಪಕ್ಷ ಸಾವಿರ ವರ್ಷಗಳಾದರೂ ಬೇಕಾಗಬಹುದು. ಪರಂತು ಒಂದು ದೇಶದ ಸರ್ವತೋಮುಖವಾದ ಉನ್ನತಿಯಾಗಲಿಕ್ಕೆ ದೇಶವು ಪೂರ್ಣ ಶಿಕ್ಷಿತವಾಗುವುದು ಎಷ್ಟು ಅವಶ್ಯಕವೆಂಬುದನ್ನು ಆಲೋಚನೆಗೆ ತೆಗೆದುಕೊಂಡರೆ, ನಮ್ಮ ದೇಶವು ಸಾವಿರ ವರ್ಷಗಳ ತನಕ ಕಾಯುವ ಮಾತು ಹಾಗಿರಲಿ ಇಪ್ಪತ್ತು ಮೂವತ್ತು ವರ್ಷಗಳ ತನಕ ಕೂಡ ಕಾದಿರಬಾರದೆಂಬುದು ಗೊತ್ತಾಗಬಹುದು. ಆದ್ದರಿಂದ ಬಿಹಾರದ ಕಾಂಗ್ರೆಸ ಮಂತ್ರಿಮಂಡಲವು ಶಿಕ್ಷಣ ಪ್ರಚಾರದ ಕಡೆಗೆ ತನ್ನ ಮುಖ್ಯ ಲಕ್ಷ್ಯವನ್ನು ಕೊಟ್ಟಿದೆ. ಮಿ. ಲೋಬಾಕರ ಅಂತರ್‌ರಾಷ್ಟ್ರೀಯ ಶಿಕ್ಷಣ ಪ್ರಚಾರ ಸಮಿತಿಯ ಕಾರ್ಯಕರ್ತರು. ಅವರು ಈಗ ಭಾರತ ಸಂಚಾರ ಮಾಡುತಲಿದ್ದಾರೆ. ಬಿಹಾರದಲ್ಲಿ ಕಾಂಗ್ರೆಸು ಅಧಿಕಾರಕ್ಕೆ ಬಂದಮೇಲೆ ಆದ ಶಿಕ್ಷಣ ಪ್ರಚಾರದ ಸಾಕ್ಷ್ಯ ನಿರೀಕ್ಷಣ ಮಾಡಿ ಅವರು ಮಂತ್ರಿಮಂಡಲವನ್ನು ಮುಕ್ತಕಂಠದಿಂದ ಶ್ಲಾಘಿಸಿರುವರು. ಬಿಹಾರದ ವಿದ್ಯಾಖಾತೆಯ ಮಂತ್ರಿಗಳಾದ ಡಾಕ್ಟರ ಸಯ್ಯದ ಮಹಮ್ಮದರಿಗೆ ಒಂದು ಪತ್ರವನ್ನು ಬರೆಯುತ್ತಾ ಅವರು ಹೀಗೆಂದಿರುವರು:—

ಪ್ರಪಂಚದ ದೃಷ್ಟಿ ಬಿಹಾರದ ಮೇಲೆ

ಬಿಹಾರದಲ್ಲಿ ಕಳೆದ ಆರು ತಿಂಗಳುಗಳಲ್ಲಿ ನೀವು ಸಾಧಿಸಿದ ಕಾರ್ಯವನ್ನು ನೋಡುವಾಗ ೧೦೦೦ ವರ್ಷಗಳಲ್ಲಿ ಮಾಡಿ ಮುಗಿಸಬಹುದಾದಷ್ಟು ಶಿಕ್ಷಣ ಪ್ರಚಾರವನ್ನು ನೀವು ಹದಿನೈದೇ ವರ್ಷಗಳಲ್ಲಿ ಮಾಡಿ ಮುಗಿಸಬಹುದೆಂದು ನನಗೆ ತೋರುತ್ತದೆ. ಆದ್ದರಿಂದ ನೀವು ಹಿಡಿದ ಈ ಕಾರ್ಯದಲ್ಲಿ ಸಂಪೂರ್ಣ ವಿಜಯಿಗಳಾಗಬೇಕೆಂದೂ, ನೀವು ವಿಜಯಿಗಳಾಗುವಿರೆಂದೂ ನಾನು ಆಶಿಸುತ್ತೇನೆ. ನಿಮಗೆ ಈ ಕಾರ್ಯದಲ್ಲಿ ವಿಘ್ನ ವಿಡಂಬನೆಗಳು ಬಂದದಾದರೆ, ಅದರಿಂದ ಬಿಹಾರ ಮತ್ತು ಹಿಂದೂದೇಶಕ್ಕೆ ಮಾತ್ರವಲ್ಲ, ಅಶಿಕ್ಷಿತರಾಗಿರುವ ಪ್ರಪಂಚದ ಅರೆವಾಸಿ ಜನರಿಗೂ ಮಹಾ ನಷ್ಟವು ಸಂಭವಿಸುವುದು. ಆದ್ದರಿಂದ ಬಿಹಾರದಲ್ಲಾಗುತ್ತಿರುವ ಶಿಕ್ಷಣ ಪ್ರಗತಿಯನ್ನು ಹಿಂದೂದೇಶವೂ ಪ್ರಪಂಚವೂ ಕುತೂಹಲದಿಂದಲೂ ಆತುರದಿಂದಲೂ ನಿರೀಕ್ಷಿಸುತ್ತಲಿವೆ. ನೀವು ಈ ಕಾರ್ಯದಲ್ಲಿ ಅಸಫಲರಾದರೆ ಮತ್ತೆ ಶತಮಾನಗಳ ತನಕ ಹಿಂದುಸ್ಥಾನವು ಅಜ್ಞಾನರೂಪೀ ಅಂಧಕಾರದಲ್ಲಿ ತೊಳಲಬೇಕಾಗುವುದು. ಮತ್ತೆ ಅದು ಶತಮಾನಗಳ ತನಕ ಜ್ಞಾನದ ಬೆಳಕನ್ನು ಕಾಣಲಾರದು."

ಜನರ ಕರ್ತವ್ಯ

ಆದ್ದರಿಂದಲೇ ಜನರು ಕಾಂಗ್ರೆಸಿಗೆ ಸೇರಿಕೊಂಡು ಈ ಕಾಂಗ್ರೆಸೀ ಮಂತ್ರಿಮಂಡಲಗಳು ಕೈಕೊಂಡಿರುವ ರಾಷ್ಟ್ರನಿರ್ಮಾಣ ಮತ್ತು ದೇಶಾಭಿವೃದ್ಧಿಯ ಶಿಕ್ಷಣ ಪ್ರಚಾರ ಮದ್ಯ ನಿಷೇಧ ಮೊದಲಾದ ಕಾರ್ಯಗಳಲಿ ಅವುಗಳಿಗೆ ಸಂಪೂರ್ಣ ಸಹಕಾರಗಳನ್ನು ಕೊಡುವುದು ಅವರ ಕರ್ತವ್ಯವೆನ್ನುವೆವು.

೧೫-೩-೩೯

ನವಾಥಿಲ್ಲಿಯಲ್ಲಿ ಮಹಾತ್ಮರು ವೈಸ್ರಾಯರನ್ನು ಸಂದರ್ಶಿಸಿ ನಾಲ್ಕು ತಾಸು ಸಂಭಾಷಿಸಿ, ರಾಜಕೋಟೆ ಕೀರ್ಮಾನವನ್ನು ವಿಳಂಬಿಸಬಾರದೆಂದು ಸೂಚಿಸಿ ಉಪವಾಸೀ ರಾಜಕೀಯ ಕೈದಿಗಳ ಉಪವಾಸ ಮುಗಿಸಿ ಮರಳಿರುವರು.

ಶ್ರೀ ಸ ಭಾಷಘೋಸರು

ಕಾ[illegible]ಳರಲ್ಲಿ ೧೦ತಿ ತಿಗ್[illegible] ವಾಸವಿದ್ದರು ಒಂದು ವಾರ ಜವಾಡೋಬ ಎಂಬಲ್ಲಿ ಅವರು [illegible]ದರ ಸ ಧೀರ ಎಂದ [illegible]ಸಲ್ಲಿದವರು ಧನಬಾದ ದ (ಇಸ್ಮಿಲ [illegible] ಬಿಹಾರ) ಸ್ಟ್ರೇಷನಲ್ಲಿಳಿದ. ಅಲ್ಲಿಂದ ಒಂಬತ್ತು ಮೈಲು ದೂರದ ಈ ಗೂರಿಗ ಮನೆ[illegible] [illegible]ನಲ್ಲಿ ಹೇಳಿದರು. ಅತಿ [illegible]ರುವರ ಈ ಆರೋ[illegible] ಸ್ಥಿತ್ಯೆಗೆ ಸಮಾಧಾನವಿದೆ. ಒಂದು ಪಕ್ಷ ಕಳೆವ ವರೆಗೆ ಅವರು [illegible] ಸೇರವಂತಿಲ್ಲ ನ್ಯ[illegible] ವಿದ

ಮೌಲ್ವಿ ಒಬೇದುಲ್ಲಾರವರು

ಕರಾಚಿಯ ಲ್ಲಿ ಸ್ವಾ[illegible] ತಹೊಂದಿದರು. ಇವರ [illegible] ವಯಸ್ಸಿನ ವರೆಗೆ ಹಿಂದುಗಳಾಗಿ ಮತಾಂತರ ಹೊಂದಿ ಮುಸ್ಲಿಮರಾದವರು. [illegible] ವರ್ಷದಿಂದ ಪರದೇಶಗಳಲ್ಲಿ ಸಂಚಾರ ಮಾಡಿದವರು. ಹಿಂದೂ ಮುಸ್ಲಿಮ ಐಕ್ಯತೆಗಾಗಿ ಸಾಧಿಸುವುದೇ ಇವರ ಮುಂದಿನ ವಿಚಾರವಾಗಿದೆ.

ಒನರೆರಿ ಮೆಜಿಸ್ಟ್ರೇಟರು

ಇನ್ನು ಬರೇ ಎರಡು ವರ್ಷಗಳ ವರೆಗೆ [illegible] ಮಕಹೊಂದುವರು. ಹಾಲಿಯವರಿಗೆ ಇದು ಲಗಾ[illegible]ಗುವುದಿಲ್ಲ.

ಸ್ವಾಮಿ ಭರತಾನಂದರು ಹಿಂಧರಾಜ್ಯದ ಸುಧಾರಣೆಗಳನ್ನು ಮಾಡಲು ಮಹಾತ್ಮಾಜಿಯವರಿಗೆ ಸಹಾಯ ಮಾಡಿದರು. ಇವರು ಇಲ್ಲಿಗೆ ಒಂದು ಮಠ ಮತ್ತು ಶಿಕ್ಷಣ, ವಾರ್ಧಾ ಯೋಜನೆ ಮೊದಲಾದುವುಗಳನ್ನು ಕುರಿತು ಉಪನ್ಯಾಸ ಕೊಟ್ಟಿದ್ದರು. ಇವರು ಮೈಸೂರು ಗವರ್ನಮೆಂಟ್ ಇಲೆಕ್ಟ್ರಿಕ್ ಫೆಕ್ಟರಿಯ ಸುಪರಿಂಟೆಂಡೆಂಟರಾಗಿದ್ದಾರೆ. ಶ್ರೀರಾಮನ ಮ ಹರ್ಷಿಯ ಶಿಷ್ಯರು.

ಸಾಮಂತರಾಜರುಗಳಿಗೆ ವೈಸ್ರಾಯರ ಸೂಚನೆಗಳು

ಪುನಃ ವೈಸ್ರಾಯರು ನರೇಂದ್ರಮಂಡಲದಲ್ಲಿ ಬೋಧಪ್ರದವಾದೊಂದು ಭಾಷಣ ಮಾಡಿರುವರು. ಈ ಭಾಷಣದಲ್ಲಿ, ಎಷ್ಟೋ ವೇಳೆ ಅಸತ್ಯದಿಂದ ವಿಷಯಗಳನ್ನು ಹೂಡಿ ರಾಜರುಗಳನ್ನು ಹಿಂಸೆಮಾಡುವುದುಂಟೆಂಬ ದು ತಮಗೆ ತಿಳಿದಿದೆ ಎಂದು ಅವರೊಡನೆ ಸಹಾನುಭೂತಿ ತೋರಿಸಿದರು. ಆದರೂ, ಇತರ ವಿಷಯವಾಗಿ ಅವರು ಮಾತ್ರ ಮೌನವಾಗಿರಲಿಲ್ಲ. ತಮ್ಮ ರಾಜ್ಯಗಳಲ್ಲಿ ಸ್ವತಃ ಎಲ್ಲ ವಿಷಯಗಳಲ್ಲಿ ಪ್ರಜಾಹಿತ ನೋಡುತ್ತ, ಪ್ರಜೆಗಳಿಗೆ ತೃಪ್ತಿಯುಂಟೆಂಬುದನ್ನು ಖಂಡಿತ ತಿಳಿದುಕೊಂಡು ವಿಚಾರ ಮಾಡುತ್ತ, ವಿಶೇಷ ಅನವಶ್ಯಕವಾದ ತೆರಿಗೆಗಳನ್ನು ಹೇರಿಸದೆ ಪ್ರಜೆಗಳ ಎಕ್ಕ ಜೀವನವನ್ನು ಸುಖಗೊಳಿಸುತ್ತ, ರಾಜ್ಯದ ಅಧಿಕಾರಿಗಳ ಹೆಸರಲ್ಲಿ ಅನಾಚಾರಗಳಾಗದಂತೆ ಎಚ್ಚರವಿಡುತ್ತ, ಪ್ರಜೆಗಳ ಸತ್ಯವಾದ ದೂರುಗಳನ್ನು ಕೂಡಲೆ ವಿಚಾರಿಸಿ ತೀರ್ಮಾನಿಸುತ್ತ ಇರುವುದು ಅಗತ್ಯವೆಂದರು.

ರಾಜ್ಯದಲ್ಲಿ ಇಂದೇ ಪರದಾಸ್ಯಗಳಲ್ಲಿ ನ[illegible]ರ ಮಾಡುತ್ತಿರುವುದೂ ಪ್ರಜೆಗಳನ್ನು ಪೀಡಿಸುವುದೂ [illegible]ದದೆ ದ [illegible] ರೀತಿಯಲ್ಲಿ ವಿವರಿಸಿದರು. ಪ್ರಜೆಗಳ ಹಿತಕ್ಕೆ [illegible] ಯೋಗವಾಗ ದ ಧನವನ್ನು ವಿಲಾಸದ [illegible] [illegible]ಗಿಯ [illegible] ವ್ಯಯ ಪರಿ[illegible] ಪ್ರಜೆಗಳ ಮೇಲೆ [illegible] [illegible] [illegible]ದರ ಸ[illegible]ದೆ ದರು. [illegible] ಯಾಗಿದೆಯೆ" ಎಂದ [illegible] ಪಕ್ಷ ದರ್ಬಾರಿ[illegible] [illegible] ಹೆಚ್ಚಿಸುವೆಂದು [illegible]ಸಿದರು. [illegible] [illegible] ಎಂದೆ[illegible] ಹೇಳಿದರು.

[illegible] "[illegible] ರಾಜರ ಪ್ರಜೆ[illegible] ಎಷ್ಟೋ ರೀತಿ [illegible] [illegible] ಎಷ್ಟೋ ವಿಧವಾಗಿ [illegible] ರಾಜ್ಯಭಾರ ತಪ್ಪಿ ನಡೆದಿರುವರು ಎಂದು ಕಾಂಗ್ರೆಸಿನ ಹೇಳುತ್ತಿರುವೆ? ಆದರೂ ಈ ತರ ರಾಜ್ಯಗಳಲ್ಲಿ ಪಕ್ಷಗಳಿವೆ, ದಾರುಗಳಿವೆ, ಅಸ್ವೀಷಗಳಿವೆ. ಇವನ್ನೆಲ್ಲ ವಿಚಾರಿಸದಾಗದು ಪಕ್ಕನೆ ಕೂಡಲೆ, ಹಾಗೆ ಆಗಬೇಕೆನ್ನುವ ಇಂಥ ಇಯವರು ಈ ಆತ ರತೆಯಿಂದಲೆ ಚಳವಳಿಗಳಿಗೆ ಪ್ರಾರಂಭವಾಗುವುದು. ಬಹು ಜನರು ಚೆನ್ನಾಗಿ ನೊಂದಿದವರು, ಮತ್ತೂ ಎಷ್ಟು ದಿನ ಪರಿಹಾರಕ್ಕಾಗಿ ಕಾದುಕೊಂಡಿರಲು ಒಪ್ಪುವರು?

"ಪ್ರಜೆಗಳಿಗೆ ಕಂಡಿಪಸಿಸ ವಾತನು ತನ್ನಲ್ಲಿ ಪ್ರಜಾಕರಗಳಿಗೆ ಸಮಾನವಾದ ಮಮತೆ ಸಲಕರಣೆಗಳು ಸಲ್ಲುತ್ತಿವೆಯೋ ಇಲ್ಲವೆ ಎಂಬುದನ್ನು ನೋಡಿಕೊಳ್ಳಬೇಕಾಗಿವೆಯೇ ಸಂಸ್ಥಾನದ ಅಷ್ಟು ಯೋಗ್ಯ ಅಂಶವು ಪ್ರಜೆಗಳ ಹಿತಕ್ಕಾಗಿ ವ್ಯಯವಾಗುವುದೆಯೋ ಇಲ್ಲವೇ ಎಂಬುದನ್ನು ನೋಡಿಕೊಳ್ಳಬೇಕು. ವಿಶೇಷಾಂಶವನ್ನು ಸ್ವಂತ ಖರ್ಚಿಗಾಗಿ ವಿನಿಯೋಗಿಸಬಾರದು" ಎಂದೂ ವೈಸ್ರಾಯರೆಂದರು. ರಾಜ್ಯಗಳಲ್ಲಿನ ಬಜೇಟುಗಳು, ಪ್ರಜಾಹಿತಕ್ಕಾಗಿ ವ್ಯಯವಾಗುವ ಮೊಬಲಗು, ಸ್ವಂತದ ಖರ್ಚು, ಕೌನ್ಸಿಲ ಪ್ರಶ್ನೋತ್ತರಗಳು ಇನ್ನು ನೋಡಿದರೇ ಈ ವಿಷಯವು ವ್ಯಕ್ತವಾಗುವುದು.

ಮುನ್ನಡೆದ [illegible]ದರೇ ರಾಜ್ಯಗಳ ದೊರೆಗಳ ಚಿಕ್ಕಪುಟ್ಟ ರಾಜ್ಯಗಳಿಗೆ ವಿವೇಕದ ಹಾದಿ ತೋರಿಸುವುದು ಉತ್ತಮವೆಂದೂ, ಈ ಸಣ್ಣ ರಾಜ್ಯಗಳೆಲ್ಲ [illegible] ಸರಹದ್ದಿನವರಾಗಿರುವಲ್ಲಿ ಒಂದಾಗಿ ಒಂದೇ ಬಗೆಯಲ್ಲಿ ರಾಜ್ಯಭಾರವನ್ನು ತಿದ್ದುವುದು ಉತ್ತಮವೆಂದೂ ವೈಸರಾಯರು ಬೋಧಿಸಿರುವರು.—ಮುಂದೇನು?

ರಾಜಕೋಟೆಯ [illegible]ರು

ತಮ್ಮ ಪರವಾಗಿ ಫೆಡರಲ್ ನ್ಯಾಯಮೂರ್ತಿಗಳ ಮುಂದೆ ವಾದಿಸಲು ಸರ್ ಸಿ. [illegible] ರಾಮ ಸ್ವಾಮಿ ಅಯ್ಯರರನ್ನೇ ವಕಾಲತು ವಹಿಸಬೇಕೆಂದರಂತೆ! ಅವರಿಗೆ ವಕಾಲತು ಬಿಡಿಯದೆ ಕಾಲ ಎಸಿದೆ, ಒಂದು ರಾಜ್ಯದ ಅಧಿಕ [illegible] ವಕಾಲತ್ತಿಗೆ ಅವಕಾಶವಿಲ್ಲ ಎಂದು ಅವರು ಹಿಂದೆಗೆದರೆಂದೂ ಪ್ರಕಟವಾಗಿದೆ.

ಶತಮಾನಗಳ ಅನಂತರ–

ಎರಡು ತಲೆಗಳ ಮನುಷ್ಯರು ಜನ್ಮಕ್ಕೆ ಬರುವರು"

ಆಧುನಿಕ ವಿಜ್ಞಾನಿಗಳ ಅದ್ಭುತ ಶೋಧ

ಕೆಲವು ದಿನಗಳ ಹಿಂದೆ ಜಗತ್ತಿನ ಕೆಲವು ಜನ ಸುಪ್ರಸಿದ್ಧ ವಿಜ್ಞಾನಿಗಳನ್ನು ಸನ್ಮಾನಿಸುವ ದಕ್ಕೋಸ್ಕರ ಲಂಡನಿನಲ್ಲಿ ಒಂದು [illegible] ಸಮಾರಂಭವು ನಡೆದಿತ್ತು. ಆ ಸಂದರ್ಭದಲ್ಲಿ ಕೂಡಿದ ವಿಜ್ಞಾನಿಗಳು ಪ್ರಪಂಚದ ಭವಿಷ್ಯ ಮತ್ತು ಮುಂದ್ದಿನ [illegible] ಮೊದಲಾದ ವಿಷಯಗಳ ಮೇಲೆ ಬಹು ಮನೋರಂಜಕವಾದ ಭಾಷಣಗಳನ್ನು ಕೊಟ್ಟರು.

ಪ್ರೊಫೆಸರ ಹಕ್ಸ್ಲೀ

[illegible] ಎ ದು. ಒಂದು ಭಾಷಣವನ್ನು ಕೊಟ್ಟರು. ಇವರ ಅದ್ಭುತ [illegible]ಧನಗಳನ್ನು ಕೇಳಿ ಸಭಿಕರೆಲ್ಲರೂ ಬೆರಗಾದರು. ಹಲವು ಶತಮಾನಗಳು ಕಳೆದ ನಂತರ ನಮ್ಮ [illegible] ತದನಂತರ ಈಗಿರುವ ಒಂದು ತಲೆ [illegible] ಬದಲಿಗೆ ಎರಡು ತಲೆಯ ಮನುಷ್ಯರು [illegible] ಅವರು [illegible] [illegible] ಪ್ರತಿ ಹುಟ್ಟಿದಾಗ ಅವರ ವಿಚಿತ್ರ ಶರೀರ ರಚನೆ [illegible] ಮನುಷ್ಯನ [illegible] [illegible] ಗಳನ್ನು ನಾವು ಕೂಡ ದಿವಲಿಕ್ಕೆ ಯಾವ [illegible] ಯೂ ಎದುರಾದಿದ್ದ ಅವರು ಅಧಿಕ ವಿಸ್ತಾ[illegible] [illegible]

ನಿಕಟ ಭವಿಷ್ಯ

ಎರಡು ತಲೆಯ ಮನುಷ್ಯರು ಹುಟ್ಟುವ ಆ ದೂರದ ಭವಿಷ್ಯವನ್ನು ಕುರಿತು ನಮ್ಮ ಚಿಂತಿಸಬೇಕಾಗಿಲ್ಲ. ನಮ್ಮ [illegible] ನಿಕಟ ಭವಿಷ್ಯವನ್ನು ಕುರಿತು, ಗಂಭೀರವಾಗಿ ಆಲೋಚಿಸಬೇಕು. ನಮಗೆ ಯುದ್ಧ ಭಯವು ಇದ್ದೇ ಇದೆ. ವಂಶ [illegible] ಮತ್ತು [illegible] [illegible] ಅಭಿಪ್ರಾಯಗಳು ಮಾನವ ಕುಟುಂಬದ ಅಸ್ತಿತ್ವಕ್ಕೆ ಭಂಗವನ್ನು ತರುವಂಥವಾಗಿವೆ. ಆದ್ದರಿಂದ ಜರ್ಮನಿಯ ಅನೀತಿಯನ್ನು ಪ್ರಬಲವಾಗಿ ನಿಷೇಧಿಸಿ ಐಕ್ಯತೆಯನ್ನು ಸದಿಡಾಗಿ ತರುವುದು ವಿಜ್ಞಾನಿಗಳ ಮೊದಲನೆ ಕರ್ತವ್ಯವಾಗಿದೆ. ವಿಜ್ಞಾನಿಗಳು ಅ ತ ನಿ ತ ಗಂಭೀರವಾಗಿ ಚಿಂತಿಸಿ ತಕ್ಕ ಉಪಾಯಗಳನ್ನು ಹೂಡಬೇಕು.

ಸ್ವದೇಶಾಭಿಮಾನಿ

ತಾರೀಕು ೧೭—೩—೧೯೩೯

ನರೇಂದ್ರರು

ಕಾಂಗ್ರೆಸು ದೇಶೀಯ ರಾಜ್ಯಗಳ ವಿಷಯ ಸೂಚನೆ ಮಾಡಿದ್ದುದು ಕೇಳುತ್ತಿರುವಾಗಲೆ, ನರೇಂದ್ರಮಂಡಲಾಧಿಪತಿಗಳು ಢಿಲ್ಲಿಯಲ್ಲಿ ಸೇರಿ, ತಮ್ಮ ಅವ್ಯತಿಸು ಹಕ್ಕು ಗೌರವ ಕಾರ್ಯಭಾರ ಪ್ರಧಾನಾತ್ಸಲ್ಯ ಹಿತಾಕಾಂಕ್ಷೆ ಸುಧಾರಣಾಪೇಕ್ಷೆಗಳನ್ನು ಕುರಿತಾಗಿ ಹೊಸ ನಿರ್ಣಯ ಮಾಡಿದರು. ವೈಸ್ರಾಯರ ಭಾಷಣದ ವಿಷಯವನ್ನು ಈ ಸಂಚಿಕೆಯ ಮತ್ತೊಂದು ಪುಟದಲ್ಲಿ ಕೊಟ್ಟಿರುವೆವು ಅದು ಒಂದು ಬಗೆ, ಇದೊಂದು ಬೇರೆಯೆ ಎನ್ನುವಂತಿದೆ 'ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರ ಮಾತೇ—ಯಾವ ರಾಜ್ಯದಲ್ಲಿ ಬೇಕಾದರೂ ಹೇಗೂ ಆಗಲಿ, ಪರಕೀಯರ ಚಳವಳವು ಒಂದು (ತ್ರಿವಾಂಕೂರು) ರಾಜ್ಯದಲ್ಲಿ ಎಂದೂ ಸಾಗಬಾರದು ಎಂಬುದು—ಒಂದು ವಲ್ಲವಿಯಾಗಿ ರಾಜರುಗಳು ಬಾಯಲ್ಲಿವೆ.

ನವನಗರದ ಜೇಮ್ ಸಾಹೇಬರು ಅಧ್ಯಕ್ಷರಾಗಿ,—'ಸುಧಾರಣೆ ಆಣ್ಮರಿಂದಲೇ ಪ್ರಾರಂಭಿಸತಕ್ಕದು, ಆಗತ್ಯವಿದ್ದಲ್ಲಿ, ರಾಜಕೀಯ ಅಡಚಣೆಯಿಂದಲ್ಲ, ದೇಶಹಿತದ ಪವಿತ್ರ ದೃಷ್ಟಿಯಿಂದ!' ಎಂದು ಸೂಚಿಸಿ, ಆಡಳಿತದ ಪರಿಷ್ಕರಣವು ಬೇರೆ—ರಾಜ್ಯದಲ್ಲಿ ಜವಾಬ್ದಾರ ಸರಕಾರ ಕ್ರಮ ಜಾರಿಗೆ ತರುವುದು ಬೇರೆ ಎಂದು ಸೂಚಿಸಿರುವರು 'ಹೀಗಿರುವುದರಿಂದ 'ಹೊರಗಿನವರು' ನಮಗೆ ಈ ವಿಷಯದಲ್ಲಿ ಅಪ್ಪಣೆ ಕೊಟ್ಟು, ಅಥವಾ ಒತ್ತಾಯಪಡಿಸುವುದಕ್ಕೆ ಹಕ್ಕಿಲ್ಲದವರು' ಎಂದರು! ಸರ್ ಸಿ ಪಿ ಯವರಿಗೆ 'ಹೊರಗಿನವರಾದವರು' ದಲ್ಲಿ ನರೇಂದ್ರರಿಗೂ 'ಹೊರಗಾದವರಾದರು' ಎಂದರೆ, ಎಲ್ಲ ರಾಜರುಗಳೂ ತಮ್ಮ ಹಕ್ಕುಗಳ ಭದ್ರತೆಗಾಗಿ ಒಂದಾಗುವರು ಎಂಬುದು ವ್ಯಕ್ತವಾಯಿತು.

"ಕಾಂಗ್ರೆಸು ರಾಜ್ಯಗಳಲ್ಲಾಗುವ ಚಳವಳಗಳಲ್ಲಿ ಕೈಯಿಕ್ಕುವುದಾದರೆ, ಶಾಂತವಾಗಿ ಅಲ್ಲಾಗಬಹುದಾದ ಸುಧಾರಣೆಗಳಿಗೆ ಆತಂಕ ಮಾಡುವುದು. ಪ್ರಜೆ—ರಾಜರುಗಳೊಳಗಣ ಪುರಾತನ ಸಂಬಂಧವು ಕೆಡುವುದು ಇದರಿಂದ ಭಯಾನಕ ಪರಿಣಾಮಗಳಾದಾವು" ಎಂದೂ ಈ ನರೇಂದ್ರಾಧ್ಯಕ್ಷರ ಮಾತಿದೆ ಸೈಮನ್ ಕಮಿಶನನ್ನು ಬಹಿಷ್ಕರಿಸಿ ನ್ಯರ್ಥ[illegible]ದೂ ಮೊಂಟಫರ್ಡ ಸುಧಾರಣೆಗಳು ರಾಜಕೀಯ ಪ್ರಗತಿಯನ್ನು ಕೆಡಿಸಿದರೆಂದೂ ನ[illegible] ಕಾಂಗ್ರೆಸ್‌ವಾಲರೂ ಇದ್ದಾರೆ ರಚನಾಶೀಲ ಪ್ರವೃತ್ತಿ ಉತ್ತಮವೆನ್ನುವವರ್ ಈ ಆಂದೋಲನಗಳು ಒಪ್ಪುವಂತಿಲ್ಲ

'ಭಗವಂತನ ಅನುಗ್ರಹದಿಂದ ಇದು ನಮ್ಮ ಮಾತೃಭೂಮಿ, ಇವು ನಮ್ಮ ರಾಜ್ಯಗಳು ಇವುಗಳ ಪ್ರಗತಿಗೆ ನಾವು [illegible]ರಾಗಿರುವೆವು ಎಂದು ಭಾವನೆಯಿಂದ ಅಧ್ಯಕ್ಷರು ತಿಳಿಸಿ ಇಂಡಿಯವು ಬ್ರಿಟಿಷ ಸಾಮ್ರಾಜ್ಯದಿಂದ ಹೊರಗಾಗಬಾರದೆಂದು ಅಭಿಪ್ರಾಯ ಹೇಳಿರುವರು. ಜನಾಂಗಗಳಲ್ಲಿ ಭಾರತ[illegible] ಯೋಗ್ಯ ಸ್ಥಾನ ಸಿಗಬೇಕೆನ್ನುವ ಅಭಿಪ್ರಾಯವನ್ನು ಗಾಂಧಿಜೀಯಂತೆ ಇವರೂ ಒಪ್ಪಿರುವರು. ಸ್ವಾತಂತ್ರ್ಯವನ್ನು ಮಾತ್ರ ಇವರು ಸಮರ್ಥಿಸುವುದಿಲ್ಲ. ಬ್ರಿಟಿಷರ ಜವಾಬ್ದಾರ ಕ್ರಮವ ಪ್ರಾಂತ್ಯಗಳಲ್ಲಿರುವಂತೆ ರಾಜ್ಯಗಳಲ್ಲಿರಬೇಕೆಂದು ಅವರು ಒಪ್ಪುವಿಲ್ಲ. ಜನರ ರೀತಿ ಬೇರೆ ಕಾಂಗ್ರೆಸು ತನ್ನ ಕಾರ್ಯಕ್ರಮ ಬದಲಾಯಿಸುವಂತೆ, ರಾಜ್ಯಗಳ[illegible] ಬದಲಾಯಿಸಬಾರದು'

[illegible]—ರಾಜ್ಯ ಇವುಗಳೊಳಗೆ ಸಮಾಧಾನಕರ ಸಂಪರ್ಕ ಬೆಳೆಯಬೇಕಾಗಿದೆ ರಾಜ್ಯಗಳ ಪ್ರಜೆಗಳಿಗೆ ಬೇಳಾಗುವ ನ್ಯಾಯವಾದ

ವಿದ್ಯಾ ತೆರಿಗೆಯು ಹೊರಿಸಲ್ಪಡುವುದು

ಮಂಗಳೂರು ಪೌರಸಭೆಯ ನಿರ್ಧಾರ

ಬಜೆಟ್ ಕಮಿಟಿಯವರು ಮುನಿಸಿಪಾಲಿಟಿಯೊಳಗಿರುವ ಆಸ್ತಿ ಮತ್ತು ಕಟ್ಟೋಣಗಳ ವರ್ಷಾವಧಿ ಉತ್ಪನ್ನದ ಮೇಲೆ ಸೇಕಡಾ ೧ರ ಸಲೆಯಲ್ಲಿ ವಿದ್ಯಾತೆರಿಗೆಯನ್ನು ಹೊರಿಸಬಹುದೆಂದು ತಂದ ಸೂಚನೆಯನ್ನು ಚರ್ಚಿಸಲು ಕಳೆದ ತಾ. 6ನೇ ಸಾಯಂಕಾಲ ಸ್ಥಳೀಯ ಮುನ್ಸಿಪಲ್ ಕೌನ್ಸಿಲಿನ ವಿಶೇಷ ಸಭೆಯೊಂದು ಚೆಯರ್‌ಮೇನರಾದ ಶ್ರೀ. ಬಿ ವೆಂಕಟ್ರಾವ್ ಬಾಳಿಗ ಎಂ. ಎಲ್ ಎ ಯವರ ಅಧ್ಯಕ್ಷತೆಯಲ್ಲಿ ಜರಗಿತು.

1939–'40ರ ಆಯವ್ಯಯದ ಪಟ್ಟಿಯನ್ನು ಕೌನ್ಸಿಲಿನ ಮುಂದಿರಿಸುತ್ತಾ ಕಮಿಷನರರಾದ ಶ್ರೀ ನಾರಾಯಣ ಶೆಣ್ಯರವರು ಮುನ್ಸಿಪಾಲಿಟಿಯ ಆರ್ಥಿಕ ಪರಿಸ್ಥಿತಿಯು ಅಷ್ಟೊಂದು ಉತ್ತಮವಿರುವುದಿಲ್ಲವೆಂದರು. ಇದಕ್ಕೆ ಮುಖ್ಯ ಕಾರಣವು ಯಾವುದೆಂದರೆ ಮುನ್ಸಿಪಾಲಿಟಿಯು ಎಲಿಮೆಂಟರಿ ಎಜ್ಯುಕೇಶನ್ ಫಂಡಿಗೆ ಹೆಚ್ಚಾಗಿ ಹಣವನ್ನು ತೆತ್ತ ಕಾರಣವಾಗಿರುತ್ತದೆ. ಅದಲ್ಲದೆ ಇನ್ನುಮುಂದೆ ವಿದ್ಯಾಯೋಜನೆಗೆ ಧನಸಹಾಯವನ್ನು ಮಾಡುವುದು ಬಹಳ ಕಷ್ಟವಾಗಬಹುದು ಆದರೆ ವಿದ್ಯಾಯೋಜನೆಯನ್ನು ಇನ್ನಷ್ಟು ಊರ್ಜಿತಗೊಳಿಸಬೇಕಾದರೆ ವಿದ್ಯಾತೆರಿಗೆಯನ್ನು ಹೊರಿಸದೆ ವಿನಹ ಬೇರಾವ ಮಾರ್ಗವೂ ಕಂಡುಬರುವುದಿಲ್ಲ ಪಶ್ಚಿಮ ಕರಾವಳಿಯ ಎಲ್ಲಾ ಮುನ್ಸಿಪಾಲಿಟಿಗಳಲ್ಲಿಯೂ ಈ ತೆರಿಗೆಯು ಜಾರಿಯಲ್ಲಿದೆ. ಹೊಸ ಮುನ್ಸಿಪಾಲಿಟಿಯಾದ ಉಡುಪಿಯಲ್ಲಿ ಕೂಡ ಈ ತೆರಿಗೆಯನ್ನು ಹೊರಿಸಲಾಗಿದೆ ಸೇಕಡಾ ೧ರ ಸಲೆಯಲ್ಲಿ ವಿದ್ಯಾತೆರಿಗೆಯನ್ನು ಹೊರಿಸಿದಲ್ಲಿ ಅದರಿಂದ ಮುನ್ಸಿಪಾಲಿಟಿಗೆ ಸ[illegible] 12, 450 ರೂಪಾಯಿ ಉತ್ಪನ್ನವಾಗಬಹುದೆಂದು ವಿವರಿಸಿದರು.

ಸಬ್ ಕಮಿಟಿಯ ಬೆಂಬಲ.

ಕಳೆದ ಸಭೆಯಲ್ಲಿ ಕಮಿಷನರರು ಸಭೆಯ ಮುಂದಿಟ್ಟ ಬಜೆಟಿನ ಕುರಿತು ಪರ್ಯಾಲೋಚಿಸಲು ಒಂದು ಸಬ್ ಕಮಿಟಿಯನ್ನು ನೇಮಿಸಿದ್ದರು. ಈ ಕಮಿಟಿಯವರು ಸಭೆ ಸೇರಿ ಕಮಿಷನರರ ವಿದ್ಯಾತೆರಿಗೆಯನ್ನು ಹೊರಿಸುವ ಸೂಚನೆಗೆ ಬೆಂಬಲವನ್ನಿತ್ತದ್ದರು. ಈ ಕಮಿಟಿಯ ನಿರ್ಧಾರವನ್ನು ಪರ್ಯಾಲೋಚಿಸಲು ನಿನ್ನೆ ಸಭೆಯು ಜರಗಿತ

ಮಿ ಎಮ್ ಎಸ್ ಶ್ರೀನ್ನರು ಮಾತನಾಡುತ್ತ ಈ ತೆರಿಗೆಯಿಂದ ಜನರಿಗೆ ಬಹಳ ಉಪಕಾರವಿದೆಯೆಂಬು ನಾನು ಒಪ್ಪುತ್ತೇನೆ ಆದರೆ ವಿದ್ಯಾಯೋಜನೆಗೆ ನಾವು ವ್ಯಯಮಾಡುತ್ತಿರುವ ಹಣವು ಕೆಲವು ಶಾಲೆಗಳನ್ನು ಒಟ್ಟುಗೂಡಿಸಿದಲ್ಲಿ ಕಡಿಮೆಯಾಗುವುದು ಈ ವಿಷಯದಲ್ಲಿ ಸರಕಾರವು ದ್ರವ್ಯಸಹಾಯವನ್ನು ಮಾಡಲು ಮುಂದೆ ಬಾವಲ್ಲಿ ಕೌನ್ಸಿಲಾದರೂ ಖಾಸಗಿ ಶಾಲೆಗಳಿಗೆ ದ್ರವ್ಯಸಹಾಯ ಮಾಡುವ ವಿಷಯವನ್ನು ಆಲೋಚಿಸಬಹುದು ಮತ್ತು ಈ ಖರ್ಚನ್ನು ಕಡಿಮೆ ಮಾಡಲು ತಕ್ಕ ಹ[illegible] ಯನ್ನು ಹುಡುಕಲು ಒಂದು [illegible] ನೇಮಿಸುವುದು ಉತ್ತಮ [illegible]

ಡಾ [illegible] [illegible] ಬಜೆಟಿನಲ್ಲಿ [illegible] [illegible] [illegible] [illegible] [illegible] [illegible] [illegible] [illegible] [illegible] [illegible]

ಡಾ ಅತ್ತಾವರ್ [illegible] ರವನ್ನು ಮಾಡಿದರು. [illegible] ಗ ಪುದಿಲ್ಲವೆಂದ ಹೇಳಿದರು. ಕಳೆದ 1937 ರಿಂದ ನಾವು ಈ ವಿಷಯ [illegible] [illegible] [illegible] [illegible] [illegible] ವರೆಗ ಸರಕಾರವು ಯಾವ[illegible] ಕಳುಹಿಸಿದುದು ಕಂಡು ಬರುವುದಿಲ್ಲವೆಂದರು

ತಿದ್ದುಪಾಟು

ಶ್ರೀ [illegible] [illegible] ವರ್ಷಾವಧಿ ರೂಪಾಯಿ ೬೦ ಬಾಡಿಗೆ ಬರುವ ಕಟ್ಟೋಣಗಳ ಮೇಲೆ [illegible] ಹೊರಿಸಿದಲ್ಲಿ [illegible] ದು ಇದರಿಂದ ಜನಾಂಗಿ [illegible] ಮೇಲೆಯೆ ಈ ತೆರಿಗೆಯನ್ನು ಹೊರಿಸಿದಂತಾಗುವುದರಿಂದ ವರ್ಷಾವಧಿ ರೂಪಾಯಿ ೬೦ ಬಾಡಿಗೆ ಬರುವ ಕಟ್ಟೋಣಗಳ ಮೇಲೆ ಈ ತೆರಿಗೆಯನ್ನು ಹೊರಿಸಬಾರದೆಂಬ ಒಂದು ತಿದ್ದುಪಡಿಯನ್ನು ತಂದರು ಆದರೆ ಇದಕ್ಕೆ ಅನುಮೋದಕರು ಯಾರೂ ಇಲ್ಲದ್ದರಿಂದ ಈ ತಿದ್ದುಪಡಿಯು ಬಿದ್ದುಹೋಯಿತು.

ಶ್ರೀ ಎಮ್. ಮಾಧವರಾಯರು ಮುನ್ಸಿಪಲ್ ಶಾಲೆ ಬಡ ಹುಡುಗರಿಗೆ ಧರ್ಮಾರ್ಥ ಶಿಕ್ಷಣವನ್ನು ಕೊಡುತ್ತದೆ ಈ ತೆರಿಗೆಯಿಂದಾಗಿ ವಿದ್ಯಾಪ್ರಚಾರಕ್ಕೆ ಇನ್ನಷ್ಟು ಸಹಾಯ ಮಾಡಲು ಅನುಕೂಲವಾಗುವುದೆಂದರು.

ಶ್ರೀ ತಲಚೇರಿ ರಂಗರಾಯರು ಕಾಂಗ್ರೆಸ್ ಪಾರ್ಟಿಯವರ ಜನರ ಸೌಕರ್ಯಕ್ಕೆ ಯಾವ ಯೋಜನೆಯನ್ನೂ ಮಾಡಿಲ್ಲವೆಂದೂ, ಹೊಸ ತೆರಿಗೆಯನ್ನು ವಿಧಿಸುವ ಮೊದಲು ಬೇರೆ ಯಾವ ತರದ ಖರ್ಚನ್ನೂ ಕಡಮೆಮಾಡಲು ಯೋಚನೆಯನ್ನೇ ಮಾಡಿಲ್ಲವೆಂದೂ ಟೀಕಿಸಿದರು.

ಡಾ ಉಪೇಂದ್ರ ಪೈಗಳು ಈ ಟೀಕೆಗಳಿಗೆ ಉತ್ತರವೀಯುತ್ತಾ ಕಾಂಗ್ರೆಸ್ ಪಾರ್ಟಿಯವರು ಜನತೆಗೆ ತಮ್ಮಿಂದಾದಷ್ಟು ಸೌಕರ್ಯವನ್ನು ಮಾಡಿದೆ ಎಂದು ವಿವರಿಸಿದರು

ಡಾ. ಪಿಟ್ಟರ್ ಶೆಟ್ಟಿರು ಮಂಗಳೂರಲ್ಲಿ ಬರೀ ೮೦೦೦ ಮನೆಗಳಿರುವುದರಿಂದ ಈ ಮನೆಗಳ ಧನಿಗಳಿಗೆ ಮಾತ್ರ ಈ ತೆರಿಗೆ[illegible] [illegible]ಗುವುದೆಂದರು ಇವರಲ್ಲಿ [illegible] ೨೦ [illegible] ಪಾವತೆ[illegible] ತೆರೆದುಕೊಂಡರೂ ೮೧ [illegible] ಈ ಜಿಲ್ಲೆ ತೆರಿಗೆಯನ್ನು ಕೊಡ [illegible] ಸೂಚಿ[illegible].

[illegible] [illegible]ರೂ ಈ ತೆರಿಗೆ[illegible] ವಿರೋಧ[illegible] ವಿದ್ಯಾಯೋಜನೆಯಲ್ಲಿ [illegible] [illegible] ಭಾಷಣ ವಿತ್ತರ

[illegible] ಅಧ್ಯಕ್ಷರಾದ [illegible] ಬಾಳಿಗರು [illegible] ವಿದ್ಯಾಯೋಜನೆಗೆ [illegible] ಧನವ್ಯಯ[illegible] ಮಾಡಲು [illegible] ಈ ಹೊಸ ತೆರಿಗೆಯಿಂದ ವಿದ್ಯಾಯೋಜನೆಯನ್ನು [illegible] [illegible] ಭಾಷಣವಿತ್ತರು.

[illegible] [illegible] ನಡೆದು [illegible] [illegible] ತಲಚೇರಿ ರಂಗರಾಯರು [illegible] ವಿನಹ ಇತರರೆಲ್ಲರೂ ಇದಕ್ಕೆ ಬೆಂಬಲವಿತ್ತು ಇದು [illegible] ಮಂಜೂರಾಯಿತು [illegible] ಪ್ರಕಾರ [illegible] ಏಪ್ರಿಲ್ ಒಂದರಿಂದ ವಿದ್ಯಾ ತೆರಿಗೆಯು ಜಾರಿಗೆ ಬರುವುದು [illegible] [illegible] ಧನಸಹಾಯವನ್ನು [illegible] ಫಂಡಿಗೆ [illegible] ಇದನ್ನು [illegible] ಮಾಡು [illegible]

ಸಹಕಾರವನ್ನು ಕಾಂಗ್ರೆಸು ಮಾಡಲಿ ರಾಜರುಗಳನ್ನು ಒತ್ತಾಯಪಡಿಸುವುದು [illegible] ಎಂದು ಪುನರಾಲೋಚಿಸಲಿ ಪ್ರಾಂತ್ಯಗಳಲ್ಲಿ ಪ್ರಜೆಗಳಿಗೆ ಇರುವ ಹಕ್ಕುಗಳ [illegible] ಗಳಿಗೂ ಸಿಗುವಂತಿರಬೇಕು ಬ್ರಿಟಿಷ ರಾಷ್ಟ್ರದೊಳಗಣ ಸುಧಾರಣೆಗಳ ಪರಿಣಾಮಗಳು ದೇಶೀಯ ರಾಜ್ಯಗಳ ಮೇಲೆ ಉಂಟಾಗದಿರವು; ಇದನ್ನು ರಾಜರುಗಳು ತಿಳಿಯಲಿ ಬೇಕೆಂದೇ, ಭಗವಂತನ ಹೆಸರಿತ್ತು, ತಾವು [illegible] ಅಥವಾ ವಿಳಂಬಿಸುವ ಕಾರ್ಯಕ್ರಮವನ್ನು ದೂರವಿಡಲಿ [illegible] ರೀತಿಯಲ್ಲಿ ಸುಧಾರಣೆಯನ್ನು ಉಂಟುಮಾಡಲಿ, ಜನರಿಗೆ ಅಗತ್ಯವಿರುವ ಹಿತವನ್ನು [illegible] [illegible] [illegible] [illegible] ಅವರೇ [illegible] [illegible] ಎಂಬುದನ್ನು ಮರೆಯದಿರಲಿ

ಕೇಶರಾಶಿಯೇ
ಹಂಗಸಿನ ಸೌಂದರ್ಯ

ಇಂದೇ ಒಂದು ಬಾಟ್ಲಿಯನ್ನು ಕೊಂಡುಕೊಳ್ಳಿ

ಪರ್ಫ್ಯೂಮ್ಡ್ ಕೇಸ್ಟರ್ ಆಯಿಲ್

ಇದನ್ನು ಉಪಯೋಗಿಸಿದಲ್ಲಿ ಶುಭ್ರವಾದ ಮತ್ತು ನಯವಾದ ಕೂದಲು ಕೂಡಲೆ ಬೆಳೆಯುವುದೆಂದು ನಿಮಗೆ ಮುಂದಟ್ಟಿಗುವುದು

ಅಹ್ಲಾದಕರವಾದ ಪರಿಮಳ

ಕೂದಲಿನಲ್ಲಿರುವ ಕಶ್ಮಲಗಳನ್ನು ಹೋಗಲಾಡಿಸುವುದಕ್ಕೆ ಬಹಳ ಪ್ರಯೋಜನಕಾರಿ

ಎಲ್ಲೆಲ್ಲೂ ಮಾರಲ್ಪಡುತ್ತದೆ

ಹಳ್ಳಿಯ ಹತ್ತುಸಮಸ್ತರು

[೩ನೇ ಪುಟದಿಂದ ಮುಂದುವರಿದುದು]

ಅದನ್ನು ಕೇಳಿ ಕೇಳಿ ಬೇಸರಬಂದು, ಮರವೆಯಾಗಿಯೂ ಹೋಗಿತ್ತು. ಅದನ್ನು ಸರಿಮಾಡಿ ಕೊಡುವ ಎಂದು ಇಸುಕೊಂಡ ತಿಮ್ಮ ಅಕ್ಕಸಾಲಿಗೆ ಅದಕ್ಕೂ ಮೊದಲು ನೆನಪು ಇರಲಿಲ್ಲ. ಆದರೆ ಸಂಜೆಯ ಸಮಯವಲ್ಲವೆ. ಆಗ ಎಲ್ಲೆಲ್ಲಿ ಅಡಗಿದ ಜ್ಞಾನ, ನೆನಪುಗಳೆಲ್ಲ ತಿಮ್ಮನ ತಲೆಯಲ್ಲಿ ಮೇಲಕ್ಕೆ ತೇಲಿಬರುವ ಸಮಯ. ಅದೇ ಸಮಯಕ್ಕೆ ಅಕ್ಕಸಾಲಿ ಕಣ್ಣಿಗೆಬಿದ್ದನು.

ತಿಮ್ಮಪ್ಪನು ಅಣ್ಣುವನ್ನು ತಾನಾಗಿ ಮಾತನಾಡಿಸಲು ಅಂಜಿದರೂ ಮಾತನಾಡದೆ ಹೋಗದೆ, ಅಣ್ಣು 'ಅಕ್ಕಸಾಲಿ ದೌಲೇ' ಎಂದಾನೆಂದು ಹೆದರಿ—'ಎಲ್ಲಿಗೆ ಅಣ್ಣು, ಇವತ್ತು ತೆಕ್ಕಟ್ಟೆ ಮೇಳದ ಆಟ, ಬಗಳ ಬೆಟ್ಟಿನಲ್ಲಿ. ಹೋಗುವುದುಂಟೇ?' ಎಂದು ಕೇಳಿದನು.

'ಆಟವೇ. ಆ ಅಕ್ಕಸಾಲಿಗರ ಮಕ್ಕಳಿಗೆ ಮೊಗೇರ ಮಕ್ಕಳಿಗೆ ಮಾರಬಲೆ

'ಅಲ್ಲಿ ರುಕ್ಮ ಅಕ್ಕಸಾಲರ ಕೈಯಲ್ಲಿ ಹಾಕಿದ್ದ ಕಾಲುಕೀಲಿ ಸಮನಾಗಿ ಸಿಕ್ಕುವುದು ಮುಂದಿನ ವರ್ಷಕ್ಕೆ ಸರಿಯೆಂದು ಕಾಣುತ್ತದೆ. ಅಲ್ಲಿ—ಈ ಅಕ್ಕಸಾಲಿಗರ ಕುಲವೇ ಹಾಗೇನು' ನಾವು ಕಳ್ಳು ಕುಡಿಯುವ ಮೊಗೇರ ಗಂಡುಗಳಿಗಾದರೂ ಆಡಿದ ಮಾತು, ಆಣೆ, ಬಾಸಯಲ್ಲಿ ಉಂಟು. ನಿಮಗೆ ಅದೊಂದೂ ಬೇಡವೇ' ಎಂದುಬಿಟ್ಟ

ತಿಮ್ಮಪ್ಪನಿಗೆ ಬೇಸರ ಬಂದು 'ಯಾಕೆ ಗೃಹಚಾರದ ಸುತ್ತ ನನ್ನನ್ನು ಮಾತನಾಡಿಸಿದೆ ನಪ್ಪ' ಎಂದುಬಿಟ್ಟ

ಅಣ್ಣುವಿಗೆ ನಗು ಬಂದಿತು. ನಾನು ಹೇಳಿದ್ದು ಹೆಚ್ಚಾಯಿತು ಎಂದು ಕಾಣುತ್ತದೆ ಬೇಡ ಹೋಗಲಿ ಆ ರಸಿಕ ಬಂದು ಕೇಳಿ ನೆ ಅಕ್ಕಸಾಲರ ಮನಸ್ಸು ನೋಯಿಸುವುದು ಬೇಡ. ಕ್ಷಮಿಸಿದೆ ತಪ್ಪಾಯಿತು

'ಅದಿರಲಿ ಎಂಥಾ ಪ್ರಸಂಗ ಆಟಕ್ಕೆ?'

ಇನ್ನು ಬಯಲಾಟದ ಬಂತೆಂದು ಕುಶು ಧೈರ್ಯಗೊಂಡ ತಿಮ್ಮಪ್ಪನು, ಮಾತನ್ನು ತಪ್ಪಿಸಿ ಅಲ್ಲಿಂದ ಹೊರಡಲು ಧೈರ್ಯವಿಲ್ಲದೆ 'ಕನಕಾಂಗಿ ಕಲ್ಯಾಣ, ಮೀನಾಕ್ಷಿ ಕಲ್ಯಾಣವಾಗಿದ್ದರೆ ಲಾಯಕಿತ್ತು ಎಂದನು.

ಸರಿ, ರಸಿಕ ಅಣ್ಣುವಿನ ಉತ್ತರಕ್ಕೆಯಿಂದ ವಿಮರ್ಶೆಯ ಬಾಣಗಳು ಎಳತೊಡಗಿದುವು 'ಅಕ್ಕಸಾಲರೇ ನಿಮ್ಮ ಮನೆಯಲ್ಲಿ ಹೆಂಡತಿ ಇರಕೂಡದು ಅನ್ನುತ್ತಾ ಳೆಯೇ ತಕ್ಕಷ್ಟು ಮೇಳ ನಡೆಸುವುದು. ಹರಕೆಗೆ ಆಟ ನೋಡಬೇಕು. ಮುಂದರ್ಶಿಯದು ಪ್ರಸಂಗ ಅಂದರೆ ಪಂಚವಟಿ. ಎಣ್ಣೆದ ವೇಷ ನೋಡಬೇಕು ಉಪ್ಪಳ್ಳಿ ಶೀನನದ್ದು ಕುಣಿತ—ಪಾಂಡೇಶ್ವರದ ಪುಟ್ಟಯ್ಯನವರದ್ದು ಇವೆಲ್ಲ ಏನು ನೋಡುವುದು

'ಅದೆಲ್ಲಾ ಹಿಂದಿನ ಕಥೆ, ಉಪ್ಪಳ್ಳಿ ಶೀನ ಸತ್ತಮೇಲೆ ಈ ನಮ್ಮ ಕುಪ್ಪ ಇಲ್ಲವೆ! ಆದರೆ ನೋಡಿ ಪುಟ್ಟಯ್ಯ ಸತ್ತದ್ದು ಸತ್ತದ್ದು; ಕುಣಿತ ಅವನ ಹಿಂದೆಯೇ ಇದೆಲ್ಲ ಒಂದು ಕುಣಿತವೋ ಬರಿದೆ ಕುಣಿದರೆ ಸರಿಯೆ—ಒಂದು ಗತ್ತು ಬೇಕೇ ಇದೆಲ್ಲ ದಿಗಣ ಹಾಕುವುದು.

'ಹಾಂಗನ್ನುತ್ತೀರಾ? ನನಗೆ ಈ ತೆಕ್ಕಟೆ, ಸಾಲಿಗ್ರಾಮ, ಮಂದರ್ತಿ, ಮಾರ್ಣಕಟ್ಟೆ ಒಂದೂ ಹಿಡಿಯುವ ಹಾಗಿಲ್ಲ ನನಗೆ ಒಂದು ಮನಸ್ಸು. ಬಿಲ್ಲವರೆಲ್ಲ ಈ ವರ್ಷ ಒಂದು ಮೇಳ ಎಬ್ಬಿಸಿದ್ದಾರಂತೆ ಯಾಕೆ ನಮ್ಮ ಮಾರಿಬಲಿಯವರಿಗೆ ಒಂದು ಮೇಳ ಎಬ್ಬಿಸಲಿಕ್ಕೆ ಬರಲಿಕ್ಕಿಲ್ಲ! ಒಂದು ೫೦೦ ರೂಪಾಯಿ ಧಂಡ ಬಿದ್ದೀತು. ಕಡಲುದೇವರ ಮನಸ್ಸು ಮಾಡಿದರೆ ನಾಲ್ಕು ಮೇಳ ಹೊರಡಿಸಬಹುದು, ಒಂದಲ್ಲ. ಆದರೆ ಒಂದು ಅಕ್ಕಸಾಲರೇ, ಎಲ್ಲ ಕಳ್ಳು ಕುಡಿಯುವ ಗಂಡುಗಳು. ಒಂದೊಂದು ಸೀಸೆ ಲೆಕ್ಕ ತಪ್ಪಿದರೆ ಇವು ಎಲ್ಲಿಷ್ಟು, ರಂಗಸ್ಥಳ ಎಲ್ಲಿಷ್ಟು ಆದೀತೊ ಏನೋ!'

ಅಕ್ಕಸಾಲಿಗೆ ನಗುಬಂದಿತು ಅಣ್ಣುವಿನ ಟೀಕೆಗೆ ಪಕ್ಷವೂ ಇಲ್ಲ, ನಂಜೂ ಇಲ್ಲ. ಈ ಮೊದಲು ಅವನು ತನ್ನನ್ನು ಆವುಟಿದ ನೋವು ಮರವೆಯಾಗಿ ತಿಮ್ಮಪ್ಪ 'ಅಣ್ಣು; ನಾನು ಅದಲ್ಲ ಹೇಳುವುದು ಆಡುವವರ ಮಕ್ಕಳು ಆಡಬೇಕು; ಬೇಡುವವರ ಮಕ್ಕಳು ಬೇಡಬೇಕು. ನಾನು ಒಲೆ ಊದಿದರಾಗಲಿಕ್ಕಿಲ್ಲ, ನೀನು ಅಡ್ಡಣಿಗೆಯಿಂದ ಕುಟ್ಟಿದರೂ ಆಗಲಿಕ್ಕಿಲ್ಲ. ಆಟ ಬಿಲ್ಲವರಿಗೂ ಅಲ್ಲ, ಮೊಗೇರರಿಗೂ ಅಲ್ಲ.

ಆದರೆ ಒಂದು. ತಿಮ್ಮಪ್ಪನು ಪಕ್ಷಪಾತ ಗಟ್ಟಿ ಮಾಡಿದರೆ ನಾಲ್ಕು ಮೇಳ ಸಾಕುವ ತ್ರಾಣವುಂಟು. ಈ ವರ್ಷ ಮಾರ್ಣಕಟ್ಟೆಯವರು ಇಲ್ಲಿ ಕಡೆಯಾವುದಿಲ್ಲ ಎಂದು ಬಡಲಾಗಿ ಹೋಗುತ್ತಾರಂತೆ; ಇನ್ನೊಂದು ಮೇಳ ತೆಂಕಲಾಗಿ ಹೋಗುತ್ತದೆ ಅಂತೆ. ಏನು ನಮ್ಮ ಊರವರಿಗೆ ದಾರಿಯೋ? ಒಂದೆರಡು ಮೂರು ಮೇಳ ಸಾಕುವ ತ್ರಾಣವಿಲ್ಲವೆ. ಅದಕ್ಕೆ ಬಡಲಾಗಿನವರು ತೆಂಕಲಾಗಿನವರು ಬೇಕ?

'ಗಟ್ಟಕ್ಕೆ ಹೋಗುತ್ತಾರಂತೇನು? ಅದೇನು ನಮ್ಮ ಮುಂದಿಗೆ ನಾಲ್ಕು ಆಟ ಆಡಿಸಿದರೆ ದಾಡಿಯೇ ಒಂದು ರಾತ್ರಿ ಎಣ್ಣೆ, ಒಂದು ರಾತ್ರಿ ಬಂಟ್ಟು, ನೇಮ ಒಂದು ರಾತ್ರಿ ಇದ್ದಾರಲ್ಲ . . . ಹಾ . . ಹಾ ಕಾಸು ಬಿಡಿಸುವ ಕೀಲಿ ಒಂದೂ ಇಲ್ಲ ಎಂದು ಕಾಣುತ್ತದೆ.'

'ಕಾಸು ಬಿಡಿಸಲಿಕ್ಕೆ ಬ್ರಾಂಬ್ರ ಇಲ್ಲ, ಬಂಟರೂ ಇಲ್ಲ. ಸೇರೆಯವರು ಇರುವುದು. ಕಾಸು ಸುಲಿಯುಲಿಕ್ಕೆ ಖರ್ಚು ಮಾಡುವುದಕ್ಕೆ ಅದಕ್ಕೆಲ್ಲ ಮೊಗೇರರೇ ಬೇಕು'

'ಹೋಗಲಿ, ಈ ವರ್ಷ ನಮ್ಮ ಬಲಿಯಲ್ಲಿ ನಾಲ್ಕು ಆಟ ಆಡಿಸಿ ಬಿಡುವ ನಾವೆಲ್ಲ. ನೋಡಲಿ ಮೊಗೇರ ಮಕ್ಕಳ ಲೆಕ್ಕಕ್ಕೆ ನಾಲ್ಕು ಆಟವನ್ನು' ಎಂದು ಉದಾರದ ಭರವಸೆಯನ್ನು ಅಣ್ಣು ಕೊಟ್ಟು ಹೊರಟನು.

ಅದೇ ದಿವಸ ರಾತ್ರಿ, ತೆಕ್ಕಟ್ಟೆ ಮೇಳಕ್ಕೆ ಅಣ್ಣುವೆ ಹೋಗಿ ತಮ್ಮಲ್ಲಿಗೆ ಬಂದು ಆಟವಾಡಲು ಆಮಂತ್ರಣ ಕೊಟ್ಟಾಯಿತು.

ಹೊಸ ಮಿತವ್ಯಯದ ಟಿನ್ನುಗಳು

ಪ್ರಮಾಣದಲ್ಲಿ ಬಾಟ್ಲಿಯಷ್ಟೆ ಇರುತ್ತವೆ

ಆದರೆ ಕ್ರಯವು ಕಡಮೆ



ಎಂಡ್ರೂಸ್ ಲಿವರ್ ಸೋಲ್ಟ್

ದೊಡ್ಡ ಬಾಟ್ಲಿಯ ಪ್ರಮಾಣದಲ್ಲಿರುವ ಹೊಸ ಮಿತವ್ಯಯದ ಟಿನ್ನುಗಳನ್ನು ತಯಾರಿಸಿದ್ದಾರೆ

ಈ ಟಿನ್ನಿನ ಬೆಲೆಯೂ ಕಡಿಮೆ—ಯಾಕೆಂದರೆ ಇದು ಕಡಿಮೆ ವ್ಯಯದಲ್ಲಿ ತುಂಬಿಸಲಿಕ್ಕೂ ಊರಿಂದೂರಿಗೆ ಕಳುಹಿಸಲಿಕ್ಕೂ ಆಗುತ್ತದೆ

ಈ ಕೆಳಗಿನವುಗಳಿಗೆ ಎಂಡ್ರೂಸನ್ನು ಕೊಂಡುಕೊಳ್ಳಿರಿ.

ಪಿತ್ತವಿಕಾರ, ಮಲಬದ್ಧತೆ ಅಜೀರ್ಣ, ತಲೆಸುತ್ತು, ಎದೆಉರಿ | ಹಸಿವಿಲ್ಲದಿರುವುದು, ನರಗಳ ಅಗ್ನಿಮಾಂದ್ಯ, ರಕ್ತದ ಅಸ್ವಸ್ಥತೆ, ಇತ್ಯಾದಿ

ಎಂಡ್ರೂಸ್ ಲಿವರ್ ಸೋಲ್ಟ್

ನಾಲ್ಕು ವಿಧಗಳಲ್ಲಿ ಉಪಕಾರಿ.

1 ...
2 ...
3 ...
4 ...

ಎಲ್ಲಾ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ದೊಡ್ಡ ಟಿನ್ನು (೮ ಔನ್ಸು) ರೂ 1—4—0

ಸಣ್ಣ ಟಿನ್ನು ರೂ. 0-11-0

೮ ಔನ್ಸು ರೂ 1 10 0

4 ಔನ್ಸು ರೂ 1 0 0

ಅಂತರ್ ಶುದ್ಧಿಗೆ ಎಂಡ್ರೂಸ್ ಲಿವರ್ ಸೋಲ್ಟ್

754

ANDREWS
LIVER SALT
for Inner Cleanliness

The Bombay Life Assurance Company Ltd

Mr. Ulhl appay... Bekhad holder of our Policy No 36903 having notified that he has either lost or misplaced his policy and having requested us to issue a duplicate thereof in his favour notice is hereby given that a duplicate will be issued to him by the Company should there be no objection recorded in our office, to our doing so, within a month of this notice.

Bombay 14 3 1939 } Sd/- Jyotendra L. Mehta, Managing Director

★ ಮಹಾತ್ಮಾಜಿಯವರಿಗೆ ದೈವಾನುಗ್ರಹ ★

ಶೇಗಾಂವದಲ್ಲಿ ಅಪ್ರಾರ್ಥಿತ ಸಹಾಯ

ಡಾಕ್ಟರ ಚೆಸ್ಟರಟನ್ ಎಂಬ ಕ್ರೈಸ್ತ ಮತೋಪದೇಶೀ ಚಿಕಿತ್ಸಕರೊಬ್ಬರು ಮಹಾತ್ಮಾಜಿಯವರ ದರ್ಶನಾಪೇಕ್ಷಿಗಳಾಗಿ ಬಂದಿದ್ದರು. ಹಿಂದೂದೇಶದಲ್ಲಿ ಮಿಶ್ಶನ ಆಸ್ಪತ್ರೆಗಳು ಮತ್ತು ಮಿಶ್ಶನ ಡಾಕ್ಟರರಿಂದ ಆದ ಉಪಕಾರದ ಕುರಿತು ಅವರಿಬ್ಬರೊಳಗೆ ಚರ್ಚೆಯು ನಡೆದಿದ್ದಿತು. ತಾವು ಆಳುವ ಜನಾಂಗದವರು ಮತ್ತು ಭಾರತೀಯರು ಆಳಿಸಿಕೊಳ್ಳುವಂಥವರು ಎಂಬ ಉಚ್ಚನೀಚ ಭಾವನೆಯು ಎಷ್ಟರ ತನಕ ಈ ಮಿಶನರಿಗಳ ಮನಸ್ಸಿನಿಂದ ಅಳಿಸಿ ಹೋಗುವದಿಲ್ಲವೋ, ಮತಾಂತರಗೊಳಿಸುವ ಅಭಿಲಾಷೆಯು ಎಷ್ಟರ ತನಕ ಅವರಲ್ಲಿ ಇರುತ್ತದೋ, ಕೇವಲ ಸೇವಾಭಾವದಿಂದ ಪ್ರೇರಿತರಾಗಿ ಅವರು ಎಷ್ಟರ ತನಕ ಜನತಾ ಸಂಪರ್ಕವನ್ನು ಬೆಳಸಿ ಭಾರತದಲ್ಲಿ ಭಾರತೀಯರಂತೆ ತಮ್ಮ ಜೀವನ ಕ್ರಮವನ್ನು ತಿದ್ದಿಕೊಳ್ಳುವುದಿಲ್ಲವೋ ಅಷ್ಟರ ತನಕ ಈ ಮಿಶನರಿ ವೈದ್ಯರು ಮತ್ತು ಆಸ್ಪತ್ರೆಗಳಿಂದ ದೇಶಕ್ಕೆ ಉಪಕಾರವಿರುವುದಿಲ್ಲವೆಂದು ಗಾಂಧಿಜಿ ಖಂಡಿತೋಕ್ತಿಗಳನ್ನಾಡಿದರು.

ಕಾಡುಜನರನ್ನು ಮತಾಂತರಗೊಳಿಸಿದರೆ ತಪ್ಪೇನು?

ಯಾವ ಮತಕ್ಕೂ ಸೇರದೆ ಕಲ್ಲು ಮರಗಳನ್ನು ಪೂಜಿಸಿಕೊಂಡು ಬರುವ ತೊಂಡರು, ಭಿಲ್ಲರು ಮೊದಲಾದ ಕಾಡುನಿವಾಸಿಗಳನ್ನು ಕ್ರೈಸ್ತಮತಕ್ಕೆ ಸೇರಿಸಿದರೆ ತಪ್ಪೇನು? ಅವರು ಯಾವ ಮತಕ್ಕೂ ಸೇರದವರಲ್ಲವೆ? ಎಂದು ಡಾಕ್ಟರ ಚೆಸ್ಟರಟನರು ಗಾಂಧಿಜಿಯವರನ್ನು ಪ್ರಶ್ನಿಸಲು—'ಹಾಗಲ್ಲ, ಕ್ರೈಸ್ತ ಮತಾಂತರವು ಅವರೊಳಗೂ ನಡೆಯಕೂಡದೆಂದು ನನ್ನ ಅಭಿಪ್ರಾಯವಾಗಿದೆ. ಅವರನ್ನು ಕಲ್ಲು ಮರಗಳ ಪೂಜಕರೆಂದು ಹೇಳುವದಾದರೂ ಸಾವಿರಾರು ವರ್ಷಗಳಿಂದ ಅವರು ಹಿಂದೂ ಮತದವರಾಗಿಯೇ ಜೀವಿಸಿಕೊಂಡು ಬಂದಿದ್ದಾರೆ. ಕ್ರೈಸ್ತ ಮತದಂತೆಯೇ ಹಿಂದೂ ಮತವೂ ಇದೆ ಎಂಬ ಮಾತನ್ನು ನೀವು ಒಪ್ಪುವಿರಾದರೆ ನನ್ನ ಮಾತು ಕೇಳಿ ನಿಮಗೆ ಆಶ್ಚರ್ಯವಾಗದು. ನನ್ನ ಅಭಿಪ್ರಾಯದಲ್ಲಿ—ಎಲ್ಲಾ ಮತಗಳು ಸಮಾನವಾಗಿವೆ. ಗುಣದೋಷಗಳು ಎಲ್ಲ ಮತಗಳಲ್ಲಿಯೂ ಇವೆ. ಯಾಕೆಂದರೆ ಅವುಗಳನ್ನು ಪ್ರವರ್ತಿಸಿದವರು ಮನುಷ್ಯರಾಗಿದ್ದಾರೆ. ಮನುಷ್ಯರು ಅಪೂರ್ಣರಾಗಿರುವಾಗ ಅವರು ಪ್ರವರ್ತಿಸಿದ ಮತಗಳು ಪೂರ್ಣವಾಗಿರುವುದು ಸಂಭವವೆ? ಆದರೆ ಮಿಶ್ಶನರಿಗಳು ತಮ್ಮ ಮತವು ಮಾತ್ರ ಪೂರ್ಣ ಸತ್ಯ, ಉಳಿದವುಗಳು ಅಸತ್ಯವೆನ್ನುವುದು ಮಾತ್ರ ನನಗಾಗುವುದಿಲ್ಲ' ಎಂದು ಗಾಂಧಿಜಿಯವರು ಉತ್ತರ ಕೊಟ್ಟರು.

ಡಾಕ್ಟರ ಚೆಸ್ಟರಟನರು ಹೊರಡಲು ಸಿದ್ಧರಾದರು. ತಮ್ಮ ಸಂಭಾಷಣೆಯಿಂದ ಗಾಂಧಿಯವರು ಪ್ರಯಾಸಪಟ್ಟಿರಲಾರರೆಂದು ಆಶಿಸಿ, ಅವರು ಯಾವಾಗಲೂ ಮಿಶ್ಶನರಿಗಳ ಸಾತ್ವಿಕ ಹೃದಯಕ್ಕೆ ಬೋಧನೆಯನ್ನು ಕೊಡುತ್ತಿರಬೇಕೆಂದು ಡಾಕ್ಟರ ಚೆಸ್ಟರಟನರು ಸೂಚಿಸಿದರು. 'ಅದನ್ನೇ ನಾನು ಎಂದೆಂದಿನಿಂದ ಮಾಡುತ್ತ ಇದ್ದೇನೆ. ನಾನು ಅವರೊಡನೆ ತರ್ಕಿಸುವುದಕ್ಕಿಂತ ಅವರ ಹೃದಯವನ್ನು ವಿನಂತಿಸುವುದು ಹೆಚ್ಚು. ಯಾಕೆಂದರೆ ತರ್ಕಕ್ಕಿಂತ ವಿನಂತಿಯು ಹೆಚ್ಚು ಪರಿಣಾಮಕಾರಿಯಾಗಿದೆ. ಪರಂತು ವಿಷಯದ ಸ್ಪಷ್ಟೀಕರಣಕ್ಕೆ ನಾನು ತರ್ಕಿಸುವುದೂ ಇದೆ'—ಹೀಗೆ ಮಹಾತ್ಮಾಜಿಯವರೆಂದಾಗ ಡಾಕ್ಟರ ಚೆಸ್ಟರಟನರು ಆ ಉತ್ತರದಿಂದ ಬಹಳ ಪ್ರಭಾವಿತರಾದರು.

ಗಾಂಧಿಯವರಿಗೆ ದೈವಾನುಗ್ರಹ

ಡಾಕ್ಟರ ಚೆಸ್ಟರಟನ್ನರು ಹೊರಟುಹೋದರು. ಆದರೆ ಅವರು ಪುನಃ ಶೇಗಾಂವಿಗೆ ಹಿಂತಿರುಗಿ ಬರಬೇಕಾಯಿತು. ಸಂಭಾಷಣೆಯು ನಡೆಯುತ್ತಿದ್ದಾಗ ಕಲ್ಲಿನವಾಕರ ಎಂಬವರು ಆಶ್ರಮದಲ್ಲಿ ಮಂಚದಮೇಲೆ ಮಲಗಿರುವ ವಿಷಯವು ಚೆಸ್ಟರಟನ್ನರ ತಿಳುವಳಿಕೆಗೆ ಬಂದಿತು. ಕಲ್ಲಿನವಾಕರು ಮರಣೋನ್ಮುಖರಾಗಿರುವುದರಿಂದ ಗಾಂಧಿಯವರು ಬಹಳ ಚಿಂತಾಕುಲರಾಗಿದ್ದರು. ಆದ್ದರಿಂದ ಕಲ್ಲಿನವಾಕರ ಚಿಕಿತ್ಸೆಗೆ ಡಾಕ್ಟರ ಸುಶೀಲಾ ನಾಯರರ ಸಹಾಯಕ್ಕೆ [illegible] ಒಬ್ಬ ತಜ್ಞರನ್ನು ಕರೆಸುವ ಆಲೋಚನೆಯು ಗಾಂಧಿಯವರಿಗಿದ್ದಿತು. ಡಾಕ್ಟರ ಚೆಸ್ಟರಟನ್ನರು ಪೂನೆಗೆಂದು ಹೊರಟು ಹೋದೊಡನೆಯೆ ಗಾಂಧಿಯವರು ಮುಂಬಾಯಿಗೆ ತಜ್ಞರ ಬಗ್ಗೆ ತಂತಿ ಕೊಡಲು ಸಿದ್ಧರಾದರು. ಪರಂತು ಅಷ್ಟರಲ್ಲೇ ಚೆಸ್ಟರಟನ್ನರು ತಮ್ಮ ಪೂನೆಯ ಕಾರ್ಯಕ್ರಮವನ್ನು ರದ್ದುಮಾಡಿ ಪುನಃ ಶೇಗಾಂವಿಗೆ ಮರಳಿದರು. ಅದನ್ನು ಕಂಡು ಮಹಾತ್ಮಾಜಿಯವರಿಗೆ ಪರಮಾಶ್ಚರ್ಯವಾಯಿತು. ಚೆಸ್ಟರಟನ್ನರು ಪೂನೆಗೆ ಹೋಗಿ ಅಲ್ಲಿ ದ ನಟ್ಟಿಗೆ ಮಲಯತಿಗೆ ಪ್ರಯಾಣಮಾಡುವವರಿದ್ದರು. ಅವರು ತಮ್ಮ ಕಾರ್ಯಕ್ರಮದಲ್ಲಿ ಬದಲಾವಣೆ ಮಾಡಿದುದನ್ನು ಕಂಡು ಗಾಂಧಿಯವರು ಹೇಳಿದರು—'ದೈವಾನುಗ್ರಹವೆಂದರೆ ಹೀಗೆ! ಕಲ್ಲಿನವಾಕರ ಚಿಕಿತ್ಸೆಗೆ ಮುಂಬಾಯಿಯಿಂದ ತಜ್ಞರನ್ನು ತರಿಸುವ ಮೊದಲೇ ಡಾಕ್ಟರ ಚೆಸ್ಟರಟನ್ನರ ಬರವು! ನನ್ನ ಜೀವನದಲ್ಲಿ ಇಂಥ ಘಟನೆಯು ನಡೆದಿರುವುದು ಇದು ಮೊದಲನೆಯ ಬಾರಿಯಲ್ಲ. ಹಿಂದೆ ಅನೇಕ ಬಾರಿ ಹಾಗೆ ನಡೆದಿದೆ. ಅವುಗಳೆಲ್ಲ [illegible] ಸಂಭವಗಳೆಂದು ತಿಳಿಯುವುದಿಲ್ಲ, ದೇವರ ಅಪ್ಪಣೆಯ [illegible] ಭಾವಿಸುತ್ತೇನೆ.'

ಸುಭಾಷ ಬಾಬುಗಳ ಮೇಲೆ ಅವಿಶ್ವಾಸವಿಲ್ಲ

ಕಾಂಗ್ರೆಸ ವರ್ಕಿಂಗ ಕಮಿಟಿಯ ರಾಜಿನಾಮೆಯ ಕುರಿತು ಬಾಬುರಾಜೇಂದ್ರ ಪ್ರಸಾದರ ಸಂಭಾಷಣೆ

'ಆವಸರದಿಂದ ನಾವು ಏನನ್ನೂ ಮಾಡಲಿಲ್ಲ. ಗಂಭೀರವಾಗಿ ಆಲೋಚಿಸಿ ಆಗುಹೋಗುಗಳ ಪರಿಣಾಮವನ್ನು ಪೂರ್ಣ ತಿಳಕೊಂಡ ಅನಂತರವೇ ವರ್ಕಿಂಗ ಕಮಿಟಿಯ ಸದಸ್ಯ ಸ್ಥಾನಗಳಿಗೆ ನಾವು ರಾಜಿನಾಮೆ ಕೊಟ್ಟೆವು. ನಾವು ರಾಜಿನಾಮೆ ಕೊಟ್ಟದು ಕಾಂಗ್ರೆಸಿನ ಮತ್ತು ದೇಶದ ಹಿತಕ್ಕಾಗಿ ಇರುವುದು' ಎಂದು ದಿಲ್ಲಿಯಲ್ಲಿ ಪತ್ರಿಕಾ ಪ್ರತಿನಿಧಿಗಳು ಭೇಟಿಯಾದಾಗ ಬಾಬುರಾಜೇಂದ್ರ ಪ್ರಸಾದರು ಹೇಳಿದರು.

ಪ್ರಜಾಸತ್ತೆಯ ನಿಯಮಪಾಲನೆ

'ಅಲ್ಪಸಂಖ್ಯಾಕರಾದವರು ಬಹುಸಂಖ್ಯಾಕರ ಪರವಾಗಿ ರಾಜಿನಾಮೆ ಕೊಟ್ಟು ಅವರು ಅಧಿಕಾರಕ್ಕೆ ಬರುವಂತೆ ನೋಡುವುದು ಪ್ರಜಾಸತ್ತೆಯ ಮೂಲ ಸಿದ್ಧಾಂತವಾಗಿದೆ. ಪ್ರಜಾಸತ್ತೆಯ ನಿಯಮಪಾಲನೆಯನ್ನು ನಾವು ಮಾಡಿರುವುದಲ್ಲದೆ, ರಾಜಿನಾಮೆ ಕೊಟ್ಟ ನಾವು ಅದಕ್ಕೆ ವಿರೋಧವಾಗಿ ಏನನ್ನೂ ಮಾಡಿಲ್ಲ.'

'ನಮ್ಮ ರಾಜಿನಾಮೆಯನ್ನು ಬಹುಸಂಖ್ಯಾಕರೊಂದಿಗೆ ಅಸಹಕಾರವೆಂದು ಯಾಕೆ ತಿಳಿಯಬೇಕೋ ಗೊತ್ತಾಗುವುದಿಲ್ಲ. ಅಧಿಕಾರದಲ್ಲಿದ್ದ ಒಂದು ಪಕ್ಷವು ತಾನು ಅಲ್ಪಸಂಖ್ಯಾಕವಾಗಿದೆ ಎಂದು ತಿಳಿದೊಡನೆ ಅಧಿಕಾರ ಪದವಿಗೆ ರಾಜಿನಾಮೆ ಕೊಡುವುದು ಅಸಹಕಾರವೆಂದಾಗುವುದಿಲ್ಲ. ನಾವು ರಾಜಿನಾಮೆ ಕೊಟ್ಟು ಪ್ರಜಾಸತ್ತೆಯ ನೀತಿನಿಯಮಗಳನ್ನು ಗೌರವಿಸಿದ್ದೇವೆ.'

ಎಡಬಲ ಪಕ್ಷಗಳು

'ಎಡಬಲ ಪಕ್ಷಭೇದದಿಂದ ಅಧ್ಯಕ್ಷ ಚುನಾವಣೆ ನಡೆದಿರುವುದಿಲ್ಲವೆಂದು ಅನೇಕರು ಹೇಳುತ್ತಿರುವುದಕ್ಕೆ ನಿಮ್ಮ ಅಭಿಪ್ರಾಯವೇನು?' ಎಂದು ಪತ್ರಿಕಾ ಪ್ರತಿನಿಧಿಯು ಕೇಳಿದಾಗ ರಾಜೇಂದ್ರ ಪ್ರಸಾದರು ಹೀಗೆಂದರು—'ಎಡಬಲ ಪಕ್ಷವೆಂದರೇನೆಂದು ಗೊತ್ತಾಗಿ ಪ್ರತಿನಿಧಿಗಳು ಅಧ್ಯಕ್ಷರನ್ನು ಚುನಾಯಿಸಿರುವುದಿಲ್ಲವೆಂಬುದು ನಿಜ. ಆದರೂ ಸುಭಾಷ ಬಾಬುಗಳು ಚುನಾವಣೆಯಾಗುವ ಮೊದಲು ಹೊರಡಿಸಿದ ಪ್ರಕಟಣೆಗಳಲ್ಲಿ ಅವರ ಎಡಪಕ್ಷದವರೆಂದು ಸ್ಪಷ್ಟವಾಗಿ ಹೇಳಿದ್ದರು. ಆದ್ದರಿಂದ ಸುಭಾಷರ ವಿಜಯವನ್ನು ಎಡಪಕ್ಷದ ವಿಜಯವೆಂದೇ ಹೇಳಬಹುದು.

ಸತ್ಯ ಸ್ಥಿತಿ

'ಚುನಾವಣೆಯಾದ ಅನಂತರ—ತನ್ನ ವಿಜಯವು ಎಡಪಕ್ಷದ ವಿಜಯವೆಂದು ಹೇಳಲಾಗುವುದಿಲ್ಲವಾಗಿ ಸುಭಾಷರು ಪ್ರಕಟಣೆ ಕೊಟ್ಟಿರುತ್ತಾರೆ. ಅದು ಹೇಗಿದ್ದರೂ ಅವರು ಮೊದಲು ಹೊರಡಿಸಿದ ಪ್ರಕಟನೆಯನ್ನು ಅಲ್ಲಗಳೆದು ಉಪೇಕ್ಷಿಸಲಿಕ್ಕಾಗುವುದಿಲ್ಲ. ಚುನಾವಣೆಯ ಕಾಲಕ್ಕೆ ಪರಿಸ್ಥಿತಿ ಹೇಗಿತ್ತೋ, ಅದನ್ನು ಹೊಂದಿಕೊಂಡೇ ನಾವು ನಮ್ಮ ಮುಂದಿನ ಕರ್ತವ್ಯಗಳನ್ನು ಆಲೋಚಿಸುವುದು ಸ್ವಾಭಾವಿಕವಾಗಿದೆ.'

'ಸುಭಾಷರ ಅಭಿಪ್ರಾಯಗಳನ್ನು ತ್ರಿಪುರಿ ಕಾಂಗ್ರೆಸ ಮನ್ನಿಸದಿದ್ದರೆ ಮುಂದೆ ಏನಾಗಬಹುದು?' ಎಂದು ಪತ್ರಿಕಾ ಪ್ರತಿನಿಧಿಯು ಕೇಳಿದಾಗ 'ಅದನ್ನು ನಾನು ಹೇಗೆ ಉತ್ತರಿಸಬಹುದು? ಆ ಪ್ರಶ್ನೆಯನ್ನು ನೀವು ಬೇರೆ ಕಡೆ ಕೇಳಬೇಕಾಗಿದೆ' ಎಂದು ರಾಜೇಂದ್ರ ಪ್ರಸಾದರು ಹೇಳಿದರು.

ಅಧ್ಯಕ್ಷರ ಮೇಲೆ ಅವಿಶ್ವಾಸವಿಲ್ಲ

'ಅಧ್ಯಕ್ಷರ ಮೇಲೆ ಪಂಡಿತ ಪಂತರು ಒಂದು ಅವಿಶ್ವಾಸದ ಠರಾವನ್ನು ತಂದರೆ ಬಲಪಕ್ಷದವರ ಅಭಿಪ್ರಾಯವೇನು?' ಎಂದು ಪತ್ರಿಕಾ ಪ್ರತಿನಿಧಿಯು ಕೇಳಿದಾಗ—'ಬಲಪಕ್ಷದವರ ಪರವಾಗಿ ಮಾತನಾಡುವ ಅಧಿಕಾರವು ನನಗಿಲ್ಲ. ಮೊದಲನೆಯದಾಗಿ ಬಲಪಕ್ಷವೆಂಬ ಬೇರೆ ಪಕ್ಷವೇ ಅಸ್ತಿತ್ವದಲ್ಲಿರುವುದಿಲ್ಲ. ಯಾರನ್ನು ಬಲಪಕ್ಷದವರೆಂದು ಕರೆಯುತ್ತಾರೋ ಅದು ನನಗೆ ತಿಳಿಯುವುದಿಲ್ಲ. ನನ್ನ ಮಟ್ಟಿಗೆ ನಾನು ಹೇಳುವದಾದರೆ ನನಗೆ ಅಧ್ಯಕ್ಷರ ಮೇಲೆ ಅವಿಶ್ವಾಸವನ್ನು ಸೂಚಿಸುವ ಆಲೋಚನೆಯೇ ಇಲ್ಲ' ಎಂದು ಅವರೆಂದರು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಸದ್ವೈದ್ಯಶಾಲಾ ಪನ್ನೀರು

ಹೊಸದಾದ ಗುಲಾಬಿ ಹೂಗಳಿಂದ ಶ್ರೇಷ್ಠವಾದ ರೀತಿಯಲ್ಲಿ ಎರಡು ಸಲ ಭಟ್ಟಿಯಿಳಿಸಿ ತಯಾರಿಸಲ್ಪಟ್ಟಿದೆ. ಮಿಶ್ರಣವು ಖಂಡಿತವಾಗಿಯೂ ಇಲ್ಲ. ವಿಶೇಷವಾದ ತಲೆನೋವು, ಕಣ್ಣುರಿ, ಕಣ್ಣುನೋವು ಇತ್ಯಾದಿ ವಿಕಾರಗಳಲ್ಲಿ ಈ ಪನ್ನೀರನ್ನು ಧೈರ್ಯವಾಗಿ ನೆತ್ತಿಗೂ ಕಣ್ಣಿಗೂ ಉಪಯೋಗಿಸಬಹುದು.

ಬೆಲೆ: ನಂ. ೧ 0–4–0 ನಂ. ೨ 0–6–0

ಹಿಮತೈಲ

ಶುದ್ಧವಾದ ತಿಲತೈಲಕ್ಕೆ ಅಮೂಲ್ಯ ಮೂಲಿಕೆಗಳನ್ನು ಸೇರಿಸಿ ಶಾಸ್ತ್ರೀಯವಾಗಿ ತಯಾರಿಸಿರುವ ತೈಲ. ಕೂದಲು ಬೆಳವಣಿಗೆಯನ್ನು ಹೆಚ್ಚಿಸಿ, ಕಣ್ಣುರಿ, ಕೈಕಾಲುರಿ ಬಿಸಿಲು ಹೆಚ್ಚಿದ ಕಾಲ್ಗಳಲ್ಲಿ ವೃದ್ಧಿಹೊಂದುವ ತಲೆನೋವು ಇತ್ಯಾದಿ ಪಿತ್ತವಿಕಾರಗಳನ್ನು ಶಮನಪಡಿಸುತ್ತದೆ.

ಬೆಲೆ: ರೂ. 1–0–0 ಮತ್ತು 0–8–0

ನಂಜನಗೂಡು ಸದ್ವೈದ್ಯ ಶಾಲಾ.

ಬ್ರಾಂಚ್: ರಥಬೀದಿ ಮಂಗಳೂರು

ಬರೇ ರೂ. 1–4–0ಕ್ಕೆ 8 ಗಡಿಯಾರಗಳು ಮತ್ತು 1295 ಫ್ಯಾನ್ಸಿ ಬಹುಮಾನಗಳು

ಒಂದೇ ಬಾರಿಗೆ ರೂ. 1–4–0ಕ್ಕೆ ನಮ್ಮ 8 ಸೀಸೆ ಪರಿಮಳದ ಸೆಂಟನ್ನು ಅಥವಾ 6 ಸೀಸೆ ಕೂದಲಿನ ತೈಲವನ್ನು ತರಿಸಿಕೊಳ್ಳುವವರಿಗೆ 2 ಗೋಲ್ಡ ಗಿಲ್ಟಿನ ಡಮ್ಮಿ ರಿಸ್ಟುವಾಚುಗಳೂ ಒಂದು ಕಟ್ಟುವ ಪಟ್ಟಿ ಕೂಡ



1 ಪಾಕೆಟು ವಾಚು, ಒಂದು ಜಿಲ್ಲೆಟ್ ರೇಜರು, ಒಂದು ಶೇವಿಂಗ್ ಬ್ರಷು, ಒಂದು ಶೇವಿಂಗ್ ಸಾಬೂನು, ಒಂದು ಕನ್ನಡಿ, ಒಂದು ಬಾಚಣಿಗೆ, 11 ಕೆರೆಟ್ ರೋಲ್ಡ ಗೋಲ್ಡ ನಿಬ್ಬಿನ ಫೌಂಟಿನ್ ಪೆನ್ನು, ಒಂದು ಸೆಟ್ಟು ರೋಲ್ಡ ಗೋಲ್ಡ ಗುಂಡಿಗಳು, ಒಂದು ಪಾಕೆಟ್ ಪಾಕರು, ಒಂದು ಚೂರಿ, ಒಂದು ಪೇರ್ ಕನ್ನಡಕ, ಒಂದು ಬಂಗಾರದ ಗಿಲ್ಟಿನ ಉಂಗುರ, 300 ಫೀಟ್ ಪ್ರಕಾಶ ಬೀಳುವ ಒಂದು ಟೋರ್ಚ್ ಲೈಟು ಅಥವಾ 10 ವರ್ಷ ಗ್ಯಾರಂಟಿ ಇರುವ ಗಟ್ಟಿಯಾದ ಮೆಶಿನರಿಯಿಂದ ಮಾಡಲ್ಪಟ್ಟ ಒಂದು ಜರ್ಮನ್ ಟೈಮ್‌ಪೀಸೂ ಇವುಗಳನ್ನು ಉಚಿತವಾಗಿ ಕೊಡುತ್ತೇವೆ. ಪೇಕಿಂಗ್ ಮತ್ತು ಟಪ್ಪಾಲು ಖರ್ಚು 0—14—0 ಪ್ರತ್ಯೇಕ

The American Commercial Stores, Post Box No. 12213 Calcutta (S. A)

ಶ್ರೇಷ್ಠ ತರದ ದೃಷ್ಟಿಚಕ್ರಗಳಿಗೆ



ರಬ್ಬರು ಮೊಹರುಗಳಿಗೆ

ನಾಯಕ್ಸ್ ಸ್ಟೋರ್ಸ್

ರಥಬೀದಿ, ಮಂಗಳೂರು.

ಹಿಟ್ಲರ ಸ್ಟಾಲೀನರೊಳಗೆ ಒಪ್ಪಂದವಾಗಬಹುದು!

ರಷ್ಯವು ಬಲಕ್ಕೆ ಸರಿದರೆ ಜರ್ಮನಿಯು ಎಡಕ್ಕೆ ಸರಿಧಿದೆ!!

ಎಣ್ಣೆ ಸೀಗೆಯಂತಿದ್ದ ಹಿಟ್ಲರ ಸ್ಟಾಲೀನರೊಳಗೆ ಹಾಲು ಸಕ್ಕರೆಯ ಮೈತ್ರಿ ಉಂಟಾಗಬಹುದೆಂದು ರಾಜಕಾರಣ ಪಟುಗಳು ಊಹಿಸಲಾರಂಭಿಸಿರುವರು. ನಾಝಿ ಬೆಂಕಿಗಳಂತೆ ಹಿಟ್ಲರ ಕಚ್ಚಾಡಿಕೊಳ್ಳುತ್ತಿದ್ದ ನಾಜಿ–ಬೊಲ್ಶೆವಿಗಳು ಈಗ ಮೌನರಾಗಿರುವುದು ಈ ಊಹನೆಗೆ ಬಲವಾದ ಆಧಾರವಾಗಿದೆ.

ಜರ್ಮನ ನಾಝಿಗಳಿಗೆ ಯಹೂದಿಯರನ್ನು ಕಂಡರಾಗುವುದಿಲ್ಲ. ಪರಂತು ರಷ್ಯದ ಬೊಲ್ಶೆವಿಕರು ದೇಶಭ್ರಷ್ಟರಾದ ಯಹೂದಿಯರಿಗೆ ಸುಸ್ವಾಗತವನ್ನು ಕೊಟ್ಟಿದ್ದಾರೆ. ಆದರೂ ಕೂಡ ಈ ನಾಝಿಗಳು ಬೊಲ್ಶೆವಿಕರನ್ನು ಮೊದಲಿನಂತೆ ಬೈದು ಭಂಗಿಸುವುದಿಲ್ಲ. ಯಾಕಾಗಿಯೋ? ಎಂದು ಕೇಳಿದರೆ ಹಿಟ್ಲರ ಸ್ಟಾಲೀನರೊಳಗೆ ಒಪ್ಪಂದವುಂಟಾಗುತ್ತಿರುವದೆಂದು ಕೆಲವರು ಅನ್ನತೊಡಗಿರುವರು.

ಒಪ್ಪಂದ ಹೇಗಾಗುವುದು?

ಹಿಟ್ಲರನ ಕಣ್ಣು ರಷ್ಯದ ಯುಕ್ರೈನ ಪ್ರದೇಶದ ಮೇಲಿದೆ. [illegible] ಪ್ರದೇಶವನ್ನು ತನ್ನ ಅಂಕಿತಕ್ಕೆ ಒಳಪಡಿಸಬೇಕೆಂದ[illegible] ಅವನಿಗೆ ಬಲವಾದ ಆಶೆಯಿದೆ. ಸ್ಟಾಲೀನನು ತನೆ ಒಪ್ಪಂದ ಮಾಡಿಕೊಳ್ಳುವದಕ್ಕೋಸ್ಕರ ಹಿಟ್ಲರನು ಯುಕ್ರೈನ್ ಸಂಬಂಧವಾದ ತನ್ನ [illegible] ಕೆಯ ಮೇಲೆ ಎಳ್ಳುನೀರ ಬಿಡುವನೆ? ಇದುವರೆಗೆ ಯುಕ್ರೈನು ರಷ್ಯದ ಸಂಪತ್ಸಮೃದ್ಧವಾದ [illegible] ಪ್ರಾಂತ್ಯ. ಹಿಟ್ಲರನೊಡನೆ ಒಪ್ಪಂದ ಮಾಡಿಕೊಳ್ಳುವದಕ್ಕೋಸ್ಕರ ಸ್ಟಾಲೀನನು ಆ ಯುಕ್ರೈನನ್ನು ಹಿಟ್ಲರನಿಗೆ ಕೊಟ್ಟುಬಿಡುವನೆ? ಇವುಗಳಲ್ಲಿ ಯಾವುದು ಸಂಭವನೀಯವಾಗಿದೆ? ನ್ಯಾಯಶಃ ಹಿಟ್ಲರನೊಡನೆ ಒಪ್ಪಂದ ಮಾಡಿಕೊಳ್ಳಲಿಕ್ಕೆ ಸ್ಟಾಲೀನನು ಯುಕ್ರೈನನ್ನು ಹಿಟ್ಲರನಿಗೆ ಕೊಟ್ಟುಬಿಡಬಹುದು.

ಯಾಕೆ ಈ ಒಪ್ಪಂದ?

ಯುಕ್ರೈನು ಸಂಪತ್ಸಮೃದ್ಧವಾದ ಪ್ರಾಂತವಾಗಿರುವುದು ನಿಜ. ಆದರೆ ಅಂಥ ಪ್ರಾಂತ ರಷ್ಯದಲ್ಲಿ ಅದೊಂದೇ ಇರುವುದಲ್ಲ. ಅದರಂಥ ಇನ್ನೂ ಅನೇಕ ಸಂಪತ್ಸಮೃದ್ಧ ಪ್ರಾಂತ್ಯಗಳು ರಷ್ಯದಲ್ಲಿವೆ. ಆದರಿಂದ ಪೀಠೆ [illegible]ಗಳು ಇರುವದಾದರೆ ಸ್ಟಾಲೀನನು ಇದೊಂದು ಪ್ರಾಂತ್ಯವನ್ನು ಹಿಟ್ಲರನಿಗೆ ಕೊಟ್ಟು ವಿವಾದವು ಆಕ್ರಮಣದ ಸಂಗತಿಯಲ್ಲ. ಅದೊಂದು [illegible] ನಾವನೆಯನ್ನು ಮಾಡಿ, ಜನರ ಅಪೇಕ್ಷೆಯಂತೆ ತಾನು ಅದನ್ನು ಬಿಟ್ಟುಕೊಟ್ಟೆನೆಂದು ಅವನು ಹೇಳಬಹುದು. ಸ್ವಯಂ ನಿರ್ಧಾರದ ಅಧಿಕಾರವು ಪ್ರತಿಯೊಂದು ಜನಾಂಗಕ್ಕೆ ಇರುವುದನ್ನು ಸ್ಟಾಲೀನನು ಮನ್ನಿಸುತ್ತಾನೆ. ಯುಕ್ರೈನಿನ ಜನರು ರಷ್ಯಕ್ಕೆ ಅಧೀನವಾಗಿ ಇರುವುದನ್ನು ಬಿಟ್ಟು ಜರ್ಮನಿಗೆ ಅಧೀನವಾಗಿರಲು ಅಪೇಕ್ಷಿಸಿದರೆ, ಅಂಥ ಅವರ ಅಪೇಕ್ಷೆಯನ್ನು ನಡೆಸಿಕೊಡುವುದು ಸ್ಟಾಲೀನನ ನೀತಿಗೆ ಭಂಗವನ್ನುಂಟುಮಾಡುವುದಿಲ್ಲ. ಸ್ಟಾಲೀನನು ಹಿಟ್ಲರನೊಡನೆ ಒಪ್ಪಂದ ಮಾಡಿಕೊಳ್ಳುವ ರಹಸ್ಯವು ಬೇರೆ ಇದೆ. ರಷ್ಯದ ಭಾಗ್ಯನಿರ್ಣಯವು ಪಶ್ಚಿಮದಲ್ಲಿ ಜರ್ಮನಿಯೊಂದಿಗೆ ಇಲ್ಲ. ಪರಂತು ಪೂರ್ವದಲ್ಲಿ ಚೀನ ಜಪಾನಗಳೊಡನೆ ಆಗಬೇಕಾಗಿದೆ. ಅದಕ್ಕೋಸ್ಕರ ರಷ್ಯಕ್ಕೆ ಜರ್ಮನಿಯು ಸ್ನೇಹದಿಂದಿರುವುದು ಅಗತ್ಯವಾಗಿದೆ. ಜರ್ಮನಿಯ ಸ್ನೇಹವನ್ನು ಸಂಪಾದಿಸಲಿಕ್ಕೆ ಸ್ಟಾಲೀನನು ಹಿಟ್ಲರನಿಗೆ ಯುಕ್ರೈನನ್ನು ಬಿಟ್ಟುಕೊಡಲು ಸಿದ್ಧನಾಗಿದ್ದಾನೆ.

ಒಪ್ಪಂದಕ್ಕೆ ಇರುವ ವಿಘ್ನ

ಹಿಟ್ಲರ ಸ್ಟಾಲೀನರ ಈ ಒಪ್ಪಂದವಾಗಲಿಕ್ಕೆ ಹೆಚ್ಚಿಗೆ ವಿಘ್ನಗಳೇನೂ ಇರುವುದಿಲ್ಲ. ಈಗ ಆಗಿನಸ್ಥಿತಿಯ ರೀತಿನೀತಿಗಳಲ್ಲಿ ಹೆಚ್ಚಿನ ಅಂತರವು ಕಂಡುಬರುವದಿಲ್ಲ. ಸ್ಟಾಲೀನನು ಬಲಕ್ಕೆ ಒಂದಿಷ್ಟು ಸರಿದಿದ್ದಾನೆ, ಹಿಟ್ಲರನು ಮೆಲ್ಲಮೆಲ್ಲಗೆ ಎಡಕ್ಕೆ ಸರಿಯಹತ್ತಿದ್ದಾನೆ. ಅವರ ನೀತಿಸೂತ್ರಗಳಲ್ಲಿ ಕಾಣಿಕೆಯ ಅಂತರವಷ್ಟೆ ಉಳಿದಿರುವುದು. ಇದ್ದರೂ ಅವರು ಬೇರ್ಪಟ್ಟಿರುವದೇ ಒಂದಾಗಬೇಕು, ಅಲ್ಲನಾದರೆ ಅವರೊಳಗೆ ಜಗಳದ ವೈತ್ರಿಯು ಉಂಟಾಗಬೇಕು. ಈಗ ಅವರ ವೈತ್ರಿಗೆ ಒಂದೇ ಒಂದು ವಿಘ್ನವಿದೆ. ಹಿಟ್ಲರನು ಯಹೂದಿಯರ ದ್ವೇಷಿ; ಸ್ಟಾಲೀನನು ಅವರ ಜೀವದ ಗೆಳೆಯ. ಯಹೂದಿ ಪ್ರಕರಣದಿಂದಾಗಿಯೇ ಅವರಿಬ್ಬರೊಳಗೆ ಒಪ್ಪಂದವಾಗದೆ ಇದೆ. ತನ್ನಂತೆ ಸ್ಟಾಲೀನನೂ ಯಹೂದಿಯರನ್ನು ದೇಶಭ್ರಷ್ಟರನ್ನಾಗಿ ಮಾಡಬೇಕೆಂದು ಹಿಟ್ಲರ ಹೇಳುತ್ತಾನೆ. ಅದು ಹೇಗೆ ಸಾಧ್ಯವಾಗುವುದು ಎಂದು ಸ್ಟಾಲೀನನು ಕೇಳುತ್ತಾನೆ. ಈಗಿದ್ದಂತೆ ತಾನೂ ಯಹೂದಿಯರ ದ್ವೇಷಿಗನಾಗಲಿಕ್ಕೆ ಸ್ಟಾಲೀನನು ಎಷ್ಟು ಮಾತ್ರಕ್ಕೂ ಒಲ್ಲನು. ಪರಿಸ್ಥಿತಿಯ ಸದುಪಯೋಗ ಮಾಡಿಕೊಂಡು ಇತರ ಪ್ರಜಾಸತ್ತಾತ್ಮಕ ರಾಷ್ಟ್ರಗಳು ಪ್ರಯತ್ನಪಟ್ಟರೆ ಅವರಿಬ್ಬರೊಳಗೆ ಸಂಧಿಯಾಗಲಿಕ್ಕಿಲ್ಲ. ಆದರೆ ಯುರೋಪದ ರಾಜಕೀಯ ಪರಿಸ್ಥಿತಿಯೆ ದಿನದಿನಕ್ಕೆ ಬದಲಿಸುತ್ತಿರುವುದು.

ಯ ಹೊಸ ಪ್ರಕ್ರಿಯು ಹಿಟ್ಲರ ಸ್ಟಾಲೀನರೊಳಗೆ ಇಬ್ಬರಿಗೂ ಸಮ್ಮತವಾಗುವ ಯಾವುದಾದರೂ ಒಂದು [illegible] ದೊರೆತರೆ ಹಿಟ್ಲರ ಸ್ಟಾಲೀನರೊಳಗೆ ಒಪ್ಪಂದವಾಗುವುದು ಸುಲಭವಾದೀತು. ಹಾಗಾಗಿಬಿಟ್ಟರೆ ಪ್ರಜಾಸತ್ತಾತ್ಮಕ ರಾಷ್ಟ್ರಗಳ ಮೇಲೆ [illegible] ಬಿದ್ದಂತೆಯೆ ಸರಿ.

ಪ್ರಜಾಸತ್ತೆಗಳ ಮೇಲೆ ಆಕ್ರಮಣ

ಸರ್ವಾಧಿಕಾರಿಗಳು ಎಲ್ಲ ಕಡೆಗಳಿಂದ ಪ್ರಜಾಸತ್ತೆಗಳನ್ನು ಆಕ್ರಮಿಸುತ್ತಿದ್ದಾರೆ. ಅದಕ್ಕೋಸ್ಕರ ಅವರು ತಮ್ಮ ಹಿ[illegible] ಮರೆಯುತ್ತಿದ್ದಾರೆ. [illegible] ಪ್ರಕರಣದಲ್ಲಿ ಫ್ರಾನ್ಸು [illegible] ಪ್ರಜಾಸತ್ತಾಕ ರಾಷ್ಟ್ರಗಳು ಸ್ಟಾಲೀನನನ್ನು [illegible]ನಲ್ಲಿ ಬಿಟ್ಟು [illegible], ಸರ್ವಾಧಿಕಾರಿಗಳ [illegible] ಪ್ರಜಾಸತ್ತೆಗಳು ಸರ್ವಾಧಿಕಾರಿಗಳ [illegible] [illegible]

S. U. N. & Co.,
Silk Merchants,
[illegible] BENARES CITY

[illegible]
18 [illegible] 2½ [illegible]
ಸಣ್ಣ ಬುಟ್ಟಿ ಶೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣತರದ 18 ಮೊಳ ಸಣ್ಣಬುಟ್ಟಿ ಶೀರೆಗಳು ರೂ. 35ರಿಂದ ರೂ 50. ಪದರು ಸಾದಾ ಶೀರೆ 18 ಮೊಳ ರೂ 32ರಿಂದ ರೂ. 65. ಉದ್ದ ಮೊಳ 16, ಅಗಲ 2½ ರೂ 20ರಿಂದ 35ರ ವರೆಗೆ [illegible] ಕಳುಹಿಸಲಾಗುವದು.
ವಿಳಾಸ:
[illegible]

'DILROZ' [illegible]

Dil Roz' is a sure cure for Oriental sores, [illegible] all kinds of deep-rooted sores, skin eruptions, Pimples, Eczema, Ringworm, [illegible] Fistula auxillary Abscess.

There is no need of dressing the wounds nor are baths prohibited.

Price Rs. 2. Postage extra

TAHIR DIN,
[illegible] LAHORE.

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೊಯ್ಲೆಟಿಗೆ ಕನ್ನಡ ನಾಡಿನ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

[illegible]

ಎನ್. ಎಮ. ನಾಥ್ ಮತ್ತು ಕಂಪನಿ.
ವಿಲೆ ಪಾರ್ಲೆ ಮುಂಬಯಿ

ಮೈಸೂರು ಶ್ರೀಮನ್ಮಹಾರಾಜರವರ ಕೃಪಾಪೋಷಿತರಾದ

ಗುಬ್ಬಿ ಶ್ರೀ ಚೆನ್ನಬಸವೇಶ್ವರಸ್ವಾಮಿ ಥಿಯೇಟ್ರಿಕಲ್ ಕಂಪೆನಿ

(ರಿಜಿಸ್ಟರ್ಡ್)

ಮಂಗಳೂರು ಮೈದಾನದಲ್ಲಿ ಹೊಸದಾಗಿ ಕಟ್ಟಿದ ತಮ್ಮ ಸ್ವಂತ

ಧನಲಕ್ಷ್ಮೀ ಥಿಯೇಟರಿನಲ್ಲಿ

ತಾ **15-3-'39**ನೇ ಬುಧವಾರದಿಂದ ತಾ **26-3-'39**ನೇ ಭಾನುವಾರ

ಪೂರ್ತಿ **12** ದಿನಗಳು ಮಾತ್ರ ಪ್ರತಿ ದಿನ ರಾತ್ರೆ **9-30** ಗಂಟೆಗೆ

ಸ್ವರ್ಣಮಹೋತ್ಸವದ ಸಲುವಾಗಿ ಅತಿಶಯ ದ್ರವ್ಯ ವ್ಯಯಮಾಡಿ ತಯಾರಿಸಿದ

ಕುರುಕ್ಷೇತ್ರ ಅಥವಾ ಭಗವದ್ಗೀತಾ

ಎಂಬ ನಾಟಕವನ್ನಭಿನಯಿಸುತ್ತಾರಾದ್ದರಿಂದ ಸಜ್ಜನರು ಪ್ರೋತ್ಸಾಹಿಸಬೇಕೆಂಬ ಪ್ರಾರ್ಥನೆ

ಎಸ್. ಪಿ. ನರಸಿಂಹ ಮೂರ್ತಿ, ಎಂ. ಎ.,
ಮೆನೇಜರ್.

ಕರ್ನಾಟಕ ನಾಟಕ ಸಾರ್ವಭೌಮರ.
ಜಿ. ಎಚ್. ವೀರಣ್ಣ, [illegible]
ಪ್ರೊಪ್ರೈಟರ್

'ಜವಹರಲಾಲ ನೆಹರು'

ಪ್ರಸಿದ್ಧ ಗ್ರಂಥಕರ್ತನ ಪ್ರಶಂಶಾತ್ಮಕ ಲೇಖ

ಜವಾಹರಲಾಲರನ್ನು ಮೂರನೆ ಬಾರಿಗೆ ರಾಷ್ಟ್ರಪತಿಯಾಗಿ ಚುನಾಯಿಸಬಾರದೆಂದು ಅನಾಮಧ್ಯೇಯಿಗಳೊಬ್ಬರು ಒಂದು ಪತ್ರಿಕೆಗೆ ಒಂದು ಲೇಖನವನ್ನು ಬರೆದು ಕಳುಹಿಸಿದ್ದರು. ಅದು ಆ ಪತ್ರಿಕೆಯಲ್ಲಿ ಪ್ರಕಟವಾಗಲು, ಅದನ್ನು ಬರೆದವರು ಯಾರೆಂದು ತಿಳಿಯಲು ಜನರು ಕುತೂಹಲದಿಂದ ಇದ್ದರು ಕೊನೆಗೆ ಜವಾಹರಲಾಲರು ತಮ್ಮ ಕೆಲವು ಸ್ನೇಹಿತರಿಗೆ ತಿಳಿಸಿದಂತೆ, ಅವರನ್ನು ನಿಂದಿಸಿ ಬರೆದ ಲೇಖಕರು ಸ್ವತಃ ಅವರೇ ಎಂದು ತಿಳಿಯಿತು ಹೀಗೆ ಮಾಡಿ ತನ್ನ ಅನುಯಾಯಿ ಮತ್ತು ಅಭಿಮಾನಿಗಳ ಮನೋರಂಜನದೊಂದಿಗೆ ಹಿತಶತ್ರುಗಳ ಹೊಟ್ಟೆಯನ್ನು ತಣಿಸಿದ ಜವಾಹರಲಾಲರನ್ನು ಪ್ರಶಂಸಿಸಿ ಜಗದ್ವಿಖ್ಯಾತ ಗ್ರಂಥಕರ್ತರಾದ ಜ್ಹಾನ್ ಗುಂಥರ್ ಎಂಬ ಆಂಗ್ಲೇಯರು 'ಏಷ್ಯ'ದಲ್ಲಿ ಒಂದು ಬೋಧಪ್ರದವಾದ ಲೇಖನವನ್ನು ಬರೆದಿರುವರು. ಅದರ ಕೆಲವು ಉಪಯುಕ್ತವಾದ ಅಂಶಗಳನ್ನು ಇಲ್ಲಿ ಕೊಟ್ಟಿದ್ದೇವೆ

ಗಾಂಧಿಯವರನ್ನು ಇಂಗ್ಲೆಂಡಿನ ಜನರು ಹೆಚ್ಚಾಗಿ ಬಲ್ಲರು. ಆದರೆ ಜವಾಹರಲಾಲರ ಪರಿಚಯವು ಅವರಿಗೆ ಕಡಿಮೆ. ಗಾಂಧಿಯವರ ಹೆಸರು ಕೇಳಿ ಜನರು ಮೈನಡುಗುವುದು ಇಲ್ಲ, ಪರಂತು ಜವಾಹರಲಾಲ ಎಂದೊಡನೆ ಅವರ ರೋಮಾಂಚನವಾಗುವುದು. ಕೆಲವು ಜನ ನಿವೃತ್ತ ಅಧಿಕಾರಿಗಳನ್ನು ಬಿಟ್ಟರೆ ಜವಾಹರಲಾಲರನ್ನು ದ್ವೇಷಿಸುವವರು ವಿಲಾಯತಿಯಲ್ಲಿ ಯಾರೂ ಇರುವುದಿಲ್ಲ. ಆದರೆ ಅನೇಕ ಮಂದಿ ಅವರ ಚಲನವಲನ ಕಾರ್ಯಕ್ರಮಗಳ ಕುರಿತು ಸಶಂಕಿತರಾಗಿರುವರು. ಜವಾಹರಲಾಲರು ಸಮಾಜವಾದಿಗಳೆಂಬುದರಿಂದಲೇ ಅನೇಕರಿಗೆ ಅವರ ಕುರಿತು ಭಯವಾಗುತ್ತದೆ

ಜವಾಹರರು ಬ್ರಿಟಿಷರ ಒಂದು ಆಸ್ತಿ

ಪರಂತು ಅವರ ಕುರಿತು ಭಯಪಡಲಿಕ್ಕೆ ಏನೊಂದು ಕಾರಣವು ಇರುವುದಿಲ್ಲ ಸೂಕ್ಷ್ಮವಾಗಿ ಆಲೋಚಿಸಿದರೆ ಜವಾಹರರು ಬ್ರಿಟಿಷರ ಒಂದು ಆಸ್ತಿ ಎಂದು ಹೇಳಬಹುದು ಅವರು ಸಮಾಜವಾದಿಗಳಾಗಿರುವುದೇ ಬ್ರಿಟಿಷರಿಗೆ ಒಂದು ರಕ್ಷಣೋಪಾಯವಾಗಿದೆ ಜವಾಹರರು ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯಬೇಕೆನ್ನುವರು. ಆದರೆ ಹಿಂದುಸ್ಥಾನದ ರಾಷ್ಟ್ರೀಯ ಅಪೇಕ್ಷೆಗಳನ್ನು ಪೂರೈಸಲಿಕ್ಕೆ ಯಾರಾದರೂ ಸಹಾಯಕ್ಕೆ ಬರುವುದಿದ್ದರೆ ಹಿಟ್ಲರ ಮುಸಲೋನಿಯಂಥ ಫೆಸಿಸ್ಟ ತತ್ವವಾದಿಗಳು ಬರಬೇಕು, ಪರಂತು ಜವಾಹರರಿಗೆ ಫೆಸಿಸ್ಟರ ಮೇಲೆ ತಿಲಮಾತ್ರ ಸಹಾನುಭೂತಿ ಇರುವುದಿಲ್ಲ ಫೆಸಿಸ್ಟರು ಜವಾಹರರ ಬದ್ಧ ದ್ವೇಷಿಗಳಾಗಿರುವರು. ಆದ್ದರಿಂದ ಜವಾಹರರಿಗೆ ಅಂತರರಾಷ್ಟ್ರೀಯ ಸಹಾಯ ದೊರೆಯುವುದೇ ಸಂಭವವಿಲ್ಲ ಬ್ರಿಟಿಷರು ಬೇಕಾದರೆ ಈ ಸಂದಿಗ್ಧದ ಸದುಪಯೋಗ ಮಾಡಿಕೊಂಡು, ಬ್ರಿಟನ್ ಮತ್ತು ಹಿಂದುಸ್ಥಾನ ಎರಡೂ ರಾಷ್ಟ್ರಗಳು ಸ್ನೇಹದಿಂದಿರುವಂತೆ ಜವಾಹರರ ಮೂಲಕ ಸಾಧಿಸಬಹುದಾಗಿದೆ.

ಜವಾಹರಲಾಲರ ಮೇಲೆ ಗಾಂಧಿಯವರ ಪ್ರಭಾವ

ಜವಾಹರರು ಸಮಾಜವಾದಿಗಳಾಗಿದ್ದಾರಾದರೂ ಅವರ ಜೀವನದ ಮೇಲೆ ಗಾಂಧಿ ಮತ್ತು ದಿವಂಗತ ಮೋತಿಲಾಲರ ಪ್ರಭಾವ ಬಿದ್ದಿರುವುದೇ ಹೆಚ್ಚು. ಯೋಗಿನ ಪ್ರಭಾವವು ಅವರ ಮೇಲೆ ಬಿದ್ದಿರುವುದಿಲ್ಲ ಇದ್ದರೂ, ಅವರ ಸ್ವರ್ಗಸ್ಥ ಹೆಂಡತಿಯ ಪ್ರಭಾವ ಸ್ವಲ್ಪ ಬಿದ್ದಿರಬಹುದು ಹಾಗಾದರೆ ಅವರು ಸಮಾಜವಾದಿಗಳು ಹೇಗೆ ಎಂದು ಹೇಳಬಹುದು. ಅವರು ಕಾರ್ಲಮಾರ್ಕ್ಸ, ಲೆನಿನರ ಗ್ರಂಥ ಅಧ್ಯಯನ ಮಾಡಿದ್ದಾರೆ ಅವರ ತರ್ಕಸರಣಿಗೆ ಜವಾಹರರು ಮೋಹಿತರಾಗಿದ್ದಾರೆ ಪರಂತು ರಹಸ್ಯಜ್ಞಾನ ಮತ್ತು ತತ್ವಜ್ಞಾನಗಳ ಮೇಲೆ ಜವಾಹರರಿಗೆ ಒಂದು ಬಗೆಯ ತಿರಸ್ಕಾರವಿದೆ. ಅವರು ಪ್ರತಿಯೊಂದು ವಿಷಯವನ್ನು ಸ್ವತಹ ವಿವೇಚಿಸಿ ತಿಳಿಯುವರು. ವೈಜ್ಞಾನಿಕ ಕ್ರಮದಿಂದ ಸಮಾಜವಾದವು ಸರಿಯೆಂದು ತೋರುವುದರಿಂದ ಅವರು ಸಮಾಜವಾದಿಗಳಾಗಿದ್ದಾರೆ ಕಮ್ಯೂನಿಜಮು ಒಂದು ಪವಿತ್ರ ಸಿದ್ಧಾಂತ ಎಂದು ಹೇಳುತ್ತಿರುವುದರಿಂದಲೂ, ಸ್ವಂತ ವಿವೇಚನೆಗೆ ಎಡೆ ಇಲ್ಲದಿರುವುದರಿಂದಲೂ ಅವರು ಕಮ್ಯೂನಿಜಮಿನ ವಿರೋಧಿಗಳಾಗಿದ್ದಾರೆ. ಅಲ್ಲದೆ ಕಮ್ಯೂನಿಜಮು ಹಿಂಸೆಯ ಆಧಾರದ ಮೇಲೆ ಇರುವುದರಿಂದಲೂ ಅವರದನ್ನು ವಿರೋಧಿಸುತ್ತಾರೆ.

ಸ್ಫೂರ್ತಿ ಉತ್ಸಾಹಗಳ ಪ್ರತಿಮೂರ್ತಿ

ಒಬ್ಬನು ರಾಜಕಾರಣಪಟು ಎನ್ನಿಸಿಕೊಳ್ಳಬೇಕಾದರೆ ಅವನು ಸಂಪೂರ್ಣ ಪರಿಶುದ್ಧ, ಸಂಪೂರ್ಣ ಪ್ರಾಮಾಣಿಕ, ಸಂಪೂರ್ಣ ಸತ್ಯವಾದಿ ಆಗಿರಬಾರದೆಂದು ಕೆಲವರ ಅಭಿಪ್ರಾಯವಿದೆ. ಆದ್ದರಿಂದ ಜವಾಹರಲಾಲರು ಉತ್ತಮ ದರ್ಜೆಗೆ ಸೇರಿದ ರಾಜಕಾರಣಪಟುವಲ್ಲವೆಂದು ಅವರ ಹೇಳಿಕೆ. ಮಾತ್ರವಲ್ಲ, ಜವಾಹರಲಾಲರ ಶಿಕ್ಷಣವೆಲ್ಲ ಇಂಗ್ಲಾಂಡಿನಲ್ಲಿ ನಡೆಯಿತು ಅವರು ವೀರಪೂಜೆಯನ್ನು ನಿಷೇಧಿಸುತ್ತಾರಾದರೂ ಸ್ವತಹ ವೀರಪುರುಷರಾಗಿದ್ದಾರೆ ಅಲ್ಲದೆ ಕೆಟ್ಟ ತಕ್ಕೊಳ್ಳುವ ಗುಣವು ಅವರಲ್ಲಿಲ್ಲ, ಹಟವಾದಿಗಳಾಗಿದ್ದಾರೆ, ಎಂದು ಮೊದಲಾಗಿ ಅನೇಕ ಮಂದಿ ಅವರನ್ನು ಟೀಕಿಸುವರು

ವಿಮರ್ಶಕರ ಏನೇ ಹೇಳಿದರೂ ಜವಾಹರಲಾಲರು ಆದರ್ಶಪುರುಷರಾಗಿದ್ದಾರೆ ಅವರ ಧೈರ್ಯ, ಅವರ ಅನೇಕ ಗುಣಗಳು, ಅವರ ವಿತ್ತ ಪ್ರತಿಭ, ಕ್ಷಮತೆ, ಯೋಗ್ಯತೆ, ಇವುಗಳನ್ನೆಲ್ಲ ಪ್ರಶಂಸಿಸಿ ಬರೆಯಲಿಕ್ಕೆ ಶಬ್ದಗಳೇ ದೊರೆಯುವುದಿಲ್ಲ. ಈ ಎಲ್ಲ ಗುಣಗಳಿಗೂ ಅವರ ಜೀವನದಲ್ಲಿ ಬೇಕಾದಷ್ಟು ಪ್ರಮಾಣಗಳು ದೊರೆಯುತ್ತವೆ ಜವಾಹರರು ಜೈಲಿನಲ್ಲಿದ್ದೇ ೬೧೭ ಪುಟಗಳ ತಮ್ಮ ಲೋಕಪ್ರಸಿದ್ಧ ಆತ್ಮಕಥೆಯನ್ನು ಬರೆದರು ೧೫೬೯ ಪುಟಗಳ ಜಗತ್ತಿನ ಇತಿಹಾಸವನ್ನು ಬರೆದರು ರಾಷ್ಟ್ರಪತಿಗಳಾಗಿದ್ದಾಗ ೨೩ ತಿಂಗಳುಗಳಲ್ಲಿ ೫೦೦೦೦ ಮೈಲುಗಳ ಸಂಚಾರಮಾಡಿದರು. ಒನ್ನೊಮ್ಮೆ ಒಂದು ದಿವಸದಲ್ಲಿ ೧೫೦ ಭಾಷಣಗಳನ್ನು ಕೊಟ್ಟಿದ್ದರು. ಇದರಿಂದಲೇ ಅವರು ಸ್ಫೂರ್ತಿ ಉತ್ಸಾಹಗಳ ಪ್ರತಿಮೂರ್ತಿಗಳಾಗಿರುವುದು ಸ್ಪಷ್ಟವಾಗುತ್ತದೆ

ವಿನಯ, ನಿರಭಿಮಾನ

ಜವಾಹರಲಾಲರಷ್ಟು ವಿನಯಸಂಪನ್ನರೂ ನಿರಭಿಮಾನಿಗಳೂ, ನಿರಹಂಕಾರಿಗಳೂ ಆದವರನ್ನು ಅಪರೂಪವಾಗಿ ಕಾಣಬಹುದು. ಗಾಂಧಿಯನ್ನೇ ಇಷ್ಟರವರೆಗೆ ದೇಶವೇ ಅವರನ್ನು ಮನ್ನಿಸಿ ಪೂಜಿಸಲಾರಂಭಿಸಿತ್ತು ... ಗಾಂಧಿಯವರನ್ನು ಬಿಟ್ಟರೆ ಅವರೇ ಸರ್ವಮಾನ್ಯರೆನಿಸಿಕೆ ... ಅಷ್ಟು ಅವರ ಜನಪ್ರಿಯತೆ ... ಹೊಗಳಿಕೆ ಪಲ್ಲಕ್ಕಿಗಳನ್ನು ... ಕೇಳಿದರೂ ಸಿಕ್ಕುತ್ತಿರಲಿಲ್ಲ ಆದರೂ ಕೂಡ ಅವರ ಜನರ ಹೊಗಳಿಕೆ ಶ್ಲಾಘನೆ ಪ್ರಶಂಸೆಗಳನ್ನೆಲ್ಲ ಸಾಮಾನ್ಯವೆಂದೇ ತಿಳಕೊಂಡರು. ಅವುಗಳಿಂದ ಅವರು ಉಬ್ಬಿ ಕೆಡಲಿಲ್ಲ. ತಮ್ಮನ್ನು ಅವರು ಎಷ್ಟು ಸಾಮಾನ್ಯರೆಂದು ತಿಳಕೊಳ್ಳುತ್ತಿದ್ದರೆಂದರೆ ತಾವೇ ತಮ್ಮನ್ನು ದೂಷಿಸಿಕೊಂಡು ಹೆಸರ ಕೊಡದೆ ಬರೆದ ಒಂದು ಲೇಖನವನ್ನು ಪತ್ರಿಕೆಯಲ್ಲಿ ಪ್ರಕಟಿಸಿ ತಮ್ಮನ್ನು ಯಾರೂ ಮೂರನೆಯ ಬಾರಿಗೆ ರಾಷ್ಟ್ರಪತಿಯಾಗಿ ಚುನಾಯಿಸಬಾರದೆಂದು ಮತದಾರರನ್ನು ಕೇಳಿಕೊಂಡರು! ತಮ್ಮಲ್ಲಿ ತಾವೇ ಕಲ್ಪಿಸಿಕೊಂಡ ಕುಂದುಕೊರತೆಗಳನ್ನೆಲ್ಲ ಜನತೆಯ ಮುಂದಿಟ್ಟರು. ತಾನು ಅಧಿಕಾರದ ಮೇಲೆ ಲೋಭವುಳ್ಳವನು, ಜೂಲಿಯಸ ಸೀಜರನಂತೆ ಲೋಕವನ್ನೇ ಆಳಬೇಕೆಂಬ ಮಹತ್ವಾಕಾಂಕ್ಷಿ ಎಂದು ಪ್ರಪಂಚಕ್ಕೆ ಸಾರಿದರು. ಪ್ರಜಾಸತ್ತಾತ್ಮಕ ರಾಜ್ಯಗಳಲ್ಲಿ ಸರ್ವಾಧಿಕಾರಿಗಳಿಗೆ ಅಥವಾ ಮಹತ್ವಾಕಾಂಕ್ಷಿಗಳಿಗೆ ಸ್ಥಾನವಿರುವುದಿಲ್ಲ. ಅವರು ಎಷ್ಟು ಯೋಗ್ಯರಿದ್ದರೂ, ಪ್ರತಿಭಾಸಂಪನ್ನ ಮತ್ತು ಸಮರ್ಥರಿದ್ದರೂ, ಅವರಿಂತ ದೇಶಕ್ಕೆ ಹಾನಿಯಲ್ಲದೆ ಲಾಭವಿಲ್ಲ' ಎಂದು ತನ್ನನ್ನು ತಾನು ದೂಷಿಸಿಕೊಂಡರು

ಜನರ ಸಂದೇಹ

ಜವಾಹರಲಾಲರನ್ನು ದೂಷಿಸಿ ಬರೆದ ಲೇಖನವು ಯಾರೋ ಅವರ ಒಬ್ಬ ಹಿತಶತ್ರುಗಳಿಂದ ಬರೆಯಲ್ಪಟ್ಟಿರಬೇಕೆಂದು ಜನರು ಊಹಿಸಿದ್ದರು. ಆದರೆ ಆ ಲೇಖನವು ಪ್ರಕಟವಾದ ಕೆಲವು ತಿಂಗಳ ಅನಂತರ ತಾವೇ ಅದನ್ನು ಬರೆದುದೆಂದು ಜವಾಹರಲಾಲರು ತಮ್ಮ ಮಿತ್ರರೊಡನೆ ಹೇಳಿದರು ಇಂಥ ಒಬ್ಬ ವಿಭೂತಿಪುರುಷನ ಕುರಿತು ನೀವು ಜವಾಹರಲಾಲರನ್ನು ಕಂಡಿದ್ದೀರಾ? ಅವರು ಹೇಗಿದ್ದಾರೆ? ಏನು ಮಾಡುತ್ತಿದ್ದಾರೆ? ಅವರ ಕಾರ್ಯಕ್ರಮಗಳು ಯಾವುವು' ಎಂದು ಮೊದಲಾಗಿ ಪ್ರಪಂಚವೇ ಪ್ರಶ್ನಿಸುತ್ತಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲವು

ಜವಾಹರರ ಪರಿಚಯದ ಜನರು ಹಿಂದುಸ್ಥಾನದಲ್ಲಿ ಮಾತ್ರವಲ್ಲ, ಇಡೀ ಪ್ರಪಂಚದಲ್ಲಿ ಹರಡಿದ್ದಾರೆ, ಆದರೆ ಅವರ ಗೆಳೆಯರೆಂಬವರು ಇರುವುದು ಬಹಳ ಸ್ವಲ್ಪ ಮಂದಿ ಮಾತ್ರ. ಒಮ್ಮೊಮ್ಮೆ ಅವರು ತಮ್ಮ ಏಕಾಕಿತನದ ಕುರಿತ ಮಾತನಾಡುವುದಿದೆ ಪರಂತು ಅವರಿಗೆ ... ಅತಿಶಯ ಪ್ರೇಮವಿದೆ ಅವರ ... ಸರಳ ಹೃದಯರೂ ... ಹೇಮಿಗಳನ್ನು ... ಕಂಡರೆ ಮಾತ್ರ ಅವರಿಗೆ ಬಹಳ ... ದಿನಗಳಾಗಿರುವ ... ಅರ್ಥಾನುರ್ಥ ಮಾಡಿ ... ಅಭ್ಯಾಸ ಅವರಿಗಿಲ್ಲ ಮತ್ತು ಕೆಟ್ಟ ತಕ್ಕೊಳ್ಳುವ ಧರ್ಮವೂ ಅವರದಲ್ಲ ... ಅವರ ಎಳೆ ಬರಹೇಳಿದ್ದರೆ ಅವರು ... ಹೋಗುವವರಲ್ಲ ಸ್ವತಹ ಅವರ ತಂದೆ—ಮೋತಿಲಾಲರೂ ಕೂಡ ತಮ್ಮ ಹಿರಿತನದ ಅಭಿಮಾನವನ್ನು ಬದಿಗೊತ್ತಿ ಜವಾಹರಲಾಲರ ಬಳಿಗೆ ಬರಬೇಕಾಯಿತು ಮಗನು ತಾರುಣ್ಯಭರದಲ್ಲಿ ವಿದ್ರೋಹಿಯಾಗುತ್ತಿರುವುದನ್ನು ಕಂಡು ಅವರು ಗಾಂಧೀ ಸಿದ್ಧಾಂತ ... ಜೀವನ ತತ್ವಗಳ ಶರಣುಹೋಗಿ ಜವಾಹರರನ್ನು ಸಮಜಾಯಿಸಬೇಕಾಯಿತ

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ — ಜನ್ನಿ ವೆಂಕಟ್ರಮಣಯ್ಯ

ವಿಶೇಷ ಮಾಹಿತಿಗೆ ಬರೆಯಿರಿ, — ಲಿವರ್ ಮತ್ತು ಸ್ಪ್ಲೀನ್ ಸ್ಪೆಷಿಯಲಿಸ್ಟು, ಮೈಲಾಪ್ಪೂರ, ಮದ್ರಾಸು.

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

... ಸ್ಥಳದಿಂದ ಬರುವ ವಜ್ರಗಳು ... ಶೇಕಡ ಐದು ಪರ್ಸೆಂಟಿಗೆ ಕಡಿಮೆ ... ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

... ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಜಾತಿಯ ... ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್, ಮಂಗಳೂರು

ಶಾಲಿವಾಹನ ಶಕ ೧೮೬೧ನೆಯ ಬಹುಧಾನ್ಯ ಸಂವತ್ಸರದ ಫಾಲ್ಗುಣ ಬ॥ ೧೩ ಶನಿವಾರದಿಂದ ಚೈತ್ರ ಶು॥ ೩ ಶುಕ್ರವಾರದ ವರೆಗಿನ ಪಂಚಾಂಗ. (೧೯೩೯ನೇಯ [illegible]

18	ಶನಿ	೨೬	೫೮	ಧನಿಷ್ಠಾ	೩೮॥	೪	
19	ರವಿ	೨೭	೬೦	ಶತಭಿಷಾ	೪೪।	೫	
20	ಸೋ.	೨೮	೨	ಪೂ. ಭಾದ್ರ	೪೯।	೬	
21	ಕುಜ	೨೯	೬	ಉ. ಭಾದ್ರ	[illegible]	೭	
22	ಬುಧ	೩೦	೨।	ರೇವತಿ	೧೯	೮	
23	ಗುರು	೧	೯	ಅಶ್ವಿನಿ	೫೭।	೯	
24	ಶುಕ್ರ	೨	೮॥	ಭರಣಿ	೫೭।	೧೦	

THE PIE-MONEY BANK LTD.,

Maidan Road, MANGALORE

Undertakes all kinds of Banking Business. Current account at 2½ per annum. Savings Bank Deposits at 3½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%. Auction [illegible] ranging from Rs 100/ to Rs 5000 run regularly on systematic lines. Unique Banking facilities to Businessmen and interested Public.

Apply for particulars—K. R. GURU, *Managing Director*

ಗುಣಬಾರದಿದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎ. ಕೆ. [illegible] ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

[illegible]

ವಿಳಾಸ – ಸಂಜೀವಿನೀ ಔಷಧಾಲಯ ಮು॥ ಪೊ. ಮಿರಜ, (ಎಸ್. ಎಮ್. ಎ)

The Canara Industrial & Banking Syndicate Limited.

(Incorporated in British India)

(Estd: 1925)

HEAD OFFICE: 'MUKUND NIVAS' UDIPI, S. INDIA

Member:

Reserve Bank of India, Bankers' Clearing House Bombay

Season Deposits Maturing Between 30th June and 15th July 1939 Are Accepted @ 3½% p. a

Banking Business of Every Description Transacted on Sound lines.

Particulars on application to any of our 35 Branches

THE

Canara Banking Corporation Udipi, Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4½ p. a.

in denominations of

RS. 50/-,100/-,500/-,1,000/-, & 5,000

are now issued at all our Branches

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ



ಅತ್ಯಂತ ಬಲಕಾರಿ

[illegible]

20

1 4 0

Perikipu [illegible]

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲಿಂಟೈನ್

ಉಪಯೋಗಿಸಿರಿ.

[illegible]

ಡೊಂಗರ

ಇವರ

ಬಾಲಾಮೃತವು

[illegible]

ಮಂಗಳೂರು ಪೇಟೆಯ ದವಸಧಾನ್ಯ ವ್ಯಾಪಾರಗಳ ಧಾರಣೆ

ಸಾಮಾನುಗಳು	ಮೂಬಲಗು ರಿಂದ	ಮೂಬಲಗು ವರೆಗೆ
ಅಕ್ಕಿ ಅವ್ವಲ್ ಕರದ ಗುಡ್ಡ [illegible]	1—11—0	—
,, ದುಯ್ಯಮ್ ,, ,,	1—10—0	1—1?—0
,, ಅವ್ವಲ್ ಸುಗ್ಗಿ ,,	1—10—0	—
,, ದುಯ್ಯಮ್ ,, ,,	1—?—0	—
ಅಕ್ಕಿ ಅವ್ವಲ್ ಗುಡ್ಡ ,,	4—2—0	4—2—0
,, ದುಯ್ಯಮ್ ,, ,,	3—14—0	?—14—0
,, [illegible] ,,	4—4—0	—
,, [illegible] ,,	3—8—0	3—8—0
ತೆಂಗಿನ ಕಾಯಿ [illegible] 1000ಕ್ಕೆ	35—0—0	45—0—0
,, [illegible]	37—8—0	47—8—0
ಕೊಬ್ಬರಿ [illegible]	15—0—0	—
,, [illegible] ,,	17—8—0	—
ತೆಂಗಿನ ಎಣ್ಣೆ [illegible]	5—5—0	?—5—0
[illegible] 1000ಕ್ಕೆ	3—4—0	8—12—0
[illegible]	3—12—0	3—12—0
[illegible]	42—8—0	60—?—?
[illegible]	15—8—0	16—8—0

ಹೈದರಾಬಾದಿನಲ್ಲಿ ಹಿಂದೂಗಳ ಸತ್ಯಾಗ್ರಹ

— ಅದು —

ಸಾಂಪ್ರದಾಯಿಕವಲ್ಲ! ವಿಶುದ್ಧ ರಾಷ್ಟ್ರೀಯವಾಗಿದೆ!

ಪಂಡಿತ ಜವಾಹರಲಾಲ ನೆಹರೂರವರ ಅಧ್ಯಕ್ಷ ಭಾಷಣ

ಜೈಲುಗಳಲ್ಲಿ ಸತ್ಯಾಗ್ರಹಿಗಳ ಮೇಲೆ ಅತ್ಯಾಚಾರ

ಶೋಲಾಪುರದಲ್ಲಿ ಪ್ರಚಾರಕಾರ್ಯ

೧೧೦೦೦ ರೂಪಾಯಿಗಳ ಗುಪ್ತ ದಾನ

[illegible]ಕಳೆದ ವಾರ ಲೂಧಿಯಾನದಲ್ಲಿ ಜರಗಿದ [illegible] ಭಾರತ ದೇಶೀ ಸಂಸ್ಥಾನಗಳ ಪ್ರಜಾ ಪರಿಷತ್ತಿನ ಅಧ್ಯಕ್ಷರಾಗಿ ಪಂಡಿತ ಜವಾಹರ ಲಾಲ ನೇಹರೂ ಅವರು ಮಾಡಿದ ಭಾಷಣವು ವಿಚಾರ ಪರಿಪೂರ್ಣವಾಗಿರುವುದು. ಅವರು ಸಂಸ್ಥಾನ ಹೈದರಾಬಾದದಲ್ಲಿ ನಡೆಯುತ್ತಿರುವ ಹಿಂದೂಗಳ ಸತ್ಯಾಗ್ರಹ ಆಂದೋಲನದ ಕುರಿತು ಭಾಷಣ ಮಾಡುತ್ತ—"ಈ ಆಂದೋಲನವು ಸಾಂಪ್ರದಾಯಿಕವಾಗಿದೆ ಎಂದು ಕೆಲವರು ಹೇಳಬಹುದು. ಪರಂತು ನನ್ನ ಅಭಿಪ್ರಾಯದಲ್ಲಿ ಅದು ವಿಶುದ್ಧ ರಾಷ್ಟ್ರೀಯವಾಗಿರುವುದು. ಹೈದರಾಬಾದಿನಲ್ಲಿ ನಾಗರಿಕ ಹಕ್ಕು ಅಧಿಕಾರಗಳ ಮೇಲೆ ಸರಕಾರದ ಪ್ರಚಂಡ ದಮನ ಕಾರ್ಯವು ನಡೆದಿರುತ್ತದೆ. ಅಲ್ಲಿ ಜನರು ಸರ್ವಸಾಮಾನ್ಯವಾದ ಧಾರ್ಮಿಕ ಕಾರ್ಯಗಳನ್ನು ಮಾಡಲಿಕ್ಕೂ ಸ್ವತಂತ್ರರಾಗಿ ಇರುವುದಿಲ್ಲ. ಸರಕಾರದ ದಮನವನ್ನು ಖಂಡಿಸಿ ವಿರೋಧಿಸುವ ಧಾರ್ಮಿಕ ಕಾರ್ಯಗಳನ್ನು ಮಾಡಲಿಕ್ಕೂ ಸ್ವತಂತ್ರರಾಗಿ ಇರುವುದಿಲ್ಲ. ಸರಕಾರದ ದಮನವನ್ನು ಖಂಡಿಸಿ ವಿರೋಧಿಸುವ ಧಾರ್ಮಿಕ ಹಕ್ಕು ರಕ್ಷಣೆಯ ಸತ್ಯಾಗ್ರಹ ಆಂದೋಲನದ ಬಾಹ್ಯ ರೂಪು, ಸಾಂಪ್ರದಾಯಿಕವೆಂಬಂತೆ ತೋರಬಹುದು. ಪರಂತು ವಾಸ್ತವವಾಗಿ ಅದು ಶುದ್ಧ ರಾಷ್ಟ್ರೀಯವಾಗಿರುವುದು. ಇದನ್ನು ಸಾಂಪ್ರದಾಯಿಕವೆನ್ನುವುದು ಸತ್ಯ ಘಟನೆಗಳ ಕಡೆಗೆ ಕಣ್ಣು ಮುಚ್ಚಿಕೊಂಡಿರುವುದಾಗಿದೆ" ಎಂದು ಹೇಳಿರುವರು. ಆದ್ದರಿಂದ ಶುದ್ಧ ರಾಷ್ಟ್ರೀಯರು ಕೂಡ ಈ ಆಂದೋಲನದಲ್ಲಿ ಭಾಗ ತೆಗೆದುಕೊಂಡು ಅದರ ಸಫಲತೆಗೆ ಪ್ರಯತ್ನಿಸುವುದು ಅವರ ಕರ್ತವ್ಯವಾಗಿದೆ ಎನ್ನಬಹುದು.

ಉಪವಾಸ ವ್ರತ

ಹೈದರಾಬಾದದ ಸೆಂಟ್ರಲ್ ಜೈಲಿನಲ್ಲಿರುವ ಸತ್ಯಾಗ್ರಹಿ ಕೈದಿಗಳು ಉಪವಾಸ ವ್ರತವನ್ನು ಹಿಡಿದಿರುವರು. ಜೈಲಿನ ಅಧಿಕಾರಿಗಳು ಈ ಕೈದಿಗಳ ಯಜ್ಞೋಪವೀತಗಳನ್ನು ಹರಿದು ಹಾಕುತ್ತಿರುವುದೂ, ಅವರಿಗೆ ಸಂಧ್ಯಾವಂದನೆ, ಪ್ರಾರ್ಥನೆ ಮೊದಲಾದ ಧಾರ್ಮಿಕ ಕಾರ್ಯಗಳನ್ನು ಮಾಡಲಿಕ್ಕೆ ಬಿಡದಿರುವುದೂ ಈ ಉಪವಾಸದ ಕಾರಣವಾಗಿದೆ. ಉಪವಾಸ ಹಿಡಿದ ಶ್ರೀ ಗೋಡಸೆ ಮತ್ತು ಇನ್ನಿಬ್ಬರಿಗೆ ಜೈಲಿನಲ್ಲಿ ಛಡಿಪೆಟ್ಟುಗಳು ಬಿದ್ದವೆ. ಹೈದರಾಬಾದ ದಿವಸದಂದು ಸತ್ಯಾಗ್ರಹಿಗಳಿಗೆ ಸಹಾನುಭೂತಿ ತೋರಿಸಿ ಹರತಾಳ ಮಾಡಿದರೆಂದು ಅನೇಕ ವ್ಯಾಪಾರಿಗಳು ಕೈದಾಗಿದ್ದಾರೆ. ಆರು ತಿಂಗಳ ಹಿಂದೆ ಭಜನೆ ಮಾಡಿದರೆಂದು ಈಗ ಆರ್ಯ ಸಮಾಜ ಸಭೆಯ ಕಾರ್ಯಾಲಯದ ಮೇಲೆ ಪೋಲೀಸರು [illegible] ಒಬ್ಬ ಕೆಲಸಗಾರನ ಕೈದೂ ಆಗಿದೆ. ಅತ್ಯಾಚಾರಗಳ ಸಮಾಚಾರಗಳು ದಿನೇ ದಿನೇ ಹೆಚ್ಚಾಗಿ ಬರುತ್ತಿರುವುದು. ಕಂದಾರು ಜಿಲ್ಲಾ ಆರ್ಯ ಸಮಾಜದ ಪ್ರಧಾನ ಕಾರ್ಯದರ್ಶಿ ಶಂಕರರಾವ್ ಎಂಬವರ ಗುಲ್ಬರ್ಗಾ ಅಂಗಡಿಯನ್ನು ರಾತ್ರಿ ೩ ಗಂಟೆ ಸಮಯಕ್ಕೆ [illegible] ಎಂಬಿಬ್ಬರು ಮುಸಲ್ಮಾನ ಪುಂಡರು ಬಂದು ಲೂಟಿ ಮಾಡಿದರು. ಸಾಮಾನುಗಳನ್ನು ಎತ್ತಿಕೊಂಡು ಹೋದರು. ಗಾಜಿನ ಭರಣಿ ಮೊದಲಾದವನ್ನು ಬೀದಿಗೆ ಚೆಲ್ಲಿ ಒಡೆದುಹಾಕಿದರು. ಪೋಲೀಸರಿಗೆ ತಿಳಿಸಿ ಅಪರಾಧಿಗಳನ್ನು ತೋರಿಸಿ ಕೊಟ್ಟರೂ ಕೂಡ ಅವರ ಮೇಲೆ ಫಿರ್ಯಾದು ಆಗಿರುವುದಿಲ್ಲ! ಬಿಹಾರ ಜೈಲಿನಲ್ಲಿ ಸತ್ಯಾಗ್ರಹಿ ಕೈದಿಗಳು ಸಂಧ್ಯಾವಂದನೆಯನ್ನು ಮಾಡಬಾರದೆಂದು ಅಧಿಕಾರಿಗಳ ಕಟ್ಟಾಜ್ಞೆಯಾಗಿದೆ. ಕೈದಿಗಳು ಮಾಳಿಗೆಯ ಮೇಲೆ ಹೋಗಬಾರದೆಂದು ಅನೇಕ ತೆರನ ನಿರ್ಬಂಧಗಳಾಗುತ್ತಿವೆ. ಅವರನ್ನು ಅಧಿಕಾರಿಗಳು ಮುಟ್ಟಿ ತುಳಿಯುತ್ತಾರೆ ಎನ್ನಲಾಗುತ್ತದೆ. ಶ್ರೀ ನಾರಾಯಣ ಸ್ವಾಮಿ [illegible] ಜೈಲಿನಲ್ಲಿ ಕೈಗೆ ಕೋಳ ಹಾಕಿದ ನರು [illegible] ತೆಗೆದಿರುವರು. ಶ್ರೀ [illegible]

ಮುಖಂಡರಾಗಿರುವುದರಿಂದ, ಅವರ ಮೇಲೆ ಈ ರೀತಿಯ ಅತ್ಯಾಚಾರಗಳನ್ನು ನಡೆಸಿ ಇಡೀ ಸಮಾಜವನ್ನೇ ಸರಕಾರವು ಸಂಕಟಕ್ಕೆ ಕರೆದಂತೆ ಆಗಿದೆ.

ಪ್ರಚಾರ ಕಾರ್ಯ

ಹಿಂದುಗಳು ಹೈದರಾಬಾದಿನಲ್ಲಿ ಅಧಿಕ ಸಂಖ್ಯೆಯಲ್ಲಿ ಇದ್ದಾರೆ. ಆದರೂ ಅವರಿಗೆ ಧಾರ್ಮಿಕ ಕಾರ್ಯಗಳನ್ನು ಮಾಡಲು ಸರಕಾರದ ಪ್ರಬಲ ನಿಷೇಧವಿದೆ. ಸರಕಾರದಿಂದ ಪ್ರೋತ್ಸಾಹಿತರಾದ ಮುಸಲ್ಮಾನ ಪುಂಡರು ಸ್ತ್ರೀಪುರುಷರ ಮೇಲೆ ಮಾಡುವ ಅತ್ಯಾಚಾರ ಅನಾಚಾರಗಳು ಅಸಹನೀಯವಾಗಿವೆ. ಹಿಂದುಗಳಿಗೆ ಹೈದರಾಬಾದದಲ್ಲಿ ಸರಕಾರದ ಭದ್ರತೆ ರಕ್ಷಣೆಗಳೇ ಇರುವುದಿಲ್ಲ. ಅವರು ಅಲ್ಪ ಸಂಖ್ಯಾತರಾಗಿರುವ ಮುಸಲ್ಮಾನರ ದಯಾಭಾವವನ್ನು ಹೊಂದಿಕೊಂಡು ಕಾಲಯಾಪನೆ ಮಾಡಬೇಕು. ಇದಕ್ಕಿಂತ ಲಾಂಛನಾಸ್ಪದವಾದ ವಿಷಯವು ಬೇರೆ ಇರುವುದಿಲ್ಲ. ಆದ್ದರಿಂದ ಆರ್ಯ ಸಮಾಜವೂ ಹಿಂದು ಮಹಾಸಭೆಯೂ ಕೂಡಿ ಈ ಸತ್ಯಾಗ್ರಹ ಆಂದೋಲನವನ್ನು ಹೂಡಿದೆ. ಅದರ ಸಫಲತೆಗೆ ಪ್ರಚಾರ ಕಾರ್ಯವು ಭರದಿಂದ ನಡೆದಿರುವುದು. ಶ್ರೀ ಗಂಗಾ ಪ್ರಸಾದ ಉಪಾಧ್ಯಾಯ ಮೊದಲಾದ ಆರ್ಯ ಮತ್ತು ಹಿಂದೂ ಮುಖಂಡರು ಶೋಲಾಪುರಕ್ಕೆ ಬಂದಿರುವರು. ಅಲ್ಲಿಂದಲೇ ಸತ್ಯಾಗ್ರಹದ ಕೆಲಸ ಕಾರ್ಯಗಳು ಆಗುತ್ತವೆ. [illegible] ಸತ್ಯಾಗ್ರಹ ಮಾಡಿ ಒಂದು ವರ್ಷದ ಕಠಿಣ ಶಿಕ್ಷೆಗೆ [illegible] ಒಳಗಾದ ದೇಶಭಕ್ತ [illegible] ಸತ್ಯಾಗ್ರಹ [illegible] ಸಮಿತಿಯ [illegible] ಅಧಿನಾಯಕರಾಗಿ ಸತ್ಯಾಗ್ರಹದ [illegible] ಶೋಲಾಪುರದಲ್ಲಿ [illegible] ಭಾರತ, ಹಿಂದೂ ಕೇಂದ್ರಗಳಲ್ಲೆಲ್ಲ ದಿನನಿತ್ಯವೂ ಸಭೆ ಭಾಷಣಗಳಾಗಿ ಪ್ರಚಂಡ ಪ್ರಚಾರ ಕಾರ್ಯವು ನಡೆದಿರುವುದು.

ಸತ್ಯಾಗ್ರಹದ ಪ್ರಗತಿ

ಶೋಲಾಪುರಕ್ಕೆ ಸತ್ಯಾಗ್ರಹೀ ಸ್ವಯಂಸೇವಕರು ಒಬ್ಬರ ಹಿಂದೊಬ್ಬರಂತೆ ಬಂದು ಸೇರುತ್ತಿದ್ದಾರೆ. ಆರ್ಯ ಸತ್ಯಾಗ್ರಹ ಸಮಿತಿಯ ಕಡೆಯಿಂದ ಗುಲ್ಬರ್ಗಾ, ಹೈದರಾಬಾದ, ಲಾತೂರ ಮೊದಲಾದ ಕಡೆಗಳಲ್ಲಿ ಪ್ರತಿನಿತ್ಯವೂ ಸ್ವಯಂ ಸೇವಕರು ಹೋಗಿ ಸತ್ಯಾಗ್ರಹ ಮಾಡುತ್ತಿರುವರು. ಹೈದರಾಬಾದದ ಜೈಲುಗಳು ಸತ್ಯಾಗ್ರಹಿ ಕೈದಿಗಳಿಂದ ತುಂಬಿರುವವು. ಇಷ್ಟರ ತನಕ [illegible] ಕೈದಿಗಳು ಜೈಲುಗಳನ್ನು ಸೇರಿದ್ದಾರೆ. [illegible] ಸರ್ವಾಧಿಕಾರಿ [illegible] ವರಿಗೆ ೨ ವರ್ಷಗಳ ಕಠಿನ ಶಿಕ್ಷೆಯಾಗಿದೆ. [illegible] ಸತ್ಯಾಗ್ರಹವನ್ನು ಹೂಡಲು ಶೋಲಾಪುರದ ಸ್ವಯಂಸೇವಕ ಶಿಬಿರಕ್ಕೆ ಎಂದು [illegible] ಜನ [illegible] ಬಂದಿದ್ದಾರೆ. ಅಜಮೀರ ಸತ್ಯಾಗ್ರಹ ಸಮಿತಿಯ ಸಂಯೋಜಕ ಶ್ರೀ [illegible] ಲಾಲಾಜಿಯವರಿಗೆ ಯಾರೋ ಒಬ್ಬ ಧರ್ಮಾತ್ಮ ವ್ಯಕ್ತಿಗಳು ಈ ಸತ್ಯಾಗ್ರಹ ಆಂದೋಲನದ ಬಗ್ಗೆ ೧೧೦೦೦ ರೂಪಾಯಿಗಳ ಗುಪ್ತದಾನ ಮಾಡಿದ್ದಾರೆ. ಈ ಹಣವು ಶೋಲಾಪುರಕ್ಕೆ ಕಳಿಸಲ್ಪಟ್ಟಿರುವುದು. ಅಜಮೀರ ಆರ್ಯ ಸಮಾಜವು [illegible] ಕಳಿಸುತ್ತಿದೆ. ಅಲ್ಲದೆ ಅನೇಕ ಕಡೆಗಳಿಂದ ಸಹಾಯ ದ್ರವ್ಯವು ಬರುತ್ತಲಿದೆ. ಮಹಾತ್ಮಾ ನಾರಾಯಣಸ್ವಾಮಿಯವರು [illegible] ಸೇರಿರುವುದಕ್ಕಾಗಿ ಅವರನ್ನು ಅಭಿನಂದಿಸಿ ಕೇಂದ್ರ ಸ್ಥಾನ [illegible] ಸಭೆಯ (ಸೆಂಟ್ರಲ್ ಎಸೆಂಬ್ಲಿ) ಉಪಾಧ್ಯಕ್ಷ [illegible] ಸಂತಸಿಂಗ, ಪಂಡಿತ ಕೃಷ್ಣಕಾಂತ ಮಾಳವೀಯ ಮೊದಲಾದವರು ಅಭಿನಂದನ ಪತ್ರಗಳನ್ನು ಕಳುಹಿಸಿ ಈ ಆಂದೋಲನಕ್ಕೆ ಸಂಪೂರ್ಣ ಸಫಲತೆಯನ್ನು ಕೋರಿರುವರು.

ಅಪಪ್ರಚಾರಕ್ಕೆ ಸರಕಾರಿ ಜನರು!

ಸತ್ಯಾಗ್ರಹ ಆಂದೋಲನದ ನಿಜಸ್ವರೂಪವು ಜನರಿಗೆ ತಿಳಿಯದಿರಬೇಕು ಮತ್ತು ಅದು ಎಷ್ಟು ಪ್ರಬಲವಾಗಿದೆ ಎಂಬುದು ಜನರಿಗೆ ಗೊತ್ತಾಗದಿರಬೇಕು ಎಂಬುದಕ್ಕೋಸ್ಕರ ಸರಕಾರದ ಕೃಪಾಭಿಕ್ಷುಗಳಾದ ಕೆಲವು ಜನರು ಹೈದರಾಬಾದದಲ್ಲೂ ಬ್ರಿಟಿಷ ಇಂಡಿಯದಲ್ಲೂ ಆಂದೋಲನದ ಅಪಪ್ರಚಾರ ಮಾಡುತ್ತಿರುವರಾಗಿಯೂ ಜನತೆಯು ಅವರಿಂದ ಭ್ರಮೆ ಬೀಳಬಾರದಾಗಿಯೂ 'ಆರ್ಯ ಮಿತ್ರ'ವು ಎಚ್ಚರಿಕೆಯನ್ನು ಕೊಟ್ಟಿದೆ. ಆಂದೋಲನವನ್ನು ಮುರಿಯಲಿಕ್ಕೆ ಸರಕಾರವು ಶತಪ್ರಯತ್ನಗಳನ್ನು ಮಾಡಿದೆ. ಆದರೆ ಹಿಂದೂ ಸಮಾಜವು ಈಗ ಜಾಗೃತವಾಗುತ್ತಿರುವುದರಿಂದ ಸರಕಾರದ ಈ ಪ್ರಯತ್ನಗಳು ಸರ್ವಥಾ ಸಫಲವಾಗಲಾರವೆಂದು ನಿಸ್ಸಂಕೋಚವಾಗಿ ಹೇಳಬಹುದು.

ನೋಟೀಸ್

ಮೂಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನ

ಶ್ರೀ ದೇವಸ್ಥಾನದ ಬಾಬ್ತು ಜಮೀನುಗಳ ಸುಮಾರು ಎಂಟು ಸೇರು ಚಿನ್ನವನ್ನು ಏಲಂ ಮೂಲಕ ಅಗತ್ಯವಿದ್ದಲ್ಲಿ ಹೆಚ್ಚಿಗೆ ಯಾ ಕಡಿಮೆ ಲೋಟಗಳನ್ನಾಗಿ ವಿಂಗಡಿಸಿ ಒಂದೊಂದಾಗಿ ಇದೇ ಬರುವ ತಾರೀಕು 20-8-1939 ನೇ ದಿವಸ ಬೆಳಿಗ್ಗೆ ಗಂಟೆ 10ಕ್ಕೆ ಶ್ರೀ ದೇವಸ್ಥಾನದ [illegible] ಮಂಟಪದಲ್ಲಿ ಏಲಂ ಕರೆಯಲಾಗುವುದು.

ಏಲಮಿನಲ್ಲಿ ಭಾಗವಹಿಸುವವರು ಏಲಂ ಕಾಯಂ ಮಾಡಲ್ಪಟ್ಟ ಕೂಡಲೇ ಆ ಲೋಟಿನ ಏಲಂ ಪೂರಾ ಹಣವನ್ನು ಆಗಲೇ ಭಂಡಾರಕ್ಕೆ ಪಾವತಿಮಾಡಿ ಆ ಲೋಟಿನ ಚಿನ್ನವನ್ನು ಪಡಕೊಳ್ಳತಕ್ಕದ್ದು. ಏಲಂ ಕಾಯಂ ಮಾಡುವ ಯಾ ಮಾಡದೆ ಇರುವ ಯಾ ಅಗತ್ಯವಿದ್ದಲ್ಲಿ ಏಲಂ ಮುಂದರಿಸಿ ಇಡುವ ಹಕ್ಕು ಭಂಡಾರದ ಕಡೆ ಕಾದಿಟ್ಟಿದೆ.

Sri Venkatramana Temple Mulki
28-2 1939

K. P. Kamath,
Manager

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಅಕ್ಸೀರಕರವಾದ ಔಷಧಿ.
ಡಾ॥ ಜಸಾನಿಯವರ
ಗೊನೊಕಿಲರ್ (ರಜಿಸ್ಟರ್ಡ)
ಪ್ರಮೇಹ ವ್ಯಾಧಿಗೆ ಸಿದ್ಧೌಷಧ

[illegible]

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.
Sole Manufacturer: Dr. D. N JASANI, Vithalbhai Patel Road, BOMBAY
ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ.
[illegible]

ಜಾತಿ-ದಂಗೆಗಳು!

ಎಮ್. ಎಲ್. ಏ ಯಾಗಿರುವ ಮುಸ್ಲಿಮರೊಬ್ಬರಿಂದ]

ಜಾತಿದ್ವೇಷದಿಂದ ದಂಗೆಗಳಾಗುತ್ತಿರುವುದು ದಿನೇದಿನೇ ಹೆಚ್ಚುತ್ತಲೇ ಇದೆ ಇವು ತೀವ್ರವಾಗಿ ಹೇಗೋ ತೀಕ್ಷ್ಣವಾಗಿಯೂ ಹೆಚ್ಚುತ್ತಲಿವೆ. ಹಿಂದೂ ಮುಸ್ಲಿಮರಂತೂ ಒಬ್ಬರ ನೆತ್ತರನ್ನು ಕುಡಿಯಲು ಮತ್ತೊಬ್ಬರು ಸರ್ವದಾ ಸಿದ್ಧರಾಗಿರುವುದಕ್ಕಾಗಿಯೇ ಜೀವಹಿಡಿದಿರುವಂತೆ ತೋರುತ್ತದೆ ದಂಗೆಗಳಾಗದಿದ್ದಲ್ಲಿ ಇವೆರಡು ಮಹಾಸಮಾಜಗಳು ಅಳಿದೇ ಹೋಗುತ್ತಿದ್ದುವೇನು? ಮಾತ್ರವೇ? ದಂಗೆಗಳಿಗೆ ಕಾರಣಗಳಾದರೂ, ದೇವರ ಮತ್ತು ಧರ್ಮದ ಹೆಸರಲ್ಲಿ!! ಯಾವ ಪ್ರಾಂತ್ಯದಲ್ಲೂ ಹೀಗಾಗುತ್ತಲೇ ಇದೆಯಲ್ಲ! 'ಮಸೀದಿಯ ಮುಂದೆ ವಾದ್ಯ' ಎಂದೊಬ್ಬರೆಂದಲ್ಲ, 'ಗೋಹತ್ಯೆಯ ಅತ್ಯಾಚಾರ!' ಎಂದು ಒಬ್ಬರು ಆಕ್ಷೇಪಿಸಿ ಕಾರಣ ಕೊಡುತ್ತಾರೆ ದೊಡ್ಡ ದಂಗೆಗಳಾಗುವುದಕ್ಕೂ ಕಾರಣಗಳಿವೆ. ಸತ್ತವರ ಸಾಯಲಿದ್ದವರ ಸಂಖ್ಯೆಗಳಾವುವೂ ಕಡಮೆಯಾಗುತ್ತಿಲ್ಲ, [illegible] ಇವೆ [illegible] ಗಳನ್ನೂ ಅಂಗಡಿಪೇಟೆಗಳನ್ನೂ ಸುಡುವುದೂ ಇವುಗಳ ಜತೆಯ ಉತ್ಸವವಿನೋದಗಳಾಗಿವೆ ಹೆಂಗಸರು [illegible] ಈ ಕಾಂಡದಲ್ಲಿ [illegible] ಭಾರತ ವರ್ಷವೆಲ್ಲ ಒಂದೇ ಜನಾಂಗ [illegible] ತ್ತಿರುವವರು [illegible] ಈ ದಂಗೆಗಳನ್ನು [illegible] ಈ ಜನಾಂಗವು [illegible] ಬಹುದು ಎಂದು [illegible] ವಿವೇಕಿಗಳು ಮಾತ್ರ [illegible] ದಿರುವಲ್ಲಿ ರಾಜಕೀಯ [illegible] ಎನ್ನುತ್ತಾರೆ!

ಈ [illegible] ದಂಗೆ [illegible] ನಮ್ಮ [illegible] ಜೀವನವನ್ನೇ [illegible] ನಮ್ಮ [illegible] ಮಾಡುವುದಕ್ಕಿಂತಲೂ ಅಧಿಕವಾಗಿ ಪರಸ್ಪರವಾಗಿ ತಮ್ಮೊಳಗೆ ಹಗೆಮಾಡುತ್ತಿರುವ ಹಿಂದೂ ಮುಸ್ಲಿಮರ ಸಂಖ್ಯೆ ಘೋರವಾಗಿದೆ ಪರದೇಶೀಯರು, ಹೊರಟ ಬಳಿಕ, ಎರಡನೆಯ ನಮ್ಮ ಸರ್ವಾಧಿಕಾರಿಗಳಾಗುವರೆಂದ, ಪ್ರತಿ ಪಕ್ಷವೂ ನಂಬಿಕೊಂಡಿದೆ ಪರಕೀಯರು ನಮ್ಮನ್ನಾಳುವುದು ಅಸ್ವಾಭಾವಿಕವಾಗಿದೆ, ಅನ್ಯಾಯವಾಗಿದೆ ಎಂದು ಇವರ ಎನ್ನದೆ, ಇದರಿಂದ ನಮ್ಮ ಗೌರವಕ್ಕೆ ಕುಂದ ಇದೆ ಎಂದು ಭಾವಿಸದೆ, ನಮ್ಮಲ್ಲಿ ಒಂದು ಪಂಗಡವು ಮತ್ತೊಂದನ್ನು ಆಳುವುದು ಸ್ವಾಭಾವಿಕವಲ್ಲ-ಎನ್ನುವರು ಈ ಭಾವನೆಯನ್ನೆ ಮುಂದೆ ಎತ್ತಿ ಹಿಡಿದು. ಈಗ ಸಮಯವಿದ್ದಾಗಲೆ ಅದರ ಸಂಪೂರ್ಣ ಪ್ರಯೋಜನ ಪಡೆಯಬೇಕೆಂದಿರುವರ ಇಪರಲ್ಲಿ ಪುನಃ ಮತ್ತೊಂದ, ಭೂತವು ಸೇರಿಯದೆ ಅನ್ಯರಾದವರನ್ನು ಹೊರದೂಡಬೇಕೆನ್ನುವಾಗ, ಈ ಭೂತವು ಇವಿಂ [illegible] ಹಿಂದೂ ಅಥವಾ ಮುಸ್ಲಿಮ ಆಳಿಕೆಗೆ ಒಳಪಡಬೇಕೆನ್ನುತ್ತದೆ ಇದು ಒಂದು ಪ್ರವೀಣ ಮೈನ ಜನಾಂಗದ ಹೆಸರೆತ್ತಿ ಗೌರವದಿಂದ ಮಾತಾಡುತ್ತ, ತನ್ನ ಜಾತಿ ಪಂಥವನ್ನೆ ಈ ಭೂತವು ಸ್ಥಾಪನೆಮಾಡ ಹೇಳುವುದಾಗಿದೆ ಈ ಭೂತದ ಬಾಧೆಗಿಂತ ಇತರ ಯಾವ ಬಾಧೆಯೂ ನಮ್ಮ ದೇಶಕ್ಕೆ ಭಯಾನಕವಾದುದಲ್ಲ. ಈ ಭೂತದ ಪೂಜಾರಿಗಳ. ಕೆಲ [illegible] ಇರುವವರು ನಾಲಗೆಯಲ್ಲಿ ಜನಾಂಗಧ್ಯಾನ, ಹೃದಯದಲ್ಲಿ ಈ ಭೂತೋಪಾಸನೆ! ಹೀಗಾಗಿ ಜನಾಂಗವು ಒಂದಾಗದಂತೆ ಈ ಭೂತವು ಮಾಡಿಯದೆ.

ನಮ್ಮ ರಾಜಕೀಯ ರಂಗದಲ್ಲಿ ನರ್ತನೆಮಾಡುವ ಈ ಭೂತವನ್ನು ಮೊದಲಾಗಿ ಓಡಿಸದೆ, ನಮಗೆ ಉಳಿಗಾಲವಿಲ್ಲ.

ಇದಕ್ಕಾಗಿ ಆತ್ಮಶುದ್ಧಿಯು ಅಗತ್ಯವಾಗಿದೆ. ಈ ಭೂತೋಚ್ಚಾಟನೆ ಮೊದಲು ಚಲವು ಉಂಟಾಗುವ ಹಾಗೆ, ನಾವು ಹಿಂದಣಗಿಂತ ಅಧಿಕ ಬಲಶಾಲಿಗಳಾಗಬೇಕು ನಾವು ಭೂತವು ತಲೆಯೆತ್ತುವ ವರೆಗೆ ಕಾಯದೆ, ಅದರ ಬೀಡನ್ನು [illegible] ಅಲ್ಲಿ ಅದನ್ನು ಸದೆಬಡಿಯಬೇಕಾಗಿದೆ

ಮಸೀದಿಯ ಮುಂದೆ ವಾದ್ಯ ಬಾರಿಸಬಾರದೆಂದು ಮುಸ್ಲಿಮನೆನ್ನುವನು. ಇಸ್ಲಾಂ ಧರ್ಮದಲ್ಲಿ ಇದಕ್ಕೆ ಯಾವ ಆಧಾರಗಳೂ ಕಂಡು ಬರುವುದಿಲ್ಲ 'ಕುರಾನನು ಓದುವ ಇಮಾಮರ ಸ್ವರವನ್ನು ಈ ವಾದ್ಯವು ಅಳಿಸದಂತೆ [illegible] ಮಾಡಬಹುದು [illegible] ವಾದ್ಯ [illegible] ಮುಸ್ಲಿಮರು ಹಿಂಸಾಪರರಾಗ [illegible] ಗೋಬಲಿ ಕೊಡದೆಂದು. ಹಿಂದುಗಳೆನ್ನು [illegible] ಸಾಮಾನ್ಯ ಹಿಂದುಗಳು [illegible] ಮುಸ್ಲಿಮನಿಗೆ [illegible] ನ್ಯಾಯವಾದ ಹಕ್ಕು [illegible] ಅದರ [illegible] ತಡೆವುದಕ್ಕೆ ಹಿಂದುಗಳು ಹಿಂಸಾಪರರಾಗುತ್ತಿಲ್ಲವೆ? [illegible]

[illegible] ಈ ವಿವಾದಗಳನ್ನು ಸಧ್ಯದಲ್ಲೆ [illegible] ವಾದ್ಯ [illegible] ಹಿಂದೂನಾಗರಿಕರು [illegible] ಸರಕಾರವೇ [illegible] ಎಂಬ ಭಾವನೆ ಬೇಕು. ಆದರೆ ಒಳಗೇ ಬಗೆಹರಿಯ ಸಮಾಜಗಳ ಜನಗಳು, ಇದರ ಕಾರಣ, [illegible] ಕಾಂಗ್ರೆಸ್ ಸರಕಾರಗಳೂ [illegible] ಭಯಗೊಂಡಿವೆ

ಬ್ರಿಟಿಷರು ಇಲ್ಲಿ ನಿಂತಲ್ಲಿ ನಷ್ಟವು ಹಿಂದುಗಳಿಗೆ ಹೆಚ್ಚು ಹಿಂದುವೇ ಅಮದರಿಂದ ಮುಂದೆ ಬಂದು ಬಲವಾದ ಸ್ಥಿತ [illegible] ವನ್ನು ಸೂಚಿಸುವನಾಗಬೇಕು. ಅಲ್ಪಸಂಖ್ಯಾತರಿಗೆ ಉದಾರನಾಗಿ ವರ್ತಿಸಲಿ "ಜನಾಂಗ ಜನಸಂಖ್ಯೆಯಲ್ಲಿ ನೀಕಡಾ [illegible] ಇವರಿದ್ದಾರೆ, ಆದರೆ, ನೀಕಡಾ [illegible] ಇವರಿಗೆ ಅಧಿಕಾರ ಕೊಟ್ಟಿದ್ದೇವೆ" ಎಂಬ ರೀತಿಯ ಪ್ರೋತ್ಸಾಹ ವಾರ್ತೆಗಳು ಬೇಡ ಇದು ಸ್ವಾರ್ಥತ್ಯಾಗಸೀತಿ [illegible] ಕಾಂಗ್ರೆಸ್ ಮಂತ್ರಿಗಳು ವರ್ತಿಸಲಿ. ಆಗ ಮಹಾತ್ಮರ ಮನೋವೃತ್ತಿಗಳ ಮತಭ್ರಾಂತಿಯನ್ನು ಬಹಳ ಬಲದಿಂದ ಉಚ್ಚಾಟನೆಮಾಡ ಬೇಕು. ನಾನು ಹಿಂದುವಾಗಿದ್ದರೆ—ಬೇಕಾದನ್ನು ತೆಗೆದುಕೊಳ್ಳಿ, ಜನ್ನೊಡನೆ ಸೇರಿ ಪರಕೀಯರನ್ನು ಹೊರಗೋಡಿಸುವ ಎನ್ನುತ್ತಿದ್ದೆನು. ಕಾಂಗ್ರೆಸು ಇಂತಹ ಕೃತಿಯನ್ನು ಮಾಡಬೇಕು. ಹಿಂದುವು ಹೀಗೆ ಮಾಡಿದರೆ, ಬ್ರಿಟಿಷರು ಇದಾರ್ಕೆ ತೋರಿಸಲು ಹಿಂದೆಗೆಯರು.

ಈಗ, ದಂಗೆಗಳನ್ನು ಅಡಗಿಸುವ ಉಪಾಯವೇನು? ಡೇರಾ ಇಸ್ಮಾಯಿಲ್ ಖಾನ್, ಕಾನ್ಪುರ ಮೊದಲಾದ ಸ್ಥಳಗಳಲ್ಲಿ ನೆತ್ತರ ಸ್ನಾನವಾಗಿದೆ! ದಂಗೆಗಳಾದಲ್ಲೆಲ್ಲ, ಹಲವು ತಿಂಗಳ

ಸಾಮ್ರಾಜ್ಯದ ರಕ್ಷಣೆಗೆ ಕೋತಿಗಳ ರವಾನೆ!

ಜಿಬ್ರಾಲ್ಟರಿಗೆ ೩೦ ಕೋತಿ ಕುಟುಂಬಗಳು ಬಂದುವು!

ಅಟ್ಲಾಂಟಿಕ ಮಹಾಸಾಗರ ಮತ್ತು ಭೂಮಧ್ಯ ಸಮುದ್ರದ ಮುಖದ್ವಾರದಲ್ಲಿರುವ ಜಿಬ್ರಾಲ್ಟರು ಇಂಗ್ಲಿಷರ ಸ್ವಾಧೀನವಾಗುವಾಗ್ಗೆ ಅಲ್ಲಿ ಅನೇಕ ಮಿಶ್ರಜಾತಿಯ ಜನರೂ, ಆಫ್ರಿಕದಿಂದ ಅಲ್ಲಿಗೆ ಬಂದಿದ್ದ ಸಾವಿರಾರು ಕೋತಿ ಕುಟುಂಬಗಳೂ ವಾಸವಾಗಿದ್ದುವು ಜಿಬ್ರಾಲ್ಟರು ಬ್ರಿಟಿಷ ಸಾಮ್ರಾಜ್ಯದ ಜೀವಾಳದಂತಿರುವುದು ಬ್ರಿಟಿಷರ ವ್ಯಾಪಾರ ನಡಿವಾಟುಗಳೂ, ಸಮುದ್ರಮಾರ್ಗಗಳೂ ಈ ಜಿಬ್ರಾಲ್ಟರಿನ ಮೂಲಕವಾಗಿಯೇ ಇವೆ ಜಿಬ್ರಾ

ಮೊದಲಿನಿಂದಲೂ ಇವನ್ನು ಉದ್ದೇಶಗೊಳಿಸುವ ಪ್ರಯತ್ನಗಳು ಘೋರಾಳ ನಡೆದಿವೆ ಎಂದು ಗೊತ್ತಾಗಿದೆ. ಹಿಂದೀ ಭಾಷೆಗಳಲ್ಲಿನ ವಾರ್ತಾ ಪತ್ರಗಳು ಪ್ರತಿದಿನವೂ ವಿಷವನ್ನೆ ಹರಡುತ್ತಿವೆ, ಹಾಗೆ ಬರೆದರೇ ಇವುಗಳನ್ನು ಸಾವಿರಕಟ್ಟಲೆ ಮಾರ ಬರುತ್ತದೆ ಕಾಂಗ್ರೆಸ್ ಸರಕಾರಗಳೂ ಈ ಬಗೆಯ ಪತ್ರಿಕಾ ಪ್ರಚಾರವನ್ನು ತಡೆದಿಲ್ಲ ಭಾಷಣ ಮತ್ತು ಲೇಖನ ಸ್ವಾತಂತ್ರ್ಯ ಎಂಬುದಕ್ಕೆ [illegible] ಎಲ್ಲ ಪ್ರಾಂತ್ಯಗಳಲ್ಲಿನ ಶಾಸನ [illegible] ಈ ಬಗೆಗಳಲ್ಲಿ ಅಗತ್ಯವಾದ [illegible] ಯಾಗಬೇಕು. ಸಮಾಜಗಳೊಳಗೆ ಕಲಹ [illegible] ಪತ್ರಿಕೆಗಳನ್ನು [illegible] ಬೇಕು. [illegible]

ಇದರ ಜತೆಯಲ್ಲಿ [illegible] ಬುದ್ಧಿ [illegible]

[illegible] ಜನಕೆ ಕೊಡಬಾರದ

R. N.

ಲ್ಟರು ಇತರರ ವಶವಾದರೆ ಬ್ರಿಟಿಷ ಸಾಮ್ರಾಜ್ಯದ ಸೌಭಾಗ್ಯ ಸೂರ್ಯನು ಮುಳುಗಿದಂತೆಯೇ ಸರಿ ಅದು ಅಷ್ಟು ಪ್ರಾಮುಖ್ಯವಾಗಿರುವದರಿಂದಲೇ ಅದರ ರಕ್ಷಣೆಗೆ ಬ್ರಿಟಿಷರು ಶತಪ್ರಯತ್ನಗಳನ್ನು ಮಾಡುತ್ತಿರುವರು. ಪರಂತು ಇತ್ತೀಚೆಗೆ ಕೆಲವು ವರ್ಷಗಳಿಂದ ಜಿಬ್ರಾಲ್ಟರಿನಲ್ಲಿ ಕೋತಿಗಳ ಸಂಖ್ಯೆಯು ಕಡಿಮೆಯಾಗುತ್ತ ಬಂದಹಾಗೆ ಬ್ರಿಟಿಷ ಸಾಮ್ರಾಜ್ಯದ ಬಲವೂ ದರ್ಪವೂ ಕುಂದುತ್ತ ಬಂದಿರುವುದರಿಂದ, ಎಷ್ಟರವರೆಗೆ ಜಿಬ್ರಾಲ್ಟರಿನಲ್ಲಿ ಕೋತಿಗಳು ಇರುವವೋ ಅಷ್ಟರವರೆಗೆ ಜಿಬ್ರಾಲ್ಟರು ಇಂಗ್ಲಿಷರ ವಶವಾಗಿರುವುದು ಎಂಬ ಒಂದು ಅಭಿಪ್ರಾಯ ಅಲ್ಲಿಯ ಜನರಲ್ಲಿ ಉಂಟಾಗಿರುವುದು. ಆ ವಿಶ್ವಾಸವು ಸುಳ್ಳಾಗಿರಲಿ, ಸತ್ಯವಾಗಿರಲಿ, ಪರಂತು ಜನರಲ್ಲಿ ಅಂಥ ವಿಶ್ವಾಸವಿರುವುದು ನಿಜವಾಗಿದೆ

ಈಗಂತೂ ಜಿಬ್ರಾಲ್ಟರಿನಲ್ಲಿ ಬರೀ ಎರಡು ಕೋತಿ ಕುಟುಂಬಗಳು ಇರುವವೆಂದು ಜಿಬ್ರಾಲ್ಟರಿನ ಮೇಲೆ ಮುಸಲೋನಿಯ ವಕ್ರದೃಷ್ಟಿ ಇದ್ದು ಅದನ್ನು ಇಟಲಿಗೆ ಸೇರಿಸಿಕೊಳ್ಳಲಿಕ್ಕೆ ಅವನು ಸರುವ [illegible] ಸ್ಪೇಯಿನ [illegible] ಬೇಡಿಕೊಂಡು [illegible] ತನ್ನ [illegible] ಕೋತಿ ಕುಟುಂಬಗಳು [illegible] ಜಿಬ್ರಾಲ್ಟರಿನಲ್ಲಿ ಕೋತಿಗಳ ಸಂಖ್ಯೆ ಹೆಚ್ಚುವದಕ್ಕೆ ಬ್ರಿಟಿಷ ಸಾಮ್ರಾಜ್ಯವು ಸುರಕ್ಷಿತವಾಗಿರಬಹುದು [illegible] ಜನರು ಹಾಗೆ ತಿಳಿಕೊಳ್ಳಬಹುದು-ಎಂದು ಬ್ರಿಟಿಷ ಸರಕಾರವು ತಿಳಿದಿರಬೇಕು.'

ಜಾಗ್ರತೆ! ಜಾಗ್ರತೆ!

ದೇಶ ವಿದೇಶಗಳಲ್ಲಿ ಪ್ರಖ್ಯಾತವಾದ ನಮ್ಮ ಮಾಲುಗಳು ವಿಶ್ವಾಸ ಕಂಸನೀಯವಾಗಿ ದಿನೇ ದಿನೇ ಗಿರಾಕಿಗಳು ಹೆಚ್ಚುತ್ತಿರುವದನ್ನು ಕಂಡರು, ಈ ಹೆಸರಿನಲ್ಲಿ ಬೇರೆ ನಕಲಿ ಮಾಲುಗಳುಂಟಾಗತೊಡಗಿರುವದರಿಂದ ನಮ್ಮ ಗಿರಾಕಿಗಳು ಕೆಳಗಿನ ಅಡ್ರೆಸ್ಸನ್ನು ನೋಡಿ ತೆಗೆದುಕೊಳ್ಳಿರಿ.

ನಕಲಿ ಮಾಲಿಗೆ ಮೋಸಹೋಗಬೇಡಿರಿ!

DRAKSHAMRUTHA

ದ್ರಾಕ್ಷಾಮೃತ

ಪಂಡಿತ ಜವಾಹಿರಲಾಲ ನೆಹರೂ ಬಂದಾಗ ಹುಬ್ಬಳ್ಳಿ ವಸ್ತುಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ ಸಾವಿರಾರು ಜನರಿಂದ ವರ್ಣಿಸಲ್ಪಟ್ಟು ಭಂಗಾರದ ಮೆಡಲ್ ಮತ್ತು ಅನೇಕ ಸರ್ಟಿಫಿಕೇಟುಗಳು ದೊರೆತಂಥ

[illegible]

ದೇಶೀ ಮೂಲಿಕೆಗಳ [illegible] ತಯಾರಾಗುವ,

ಶಕ್ತಿಯ ಕಡೆಗೆ ಮೊದಲನೇ ತರದ ಟಾನಿಕ್.

ಇದರ ಸೇವನೆಯಿಂದ [illegible]

ಕ್ರಯ ೧ ಬಾಟ್ಲಿ ರೂ. ೧।

ಮ್ಯಾನೇಜರ್: ದ್ರಾಕ್ಷಾಮೃತ ಡಿಪೋ, ಪೋಸ್ಟ-ನಿಪ್ಪಾಣಿ, ಜಿಲ್ಲಾ ಬೆಳಗಾಂವ.

ಸ್ಟಾಕಿಸ್ಟರು: [illegible] ಮೆಡಿಕಲ್ ಸಪ್ಲಾಯರ್ಸ್, [illegible] ಶೆಟ್ಟಿ ಮತ್ತು [illegible] ಭಟ್ಟ [illegible] ಫಾರ್ಮಸಿ. [illegible] ಶೆಟ್ಟಿ [illegible] ರಾಮಣ್ಣನಾಯಕ ಮತ್ತು ಭ್ರಾತೃ [illegible]

ಮುಸಲೋನಿಯ ದಂಡಯಾತ್ರೆ ಅರೇಬಿಯಕ್ಕೆ!

ಬ್ರಿಟಿಷ ಸಾಮ್ರಾಜ್ಯ ಭದ್ರತೆಗೆ ದೊಡ್ಡ ಗಂಡಾಂತರ!

ಸುಯೇಜ ಕಾಲುವೆಯ ಮೇಲೆ ಅಧಿಕಾರ ಸ್ಥಾಪನೆಗೆ ಪ್ರಯತ್ನ!!

ಸುಯೇಜ ಕಾಲುವೆ, ಕೆಂಪು ಸಮುದ್ರಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿ ಅರೇಬಿಯದ ತನಕ ಇಟಾಲಿಯನ ಸಾಮ್ರಾಜ್ಯವನ್ನು ವಿಸ್ತರಿಸಬೇಕೆಂದು ಮುಸಲೋನಿಯು ಆಲೋಚಿಸಿರುವನಾಗಿ ಯೂರೋಪದಲ್ಲೆಲ್ಲ ಸುದ್ದಿಯು ದಟ್ಟವಾಗಿ ಹರಡಿದೆ ಪುರಾತನಕಾಲದ ರೋಮ ಸಾಮ್ರಾಜ್ಯದಂತೆಯೇ ಇಂದಿನ ತನ್ನ ಇಟಾಲಿಯನ್ ಸಾಮ್ರಾಜ್ಯವು ಕೀರ್ತಿ ವೈಭವಗಳಿಂದ ಮೆರೆಯುತ್ತಿರಬೇಕೆಂಬ ಮುಸಲೋನಿಯ ಕನಸು—ಕನಸಾಗಿಯೇ ಉಳಿಯುವದೋ ಯತಾರ್ಥವಾಗುವುದೋ ಎಂದು ತಿಳಿಯಲು ಜಗತ್ತು ಆತುರದಿಂದಿದೆ

ಬ್ರಿಟಿಷರವಿರೋಧ

ಮುಸಲೋನಿಯ ಮಹತ್ವಾಕಾಂಕ್ಷೆಯು ಪೂರ್ತಿಯಾಗಲು ಬ್ರಿಟಿಷರು ವಿರೋಧಿಗಳಾಗಿದ್ದಾರೆ ಭೂಮಧ್ಯ ಅಟ್ಲಾಂಟಿಕ—ಮತ್ತು ಭೂಮಧ್ಯ-ಹಿಂದೂ ಮಹಾಸಾಗರಗಳ ಮಹಾದ್ವಾರಗಳಂತಿರುವ ಜಿಬ್ರಾಲ್ಟರು-ಸುಯೇಜ ಕಾಲುವೆಗಳು ಬ್ರಿಟಿಷರ ಅಧಿಕಾರದಲ್ಲಿರುವುದರಿಂದ ಭೂಮಧ್ಯಸಮುದ್ರದ ಅಧಿಕಾರವು ಇಟಾಲಿಯ ಕೈಯಲ್ಲಿದ್ದು ಏನೂ ಪ್ರಯೋಜನವಿಲ್ಲದಾಗಿದೆ ಆದ್ದರಿಂದ ಮುಸಲೋನಿಯ ಕಾರ್ಯಕ್ರಮವು ಈಗ ಜಿಬ್ರಾಲ್ಟರು ಸುಯೇಜ ಕಾಲುವೆಗಳನ್ನು ತನ್ನ ವಶದಲ್ಲಿಟ್ಟುಕೊಳ್ಳುವುದಾಗಿದೆ

ಫ್ರಾಂಕೋ ಸಹಾಯದ ರಹಸ್ಯ

ಇಟಾಲಿಯನ್ ಸರ್ವಾಧಿಕಾರಿ—ಮುಸಲೋನಿಯು ಸ್ಪೇಯಿನದಲ್ಲಿ ಅಂತಃಕಲಹದ ಕಿಚ್ಚನ್ನು ಹೊತ್ತಿಸಿ, ಫ್ರಾಂಕೋವಿಗೆ ಜನಧನ ಸಹಾಯವನ್ನು ಕೊಟ್ಟದ್ದು, 'ಅವನು ಸಂಪೂರ್ಣ ವಿಜಯಿಯಾಗುವಂತೆ ಸಾಧಿಸಿ, ಸಫಲನಾದ

ಮೇಲೆ ಸ್ಪೇಯಿನದಲ್ಲಿ ಫ್ರಾಂಕೋ ಸರ್ವಾಧಿಕಾರಿಯಾದರೆ ಅವನನ್ನು ಮುಸಲೋನಿಯು ತನ್ನ ಸ್ವೇಚ್ಛೆಯಂತೆ ಶಾಸನಮಾಡಲಿಕ್ಕೆ ಒತ್ತಾಯಿಸಲು ಬರುತ್ತದೆ ಮುಸಲೋನಿಯು ಅಂಕೆಗೆ ಒಳಪಟ್ಟ ಫ್ರಾಂಕೋ ಸ್ಪೇಯಿನದಲ್ಲಿರುವ ಜಿಬ್ರಾಲ್ಟರನ್ನು ಬ್ರಿಟಿಷರಿಂದ ಕಸಿದು ಮುಸಲೋನಿಯ ಅಧಿಕಾರಕ್ಕೆ ಕೊಡಲು ಸಿದ್ಧನಾಗುವನು. ಮುಸಲೋನಿ ಫ್ರಾಂಕೋ—ಇವರಿಬ್ಬರ ಕುಟಿಲೋಪಾಯಗಳಿಂದ ಜಿಬ್ರಾಲ್ಟರು ಮುಸಲೋನಿಯ ಕೈಗಿನಲ್ಲಿ ಬೀಳುವದು ಸುಲಭ. ಆದ್ದರಿಂದಲೇ ಮುಸಲೋನಿಯು ಸ್ಪೇಯಿನದಲ್ಲಿ ಲಕ್ಷಾಂತರ ಜನರು ಮತ್ತು ಕೋಟ್ಯಾಂತರ ಹಣವನ್ನು ಬಲಿಕೊಟ್ಟು ತನ್ನ ಸ್ವಾರ್ಥಸಾಧನೆಯ ಪ್ರಯತ್ನದಲ್ಲಿ ತೊಡಗಿದ್ದಾನೆ

ಅರೇಬಿಯದ ಮೇಲೆ ದೃಷ್ಟಿ.

ಅತ್ತ ಜಿಬ್ರಾಲ್ಟರನ್ನು ತನ್ನ ಕೈವಶ ಮಾಡಿಕೊಳ್ಳುವ ಆ ಪ್ರಯತ್ನಗಳನ್ನು ನಡೆಸಿರುವಾಗ ಇತ್ತ ಮುಸಲೋನಿ ಸುಯೇಜ ಕಾಲುವೆ ಕೆಂಪುಸಮುದ್ರಗಳ ಮೇಲೆ ತನ್ನ ಅಧಿಕಾರವು ನೆಲೆಗೊಳ್ಳುವಂತೆ ಅರೇಬಿಯದತನಕ ದಂಡಯಾತ್ರೆಗೆ ಹೊರಡುವ ಯೋಜನೆಯನ್ನು ಕಾಯುತ್ತಿರುವನಂತೆ ಅರೇಬಿಯವು ಈಗ ಇಟಾಲಿಯನ ದೂತರುಗಳಿಂದ ತುಂಬಿಹೋಗಿದೆ ಎಂದು ಲೋಕಸಂಚಾರಿಗಳು ಹೇಳುತ್ತಾರೆ ಯೇಮೆನ ರಾಜ್ಯದಲ್ಲಿ ಈಗಾಗಲೇ ಮುಸಲೋನಿಯು ಅನೇಕಾನೇಕ ಸವಲತ್ತುಗಳನ್ನೂ ಅನುಕೂಲಗಳನ್ನೂ ಕೊಂಡುಕೊಂಡಿರುತ್ತಾನೆ ಅರೇಬಿಯದ ಆಕ್ರಮಣಕ್ಕೆ ಅಗತ್ಯವಿರುವ ಇಟಾಲಿಯನ ಸೇನೆಯು ಯೇಮೇನದಿಂದ ಕೆಲವೇ ನೂರು ಮೈಲುಗಳ ದೂರದಲ್ಲಿದ್ದು ಮೇಲಧಿಕಾರಿಗಳ ಅಪ್ಪಣೆಯನ್ನು ಕಾದಿದೆ ದಂಡಯಾತ್ರೆಗೆ ಬೇಕಾದ ಯುದ್ಧೋಪಕರಣಗಳೆಲ್ಲ ಸಂಪೂರ್ಣ ಸಿದ್ಧವಾಗಿದೆ

ರೋಮಾಂಚಕಾರಿ ಅನುಭವ

ಲಾಡಿಸ್ಲಾಸ ಫರಗೋ ಎಂಬ ಸಂಚಾರಿಗರೊಬ್ಬರು ತಮ್ಮ ಅರೇಬಿಯ ಪ್ರವಾಸದ ಒಂದು ರೋಮಾಂಚಕಾರಿ ಅನುಭವವನ್ನು ಪ್ರಕಟಮಾಡಿರುವರು. ಕೆಂಪು ಸಮುದ್ರದಲ್ಲಿರುವ ಜಾಬೇಲಿ ಜುಕೂರ ದ್ವೀಪದಲ್ಲಿ ಒಂದು ದಿನ ಇಟಾಲಿಯನರ ಜಲಾಂತರ್ಗತ ಯುದ್ಧನಾವೆಯು ಯಾರಿಗೂ ತಿಳಿಯದಂತೆ ಬಂದು ಸೇನಾವ್ಯೂಹವನ್ನು ರಚಿಸಲಿಕ್ಕೆ ಅಲ್ಲಿರುವ ಅನುಕೂಲಗಳನ್ನು ಪರೀಕ್ಷಿಸಲಿಕ್ಕೆ ಕೆಲವು ಮಂದಿ ಸೇನಾಧಿಕಾರಿಗಳನ್ನು ಇಳಿಸಿ ಎಲ್ಲಿಗೋ ಹೊರಟು ಹೋಯಿತೆಂದು ಅವರು ಹೇಳುತ್ತಾರೆ ಕೆಂಪು ಸಮುದ್ರವನ್ನು ದಾಟುವಾಗ ಈ ಜಾಬೇಲಿ ಜುಕೂರು ದ್ವೀಪವೇ ಇಟಾಲಿಯನ್ ಸೇನೆಯ ರಾಣ್ಯವಾಗಲೂ ಬಹುದು

ಕೋಟೆಕೊತ್ತಳಗಳು ಕಟ್ಟಲ್ಪಡುತ್ತಿವೆ.

ಅರೇಬಿಯದ ಆಕವ ಸಾಡಲ ಜಬೇಲಿ ಜುಕೂರ ದ್ವೀಪದ ಮೇಲೆಯೇ ಮುಸಲೋನಿಯ ದೃಷ್ಟಿ ಇರುವುದಿಲ್ಲ. ಸೈನಿಕದೃಷ್ಟಿಯಿಂದ ಆ ದ್ವೀಪವು ವಿಶೇಷ ಮಹತ್ವವುಳ್ಳದ್ದು ಆದ್ದರಿಂದ ಅವನು ಕೆಂಪು ಸಮುದ್ರದ ಯಾವೇ [illegible] ಪೂರ್ವಕರಾವಳಿಯಲ್ಲಿ ಅನೇಕ ಕೋಟೆಕೊತ್ತಳಗಳನ್ನು ಕಟ್ಟಿಸಿರುವನು. ಕೆಂಪು ಸಮುದ್ರದ ಪಶ್ಚಿಮ ಕರಾವಳಿಯಲ್ಲಿಯೂ ಅವನ ಕೋಟೆಕೊತ್ತಳಗಳಿವೆ ಹೀಗೆ ಕೆಂಪು ಸಮುದ್ರದಲ್ಲಿ ಅವನ ಸರ್ವಾಧಿಕಾರವು [illegible] ಮೆರೆಯುವ ದಿನಗಳು ಹತ್ತಿರಬಂದಿವೆ

ಬ್ರಿಟಿಷರು ಸಂಧಾನಮಾಡಬೇಕು.

ಈಗ ಮುಸಲೋನಿಯ ಈ ಎಲ್ಲ ಕಾರ್ಯಕ್ರಮಗಳಿಂದ ಎಂಥ ಸಂದಿಗ್ಧವು ಉಂಟಾಗಿರುವುದೆಂದರೆ—ಬ್ರಿಟಿಷರು ಒಂದೇ ಮುಸಲೋನಿಯ ಮುಂದೆ ಮೊಣಕಾಲೂರಿ ಅವನ ಸಂಧಿ ಶರ್ತಗಳನ ಒಪ್ಪಿ ಹೇಗೂ ಬದುಕಿರುವುದಕ್ಕಾಗಿ ದಿನಕಳೆಯಬೇಕಾಗುವುದು ಅಥವಾ ಮುಸಲೋನಿಯೊಡನೆ ಯುದ್ಧವನ್ನೇ ಮಾಡಬೇಕು. ಹಿಂದೂ ಶಾಂತಮಹಾಸಾಗರಗಳಲ್ಲಿ ತಮ್ಮ ವ್ಯಾಪಾರವಹಿವಾಟಗಳನ್ನು ಆಫ್ರಿಕದ ಸುತ್ತುಬಳಸಿ ಮಾಡಬೇಕಾಗುವುದು ಈ ಎರಡು ಪ್ರಸಂಗಗಳಲ್ಲಿ ಕೂಡ ಬ್ರಿಟಿಷರ ಖ್ಯಾತಿಗೆ ಕೊರತೆ ಒದಗುವುದಲ್ಲದೆ ಬೇರೇನಿಲ್ಲ ಮುಸಲೋನಿಯು ಭೂಮಧ್ಯ ಕೆಂಪುಸಮುದ್ರಗಳ ಒಡೆಯನಾಗಿ ಬಿಟ್ಟರೆ, ಮತ್ತೆ ಬ್ರಿಟಿಷ ಸಾಮ್ರಾಜ್ಯವು ಎರಡನೆ ಅಥವಾ ಮೂರನೆ ತರಗತಿಗೆ ಸೇರಿದ ಒಂದು ಸಾಮ್ರಾಜ್ಯವಾಗುವುದು.

ಸಾಮ್ರಾಜ್ಯ ಭದ್ರತೆಗೆ ಗಂಡಾಂತರ.

ಮುಸಲೋನಿಯು ಸಫಲನಾದರೆ ಬ್ರಿಟಿಷ ಸಾಮ್ರಾಜ್ಯದ ದುರ್ಗತಿ ಮತ್ತು ಅದರ ಭದ್ರತೆಗೆ ಗಂಡಾಂತರವು ಇದ್ದೇ ಇದೆ ಸರ್ವಾಧಿಕಾರಿಯಾದ ಮುಸಲೋನಿಯ ಮತ್ತು [illegible] ಯನ್ನು ಪೋಷಿಸುವ ಬ್ರಿಟಿಷರ [illegible] ಜೀವನದ ಧ್ಯೇಯಾದರ್ಶಗಳ [illegible] ಒಂದು ದಿನ ಸಂಘರ್ಷವು ನಡೆದ [illegible] ದರಿಂದ ವಿಜಯ ಯಾರಿಗೇ [illegible] ಈ ಸಂಘರ್ಷದಲ್ಲಿ ವಿಜಯ [illegible] ಕೊರಳಿಗೆ ವೀರ ಮಾಲೆ [illegible] ವನ್ನು ಹೊಂದಿಕೊಂಡಿದೆ ಬ್ರಿಟಿಷರ [illegible] ಉದಾಸೀನರಂಗಿ ಕಾಲಕಳೆಯುವರೆ [illegible] ಗಳ ಕಳೆಯುತ್ತ ಮುಸಲೋನಿಯು [illegible] ನಾಗುವನು ಆದ್ದರಿಂದ ಸಾಮ್ರಾಜ್ಯದ ರಕ್ಷಣೆಗೋಸ್ಕರ ಬ್ರಿಟಿಷರು ಈಗಲೇ ಮುಸಲೋನಿಯನ್ನು ಟೊಂಕ ಹಿಡಿಯಬೇಕಾಗುವುದು ಇಲ್ಲವಾದರೆ ಪಶ್ಚಾತ್ತಾಪವಲ್ಲದೆ ಬೇರೇನೂ ಉಪಾಯವು ಉಳಿಯಲಾರದು



ಮೂಲವ್ಯಾಧಿಯ ಜಾತುಕೊಳ್ಳುವಿಕೆಯಿಂದ ನರಳಬೇಡಿರಿ. ಒಂದೆ ಸಮನಾಗಿ ರಕ್ತ ಸ್ರವವಾದರೆ ನೀವು ಬಹಳ ನಿತ್ರಾಣರಾಗುವಿರಿ. ಜ್ಹಾಂಬಕು ಇದನ್ನು ಗುಣಪಡಿಸುವುದು ಈ ಆಶ್ಚರ್ಯಕರವಾದ ಗಿಡಮೂಲಿಕೆಯ ಲೇಪವು ಉತ್ತಮವಾದ ಸುಖವನ್ನೀಯುವುದು. ಇದು ವಿಕಸಿತವಾಗುವ ನರಗಳ ಮೇಲೆ ಅತ್ಯಂತ ಪರಿಣಾಮಕಾರಿಯಾದುದರಿಂದ ರಕ್ತಸ್ರವವನ್ನು ನಿಲ್ಲಿಸಿ ಮೂಲವ್ಯಾಧಿಯು ನಾಶವಾಗುವಂತೆ ಮಾಡುತ್ತದೆ ಆದಕಾರಣ ನೀವು ಮೂಲವ್ಯಾಧಿಯಿಂದ ನರಳುತ್ತಿರುವಿರಾದರೆ ಜ್ಹಾಂಬಕನ್ನು ದಿವಸಕ್ಕೆ ಎರಡು ಯಾ ಮೂರು ಬಾರಿ ಹಚ್ಚಿರಿ ಎಲ್ಲಾ ಔಷಧಿ ವ್ಯಾಪಾರಿಗಳು ಜ್ಹಾಂಬಕನ್ನು ರೂಪಾಯಿ 1 ಮತ್ತು 2—4 ರಂತೆ ಮಾರುತ್ತಾರೆ

ಏಜಂಟ್ಸ್

ದಿ ಸರ್ಗ ದಾಧಾ ಮತ್ತು ಕಂಪನಿ ಫಾರ್ಕಟೌನ್ ಮದ್ರಾಸು

ಯಾವಾಗಲೂ ಜ್ಹಾಂಬಕನ್ನು ಉಪಯೋಗಿಸಿರಿ



ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ

ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store.

28 Meachua Bazar St CALCUTTA

ಜೆಕ್ಕರ ರಾಜ್ಯವು ಜೆಕ್ಕರಿಗೆ ದೊರೆಯುವದೆ?

ಭವಿಷ್ಯವನ್ನು ಹೇಳಬಲ್ಲವರು ಯಾರು?

ಹಿಟ್ಲರ [illegible] ಸುಡೇಟಿನ [illegible] ಜರ್ಮನ [illegible] ಕೊಂಡರೆ [illegible] ನ್ಯೂಸ ರೆವ್ಯೂ [illegible] ಪತ್ರಿಕೆಯು ಹೇಳುತ್ತದೆ

ಆಡಳಿತವು ಕಠಿಣವಾಗಿದೆ

ಸುಡೇಟಿನ ಪ್ರದೇಶವನ್ನು ಜರ್ಮನಿ [illegible] ಹಿಟ್ಲರನ [illegible] ದಮು [illegible] ವಾಗಿರುವುದಿಲ್ಲವೆಂದು ಈಗ ಅವರಿಗೆ ಅನುಭವವಾಗಿದೆಯಂತೆ [illegible] ಟನ ಪ್ರದೇಶದಲ್ಲಿ [illegible] ಬೇಕಾದಷ್ಟು ಆಹಾರ ಸಾಮಗ್ರಿಗಳ [illegible] ತದಲ್ಲಿ ದೊರೆಯುವುದಿಲ್ಲ ಜರ್ಮನಿ [illegible] ಯು ಜನರಿಗೆ [illegible] ದನ್ನು ಕೊಡಲಿಕ್ಕೆ ಹೆಚ್ಚಿಗೆ [illegible] ಆದ್ದ [illegible] ಸುಡೇಟಿನ ಜನರು [illegible] ವಾಸಬಿದ್ದು, [illegible] ಹಿಟ್ಲರನ [illegible] ಆಹಾರ ಸಾಮಗ್ರಿಗಳನ್ನು [illegible]. ಅಲ್ಲದೆ ಸುಡೇಟನ ಪ್ರದೇಶದಲ್ಲಿ ನಡೆಯುವ [illegible] ಸಾಮಾನುಗಳನ್ನು ಮಾರಲಿಕ್ಕೆ [illegible] ಜರ್ಮನಿಯ ಈಗಿನ ವಿದೇಶಾಂಗ [illegible] ಯಿಂದ ಅಂಥ ಮಾರಾಟಕ್ಕೆ [illegible] ಅದಕ್ಕೆ ದೊರೆಯ [illegible]

ಅದಕ್ಕೆ ಈ ಉಪಾಯ

ಸುಡೇಟನ ಪ್ರದೇಶವನ್ನು ಪುನಃ ಜೆಕ್ಕರಿಗೇ ಕೊಟ್ಟುಬಿಟ್ಟರೆ ಹಿಟ್ಲರನ ಈ ಎಲ್ಲಾ ಕಷ್ಟಗಳು ದೂರಾಗುವವು. ಅವನ ಸ್ವಾರ್ಥಸಾಧನೆಯು [illegible] ಜನರ [illegible] ಬೀಳುವುದು [illegible] ಸುಡೇಟನ ಕೈಗಾರಿಕೆಗಳ ಮಾರಾಟ [illegible] ಕ್ಷೇತ್ರಗಳು [illegible] ಸುಡೇಟನ ಪ್ರದೇಶವು [illegible] ಪುನರ್ಘಟನೆ [illegible] ಜರ್ಮನಿ ಹಿಟ್ಲರನ ಮಾಂಗಾಲಿ [illegible] ಆ ರಾಜ್ಯವು ಹಿಟ್ಲರನ [illegible] ತಮ್ಮ [illegible] ವನ್ನು ನಡೆಸಬೇಕಾಗುವುದು ಆದ [illegible] ಸುಡೇಟನ ಪ್ರದೇಶವನ್ನು ಪುನಃ ಜೆಕ್ಕರಿಗೆ ಕೊಟ್ಟರೆ ಲಾಭವಲ್ಲದೆ ನಷ್ಟವೇನೂ ಇರುವುದಿಲ್ಲ ಅದಕ್ಕೆ ಹಿಟ್ಲರನು ಈ ಉಪಾಯ ಮಾಡಿರುವನೆಂದು ನ್ಯೂಸ ರೆವ್ಯೂ ಪತ್ರಿಕೆಯ ಅಭಿಪ್ರಾಯವಿರುತ್ತದೆ

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR P. W. FARIAS.

ST PAULS CHURCH,
Bolkunje Post S K
Date 14 Jan 1939.

To
THE JOINT MANAGERS
The C. P. C. Co Ltd Mangalore

Sirs,

I thank you most sincerely of the promptness with which you arranged to take us to Mangalore [illegible] during the grand occasion of the diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the Congress.

The glorious success of our congress is also due to your [illegible] in putting up the various lights [illegible] which I hear were done voluntarily.

May the blessings of the almighty fall on you all and may you be able to [illegible] much good to the Public.

Renewing my thanks I remain
Yours sincerely
(Sd) **P W Farias**

Sri Parshwanathaswami,
PANCHAKALYANA POOJA MAHOSTHAM,
Venur, S. Kanara 1939

To,
THE JOINT MANAGERS
The Combind Booking Agency Mangalore

Dear Sirs

Please permit us to express our thanks on behalf [illegible] for the [illegible] service rendered by your combined Booking Agency Staff at Venur to the visitors of the Panchakalyana Pooja Mahosthavam celebrated held this year.

Our thanks are also due to [illegible] Mr. B. Krishna [illegible] and also [illegible] and Mr. Raghavendra Bhandary who had specially come down from Mangalore [illegible] to the needs [illegible] of the travelling Public. [illegible] again

We remain Yours faithfully

Venur [illegible] (Sd) B Chandappa Indra (*Secretary P M Com'ttee*) (Sd) M Jagathpal (Sd) M Pachappa Shetty
Dated 6-2-39 (Sd) Anantharaj Shetty, (*Members Panchakalyana Mahosthava Committee*)

JOINT MANAGERS.

The Combined Booking Agency, MANGALORE
The Joint Booking Office, KODIALBAIL.

CONSTRUCTIVE BANKING

An understanding of how a modern Bank can operate to make itself useful to the individual, to business and to the public has enabled the CANARA BANK to have thousands of depositors and to build resources exceeding a Crore.

And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OVER A CRORE.

ESTD 1906
CANARA BANK, LIMITED.

(Regd).

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಕೆ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಎಲ್ಲಾ ಅಂಗಡಿಗಳಲ್ಲಿ ದೊರೆಯುವುದು.

ವಾರ್ಷಿಕ ವರ್ಗಣಿ ರೂ 2—0—0

ಸ್ವದೇಶಾಭಿಮಾನಿ

ರೂ 2-13-0

Established 1906 Regd. No M 340

ಸಂಪುಟ ೩೩] ತಾರೀಕು ೧೦-೩-೧೯೩೯ (10-3-1939) [ಸಂಚಿಕೆ ೧೦

THE

BOMBAY LIFE ASSURANCE COMPANY, LTD.,

(ESTD 1908)

It is not material how much you can earn every month, but it is most important how much you save, so that you and your family can have uniform minimum comforts at a time when your income reduces or comes to nothing.

Best place to invest your such savings in a capitalized value is THE BOMBAY LIFE ASSURANCE CO., LTD. which gives you best security and service.

Honest, Energetic and Influential persons will have great opportunity to help the cause of society and also to earn a permanent and decent remuneration

KOCHIKAR BROTHERS, LIIMTED,

The Bombay Life Assurance Co. Ltd

The Bombay Life Building Gandhinagar UDIPI

or any of our following offices:

Post Box No 337
Mount Road
Madras

Visweshwarapuram Circle
Bangalore City

Charni Road
Girgaum
BOMBAY 4

Car Street,
Mangalore

Puthivara,
Calicut

Central Station Road
Trivandrum

Ottapalam
S. Malabar

MAKE LIFE WORTH-LIVING!

Indigestion Insomnia Dry Cough
Nervousness Weak Heart &c
these make you weary of Life!

GONSULT US AND BUY
YOUR LIFE'S HAPPINESS!

~~Oils – that cool the brain and induce sleep~~
Lehas – that build-up your ...
Asavas – that regenerate your ...

All Genuine Ayurvedic Preparations-
-from this huge Ayurvedic Concern of a Century Standing—

Bhuvanendra Products, Ltd.,

Katapady, S. Kanara.

(BRANCH—KUMTA N. KANARA)

ಜೀವನದಲ್ಲಿ ನಿರಾಶರಾಗಬೇಡಿ!

ನಮ್ಮನ್ನು ವಿಚಾರಿಸಿರಿ

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

(ಬ್ರಾಂಚ್ ಕುಮಟಿ, ಉತ್ತರ ಕನ್ನಡ)

Edited Printed & Published by A. S. Kamath at the Sharada Press Car Street Mangalore

ಸ್ವದೇಶಾಭಿಮಾನಿ

Swadeshabhimani. Estd 1906

ತಾ ೨೪–೩–೧೯೩೯.   Date 24–3–1939

ಜನಾಂಗದ ವಿಶ್ವಾಸೀ ನಾಯಕ.

ಸಚಿತ್ರ ವಾರ ಪತ್ರಿಕೆ

ನೋವು ಬೇನೆ ಎಂಬುದು ಬರಿಯ ನಂಬಿಕೆ ಮಾತ್ರ

ಈಜಿಪ್ಟದ ಯೋಗಿಯ ಅದ್ಭುತ ಚಮತ್ಕಾರಗಳು

ಲಂಡನಿನಲ್ಲಿ ಯೋಗವಿದ್ಯೆಯ ಪ್ರದರ್ಶನ

ಡಾಕ್ಟರ ಥಾರಾಬೇ ಎಂಬ ಈಜಿಪ್ಟದ ಒಬ್ಬ ಯೋಗಿಯು ಲಂಡನಿನಲ್ಲಿ ತನ್ನ ಕೆಲವು ಅದ್ಭುತ ಚಮತ್ಕಾರಗಳನ್ನು ತೋರಿಸಿ ಸಭಿಕರನ್ನು ಬೆರಗುಗೊಳಿಸಿರುವನು. ಲಂಡನಿನ ಪ್ರತಿಷ್ಠಿತ ಸ್ತ್ರೀಪುರುಷರಿಂದ ಸಭಾ ಭವನ ಕಿಕ್ಕಿರಿದು ಹೋಗಿದ್ದಿತು. ಸಭಿಕರ ಮನೋಭಿಪ್ರಾಯಗಳನ್ನು ಇದ್ದಲ್ಲಿಂದಲೇ ತಿಳಿಕೊಳ್ಳುವ ಮತ್ತು ನೋವು ಬೇನೆಗಳನ್ನು ಸಹಿಸಿಕೊಳ್ಳುವ ಅಸಾಧಾರಣ ಶಕ್ತಿಸಾಮರ್ಥ್ಯಗಳನ್ನು ಕಂಡು ಸಭಿಕರ ರೋಮಾಂಚನವಾಯಿತು. ಯೋಗಸಿದ್ಧಿಯ ಅದ್ಭುತ ಚಮತ್ಕಾರಗಳ ಈ ಪ್ರದರ್ಶನವು ಕ್ವೀನ್ಸ ಹಾಲಿನಲ್ಲಿ ನಡೆದಿದ್ದಿತು.

ಸೂಜಿಗಳನ್ನು ಚುಚ್ಚುವುದು

ಹತ್ತತ್ತು ಇಂಚು ಉದ್ದದ ಉಕ್ಕಿನ ಸೂಜಿಗಳನ್ನು ಥಾರಾಬೇಯು ತನ್ನ ಎದೆ, ಕೈ ಕಾಲುಗಳಿಗೆ ಚುಚ್ಚಿಸಿಕೊಂಡನು. ಆದರೂ ತನಗೆ ಸ್ವಲ್ಪವಾದರೂ ನೋವಾದುದನ್ನು ಅವನು ತೋರಿಸಿಕೊಳ್ಳಲಿಲ್ಲ. ವಾಸ್ತವವಾಗಿ ನೋವು ಎಂಬುದು ಇರುವುದೇ ಇಲ್ಲವೆಂದು ಥಾರಾಬೇಯು ಹೇಳುವನು. ನೋವು ಎಂಬುದು ಮನಸ್ಸಿಗೆ ಕೇವಲ ಒಂದು ಕಲ್ಪನೆ ಎಂಬುದು ಥಾರಾಬೇಯು ಅಭಿಪ್ರಾಯವಾಗಿದೆ. ತನ್ನ ಅಭಿಪ್ರಾಯವನ್ನು ಸಭಿಕರಿಗೆ ಇನ್ನಷ್ಟು ಚೆನ್ನಾಗಿ ಸ್ಪಷ್ಟಮಾಡುವುದಕ್ಕೋಸ್ಕರ ಅವನು ಚೂಪಾದ ಕಬ್ಬಿಣದ ಆಣಿಗಳನ್ನು ಜಡಿದ ಮಣೆಯ ಮೇಲೆ ಮಲಗಿಕೊಂಡನು. ಆಗ ಅವನ ಮೈ ಮೇಲೆ ವಸ್ತ್ರದ ಚೂರೂ ಇರಲಿಲ್ಲ. ಕಬ್ಬಿಣದ ಆಣಿಗಳು ಆರಾರು ಇಂಚು ಉದ್ದವಾಗಿದ್ದುವು ಅವು ಯಥಾರ್ಥವಾದವುಗಳು. ಮತ್ತು ಅವುಗಳ ಮೊನೆಗಳು ಅತ್ಯಂತ ಚೂಪಾಗಿದ್ದುವು ಎಂದು ಸಭಿಕರು ಕಣ್ಣಾರೆ ಕಂಡು ಪರಾಮರಿಸಿ ನೋಡಿದ್ದರು. ಥಾರಾಬೇಯು ಮಣೆಯಿಂದ ಎದ್ದು ಕೂತಾಗ ಅವನ ಮೈಗೆ ಒಂದೇ ಒಂದಾದರೂ ಗಾಯವಾಗಿರಲಿಲ್ಲ. ಅವನ ಈ ಅದ್ಭುತ ಯೋಗ ಸಿದ್ಧಿಯನ್ನು ಕಂಡು ಜನರು ಆಶ್ಚರ್ಯದಿಂದ ತಲೆದೂಗಿದರು.

ಅಭಿಪ್ರಾಯಗಳನ್ನು ಹೇಳುವುದು

ತದನಂತರ ಥಾರಾಬೇಯು ಸಭಿಕರಿಗೆ ತಮ್ಮ ತಮ್ಮ ಒಂದೊಂದು ಅಭಿಪ್ರಾಯವನ್ನು ಮಾಡಲಿಕ್ಕೆ ಹೇಳಿದನು. ಅವರು ಹಾಗೆ ಮಾಡಿದ ಕೂಡಲೆ ಈ ಅದ್ಭುತ ಯೋಗಿಯು ಅವರ ಅಭಿಪ್ರಾಯಗಳನ್ನೆಲ್ಲ ಇದ್ದಕ್ಕಿದ್ದ ಹಾಗೆ ಹೇಳಿಬಿಟ್ಟನು. ಅವು ಅಕ್ಷರಶಃ ಸತ್ಯವಾಗಿದ್ದುವು. ಒಬ್ಬ ಸಭಿಕನು ತನ್ನ ಬಳಿಯಲ್ಲಿದ್ದವನೊಬ್ಬನ ಗಡಿಯಾರವನ್ನು ಥಾರಾಬೇ ಎತ್ತಿಕೊಳ್ಳುವಂತೆ ಮನಸ್ಸಿನಲ್ಲೇ ಆಲೋಚಿಸಿದ್ದನು. ಥಾರಾಬೇ ಹಾಗೆ ಮಾಡಿದುದನ್ನು ನೋಡಿದೊಡನೆ ಶಾಭಾಸ ಶಾಭಾಸ ಎಂದು ಸಭಾಭವನವು ಪ್ರತಿಧ್ವನಿಸಿತು.

ಯೋಗಾಭ್ಯಾಸದ ಚಮತ್ಕಾರ

ಆ ಮೇಲೆ ಥಾರಾಬೇ ಯೋಗಾಭ್ಯಾಸವನ್ನು ಆರಂಭಿಸಿದನು. ಒಂದೆರಡು ನಿಮಿಷಗಳಲ್ಲಿ ಅವನಿಗೆ ಸಮಾಧಿ ಬಂದಿತು. ಕೂಡಲೇ ಅವನು ಕೊಟ್ಟ ಸೂಚನೆಗಳಂತೆ ಅವನ ಮೂಗು ಬಾಯಿ ಕಿವಿಗಳನ್ನು ಹತ್ತಿಯಿಂದ ಮುಚ್ಚಿ ಕೆಲವರು ಅವನನ್ನು ಒಂದು ಉದ್ದಗಿನ ಪೆಟ್ಟಿಗೆಯೊಳಗೆ ಮಲಗಿಸಿದರು. ಮತ್ತೆ ಆ ಪೆಟ್ಟಿಗೆಯನ್ನು ಎತ್ತಿ ಒಂದು ಹೊಂಡದೊಳಗೆ ಇಟ್ಟು ಅದನ್ನು ಮೇಲಿನಿಂದ ಮಣ್ಣಿನಿಂದ ಮುಚ್ಚಿದರು. ಹತ್ತು ನಿಮಿಷಗಳ ತರುವಾಯ ಪೆಟ್ಟಿಗೆಯನ್ನು ಎತ್ತಿ ನೋಡಲು ಥಾರಾಬೇ ಹೆಣದಂತೆ ಮರಗಟ್ಟಿ ಹೋಗಿದ್ದನು. ಆದರೆ ಸ್ವಲ್ಪವೇ ಸಮಯದಲ್ಲಿ ಅವನು ಸಮಾಧಿಯಿಂದ ಎಚ್ಚತ್ತು ಕೂತನು. ಅದನ್ನು ಕಂಡು ಸಭಿಕರ ರೋಮಾಂಚನವಾಯಿತು. "ಎಂಥ ಯೋಗ ವಿದ್ಯೆಯಪ್ಪಾ!" ಎಂದು ಹೇಳುತ್ತ ಸಭಿಕರು ಈ ಅದ್ಭುತವನ್ನು ಬಾಯಿ ತುಂಬ ಹೊಗಳಿ ಮನೆಗೆ ಹೋದರು.

ಹೆಂಡತಿಯನ್ನು ಹೊಡೆಯುವ ಅಧಿಕಾರ ಗಂಡನಿಗೆ ಇದೆ

ಚಿಕಾಗೋ ಕೋರ್ಟಿನಲ್ಲಿ ವಿಚಿತ್ರ ತೀರ್ಮಾನ

ಹೆಂಡತಿಯು ಸಾಯದ ಹಾಗೆ ಗಂಡನು ಅವಳನ್ನು ಚೆನ್ನಾಗಿ ಹೊಡೆಯಬೇಕೆಂದು ಇಚ್ಛಿಸಿದರೆ ಅವಳನ್ನು ಚೆನ್ನಾಗಿ ಹೊಡೆಯುವ ಅಧಿಕಾರವು ಅವನಿಗೆ ಇರುತ್ತದೆಂದು ಚಿಕಾಗೋ ನಗರದ ದಾಂಪತ್ಯ ವಿಚ್ಛೇದನ ನ್ಯಾಯಾಲಯದಲ್ಲಿ ಫಿಶ್ಚರನ ಎಂಬ ನ್ಯಾಯಾಧೀಶರು ಒಂದು ವಿಚಿತ್ರ ತೀರ್ಮಾನವನ್ನು ಕೊಟ್ಟರು.

ದಾವೆ

ಅವನ ಹೇಳಿದ ಹಾಗೆ ತಾನು ಅವನೊಂದಿಗೆ ನರ್ತನಕ್ಕೆ ಹೋಗುವುದಿಲ್ಲವೆಂದು ಸಿಟ್ಟಾಗಿ ಗಂಡನು ತನ್ನನ್ನು ಹೊಡೆದು ಬಡಿದು ಪೀಡಿಸುತ್ತಿರುವನಾದ್ದರಿಂದ ದಾಂಪತ್ಯ ವಿಚ್ಛೇದವಾಗಬೇಕೆಂದು ಮೇರಿ ಕುಹಾರಳು ಚಿಕಾಗೋದ ಆ ಕೋರ್ಟಿನಲ್ಲಿ ಒಂದು ದಾವೆಯನ್ನು ತಂದಿದ್ದಳು. ಆದರೆ ಸಾಯದ ಹಾಗೆ ಗಂಡನು ಹೆಂಡತಿಯನ್ನು ಹೊಡೆಯುತ್ತಿರುವನಾದರೆ ಅದು ಅಪ್ರಾಕೃತವಾಗುವುದಿಲ್ಲವೆಂದು ಜಡ್ಜರು ಅಭಿಪ್ರಾಯಪಟ್ಟು ದಾವೆಯನ್ನು ತಳ್ಳಿಹಾಕಿದರು. ಗಂಡನು ಕಪ್ರಾರಿಯಾಗಿದ್ದರೆ ದಾಂಪತ್ಯ ವಿಚ್ಛೇದನಕ್ಕೆ ಕೋರ್ಟಿನವರು ಅನುಮತಿ ಕೊಡಬಹುದೆಂದು ಅಮೇರಿಕದಲ್ಲಿ ಕಾನೂನು ಇದೆ. ಪ್ರಾಣ ಹೋಗುವಷ್ಟು ಹೊಡೆದ್ದರೆ ಮಾತ್ರ ಕ್ರೂರತನವಾಗುತ್ತದಲ್ಲದೆ ಅನ್ಯಥಾ ಅಲ್ಲವೆಂದು ಜಡ್ಜರ ತೀರ್ಮಾನ.

ಯಾಕೆ ಹೀಗೆ?

ತಾನು ಇಂಥ ತೀರ್ಮಾನವನ್ನು ಯಾಕೆ ಕೊಟ್ಟೆನೆಂಬುದರ ಕುರಿತು ಜಡ್ಜರು ಕೆಲವು ವಾಕ್ಯಗಳನ್ನು ಬರೆದಿದ್ದಾರೆ. ಈಗೀಗ ಅಮೇರಿಕದಲ್ಲಿ ಮಾತು ಮಾತಿಗೆ ಹೆಂಡಂದಿರು ಅಪ್ಪಣ್ಣರಾಗಿ ಗಂಡಂದಿರ ಮೇಲೆ ದಾಂಪತ್ಯ ವಿಚ್ಛೇದನದ ದಾವೆಗಳನ್ನು ತರುತ್ತಾರೆ. ಸಣ್ಣ ಅಲ್ಪ ಕಾರಣಗಳಿಂದ ಇಂಥ ದಾವೆಗಳನ್ನು ತರುವುದರಿಂದ ಕೋರ್ಟುಗಳ ಕೆಲಸವು ಹೆಚ್ಚಾಗಿ ಸಾರ್ವಜನಿಕ ಸಮಯ ಮತ್ತು ಹಣದ ಅಪವ್ಯಯವಾಗುವುದು ಮಾತ್ರವಲ್ಲದೆ ಸಾಂಸಾರಿಕ ಸುಖ ಶಾಂತಿ ಸಮಾಧಾನಗಳೂ ಕೆಡುತ್ತವೆ. ಮದುವೆ ಎಂಬುದು ಗೊಂಬೆಯಾಟವಾಗುತ್ತದೆ. ಇದನ್ನು ತಪ್ಪಿಸಬೇಕಾದರೆ ಅಮೇರಿಕದಲ್ಲಿ ಗಂಡಂದಿರಿಗೆ ಹೆಂಡಂದಿರನ್ನು ಹೊಡೆಯುವ ಅಧಿಕಾರವಿದೆ ಎಂದೇ ಆಗ ಬೇಕು. ಆಗ ಹೆಂಡಂದಿರ ಸ್ವೇಚ್ಛಾಪೂರ್ವ ನಿರಂಕುಶ ವರ್ತನೆಗೆ ತಡೆಹಾಕಿದಂತಾಗಿ ಅವರು ಗಂಡಂದಿರನ್ನು ಸನ್ಮಾನದಿಂದ ಕಾಣಲಿಕ್ಕೆ ಕಲಿತುಕೊಳ್ಳುವರು. ದಾಂಪತ್ಯ ವಿಚ್ಛೇದನಕ್ಕೆ ದಾವೆಗಳೂ ಕಡಿಮೆಯಾಗಿ ಕೋರ್ಟುಗಳು ತಮ್ಮ ಸಮಯದ ಸದುಪಯೋಗ ಮಾಡಿಕೊಳ್ಳಬಹುದು.

ಅಸೌಖ್ಯದ ನಂತರ ತ್ವರೆಯಾಗಿ ಆರೋಗ್ಯವನ್ನುಂಟುಮಾಡುವುದು

'ಓವಲ್ಟೀನು' ಬಹಳ ಶ್ರೇಷ್ಠವಾದ ಪುಷ್ಟಿಯುಕ್ತ ಆಹಾರ ಪಾನೀಯವಾಗಿರುತ್ತದೆ. ಪ್ರಕೃತಿಯ ಉತ್ತಮ ಪೌಷ್ಟಿಕ ಪದಾರ್ಥಗಳಾದ, ಹಸಿ ಬಾರ್ಲಿ ಅಕ್ಕಿದಿಸಲು, ದನದ ಹಾಲು ಕೋಳಿಮೊಟ್ಟೆ ಇವುಗಳ ಸಾರದಿಂದ ಇದು ತಯಾರಿಸಲ್ಪಡುತ್ತಿದೆ. ಅಸೌಖ್ಯದಲ್ಲಿ ಬಿದ್ದು ಕ್ಷೀಣವಾದ ದೇಹಗಳನ್ನು ಪುಷ್ಟಿಮಾಡಿ ಆರೋಗ್ಯವನ್ನುಂಟುಮಾಡುತ್ತದೆ.

ರುಚಿಕರವಾದ 'ಓವಲ್ಟಿನ'ನ್ನು ಪ್ರತಿನಿತ್ಯದ ಸೇವನೆಯು, ಆರೋಗ್ಯ, ಶಕ್ತಿ, ಚೈತನ್ಯಗಳನ್ನುಂಟುಮಾಡುವುದು.

'ಓವಲ್‌ಟೀನ್'

ಟಾನಿಕ್ ಆಹಾರ ಪಾನೀಯ.

OVALTINE

ಮೆದುಳು, ನರ ಮತ್ತು ಮೆದುಳನ್ನು ವೃದ್ಧಿಸುತ್ತದೆ.

ತಯಾರಿಕೆಯಲ್ಲಿ ಹಸ್ತಸ್ಪರ್ಶವಾಗಿಲ್ಲ.

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ದೊರೆಯುತ್ತದೆ.
ಏಜಂಟರು:—ಜೇಮ್ಸ್ ರೈಟ್, 85 ಎ. ರಿಪನ್ ಸ್ಟ್ರೀಟ್, ಕಲ್ಕತ್ತ.
ಮತ್ತು ಮುಂಬಾಯಿ, ಮದ್ರಾಸುಗಳಲ್ಲಿ.

ದೇಶಭ್ರಷ್ಟ ರಾಜನನ್ನು ಸಿಂಹಾಸನಕ್ಕೇರಿಸುವ ಪ್ರಯತ್ನ

ರಾಜಕಾರಣದಲ್ಲಿ ಮಿಲಿಟರಿ ಅಧಿಕಾರಿಗಳ ವರ್ಚಸ್ಸು ಮಿತಿಮೀರಿ ಬೆಳೆದುದರಿಂದ ಸಯಾಮದ ಅರಸನಾಗಿದ್ದ ಪ್ರಜಾಧಿಪೋಕನು ದೇಶಭ್ರಷ್ಟನಾಗಬೇಕಾಯಿತು. ಆದರೆ ಅವನು ದೇಶಭ್ರಷ್ಟನಾದ ಅನಂತರ ಉಂಟಾದ ಸರಕಾರವು ಜನಮತಕ್ಕೆ ಅನುಕೂಲವಾಗಿರುವುದಿಲ್ಲ. ಅದು ಜನಮತಕ್ಕೆ ವಿರೋಧವಾಗಿ ಆಡಳಿತವನ್ನು ನಡೆಸುವುದರಿಂದ ಜನರಲ್ಲಿ ತೀವ್ರ ಅತೃಪ್ತಿ ಉಂಟಾಗಿದೆ. ಜನರು ಪುನಃ ಪ್ರಜಾಧಿಪೋಕನನ್ನೇ ಸಿಂಹಾಸನಕ್ಕೇರಿಸುವ ಗುಪ್ತ ಪ್ರಯತ್ನಗಳನ್ನು ಮಾಡಿದ್ದಾರೆ.

ಪ್ರಜಾಧಿಪೋಕನು ಜನಪ್ರಿಯನು. ಮಾತ್ರವಲ್ಲ, ಪ್ರಜಾಸತ್ತೆಯಲ್ಲಿ ವಿಶ್ವಾಸವುಳ್ಳವನು. ಈಗ ಅವನು ಲಂಡನಿನಲ್ಲಿ ಪತ್ನಿ ಸಮೇತ ದಿನ ಕಳೆಯುತ್ತಿರುವನು. ಮಿಲಿಟರಿ ಅಧಿಕಾರಿಗಳ ನಿರಂಕುಶ ಆಡಳಿತದಿಂದ ಬೇಸತ್ತ ಪ್ರಜೆಗಳು ಆ ಸರಕಾರದ ವಿರುದ್ಧ ಬಂಡಾಯವನ್ನೆಬ್ಬಿಸುವುದು ದೊಡ್ಡ ಸಂಗತಿಯಲ್ಲವೆಂದು ಅವನು ತಾನೇ ಹೇಳಿದನು. ಪ್ರಜೆಗಳು ತಾತ್ಕಾಲಿಕ ಸರಕಾರದ ವಿರುದ್ಧ ಆಗಾಗ್ಗೆ ದಂಗೆ ಏಳುತ್ತಿರುವ ಸಮಾಚಾರಗಳು ಅವನಿಗೆ ಬರುತ್ತಲೇ ಇರುವುವಂತೆ. ಇನ್ನು ಶೀಘ್ರದಲ್ಲಿಯೇ ಬಂಡಾಯವು ಸಫಲವಾಗಿ ತನ್ನನ್ನು ಪ್ರಜೆಗಳು ಪುನಃ ಸ್ವದೇಶಕ್ಕೆ ಕರೆಸಲೂ ಬಹುದೆಂದು ಅವನು ಆಶಿಸಿದ್ದಾನೆ.

ಸ್ವದೇಶಾಭಿಮಾನಿ
SWADESHABHIMANI
ಕೀರ್ತಿಶೇಷ ವಿ ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

ತಾರೀಖು ೨೪—೩—೧೯೩೯ | ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಖು 24—3—1939

ಮಧ್ಯ ಯುರೋಪಿನ ರೂಪಾಂತರ

[ವಾರ್ಸೆಲ್ಸ್ ಕರಾರಿನ ಕೊನೆಯು ಪರಕು ಚೂರು]

೧೫—೩ '೩೯

'ಮಧ್ಯ ಯುರೋಪಿನ ಸ್ವಾತಂತ್ರ್ಯದ ನಸುಕಿನಲ್ಲಿ ಜರ್ಮನಿಯು ಅಧಿಕಾರದೊಳಗಿರುವ ಪ್ರಾಂತ್ಯರಚನೆಯು ಕನಸು ನಿಜವಾಯಿತು

ಐದು ದಿನಗಳ ಚಳವಳದೊಳಗೆ ಇಪ್ಪತ್ತು ವರ್ಷಗಳ ನಿರ್ಮಾಣ [illegible] ಮಧ್ಯ ಯುರೋಪಿನ ನಕ್ಷೆಯ ಮೇಲೆ [illegible] ಕಳೆದ ವಾರ,—ನಾಜಿಗಳು [illegible] ಜರ್ಮನ್ ಸರಕಾರದವರ ಹೊಸ ಸೇಚಾಟ ವಿಜಯಗಳ ವಾರವೆಂದು ೧೯೩೮ರಿಂದಲೂ ನಡೆದ. [illegible] ದನ್ನು ನೆನಪಿಗೆ ತಂದು ಕೊಟ್ಟಿದ್ದೇವೆ. ಈ ವರ್ಷವೂ ಆ ವಾರ ಹಾಗೆಯೆ ಹೊಸ ವಿಜಯವನ್ನು ಜರ್ಮನಿ ಕಟ್ಟಿಕೊಂಡಿತು. ಚೆಂಬರ್ಲೇನರ ಕೂಡೆ ಅಲ್ಲಿ [illegible] ಕೊಡುತ್ತ, ಫ್ರೆಂಚ್ ಮುಖ್ಯ ಮಂತ್ರಿಗಳು [illegible] ಬಡೆದು ಕೊಡರು, ಮುಸ್ಸೋಲಿನಿ ಇಪ್ಪತ್ತಾಯು [illegible] ಜರ್ಮನಿ ಹೇಗೆ ಪಡೆದೀತು ಎಂದರು, ಹಿಟ್ಲರ್ [illegible] ಸೈನ್ಯಗಳನ್ನು ಅತ್ತಿತ್ತ ಕಳಿಸಿ [illegible].—ಚೆಕ್ಕೊರಾಜ್ಯ, ಸ್ಲೋವಾಕಿಯ [illegible] ಬರೆದು [illegible] ಹೊಸ ಚೆಕ್ಕೊರಾಜ್ಯದ (ಬೊಹಿಮಿಯಾ ಮೊರೇವಿಯ) ಗಡಿಗಳನ್ನು [illegible] ಕಾರಣಗಳು [illegible] ನಲ್ಲಿ [illegible] ಈಗ [illegible] ಸರಕಾರವು [illegible] ಸರಕಾರವು ಒಳಸಾಗಿ [illegible] ಇಲ್ಲಿ ಒಳನುಗಿದುದರಿಂದ ಈ ಮೂರು ರಾಜ್ಯಗಳೀ ಸ್ವಾತಂತ್ರ್ಯ [illegible] ಆದರಿಂದ ಅವು ಹಿಟ್ಲರ ರಕ್ಷಣೆ ಬೇಡಿವೆ, ನಮ್ಮ [illegible] 'ಉದ್ಧಾರ [illegible]' [illegible] ಯುದ್ಧ ಮಾಡಿದ ಮಹಾಪ್ರ[illegible] ರಾಷ್ಟ್ರಗಳು ಈಗ [illegible] ದಿವೋಕ್ರೆಸಿ ಅಲ್ಲಲ್ಲಿ ಇವರು ಇವರ ಸ್ವತಃ [illegible] ರಕ್ಷಿಸಲಾರರು. ಮತ್ತೆಲ್ಲಿ ಯುದ್ಧ ಮಾಡಿದ ತ್ಯಾಗಂಗಳ ಪುಣ್ಯಪ್ರಭಾವ'

ಮತ್ತೊಂದು [illegible] ಸಾಹಸ ಪ್ರದರ್ಶನವಾಯಿತು. ಚೆಕ್ಕೊರಾಜ್ಯದ ಬೊಹಿಮಿಯ ಭಾಗವು ಆತನ ಕೈಸೇರಿದುದು. ಮಧ್ಯಯುರೋಪಿನಲ್ಲಿ ಆತನೆ ಅಗ್ರಗಣ್ಯನಾದನು ಬಿಸ್ಮಾರ್ಕನ ಕಾಲದಿಂದಲೂ ಈ ಮಾತು ಸತ್ಯ—"ಬೊಹಿಮಿಯ ಪಡೆದವನು ಮಧ್ಯಯುರೋಪನ್ನು ಆಳುವನು.'

ಇನ್ನು ದಿನ ಜರ್ಮನಿಯು, ಡೆನ್ಮಾರ್ಕ್, ಸ್ವಿಟ್ಜರ್ಲೆಂಡ್, ಹಾಲೆಂಡ್ ಗಳಿಂದ ಕನ್ನ ಹಿಂದಣ ಪ್ರದೇಶವನ್ನು ವಶಪಡಿಸಿಕೊಳ್ಳುವುದರಲ್ಲಿದೆ [illegible] ಸುದ್ದಿ ದಟ್ಟವಾಗಿ ಹರಡಿ, ಸಮುದ್ರ ರ ಕಣ್ಣು ಅತ್ತ ತಿರುಗಿದಾಗ, ಈ ಮೂಲೆಯಿಂದ ಮಧ್ಯಯುರೋಪಿನ ತುತ್ತುಗಳನ್ನು ಹಿಟ್ಲರು ನುಂಗಿದನು. ಆ ಮೂರು ರಾಜ್ಯಗಳು ಬಲ ಪ್ರದರ್ಶಿಸಿರಬಹುದು, ಇತ್ತ ದುರ್ಬಲತೆ ತೋರಿದುದೆಂದು ಇದನ್ನೆ ಸುಲಭವಾಗಿ ನಾಜಿಗಳು ಸೇರಿಸಿಕೊಳ್ಳಲು ಪ್ರಯತ್ನಿಸಿರಲೂ ಬಹುದು

, ಈಗ ತಿಳಿಯಿತೆ? ಸುಡೆಟನರ ಸಲುವಾಗಿ ಸೆಪ್ಟೆಂಬರಿನಲ್ಲಿ ಏರ್ಪ [illegible]

ಜರ್ಮನಿ [illegible] ಹೋದರೂ ಅದೀಗ ಇಡೀ ರಾಜ್ಯವು ಹಾಳು [illegible] ಸಿದ್ಧವಾದುದನ್ನು [illegible] ಸರಕಾರ [illegible] [illegible]

[illegible]

[illegible]

ಜಾಗ್ರತೆ! ಜಾಗ್ರತೆ!

ದೇಶ ವಿದೇಶಗಳಲ್ಲಿ ಪ್ರಖ್ಯಾತವಾದ ನಮ್ಮ ಮಾಲುಗಳು ಸಿದ್ಧವ [illegible] ವಾಗಿ ದಿನೇ ದಿನೇ ಗಿರಾಕಿಗಳು ಹೆಚ್ಚುತ್ತಿರುವುದನ್ನು ಕಂಡು, ಈ ಹೆಸರಿನಲಿ ಬೇರೆ ನಕಲಿ ಮಾಲುಗಳುಂಟಾಗತೊಡಗಿರುವದರಿಂದ ನಮ್ಮ ಗಿರಾಕಿಗಳು ಕೆಳಗಿನ ಅಡ್ರೆಸ್ಸನ್ನು ನೋಡಿ ಕೊಳ್ಳಿರಿ.

ನಕಲಿ ಮಾಲಿಗೆ ಮೋಸಹೋಗಬೇಡಿರಿ!

DRAKSHAMRUTHA

ದ್ರಾಕ್ಷಾಮೃತ

ಪಂಡಿತ ಜವಾಹಿರಲಾಲ ನೆಹರೂ ಬಂದಾಗ ಹುಬ್ಬಳ್ಳಿ ವಸ್ತು ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ ಸಾವಿರಾರು ಜನರಿಂದ ವರ್ಣಿಸಲ್ಪಟ್ಟು, ಭಂಗಾರದ ಮೆಡಲ್ ಮತ್ತು ಅನೇಕ ಸರ್ಟಿಫಿಕೇಟುಗಳು ದೊರೆತಂಥ

[illegible]

ಶಕ್ತಿಯ ಮೇಲೆ ಮೊದಲನೇ ತರದ ಟಾನಿಕ್.

ಇದರ ಸೇವನೆಯಿಂದ ರಕ್ತ ಶುದ್ಧಿಯಾಗುವದು, [illegible]

ಕ್ರಯ ೧ ಬಾಟ್ಲಿ ರೂ ೧।

ಮ್ಯಾನೇಜರ್: ದ್ರಾಕ್ಷಾಮೃತ ಡಿಪೋ, ಪೋಸ್ಟು—[illegible], ಜಿಲ್ಲಾ ಬೆಳಗಾಂವ

ಸ್ಟಾಕಿಸ್ಟರು: ಮಂಗಳೂರು—[illegible] ಮೆಡಿಕಲ್ [illegible] ಶ್ರೀನಿವಾಸ [illegible] ರಾಮನಾಯಕ ಮತ್ತು [illegible] ಬ್ರದರ್ಸ

[illegible] ಸ್ನೇಹಾಚಾರ ಮೇಲೆ ಇನ್ನು ಜರ್ಮನಿ [illegible] ಯುದ್ಧ ಸಂಭವ [illegible] ವಿದೇಶ [illegible]—ಫ್ರಾನ್ಸು, ಬ್ರಿಟನ್ [illegible] ಈಗ [illegible] ಸಲ್ಲಿ ಅಲ್ಲ [illegible]! ಅದೇನು [illegible] ಚೆಕ್ಕೊರಾಜ್ಯದ [illegible] ಕಾರಣಗಳಿಲ್ಲ [illegible]? ಅಥವಾ ಹಿಟ್ಲರ್ [illegible] ವಿಷವಾಗ [illegible] ಹಿಟ್ಲರ [illegible] ವಾಗಿದುದು. ಆದ್ದರಿಂದ [illegible] ಈಗ ವಿಜಯಶಾಲಿಗಳಾಗಿದ್ದ ಫ್ರಾನ್ಸ್ [illegible]

[illegible]

ಹಿಟ್ಲರನು ಆಡುವ—

ಮೋಹಕ ಕ್ರಮ

೧೦೦೦೦ ನಾಯಿಗಳಿಗೆ [illegible]

[illegible] ನೆಯು ಮಾತು ([illegible]) [illegible] ಚೆಕ್ಕೊರಾಜ್ಯದ [illegible] ಜರ್ಮನರಿಗಾಗಿ [illegible]

ನವಾ ಢಿಲ್ಲಿಯಲ್ಲಿ ಮಹಾತ್ಮಾಜಿ - ವೈಸ್ರಾಯರುಗಳ ಸಂಭಾಷಣೆ

15-3-39

ಬೆಳಗ್ಗೆ ೭॥ ಗಂಟೆಗೆ ರೈಲಿನಿಂದಿಳಿದು ಗಾಂಧಿಜೀ ಬಿರ್ಲಾ ಹೌಸ್ ಭವನಕ್ಕೆ ತೆರಳಿದರು

ಜಯಪುರದಲ್ಲಿ, ರೈಲ್ವೆ ಸ್ಟೇಶನಿನಲ್ಲಿ ಮಹಾತ್ಮಾಜಿಯವರನ್ನು ಬಹುಮಂದಿ ಕಂಡರು ಅವರಿಗೆ ಈ ಸಂದೇಶ ದೊರೆಯಿತು —

“ಸತ್ಯಾಗ್ರಹ ಕಾಲದಲ್ಲಿ ಜಯಪುರದವರು ಅಹಿಂಸೆಯನ್ನೆ ಆಚರಿಸಿದರೆಂದು ಕೇಳುತ್ತೇನೆ ಸಂಪೂರ್ಣ ಸತ್ಯ ಅಹಿಂಸೆಗಳನ್ನು ಪಾಲಿಸುವ ಪ್ರತಿಯೊಬ್ಬನೂ ಪತಿಸಂಘವೂ ತಮ್ಮ ಗುರಿ ಮುಟ್ಟುವರು, ಅವರು ಯಾವಾಗಲು ವಿಜಯಿಗಳಾಗಬೇಕು”

ಅಹ್ಮದಾಬಾದಿನಲ್ಲಿ ಮಹಾತ್ಮಾಜಿ ಸಂತೋಷಚಿತ್ತರಾಗಿದ್ದರು. ಬಲಹೀನರಾಗಿದ್ದರು ಅವರಿಗಾಗಿ ರೈಲ್ವೆ ಕಂಪನಿಯು ಒಂದು ಮೂರನೆ ತರಗತಿಯ ಗಾಡಿಯನ್ನು ರಿಜರ್ವ ಮಾಡಿಟ್ಟಿತ್ತು ವಾರ್ತಾದಾತರಿಗೆ ಅವರು ಯಾವ ಸಂದೇಶವನ್ನೂ ಹೇಳಲಿಲ್ಲ

ವಂಕನೇರ ಸ್ಟೇಶನಿನಲ್ಲಿ ಮೊರ್ವಿ ಮಹಾರಾಜರ ಗಾಂಧಿಜಿಯವರನ್ನು ಕಂಡ ಹದಿನೈದು ನಿಮಿಷ ಸಂಭಾಷಣೆ ಮಾಡಿದರು

ಕಥೀವಾಡ, ಕಚ್ಛ, ಗುಜರಾಥಗಳಲ್ಲಿನ ಗಿರಸಾಯರ ಪರಿಷತ್ತು ರಾಜಕೋಟದಲ್ಲಿ ಸೇರಿ ಸರ್ವರೂ ಮೈತ್ರಿಯಿಂದ ಇರಬೇಕೆಂದೂ ‘ಟೀಕಾ’ ಮೊದಲಾದ ಹಾಳು ರೂಢಿಗಳನ್ನು ತ್ಯಕ್ತ ಹಾಕಬೇಕೆಂದೂ ನಿರ್ಧಾರಗಳಾದವು

ರಾಜಕೋಟವು ಯಥಾಪೂರ್ವ ನಗರ [illegible] ಕವಿದು ನಿರ್ಜೀವವಾಗಿದೆ

ಗಾಂಧಿಜಿಯವರಿಗೆ ಪ್ರಯಾಣವು [illegible] ವಾದದಿಲ್ಲ ದಾರಿಯಲ್ಲಿ ಅಜ್ಮೀರ [illegible] ಗಳಲ್ಲಿ ಸ್ಟೇಶನು ಬಳಿ ಜನರು ಗದ್ದಲವಾಡಿ ಅವರ ನಿದ್ರೆಗೆಡಿಸಿ, ದರ್ಶನಹೊಂದಿದರು.

ಪುತ್ರ ದೇವದಾಸರು ಮಹಾತ್ಮರನ್ನು ಎತ್ತಿಕೊಂಡಂತೆ, ಗಾಡಿಯಿಂದ ಹೊರತಂದರು ಕಾರಿನಲ್ಲಿದ್ದ ಸರದಾರ ಪಟೇಲ, ಶ್ರೀ ಕಸ್ತೂರಿಬಾಯಿಯವರೊಡನೆ ಗಾಂಧಿಜೀ ನಿವಾಸಕ್ಕೆ ತೆರಳಿದರು ಖಾನ್ ಅಬ್ದುಲ್ ಗಾಫರಖಾನರೂ ಸ್ಟೇಶನಿನಲ್ಲಿದ್ದರು ಸ್ಟೇಶನಿನಲ್ಲಿ ೫೦—೬೦ ಮಂದಿ ಮಾತ್ರವೇ ಅವರನ್ನು ಕಾಣುವಂತೆ ಬಂದೋಬಸ್ತು ಇದ್ದಿತು

ಪಲನಪುರದ ಬಳಿ, ಒಂದು ಚಿಕ್ಕ ಸ್ಟೇಶನಲ್ಲಿ, ಪಲನಪುರದ ನವಾಬರ ಗಾಂಧಿಜಿಯನ್ನು ತಿನರ ಗಾಡಿಯಲ್ಲೀ ಕಂಡಿದ್ದು, ಹತ್ತು ನಿಮಿಷ ಸಂಭಾಷಣೆ ಮಾಡಿದ್ದರು

೧೦॥ಕ್ಕೆ ಗಾಂಧಿಜೀ, ದೇಸಾಯಿಯವರೊಡನೆ ವೈಸ್ರಾಯರಲ್ಲಿಗೆ ಹೊರಟರು ಮುಂಚಿತವಾಗಿ, ಪಟೇಲ, ಸರೋಜಿನಿ, ಅಮೃತಕೌರ ಬಿರ್ಲಾ, ಅಬ್ದುಲ್ ಗಾಫರಖಾನರೊಡನೆ ಅರೆ ತಾಸು ಸಂಭಾಷಿಸಿದರು.

ಸೆಕ್ರೆಟೇರಿಯಟ್ ಆಫೀಸಿನ ಬಳಿ,ದಾರಿಯ ಎರಡೂ ಕಡೆ ಹುದ್ದೆದಾರರು ಸಾಲಾಗಿ ನಿಂತಿದ್ದರು ವೈಸ್ರಾಯರಲ್ಲಿಗೆ ಹೋಗುವಾಗ ಹಲವು ರಿಕಾರ್ಡು ಕಟ್ಟುಗಳೊಡನೆ ದೇಸಾಯಿಯವರು ಅವರ ಹಿಂದೆ ನಡೆದರು.

ಗಾಂಧಿಜೀ ಗವೀನಾದಿಗೆ ಹೋಗುವುದಿಲ್ಲ ವುನ ರಾಜಕೋಟಕ್ಕೆ ಮರಳುವರು.

ಮಧ್ಯಾಹ್ನ ೧ ಗಂಟೆಗೆ ಸಂಭಾಷಣೆಗಳು ಮುಗಿದುವು ಹೊರಗೆ ಗೇಟಿನ ಬಳಿ [illegible] ಮುಂಧರಿಯಲ [illegible] ಗುಜರಾತ್ತಿಯರ ನಿಂತಿದ್ದ ಕಾರಣ ಅಗರ ವಂದನೆ ಸ್ವೀಕರಿಸಿ, ನೆಟ್ಟಗೆ ಬಿರ್ಲಾ ಭವನಕ್ಕೆ ಕಾರ ನಡೆಯಿತು

ವೈಸ್ರಾಯರೇ ಸಂಭಾಷಣೆಯು ಫಲಿತಾಂಶ ಪ್ರಕಟಿಸ ಬೇಕ ಪುನ ವೈಸ್ರಾಯರನ್ನು ಕಾಣ [illegible] ದಿದರು

ನ್ಯಾಸ್ ವೈಸ್ರಾಯರ [illegible] ಯನ್ನು [illegible] ರಾಜಕೋಟದಲ್ಲಾದ ತೆಳವಳಕ್ಕೆ ಸಂಬಂಧಪಟ್ಟ ಹಲವು ವಿಷಯ [illegible] ಶಿಷ್ಟಭಾವದಿಂದ ಸಂಭಾಷಣೆಗಳ ಎರಡು ತಾಸು [illegible] ಇವೆ ಪ್ರಕಟವಾಗಿದೆ

ನರೇಂದ್ರರಿಗೆ

(ಮೆಂಚೆಸ್ಟರ ಗಾರ್ಡಿಯನ್ ಇಂದ)

ಪರಿಷ್ಕಾಧಿಕಾರವು ತನ್ನ ಜವಾಬ್ದಾರಿಯನ್ನು ಮರೆವುದಿಲ್ಲವೆಂದೂ, ಆದರೆ ಬೇಗನೆ ಅಥವಾ ಫಕ್ಕನೆ ರಾಜರ ಗಳಿಗೆ ಒತ್ತಾಯಪಡಿಸದೆಂದೂ ಲೋರ್ಡ ಲಿನ್ಲಿಥ್ಗೋರವರ ಭಾಷಣದ ಅರ್ಥ

ಯಾವ ರೀತಿಯಿಂದ ನರೇಂದ್ರರು ನಡೆದುಕೊಳ್ಳಬೇಕೆಂಬುದನ್ನು ವೈಸ್ರಾಯರು ಸ್ಪಷ್ಟ ಸೂಚಿಸಿರುವರ

ಸಾಮ್ರಾಜ್ಯ ಸರಕಾರದ ಸೈನ್ಯದ ಮೇಲೆ ಆಧರಿಸಿ ನರೇಂದ್ರರು ತಮ್ಮ ರಾಜ್ಯಗಳಲ್ಲಿನ ಅಸಮಾಧಾನ ಅಣಗಿಸಲಿಚ್ಛಿಸುವುದು ಸಾಧ್ಯವಾಗದ.

ನರೇಂದ್ರರು ತಾವೇ ಆಳುವವರಾಗಬೇಕು ಬಹಳ ಔದಾರ್ಯದಿಂದ ವರ್ತಿಸಬೇಕು ರಾಜ್ಯಗಳಲ್ಲೇ ಅವೆಂದ್ವರೆ ಇದಕ್ಕೆ ಹಿತ ರಾಜ್ಯದ ಆಯದ ಬಹುಭಾಗವನ್ನು ತಮಗಾಗಿಯೇ ವ್ಯಯಿಸಿದರೆ ಅಹಿತ ಸರಕಾರದ ಕೆಲಸವನ್ನು ಅಷ್ಟು ಗೋಪನವಾಗಿಡುವುದುತ್ತಮವಲ್ಲ.

ರಾಜಕೋಟದ ದೃಷ್ಟಾಂತ ಕಣ್ಣೆದುರಲ್ಲಿಟ್ಟುಕೊಂಡು ನರೇಂದ್ರರು ತಮ್ಮ ರೀತಿನೀತಿಗಳನ್ನು ತಿದ್ದಿಕೊಳ್ಳಲಿ (೧೪—೩—೩೯)

ಭೀಷಣ ಹತ್ಯಾಕಾಂಡ

ಮೌಲಾನಾ ನಾಜ್ಜರುದ್ದೀನರು (೫೫ ವಯಸ್ಸು) ಉರ್ದು ದೈನಿಕ ವಹಾಬಾತ್ ಮತ್ತು ಅಲಮಾನ್ ಪತ್ರಗಳ ಸಂಪಾದಕರ ಜಮಾಯತ್ ಉಲ್ ಉಲೇಮದ ಸ್ಥಾಪಕರಲ್ಲೊಬ್ಬರ ಅದರ ಜನರಲ್ ಸೆಕ್ರೆಟರಿಗಳಾಗಿದ್ದರು ಅಖಿಲ ಭಾರತ ಮುಸ್ಲಿಮಲೀಗಿನ ಪರವಾಗಿ ಕೈರೋ ನಗರಕ್ಕೆ ಪಲೆಸ್ಟೀನ ಪರಿಷದಕ್ಕೆ ಹೋಗಿದ್ದರ

ಇವರು ತಮ್ಮ ಆಫಿಸಿನಲ್ಲಿದ್ದಾಗ (ಇತರ [illegible] ಇದ್ದರು) ಇಬ್ಬರ [illegible] ಬಂದು, ಇವರೊಡನೆ ಸಂಭಾಷಿಸಲು ಬೇಡಿದರ ಒಬ್ಬರ ಅವರ ಸಮೀಪಕ್ಕೆ ಬಂದ ನಿಧಾನವಾಗಿ ಪಾಕಿಟಿನಿಂದ ಮಚ್ಚು ಬಾಗಿಲಲ್ಲೇ ನಿಂತಿದ್ದ, ಫಕ್ಕನೆ ಇವರ ಹಿಂಬದಿ ಬಂದು ಕುತ್ತಿಗೆ [illegible] ಕತರಿಸಿದನು ಎರಡೇ ಮಿನಿಟು ಸಂಭಾಷಣೆ



ವರ್ತ್ಮಾ ವೈಸ್ರಾಯರಾದ ಲೋರ್ಡ ಲಿನ್ಲಿಥ್ಗೋರವರು

ಸುತ್ತಲವರು ಅತ್ತಿತ್ತ ನೋಡುವುದರೊಳಗೆ, ಗದ್ದಲದಲ್ಲಿ, ಇಬ್ಬರೂ ಪರಾರಿಯಾದರು. ಬಂದವರಲ್ಲೊಬ್ಬನು—ಉಲೇಮ ವನ್ನು ಹಾಳು ಮಾಡಿದರು ಎಂದಿದ್ದನಂತೆ!

ಪೊಲೀಸರು ತಲಾಶಿ ಮಾಡುತ್ತಿದ್ದಾರೆ ಮಹನೀಯರು ಮೃತರ ಕಳೇಬರ ಸಂದರ್ಶಿಸಿದರು

(ಢಿಲ್ಲಿ 14-3 39)

ಡಿಸೆಂಬರು ಕೊಂಗ್ರೆಸ್ ಅಧಿವೇಶನವು ದಕ್ಷಿಣ ಬಿಹಾರದ ರಾಯಗಿರದಲ್ಲಾದೀತು

ಚೀನದಲ್ಲಿ ಜಪಾನರ ಸೋಲು ವಾನರ ಸೇನೆಯ ಚೇಷ್ಟೆ ಅಸಹನೀಯವಾಗಿದೆ

ಜಪಾನರು ಕರ್ತವ್ಯಮೂಢರಾಗಿದ್ದಾರೆ

ಚೀನೀ ಜಪಾನೀ ಸಂಗ್ರಾಮದಿಂದ ಜಪಾನಿಯರಿಗೆ ಪ್ರತಿನಿತ್ಯ ಒಂದೊಂದು ಮಿಲಿಯ ಪವನಿನಷ್ಟವು ಆಗುತ್ತಿರುವುದು ಅಷ್ಟು ಹಣವು ಯುದ್ಧದ ಖರ್ಚಿಗೆ ಹೋಗುತ್ತದೆ. ಪ್ರತಿನಿತ್ಯ ಕೈಕಾಲುಗಳನ್ನು ಮುರಿದುಕೊಂಡ ಸಾವಿರ—ಸಾವಿರ ಜನರು ಜಪಾನಿನ ಸೈನಿಕರು ಹಡಗುಗಳ ಮೂಲಕ ಜಪಾನಿಗೆ ಕಳುಹಿಸಲ್ಪಡುತ್ತಾರೆ ಅವರನ್ನು ನಾಕವ ಭಾರವು ಜಪಾನಿನ ಸರಕಾರದ ಮೇಲೆ ಪ್ರತ್ಯೇಕ ಇದೆ ಜಪಾನಿ [illegible] ಧನ ಬಲಗಳ ಕ್ಷಣಕ್ಷಣಕ್ಕೆ ಕುಂದುತ್ತಿರುವುವು ಚೀನೀ ಜಪಾನೀ [illegible] ಇದೇ ಪರಿಸ್ಥಿತಿ [illegible] ಕೃಷ್ಟಿ ದೊರಿ [illegible] ವಾಗಿದೆ ಇಷ್ಟು ವರ್ಷ ಕಾದಿರಾದ ಜಪಾನ ಗದ್ದಲ [illegible] ಹೀಗೆಂದು ಡೈಲಿ ಎಕ್ಸಪ್ರೆಸ ಪತ್ರಿಕೆಯ ಚೀನದ ಸುದ್ದಿಗಾರನು ವಾರ್ತೆಯನ್ನು ಕಳುಹಿಸಿಕೊಟ್ಟಿರುವನು

ಕಳೆದ ಎರಡು ವರ್ಷಗಳಲ್ಲಿ ಜಪಾನು ೩೬೦ ಸಾವಿರ ಚದರ ಮೈಲುಗಳಷ್ಟು ಚೀನೀ ಪ್ರದೇಶವನ್ನು ಆಕ್ರಮಿಸಿ ವಶಮಾಡಿಕೊಂಡಿರುವುದು ನಿಜ ಆದರೆ ಚೀನೀ ವಾನರ ಸೇನೆಯ ಉಪಟಳದಿಂದ ಕಳೆದ ಒಂದು ತಿಂಗಳಲ್ಲಿಯೇ ಜಪಾನು ಒಂದು ಲಕ್ಷ ಚದರ ಮೈಲುಗಳಷ್ಟು ಪ್ರದೇಶದ ಮೇಲಿನ ಅಧಿಕಾರವನ್ನು ಕಳಕೊಂಡಿರುವುದು ಚೀನೀ ವಾನರ ಸೇನೆಯು ಮೊದಲು ಒಂದು ಲಕ್ಷದಷ್ಟು ಇದ್ದುದು ಈಗ ೧೦೦೦೦೦೦ದಷ್ಟಕ್ಕೆ ದೊಡ್ಡದಾಗಿದೆ ಅಂತೆ ಇದು ಕವಚ ಬದ್ಧ ಚೀನೀ ಸೇನೆಯಷ್ಟೇ ದೊಡ್ಡದಾಗಿರುವುದು.

ಜಪಾನಿಯರು ಕರ್ತವ್ಯಮೂಢರಾಗಿದ್ದಾರೆ ಅಪರಿಮಿತ ಕಷ್ಟನಷ್ಟಗಳನ್ನು ಅನುಭವಿಸಿಯೂ ಜಪಾನು ತನ್ನ ಪ್ರಯತ್ನಗಳಲ್ಲಿ ಸುಖದ ಕನಸನ್ನೂ ಕಾಣದು ಆದ್ದರಿಂದ ಈ ಕಷ್ಟನಷ್ಟಗಳಿಂದ ಪಾರು ಕಾಣುವುದು ಹೇಗೆಂಬುದನ್ನೇ ಜಪಾನು ಈಗ ಆಲೋಚಿಸುತ್ತ ಇದೆ

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.
ಡಾ ಜಸಾನಿಯವರ
ಜಗತ್ಪ್ರಸಿದ್ಧ
ಗೊನೊಕಿಲರ್ (ರಿಜಿಸ್ಟರ್ಡ್)
ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಕೆಳಗಿನ ಮುದ್ರೆಗಳ ವಿಷಯ ಜಾಗ್ರತೆ ತೆಗೆದುಕೊಳ್ಳಿರಿ ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿ ಗುರುತಿನ ಕೆಂಪು ಲೇಬಲು ಮತ್ತು “ಗೊನೊಕಿಲರ್” ಇರುತ್ತದೊ ಎಂಬುದನ್ನು ನೋಡಿರಿ.

ಮಾಂತ್ರಿಕ ಅದ್ಭುತ ಔಷಧ ಇಂಗ್ಲೀಷ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇಂಜೆಕ್ಷನ್ ಔಷಧದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೊನೊಕಿಲರ್ ಎಂಬ ಕಿಲ್ಲರವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೊರಿಯಾ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುಕಿಕೆ, ಸರ್ವ ಪ್ರಕಾರದ ಪ್ರಮೇಹ(ಎಷ್ಟೇ ಹಳತು ಸ್ರಾವ್ಯಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತು ಬೀಳುವುದು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೊರೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ
50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜು 8 ಆಣೆ ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್ ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4
Sole Manufacturer Dr. D. N. JASANI, Vithalbhai Patal Road, BOMBAY
ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ.
ಸ್ಟಾಕಿಸ್ಟ —ಮೆಸರ್ಸ ಎ. ಫೆರ್ನಾಂಡಿಸ್ ಮತ್ತು ಕಂಪೆನಿ ಕೆಮಿಸ್ಟ್ಸ ಮತ್ತು ಡ್ರಗ್ಗಿಸ್ಟ್ಸ ಮಂಗಳೂರು.

೬. ಅಕ್ಕಸಾಲಿ ತಿಮ್ಮಪ್ಪ

ನಮ್ಮ ಊರಿನಲ್ಲಿ ಯಾರಾದರೂ ರಸಿಕರಿದ್ದಾರೆಯೋ ಎಂದು ಕೇಳಿದರೆ, ಅಕ್ಕಸಾಲಿ ತಿಮ್ಮಪ್ಪನನ್ನು ತೋರಿಸಬೇಕು. ಅವನಿಗೆ ಈಗ ನಲವತ್ತರ ಮೇಲೆ ಎರಡು ವರ್ಷ ಪ್ರಾಯ. ಅಷ್ಟೇನು ಭರತಿ ಆಳಲ್ಲ. ಐದುವರೆ ಅಡಿ ಗಾತ್ರದ ತೆಳ್ಳಗಿನ ಶರೀರ. ಕಪ್ಪಲ್ಲವಾದರೂ ಕಡುಪು ಮೈಬಣ್ಣ. ನಮ್ಮೂರ ವಾಡಿಕೆಯಂತೆ ತಲೆಕೂದಲು ಕೆಂಬ್ಲ್ ಬಿಡಿಸಿದ್ದಾನೆ. ಕಿವಿಗೆ ಶ್ರೇಷ್ಠವಾಗದ ಎರಡು 'ಭರ್ಜರಿ' ವಂಟಿಗಳು. ಕಿವಿ ಹಿಂಭಾಗದಿಂದ ವಂಟಿ ಹರಳಿಗಿಂತ ನಾನೇನೂ ಕಡಿಮೆಯಲ್ಲ ಎಂದು ಸಾರುವ ವಂಟಿ ಕೀಲುಗಳು ಕೂದಲಿಲ್ಲದ ಹೆಗಲಿನ ಎದುರು. ಮೇಲೆ ಏನಾದರೂ ಶಾಲು ಎಳೆದುಕೊಂಡರೂ ಕೊಂಡ ಇಲ್ಲವಾದರೆ–ಇಲ್ಲ, ಆದರೆ ಉಡಲಿಕ್ಕೆ ಬಾವಲಿ ಅಂಚಿನ ಬಚ್ಚೆಕಾಸೆ ಪಂಚೆ ತಪ್ಪಿದ್ದಿಲ್ಲ. ಸಿಕ್ಕಕ್ಕೂ, ವಿಶೇಷಕ್ಕೂ ಅದು ಅವನ ಅಂತಸ್ತಿನ ಕುರುಹು. ಮೇಲೆ ಉಡುಗೆಯಂತೆಯೇ ಕಾಣುವ, ಎದೆ ಕರಿ ಹಲಗೆ ಮೇಲೆ ಚೋಕಿನ ಬರೆಯಂತೆ ಎದ್ದು ಕಾಣುವ ಜೋಡೀ ಜನಿವಾರ. ಅದನ್ನು ಕಂಡ ನೆರೆಕರೆಯ ಮಕ್ಕಳು 'ಅಕ್ಕಸಾಲಿ, ತೇರು ಯಾವಾಗ?' ಎಂದು ಕೇಳುವದುಂಟು. ಇವನು ತಿಳಿಯದೆ 'ಇಂದಿಗೆ ತಿಂಗಳಲ್ಲಿ' ಅಂದರೆ 'ಹಾಗಾದರೆ 'ಬಿಣಿ' ಈಗಲೇ ಹೊರಗೆ ತೆಗೆದು ಹಗಲು ವೇಳೆ ಏರಿಸಿಬಿಟ್ಟಿಯೇನು' ಎಂದು ನಕಲಿಮಾಡುತ್ತಾರೆ.

ತಲೆ ಒಂದ, ಎದೆಗ ಬಂದು, ಕಾಲಿಗೆ ಇಳಿದರೆ ಅಲ್ಲೂ ಅಲಂಕಾರವಿದೆ. ಒಳ್ಳಾಲಗೊಂದ ಬೆಳ್ಳಿ ಸರಿಗೆ. ವೆಂಕಟರಮಣನಿಗೊಂದು ಹರಕೆ. ವೆಂಕಟರಮಣ ತಿರುಪತಿಯಿಂದ ಈ ತಿಮ್ಮಪ್ಪನನ್ನು ಕಾಣಲು ಬರುವ ಹಾಗೂ ಇಲ್ಲ. ಈ ತಿಮ್ಮಪ್ಪ ತಿರುಪತಿ ತಿಮ್ಮಪ್ಪನನ್ನು ನೋಡಲು ಹೋಗುವ ಹಾಗೂ ಇಲ್ಲ. ಹೀಗಾಗಿ ಹುಟ್ಟಿದ ಒಂದು ವರ್ಷದಲ್ಲಿ ಕೊಟ್ಟ ಸರಿಗೆ ಇಷ್ಟು ಸಮಯದ ಬಳಿಕವೂ ಅಲ್ಲೇ ಇದೆ. 'ಯಜಮಾನರು ತಿರುಪತಿಗೆ ಹೋಗ ವಾಗ ಕಳಿಸು[illegible] ಮಾಗಿಯುತ್ತದೆ' ಎಂದು ಅವನ ಹೆಂಡತಿಯು ಹೇಳುತ್ತಾಳೆ.

ಚಿನ್ನವನ್ನೂ ಬೆಳ್ಳಿಯನ್ನೂ ಬೆಣ್ಣೆಯಂತೆ ತೀಡಬಲ್ಲ ಕುಶಲಿಗನಾದ ತಿಮ್ಮಪ್ಪನನ್ನು ಬಿಟ್ಟರೆ ನಮ್ಮ ಊರಿನಲ್ಲಿ ಯಾರೂ ಇಲ್ಲ. ಸುತ್ತಮುತ್ತಲೂ ಇರಲಿಕ್ಕಿಲ್ಲ. ಇಲ್ಲವಾದರೆ ನಾಲ್ಕು ಸುತ್ತಲಿನ ಹಳ್ಳಿಯವರು ತಿಮ್ಮಪ್ಪನ ಮನ್ನಣೆಯಿಂದಲೆಯು ತನಕ ಜೀವಬಿಟ್ಟು ಎಂತಿರಲಿಲ್ಲ. ಅವನ ಮನೆಯಲ್ಲಿ ಕೆಲಸಗಾರನೆಂದರೆ ಅವನೊಬ್ಬನೇ. ಉಡಿದಾರ ನೇವಳ ನೇಯಬೇಕಾದರೆ ಅವನ ಹೆಂಡತಿ ಸಹಾಯಕಳಾಗುತ್ತಾಳೆ. ಅವನಿಗೆ ಮಕ್ಕಳು ಇಲ್ಲವೇ–ಎಂದರೆ 'ಉಂಟು' ಆರು ವರ್ಷದ ಒಂದು ಕೂಸು. ಅದರಿಂದ ಲೂಟಿಯೇ ಹೊರತು ಸಹಾಯವಿಲ್ಲ. ಅವನ ಈ ಕುಮಾರ ಕಂಠೀರವನಿಂದಾಗಿ ಮುದ್ರೆಲೆಗೆ ಆರು ಸಾರಿ ಚರ್ಮ ಹಾಕಿಸಿಯಾಯಿತು. ಕುಲುಮೆ ಹತ್ತು ಸಾರಿ ಹೊಸದಾಗಿ ಬಂದಿತು. 'ಅಬ್ಬಾ, ಇದು ಯಾವ ಕುಲದಲ್ಲಿ ಹುಟ್ಟಿತು' ಎಂದು ಮಗುವನ್ನು ಕಂಡು ತಾನು ವಿಸ್ಮಯಪಡುವ ಪ್ರಸಂಗ ಅಕ್ಕಸಾಲಿಗೆ ದಿನಕ್ಕೆ ಎಂಟು ಸಾರಿ ಬರುತ್ತದೆ. ಕೊನೆಗೆ 'ಮಕ್ಕಳ ಜಾತಿಯಲ್ಲ' ಎಂದು ತೀರ್ಮಾನಿಸಿ ತನಗೆ ತಾನೇ ಸಮಾಧಾನ ತಂದುಕೊಳ್ಳುತ್ತಾನೆ.

ತಿಮ್ಮಪ್ಪನ ಕೆಲಸದ ಸಂಗತಿ, ತುಸು ವಿಧಾನವಾಗಿ ತಿಳಿದರೂ ಚಿಂತೆಯಿಲ್ಲ. ಅವನ ಮುದ್ದಲೆಯ ಸಂಗತಿ ಮೊದಲು ಕೇಳಬೇಕು. ಅಕ್ಕಸಾಲಿ ತಿಮ್ಮಪ್ಪ ಎಂದು ಕರೆಯುವ ಬದಲು ಮುದ್ದಲೆ ತಿಮ್ಮಪ್ಪನೆಂದರೆ ಅವನಿಗೆ 'ಇಷ್ಟು ಸಂತೋಷ' ಅವನ ಕಸುಬೇ ಮುದ್ದಲೆಯದು. ಅದ್ಕೆ ಕಸಬು 'ಚಿನ್ನದ್ದು' ಎಂದರೂ ತಪ್ಪಿಲ್ಲ. ಅಲ್ಲದೆ ಚಿನ್ನದ ಕೆಲಸ ಎಂದರೆ ಯಾರಾರ ಮನೆಯ ಹೆಂಗಸರನ್ನು ಮೆಚ್ಚಿಸುವ ಕೆಲಸ, ಹೊಟ್ಟೆಯ ಪಾಡಿನ ಮಾತು. ಇವಾದರೆ ಹಾಗೇನು–ಹೊಟ್ಟೆಗಿರಲಿ, ಇಲ್ಲದಿರಲಿ–ಸಿಕ್ಕ ಸಾಗಿಸುವ ಬಯಕೆ.

ಹಳ್ಳಿಯ ಹತ್ತು ಸಮಸ್ತರು

ಮೊದಲ ಮಾತು.

ಇದು ನಮ್ಮ ಗ್ರಾಮಜೀವನದ ಹಲವು ಪ್ರಮುಖ ವ್ಯಕ್ತಿಗಳ ಚಿತ್ರ. ಯಾರನ್ನಾದರೂ ಉದ್ದೇಶಿಸಿಯೇ ಬರೆಯಲಿಲ್ಲವಾದರೂ ವ್ಯಕ್ತಿರೂಪಗಳು ಘಟನೆಯ ರೂಪಗಳು ಘಟನೆಯ ರೀತಿಗಳು, 'ಪಾಂತ' ಆವರಣ—ಇವೆಲ್ಲ ವಾಸ್ತವವಾದುವು. ಹಳ್ಳಿಯು ಸಾಮಾನ್ಯ ಕೋಟೆ ಕುಂದಾಪುರದೊಳಗಿನ ಒಂದು ಗ್ರಾಮ ಸಮೂಹ. ವ್ಯಕ್ತಿಗಳು ಮಾತಿನ ರೀತಿಗಳು ಹಲವು ಅಲ್ಲಿನವೆ. ಓದುವ ಪಾತ್ರಪರಿಚಯಗಳೇ ಈ ಚರಿತ್ರೆಗಳ ಗುರಿ. ಅವನ್ನು ಓದಿಕೊಂಡು ಮುಂದೆ ಬರುವ ಪ್ರಸ್ತಾವನೆಯನ್ನು ಓದಿದರೆ, ಅನಂತರದಲ್ಲಿ ಸಾಮಾಜಿಕ ಜೀವನದ ಒಂದು ಸಮಸ್ಯೆಯು ನಮ್ಮ ಹಳ್ಳಿಯಲ್ಲಿ ಹೇಗೆ ಬಿಡಿಸಲಡಬಹುದು. ನಾನು ಒರೆದ ಪ್ರಸ್ತಾವನೆಯ ಬಳಿಕ ವಾಚಕರು ಒಂದೊಂದು ಕಾದಂಬರಿಯನ್ನು ಕಲ್ಪಿಸಲಿ, ಅದರ ಮುಂದಿರುವ ಪಾತ್ರಗಳು ಇಂಥವು—ಎಂದು ಒಪ್ಪಿಸಿಕೊಡುತ್ತೇನೆ. ಇತಿ

ಶಿವರಾಮ ಕಾರಂತ.

ತಿಮ್ಮಪ್ಪ ಅಕ್ಕಸಾಲಿಯು ಮನೆಗೆ ಸಮೀಪವಾಗಿ, ಒಬ್ಬಿಬ್ಬರು ಒದ್ದು [illegible] ಗ್ರಹಚಾರ ಹಿಡಿದೇ ಮನೆ ಅಡಿ ಮಾಡಿಕೊಂಡು ನರಳುತ್ತಿರುವವರಿದ್ದಾರೆ. ಮಧ್ಯಾಹ್ನ ಮುಸ್ಸಂಜೆ ಮಧ್ಯರಾತ್ರಿಯೆಂಬ ಭೇದವಿಲ್ಲದೆ–ಅವನ ಸಾಣೆ ಜಗುಲಿಯಲ್ಲಿ ಉದ್ಭವಿಸಿ, ಅಂಗಳಕ್ಕೆ ದುಮುಕಿ, ಬೇಲಿ ಹಾರಿ [illegible] ನೆರೆಮನೆ. ಅಂಗಳವನ್ನು ಸೇರುವ ಆತನ ಮೃದಂಗದ ಧ್ವನಿ ಯಾವ ದಿವಸವೂ [illegible] ನೆರೆಕರೆಯ ಮಹಾ ಸಾಮಾನ್ಯ ರಸ್ತೆಯಲಿ [illegible] ಬರುವ ಮೋಟರ್ ಹಾರ್ನ್, ಗರ್ಜನೆಗಳು ಅವರಿಗೆ ಕೇಳುವುದು [illegible] ತಿಮ್ಮಪ್ಪ ಎಚಿದು. ಹೋಗಿದೆ. ಅದರಿಂದಲೇ ಆ ನೆರೆಯವರ [illegible] ತಿಮ್ಮಪ್ಪನಿಗೆ ಕಸ್ಸಿದವಲ್ಲ. [illegible] ದಿವಸ [illegible] ಸವೇ ಇಲ್ಲವೆಂದ [illegible] ಅವರ [illegible] ಪದ್ಧತಿ [illegible] ಇಂಥದ್ದೇ ಅದನ್ನು ಒದಿಸಿ [illegible] ಹೇಳಬೇಕು [illegible] ತಿಮ್ಮಪ್ಪನೇ–ಅಲ್ಲ ಅವ[illegible] ಯಾರೋ [illegible] ಎನ್ನುತ್ತಾರೆ.

ತಿಮ್ಮಪ್ಪನ [illegible] ಮಾತ್ರ [illegible] ತರುಣನ [illegible] ಗಳ ಮುದಲೆಯ [illegible] 'ಅಪ್ಪಾ [illegible] ಈಗ ಮುಗಿಸಿ ಎಲ್ಲಿಗೆ ಹೋದವನೇ [illegible] ಬೆರಳುಗಳಿಗೆ [illegible] ಇದ್ದ ಹಾಗೆ [illegible]–ಅಂದರೆ ತಿಮ್ಮಪ್ಪನ ಮನೆಯಲ್ಲಿ ಒಂದು ಸ ವುದು. ಸಾಧನೆ ಯೊರನ್ ಎಲ್ಲಾದರೂ ತಾಳವ ದ್ದಲೆ ಕಟ್ಟಿ [illegible] ಯಾವ ತಾಳವು ದ್ದಲೆ [illegible] ತಿಮ್ಮಪ್ಪನನ್ನು ಕರೆಯುವದು ಇಲ್ಲ. ಬಣಿಯ ಮಾದನ ಪ್ರೊಂದರಲ್ಲಿ ತಿಮ್ಮಪ್ಪನ ಜಾಣ್ಮೆ ಸರಿಯಲ್ಲ. [illegible] ಒಂದ [illegible] ಆದರೆ ಅವನ ಮುತ್ತೈದೆ ಆರ್ದರಗಳು ಸ್ತ್ರೀ ಆರ್ದರಗಳೇ [illegible] ದ್ರೌಪದಿ, ಒಂದ ಸೀತಾವಮ್ಮನವರ –ಆಗ ಅರ್ಥ [illegible] ಲಗದಲ್ಲಿ [illegible] ಮಲ್ಲಿಗೆ ಹೂವಿನ ತುಂಡನ್ನು ಸಿಕ್ಕಿಸಿಕೊಂಡು 'ಆಹಾ [illegible]' ಎಂದು [illegible] ಎಂದರೆ ಹೆಣ್ಣು ಎಂದರೆ [illegible] ಬರಗು [illegible] ಟ್ಟಾಗಬೇಕು.

ಗೃಹಕೃತ್ಯದ [illegible] ತಿಮ್ಮಪ್ಪ [illegible] 'ಎಂದು ಕೇಳಿದರೆ ಅಕ್ಕಸಾಲಿ [illegible] ಹೇಳಬೇಕು. ಇನ್ನು ಬಹಳ [illegible] ಇದ್ದರೆ [illegible] ಅವನ [illegible] ವ್ಯಾಪ್ತದ [illegible] ರಾತ್ರಿಯ [illegible] ಕ್ತವಾಗಿ [illegible] ಅಕ್ಕ ತಂದ [illegible] ಕರ್ಣ [illegible] ಏನಾದರೂ [illegible] ನಾಲ್ಕು [illegible] ಜೊತೆಗೊಡುತ್ತಿ [illegible]

ಅದಂತಿರುವದಲ್ಲಿ ತಿಮ್ಮಪ್ಪನನ್ನು ಬಿಟ್ಟರೆ ಇಲ್ಲ. ಅವನ ಜಾತಿಯವರಲ್ಲಿ ಅವನಿಗೆ ಬಹಳ ಸಮೀಪದವರಲ್ಲದೆ ಬೇರೆ ಜನರೇ ಇಲ್ಲ.' ಯಾವಾಗಲಾದರೂ ಒಂದು ದಿವಸ ನೆರೆಯವರು ಒಂದು—'ತಿಮ್ಮಪ್ಪ ಆದ್ದಾನೆ, [illegible] ಪ್ರಾಣ ಹೋಗುವವರ ಹಾಗೆ ಮದ್ದಲೆ ಬಡಿಯುತ್ತಿದ್ದವರು, ಹಾಗೆ ಮದ್ದಲೆ [illegible] ಕರ್ಣ ಮ್ಯಾಗ [illegible] ಎಂದು ದೂರುತ್ತಾರೆ. ತಿಮ್ಮಪ್ಪ ನಗುತ್ತ 'ಅದೇ ನಮ್ಮ ಅಕ್ಕನ [illegible] ಚಿಕ್ಕಮ್ಮನ ಮೊಮ್ಮಕ್ಕಳು ಅವಳ. ತಿಳಿದಿಲ್ಲವೇ [illegible] ಮಗನಿಗೆ ಹೆಣ್ಣು ತಂದಿತಲ್ಲ ಆ ಮನೆಯವರಿಗೆ ಬಹಳ ಸಮೀಪ.'

ಮದ್ದಲೆ ಎಂದರೆ ಅಭ್ಯಾಸ. ಇನ್ನು ಕೈ ಸಿದ್ಧಿದರೆ ಹುಡುಗ ಹುಷಾರಾದಾನು. [illegible] ಬಾರಿಸಿಯಾನು. [illegible] ಅಂದರೆ ಬಾರಿಸುವ ಗತ್ತು ಬಲ್ಲ.

ಬರುವ ವಾರ

ಪಾಟಾಳಿ ಪರಮಯ್ಯ

卐

೭.

ಪರಮಯ್ಯ ಬೇಡಾದವರಿಲ್ಲ,
ಪರಮಯ್ಯನಿಗೆ ಬೇಡದವರು ಇಲ್ಲ
[illegible] ಸಮಾರಾಧನೆಗೆ ಅವನು ಬೇಕು.
[illegible]
[illegible] ಗುಟ್ಟು ಮರೆವಲ್ಲ
ಆದಿತವೆ [illegible]
[illegible] ಅವನಿಗೆ [illegible]

ಶ್ರೀ ಕಾರಂತರ

ಹಳ್ಳಿಯ 10 ಸಮಸ್ತರು

ಯಾವತ್ತು ಗ್ರಾಮ, [illegible]

ಅವನ ಮನಗ [illegible] ಅವನ [illegible] ತಿಮ್ಮಪ್ಪನಿಗೆ [illegible] ಅವನ [illegible] ಗಳನ್ನೆಲ್ಲ [illegible] ಬಿಡದೆ [illegible] ಊಟ, [illegible] ಅವರ [illegible] ದಿನವೂ ಎರಡು [illegible]

[illegible]

ಜನರು ಸ್ವಸ್ತಿಕಾ "ಕಾಂತಿ"
ಟ್ಯೂಲೆಟ್ ಸೋಪನ್ನೇ
ಯಾಕೆ ಆರಿಸುತ್ತಾರೆ?

ಯಾರೆ ಕಂಡು ಪ್ರತಿನಿತ್ಯದ ಸ್ನಾನಕ್ಕೆ ಇದು ಬಹಳ ಉತ್ತಮವಾದದ್ದು ಮತ್ತು ಬಹಳ ಕಡಿಮೆ ಬೆಲೆಯ ಸಾಬೂನಾಗಿರುತ್ತದೆ.

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತದೆ

ಹಳ್ಳಿಯ ಹತ್ತುಸಮಸ್ತರು

[೬ನೇ ಪುಟದಿಂದ ಮುಂದುವರಿದುದು]

ಳೆನಷ್ಟದರೂ ದುಡಿದಾನು; ಕೈಯೂ ಚುರುಕು; ಲಸವೂ ನಾಜೂಕು.

ನಮ್ಮ ಗ್ರಾಮದಲ್ಲಿ ಚಿನ್ನದ ಗಿರ ಯಾರಾ ಗೆಲ್ಲ ಇದೆಯೋ ಅವರು ವಾರಕ್ಕೊಮ್ಮೆಯಾ ದರೂ ತಿಮ್ಮಪ್ಪನ ಚಾವಡಿ ಹತ್ತಿಯದೆ ಹೋಗು ವನರಲ್ಲ.

'ತಿಮ್ಮಪ್ಪ, ಕಳೆದ ಕೊಡಿ ಹಬ್ಬಕ್ಕೆ ಕೊಟ್ಟ ನೀವಳ; ಏನು ನಾಳೆ ನಮ್ಮ ಮಗಳ ಮದುವೆ ಸಮಯಕ್ಕಾದರೂ ಸಿಕ್ಕೀತೇ ಹೇಗೆ? ಮಗಳ ಚಿನ್ನ ನಿನ್ನಿಂದಲೇ ಮಾಡಿಸುವ ಎಂದಿತ್ತು; ಕೊಟ್ಟರೆ ಮದುವೆ ಮುಗಿದರೂ ಸಿಗಲಿಕ್ಕಿಲ್ಲ ಎಂಬುದು ಖಂಡಿತ.'

ಇನ್ನು ಮಗಳ ಮದುವೆಗೆಂದು ಚಿನ್ನ ಮಾ ಡಿಸಲು ಕೊಟ್ಟವರ ಅವಸ್ಥೆಯನ್ನು ಕೇಳುತ್ತೀರಾ? ಮದುವೆ ನಾಳೆಗೆಂದರೆ ಇವೊತ್ತು ಮಧ್ಯಾಹ್ನದ ವರೆಗೆ ಕೊಪ್ಪು, ಬುಗುಡಿ, ತಾಳಿ, ಯಾವುದೂ ಸಿಗಿರುವುದಿಲ್ಲ. ಈಗ ಬಂದು ನೀವು ಮನಸೋ ಇಚ್ಛೆ ತಿಮ್ಮಪ್ಪನಿಗೆ ಮಂಗಳಾರತಿ ಮಾಡಿ ಹೋ ದರೆ ಎಂದರೆ, ಅವನು ಕುಳಿತಲ್ಲಿಂದಲೇ, ಬದಿಗೆ ಬಾಗಿ ತಾಂಬೂಲ ಹಲ್ಲಿನೆಡೆಯಿಂದ ಥಾರಿ ಯಾಗಿ ಚಿಮ್ಮಿ, ಆ ಮೇಲೆ ನಿಮ್ಮ ಮುಖ ನೋಡಿ 'ಹೂಂ, ನಿಮ್ಮ ಗಡಿಬಿಡಿ ಕಂಡರೆ ದಿಕ್ಕಿಲ್ಲ ನಾಳೆ ಗೋಧೂಳಿಗೆ ಲಗ್ನ. ನಿಮಗೆ ಲಗ್ನಕ್ಕೆ ಹರಕತ್ತು ಆಗದಿದ್ದರೆ ಸರಿಯಲ್ಲ. ಎಲ್ಲವೂ ನಿನ್ನೆ ಹೊತ್ತು ಹಾರಿತು ಎಂತಾದ ಕೂಡಲೆ ಜನ ಕರಲಿ' ಎಂದು ಆಶ್ವಾಸನ ಕೊಟ್ಟು ಕಳುಹಿಸು ತ್ತಾನೆ. ಅವರ ಎದುರಿಗೇನೆ ಅವರ ಚಿನ್ನ ಕಾಯಿಸಿ, ನೋಡಿ, ಬಡಿಯತೊಡಗುತ್ತಾನೆ. ಅವರು ಬೆನ್ನುಹಾಕಿದ ತಕ್ಷಣ, ಕೂಡಲೆ ಅದನ್ನು ಅಲ್ಲಿ ಮೂಗ್ಗಲಿಗಿರಿಸಿ, ಇನ್ನೇನಾದರೂ ತರಾ ತುರಿಯ ಕೆಲಸ ತೆಗೆದುಕೊಳ್ಳುತ್ತಾನೆ. ಅದಕ್ಕೂ ಕಾದು ಕುಳಿತವರು ಎದುರಿಗೇ ಇರುತ್ತಾರೆ.

ಹೀಗೆ ಒಮ್ಮೊಮ್ಮೆ ಮೂರು ನಾಲ್ಕು ಲಗ್ನದ ಕುಳುವಾರುಗಳ ಬುಟ್ಟಿ ಅವನ ಮುಷ್ಟಿಯ ಲ್ಲಿರುತ್ತದೆ. ಆ ರಾತ್ರಿಯೂ ಮಧ್ದಲೆಯನ್ನು ಹೊರತೆಗೆಯುತ್ತಾನೆ. ಅವನ ವೃದ್ಧೆ ಪಟನ್ನು ಕೇಳಿ, ನಾಳೆಗೆ ಚಿನ್ನ ಸಿಗುತ್ತದೆ ಎಂದು ಆಸೆ ಮಾಡಿದವರ ಎದೆಯಲ್ಲಿ ಢಬ, ಢಬ ಆಗುತ್ತಿರು ತ್ತದೆ. ನಡುರಾತ್ರಿ ಕಳೆದ ಮೇಲೆ ವೃದ್ಧೆ ಯನ್ನು ನಾಡಿನ ಬಿದಿರ ಕೊಪ್ಪಿಗೆ ತೂಗಿ ಅಧ್ವಣಿ ಕಾಸ್ತಿಲ ಕಾದ್ರುತ್ತಾನೆ. ಮಿಣಿ ಮಿಣಿ ದೀಪದ ಬೆಳಕಿನಲ್ಲಿ—ಕಾಯಿಸುವುದು, ಕುಟ್ಟು ವುದು, ನಡುವೆ ತಾಂಬೂಲ ತುಪ್ಪುವುದು— ಏಕಗತಿಯಿಂದ ಬೆಳಗಿನ ತನಕ ನಡೆಯುತ್ತದೆ. ಬೆಳಗಿನ ಜಾವದ ಎದ್ದೆಯ ಅಮಲಿಗೆ ಸರಿ ಕರೆಯ ಜವನ ಕುಳ ವಾರುಗಳು ಸುತ್ತಿ ಎಚ್ಚರ ಕೇಳಿ ತುಸು ಚೈತನ್ಯ ತಾಳಬೇಕು.

ಸರಿ—ಬೆಳಗಾಯಿತು, ಮಧ್ಯಾಹ್ನವಾಯಿತು. ಹೊತ್ತು ತಿರುಗಿತು, ಗೋಧೂಳಿಗೆ ೨ ಗಳಿಗೆ ಯಿದೆ. ಮದುವೆ ದಿಬ್ಬಣ ಬಂದಿತು. ಮೊದ ಲಿನ ಗರ್ನಾಲು, ಗಗನಕ್ಕೇರಿ ಢಂ—ಆಸಿಸುವ ಮೊದಲೆ ಮೇಲುಸಿರು ಸಿಕ್ಕಿದ ನೂರೂ ಮದುವೆ ಕುಳುವಾರುಗಳು. ತಿಮ್ಮಪ್ಪನ ಅಗ್ಗಿಷ್ಟಿಕೆಯ ಮುಂದೆ ಪಿಳಿಪಿಳಿ ನೋಡುತ್ತಿರುತ್ತಾರೆ. 'ಯಮ ದೂತರು ಬಂದರು' ಎಂದು ತಿಮ್ಮಪ್ಪನ ಮನಸ್ಸು ಹೇಳುತ್ತದೆ ಒಳಗಿಂದೊಳಗೆ.

'ಈಗ, ಈಗ, ತಕ್ಷಣ. ಒಪ್ಪ ಹಾಕಿದ ರಾಯಿತು.'

'ಏನೋ ಅಪ್ಪ .. ಅವಸರದಲ್ಲಿ ಒಂದ ಕೆಲ್ಸೊಂದು ಮಾಡಿ. ಹೂಂ ನಿನ್ನನ್ನು ನಂಬಿದರೆ' ಎಂದು ಅವರು ತಳಮಳಿಸುವು ದನ್ನು ಕಾಣಬೇಕು. ಅದನ್ನು ಕಂಡ ಹಾಗೆ ತಿಮ್ಮಪ್ಪನ ಕೈ ಕುಣಿಯುವುದೂ ನೋಡಬೇಕು. 'ಆಪದ್ಬಾಂಧವ ಅನಾಥರಕ್ಷಕ ತಾನು' ಎಂಬ ಹೆಮ್ಮೆಯಿಂದ ತಿಮ್ಮಪ್ಪನ ಕೆಲಸ ಮುಂದುವರಿ ಯುತ್ತದೆ.

ಒಪ್ಪಹಾಕಿ, ಬಟ್ಟೆಯಿಂದ ಉಜ್ಜುತಿದ್ದಾನೆ; ಅಷ್ಟರಲ್ಲೆ ಹರಕತ್ತಿನ ಕುಳುವಾರುಗಳು 'ಕೊಡು ಕೊಡು . . . ದಿಬ್ಬಣ ಚಪ್ಪರ ಹೊಕ್ಕಿತು; ಮದು ಮಗಳಿಗೆ ಯಾವಾಗ ಇನ್ನು ಸಿಂಗಾರ? ಮು ಹೂರ್ತ ಕೆಡಿಸುತ್ತೀ ನೀನು' ಅನ್ನುತ್ತಾರೆ.

ತಿಮ್ಮಪ್ಪ ಮೆಲ್ಲಗೆ 'ಹರಕತ್ತು ಎಂಥದ್ದೆ ಒಬ್ಬರ ಚಿನ್ನ ಒಬ್ಬರಿಗಾಗಬಾರದಲ್ಲ. ಹೂಂ— ಎಲೆ ಚೀಲ ಇಲ್ಲಿದೆ, ಗಡದ್ದಿನಲ್ಲಿ ಒಂದು ವೀಳೆಯ ಹಾಕಿ' ಎನ್ನುತ್ತಾನೆ.

'ನಿನ್ನ ವೀಳೆಯಕ್ಕೆ ಕಿಚ್ಚಿಡ. ಅವಸರ ಅಂದರೆ ಇವನಿಗೆ ತಮಾಷೆ. ಇಲಿಗೆ ಪ್ರಾಣ ಸಂಕಟ—ಬೆಕ್ಕಿಗೆ ಏನೋ ಅಂದಹಾಗೆ.'

ಮಹಾರಾಯರೇ, ಯಮನಾದರೂ ಈ ರೀತಿ ಮಾಡಲಿಕ್ಕಿಲ್ಲ. ನೋಡಿ ನನ್ನ ಬೈಯ್ಯಗೆ ಕುಳಿತವ ಏಳಲಿಲ್ಲ. ಈಗಷ್ಟೆ ತಕೆಂಬೂಲ ತುಪ್ಪುತಿದ್ದೇನೆ' ಹೀಗೆಂದು ಏರಾಮದಿಂದ ಎಲೆ ~~ಅಡಿಕೆ ಮೆದ್ದು, ಚಿನ್ನ ತೂಗಿ ಅವರ ಮುಂದೆ~~ ಇರಿಸಿ 'ಇದು ಹಣವೂ ಬೇಳೆ, ಇದು ಬೆಳ್ಳಿ ಮೂರುವರೆಯ ಹಾಗ ' ಎಂದು ಲೆಕ್ಕ ಹಾಕಿ ಅವರಿಗೆ ಒಪ್ಪಿಸಿ 'ನಿನು ಎಂದು ತಿಳಿದಿರಿ ತಿಮ್ಮಪ್ಪ ಎಲ್ಲ ಅಕ್ಕಸಾಲಿಗರಂತೆ ಎಂದು ತಿಳಿ ದಿರಾ' ಎಂದು ವೀರವಾಕ್ಯಗಳನ್ನಾಡುವಾಗ ಕುಳುವಾರುಗಳೆಲ್ಲಿ' ಅವರು ಜಗುಲಿ ಇಳಿದು, ಕೊಡಮ ದಾಟಿ, ಮನೆ ಹಾದಿಯಲ್ಲಿ ಅರ್ಧ ಹಾದಿಯಾಯಿತು.

ಅಲ್ಲಿಂದ ತಿಮ್ಮಪ್ಪ ಕಾಲು ಸಡಲಿಸಿ, ಅಕ ಳಿಕೆ ತೆಗೆದು 'ಹೂಂ, ಇರಲೀ' ಎಂದು ಯಜ ಮಾನಿಯನ್ನು ಕೂಗಿದರೆ ಅಡಿಗೆ ಮನೆಗೆ ಚಿಲಕ. ಅವರು ಎದ್ದು ದಿಬ್ಬಣ ಎದುರ ಗೊಳ್ಳುವುದನ್ನು ನೋಡಲು ನಾಲ್ಕು ಗಳಿಗೆ ಮೊದಲೇ ಹೋಗಿ ದ್ದಾರೆ. ತಿಮ್ಮಪ್ಪನ ಕೋಪಕ್ಕೆ ಯಾರೂ ಇಲ್ಲ ದಾಗ ಅರ್ಭಟಿ ಅಧಿಕ. 'ನೀವು ಮನುಷ್ಯರಲ್ಲ, ಇಲ್ಲಿ ನಾನು ಅನ್ನ ನೀರಿಲ್ಲದೆ ಸತ್ತರೆ ನಿಮ ಗೇನು? ನೀವೆಲ್ಲ ಯಾರಾರ ಮನೆಯ ದಿಬ್ಬಣ ಕ್ಕೆಂದು. ಥಕಥಕ ಮಾಡಿ ಹೋಗಿಯಾಯಿತ ಇಷ್ಟಿಷ್ಟು ಸುಖ ದುಃಖ ... ಎಂದು ಅಲ್ಲ ಸಿಟ್ಟನ್ನು ನುಂಗುತ್ತಾನೆ.

ನಿಜಕ್ಕೆ ತಿಮ್ಮಪ್ಪನ ಹೊಟ್ಟೆ ವೈಶಾಖ ಮಾ ಸದ ಮಧ್ಯಾಹ್ನದ ಹೊಯಿಗೆ ಹಾದಿ ಕಾದ ಕೆ ಕಾದಿದೆ. ಒಳಗೆ ತಾನೇ ಹೋಗಿ ಅಡುಗೆ ಗ ನೆ ಪತ್ತೆ ಮಾಡಿದರೆ, ಅಲ್ಲಿ ಬಳಗಿಂದ ಬೆಂಕಿ ಹೊತ್ತಿ ಸಿದ ಕುರುಹೇ ಇಲ್ಲ. ತಂದಿರಿಸಿದ ಅಕ್ಕಿ ನೀ ಕಲ್ಲ. ಈಗ ಒಂದ ಮಜೂರಿಯಲ್ಲಿ ನಾಲ್ಕಾನೆ ಹೊತ್ತುಕೊಂಡು ಪೇಟೆಗೆ ಹೋಗಿ ಒಂದು ಸೇ . ಅಕ್ಕಿ ತರಬೇಕ. ಅವನು ಅದಕ್ಕೂ ಉದಾಸೀನ ವಾಗಿ 'ಹಾಳುಗಲಿ ಸಂಸಾರ' ಎಂದು ಕಾಲ ಕಟ್ಟಿ, ಜಗುಲಿಯ ಮೇಲೆ ಕುಳಿತುಬಿಟ್ಟ. ಆ ಬಳಿಕ ಸ್ಫೂರ್ತಿಯಿಂದ 'ತಮ್ಮ . ಅದವಿ ಕಲ್ಲುಕಲ್ಲುಗಳು ಕಾಣುತಿದೆ ತಮ್ಮ . ಎಂದು ಪಂಚವಟಿಯ ರಾಮನ ವಿಲಾಪವನ್ನು ತಾನು ನಡಿಸಿ ಮದ್ದಲೆ ಹತ್ತಿರ ಹೋಗಿ, ಶ್ರುತಿ ಸರಿ ಯುಂಟೋ ನೋಡಲಿಕ್ಕೆ ಕುಳಿತ.

ತಿಮ್ಮಪ್ಪನಿಗೂ ನಮ್ಮ ಊರಿಗೂ ಏನು ಸಂಬಂಧ ಎಂದು ಕೇಳಿದರೆ ಒಂದೇ ಉತ್ತರ— 'ಅದ್ಕೆ ಒಡೆಯುವುದು. ಕರ್ಣ ತೀಡುವುದು ತಪ್ಪಿತು—ಕರ್ಣ ತೀಡುವುದು. ಅಧ್ವಣಿ ಕುಟ್ಟು ವುದು

ಪ್ರಭಾವಶಾಲಿಯಾದ ಸಿಗರೇಟು!



BEARS' SPECIALS
CIGARETTES

B5/14

S. U. N. & Co.,

Silk Merchants,
Chaukhambha BENARES CITY

ಈಗಿನ ಕಲಹ (ಕಾಶಿ) ಬೆನಾ ರಿಸ್ ಸೀರೆ ತಮಗೆ ಬೇಕಾ ದರೆ ನಮ್ಮನ್ನು ಮರೆಯಬೇ ಡಿರಿ. ಈಗ ಕಯ ಹೊಬಾ ಸುಲಭ ಬೆಲೆಗೆ ಮಾಲು. 18 ಮೊಳದ 2¼ ಅಗಲದ ಸಣ್ಣ ಬುಟ್ಟ ಸೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣತರದ್ದು 18ಮೊಳ ಸಣ್ಣ ಬುಟ ಸೀರೆಗಳು ರೂ. 35ರಿಂದ ರೂ. 55 ಪಡಲು ಸಾದಾ ಸೀರೆ 18 ಮೊಳ ರೂ 32ರಿಂದ ರೂ. 65. ಉದ್ದ ಮೊಳ 16, ಅಗಲ 2¼ ರೂ. 20 ರಿಂದ 85ರ ವರೆಗೆ ಬೇರೆ ಮಾಲುಗಳ ಕೆಟ ಲಾಗು ಉಚಿತವಾಗಿ ಕಳುಹಿಸಲಾದೀತು.

ವಿಳಾಸ.—

ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬೆನರೆಸ್ ಸಿಟಿ.

ಉಪಾಧ್ಯಾಯರ ಹಿತಕ್ಕಾಗಿ ಮೂರು ಜಿ. ಓ.ಗಳು

ನಾಮದಾರ ಶ್ರೀ. ವಾರ್ಕಿಯವರ ಸಮರ್ಥನೆ

[ಲೇಖಕ, ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ]

ಮದ್ರಾಸ ಸಂಸ್ಥಾನದಲ್ಲಿ ಖಾಸಗಿಯಿಂದ ನಡೆದುಬರುವ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುವ ಉಪಾಧ್ಯಾಯರಿಗೆ ಇಷ್ಟರ ತನಕ ಅವರ ಉದ್ಯೋಗದಲ್ಲಿ ಭದ್ರತೆಯಾಗಲಿ, ಅವರ ತಲಬು ಬಟವಾಡೆಯ ವಿಷಯದಲ್ಲಿ ಕಾಲ ನಿಯಮವಾಗಲೀ ಇದ್ದಿರಲಿಲ್ಲ. ಶಾಲೆಗಳ ಮೇನೇಜರರು ಸರ್ವತಂತ್ರ ಸ್ವತಂತ್ರ ಸಂಸ್ಥಾಧಿಕಾರಿಗಳಂತೆ ನಡೆಯುತಿದ್ದುದರಿಂದ ಉಪಾಧ್ಯಾಯರು ಹೇರಳ ಕಷ್ಟ ನಷ್ಟಗಳಿಗೆ ಗುರಿಯಾಗುತಿದ್ದರು. ಆದ್ದರಿಂದ ಉಪಾಧ್ಯಾಯರ ಈ ಸ್ಥಿತಿಗತಿಗಳನ್ನು ಸುಧಾರಿಸುವುದಕ್ಕೋಸ್ಕರ ಕಳೆದ ನವಂಬರ ತಿಂಗಳಲ್ಲಿ ನಮ್ಮ ಮದ್ರಾಸು ಸರಕಾರವು ಒಂದು ಆಜ್ಞಾಪತ್ರವನ್ನು ಹೊರಡಿಸಿತ್ತು. ಪರಂತು ಆ ಮೇಲೆ ಬಂದ ಕೆಲವು ವಿಮರ್ಶೆಗಳನ್ನು ಆಲೋಚನೆಗೆ ತೆಗೆದುಕೊಂಡಾಗ, ಅದರಲ್ಲಿ ಕೆಲವು ಲೋಪದೋಷಗಳಿರುವುದು ತಿಳುವಳಿಕೆಗೆ ಬಂದಿತು. ಆದ್ದರಿಂದ ಈಗ ನಾಮದಾರ ಶ್ರೀ. ವಾರ್ಕಿಯವರು ವಿದ್ಯಾಖಾತೆಯ ಮಂತ್ರಿಗಳಾದ ಬಳಿಕ ಈಗ ತಾನೇ ಕೆಲವು ಹೊಸ ನಿಯಮ ನಿಬಂಧನೆಗಳನ್ನು ಮಾಡಿದ ಹೊಸ ಆಜ್ಞಾಪತ್ರಗಳನ್ನು ಹೊರಡಿಸಿದ್ದಾರೆ. ಈ ಆಜ್ಞಾಪತ್ರಗಳ ಪ್ರಕಾರ ಇನ್ನು ಮುಂದೆ ಖಾಸಗಿ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರನ್ನು 'ಬದಲಿ' 'ಹಂಗಾಮಿ' ಮತ್ತು 'ಕಾಯಂ' ಎಂದು ಮೂರು ವಿಧವಾಗಿ ವರ್ಗೀಕರಿಸಬೇಕಾಗುವುದು. ಒಬ್ಬ ಉಪಾಧ್ಯಾಯನನ್ನು ಹೊಸದಾಗಿ ನೇಮಿಸುವಾಗ ಅವನನ್ನು 'ಕಾಯಂ' ಎಂದು ನೇಮಿಸಲಿಕ್ಕೆ ಇನ್ನು ಅವಕಾಶವಿಲ್ಲ. ಒಂದೆರಡು ವರ್ಷಗಳ ತನಕ ಅವನ ಉದ್ಯೋಗವನ್ನು 'ಹಂಗಾಮಿ' ಎಂದು ತಿಳಿದುಕೊಳ್ಳಬೇಕು. ಹಂಗಾಮಿಯಾಗಿದ್ದಾಗ ಅವನ ಉದ್ಯೋಗವು ತೃಪ್ತಿಕರವೆಂದು ಕಂಡುಬಂದರೆ ಮಾತ್ರ ಅವನನ್ನು 'ಕಾಯಂ' ಎಂದೇ ತಿಳಿದುಕೊಳ್ಳಬೇಕು. ಕಾಯಂ ಉಪಾಧ್ಯಾಯನನ್ನು ವಿದ್ಯಾಖಾತೆಯ ಮೇಲಧಿಕಾರಿಯ ಸಮ್ಮತಿಯಿಲ್ಲದೆ ಕೆಲಸದಿಂದ ತಳ್ಳಿಹಾಕುವ ಅಧಿಕಾರವು ಶಾಲಾ ಮೇನೇಜರುಗಳಿಗೆ ಸರ್ವಥಾ ಇರುವುದಿಲ್ಲ. ಕಾಯಂ ಉಪಾಧ್ಯಾಯನ ಉದ್ಯೋಗ ಕ್ರಮವು ತೃಪ್ತಿಕರ ಅಥವಾ ಅತೃಪ್ತಿಕರ ಎಂದು ತೀರ್ಮಾನಿಸುವ ಅಧಿಕಾರವು ವಿದ್ಯಾಖಾತೆಯ ಮೇಲಧಿಕಾರಿಗಳಿಗೆ ಮಾತ್ರ ಇರು[illegible]ು. ತೃಪ್ತಿಕರವಾಗಿ ಕೆಲಸಮಾಡಿಕೊಂಡು ಬರುವ ಕಾಯಂ ಉಪಾಧ್ಯಾಯರನ್ನು ಶಾಲಾ ಮೇನೇಜರರು ಕೆಲಸದಿಂದ ತಳ್ಳಿಹಾಕಲೇ ಕೂಡದು. ಇದು ಉಪಾಧ್ಯಾಯರಿಗೆ ಪ್ರಯೋಜನಕರವಾಗಿದೆ.

ಬದಲಿ ಉಪಾಧ್ಯಾಯರು

ಹಂಗಾಮಿ ಅಥವಾ ಕಾಯಂ ಉಪಾಧ್ಯಾಯರು ತರಬೇತಿಗೆ ಹೋದಾಗ ಅವರ ಸ್ಥಾನದಲ್ಲಿ ನೇಮಿಸಲ್ಪಡುವ ಉಪಾಧ್ಯಾಯರು ಬದಲಿ ಉಪಾಧ್ಯಾಯರೆಂದು ಹೇಳಿಸಿಕೊಳ್ಳುವರು. ತರಬೇತಿಗೆ ಹೋದ ಉಪಾಧ್ಯಾಯರು ತಮ್ಮ ತರಬೇತಿಯನ್ನು ಮುಗಿಸಿ ಬಂದೊಡನೆಯೇ ಬದಲಿ ಉಪಾಧ್ಯಾಯರ ಕೆಲಸವು ಮುಗಿದು ಅವರ ಸ್ಥಾನಕ್ಕೆ ತರಬೇತಿಗೆ ಹೋದವರನ್ನೇ ನೇಮಿಸತಕ್ಕದ್ದು. ಹಂಗಾಮಿ ಮತ್ತು ಕಾಯಂ ಉಪಾಧ್ಯಾಯರು ರಜೆಯಮೇಲಿದ್ದಾಗ ಅವರ ಸ್ಥಾನದಲ್ಲಿ ಹೊಸಬರು ನೇಮಿಸಲ್ಪಟ್ಟರೆ, ಆ ಹೊಸಬರು ಕೂಡ ಬದಲಿ ಉಪಾಧ್ಯಾಯರೆಂದೇ ಹೇಳಿಸಿಕೊಳ್ಳುವರು. ಇಷ್ಟರತನಕ ಉಪಾಧ್ಯಾಯರ ನೇಮಕಗಳು ಬಾಯ್ಮಾತಿನ ಅಥವಾ ಸಣ್ಣ ಕಾಗದ ತುಂಡುಗಳಲ್ಲಿ ಆಗುತಿದ್ದುವು. ಇನ್ನು ಮುಂದೆ ಹಾಗಾಗಕೂಡದು. ಯಾವ ಉಪಾಧ್ಯಾಯನಿಗಾದರೂ ಒಂದೊಂದು 'ಸರ್ವಿಸ್ ರಿಜಿಸ್ಟರು' ಕೊಡಲ್ಪಡುವುದು. ಅದರಲ್ಲಿ ಆಯಾ ಉಪಾಧ್ಯಾಯರ ಉದ್ಯೋಗದ ಸ್ವಭಾವ ಮೊದಲಾದ ವಿವರಗಳನ್ನು ಕೊಡಲಾಗುವುದು. ಈ ರಿಜಿಸ್ಟರನ್ನು ಶಾಲಾ ಮೇನೇಜರರೂ ವಿದ್ಯಾಖಾತೆಯ ಅಧಿಕಾರಿಗಳೂ ದಸ್ಕತುಹಾಕಿ ಉಪಾಧ್ಯಾಯರಿಗೆ ಕೊಡುವರು. ಆದ್ದರಿಂದ ಇದು ಉಪಾಧ್ಯಾಯರು ಅನ್ಯಾಯಹೊಂದದಂತೆ ಅವರಿಗೆ ಒಂದು ರಕ್ಷಾಪತ್ರವಾಗಿದೆ.

ತಲಬು ಬಟವಾಡೆಯ ವಿಚಾರ

ಒಂದೊಂದು ಖಾಸಗಿ ಶಾಲೆಯಲ್ಲಿ ಉಪಾಧ್ಯಾಯರಿಗೆ ಒಂದೊಂದು ರೀತಿಯಲ್ಲಿ ತಲಬು ದೊರೆಯುತ್ತಿರುವುದು ಸರಕಾರದ ತಿಳುವಳಿಕೆಗೆ ಬಂದಿದೆ. ಉಪಾಧ್ಯಾಯರಿಗೆ ಶಾಲಾ ಮೇನೇಜರರು ಕೊಡುವೆನೆಂದು ಒಪ್ಪಿದ ತಲಬನ್ನು ಪೂರ್ಣವಾಗಿ ಕೊಡದೆ ಇರುವರು ಮಾತ್ರ ಸಕಾಲದಲ್ಲಿ ಕೂಡ ಕೊಡುತ್ತಿರುವುದಿಲ್ಲ ಎಂಬಂತವೂ ಸರಕಾರಕ್ಕೆ ಗೊತ್ತಾಗಿದೆ. ಎಲ್ಲಾ ಖಾಸಗಿ ಶಾಲೆಗಳ ಉಪಾಧ್ಯಾಯರಿಗೆ ಅವರವರ ಯೋಗ್ಯತೆ ಮತ್ತು ಕೆಲಸ ಮಾಡಿದ ಕಾಲಾವಧಿಗೆ ಅನುಸಾರ ಒಂದೇ ರೀತಿಯಾಗಿ ತಲಬು ಸಿಕ್ಕುವಂತೆ ಮಾಡಬೇಕೆಂಬ ಆಸೆಯು ಸರಕಾರಕ್ಕೆ ಇದೆ, ಅದು ಉಪಾಧ್ಯಾಯರ ತಲಬನ್ನು ಹೆಚ್ಚಿಸಲಿಕ್ಕೂ ಇದೆ. ಸರಕಾರದ ಆರ್ಥಿಕಸ್ಥಿತಿಯು ಸುಧಾರಣೆಯಾದೊಡನೆಯೇ ಅದು ಮೊದಲನೆಯದಾಗಿ ಈ ಕೆಲಸ ಮಾಡುವುದು. ತನ್ನಿಂದ ಮೇನೇಜರರು ಒಪ್ಪಿದಷ್ಟು ತಲಬನ್ನಾದರೂ ಉಪಾಧ್ಯಾಯರು ಸಕಾಲದಲ್ಲಿ ಪಡೆಯುವಂತೆ ಸರಕಾರವು ನೋಡಿಕೊಳ್ಳುತ್ತದೆ. ಇನ್ನು ಮುಂದೆ ಮೇನೇಜರರು ಶಾಲಾ ಗ್ರಾಂಟನ್ನು ಪೂರ್ಣವಾಗಿ ತಾವೇ ತಿನ್ನುವ ಸಂಭವವಿಲ್ಲ. ಗ್ರಾಂಟು ದೊರೆತ ಮೇಲೆ [illegible] ತಿಂಗಳಿಗೆ ಬಿಟ್ಟು ಬೇರೆ ಯಾವ ಹಣವನ್ನು ಆದರೂ ಉಪಾಧ್ಯಾಯರ ತಲಬಿನಿಂದ ಕಳೆದಿಡುವ ಅಧಿಕಾರವುಳ್ಳವರಲ್ಲ. ಉಪಾಧ್ಯಾಯರ ತಲಬಿನಿಂದ ಬೇರೆ ಯಾವ ಹಣವನ್ನಾದರೂ ಅವರು ಕಳೆದುದಾದರೆ ಶಾಲೆಯ ಮಂಜೂರಾತಿಯನ್ನು ರದ್ದುಮಾಡಲಾಗುವುದು. ಶಾಲೆಯ ಮೇನೇಜರರು ತಲಬನ್ನು ಕೊಡುತ್ತಿರುವಾದರೂ ಶಾಲೆಯ ಮಂಜೂರಾತಿಯು ಹೋಗಬಹುದು. ಅಥವಾ ಸರಕಾರವೇ ಆ ಶಾಲೆಯ ಉಪಾಧ್ಯಾಯರಿಗೆ ನೇರವಾಗಿ ಗ್ರಾಂಟಿನ ಹಣವನ್ನು ತಲಬಿನ ರೂಪದಲ್ಲಿ ಸಂದಾಯ ಮಾಡಬಹುದು. ಉಪಾಧ್ಯಾಯರಿಗೆ ತಿಂಗಳು ತಿಂಗಳು ತಲಬು ಕೊಡಲು ಸಾಧ್ಯವಾಗುವಂತೆ ಇನ್ನು ಮುಂದೆ ಎಲ್ಲಾ ಶಾಲೆಗಳಿಗೆ ನಾಲ್ಕು ನಾಲ್ಕು ತಿಂಗಳಿಗೊಮ್ಮೆ ಗ್ರಾಂಟನ್ನು ಹಂಚಲಾಗುವುದು. ಆರ್ಥಿಕಸ್ಥಿತಿಯು ಸುಧಾರಿಸಿದೊಡನೆ ತಿಂಗಳು ತಿಂಗಳು ಗ್ರಾಂಟು ಹಂಚುವ ಏರ್ಪಾಡನ್ನು ಆದು ಮಾಡುವುದು. ಖಾಸಗಿ ಶಾಲೆಗಳಿಗೆ ಕೊಡುವ ಗ್ರಾಂಟಿನ ದಾಮಾಶಯವನ್ನು ಹೆಚ್ಚಿಸುವುದನ್ನು ಸರಕಾರವು ಆಲೋಚನೆಗೆ ತೆಗೆದುಕೊಂಡಿದೆ.

ಉಪಾಧ್ಯಾಯರ ಸಂಘಗಳು

ಉಪಾಧ್ಯಾಯರ ಸಂಘಗಳು ಮುಂದೆ ಕಿರಿದಾಗಿ ಇರುವುವು. ಮೊದಲನೆಯದನ್ನು ಉಪಾಧ್ಯಾಯರ ಕೇಂದ್ರ ಸಭೆಗಳೆಂದು ಕರೆಯುವರು. ಈ ಕೇಂದ್ರ ಸಭೆಗಳಿಗೆ ಆಯಾ ಕೇಂದ್ರ ಶಾಲೆಗಳ ಎಲ್ಲಾ ಉಪಾಧ್ಯಾಯರು ಸದಸ್ಯರಾಗಿರುವುದು ಅನಿವಾರ್ಯವಾಗಿದೆ. ಈ ಸಭೆಗಳು ಆಯಾ ರೇಂಜಿನ್ಸ್ಪೆಕ್ಟರರ ಅಧ್ಯಕ್ಷತೆಯಲ್ಲಿ ಅವರ ಸೂತ್ರಚಾಲನೆಗೆ ಒಳಪಡುವುವು. ಬೋರ್ಡ್, ಮುನ್ಸಿಪಲ್, ಪಂಚಾಯತ, ಖಾಸಗಿ ಎಂಬ ಭೇದವಿಲ್ಲದೆ ಎಲ್ಲಾ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರಿಗೆ ಒಂದೊಂದು ಕೇಂದ್ರದಲ್ಲಿ ಒಂದೊಂದೇ ಕೇಂದ್ರ ಸಭೆ ಇರುವುದು. ಉಪಾಧ್ಯಾಯರ ಯೋಗ್ಯತೆಯನ್ನು ಸುಧಾರಿಸುವುದೇ ಈ ಸಭೆಯ ಉದ್ದೇಶವು. ಆದ್ದರಿಂದ ಉಪಾಧ್ಯಾಯರಲ್ಲದೆ ಇತರರು ಯಾರೂ ಈ ಸಭೆಗಳಿಗೆ ಬರಕೂಡದು. ವಿದ್ಯಾಖಾತೆಯ ಮೇಲಧಿಕಾರಿಗಳು ಮಾಮೂಲಿಗೆ ಕಳುಹಿಸಿಕೊಟ್ಟ ವಿಷಯಗಳ ಮೇಲೆ ಮಾತ್ರ ಈ ಸಭೆಯು ಚರ್ಚಿಸಿ ತನ್ನ ಅಭಿಪ್ರಾಯವನ್ನು ಕೊಡಬಹುದು. ಅಲ್ಲದೆ ಸ್ವೀಕರಿಸಿ ಸರಕಾರದ ಕಾರ್ಯನೀತಿಯನ್ನು ಇದು ಚರ್ಚಿಸಕೂಡದು. ರಾಜಕೀಯ, ಸಾಮಾಜಿಕ, ಧಾರ್ಮಿಕ ಮೊದಲಾದ ಇತರ ವಿಷಯಗಳನ್ನು ಕೈಹಾಕಲಿಕ್ಕೂ ಕೂಡದು. ಕೇವಲ ವಿದ್ಯಾ ವಿಷಯಕ ಸಂಗತಿಗಳನ್ನು ಮಾತ್ರ ಇದು ಚರ್ಚಿಸಬಹುದು. ಈ ಕೇಂದ್ರ ಸಭೆಗಳು ಒಂದು ರೀತಿಯಲ್ಲಿ ಹಿಂದಿನ ಸೆಂಟ್ರಲ್ ಕ್ಲಾಸುಗಳಂತೆ ಇರುವುವು.

ಇನ್ನು ಬೋರ್ಡ್, ಮುನ್ಸಿಪಲ್, ಪಂಚಾಯತ ಖಾಸಗಿ ಮೊದಲಾದ ಶಾಲೆಗಳ ಉಪಾಧ್ಯಾಯರು ತಮ್ಮ ತಮ್ಮ ಪ್ರತ್ಯೇಕ ಸಂಘಗಳನ್ನು ಮಾಡುವರೆ ಸರಕಾರವು ಅವಕ್ಕೆ ಮಂಜೂರಾತಿಯನ್ನು ಕೊಡುತ್ತದೆ. ಆದರೆ ಇಂಥ ಸಂಘಗಳಿಗೂ ಯಾವ ಸಂಬಂಧವೂ ಇರುವುದಿಲ್ಲ. ಆಯಾ ಜಾತಿಯ ಉಪಾಧ್ಯಾಯರ ಹಾನಿಬಾಧೆಗಳನ್ನು ಸಂಕಷ್ಟಗಳನ್ನು ಸರಕಾರದ ತಿಳುವಳಿಕೆಗೆ ತಂದು ನ್ಯಾಯವಾದ ಉಪಾಯಗಳಿಂದ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲಿಕ್ಕೆ ಈ ಸಂಘಗಳು ಇರುತ್ತವೆ. ಈ ಸಂಘಗಳಾದರೂ ರಾಜಕೀಯ, ಸಾಮಾಜಿಕ ಅಥವಾ ಧಾರ್ಮಿಕ ಸಂಗತಿಗಳಲ್ಲಿ ಕೈಹಾಕಬಾರದು. ಅಂದರೆ ಉಪಾಧ್ಯಾಯರು ರಾಜಕೀಯ, ಸಾಮಾಜಿಕ, ಧಾರ್ಮಿಕ ಮೊದಲಾದ ಸಭೆಗಳಿಗೆ ಹೋಗಿ ಅಂಥ ವಿಷಯಗಳನ್ನು ತಿಳಿಸಿಕೊಳ್ಳಬಾರದೆಂದು ಸರಕಾರದ ಅಭಿಪ್ರಾಯವು ಇರುವುದಿಲ್ಲ. ಪರಂತು ಸಾಮೂಹಿಕವಾಗಿ ಅವರು ಅವುಗಳಲ್ಲಿ ಸೇರಿಕೊಂಡು ತಮ್ಮ ಮುಖ್ಯ ಕೆಲಸವಾದ ವಿದ್ಯಾಪ್ರಚಾರಕ್ಕೆ ಭಂಗ ತರಬಾರದು. ಅವರು ರಾಜಕೀಯ ಮೊದಲಾದ ವಿಷಯಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿಕೊಳ್ಳುವರಾದರೆ ಮೊದಲು ತಮ್ಮ ಉಪಾಧ್ಯಾಯ ಹುದ್ದೆಗೆ ರಾಜಿನಾಮೆ ಕೊಡುವುದು ಅವರ ಕರ್ತವ್ಯವಾಗಿದೆ. ಒಂದೇ ಸಮಯದಲ್ಲಿ ಎರಡು ಕೆಲಸಗಳನ್ನು ಮಾಡಿಕೊಂಡಿರಲಿಕ್ಕೆ ಯಾರಿಗೂ ಸಾಧ್ಯವಾಗುವುದಿಲ್ಲ.

ಇನ್ನು ಮೂರನೆಯದಾಗಿ ಶಾಲೆಗಳ ಟೀಚರ ಮೇನೇಜರುಗಳೂ, ಮೇನೇಜರುಗಳೂ ತಮ್ಮ ಪ್ರತ್ಯೇಕ ಸಂಘಗಳನ್ನು ಮಾಡಿಕೊಳ್ಳುವರಾದರೆ ಸರಕಾರವು ಅವಕ್ಕೆ ಮಂಜೂರಾತಿ ಕೊಡುವುದು. ಟೀಚರ ಮೇನೇಜರ ಮತ್ತು ಮೇನೇಜರುಗಳ ಸಂಕಷ್ಟಗಳನ್ನು ಸರಕಾರದ ತಿಳುವಳಿಕೆಗೆ ತರುವುದು ಈ ಸಂಘಗಳ ಉದ್ದೇಶವಾಗಿದೆ. ಅವರು ಗ್ರಾಂಟಿಗೆ ಸಂಬಂಧಪಟ್ಟ ವಿದ್ಯಾ ವಿಷಯಕ ಸಂಗತಿಗಳನ್ನು ಚರ್ಚಿಸಬಹುದು.

ನವೀನ ಪಾಠಕ್ರಮ

ಮಾಧ್ಯಮ ಶಿಕ್ಷಣ ಕ್ರಮವನ್ನು ಸಂಸ್ಥಾನದ ಎಲ್ಲಾ ಪಾಠಶಾಲೆಗಳಲ್ಲಿ ಒಂದೇ ಸಮಯಕ್ಕೆ ಜಾರಿಗೆ ತರುವುದು ಅಸಾಧ್ಯವಾಗಿದೆ. ಮುಖ್ಯವಾಗಿ ಈ ಕ್ರಮದಲ್ಲಿ ಸರಿಯಾದ ತರಬೇತಿಯನ್ನು ಹೊಂದಿದ ಯೋಗ್ಯ ಉಪಾಧ್ಯಾಯರು ಈಗ ಬೇಕಾದಷ್ಟು ಸಂಖ್ಯೆಯಲ್ಲಿ ದೊರೆಯುವುದಿಲ್ಲ. ಆದಕಾರಣ ಮುಂದೆ ಮಾಧ್ಯಮ ಶಿಕ್ಷಣ ಕ್ರಮಕ್ಕೆ ಸುಲಭದಲ್ಲಿ ಹೊಂದಿಸಲಿಕ್ಕಾಗುವಂತೆ ತಿದ್ದಿದ ಒಂದು ಪಾಠಕ್ರಮವನ್ನು ಸರಕಾರವು ತಯ್ಯಾರಿಸಿದೆ. ಈ ಪಾಠಕ್ರಮದ ಪ್ರಕಾರ ಉಪಾಧ್ಯಾಯರು ಮಕ್ಕಳಿಗೆ ಸಾಧ್ಯವಿರುವಷ್ಟರ ಮಟ್ಟಿಗೆ ಒಂದು ಅಥವಾ ಹೆಚ್ಚಿಗೆ ವೃತ್ತಿಗಳ ಮೂಲಕವೇ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕಾಗುವುದು. ಈ ನವೀನ ಪಾಠಕ್ರಮವು ಈಗಾಗಲೇ ಪ್ರಕಟವಾಗಿಬಹುದು. ಅದು ಬರುವ ಜೂನ್ ತಿಂಗಳ ಆದಿಯಿಂದ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಜಾರಿಗೆ ಬರುವುದು. ಹಾಗೆ ಮೇಲೆ ಹೇಳಿದಂಥ ಉಪಾಧ್ಯಾಯರ ಸ್ಥಿತಿಗತಿಗಳನ್ನು ಸುಧಾರಿಸುವ ಸುಧಾರಣೆಗಳೂ, ಉಪಾಧ್ಯಾಯರ ಸಂಘ ಸಂಸ್ಥೆಗಳ ಸಂಬಂಧವಾದ ನೇಮ ನಿಬಂಧನೆಗಳೂ ಬರುವ ಜೂನ್ ತಿಂಗಳಿಂದ ಜಾರಿಗೆ ಬರುವುವು.

ವಿದ್ಯಾಶಾಲೆಗಳಿಗೆ
ಪ್ರತಿವಾರವೂ
ಸ್ವದೇಶಾಭಿಮಾನಿ
ಅತ್ಯಾವಶ್ಯಕ ವಾಚನೀಯ
ವಿಷಯಗಳನ್ನು
ಒದಗಿಸಿಕೊಡುವುದು.

ಮೈಸೂರು ಶ್ರೀಮನ್ಮಹಾರಾಜರವರ ಕೃಪಾಪೋಷಿತರಾದ

ಗುಬ್ಬಿ ಶ್ರೀ ಚೆನ್ನಬಸವೇಶ್ವರಸ್ವಾಮಿ ಥಿಯೇಟ್ರಿಕಲ್ ಕಂಪೆನಿ

(ರಿಜಿಸ್ಟರ್ಡ್)

ಮಂಗಳೂರು ಮೈದಾನದಲ್ಲಿ ಹೊಸದಾಗಿ ಕಟ್ಟಿರುವ ತಮ್ಮ ಸ್ವಂತ

ಧನಲಕ್ಷ್ಮೀ ಥಿಯೇಟರಿನಲ್ಲಿ

ತಾ. **15-3-'39**ನೇ ಬುಧವಾರದಿಂದ ತಾ. **26-3-'39**ನೇ ಭಾನುವಾರ

ಪೂರ್ತಿ *12* ದಿನಗಳು ಮಾತ್ರ — ಪ್ರತಿ ದಿನ ರಾತ್ರೆ *9.30* ಗಂಟೆಗೆ

ಸ್ವರ್ಣಮಹೋತ್ಸವದ ಸಲುವಾಗಿ ಅತಿಶಯ ದ್ರವ್ಯ ವ್ಯಯಮಾಡಿ ತಯಾರಿಸಿದ

ಕುರುಕ್ಷೇತ್ರ ಅಥವಾ **ಭಗವದ್ಗೀತಾ**

ಎಂಬ ನಾಟಕವನ್ನಭಿನಯಿಸುತ್ತಾರಾದ್ದರಿಂದ ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಎಸ್. ಪಿ. ನರಸಿಂಹ ಮೂರ್ತಿ, ಎಂ. ಎ., ಮೆನೆಜರ್.

ಕರ್ನಾಟಕಾಂಧ್ರ ನಾಟಕ ಸಾರ್ವಭೌಮರು ಜಿ. ಎಚ್. ವೀರಣ್ಣ, ವರ್ಸಟೈಲ್ ಕಮಿಡಿಯನ್, ಪ್ರೊಪ್ರೈಟರ್.

ಗಾಂಧಿ ಸೇವಾ ಸಂಘದ ವಾರ್ಷಿಕ ಸಭೆ

ಬೃಂದಾವನದಲ್ಲಿ—ಬರುವ ಎಪ್ರಿಲ್ ತಿಂಗಳಲ್ಲಿ

ಅಖಿಲಭಾರತ ಗಾಂಧಿ ಸೇವಾಸಂಘದ ವಾರ್ಷಿಕ ಮಹಾಸಭೆಯನ್ನು ಬರುವ ಎಪ್ರಿಲ್ ತಿಂಗಳಲ್ಲಿ ಬೃಂದಾವನದಲ್ಲಿ ಕೂಡಿಸುವ ಸಕಲ ಸನ್ನಾಹಗಳು ನಡೆಯುತ್ತವೆ. ಆ ಸಂದರ್ಭದಲ್ಲಿ ಗಾಂಧಿಯವರ ಜೀವನಾದರ್ಶ ಧ್ಯೇಯ ತತ್ವಗಳಲ್ಲಿ ಸಂಪೂರ್ಣ ಶ್ರದ್ಧೆ–ಭಕ್ತಿ–ವಿಶ್ವಾಸಗಳಿರುವ ಲಕ್ಷಾಂತರ ಜನರು ಪ್ರಪಂಚದ ಎಲ್ಲಾ ಭಾಗಗಳಿಂದ ಅಲ್ಲಿಗೆ ಬಂದು ಕೂಡುವರು. ಬೃಂದಾವನ ಆಶ್ರಮದ ಪ್ರಚಾರ ಖಾತೆಯ ಅಧಿಕಾರಿಗಳಾದ ಶ್ರೀ. ಅಮರ ಕಿಶೋರ ಸಿಂಹರು ಕೊಟ್ಟ ಪ್ರಕಟನೆಯ ಮೇರೆಗೆ, ಈ ಸಭೆಗಾಗಿ ಕಟ್ಟುವ ಸಭಾ ಮಂಟಪಕ್ಕೆ ಒಂದೇ ಒಂದು ಮಹಾ ದ್ವಾರದಿಂದ ಸಭಾಮಂಟಪದ ತನಕ ಇರುವ ರಸ್ತೆಯ ಅಂಶವನ್ನು ತಳಿರು ತೋರಣಾದಿಗಳಿಂದ ಸಂದರ್ಭಕ್ಕೆ ಒಪ್ಪುವ ರೀತಿಯಲ್ಲಿ ಬಹುಮನೋಹರವಾಗಿ ಶೃಂಗರಿಸುವ ಏರ್ಪಾಡು ಆಗುವುದು.

ಗಾಂಧಿಯವರಿಗೆ ಪರ್ಣಕುಟೀರ

ಈ ಸಭೆಗೆ ಮಹಾತ್ಮಾಗಾಂಧಿಯವರು ಆಗತ್ಯ ಬರುವರು. ಇಷ್ಟು ವರ್ಷ ಗಾಂಧಿ ಸೇವಾಸಂಘದ ವಾರ್ಷಿಕ ಸಭೆಗಳು ಕಾಂಗ್ರೆಸಿನಷ್ಟೇ ಪ್ರಾಮುಖ್ಯತೆಯನ್ನು ಪಡೆದಿದ್ದುವು. ಈ ವರ್ಷದ ಸಭೆಯಂತೂ ತ್ರಿಪುರಿ ಕಾಂಗ್ರೆಸಿಗಿಂತ ಹೆಚ್ಚು ಮಹತ್ವವನ್ನು ಪಡೆಯುವ ಲಕ್ಷಣಗಳಿವೆ. ಪುರಾತನ ಕಾಲದ ಆಶ್ರಮಗಳ ಮಾದರಿಯನ್ನನುಸರಿಸಿ, ಗಾಂಧಿಯವರಿಗೆ ಉಳಕೊಳ್ಳಲಿಕ್ಕೆ ಅಲ್ಲಿ ಒಂದು ಪರ್ಣಕುಟೀರವನ್ನು ಕಟ್ಟಿಸಿಕೊಡಲಾಗುತ್ತದೆ. ಪ್ರಾಕೃತಿಕ ಸೌಂದರ್ಯದ ಭವ್ಯಸನ್ನಿವೇಶಗಳ ನಡುವೆ ಈ ಕುಟೀರವು ಕಟ್ಟಲ್ಪಡುವುದು.

ಧ್ವಜವಂದನೆ



ಶ್ರೀ. ಪಂಡಿತ ಜವಹರಲಾಲರು ವಿಷ್ಣುದತ್ತ ನಗರದಲ್ಲಿ ಧ್ವಜವನ್ನು ಏರಿಸುತ್ತಿರುವುದು.

ವೈದ್ಯಕೀಯ ಸಹಾಯ

ಸಭೆಯು ಕೂಡುವ ಕಾಲಕ್ಕೆ ವೈದ್ಯಕೀಯ ಸಹಾಯವನ್ನು ಕೊಡುವುದಕ್ಕೋಸ್ಕರ ಉತ್ತಮ ವ್ಯವಸ್ಥೆ ಆಗಿದೆ. ಸಭೆಯಾಗುವ ಎಲ್ಲಾ ದಿವಸಗಳಲ್ಲಿ ಒಳರೋಗಿಗಳ ಚಿಕಿತ್ಸೆಗೆ ಅನುಕೂಲ ಇರುವ ಒಂದು ಆಸ್ಪತ್ರೆಯು ಹಗಲೂ ರಾತ್ರಿ ತೆರೆದು ಇರುವುದು. ಅಲ್ಲದೆ ಹೊರರೋಗಿಗಳಿಗೆ ಔಷಧಿಗಳನ್ನು ತಯಾರಿಸಿ ಕೊಡಲಿಕ್ಕೂ, ಶಸ್ತ್ರಚಿಕಿತ್ಸೆ ಮಾಡಲಿಕ್ಕೂ ಬೇರೆ ಬೇರೆ ಕಟ್ಟಡಗಳನ್ನು ಕಟ್ಟಿಸುವರು. ಪ್ರಥಮಚಿಕಿತ್ಸೆಯನ್ನು ಕೊಡಲಿಕ್ಕೆ ಒಂದು ಸೇವಾದಳವೂ ಇರುತ್ತದೆ. ಎಲ್ಲೋಪಥಿಕ ವೈದ್ಯ ಕ್ರಮದಲ್ಲಿ ವಿಶ್ವಾಸವಿಲ್ಲದವರ ಅನುಕೂಲಕ್ಕಾಗಿ ಒಂದು ಹೋಮಿಯೋಪಥಿಕ ಆಸ್ಪತ್ರೆಯನ್ನು ತೆರೆಯುವರು.

ಒಂದು ಲಕ್ಷ ಯಾತ್ರಿಕರು

ಸಭೆಗಾಗಿಯೇ ಒಂದು ಲಕ್ಷ ಯಾತ್ರಿಕರು ಬೃಂದಾವನಕ್ಕೆ ಬರುವರೆಂದು ಅಂದಾಜು ಮಾಡಲಾಗಿದೆ. ಅಷ್ಟು ಜನರಿಗೆ ಉಳಕೊಳ್ಳುವ ಮತ್ತು ಅನ್ನನೀರಿನ ವ್ಯವಸ್ಥೆಯು ಅಲ್ಲಿ ಆಗುತ್ತದೆ. ಬೃಂದಾವನದ ಗಾಂಧಿ ಆಶ್ರಮದ ಬಹು ಸಮೀಪ ಒಂದು ಹಂಗಾಮಿ ರೈಲ್ವೆ ಸ್ಟೇಶನನ್ನು ಈ ಸಂದರ್ಭದಲ್ಲಿ ತೆರೆಯುವರು. ಆದ್ದರಿಂದ ಯಾತ್ರಿಕರಿಗೆ ಸಭೆಕೂಡುವ ಸ್ಥಾನದ ತನಕ ರೈಲಿನಲ್ಲಿಯೇ ಬರುವುದೂ ಹೋಗುವುದೂ ತುಂಬಾ ಅನುಕೂಲವಾಗಿದೆ.

ನೈರ್ಮಲ್ಯ ಶುಚೀಕರಣ

ಆಶ್ರಮವನ್ನು ನಿರ್ಮಲವಾಗಿಡುವುದಕ್ಕೋಸ್ಕರ ನುರಿತ ನೂರಾರು ಸ್ವಯಂಸೇವಕರ ದಳವು ತಯಾರಾಗಿದೆ. ಆದ್ದರಿಂದ ಹೆಚ್ಚು ಜನರು ಕೂಡಿದ ಕಾರಣ ರೋಗರುಜೆಗಳು ಹರಡುವ ಭಯವು ಇರುವುದಿಲ್ಲ. ಏಳು ದಿನಗಳ ತನಕ ಈ ಸಭೆಯು ಕೂಡಿ ಗಾಂಧಿತತ್ವ–ಸಿದ್ಧಾಂತಗಳ ಪ್ರಚಾರಕ್ಕೆ ಪ್ರಪಂಚವ್ಯಾಪೀ ಪ್ರಯತ್ನಗಳು ಕೈಕೊಳ್ಳಲ್ಪಡುವುವು. ಪ್ರತಿನಿಧಿಗಳಾಗಿ ಅಲ್ಲವಾದರೆ, ಪ್ರೇಕ್ಷಕರಾಗಿ ಆದರೂ ಅಲ್ಲಿಗೆ ಹೋಗುವುದು ಜೀವನದ ಒಂದು ಮಹತ್ವದ ಘಟನೆ ಎನ್ನಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ.

ಇಂಗ್ಲಾಂಡಿನೊಳಗೆ ಐರಿಷರ ಹಾವಳಿ

ಬೋಂಬು ಗುಂಡುಗಳಿಂದ ಸ್ವಾರ್ಥಸಾಧನೆಯ ಪ್ರಯತ್ನ

ಆಯರ್ಲಾಂಡಿನ ವಿಷಯಕವಾದ ಇಂಗ್ಲಾಂಡಿನ ರಾಜನೀತಿಯು ಐರಿಷರಿಗೆ ತೃಪ್ತಿಕರವಾಗಿರುವುದಿಲ್ಲ. ಇಂಗ್ಲಾಂಡಿನ ಕೆಲವು ಜನರು ಆಯರ್ಲಾಂಡನ್ನು ಹೇಗೂ ಮಾಡಿ ಇಂಗ್ಲಾಂಡಿಗೆ ಅಧೀನವಾಗಿಡಬೇಕೆಂದು ಪ್ರಯತ್ನಿಸುತ್ತಿರುವಾಗ ಆಯರ್ಲಾಂಡಿನ ಅನೇಕರು ಇಂಗ್ಲಾಂಡಿನಿಂದ ಸಂಪೂರ್ಣ ಸ್ವತಂತ್ರರಾಗಬೇಕೆಂದು ಹವಣಿಸುತ್ತಿರುವರು. ಈ ಮಧ್ಯೆ, ಆಯರ್ಲಾಂಡು ಸ್ವತಂತ್ರವಾಗಿರುವುದಾದರೂ ಇಂಗ್ಲಾಂಡಿನ ಸ್ನೇಹ ಸಹಕಾರಗಳನ್ನು ಪಡೆದಿರಬೇಕೆಂದು ಆಶಿಸುವ ಡಿ. ವೆಲಿರಾ ಗೊಂದಲದಲ್ಲಿ ಬಿದ್ದುಕೊಂಡು ಕರ್ತವ್ಯ ಮೂಢನಾಗಿರುವನು.

ರಿಪಬ್ಲಿಕನ್ ಸೇನೆ

ಇಂಗ್ಲಾಂಡಿನಿಂದ ಆಯರ್ಲಾಂಡು ಸಂಪೂರ್ಣ ಸ್ವತಂತ್ರವಾಗಿರಬೇಕೆನ್ನುವ ಐರಿಶ್ ರಿಪಬ್ಲಿಕನ್ ಪಾರ್ಟಿಯ ಒಂದು ಗುಪ್ತಸೇನೆಯು ಆಯರ್ಲಾಂಡಿನಲ್ಲಿದೆ. ಅದನ್ನು ರಿಪಬ್ಲಿಕನ್ ಆರ್ಮಿ ಎಂದು ಕರೆಯುವರು. ಈ ಸೇನೆಯ ಕಾರ್ಯಕ್ರಮಗಳು ಆಯರ್ಲಾಂಡಿನ ತಾತ್ಕಾಲಿಕ ಡಿ. ವೆಲಿರಾ ಸರಕಾರದ ನೀತಿಗೆ ವಿರೋಧವಾಗಿರುವುದರಿಂದ ಸರಕಾರವು ಅದನ್ನು ಬೇಕಾಬಿಟ್ಟಿ ಶಿಕ್ಷಿಸುವುದೆಂದು ಸಾರಿದೆ. ಅದೇ ಸೇನೆಯು ಒಂದು ತಂಡು ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾಗಿ ಇಂಗ್ಲಾಂಡಿಗೆ ಬಂದು ಅಲ್ಲಿ ತನ್ನ ಕಾರ್ಯವನ್ನು ಆರಂಭಿಸಿರುವುದು. ಜನರನ್ನು ದಿಗಿಲುಗೊಳಿಸಿರುವುದು. ಇಂಗ್ಲಾಂಡಿನ ಅನೇಕ ಕಡೆಗಳಲ್ಲಿ ಈ ಸೇನೆಗೆ ಸೇರಿದ ಸೈನಿಕರು ಬೋಂಬು ಗುಂಡುಗಳನ್ನು ಹಾರಿಸಿ ತುಂಬ ಹಾವಳಿಯನ್ನುಂಟುಮಾಡಿದ್ದಾರೆ. ಏನಾದರೂ ಮಾಡಿ, ಬ್ರಿಟಿಷ ಸರಕಾರವನ್ನು ಹೆದರಿಸಿ ಬೆದರಿಸಿ, ಅದು ಆಯರ್ಲಾಂಡಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುವಂತೆ ಬಲಾತ್ಕರಿಸುವುದೇ ಈ ಹಾವಳಿಯ ಉದ್ದೇಶವಾಗಿದೆ.

೨೦೦೦ ಆಫೀಸರರ ದಂಡು

ಐರಿಷ ರಿಪಬ್ಲಿಕನ್ ಆರ್ಮಿಯ ೨೦೦೦ ಆಫೀಸರರು ಮತ್ತು ಜನರು ಇರುವ ಒಂದು ದಂಡು ಇಂಗ್ಲಾಂಡನ್ನು ಸೇರಿ ಸಂದು ಕಟ್ಟಿನ ಸ್ಥಾನಗಳಲ್ಲಿ ಹಂಚಿಕೊಂಡು ನಿಂತಿದೆ ಎಂದು ಟೆಲಿಗ್ರಾಫ್ ಪತ್ರಿಕೆಯು ಹೇಳಿದೆ. ಈ ಸೇನೆಯವರು ಪ್ರಕಟವಾಗಿ ಯಾವ ಕೆಲಸವನ್ನೂ ಮಾಡುವುದಿಲ್ಲವಾದ್ದರಿಂದ ಅವರನ್ನು ಗುರುತಿಸುವುದು ಸ್ಕಾಟ್ಲಾಂಡ್ ಯಾರ್ಡಿನ ಗುಪ್ತ ಪೋಲೀಸ ಖಾತೆಗೂ ಕಷ್ಟಸಾಧ್ಯವಾಗಿರುವುದೆಂದು ಕಂಡುಬಂದಿದೆ. ರಿಪಬ್ಲಿಕನ ಸೇನೆಯ ಸೈನಿಕರು ಆಯಕಟ್ಟಿನ ಸ್ಥಾನಗಳಲ್ಲಿ ನೌಕರಚಾಕರರಾಗಿ ನಿಂತುಕೊಂಡು ಸಮಯವು ಅನುಕೂಲವಾಗಿ ಒದಗಿಬಂದಂತೆ, ಬೋಂಬು ಗುಂಡುಗಳನ್ನು ಚೆಲ್ಲಿ ಹಾವಳಿಮಾಡುವರು. ಇವರ ಪತ್ತೆಹಚ್ಚುವ ಕೆಲಸವು ಎಷ್ಟುಭರದಿಂದ ನಡೆಯುತ್ತಿದೆಯೋ, ಆ ಕೆಲಸವೆಲ್ಲವೂ ನಿಷ್ಫಲವಾಗಿ, ಸೇನೆಯು ವಿಜಯವನ್ನು ಹೊಂದುತ್ತಲೇ ಇದೆ. ಕಳೆದ ವಾರವೇ ಲಂಡನಿನ ಜನಸಮ್ಮರ್ದವಾದ ಎರಡು ಕಡೆಗಳಲ್ಲಿ ಬಾಂಬಿನ ಸಿಡಿತಗಳಾದುವು. ನಿಜವಾದ ಅಪರಾಧಿಗಳನ್ನು ಕಂಡು ಹಿಡಿಯುವುದು ಸಾಧ್ಯವಾಗಿಲ್ಲ.

೧೯೩೮ರಲ್ಲಿ ೧೭,೦೦೦,೦೦೦,೦೦೦ ಡಾಲರುಗಳ ಯುದ್ಧಸಿದ್ಧತೆಯ ಖರ್ಚು

ಪ್ರಪಂಚದ ಸರ್ವಜನಾಂಗಗಳು ಕೂಡಿ ಕಳೆದ ವರ್ಷ ೧೭,೦೦೦,೦೦೦,೦೦೦ ಡಾಲರುಗಳನ್ನು ಯುದ್ಧಸಿದ್ಧತೆಗಾಗಿ ಖರ್ಚುಮಾಡಿದುವು. ಈ ಖರ್ಚು ೧೯೩೭ರ ಖರ್ಚಿಗಿಂತ ೨,೫೦೦,೦೦೦,೦೦೦ ಡಾಲರುಗಳಷ್ಟು ಹೆಚ್ಚಾಗಿದ್ದಿತು. ಪೈಕಿ ಫ್ರಾನ್ಸ್, ಇಂಗ್ಲೆಂಡ, ಜರ್ಮನಿ, ರಶ್ಯ ಮತ್ತು ಅಮೇರಿಕದ ಸಂಯುಕ್ತ ಸಂಸ್ಥಾನಗಳು ಕಳೆದ ವರ್ಷ ೧೩,೫೦೦,೦೦೦,೦೦೦ ಡಾಲರುಗಳನ್ನು ಖರ್ಚುಮಾಡಿದುವು. ಯುದ್ಧ ಸಂಭವಿಸಿದ [illegible] ವರ್ಷದ ದ್ವೇಷ ಸಾಧನೆಗಳಿಂದ ... ಇಷ್ಟು ಹಣವನ್ನು ಈ ರಾಷ್ಟ್ರಗಳು ಇನ್ನಿತರ ಘಟನಾತ್ಮಕ ಕಾರ್ಯಗಳಿಗೆ ವಿನಿಯೋಗಿಸಬಹುದಾಗಿದ್ದಿತು. ಪ್ರಪಂಚವು ಅನ್ನ ಬಟ್ಟೆಗಿಲ್ಲವೆಂದು ತೊಳಲಾಡುತ್ತಿರುವಾಗ ಸರ್ವಾಧಿಕಾರವು ತಮ್ಮ ಕೈಯಲ್ಲಿದೆ ಎಂದು ಕೊಂಡು ಸರಕಾರಗಳು ಈ ರೀತಿ ಹಣದ ದುರ್ವ್ಯಯ ಮಾಡುವುದು, ಅಧಿಕಾರಿಗಳ ಸ್ವೇಚ್ಛಾಪರ ಪ್ರವರ್ತನೆಯನ್ನೂ ಜನತೆಯ ಅಸಹಾಯತೆಯನ್ನೂ ಸೂಚಿಸುತ್ತದೆ.

ಅತಿಶಯೋಕ್ತಿಯಲ್ಲ

ಜನಾಂಗಗಳು ಅಷ್ಟು ಹಣವನ್ನು ಸೈನ್ಯ ಸರಂಜಾಮುಗಳಿಗಾಗಿ ಖರ್ಚು ಮಾಡಿರುವುದೆಂಬುದರಲ್ಲಿ ಅತಿಶಯೋಕ್ತಿಯೇನೂ ಇರುವುದಿಲ್ಲ. ಜನಾಂಗದ ಸಂಘವು ಪ್ರಕಟಿಸಿದ ವರದಿಯಲ್ಲಿ ಕಂಡುಬರುವ ಸಂಖ್ಯೆಗಳನ್ನೇ ಇಲ್ಲಿ ಕೊಟ್ಟಲಾಗಿದೆ. ಅಷ್ಟು ಹಣವನ್ನು ಖರ್ಚುಮಾಡುವುದು ಹೌದೆಂಬುದನ್ನು ಬೇರೆ ಬೇರೆ ಸರಕಾರಗಳೂ ಒಪ್ಪಿವೆ. ಸರಕಾರಗಳೇ ಒಪ್ಪಿದ ಸಂಖ್ಯೆಗಳು ಇವಾಗಿರುವುದರಿಂದ, ನಿಜವಾದ ಖರ್ಚು ಮೇಲೆ ಕೊಟ್ಟಿರುವುದಕ್ಕಿಂತ ಕೆಲವು ಪಾಲು ಹೆಚ್ಚಾಗಿರಬಹುದಲ್ಲದೆ ಕಡಿಮೆಯಾಗಿರುವುದು ಸಂಭವವಲ್ಲ.

ಯುದ್ಧಭಯದ ನಿವೃತ್ತಿ

ಆದರೂ ಇಷ್ಟು ಹಣದ ಖರ್ಚಿನಿಂದ ಯುದ್ಧಭಯದ ಒಳ್ಳೆ ನಿವೃತ್ತಿಯಾಗುತ್ತಿದ್ದರೆ, ಅಷ್ಟರಿಂದಾದರೂ ಸ್ವಲ್ಪ ತೃಪ್ತಿಯಾಗುತ್ತಿತ್ತು, ಪರಂತು ಪರಿಸ್ಥಿತಿಯು ೧೯೩೭ರಲ್ಲಿ ಇದ್ದುದಕ್ಕಿಂತಲೂ ಈಗ ಮತ್ತಷ್ಟು ನಿರಾಶಾಪೂರ್ಣವಾಗಿರುವುದು. ಯೂರೋಪಿನ ರಾಜಕಾರಣದಲ್ಲಿ ಹೊಸ ಹೊಸ ಸಂದಿಗ್ಧಗಳು, ಬಿಕ್ಕಟ್ಟು ಉಂಟಾಗತೊಡಗಿವೆ. ಹಿಟ್ಲರನು ಒಂದೇ ಸವನೇ ಪೂರ್ವಯೂರೋಪದ ಕಡೆಗೆ ಏರಿ ಹೋಗುತ್ತಿದ್ದಾನೆ. ಜೆಕೋಸ್ಲೋವೇಕಿಯವು ಅವನ ದವಡೆಯೊಳಗೆ ಸಿಕ್ಕಿ ನುಚ್ಚುನೂರಾಗಿ ಹೋಯಿತು. ಈಗ ಅವನ ದೃಷ್ಟಿ ಯೂಕ್ರೇನಿಯದ ಮೇಲಿದೆ. ಇತ್ತ ಮುಸಲೋನಿ ಭೂಮಧ್ಯ ಕೆಂಪು ಸಮುದ್ರಗಳ ಮೇಲೆ ತನ್ನ ಪೂರ್ಣಾಧಿಕಾರವನ್ನು ಸ್ಥಾಪಿಸಲಿಕ್ಕೆ ಒಂದಲ್ಲ, ಎರಡಲ್ಲ, ಅನೇಕ ಉಪಾಯಗಳನ್ನು ಹೂಡಿರುವನು. ಆದ್ದರಿಂದ ಯುದ್ಧಭಯದ ನಿವೃತ್ತಿಯಾಗುತ್ತಿರುವುದರ ಬದಲಿಗೆ ಯುದ್ಧಭಯವು ಹೆಚ್ಚುತ್ತಲಿದೆ. ಆಕಾಶವನ್ನು ಯುದ್ಧದ ಕಾರ್ಮೋಡಗಳು ಮುಚ್ಚುವುವು. ಗುಡುಗುಡಿಸುತ್ತಿದೆ, ಮಿಂಚು ಮಿಂಚುತ್ತಿದೆ. ಪ್ರಳಯಾಂತದ ಮಳೆ ಬೀಳಲಿಕ್ಕೆ ಮಾತ್ರ ಬಾಕಿ!

ಮುತ್ಸದ್ದಿತನದ ದಿವಾಳಿ

ಅದ್ದರಿಂದ ಯೂರೋಪ–ಅಮೇರಿಕಗಳ ರಾಜಕಾರಣ ಪಟುಗಳೆನ್ನಿಸಿಕೊಳ್ಳುವವರಲ್ಲಿ ಮುತ್ಸದ್ದಿತನದ ದಿವಾಳಿಯಾಗಿದೆ ಎಂದು ಧಾರಾಳವಾಗಿ ಹೇಳಬಹುದು. ಅವರನ್ನು ಅಷ್ಟು ಉಚ್ಚಸ್ಥಾನಕ್ಕೆ ಏರಿಸಿದ ಜನತೆಯು ಪೂರ್ವಕರ್ಮದ ಫಲವನ್ನು ಉಣ್ಣುವ ದಿನಗಳು ಈಗ ಸಮೀಪವಾಗಿವೆ. ಜನತೆಯು ತನ್ನ ಸರ್ವನಾಶವನ್ನು ಇಚ್ಛಿಸುವುದಿಲ್ಲವಾದರೆ, ಪ್ರಪಂಚದ ಆಗುಹೋಗುಗಳ ಸೂತ್ರವನ್ನು ಈ ಮುತ್ಸದ್ದಿಗಳ ಕೈಯಿಂದ ತಪ್ಪಿಸಿ ಇತರ ಯೋಗ್ಯರ ಕೈಗೆ ಕೊಡುವುದು ಅಗತ್ಯ.

The Canara Industrial & Banking Syndicate Ltd.

(INCORPORATED IN BRITISH INDIA—LIABILITY OF SHAREHOLDERS LIMITED)

Head Office: UDIPI (S. India)

Season Deposits are accepted at 3½ % per annum.

Further particulars on application to any of our thirty-five offices.

ಮಂಗಳೂರು ಸಮಾಚಾರ

ಭಜನೆ

ಪರಮಹಂಸ ಲಡ್ಡು ಭಾವಾಜಿಯವರ ೨೧ನೇ ವಾರ್ಷಿಕೋತ್ಸವದ ನಿಮಿತ್ತ ಮಂಗಳೂರು ಶರವು ಗಣಪತಿ ದೇವಸ್ಥಾನದ ಬಳಿ ಜರಗುವ ಮೂರು ದಿನಗಳ ಅಹೋರಾತ್ರಿ ಭಜನೆಯು ಮಾರ್ಚಿ ತಾ. ೨೯ರಿಂದ ಎಪ್ರಿಲ್ ೧ರ ತನಕ ಜರಗುವುದೆಂದೂ, ಸದ್ಭಕ್ತರೆಲ್ಲರೂ ಸಹಕರಿಸಿ ಪುಣ್ಯಭಾಗಿಗಳಾಗಬೇಕೆಂದೂ, ಭಜನಾಮಂಡಳಿಯ ಕಾರ್ಯನಿರ್ವಾಹಕ ಸಮಿತಿಯವರು ತಿಳಿಸುತ್ತಾರೆ

ಕೆನರಾ ಹೈಲೆಂಡ್-ಟೆನ್ನಿಸ್ ಪಂದ್ಯಾಟ

ಕೆನರಾ ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದವರು ನಡೆಸಿದ ಜಿಲ್ಲಾ ಲೋನ್ ಟೆನ್ನಿಸ್ ಪಂದ್ಯಾಟವು ಕಳೆದ ಸೋಮವಾರ ಮುಕ್ತಾಯವಾಯಿತು ಇದರಲ್ಲಿ ಮದ್ರಾಸಿನ ಹಲವು ಪ್ರಮುಖ ಆಟಗಾರರು ಭಾಗವಹಿಸಿದ್ದರು ಸಿಂಗಲ್ಸ್ ಫೈನಲ್ ಪಂದ್ಯಾಟವು ಕಳೆದ ಶನಿವಾರ ಮದ್ರಾಸಿನ ಆಟಗಾರರಾದ ಶ್ರೀ ಯಸ್ ಶಿವಸ್ವಾಮಿ ಮತ್ತು ಎಸ್. ನಾರಾಯಣರಾಯರೊಳಗೆ ನಡೆದು ಮೊದಲಿನವರೇ ಜಯಶೀಲರಾದರು. ಮಾರನೆ ದಿವಸ ಡಬ್ಬಲ್ಸ್ ಪಂದ್ಯಾಟವು ನಡೆದು ಶ್ರೀ ಗಳಾದ ಮದ್ರಾಸಿನ ಶ್ರೀ ಶಿವಸ್ವಾಮಿ ಮತ್ತು ಪಾರ್ಟನರರು ಜಯಶೀಲರಾದರು ಸೋಮವಾರ ಮಿಕ್ಸೆಡ್ ಡಬ್ಬಲ್ಸ್ ಪಂದ್ಯಾಟವು ನಡೆದು ರಾಮರಾವ್ ಮತ್ತು ಪಾರ್ಟನರರು ಜಯಶೀಲರಾದರು

ಜಿಲ್ಲಾ ಉಪಾಧ್ಯಾಯರ ಗಿಲ್ಡ್

ಜಿಲ್ಲಾ ಉಪಾಧ್ಯಾಯರ ಗಿಲ್ಡಿನ ವಾರ್ಷಿಕ ಮಹಾಸಭೆಯು ಇದೇ ಎಪ್ರಿಲ್ ತಿಂಗಳ ೧ನೇ ತಾರೀಕು ಸಂಜೆ ೫ ತಾಸಿಗೆ ಸರಿಯಾಗಿ ಸ್ಥಳೀಯ ಡಿ ಸಿ ಯಂ. ಶಾಲೆಯಲ್ಲಿ ಜರಗುವುದು

ಬಯಲಾಟ

ಇದೇ ಬರುವ ತಾ. ೨೫ನೇ ಶನಿವಾರ ರಾತ್ರೆ ಜಪ್ಪು ಬಸ್ಸೆಲ್ ಎಂಬಲ್ಲಿ, ಕಟೀಲು ಶ್ರೀ ಮಲ್ಲಿಕಾರ್ಜುನೇಶ್ವರ ಕೃಪಾಪೋಷಿತ ದಶಾವತಾರ ಯಕ್ಷಗಾನ ಮೇಳದವರಿಂದ "ಜಲಂಧರ ಕಾಳಗ" ಎಂಬ ನೂತನವಾದ ಬಯಲಾಟವನ್ನು ಶ್ರೀ ಬಲಿಪ ನಾರಾಯಣ ಭಾಗವತರ ಹಾಡುಗಾರಿಕೆಯೊಡನೆ ಆಡಲಿರುವರು

ಎಲಿಮೆಂಟರಿ ಶಾಲಾಧ್ಯಾಪಕರ ಸಂಘ

ಮಂಗಳೂರು. ಸೆಂಟ್ರಲ್ ಎಲಿಮೆಂಟರಿ ಶಾಲಾಧ್ಯಾಪಕರ ಸಂಘದ ಸಭೆಯೊಂದು ಸ್ಥಳೀಯ ಡಿ ಸಿ ಮಿಶನ್ ಶಾಲೆಯಲ್ಲಿ ತಾ ೧೮ರಂದು ಸಂಜೆ ಅಧ್ಯಕ್ಷರಾದ ಶ್ರೀ. ಯಂ ನೋವಿಂದ ರಾಯರ ಅಧ್ಯಕ್ಷತೆಯಲ್ಲಿ ಜರುಗಿತು ಶ್ರೀ. ಬಿ. ಡಿ ಮಾಧವ ಬಾಳಿಗರವರು ಹೊಸ ತೆರನ ಪ್ರಶ್ನೆಗಳು ಎಂಬ ಕುರಿತು ಭಾಷಣವಿತ್ತ ಬಳಿಕ, ಎಲಿಮೆಂಟರಿ ಶಾಲಾಧ್ಯಾಪಕರ ಸಂಘ ಮತ್ತು ಯೂನಿಯನ್ ಕುರಿತ ರೂಲ್ಸ್‌ಗಳನ್ನು ಬದಲಾಯಿತು ಮಂಗಳೂರು ತಾಲೂಕು ಎಯಿಡೆಡ್ ಶಾಲಾಧ್ಯಾಪಕರ ಯೂನಿಯನ್ನಿನ ಸ್ಥಾಪನೆಯ ಕಾರ್ಯಕ್ಕಾಗಿ ಶ್ರೀ ಗಳಾದ ಬಿ. ಗೋವಿಂದ ರಾವ್, ಶ್ರೀಮತಿ ಡಿ ಸಿ ಡಿಸೋಜ ಮತ್ತು ಮಿಸ್ ಇ. ಡಿ. ಸಿಲ್ವರಿಂದೊಡಗೂಡಿದ ಕಮಿಟಿಯು ಸ್ಥಾಪನೆಯಾಯಿತು. ನಂತರ ಉಪಹಾರ ನಡೆದು ಸಭಾಂತ್ಯವಾಯಿತು.

ವಿಕ್ಟೋರಿಯಾ ವಿದ್ಯಾರ್ಥಿವೇತನ

ವಿಕ್ಟೋರಿಯಾ ವಿದ್ಯಾರ್ಥಿವೇತನವಾದ ತಿಂಗಳೊಂದರ ರೂ. ೧೫ರಂತೆ ೨ ವರ್ಷಗಳ ತನಕ ಸಲ್ಲುವ ಮೌಲ್ಯದ ಸಹಾಯದ ಬಗ್ಗೆ ಪರೀಕ್ಷೆಯೊಂದು ಸ್ಥಳೀಯ ಗವರ್ನ್‌ಮೆಂಟ್ ಕೊಲೇಜಿನಲ್ಲಿ ಜೂನ್ ೨೬ರಿಂದ ಮುಂಜಾನೆ ೧೦ ತಾಸಿಗೆ ಜರಗಲಿದೆ. ೧೬ರಿಂದ ೨೦ರೊಳಗಣ ಪ್ರಾಯದವರಲ್ಲಿ, ಮ್ಯಾಟ್ರಿಕ್ ಪಾಸು ಹೊಂದಿದ ಅಥವಾ ಬಿ ಎ. ಪಾಸುಮಾಡಿದವರಾಗಿದ್ದರೆ, ೨೮ ವರ್ಷಕ್ಕೆ ಕಿರಿದವರು ಪರೀಕ್ಷೆಯಲ್ಲಿ ಭಾಗವಹಿಸಬಹುದು, ಪರೀಕ್ಷೆ ಅರ್ಜಿಗಳು, ನಿಬಂಧನೆಗಳೂ ಕೋರ್ಟು ದಿನಗಳಲ್ಲಿ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ ಒಂದೆರಡಾಣೆ ಬೆಲೆಗೆ ದೊರೆಯುವುದು ಅಲ್ಲದೆ ಪರೀಕ್ಷೆ ಅರ್ಜಿಗಳು ಅವುಗಳಿಗಾಗಿರುವ ಫಾರ್ಮಿನಲ್ಲಿ ಬರೆಯಲ್ಪಟ್ಟು ಜೂನ್ ೧೪ರೊಳಗೆ ಜಿಲ್ಲಾ ಜಡ್ಜರ ಹಸ್ತ ಸೇರತಕ್ಕದೆಂದು ನಮ್ಮ ಜಿಲ್ಲಾ ಜಡ್ಜರು ತಿಳಿಸುತ್ತಾರೆ

ದ. ಕ ಪಂಡಿತ ಸಂಘದ ತೃತೀಯ ವಾರ್ಷಿಕೋತ್ಸವ

ದಕ್ಷಿಣ ಕನ್ನಡ ಪಂಡಿತ ಸಂಘದ ತೃತೀಯ ವಾರ್ಷಿಕೋತ್ಸವವು ಕಳೆದ ತಾ. ೧೯—೩—೩೯ರಲ್ಲಿ ಶ್ರೀ ರಘುನಾಥಯ್ಯ ಸ್ಮಾರಕ ಮಂದಿರದಲ್ಲಿ ಪ್ರಸಿಡೆನ್ಸಿ ಕಾಲೇಜಿನ ನಿವೃತ್ತ ಕನ್ನಡ ಪಂಡಿತರಾದ ಶ್ರೀ ಸಾಬಾಜಿ ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರುಗಿತು

ಹಿಂದಿ ಶಿಕ್ಷಣ

ಇದೇ ಎಪ್ರಿಲ್ ತಿಂಗಳ ತಾರೀಕು ೧ರಿಂದ ಬಿಜೈ ಚರ್ಚ್ ಗರ್ಲ್ಸ್ ಸ್ಕೂಲಿನ ಬಳಿಯಿರುವ ದೀನಬಂಧು ಅನಾಥಾಶ್ರಮದಲ್ಲಿ ಪ್ರತಿನಿತ್ಯ ಸಾಯಂಕಾಲ ಗಂಟೆ ೬-೩೦ರಿಂದ ೮-೩೦ರ ವರೆಗೂ, ಶನಿವಾರ ಮತ್ತು ರವಿವಾರ ಸಾಯಂಕಾಲ ಗಂಟೆ ೩ ೩೦ರಿಂದ ೪ ೩೦ರ ವರೆಗೂ ಧರ್ಮಾರ್ಥವಾಗಿ ಹಿಂದೀ ಕಲಿಸಲಾಗುವುದು ವಿಶೇಷ ಮಾಹಿತಿ ಬಗ್ಗೆ ಶ್ರೀ. ಬಿ ಲಕ್ಷ್ಮಣ ದೇವ ವಿದ್ಯಾರ್ಥಿ, ಬಿಜೈ ಇವರಿಂದ ತಿಳಿದುಕೊಳ್ಳಬಹುದು.

ಹೊಸ ಕಲೆಕ್ಟರ್ ದೊರೆಗಳು

ಖಾನ್ ಬಹದ್ದೂರರು ಸರದಾರ್ ಅಹ್ಮದ್ ಅಲಿ ಸಾಹೇಬ ಬಹದೂರ್‌ರವರು ದಿವಾನ್ ಬಹದೂರು ಎಂ ವಿ ವೆಲ್ಲೋಡಿಯವರ ಸ್ಥಾನದಲ್ಲಿ ಜಿಲ್ಲಾ ಕಲೆಕ್ಟರಾಗಿ ನೇಮಕ ಹೊಂದಿ ಚಾರ್ಜು ವಹಿಸಿದ್ದಾರೆ

ಸಾದರ ಸ್ವೀಕಾರ

1 ವ್ಯಸನದಲ್ಲಿ ಹಿಂದೀ ಪುಸ್ತಕ ಲೇಖಕರು ಶ್ರೀ ಗುರುನಾಥ ಶರ್ಮಾ. ಬೆಲೆ 0—8—0 ಪ್ರಕಾಶಕರು. ದೇಶಿ ರಾಜ್ಯ—ಸಾಹಿತ್ಯ ಮಂದಿರ, ಮದ್ರಾಸ. ಇದರಲ್ಲಿ ಲೇಖಕರು ಪ್ರಸ್ತುತದ ಐತಿಹಾಸಿಕ ಪರಿಸ್ಥಿತಿಯನ್ನೂ ಈಗ ವ್ಯಸನದ ವಿದ್ಯೆಯಲ್ಲಿಯೂ ಶೃಂಗಾರಿಕೆಯಲ್ಲಿಯೂ ಮಾನವ ಸ್ಥಾನವಾಗಿರುವುದರ ಕುರಿತು ಪ್ರತಿಯೊಬ್ಬನು ತಿಳಿಯುವ ರೀತಿಯಲ್ಲಿ ವಿವರಿಸಿರುತ್ತಾರೆ ವಾಚಕರಿಗೆ ವ್ಯಸನದ ವಿಷಯ ತಿಳಿದುಕೊಳ್ಳಲು ಇದು ಬಹಳ ಸಹಾಯಕವಾಗುವ ರೀತಿಯಲ್ಲಿ ಲೇಖಕರು ಬರೆದಿರುವುದು ಶ್ಲಾಘ್ಯವಾಗಿದೆ

2 ಸಚಿತ್ರ ಭಾರತ ಯಾತ್ರಾ (ಉತ್ತರ ಭಾರತ ಯಾತ್ರೆ) ಲೇಖಕರು. ಶ್ರೀ ವ. ಕೃ ಭಾರದ್ವಾಜ ಪ್ರಕಾಶಕರು ಭಾರತ ಯಾತ್ರಿಕ ಸಂಸ್ಥೆ, ಮದ್ರಾಸು ಇದರಲ್ಲಿ ಲೇಖಕರು ವಿಸ್ತಾರವಾದ ಭರತ ಖಂಡದಲ್ಲಿ ಪ್ರವಾಸ ಮಾಡುತ್ತಿರುವಾಗ ಸಿಕ್ಕುವ ಪುಣ್ಯಕ್ಷೇತ್ರಗಳ ಇತಿಹಾಸಪ್ರಸಿದ್ಧ ನಗರಗಳ ವರ್ಣನೆಯನ್ನು ಬಹಳ ಅಂದವಾದ ರೀತಿಯಲ್ಲಿ ವಿವರಿಸಿರುವರು ಇದು ಯಾತ್ರಿಕರಿಗೆ ಮತ್ತು ಪ್ರವಾಸಿಗರಿಗೆ ಬಹಳ ಉಪಯೋಗಕರವಾದ ದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ ಶ್ರೀ ರಾಮಮೋಹನ ಕಂಪೆನಿಯವರ ಪ್ರಯಾಣ ಕ್ರಮವನ್ನನುಸರಿಸಿ ಉತ್ತರ ಹಿಂದೂಸ್ಥಾನದ ಮುಖ್ಯ ಮುಖ್ಯ ಕ್ಷೇತ್ರಗಳಾದ ಮಥುರಾ, ಬೃಂದಾವನ, ದಿಲ್ಲಿ, ಕುರುಕ್ಷೇತ್ರ, ಚಿತ್ರಕೂಟ, ಸಾರನಾಥ ಮೊದಲಾದ ಕ್ಷೇತ್ರಗಳ ವಿಷಯ ಆಧಾರ ಸಹಿತ ವರ್ಣಿಸಿರುವುದು ಸ್ತುತ್ಯವಾಗಿರುತ್ತದೆ.

ತಾಲೂಕು ಸಮಾಚಾರ

ಫರಂಗಿಪೇಟೆ

ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ತಾ ೧೭—೩—೩೯ರಲ್ಲಿ ಕೊಡ್ಮಣೆಗುರು ಹಾ ಎ ಶಾಲೆಯ ಮೆನೇಜರ್ ಶ್ರೀ ಡಿ. ರಘುನಾಥರಾಯರ ಅಧ್ಯಕ್ಷತೆಯಲ್ಲಿ ಶ್ರೀ ರಾಮಾ ಹಾ ಎ. ಶಾಲೆಯಲ್ಲಿ ಜರಗಿತು. ಸಂಘದ ಕಾರ್ಯದರ್ಶಿಯವರಿಂದ ಗತಮೀಟಿಂಗಿನ ಪ್ರೊಸೀಡಿಂಗ್ಸು ಓದೋಣವಾಯಿತು. ನಂತರ ಸದರಿ ಶ್ರೀ ರಾಮಾ ಹಾ. ಎ. ಶಾಲೆಯ ಅಧ್ಯಾಪಕ ಶ್ರೀ ಬಿ ಶ್ರೀನಿವಾಸರಾಯರು ೫ನೇ ತರಗತಿಗೆ ಇಂಗ್ಲಿಷಿನಲ್ಲಿ ಒಂದು ಮಾದರಿ ಪಾಠವನ್ನೂ, ಅದೇ ಶಾಲೆಯ ಹೆಡ್‌ಮಾಸ್ಟರ್ ಶ್ರೀ ಎ ರಾಮಚಂದ್ರ ಹೆಗ್ಡೆಯವರು ಒಂದನೇ ತರಗತಿಗೆ ಕನ್ನಡ ಕಥೆಯಲ್ಲಿ ಒಂದು ಮಾದರಿ ಪಾಠವನ್ನೂ ಕೊಟ್ಟರು ಪಾಠಗಳ ವಿಮರ್ಶೆ ಮನೋರಂಜನೆಗಳು ನಡೆದು ಅಧ್ಯಕ್ಷರ ಸಂದರ್ಭೋಚಿತವಾದ ಭಾಷಣದೊಂದಿಗೆ ಸಭೆಯು ಮುಕ್ತಾಯಗೊಂಡಿತು

ಇಲ್ಲಿಯ ಶ್ರೀ ರಾಮಾ ಹಯರ್ ಎಲಿಮೆಂಟರಿ ಶಾಲೆಯ ೨೨ನೆಯ ವರ್ಷಾಚರಣೆಯು ತಾ ೩೧-೩-೩೯ನೇ ರಾತ್ರಿ ಸಮಯದಲ್ಲಿ ದಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನ ವೈಸ್ ಪ್ರಸಿಡೆಂಟರಾದ ಶ್ರೀ ನರಸಿಂಹ ರಾಮರಾವ್ ಬಿ ಎ, ಬಿ ಎಲ್, ಇವರ ಅಧ್ಯಕ್ಷತೆಯಲ್ಲಿ ಜರಗುವುದು

ಕಾರ್ಕಳ

ಸ್ಥಳೀಯ ಆರ್ಯಸಮಾಜದಲ್ಲಿ ಕಳೆದ ತಾ ೧೨ರ ದಿನ ಬೆಳಗ್ಗೆ ನಡೆದ ಸಾಪ್ತಾಹಿಕ ಸಭೆಯಲ್ಲಿ ಶ್ರೀ ಕೇಶವ ರಾಮಚಂದ್ರ ಶೆಣೈಯವರು ವಚನೇನ ತತ್ ಅದರಿಂದ ಜೀವನದ ಮೇಲೆ ಪರಿಣಾಮ ಎಂಬ ಕುರಿತು ಒಂದು ಬೋಧಪ್ರದವಾದ ಭಾಷಣವನ್ನು ಕೊಟ್ಟರು.

ಇಲ್ಲಿ ಸಬ್ ಮೆಜಿಸ್ಟ್ರೇಟರಾಗಿದ್ದ ಶ್ರೀ ಯಂ ಜಿ ಅರಾಹ್ಮಾ ಬಿ ಎ, ಬಿ ಯಲ್ ರವರು ಬಂಟ್ವಾಳಕ್ಕೆ ಡಿಪ್ಯೂಟಿ ತಹಸಿಲ್ದಾರರಾಗಿ ವರ್ಗಹೊಂದಿ ಅವರ ಸ್ಥಾನದಲ್ಲಿ ಶ್ರೀ ಬಿ ನಾರಾಯಣ ಹೆಗ್ಡೆ ಬಿ ಎ ರವರು ಇಲ್ಲಿ ಸಬ್ ಮೆಜಿಸ್ಟ್ರೇಟರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಕಳೆದ ನಾಲ್ಕು ತಿಂಗಳಿನಿಂದ ಇಲ್ಲಿ ಚಲಚಿತ್ರಗಳ ಪ್ರದರ್ಶನಮಾಡಿ ಈಗ ಬೇರೆ ಕಡೆಗೆ ಹೊರಟು ಹೋಗಿರುವ ದಿ ಕ್ರೌನ್ ಟೂರಿಂಗ್ ಟಾಕೀಸ್ ನಂ 5 ರವರು ಕಾರ್ಕಳ ದಲಿತೋದ್ಧಾರ ಪ್ರದರ್ಶನವನ್ನು ಇದಲಿಕ್ಕೆ ಪಂಚಾಯತ ಬೋರ್ಡಿಗೆ ೨ ರೂಪಾಯಿಗಳ ಧನಸಹಾಯ ಮಾಡಿರುವರು.

ಕಾರ್ಕಳ ಬೋರ್ಡ್ ಹೈಸ್ಕೂಲಿನ ಈ ವರ್ಷದ ಯಸ್. ಯಸ್ ಯಲ್ ಸಿ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯ ವೃಂದವನ್ನು ಉಪಹಾರ ಸತ್ಕಾರದಿಂದ ಸಂತೋಷಪಡಿಸಿ, ಒಂದು ಗ್ರೂಪ್ ಫೋಟೋವನ್ನು ತೆಗೆದರು. ಆ ಸಂದರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯರು ಒಂದು ಸಂದರ್ಭೋಚಿತ ಭಾಷಣವನ್ನು ಕೊಟ್ಟು ವಿದ್ಯಾರ್ಥಿಗಳಿಗೆ ಅವರ ಭವಿಷ್ಯ ಜೀವನದಲ್ಲಿ ಪೂರ್ಣ ಸಫಲತೆಯನ್ನು ಕೋರಿದರು.

ಕಾರ್ಕಳಗ್ರಾಮ ಕಾಂಗ್ರೆಸ ಕಮಿಟಿಯ ಚುನಾವಣೆಗಳು ತಾ ೩೦—೩—೩೯ರ ದಿನ ಸಾಯಂಕಾಲ ೫ಗಂಟೆಗೆ ಬೋರ್ಡ್ ಮೈನ ಎಲಿಮೆಂಟರಿ ಶಾಲೆಯಲ್ಲಿ ನಡೆಯುವುದಾಗಿ ಪ್ರಕಟವಾಗಿದೆ ೯ ಸ್ಥಾನಗಳಿಗೆ ಚುನಾವಣೆ ನಡೆಯಬೇಕು. ಉಮೇದುವಾರರು ಸತತ ಖಾದಿಧಾರಿಗಳಾಗಿರಬೇಕು ಪರಂತು ಚುನಾವಣೆಯ ದಿನವು ರಾಮನವಮಿಯಾಗಿರುವುದರಿಂದ ಅನೇಕ ಹಿಂದೂಮತದವರಿಗೆ ಅದರಲ್ಲಿ ಭಾಗವಹಿಸಲಿಕ್ಕೆ ಅನಾನುಕೂಲವಾಗಬಹುದೆಂದೂ ಚುನಾವಣೆಯ ತಾರೀಕನ್ನು ಬದಲಾಯಿಸಬೇಕೆಂದೂ ಜನರು ಹೇಳಿಕೊಳ್ಳುವುದರಲ್ಲಿ ನ್ಯಾಯವು ತೋರುವುದರಿಂದ ಚುನಾವಣಾ ಅಧಿಕಾರಿಗಳು ಹೀಗೆ ಮಾಡುವರೆಂದು ನಂಬಲಾಗಿದೆ

ನಿಜಾಮ ಹೈದರಾಬಾದದ ಹಿಂದೂ ಸತ್ಯಾಗ್ರಹಿಗಳಿಗೆ ಧನಸಹಾಯವಾಗಬೇಕೆಂದು ವಿನಂತಿಯಾದ ಮೇರೆಗೆ ಶ್ರೀ ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿಯವರ ಮೂಲಕ ಸುಮಾರು ೩೪ ರೂಪಾಯಿ, ಶ್ರೀ ಮಾಧವ ರಾಮಚಂದ್ರ ಶೆಣೈಯವರಿಂದ ೧೦ ರೂಪಾಯಿ ಮತ್ತು ಇತರ ಕೆಲವು ಚಿಲ್ಲರೆ ವಂತಿಗೆಗಳು ಇಲ್ಲಿ ಆಗಿವೆ.

ಇಲ್ಲಿಂದ ಮಂಗಳೂರಿಗೆ ವರ್ಗಹೊಂದಿದ ಕಾರ್ಕಳ ರೇಂಜಿನ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ ಶ್ರೀಯುತ ಪಿ ಸುಬ್ಬಯ್ಯ ಎಂ ಎ ಎಲ್ ಟಿ ಯವರಿಗೆ ವಿದಾಯವನ್ನೀಯುವ ಮತ್ತು ಅವರ ಸ್ಥಾನದಲ್ಲಿ ವರ್ಗವಾಗಿ ಬಂದ ಶ್ರೀ ಎಸ್ ಸುಬ್ಬರಾವ್ ಬಿ ಎ ಎಲ್ ಟಿ ಯವರಿಗೆ ಸ್ವಾಗತ ವನ್ನೀಯುವ ಒಂದು ಸಮಾರಂಭವು ತಾರೀಕು ೧೧—೩—೩೯ರ ದಿನ ಶ್ರೀ ವೆಂಕಟ್ರಮಣ ಸ್ವಾಮಿಯವರ ಎಲಿಮೆಂಟರಿ ಶಾಲೆಯಲ್ಲಿ ಜರಗಿ ಟೀಪಾರ್ಟಿ ಉಪಹಾರ, ಸಂದರ್ಭೋಚಿತ ಭಾಷಣ ಮೊದಲಾದ ಕಾರ್ಯಕ್ರಮಗಳಿಂದ ಬಹಳ ವಿಜೃಂಭಣೆಯಿಂದ ಜರಗಿತು.

ಪಂಡಿತ ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

ಎಳೆಯ ಕ್ಷಯ ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ಮಕ್ಕಳು ಆರೋಗ್ಯದಿಂದ ಬಲಿಷ್ಠರಾಗುವಂತೆ ಮಾಡುವುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು.

ಆಯುರ್ವೇದಾಶ್ರಮ :: ೯, ಮದರಾಸು

ಸ್ಟಾಕಿಸ್ಟರು.

ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಪಂಡಿತ ಪಂತರ ಠರಾವಿನ ವಿಚಾರದಲ್ಲಿ ಸೋಶಿಯಲಿಸ್ಟ್ ಪಕ್ಷದ ಧೋರಣೆಯ ಸ್ಪಷ್ಟೀಕರಣ

ತಾಟಸ್ಥ್ಯ ಧೋರಣೆ ವಹಿಸಲು ಕಾರಣವೇನು?

ಸೋಶಿಯಲಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ. ಜಯಪ್ರಕಾಶ ನಾರಾಯಣರ ಹೇಳಿಕೆ.

ತ್ರಿಪುರಿ ಕೊಂಗ್ರೆಸ್‌ದಲ್ಲಿ ಮಹಾಧಿವೇಶನದ ವೇಳೆ ಶ್ರೀ. ಪಂತರು ತಂದ ಠರಾವನ್ನು ಓಟಿಗೆ ಹಾಕುವಾಗ ಕೊಂಗ್ರೆಸ್ ಸೋಶಿಯಲಿಸ್ಟ್ ಪಕ್ಷವು ತಾಟಸ್ಥ್ಯ ಧೋರಣೆ ವಹಿಸಿತು ಆ ವಿಚಾರವಾಗಿ ಪಕ್ಷವನ್ನು ಅವರಿವರು ಟೀಕಿಸಿದರು. ಅದನ್ನು ಕಂಡು ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಜಯಪ್ರಕಾಶ ನಾರಾಯಣರು ಈ ಕೆಳಗಿನ ಹೇಳಿಕೆಯನ್ನು ಪ್ರಕಟಿಸಿರುವರು-ಪಂತರ ಠರಾವು ಬಿದ್ದುಹೋಗುವುದರಿಂದಾಗಿ ಕೊಂಗ್ರೆಸ್ಸಿನಿಂದ ಮಹಾತ್ಮರು ಹಾಗೂ ಅವರ ಅನುಯಾಯಿಗಳನ್ನು ಹೊರಗೆ ಒತ್ತಿದಂತಾಗುವುದು ಹಾಗೆ ಮಾಡುವುದಕ್ಕೆ ನಾವು ಸಿದ್ಧರಿಲ್ಲ. ಹಾಗೆ ಮಹಾತ್ಮರನ್ನು ಮತ್ತು ಅವರ ಅನುಯಾಯಿಗಳನ್ನು ಕೊಂಗ್ರೆಸ್ಸಿನಿಂದ ಹೊರದಬ್ಬಲು ಮನಮಾಡಿದವರೊಡನೆ ಸಹಕರಿಸಲು ನಮಗೆ ಮನಸ್ಸಿಲ್ಲ ಆದುದರಿಂದಾಗಿ ನಾವು ಆ ಠರಾವನ್ನು ವಿರೋಧಿಸಲಿಲ್ಲ ರಾಷ್ಟ್ರೀಯ ಚಳವಳಿವು ಸಂಬವಿಸುವ ಚಿಹ್ನೆಯಿದೆ ನಾವೆಲ್ಲ ಆ ರೀತಿಯ ಯೋಚನೆಯ. ಶ್ರೀ ಕಳ್ಳೀನರಾಗಿರುವ ಈ ದಿನಗಳಲ್ಲಿ, ಅತಿ ಮಹತ್ವದ ಪರಿಣಾಮಕಾರಿಯಾದ ಬಿಕ್ಕಟ್ಟು ಉಂಟಾಗಲಿರುವ ಪ್ರಕೃತ ಪರಿಸ್ಥಿತಿಯಲ್ಲಿ ಮಹಾತ್ಮರು ಹಾಗೂ ಅವರ ಅನುಯಾಯಿಗಳು ಕೊಂಗ್ರೆಸ್ಸಿನಿಂದ ಹೊರ ಹೋಗುವುದೆಂದರೆ ತುಂಬ ಅನಾಹುತಕ್ಕೆ ಕಾರಣವಾದೀತು. ಆದುದರಿಂದ ಈಗ ನಮ್ಮೊಳಗೆ (ಕೊಂಗ್ರೆಸ್ಸಿನಲ್ಲಿ) ಒಕ್ಕಟ್ಟು ಇರುವುದು ಅತ್ಯಗತ್ಯವಾಗಿದೆ

ಇಷ್ಟು ಮಾತ್ರವಲ್ಲ, ಈ ಠರಾವು ಅಧ್ಯಕ್ಷರ ಮೇಲೆ ಅವಿಶ್ವಾಸ ಸೂಚಿಸುವ ತೆರನದಲ್ಲವೆಂದು ಶ್ರೀ ಪಂತರೇ ಹೇಳಿದುತ್ತಾರಾದುದರಿಂದ ನಾವು ಈ ಠರಾವನ್ನು ವಿರೋಧಿಸಲಿಲ್ಲ ಕೊಂಗ್ರೆಸು ಮತ್ತು ದೇಶದ ಹಿತದೃಷ್ಟ್ಯಾ ಕೊಂಗ್ರೆಸ್ಸಿನ ಕಾರ್ಯಕಾರಿ ಮಂಡಳಿಯು ಮಹಾತ್ಮರ ಇಚ್ಛೆಗೆ ಅನುಗುಣವಾಗಿ ರಚಿಸಲ್ಪಡಬೇಕೆಂದೂ ಹಾಗೆ ವರ್ಕಿಂಗ್ ಕಮಿಟಿಯವರ ಮೇಲೆ ಮಹಾತ್ಮರಿಗೆ ಸಂಪೂರ್ಣ ವಿಶ್ವಾಸವಿರುವಂತಾಗಬೇಕೆಂದೂ ಆ ಠರಾವಿನಲ್ಲಿ ಸೂಚಿಸಲ್ಪಟ್ಟಿರುವ ಅಭಿಪ್ರಾಯವನ್ನು ನಾವು ಸಂಪೂರ್ಣ ಅನುಮೋದಿಸುತ್ತೇವೆ. ಆದುದರಿಂದ ಸಹ ನಾವು ಠರಾವನ್ನು ವಿರೋಧಿಸಲಿಲ್ಲ

ಬಿಕ್ಕಟ್ಟಿನ ಸಂದರ್ಭದಲ್ಲಿ ಅಂಥಾ ಬಿಕ್ಕಟ್ಟನ್ನು ಬಗೆಹರಿಸಿ ಕೊಂಗ್ರೆಸನ್ನು ಮತ್ತು ದೇಶವನ್ನು ಮುನ್ನಡೆಸಿಕೊಂಡು ಹೋಗಲು ಮಹಾತ್ಮರ ಹೊರತು ಬೇರಾರ ಕೈಲೂ ಸಾಧ್ಯವೇ ಇಲ್ಲ ಎಂಬ ತಾತ್ಪರ್ಯವೂ ಆ ಠರಾವಿನಲ್ಲಿ ಸೂಚಿಸಲ್ಪಟ್ಟಿದೆ ಈ ಅಭಿಪ್ರಾಯವು ನನಗೆ ಅಷ್ಟು ರುಚಿಸುವುದಿಲ್ಲ ಆದುದರಿಂದ ನಾವು ಠರಾವಿಗೆ ಅನುಕೂಲ ಮತ ಕೊಡಲಾಗಲಿಲ್ಲ

"ಹಾಗಾದರೆ ನೀವು (ಅಂದರೆ ನಿಮ್ಮ ಪಕ್ಷವು) ಸಬ್ಜೆಕ್ಟ್ ಕಮಿಟಿಯಲ್ಲಿ ಠರಾವನ್ನು ಯಾಕೆ ವಿರೋಧಿಸಿದಿರಿ? ಎಂಬ ಪ್ರಶ್ನೆಗೆ ಉತ್ತರವಾಗಿ ಶ್ರೀ ಜಯಪ್ರಕಾಶರು ಹೀಗೆ ಹೇಳುತ್ತಾರೆ ಅಧ್ಯಕ್ಷರ ಚುನಾವಣೆಯಲ್ಲಿ ನಾವು ಇತರರೊಡನೆ ಸಹಕರಿಸಿ ಶ್ರೀ ಸುಭಾಸಬಾಬುಗಳಿಗೆ ಓಟು ಕೊಟ್ಟಿದ್ದೆವು ಆದರೆ ಆ ಮೇಲಿನ ವಿದ್ಯಮಾನಗಳನ್ನು ಪರಿಶೀಲಿಸಿ ನೋಡಿದಲ್ಲಿ, ಈ ಠರಾವನ್ನು ವಿರೋಧಿಸುವುದರಿಂದಾಗಿ ವಿನಾಶಕಾರಿ ಪರಿಣಾಮವಾಗುವುದೆಂದೂ ಅಂತಹ ಅನಾಹುತವನ್ನು ತಂದುಕೊಳ್ಳುವುದರಲ್ಲಿ ನಾವೂ ಸಹಭಾಗಿಗಳಾಗುವಂತಾಗುವೆವೆಂದು ಮನಗಂಡವರಾಗಿ ನಾವು ತಾಟಸ್ಥ್ಯ ಧೋರಣೆ ವಹಿಸಿದೆವು ಅದುಮಾತ್ರವಲ್ಲ ಕೊಂಗ್ರೆಸಿನೊಳಗೆ ಒಕ್ಕಟ್ಟು ಬೇಕೆಂಬುದೇ ನಮ್ಮ ಉತ್ಕಟೇಚ್ಛೆಯಾಗಿದೆ"

ತ್ರಿಪುರಿಯ ನಿರ್ಧಾರವನ್ನು ಆಚರಣೆಯಲ್ಲಿ ತರುವುದೆಂದು?

ಮಹಾತ್ಮರ ಇಚ್ಛೆಯ ಮೇರೆಗೆ ವರ್ಕಿಂಗ್ ಕಮಿಟಿಯನ್ನು ರಾಷ್ಟ್ರಾಧ್ಯಕ್ಷರು ನಿರ್ಮಿಸಬೇಕೆಂದು ತ್ರಿಪುರಿಯಲ್ಲಿ ಕೊಂಗ್ರೆಸು ನಿರ್ಧರಿಸಿದೆಯಷ್ಟೆ. ಆದರೆ ಆ ನಿರ್ಧಾರದಂತೆ ಇನ್ನೂ ಕಾರ್ಯಭಾಗವು ಅಧ್ಯಕ್ಷರಿಂದ ನಡೆಸಲ್ಪಟ್ಟಿಲ್ಲ. ಅಧ್ಯಕ್ಷರ ಅನಾರೋಗ್ಯವೂ ಇದಕ್ಕೆ ಒಂದು ಕಾರಣವಾಗಿದೆ

ತ್ರಿಪುರ ನಿರ್ಧಾರವನ್ನು ಕಾರ್ಯರೂಪದಲ್ಲಿ ತರುವ ವಿಚಾರದಲ್ಲಿ ಶ್ರೀ ಬೋಸರು ಮಹಾತ್ಮರೊಡನೆ ಯಾವ ಪತ್ರವ್ಯವಹಾರವನ್ನು ಇಷ್ಟರ ವರೆಗೆ ನಡೆಸಿಲ್ಲವೆಂದು ತಿಳಿ[illegible]ಬರುತ್ತದೆ

ರಾಷ್ಟ್ರಪತಿ[illegible] ಸ್ವ[illegible] ದನ್ನು ಕಂಡು [illegible] ಸದಸ್ಯರು ೨೫ ಮಂದಿ ರಿಕ್ವಿಸಿಶನ್ ನೋಟೀಸು ಕೊಟ್ಟು ಸಭೆ ಕರೆಸಬೇಕೆಂದು ಕೇಳಿಕೊಂಡು ಆ ಸಭೆಯಲ್ಲಿ ವರ್ಕಿಂಗ್ ಕಮಿಟಿಯನ್ನು (ಮಹಾತ್ಮರ ಇಚ್ಛೆ ಮೇರೆಗೆ) ರಾಷ್ಟ್ರಪತಿಗಳು ರಚಿಸುವಂತೆ ಕೇಳಿಕೊಳ್ಳಲಾಗಬೇಕೆಂದ ಅಭಿಪ್ರಾಯವಿದೆ.

ಆದರೆ ಈ ರೀತಿ ನೋಟೀಸು ಕೊಡಲು ಒಂದು ವಾರ ಕಳೆಯ ಬೇಕಾದು. ಮಹಾತ್ಮರು ತಿಳಿಸಿರುವದು ರಾಷ್ಟ್ರಪತಿಗಳು ಅಷ್ಟರೊಳಗೆ ವರ್ಕಿಂಗ್ ಕಮಿಟಿಯನ್ನು ರಚಿಸದಿದ್ದರೆ ಆ ಮೇಲೆ ನೋಟೀಸು ಕೊಡುವ ವಿಚಾರದ ಕಡೆಗೆ ಗಮನ ಕೊಡುವುದು ಸಮಂಜಸವೆಂದು ಮಹಾತ್ಮರ ಅಭಿಪ್ರಾಯವಿದೆ ರಾಷ್ಟ್ರಪತಿಗಳು ಮಹಾತ್ಮರನ್ನು ಕೇಳದೆ ಮಹಾತ್ಮರು ತಾವಾಗಿ ಮುಂದೆ ಬಂದು (ವರ್ಕಿಂಗ್ ಕಮಿಟಿರಚಿಸುವ ವಿಚಾರದಲ್ಲಿ) ಸಲಹೆ ಕೊಡುವುದಕ್ಕೆ ಸಿದ್ಧರಿಲ್ಲವೆಂದೂ ತಿಳಿದುಬರುತ್ತದೆ

ವರ್ಕಿಂಗ್ ಕಮಿಟಿಯಲ್ಲಿ ಏಕಾಭಿಪ್ರಾಯವನ್ನುಳ್ಳ ಧುರೀಣರೇ ಸೇರಿಕೊಳ್ಳಬೇಕೆಂದು ಪಂಡಿತ ಜವಾಹರಲಾಲರೂ ಅಭಿಪ್ರಾಯ ಕೊಟ್ಟಿದ್ದಾರೆ

ಪ್ರಕೃತದ ರಾಜಕೀಯ ವಿದ್ಯಮಾನಗಳ ವಿಚಾರ ತಮ್ಮ ಅಭಿಪ್ರಾಯ ಹಾಗೂ ನಿಲಿಯ ವಿಚಾರವಾಗಿ ಮಹಾತ್ಮರೊಡನೆ ಸುದೀರ್ಘಕಾಲ ಪಂಡಿತಜೀಯವರು ಮಾತುಕತೆ ನಡೆಸಿರುವರೆಂದು ವಾರ್ತೆ ಬಂದಿದೆ.

ಮಹಾತ್ಮರು ತಮ್ಮ ಗಡಿನಾಡಿನ ಪ್ರವಾಸ ಕಾರ್ಯಕ್ರಮವನ್ನು ಮುಂದೆಹಿಸಿಟ್ಟಿರುವರು ಗಡಿನಾಡಿನ ಪರಿಸ್ಥಿತಿಯನ್ನು ಶ್ರೀಮತಿ ಮೀರಾಬೆನ್ ಅವರುಬಂದು ಗಾಂಧಿಜೀಗೆ ತಿಳಿಸಿರುವರು.

ವಿಷ್ಣುದತ್ತ ನಗರದಲ್ಲಿ ಮೆರವಣಿಗೆ
ವಿಷ್ಣುದತ್ತ ನಗರದಲ್ಲಿ ರಾಷ್ಟ್ರಪತಿಗಳ ರಥವನ್ನು [illegible]

ದಿವಂಗತ ವಿಠಲಭಾಯಿ ಪಟೇಲರ ನಿಧಿಯ ವಿನಿಯೋಗ

ಸರ್ದಾರ ವಲ್ಲಭಭಾಯಿ ಪಟೇಲರಣ್ಣಂದಿರಾದ ವಿಠಲಭಾಯಿ ಪಟೇಲರು ಸಾಧಾರಣ [illegible] ಲಕ್ಷ ರೂಪಾಯಿ ತಮ್ಮ ಆಸ್ತಿಯನ್ನು ಭರತಖಂಡದ ರಾಜಕೀಯಾಭಿವೃದ್ಧಿಗಾಗಿ ವಿನಿಯೋಗಿಸಲ್ಪಡಬೇಕೆಂದ [illegible] ಮರಣ ಶಾಸನವನ್ನು ಬರೆದಿದ್ದರು. ಮತ್ತು ಮುಖ್ಯವಾಗಿ ಹೊರದೇಶದಲ್ಲಿ ಪ್ರಚಾರ ಕಾರ್ಯ[illegible] ಇದನ್ನು ಉಪಯೋಗಿಸಬೇಕೆಂದು ಸೂಚಿಸಿದ್ದ[illegible] ಈ ಶಾಸನವು [illegible] ವ[illegible]ಲ್ಲವೆಂದು ಪಟೇಲರ [illegible] ದಾರರ ಬೊಂಬಾಯಿ ನ್ಯಾಯಸ್ಥಾನದಲ್ಲಿ ದಾವೆ ಹೂಡಿ [illegible] ಸುಭಾಷರಿಗೆ ಆ ಆಸ್ತಿಯಲ್ಲಿ ಹಕ್ಕಿಲ್ಲ ನ್ಯಾಯವಾದ ಹಕ್ಕು ಪಟೇಲರಿಗೆ ಎಂದು ಕೋರ್ಟಿನಲ್ಲಿ ತೀರ್ಮಾನಿಸಿದರು.

ಜೈಲಿನೊಳಗಿಂದ ಜಮುನಾಲಾಲರ ನಿಷೇಧ

ಜಯಪುರದಲ್ಲಿ ಭಾಯೀ ಪರಮಾನಂದರ ನಿಷ್ಫಲ ಪ್ರಯತ್ನ

ಜಯಪುರದ ಜನರ ಮೇಲೆ ಕಾಂಗ್ರೆಸಿನ ಪ್ರಭಾವವು ಎಷ್ಟು ಹೆಚ್ಚಿರುವುದೆಂದರೆ ಕಾಂಗ್ರೆಸನ್ನು ನಗೆಗೀಡ ಮಾಡಲಿಕ್ಕೆ ಒಂದ ಭಾಯಿ ಪರಮಾನಂದರ ಭಾಷಣಗಳನ್ನು ಕೇಳಲಿಕ್ಕೆ ಜನರು ಕೂಡಿಬರುವುದೇ ಕಷ್ಟವಾಯಿತು ಎಲ್ಲೆಲ್ಲಿ ಸಭೆಗಳಾಗಿ ಅವರು ಭಾಷಣಮಾಡಲಿಕ್ಕೆ ಪ್ರಯತ್ನಿಸಿದರೋ, ಅಲ್ಲಲ್ಲಿ ಗಲಭೆ ಗಲಾಟೆಗಳಾಗಿ ಸಭೆಗಳು ಮುಗಿದುವು ಹಿಂದುಗಳ ಸಂಘಟಿತರಾಗಬೇಕೆಂದು ಹೇಳುತ್ತ ಅವರು ಕಾಂಗ್ರೆಸಿನ ಕಾರ್ಯಕ್ರಮಗಳನ್ನು ಟೀಕಿಸತೊಡಗಿದೊಡನೆ, ಜನರ ಗುಲ್ಲಿನಿಂದ ಅವರಿಗೆ ಮಾತನಾಡುವುದೇ ಕಷ್ಟವಾಯಿತು. ಜನರ ಮಹಾತ್ಮಾಗಾಂಧೀಕೀ ಜೈ, ಪ್ರಜಾಮಂಡಳಿಕೀ ಜೈ ಎಂದ ಜಯಜಯಕಾರ ಹಾಕುತ್ತ ಮನೆಗೆ ತೆರಳಿದರು.

ಸನಾತನಿಗಳ ಅಪಪ್ರಚಾರ

ಪರಮಾನಂದರಂತೆ ಕಾಶಿಯ ಮಹಾರ್ಕ್ರಮ ಸ್ವರಾಜ್ಯ ಸಂಘದವರೂ ಜಯಪುರಕ್ಕೆ ಆಮಂತ್ರಿತರಾಗಿ ಕಾಂಗ್ರೆಸಿನ ಅಪಪ್ರಚಾರ ಮಾಡಲು ನೋಡಿದರು. ಆದರೆ ಅವರಿಗೂ ಪರಮಾನಂದರ ಗತಿಯೇ ಪ್ರಾಪ್ತವಾಯಿತು. ಹಿಂದೂಸಂಸ್ಥಾನಗಳಲ್ಲಿ ಜವಾಬುದಾರಿ ಸರಕಾರಗಳನ್ನು ಸ್ಥಾಪಿಸಲಿಕ್ಕೆ ಕಾಂಗ್ರೆಸು ಮಾಡುವ ಪ್ರಯತ್ನಗಳನ್ನು ನಿಷ್ಫಲಮಾಡಬೇಕೆಂಬುದೇ ಈ ಸನಾತನಿಗಳ ವಿಚಾರವಾಗಿದೆ. ಅದ್ದರಿಂದ ಅವರ ಪ್ರತಿನಿಧಿಗಳು ಜಯಪುರದಲ್ಲಿ ಮಾತ್ರವಲ್ಲ, ಇತರ ಹಿಂದೂ ಸಂಸ್ಥಾನಗಳಲ್ಲಿಯೂ ಇದೇ ಉದ್ದೇಶದಿಂದ ತಿರುಗುತ್ತಿರುವರಂತೆ ಪ್ರಾಯಶಃ ಮುಸಲ್ಮಾನ ಸಂಸ್ಥಾನಗಳಲ್ಲಿ ಮುಸ್ಲಿಮ್ ಲೀಗಿನ ಪ್ರತಿನಿಧಿಗಳು ಕಾಂಗ್ರೆಸಿನ ವಿರುದ್ಧ ಪ್ರಚಾರ ಮಾಡುತಿದ್ದಿರಬಹುದು ಸಂಸ್ಥಾನಗಳಲ್ಲಿ ಜವಾಬುದಾರಿ ಸರಕಾರವು ಸ್ಥಾಪಿತವಾದರೆ ಹಿಂದುಮುಸಲ್ಮಾನರು ಸೇರಿ ಎಲ್ಲಾ ಜನರಿಗೆ ಸುಖವುಂಟು. ಎಂಬ ಸತ್ಯವು ಈ ಜಾತಿ ವಾದಿಗಳ ಮನಸ್ಸಿಗೆ ಹೊಳೆಯುವುದೇ ಇಲ್ಲ ಅವರಿಗೆ ಜಾತಿಯ ಸ್ವಾರ್ಥದ ಮುಂದೆ ದೇಶದ ಸ್ವಾರ್ಥವು ಕ್ಷುಲ್ಲಕವಾಗಿ ಕಾಣುತ್ತದೆ ಆದರೆ ಕಾಂಗ್ರೆಸು ಯಾವದಾದರೂ ಜಾತಿಯ ಸ್ವಾರ್ಥವನ್ನು ಇಟ್ಟುಕೊಂಡಿರುವುದಿಲ್ಲ. ದೇಶದ ಸ್ವಾರ್ಥವೇ ಅದರ ಸ್ವಾರ್ಥ ಅದ್ದರಿಂದ ಜಯಪುರದಂಥ ಕಡೆಯ ಜನರು ಕಾಂಗ್ರೆಸಿನಿಂದ ಪ್ರಭಾವಿತರಾಗುವುದು ಸಹಜವಾಗಿದೆ

ಜೈಲಿನಲ್ಲಿ ಜಮುನಾಲಾಲರು

ಜಯಪುರಸಂಸ್ಥಾನ ಸರಕಾರವು ಜಮುನಾಲಾಲಜೀ ಬಜಾಜರನ್ನು ಜೈಲಿನಲ್ಲಿ ಇಟ್ಟಿರುವುದಷ್ಟೆ. ಅವರೊಬ್ಬರಿಗಾಗಿ ಸರಕಾರವು ತಿಂಗಳೊಂದರ ೭೦೦ ರೂಪಾಯಿಗಳಿಗೆ ಕಡಿಮೆಯಾಗದಷ್ಟು ಹಣವನ್ನು ಹೆಚ್ಚಿಸಿದ ಸಿಬಂದಿ ವೊದಲಾದುವುಗಳ ಬಗ್ಗೆ ಖರ್ಚುಮಾಡಬೇಕಾಗಿ ಬಂದಿದೆ. ಯಾವ ನ್ಯಾಯವೂ ಇಲ್ಲದೆ ಒಬ್ಬರನ್ನು ನಿರ್ಬಂಧದಲ್ಲಿಟ್ಟು ಮತ್ತೆ ಅವರಿಗಾಗಿ ಸಾವಿರಗಟ್ಟಲೆ ಹಣವನ್ನು ಹೀಗೆ ಖರ್ಚುಮಾಡುವುದು ದುರ್ವ್ಯಯವಾಗಿದೆ. ಅದ್ದರಿಂದ ಸರಕಾರದ ಈ ಬಗೆಯ ವರ್ತನವನ್ನು ಖಂಡಿಸಿ ಜಮುನಾಲಾಲರು ಸರಕಾರಕ್ಕೆ ಒಂದು ಪತ್ರವನ್ನು ಬರೆದು – ತನ್ನನ್ನು ಸಾಮಾನ್ಯ ಕೈದಿಯಂತೆಯೇ ಕಾಣಬೇಕೆಂದು ತಿಳಿಸಿರುವರು. ವೃದ್ಧಾಪ್ಯದಲ್ಲಿ ಕೂಡ ಜೈಲಿನೊಳಗಿದ್ದು, ದೇಶದ ಸುಖದ ಮುಂದೆ ತಮ್ಮ ಸುಖವನ್ನು ತುಚ್ಛವಾಗೆಣಿಸುವಂಥ ಜಮುನಾಲಾಲರಂಥ ಮಹಾಪುರುಷರನ್ನು ಕಾಂಗ್ರೆಸಿನೊಳಗಲ್ಲದೆ ಮತ್ತೆಲ್ಲಿ ಕಾಣಬಹುದು?

ಐರೋಪ್ಯ ರಾಜಕೀಯ ಪರಿಸ್ಥಿತಿ

ಹೆರ್ ಹಿಟ್ಲರನ ಮನೋಭೀಷ್ಟ ಫಲಪ್ರಾಪ್ತಿ

ಪ್ರಜಾಪ್ರಭುತ್ವದ ನಾಶನವೇ? ಪೆಸಿಸಮಿನ ಕೊನೆಯ ದಿನಗಳೇ?

ಬ್ರಿಟಿಷ್ ಸಾಮ್ರಾಜ್ಯಕ್ಕೆ ಅಳಿಗಾಲ ಸನ್ನಿಹಿತವಾಯಿತೆ?

ಝೆಕೋಸ್ಲವಾಕಿಯಾದ ವಿನಾಶವು ಪಾಶ್ಚಿಮಾತ್ಯ ಸಂಸ್ಕೃತಿಯ ಅವಸಾನದ ಪೂರ್ವಚಿಹ್ನೆ' ಇಂಗ್ಲೆಂಡಿನಲ್ಲಿ ಹೊಸ ಸರಕಾರವಾಗುವಂತಿದೆ ಎಂದರೆ ಹಿಟ್ಲರನ ಎದೆ ಧಿಕ್ಕೆನ್ನದಿರಲಾರದು. ಫೆಸಿಸಮನ್ನು ವಿರೋಧಿಸಿ ಐರೋಪ್ಯ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವವನ್ನು ಹಿಟ್ಲರ್ ಮುಸಲಿನಿಗಳ ಪದಾಘಾತದಿಂದ ರಕ್ಷಿಸಲು ಅಮೇರಿಕ, ಇಂಗ್ಲಂಡು, ಫ್ರಾನ್ಸು ಮತ್ತು ರಷ್ಯಗಳು ಒಟ್ಟು ಸೇರುವ ಸಂಭವ.

ಝೆಕೋಸ್ಲವಾಕಿಯಾ ವಿನಾಶ

ಮೊನ್ನೆ ಮೊನ್ನೆ ಸಪ್ಟಂಬರದಲ್ಲಿ ಝೆಕೋಸ್ಲವಾಕಿಯದ ಒಂದು ಅಂಗವಾದ ಸುಡೆಟನ್ ಪ್ರದೇಶವು ಜರ್ಮನಿಯ ವಶವಾದುದು ನಾವಿನ್ನೂ ಮರೆತಿಲ್ಲ. ಅಂದಿಗೆ ಹಿಟ್ಲರಿಗೆ ಹೆದರಿ ಇಂಗ್ಲಂಡ್ ಫ್ರಾನ್ಸುಗಳು ಝೆಕೋಸ್ಲವಾಕಿಯಾದ ಸ್ವಾತಂತ್ರ್ಯವನ್ನು ಆತ್ಮರಕ್ಷಣೆಗಾಗಿ ಹಿಟ್ಲರಿಗೆ

ವಿಕ್ಟಿಂಗ್ ಸೆಕ್ರೆಟರಿ

ಶ್ರೀ. ಅಚಾರ್ಯ ಕೃಪಲಾನಿಯವರ ರಾಜಿನಾಮೆಯ ನಿಮಿತ್ತ ಈಗ ಅಖಿಲಭಾರತ ಕೊಂಗ್ರೆಸು ಕಮಿಟಿಯ ವರ್ಕಿಂಗ್ ಸೆಕ್ರೆಟರಿಗಳಾದ ಶ್ರೀ ನರಸಿಂಹರವರು.

ಬಲಿಗೊಟ್ಟ ಮಹಾಪಿತೃಭ್ರಾತೃಕತನವು ಚರಿತ್ರಾರ್ಹವಾಗಿದೆ. ಇಂಗ್ಲಂಡನ್ನು ನಂಬಿ ಕೆಟ್ಟವರುಂಟೆ [illegible] ಯಮೇಲೆ ಒಲಿಯಲಾಯಿತು. [illegible] ಒಪ್ಪಂದವನ್ನು ಮಾಡಿ [illegible] ಶಕ್ತಿಗಳು ತಂತಮ್ಮ [illegible] ದಂತಾಯಿತು. ಹಿಟ್ಲರ್ ಮುಸಲಿನಿಗಳ ಸ್ವೇಚ್ಛಾವಿಹಾರ ವರ್ತನೆಗೆ [illegible] ಗಳು ಸಹಕಾರಿಯಾದ ಕತೆ [illegible] ತಿದೆ. ಏತನ್ಮಧ್ಯೆ, [illegible] ಒಂದು ತುಂಡನ್ನು ಜರ್ಮ[illegible] ಭಾಗವನ್ನು ಪೋಲೆಂಡಿಗೂ [illegible] ದನ್ನು ಹಂಗೆರಿಗೂ [illegible] ವಾಕಿಯವು [illegible] ಯಂತೆ ಮೂಲೆ ಸೇರಿತು.

ಈಗ ಏನಾಯಿತು?

ಅತ್ತಿತ್ತಣ ಅಂಗಗಳನ್ನು ಕಳೆದುಕೊಂಡ ಬಳಿಕ ಝೆಕೋಸ್ಲವಾಕಿಯದಲ್ಲಿ ಬೊಹೀಮಿಯಾ, ಮೊರಾವಿಯಾ, ಸ್ಲೊವಾಕಿಯಾ [illegible] ಯಾ ಎಂಬ ನಾಲ್ಕು ಸಂಸ್ಥಾನಗಳಿದ್ದುವು. ಈ ನಾಲ್ಕು ಸಂಸ್ಥಾನಗಳ ಸಂಯುಕ್ತ ಕೇಂದ್ರ ಸರಕಾರವು 'ಪ್ರೇಗ್' ರಾಜಧಾನಿಯ [illegible] (ಸುಡೆಟನ್ ವಿಭಜನೆಯಾದ ಅನಂತರ) ಅಧ್ಯಕ್ಷ ಡಾ। ಹಾಕಾಅವರ ನೇತೃತ್ವದಲ್ಲಿ ರಾಜ್ಯಭಾರ ನಡೆಸುತಿತ್ತು. ಹಿಟ್ಲರನ ರಾಜತಂತ್ರದ ಪರಿಣಾಮವಾಗಿ ಇವುಗಳಲ್ಲಿ ಒಂದೊಂದೇ ಸಂಸ್ಥಾನವು ಸ್ವತಂತ್ರವಾಗಲು ಇಚ್ಛಿಸುವಂತಾಯಿತು. ಪರಿಣಾಮವಾಗಿ ಸ್ಲೊವಾಕಿಯಾ ಸಂಸ್ಥಾನವು ಕೇಂದ್ರಸರಕಾರದಿಂದ ಬೇರಾಯಿತು. ಹಿಟ್ಲರನ ಅನುಯಾಯಿಯಾದ ಹೆರ್ ಟಿಸೊ ಎಂಬವನು ಈ ಸ್ವತಂತ್ರ ಸಂಸ್ಥಾನದ ಅಧ್ಯಕ್ಷನಾದನು. 'ನಮ್ಮನ್ನು ಕಾಪಾಡು' ಎಂದು ಹಿಟ್ಲರಿಗೆ ಮೊರೆಯಿಟ್ಟನು. ಹಿಟ್ಲರನ ತಂತ್ರ ನಡೆಯಿತು. ಸ್ಲೊವಾಕಿಯಾವು ನಾಝಿಗಳ ವಶವಾಯಿತು. ಉಳಿದ ಬೊಹೇಮಿಯಾ ಮತ್ತು ಮೊರಾವಿಯಾಗಳೂ ಗತ್ಯಂತರವಿಲ್ಲದ ಹಿಟ್ಲರಿಗೆ ಶರಣುಹೋದುವು. ಇತ್ತ ರುಥೇನಿಯಾ ಸಂಸ್ಥಾನವನ್ನು ಹಂಗೆರಿಯು ವಶಪಡಿಸಿಕೊಂಡಿತು. ಆಗ ರುಥೇನಿಯಾದ ಅಧ್ಯಕ್ಷ ಮಿ। ವೊಲಸಿನ್ ಅವರೂ ರಕ್ಷಣೆಗಾಗಿ ಹಿಟ್ಲರನಿಗೆ ಮೊರೆಯಿಡುವಂತಾಯಿತು. ಆದರೆ ಜರ್ಮನಿಯ ಬಂಧುವಾದ ಹಂಗೆರಿಯ ಕೈಗೆ ಅಡ್ಡ ಬಂದನೆ? ಬರಲಿಲ್ಲ. ಬಳಿಯಲ್ಲಿದ್ದ ಪೋಲೆಂಡೂ ಸುಮ್ಮನೆ ಕುಳಿತಿತು. ಮಿ ವೊಲಸಿನನು ಜರ್ಮನಿಯ ಔದಾಸೀನ್ಯ ಹಂಗೆರಿ ಪೋಲೆಂಡುಗಳ ಸಖ್ಯದ ಪರಿಣಾಮವಾಗಿ ತನ್ನ ಸ್ವಾತಂತ್ರ್ಯ ಉಳಿಯಲಾರದೆಂದು ತಿಳಿದು ಜರ್ಮನ್ ವಿರೋಧಿ ಹಾಗೂ ರಷ್ಯಾಸಖನಾದ ರುಮಾನಿಯವನ್ನು ಮರೆಹೊಕ್ಕನು. ಆದರೆ ಪ್ರಜಾಪ್ರಭುತ್ವ ಶಕ್ತಿಗಳಾದ ರಷ್ಯ, ಫ್ರಾನ್ಸು,

ಇಂಗ್ಲೆಂಡುಗಳ ಧೋರಣೆಯೇನೆಂಬ ಇಂಗಿತವನ್ನು ಅರಿಯದೆ ಮುಂದರಿವುದು ಸಾಧ್ಯವಲ್ಲವೆಂದು ತಿಳಿದುಕೊಂಡು ರುಮಾನಿಯವು ರುಥೇನಿಯಾದ ಬಂಬಲಕ್ಕೆ ಸಿಲ್ಲಲಿಲ್ಲ.

ಹಾಗಾಗಿ ಹಂಗೇರಿಯ ಇಚ್ಛೆಗೆ ವಿರೋಧ ವರ್ತಿಸುವ ಎದೆಗಾರಿಕೆಯು ರುಥೇನಿಯಾಕ್ಕೆ ಎಲ್ಲಿಂದ ಬರಬೇಕು? ರುಥೇನಿಯವು ಹಂಗೇರಿಯ ವಶವಾಗಿಯೇ ಹೋಯಿತು. ಪೋಲೆಂಡ್ ಹಂಗೇರಿಗಳು ಹೀಗಾಗಿ ನೆರೆರಾಷ್ಟ್ರಗಳಾದುವು. ಕಾರಣ ಈ ರಾಷ್ಟ್ರಗಳ ನಡುವೆ [illegible] ಝೆಕೋಸ್ಲವಾಕಿಯದ ಭಾಗವಾದ ರುಥೇ[illegible] ಹಂಗೇರಿ[illegible] ಸೇರಿತು.

ರುಮಾನಿಯದ ಅವಸ್ಥೆ:

[illegible]

ದ್ವಾರಾ) ಇಷ್ಟರವರೆಗೆ ಯುರೋಪಿನ ಇನ್ನಿತರ ರಾಷ್ಟ್ರಗಳೊಡನೆ ವ್ಯಾಪಾರ ನಡೆಸುತ್ತಿದ್ದ ಪೋಲೆಂಡಿಗೆ ಇನ್ನು ಹಾಗೆ ನಿರಾತಂಕವಾಗಿ ವ್ಯಾಪಾರ ನಡೆಸಲು ಅನಾನುಕೂಲವಾಯಿತು. ನಿಜಾತ, ಪೋಲೆಂಡು ಹಿಟ್ಲರನಿಗೆ ಹೆದರಿ ನಡೆವ ಕಾಲ ಬಂತು. [illegible] ಹಿಟ್ಲರನ ಅನುಯಾಯಿಗಳಾಗುವುದಂದರೆ ರಷ್ಯದ ವೈರವನ್ನು ಕಾಲದಲ್ಲಿ ಕಟ್ಟಿಕೊಳ್ಳುವಂತಾಯಿತು. ಪರಿಸ್ಥಿತಿ [illegible] ಪ್ರಜಾಪ್ರಭುತ್ವ ಶಕ್ತಿಗಳು [illegible] ಹಿಟ್ಲರನನ್ನು ಬಗ್ಗು ಬಡಿಯುವ [illegible] ಮಾಡುವುದರ [illegible] ಪ್ರಜಾಪ್ರಭುತ್ವ ಶಕ್ತಿಗಳ [illegible] ಇದೆ.

ಬ್ರಿಟಿಷ್ ಸಾಮ್ರಾಜ್ಯವೆತ್ತ?

[illegible]

ಅಖಿಲಭಾರತ ಕೊಂಗ್ರೆಸ್ ಕಮಿಟಿಯ ಸಭೆಯಲ್ಲಿ ಮೌಲಾನಾ ಅಜಾದ [illegible] ನೋಡುವ ಛಾಯಾ.

ಆದರೆ ಈಗ ಆ ನೆರೆರಾಷ್ಟ್ರವು ನಾಝಿ ಜರ್ಮನಿಯ ಬಂಧುವಾದ ಹಂಗೇರಿಯ ವಶವಾಗಿ ಹಂಗೇರಿಯ ಆ ಮೂಲಕ ಜರ್ಮನಿಯ ತನ್ನ ಮನೆ ಮುಂದೆಬಂದು ನಿಂತಂತಾದುದರಿಂದಾಗಿ ರುಮಾನಿಯಕ್ಕೆ ಭಯ ತಾಗಿದೆ. ಮಧ್ಯ ಯುರೋಪಿನ [illegible] ನಾಝಿ ಪಂಥವು ರಷ್ಯಾನುಕೂಲಿಯಾದ ತನ್ನನ್ನಿಂತ ಸುಮ್ಮನೆ ಬಿಟ್ಟೀತು? ಎಂಬುದೇ ರುಮಾನಿಯದ ಭಯ. ಈ ಭಯವನ್ನು ರುಮಾನಿಯವು ತನ್ನ ಬಂಧು ರಷ್ಯಕ್ಕೆ ತಿಳಿಸಿತು. "ಜರ್ಮನಿಯು ನಿಮ್ಮನ್ನು ಕೆಣಕ ಬಂದರೆ ನಾವು [illegible] ಇದ್ದೇವೆ ಭಯಪಡಬೇಡಿರಿ" ಎಂದು ರಷ್ಯವು ರುಮಾನಿಯಕ್ಕೆ ಅಭಯವಚನವಿತ್ತಿದೆ.

ಪೋಲೆಂಡಿನ ಇಂಗಿತ:

ಝೆಕೋಸ್ಲವಾಕಿಯದ ಮೊರಾವಿಯಾ, ಬೊಹೇಮಿಯಾ ಸಂಸ್ಥಾನಗಳ ಜರ್ಮನಿಗೂ, ರುಥೇನಿಯಾವು ಹಂಗೆರಿಗೂ ವಶವಾದುದರಲ್ಲಿ ಪೋಲೆಂಡಿಗೂ ಸಂತೋಷವೇ ಇದೆ. ಆದರೆ ಸ್ಲವಾಕಿಯಾ ಸಂಸ್ಥಾನವೂ ಹಿಟ್ಲರನ ವಶವಾದುದನ್ನು ಕಂಡು ಪೋಲೆಂಡು ತಾನು ಅಸಮಾಧಾನವಟ್ಟಿದೆ. ಕಾರಣ ಮಹಾಯುದ್ಧದ ಕಲುವಾಯ ಜರ್ಮನಿಯ ಕೆಲವು ಅಂಶವು ಪೋಲೆಂಡಿಗೂ ದೊರೆತಿದೆ. ಅದನ್ನು ಈಗ ಬಲಗೊಂಡ ಜರ್ಮನು ವಶಪಡಿಸಿಕೊಳ್ಳುವ ಪ್ರಯತ್ನ ನಡೆಸದಿರಲಿಕ್ಕಿಲ್ಲವೆಂದು ಪೋಲೇಂಡಿನ ಭಯ. ಮಾತ್ರವಲ್ಲ ಸ್ಲವಾಕಿಯಾದ ಮೂಲಕ (ಡೆನ್ಯೂಬ್ ನದಿಯ

ಟ್ರೈನ್ಗಿರೋಹನನ್ನು [illegible] ರಕ್ಷಣೆಗಾಗಿ ವನನನ್ನು ತ್ಯಾಗ ಮಾಡಲು ಸಿದ್ಧರೆ ಆದರೆ ಸ್ವಾತಂತ್ರ್ಯವನ್ನು ಬಲಿಗೊಡಲು ನಾವು ಸಿದ್ಧರಿಲ್ಲ'' ಎಂದು ಮೊನ್ನೆ ಹೇಳಿಯೇ ಬಿಟ್ಟರು. ಇಂಗ್ಲಂಡ ಹೇಳುವಂತೆ ಫ್ರಾನ್ಸು ಹೇಳುವಂತಾಗಿದೆ. ಸಾಯುವುದಾದರೂ ಬದುಕುವುದಾದರೂ ಒಟ್ಟಿನಲ್ಲಿ, ಎಂಬ 'ಮೈತ್ರಿ ಒಪ್ಪಂದ' ಮಾಡಿಕೊಂಡಿರುವ ಫ್ರಾನ್ಸು ಇಂಗ್ಲಂಡುಗಳು ಒಬ್ಬನನ್ನೊಬ್ಬ ಅದೆಂತು ಬಿಟ್ಟಿರಲು ಬಂದೀತು? ಇಷ್ಟರ ವರೆಗೆ ಇಂಗ್ಲಂಡು ಹಿಟ್ಲರನಿಗೆ ಅನುಕೂಲವಿದ್ದುದರ ಪರಿಣಾಮವಾಗಿ "ಈಗ ಇಡೀ ಯುರೋಪವನ್ನೆ ಹಿಟ್ಲರ್ ಹಾಗೂ ಅವನ ಬಂಧು ಮುಸಲಿನಿಗಳು ತಮ್ಮ ವಶಪಡಿಸಿಕೊಂಡಂತಾಯಿತು.

ಸ್ಪೈನಿನಲ್ಲಿ ಫ್ರಾಂಕೋ ಸರಕಾರವು ಸ್ಥಾಪಿಸಲಾಗಿದೆ. ಅದನ್ನು ಇಂಗ್ಲೆಂಡು ಫ್ರಾನ್ಸುಗಳೂ ಇತರರಂತೆ ಒಪ್ಪಿರುವವು. ಮೊನ್ನೆ ಮೊನ್ನೆಯ ವರೆಗೆ ಲೋಕೈಕಶಕ್ತಿ ಹಾಗೂ ಮಹಾಸಖರ ರಾಜ್ಯ ಎಂಬ ಬಿರುದಿನಿಂದ ಮೆರೆಯುತಿದ್ದ ಇಂಗ್ಲಂಡು, ಅದರ ಸರಿಸಮಾನ ಬಂಧುವಾದ ಫ್ರಾನ್ಸು ಈಗ ಹಿಟ್ಲರನ ಅಬ್ಬರಕ್ಕೆ ಅಡಿಮುಗುಚಿ ಮಣ್ಣುಮುಕ್ಕುವಂತಾಗಿದೆ. ಮಿ. ಚೆಂಬರ್ಲೇನರು ಈಗ ಕಣ್ಣು ತೆರೆದಂತಿದೆ. ಇಂಗ್ಲಂಡಿನಲ್ಲಿ ಹೊಸ ಮಂತ್ರಿಮಂಡಳವಾಗಿ ಅಂತರರಾಷ್ಟ್ರೀಯ ಧೋರಣೆಯು ಉಗ್ರವಾಗುವ ಸಂಭವವಿದೆ.

ಅಮೇರಿಕವೂ ಜರ್ಮನಿಯ ದ್ರೋಹವನ್ನು ಸಹಿಸದು:

"ಅನ್ಯಾಯ, ಪರಮಅನ್ಯಾಯ, ಹಿಟ್ಲರನ ಸ್ವಾರ್ಥಕ್ಕೆ ಮೇರೆಯಿಲ್ಲವೇ ನಾವು ಇದನ್ನು ಸಹಿಸೆವು'' ಎಂದು ಅಮೇರಿಕವು ಹೇಳಿಯೇ ಬಿಟ್ಟಿತು. ಝೆಕೋಸ್ಲವಾಕಿಯವನ್ನಿಡೀ ನುಂಗಿಬಿಟ್ಟು ತಾನೇ ತಾನಾಗಿ ಮೆರೆವ ಹಿಟ್ಲರನು ಲೋಕಕಂಟಕನೆಂದು ಅಮೇರಿಕವು ಸಾರಿದೆ. ಅಮೇರಿಕದಿಂದ ಬರುವ ಪದಾರ್ಥಗಳ ಮೇಲೆ ಜರ್ಮನಿ [illegible] ಕರ ಹೆಚ್ಚಿಸಿದೆ. "ಯುರೋಪಿನಲ್ಲಿ ಏನೇ ಆಗಲಿ ನಮಗದರ ಗೊಡವೆ ಬೇಡ'' ಎಂಬ ತಾಟಸ್ಥ್ಯ ಧೋರಣೆಯನ್ನು ಅಮೇರಿಕವು ಇಷ್ಟರ ವರೆಗೆ ವಹಿಸಿತ್ತು. ಆದರೆ ಈಗ ಅಂಥಾ ಧೋರಣೆಯನ್ನು ಬದಲಿಸಬೇಕಾಗಿದೆ. ಲೋಕಶಾಂತಿ ಪ್ರಜಾಪ್ರಭುತ್ವಗಳನ್ನು ರಕ್ಷಿಸುವ ಜವಾಬ್ದಾರಿಯೂ ನಮಗೂ ಇದೆ. ಇನ್ನು ನಾವು ಸುಮ್ಮನಿರಲಾರೆವು! ಎಂದು ಅಮೇರಿಕದ ಸಂಯುಕ್ತರಾಷ್ಟ್ರಾಧ್ಯಕ್ಷ ಮಿ. ರೂಜವೆಲ್ಟರು ಪ್ರಕಟಿಸಿದ್ದಾರೆ.

ಪ್ರಜಾಪ್ರಭುತ್ವಶಕ್ತಿಗಳ ಧೋರಣೆ

ಇಂಗ್ಲಂಡು, ಅಮೇರಿಕ, ಫ್ರಾನ್ಸು, ರಷ್ಯಗಳ ರಾಜ್ಯಭಾರಿಗಳ ಒಂದುಸಲ್ಲಿ ಒಟ್ಟು ಸೇರಿ ಮಂತ್ರಾಲೋಚನೆ ನಡೆಸುತಿದ್ದಾರೆ. ಯುರೋಪವನ್ನು ರಕ್ಷಿಸುವ, [illegible] ಅಲ್ಪರಾಷ್ಟ್ರಗಳ ಸ್ವಾತಂತ್ರ್ಯವನ್ನು ರಕ್ಷಿಸುವ, [illegible] ಹಿಟ್ಲರ್ [illegible] ಮುಸಲಿನಿಗಳ [illegible] ಇನ್ನು [illegible] ಅವರ ಕೈಕಡೆದು [illegible]

[illegible] ಇಂಗ್ಲಂಡ್ [illegible] ರಷ್ಯದ [illegible] ಅಮೇರಿಕವು [illegible] ಪಡೆದು [illegible] ಇಂಗ್ಲಂಡ ಫ್ರಾನ್ಸುಗಳ [illegible] ನಡೆಯುತ್ತಿದೆ. ಇಂಗ್ಲಂಡ ಫ್ರಾನ್ಸುಗಳ [illegible] ಬರುತ್ತಿದೆ. [illegible] ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದಕ್ಕಾದರೂ ಯುದ್ಧವೇ ಪರಿಹಾರವೆನಿಸಬಹುದು. ಪರಿಸ್ಥಿತಿಯು [illegible] ರಷ್ಯವನ್ನು ಮಿತ್ರನೆಂದು [illegible] ಮನಸ್ಸಿಲ್ಲದ ಇಂಗ್ಲಂಡ [illegible] ನಮ್ಮ [illegible] ರಷ್ಯವನ್ನು ಜೊತೆಗೂಡಿ ಸೇರುವಂತಾಗಿದೆ.



ದಾಸ್ಯವಿಮೋಚನೆಗೆ ಹೋರಾಡಿದ ಶ್ರೀಯುತ ರಾಜಗೋಪಾಲಾಚಾರ್ಯರು ಮತ್ತು [illegible]

ಸ್ವದೇಶಾಭಿಮಾನಿ

ತಾರೀಖು ೧೭—೧—೧೯೪೧

ಹಳೆಯ-ಹೊಸ ಸಂವತ್ಸರಗಳು ಕೂಡುವಲ್ಲಿ ಯುರೋಪಿನ ಗ್ರಹಚಾರ ಫಲ

೨೦—೧—೪೧.

ನಿನ್ನೆ ಬೆಳಗ್ಗಿನಿಂದಲೂ ವಿಶೇಷ ವಾರ್ತೆಗಳು ಪ್ರತಿತಾಸಿಗೂ ತಲುಪುತ್ತಲಿವೆ. ಜೆಕ್ಕ ರಾಜ್ಯದ ನಿರ್ನಾಮವಾಗಿ, ಸ್ಲೊವಾಕಿಯವು ಜರ್ಮನಿಯ 'ಆಶ್ರಯ ಹೊಂದಿ'ದ ಗಳಿಗೆಯಲ್ಲೇ ಮುಂದೇನು ಎಂದು ಚಿಕಿತಪ್ರಶ್ನೆ ಕೇಳಿದ್ದೆವು. ಅದರ ಉತ್ತರ ಈಗ ದೊರೆಯಿತು. ಹಂಗೇರಿಯು ರುಥೇನಿಯವನ್ನು ನುಂಗಿತು! ರುಥೇನಿಯದ ಕಡೆಗೆ ಜರ್ಮನ್ ಸೇನೆಗಳು ಮೆಲ್ಲನೆ ಸುಳಿದು ಅತ್ತ ಭಯಗೊಳಿಸಿ, ಹಂಗೇರಿಯ ಒಳನುಗ್ಗಿದುದನ್ನು ಕಂಡು ರುಥೇನಿಯವು ಪಾಶ್ಚಾತ್ಯ ಪ್ರಜಾಸತ್ತೆಗಳಿಗೆ ಕೂಗುತ್ತಿರುವಾಗಲೇ—ಹಂಗೇರಿಯೂ ರುಥೇನಿಯವನ್ನು ನುಂಗಿತು'

ಯುಕ್ರೇಯಿನಿನಲ್ಲಿ ಸ್ವತಂತ್ರ ಚಳವಳಿದೆ. ಇದೂ ಒಂದು ವಾದರಿ

ರುಮೇನಿಯವು ವಾಣಿಜ್ಯ ಕರಾರಿಗಾಗಿ ಜರ್ಮನಿಯೊಡನೆ ಪ್ರಬಲ ವ್ಯಕ್ತಿ ಮಾಡಿಕೊಳ್ಳುವುದುತ್ತಮವೆಂದು ಜರ್ಮನಿಯೇ ಸೂಚಿಸಿ, ಹಾಗೆ ಮಾಡಿದರೆ, ರುಮೇನಿಯವು ಸ್ವಾತಂತ್ರ್ಯ ಕಳೆದುಕೊಳ್ಳದಂತೆ ಜರ್ಮನಿ ಬೆಂಬಲ ಕೊಡುವುದೆಂದು ತಿಳಿಸಲಾಗಿದೆ.

ರುಮೇನಿಯದ ಗಡಿನಾಡ ವರೆಗೆಲ್ಲ ಜರ್ಮನಿಯ 'ಅಧಿಕಾರ ನಡೆಯುತ್ತಾಗಿದೆ' ಜರ್ಮನ್ ಸೇನೆಗಳೇ ಸುತ್ತಲಿವೆ. ಆದರೆ, ರುಮೇನಿಯವು ಅದನ್ನೊಲ್ಲದೆ, ಸ್ವಾತಂತ್ರ್ಯ ಕಾಪಾಡಿಕೊಳ್ಳಲು ಸಿದ್ಧವಾಗಿ ನಿಂತಿದೆ.

ಸ್ವಿಟ್ಜರ್ಲೆಂಡು ತನ್ನ ಸ್ವಾತಂತ್ರ್ಯ ಅಪಹರಣವಾಗುವ ವೇಳೆ ಬಾರದಿರಲೆಂದು ಬೆದರಿ, ಶಸ್ತ್ರಸನ್ನದ್ಧವಾಗಿದೆ

ಇಟಲಿಯಲ್ಲಿ ಮುಸ್ಸೊಲಿನಿಗೆ ಜರ್ಮನ ದಿಗ್ವಿಜಯವು ಅನ್ಯನಂದನನ್ನುಂಟುಮಾಡಿದೆ ಫ್ರಾನ್ಸಿನಿಂದ ಟ್ಯೂನಿಸನ್ನು ಸೆಳೆವ ಯತ್ನಗಳಿಗೆ ಇನ್ನು ಹಿಂದೆಗೆಯಿರು.

ಫ್ರೆಂಕೋವಿನೊಡನೆ ಮೈತ್ರಿ ಕರಾರನ್ನು ಪೋರ್ತುಗಲ್ ಸರಕಾರವು ಮಾಡಿಕೊಂಡಿದೆ ರಷ್ಯವನ್ನು ಇತ್ತ ಕೆಡಹಲು ಜಪಾನು ಸನ್ನದ್ಧವಾಗಿದೆ

ಇಂಗ್ಲೆಂಡ ಇದುವರೆಗೆ ಶಾಂತಿಸ್ಥಾಪನೆಯಾಗಲೆಂದ ನಡೆಸಿದ ಪ್ರಯತ್ನಗಳೆಲ್ಲವು ಅದರ ಬಲಹೀನತೆ ಎಂದೇ ಅರ್ಥವಾಗಿ, ಇಂಗ್ಲೆಂಡ ಪ್ರಯತ್ನಗಳನ್ನು ಗಣಿಸದೆ ತಾವೇ ಜರ್ಮನಿ ಇಟಲಿಗಳ ಮಾತೇ ಪ್ರಕಟವಾಗುತ್ತಲಿದೆ ಈಗ ಬ್ರಿಟನ್ನು ಎಚ್ಚರಗೊಂಡಿರುವನು, ಮುಂದಣ ಪ್ರಬಲವಾಗಿಂತ ವ್ಯವಸ್ಥೆ ಮಾಡಿಕೊಂಡಿರುವ ಕಾರಣ, ಚೇಂಬರ್ಲೇನರು ಸ್ಥೈರ್ಯದಿಂದ ಸ್ವಂತಿಕೆ [illegible] ತೊಡಗಿದರು. ಜರ್ಮನಿಯು ಒಂದು ವಾಗ್ದಾನವನ್ನು ಪಾಲಿಸದೆ, ದೊಡ್ಡ ಚಿಕ್ಕ ರಾಜ್ಯಗಳನ್ನು ಬೆದರಿಸಿ, ಅವು ತಾವಾಗಿ ಶರಣಾಗತಿ ಕೊಡುವಂತೆ ಮಾಡಿದುದೆಂದು, ಇನ್ನು [illegible] ಪಕ್ಷಗಳೂ ಆ [illegible] ರಾಜ್ಯಭಾರಿಯನ್ನು ಪುನಃ ಕರೆಸಿಕೊಂಡಿವೆ. ಚೇಂಬರ್ಲೇನರ ಭಾಷಣವು ಈ ವಿಷಯ ಸ್ಪಷ್ಟವಾಗಿ ಜರ್ಮನಿಯನ್ನು ಆರೋಪಿಸಿದ್ದುದು. ಅಮೇರಿಕವು, ರಷ್ಯವು, ಫ್ರಾನ್ಸಿನೂ ಬೆಂಬಲಿಸಿದೆ ಇದರಿಂದ, ಇವು ನಾಲ್ಕು ರಾಜ್ಯಗಳು ಒಂದಾಗಿ ಜರ್ಮನಿ ಮತ್ತು ಅದರ ಮಿತ್ರರನ್ನು ಎದುರಿಸುವರು

ರುಮೇನಿಯದ ಮೇಲೆ ಯುದ್ಧಮಾಡುವ ಆಲೋಚನೆ ಜರ್ಮನಿ ಮಾಡಿಲ್ಲವೆಂದೂ, ಹೀಗೆ ಬ್ರಿಟನರೇ ಅಪಾರ್ಥಗೊಳಿಸಿಕೊಂಡು ಸಾರುತ್ತಿರುವರೆಂದೂ ಜರ್ಮನಿ ಎಂದಿದೆ.

ಮುಸ್ಸೊಲಿನಿಯು ತನ್ನಂತೆ, ಮೆಲ್ಲನೆ ತನ್ನವರಿಗೆ ಫ್ರಾನ್ಸಿನ ಅಧಿಪತ್ಯಗಳಲ್ಲಿ ಅಧಿಕಾರಾಧಿಕಾರಕ್ಕಾಗಿ ಪ್ರಯತ್ನಿಸಬೇಕೇ ಹೊರತು, ನುಗ್ಗಬಾರದೆಂದು ಹಿಟ್ಲರು ಬುದ್ಧಿ ಕಲಿಸಿರುವನೆಂದು ಪ್ರಕಟವಾಗಿದೆ.

ಜರ್ಮನರು ದಕ್ಷಿಣಾಫ್ರಿಕದಲ್ಲಿ ಬಂದು ನೆಲೆಸಿಲ್ಲಲು, ಆ ಸರಕಾರವು ಆಕ್ಷೇಪವೆತ್ತಿದರೆ ನೋಕ್ಷವಾದೀತೆಂದು ಜರ್ಮನಿ ತಿಳಿಸಿಯದೆ.

ಪೋಲೆಂಡು ಹಂಗೇರಿಗಳ ಗಡಿನಾಡು ಒಂದಾಗಿರುವ ಕಾರಣ, ಅದನ್ನು ದಾಟಿ ಪೂರ್ವಕ್ಕೆ ಹೋಗುವುದು ಜರ್ಮನಿಗೆ ಅಗತ್ಯವಾದೀತು ಅದನ್ನು ವಿರೋಧಿಸಿ, ಪೋಲೆಂಡಿನ ಸರಕಾರವು ಜರ್ಮನಿಯನ್ನು ಇತ್ತೀಚೆಯ ಮುಡುಕಿಗೆ ದೂರಿ, ತಾನು ಪ್ರತ್ಯೇಕ ಎದುರಿಸುವುದಾಗಿ ತಿಳಿಸಿಯದೆ

೪೪ ಜರ್ಮನ ಸೈನ್ಯ ವಿಭಾಗಗಳು ಪೂರ್ವಕ್ಕೆ ರುಮೇನಿಯಾ, ಯುಕ್ರೇಯಿನ್ ಕಡೆಗೆ ಮುಂದರಿದ ವಾರ್ತೆ ತಲುಪಿದೆ ಇವು ಯುದ್ಧಕ್ಕೆ ತೊಡಗಬೇಕಾದರೆ ಹತ್ತು ದಿನ ಬೇಕಾಗುವುದು.

ಜರ್ಮನಿಯ ಸರಕಿನ ಮೇಲೆ ನೇಕಡಾ ೨೫ರಂತೆ ಅಮೇರಿಕವು ಸುಂಕ ಹೆಚ್ಚಿಸಿಯದೆ

ದಕ್ಷಿಣಾಫ್ರಿಕವು ಯುದ್ಧಸನ್ನದ್ಧವಾಗಿದೆ. ಪೋಲೀಸರಿಗೆ ಸಹ ರಜಾ ಇಲ್ಲ

ರುಮೇನಿಯದ ಕಡೆಗೆ ಜರ್ಮನಿ ಮುಂದರಿದಲ್ಲೇ, ಯುಕ್ರೇಯಿನಿಗೆ ತಂಟೆ ಉಂಟಾದೀತೆಂದು ರಷ್ಯವು ಕೂಡಲೆ ಆ ಕಡೆಗೆ ಯುದ್ಧಾರಂಭ ಮಾಡಲಿಳಿದಿದೆ

ಬ್ರಿಟಿಷ ಸರಕಾರವು ಅನಗತ್ಯವಾದ ಟೀಕೆ ಮಾಡುತ್ತದೆಂದು ಹಿಟ್ಲರು ಸಿಟ್ಟಾಗಿರುವನು

ಕಾಡುಜನರಂತೆ ಜರ್ಮನರು ವರ್ತಿಸುತ್ತಾರೆಂದು ಪೋಲೆಂಡ ಸರಕಾರದ ಮಾತು ಹಿಟ್ಲರ ವಿರುದ್ಧ ಪೋಲೆಂಡಿಗಳೂ ವಾದಿಸಿರುವುದಲ್ಲದುದು

ರುಮೇನಿಯದಲ್ಲಿ ಎಲ್ಲ ಪಕ್ಷಗಳೂ ಒಂದಾಗಿ, ಯುದ್ಧಸಜ್ಜಿತವಾಗಿವೆ ಪೋಲೆಂಡ್, ಬಲ್ಗೇರಿಯಾ, ರುಮೇನಿಯಾ, ಗ್ರೀಸ್, ಟರ್ಕಿ ಯುಗೋಸ್ಲಾವಿಯಗಳು ಒಂದಾಗಿ ಜರ್ಮನಿ ಇಟಲಿಗಳನ್ನು ಎದುರಿಸುವುವೆಂದು ಪ್ರಕಟವಾಗಿದೆ ಇಷ್ಟನ್ನು ಇಂಗ್ಲೆಂಡಿಗೆ ತಿಳಿಸಿ,—[illegible] ಇಂಗ್ಲೆಂಡ ಅದೇರಿಕ ರಷ್ಯಗಳು ತಮ್ಮ ಕಡೆಗೆ ಇರಬೇಕೆಂದು ರುಮೇನಿಯ ಕೋರಿದೆ

ಇಂಗ್ಲಿಷು, ಫ್ರೆಂಚ್, ಅಮೇರಿಕನ್ ರಾಜ್ಯಭಾಗಗಳನ್ನು ಜರ್ಮನಿ [illegible] ಹಿಂದೆ ಕರೆದು ಪುನಃ ಆತ [illegible] ಭಾಗಗಳನ್ನು ಕಳೆಸಬೇಕೇ ಬೇಡವೇ ಎಂಬ ವಿಚಾರವಾಗುತ್ತಿದೆ

ಸ್ಪೈನ್ ಸರಕಾರವು ಫ್ರೆಂಕೋವಿನೊಡನೆ ಸಂಧಾನ ಅರಿಸಿ, [illegible] ಭಾಗಗಳನ್ನು ಕಳೆಸಿಕೊಟ್ಟಿದೆ

[illegible]—ಮೆಲಕ್ಷೆಸ್ಲೊ [illegible] ಸಂಘಟಿಸಿದ್ದಾಯಿತು. ಇದನ್ ಚರ್ಚಿಲ್ಲರನ್ನು ಸೇರಿಸಿ ಹೊಸ ಮಂತ್ರಿಮಂಡಲವಾದೀತು, ಆದರೆ, ಲೇಬರ್ ಪಕ್ಷವು ಈ ಸರಕಾರ ಸೇರಬಾರದೆಸಿಲ್ಲ

ಪೆಲೆಸ್ತೀನ ಪರಿಷತ್ತು ವ್ಯರ್ಥವಾಯಿತ ವೆ ಹಸೆಲ್ಕರು ಅರಬರು ಇನ್ನಷ್ಟು ಅತ್ಯಸ್ತ್ರ [illegible] ಗಿಯೇ ಮರಳಿದರು.

ಇರಾಕಿನಲ್ಲಿ ಮುಂದಿನ ದೊರೆ ಹಿರಿಯವರು ರಾಜಪ್ರತಿನಿಧಿ ಮಾಡಿದರೆಂದು ಗುರಣದಂಡನೆಗೀಡಾದರು. ವಿಷಾದ ದ [illegible] ಗಳೂ ಇತರ ಸಾವಿರರೂ ಈ ದಂಡನೆಯು ಒಡಲಾಗಿ, ನಾನಾ ಅವಧಿಗಳಿಗೆ ಬಂದೀಖಾನೆಯ ಸುಖವನ್ನು ಅನುಭವಿಸಬೇಕಾಗಿ ತಿದ್ದಿದ ರಾಯಸ ಹೊರಟಿದೆ.

ನೆಪೋಲಿಯನನ ದಿನಗಳು ಮರಳಿದುವೆಂದು ಬ್ರಿಟಿಷರೆನ್ನುತ್ತಾರೆ.

ಸತ್ಯಧರ್ಮ—ಹಿಂದೂಮತ

ಎರಡು ಹೊಸ ದೇವಾಲಯಗಳ ಪ್ರವೇಶ ಮುಹೂರ್ತ.

ನವಾಧಿಲ್ಲಿಯಲ್ಲಿ ಮಹಾತ್ಮಾಜಿ.

೦೦೦—

(ಒಂದು ಬುದ್ಧದೇವಾಲಯ—ಮತ್ತೊಂದು ಲಕ್ಷ್ಮೀನಾರಾಯಣ ದೇವಾಲಯ. ಶ್ರೀ. ಬಿರ್ಲಾರವರ ಉದಾರದಾನ—ಮಾಲವೀಯರ ಸೂಚನೆಯಂತೆ ನಿರ್ಮಾಣಗೊಂಡುವು.)

ಬುದ್ಧ ದೇವಾಲಯದಲ್ಲಿ ಅಸ್ಪೃಶ್ಯತೆಯಿರಬಾರದು ಕೃಷ್ಣದೇವಾಲಯದಲ್ಲಿ ಅದಿರಲಾರದು ಹಿಂದೂಮತದಲ್ಲಿ ಅಸ್ಪೃಶ್ಯತೆ ಮೇಲು ಕೀಳುಗಳಿಗೆ ಎಡೆಯಿಲ್ಲೆಂದೇ ನನ್ನ ವಿಶ್ವಾಸ. ವರ್ಣಗಳಿವೆ, ಇವುಗಳು ಗುಣಕರ್ಮಗಳನ್ನು ಹೊಂದಿವೆ ಹೊರತು, ಇವುಗಳಲ್ಲಿ ಮೇಲು ಕೀಳುಗಳಿರುವುದು ಸಹಜವಲ್ಲ

ಇವುದಲ್ಲಿ ಶ್ರೀಮಂತರು ಇತರರ ಸೇವೆಯಿಂದ ಪಾವನರಾಗಬೇಕು, ಅವರು ಇನ್ನು ದೀನರಾಗಬೇಕು. ಅಸ್ಪೃಶ್ಯತೆ, ಮೇಲುಕೀಳುಗಳು ಹುಟ್ಟಿದುದೇ ಹಿಂದೂಧರ್ಮ ಕುಂದಿತು. ಸತ್ಯ ಅಹಿಂಸೆಗಳ ಅಸ್ತಿಭಾರದ ಮೇಲೆ ಹಿಂದೂ ಧರ್ಮವಿದೆ ಇತರ ಮತಗಳೊಡನೆ ಜಗಳಕ್ಕೆ ಎಡೆಯಾಗಕೂಡದು

ಪತಿಪೆಯಿಂದೂ ವ್ಯಾಪಾರ್ಯ ಧರ್ಮವು ಅಭಿವೃದ್ಧಿಹೊಂದಲೆಂದು ಪ್ರಾರ್ಥಿಸುವೆನು. ಹಿಂದಿನ ನೀಚ ಕರ್ಮಾನುಸಾರ ನವಾಗಬೇಕು. ಹೀಗೆ ಹಿಂದೂವು ಇವೇ ನಾನಾವಿಧದ ಸೇವೆ ಮಾಡುವನು ಎಲ್ಲ ಧರ್ಮಗಳನ್ನು ಸಮಾನವಾಗಿ ಮಾನಿಸಿ, ಸಮಾಜಗಳೊಳಗೆ ಕಲಹ ದಂಗೆ ಮೊದಲಾದುವು ಆಗದಂತೆ ನೋಡಿಕೊಳ್ಳಬೇಕು.

ಹೀಗೆ ೫೦,೦೦೦ ಜನರ ಮುಂದೆ ಮಹಾತ್ಮಾಜಿ ಭಾಷಣ ಮಾಡಿದರು

"ನಲ್ವತ್ತು ಮಿಲ್ಲಿಯ ಜಪಾನಿ ಬೌದ್ಧರೂ ಈ ದೇವಸ್ಥಾನದ [illegible] ನನ್ನ ಪ್ರೀತಿಪ್ಪಿ ಹೊಸತಾರೆಂದೂ ಹಿಂದು ಗಳು ಬೌದ್ಧರೂ ಸೋದರರೆಂದೂ ಜಾಪಾನಿನ [illegible] ಭಾರತಿಯ ಸಂದೇಶ ಕಳಿಸಿದನು.

ಚೀನದ ರಾಜಭಾರಿಯೂ ಈ ವಿಶ್ವಮೈತ್ರಿ ವ ಮಂದಿರವು ಏಳಿಗೆಯಿಂದು ಹರಸಿದನು.

"ಬ್ರಿಟನ್ನೇ, ಕಿವಿಗೊಡು!"

ವರಿಂದೆಸಿ [illegible] ಸಾಮ್ರಾಜ್ಯವನ್ನು [illegible]
ಸಿದವರಿಂದ

ನ [illegible] ಕೃತಿಗಳಮೇಲೆ ಆಕ್ರೋಶವುದನ್ನು
ಕೇಳು

[illegible]
[illegible] ಗಳ

ನನ್ನನ್ನು [illegible]

ನನ್ನ ದೇಶದ ಮಾತು ನನ್ನ [illegible]

—ಬರ್ಲಿನ್ ಬೇಟಿಂಗ್ ಪತ್ರಿಕೆ

ಹತ್ಸಾರದ ಜಮೀನುದಾರರ ಮೇಲೆ ಜರ್ಮನ್ ಹೆಂಡತಿಯ ವ್ಯಾಜ್ಯ

ತಿಂಗಳಿಗೆ ೧೫೦೦ ರೂಪಾಯಿಯನ್ನು ಕೊಡಬೇಕು

ಸಂಯುಕ್ತ ಪ್ರಾಂತ್ಯದ ಹತ್ಸಾರದ ಜಮೀನುದಾರರಾದ ರಾಜಾಪ್ರೇಮ ಪ್ರತಾಪಸಿಂಗರ ಜರ್ಮನ್ ಹೆಂಡತಿಯಾದ ರಾಣಿ ಜಗತ್ ಪ್ರತಾಪ ಕೌರ (ಸೀ ಮೆಲಟಾ ಫ್ರೆಂಕ್)ಳು ತನ್ನ ಗಂಡನ ಮೇಲೆ ಡೇರಾಡನ್ ಕೋರ್ಟಿನಲ್ಲಿ ೧,೯೧,೦೦೦ ರೂಪಾಯಿಗೆ ವ್ಯಾಜ್ಯವನ್ನು ಹೂಡಿರುತ್ತಾಳೆ.

ಆಕೆಯು ಕೋರ್ಟಿನಲ್ಲಿ ವಾದಿಸುತ್ತಾ "ರಾಜಾಪ್ರೇಮ ಪ್ರತಾಪರ ಒತ್ತಾಯದ ಮೇರೆಗೆ ನಾನು ಸಿಖ್ಖ ಮತವನ್ನವಲಂಬಿಸಿ ೧೯೩೬ನೇ ಆಗೋಸ್ತು ಎರಡರಲ್ಲಿ ಅವರನ್ನು ವರಿಸಿದೆನು. ೧೯೩೭ನೇ ನವಂಬರದ ವರೇಗೆ ನಾವು ಬಹಳ ಸಂತೋಷದಿಂದ ಕಾಲಯಾಪನೆಯನ್ನು ಮಾಡಿ ಅವರ ಅಪ್ಪಣೆಯನ್ನು ಪಡೆದು ತಂದೆತಾಯ್ಗಳನ್ನು ನೋಡಲು ನಾನು ಜರ್ಮನಿಗೆ ತೆರಳಿದೆನು. ನನಗೆ ಖರ್ಚಿಗೆ ಕೂಡಾ ರಾಜರೇ ಕೊಟ್ಟಿದ್ದರು. ಆದರೆ ನಾನು ೧೯೩೮ನೇ ಮಾರ್ಚ ತಿಂಗಳಲ್ಲಿ ಹಿಂತಿರುಗಿದಾಗ ನನ್ನ ವಿಷಯ ಇವರ ಮನಸ್ಸೇ ಮಾರ್ಪಾಟಾಗಿತ್ತು. ಕೊನೆಗೆ ಅವರು ನನ್ನ ಕೂಡೆ ನಾನು ಈ ವಿವಾಹದಿಂದ ವಿಮುಕ್ತನಾಗಲಿಚ್ಛಿಸುವೆನೆಂದರು. ಕಟ್ಟಕಡೆಗೆ ನನ್ನನ್ನು ದಂಡಿಸಲು ಪ್ರಾರಂಭಿಸಿದುದರಿಂದ ನನ್ನ ಪ್ರಾಣಾಪಹರಣವನ್ನು ಕೂಡಾ ರಾಜನು ಮಾಡಬಹುದೆಂದ್ದರಿಂದ ತನಗೆ ರಾಜನೊಂದಿಗೆ ಜೀವಿಸಲು ಅಸಾಧ್ಯವಿದ್ದಿತು"ವೆಂದಳು.

ಮತ್ತು ತನಗೆ ಖರ್ಚಿಗೆ ತಿಂಗಳಿಗೆ ೧೫೦೦ ರೂಪಾಯಿಯಂತೆ, ಕೊಡತಕ್ಕದೆಂದೂ ತಾನು ಜರ್ಮನಿಗೆ ಹೋಗುವಾಗ ರಾಜನ ಕೂಡೆ ೫೦೦೦ ರೂಪಾಯಿಯ ನಗಗಳನ್ನು ಇಟ್ಟಿರುವೆನೆಂದೂ ಅದನ್ನು ತನಗೆ ಹಿಂತಿರುಗಿ ಕೊಡಿಸಬೇಕೆಂದೂ ಮತ್ತು ೧೦ ವರ್ಷದ ಖರ್ಚಿನ ರೂಪಾಯಿ ೧,೮೦,೦೦೦ ಕೊಡಿಸಬೇಕೆಂದೂ ಹೇಳಿಕೊಂಡಿರುವಳು.

ರಾಜಾಪ್ರೇಮರಾದರೂ ಈ ಎಲ್ಲಾ ಅಪವಾದನೆಯು ನಿರಾಧಾರವೆಂದು ವಾದಿಸಿ ಮದುವೆಯಾದ ಸ್ವಲ್ಪ ದಿವಸಗಳಲ್ಲಿಯೇ ಈಕೆಯು ನನ್ನ ಆಸಿಯಲ್ಲಿ ಒಂದಂಶವನ್ನು ಆಕೆಯ ಹೆಸರಲ್ಲಿ ಮಾಡುವಂತೆ ಕೇಳಲು ತಾನು ಒಪ್ಪದಿರುವಲೇ ಇಷ್ಟೆಲ್ಲಾ ದೋಷಾರೋಪಣೆಗಳನ್ನು ಮಾಡಿರುವಳೆಂದೂ ಮತ್ತು ಆಕೆಯು ತನ್ನ ಅಧಿಕಾರದಲ್ಲಿ ಸಂಸ್ಥಾನವನ್ನು ವಾಸಿಸುವುದಾದರೆ ಜೀವನಕ್ಕಾಗಿ ಏನಾದರೂ ಒಂದು ಮನೆಯನ್ನೂ ತಿಂಗಳಿಗೆ ೨೦೦ ರೂಪಾಯಿ ಕೊಡಲು ಸಿದ್ಧನಿರುವೆನೆಂದು ಪ್ರತಿವಾದಿಸಿರುವರು.

ಜಾಹೀರಾತುಗಳಿಗೆ:
ಸ್ವದೇಶಾಭಿಮಾನಿ
ಅತ್ಯುತ್ತಮ ಸೌಕರ್ಯಕೊಡುವುದು:
ಪ್ರತಿಫಲಬರುವಂತೆ ಸಾಧಿಸುವುದು.

ಸ್ವದೇಶೀ **ಬಳೆಗಳು** ಸ್ವದೇಶೀ

ಅಗ್ಗ, ಅಂದ, ಮೋಹಕ ಮತ್ತು ಪಕ್ಕಾ ಬಣ್ಣದ ಅದರ ಹೊಂದುವಂತಹ ಜವಹಾರಾಪಾಸಾ (ಗೋಲ ಕೆಳಗಿನಂತೆ ಕೆತ್ತಿದ) ಕಾಂಚ (ಪ್ಲೇನ ಇದ) ಮತ್ತು ಇತರ ಫ್ಯಾಷ್ಲೀ ಡಿಝೈಯಿನುಗಳ ಕಾಜಿನ ಬಳೆಗಳು, ಮೆಸರ್ಸ್ ಗೋರ ಮತ್ತು ಕಂಪೆನಿಯವರ ತಮ್ಮ ಕ್ರಿಸ್ಟಲ್ ಗ್ಲಾಸ್ ವರ್ಕ್ಸ್, ಸಂತ ರೋಡದಲ್ಲಿ ತಯಾರಿಸಲ್ಪಡುತ್ತವೆ ಅವರ ಮಾಲು ಈಗ ಬಜಾರದಲ್ಲಿ ಎಲ್ಲ ವ್ಯಾಪಾರಸ್ಥರ ಕಡೆಗೆ ದೊರೆಯುವುದು. ರೋಕ ಗಿರಾಕಿಗಳ ಮಾಹಿತಿಯ ಬಗ್ಗೆ ದರವನ್ನು ಕೊಡಲಾಗಿದೆ.

ಜವಹಾರಾ ಪಾಸಾ —ಸ್ಪೈಲು ಹಾಕಿದ ಬಳೆಗಳು ೦-೬-೬ ಪ್ರತಿಯೊಂದು ಕಟ್ಟಿಗೆ ಒಂದು ಕಟ್ಟಿನಲ್ಲಿ [illegible] ಜೋಡುಗಳು ಇರುವುವು

ಕಾಂಚ ತ್ರಿಕೋಣ ಪ್ಲೇನ ೦-೬-೬

ಜವಹಾರಾ ಕಾಂಚ —ತ್ರಿಕೋಣ ಪ್ಲೇನ ಮೇಲೆ ಸ್ಪೈಲು ಹಾಕಿದ್ದು ೦-೧೧-೦

ಎಲ್ಲ ದರಗಳು ಪ್ಯಾಕಿಂಗ್ ಹೊರ್ತುಪಡಿಸಿ ಕಾರಖಾನೆಯ ಡಿಲಿವ್ಹರಿ ಎಂದು ತಿಳಿಯತಕ್ಕದ್ದು ಪ್ಯಾಕಿಂಗ್ ಒಂದು ಪೆಟ್ಟಿಗೆಗೆ ರೂ. ೧-೮-೦ ಬೇರೆ.

ಹೆಚ್ಚಿನ ಮಾಹಿತಿಗಾಗಿ ಬರೆಯಿರಿ

ಮೆಸರ್ಸ್ ಗೋರ ಮತ್ತು ಕಂಪೆನಿ,

ಮೊಹಮಾನ ಬಿಲ್ಡಿಂಗ, ಸರ್ ಫಿರೋಜಶಹಾ ಮೆಹತಾ ರೋಡ್ ಫೋರ್ಟ್, ಮುಂಬಯಿ.

ಇಂಗ್ಲಿಷರ ರಾಜ್ಯದಲ್ಲಿ ಇಂಗ್ಲಿಷರ ವಿರೋಧ ಪ್ರಚಾರ!

ದಕ್ಷಿಣ ಆಫ್ರಿಕದಲ್ಲಿ ಹಿಟ್ಲರನ ಅಂಧಾನುಕರಣೆ.

ಹಿಟ್ಲರನು ಒಡ್ಡಿದ ಪಿಡುಗು ಯುರೋಪಿನಲ್ಲಿ ಮಾತ್ರವಲ್ಲ, ಏಷ್ಯ, ಆಫ್ರಿಕ, ಅಮೇರಿಕ ಆಸ್ಟ್ರೇಲಿಯಗಳಲ್ಲಿಯೂ ಹರಡುತ್ತಲಿದೆ ಎಂಬುದಕ್ಕೆ ಈಗ ಪ್ರತ್ಯಕ್ಷ ಉದಾಹರಣೆಗಳು ದೊರೆಯಲಾರಂಭಿಸಿರುವವು ಒಂದೊಂದು ದೇಶವು ಆಯಾಯ ದೇಶವಾಸಿಯರಿಗಾಗಿಯೇ ಇರಬೇಕು ಎಂಬ ಹಿಟ್ಲರನ ತತ್ವವನ್ನನುಸರಿಸಿ, ದಕ್ಷಿಣ ಆಫ್ರಿಕದಲ್ಲಿ ಆಂದೋಲನವು ಆರಂಭವಾಗಿರುವುದು. ಆಫ್ರಿಕವು ಆಫ್ರಿಕನರಿಗಾಗಿ ಮಾತ್ರ ಇರಬೇಕೆಂಬುದು ಈ ಆಂದೋಲನದ ಆಶಯವಾಗಿದೆ

ಹೊರಗಿನ ಇಂಗ್ಲಿಷರಿಗೆ ಪ್ರವೇಶಕೊಡದು

ದಕ್ಷಿಣ ಆಫ್ರಿಕವು ಇಂಗ್ಲಿಷರ ರಾಜ್ಯ ಅಲ್ಲಿ ಇಂಗ್ಲಿಷರು ದೊಡ್ಡ ಸಂಖ್ಯೆಯಿಂದ ವಾಸವಾಗಿದ್ದಾರೆ. ಆದರೆ ಅವರು ಮಾತೃಸ್ಥಾನವಾದ ಇಂಗ್ಲಾಂಡಿನೊಡನಿರುವ ಎಲ್ಲಾ ಸಂಬಂಧಗಳನ್ನು ಕಡಿದುಕೊಂಡು ಪೂರ್ಣ ಸ್ವತಂತ್ರರಾಗಿರಬೇಕೆಂದು ಅಪೇಕ್ಷಿಸುವುದು ಮಾತ್ರವಲ್ಲ, ಇನ್ನು ಮುಂದೆ ದಕ್ಷಿಣ ಆಫ್ರಿಕವು ಈಗ ಅಲ್ಲಿ ಮನೆಮಾಡಿಕೊಂಡಿರುವವರಿಗಾಗಿ ಮಾತ್ರ ಇರಬೇಕು. ಹೊರಗಿನಿಂದ ಬರುವ ಇಂಗ್ಲಿಷರಿಗೆ ಕೂಡ ಅಲ್ಲಿ ಪ್ರವೇಶವು ದೊರೆಯಕೂಡದು ಎಂದು ಹೇಳಲಾರಂಭಿಸಿರುವರು

ಪಶುಬಲದಿಂದ ಕಾರ್ಯಸಾಧನೆ.

ಇಂಗ್ಲಾಂಡಿನಿಂದ ಬರುವ ಇಂಗ್ಲಿಷರಿಗೆ ಕೂಡ ದಕ್ಷಿಣ ಆಫ್ರಿಕದಲ್ಲಿ ಪ್ರವೇಶವಿರಬಾರದೆಂಬ ಮಾತಿಗೆ ಈಗಿನ ದಕ್ಷಿಣ ಆಫ್ರಿಕ ಸರಕಾರದ ಸಮ್ಮತಿಯಿರುವುದಿಲ್ಲ ಆದ್ದರಿಂದ ಸರಕಾರವು ಈ ಆಂದೋಲನವನ್ನು ವಿರೋಧಿಸಲಾರಂಭಿಸಿದೆ ಆದಕ್ಕೋಸ್ಕರ ಚಳವಳಿಗಾರರು ಪಶುಬಲದ ಮೂಲಕ ಕಾರ್ಯಸಾಧನೆ ಮಾಡಬೇಕೆಂದು ಹೊರಟಿರುವರು ಅವರು ಒಂದು ಗುಪ್ತಸೇನೆಯನ್ನು ಇಟ್ಟುಕೊಂಡಿರುವರು ಈ ಸೇನೆಯು ಅತ್ಯಾಧುನಿಕ ಅಸ್ತ್ರಶಸ್ತ್ರಗಳಿಂದ ಸುಸಜ್ಜಿತವಾಗಿರುವುದು. ಅದರ ಚಲನವಲನ ಕಾರ್ಯಕ್ರಮಗಳೆಲ್ಲ ಅತ್ಯಂತ ಗುಪ್ತವಾಗಿರುವವು. ಇಂಗ್ಲಾಂಡಿನಿಂದ ಅಥವಾ ಬೇರೆ ದೇಶಗಳಿಂದ ಯಾರೂ ಬಂದು ದಕ್ಷಿಣ ಆಫ್ರಿಕದಲ್ಲಿ ಮನೆಮಾಡಿಕೊಳ್ಳಬಾರದೆಂದು ಈ ಸೇನೆಯು ಪ್ರಯತ್ನಿಸುವುದು

ಇಂಗ್ಲಿಷರ ವಿರುದ್ಧ ಮತ್ತೊಂದು ಆಂದೋಲನ

ಮೇಲೆ ಹೇಳಿದ ಉದ್ದೇಶದಿಂದ ದಕ್ಷಿಣ ಆಫ್ರಿಕದಲ್ಲಿ ಎರಡನೆಯದೊಂದು ಚಳವಳಿಯು ಆರಂಭವಾಗಿದೆ ಇದು ಗುಪ್ತಸೇನೆಯನ್ನಿಟ್ಟುಕೊಂಡು ತನ್ನ ಕಾರ್ಯವನ್ನು ಅದರ ಮೂಲಕ ಸಾಧಿಸುವುದು ಫಿತೂರಿ ದಂಗೆಗಳ ಮೂಲಕ ಸರಕಾರವನ್ನು ಹೆದರಿಸಿ ಬೆದರಿಸಿ, ಅದನ್ನು ಸೋಲಿಸಿ ಓಡಿಸಿ ತನ್ನ ಮನೋರಥವನ್ನು ಪೂರೈಸುವುದು. ದಕ್ಷಿಣ ಆಫ್ರಿಕ ಸರಕಾರದ ಪ್ರಧಾನ ಮಂತ್ರಿ ಜನರಲ್ ಹರ್ಟ್‌ಜೋಗರ ಮಗ ಡಾಕ್ಟರ ಹರ್ಟ್‌ಜೋಗ ಎಂಬವರು ಈ ಎರಡನೆ ಆಂದೋಲನದ ಮುಖಂಡರಾಗಿರುವರು

ಪ್ರಧಾನದ ನಿಷೇಧ

ಹಿಟ್ಲರನ ನೀತಿಯನ್ನು ಅನುಸರಿಸಿ ಬ್ರಿಟಿಷ ಸಾಮ್ರಾಜ್ಯಕ್ಕೆ ಸೇರಿದ ಪ್ರತಿಯೊಂದು ದೇಶವು ತಮತಮಗಾಗಿ ಪ್ರತ್ಯಪ್ರತ್ಯೇಕ ಬಿಡಾರವನ್ನು ಮಾಡಿಕೊಳ್ಳುವದಾದರೆ ಬ್ರಿಟಿಷಸಾಮ್ರಾಜ್ಯವು ಕ್ಷಣಮಾತ್ರದಲ್ಲಿ ಒಡೆದು ಹೋಳುಹೋಳಾಗಿ ಹೋಗುವುದು ಮಾತ್ರವಲ್ಲದೆ ಸ್ವತಂತ್ರವಾದ ಈ ದೇಶಗಳು ಕೂಡ ತಮ್ಮ ರಕ್ಷಣೆಯನ್ನು ತಾವು ಮಾಡಿಕೊಳ್ಳಲಾರದೆ ಹಿಟ್ಲರನಂಥ ಸರ್ವತಂತ್ರ ಸ್ವತಂತ್ರ ಒಬ್ಬ ನಿರಂಕುಶ ಸರ್ವಾಧಿಕಾರಿಯ ಸ್ವಾರ್ಥಕ್ಕೆ ಬಲಿಯಾಗಲೂ ಬಹುದು ಮತ್ತೆ ಇಂಗ್ಲಿಷರೊಂದಿಗೆ, ಈ ಬೇರೆ ಬೇರೆ ದೇಶಗಳಲ್ಲಿ ವಾಸವಾಗಿರುವ ಇತರ ಜನರ ಸ್ಥಿತಿಗತಿಗಳು ಈಗಿನಕ್ಕಿಂತ ನಿಕೃಷ್ಟವಾಗುವವು ಆದ್ದರಿಂದ ತನ್ನ ಮಗನು ಹಿಟ್ಲರನ ಅಂಧಾನುಕರಣ ಮಾಡಿ ಆತ್ಮಘಾತಕ ಮತ್ತು ದೇಶಕ್ಕೆ ಅನಾಹುತಕಾರಿಯಾದ ನೀತಿಯನ್ನು ಅನುಸರಿಸಿರುವುದಕ್ಕಾಗಿ ಜನರಲ್ ಹರ್ಟ್‌ಜೋಗರು ಅವನನ್ನು ಬಹಿರಂಗವಾಗಿ ಟೀಕಿಸಿ ನಿಷೇಧಿಸಿದ್ದಾರೆ ಮತ್ತು ಈ ಎರಡು ಆಂದೋಲನಗಳ ಮೇಲೆ ಸರಕಾರದ ಕಠಿಣ ಕಾವಲನ್ನು ಇಟ್ಟು ದೇಶದ ನೆಮ್ಮದಿಗೆ ಭಂಗಕರವಾದ ಪ್ರಸಂಗಗಳನ್ನು ತಡೆಯುವ ಆಲೋಚನ ಮಾಡಿದ್ದಾರೆ.

ದೇಶದಲ್ಲಿ ತಯ್ಯಾರಾದ್ದು ಸ್ವದೇಶಿಯಲ್ಲ

ಮಹಾತ್ಮಾಜಿಯವರು ಮಾಡಿದ ಸ್ವದೇಶೀಯ ವ್ಯಾಖ್ಯೆ

ಯಾವುದು ಸ್ವದೇಶಿ ಮತ್ತು ಯಾವುದು ಸ್ವದೇಶಿಯಲ್ಲ ಎಂಬ ಕುರಿತು ಸ್ವದೇಶಿ ಚಳವಳಿಯು ಕಳೆದ ೨೫–೩೦ ವರ್ಷಗಳಿಂದ ನಡೆಯುತ್ತಿರುವಾಗಲೂ ಜನರು ತಿಳಿದಿರುವುದಿಲ್ಲ ಆದ್ದರಿಂದ ಈ ವಿಷಯದಲ್ಲಿ ಅಧಿಕಾರವಾಣಿಯಿಂದ ಮಾತನಾಡಬಲ್ಲ ಮಹಾತ್ಮಾಜಿಯವರು ಸ್ವದೇಶಿಯ ವ್ಯಾಖ್ಯೆಯನ್ನು ಮಾಡಿದ್ದು ಅದು ಜನರ ಗಮನಕ್ಕೆ ತರತಕ್ಕದ್ದಾಗಿದೆ

ಯಾವ ವಸ್ತುವಿನ ತಯ್ಯಾರಿ [illegible] ಮಾರಾಟದಿಂದ ದೇಶದ ಜನಸಾಮಾನ್ಯರ ಹಿತಸಾಧನೆಯಾಗುತ್ತದೋ, ಆ ವಸ್ತುವನ್ನೇ ನಿಜವಾದ ಸ್ವದೇಶಿ ಎಂದು ಕರೆಯಬಹುದಾಗಿ ಮಹಾತ್ಮಾಜಿಯವರು ಹೇಳುತ್ತಾರೆ ಆ ವಸ್ತುವಿನ ತಯ್ಯಾರಿಯಲ್ಲಿ ಬೇಕಾದರೆ, ವಿದೇಶಿ ಯಂತ್ರಗಳು ಇದ್ದಿರಬಹುದು ಅಥವಾ ವಿದೇಶಿಯರು ಆ ಕೈಗಾರಿಕೆಯ ಸಂಚಾಲನ ಮಾಡುತ್ತಿರಬಹುದು, ಹಾಗಾದರೂ ಚಿಂತೆ ಇಲ್ಲ, ಆ ಕೈಗಾರಿಕೆಯಿಂದ ದೇಶದ ಹಿತವಾಗುವುದಿದ್ದರೆ ಅದು ಸ್ವದೇಶಿಯೆ'

ಹೀಗೆ ಅಖಿಲಭಾರತ ಚರಕಾಸಂಘವು ವಿದೇಶೀ ತಜ್ಞರಿಂದ ನಡೆಸಲ್ಪಡಬಹುದು, ಅದರ ಭಂಡವಾಳವು ವಿದೇಶದಿಂದಲೇ ಬರಬಹುದು ಆದರೆ ಅದರ ಆಡಳಿತ ಸೂತ್ರವು ದೇಶೀಯರ ಕೈಯಲ್ಲಿದ್ದು, ಅದರಲ್ಲಿ ತಯ್ಯಾರಾದ ಖಾದಿ ಬಟ್ಟೆಯಿಂದ ಮಿಲಿಯಾಂತರ ದೇಶೀಯರಿಗೆ ಒಂದು ತುತ್ತು ಅನ್ನವಾದರೂ ಸಿಕ್ಕುತ್ತಿರುವಷ್ಟು ಕಾಲ ಖದ್ದರು ಸ್ವದೇಶಿಯಾಗಿದೆ.

ವಿದೇಶಿ ಆಡಳಿತದ ದುಷ್ಪರಿಣಾಮ

ಇದಕ್ಕೆ ಪ್ರತಿಯಾಗಿ ಬಾಟಾ ಚರ್ಮದ ಕಾರ್ಖಾನೆ ಇದೆ. ಈ ಕಾರ್ಖಾನೆಯಲ್ಲಿ ಪೂರ್ಣ ದೇಶೀ ಭಂಡವಾಳ ಮತ್ತು ಪೂರ್ಣ ದೇಶೀ ಪರಿಶ್ರಮ ಇರಬಹುದಾಗಿದ್ದರೂ ಈ ಕಾರ್ಖಾನೆಯ ಒಡವೆಗಳು ಸ್ವದೇಶೀ ಎನ್ನಿಸಲಾರವು. ಯಾಕೆಂದರೆ ಕಾರ್ಖಾನೆಯ ಆಡಳಿತವು ವಿದೇಶಿಯರ ಕೈಯಲ್ಲಿರುತ್ತದೆ, ಮತ್ತು ಈ ಕಾರ್ಖಾನೆಯಲ್ಲಿ ತಯ್ಯಾರಾದ ಒಡವೆಗಳು ಅಗ್ಗಕ್ಕೆ ಮಾರಿ ದೇಶೀ ಸಮುಗಾರರ ಬಾಯಿಗೆ ಮಣ್ಣು ಮಾಡುವುವು. ಅದರಿಂದ ದೇಶಕ್ಕೆ ಎರಡು ರೀತಿಯಿಂದ ನಷ್ಟವಾಗುವುದು ಬಾಟಾ ಕಾರ್ಖಾನೆಯ ದುಷ್ಪರಿಣಾಮವನ್ನು ಬಿಹಾರಿನ ಸಮುಗಾರರು ಈಗಾಗಲೇ ಅನುಭವಿಸ ತೊಡಗಿದ್ದಾರೆ. ಆದ್ದರಿಂದ ಬಾಟಾ ಕಾರ್ಖಾನೆಯ ಒಡವೆಗಳು ಎಷ್ಟು ಮಾತ್ರಕ್ಕೂ ಸ್ವದೇಶಿಯಾಗಲಾರವು.



ವಿಶ್ವಭಕ್ತ ನಗರ

ವಿದೇಶಿ ಭಂಡವಾಳ ಬೇಡವೆನ್ನುವುದಿಲ್ಲ

ಅಖಿಲಭಾರತ ಚರಖಾಸಂಘದ ನಂತರ ವಾಳವೂ ಪರಿಶ್ರಮವೂ ಆಡಳಿತವೂ ಪೂರ್ಣವಾಗಿ ಈ ದೇಶದ್ದಾಗಿದೆ. ಆದರೂ ಕೂಡ ಮಹಾತ್ಮಾಜಿಯವರು ವಿದೇಶಿ ಭಂಡವಾಳದ ವಿರೋಧಿಯಾಗಿರುವುದಿಲ್ಲ ಖದ್ದರಿನಿಂದ ಕೈಗಾರಿಕೆಯ ಪ್ರಚಾರಕ್ಕೆ ವಿದೇಶಿ ಭಂಡವಾಳವು ದೊರೆಯುವುದಾದರೆ ಅವರದನ್ನು ಸಂತೋಷದಿಂದ ಸ್ವೀಕರಿಸುವರು ಹಾಗೆಯೇ ವಿದೇಶದ ಒಬ್ಬ ಇಂಜಿನಿಯರನು ಈಗ ಹಳ್ಳಿಗಳಲ್ಲಿ ಪ್ರಚಾರದಲ್ಲಿರುವ ಚರಕಗಳಿಗಿಂತ ಹೆಚ್ಚು ಉತ್ತಮವಾದ ಚರಕಗಳನ್ನು ಕಂಡು ಹಿಡಿಯುವದಾದರೆ, ಆ ಇಂಜಿನಿಯರರನ್ನು ಅವರು ಹೃದಯಪೂರ್ವಕ ಶ್ಲಾಘಿಸುವವರಾಗಿದ್ದಾರೆ.

ನಿಜವಾದ ಸ್ವದೇಶಿ

~~ನಮ್ಮ ದೇಶವು ಅಂದರೆ ಅದೊಂದು ಹಳ್ಳಿ~~ಗಳ ದೇಶ. ಈ ದೇಶದಲ್ಲಿ ವಾಸವಾಗಿರುವವರು ಹೆಚ್ಚಾಗಿ ಹಳ್ಳಿಗಳಲ್ಲಿದ್ದಾರೆ ಅವರೆಲ್ಲರೂ ಸಾಮಾನ್ಯತಃ ಅತ್ಯಂತ ಬಡವರು. ಅವರ ಬಡತನದಿಂದ ದೇಶವೇ ಬಡವಾಗಿದೆ ಆದ್ದರಿಂದ ಯಾವ ಕೈಗಾರಿಕೆಗಳ ಪ್ರಚಾರ ಪ್ರಸಾರಗಳಿಂದ ಅಂಥ ಹಳ್ಳಿವಾಸಿಗಳ ಜನರ ಬಡತನವು ದೂರವಾಗಿ ಅವರ ಸಂಪದಭಿವೃದ್ಧಿಯಾಗುವುದೋ, ಅಂಥ ಕೈಗಾರಿಕೆಗಳಲ್ಲಿ ಸಿದ್ಧವಾದ ಸಾಮಾಗ್ರಿಗಳೇ ನಿಜವಾದ ಸ್ವದೇಶಿ ಸಾಮಾಗ್ರಿಗಳಾಗಿರುವವು. ಅಂಥ ಸ್ವದೇಶಿಯ ಪ್ರಚಾರ ಪ್ರಸಾರಗಳಿಂದ ದೇಶವು ಸಂಪನ್ನವಾಗುವುದು. ಆದ್ದರಿಂದ ಗ್ರಾಮೋದ್ಯೋಗಗಳೊಡನೆ ಸ್ಪರ್ಧಿಸಿಸಲ್ಲದಂಥ ಕೈಗಾರಿಕೆಗಳು ದೇಶೀಯವಾಗಿದ್ದರೂ ಕೂಡ, ಅವು ಮಹಾತ್ಮಾಜಿಯವರ ದೃಷ್ಟಿಯಲ್ಲಿ ಸ್ವದೇಶಿಯೆನಿಸದು ಸ್ವದೇಶಿ ಪ್ರೋತ್ಸಾಹಕರು ಇದನ್ನು ನೆನಪಿನಲ್ಲಿಡಬೇಕು

ನೋಟಿಸು

ಕಾರ್ಕಳ ಡಿ। ಮುನ್ಸಿಫ್ ಕೋರ್ಟಿನಲ್ಲಿ

O P N 21 1939

1 ಸಿಲ್ವ ಕುರಿಸ್—ಜೋಸೆಫ್ ಪ್ರಾನ್ಸಿಸ್ ಅರಂಜಾರ ವಿಧವೆ, 2 ಲಿಗೋರಿ ಅರಂಜಾ, 3 ಮಾಗ್ದಲಿನ ಅರಂಜಾ ಜೋಸೆಫ್ ಪ್ರಾನ್ಸಿಸ್ ಅರಂಜಾರ ಮಕ್ಕಳು, ಮಂಗಳೂರು ತಾಲೂಕು ಇನ್ನ ಗ್ರಾಮದಲ್ಲಿರುವವರು.— ಅರ್ಜಿದಾರರು.

ಮಂಗಳೂರು ತಾಲೂಕು ಇನ್ನ ಗ್ರಾಮದಲ್ಲಿದ್ದು, ತಾ. 18—8 1938ರಲ್ಲಿ ಮೃತಪಟ್ಟ ಸದ್ರಿ ಜೋಸೆಫ್ ಪ್ರಾನ್ಸಿಸ್ ಅರಂಜಾರಿಗೆ The Canara Banking Corporationನ ~~ಶಿರ್ವ ಬ್ರೇಂಚ್ ಆಫೀಸಿನ F. D. No. 11/~~ 1938/18—2—1938ನೇಗೆ ವ Savings account No. 47/38ನೇಗೆ ಸಹಾ ಬರತಕ್ಕ ಐವೇಜುಗಳನ್ನು ಪಡಕೊಳ್ಳುವರೆ ತಮಗೆ ತಕ್ಕದಾದ ಸಕ್ಸೆಸನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಕೊಟ್ಟಿರುವ ಮೇಲ್ಕಾಣುವ ಅರ್ಜಿಯು ತಾ. 31-3-1939ಕ್ಕೆ ಇಟ್ಟಿದೆಯಾಗಿಯೂ ಆ ಕುರಿತು ತಕ್ಷೇಪವುಳ್ಳವರು ಆ ದಿನ ಬೆಳಿಗ್ಗೆ 10 ಗಂಟೆಯೊಳಗೆ ಮೇಲ್ಕಾಣುವ ಕೋರ್ಟಿನ ಮುಂದೆ ಹಾಜರಾಗಿ ತಿಳಿಸಿಕೊಳ್ಳಬೇಕಾಗಿಯೂ ಈ ಮೂಲಕ ಸರ್ವಜನರಿಗೂ ತಿಳಿಯಪಡಿಸಲಾಗುತ್ತದೆ.

(By order of the Court)

ಕಾರ್ಕಳ, 19-3-39. P. V. Upadhyaya, B.A., LL.B. Vakil for Petitioners

ಮೊದಲಿಗಿಂತಲೂ ರಕ್ತದ ಒತ್ತಾಟವು ಕಡಿಮೆಯಾಯಿತು.

ಕ್ರುಶೆನ್ ಲವಣವನ್ನು ಸೇವಿಸಿದವರ ಅನುಭವ.

ಅವನ ಎಲ್ಲ ರೋಗಗಳೂ ಮಾಯವಾದುವು

ಅಧಿಕವಾದ ರಕ್ತದ ಒತ್ತಾಟವನ್ನು ತಗಲಿ ಕ್ಷತಿಮಾಡಬೇಕೆಂಬುದಕ್ಕೆ ಡಾಕ್ಟರರು ಒಪ್ಪುತ್ತಾರೆ ತಲೆನೋವು ಮತ್ತು ಆಲಸ್ಯವೇ ಇದರ ಪ್ರಾರಂಭದ ಲಕ್ಷಣಗಳು ಇದು ಮುಂಬರುವ ಭಯಂಕರ ರೋಗದ ಪ್ರಕೃತಿ ಲಕ್ಷಣ ಈ ಕೆಳಗಿನ ರಕ್ತದ ಒತ್ತಾಟದ ಒಂದು ಸ್ವಾರಸ್ಯವಾದ ಲೇಖನವನ್ನು ಓದಿರಿ,

"ನಾನು ವರ್ಷಗಟ್ಟಲೆ ಬಹಳವಾದ ರಕ್ತದ ಒತ್ತಾಟ ಮತ್ತು ಇತರ ರೋಗಗಳಿಂದ ನರಳುತ್ತಿದ್ದೆ ನಾನು ಎಲ್ಲಾ ತರದ ಮದ್ದುಗಳನ್ನು ಉಪಯೋಗಿಸಿದೆ ಆದರೆ ತಾತ್ಕಾಲಿಕ ಗುಣ ಮಾತ್ರ ದೊರಕುತಿತ್ತು ಆದರೆ ಎರಡು ಡೋಸುಗಳಲ್ಲಿಯೇ ಕ್ರುಶೆನ್ ಲವಣವು ನನ್ನನ್ನು ಗುಣಪಡಿಸಿತು ನನಗೆ ಇದು ಸ್ಫೂರ್ತಿಯನ್ನುಂಟುಮಾಡಿತು ಉತ್ತೇಜನಗೊಳಿಸಿತು. ಪ್ರತಿನಿತ್ಯ ಅರ್ಧ ಚಮಚ ಕ್ರುಶನ್ ಲವಣ ಸೇವಿಸುವುದರಿಂದ ನನಗೆ ಈಗ ಮೊದಲಿದ್ದ ಆಲಸ್ಯತನ, ತಲೆನೋವು, ತಲೆಭಾರ, ಹೃದ್ರೋಗ, ಮುಂತಾದ ಯಾವ ಬಾಧೆಯೂ ಕಂಡುಬರುವುದಿಲ್ಲ"

ಎಫ್. ಓ.

ಜನತೆಗೆ ಬಾಧೆಯುಂಟುಮಾಡುವ ಎಲ್ಲಾ ರೋಗಗಳು ಉದರದೊಳಗಿರುವ ಹೊಲಸು ಪದಾರ್ಥಗಳಿಂದ ಆಗುವುದು ದೇಹದ ಒಳಭಾಗವನ್ನು ಶುದ್ಧಗೊಳಿಸದಿದ್ದರೆ ರಕ್ತದಲ್ಲಿ ವಿಷಕರವಾದ ಪದಾರ್ಥವುಂಟಾಗಿ ಅಧಿಕವಾದ ರಕ್ತದ ಒತ್ತಾಟವುಂಟಾಗುವುದು ಇದರಿಂದಾಗಿ ಪ್ರತಿ ಅಂಗಾಂಗಗಳ ಬಾಧೆಗೊಳಪಡುವುವು ಹೃದಯವು ಕೂಡಾ ರಕ್ತ ಚಲನದ ಅಧಿಕ ಶ್ರಮದಿಂದ ಕೆಲಸಮಾಡಬೇಕಾಗುವುದು ಇದೆಲ್ಲವು ಸಮಯಕರವಾದ ಅಧಿಕ ರಕ್ತದ ಒತ್ತಾಟದ ಪರಿಣಾಮ.



ಕ್ರುಶನ್ ಲವಣವು [illegible] ರಕ್ತವನ್ನು ಶುದ್ಧಪಡಿಸುತ್ತದೆ

ಕ್ರುಶನ್ ಲವಣವು ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಕೊಡಲ್ಪಡುತ್ತದೆ No. 21

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಂಟ್‌ವರ್ಪಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿಗೆ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚಮಕ, ಬಣ್ಣ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್, ಮಂಗಳೂರು.

ಭಾರತ ವಿಭಜನೆಗೆ ಅವಾಂಛನೀಯ!

ಪ್ರಾಂತ್ಯ ಸಂಸ್ಥಾನಗಳೊಳಗೆ ಬಂಧು ಭಾವ ಇರಬೇಕು

ಬ್ರಿಟಿಷ ಇಂಡಿಯದ ಪ್ರಾಂತ್ಯಗಳು ಮತ್ತು ದೇಶೀ ಸಂಸ್ಥಾನಗಳೊಳಗೆ ಯಾವ ಪ್ರಕಾರದ ಸಂಬಂಧವು ಇರಬೇಕು ಎಂಬ ಚರ್ಚೆಯು ಈಗ ಸಾರ್ವತ್ರಿಕವಾಗಿ ನಡೆಯುತ್ತಿದೆ. ಬ್ರಿಟಿಷ ಇಂಡಿಯಾವನ್ನು ದೇಶೀ ಸಂಸ್ಥಾನಗಳಿಂದ ಪ್ರತ್ಯೇಕವೆಂದು ತಿಳಿಯಬೇಕಾಗಿ ಕೆಲವರ ಪ್ರಯತ್ನಗಳಾಗುತ್ತಲಿವೆ. ಈ ಸಂದರ್ಭದಲ್ಲಿ ನಾವು ಕೆಲವು ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅಗತ್ಯ. ಆಗ ಮಾತ್ರ ಅಖಿಲಭಾರತಕ್ಕೆ ಹಿತಕಾರಿಯಾದ ಒಂದು ನಿರ್ಧಾರಕ್ಕೆ ಬರಬಹುದು ಎಂದು ಮಿ. ಯಚ್ ಯಸ್. ಪೋಲ್. ಪೋಲಕರು ಮೆಂಚೆಸ್ಟರ ಗಾರ್ಡಿಯನದಲ್ಲಿ ಬರೆಯುತ್ತಾರೆ

ಭೌಗೋಲಿಕದೃಷ್ಟಿಯಿಂದ ಭಾರತವನ್ನು ಬ್ರಿಟಿಷ ಇಂಡಿಯದ ಪ್ರಾಂತ್ಯಗಳು ಮತ್ತು ದೇಶೀ ಸಂಸ್ಥಾನಗಳೆಂದು ವಿಂಗಡಿಸಲಿಕ್ಕೆ ಬರುವುದಿಲ್ಲ. ಇವೆರಡರ ಮೇರೆಗಳು ಅನೇಕ ಕಡೆಗಳಲ್ಲಿ ಒಂದನ್ನೊಂದು ಕೂಡಿಕೊಂಡಿವೆ ಕೆಲವು ಬಾರಿ ಅವುಗಳನ್ನು ಗುರುತಿಸಲಿಕ್ಕೆ ಕೂಡ ಬರುವುದಿಲ್ಲ ಹಾಗೆಯೇ ಸಾಂಸ್ಕೃತಿಕ ದೃಷ್ಟಿಯಿಂದ ಕೂಡ ಈ ಎರಡು ವಿಭಾಗಗಳು ಬಹುಕಾಲದಿಂದ ಒಂದೇಯಾಗಿ ಉಳಿದಿರುವುವು

ಮುಂದಾಳುತನ

ಅನೇಕ ಬಾರಿ ಬ್ರಿಟಿಷ ಇಂಡಿಯದ ಜನರು ದೇಶೀಸಂಸ್ಥಾನಗಳ ಮುಂದಾಳುಗಳಾಗಿದ್ದಾರೆ ದೇಶೀಸಂಸ್ಥಾನಗಳ ಜನರು ಬ್ರಿಟಿಷ ಇಂಡಿಯದ ಮುಂದಾಳುಗಳಾಗಿದ್ದಾರೆ ಮೊದಲನೇ ಶ್ರೇಣಿಗೆ ಸೇರಿದ ಮೂರು ದೊಡ್ಡ ಸಂಸ್ಥಾನಗಳಲ್ಲಿ ಬ್ರಿಟಿಷಇಂಡಿಯದವರು ದಿವಾನರಾಗಿರುವರು. ಮತ್ತೆ ಸಂಸ್ಥಾನದಲ್ಲಿ ಕೆಲಸ ಮಾಡುವಂಥವರು ಅನೇಕರು ರಾಷ್ಟ್ರಸಭೆಯಲ್ಲಿದ್ದಾರೆ ರಾಷ್ಟ್ರಸಭೆಯ ಅನೇಕ ಕೆಲಸಗಾರರು ಸಂಸ್ಥಾನಗಳಲ್ಲಿದ್ದಾರೆ. ಮಹಾತ್ಮಾಗಾಂಧಿ, ಜಮುನಾಲಾಲ ಬಜಾಜ, ಸರ್ ಪ್ರಭಾಶಂಕರ ಪಟ್ಟಣಿ ಮೊದಲಾದವರು ಬ್ರಿಟಿಷ ಇಂಡಿಯ ಮತ್ತು ದೇಶಿಸಂಸ್ಥಾನಗಳೆರಡರಲ್ಲೂ ಹಿತಾಸಕ್ತಿಗಳಿರುವವರು

ಆದ್ದರಿಂದ ಬ್ರಿಟಿಷ ಇಂಡಿಯ ಮತ್ತು ದೇಶೀಸಂಸ್ಥಾನಗಳನ್ನು ಪ್ರತ್ಯಪ್ರತ್ಯೇಕವೆಂದು ಭಾವಿಸಿ, ಅವುಗಳ ಹಿತಸಾಧನೆಯು, ಅವುಗಳಲ್ಲಿ ವಾಸವಾಗಿರುವ ಜನರಿಂದಲೇ ಆಗಬೇಕೆನ್ನುವುದು ಅವಾಂಛನೀಯವಾಗಿದೆ. ಒಬ್ಬರಿಗೆ ಇನ್ನೊಂದರಲ್ಲಿ ಹಿತಾಶಕ್ತಿ ಇಂಕೂಡದೆನ್ನುವುದು ತಪ್ಪಾಗಿದೆ. ಸಂಸ್ಥಾನಗಳ ಚಟುವಟಿಕೆಗಳಲ್ಲಿ ಬ್ರಿಟಿಷ ಇಂಡಿಯದ ಭವಿಷ್ಯನಿರ್ಮಾಣದಲ್ಲಿ ಸಂಸ್ಥಾನಗಳ ಜನರೂ ಭಾಗತೆಗೆದುಕೊಳ್ಳಬಹುದು ಹೀಗೆ ಮಾಡುತ್ತಿರಲಿಕ್ಕೆ ಎಲ್ಲಿಂದಲೂ ಯಾವ ಪ್ರಕಾರದ ನಿರ್ಬಂಧ ಅಥವಾ ತಡೆ ಇರಕೂಡದಾಗಿದೆ

ಜಯಪುರದ ನಿರ್ಬಂಧ

ಜಯಪುರದ ಪ್ರಜಾಮಂಡಲವನ್ನು ಅಲ್ಲಿಯ ಸರಕಾರವು ಮನ್ನಿಸಬೇಕಾದರೆ ಅದು ಸಂಸ್ಥಾನದ ಹೊರಗಿನ ಯಾವ ರಾಜಕೀಯ ಸಂಸ್ಥೆ ಅಥವಾ ವ್ಯಕ್ತಿಯ ಸಂಬಂಧವನ್ನಿಟ್ಟುಕೊಂಡಿರಬಾರದೆಂದು ಸರಕಾರವು ಹೊಸದೊಂದು ಆಜ್ಞಾ ಪತ್ರವನ್ನು ಹೊರಡಿಸಿದೆ ಶ್ರೀ ಜಮುನಾಲಾಲರಂಥ ಪ್ರತಿಭಾ ಸಂಪನ್ನ ಮತ್ತು ಕರ್ತೃತ್ವಶೀಲ ವ್ಯಕ್ತಿಗಳನ್ನು ಸಂಸ್ಥಾನದ ಸಾರ್ವಜನಿಕ ಚಟುವಟಿಕೆಗಳಿಂದ ಹೊರಗಿಡಬೇಕೆಂಬ ಉದ್ದೇಶದಿಂದಲೇ ಸರಕಾರವು ಹೀಗೆ ಹೇಳಿದೆ ಎಂದು ತಿಳಕೊಳ್ಳಬಹುದು ಆದರೆ ಇಂಥ ನಿರ್ಬಂಧವು ಎಷ್ಟು ಅನ್ಯಾಯ, ಪೂರ್ಣ ಮತ್ತು ಅಜಾತ ಯದ್ದು ಎಂಬದನ್ನು ಮಿ ಪೋಲಕರ ಮೇಲ್ಕಂಡ ಅಭಿಪ್ರಾಯದಿಂದ ತಿಳಕೊಳ್ಳಬಹುದು

ಆಫ್ರಿಕದ ಪಾಳಯಗಾರರಿಗೆ ಜರ್ಮನಿ ಮಾಡಿದ ಮೋಸ

ಆಫ್ರಿಕದಲ್ಲಿ ಜರ್ಮನಿಗಿದ್ದ ಹಿಂದಿನ ವಸಾಹತುಗಳನ್ನು ಪುನಃ ಜರ್ಮನಿಗೇ ಕೊಡಬೇಕೆಂದು ಹಿಟ್ಲರನು ಕೇಳುತ್ತಿರುವನು. ಮಹಾಯುದ್ಧದಲ್ಲಿ ಜರ್ಮನಿಯು ಸೋತಿರಲು, ಆ ವಸಾಹತುಗಳು ಇಂಗ್ಲಿಷರ ವಶವಾದುವು

ಆದರೆ ಈಗ ಇಂಗ್ಲೀಷರಿಂದ ಹಿಟ್ಲರನ ಕೇಳುತ್ತಿರುವ ವಸಾಹತುಗಳ ಮೊದಲು ಜರ್ಮನಿಯ ಅಧೀನಕ್ಕೆ ಹೇಗ ಬಂದುವೆಂಬ ಕುರಿತ ಮನೋರಂಜಕ ಇತಿಹಾಸವಿದೆ ಪಾಶ್ಚಾತ್ಯ ರಾಷ್ಟ್ರಗಳು ಕರಿಜನರ ಆಫ್ರಿಕವನ್ನು ಹೇಗೆ ತಮ್ಮೊಳಗೆ ಹಂಚಿಕೊಳ್ಳಬೇಕೆಂದು ಆಲೋಚಿಸಲಿಕ್ಕೆ ೧೮೮೪ರಲ್ಲಿ ಬರ್ಲಿನ ನಗರದಲ್ಲಿ ಬೇರೆ ಬೇರೆ ಸರಕಾರಗಳ ಪ್ರತಿನಿಧಿ ಸಭೆಯು ಕೂಡಿದ್ದಿತು ಜರ್ಮನ ಸಮ್ರಾಟ ಬಿಸ್ಮಾರ್ಕನು ಈ ಸಭೆಯ ಅಧ್ಯಕ್ಷನಾಗಿದ್ದನು. ಈ ಸಭೆಯು ಆಲೋಚನೆ ಮಾಡುತ್ತಿರಲು ಇತ್ತ ಅನ್ನುವಾಗ್ಗೆ ಜರ್ಮನಿಯ ಕಾರ್ಲ ಪೀಟರ್ಸ ಎಂಬವನು ತನ್ನ ಇಬ್ಬರು ಸಂಗಾತಿಗಳೊಂದಿಗೆ ಯಾರಿಗೂ ತಿಳಿಯದಂತೆ ಹೆಸರು ಬದಲಾಯಿಸಿಕೊಂಡು ಆಫ್ರಿಕವನ್ನು ಸೇರಿದನು

ಆ ಸಮಯದಲ್ಲಿ ಆಫ್ರಿಕದ ಬೇರೆ ಬೇರೆ ಪ್ರದೇಶಗಳನ್ನು ಸಣ್ಣ ಸಣ್ಣ ಪಾಳಯಗಾರರು ಆಳಿಕೊಂಡಿದ್ದರು ಆ ಪಾಳಯಗಾರರು ಓದಿಬರೆಯಲಿಕ್ಕೆ ಕೂಡ ಸಮರ್ಥರಾಗಿರಲಿಲ್ಲ ಅವರು ನಿರಕ್ಷರರು ಮಾತ್ರವಲ್ಲ, ಬೋಳೆಭಾವಿಕರೂ ಆಗಿದ್ದರು. ಕಾರ್ಲಪೀಟರ್ಸನು ತನಗೆ ಅನುಕೂಲವಾಗುವಂತೆ ಬರೆದ ಸಂಧಿಪತ್ರಗಳ ಮೇಲೆ ಆ ಬೋಳೆ ಪಾಳಯಗಾರರ ಹಸ್ತಾಕ್ಷರಗಳನ್ನು ಪಡೆದನು. ಪಾಳೆಯಗಾರರಿಗೆ ತಾವೇನು ಮಾಡುತಿದ್ದೇವೆಂಬುದರ ತಿಳಿವು ಕೂಡ ಇರಲಿಲ್ಲ. ತಾವು ತಮ್ಮ ಪ್ರದೇಶಗಳನ್ನು ಜರ್ಮನಿಗೆ ಕೊಟ್ಟಿರುವೆವೆಂಬ ಮಾತಿಗೆ ಒಪ್ಪಿಗೆಯಾದ ಹಾಗೆ ಅವರು ಆ ಸಂಧಿಪತ್ರಗಳಿಗೆ ತಮ್ಮ ಹಸ್ತಾಕ್ಷರಗಳನ್ನು ಕೊಟ್ಟಿದ್ದರು ಹೀಗೆ ಮೋಸ ಮತ್ತು ವಂಚನೆಯಿಂದ ಆಫ್ರಿಕದ ವಸತಿಗಳು ಆ ಕಾಲಕ್ಕೆ ಜರ್ಮನಿಯನ್ನು ಸೇರಿದುವು ಈ ಸಂಗತಿಯು ಮುಂದೆ ಪಾಳಯಗಾರರ ತಿಳುವಳಿಕೆಗೆ ಬಂದಿತಾದರೂ ಅವರು ಅಸಹಾಯರಿದ್ದರು. ಪಾಶ್ಚಾತ್ಯರ ಪಡೆಯುದಲ್ಲಿದ ಅವರಿಗೆ ಈ ಅನ್ಯಾಯವನ್ನು ವಿರೋಧಿಸುವ ಬೇರೆಯಾವ ಉಪಾಯವೂ ಇರಲಿಲ್ಲ. ಪ್ರಾಣಹಾನಿಯಾಗ ದಂತೆ ಅವರು ಜರ್ಮನರ ಈ ಅನ್ಯಾಯವನ್ನು ಸುಮ್ಮನೆ ಸಹಿಸಿ ತಮ್ಮನ್ನು ತಾವು ಬಲಿಕೊಟ್ಟರು.

ಜರ್ಮನಿಯ ಸೈನ್ಯ ಆಫ್ರಿಕಕ್ಕೆ

ಆದೇ ವಸಾಹತ ಈಗ ಪುನಃ ಜರ್ಮನಿಯ ಅಧೀನ ಮಾಡಲಿಕ್ಕೆ ಹಿಟ್ಲರನು ಎಲ್ಲ ಸಿದ್ಧತೆಗಳನ್ನು ಮಾಡಿರುವನು. ಆಫ್ರಿಕಕ್ಕೆ ಒಂದು ಜರ್ಮನ ಸೇನೆಯನ್ನು ಕಳುಹಿಸಿ ಕೊಡಲಿಕ್ಕೆ ಗುಪ್ತ ತಯಾರಿಗಳು ನಡೆಗಿವೆ ಸೇನೆಗೆ ಸೇರಿದ ಎಷ್ಟೋ ಜನ ಸ್ವಯಂ ಸೇವಕರಿಗೆ ಮಲೇರಿಯದ ರೋಗ ತಾಕದಿರಲು ಹಾಗೆಯೇ ಉಷ್ಣ ಹವೆಯುಳ್ಳ ದೇಶಗಳಲ್ಲಿ ಕೆಲಸಮಾಡಲು ಅನುಕೂಲವಾಗುವಂಥ ವಿಶೇಷತರದ ಉಡಿಗೆಯನ್ನು ಹಂಚಿದ್ದಾರೆ ಉಷ್ಣವಲಯದಲ್ಲಿ ತಲೆಗಿಡಲಿಕ್ಕಾಗುವ ಟೋಪ್ಪಿಗಳನ್ನು ತಯಾರಿಸಲಿಕ್ಕೆ ಜರ್ಮನಿಯಲ್ಲಿ ಒಂದು ಕಾರ್ಖಾನೆಯು ಸ್ಥಾಪಿಸಲ್ಪಟ್ಟಿದೆ ಇಷ್ಟೆಲ್ಲ ಸಿದ್ಧತೆಗಳು ಆಫ್ರಿಕಕ್ಕೆ ಜರ್ಮನ ಸೇನೆಯನ್ನು ಕಳುಹಿಸಲಿಕ್ಕಾಗಿಯೇ ಆಗಿರುವವೆಂದು ಊಹಿಸಲ್ಪಟ್ಟಿದೆ ಆಫ್ರಿಕಕ್ಕೆ ಜರ್ಮನ ಸೇನೆಯನ್ನು ಗುಪ್ತರೀತಿಯಿಂದ ಕಳುಹಿಸುವ ಉದ್ದೇಶವು ಕೂಡ, ಮಹಾಯುದ್ಧದಲ್ಲಿ ಕಳಕೊಂಡ ವಸಾಹತುಗಳನ್ನು ಪುನಃ ಜರ್ಮನಿಗೆ ಸೇರಿಸಲಿಕ್ಕಾಗಿ ಎಂದೇ ತಿಳಿಯಲ್ಪಟ್ಟಿದೆ

ನೆಗಡಿ ಮತ್ತು ಕೆಮ್ಮಿಗೆ : : :
— — — ಯೋಗ್ಯವಾದ ಮದ್ದು.

ಕಂಠನಾಳ, ಹೃದಯ ಮತ್ತು ಶ್ವಾಸಕೋಶಗಳ ನರಳುವಿಕೆಗೆ ಪೆಪ್ಸ ಮಾತ್ರೆಯು ರೂಪದಲ್ಲಿ ಯೋಗ್ಯವಾದ ಶ್ವಾಸನೀಯ ಔಷಧಿಯಾಗಿರುತ್ತದೆ ಇದರ ಆಶ್ಚರ್ಯಕರವಾದ ಗುಣಪಡಿಸುವ ಮಹತ್ವವು ಹೆಸರುವಾಸಿಯಾದ ಪೈನ ನಾಸಿನ ಅರಣ್ಯದ ವಾಯುವಿಗೆ ಸಮನಾದುದು.

ಪೆಪ್ಸ ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನಿಮ್ಮ ಶ್ವಾಸಕೋಶಗಳನ್ನು ಪ್ರವೇಶಿಸುತ್ತದೆ ಈ ಪ್ರಕಾರವಾಗಿ ಪೆಪ್ಸ ನಿಮ್ಮ ಶ್ವಾಸೇಂದ್ರಿಯಗಳನ್ನು ಪ್ರವೇಶಿಸುತ್ತದೆ ಕಂಠಬೇನೆಯನ್ನು ನಿವಾರಿಸುತ್ತದೆ ಶ್ವಾಸನಾಳಗಳು ಬಾತುಕೊಳ್ಳುವುದನ್ನು ನಿವಾರಿಸಿ ಹೃದಯವನ್ನೂ ಶ್ವಾಸಕೋಶಗಳನ್ನೂ ಬಲಪಡಿಸುತ್ತದೆ.

ಎಲ್ಲಾ ಔಷಧಿವ್ಯಾಪಾರಿಗಳು ಪೆಪ್ಸನ್ನು ರೂ. ೧ರಂತೆ ಮಾರುತ್ತಾರೆ

ಏಜೆಂಟ್ಸ್ ಮೆಸರ್ಸ್ ದಾಥಾ ಮತ್ತು ಕಂಪನಿ,
ಪಾರ್ಕ್ ಟೌನ್, ಮದ್ರಾಸು.

ಯಾವಾಗಲೂ ಪೆಪ್ಸನ್ನೇ ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೋಯ್ಲೆಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಸಲುವಾಗಿ ಕಾರ್ಖಾನೆದಾರರ ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸಲ್ಯಪತ್ರಗಳನ್ನು ಏಜಂಟರ ಹೆಸರು ಹಾಕಿ ಸಿನಿಮಾದಲ್ಲಿ ತೋರಿಸುವರು ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತ ಕೊಡುವುದು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು, ಮತ್ತು ಶೋಕಾರ್ಡುಗಳು ಕೊಡಲ್ಪಡುವವು ೪) ಸ್ಟೇಷನ್ ಡಲಿವರಿ ಕೊಡುವರು ನಮ್ಮ ಕಿಮ್ಮತಿಗೆ ಸ್ಪರ್ಧಿಸಿ ಮಾಲು ಪರದೇಶದಿಂದ ಬರುವಂತೆ ಇಲ್ಲ. ಏಜಂಟರಿಗೆ ಹೆಚ್ಚಾಗಿ ಕಮಿಶನ್ ಕೊಡಲಾಗುವುದು ಕನ್ನಡ ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು

ವಿಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎಸ್. ಎಮ. ಷಾ ಮತ್ತು ಕಂಪೆನಿ,
ವಿಲೆ ಪಾರ್ಲೆ ಮುಂಬಯಿ

ಅತ್ಯುತ್ತಮ ಹೇರ್ ಆಯಿಲ್

ಎಲ್ಲಾ ಜನರ ಮನಸ್ಸನ್ನು ಸೆಳೆಯುವುದು!

ದಿಲ್ ಖುಷ್ ಹೇರ್ ಆಯಿಲ್

ಅವರ್ಣನೀಯ ಶೋಭೆಯನ್ನು ಬಾಚುವುದಕ್ಕೆ ಅನುಕೂಲವಾಗಿ ಆಹ್ಲಾದಕರವಾದ ಸುಗಂಧವಿದೆ ಇದರಿಂದ ಕೂದಲು ದಪ್ಪವಾಗಿ ಬೆಳೆಯುವುದು ಉದುರುವ ಕೂದಲು ತಡೆಕಟ್ಟುವುದಕ್ಕೆ ಉಪಯುಕ್ತವಾಗಿದೆ

ಕ್ರಯ ೬ ಔನ್ಸ್ ಸೀಸೆಗೆ 0—12—0
,, 12 ,, ,, 1 4—0

ರುಬಿ ಪೇಯಿನ್ ಬಾಮ್

ತಲೆ ನೋವು, ಚಳಿ ಜ್ವರ, ಗಾಯ, ನೋವು, ತಲೆ ಸುತ್ತುವಿಕೆಗೆ ರುಬಿ ಬಾಮ್ ಡಬ್ಬಿ 1ಕ್ಕೆ ಆ 4
ಉಡುಪಿಯಲ್ಲಿ ಏಜೆಂಟರು ಬೇಕು

ಏಜೆಂಟ್ಸ್ —

ಷಾ ಕಂಪೆನಿ, ಮಂಗಳೂರು.

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ
ವಿಶೇಷ ಮಾಹಿತಿಗೆ ಬರೆಯಿರಿ.

ಜವ್ವಿ ವೆಂಕಟ್ರಮಣಯ್ಯ
ಲಿವರ್ ಮತ್ತು ಪ್ಲೀನ್ ಸ್ಪೆಷಿಯಲಿಸ್ಟ್,
ಮೈಲಾಪೂರ್, ಮದ್ರಾಸು.

ಟೀ ಕುಡಿದು ತಂಪನ್ನು ಅನುಭವಿಸಿರಿ

ಬಿಸಿ ಬಿಸಿ ಟೀ ಕುಡಿದು ಶರೀರದಲ್ಲಿ ತಂಪನ್ನುಂಟುಮಾಡಿಕೊಳ್ಳುವ ಪದ್ಧತಿಯ ವಿಷಯದಲ್ಲಿ ವೈಜ್ಞಾನಿಕರ ಅಭಿಪ್ರಾಯವು ಒಮ್ಮತವಾಗಿರುವುದು ಮಂಜುಗಡ್ಡೆ (ಐಸ್) ಇಂದ ತಣ್ಣಗೆ ಮಾಡಲ್ಪಟ್ಟ ಪಾನೀಯದ ಮೂಲಕ ಆಗುವ ಲಾಭವು ಅಲ್ಪಕಾಲ ಮಾತ್ರವೇ ಇರು ವುದು ಆದರೆ ಬಿಸಿ ಬಿಸಿ ಟೀಯಿಂದ ದೇಹಕ್ಕೆ ಆಗುವ ಪ್ರಯೋಜನವು ಶಾಶ್ವತವಾದದ್ದು. ಬಿಸಿ ಬಿಸಿ ಟೀಯು ಮೈಯೊಳಗಿನ ರೋಮರಂಧ್ರಗಳನ್ನು ತೆರೆದು ಚೆನ್ನಾಗಿ ಬೆವರುವಂತೆ ಮಾಡು ವುದು ಇದರಿಂದ ಶರೀರದ ಉಷ್ಣವು ಹೊರಗಾಗುವುದು. ದೇಹದಲ್ಲಿ ತಂಪನ್ನುಂಟುಮಾಡಿ ಕೊಳ್ಳಲು ಪ್ರಕೃತಿಯ ಸಹಜಮಾರ್ಗವಿದು. ಬಿಸಿ ಬಿಸಿ ಟೀ ಕುಡಿದು ತಂಪನ್ನು ಅನುಭವಿಸಿರಿ

ಇಂಡಿಯೂದ ಟೀ ತಂಪನ್ನೂ ತೃಪ್ತಿಯನ್ನೂ ಕೊಡುವುದು

ಚಿತ್ರಗಳನ್ನೊಳಗೊಂಡ ನಮ್ಮ ಪುಸ್ತಕ

ಇಂಡಿಯನ್ ಟೀಯ ಚರಿತ್ರೆಯು ಓದುವುದಕ್ಕೆ ಒಂದು ಕಾದಂಬರಿಯಂತಿದೆ ಟೀಯ ವ್ಯವಸಾಯ, ಅದರ ತಯಾರಿಕೆಯ ವಿಧಾನಗಳು ಮತ್ತು ಅದನ್ನು ಪಾನಮಾಡುವುದರಿಂದ ಅತಿದ್ರಯ ಉಪ ಯೋಗಗಳು ಮತ್ತು ಅನುಕೂಲಗಳನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವಿದ್ದಲ್ಲಿ "ಯಾವ ಕಾಲವಾದರೂ ಟೀಗೆ ಸರಿಯಾದದ್ದೇ" ಎಂಬ ಚಿತ್ರಗಳನ್ನೊಳಗೊಂಡಿರುವ ಪುಸ್ತಕವನ್ನು ನಮ್ಮಿಂದ ಕೇಳಿ ತರಿಸಿಕೊಳ್ಳಿ. ಈ ಜಾಹಿರಾತನ್ನು ಕತ್ತರಿಸಿ ನಿಮ್ಮ ಹೆಸರು, ವಿಳಾಸ ಮತ್ತು ಹುದ್ದೆ ಇವುಗಳನ್ನು ಆ ಜಾಹಿರಾತಿನಲ್ಲಿ ಬರೆದು ಈ ಕೆಳಗೆ ಕೊಟ್ಟಿರುವ ವಿಳಾ ಸಕ್ಕೆ ಬರೆದರೆ ಮುಫತ್ತಾಗಿ ನಿಮಗೆ ಚಿತ್ರಗಳನ್ನೊಳಗೊಂಡ ಪುಸ್ತಕದ ನಕಲೊಂ ದನ್ನು ಕಳುಹಿಸುತ್ತೇವೆ ವಿಳಾಸ— ಕಮಿಷನರ್ ಫಾರ್ ಇಂಡಿಯಾ, ಇಂಡಿ ಯನ್ ಟೀ ಮಾರ್ಕೆಟ್ ಎಕ್ಸ್‌ಪ್ಯಾನ್ಷನ್ ಬೋರ್ಡ್ ಪಿ. ಬೋ. ಬಾಕ್ಸ್ ೨೧೭೨, ಕಲ್ಕತ್ತೆ

ಇಂಡಿಯನ್ ಟೀ ಮಾರ್ಕೆಟ್ ಎಕ್ಸ್‌ಪ್ಯಾನ್ಷನ್ ಬೋರ್ಡಿನವರಿಂದ ಪ್ರಕಟಿತ

B.

ಎಂಟು ಮಿಲಿಯ ಶರಣಾರ್ಥಿಗಳನ್ನು ಪ್ರಪಂಚವು ಸಾಕಬೇಕಂತೆ

ಜರ್ಮನಿಯ ಈ ಉಪಾಯವನ್ನು ಪ್ರಪಂಚವು ಒಪ್ಪುವುದೇನು?

ಅಮೇರಿಕದ ಸಂಯುಕ್ತ ಸಂಸ್ಥಾನಗಳು ಕಳೆದ ೧೫೦ ವರ್ಷಗಳಲ್ಲಿ ೪೦ ಮಿಲಿಯ ಶರಣಾರ್ಥಿಗಳಿಗೆ ಆಶ್ರಯ ಕೊಟ್ಟವು ಈಗ ಅಷ್ಟು ಜನರ ಆ ಸಂಯುಕ್ತ ಸಂಸ್ಥಾನಗಳ ನಾಗರಿಕ ಹಕ್ಕು ಅಧಿಕಾರಗಳನ್ನು ಪಡೆದ ಅಲ್ಲಿಯವರಾಗಿ ಕಾಲಯಾಪನೆ ಮಾಡುತ್ತಿದ್ದಾರೆ

ಈಗ ಸುಮಾರು ಎಂಟು ಮಿಲಿಯ ಯಹೂದಿಯರು ಮಧ್ಯ ಮತ್ತು ಪೂರ್ವ ಯುರೋಪ ದಲ್ಲಿ ವಾಸಮಾಡಿಕೊಂಡು ಇದ್ದಾರೆ ಈಗ ಹಿಟ್ಲರನ ಕ್ರೋಧವು ಅಷ್ಟು ಮಂದಿ ಯಹೂದಿಯರನ್ನು ವಿನಾ ಕಾರಣ ಬಲಿ ತೆಕ್ಕೊಳ್ಳಲಿಕ್ಕಿದೆ ಒಂದೇ ಈ ಯಹೂದಿಯರು ಇರಲಿಕ್ಕೆ ಮನೆ ಉಣ್ಣಲಿಕ್ಕೆ ಅನ್ನ ಕುಡಿಯಲಿಕ್ಕೆ ನೀರು ಸಿಕ್ಕದೆ ಬಳಲಿ ಬಾಯಾರಿ ಸಾಯಬಹುದು. ಅಥವಾ ಹಿಟ್ಲರನ ಕೊಲೆಗಡುಕರು ಕತ್ತಿ ಹಿಡಿದು ಬಂದು ಅವರಿಗೆ ಚಿತ್ರಹಿಂಸೆ ಕೊಟ್ಟು ಸಾಯಬಡಿಯಲೂ ಬಹುದು ಅಮೇರಿಕವು ೪೦ ಮಿಲಿಯ ಶರಣಾರ್ಥಿಗಳಿಗೆ ಆಶ್ರಯ ಕೊಟ್ಟಿರುವಾಗ, ಪ್ರಪಂಚವು ೮ ಮಿಲಿಯ ಯಹೂದಿಯರಿಗೆ ಶರಣು ಕೊಡಬಾರದೆ ಎಂದು 'ನ್ಯೂಯೋರ್ಕ್ ಟೈಮ್ಸ್' ಕೇಳುತ್ತದೆ

ಜರ್ಮನಿಯ ದಮನ ನೀತಿಗೆ ತುದಿಮೊದಲು ಇಲ್ಲ

ಜರ್ಮನಿಯಲ್ಲಿ ಈಗ ಕೇವಲ ೭ ಲಕ್ಷ ಜಾತಿ ಯಹೂದಿಯರು ಇರುತ್ತಾರೆ ಆದರೆ ಜರ್ಮನಿಯು ಈ ೭ ಲಕ್ಷ ಯಹೂದಿಯರನ್ನು ಹೊರಗಟ್ಟುವುದರಲ್ಲಿ ಸಮರ್ಥವಾದರೆ ಆಗ ಮಧ್ಯ ಯುರೋಪ ಮತ್ತು ಪೂರ್ವ ಯುರೋಪದ ರಾಜ್ಯಗಳು ತಮ್ಮ ೮ ಮಿಲಿಯ ಯಹೂದಿಯರನ್ನು ಹೊರಗಟ್ಟಲಿಕ್ಕೆ ಶತಪ್ರಯತ್ನಗಳನ್ನು ಮಾಡುವವು ಯಾಕೆಂದರೆ ಯಹೂದಿಯರನ್ನು ಹೊರಗಟ್ಟುವಾಗ ಆ ರಾಜ್ಯಗಳಿಗೆ ಯಹೂದಿಯರ ಅಪಾರ ಸಂಪತ್ತು ಸಿಕ್ಕಿ ಅದನ್ನು ಅವುಗಳು ತಮ್ಮ ಉನ್ನತಿಗೆ ಉಪಯೋಗಿಸಿಕೊಳ್ಳಬಹುದು. ಮತ್ತು ಯಹೂದಿಯರು ಹೊರಗಾದುದರಿಂದ ಹೊರದೇಶಗಳಿಗೆ ಆ ರಾಜ್ಯಗಳ ರಫ್ತು ವ್ಯಾಪಾರವೂ ಬೆಳೆಯುವುದು ಅದ್ದರಿಂದ ಯುರೋಪದ ಯಹೂದಿಯರನ್ನು ೧೦೦-೧೫೦ ವರ್ಷಗಳ ಅವಧಿಯಲ್ಲಿ ಅಲ್ಲ, ಈಗಲೇ ತಮ್ಮ ರಾಜ್ಯಗಳಿಂದ ಹೊರಗೆ ಕಳುಹಿಸಲಿಕ್ಕೆ ಅವು ಸೊಂಟ ಕಟ್ಟಿವೆ ಜರ್ಮನಿಯ ದಮನ ನೀತಿಗೆ ತುದಿಮೊದಲು ಸಿಕ್ಕದಂತಾಗಿದೆ

ಏವಿಯನ್ ಕಮಿಟಿಯ ಪ್ರಯತ್ನ

ಯಹೂದಿ ಸಮಸ್ಯೆಯನ್ನು ಎಲ್ಲರಿಗೂ ಸಂತೋಷವಾಗುವಂತೆ ಬಿಡಿಸಬೇಕೆಂದು ಏವಿಯನ್ ಕಮಿಟಿಯ ಪ್ರಯತ್ನಿಸುತ್ತಾ ಇದೆ ಈ ಕಮಿಟಿಯ ಅಧ್ಯಕ್ಷರಾದ ಜೋರ್ಜ ರುಬ್ಲಿಯವರ ಜರ್ಮನಿಯೊಡನೆ ಆ ಕುರಿತು ಒಂದು ಸಂಧಿಯಾಗುವಂತೆ ಕೆಲಸಮಾಡಿದ್ದಾರೆ ಆದರೆ ಜರ್ಮನಿಯೊಡನೆ ಸಂಧಿಮಾಡಿಕೊಳ್ಳುವಾಗ ಜರ್ಮನ ಯಹೂದಿಯರ ಕುರಿತು ಆಲೋಚಿಸುವುದು ಮಾತ್ರವಲ್ಲ, ಮಧ್ಯ ಮತ್ತು ಪೂರ್ವ ಯುರೋಪದ ಯಹೂದಿಯರ ಕುರಿತೂ ಆಲೋಚಿಸಬೇಕಾಗಿದೆ ಯಾಕೆಂದರೆ ಈ ವಿಷಯದಲ್ಲಿ ಜರ್ಮನಿ ಏನು ಮಾಡುವುದೋ ಅದನ್ನೇ ಆ ಇತರ ರಾಜ್ಯಗಳೂ ಮಾಡುವವು

೮ ಮಿಲಿಯ ಯಹೂದಿಯರ ಭಾರ

ಎಂಟು ಮಿಲಿಯ ಯಹೂದಿಯರಿಗೆ ಆಶ್ರಯ ಕೊಡುವುದೆಂದರೆ ಅದು ಸಾಮಾನ್ಯ ಸಂಗತಿಯಲ್ಲ ಯಹೂದಿಯರ ಈ ಕಷ್ಟಕಾಲದಲ್ಲಿ ಎಲ್ಲಾ ರಾಜ್ಯಗಳು ಸಹಾನುಭೂತಿಯನ್ನು ತೋರಿಸುವವು ಅಷ್ಟೇ ಅಲ್ಲದೆ ಯಹೂದಿಯರ ಕಷ್ಟ ಯಾತನೆಗಳನ್ನು ಕಡಿಮೆ ಮಾಡುವ ಕುರಿತು ಬೇರೆ ರಾಜ್ಯಗಳು ವಿಶೇಷ ಕೆಲಸಗಳನ್ನು ಮಾಡಬಾರವು. ಯಾಕೆಂದರೆ ಈ ಎಲ್ಲಾ ರಾಜ್ಯಗಳಿಗೂ ಬಿಡಿಸಲಿಕ್ಕೆ ಅವುಗಳ ಬೇರೆ ಬೇರೆ ಸಮಸ್ಯೆಗಳು ಇವೆ. ತಮ್ಮ ತಮ್ಮ ಮನೆಮಠಗಳನ್ನು ಕಳಕೊಂಡ ಸ್ಥಿತಿಗೆ ಬಂದ ಮೇಲಲ್ಲವೆ, ಇತರರ ಮನೆಮಠಗಳ ಜೀರ್ಣೋದ್ಧಾರದ ವಿಷಯವನ್ನು ಆಲೋಚಿಸುವುದು? ದಾನಧರ್ಮಗಳು ಮೊದಲನೆಯದಾಗಿ ತಮ್ಮ ತಮ್ಮ ಮನೆಗಳಲ್ಲಿಯೇ ಆರಂಭವಾಗಬೇಕು' ಅದ್ದರಿಂದ ಪ್ರಪಂಚದ ಬೇರೆ ದೇಶಗಳು ಯಹೂದಿಯರ ಕಡೆಗೆ ಕಡೆಗಣ್ಣಿನಿಂದ ನೋಡಿದರೂ ಆಶ್ಚರ್ಯವಲ್ಲ ಆ ದೇಶಗಳು ಯಹೂದಿ ಸಮಸ್ಯೆಯನ್ನು ಜರ್ಮನಿ ಮತ್ತು ಯಹೂದಿ ಜಾತಿಯೇ ಬಿಡಿಸಿಕೊಳ್ಳಲಿ ಎಂದು ಸುಮ್ಮಗಿದ್ದರೂ ಇರಬಹುದು ಯಹೂದಿ ಜಾತಿಯು ಸಂಪೂರ್ಣ ನಾಶವಾಗುವದಾದರೂ ಕೂಡ ರಾಜ್ಯಗಳು ಉಪೇಕ್ಷಿಸಲಿಕ್ಕಿಲ್ಲ.

ಯಹೂದಿಯರು ಸ್ವಾವಲಂಬಿಗಳಾಗಲಿ

ಅದ್ದರಿಂದ ಯಹೂದಿಯರು ತಮ್ಮ ಕಷ್ಟ ನಿವಾರಣೆ ಮಾಡಲಿಕ್ಕೆ ಇತರ ಯಾರ ಸಹಾಯವನ್ನೂ ಅಪೇಕ್ಷಿಸಕೂಡದು ಅವರು ಸ್ವಾವಲಂಬಿಗಳಾಗಿ ತಮ್ಮ ಕಷ್ಟಗಳನ್ನು ತಾವೇ ನಿವಾರಿಸಿಕೊಳ್ಳಬೇಕು. ಈಗಿನ ಸ್ಥಿತಿಯಲ್ಲಿ ಹಿಂಸಾತ್ಮಕ ರೀತಿಯಿಂದ ಕಾರ್ಯಸಾಧನೆ ಮಾಡುವುದು ಯಹೂದಿಯರಿಗೆ ಸಾಧ್ಯವಲ್ಲ, ಅವರು ಅಹಿಂಸಾ ಮಾರ್ಗದಿಂದ ಮಹಾತ್ಮಜಿಯವರ ಸತ್ಯಾಗ್ರಹ ಅಸ್ತ್ರವನ್ನು ಉಪಯೋಗಿಸಿದರೆ ಅವರ ಮನೋರಥವು ಶೀಘ್ರದಲ್ಲಿ ಪೂರ್ಣವಾಗುವುದು

ಫ್ರೆಂಚರ ವಿರುದ್ಧ ಸಿರಿಯನರ ದಂಗೆ!

ದಂಗೆಖೋರರ ಸೂತ್ರಧಾರ—ಸೀನಿಯರ ಮುಸಲೋನಿ

ರೇಡಿಯೂದ ಮುಖಾಂತರ ಪ್ರಚಾರ ಕಾರ್ಯ

ಸ್ಪೈನಿನಲ್ಲಿ ಬಂಡಾಯವನ್ನೆಬ್ಬಿಸಿ ಮಿಯಯಾದ ಮುಸಲೋನಿ ಈಗ ಸಿರಿಯದಲ್ಲಿ ಇನ್ನೊಂದ ಬಂಡಾಯವನ್ನೆಬ್ಬಿಸುವ ಸಂಚನ್ನು ನಡೆಸಿದ್ದಾನೆ

ಸಿರಿಯವು ಫ್ರಾನ್ಸಿನ ಅಧೀನವಾಗಿದೆ ಅಲ್ಲಿಯ ಜನರು ಸ್ವತಂತ್ರರಾಗಬೇಕೆಂದು ಪ್ರಯತ್ನಿಸುತ್ತಿದ್ದಾರೆ ಅವರ ಪ್ರಯತ್ನಗಳಿಗೆ ಮುಸಲೋನಿಯು ಸಹಾಯ ಮಾಡಿದ ಹಾಗೆ ದೊರೆತಿರುವ ಸಹಾಯವು ಪರೋಪಕಾರದ ಬುದ್ಧಿಯಿಂದ ಪ್ರೇರಿತವಾಗಿರುವುದಿಲ್ಲ ಪರಂತ ತನ್ನ ಸ್ವಾರ್ಥದ ಬೇಳೆಯನ್ನು ಬೇಯಿಸುವ ಉದ್ದೇಶದಿಂದಲೇ ಮುಸಲೋನಿ ಹಾಗೆ ಮಾಡಿದ್ದಾನೆ

ಫ್ರೆಂಚರ ಅಧೀನದಲ್ಲಿರುವ ಸಿರಿಯವು ಒಮ್ಮೆಗೆ ಅವರಿಂದ ಸ್ವತಂತ್ರವಾದರೆ ಮತ್ತೆ ಅದರ ಮೇಲೆ ತಾನೇ ಅಧಿಕಾರ ನಡೆಸುವುದು ಮುಸಲೋನಿಗೆ ಬಹು ಸುಲಭದ ಕೆಲಸ ಅದ್ದರಿಂದ ತನ್ನ ಬಲವು ಹೆಚ್ಚುವುದು. ಮಾತ್ರವಲ್ಲದ ತನ್ನ ಹಿತಶತ್ರುಗಳಂತೆ ಇರುವ ಫ್ರೆಂಚರ ಬಲವೂ ಕುಂದುವುದು

ಟ್ರಿಪೋಲಿಯಿಂದ ಸೂತ್ರ ಚಾಲನೆ

ಟ್ರಿಪೋಲಿಯ ಯಾಪ್ಪ ಪ್ರಾಂತ ಆಸ್ಟ್ರಾಕ ಪ್ರದೇಶದಲ್ಲಿ ಮುಸಲೋನಿಯು ಒಂದು ಆಕಾಶವಾಣಿ ಯಂತ್ರವನ್ನು ಇಟ್ಟು ಅದರ ಮೂಲಕ ಸಿರಿಯದ ತನ್ನ ಅನುಯಾಯಿಗಳಿಗೆ ಅವನು ಸಮಾಚಾರಗಳನ್ನು ಕಳುಹಿಸಿಕೊಡುತ್ತಾನೆ ಒಂದು ಬಾರಿಗೆ ಸಿರಿಯದ ಡಮಾಸ್ಕಸ್, ಅಲಿಪ್ಪೊ ಲಟಾಕಿಯ ಮ ನ್ನ ಹೊವ ಗಳಲ್ಲಿ ಬಂಡಾಯವನ್ನೆಬ್ಬಿಸುವುದು. ಸಾಧ್ಯವಾಗುವಂತೆ, ಬಂಡಾಯಗಾರರಿಗೆ ಅಗತ್ಯವುಳ್ಳ ಶಸ್ತ್ರಾಸ್ತ್ರಗಳನ್ನು ಪೂರೈಸುವನು. ಅದಲ್ಲದೆ ಫ್ರೆಂಚರೊಡನೆ, ಅವರ ಎದುರು ಮಾರ್ಗಗಳ ಹಿಂದೆ ತಾನೇ ಆಕ್ರಮಿಸುವನು. ಸ್ಥಳೀಕ ಬಂಡಾಯಗಾರರ ಮುಂದಾಳಿಗೆ ಸೂಚಿಸುವನು.

ಈ ಬಂಡಾಯದ ಹೆಸರುಗಳನ್ನು ಜನರು ಹೇಳುವುದಿಲ್ಲ ಆದರೆ ಎದುರಿಗೆ ಅವರಿಗೆ ಒಂದೊಂದು ಸಂಖ್ಯೆಯನ್ನು ಕೊಟ್ಟು ಆ ಸಂಖ್ಯೆಗಳಿಂದ ಅವರನ್ನು ಕರೆದಿದ್ದಾನೆ ಈ ಕಾರ್ಯಕ್ರಮವು ಸುಮಾರು ಒಂದು ತಿಂಗಳಿಂದ ಆರಂಭವಾಗಿರುವುದು ಫ್ರೆಂಚರಿಂದ ಸಿರಿಯನರನ್ನು ಸ್ವತಂತ್ರರನ್ನಾಗಿ ಮಾಡಲು ಸ್ಪೀಟರ್ ಸಿರಿಯನ್ ರಿವೊಲ್ಯೂಶನರಿ ಕಮಿಟಿ ಎಂಬ ಹೆಸರಿನ ಸಂಘವಾದರೆ ಒಂದು ಸ್ಥಾಪಿಸಲ್ಪಟ್ಟಿದೆ. ಅದರ ಮೂಲಕವಾಗಿಯೇ ಬಂಡಾಯವನ್ನು ನಡೆಸುವ ಕೊನೆಯ ಸಿದ್ಧತೆಯ ಕೆಲಸ ಕಾರ್ಯಗಳು ನಡೆಯುವುವು

'DILROZ' Regd.

Dil Roz' is a sure cure for Oriental sores local sores all kinds of deep-rooted sores skin eruptions Pimples, Eczema, Ringworm, Sinus Fistula auxillary-Abscess.

There is no need of dressing the wounds, nor are baths prohibited

Price Rs. 2. Postage extra

TAHIR DIN,

Anarkali, LAHORE.

ನಾಗರಿಕ ಹಕ್ಕು ಸಂರಕ್ಷಣೆಯ ಸ್ವಾತಂತ್ರ್ಯ ಎಲ್ಲರಿಗೂ ಇದೆ

ಕಾಂಗ್ರೆಸೀ ಜನರು ಧಾರ್ಮಿಕ ಸತ್ಯಾಗ್ರಹದಲ್ಲಿ ಸೇರಬಹುದು

ಆಚಾರ್ಯ ಕೃಪಲಾನಿಯವರ ಪತ್ರ

ಅಖಿಲಭಾರತ ಕಾಂಗ್ರೆಸ ಕಾರ್ಯಕಾರಿ ಸಭೆಯ ಪ್ರಧಾನ ಮಂತ್ರಿಗಳಾಗಿದ್ದ ಆಚಾರ್ಯ ಕೃಪಲಾನಿಯವರು ಲಾಲ್ಚದೇಶ ಬಂಧು ಗುಪ್ತರವರು ಅವರಿಗೆ ಬರೆದ ಪತ್ರಕ್ಕೆ ಉತ್ತರವನ್ನು ಕೊಡುತ್ತಾ, ಆರ್ಯ ಸಮಾಜದೊಡನೆ ಸಂಬಂಧವಿರುವ ಕಾಂಗ್ರೆಸೀ ಜನರು ವ್ಯಕ್ತಿಗತ ರೂಪದಿಂದ ತನ್ನ ಧಾರ್ಮಿಕ ಹಕ್ಕು ಅಧಿಕಾರಗಳ ಸಂರಕ್ಷಣೆಗೆ ಹೈದರಾಬಾದದಂಥ ಸತ್ಯಾಗ್ರಹಗಳಲ್ಲಿ ಅಗತ್ಯ ಭಾಗತೆಗೆದುಕೊಳ್ಳಬಲ್ಲರೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಅವರ ಪತ್ರವು ಹೀಗಿದೆ —

'ಈ ಸಂಬಂಧದಲ್ಲಿ ಆರ್ಯಸಮಾಜ ಮತ್ತು ಕಾಂಗ್ರೆಸದೊಳಗಿನ ಅಂತರವು ಎಷ್ಟಿರುವುದೆಂದರೆ ಈ ಎರಡು ಸಂಸ್ಥೆಗಳು ಒಂದೇ ಉದ್ದೇಶವನ್ನು ಭಿನ್ನಭಿನ್ನ ಉಪಾಯಗಳಿಂದ ಸಾಧಿಸಲು ಯತ್ನಿಸಿವೆ. ಹೈದರಾಬಾದ ಸರಕಾರವು ಅಲ್ಲಿಯ ಆರ್ಯಸಮಾಜಗಳ ಮೇಲೆ ಹಾಕಿರುವ ಪ್ರತಿಬಂಧನಗಳು ಅವಾಂಛನೀಯವಾಗಿರುವುವೆಂಬುದನ್ನು ಪ್ರತಿಯೊಬ್ಬ ಕಾಂಗ್ರೆಸ ಮನುಷ್ಯನ ದೃಢವಿಶ್ವಾಸವಾಗಿದೆ. ಅಂಥ ಪ್ರತಿಬಂಧನಗಳ ಕ್ರಿಯಾತ್ಮಕ ವಿರೋಧವನ್ನು ಮಾಡಬೇಕಾಗುವುದೆಂದು ಅವರು ನಂಬುತ್ತಾರೆ. ಆದರೆ ಈ ಪ್ರಶ್ನೆಗೆ ಹಿಂದೂ ಮುಸಲ್ಮಾನ ಜಗಳದ ಬಣ್ಣವು ಬರಲಿಕ್ಕೆ ಕೂಡದು. ಆರ್ಯಸಮಾಜದ ವಿರೋಧವು ಹೈದರಾಬಾದ ಸರಕಾರದ ಅಧಿಕಾರಿಗಳ ವಿರುದ್ಧವಾಗಿ ಇರುವುದಲ್ಲದೆ ಮುಸಲ್ಮಾನರ ವಿರುದ್ಧವಾಗಿ ಅಲ್ಲ. ಇಂಥ ಭ್ರಮೆಯುಂಟಾದುದರಿಂದಲೇ ನಮ್ಮ ಕೆಲವು ಕಾಂಗ್ರೆಸ ಮುಖಂಡರು ಸ್ಟೇಟ ಕಾಂಗ್ರೆಸ ಮೂಲಕ ನಡೆಯಿಸಿದ ಸತ್ಯಾಗ್ರಹವನ್ನು ಬಂದು ಮಾಡಿದರು. ಕಾಂಗ್ರೆಸದೊಡನೆ ಸಂಬಂಧವನ್ನಿಟ್ಟಿರುವ ಆರ್ಯಸಮಾಜಗಳು ವ್ಯಕ್ತಿಗತರೂಪವಾಗಿ ತಮ್ಮ ಧಾರ್ಮಿಕ ಸ್ವಾತಂತ್ರ್ಯದ ರಕ್ಷಣೆಗೆ ಸತ್ಯಾಗ್ರಹ ಸಂಗ್ರಾಮದಲ್ಲಿ ಭಾಗತೆಗೆದುಕೊಳ್ಳುವ ಅಧಿಕಾರವುಳ್ಳವರಾಗಿದ್ದಾರೆ. ಕಾಂಗ್ರೆಸಿಗೆ ಅದರ ಸ್ವಂತದ ಧಾರ್ಮಿಕ ಪ್ರವೃತ್ತಿ ಯಾವುದೂ ಇರುವುದಿಲ್ಲ. ಆದರೂ ಕೂಡ ಧಾರ್ಮಿಕ ವಿಷಯದಲ್ಲಿ ಸದಾಚಾರದ ರಕ್ಷಣೆ ವಿಚಾರ ಮಾಡುತ್ತ ಪ್ರತಿಯೊಂದು ಧಾರ್ಮಿಕ ಸಂಪ್ರದಾಯಕ್ಕೆ ಪೂರ್ಣ ಸ್ವಾತಂತ್ರ್ಯವು ಇರಬೇಕೆಂದು ನನ್ನ ವಿಶ್ವಾಸವಾಗಿದೆ. ದೇಶದ ಯಾವದಾದರೊಂದು ಸಂಪ್ರದಾಯವನ್ನು ಈ ಸ್ವಾತಂತ್ರ್ಯದಿಂದ ವಂಚಿತ ಮಾಡಿದುದಾದರೆ, ನ್ಯಾಯಪ್ರಾಪ್ತಿಗೆ ಪ್ರಯತ್ನಿಸುವ ಅಧಿಕಾರವು ಆ ಸಂಪ್ರದಾಯಕ್ಕೆ ಪೂರ್ಣರೂಪದಿಂದ ಇರುತ್ತದೆ.

ಕಾಂಗ್ರೆಸ ಸಂಘಟಿತ ರೂಪದಿಂದ ಪ್ರತಿಯೊಂದು ಉತ್ತಮ ವಿಷಯಕ್ಕಾಗಿ ಕಾದಾಡುತ್ತಿರುವುದಿಲ್ಲ. ಹೈದರಾಬಾದದ ಪ್ರಕೃತ ವಿಷಯದಲ್ಲಿ ಕಾಂಗ್ರೆಸು ಸಂಘಟಿತ ರೂಪದಿಂದ ಭಾಗವಹಿಸಿದುದಾದರೆ ಪರಿಸ್ಥಿತಿಯು ಸುಧಾರಣೆ ಹೊಂದುವುದರ ಬದಲಿಗೆ ಅದು ಮತ್ತಷ್ಟು ಕೆಟ್ಟು ಹೋಗುವ ಸಂಭವವಿದೆ. ಆದ್ದರಿಂದ ಹೈದರಾಬಾದದ ಹಿಂದುಗಳ ಸತ್ಯಾಗ್ರಹದಲ್ಲಿ ಕಾಂಗ್ರೆಸ ಭಾಗತೆಗೆದುಕೊಳ್ಳದೆ ಇದ್ದಿರುವುದು, ಯಾವ ದಾದರೊಂದು ತನ್ನ ವಿಶೇಷ ಸಿದ್ಧಾಂತಕ್ಕನುಕೂಲವಾಗಿ ಅಲ್ಲ, ಆದರೆ ಹಾನಿ ಲಾಭಗಳ ದೃಷ್ಟಿಯಿಂದ ಆಗಿದೆ. ಕಾಂಗ್ರೆಸು ಹೈದರಾಬಾದದ ಧಾರ್ಮಿಕ ಸತ್ಯಾಗ್ರಹದಲ್ಲಿ ಸಂಘಟಿತ ರೂಪದಿಂದ ಭಾಗತೆಗೆದುಕೊಳ್ಳುವುದರಿಂದ ಆಗುವ ಧಾರ್ಮಿಕ ಲಾಭಕ್ಕಿಂತ ರಾಜಕೀಯ ಹಾನಿಯು ಹೆಚ್ಚಾಗಬಹುದೆಂದು ಅದಕ್ಕೆ ತೋರಿದೆ. ಆರ್ಯಸಮಾಜವು ತನ್ನ ಧಾರ್ಮಿಕ ಹಕ್ಕು ಅಧಿಕಾರಗಳ ಸಂರಕ್ಷಣೆಗೆ ತಾನು ಸ್ವತಃ ವೀರತಾಪೂರ್ಣ ಹೋರಾಡಲಿಕ್ಕೆ ಸಮರ್ಥವಾಗಿದೆ, ಮತ್ತು ಹಾಗೆ ಅದು ಹೋರಾಡುತ್ತಲೂ ಇದೆ.

ಸೀಖರೂ ಸಹಯೋಗವನ್ನೀಯುವರು

ಹಿಂದುಗಳೂ ಆರ್ಯಸಮಾಜಗಳೂ ಹೈದರಾಬಾದದಲ್ಲಿ ಹೂಡಿರುವ ಧಾರ್ಮಿಕ ಹಕ್ಕು ಸಂರಕ್ಷಣೆಯ ಸತ್ಯಾಗ್ರಹ ಸಂಗ್ರಾಮದಲ್ಲಿ ಸೀಖರೂ ಕೂಡ ಭಾಗತೆಗೆದುಕೊಳ್ಳುವರು. ಸೀಖರ ಅಖಿಲಭಾರತ ಸರ್ವಮಾನ್ಯ ಸಂಸ್ಥೆಯಾಗಿರುವ ಶಿರೋಮಣಿ ಗುರುದ್ವಾರಾ ಪ್ರಬಂಧಕ ಕಮಿಟಿಯು ಸರ್ವಸಮ್ಮತಿಯಿಂದ ಆರ್ಯ ಸತ್ಯಾಗ್ರಹದಲ್ಲಿ ಸಹಾನುಭೂತಿಯನ್ನು ಪ್ರಕಟ ಮಾಡಿದೆ. ಅಕಾಲಿದಳವು ಅವು ತನ್ನದೊಂದು ಸತ್ಯಾಗ್ರಹೀ ದಳವನ್ನು ಹೈದರಾಬಾದಿಗೆ ಕಳುಹಿಸುವ ಆಲೋಚನೆ ಮಾಡಿದೆ.

ಕುಂವರ ಚಾಂದಕರಣರ ಕೈದು

ಆರ್ಯ ಸತ್ಯಾಗ್ರಹ ಸಮಿತಿಯ ದ್ವಿತೀಯ ಡಿಕ್ಟೇಟರ್ ಕುಂವರ ಚಾಂದಕರಣಜೀ ಶಾರದಾರವರು ೬೪ ಸತ್ಯಾಗ್ರಹೀ ವೀರರೊಂದಿಗೆ ಹೈದರಾಬಾದದಲ್ಲಿ ಸತ್ಯಾಗ್ರಹವನ್ನು ಹೂಡಲು ಹೋಗುತ್ತಾ, ಗುಲ್ಬರ್ಗ ಸ್ಟೇಶನನ್ನು ಮುಟ್ಟಿದೊಡನೆಯೇ ಕೈದುಮಾಡಲ್ಪಟ್ಟರು. ಅದೇ ದಿನ ಬೇರೆ ಬೇರೆ ಕಡೆಗಳಿಂದ ೩೦ ಬೇರೆ ಸತ್ಯಾಗ್ರಹ ದಳಗಳೂ ಕಳುಹಿಸಲ್ಪಟ್ಟು ಕೈದಾದುವು. 'ತಾವು ಯುದ್ಧದಲ್ಲಿ ಸಂಪೂರ್ಣ ವಿಜಯಿಗಳಾದ ಹೊರತು ಜೀವಿತರಾಗಿ ಹಿಂದಿರುಗುವುದಿಲ್ಲವೆಂದೂ, ಅದಕ್ಕಿಂತ ಮೊದಲು ಸರಕಾರವು ತನ್ನನ್ನು ಬಲಪೂರ್ವಕ ಹಿಂದಕ್ಕೆ ಕಳುಹಿಸುವುದಾದರೆ, ತನ್ನ ಶವವಷ್ಟೇ ರಾಜ್ಯದಿಂದ ಹಿಂದಕ್ಕೆ ಬರುವುದೆಂದೂ ಶ್ರೀ ಶಾರದಾರು ಘೋಷಣೆ ಮಾಡಿದರು. ಕೋಲಾಪುರದಿಂದ ಅವರಿಗೆ ಅಪೂರ್ವ ವಿದಾಯವನ್ನೀಯಲಾಯಿತ. 'ನಮ್ಮ ಪಕ್ಷವು ನ್ಯಾಯದ ಪಕ್ಷವಾಗಿದೆ. ನಮ್ಮ ಧ್ಯೇಯವು ಶಾಂತಿಯನ್ನು ಸ್ಥಾಪಿಸುವುದಾಗಿದೆ. ನಮ್ಮ ಯುದ್ಧವು ಸತ್ಯ ಮತ್ತು ಅಹಿಂಸೆಯನ್ನು ಹೊಂದಿದೆ' ಎಂದು ಹೇಳುತ್ತಾ ಅವರ ಪ್ರತ್ಯೇಕ ಹಿಂದೂ ರಾಜ್ಯವು ಈ ಸಂಗ್ರಾಮದಲ್ಲಿ ಸಮ್ಮಿಲಿತವಾಗಬೇಕೆಂದೂ ಸರ್ವಶಕ್ತಿವಂತನಾದ ಈಶ್ವರನು ವಿಜಯ ಪ್ರಾಪ್ತಿಗೆ ಅಬಾಧ್ಯ ಶಕ್ತಿ ಮತ್ತು ಸಾಹಸವನ್ನು ಕೊಡಲೆಂದು ಪ್ರಾರ್ಥಿಸಿ ಅವರು ಕೋಲಾಪುರದಿಂದ ಹೈದರಾಬಾದಿಗೆ ತೆರಳುವವರಾದರು.

ಮೌಲಾನಾ ಅಜಾದರ ಅಭಿಪ್ರಾಯ

ತೃತೀಯ ಡಿಕ್ಟೇಟರ ಖುಶಾಲಚಂದಜೀ ಖುರ್ಸಂದ

ಕೋಲಾಪುರ ಸತ್ಯಾಗ್ರಹ ಸಮಿತಿಯ ಮೂರನೆ ಸರ್ವಾಧಿಕಾರಿಗಳಾಗಿ ಖುಶಾಲ ಚಂದಜೀ ಖುರ್ಸಂದರ ನೇಮಿಸಲ್ಪಟ್ಟು ಚಾರ್ಜ ತೆಗೆದುಕೊಂಡಿರುವರು. ಸತ್ಯಾಗ್ರಹವು ದ್ವಿಗುಣಿತ ಉತ್ಸಾಹದಿಂದ ನಡೆಯುತ್ತಿರುವುದು. ಹಣ ಸಂಗ್ರಹ ಮತ್ತು ಸತ್ಯಾಗ್ರಹೀ ದಳಗಳ ರಚನಾ ಕಾರ್ಯವು ದೇಶದ ಮೂಲೆ ಮೂಲೆಗಳಿಂದ ಆರಂಭವಾಗಿರುವುದು. ಹಿಂದುಗಳು ಮಾತ್ರವಲ್ಲದೆ ಕ್ರೈಸ್ತ ಸಜ್ಜನರೂ ಕೂಡ ಸತ್ಯಾಗ್ರಹ ಸಂಗ್ರಾಮದಲ್ಲಿ ಸಹಾನುಭೂತಿಯನ್ನು ತೋರಿಸಿ ಹಣ ಸಹಾಯ ಮಾಡುತ್ತಿರುವರು. ಝಾಂಸಿ ಫೋಟೋಗ್ರಾಫರ್ ಎ. ಬಿ. ಸಿಲ್ವ ಎಂಬವರು ಕ್ರೈಸ್ತರಾಗಿದ್ದರೂ ಅವರು ಸತ್ಯಾಗ್ರಹ ಸಮಿತಿಗೆ ೧೦ ರೂಪಾಯಿಗಳನ್ನು ಕಳುಹಿಸಿಕೊಟ್ಟಿದ್ದಾರೆ.

ಮೌಲಾನ ಅಜಾದರ ಅಭಿಪ್ರಾಯ

ಮೌಲಾನಾ ಅಬುಲಕಲಾಂ ಅಜಾದರು, 'ಆರ್ಯರ ಪ್ರತಿಯೊಂದು ಕಷ್ಟವನ್ನು ದೂರಮಾಡುವುದು ಹೈದರಾಬಾದ ಸರಕಾರದ ಕರ್ತವ್ಯವಾಗಿದೆ ಎಂದು ಸ್ಪಷ್ಟ ಅಭಿಪ್ರಾಯವನ್ನು ಕೊಟ್ಟಿರುವ. ಯದ್ಯಪಿ ಈ ಆಂದೋಲನವು ಒಂದು ಸಂಪ್ರದಾಯದೊಡನೆ ಸಂಬಂಧವನ್ನಿಟ್ಟಿರುವುದೆಂದರೂ ಅದರ ಪ್ರಕಾರವು ಕೂಡ ಧಾರ್ಮಿಕವಾಗಿರುವುದಾದರೂ, ಆರ್ಯಸಮಾಜಗಳು ಹೈದರಾಬಾದದಲ್ಲಿ ಅನುಭವಿಸುತ್ತಿರುವ ಕಷ್ಟಗಳೊಡನೆ ನನ್ನ ಪೂರ್ಣ ಸಹಾನುಭೂತಿ ಇರುತ್ತದೆ. ಅವರ ಪ್ರತ್ಯೇಕ ಕಷ್ಟಗಳು ದೂರ ಮಾಡಲ್ಪಡಬೇಕೆಂದು ನನ್ನ ಇಚ್ಛೆಯಾಗಿದೆ. ತನ್ನ ಪ್ರಜೆಯ ನಾಗರೀಕ ಅಧಿಕಾರಗಳನ್ನು ಆಕ್ರಮಿಸುವುದು ಯಾವ ಸಂಸ್ಥಾನಕ್ಕೂ ಉಚಿತವಾಗಿರುವುದಿಲ್ಲ' ಎಂದು ನುಡಿದರು. ಶ್ರೀ ಅಜಾದರು ಹೈದರಾಬಾದದ ಲೋಮಹರ್ಷಣ ಅತ್ಯಾಚಾರ ವರ್ಣನೆಯನ್ನು ಕೇಳುತ್ತಲೇ ಹೇಳಿದರು. ಇತರ ರಾಷ್ಟ್ರೀಯ ಮತಗಳ ನಿಷ್ಪಕ್ಷಪಾತಿ ಮುಖಂಡರೂ ಕೂಡ ಇದೇ ರೀತಿಯ ಅಭಿಪ್ರಾಯಗಳನ್ನು ಕೊಡುತ್ತಿದ್ದಾರೆ.

ಇಕೊನೊಮಿ ಟಿನ್ನುಗಳನ್ನು ಕೊಂಡು ಹಣ ಉಳಿಸಿರಿ.

ದೊಡ್ಡ ಸೈಜು (8 ಔನ್ಸ್) ರೂ 1-4-0
(ದೊಡ್ಡ 'ಬಾಟ್ಲಿ'ಗಳಲ್ಲಿ ದ್ವಿಪ್ಪಟ್ಟು ಇರುತ್ತದೆ)
ಸಣ್ಣ ಸೈಜು (4 ಔನ್ಸ್) ಆಣೆ 11

ಎಂಡ್ರ್ಯೂಸ್ ಲವಣದ ಇಕೊನೊಮಿ ಟಿನ್ನುಗಳನ್ನು ನೀವು ಕೊಂಡುಕೊಂಡಲ್ಲಿ ನಿಮಗೆ ನೂರಕ್ಕೆ ... ಗಳಲ್ಲಿ ದೊರಕುವಷ್ಟು ಲವಣವು ಕಡಿಮೆ ಕ್ರಯಕ್ಕೆ ದೊರಕುವುದು. ಎಂಡ್ರ್ಯೂಸ್ ಟಿನ್ನುಗಳು ಉತ್ತಮವಾದದ್ದು. ಈ ಹೊಸ ಟಿನ್ನುಗಳನ್ನು ನೀವು ತೆಗೆದುಕೊಳ್ಳುವುದರಿಂದ ಕಡಿಮೆ ಕ್ರಯದಲ್ಲಿ ಉತ್ತಮವಾದ ಲವಣವು ದೊರಕುವುದು.

ಈ ಬೇರೆ ತರದ ಮತ್ತು ಉತ್ತಮ ಲವಣವು ೫೦ ವರ್ಷಗಳಿಂದ ಬ್ರಿಟಿಷ್ ದ್ವೀಪಗಳಲ್ಲಿ ಹೆಸರುವಾಸಿಯಾಗಿದ್ದು ಆರೋಗ್ಯವನ್ನುಂಟುಮಾಡುವ ಕ್ಷಾರವಾಗಿದ್ದು ಉತ್ತಮವಾದ ಔಷಧಿಯ ಗುಣಗಳಿಂದ ಕೂಡಿರುತ್ತದೆ. ಇದರ ಸಿಹಿ ಮತ್ತು ಆನಂದವಾದ ಉಕ್ಕಿಬರುವ ಗುಣವು ಇವರಲ್ಲಿ ಆರೋಗ್ಯವನ್ನುಂಟುಮಾಡುವ ಲವಣಗಳಿಂದ ಆಗುವುದು. ಅನೇಕ ಶೋಧನೆಗಳಿಂದ ... ಎಂಡ್ರ್ಯೂಸ್ ಲವಣವನ್ನು ತಯಾರಿಸುವಾಗ ಕೈ ಸೋಂಕುವುದಿಲ್ಲ.

ಎಂಡ್ರ್ಯೂಸ್ ಲಿವರ್ ಸೋಲ್ಟ್ ನಾಲ್ಕು ವಿಧಾನಗಳಲ್ಲಿ ಉಪಕಾರವನ್ನೀಯುವುದು:

1) ಕಫ್ಫಲವನ್ನು ಹೊರಗೆಡವಿ ಸಂಪೂರ್ಣ ಶುದ್ಧಿಗೊಳಿಸುವುದು
2) ಯಕೃತ್ತಿನ ಮೇಲೆ ಕೆಲಸಮಾಡಿ ಪಿತ್ತಸ್ರಾವಕವನ್ನು ಉದ್ರೇಕಿಸುವುದು
3) ಹೊಟ್ಟೆಯನ್ನು ಸೌಮ್ಯರೀತಿಯಿಂದ ಸ್ವಚ್ಛಗೊಳಿಸುವುದು.
4) ಹೊಟ್ಟೆಯೊಳಗಿನ ಕಫ್ಫಲವನ್ನು (ಎಸಿಡ್) ಶಕ್ತಿಹೀನಗೊಳಿಸುವುದು.

ಈ ಕೆಳಗಿನವುಗಳಿಂದ ನರಳುವವರಾದರೆ ನಿಮಗೆ ಎಂಡ್ರ್ಯೂಸ್ ಲವಣವು ಅಗತ್ಯ: ಪಿತ್ತವಿಕಾರ, ಮಲಬದ್ಧತೆ, ಅಜೀರ್ಣ, ತಲೆನೋವು, ಯಕೃತ್ತಿನ ಆಮ್ಲವಕ್ಕೆ ಎದೆಯುರಿ ಬಳಲಿಕೆ

ಅಂತರ್ ಶುದ್ಧಿಗೆ ಎಂಡ್ರ್ಯೂಸ್ ಲಿವರ್ ಸೋಲ್ಟ್

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ



ANDREWS
LIVER SALT
for Inner Cleanliness

ಶ್ರೇಷ್ಠ ತರದ ದೃಷ್ಟಿ ಚಕ್ರಗಳಿಗೆ



ರಬ್ಬರು ಮೊಹರುಗಳಿಗೆ
ನಾಯಕ್ಸ್ ಸ್ಟೋರ್ಸ್
ರಥಬೀದಿ, ಮಂಗಳೂರು.

ಶಾಲಿವಾಹನ ಶಕ ೧೮೬೧ನೇಯ ಪ್ರಮಾಥಿ ಸಂವತ್ಸರದ ಚೈತ್ರ ಶು|| ೫ ಶನಿವಾರದಿಂದ ಚೈತ್ರ ಶು|| ೧೧ ಶುಕ್ರವಾರದ ವರೆಗಿನ ಪಂಚಾಂಗ. (೧೯೩೯ನೇಯ ಮಾರ್ಚ ಸುಗ್ಗಿ)

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ಸೌರಮಾನ
25	ಶನಿ	೩	೭	ಕೃತ್ತಿಕಾ	೫೩||	೧೧	ಸುಗ್ಗಿ ೨೮ ವಸಂತ ಋತು
26	ರವಿ	೪	೪|	ರೋಹಿಣಿ	೫೪||	೧೨	
27	ಸೋಮ	೫	||ಘ್ನ	ಮೃಗಶಿರಾ	೫೧||	೧೩	
28	ಮಂಗಳ	೬	೫೩||	ಆರ್ದ್ರಾ	೬೮||	೧೪	
29	ಬುಧ	೭	೬೪||	ಪುನರ್ವಸು	೪೪||	೧೫	
30	ಗುರು	೮	೩೯	ಪುಷ್ಯ	೪೦||	೧೬	
31	ಶುಕ್ರ	೯	೫೩|	ಆಶ್ಲೇಷಾ	೩೭||	೧೭	

THE PIE-MONEY BANK LTD.,

Maidan Road, MANGALORE

Undertakes all kinds of Banking Business. Current account at 2½% per annum. Savings Bank Deposits at 1½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs 100/ to Rs 5000/ run regularly on systematic lines. Unique Banking Facilities to Businessmen and interested Public.

Apply for particulars—K. R. GURU, *Managing Director*

ಗುಣಬಾರದಿದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಾಜಪುತ್ರ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

[illegible]

ವಿಳಾಸ: ಸಂಜೀವಿನೀ ಔಷಧಾಲಯ, ಪೋ. ಘೊ. ಬಿಂದಣಿ, (S. V. I.

ಬರೇ ರೂ. 1-4-0ಕ್ಕೆ 3 ಗಡಿಯಾರಗಳು ಮತ್ತು 1295 ಫ್ರೀ ಬಹುಮಾನಗಳು

ಒಂದೇ ಬಾರಿಗೆ ರೂ 1-4-0ಕ್ಕೆ [illegible]

[illegible] 300 [illegible] 10 [illegible] 14-0 [illegible]

The American Commercial Stores Post Box No. 1221 Calcutta A

THE

Bank of Mangalore Ltd.,

MANGALORE.

ESTD 1921

Branches

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
"	6 "	4%
"	12 "	5%
"	24 " & upwards	5½%

Interest Payable Quarterly

Savings Bank deposit** 3½% **on daily balances.

All kinds of banking business transacted.

THE

Canara Banking Corporation Udipi, Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4½ p. a.

in denominations of

RS. 50/-,100/-,500/-,1,000/-, & 5,000/-

are now issued at all our Branches.

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕರ.

[illegible]

ಮೂ. 1-1-0 [illegible]

[illegible]

P. O. [illegible]

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟಿನ್

ಉಪಯೋಗಿಸಿರಿ.

ಕೆ ವೆಂಕಟೇಶ ಬಾಳಿಗ, [illegible]

ಡೋಂಗರೆ

ಅವರ

ಬಾಲಾಮೃತವು

[illegible]

ಮಂಗಳೂರು ಪೇಟೆಯ ದವಸಧಾನ್ಯ ಪಗೈರೆಗಳ ಧಾರಣೆ

ಸಾಮಗ್ರಿಗಳು	ಮೊದಲಿನ ಧಾರಣೆ	ಈಗಿನ ಧಾರಣೆ
ಭತ್ತ ಅಪ್ಪಲ್ [illegible]	1—11—0	—
" [illegible] " "	1—10—0	1—10—0
" ಅಪ್ಪಲ್ [illegible] "	1—10—0	
" [illegible] " "	[illegible]	
ಅಕ್ಕಿ ಅಪ್ಪಲ್ [illegible] "	1—2—0	1—2—0
" [illegible] " "	3—14—0	3—14—0
" ಅಪ್ಪಲ್ [illegible] "	4—4—0	—
" [illegible] " "	3—8—0	3—8—0
ತೆಂಗಿನ [illegible] 1000ಕ್ಕೆ	15—0—0	15—0—0
" [illegible] "	37—8—0	47—8—0
[illegible]	45—0—0	—
" [illegible] "	47—8—0	
ತೆಂಗಿನ ಎಣ್ಣೆ ಮಣಕ್ಕೆ	3—5—0	3—5—0
[illegible] 1000ಕ್ಕೆ	3—4—0	3—12—0
[illegible]	3—12—0	3—12—0
[illegible]	42—8—0	60—0—0
[illegible]	15—8—0	18—8—0

ನಾಗರಿಕ ಹಕ್ಕು ಸಂರಕ್ಷಣೆಯ ಸ್ವಾತಂತ್ರ್ಯ ಎಲ್ಲರಿಗೂ ಇದೆ

ಕಾಂಗ್ರೆಸೀ ಜನರು ಧಾರ್ಮಿಕ ಸತ್ಯಾಗ್ರಹದಲ್ಲಿ ಸೇರಬಹುದು

ಆಚಾರ್ಯ ಕೃಪಲಾನಿಯವರ ಪತ್ರ

ಅಖಿಲಭಾರತ ಕಾಂಗ್ರೆಸ ಕಾರ್ಯಕಾರಿ ಸಭೆಯ ಪ್ರಧಾನ ಮಂತ್ರಿಗಳಾಗಿದ್ದ ಆಚಾರ್ಯ ಕೃಪಲಾನಿಯವರು ಲಾಲದೇಶ ಬಂಧುಜಿ ಗುಪ್ತರವರು ಅವರಿಗೆ ಬರೆದ ಪತ್ರಕ್ಕೆ ಉತ್ತರವನ್ನು ಕೊಡುತ್ತಾ, ಆರ್ಯ ಸಮಾಜದೊಡನೆ ಸಂಬಂಧವಿರುವ ಕಾಂಗ್ರೆಸೀ ಜನರು ವ್ಯಕ್ತಿಗತ ರೂಪದಿಂದ ತಮ್ಮ ಧಾರ್ಮಿಕ ಹಕ್ಕು ಅಧಿಕಾರಗಳ ಸಂರಕ್ಷಣೆಗೆ ಹೈದರಾಬಾದದಂಥ ಸತ್ಯಾಗ್ರಹಗಳಲ್ಲಿ ಆಗಕ್ಕೆ ಭಾಗತೆಗೆದುಕೊಳ್ಳಬಲ್ಲರೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಅವರ ಪತ್ರವು ಹೀಗಿದೆ.—

'ಈ ಸಂಬಂಧದಲ್ಲಿ ಆರ್ಯಸಮಾಜ ಮತ್ತು ಕಾಂಗ್ರೆಸದೊಳಗಿನ ಅಂತರವು ಎಷ್ಟಿರುವುದೆಂದರೆ ಈ ಎರಡು ಸಂಸ್ಥೆಗಳು ಒಂದೇ ಉದ್ದೇಶವನ್ನು ಭಿನ್ನಭಿನ್ನ ಉಪಾಯಗಳಿಂದ ಸಾಧಿಸಲು ಯತ್ನಿಸಿವೆ. ಹೈದರಾಬಾದ ಸರಕಾರವು ಅಲ್ಲಿಯ ಆರ್ಯಸಮಾಜಗಳ ಮೇಲೆ ಹಾಕಿರುವ ಪ್ರತಿಬಂಧನಗಳು ಅವಾಂಛನೀಯವಾಗಿರುವುವೆಂಬುದನ್ನು ಪ್ರತಿಯೊಬ್ಬ ಕಾಂಗ್ರೆಸ ಮನುಷ್ಯನ ದೃಢವಿಶ್ವಾಸವಾಗಿದೆ. ಅಂಥ ಪ್ರತಿಬಂಧನಗಳ ಕ್ರಿಯಾತ್ಮಕ ವಿರೋಧವನ್ನೂ ಮಾಡಬೇಕಾಗುವುದೆಂದು ಅವರು ನಂಬುತ್ತಾರೆ. ಆದರೆ ಈ ಪ್ರಶ್ನೆಗೆ ಹಿಂದೂ ಮುಸಲ್ಮಾನ ಜಗಳದ ಬಣ್ಣವು ಬರಲಿಕ್ಕೆ ಕೊಡದು. ಆರ್ಯಸಮಾಜದ ವಿರೋಧವು ಹೈದರಾಬಾದ ಸರಕಾರದ ಅಧಿಕಾರಿಗಳ ವಿರುದ್ಧವಾಗಿ ಇರುವುದಲ್ಲದೆ ಮುಸಲ್ಮಾನರ ವಿರುದ್ಧವಾಗಿ ಅಲ್ಲ. ಇಂಥ ಭ್ರಮೆಯುಂಟಾದುದರಿಂದಲೇ ನಮ್ಮ ಕೆಲವು ಕಾಂಗ್ರೆಸ ಮುಖಂಡರು ಸ್ಟೇಟ ಕಾಂಗ್ರೆಸ ಮೂಲಕ ನಡೆಯಿಸಿದ ಸತ್ಯಾಗ್ರಹವನ್ನು ಬಂದು ಮಾಡಿದರು. ಕಾಂಗ್ರೆಸದೊಡನೆ ಸಂಬಂಧವನ್ನಿಟ್ಟಿರುವ ಆರ್ಯಸಮಾಜಗಳು ವ್ಯಕ್ತಿಗತರೂಪವಾಗಿ ತಮ್ಮ ಧಾರ್ಮಿಕ ಸ್ವಾತಂತ್ರ್ಯದ ರಕ್ಷಣೆಗೆ ಸತ್ಯಾಗ್ರಹ ಸಂಗ್ರಾಮದಲ್ಲಿ ಭಾಗತೆಗೆದುಕೊಳ್ಳುವ ಅಧಿಕಾರವುಳ್ಳವರಾಗಿದ್ದಾರೆ. ಕಾಂಗ್ರೆಸಿಗೆ ಆದರೆ ಸ್ವಂತದ ಧಾರ್ಮಿಕ ಪ್ರವೃತ್ತಿ ಯಾವುದೂ ಇರುವುದಿಲ್ಲ. ಆದರೂ ಕೂಡ ಧಾರ್ಮಿಕ ವಿಷಯದಲ್ಲಿ ಸದಾಚಾರದ ರಕ್ಷಣೆ ವಿಚಾರ ಮಾಡುತ್ತ ಪ್ರತಿಯೊಂದು ಧಾರ್ಮಿಕ ಸಂಪ್ರದಾಯಕ್ಕೆ ಪೂರ್ಣ ಸ್ವಾತಂತ್ರ್ಯವು ಇರಬೇಕೆಂದು ನನ್ನ ವಿಶ್ವಾಸವಾಗಿದೆ. ದೇಶದ ಯಾವದಾದರೊಂದು ಸಂಪ್ರದಾಯವನ್ನು ಈ ಸ್ವಾತಂತ್ರ್ಯದಿಂದ ವಂಚಿತ ಮಾಡಿದುದಾದರೆ, ನ್ಯಾಯಪ್ರಾಪ್ತಿಗೆ ಪ್ರಯತ್ನಿಸುವ ಅಧಿಕಾರವು ಆ ಸಂಪ್ರದಾಯಕ್ಕೆ ಪೂರ್ಣರೂಪದಿಂದ ಇರುತ್ತದೆ.

'ಕಾಂಗ್ರೆಸು ಸಂಘಟಿತ ರೂಪದಿಂದ ಪ್ರತಿಯೊಂದು ಉತ್ತಮ ವಿಷಯಕ್ಕಾಗಿ ಕಾದಾಡುತ್ತಿರುವುದಿಲ್ಲ. ಹೈದರಾಬಾದದ ಪ್ರಕೃತ ವಿಷಯದಲ್ಲಿ ಕಾಂಗ್ರೆಸು ಸಂಘಟಿತ ರೂಪದಿಂದ ಭಾಗವಹಿಸಿದುದಾದರೆ ಪರಿಸ್ಥಿತಿಯು ಸುಧಾರಣೆಯಾಗುವುದರ ಬದಲಿಗೆ ಅದು ಮತ್ತಷ್ಟು ಕೆಟ್ಟುಹೋಗುವ ಸಂಭವವಿದೆ— ಆದ್ದರಿಂದ ಹೈದರಾಬಾದದ ಹಿಂದುಗಳ ಸತ್ಯಾಗ್ರಹದಲ್ಲಿ ಕಾಂಗ್ರೆಸ ಭಾಗತೆಗೆದುಕೊಳ್ಳದೆ ಇದ್ದಿರುವುದು, ಯಾವದಾದರೊಂದು ತನ್ನ ವಿಶೇಷ ಸಿದ್ಧಾಂತಕ್ಕನುಕೂಲವಾಗಿ ಅಲ್ಲ, ಆದರೆ ಹಾನಿ ಲಾಭಗಳ ದೃಷ್ಟಿಯಿಂದ ಆಗಿದೆ. ಕಾಂಗ್ರೆಸು ಹೈದರಾಬಾದದ ಧಾರ್ಮಿಕ ಸತ್ಯಾಗ್ರಹದಲ್ಲಿ ಸಂಘಟಿತ ರೂಪದಿಂದ ಭಾಗತೆಗೆದುಕೊಳ್ಳುವುದರಿಂದ ಆಗುವ ಧಾರ್ಮಿಕ ಲಾಭಕ್ಕಿಂತ ರಾಜನೈತಿಕ ಹಾನಿಯು ಹೆಚ್ಚಾಗಬಹುದೆಂದು ಅದಕ್ಕೆ ತೋರಿದೆ. ಆರ್ಯಸಮಾಜವು ತನ್ನ ಧಾರ್ಮಿಕ ಹಕ್ಕು ಅಧಿಕಾರಗಳ ಸಂರಕ್ಷಣೆಗೆ ತಾನು ಸ್ವತಃ ವೀರತಾಪೂರ್ಣ ಹೋರಾಡಲಿಕ್ಕೆ ಸಮರ್ಥವಾಗಿದೆ, ಮತ್ತು ಹಾಗೆ ಅದು ಹೋರಾಡುತ್ತಲೂ ಇದೆ.'

ಸೀಖರೂ ಸಹಯೋಗವನ್ನೀಯುವರು

ಹಿಂದುಗಳೂ ಆರ್ಯಸಮಾಜಗಳೂ ಹೈದರಾಬಾದದಲ್ಲಿ ಹೂಡಿರುವ ಧಾರ್ಮಿಕ ಹಕ್ಕು ಸಂರಕ್ಷಣೆಯ ಸತ್ಯಾಗ್ರಹ ಸಂಗ್ರಾಮದಲ್ಲಿ ಸೀಖರೂ ಕೂಡ ಭಾಗತೆಗೆದುಕೊಳ್ಳುವರು. ಸೀಖರ ಅಖಿಲಭಾರತ ಸರ್ವಮಾನ್ಯ ಸಂಸ್ಥೆಯಾಗಿರುವ ಶಿರೋಮಣಿ ಗುರುದ್ವಾರಾ ಪ್ರಬಂಧಕ ಕಮಿಟಿಯು ಸರ್ವಸಮ್ಮತಿಯಿಂದ ಆರ್ಯ ಸತ್ಯಾಗ್ರಹದಲ್ಲಿ ಸಹಾನುಭೂತಿಯನ್ನು ಪ್ರಕಟ ಮಾಡಿದೆ. ಆಕಾಲಿದಳವು ಅವು ತನ್ನದೊಂದು ಸತ್ಯಾಗ್ರಹೀ ದಳವನ್ನು ಹೈದರಾಬಾದಿಗೆ ಕಳುಹಿಸುವ ಆಲೋಚನೆ ಮಾಡಿದೆ.

ಕುಂವರ ಚಾಂದಕರಣರ ಕೈದು

ಆರ್ಯ ಸತ್ಯಾಗ್ರಹ ಸಮಿತಿಯು ದ್ವಿತೀಯ ಡಿಕ್ಟೇಟರ್ ಕುಂವರ ಚಾಂದಕರಣಜೀ ಶಾರದಾರವರು ೬೪ ಸತ್ಯಾಗ್ರಹೀ ವೀರರೊಂದಿಗೆ ಹೈದರಾಬಾದದಲ್ಲಿ ಸತ್ಯಾಗ್ರಹವನ್ನು ಹೂಡಲು ಹೋಗುತ್ತಾ, ಗುಲ್ಬರ್ಗ ಸ್ಟೇಶನನ್ನು ಮುಟ್ಟಿದೊಡನೆಯೇ ಕೈದುಮಾಡಲ್ಪಟ್ಟರು. ಅದೇ ದಿನ ಬೇರೆ ಬೇರೆ ಕಡೆಗಳಿಂದ ೨೦ ಬೇರೆ ಸತ್ಯಾಗ್ರಹ ದಳಗಳೂ ಕಳುಹಿಸಲ್ಪಟ್ಟು ಕೈದಾದುವು. 'ತಾವು ಯುದ್ಧದಲಿ ಸಂಪೂರ್ಣ ವಿಜಯಿಗಳಾದ ಹೊರತು ಜೀವಿತರಾಗಿ ಹಿಂದಿರುಗುವುದಿಲ್ಲವೆಂದೂ, ಅದಕ್ಕಿಂತ ಮೊದಲು ಸರಕಾರವು ತನ್ನನ್ನು ಬಲಪೂರ್ವಕ ಹಿಂದಕ್ಕೆ ಕಳುಹಿಸುವುದಾದರೆ ತನ್ನ ಶವವಷ್ಟೇ ರಾಜ್ಯದಿಂದ ಹಿಂದಕ್ಕೆ ಬರುವುದೆಂದೂ ಶ್ರೀ ಶಾರದಾರು ಘೋಷಣೆ ಮಾಡಿದರು. ಶೋಲಾಪುರದಿಂದ ಅವರಿಗೆ ಅಪೂರ್ವ ವಿದಾಯ ಮನ್ನಣೆ ಯಲಾಯಿತು. 'ನಮ್ಮ ಪಕ್ಷವು ನ್ಯಾಯದ ಪಕ್ಷವಾಗಿದೆ. ನಮ್ಮ ಧ್ಯೇಯವು ಶಾಂತಿಯನ್ನು ಸ್ಥಾಪಿಸುವುದಾಗಿದೆ. ನಮ್ಮ ಯುದ್ಧವು ಸತ್ಯ ಮತ್ತು ಅಹಿಂಸೆಯನ್ನು ಹೊಂದಿದೆ' ಎಂದು ಹೇಳುತ್ತಾ ಅವರ ಪತ್ನಿ ಹಿಂದೂ ರಾಜ್ಯವು ಈ ಸಂಗ್ರಾಮದಲಿ ಸಮ್ಮಿಲಿತವಾಗಬೇಕೆಂದೂ ಸರ್ವಶಕ್ತಿವಂತನಾದ ಈಶ್ವರನು ವಿಜಯ ಪ್ರಾಪ್ತಿಗೆ ಅಬಾಧ್ಯ ಶಕ್ತಿ ಮತ್ತು ಸಾಹಸವನ್ನು ಕೊಡಲೆಂದು ಪ್ರಾರ್ಥಿಸಿ ಅವರು ಶೋಲಾಪುರದಿಂದ ಹೈದರಾಬಾದಿಗೆ ತೆರಳಿದವರಾದರು.

ತೃತೀಯ ಡಿಕ್ಟೇಟರ ಖುಶಾಲಚಂದಜೀ ಖುರ್ಸಂದ

ಶೋಲಾಪುರ ಸತ್ಯಾಗ್ರಹ ಸಮಿತಿಯು ಮೂರನೆ ಸರ್ವಾಧಿಕಾರಿಗಳಾಗಿ ಖುಶಾಲ ಚಂದಜೀ ಖುರ್ಸಂದರ ನೇಮಿಸಲ್ಪಟ್ಟು ಚಾರ್ಜು ತೆಗೆದುಕೊಂಡಿರುವ. ಸತ್ಯಾಗ್ರಹವು ದ್ವಿಗುಣತ ಉತ್ಸಾಹದಿಂದ ನಡೆಯುತ್ತಿರುವುದು. ಹಣ ಸಂಗಹ ಮತ್ತು ಸತ್ಯಾಗ್ರಹೀ ದಳಗಳ ರಚನಾ ಕಾರ್ಯವು ದೇಶದ ನಾಲ್ಕು ಮೂಲೆಗಳಿಂದ ಆರಂಭವಾಗಿರುವುದು. ಹಿಂದುಗಳು ಮಾತ್ರವಲ್ಲದ ಕ್ರೈಸ್ತ ಸಜ್ಜನರು ಕೂಡ ಸತ್ಯಾಗ್ರಹ ಸಂಗ್ರಾಮದಲ್ಲಿ ಸಹಾನುಭೂತಿಯನ್ನು ತೋರಿಸಿ ಹಣ ಸಹಾಯ ಮಾಡುತ್ತಿರುವರು. ಝಾಂಸಿ ಫೋಟೋಗ್ರಾಫರ್ ಎ ದಿ ಸಿಲ್ವ ಎಂಬವರು ಕ್ರೈಸ್ತರಾಗಿದ್ದರೂ ಅವರು ಸತ್ಯಾಗ್ರಹ ಸಮಿತಿಗೆ ೧೦ ರೂಪಾಯಿಗಳನ್ನು ಕಳುಹಿಸಿಕೊಟ್ಟಿದ್ದಾರೆ.

ಮೌಲಾನ ಆಜಾದರ ಅಭಿಪ್ರಾಯ

ಮೌಲಾನಾ ಅಬುಲ್ ಕಲಾಂ ಆಜಾದರು, 'ಆರ್ಯಸಮಾಜಿಯೂ ಮತ್ತು ಕಾಂಗ್ರೆಸದ ಸದಸ್ಯರೂ ಆದವರು ಧಾರ್ಮಿಕ ತತ್ವದ ಹೈದರಾಬಾದ ಸತ್ಯಾಗ್ರಹ ಕರ್ತವ್ಯವಾಗಿದೆ ಎಂದು ಸ್ಪಷ್ಟ ಅಭಿಪ್ರಾಯವನ್ನು ಕೊಟ್ಟಿರುವರು. ಏಕೆಂದರೆ ಈ ಆಂದೋಲನವು ಒಂದು ಸಂಪ್ರದಾಯದೊಡನೆ ಸಂಬಂಧವನ್ನಿಟ್ಟಿರುವುದರಿಂದಲೂ ಅದರ ಸ್ವರೂಪವು ಕೂಡ ಧಾರ್ಮಿಕವಾಗಿರುವುದರಿಂದಲೂ. ಆರ್ಯಸಮಾಜಿಗಳು ಹೈದರಾಬಾದದಲ್ಲಿ ಅನುಭವಿಸುತ್ತಿರುವ ಕಷ್ಟಗಳೊಡನೆ ನನ್ನ ಪೂರ್ಣ ಸಹಾನುಭೂತಿ ಇರುತ್ತದೆ. ಅವರ ಪ್ರತ್ಯೇಕ ಕಷ್ಟಗಳು ದೂರ ಮಾಡಲ್ಪಡಬೇಕೆಂದು ನನ್ನ ಇಚ್ಛೆಯಾಗಿದೆ. ತನ್ನ ಪ್ರಜೆಗಳ ನಾಗರಿಕ ಅಧಿಕಾರಗಳನ್ನು ಆಕ್ರಮಿಸುವುದು ಯಾವ ಸಂಸ್ಥಾನಕ್ಕೂ ಉಚಿತವಾಗಿರುವುದಿಲ್ಲ' ಎಂದು ಮೊದಲಾಗಿ ಶ್ರೀ ಆಜಾದರು ಹೈದರಾಬಾದದ ಲೋಮಹರ್ಷಣ ಹತ್ಯಾಚಾರ ವರ್ಣನೆಯನ್ನು ಕೇಳುತ್ತಲೇ ಹೇಳಿದರು. ಇತರ ಜಾತಿಮತಗಳ ನಿಷ್ಪಕ್ಷಪಾತಿ ಮುಖಂಡರೆ ಕೂಡ ಇದೇ ರೀತಿಯ ಅಭಿಪ್ರಾಯಗಳನ್ನು ಕೊಡುತ್ತಿದ್ದಾರೆ.

ಇಕೊನೊಮಿ ಟಿನ್ನುಗಳನ್ನು ಕೊಂಡು ಹಣ ಉಳಿಸಿರಿ.

ದೊಡ್ಡ ಸೈಜು (೮ ಔನ್ಸು) ರೂ 1-4-0
(ದೊಡ್ಡ ಬಾಟ್ಲಿಗಳಲ್ಲಿಯೂ ಇದ್ದೀತು)
ಸಣ್ಣ ಸೈಜು (೪ ಔನ್ಸು) ಆಣೆ 11

ಎಂಡ್ರೂಸ್ ಲವಣದ ಇಕೊನೊಮಿ ಟಿನ್ನುಗಳನ್ನು ನೀವು ಕೊಂಡುಕೊಂಡರೆ ನಿಮಗೆ ಮೊದಲಿನ ಟಿನ್ನುಗಳಲ್ಲಿ ದೊರಕುವಷ್ಟೆ ಲವಣವು ಕಡಿಮೆ ಕ್ರಯಕ್ಕೆ ದೊರೆಯುತ್ತದೆ. ಎಂಡ್ರೂಸ್ ಟಿನ್ನುಗಳಲ್ಲಿ ಉತ್ತಮವಾದದ್ದು ಈ ಹೊಸ ಟಿನ್ನುಗಳನ್ನು ನೀವು ಕೊಂಡುಕೊಳ್ಳುವುದರಿಂದ ಹಣದ ಉಳಿತಾಯವಾಗುವುದಲ್ಲದೆ ಉತ್ತಮವಾದ ಲವಣವು ದೊರಕುವುದು.

ಈ ಬೇರೆ ತರದ ಮತ್ತು ಉತ್ತಮ ಲವಣವು ೧೦ ವರ್ಷಗಳ [illegible] ಹೆಸರುವಾಸಿಯಾಗಿದ್ದು ಸಮಪ್ರಮಾಣವನ್ನುಂಟುಮಾಡುವ ಕಾರಣವಾಗಿದ್ದು ಉತ್ತಮವಾದ ಘಟಕಗಳಿಂದ ಕೂಡಿರುತ್ತದೆ. ಇದರ [illegible] ಮತ್ತು ಅನಂತವಾದ ಉಕ್ಕಿಬರುವ [illegible] ಎಂಡ್ರೂಸ್ ಲವಣವನ್ನು ತಯಾರಿಸುವಾಗ ಕೈ ಸೋಂಕಿರುವುದಿಲ್ಲ.

ಎಂಡ್ರೂಸ್ ಲಿವರ್ ಸೋಲ್ಟ್ ನಾಲ್ಕು ವಿಧಾನಗಳಲ್ಲಿ ಉಪಕಾರವನ್ನೀಯುವುದು:



1) ಕಶ್ಮಲವನ್ನು ಹೊರಗೆಡವಿ ಸಂಪೂರ್ಣ ಶುದ್ಧಿಗೊಳಿಸುವುದು
2) ಯಕೃತ್ತಿನ ಮೇಲೆ ಕೆಲಸಮಾಡಿ ಪಿತ್ತಸ್ರಾವಕವನ್ನು ಉದ್ರೇಕಿಸುವುದು.
3) ಹೊಟ್ಟೆಯನ್ನು ಸೌಮ್ಯರೀತಿಯಿಂದ ಸ್ವಚ್ಛಗೊಳಿಸುವುದು.
4) ಹೊಟ್ಟೆಯೊಳಗಿನ ಕಶ್ಮಲವನ್ನು (ಎಸಿಡ್) ಶಕ್ತಿಹೀನಗೊಳಿಸುವುದು

ಈ ಕೆಳಗಿನವುಗಳಿಂದ ನರಳುವಾಗ ಎಂಡ್ರೂಸ್ ಲವಣವು ಅಗತ್ಯ: ಪಿತ್ತವಿಕಾರ, ಮಲಬದ್ಧತೆ, ಅಜೀರ್ಣ ತಲೆನೋವು, ಯಕೃತ್ತಿನ ಅಸ್ವಸ್ಥತೆ [illegible]

ಆಂತರ್ ಶುದ್ಧಿಗೆ ಎಂಡ್ರೂಸ್ ಲಿವರ್ ಸೋಲ್ಟ್

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

ANDREWS
LIVER SALT
for Inner Cleanliness

ಶ್ರೇಷ್ಠ ತರದ
ದೃಷ್ಟಿ ಚಕ್ರಗಳಿಗೆ

ರಬ್ಬರು ಮೊಹರುಗಳಿಗೆ
ನಾಯಕ್ಸ್ ಸ್ಟೋರ್ಸ್
ರಥಬೀದಿ, ಮಂಗಳೂರು.

ಶಾಲಿವಾಹನ ಶಕ ೧೮೬೧ನೆಯ, ಪ್ರಮಾಥಿ ಸಂವತ್ಸರದ ಚೈತ್ರ ಶು ೬ ಶನಿವಾರದಿಂದ ಚೈತ್ರ ಶು ೧೧ ಶುಕ್ರವಾರದ ವರೆಗಿನ ಪಂಚಾಂಗ (೧೯೩೯ನೇಯ. ಮಾರ್ಚ್)

ತಾ	ವಾರ	ತಿಥಿ	[illegible]	ನಕ್ಷತ್ರ	[illegible]	[illegible]	[illegible]
25	ಶನಿ	೬	[illegible]	ಕೃತ್ತಿಕಾ	[illegible]	೧೧	
26	ರವಿ	೭	[illegible]	ರೋಹಿಣಿ	[illegible]	[illegible]	
27	ಸೋಮ	೮	[illegible]	ಮೃಗಶಿರಾ	[illegible]	[illegible]	
28	ಮಂಗಳ	೯	[illegible]	ಆರ್ದ್ರಾ	[illegible]	[illegible]	
29	ಬುಧ	೧೦	[illegible]	ಪುನರ್ವಸು	[illegible]	[illegible]	
30	ಗುರು	[illegible]	[illegible]	ಪುಷ್ಯ	[illegible]	[illegible]	
31	ಶುಕ್ರ	[illegible]	[illegible]	ಆಶ್ಲೇಷಾ	[illegible]	[illegible]	

THE PIE-MONEY BANK LTD,

Mandu Pete, MANGALORE

Undertakes all kinds of banking Business. Current account at 2½ per annum. Savings Bank Deposits at 3½% per annum.

FIXED DEPOSITS

For 2 Years [illegible] 1 Year [illegible] For 6 months [illegible] 3 months [illegible]

Auction [illegible] from Rs 100 to Rs 5000 [illegible]

regularly [illegible] instalments [illegible] Cheque [illegible] facilities to Businessmen and interests [illegible] Public

Apply for particulars—K. R. GURU, *Managing Director*

ಗುಣಬಾರದಿದ್ದರೆ ಹಣ ವಾಪಾಸು

[illegible]

ಸಂತತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ್)

[illegible]

[illegible] ಸಂಜೀವಿನೀ ಔಷಧಾಲಯ ಮು ಪೊ ಮಿರಜ, (S. M.)

ಬರೇ ರೂ 1-4-0ಕ್ಕೆ 3 ಗಡಿಯಾರಗಳು ಮತ್ತು 1255 ವಸ್ತು ಬಹುಮಾನಗಳು

[illegible]

The American Commercial Stores [illegible] 1221 [illegible]

THE

Bank of Mangalore Ltd.,

MANGALORE.

ESTD 1931

branches

Panemangalore Mudabidri & Padubidri

Fixed Deposits will be received at following rates of interest

For 3 months	3½%
6	4%
12	5%
24 & upwards	5½%

Interest Payable Quarterly

Savings Bank deposit 3½% on daily balances.

All kinds of banking business transacted

THE

Canara Banking Corporation Udipi, Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a.

in denominations of

RS. 50/-, 100/-, 500/-, 1,000/-, & 5,000

are now issued at all our Branches

For particulars call at or write to any of our nearest Branches.

ಮದನಕಾಮೇಶ್ವರ ಲೇಹ

[illegible]

HOUNSR

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್ ಉಪಯೋಗಿಸಿರಿ.

ಶ್ರೀ ವೆಂಕಟೇಶ ಬಜಾರ್, [illegible]

ಡೋಂಗರೆ ಇವರ ಬಾಲಾಮೃತವು

[illegible]

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ.

ಸಾಮಾನುಗಳು		ಮುಂಬಳಗು ರಿಂದ	ಮುಂಬಳಗು ವರೆಗೆ
ಅಕ್ಕಿ	[illegible]	1—11—0	—
,,	[illegible]	1—10—0	1—10—0
,,	[illegible]	1—10—0	—
,,	[illegible]	1—4—0	
ಅಕ್ಕಿ	[illegible]	4—2—0	4—2—0
,,	[illegible]	3—14—0	3—11—0
,,	[illegible]	4—4—0	—
,,	[illegible]	3—8—0	3—8—0
ತೆಂಗಿನ ಕಾಯಿ	ಸುಲಿದ 1000ಕ್ಕೆ	[illegible]—0—0	45—0—0
,,	[illegible] ,,	37—8—0	17—8—0
	[illegible]	45—0—0	—
	[illegible]	17—8—0	
	ತೆಂಗಿನ ಎಣ್ಣೆ ಮಣ	3—[illegible]—0	3—5—0
	[illegible] 1000ಕ್ಕೆ	[illegible]—4—0	[illegible]—12—0
	[illegible]	[illegible]—12—0	[illegible]—12—0
	[illegible]	42—8—0	60—0—0
	[illegible]	15—8—0	16—8—0

ಮಹಮ್ಮದಾಲಿ ಜಿನ್ನಾರ ಹೃದಯ ಕಳವಳ

ಎಲ್ಲಿ ಹೋದರೂ ಯಾರೂ ಕೇಳುವುದಿಲ್ಲ

ತಾನು ಹೇಳಿದ ಹಾಗೆ ಹಿಂದೂ ಮುಸಲ್ಮಾನರೊಳಗೆ ಐಕ್ಯ ಉಂಟಾಗಲು ಜಮಾಯತ್ ಉಲ್ ಉಲೇಮಾ ಎಂಬ ಮುಸಲ್ಮಾನ ಸಂಸ್ಥೆಯು ದೊಡ್ಡ ತಡೆಯಾಗಿದೆ ಎಂದು ಮಿ. ಮಹಮ್ಮದಾಲಿ ಜಿನ್ನರು ಆ ಸಂಸ್ಥೆಯ ಮೇಲೆ ಒಂದು ಅಪವಾದವನ್ನು ಹೊರಿಸಿದ್ದರು. ಜಮಾಯತ್ ಉಲ್ ಉಲೇಮ-ಮುಸಲ್ಮಾನರ ಜಾತೀಯ ಸಂಸ್ಥೆಯಾದರೂ ಅದು ರಾಷ್ಟ್ರೀಯ ದೃಷ್ಟಿಕೋನ ಉಳ್ಳದ್ದಾಗಿದೆ. ಅಂಥ ಒಂದು ಸಂಸ್ಥೆಯನ್ನು ಮಿ. ಜಿನ್ನರು ನಿಂದಿಸಿರುವುದನ್ನು 'ಸರ್ಚ್‌ಲ್ಯಾಟ್' ಎಂಬ ಪತ್ರಿಕೆಯು ಹೀಗೆಂದು ಟೀಕಿಸಿತು.

ಮಾತಿನ ಮಲ್ಲರು-ಜಿನ್ನರು

'ಜಿನ್ನರು ಬರೇ ಮಾತಿನ ಮಲ್ಲರಂತೆ ಆಡಿ ಹೋಗಿದ್ದಾರೆ. ಹಿಂದೂ ಮುಸಲ್ಮಾನ ಒಕ್ಕಟ್ಟಿಗೆ ಜಮಾಯತ್ ಉಲ್ ಉಲೇಮಾ ಹೇಗೆ ತಡೆಯಾಗಿದೆ, ಯಾಕೆ ತಡೆಯಾಗಿದೆ ಎಂಬುದನ್ನು ಅವರು ಎಲ್ಲಿಯೂ ಹೇಳಿಲ್ಲ. ಕಾರಣ ಕೊಡದೆ ಆಡುವ ಮಾತುಗಳ ಬೆಲೆ ಎಷ್ಟೆಂಬುದನ್ನು ವಾಚಕರು ತಿಳಿಕೊಳ್ಳಬಲ್ಲರು.

'ರಾಷ್ಟ್ರೀಯ ಮುಸಲ್ಮಾನರು ಜಿನ್ನಾರ ಮುಂದಾಳುತನವನ್ನು ಒಪ್ಪುವುದಿಲ್ಲ. ಅವರಲ್ಲದೆ ಜಮಾಯತ್ ಉಲ್ ಉಲೇಮಾದ ಮುಸಲ್ಮಾನರು ಕೂಡ ಜಿನ್ನರ ಮುಂದಾಳುತನವನ್ನು ಒಪ್ಪುವುದಿಲ್ಲ. ಇವರ ಸಂಖ್ಯೆ ಜಿನ್ನರ ಅನುಯಾಯಿಗಳ ಸಂಖ್ಯೆಗಿಂತ ಬಹಳ ಹೆಚ್ಚಿಗಿರುವುದು. ರಾಷ್ಟ್ರೀಯ ಮುಸಲ್ಮಾನರೂ ಜಮಾಯತ್ ಉಲ್ ಉಲೇಮಾದವರು ತಮ್ಮ ಜಾತಿಯ ಮತ್ತು ದೇಶದ ಹಿತವನ್ನು ಸಾಧಿಸುವ ಬಗೆಯನ್ನು ಜಿನ್ನರಿಗಿಂತ ಚೆನ್ನಾಗಿ ತಿಳಿದಿದ್ದಾರೆ. ಅವರು ಸ್ವತಂತ್ರ ವಿಚಾರಿಗಳೂ ವಿವೇಕಿಗಳೂ ಆಗಿದ್ದಾರೆ. ಅಂಥವರಿಗೆ ಜಿನ್ನರ ಉಪದೇಶವೂ ಮಾರ್ಗದರ್ಶನವೂ ಬೇಕಾಗಿಲ್ಲ.

ಸರ್ವತಂತ್ರ ಸರ್ವಾಧಿಕಾರಿ

'ಭಾರತೀಯ ಮುಸಲ್ಮಾನರ ಸರ್ವತಂತ್ರ ಸರ್ವಾಧಿಕಾರಿ ತಾನು' ಎಂದು ಜಿನ್ನರು ಊಹಿಸಿದ್ದಿರಬಹುದು. ಆದರೆ ಅವರು ಹಾಗೆ ಊಹಿಸಿದ್ದುದು ದೊಡ್ಡ ತಪ್ಪಾಯಿತೆಂಬುದು ಈಗ ಅವರ ಗಮನಕ್ಕೆ ಬರತೊಡಗಿದೆ. ಬಹುಸಂಖ್ಯಾಕರಾಗಿರುವ ರಾಷ್ಟ್ರೀಯ ಮುಸಲ್ಮಾನರೂ ಜಮಾಯತ್ ಉಲ್ ಉಲೇಮಾದವರೂ ಜಿನ್ನಾರನ್ನು ತುಚ್ಛವಾಗಿ ಕಾಣತೊಡಗಿರುವರು. ಅವರು ಜಿನ್ನರ ಒಂದೊಂದು ಮಾತನ್ನೂ ವಿರೋಧಿಸತೊಡಗಿದ್ದಾರೆ. ಇದು ಜಿನ್ನರ ಹೃದಯ ಕಳವಳಕ್ಕೆ ಕಾರಣವಾಗಿದೆ. ಆದರೆ ಅವರು ಹೀಗೆ [illegible]ವಾಗತೊಡಗಿದ ಜಮಾಯತ್ ಉಲ್ ಉಲೇಮಾವು ಹಿಂದೂ ಮುಸಲ್ಮಾನ ಐಕ್ಯಕ್ಕೆ ಭಂಗ ತರುವುದೆಂದು ಅವರು ಆಕ್ಷೇಪಿಸಿರುವುದು ಶುದ್ಧ ಮೂರ್ಖತನವಾಗಿದೆ. ಜಿನ್ನಾರ ಮುಸ್ಲಿಮ್ ಲೀಗೂ ಜಮಾಯತ್ ಉಲ್ ಉಲೇಮವೂ ಹಿಂದೂ ಮುಸಲ್ಮಾನ ಐಕ್ಯತೆಗೆ ಮಾಡಿದ ಕಾರ್ಯಗಳನ್ನು ತಿಳಿದಿರುವವರು, ಜಿನ್ನಾರ ಮಾತುಗಳನ್ನು ಒಂದು ಸಣ್ಣ ನಗುವನ್ನು ನಕ್ಕು ಉಪೇಕ್ಷಿಸುವರಲ್ಲದೆ ಮತ್ತೇನಿಲ್ಲ. ಜಿನ್ನರು ಕಲ್ಪಿಸಿರುವ ಹಿಂದೂ ಮುಸಲ್ಮಾನ ಐಕ್ಯತೆಯು ಎಂಥಹದೆಂಬುದು ಅವರಿಗೆ ಚೆನ್ನಾಗಿ ಗೊತ್ತಾಗಿದೆ.

ಜಿನ್ನರ ಸ್ಥಾನ ಮಾನ

ಮುಸಲ್ಮಾನ ಸಮಾಜದಲ್ಲಿ ಜಿನ್ನರ ಸ್ಥಾನಮಾನವು ಯಾವುದೆಂಬುದನ್ನು ದಿಲ್ಲಿಯ ಒಂದು ಘಟನೆಯಿಂದಲೇ ತಿಳಿಕೊಳ್ಳಬಹುದು. ಕಳೆದ ಮೊಹರಮ್ ಹಬ್ಬದ ಕಾಲದಲ್ಲಿ ದಿಲ್ಲಿಯಲ್ಲಿ ಮುಸಲ್ಮಾನರ ಎರಡು ಸಭೆಗಳಾಗಿದ್ದುವು. ಒಂದು ಸಭೆಯು ಜಮಾಯತ್ ಉಲ್ ಉಲೇಮಾದ ಆಶ್ರಯದಲ್ಲಿಯೂ ಇನ್ನೊಂದು ಜಿನ್ನರ ಮುಸ್ಲಿಮ್ ಲೀಗಿನ ಆಶ್ರಯದಲ್ಲಿಯೂ ಕೂಡಿತ್ತು. ಮೊದಲಿನ ಸಭೆಯಲ್ಲಿ ೩೦೦೦೦ ಮುಸಲ್ಮಾನರು ಕೂಡಿರುವಾಗ ಎರಡನೆ ಸಭೆಯಲ್ಲಿ ಕೂಡಿದವರು ಬರೇ ೨೦೦ ಮಂದಿ! ಬರಬರುತ್ತ ಜಿನ್ನರ ಅನುಯಾಯಿಗಳ ಸಂಖ್ಯೆ ಹೇಗೆ ಕಡಿಮೆಯಾಗುತ್ತ ಬರುತ್ತಿದೆ ಎಂಬುದನ್ನು ಅಷ್ಟರಿಂದಲೇ ತಿಳಿಕೊಳ್ಳಬಹುದು. ಆದರೂ ಕೂಡ ಭಾರತೀಯ ಮುಸಲ್ಮಾನರ ಪರವಾಗಿ ಮಾತನಾಡಬಲ್ಲವನು ತಾನೊಬ್ಬನೇ ಎಂದು ಹೇಳುವುದನ್ನು ಜಿನ್ನರು ಇನ್ನೂ ಬಿಟ್ಟಿಲ್ಲ!

ಜಮಾಯತದ ಹೇಳಿಕೆ

ಜಮಾಯತದ ಮೇಲೆ ಜಿನ್ನರು ಅಪವಾದ ಹೊರಿಸಿರುವುದನ್ನು ಅದು ಈ ಮಾತುಗಳಿಂದ ಖಂಡಿಸಿದೆ— 'ಜಮಾಯತದ ಸ್ಥಾಪನೆಯಾದಾಗಿನಿಂದ ಅದು ಹಿಂದೂ ಮುಸಲ್ಮಾನ ಐಕ್ಯತೆಗೆ ಯಾವ ಪ್ರಕಾರ ಕೆಲಸಮಾಡುತ್ತ ಬಂದಿದೆ, ಅದರ ಧ್ಯೇಯಾದರ್ಶ ಕಾರ್ಯಸಾಧನೆಯ ರೀತಿನೀತಿಗಳು ಎಷ್ಟು ಉಚ್ಚವಾಗಿವೆ, ಜಾತಿ ಜಾತಿ, ಜಾತಿಮತಗಳೊಳಗೆ ಪ್ರೇಮ ಸೌಹಾರ್ದ ಸ್ನೇಹ ಮಮತೆಗಳಿರುವಂತೆ ಅದು ಹೇಗೆ ಪ್ರಯತ್ನಿಸಿದೆ ಎಂಬುದು ಸಮಸ್ತ ಭಾರತಕ್ಕೇ ತಿಳಿದಿದೆ. ಸತ್ಯವನ್ನು ಹೇಳುವುದಾದರೆ, ನಮ್ಮ ದೇಶದಲ್ಲಿ ಹಿಂದೂ ಮುಸಲ್ಮಾನ ಐಕ್ಯತೆಗೆ ಭಂಗವನ್ನು ತರುವಂಥಾದ್ದು ಜಿನ್ನರ ಅಹಂಭಾವ ಮತ್ತು ಅವಿವೇಕಗಳಲ್ಲದೆ ಜಮಾಯತ್ ಉಲ್ ಉಲೇಮಾವು ಅಲ್ಲ. ಜಿನ್ನರು ಎಷ್ಟು ಅಹಂಭಾವಿಗಳೂ ಅವಿವೇಕಿಗಳೂ ಆಗಿದ್ದಾರೆಂಬುದು ಮಹಾತ್ಮಾಜಿಯವರು ಕಳೆದ ಬಾರಿ ಅವರೊಡನೆ ಸಂಧಿಪ್ರಸ್ತಾಪವನ್ನು ಬೆಳೆಸಿದಾಗ ಚೆನ್ನಾಗಿ ಬೆಳಕಿಗೆ ಬಂದಿದೆ. ಈಗ ಭಾರತದ ಪೇಟೆ ಪಟ್ಟಣಗಳಲ್ಲಿ ಮಾತ್ರವಲ್ಲ, ಹಳ್ಳಿಹಳ್ಳಿಗಳಲ್ಲೂ ಹರಡಿ ರಾಷ್ಟ್ರೀಯ ಜೀವನಕ್ಕೆ ಗದ್ದಲೆಯಂತೆ ಅಂಟಿಕೊಂಡಿರುವ ಹಿಂದೂ ಮುಸಲ್ಮಾನ ಜಗಳ ದಂಗೆಗಳಿಗೆ ಸಹಜವಾದ ಕಾರಣೀಭೂತರು ಯಾರೆಂಬುದನ್ನು ಸ್ವಲ್ಪಮಾತ್ರ ರಾಜಕೀಯ ಜ್ಞಾನ ಇರುವವರು ಕೂಡ ತಿಳಿದಿದ್ದಾರೆ.

ಬುದ್ಧಿಭ್ರಮಣಕ್ಕೆ ಕಾರಣ

ಮೌಲಾನಾ ಮಹಮ್ಮದ ಸಯ್ಯದರು ಜಿನ್ನರನ್ನು ಹೀಗೆ ಟೀಕಿಸಿರುವಾಗ ಮೌಲಾನಾ ಹಬಿಬುಲ್ ರಹಮಾನರು ಹೀಗೆಂದಿದ್ದಾರೆ — ಜಿನ್ನರ ಬುದ್ಧಿಯು ಕೆಟ್ಟಿರುವುದಕ್ಕೆ ಅವರಿಗೆ ಹೋದಲ್ಲಿ ಒದಗಿಬರುವ ಸೋಲೇ ಕಾರಣವಾಗಿದೆ. ಸಿಂಧದಲ್ಲಿ ಅವರಿಗೆ ಪ್ರಾಪ್ತವಾದ ಸೋಲನ್ನು ಅವರು ಎಂದೆಂದೂ ಮರೆಯದಂತಾಗಿದೆ. ಸಿಂಧದಲ್ಲಿ ಮುಸ್ಲಿಮ್ ಲೀಗ ಮಂತ್ರಿಮಂಡಲವನ್ನು ಸ್ಥಾಪಿಸಲಿಕ್ಕೆ ಅವರು ಶತ ಪ್ರಯತ್ನಗಳನ್ನು ಮಾಡಿದರೂ ಕೃತಾರ್ಥರಾಗಲಿಲ್ಲ. [illegible] ಜಿನ್ನರ ಮುಸ್ಲಿಂ ಲೀಗ ಪಾಳಯದಲ್ಲಿದ್ದ ಸರ್ ಗುಲಾಂ ಹುಸ್ಸೇನ ಹಿದಾಯತುಲ್ಲಾರಂಥವರು ಕೂಡ ಜಿನ್ನರ ವಿರೋಧಿಗಳಾದ ಅಲ್ಲಾ ಬಕ್ಷರನ್ನು ಕೂಡಿಕೊಂಡಿರುವರು. ಮತ್ತು ಆ ಹಿದಾಯತುಲ್ಲರೇ— ಈಗ ಮುಸ್ಲಿಮ ಲೀಗನು ಸ್ವಾರ್ಥಿಗಳ ಕೂಟವೆಂದು ನಿಂದಿಸಿರುವರು.

ಮುಸ್ಲಿಮ ಲೀಗ್ ಕುಂದುತ್ತಿದೆ

ಭಾರತೀಯ ಮುಸಲ್ಮಾನರಿಗೆ ಮುಸ್ಲಿಮ ಲೀಗಿನ ಮೇಲಿರುವ ಆದರಭಾವವು ಕುಂದುತ್ತಿದೆ. ಈಗ ಮುಸ್ಲಿಮ ಲೀಗಿನಿಂದ ಮುಸಲ್ಮಾನರು ಪೃಥ[illegible]ರಾಗುವರು. ಕಡಿಮೆಯಾಗುತ್ತಿದೆ ಎಂದು ಮೌಲಾನಾ ಮಹಮ್ಮದ ಸಯ್ಯದರು ಹೇಳಿರುವರು. ಜಿನ್ನರ [illegible]ನಂತಿರುವ ಮುಸ್ಲಿಮ ಲೀಗಿನ ಉಳಿದ ಕೆಲವೇ ಮುಸಲ್ಮಾನ ಮುಖಂಡರಾದರೂ ಜಿನ್ನರ ಕೈ ಹಿಡಿಯುವ ದಿನಗಳು ದೂರದಲ್ಲಿಲ್ಲ. ಅವರೆಲ್ಲರೂ ನಿಕಟ ಭವಿಷ್ಯದಲ್ಲಿಯೇ ಆಗಾಖಾನರ ಪಾಳಯವನ್ನು ಸೇರಿಕೊಳ್ಳುವರು. ಮತ್ತೆ ಪಾಪದ ಜಿನ್ನರು ತಮಗೆ ತಾವೇ ಮುಖಂಡರಾಗಿ ಇರಬೇಕಾಗುವುದು.

ಹಿಂದೂ ಮುಸಲ್ಮಾನ ಐಕ್ಯ

ಹಿಂದೂ ಮುಸಲ್ಮಾನ ಐಕ್ಯವು ಆಗಾಖಾನರಂಥ ಪ್ರಗತಿಪರ ಧೋರಣವುಳ್ಳ ಮುಸಲ್ಮಾನ ಮುಖಂಡರ ಪ್ರಯತ್ನಗಳಿಂದ ಆಗಬೇಕಾಗಿದೆ. ಇನ್ನು ಮುಸಲ್ಮಾನರ ಪರವಾಗಿ ಅಧಿಕಾರದಿಂದ ಮಾತನಾಡಲಿಕ್ಕೆ ಬೇಕಾದ ಮುಖಂಡತನವು ಜಿನ್ನರಲ್ಲಿ ಉಳಿದಿರುವುದಿಲ್ಲ. ಅವರ ಮುಸ್ಲಿಂ ಲೀಗ್ ಕೂಡ ಮುಸಲ್ಮಾನರ ಪರವಾಗಿ ಮಾತನಾಡಲು ಸಮರ್ಥವಾಗಿರುವುದಿಲ್ಲ. ಮುಂದಿನ ಹಿಂದೂ ಮುಸಲ್ಮಾನ ಐಕ್ಯತೆಯ ಪ್ರಸ್ತಾಪಗಳಲ್ಲಿ ಕಾಂಗ್ರೆಸ್ಸು ಈ ವಿಷಯವನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಸತ್ಯಸ್ಥಿತಿಯ ಸರಿಯಾದ ಜ್ಞಾನವುಳ್ಳ ಆಗಾಖಾನರು ದೂರದರ್ಶಿಗಳು. ಮಹಾತ್ಮಾಜಿಯವರೊಡನೆ ಹಿಂದೂ ಮುಸಲ್ಮಾನ ಐಕ್ಯತೆಯ ವಿಷಯವನ್ನು ಮಾತನಾಡಿರುವುದು ಸಂತೋಷದ ಸಂಗತಿಯಾಗಿದೆ. ಅವರ ಪ್ರಯತ್ನಗಳಿಗೆ ಸಫಲತೆಯು ದೊರೆಯುವುದೆಂದು ಜನತೆಯು ಆಶಿಸಿದೆ. ರಾಜಕೋಟ ಮತ್ತು ದೇಶೀ ಸಂಸ್ಥಾನಗಳ ಸ್ಥಿತಿಗತಿಗಳು ಒಂದು [illegible]ವನ್ನು ಮುಟ್ಟಿದ ತರುವಾಯ ಮಹಾತ್ಮಾಜಿಯವರು ಕಾಂಗ್ರೆಸಿನ ಪರವಾಗಿ ಆಗಾಖಾನರೊಡನೆ ಹಿಂದೂ ಮುಸಲ್ಮಾನ ಐಕ್ಯತೆಯ ಕುರಿತು ಪ್ರಸ್ತಾಪವನ್ನು ಬೆಳೆಸುವ ಸಂಭವವಿದೆ.

ದೇಶದಲ್ಲೆಲ್ಲಾ ಮನ್ನಣೆ ಪಡೆದ ಗಡಿಯಾರ
ಒಂದನ್ನು ನಿಮ್ಮ ಮನೆಯಲ್ಲೂ ಇಡಿರಿ.

WEST END CLOCKS



ನಂಬಿಕೆ ದೀರ್ಘ ಬಾಳಿಕೆಗೆ ವೆಸ್ಟ್ ಎಂಡ್ ಗಡಿಯಾರಗಳು ಪ್ರಸಿದ್ಧಪಟ್ಟಿವೆ. ರೈಲ್ವೇ ಮತ್ತು ಕಚೇರಿಗಳಲ್ಲಿ ಇವುಗಳನ್ನೇ ಉಪಯೋಗಿಸುತ್ತಿರುವುದೇ ಇದರ ಮಹಿಮೆಗೆ ಸಾಕ್ಷಿ. ನಿಮ್ಮ ಮನೆಗೂ ಒಂದನ್ನು ಕೊಂಡುಕೊಳ್ಳಿ. ಇದಕ್ಕಿಂತ ಯೋಗ್ಯ ಇನ್ನೊಂದಿಲ್ಲ. ಧರ್ಮಾರ್ಥ ಕೆಟಲಾಗಿಗೆ ಬರೆಯಿರಿ

Rs.43/-

ಡ್ರಾಪ್ ಒಕ್ಟೇಗನ್, 10" ಡಯಲು, 8 ದಿನಗಳಿಗೊಮ್ಮೆ ಕೀ ಕೊಡುವುದು. ಗಂಟೆ, ಅರ್ಧ ಗಂಟೆ ಬಾರಿಸುವುದು
ರೂ.43.

WEST END WATCH Co
BOMBAY CALCUTTA

ವೆಸ್ಟ್ ಎಂಡ್ ವಾಚ್ ಕೊ., ಮುಂಬಯಿ ಮತ್ತು ಕಲ್ಕತ್ತ

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No 21

1 [illegible]
2 [illegible]
3 [illegible]
4 [illegible]
5 [illegible] ಇವರೆಲ್ಲ [illegible] 1ನೆ ಅರ್ಜಿದಾರಳ [illegible]

1ನೆ ಅರ್ಜಿದಾರಳ [illegible] ಅರ್ಜಿ [illegible] ತಾರೀಕು 28-2-1937ರಲ್ಲಿ ಮೃತಪಟ್ಟ [illegible] ಅವಳ [illegible] ಬರತಕ್ಕ ತಾರೀಕು 18-11-35ನೆ [illegible] ನೋಟಿನ ಅಸಲು ಬಡ್ಡಿ ಕೂಡಾ ರೂಪಾಯಿ 352-13-0 ಮತ್ತು ಮುಂದಿನ ಬಡ್ಡಿ ಸಹಾ ವಸೂಲು ಮಾಡುವರೆ 1ನೆ ಅರ್ಜಿದಾರಳ ಹೆಸರಿಗೆ ಒಂದು ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು 1925ನೆ ಇಸವಿಯ 39ನೆ ಆಕ್ಟಿನ 372ನೆ ಕಲಂ ಮೇರೆಗೆ ಬರಕೊಂಡ ಅರ್ಜಿಯು ತಾರೀಕು 11-4-1939ಕ್ಕೆ ತನಿಖೆಗೆ ಇಟ್ಟಿರುವದರಿಂದ ಈ ಕುರಿತು ಆಕ್ಷೇಪ ಇದ್ದವರು ಸದ್ರಿ ದಿನ ಬೆಳಿಗೆ 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ ವ್ಯವಹರಣೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಲಾಗಿಯದೆ.

ಕಾರ್ಕಳ, ತಾ 15-3-39. P. Ramachandra Rao, ಅರ್ಜಿದಾರರ ಕಡೆ ವಕೀಲ

ಸಂಸ್ಥಾನಗಳ ರಾಜಕೀಯದಲ್ಲಿ ಕಾಂಗ್ರೆಸಿನ ಪ್ರವೇಶ ಅಸಾಮಯಿಕವಲ್ಲ

ನಮ್ಮ ದೇಶದ ಹೆಚ್ಚುಕಡಿಮೆ ಎಲ್ಲ ದೇಶೀ ಸಂಸ್ಥಾನಗಳಲ್ಲಿ ಪ್ರಜೆಗಳು ಜವಾಬುದಾರ ಸರಕಾರವನ್ನು ಅಪೇಕ್ಷಿಸಿ ಉಗ್ರ ಚಳವಳವನ್ನು ಆರಂಭಿಸಿರುವರು. ಇದರಿಂದ ದೇಶೀ ಸಂಸ್ಥಾನಗಳ ರಾಜಕೀಯ ವಾತಾವರಣವು ಅಲ್ಲೋಲ ಕಲ್ಲೋಲವಾಗಿದೆ. ಪ್ರಕ್ಷುಬ್ಧ ವಾತಾವರಣದಿಂದ ಎಷ್ಟು ಸಂಸ್ಥಾನಗಳು ಅಳಿಯುವವೋ ಎಷ್ಟು ಉಳಿಯುವವೋ ಎಂಬ ಸಂದೇಹವುಂಟಾಗಿದೆ. ಆದರೆ ದೇಶೀ ಸಂಸ್ಥಾನಗಳಲ್ಲಿ ಉಂಟಾಗಿರುವ ಈ ಪಿಕಲಾಟವು ಕಾಂಗ್ರೆಸಿನಿಂದಲೇ ಉಂಟಾಯಿತೆಂದು. ಇಂಗ್ಲಂಡಿನಲ್ಲಿ ಅನೇಕ ಮಂದಿ ತಪ್ಪಾಗಿ ತಿಳಕೊಂಡಿರುವರು. ಪರಂತು ಈ ವಿಷಯದಲ್ಲಿ ಕಾಂಗ್ರೆಸು ಬೇಕಾದುದಕ್ಕಿಂತ ಹೆಚ್ಚು ತಾಳ್ಮೆಯನ್ನು ತೋರಿಸಿದೆ. ಕಾಂಗ್ರೆಸು ಅಲ್ಲವಾಗಿದ್ದರೆ, ದೇಶೀ ಸಂಸ್ಥಾನಗಳ ದುರಾಡಳಿತದಿಂದ ಅತೃಪ್ತರೂ ಸಂತಪ್ತರೂ ಆದ ಜನರು ಎಂದೋ ಆಂದೋಲನವನ್ನು ಹೂಡುತ್ತಿದ್ದರು ಎಂದು ಹೊರೇಸ್ ಜಿ ಅಲೆಕ್ಸಾಂಡರ ಎಂಬ ಆಂಗ್ಲೇಯರು ಮ್ಯಾಂಚೆಸ್ಟರ ಗಾರ್ಡಿಯನ ಪತ್ರಿಕೆಗೆ ಬರೆದಿರುವರು.

ಪ್ರವಾಸದ ಅನುಭವ

೧೯೨೮ರಲ್ಲಿ ಅಲೆಕ್ಸಾಂಡರರು ಭಾರತ ಪ್ರವಾಸವನ್ನು ಕೈಕೊಂಡ ಒರಿಸ್ಸಕ್ಕೆ ಬಂದಿದ್ದರು. ಅಂದಿನ ತಮ್ಮ ಪ್ರವಾಸದ ಅನುಭವವನ್ನು ಕುರಿತು ಅವರು ಹೀಗೆ ಹೇಳುತ್ತಾರೆ— ಅಹಿಂಸಾ ಸೇವನೆಯ ವಿರೋಧ ಆಂದೋಲನವನ್ನು ಹೂಡುವುದಕ್ಕಿಂತ ಒರಿಸ್ಸದ ಸಂಸ್ಥಾನಿಕರ ದುರಾಡಳಿತವನ್ನು ವಿರೋಧಿಸಿ ಅದನ್ನು ... ಆಂದೋಲನವು ... ಬೇಕೆಂದು ಅನೇಕ ವರ್ಷಗಳ ಮೊದಲೇ ಸನ್ನದ್ಧನಾಗಿದ್ದಿತು. ... ಕಾಂಗ್ರೆಸ ಕೆಲಸಗಾರರಿಂದ ಅಲ್ಲ, ಅಥವಾ ಒಬ್ಬ ಮಿಶನರಿಯಿಂದಲ್ಲ. ಪರಂತು ಸರಕಾರದ ಒಬ್ಬ ಆಂಗ್ಲೇಯ ಅಧಿಕಾರಿಯಿಂದ ... ಆ ಅಧಿಕಾರಿಯು ... ಪರ್ಯಾಲೋಚನೆ ಮಾಡಿಯೇ ದೇಶೀ ಸಂಸ್ಥಾನದ ಕಷ್ಟಗಳನ್ನು ... ಪಶ್ಚಾತ್ತಾಪ ... ಉದ್ಯೋಗ ... ಗಡಿಯಲ್ಲಿರುವ ಒಂದು ಸಂಸ್ಥಾನದ ಆಡಳಿತದ ಸೂಕ್ಷ್ಮ ಪರೀಕ್ಷಣದ ಹಲವು ವರ್ಷಗಳ ಅನುಭವವು ಆ ಅಧಿಕಾರಿಗೆ ಇದ್ದಿತು.

ಜನರ ಜಾಗೃತಿ

ದೇಶೀ ಸಂಸ್ಥಾನದ ಜನರ ಸ್ಥಿತಿಗತಿಗಳು ೧೯೨೮ರಲ್ಲಿಯೇ ಅಷ್ಟು ಕೆಟ್ಟುಹೋಗಿದ್ದಿತ್ತಾದರೂ, ಕಾಂಗ್ರೆಸು ... ೧೦-೧೨ ವರ್ಷಗಳ ತನಕ ಆ ಸಂಸ್ಥಾನಗಳ ರಾಜಕಾರಣದಲ್ಲಿ ಕೈ ಹಾಕದೆ ಸುಮ್ಮನಿದ್ದಿತು. ಮತ್ತೆ ತಿರುವಾಂಕೂರು, ಒರಿಸ್ಸಾ ಮೊದಲಾದ ಸಂಸ್ಥಾನಗಳ ಜನರು ತಮ್ಮ ಹಾಳುಸ್ಥಿತಿಯ ಅನುಭವ ಮಾಡಿಕೊಂಡು, ಅದರ ನಿವಾರಣೆಗೆ ಸಂಪೂರ್ಣ ಜಾಗೃತರಾಗಿದ್ದಾರೆಂದು ತಿಳಿದುಬಂದ ಅನಂತರವೇ—ಬ್ರಿಟಿಷ ಹಿಂದುಸ್ಥಾನದ ಪ್ರಾಂತ್ಯಗಳಲ್ಲಿ ಸ್ವಲ್ಪ ಮಟ್ಟಿನ ಸ್ವರಾಜ್ಯ ಸುಖವನ್ನು ಜನರು ಅನುಭವಿಸುತ್ತಿರುವುದನ್ನು ಕಂಡ ದೇಶೀ ಸಂಸ್ಥಾನಗಳ ಜನರಲ್ಲಿ ನವೀನ ಆಶೋದಯ ಸ್ಫೂರ್ತಿ ಉತ್ಸಾಹಗಳು ಹುಟ್ಟಿಬಂದ ತರುವಾಯವೇ, ಗಾಂಧಿಯವರ ದೇಶೀ ಸಂಸ್ಥಾನಗಳ ಪ್ರಜಾವರ್ಗದ ಕಡೆಗೆ ಸಹಾನುಭೂತಿಯನ್ನು ತೋರಿಸಿದ್ದಾರೆ ಮತ್ತು ಕಾಂಗ್ರೆಸು ಆ ಜನರ ಬೇಡಿಕೆಗಳನ್ನು ಸಮರ್ಥಿಸಿದೆ.

ಆಂಗ್ಲಪತ್ರಿಕೆಯ ಎಚ್ಚರಿಕೆ

ಯುರೋಪಿಯನರ ಆಡಳಿತದಲ್ಲಿರುವ ಆಂಗ್ಲಪತ್ರಿಕೆಗಳು ಸಾಮಾನ್ಯವಾಗಿ ಭಾರತೀಯರ ಕಡೆಗೆ ಸಹಾನುಭೂತಿ ಉಳ್ಳವುಗಳಾಗಿರುವದಿಲ್ಲ. ಆದರೂ ಅಂತಹದ್ದೊಂದು ಪತ್ರಿಕೆಯಾದ ಕಲ್ಕತ್ತೆಯ ಸ್ಟೇಟ್ಸಮೇನ ಕೂಡ ದೇಶೀ ಸಂಸ್ಥಾನಗಳ ದುರಾಡಳಿತವನ್ನು ಸುಧಾರಿಸಿ, ಪ್ರಜೆಗಳಿಗೆ ಸುಖಜೀವನವನ್ನು ಕಲ್ಪಿಸಿಕೊಡುವುದು ಸಾರ್ವಭೌಮ ಸರಕಾರದ ಕರ್ತವ್ಯವಾಗಿರುವುದೆಂದು ಬರೆದಿರುವುದನ್ನು ಕಾಣುವಾಗ ಸಂಸ್ಥಾನಗಳ ಜನರ ಕಷ್ಟಗಳು ಎಷ್ಟು ಭಯಾನಕವಾಗಿವೆ ಎಂದು ಊಹಿಸಬಹುದು. ಅದ್ದರಿಂದಲೇ ಅಲೆಕ್ಸಾಂಡರರ ಲೇಖನದ ಕೊನೆಯ ಮಾತುಗಳು ಹೀಗಿವೆ—'ಪ್ರಜಾ ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯನ್ನು ಧ್ಯೇಯಾದರ್ಶವನ್ನಾಗಿಟ್ಟುಕೊಂಡಿರುವ ಬ್ರಿಟಿಷ ಸರಕಾರದ ಸಹಾನುಭೂತಿಯು ದೇಶೀ ಸಂಸ್ಥಾನಗಳ ಜನತೆಯ ಮೇಲಿರಬೇಕಾದ್ದು ಸಹಜವಾಗಿದೆ. ಎಲ್ಲಿಯ ತನಕ ದೇಶೀ ಸಂಸ್ಥಾನಗಳ ಆಂದೋಲನವು ಹಿಂಸಾತ್ಮಕ ರೀತಿನೀತಿಗಳನ್ನು ಅನುಸರಿಸುವುದಿಲ್ಲವೋ ಅಲ್ಲಿಯ ತನಕ ಸಾರ್ವಭೌಮ ಸರಕಾರವು ಜನರ ಆಂದೋಲನವನ್ನು ಎಲ್ಲಾ ವಿಧದಿಂದ ಪ್ರೋತ್ಸಾಹಿಸಬೇಕು.

ಮಂತ್ರಿಗಳೊಬ್ಬರ ವಿನಂತಿ

'ಕೆಲವು ಸಂಸ್ಥಾನಗಳ ಶಾಸನಕ್ರಮವು ಸಂತಾಪವನ್ನುಂಟು ಮಾಡುವಂತಹದಾಗಿದೆ. ದುರಾಡಳಿತವು ನಡೆಯುತ್ತಿರುವ ಸಂಸ್ಥಾನಗಳನ್ನು ಎಚ್ಚರಿಸಿ ಹಿಂದೀ ಸರಕಾರವು ಅವುಗಳನ್ನು ಸರಿದಾರಿಗೆ ತರಬೇಕು. ಹಾಗೆ ಮಾಡದಿದ್ದರೆ ಸಂಸ್ಥಾನಗಳು ಅಶಾಂತಿಯ ... ಬಲಿಗೆ ... ಎಂದು ... ಹಿಂದಿನ ... ಗಳಾದ ... ಪ್ರಕಟಿಸಿಕೊಟ್ಟಿದ್ದಾರೆ. ಅವರಲ್ಲಿ ಅವರು— ಈಗ ಸಂಸ್ಥಾನಗಳ ಜನರು ಜಾಗೃತರಾಗಿ ತಿರುವರು. ಅವರಿಗೆ ಇನ್ನು ಸ್ವಲ್ಪ ಸಮಯ ... ಹಿಂದೀ ಸರಕಾರವು ಹೇಳದೆ ಅವರು ... ಎಲ್ಲಿ ಕೆಲಸಗಾರರು ಈ ವಿಷಯವನ್ನು ಗಾಂಧೀಯವರಿಗೆ ... ಕಾಂಗ್ರೆಸ ದೇಶೀ ಸಂಸ್ಥಾನಗಳ ರಾಜಕಾರಣದಲ್ಲಿ ಪ್ರವೇಶಿಸಲೇ ... ಸಂಘಗಳು ... ಎಂದರೆ ಹಿಂದೀ ಸರಕಾರವು ಶತಪ್ರಯತ್ನ ಮಾಡಬೇಕು ... ಕೊಳ್ಳುತ್ತೇನೆ ... ಸುಧಾರಣೆಗಳಿಂದ ಸಂಸ್ಥಾನಗಳ ಜನರು ತೃಪ್ತರಾಗಬಹುದು ... ಸಂಸ್ಥಾನಗಳಲ್ಲಿ ಜವಾಬುದಾರ ಸರಕಾರವು ಸ್ಥಾಪಿಸಲ್ಪಡದ ... ಸಂಸ್ಥಾನಗಳಲ್ಲಿ ... ವು ಆಗದಂತೆ ಹಿಂದೀ ಸರಕಾರವು ನೋಡಿಕೊಳ್ಳುವುದಾದರೆ ಈಗಿನ ಎಷ್ಟೋ ಗೊಂದಲವು ಇಲ್ಲವಾಗುವುದು' ಎಂದಿರುವರು.

ಆಂದೋಲನವು ಅಸಾಮಯಿಕವಲ್ಲ

ದೇಶೀ ಸಂಸ್ಥಾನಗಳಲ್ಲಿ ಉಂಟಾಗಿರುವ ಆಂದೋಲನವು ಅಸಾಮಯಿಕವಲ್ಲವೆಂಬುದು ಮೇಲೆ ಹೇಳಿದ ಕೆಲವು ಕಾರಣಗಳಿಂದಲೇ ಸ್ಪಷ್ಟವಾಗುವುದು. ದೇಶೀ ಸಂಸ್ಥಾನಗಳ ಜನರು ಆರಂಭ ಕಾಲದಲ್ಲಿ ಹಿಡಿದ ಕೆಲಸವನ್ನು ಕೊನೆಸಾಗಿಸುವ ಛಲವುಳ್ಳವರಾದರೆ ಮತ್ತು ಅವರು ಕೇವಲ ಅಹಿಂಸಾತ್ಮಕ ಉಪಾಯಗಳಿಂದ ತಮ್ಮ ಚಳವಳವನ್ನು ಮುಂದುವರಿಸುವವರಾದರೆ ಶೀಘ್ರದಲ್ಲಿಯೇ ವಿಜಯಶ್ರೀಯು ಅವರ ಕೊರಳಿಗೆ ಹೂವಿನಮಾಲೆಯನ್ನು ಹಾಕುವಳು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಜೀವನಿ

ಸ್ತ್ರೀಯರ ಸಕಲ ವಿಧವಾದ ಗರ್ಭಾಶಯ ರೋಗಗಳಿಗೂ ಸಂಜೀವನ. ಬೆಲೆ: ರೂ 1-0-0

ಸುಬಲಾ

ದೇಹದ ಬೆಳವಣಿಗೆಯನ್ನು ಕಟ್ಟಿಕೊಡುವ ... ರಕ್ತಶುದ್ಧಿ ... ರಕ್ತವನ್ನು ಹೆಚ್ಚುಮಾಡಿ ... ಶಕ್ತಿಯನ್ನುಂಟುಮಾಡುವ ... ಔಷಧಿಗಳಿಂದ ತಯಾರಿಸಿರುವ ... ಬೆಲೆ: ರೂ 1-0-0

ನಂಜನಗೂಡು ಸದ್ವೈದ್ಯ ಶಾಲಾ,
ಬ್ರಾಂಚ್ ರಥಬೀದಿ ಮಂಗಳೂರು.

ಒಂದು ಬಾರಿ ಪರೀಕ್ಷಿಸಿರಿ!

... ನಮ್ಮ "ಸಾರಥಿ ..." ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ... ಒಂದು ... ನಮ್ಮದು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ ... ಎಲ್ಲರಿಗೂ ಅನುಕೂಲವಾದ ದರದಲ್ಲಿರುವುದು.

ಸಾರಥಿ ನಮ್ಮದು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ 1 ಸಾರಥಿ ನಶ್ಯ 1 ಪೌಂಡಿಗೆ ... ನಂ ... ಸಾರಥಿ ನಶ್ಯ 1 ಪೌಂಡಿಗೆ ರೂ 3-0-0
(ವಿ. ಪಿ. ಖರ್ಚು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ

ವಿಳಾಸ:— ಎ ಪಿ ಸಾರಥಿ
ಮೆನ್ಯುಫೆಕ್ಚರರ್ಸ್ ಆಫ್ ಮದ್ರಾಸ್ ಸ್ನಫ್, ಪಿ. ಬಿ ನಂಬ್ರ 47 ಮದ್ರಾಸು

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ

ಇನ್ನೊಂದು ರಶ್ಯ-ಜಪಾನ್ ಯುದ್ಧಸಂಭವ

ಪಾಳೆಯದೊಳಗೆ ಕಚ್ಚಾಟಕ್ಕಾರಂಭ

ಚೀನಾ ಜಪಾನ ಸಂಗ್ರಾಮ ಫಲಕಾರಿಯಾಗಿಲ್ಲ

ಚೀನದಲ್ಲಿ ಜಾಪಾನಿನ ಧ್ಯೇಯೋದ್ದೇಶಗಳು ಯಾವುವಿರಬೇಕು ಎಂಬ ಕುರಿತು ಜಪಾನಿಯರೊಳಗೆ ತೀವ್ರ ಮತಭೇದವುಂಟಾಗಿರುವಂತೆ ಅಲ್ಲಿಂದ ವಾರ್ತೆ ಬಂದಿದೆ. ಸಮಸ್ತ ಚೀನವನ್ನು ಜಪಾನಿನ ಅಧೀನಕ್ಕೆ ತರುವುದು ಈ ಯುದ್ಧದ ಧ್ಯೇಯವೇ ಅಥವಾ ಉತ್ತರ ಚೀನದಲ್ಲಿ ಜಪಾನಿನ ಅಧಿಕಾರವಾದರೆ ಸಾಕೆ? ಎಂದು ಜನರು ಪ್ರಶ್ನಿಸುತ್ತಿರುವರು.

ದಕ್ಷಿಣ ಚೀನಾ ಪಾರ್ಟಿ

ಜಾಪಾನಿನಲ್ಲಿ ಈ ಯುದ್ಧ ಸಂಬಂಧ ಎರಡು ಬಣಗಗಳುಂಟಾಗಿರುವವು. ಒಂದು ದಕ್ಷಿಣ ಚೀನಾ ಪಾರ್ಟಿಯೆಂದೂ ಇನ್ನೊಂದು ಉತ್ತರ ಚೀನಾ ಪಾರ್ಟಿಯೆಂದೂ ಪ್ರಸಿದ್ಧವಾಗಿವೆ. ಮೊದಲನೆಯ ಪಾರ್ಟಿಗೆ ಸಮಸ್ತ ಚೀನಾವನ್ನು ಜಾಪಾನಿನ ಅಧೀನ ಮಾಡಿದ ಹೊರತು ತೃಪ್ತಿ ಇರುವುದಿಲ್ಲ. ಸಮಸ್ತ ಚೀನಾವನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕಾಗಿ ಇಂಗ್ಲಂಡ, ಅಮೇರಿಕದಂಥ ಪ್ರಬಲ ರಾಷ್ಟ್ರಗಳ ದ್ವೇಷವನ್ನು ಕಟ್ಟಿಕೊಳ್ಳಲಿಕ್ಕೂ ದಕ್ಷಿಣ ಚೀನಾಪಾರ್ಟಿ ಸಿದ್ಧವಿದೆ. ಚೀನದಲ್ಲಿರುವ ಪರರಾಷ್ಟ್ರೀಯರನ್ನೆಲ್ಲ ಹೊರಕಳುಹಿಸಿ, ಸಿಂಗಾಪುರವನ್ನು ಕೂಡ ಮುತ್ತಬೇಕೆಂದು ಈ ಪಾರ್ಟಿ ಯಾಶಯವಾಗಿದೆ. ಸಿಂಗಾಪುರ, ಡಚ್ಚ ಈಸ್ಟ ಇಂಡೀಸಗಳಲ್ಲಿ ಜಾಪಾನರ ಒಡೆತನ ಸ್ಥಾಪಿತವಾದರೆ ಕಲ್ಲಿದ್ದಲ, ರಬ್ಬರು ಮೊದಲಾದ ಕೆಲವು ಸಾಮಗ್ರಿಗಳಮಟ್ಟಿಗೆ ಜಾಪಾನು ಸ್ವತಂತ್ರವಾಗುವುದು ಮಾತ್ರವಲ್ಲದೆ, ಯಾವ ವಿಘ್ನ ವಿದ್ರೋಹವೂ ಇಲ್ಲದೆ ಇಟಲಿ ಜರ್ಮನಿ ಮೊದಲಾದ ದೇಶಗಳಿಂದ ಯುದ್ಧ ಸಾಮಗ್ರಿಗಳನ್ನು ತರಿಸಿಕೊಳ್ಳುವುದೂ ಜಾಪಾನಿಗೆ ಸುಲಭವಾಗುತ್ತದೆಂದು ಈ ಪಾರ್ಟಿಯು ಹೇಳುತ್ತದೆ.

ಚೀನದೊಡನೆ ಸ್ನೇಹದಿಂದಿರಬೇಕು

ಆದರೆ ಉತ್ತರ ಚೀನಾ ಪಾರ್ಟಿಯು ಚೀನದೊಡನೆ ಸ್ನೇಹದಿಂದಿದ್ದರೇನೇ ತಮಗೆ ಕ್ಷೇಮವಾಗುವುದೆಂದು ಹೇಳುತ್ತದೆ. ಸಮಸ್ತ ಚೀನವನ್ನು ಸ್ವಾಧೀನಮಾಡಲಿಕ್ಕೆ ಸುಲಭದಲ್ಲಿ ಸಾಧ್ಯವಲ್ಲ, ಚೀನೀ ನ್ಯಾಶನಲಿಸ್ಟರ ಪ್ರತಿಕಾರವು ಬಹಳವಾಗಿದೆ. ಚೀನೀ ವಿರೋಧವನ್ನು ನಿರೋಧಿಸಿ ಸಮಸ್ತ ಚೀನವನ್ನು ಸ್ವಾಧೀನ ಮಾಡಲಿಕ್ಕೆ ಹತ್ತಿಪ್ಪತ್ತು ವರ್ಷಗಳೇ ಬೇಕಾಗಬಹುದು. ಅಷ್ಟು ದೀರ್ಘಕಾಲದ ಅವಧಿಯಲ್ಲಿ ಯಾವ ರಾಷ್ಟ್ರದ ಭವಿಷ್ಯವು ಹೇಗೆ ರೂಪಿತವಾಗುವುದೆಂದು ಹೇಳಲಿಕ್ಕೆ ಬರುವುದಿಲ್ಲ. ಆದ್ದರಿಂದ ಪ್ರಕೃತ ಚಿಕ್ಕದರಲ್ಲೇ ತೃಪ್ತರಾಗಿ ಈ ಯುದ್ಧವನ್ನು ನಿಲ್ಲಿಸಿಬಿಡಬೇಕೆಂದು ಈ ಪಾರ್ಟಿಯು ಹೇಳುತ್ತದೆ. ಚೀನದ ಸ್ನೇಹವಿಲ್ಲದೆ ಜಾಪಾನಿನ ಉತ್ಕರ್ಷವು ಸಾಧ್ಯವಲ್ಲವೆಂದು ಇವರ ನಂಬಿಗೆಯಾಗಿದೆ. ಚೀನ ಜಾಪಾನಿನ ೨-೩ ವರ್ಷಗಳ ಯುದ್ಧದಿಂದಲೇ ಜಾಪಾನಿನ ಆರ್ಥಿಕಸ್ಥಿತಿಯು ಬಹಳ ಕೆಟ್ಟುಹೋಗಿದೆ. ಮತ್ತೆ ಈ ಸಂಗ್ರಾಮವು ೧೦—೨೦ ವರ್ಷಗಳ ತನಕ ನಡೆದರೆ ಜಪಾನಿನ ದಿವಾಳಿ ಆಗಬಹುದು. ಆದ್ದರಿಂದ ದಕ್ಷಿಣ ಚೀನದ ಸುದ್ದಿಗೆ ಹೋಗದೆ ತಮ್ಮ ಶಕ್ತಿ ಸಾಮರ್ಥ್ಯವನ್ನೆಲ್ಲ ಮಂಗೋಲಿಯಾ, ಮಂಚೂರಿಯಾಗಳಲ್ಲಿ ಕೇಂದ್ರೀಕರಿಸಬೇಕೆಂದು ಪಾರ್ಟಿಯು ಘೋಷಿಸಿದೆ. ಈ ಪಾರ್ಟಿಯಲ್ಲಿ ಜಾಪಾನೀ ಅನೇಕ ಮಂದಿ ಸೇನಾಧಿಕಾರಿಗಳೂ ಮಂತ್ರಿಗಳೂ ಇತರ ಪ್ರಮುಖರೂ ಇರುವರು.

ರೈತರ ಅಸಮಾಧಾನ.

ಜಾಪಾನ ಸರಕಾರದ ಈಗಿನ ಸಂಗ್ರಾಮ ನೀತಿಯಿಂದ ಜಾಪಾನಿನ ರೈತರೂ ಬೇಸಾಯಗಾರರೂ ಬಹಳ ಅತೃಪ್ತರಾಗಿರುವರು. ಇವರ ಸಂಖ್ಯೆ ಒಟ್ಟು ಜನಸಂಖ್ಯೆಯ ಶೇಕಡಾ ೫೦ರಷ್ಟು ಇರುತ್ತದೆ. ಹಾಗೇ ಸಣ್ಣ ಕೈಗಾರಿಕೆಯ ಜನರುಕೂಡ ಬಹಳ ಅತೃಪ್ತರಾಗಿದ್ದಾರೆ. ಯುದ್ಧದ ಖರ್ಚು ವಿಪರೀತ ಬೆಳೆದಿರುವುದರಿಂದ ಇವರೆಲ್ಲ ಬಹಳ ನಷ್ಟಹೊಂದಿದ್ದಾರೆ. ನಷ್ಟದ ಭಾರವು ಅವರಿಗೆ ಅಸಹನೀಯವಾಗಿದೆ. ಆದ್ದರಿಂದಲೂ ಈಗ ಯುದ್ಧವು ಬೇಡವೆಂದ ಜನರು ಹೇಳತೊಡಗಿದ್ದಾರೆ.

ರಶ್ಯಜಪಾನ ಯುದ್ಧಸಂಭವ

ಜಾಪಾನರ ಶಕ್ತಿಯನ್ನು ಉತ್ತರ ಚೀನದಲ್ಲಿ ಕೇಂದ್ರೀಕರಿಸುವುದೆಂದರೆ ರಶ್ಯವನ್ನು ಯುದ್ಧಕ್ಕೆ ಕರೆಯುವಂತೆ ಆಗಿದೆ. ಉತ್ತರಚೀನದಲ್ಲಿ ರಶ್ಯದ ಅನೇಕ ಹಿತಸಂಬಂಧಗಳಿರುವವು. ಅವುಗಳಿಗೆ ಭಂಗವುಂಟಾದಾಗ ರಶ್ಯ ಜಾಪಾನ ಯುದ್ಧವಾಗುವುದು ನಿಶ್ಚಿತವಾಗಿದೆ. ಆದರೆ ದಕ್ಷಿಣ ಚೀನದಲ್ಲಿ ಜಾಪಾನಿಗೆ ಪಶ್ಚಿಮ ರಾಷ್ಟ್ರಗಳ ಕಡೆಗೆ ಜಾಪಾನ ಜನತೆಯ ಲಕ್ಷ್ಯವು ಹೋಗದಂತೆ ಅದನ್ನು ಬೇರೆ ಕಡೆಗೆ ಸೆಳೆಯಬೇಕಾಗಿದೆ. ಇಲ್ಲವಾದರೆ ಜಾಪಾನ ಸರಕಾರದ ಪತನವಾಗುವುದು. ಆದ್ದರಿಂದ ಜಾಪಾನಿ ಜನತೆಯ ಲಕ್ಷ್ಯವನ್ನು ದಕ್ಷಿಣ ಚೀನದಿಂದ ಉತ್ತರ ಚೀನದ ಕಡೆಗೆ ಸೆಳೆಯುವುದಕ್ಕೋಸ್ಕರ ಸರಕಾರವು ಉತ್ತರಚೀನದಲ್ಲಿ ರಶ್ಯದವಿರುದ್ಧ ಪ್ರಬಲ ಪ್ರಚಾರವನ್ನು ಆರಂಭಿಸುವ ಆಲೋಚನೆ ಮಾಡಿದೆ. ಈ ಪ್ರಚಾರ ಕಾರ್ಯದ ಪರಿಣಾಮವೆಂದರೆ—ಚೀನೀ ಜಾಪಾನ ಯುದ್ಧದ ಬದಲು ಇನ್ನೊಂದು ರಶ್ಯಜಾಪಾನ ಯುದ್ಧ

MALARIA, QUININE and MOSQUITOES

According to recent statistics compiled by the U. S. A. Public Health Service more than 133,000 cases of malaria are reported annually, and there are 4,319 deaths. Physicians who know about it, estimate that not more than one fourth of the cases of malaria are reported to the health authorities and has for treatment it is sadly inefficient in the great number of cases that do not come under proper surveillance of these authorities.

Fortunately malaria is not directly contagious from person to person. A person can get malaria only through the agency of the Anopheles or malarial mosquito. Inoculation with the malaria parasite occurs when one is bitten by this kind of mosquito. Low grounds, swamp, dampness, freshly turned earth, the state of the liver and the purity or impurity of the blood have nothing to do with it. No anopheles mosquitoes, no malaria. Nevertheless malaria cannot be stamped out by killing all malaria mosquitoes for the simple reason that in practice this has been proved to be an impossibility.

Common mosquitoes (Culex) have nothing to do with malaria. When the Culex mosquito alights its body is nearly parallel with the surface, when an Anophele alights, its body is nearly perpendicular to the surface. This is a simple way to distinguish the malaria-carrying mosquito from the common kind that does not bring this infection.

Malaria mosquitoes are pond breeders. A puddle or natural collection of water in the woods, or some stagnant water in field or swamp will do.

A person from a non-malarial region visiting or temporarily living in a malarial place should take 6 grains of quinine daily as a routine preventive during the whole of his stay. But as soon as he should get infected it is generally advisable to take 15-20 grains of quinine daily during 5 to 7 days, and longer. This is does recommended by authorities like the Malaria Commission of the League of Nations and the U. S. Public Health Service.

Chills and fever frequently mean some other disease than malaria. Only by finding the parasites in the blood of the patient under the microscope can the doctor be certain that his patient has got malaria.

M. E. No. 46

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತವೆ

ಬೂಟ್ಸು ಬೂಟ್ಸುಗಳಿಗೆ ಬೇಕಾಗುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store,
28 Meachua Bazar St. CALCUTTA.

ಜರ್ಮನಿಯಲ್ಲಿ

ಭಯಂಕರ ವಿನಾಶಕಾರಿ ಬೊಂಬು ತಯಾರಿ

ಇದುವರೆಗೆ ಕಂಡುಹಿಡಿದ ಭಯಂಕರ ಬಾಂಬುಗಳಿಗಿಂತಲೂ ಬಹು ಭಯಂಕರವಾಗಿರುವ ಒಂದು ಜಾತಿಯ ಬಾಂಬನ್ನು ಜರ್ಮನಿಯ ವೈಜ್ಞಾನಿಕರು ಕಂಡುಹಿಡಿದಿರುವರೆಂದೂ ಅದರ ರಚನಾಕ್ರಮವನ್ನು ಬಹಳ ಗುಟ್ಟಾಗಿಟ್ಟಿದ್ದಾರೆಂದೂ ತಿಳಿದು ಬರುತ್ತದೆ.

ಈ ಹೊಸ ಜಾತಿಯ ಬಾಂಬಿನ ಶಕ್ತಿ ಎಷ್ಟು ಭಯಾನಕವಾಗಿರುವುದೆಂದರೆ ಅದು ಸಿಡಿಯುತ್ತಲೇ ಕಾಲು ಮೈಲು ದೂರದೊಳಗಿನ ಪ್ರದೇಶದಲ್ಲಿರುವ ಎಲ್ಲಾ ಜನರು ಸತ್ತುಬೀಳುವರು, ಮತ್ತು ಅರ್ಧಮೈಲು ದೂರದೊಳಗಿರುವ ಜನರು ಈ ಬಾಂಬಿನ ಸಿಡಿತದಿಂದ ಸ್ಮೃತಿತಪ್ಪಿ ಬೀಳುವರು.

ಅಮೇರಿಕದ ಸಂಯುಕ್ತ ಸಂಸ್ಥಾನಗಳ ವಿಮಾನಪಡೆಯ ಮುಖ್ಯಾಧಿಕಾರಿಗಳಾದ ಮೇಜರ ಜನರಲ್ ಆರ್ನೋಲ್ಡ ಎಂಬವರು ಸರಕಾರದ ಯುದ್ಧಶಾಖೆಯ ಒಂದು ವಿಚಾರಣಾಸಮಿತಿಯ ಮುಂದೆ ಸಾಕ್ಷ್ಯವನ್ನು ಕೊಡುತ್ತ ಈ ರಹಸ್ಯವನ್ನು ಹೊರಗೆಡಹಿರುವರು. ಈ ಬಾಂಬಿನ ಹೆಚ್ಚಿನವಿವರಗಳನ್ನು ಪಡೆಯಲಿಕ್ಕೆ ಅಮೇರಿಕದ ಯುದ್ಧಶಾಖೆಯು ಭಗೀರಥ ಪ್ರಯತ್ನಗಳನ್ನು ಮಾಡಿದಾದರೂ ಅದನ್ನು ಪಡೆಯಲು ಸಾಧ್ಯವಾಗಲಿಲ್ಲವಂತೆ. ಬಾಂಬಿನ ವಿಷಯವನ್ನು ಹಿಟ್ಲರನ ಜರ್ಮನಿಯು ಅಷ್ಟು ರಹಸ್ಯದಲ್ಲಿಟ್ಟಿರುವದು.

ಈ ಬಾಂಬಿನ ಪ್ರಯೋಗವನ್ನು ಜರ್ಮನರು ಸ್ಪೇಯಿನಿನ ಅಂತಃಕಲಹದಲ್ಲಿ ಮಾಡಿನೋಡಿಯೂ ಅದರ ವಿನಾಶಕಾರಿ ಶಕ್ತಿಯ ಕುರಿತು ಸಮಾಧಾನ ಮಾಡಿಕೊಂಡಿರುವರು. ಆದ್ದರಿಂದ ಮುಂದಿನ ಯುದ್ಧಗಳಲ್ಲಿ ಅದೇ ಬಾಂಬನ್ನು ಉಪಯೋಗಕ್ಕೆ ತಂದುದಾದರೆ ಶತ್ರುವಿನ್ನೂ ಎಷ್ಟು ಪ್ರಬಲವಾಗಿರುವುದಾದರೂ ತಮಗೆ ಸಂಪೂರ್ಣ ವಿಜಯವು ಪ್ರಾಪ್ತವಾಗುವುದೆಂದು ಜರ್ಮನರು ನಂಬಿದ್ದಾರೆ.

ಒತ್ತಿಟ್ಟಗಾಳಿ, ಅಂಗಾರ ಮತ್ತು ಕೆಲವು ಜಾತಿಯ ಎಣ್ಣೆಗಳಿಂದ ಈ ಬಾಂಬನ್ನು ತಯಾರಿಸುವುದೆಂದು ಗೊತ್ತಾಗಿರುವುದಷ್ಟೇ ಅಲ್ಲದೆ ಆ ಕುರಿತು ಮತ್ತೇನೂ ತಿಳಿದಿರುವುದಿಲ್ಲ. ಇತರ ಪ್ರಬಲ ರಾಷ್ಟ್ರಗಳ ವೈಜ್ಞಾನಿಕರು ಈ ರಹಸ್ಯವನ್ನು ತಿಳಿಯುವ ಕುತೂಹಲದಲ್ಲಿದ್ದಾರೆ. ಒಂದೇ ಅವರು ಆ ರಹಸ್ಯವನ್ನು ಕಂಡುಹಿಡಿಯಬಹುದು, ಅಥವಾ ಅದಕ್ಕೂ ಭಯಂಕರವಾದ ಇತರ ಜಾತಿಯ ಬಾಂಬುಗಳನ್ನು ತಯಾರಿಸಲೂಬಹುದು!

ಪ್ರತಿ ಒಬ್ಬರಿಂದಲೂ ಅತ್ಯಂತ ಹೆಚ್ಚು ಕ್ರಯದ ಬ್ಲೇಡುಗಳನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ. ಆದರೆ ಪ್ರತಿ ಒಬ್ಬ ಮನುಷ್ಯನು ತಾನು ಕೊಂಡುಕೊಳ್ಳುವ ಬ್ಲೇಡು ಕೊಟ್ಟ ಹಣಕ್ಕೆ ಮಿಕ್ಕಿದ್ದಿರಬೇಕೆಂದು ಬಯಸುವುದು ಸಹಜ. ಆದುದರಿಂದ ಅಂಥವರಲ್ಲಿ ನಾವು ಹೇಳುವುದೇನಂದರೆ ಕಡಿಮೆ ಕ್ರಯದಲ್ಲಿಯೂ, ಬಾಳ್ವಿಕೆಯಲ್ಲಿಯೂ, ಉಪಯೋಗದಲ್ಲಿಯೂ 5 ಆಣೆಗೆ 10ರಂತೆ ಮಾರಲ್ಪಡುವ ಮೆಮ್ ಬ್ಲೇಡುಗಳನ್ನು ಎಲ್ಲಿಯೂ ಸರಿಗಟ್ಟಿದವುಗಳಿಲ್ಲ!

5 ಆಣೆಗೆ 10

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR P. W. FARIAS.

ST PAULS CHURCH,
Boikunje Post S K.
Dated 4th Jan 1939

To
THE JOINT MANAGERS
The C P C Co Ltd Mangalore

Sirs

I thank you most sincerely of the promptness with which you arranged [illegible] to Mangalore [illegible] during the grand occasion of the diocesan Eucharistic Congress at Mangalore.

On this occasion let me express my feelings of gratitude to you for [illegible] all the Catholics [illegible] the Congress.

The glorious success of our congress is [illegible] due to your exertion in putting up the various lights [illegible] were done voluntarily.

May the blessings of the almighty fall [illegible] and may you [illegible] much good to the Public.

Renewing my thanks [illegible]
Yours Sincerely
(Sd) P W Farias

Sri Parshwanathaswami,
PANCHAKALYANA POOJA MAHOSTHAM,
Venoor S Kanara, 1939

To
THE JOINT MANAGERS
The Combind Booking Agency, Mangalore

Dear Sirs

Please permit us to express our thanks on behalf of the above committee for the efficient service rendered by your combined Booking Agency Staff at Venoor to the visitors of the Panchakalyana Pooja Mahosthama celebration held this year.

Our thanks are also due to [illegible] Mr B Krishnayya and also his other mates and Mr Raghava [illegible] who had specially come down from Mangalore [illegible] the traveling Public. Thanking you once again

We remain Yours faithfully

Venoor (Sd) B Chandappa Indra *Secretary P W Council* (Sd) M Jagathpal, (Sd) M Pachappa Shetty
Dated 6-2-39 (Sd) Anantharaj Shetty, (*Members Panchakalyana Mahosthamma Committee*)

JOINT MANAGERS.

The Combined Booking Agency, **The Joint Booking Office,**
MANGALORE **KODIALBAIL.**

CONSTRUCTIVE BANKING

An understanding of how a modern Bank can operate to make itself useful to the individual, to business and to the public has enabled the CANARA BANK to have thousands of depositors and to build resources exceeding a Crore.

And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OVER
A CRORE.

ESTD 1906
CANARA BANK,
LIMITED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಬಲ್ಲೆನೋವು, ಗಾಯ ಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

(ಮಂಗಳೂರಲಿ ಶಾ ಕಂಪೆನಿಯಲ್ಲಿ ದೊರೆಯುವುದು.)

AMRUTANJAN DEPOTS
BOMBAY MADRAS CALCUTTA

ಸ್ವಾಭಿಮಾನಿ

Established 1906 — Regd. No M 340

ಸಂಪುಟ ೨೯] [illegible] [ಸಂಚಿಕೆ ೦೧

THE

BOMBAY LIFE ASSURANCE COMPANY, LTD.,

(Estd 1908)

It is not material how much you can earn every month, but it is most important how much you save, so that you and your family can have uniform minimum comforts at a time when your income reduces or comes to nothing.

Best place to invest your such savings in a capitalized value is THE BOMBAY LIFE ASSURANCE CO., LTD. which gives you best security and service.

Honest, Energetic and Influential persons will have great opportunity to help the cause of society and also to earn a permanent and decent remuneration

KOCHIKAR BROTHERS, LIIMTED,

The Bombay Life Assurance Co. Ltd

The Bombay Life Building Gandhinagar UDIPI

or any of our following offices:

Post box No 33[illegible] Mount Road, Madras

Visweshwarapuram circle Bangalore city

[illegible] Road [illegible] BOMBAY

Car Street Mangalore

Puthiyara, Calicut

Central Station Road Trivandrum

Ottapalam, S. Malabar

MAKE LIFE WORTH-LIVING!

Indigestion Insomnia Dry Cough

Nervousness Weak Heart &c

these make you weary of life!

GONSULT US AND BUY

YOUR LIFE'S HAPPINESS!

Oils [illegible]

Lehias [illegible]

Asavas [illegible]

All Genuine Ayurvedic Preparations-

-from this huge Ayurvedic Concern of a Century Standing—

Bhuvanendra Products, Ltd.,

Katapady, S. Kanara

(Branch — [illegible] KARWAR)

[illegible]

[illegible]

ನಮ್ಮನ್ನು [illegible]ಸಿರಿ [illegible] ಆನಂದ

[illegible]

[illegible]

ಒಂದು ಶತಮಾನದ ಅನುಭವದ

ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ-ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

(ಬ್ರಾಂಚ್ ಕಾರವಾರ, ಉತ್ತರ ಕನ್ನಡ)

ಸ್ವದೇಶಾಭಿಮಾನಿ

Swadeshabhimani. Estd 1906

ತಾ ೩೧-೩-೧೯ Date 31-3-1939



ವಿಜಾಪುರದ ಸುಲ್ತಾನರಾದ ಆದಿಲಶಾಹಿ ವಂಶಸ್ಥರು ಕಟ್ಟಿಸಿದ
ಗೋಲ್ ಗುಂಬಾಜ್
ಎಂಬ ಗೋರಿ

Photo by Sri K. S. [illegible]

ಸಚಿತ್ರ ವಾರ ಪತ್ರಿಕೆ

ಜೀವನ ಸಮಸ್ಯೆಯನ್ನು ಬಿಡಿಸುವ ಮಹಾ ಸಾಹಸ

ಚಿಕಿತ್ಸಾ ಕ್ರಮದಲ್ಲಿ ಹೊಸ ಪ್ರಗತಿ

ಪರಸ್ಪರ ದ್ವೇಷ, ಅಸೂಯೆ, ಸ್ವಾರ್ಥಪರತೆ, ಸುಳ್ಳು ಮೋಸಗಳಿಂದ ತುಂಬಿ ಹೋಗಿರುವ ಈಗಿನ ಪ್ರಪಂಚದಲ್ಲಿ ಹುಟ್ಟಿರುವುದೇ ಯಾಕೆಂದು ಪ್ರತಿಯೊಬ್ಬ ಸಾಧುಸ್ವಭಾವದ ಸಜ್ಜನನಿಗೆ ಜೀವನದಲ್ಲಿ ಜಿಗುಪ್ಸೆಯು ಕಂಡು ಬರುತ್ತಿರುವಾಗ, ಅವನಿಗೆ ಜೀವನದಲ್ಲಿ ನವ ಸ್ಫೂರ್ತಿ ಉತ್ಸಾಹ ಆಸೆ ಭರವಸೆಗಳನ್ನು ಕೊಡುವ ಸಂಗತಿಗಳೂ ಈ ಪ್ರಪಂಚದಲ್ಲಿ ನಡೆಯುತ್ತಾ ಇವೆ ಎಂಬುದು ಲಕ್ಷಿಸತಕ್ಕ ವಿಷಯವಾಗಿದೆ.

ರೋಗಾಣುಗಳ ಮೇಲೆ ವಿಜ್ಞಾನಿಗಳ ವಿಜಯ

ಪ್ರಳಯಂಕಾರಿ ಮಹಾಯುದ್ಧಗಳಿಂದ ಜನರು ಅಕಾಲಮರಣಗಳಿಗೆ ಗುರಿಯಾಗುವುದಕ್ಕಿಂತಲೂ ಹೆಚ್ಚಾಗಿ ನಾನಾ ಬಗೆಯ ರೋಗಗಳು ಹರಡಿ ಜನರು ಮೃತ್ಯುವಶರಾಗುವುದು ಹೆಚ್ಚಾಗಿದೆ. ಆದ್ದರಿಂದ ಬಾಂಬು ಸಿಡಿಗುಂಡು ಮೊದಲಾದ ಪ್ರಾಣಘಾತುಕ ಯುದ್ಧೋಪಕರಣಗಳನ್ನು ಕಂಡು ಹಿಡಿದವರಿಂದ ಮಾನವ ಸಮಾಜಕ್ಕೆ ಆಗಿರುವ ಅಪಕಾರಕ್ಕಿಂತ; ವಿವಿಧ ರೋಗಗಳಿಗೆ ಕಾರಣೀಭೂತಗಳಾಗಿರುವ ರೋಗಾಣುಗಳ ವಿನಾಶಕ್ಕೆ ಆಗಿರುವ ಔಷಧಿ ದ್ರವ್ಯಗಳನ್ನು ಕಂಡುಹಿಡಿದವರಿಂದ ಆದ ಉಪಕಾರವು ಮಹತ್ವದ್ದಾಗಿರುವುದು. ಈಗಲಾದರೋ ವಿಜ್ಞಾನಿಗಳು ಜೀವನ ಸಮಸ್ಯೆಯನ್ನು ಬಿಡಿಸಲಿಕ್ಕೆ ಭಗೀರಥ ಪ್ರಯತ್ನಗಳನ್ನು ಮಾಡಿ ಅದರಲ್ಲಿ ಯಶಸ್ಸನ್ನು ಸಂಪಾದಿಸಿರುವುದು ಮಾನವ ಇತಿಹಾಸದಲ್ಲಿ ಸ್ವರ್ಣಾಕ್ಷರಗಳಿಂದ ಬರೆದಿಡಬೇಕಾದ ಘಟನೆಯಾಗಿದೆ.

ಹೊಸ ಶೋಧ

ಜಗತ್ತಿನಲ್ಲಿ ಜನರು ಯಾವ ಮಹಾರೋಗಕ್ಕೆ ಅಧಿಕ ಸಂಖ್ಯೆಯಿಂದ ಬಲಿಯಾಗುತ್ತಿದ್ದಾರೋ, ಆ ನ್ಯುಮೋನಿಯ ಮತ್ತು ಟ್ಯಾಯ್ಫಾಯಿಡ್ ಫೀವರ ಎಂಬೆರಡು ರೋಗ ಕಾರಣ ಅಣುಗಳನ್ನು ಕೊಲ್ಲುವ ಔಷಧಿ ದ್ರವ್ಯವನ್ನು ವಿಜ್ಞಾನಿಗಳು ಈಗಾಗಲೇ ಕಂಡುಹಿಡಿದು ಪ್ರಪಂಚಕ್ಕೆ ಮಹದುಪಕಾರವನ್ನು ಮಾಡಿರುತ್ತಾರೆ. ಆದ್ದರಿಂದ ನೋವು ನರಳಿಕೆಗಳ ಮೂಲಕ ನರಳದಂತೆ ಕಾಣುತ್ತಿದ್ದ ಪ್ರಪಂಚವು ಈ ಔಷಧಿ ದ್ರಾವಕದ ಪ್ರಚಾರದಿಂದ ಸುಖ ಸಂತೋಷಗಳ ತಾಯಿಮನೆಯಾಗುತ್ತಿರುವ ಸ್ವರ್ಗರಾಜ್ಯವಾಗಿ ಪರಿಣಮಿಸಬಹುದು. ಹಾಗೆಯೇ ವಿಜ್ಞಾನಿಗಳು ಪ್ರತಿವರ್ಷ ಲಕ್ಷಾಂತರ ಜನರನ್ನು ಬಲಿಕೊಳ್ಳುವ ಮಲೇರಿಯಾ, ಪ್ಯುರ್ಪರಲ್ ಫೀವರ, ಸೆಪ್ಟಿಕ್ ವಿಷ ಮೊದಲಾದವುಗಳಿಗೂ ರಾಮಬಾಣ ಔಷಧಿಗಳನ್ನು ಕಂಡುಹಿಡಿದಿದ್ದಾರೆ. ನ್ಯುಮೋನಿಯದ ಹೊಸ ಔಷಧವು ಎಷ್ಟು ಪರಿಣಾಮಕಾರಿ ಎಂದು ತಿಳಿದು ಬಂದಿದೆಯೆಂದರೆ, ಮರಣೋನ್ಮುಖನಾದ ನ್ಯುಮೋನಿಯ ಜ್ವರಪೀಡಿತನು ಅದರ ಪ್ರಯೋಗದಿಂದ ಎರಡೇ ದಿನಗಳಲ್ಲಿ ಸಂಪೂರ್ಣ ಗುಣಹೊಂದಿರುವನು. ಜ್ವರಬಾಧೆಯು ಔಷಧಿ ಪ್ರಯೋಗವಾದಾಕ್ಷಣದಿಂದಲೇ ಕಡಿಮೆಯಾಗತೊಡಗಿತು. ಹೀಗೆಯೇ ಇತರ ರೋಗಾಣುಗಳನ್ನು ಕೊಲ್ಲುವ ಶಕ್ತಿಯುಳ್ಳ ಔಷಧಿ ದ್ರಾವಕಗಳನ್ನು ಕೂಡ ಹುಡುಕಿ ತೆಗೆಯಲಿಕ್ಕೆ ವಿಜ್ಞಾನಿಗಳು ತೊಡಗಿದ್ದಾರೆ.

ಅತ್ಯದ್ಭುತ ಸೂಕ್ಷ್ಮದರ್ಶಿ ಯಂತ್ರ

ವಸ್ತುವನ್ನು ೩,೦೦೦,೦೦೦ ಪಾಲಿನಷ್ಟು ದೊಡ್ಡದಾಗಿ ತೋರಿಸುವ ಸೂಕ್ಷ್ಮದರ್ಶಿ ಯಂತ್ರವನ್ನು ವಿಜ್ಞಾನಿಗಳು ತಯಾರಿಸಿದ್ದಾರೆ. ಮಾನವ ಶರೀರದ ರಚನಾಕ್ರಮವನ್ನು ಅತ್ಯಂತ ಸೂಕ್ಷ್ಮ ರೀತಿಯಿಂದ ತಿಳಕೊಳ್ಳುವುದು ಇನ್ನು ವಿಜ್ಞಾನಿಗಳಿಗೆ ಕಷ್ಟದ ಕಾರ್ಯವೆನ್ನಿಸದು. ಈ ಸೂಕ್ಷ್ಮದರ್ಶಿ ಯಂತ್ರದ ಮೂಲಕ ಮಾನವ ಜೀವನದ ಸಮಸ್ಯೆಯನ್ನು ಬಿಡಿಸುವುದು ಕೂಡ ಅವರಿಗೆ ಸುಲಭಸಾಧ್ಯವಾಗಬಹುದು. ಸತ್ತ ಜೀವಾಣುಗಳು ಪುನಃ ಜೀವಕ್ಕೆ ಬರುವುವೆ? ಹೇಗೆ? ಎಂಬುದನ್ನು ಈಗ ವಿಜ್ಞಾನಿಗಳು ಪ್ರಶ್ನಿಸತೊಡಗಿರುವರು. ಅವರ ಪ್ರಶ್ನೆಗೆ ಆ ಸೂಕ್ಷ್ಮದರ್ಶಿಯೇ ತಕ್ಕ ಉತ್ತರವನ್ನು ಕೊಡಲಿಕ್ಕೆ ಸಮರ್ಥವಾಗಿದೆ.

ಮಾನವನನ್ನು ಅಮರನನ್ನಾಗಿ ಮಾಡುವ ಆಹಾರ

ಆಹಾರದ ಪ್ರಶ್ನೆಯು ಈಗ ಎಲ್ಲಾ ರಾಜ್ಯಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ. ಪೌಷ್ಟಿಕವಾದ ಉತ್ತಮ ಆಹಾರವನ್ನು ಸಾಕಾದಷ್ಟು ಪರಿಮಾಣದಲ್ಲಿ ಪ್ರಜಾವರ್ಗಕ್ಕೆ ಒದಗಿಸಿ ಕೊಡುವುದು ಸರಕಾರಗಳಿಗೆ ಕಠಿನ ಸಮಸ್ಯೆಯಾಗಿ ಕಂಡುಬಂದಿದೆ. ವಿಜ್ಞಾನಿಗಳು ಈ ಭಾಗದಲ್ಲಿಯೂ ತಕ್ಕಷ್ಟು ಪರಿಶ್ರಮಪಟ್ಟು ಸಫಲತೆಯನ್ನು ಪಡೆದಿರುವರು. ಸಮುದ್ರದಲ್ಲಿ ಅಪಾರವಾಗಿ ಬೆಳೆದಿರುವ ಒಂದು ಸಸ್ಯ ಜಾತಿಯನ್ನು ಸಂಗ್ರಹಿಸಿ ಒಣಗಿಸಿದ್ದಾದರೆ ಅದು ಉತ್ತಮವಾದ ಆಹಾರವಾಗುವುದೆಂದು ಅವರ ಶೋಧೆಯಾಗಿದೆ. ಉತ್ತಮ ಆಹಾರದಲ್ಲಿರಬೇಕಾದ ಎಲ್ಲ ಆಹಾರ ವಸ್ತುಗಳು ಆ ಸಮುದ್ರಾಂತರ್ಗತ ಜಲ ಸಸ್ಯದಲ್ಲಿ ಇರುವುದೆಂದು ಅವರು ಕಂಡು ಹಿಡಿದಿರುವರು. ಇದೇ ಜಲಸಸ್ಯವನ್ನು ಗೊಬ್ಬರವಾಗಿ ಉಪಯೋಗಿಸಿದಲ್ಲಿ ಬೃಹದಾಕಾರದ ಟೊಮೆಟೊ, ಬಟಾಟೆ ಮೊದಲಾದವು ಬೆಳೆದಿವೆ. ಮನುಷ್ಯರು ಆ ಜಲಸಸ್ಯವನ್ನು ಆಹಾರವಾಗಿ ಉಪಯೋಗಿಸುವುದಾದರೆ ಅದು ಅವರಿಗೆ ಕಡಿಮೆ ಖರ್ಚಿನಿಂದ ಧಾರಾಳವಾಗಿ ದೊರೆಯುವುದು. ಆದ್ದರಿಂದ ಹೊಟ್ಟೆಗಿಲ್ಲದೆ ಸಾಯುವ ಪ್ರಸಂಗವು ಇನ್ನು ಮುಂದೆ ಬರಲಾರದು.

ಬಟ್ಟೆಯ ಸಮಸ್ಯೆಯನ್ನೂ ಬಿಡಿಸಿದ್ದಾರೆ

ಮನುಷ್ಯನ ಜೀವನಕ್ಕೆ ಮುಖ್ಯವಾಗಿ ಬೇಕಾದುದು ಅನ್ನ ಮತ್ತು ಬಟ್ಟೆ. ಅನ್ನದ ಸಮಸ್ಯೆಯನ್ನು ವಿಜ್ಞಾನಿಗಳು ಹೇಗೆ ಬಿಡಿಸಿದ್ದಾರೆಂಬುದನ್ನು ಮೇಲೆ ಹೇಳಿದೆವು. ಬಟ್ಟೆಯ ಕಡೆಗೂ ವಿಜ್ಞಾನಿಗಳ ಲಕ್ಷ್ಯವು ಹೋಗದೆ ಇಲ್ಲ. ಈಗ ಅವರು ಬಿಳಿ ನೂಲನ್ನು ಬಿಡುವ ಹತ್ತಿಯನ್ನು ಮಾತ್ರವಲ್ಲದೆ ಖಾಕಿ, ಊದಾ, ಕೆಂಪು, ನೀಲಿ ಮೊದಲಾದ ಯಾವತ್ತು ಬಣ್ಣಗಳ ನೂಲನ್ನು ಬಿಡುವ ಹತ್ತಿಯನ್ನು ಬೆಳೆಸಲಿಕ್ಕೆ ಅವರು ಸಮರ್ಥರಾಗಿದ್ದಾರೆ. ಅಂಥ ಬೇರೆ ಬೇರೆ ಬಣ್ಣದ ನೂಲನ್ನು ಕೊಡುವ ಹತ್ತಿ ಬೀಜಗಳನ್ನು ಅವರು

—ವಿಜ್ಞಾನಿಕರ ಸಾಹಸದಿಂದ—
ನವಸೃಷ್ಟಿಯು ನಿರ್ಮಾಣವಾಗುತ್ತಿದೆ!

ಯಕ್ಸ್-ರೇಗಳ ಉಪಯೋಗದಿಂದ ಅಧುನಿಕ ವೈಜ್ಞಾನಿಕರು ನವಸೃಷ್ಟಿಯ ನಿರ್ಮಾಣ ಮಾಡಲಿಕ್ಕೆ ಸಮರ್ಥರಿದ್ದಾರೆ.

ಒಂದು ಜಾತಿಯ ಹೂವಿನಿಂದ ಹಲವು ಜಾತಿಯ ಹೂಗಳನ್ನೂ ಒಂದು ಜಾತಿಯ ಹಣ್ಣುಗಳಿಂದ ಹಲವು ಜಾತಿಯ ಹಣ್ಣುಗಳನ್ನೂ ಗಿಡಮರಗಳಿಂದ ಹುಟ್ಟಿಸುವ ಕ್ರಮಗಳನ್ನು ತಿಳಕೊಂಡಂತೆ ವಿಜ್ಞಾನಿಗಳೀಗ ಒಂದು ಜಾತಿಯ ಹುಳು-ಕ್ರಿಮಿಯಿಂದ ಹಲವು ಜಾತಿಯ ಹುಳು ಕ್ರಿಮಿಗಳನ್ನು ಸೃಷ್ಟಿಸುವ ಕ್ರಮಗಳನ್ನು ತಿಳಕೊಂಡಿರುವರು.

ಎಂಟುಕಾಲುಗಳ ಪತಂಗ.

ಪತಂಗಗಳಿಗೆ ಆರೇ ಕಾಲುಗಳು ಇರುವವು. ಆದರೆ ಅವುಗಳ ಮೇಲೆ ಎಕ್ಸ್-ರೇಗಳ ಪ್ರಯೋಗ ಮಾಡಿದಂದಿನಿಂದ ಅವುಗಳಿಗೆ ಎಂಟುಕಾಲುಗಳು ಹುಟ್ಟತೊಡಗಿವೆ. ಅವುಗಳ ರೂಪು ಬಣ್ಣ ಪರಿಮಾಣಗಳಲ್ಲಿಯೂ ವ್ಯತ್ಯಾಸಗಳು ತೋರತೊಡಗಿವೆ. ವಿಜ್ಞಾನಿಗಳ ಪ್ರಯೋಗಗಳು ಸಂಪೂರ್ಣ ಫಲಕಾರಿಯಾದಾಗ ಬ್ರಹ್ಮಸೃಷ್ಟಿಯ ಹಲವಾರು ಜಾತಿಯ ಪತಂಗಗಳಿಂದಲೇ ಮನುಷ್ಯಸೃಷ್ಟಿಯ ಸಾವಿರಾರು ಪತಂಗಗಳು ಹುಟ್ಟಬಹುದು. ಈಗಾಗಲೇ ಕೆಂಪು ಕಣ್ಣು, ಬೂದು ಶರೀರವಿರುವ ಒಂದು ಜಾತಿಯ ಪತಂಗದಿಂದ ವಿಜ್ಞಾನಿಗಳು ಬಿಳಿ, ಗುಲಾಬಿ, ಅಥವಾ ಬೇರೆ ಬಣ್ಣದ ಕಣ್ಣುಗಳು, ಅಥವಾ ಕಣ್ಣುಗಳೇ ಇಲ್ಲದವುಗಳು, ಬಗ್ಗಿದ ರೆಕ್ಕೆಗಳು, ಸಣ್ಣ ರೆಕ್ಕೆಗಳು, ರೆಕ್ಕೆಗಳೇ ಇಲ್ಲದವುಗಳು, ಹಾಗೆಯೇ ಮೂರುಜತೆ ಕಾಲುಗಳಿರುವುದರ ಬದಲಿಗೆ ನಾಲ್ಕುಜತೆ ಕಾಲುಗಳುಳ್ಳವುಗಳು, ಜೀವಮಾನವನ್ನು ತಗ್ಗಿಸಿಕೊಂಡವು ಅಥವಾ ಹೆಚ್ಚಿಸಿಕೊಂಡವುಗಳು ಹೀಗೆ ನಾನಾ ಪ್ರಕಾರದ ಪತಂಗಗಳನ್ನು ಹುಟ್ಟಿಸಿರುವರು.

ವಿಜ್ಞಾನಿಗಳ ಆಶ್ಚರ್ಯ.

ಒಂದು ವಿಜಾತಿಯ ಪತಂಗಗಳಲ್ಲಿ ಹೀಗೆ ನಾನಾ ಪ್ರಕಾರಗಳ ಅಂತರವನ್ನು ಕಾಣಿಸುವ ಬೇರೆ ಬೇರೆ ಜಾತಿಯ ಪತಂಗಗಳು ಹುಟ್ಟುವುದು ಇಲ್ಲದೇ ಇಲ್ಲವಾಗಿತ್ತು. ಎಲ್ಲಿಯಾದರೆ ಅಂಥ ಒಂದೆರಡು ಜಾತಿಗಳು ಅಪರೂಪವಾಗಿ ಕಾಣಿಸಿಕೊಂಡರೆ, ಅವನ್ನು ಕಂಡು ವಿಜ್ಞಾನಿಗಳಿಗೆ ಪರಮಾಶ್ಚರ್ಯವಾಗುತ್ತಿತ್ತು. ಹಾಗೇಕೆ ಅಂಥ ವ್ಯತ್ಯಾಸಗಳು ಪತಂಗಜಾತಿಯಲ್ಲಿ ಕಂಡುಬರುತ್ತಿದ್ದವು ಎಂಬ ರಹಸ್ಯವನ್ನು ಅವರು ಹೇಳಲಾರದವರಾಗಿದ್ದರು. ಆದರೂ ವಿಜ್ಞಾನಿಗಳು ಈಗ ಆ ರಹಸ್ಯದ ಸ್ಫೋಟನೆ ಮಾಡಿರುವರು. ಶರೀರ ರಚನೆಗಳ ಮೇಲೆ ಯಕ್ಸ್-ರೇಗಳ ಪ್ರಯೋಗ ಮಾಡುವುದರಿಂದ ಸಂತತಿಯ ಮೇಲೆ ಅಂಥ ವ್ಯತ್ಯಾಸಗಳು ತೋರುವಂತೆ ಮಾಡಬಹುದೆಂಬುದು ಈಗ ಜನಜನಿತವಾಗಿದೆ.

ಮಾನವಸೃಷ್ಟಿಯ ಮನುಷ್ಯ.

ಪತಂಗಗಳಮೇಲೆ ಯಕ್ಸ್-ರೇಗಳಪ್ರಯೋಗಮಾಡಿದುದರಿಂದ ಹೇಗೆ ಅವುಗಳಿಂದ ಹಲವಾರು ಜಾತಿಯ ಪತಂಗಗಳನ್ನು ಹುಟ್ಟಿಸುವುದು ಸಾಧ್ಯವಾಗಿದೆಯೋ ಹಾಗೆ ಮನುಷ್ಯರ ಮೇಲೆ ಅಂಥ ಪ್ರಯೋಗಗಳನ್ನು ನಡೆಸಿದಾಗ ಅವರಿಂದ ಹಲವು ಜಾತಿಯ ಮನುಷ್ಯರು ಹುಟ್ಟಲೂಬಹುದು. ಸೃಷ್ಟಿಯ ರಚನಾತತ್ವವು ಗಿಡಮರಗಳಲ್ಲಿ ಹೇಗೋ ಹಾಗೆ ಪ್ರಾಣಿಗಳಲ್ಲಿಯೂ ಮನುಷ್ಯರಲ್ಲಿಯೂ ಒಂದೇ ಪ್ರಕಾರವಾಗಿರುವುದರಿಂದ ಪತಂಗಗಳ ಹುಟ್ಟಿಗೆ ಸತ್ಯನೆಂದು ತೋರಿದ ತತ್ವವು ಮನುಷ್ಯರ ಹುಟ್ಟಿಗೂ ಸತ್ಯವಾಗಬೇಕು. ಆದ್ದರಿಂದ ಮನುಷ್ಯರಚನೆಯಮೇಲೆ ಎಕ್ಸ್-ರೇಗಳ ಪ್ರಯೋಗದಿಂದ ಅವನ ಜಾತಿಯಲ್ಲಿ ಎರಡು ಕೈ ಎರಡು ಕಾಲು ಎರಡು ಕಣ್ಣು ಎರಡು ಕಿವಿಗಳಿರುವಂಥ ಮನುಷ್ಯರ ಹೊರತು ಒಂದು ಮೂರು, ನಾಲ್ಕು ಐದು ಆರು ಹೀಗೆ ಬೇರೆಬೇರೆ ಸಂಖ್ಯೆಗಳಲ್ಲಿ ಕೈಕಾಲು ಕಣ್ಣು ಕಿವಿ ಮೊದಲಾದ ಅಂಗೋಪಾಂಗಗಳು ಇರುವ ವಿಚಿತ್ರ ಮನುಷ್ಯರು ಹುಟ್ಟುವುದು ಸಂಭವವಾಗಿದೆ.

ಬೆಳಸಿ ಸಂಗ್ರಹಿಸಿದ್ದಾರೆ. ಮುಂದೆ ಬಟ್ಟೆಗಳಿಗೆ ಬಣ್ಣ ಕೊಡಬೇಕಾಗಿದ್ದಿರುವುದಿಲ್ಲ. ಮರದ ತೊಗಟೆಯಿಂದ ಕೃತ್ರಿಮ ರೇಶ್ಮೆಯನ್ನು ಅವರು ತಯಾರಿಸಿದ್ದಾರೆ. ಹಾಲಿನಿಂದ ಉಣ್ಣೆಯನ್ನು ತಯಾರಿಸಿದ್ದಾರೆ. ನಮಗೆ ಬೇಕಾದ ಯಾವತ್ತು ಮನೆ ಸಾಮಗ್ರಿಗಳನ್ನು ಗಿಡ, ಮರ, ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳಿಂದ ತಯಾರಿಸಲಿಕ್ಕಾಗುವ ದಿನಗಳು ದೂರವಿಲ್ಲ. ಹೀಗಾಗಿಬಿಟ್ಟರೆ ಜೀವನವು ಸುಲಭವೂ ಸುಗಮವೂ ಅಗ್ಗವೂ ಆಗಿ, ಮನುಷ್ಯನು ತನ್ನ ಭೌತಿಕ ಉನ್ನತಿಯನ್ನೂ ಮಾತ್ರವಲ್ಲ, ಪಾರಮಾರ್ಥಿಕ ಉನ್ನತಿಯನ್ನೂ ಸಾಧಿಸಲಿಕ್ಕೂ ಬೇಕಾದಷ್ಟು ಸಮಯವನ್ನು ಪಡೆದು ಅಮರನಾಗುವನು.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.

ಡಾ ಜಸಾನಿಯವರ
ಜಗತ್ಪ್ರಸಿದ್ಧ
ಗೊನೊಕಿಲರ್ (ರಜಿಸ್ಟರ್ಡ್)

GONO KILLER

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ನಕಲಿ ಮದ್ದುಗಳ ವಿಷಯು ಜಾಗ್ರತೆ ತೆಗೆದುಕೊಳ್ಳಿರಿ. ಕೊಂಡುಕೊಳ್ಳುವದರ ಮೊದಲು ಕೋಳಿ ಗುರುತಿನ ಕೆಂಪು ಸೀಲು ಮತ್ತು ಗೊನೊಕಿಲರ್ ಇರುತ್ತದೆಯೆಂಬುದನ್ನು ನೋಡಿರಿ.

ಮುಂಬಯಿಂದಿನ ಅಪ್ರತಿಮ ಔಷಧ. ಇಂಗ್ಲೀಷ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇಂಜೆಕ್ಷನ್ ಔಷಧಾದಿ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದುಸಾರಿಯಾದರೂ ಈ ನಮ್ಮ ಗೊನೊಕಿಲರ್ ಎಂಬ ಕಿಲ್ಲರವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೊನೋರಿಯಾ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ(ಎಷ್ಟೇ ಹಳೆಯದಾದ್ದರೂ ಅದರ ಸ್ಥಿತಿಯಲ್ಲಿ ಇರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತು ಬೀಳುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.
50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3-0-0 (ಮೂರು) ವಿ ಪಿ ಛಾರ್ಜ 8 ಆಣೆ ಬೇರೆ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಠ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.
Sole Manufacturer: **Dr. D. N. JASANI,** Vithalbhai Patal Road, BOMBAY
ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ.
ಸ್ಟಾಕಿಸ್ಟ—ಮೆಸರ್ಸ್ ಎ ಫೆರ್ನಾಂಡಿಸ್ ಮತ್ತು ಕಂಪೆನಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್, ಮಂಗಳೂರು.

ಮೂಲತತ್ವ

"ಇತಿಹಾಸವನ್ನು ಕಲಿಸುವುದರಲ್ಲಿ ನಾವು ಪಕ್ಷಪಾತಿಗಳು; ನಮ್ಮದು ಜರ್ಮನಿಯ ಪಕ್ಷ. ನಿಷ್ಪಕ್ಷಪಾದ ಚರಿತ್ರೆ ನಾವು ಕಲಿಸೆವು. ನಮ್ಮವರು ನಮ್ಮವರದೇ ಆಗಿರುವ ಹಕ್ಕುಗಳ ವಿಷಯ ಬಹಳ ಚೆನ್ನಾಗಿ ಕಲಿತುಕೊಳ್ಳಬೇಕೆಂಬುದೇ ನಮ್ಮ ಆಶಯ. (ಕಾರ್ಲ್ ಸ್ಪರ್ಮ್)

'ನಮ್ಮ ಸಾಹಸವು ಸರಿಯೋ, ಧರ್ಮ ಸಮ್ಮತವೋ ಎಂಬುದಕ್ಕೆ ರುಜುವಾತು ಒಂದೇ— ನಮ್ಮ ವಿಜಯ (ಹಿಟ್ಲರು ೩೭೭ ಪುಟ)

'ಯಾವ ವಿಧದಿಂದ ಜನರು ಅಭ್ಯುದಯ ಸಾಧಿಸುವರೋ, ಆ ವಿಧ, ರೀತಿ, ನೀತಿ ಇವಾವುವೂ ವ್ಯರ್ಥ, ಅವರು ಆ ಧ್ಯೇಯವನ್ನು ಮುಟ್ಟಿದರು ಎಂಬುದೇ ಮುಖ್ಯ (ಗೆಬೆಲ್ಸ್ ೪—೯—೧೩೪)

'ಪರರಾಷ್ಟ್ರಗಳೊಡನೆ ನಮ್ಮ ನೀತಿ ಎಂದರೇ ಒಂದೇ, ಇದೊಂದೇ ಮಾತ್ರ,— ಖಡ್ಗ'

(ಗೆಬೆಲ್ಸ್—೨೮—೫—೧೯೩೮)

ಹಿಟ್ಲರು ಯಾರು?

ನಿಷ್ಪ್ರಯೋಜಕನೆಂದ ವಿದ್ಯಾರ್ಥಿ, ಅಲೆದಾಡುತಿದ್ದ ಯುವಕ, ವ್ಯರ್ಥ ಕೆಲಸಗಾರ, ಒಸ್ಟ್ರಿಯದಿಂದ ಪಲಾಯನಮಾಡಿದ ಸೈನಿಕ, ನಾಲ್ಕು ವರ್ಷದ ಯುದ್ಧದಲ್ಲಿ ಬಡ್ತಿ ಬೇಗನೆ ಇದ್ದರೂ ಬರೀ ಕೊರ್ಪೊರಲ್ ಪದವಿಗೇರಿದವ,— ಈತನೇ ಹದಿಮೂರು ವರ್ಷಗಳ ವರೆಗೆ ಜನನಾಯಕನೆನಿಸಲು ಅಭ್ಯಾಸಮಾಡಿ, ಆಗಣ ಪ್ರಜಾಪ್ರಭುತ್ವವನ್ನು ಎದುರಿಸಿ, ಜನರಲ್ಲಿ ಭಯವನ್ನು ಹುಟ್ಟಿಸಿ ಹುಚ್ಚಾಗಿಸಿ ಹಗೆತನವನ್ನು ಬಿತ್ತಿ ಇತಿಹಾಸವನ್ನೂ ಅಂದಗೆಡಿಸಿ,— ಪ್ರಜಾಪ್ರಭುತ್ವವು ವಿಶ್ವಾಸಘಾತಕರ ಸರಕಾರವೆಂದು ವಿಜೃಂಭಿಸಿದನು.

ಜರ್ಮನಿಯು ಮಹಾಯುದ್ಧ ಮಾಡಿದ್ದೇ ಅಲ್ಲ, ಎಲ್ಲರೂ ಅದನ್ನು ವ್ಯತ್ಯಾಸಪಾಶದಲ್ಲಿ ಸೆಳೆದವರು. ಜರ್ಮನ್ ಸೇನೆಗಳು ಸೋತುದೇ ಇಲ್ಲ, ವಿಜಯಿಗಳು ಸಹಕಾರದಿಂದ ಮುಂದೆ ಜರ್ಮನಿ ಬಾಳದು, ತಟಸ್ಥವಾಗಿಯೆ ಬಾಳಬೇಕು. ಹಿಂಸೆ ಸಿದ್ಧತೆ, [illegible]—ಇವೇ [illegible]ನ ಅಗತ್ಯಗಳು [illegible] ಇವನು ಎಲ್ಲರಿಗೂ ಸಾರಿದನು. ಹಿಟ್ಲರು ಒಬ್ಬ ಫೋಸ್ಟ್‌ಮಾಸ್ಟರನಾಗಿ, ನನ್ನ ರೂಪವಿರುವ ಅಂಚೆಚೀಟಿಗಳ— ನಿಕ್ಕತ್ತಿರಲಿ ಎಂದ ಹಿಂಡನ್‌ಬರ್ಗನು, ವೃದ್ಧನಾಗಿ, ತನ್ನಾಸೆಯನ್ನು ನೆರವೇರಿಸಲಾರದಾದನು. ಅದನು ಹಾಗೆ ಮಾಡಿದ್ದರೆ, ಜರ್ಮನಿಯಲ್ಲೂ ಜಗತ್ತಿನಲ್ಲೂ ನರಳಿಕೆ ಕಡಮೆ ಆಗುತಿತ್ತು.

ಚಾನ್ಸಲರ್

ಹಿಂಡನಬರ್ಗನ ಕಳೇಬರವು ತಣ್ಣಗಾಗುವುದರೊಳಗೆ, ಅವನ ವೇಷಭೂಷಣ ಅಧಿಕಾರಗಳನ್ನು ಹಿಟ್ಲರು ಸೆಳೆದುಕೊಂಡನು. ವಿಜಯಿಗಳು ತಮಗೆ ಬೇಕಾದ ಒಕ್ಕಣೆಯಲ್ಲಿ ಬರೆದ ವರ್ಸೆಲ್ಸ್ ಒಪ್ಪಂದವನ್ನು ಇವನು ಕೂಡಲೆ ಮುಂದಿಕ್ಕಲು ಬಗೆದನು. ಲುಕಾರ್ನೊ ಒಪ್ಪಂದವನ್ನಾದರೂ ಜರ್ಮನಿಯೇ ಒಪ್ಪಿ ಸಹಿ ಹಾಕಿತ್ತು, ಹಿಟ್ಲರು ಅದನ್ನು ೧೯೩೩ರಲ್ಲಿ ಪುನಃ ರುಜು ಹಾಕಿ ಒಪ್ಪಿಕೊಂಡಿದ್ದನು. ಅದನ್ನು ಮುರಿಯ ತೊಡಗಿದನು. ಪೋಲೆಂಡಿನೊಡನೆ ಮಾಡಿದ (ತಾನೇ) ಒಪ್ಪಂದವನ್ನು ಮುರಿದನು. ಶಸ್ತ್ರ ಸನ್ಯಾಸದ ಪರಿಷತ್ತಿನಿಂದ ಹೊರಬಿದ್ದನು. ಲೀಗನ್ನು ಪ್ರತಿನಿಧಿಯಿಂದ ಅಪಹಾಸ್ಯಗೊಳಿಸಿದನು.

ರಾವ್ಕ್ ಉಂಡ್ ವೊಲ್ಫ್

(ಜನಪದಿಗಳು)

ಎವೊಲ್ಫ್ ಬಾಲ್ಸ್ ಎಂಬಾತನು, ಹಿಟ್ಲರ ಗ್ರಂಥದ ವ್ಯಾಖ್ಯೆಯಾಗಿ ಈ ಪುಸ್ತಕವನ್ನು ೧೯೩೪ರಲ್ಲಿ ಬರೆದನು. ಮರುವರ್ಷ ಇದರ ಸುಲಭದರದ ಪ್ರತಿಯೊಂದು ಪ್ರಕಟವಾಯಿತು. ಇದೇ ವರ್ಷ ಈ ಪುಸ್ತಕವು ಬರೀ ಆರಾಣೆಗೆ ಸಿಗುವಂತೆ ಸದ್ಯದಲ್ಲಿ ವ್ಯವಸ್ಥೆಯಾಗಲಿದೆ. ಇದರ ಮೂಲಪ್ರತಿಯು ಜರ್ಮನ್ ಭಾಷೆಯಲ್ಲಿ ೧೯೩೩ರಲ್ಲೇ ಹಿಟ್ಲರು ಅಧಿಕಾರಕ್ಕೆ ಬಂದೊಡನೆ ಪ್ರಕಟವಾಗಿತ್ತು. ಗ್ರಂಥಕರ್ತನು ಕೆಲವಲೆ ಯುದ್ಧವಿದ್ಯಾಚಾರ್ಯನಾಗಿ ನೇಮಕ ಹೊಂದಿದನು.

ಹಿಟ್ಲರನ ರುಚಿ ಹೇಗಿದೆ ನೋಡಿರಿ:

ನಾಝಿ ತತ್ವ ಪ್ರಚಾರ

ಇದನ್ನು ಹಿಟ್ಲರು ಸ್ವರಚಿತ ಗ್ರಂಥದಲ್ಲಿ ಸೂಚಿರುವಂತೆಯೆ ಇಷ್ಟು ಕಾಲವೂ ಚರಿತ್ರೆಯು ಸ ಘಟನೆ ಹೊಂದಿದೆ. ಹಿಟ್ಲರ ಅಭಿಪ್ರಾಯವೇನಿದೆ? ಅವನ ಬಲಗೈ-ಎಡಗೈಯವರ ಪ್ರಯತ್ನಗಳೇನು? ಇವನ್ನಿಲ್ಲಿ ಸಂಗ್ರಹವಾಗಿ ಕೊಡಲಾಗಿದೆ:—

"ಇನ್ನು ಪೃಥಕೆ. ಔಡು ಕಚ್ಚಿ, ಮುಷ್ಟಿ ಬಿಗಿದು, ಕತ್ತಿ ಎತ್ತಿ ಸಿದ್ಧರಾಗಬೇಕಾದ ದಿನ ಬಂದಿದೆ. ನೆತ್ತರು—ಉಕ್ಕುಗಳ ಸಂಬಂಧದಿಂದಲೇ ಹೊಸ ಜರ್ಮನ್ ಸರಕಾರವು ಜನ್ಮವೆತ್ತುವುದು" ಎಂದು ಸೀರಿಕೆ.

"ಇನ್ನು ಯುದ್ಧವಾಗುವುದಾದರೆ ಮೊದಲು ಮಹಾರಾಷ್ಟ್ರವಾಗಿ, ಬಳಿಕವೇ ಹಾಗಿದ್ದೇವೆಂದು ರುಜುಮಾಡೋಣ. ಬೆಲ್ಜಿಯಮನ್ನು ನುಗ್ಗಿ ಹಾದು ಹೋದುದು ಹಿಂದಣ ತಪ್ಪು, ಹೊಲೆಂಡನ್ನೂ ಬೆಲ್ಜಿಯಮನ್ನೂ ಸ್ವಾಧೀನಪಡಿಸಿಕೊಂಡೇ ಯುದ್ಧ ನಡೆಯಬೇಕಾಗಿತ್ತು. ಹೇಗೂ ನಮ್ಮನ್ನು ದೂರಿದರು, ಇನ್ನುಷ್ಟು ದೂರುತ್ತಿದ್ದರು, ಆದರೆ ಪರಿಣಾಮಗಳು ಬಹು ಲಾಭದವಾಗುತ್ತಿದ್ದುವು."

ನಾಳಿಗೇನು?

'ಈ ಶಾಸ್ತ್ರ ಫ್ರಾನ್ಸಿನ ಒಂದ [illegible]ವನ್ನು ಮೊದಲು ಕತ್ತರಿಸಿಕೊಳ್ಳಬೇಕಾಗಿದೆ. ಇಲ್ಲಿರುವ ಫ್ರೆಂಚರನ್ನು ಮೊದಲೇ [illegible] ಕಡಮೆಯಿರುವ ಫ್ರಾನ್ಸಿನ [illegible] ಜರ್ಮನಿಯು ಗಪಿ ಫ್ರಾನ್ಸಿನ ಭದ ಸಕ್ಕನಕ್ಕೆ ಬಂದೀತ [illegible] ಕೇವಲ ಹತ್ತಿರವಿರುವ [illegible] ಬಗೆದರೆ ಗಳ [illegible] ಆಫ್ರಿಗಳಲ್ಲಿನ ಇದ್ದಲು ಗಣಿಗಳೂ ಜರ್ಮನಿಗೆ ಇಂಗ್ಲೆಂಡಿಗೆ ಸುಲಭವಾಗಿ [illegible] ಘಾತ ಮಾಡಲು ಗುರಿ ಹಿಡಿಯಬಹುದು.'

[illegible] ಜರ್ಮನರ [illegible] ಜನಾಂಗವು [illegible] ಹಿಟ್ಲರ ವಚನ [illegible] ಒಲಿಸ್ಯವಾಗಿ [illegible] ರಕ್ತ [illegible] ಇವರನ್ನು [illegible] ಗೊಳಿಸದೆ [illegible] ಎಂದೇ [illegible] ಇವರ ಮೇಲೆ [illegible] ಗುಂಡು ಸುರಿವುದು. ಇವರನ್ನು ಪೂರ್ವ ಜರ್ಮನಿಗೆ [illegible]ವುದು, ನಿಗ್ರೋಗಳೊಡನೆ ರಕ್ತ ಸಂಬಂಧ ಬೆಳೆಸಬಿಡುವುದು—ಇವೇ [illegible] ಉಪಾಯ-[illegible]ದ ಜೀವರ ನಾಮಾವಶೇಷವಾಗತಕ್ಕದು. ಫ್ರಾನ್ಸಿನಲ್ಲಿ ಸರಕಾರ ನಿರ್ವಹಿಸುವವರು ನಿಜವಾಗಿಯೂ ಶ್ಲಾಸ್ಯರು. ಆದರೆ, ಅದೇ ಕಾರಣದಿಂದ, ಅವರು ವಿನಾಶಹೊಂದಲೇ ಬೇಕು."

ಶಾಂತಿ

ಜರ್ಮನಿಗೆ ಬೇಕಾದುದು ಶಾಂತಿ. ಸರ್ವದಾ ಶಾಂತಿ. ಆದರೆ ಭೂಲೋಕವನ್ನೆಲ್ಲ ಯಾವ ದಿನ ಜರ್ಮನಿ ಜಯಿಸುವುದೋ, ಆ ದಿನದಿಂದ ಶಾಂತಿ ನಾವು ನುಂಗಬೇಕು, ಅಥವಾ ನುಂಗಲ್ಪಡಬೇಕು, ಆದುದರಿಂದ ಜಗತ್ತಿನಲ್ಲಿ ಶಾಂತಿಸ್ಥಾಪನೆಗಾಗಿ, ಶಾಂತಿಪ್ರಿಯರಾಗಿರುವ ಜರ್ಮನರೇ ಜಗತ್ತನ್ನು ಕೊನೆಗೆ ಆಳುವಂತಾಗದಿದ್ದರೆ, ಮತ್ತಾರು ತಾನೆ ಶಾಂತಿಸ್ಥಾಪನೆ ಮಾಡುವರು?"

ಬೆಲ್ಜಿಯಂ

"ಇದು ಫ್ರಾನ್ಸಿನ ಹಂಚಿಕೆಯಿಂದಾಗಿ, ಜರ್ಮನಿಯನ್ನು ಸದೆಬಡೆಯಲು ಊರ್ಜಿತ ವಿರಿಸಿರುವ ಕ್ಷುದ್ರನಾಡು. ಇದನ್ನು ಸಾಧ್ಯವಾದಲ್ಲಿ ಇಡೀಯಾಗಿ ಜರ್ಮನಿ ಸೇರಿಕೊಳ್ಳಬೇಕು. ಬ್ರಿಟಿಷರು ಹಿಡಿದರೆ ಬಿಡದ ಸ್ವಭಾವದವರು ನಿಜ; ಆದರೆ ಹಲವು ಶತಮಾನಗಳಿಂದಲೂ ಕೊಂಡಾಟಕ್ಕೆ ಪಾತ್ರರಾಗಿ, ಅಜ್ಜಿ ಸಾಕಿದ ಮಕ್ಕಳಾಗಿದ್ದಾರೆ; ಇವರು ಉಪವಾಸ ಅಥವಾ ಕಿಂಚಿತ್ತು ಕಷ್ಟ ಸಹಿಸುವ ಮನೋಬಲವುಳ್ಳವರಲ್ಲ. ಅಜೇಯರೆಂಬ ಈ ಜನಾಂಗವು ಇಂದೋ ನಾಳೆಯೋ ವಿನಾಶಹೊಂದುವುದಾಗಿ ಭಾವಿಸಿ, ನಾವು ಅತ್ಯಾನಂದಪಡಬೇಕಾಗಿದೆ. ಕ್ರಿ. ಶ. ೧೦೬೬ರಲ್ಲಿ ಪರಕೀಯರಿಂದ ಗೆಲ್ಲಲ್ಪಟ್ಟು ಈ ಜನಾಂಗವು, ಇನ್ನು ಪುನಃ ಪರರಾಷ್ಟ್ರಗಳ ಅಡಿಗೆ ಬೀಳುವುದೆಂದು ಭಾವಿಸಲೂ ಆನಂದೋದ್ರೇಕವಾಗುವುದು. ಇದಾದರೂ ಕಷ್ಟವೇ? ಹೊಲೆಂಡ್, ಬೆಲ್ಜಿಯಮ್, ದಕ್ಷಿಣ ಡೆನ್ಮಾರ್ಕಗಳನ್ನು ಗೆದ್ದ ಬಳಿಕ, ಫ್ರಾನ್ಸು ಇಲ್ಲದಂತಾದ ಮೇಲೆ ಜರ್ಮನಿಯ ಕರಾವಳಿಯು ಡೆನ್ಮಾರ್ಕಿನಿಂದ ಪಿರೆನೀಸ್ ವರೆಗೆ ನೀಡಿರಲು, ಬ್ರಿಟಿಷ ನೌಕಾಬಲ [illegible] ಕಟ್ಟುವುದಲ್ಲವೆ? ಒಂದು ಜರ್ಮನ್ [illegible] ಇಂಗ್ಲಂಡನ್ನು [illegible] ವಶಮಾಡಿಕೊಳ್ಳಬಹುದು.

(ಇಲ್ಲಿ ಸ ಪೂರ್ಣ ವಿವರವುಳ ಸಕ್ಷೆ ಕೊಡಲಾಗಿದೆ)

ನಾಳಿನ ಯುದ್ಧದ ತರುವಾಯ

'[illegible] ಯುದ್ಧಕ್ಕಾಗಿ ಮಧ್ಯ ಯುರೋಪಿನ ಸಮಸ್ತ [illegible] ಒಳಪಡಿಸಿಕೊಂಡು ಬಲ್ಕನ್ ರಾಜ್ಯಗಳ [illegible]ಗಳನ್ನು ವಶಪಡಿಸಿಕೊಂಡು, [illegible] ಕೃಷಿ [illegible] ಕ್ಷೇತ್ರಗಳನ್ನು ಪಡೆದು, [illegible] ಮಾತ್ರ [illegible] ಲೋಹಗಳ [illegible] ಬಾಡುವುಗಳಿಂದಲು [illegible]—ಜನರ ಅತ್ಯಗಳನ್ನು [illegible]ಗಿದೆ.'

ಮಕ್ಕಳಿಗೆ ಓತವಾದ

"ದೇವರು ನಮ್ಮ ರಕ್ಷಕರು [illegible] ಪ್ರತಿವರ್ಗವು [illegible] ಹೀಗಿ [illegible] ಮಾಡಿದನು [illegible] ಜರ್ಮನ [illegible] ಯುದ್ಧವಿದ್ಯೆಯನ್ನು ಕಲಿಸತಕ್ಕದು.

ಕೂಡಿಸಬೇಕಾದ ರಾಜ್ಯಗಳು

ಯುದ್ಧಮಾಡದೆಯೆ [illegible] ಚಿತ್ತನ್ನಾದರೂ ಪಡೆವುದು [illegible] ಒಸ್ಟ್ರಿಯಾ ಜೆಕೊಸ್ಲೊವಾಕಿಯ [illegible] ಹೊಲೆಂಡ್ ಡೆಂಜಿಗ್ ಉಕ್ರೆನ [illegible] ಜರ್ಮನ್ ಫ್ರಾನ್ಸ್ ಈಸ್ಟ್ ಇಂಡೀಸ್, ಕೊಂಗೋ, ಜರ್ಮನ್ ಸ್ವಾನ್ಸ್ [illegible] ಸುಡಾನ, ಜರ್ಮನ್ ಯುಗೊಸ್ಲಾವಿಯ ಜರ್ಮನ್ ಪೋಲೆಂಡ್, ಜರ್ಮನ್ ಲಿಥುವಾನಿಯ, ಜರ್ಮನ್ ಡೆನ್ಮಾರ್ಕ್ ಜರ್ಮನ್— ಇಟಲಿಯನ್ನು ಸದ್ಯಕ್ಕೆ ಹಿಂದಿಡಲಾಗಿದೆ'

ಮ್ಯುನಿಚ್

ಭೂಗೋಲದ ನಕ್ಷೆಬಿಡಿಸಿ, ಅದರಲ್ಲಿ ಈ ಭೂಭಾಗಗಳನ್ನು ಅಂಚಿಸಿ, ಅದಕ್ಕೆ ದಿನರಾತ್ರಿಯೂ ಕಾವಲಿಟ್ಟು, ಪ್ರತಿದಿನ ಹೂಮಾಲೆ ಹಾಕಿ ಸಲಾಂ ಹಾಕಲು ಪ್ರತಿಯೊಬ್ಬರಿಗೂ ಅಪ್ಪಣೆಇದೆ

ಯುದ್ಧಾರಂಭ ಕ್ರಮ

"ಜರ್ಮನ್ ಮ್ಯಾತೆಯರಿಗೆ ಹಿಟ್ಲರನ ಮಾತು—ಹಗೆಯಮೇಲೆ ಬೀಳುವುದಾದಲ್ಲಿ, ಮುಸ್ಸೊಲಿನಿಯ ಹಾಗೆ ತಿಂಗಳಗಟ್ಟಲೆ ಸಂಭಾಷಣೆಗಳು ಬೇಡ. ನಾನೆಂದೂ ಸಂಭಾಷಣೆ ಮಾಡಲಾರೆನು. ರಾತ್ರಿಯಲ್ಲಿ ಸಿಡಿಲೆರಗಿದಂತೆ ನಾನು ಥಕ್ಕನೆ ಎರಗುವೆನು. ಇದೇ ನನ್ನ ಕ್ರಮ" ಒಸ್ಟ್ರಿಯ, ಜೆಕೊಸ್ಲೊವಾಕಿಯ, ಮೆಮೆಲ್‌ಗಳ ಕ್ರಮವೇ ಹೀಗೆ.

"ಮೊದಲನೆಯದಾಗ್ಗಿ ಕ್ಷಿಪ್ರಪಾತ ಸಿಂಚನ ವಿಮಾನ ಯುದ್ಧ. ಬೇಗನೆ ಈ ರೀತಿಯಾಗಿ ಹಗೆಯ ರಾಜ್ಯದಲ್ಲಿ ಬಲುದೂರ ನುಗ್ಗಲಾಗುವುದು. ಹಗೆ ಸಿದ್ಧನಾಗುವುದರೊಳಗೆ ಅರ್ಧ ರಾಜ್ಯ ಕೆಡೆವಲಹುದು. ಶಸ್ತ್ರಸನ್ನಾಹಗಳೆನ್ನು ಧ್ವಂಸಮಾಡುವುದು, ರಾಜಧಾನಿಗಳನ್ನು ಮಡಿಗೈವುದು, ಸೈನ್ಯಗಳ ಸಂಚಾರವನ್ನೆ ಕೆಡಿಸುವದು ಎಂತೂ ಭಯ, ಭ—ಯ, ಭ-ಯ ಹುಟ್ಟಿಸಬೇಕು"

"ಅಲ್ಲಲ್ಲಿ ನಿಂತು ಯುದ್ಧಗೆಲಾಗದು. ಜನಾಂಗಗಳೇ ರಾಜ್ಯವೇ ಯುದ್ಧಕ್ಕೊಳಪಡಬೇಕು. ಮಗು-ಮುದುಕ, ಮನೆ-ಕಾರ್ಖಾನೆ ಸಾಮಾನ್ಯ ನೈತಿಕ ಎಂಬ ಭೇದಕ್ಕೆ ಅವಕಾಶವಿರಬಾರದು"

"ಎಲ್ಲ ನೀರನ್ನೂ ವಿಷಾಣುಗಳಿಂದ ತುಂಬಬೇಕು. ಸನ್ನಿಪಾತ, ಪ್ಲೇಗುಗಳನ್ನು ಹರಡಿಸಬೇಕು. ನಮ್ಮ ವಿಮಾನಗಳು ಹಗೆಯ ರಾಜ್ಯದಲ್ಲಿ ದೂರ ಇಳಿದು, ಈ ಅಣುಗಳನ್ನು ಪಸರಿಸಬೇಕು"

"ಇನ್ನು ಯುದ್ಧವಾದರೆ, ಗೆದವರು-ಸೋತವರು ಎಂಬವರಿರಬಾರದು. ಉಳಿದವರು ಇಲ್ಲದವರು ಎಷ್ಟೋ ಅದೇ ನಿರ್ಧಾರ. ಒಂದು ಜನಾಂಗವು ಮತ್ತೊಂದನ್ನು ನಿರ್ನಾಮ ಮಾಡಿಯೇ ಯುದ್ಧ ಮುಗಿಯತಕ್ಕದು."

'ಉಳಿದವರು' ಯಾರು?

'ಜರ್ಮನರು ಈ ತರಗತಿಗೆ ಸೇರುವಂತೆ ಪ್ರತಿಯೊಬ್ಬನೂ ಹಗೆಯನ್ನು ಧ್ವಂಸಮಾಡಲು ಕಲಿಯತಕ್ಕದ್ದು. ಯುದ್ಧದ ಹುಚ್ಚು ಎಲ್ಲರನ್ನೂ ಪೀಡಿಸಬೇಕು. [illegible] ಜೀವನ ಎಂತಾಗಬೇಕು [illegible] ಯಾವ ವಿಷಯ [illegible] ಜನಾಂಗವು ಗಮನ [illegible].

ಪ್ರಚಾರ

ಯುದ್ಧದ [illegible] ಅಥವಾ [illegible] ಇವೇ ಮಾತ್ರ ಇತರರನ್ನು [illegible] ಪ್ರಚಾರ (ಸಿನೆಮ) [illegible] ವಿಶ್ವ ಸಭಾಂತ, ಚಳವಳಿ-ಇವು [illegible] ಅಂಗಗಳ [illegible] ಜರ್ಮನರೆಲ್ಲ [illegible] ಹಿಟ್ಲರಾದರೆ, [illegible] ರಾಜ್ಯದಲ್ಲಿ ಜರ್ಮನರ [illegible] ಪ್ರಚಾರವಾಗಲಿ [illegible] ಹಿಟ್ಲ [illegible] ಕೊಟ್ಟುದು [illegible] ಅವರ ದೇಶಭಕ್ತ [illegible] ಅವನೇ [illegible] ಹೆಸರು.

ಕೊಲೆಗಾರರು

ಸ್ವಪಕ್ಷದ ಕೊಲೆಗಾರರು ದೇಶಭಕ್ತರು. [illegible] ಹಿಟ್ಲರ [illegible] ಇವರ [illegible]ದಿಂದಲೇ ಒಸ್ಟ್ರಿಯ ವಶವಾಯಿತು. ಸುಡೇಟನ್ [illegible]ದಿಂದಲೂ [illegible] ಈ [illegible] ಅವರ ಜರ್ಮನರಾದರು. ಡೆನ್ಮಾರ್ಕ್, ಸ್ವಿಜರ್ಲೆಂಡ್, ಹೊಲೆಂಡ್, ಬೆಲ್ಜಿಯಮ್, ಡೆನ್ಯೂಬ್ ರಾಜ್ಯಗಳು ಅಮೇರಿಕ, ಬ್ರೆಜಿಲ್, ದಕ್ಷಿಣಾಫ್ರಿಕ ಇರಾಕ್ ಪೆಲೆಸ್ಟೀನ, ಬ್ರಿಟನ್ನಿನಲ್ಲಿ ಸಹ ಈ ಚಳವಳಗಾರರಿರುವರು.

ಪ್ರತಿಯೊಬ್ಬ ಜರ್ಮನನು

"ಅವನ ಹೆಸರು ಪಟ್ಟಿಯಲ್ಲಿದೆ. ಜರ್ಮನ್ ಕಕ್ಷಿಗೆ ಅವನು ಸೇರಲಾರನಾದರೆ, ಅವನ ಧ್ವಂಸವಾದೀತು. ಅಥವಾ ಅವನ ಕುಟುಂಬದವರು ಅವನಿಗಾಗಿ ಪ್ರಾಯಶ್ಚಿತ್ತ ಮಾಡಬೇಕಾಗಿ ಬಂದೀತು. ಪ್ರತಿಯೊಬ್ಬ ಜರ್ಮನನೂ ಹೊಂಚುಗಾರನೆಂದೇ ಭಾವಿಸಬೇಕಾಗಿರುವಷ್ಟು ಜೋರಾಗಿ ಈ ಪ್ರಚಾರ ಪ್ರಭಾವವಿದೆ

ಇತರ ರೀತಿ

"ಯೆಹೂದ್ಯರ ಸರ್ವನಾಶ ಸಾಧನ, ಸಾಂಪತ್ತಿಕ ಒತ್ತಾಟ, ಹಿಂದಣ ಸಾಲ ತೆತ್ತುದಿಲ್ಲ. ಸಾಮಾನು ತಯಾರಾದುದು ಇತರರಿಗೆ ಬೇಡ. ಮಾಡುವುದೇನು? ಹಳೆಯ ಎಸ್ಟ್ರೀನು ಹಳೆ ಯುಶಸ್ತ್ರಾಸ್ತ್ರಗಳು, ಬಾಯಿ (ಊದುವ) ವಾದ್ಯಗಳು, ಇವನ್ನು ಬೇಕಾದವರು ಕೊಂಡುಕೊಳ್ಳಬಹುದು"

ಚೆಂಬರ್ಲೇನರು ಕಂಡ ವಾಕ್ಯ.

ಬರ್ಕ್ಟೆಸ್‌ಗೇಡನ್‌ನಲ್ಲಿ ಹಿಟ್ಲರ ಮನೆಯ ಹೊರಬಾಗಿಲಲ್ಲೇ ಇದೆ:—"ವಿಶ್ವಾಸವನ್ನು ಕಾಪಾಡುವುದರಲ್ಲಿ ನನ್ನ ಗಾರವವಿದೆ"

(ಸಂಗ್ರಹಿಸಿದುದು—ಇ ಓ ಎಲ್.)

ಅಂಗೈನೋಟ

ಪಕ್ಷದ ವಿಶೇಷ ಲೇಖಕರು:
ಶ್ರೀ। ಶಿವರಾಮ ಕಾರಂತರು

ಜೆಕೊಸ್ಲೊವಾಕಿಯದ ಬಳಿಕ

ಹಿಟ್ಲರನ ಈ ತಿಂಗಳ ತಾರೀಕು ೧೫ರ ದಿವಸದ ರಾಜ್ಯ ಭಕ್ಷಣವು ಈ ಮೊದಲಿನ ರೀತಿಗಳನ್ನು ಮೀರಿಸುವುದಿತ್ತು. ಹೊರಗಿನ ತೋರಿಕೆಗೆ ಡಾ। ಹಾಜಾರವರು ಸ್ಲೊವಾಕಿಯದ ಪರವಾಗಿ ರಕ್ಷಣೆ ಕೇಳುವ ಸೋಗನ್ನು ಹಾಕಿದರೂ ರಾಜ್ಯ ಭಕ್ಷಣದ ಸಂಚು ಒಂದು ತಿಂಗಳ ಹಿಂದೆಯೇ ನಡೆದಿತ್ತು. ಅನೇಕ ನೆವಗಳಿಂದ ಸೇನಾ ಚಲನಗಳು ನಡೆದುವು. ಇತ್ತ ಡಾ। ಹಾಜಾ ಬರ್ಲಿನ್ ನಗರಕ್ಕೆ ಬರುವ ಮುಂಚಿತವಾಗಿಯೇ ಎರಡು ಜೆಕೊಸ್ಲೋವಾಕಿಯದ ಪಟ್ಟಣಗಳನ್ನು ಜರ್ಮನ್ ಸೇನೆಗಳು ಬಳಸಿಕೊಂಡುವು. ಬಾಂಬಿನ ಬೆದರಿಕೆಯಿಂದ ಹಿಟ್ಲರನು ಹೇಳಿದ ಸಂಧಿಗೆ ಬಚ್ಚಿಬಿದ್ದ ಹಾಜಾ ಸಹಿಮಾಡುವಂತಾಯಿತು. ಜೆಕೊಸ್ಲೊವಾಕಿಯ ಭಕ್ಷಣವು ಪೂರ್ಣವಾದುದೇ ಬಳಿಕ ಕೊನೆಗಾದರೂ ಚೆಂಬರ್ಲೇನರು ಕಣ್ಣು ತೆರೆದಂತಾಯಿತು.

ಈಗ ಮೆಮೆಲ್ ಪ್ರಾಂತವು ಗದರಿಕೆಯಿಂದ ಜರ್ಮನಿಗೆ ಅಧೀನವಾಯಿತು. ರುಮೇನಿಯದ ಮೇಲೆ ಹಿಟ್ಲರನ ಖಡ್ಗವು ಎತ್ತಿ ಅಣಿಯಾಗಿದೆ. ತಾತ್ಪರ್ಯವೇನು?

ಇಂಗ್ಲೆಂಡಿನ ಗುಪ್ತಚಾರರು

ನಿದ್ರಿಸಿರುವರೇ? ಅರ್ಧ ಮಿಲಿಯ ಪವನನ್ನು ದಕ್ಕಿಸುತ್ತಿರುವ ಈ ಗುಪ್ತಚಾರ ಪಡೆಯು ಹಿಟ್ಲರನ ಈ ಎಲ್ಲ ಚಲನೆಗಳನ್ನು ಇಂಗ್ಲೆಂಡಿಗೆ ತಿಳಿಸಿರಲಾರದೇನು—ಎಂಬ ವಾದವು ಇಂಗ್ಲೆಂಡಿನಲ್ಲಿ ಉಂಟಾಗಿದೆ. ಚೆಂಬರ್ಲೇನರು ಹಿಟ್ಲರನಲ್ಲಿರುವ ವಿಶ್ವಾಸವು ಅಪಾರವಾದುದರಿಂದ, ಅವರ ಹೇಳಿದರು ಚೆಂಬರ್ಲೇನರು ಕೇಳದಲಾರನು ಎಂಬುದೊಂದು ಊಹೆ. ಆದರೆ ನ್ಯೂಯಾರ್ಕ ಟೈಮ್ಸ್ ಪತ್ರಿಕೆಯ ಸುದ್ದಿಗಾರರು, ಸಂಯುಕ್ತ ಅಮೇರಿಕದ ಸುದ್ದಿಗಾರರ—ಸುಮಾರು ಒಂದು ತಿಂಗಳಿಗೆ ಮೊದಲೇ ಹಿಟ್ಲರನ ಹಲವು ಸಂಚುಗಳನ್ನು ತಂತಮ್ಮ ಯಜಮಾನರಿಗೆ ತಿಳಿಸಿದ್ದರು. ಅವರ ಹೇಳಿಕೆಯಂತೆ ಇನ್ನೊಂದು ತಿಂಗಳ ಅವಧಿಯಲ್ಲಿ ಹೆಚ್ಚಿನ ಭಯಾನಕ ಘಟನೆಗಳು ಕಾದಿವೆ.

ಮುಂದಿನ ಯುದ್ಧರಂಗ

ಈ ಯುದ್ಧ ಕೇಂದ್ರವನ್ನು ನಿರ್ಧರಿಸುವುದು ಕಷ್ಟದ ಸಂಗತಿಯಲ್ಲ. ಇದು ಅನುಕೂಲತೆ, ಆಸೆಗಳನ್ನು ಹೊಂದಿದೆ. ಜರ್ಮನಿ, ಇಟಲಿಗಳಿಗೆ ಯುದ್ಧಕ್ಕೆ ಬೇಕಾದ ಮುಖ್ಯ ಅನುಕೂಲತೆಯೆಂದರೆ—ಎಣ್ಣೆ, ಆಹಾರ ಸಾಮಗ್ರಿ. ಇದಕ್ಕಾಗಿಯೇ ರುಮೇನಿಯದ ಆರ್ಥಿಕ ಸ್ವಾತಂತ್ರ್ಯವನ್ನು ಜರ್ಮನಿಗೆ ಅಧೀನಗೊಳಿಸಬೇಕೆಂದು ಹಿಟ್ಲರನು ತಿಳಿಸಿದುದು. ರುಮೇನಿಯವೇನೋ ನಿರಾಕರಿಸಿತು. ಆದರೆ—ಹಿಟ್ಲರನ ಬಲವನ್ನು ಪ್ರತಿಭಟಿಸುವ ಶಕ್ತಿಯು ಅದಕ್ಕಿಲ್ಲ! ರಷ್ಯ ಮಿತ್ರರರು ಬೆಂಗಡೆಯಿದ್ದರೆ ಅದಕ್ಕೆ ಜೀವ. ಈಗ ಬ್ರಿಟಿಷ್ ವ್ಯಾಪಾರ ರಾಯಭಾರಿಗಳ ಅಲ್ಲಿಗೆ ತೆರಳಿದ್ದಾರೆ.

ಭೂಮಧ್ಯ ಸಮುದ್ರ

ಸಮುದ್ರವು ಈಗ ಸ್ಪೈಯಿನ್, ಇಟಲಿಗಳ ವಿಮಾನ, ಯುದ್ಧನಾವೆಗಳ ಹಾವಳಿಯಿಂದ ಇಂಗ್ಲಿಷ್, ಫ್ರಾನ್ಸುಗಳ ಸೇನೆಯ ಚಲನೆಗೆ ಅಸಾಧ್ಯವಾಗಬಹುದು. ಇಂಡಿಯಾವಿನಿಂದ, ತುರ್ಕಿಯ ಮಾರ್ಗವಾಗಿ ಈ ಪಕ್ಷದವರ ಬೆಂಬಲವು ರುಮೇನಿಯಕ್ಕೆ ಸಿಗಬೇಕು. ಆ ಕಡೆಯಿಂದ ರಷ್ಯದ ಬಲ. ಈ ಎರಡು ಬಲಗಳು ತೀವ್ರ ಸಿಕ್ಕಿದರೆ ಯುದ್ಧದ ಮುಂದಿನ ಸ್ವರೂಪ ಬದಲಾಗಬಹುದು. ಇವುಗಳು ಸಿಗದಿದ್ದರೆ ಇಲ್ಲವೆ, ಸಿಗುವುದು ತಡವಾದರೆ, ಇಲ್ಲವೆ ಫ್ರೆಂಚ್ ಬ್ರಿಟಿಷ್ ಮೈತ್ರಿಯ ಘೋಷಣೆಯಲ್ಲಿ ರುಮೇನಿಯಕ್ಕೆ ವಿಶ್ವಾಸವಿಲ್ಲದೆ ಹೋದರೆ—ಜರ್ಮನಿಯ ಬಲವು ರುಮೇನಿಯ ಭಕ್ಷಣೆಯಿಂದ ಬಲು ವಿಶಾಲವಾಗಬಹುದು.

ಆಗ—ಮೂರು ರಂಗಗಳು

ಫ್ರಾನ್ಸ್ ಜರ್ಮನಿಯ ಗಡಿನಾಡು, ಫ್ರಾನ್ಸು ಇಟಲಿಯ ಗಡಿನಾಡು, ಫ್ರಾನ್ಸು ಸ್ಪೈಯಿನ್ ಗಡಿನಾಡು ಈ ವಿಶಾಲ ಕೇಂದ್ರವು ಫ್ರಾನ್ಸಿನ ನೆರೆಕರೆಯ ಯುದ್ಧ ಭೂಮಿಯಾಗುವುದು.

ಇತ್ತ ರಷ್ಯವು ತನ್ನ ಒಪ್ಪಂದದ ಮೇರೆಗೆ ರುಮೇನಿಯವನ್ನು ಕಂಡರೆ ರಷ್ಯ—ಜರ್ಮನಿಗಳ ಎಡೆಯಲ್ಲಿ ದಿನಾಳಿಯಾಗಬಹುದು. ಇದಕ್ಕೆ ಪೋಲೆಂಡು ತಟಸ್ಥವಾದರೂ ಪೋಲೆಂಡ್, ಲಿಥುವೆನಿಯಾ ಮೊದಲಾದ ದೇಶಗಳು ಉಪಾಯವಿಲ್ಲದೆ ತುಳಿತಕ್ಕೆ ಒಳಗಾಗುವುವು.

ಅಂತು ರುಮೇನಿಯವು ಯುದ್ಧ ಪ್ರಾರಂಭಕ್ಕೆ ಗುರಿಯಾಗಲಿರುವ ಪ್ರಥಮ ದೇಶ. ಅಲ್ಲಿನ ಪೆಟ್ರೋಲು, ಗೋಧಿಗಳಿಗಾಗಿ ಈ ಕಲಹವು ಅನಿವಾರ್ಯ.

ಮೂರನೆಯದು ಗುರಿ

ಜರ್ಮನ್ ವಸಾಹತುಗಳು, ಟುನಿಸ್ ಮೊದಲಾದ ಪ್ರಾಂತಗಳು ಬರ್ಲಿನ್ ರೋಮು ನಗರಗಳ ಇನ್ನೊಂದು ಅಪೇಕ್ಷೆ. ಇದಕ್ಕಾಗಿ ಸಂಪೂರ್ಣ ಸಿದ್ಧತೆ ಈಗಾಗಲೇ ಆಗಿದೆ. ದಿನನಿತ್ಯ ಎಂಬಂತೆ ಜರ್ಮನಿಯಿಂದ ಜಿನೋವಾ ಮಾರ್ಗವಾಗಿ ಲಿಬಿಯಕ್ಕೆ ಯುದ್ಧ ಸಾಮಗ್ರಿಗಳು ಗುಪ್ತವಾಗಿ ಸಾಗುತ್ತಿವೆಯಂತೆ. ಈ ಸಾಮಗ್ರಿಗಳು ಅತಿ ಹೆಚ್ಚಿನವು ಮಾತ್ರವಲ್ಲ ಸಧ್ಯಕ್ಕೆ ನೆರವಾಗುವ ರೀತಿಯವು. ಲಿಬಿಯ ಕೆನ್ಯ ಟಂಗನಿಕ ಮೊದಲಾದ ಸೆಕೆನಾಡುಗಳಲ್ಲಿ ಕಾದಾಡಲು ಅವಶ್ಯವಾದ ಉಡುಪು, ಶಿರಸ್ತ್ರಾಣಗಳು ಮಿಲಿಯಗಟ್ಟಲೆಯಲ್ಲಿ ಜರ್ಮನಿಯಲ್ಲಿ ಸಿದ್ಧವಾಗಿ ಸಾಗುತ್ತಿವೆ. ದಕ್ಷಿಣ ಜರ್ಮನಿಯಿಂದ—ಸೇನಾನಿವಾಸಕ್ಕೆ ಅಗತ್ಯವಾದ ದಂಡಿನ ಮನೆಗಳ ಇದೇ ರೀತಿಯಂತೆ ಸಾಗುತ್ತಿವೆ. ಇಟಲಿಯ ನೆಲಸೇನೆಯು ಅಷ್ಟು ಉತ್ತಮವಾಗಿಲ್ಲ ಎಂಬುದರಿಂದ ಜರ್ಮನಿ ಸೇನೆಯು ಅಲ್ಲಿಗೆ ಸಾಗುತ್ತಿದೆ.

[illegible] ಸಮೀಪವಾಗಿ [illegible] ಪಕ್ಷಿಗಳನ್ನೂ ತಯಾರಿಸುತ್ತಿದ್ದಾರೆ. ಈ ತಯಾರಿಕೆಯು ಭಾವೀ ಮೆಡಿಟರೇನಿಯನ್ ಜಲ ಕಾಳಗವನ್ನೂ ಆಫ್ರೀಕದ ನೆಲ ಕಾಳಗವನ್ನೂ ಸೂಚಿಸುವುದು.

ಜಲ ಯುದ್ಧಗಳ ದೃಷ್ಟಿಯಿಂದ ಭೂಮಧ್ಯ ಸಮುದ್ರವು ಜರ್ಮನಿ ಇಟಲಿಗಳಿಗೆ ತೀರ ಅನುಕೂಲವಾಗಿದೆ. ಪ್ರತಿಕೂಲ ಪ್ರದೇಶವೆಂದರೆ ಬಾಲ್ಟಿಕ ಸಮುದ್ರ, ಈಗ ಮೆಮೆಲ ಬಂದರು ಜರ್ಮನಿಗೆ ದೊರೆತುದು, ದಿನನಿತ್ಯ ಎಂಬಂತೆ ನಾಜಿ ಸಂಚು ಡೆನಮಾರ್ಕಿನಲ್ಲಿ ನಡೆಯುತ್ತಿರುವುದನ್ನು ಕಂಡರೆ—ಜರ್ಮನರ ನಾವೆಗಳು ಡೆನ್ಮಾರ್ಕಿನ ಬಾಗಿಲನ್ನು ಹರಿದು ಮುಂದೆ ಬರುವ ಭೀತಿ ಅಧಿಕ.

ಇಷ್ಟು ಮೀರಲು ಕಾರಣ

ಜರ್ಮನಿ, ಇಟಲಿಗಳ ತಿಮಿರು ಇಷ್ಟೆಲ್ಲ ಮೀರಲು ಕಾರಣ ಎಂದರೆ ಫ್ರಾನ್ಸ್-ಇಂಗ್ಲೆಂಡುಗಳಿಗೆ ಇದ್ದ [illegible]. ಇವರಿಬ್ಬರಿಗೆ ರಷ್ಯದ ಮೇಲಿನ ಅವಿಶ್ವಾಸ. ಸ್ಪೈಯಿನ ಪರಿಣಾಮದಿಂದಲೂ, ಇಟಲಿಯು ಟುನಿಸ್ ಕೊರ್ಸಿಕಾ ಕೇಳಿದ ದರಿಂದಲೂ—ಇಂಗ್ಲೆಂಡು ಫ್ರಾನ್ಸುಗಳ ಒಂದಾಗಲೇ ಬೇಕಾಯಿತು. ಮ್ಯೂನಿಚಿನಲ್ಲಿ ರಷ್ಯವನ್ನು ಹೊರಗೆ ತಳ್ಳಿ ಮಾಡಿದ ಒಪ್ಪಂದವು ಬ್ರಿಟಿಷ್ ಸಾಮ್ರಾಜ್ಯವಾದಿಗಳು ಆ ದೇಶದ ಮೇಲೆ ಇರಿಸಿದ ಅಪನಂಬಿಗೆಯನ್ನು ತೋರಿಸುವುದು.

ಆಪತ್ತಿನ ನಂಟ

ಆದರೆ ಜೆಕೊಸ್ಲೊವಾಕಿಯಾ ವಿನಾಶದಿಂದ ಎಲ್ಲರೂ ಕಣ್ಣು ತೆರೆದರು. ರಷ್ಯನ ಮೈತ್ರಿಯು ಇಲ್ಲದೆ ಪ್ರಜಾಪ್ರಭುತ್ವಗಳಿಗೆ ಬಾಳಲಾರವು ಎಂಬುದು ಸ್ಪಷ್ಟವಾಗಿದೆ. ಈಗ ಅವರೆಲ್ಲರೂ ಕೂಡಿ ವರ್ತಿಸುವರೋ ನೋಡಬೇಕು. ಇನ್ನು ಇಷ್ಟರ ನಂಬಿಗೆ ರಷ್ಯಕ್ಕೆ ಬರುತ್ತಲಿಲ್ಲ. ಎಲ್ಲರು ಮುಕ್ತಕಂಠರಾಗಿ ತಮ್ಮ ಧೋರಣೆಯನ್ನು ಇಟಲಿ–ಜರ್ಮನಿಗಳಿಗೆ ತಿಳಿಸೋಣ ಎಂದು ಹೇಳುತ್ತಾರೆ. ಆದರೆ ರಷ್ಯವು ಬಾಯಿ [illegible], ಕ್ರಿಯಾ ಸಿದ್ಧವಿರಬೇಕೆಂದು ಸಾರುತ್ತಿದೆ. ಅದೂ ಆಗದೆ ಗತ್ಯಂತರವಿಲ್ಲ.

ರಷ್ಯದ ಬಲ

ರಷ್ಯದ ಅಂತಃಕಲಹ ಅವಿಶ್ವಾಸಗಳ ದಿನವು ಈಗ ಶಾಂತವಾಗಿ, ಅವರ ಸೇನಾ ವ್ಯವಸ್ಥೆ ಮುಂದುವರಿದಿದೆ. ಜರ್ಮನಿಯನ್ನು ಸದೆಬಡಿಯಲು ಆ ಸೇನೆಯೇ ಸಾಕು. ಜರ್ಮನ್ ಸೇನಾನಾಯಕರೇ ರಷ್ಯದ ಸೈನಿಕರ ಹಳ್ಳಿ, ಧೈರ್ಯ ಸಹಿಷ್ಣುತೆಗಳನ್ನು ಕೊಂಡಾಡಿದ್ದಾರೆ. ಗಣ್ಯರೊಳಗಾಗಿ ರಷ್ಯನ ಕಾರ್ಖಾನೆಗಳು ವರ್ಷಕ್ಕೆ ೧೫,೦೦೦—೨೦೦೦೦ ವಿಮಾನಗಳನ್ನು ತಯಾರಿಸುವ ಸಿದ್ಧತೆಯಿದೆ. ಈಗಾಗಲೇ ೨೦,೦೦೦ ಕಾದುವ ವಿಮಾನಗಳೂ ಎಲ್ಲರಿಗೂ ಹೆಚ್ಚಿನ ಸಬ್‌ಮೆರಿನ್ ನಾವೆಗಳೂ ಅವರಲ್ಲಿವೆ. ಹೀಗೆ ಕಾದಾಡುವ ಬಲವುಳ್ಳ ದೇಶವನ್ನು ಕೊನೆಯ ಗಳಿಗೆಗಾದರೂ ತಳ್ಳಿಹೋಗುವ ಸಾಹಸಗಳವಿದೆ.

ಅಂತು ಪ್ರಪಂಚವನ್ನು ಆವರಿಸಲಿರುವ ಬೆಂಕಿಯಾಗಳಿಗೆ ಭಗ್ಗೆನ್ನುವ ಕ್ಷಣವಿದು.

ಪೆಲೆಸ್ತೀನ

ಈ ನಾಡಿನ ಅರಬ—ಯಹೂದ್ಯರೊಳಗಿನ ವಿವಾದವು ಉಗ್ರರೂಪವನ್ನು ತಾಳಿ ಮೊನ್ನೆ ಲಂಡನ ನಗರದಲ್ಲಿ ಉಭಯ ಪಂಗಡಗಳೂ, ಬ್ರಿಟನೂ ಸೇರಿ ತೀರ್ಮಾನ ಮಾಡಲು ಸಭೆ ಕೂಡಿತ್ತಷ್ಟೆ. ಅಂತು ಎಷ್ಟು ಬಗೆಯಿಂದ ಯತ್ನಿಸಿದರೂ ಯಾವ ತೆರನ ನಿಶ್ಚಯವೂ ಬರಲಿಲ್ಲ. ಇದರಲ್ಲಿ ಕಲಹ ಮಾಡುತ್ತಿರುವ ಅರಬರನ್ನು ದೂರುವುದಾಗಲಿ, ಪೆಲೆಸ್ತೀನು ಯೆಹೂದ್ಯರ ನಾಡಾಗಲು ಬಯಸುತಿರುವ ಯಹೂದ್ಯರನ್ನು ದೂರುವುದಾಗಲಿ ಪ್ರಯೋಜನವಿಲ್ಲ. ಬ್ರಿಟನು ಈ ಬಿಕ್ಕಟ್ಟಿಗೆ ಮೊದಲು ಸಿದ್ಧತೆಯನ್ನು ಮಾಡಿತು. [illegible] ಯಹೂದ್ಯರ ಪಾಡು ಇಂಥದೆಂದು ಎಲ್ಲರಿಗೂ ತಿಳಿದಿದೆ. ಅವರ ಮೇಲಿನ ವೈರ ಯುರೋಪಿನ ಕೆಲವು ಜನಾಂಗಗಳಿಗೆ ತೊಡಗಿದಾಗಲೇ—ಅದನ್ನು ನಿವಾರಿಸಲು ಬ್ರಿಟನು ಬಾಲ್‌ಫರ್ ನಿರ್ಣಯವನ್ನು ಮಾಡಿತು. ಈ ನಿರ್ಣಯದಂತೆ ಪೆಲೆಸ್ತೀನವು ಯಹೂದ್ಯರ ತವರು ನೆಲೆಯಾಗಬೇಕೆಂದು. ಈ ನಂಬಿಕೆಯಿಂದ ದೇಶಭ್ರಷ್ಟರಾದ ಯಹೂದ್ಯರು ಇಲ್ಲಿಗೆ ಬಂದು ತಮ್ಮ ಹಣ,

(೬ನೆ ಪುಟವನ್ನು ನೋಡಿರಿ)

ನೋಟೀಸು

ಕಾಸರಗೋಡು ಡಿ। ಮು। ಕೋರ್ಟಿನಲ್ಲಿ ತಲಚೇರಿ ಎಡಿಶನಲ್ ಡಿ. ಮು. ಕೋರ್ಟು—

O S 84/30 P E P No 1181/38

ಕೈಸುಮ್ಮ—ಪುನತ್ತಿಲ್ ಮುಮ್ಮದ ಮಗಳು ಕುರುಂಬಂಗಳ್ [illegible] ಎಂಬಲ್ಲಿರುವವಳು — ವಾದಿಳು, ಅರ್ಜಿದಾರಳು

ಮತ್ತು

ಹಮೀದ್ ಮುಸಲಿಯಾರ್-ಅಬ್ದುಲ್ಲ ಹಮೀದ್ ತಂಗಳ ಮಗ [illegible] ತ್ರಿಕರ್ಪೂರ ಗ್ರಾಮ.

—ರೆಸ್ಪೋಂಡೆಂಟು

ಇವರೊಳಗೆ

ರೆಸ್ಪೋಂಡೆಂಟಿಗೆ ತಿಳಿಸುವುದೇನೆಂದರೆ,

ಮೇಲ್ಕಂಡ ಅಪ್ಲಿಕೇಶನಿನಲ್ಲಿ ಅರ್ಜಿದಾರಳು ಜಪ್ತಿಮಾಡಿಸಿದ ಬಾಬ್ತು ಸ್ಥಿರಾಸ್ತಿಗಳು ವಿಲಂ ಸಮಯ [illegible] ಕರೆಯುವರೆ ಪರ್ಮಿಶನ್ ಒಪ್ಪಿ ಕೂಡ ಅಪೇಕ್ಷಿಸಿರುವುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪ ಹೇಳುವದಿದ್ದ ಪಕ್ಷಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತಾ. 10-4-1939ಕ್ಕೆ ಹಗಲು ಘಂಟೆ 11ಕ್ಕೆ ಹಾಜರಾಗಿ ನಿಮ್ಮ ಆಕ್ಷೇಪಗಳು ಹೇಳದಿದ್ದ ಪಕ್ಷದಲ್ಲಿ ನಿಮ್ಮ ಗೈರುಹಾಜರಿಯಿಂದ ಸದ್ರಿ ಅರ್ಜಿಯು ತೀರ್ಮಾನಿಸಲ್ಪಡುವದೆಂಬ ಸಂಗತಿ ಈ ಮೂಲಕ ತಿಳಿಸಲಾಗುತ್ತದೆ.

Kasaragod | (Sd) S. Lakshman Rao,
24—3—'39 | Vakil for Petitioner



ಹಳ್ಳಿಯ ಹತ್ತು ಸಮಸ್ತರು

[ಲೇಖಕ: ಶ್ರೀ. ಶಿವರಾಮ ಕಾರಂತ]

೭. ಪಾಟಾಳಿ ಪರಮಯ್ಯ

ಪಾಟಾಳಿ ಪರಮಯ್ಯ ಎಂದರೆ ನಮ್ಮೂರಿನ ಹತ್ತುಸಮಸ್ತರಲ್ಲಿ ಒಬ್ಬ. ಯಾವುದಾದರೂ ಪಂಚಾಯಿತಿಕೆ ಆಯಿತು ಎಂದರೆ ಅವನಿಲ್ಲದೆ ಆಗುವುದಿಲ್ಲ — ಆದುದರಿಂದ ಅವನು ಮುಖ್ಯ ಎಂದು ನೀವು ತಿಳಿಯುವುದಾದರೆ ಆ ಮುಖ್ಯತನ ಪರಮಯ್ಯನಿಗಿಲ್ಲ. ಪರಮಯ್ಯನನ್ನು ಈ ತನಕ ಯಾವುದೊಂದರಲ್ಲೂ ಪಂಚಾಯಿತಿದಾರನಾಗಿ ಊರವರು ಮಾಡಿದುದೂ ಇಲ್ಲ; ಅವನು ಬುದ್ಧಿಶಕ್ತಿಯಲ್ಲಿ ಹೆಸರಾದವನೂ ಅಲ್ಲ. ಅಂಥಾ ಸ್ಥಾನ ಅವನಿಗೆ ದೊರೆಯಬೇಕಾದರೆ ಇನ್ನೂ ಒಂದು ಹಾಗ ತೂಕ ಭಾರದಷ್ಟೆ ಜಾಸ್ತಿಯೇ ಬೇಕು. ಪಾಪ-ಪರಮಯ್ಯನಿಗೆ ಆ ಭಾರ ದಾನ, ವತನ ಎಲ್ಲಿಂದ ಬಂದೀತು? ದಿರಿಸ್ತು ಹಾಕಿಕೊಂಡು ಯಾವುದಾದರೂ ಮುಂಜಿ ಮದುವೆಗಳಲ್ಲಿ ಮುಂದಿನ ಚಾಪೆಯ ಮೇಲೆ ಲೋಡಿಗೆ ಅಲಂಕಾರವಾಗಿ ಒರಗಿ ಕುಳಿತುಕೊಳ್ಳುವವನೂ ಅವನಲ್ಲ. ಅವನ ದಿರಿಸ್ತು ಅಂದರೆ ನಡುವಿಗೆ ಬಿಗಿಯುವ 'ಪಾಣೆಪಂಚೆ' ಅದಕ್ಕೆ ಬದಲಿಯಾದುದನ್ನು ನಾನು ಕಾಣೆ. ನಮ್ಮೂರ ಉತ್ಸವದ ಸಮಯ ದೇವರು ಬಲಿ ಬರುವಾಗ ಯಾರ ಕಣ್ಣಾದರೂ 'ಲಾಲಿಸು ಜೀಯಾ, ಮಂತ್ರತಂತ್ರ ಸೇವಾಂಲಾಲಯ' ಎನ್ನುವ ಸಮಯದಲ್ಲಾದರೂ ಅವನ ಮೇಲಿರಬೇಕು. ಆಗಲೂ ಸಹ ಅವನು ತೊಡುವುದು ಪಾಣೆಪಂಚೆ. 'ಕಿರೇಪಾಣೆ' ಅಲ್ಲವಾದರೆ ಹಿರೇಪಾಣೆ ಪಂಚೆ. ಅಲ್ಲಿಂದ ಮುಂದಕ್ಕೆ ಪಂಚೆಗೂ ಅವನು ಬಡತಿ ಹೊಂದಿದವನಲ್ಲ.

ಅಂದರೆ ಕಾರಣ ಹೀಗೆ. ಪರಮಯ್ಯ ಆಸ್ತಿವಂತನಲ್ಲ. ಇರಲಿಕ್ಕೆ ಒಂದೂವರೆ ಮುಡಿ ಬೀಜ ಬಿತ್ತುವ ಸಣ್ಣ ಗದ್ದೆಯಿದೆ. ಸ್ವಂತ [illegible] ಆಗುವಷ್ಟಾದ ಅನ್ನ. ಆದರೆ ಅದು ನೀರಿನ ಮೂಲವಾಗಿ ಮನೆಗೆ ಬಂದರೆ ಹುಲ್ಲೂ ಉಳಿಯುವುದಿಕ್ಕಿಲ್ಲ. ಅವನ ತಾಯಿ, ಅವನ ಮಕ್ಕಳು, ಅವನ ಹೆಂಡತಿ ಇಷ್ಟು [illegible] ಎಷ್ಟೋ ಹುಲ್ಲು ಹರಹಿ [illegible] ಹಾಗಾಗಿ ಅವನು ಬಚ್ಚ ಕಾವನೆ, ಶಾಲು ಅಂತ ಹೊದೆಯುವುದು. ಹೀಗೆ ಇನ್ನು ಪಾಟಾಳಿ ಕೆಲಸ ಮಾಡಿದ ಬಗ್ಗೆ [illegible] ಸ್ಥಾನದಿಂದ ದಿನಕ್ಕೆ ಒಂದು ಸೇರು ಬೆಳ್ತಿಗೆ ಅಕ್ಕಿ ಸಿಗುತ್ತದೆ. ಅದೂ ಪ್ರತಿ ದಿನ ಅಕ್ಕಿ ಬೇಯಿಸಿ ನಮ್ಮ ಮಧ್ಯಾಹ್ನಕ್ಕೆ ಎರಡು ನೈವೇದ್ಯ ದೂರದಿಂದ ಆ ದೇವರಿಗೆ ತೋರಿಸಿ ಬಂದಮೇಲೆ.

ಆದರೆ — ಅವನ ಊಟಕ್ಕೆ ಕಡಿಮೆಯಾದ ದಿವಸವಿಲ್ಲ, ಏಕಾದಶಿಯಿಲ್ಲ. ಮನೆಗೆ ಬೇಕಾದ ತರಕಾರಿ ಮನೆಯಲ್ಲಾಗುತ್ತೆ. ಮನೆ ಮುಂದಿನ ಹುಣಿಸೆ ಮರ, ಹಿತ್ತಲಿನ ಹಸಿ ಮೆಣಸಿನ ನೆರವು ಅವನಿಗುಂಟು. ಮಳೆಗಾಲ ಬಂದರೆ ಕೇಸು, ಕಣಿಲೆ ಮತ್ತೊಂದು. ಮಳೆ ಕಳೆದರೆ ಹೆಸರು, ಅವಡೆಸೊಪ್ಪು, ಹಂವೆ, ಗಣಸು, ಸೌತೆಕಾಯಿ ಅವನ ಮನೆ ಖರ್ಚಿಗೆ ಸಾಕಾಗುತ್ತದೆ. ಇನ್ನು ಎಣ್ಣೆಯ ಬಾಬ್ತು ಕೇಳುತ್ತೀರೋ? ಅವನ ಮನೆಯಲ್ಲಿ ಲಾಟಾನು ಹಚ್ಚಿದರೆ ಯಾರ ಕಣ್ಣಿಗೂ ಆಗುವುದಿಲ್ಲ. ಹಿಂದಿನ ಕೆರೆ ಮಗ್ಗುಲಿನ ಹೊನ್ನೆಕಾಯಿ ಕೊಟ್ಟು ಒಂದು ನಾಲ್ಕಾರು ಬೇಳಿಗೆ ಮಿಕ್ಕಿಯೇ ಹೊನ್ನೆಣ್ಣೆಯಾಗುತ್ತದೆ. ಅವನ ಮನೆಯ ಕಾಲುದೀಪಗಳಿಗೆ ಅಷ್ಟು ಸಾಕು. ಹಾಗೆ ಕಡಿಮೆಯಾದರೆ ದೇವರ ಗುಡಿಯ ಎಣ್ಣೆ ಅಲ್ಪಸ್ವಲ್ಪ ಅವನ ಮನೆ ದೀಪಗಳಿಗೆ ಕಹಿಸುವಂತಿಲ್ಲ.

